ಪರಿಪೂರ್ಣ ಚಂದ್ರಿಕಾ

ಭಾಗ – ೨

ಸೂತ್ರ-ಭಾಷ್ಯ-ಟೀಕಾ-ಟಿಪ್ಪಣಿ-ಮೊದಲಾದ 18 ಗ್ರಂಥಗಳೊಂದಿಗೆ
ಶ್ರೀವ್ಯಾಸತೀರ್ಥರ ತಾತ್ಪರ್ಯಚಂದ್ರಿಕಾ ಸಂಸ್ಕೃತಮೂಲ ಹಾಗೂ ಕನ್ನಡಾನುವಾದ

ಸರ್ವಗತತ್ವಾಧಿಕರಣ, ಆತ್ಮತ್ವಾಧಿಕರಣ,
ಗುಹಾಧಿಕರಣ, ಆಂತರಾಧಿಕರಣ

ಪ್ರಕಾಶಕರು : ಶ್ರೀಪಾದರಾಜಮಠ, ಮುಳಬಾಗಿಲು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಭಾಗ -೫

ಪರಿಪೂರ್ಣಚಂದ್ರಿಕಾ

ಸರ್ವಗತತ್ವಾಧಿಕರಣ, ಆತ್ಮತ್ವಾಧಿಕರಣ, ಗುಹಾಧಿಕರಣ, ಅಂತರಾಧಿಕರಣ

ಬ್ರಹ್ಮಸೂತ್ರ	ಬ್ರಹ್ಮಸೂತ್ರಭಾಷ್ಯ	ತಾತ್ಪರ್ಯಚಂದ್ರಿಕಾ	ನ್ಯಾಯವಿವರಣ
ಸೂತ್ರದೀಪಿಕಾ	ಭಾಷ್ಯದೀಪಿಕಾ	ಪ್ರಕಾಶ	ನ್ಯಾಯವಿವರಣಟೀಕಾ
ತಂತ್ರದೀಪಿಕಾ	ಸತ್ತರ್ಕದೀಪಾವಳಿ	ಗುರುರಾಜೀಯ	ಅಣುಭಾಷ್ಯ
ನ್ಯಾಯಮುಕ್ತಾವಳಿ	ತತ್ವಪ್ರಕಾಶಿಕಾ	ಭಾಟ್ಟಸಂಗ್ರಹ	ತತ್ವಮಂಜರೀ
	ಭಾವದೀಪ		
	ವಾಕ್ಯಾರ್ಥಮಂಜರೀ		

(ಶಂಕರಭಾಷ್ಯ, ಭಾಮತೀ, ಶ್ರೀಭಾಷ್ಯ ಇವುಗಳ ಆಯ್ದ ಭಾಗಗಳು)

* * * * * *

ಪ್ರಧಾನಸಂಪಾದಕರು :

ವಿ॥ **ಆರ್. ವೇಂಕಟೇಶಾಚಾರ್ಯ**

ಶ್ರೀರಂಗಮ್

ಸಂಗ್ರಹ ಮತ್ತು ಅನುವಾದ :

ವಿ॥ **ಬೆಮ್ಮತ್ತಿ ವೇಂಕಟೇಶಾಚಾರ್ಯ**

ಬೆಂಗಳೂರು

- - - - - -

ಪ್ರಕಾಶಕರು

ಶ್ರೀಪಾದರಾಜಮಠ

ಮುಳಬಾಗಿಲು.

'ಪರಿಪೂರ್ಣಚಂದ್ರಿಕಾ' ಖರನಾಮಸಂವತ್ಸರ ಜೇಷ್ಠ ಶುದ್ಧ ಚತುರ್ದಶೀ (ದಿನಾಂಕ : 14-06-2011) ಶ್ರೀಶ್ರೀ ಶ್ರೀಪಾದರಾಜರ ೬೧೧ನೇ ಆರಾಧನಾಮಹೋತ್ಸವದ ಶುಭಮುಹೂರ್ತದಲ್ಲಿ ಮುಳಬಾಗಿಲು ಕ್ಷೇತ್ರದಲ್ಲಿ ಬಿಡುಗಡೆಯಾಯಿತು.

ಪ್ರಕಾಶನ : ಶ್ರೀಪಾದರಾಜಮಠ, ಮುಳುಬಾಗಿಲು.

ಸಹಯೋಗ : ಶ್ರೀಮತಿ ಲೀಲಾ ಮತ್ತು ಶ್ರೀನಿವಾಸ ಪ್ರಹ್ಲಾದ
ಡಾಯಲ್ಸ್‌ಟೌನ್, ಪೆನ್ಸಿಲ್‌ವೆನಿಯಾ, ೧೮೯೦೧,
ಯು.ಎಸ್.ಎ.

ಪ್ರಥಮಮುದ್ರಣ : 2011

ಬೆಲೆ : 1000 ರೂ

ಪ್ರತಿಗಳು : 1000

©

Publication Copy right :

ಶ್ರೀಪಾದರಾಜಮಠ, ರಾಘವೇಂದ್ರ ಕಾಲೋನಿ, ಬೆಂಗಳೂರು.

Author Copyright

ಬೆಮ್ಮತ್ತಿ ವೆಂಕಟೇಶಾಚಾರ್ಯ, ಬೆಂಗಳೂರು.

All rights reserved . No part of this publication may be produced, stored in a retrieval system, or transmitted in any form or by any means, electronic, mechanical, photocopying, recording or otherwise, without the proper permission of Bemmatti Venkateshacharya.

ಅಕ್ಷರಜೋಡಣೆ :

ಕೆ. ವೆಂಕಟೇಶಮೂರ್ತಿ - 9480261663

ನಾಗಲತಾ(ಸುಧಾ)ಗಿರಿ, ಬೆಂಗಳೂರು.

ಮುದ್ರಣ
ದರ್ಶನ್ ಪ್ರಿಂಟರ್ಸ್, ರಾಘವೇಂದ್ರಕಾಲೋನಿ, ಬೆಂಗಳೂರು.

ನಿವೇದನೆ

ನಾಲ್ಕು ಸಂಪುಟಗಳಲ್ಲಿ ನಾಮಪಾದದ ಅಧ್ಯಯನವನ್ನು ಮುಗಿಸಿದ್ದಾಯಿತು. ಮುಂದಿನ ನಾಲ್ಕು ಸಂಪುಟಗಳಲ್ಲಿ ಪ್ರಥಮಾಧ್ಯಾಯದ ಉಳಿದ ಮೂರು ಪಾದಗಳ ನಿರೂಪಣೆಯು ಇರುತ್ತದೆ. ಈ ಸಂಪುಟದಲ್ಲಿ ಲಿಂಗಪಾದವು ಪ್ರಾರಂಭವಾಗುತ್ತಿದೆ. ಏಳು ಅಧಿಕರಣಗಳನ್ನೊಳಗೊಂಡಿರುವ ಈ ಪಾದದಲ್ಲಿ ಮೊದಲಿನ ನಾಲ್ಕು ಅಧಿಕರಣಗಳ ನಿರೂಪಣೆ ಈ ಸಂಪುಟದಲ್ಲಿದೆ: ಓದುಗರ ಅನುಕೂಲಕ್ಕಾಗಿ ಈ ಸಂಪುಟದಿಂದ ಪ್ರಾರಂಭಿಸಿ ಮುಂದಿನ ಎಲ್ಲಾ ಸಂಪುಟಗಳಲ್ಲಿಯೂ ಸಂಸ್ಕೃತ ಭಾಗವನ್ನು ದೀರ್ಘವಾಗಿ ನೀಡದೆ ಒಂದು ಅಥವಾ ಎರಡು ವಾಕ್ಯಗಳನ್ನೇ ತೆಗೆದುಕೊಂಡು ಅನುವಾದ ಮಾಡಲಾಗಿದೆ. ಈ ವ್ಯತ್ಯಾಸವನ್ನು ಗಮನಿಸಿ ಅಧ್ಯಯನ ಮಾಡಬೇಕೆಂದು ನಿವೇದಿಸಲಾಗಿದೆ. ಮುಂದಿನ ಸಂಪುಟಗಳಲ್ಲಿಯೂ ಇದನ್ನು ಗಮನಿಸಬೇಕು.

ನಾಲ್ಕನೆಯ ಮತ್ತು ಐದನೆಯ ಸಂಪುಟಗಳೆರಡನ್ನೂ ಶ್ರೀಪಾದರಾಜರು ತಮ್ಮ ಆರಾಧನೆಯ ಶುಭಸಂದರ್ಭದಲ್ಲಿ ಸ್ವೀಕರಿಸುತ್ತಿರುವುದು ಬಹಳ ಸಂತೋಷವನ್ನುಂಟುಮಾಡುವ ವಿಷಯ. ಮುಂದಿನ ೬೧೨ನೆಯ ಆರಾಧನೆಯಲ್ಲಿ ಸಮಗ್ರ ತಾತ್ಪರ್ಯಚಂದ್ರಿಕಾ ಗ್ರಂಥದ ಅನುವಾದವನ್ನು ಸ್ವೀಕರಿಸಿ ಎಲ್ಲಾ ಬುಭುತ್ಸುಗಳ ಸಾಧನೆಯು ಮತ್ತಷ್ಟು ಹೆಚ್ಚಾಗುವಂತೆ ಅನುಗ್ರಹಿಸಬೇಕೆಂದು ಶ್ರೀಪಾದರಾಜರಲ್ಲಿ ಸಾಷ್ಟಾಂಗ ಪ್ರಣಾಮವನ್ನು ಮಾಡುತ್ತಾ ಪ್ರಾರ್ಥನೆಯನ್ನು ಮಾಡೋಣ.

ಸಂಪೂರ್ಣವಾಗಿ ಅನುವಾದದ ಕಾರ್ಯಕ್ಕೆ ದೊಡ್ಡವಿಘ್ನವು ಪ್ರಾಪ್ತವಾದಾಗ ಶ್ರೀಪಾದರಾಜರೇ ಇಲ್ಲಿಯತನಕ ಈ ಕಾರ್ಯವನ್ನು ಮಾಡಿಸಿಕೊಂಡು ನಿರಾತಂಕವಾಗಿ ಮುಂದಿನ ಕೆಲಸಕ್ಕೂ ಅಣಿಮಾಡಿಕೊಟ್ಟಿದ್ದಾರೆಂಬ ವಿಷಯದಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಶ್ರೀಪಾದರಾಜರ ಹಾಗೂ ಶ್ರೀ ವ್ಯಾಸತೀರ್ಥರ ಅಧ್ಯಾತ್ಮಬಾಂಧವ್ಯ ಹಾಗೂ ವಿದ್ಯಾಬಾಂಧವ್ಯವು ಆದರ್ಶಪ್ರಾಯವಾಗಿತ್ತು. ಗುರುಶಿಷ್ಯರಲ್ಲಿ ಪರಸ್ಪರ ಸಹಕಾರ, ವಾತ್ಸಲ್ಯ - ಭಕ್ತಿ, ಕಾರುಣ್ಯ - ವಿನಯ ಮೊದಲಾದ ಗುಣಗಳಿಗೆಲ್ಲಾ ಅಸಾಧಾರಣ ಉದಾಹರಣೆಯೆಂದರೆ ಇವರೀರ್ವರ ವಿದ್ಯಾಬಾಂಧವ್ಯವೆಂದು ಹೇಳಬಹುದು. ಆಗಿನಕಾಲದಲ್ಲಿದ್ದ ಗುರುಶಿಷ್ಯರ ವಿದ್ಯಾಬಾಂಧವ್ಯವೇ ಇಂದಿಗೂ ಮಧ್ವಮತದ ಭದ್ರಕೋಟೆಯಾಗಿದೆ. ಇವರೀರ್ವರ ಆಶೀರ್ವಾದ ನಮ್ಮ ಮೇಲೆ ನಿರಂತರವಾಗಿ ಇರಲೆಂದು ಪ್ರಾರ್ಥಿಸೋಣ.

ಪರಿಪೂರ್ಣಚಂದ್ರಿಕಾ

ಪ್ರತ್ಯಕ್ಷವಾಗಿ ಅನುಕೂಲ ಮಾಡಿಕೊಡುತ್ತಿರುವ ಶ್ರೀಪಾದರಾಜ ಮಠದ ಶ್ರೀಗಳವರಿಗೆ ಹಾಗೂ ಪೂಜ್ಯ ಶ್ರೀಲಕ್ಷ್ಮೀನಾರಾಯಣಾಚಾರ್ಯರವರಿಗೆ ನಮಸ್ಕಾರಗಳು ಹಾಗೂ ಕೃತಜ್ಞತೆಗಳು. ಹಿಂದೊಮ್ಮೆ ಶ್ರೀಪಾದಪುತ್ರರಾದ ಲಕ್ಷ್ಮೀನಾರಾಯಣಾಚಾರ್ಯರು ಈಶಾವಾಸ್ಯೋಪನಿಷತ್ತಿನ ಪಾಠವನ್ನು ಕೇಳುವಾಗ ಒಂದೇ ಕ್ಷಣದಲ್ಲಿ ಉಪನಿಷತ್ತಿನ ಅಂತರಂಗಕ್ಕಿಳಿದು ಸಮಸ್ತ ಲೌಕಿಕ ಪ್ರಪಂಚವನ್ನೇ ತೊರೆದು ಗುರುಗಳ ಸೇವೆಯಲ್ಲಿ ಧುಮುಕಿದ ದೊಡ್ಡ ಮಹಾನುಭಾವರು. ಇವರ ನಿರ್ಮಲ ಮನಸ್ಸಿನಿಂದ ತಾತ್ಪರ್ಯಚಂದ್ರಿಕಾ ಗ್ರಂಥದ ಪ್ರಕಾಶನಕಾರ್ಯವು ನಿರಾಂತಕವಾಗಿ ನಡೆಯುತ್ತಿದೆಯೆಂದು ಹೇಳಲು ಸಂತೋಷ ಪಡುತ್ತೇನೆ.

ಶ್ರೀಮತಿ ಲೀಲಾ ಮತ್ತು ಶ್ರೀನಿವಾಸ ಪ್ರಹ್ಲಾದ ಡಾಯಲ್ಸ್ ಟೌನ್, ಪೆನ್ಸಿಲ್‌ವೆನಿಯಾ, ೧೮೯೦೧, ಯು.ಎಸ್.ಎ. ಇವರು ಈಸಂಪುಟಕ್ಕೂ ಸಹ ಉತ್ತಮರೀತಿಯಲ್ಲಿ ಧನಸಹಾಯವನ್ನು ಮಾಡಿ ಬಹಳಷ್ಟು ಉಪಕರಿಸುತ್ತಿದ್ದಾರೆ. ಸಾಧಕರಾದ ಭಗವದ್ಭಕ್ತರಾದ ಇವರೀರ್ವದಂಪತಿಗಳಿಗೆ ಶ್ರೀಪಾದರಾಜರು ಪರಮಾನುಗ್ರಹವನ್ನು ಮಾಡಿ ಸಕಲವಿಧ ಮಂಗಳವನ್ನುಂಟು ಮಾಡಲಿ ಎಂದು ಪ್ರಾರ್ಥಿಸುತ್ತೇವೆ.

ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉಪಕರಿಸುತ್ತಿರುವ ಎಲ್ಲಾ ಮಹನೀಯರಿಗೂ ಅನಂತ ಕೃತಜ್ಞತೆಗಳು

ದಾನಶೂರಕರ್ಣರಂತೆ ಪ್ರಸಿದ್ಧಿಪಡೆದ ಶ್ರೀಮತಿ ಶುಭಾ ಮತ್ತು ಶ್ರೀ ರಂಗನಾಥ್ ದಂಪತಿಗಳು ಈ ಸಂಪುಟದ ಪ್ರಕಾಶನಕ್ಕೆ ಉದಾರವಾಗಿ ಸೇವೆ ಸಲ್ಲಿಸಿದ್ದಾರೆ. ಜ್ಞಾನಸೇವೆಯ ಕಾರ್ಯದಲ್ಲಿ ಅವಿರತವಾಗಿ ಶ್ರಮಿಸುತ್ತಾ ಸರಳಜೀವನಶೈಲಿಯನ್ನು ಅಳವಡಿಸಿಕೊಂಡಿರುವ ಇವರೀರ್ವ ದಂಪತಿಗಳಿಗೆ ಶ್ರೀಹರಿವಾಯುಗುರುಗಳು ಶ್ರೀವ್ಯಾಸತೀರ್ಥರು ಹಾಗೂ ಶ್ರೀರಾಘವೇಂದ್ರಸ್ವಾಮಿಗಳವರು ಜ್ಞಾನಭಕ್ತಿವೈರಾಗ್ಯಗಳನ್ನು ನೀಡಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸಾಧನೆಯನ್ನು ಮಾಡಿಸಿಕೊಳ್ಳಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.

ಅನುವಾದಕರು

ಬೆಮ್ಮತ್ತಿ ವೆಂಕಟೇಶಾಚಾರ್ಯ

ಒಳಗೇನಿದೆ...?

ಸರ್ವಗತತ್ವಾಧಿಕರಣ

ನಾಮಾತ್ಮಕಶಬ್ದಗಳ ಸಮನ್ವಯಸಿದ್ಧಿಗಾಗಿ ಲಿಂಗಸಮನ್ವಯ

ಎರಡನೆಯ ಪಾದವು ಪ್ರಾರಂಭವಾಗುತ್ತಿದೆ. ಅನ್ಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದಗಳ ಸಮನ್ವಯವನ್ನು ಹಿಂದಿನ ಪಾದದಲ್ಲಿ ಮಾಡಲಾಯಿತು. ಈ ಪಾದದಲ್ಲಿ ಅನ್ಯತ್ರಪ್ರಸಿದ್ಧವಾದ ಲಿಂಗಾತ್ಮಕಶಬ್ದಗಳ ಸಮನ್ವಯವನ್ನು ಮಾಡುತ್ತಿದ್ದಾರೆ.

ಹಿಂದಿನ ಪಾದದಲ್ಲಿ ಯಾವ ಲಿಂಗಗಳ ಬಲದಿಂದ ನಾಮಾತ್ಮಕಶಬ್ದಗಳ ಸಮನ್ವಯವನ್ನು ಮಾಡಲಾಯಿತೋ ಅಂತಹ ಲಿಂಗಗಳ ಸಮನ್ವಯಕ್ಕಾಗಿ ಎರಡನೆಯ ಪಾದ ಹೊರಟಿದೆ. ಆದ್ದರಿಂದ ಈ ಪಾದದಲ್ಲಿ ಲಿಂಗಗಳನ್ನು ಸಮನ್ವಯ ಮಾಡದಿದ್ದರೆ ಪ್ರಥಮಪಾದದಲ್ಲಿ ನಾಮಗಳೂ ಸಹ ಸಮನ್ವಯವಾಗಲಾರವು.

ಮೊದಲನೆಯ ಅಧಿಕರಣದಲ್ಲಿ ಸರ್ವಗತತ್ವಲಿಂಗವನ್ನು ಸಮನ್ವಯ ಮಾಡುತ್ತಿದ್ದಾರೆ. ಬೇರೆ ಪಾದವಾಗಿದ್ದರೂ ಹಿಂದಿನ ಅಧಿಕರಣದಿಂದ ಆವಾಂತರ ಸಂಗತಿಯನ್ನು ತಿಳಿಯಬೇಕು.

ಸರ್ವಗತತ್ವದ ಬಗ್ಗೆ ಸಂಶಯ ಪರಂಪರೆ

'ಸರ್ವೇಷು ಭೂತೇಷು' ಎಂಬಲ್ಲಿರುವ ಭೂತಪದದ ಮಹಿಮೆಯಿಂದ ಬೇರೆಲ್ಲೂ ಇಲ್ಲದೆ ಕೇವಲ ಭೂತಪದಾರ್ಥಗಳಲ್ಲಿ ಇರುವಿಕೆಯೇ ಆಲ್ಪೌಕಸ್ವ್ಯ ಎಂದು ತಿಳಿಯುತ್ತದೆ. (ಅನ್ಯತ್ರಾನವಸ್ಥಿತತ್ವೇ ಸತಿ ಭೂತಮಾತ್ರಾವಸ್ಥಿತತ್ವರೂಪಾಲ್ಪೌಕಸ್ವ್ಯಂ) ಇದು ಅಯುಕ್ತವಾದರೆ ಬ್ರಹ್ಮಶಬ್ದಾದಿಗಳನ್ನು ಗೌಣವೆಂದು ಅವಶ್ಯ ಅಂಗೀಕರಿಸಬೇಕು. ಆವಾಗ ಬ್ರಹ್ಮಶಬ್ದರ ವಿರೋಧವಿಲ್ಲದ ಕಾರಣ ಹಿಂದಿನ ಶ್ರುತಿವಾಕ್ಯವು ಆದಿತ್ಯವಿಷಯಕವಾಗುತ್ತದೆ. ಆದ್ದರಿಂದ 'ಏತಮಸ್ಯಾಮ್' ಎಂಬಲ್ಲಿ 'ಏತದ್' ಶಬ್ದದಿಂದ ಆದಿತ್ಯನನ್ನೇ ಪರಾಮರ್ಶಿಸಬಹುದು. ಆವಾಗ ಆದಿತ್ಯನೇ ಸರ್ವಗತನಾಗುತ್ತಾನೆಂಬುದು ಪೂರ್ವಪಕ್ಷದ ಗುರಿ.

ಒಂದು ವೇಳೆ ಹಿಂದೆ ಹೇಳಿದ ಆಲ್ಪೌಕಸ್ವ್ಯವು ಯುಕ್ತವಾದರೆ ಆವಾಗ ಬಾಧಕವಿಲ್ಲದ ಕಾರಣ ಬ್ರಹ್ಮಶಬ್ದಾದಿಗಳನ್ನು ಗೌಣವೆನ್ನಬೇಕಿಲ್ಲ. ಆದಕ್ಕೆ ವಿರುದ್ಧವಾಗಿ ಹಿಂದಿನ ವಾಕ್ಯವು ಆದಿತ್ಯನನ್ನು ವಿಷಯೀಕರಿಸುವುದಿಲ್ಲ. ಆದ್ದರಿಂದ ವಿಷ್ಣುವೇ ಸರ್ವಗತನಾಗುತ್ತಾನೆಂಬುದು ಸಿದ್ಧಾಂತದ ಗುರಿ.

ಪರಿಪೂರ್ಣಚಂದ್ರಿಕಾ

ಆದಿತ್ಯನೇ ಸರ್ವಗತನೆಂದು ಪೂರ್ವಪಕ್ಷ

ಆದಿತ್ಯನೇ ಸರ್ವಗತನೆಂಬ ಪೂರ್ವಪಕ್ಷವನ್ನು ವಿವರವಾಗಿ ಮಾಡುತ್ತಿದ್ದಾರೆ.

'ತಸ್ಯೈತಸ್ಯಾಸಾವಾದಿತ್ಯೋ ರಸಃ' ಇತ್ಯಾದಿಯಾಗಿ ಪ್ರಕೃತನಾದ ಆದಿತ್ಯನನ್ನೇ 'ಏತಮ್' ಎಂದು ಪರಾಮರ್ಶಿಸಲಾಗಿದೆ. ಆದ್ದರಿಂದ ಆದಿತ್ಯನೇ ಸರ್ವಗತನಾಗಬೇಕು. ಅಂತರಧಿಕರಣದ ನ್ಯಾಯದಿಂದ ಈ ಆದಿತ್ಯಶಬ್ದವೂ ಸಹ ವಿಷ್ಣುವಿನಲ್ಲಿ ಸಮನ್ವಯವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಬಲಿಷ್ಠವಾದ ವಿಷ್ಣುಲಿಂಗಗಳಿದ್ದರೆ ಮಾತ್ರ ವಿಷ್ಣುಪರತ್ವವನ್ನು ಅಲ್ಲಿ ಹೇಳಿದ್ದಾರೆ. ಆದರೆ ಪ್ರಕೃತ ಆಂತಹ ಲಿಂಗಗಳು ಕಾಣಿಸುತ್ತಿಲ್ಲ.

ಇಷ್ಟಾದರೂ ಪೂರ್ವಪಕ್ಷ ಹುಟ್ಟಲು ಸಾಧ್ಯವಿಲ್ಲವೆಂಬ ಆಕ್ಷೇಪ ಬಂದೇ ಬರುತ್ತದೆ. ದೇವಾವಾಚಿಯಾದ ಎಲ್ಲಾ ಶಬ್ದಗಳನ್ನು ಸಮನ್ವಯ ಮಾಡಿದ ಮೇಲೆ ವಿಷ್ಣುಲಿಂಗಗಳು ಇರುವುದು ಅಥವಾ ಇಲ್ಲದಿರುವುದು ಕಾರಣವಾಗುವುದಿಲ್ಲ. ಸಮಾನನ್ಯಾಯದಿಂದ ಎಲ್ಲಾ ದೇವತಾವಾಚಕಶಬ್ದಗಳ ಸಮನ್ವಯವು ಸಿದ್ಧವಾಗುತ್ತದೆ.

ಅಂತರಧಿಕರಣದಿಂದ ಪುನರುಕ್ತಿ ದೋಷ

ಅಂತರಧಿಕರಣದಿಂದ ಈ ಅಧಿಕರಣ ಪುನರುಕ್ತವಾಗಿದೆ. ದೇವತಾವಾಚಿಯಾದ ಸಕಲಶಬ್ದಗಳ ಸಮನ್ವಯದಿಂದ ಆದಿತ್ಯಶಬ್ದದ ಸಮನ್ವಯವೂ ಸಹ ಸಿದ್ಧವಾಗುತ್ತದೆಂದು ಹಿಂದೆ ಆಕ್ಷೇಪಿಸಿದ್ದಾಯಿತು. ಈಗ ಅಂತರಧಿಕರಣದಲ್ಲಿ ಚಂದ್ರಾದಿ ದೇವತೆಗಳ ಅಂತರ್ಯಾಮಿಯಾಗಿದ್ದಾನೆಂದು ಹೇಳಿದ್ದರಿಂದಲೇ ಈ ಅಧಿಕರಣದಲ್ಲಿ ಸಮನ್ವಯ ಮಾಡಲ್ಪಡುವ ಸರ್ವಗತತ್ವವೂ ಸಿದ್ಧವಾಗುತ್ತದೆ. ವಸ್ತುತಃ ಅಂತರಧಿಕರಣದಲ್ಲಿ ಆದಿತ್ಯನಲ್ಲಿದ್ದಾನೆಂದು ಹೇಳದಿರಬಹುದು. ಅದಕ್ಕೋಸ್ಕರ ಈ ಅಧಿಕರಣ ಹೊರಡಬೇಕಾಗಿಲ್ಲ. 'ಸರ್ವೇಷು ಭೂತೇಷು' ಎಂಬಲ್ಲಿರುವ ಸರ್ವಶಬ್ದದಿಂದಲೇ ಆದಿತ್ಯನನ್ನೂ ವಿವಕ್ಷಿಸಬಹುದು. ಆದ್ದರಿಂದ 'ಆದಿತ್ಯೇ ಅನುಕ್ತತ್ವ' ಎಂಬ ಲಿಂಗವು ಸಾವಕಾಶವಾಗಿದೆ.

ಮತ್ತು ವಿಷ್ಣು ಸಕಲರ ಅಂತರ್ಯಾಮಿಯಾಗಿದ್ದಾನೆನ್ನಲು ಅನೇಕ ಬಲಿಷ್ಠವಾದ ಶ್ರುತಿಲಿಂಗಗಳು ಆಧಾರವಾಗಿವೆ. ಪ್ರಕೃತ ಈ ಅಧಿಕರಣದಲ್ಲಿ ಕೇವಲ ಒಂದೇ ಆದಿತ್ಯಲಿಂಗದಿಂದ ಸೂರ್ಯನನ್ನೂ ಅಂತರ್ಯಾಮಿ ಎನ್ನಲಾಗದು. ಹೀಗಿರುವಾಗ ಈ ಅಧಿಕರಣ ಹೊರಟಿದ್ದು ವ್ಯರ್ಥವಲ್ಲವೇ?

ಜೀವನೆಂಬ ಪೂರ್ವಪಕ್ಷಕ್ಕೂ ಅವಕಾಶವಿಲ್ಲ

ಆದಿತ್ಯನೇ ಸರ್ವಗತನೆಂಬ ಪೂರ್ವಪಕ್ಷ ಹುಟ್ಟಲು ಹೇಗೆ ಸಾಧ್ಯವಿಲ್ಲವೋ? ಆದರಂತೆ ಜೀವನು ಸರ್ವಗತನೆಂಬ ಪೂರ್ವಪಕ್ಷವೂ ಹುಟ್ಟುವುದಿಲ್ಲ. ಆನಂದಮಯಾಧಿಕರಣದ ನ್ಯಾಯದಂತೆ ವಿಶೇಷಜ್ಞಾನ ಹೊಂದಿರುವ ಕಾರಣ ಭಗವಂತನೇ ಚಕ್ಷುರ್ಮಯನಾಗುತ್ತಾನೆ. ಅಥವಾ ಆದಿತ್ಯಶ್ರುತಿಯ ಬಲದಿಂದ ಚಕ್ಷುರ್ಮಯತ್ವಾದಿಲಿಂಗಗಳನ್ನು ಆದಿತ್ಯಪರವೆನ್ನಬಹುದು. ಹೀಗೆ ಜೀವಪ್ರಾಪಕವಾದ ಲಿಂಗವಿಲ್ಲದ ಕಾರಣ ಪೂರ್ವಪಕ್ಷ ಹುಟ್ಟುವುದಿಲ್ಲ. ಈ ಕಾರಣದಿಂದಲೂ ಈ ಅಧಿಕರಣಕ್ಕೆ ಸಾರ್ಥಕ್ಯವಿಲ್ಲ.

ಪೂರ್ವಪಕ್ಷ ಹುಟ್ಟುವುದರಿಂದ ಅಧಿಕರಣವು ಆರಂಭಣೀಯ

ಇಲ್ಲಿಯ ತನಕ ಮಾಡಿದ ಆಕ್ಷೇಪದಲ್ಲಿ ಹುರುಳಿಲ್ಲ.

ಪರಿಪೂರ್ಣಚಂದ್ರಿಕಾ

ಆದಿತ್ಯನು ಸರ್ವಗತನೆಂಬ ಪೂರ್ವಪಕ್ಷ ಹುಟ್ಟಲು ಅನೇಕ ಲಿಂಗಗಳಿವೆ. 'ಸವಂತ್ಸರಾಧಿಪತಿತ್ವ', 'ಪ್ರತಿಪುರುಷಾಭಮುಖ್ಯ', 'ಯಚ್ಛಬ್ದಸ್ಯ ಲೋಕೇ ಪ್ರಸಿದ್ಧತ್ವ' ಮೊದಲಾದ ಲಿಂಗಗಳು ಸೂರ್ಯನಲ್ಲಿ ಮಾತ್ರ ಪ್ರಸಿದ್ಧವಾಗಿವೆ. ಇವುಗಳಿಂದ ಆದಿತ್ಯಶ್ರುತಿಯು ಉಪೋದ್ಬಲಿತವಾಗುತ್ತದೆ.

ಅಂತರಾದ್ಯಧಿಕರಣಗಳಿಂದ ಪುನರುಕ್ತಿ ಇಲ್ಲ

ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಗುಣಗಳು ಲಾಭವಾಗಬೇಕೆಂದರೆ ವಕ್ಷ್ಯಮಾಣನ್ಯಾಯದ ಆಪೇಕ್ಷೆಯಿರುತ್ತದೆ. ಆದರೆ ಆಯಾ ಪ್ರಕರಣದಲ್ಲಿರುವ ಗುಣಗಳಷ್ಟೇ ತಿಳಿಯಬೇಕೆಂದರೆ ಹಿಂದಿನ ಆಧಿಕರಣದ ಮೇಲೆ ಬರುವ ಆಕ್ಷೇಪವನ್ನು ನಿರಾಕರಿಸಿದರೆ ಸಾಕು. ಆದ್ದರಿಂದ ಪೂರ್ವಾಧಿಕರಣದ ಆಕ್ಷೇಪ ಹಾಗೂ ಸಮಾಧಾನ ಮಾಡುವುದು ಆಯಾ ಅಧಿಕರಣಗಳಿಂದಷ್ಟೇ ಸಾಧ್ಯವಾಗುತ್ತದೆ. ಈ ಪ್ರಯೋಜನವು 'ತದಧೀನತ್ವ' ಸೂತ್ರದಿಂದ ದೊರೆಯುವುದಿಲ್ಲ. ಆದ್ದರಿಂದ ಆದಿತ್ಯಾದಿಶಬ್ದಗಳಿಗೆ ವಿಷ್ಣುವಿನಲ್ಲಿ ಮುಖ್ಯಪ್ರತಿಪಾದ್ಯತ್ವವನ್ನು ಅಂಗೀಕರಿಸದ ಕಾರಣ ಪೂರ್ವಪಕ್ಷವು ಹುಟ್ಟಬಹುದು

ಒಬ್ಬ ದೇವತೆಯ ಪರ್ಯಾಯಶಬ್ದಗಳ ಸಮನ್ವಯವನ್ನು ಬೇರೆ ಬೇರೆ ಅಧಿಕರಣಗಳಲ್ಲಿ ಮಾಡಬಹುದು

ಅಥವಾ ಹಿಂದಿನ ಅಂತರಧಿಕರಣದಲ್ಲಿ ಇಂದ್ರಾದಿಶಬ್ದಗಳು ವಿಷ್ಣುವಿನಲ್ಲೇ ಮುಖ್ಯವಾಗಿವೆಯೆಂದು ನಿರ್ಣಯಿಸಲಾಗಿದೆಯೆಂಬ ವಿಚಾರವನ್ನು ಒಪ್ಪಿಕೊಳ್ಳೋಣ. ಆದರೂ ಸಹ ಆದಿತ್ಯಾದಿಶಬ್ದವು ಅಂತರಧಿಕರಣದ ವಿಷಯವಾಕ್ಯದಲ್ಲಿ ಕೇಳಿಸುತ್ತಿಲ್ಲ. ಮತ್ತು ಅಂತರಧಿಕರಣದ ನ್ಯಾಯಕ್ಕೆ ವಿಷಯವೂ ಆಗಿಲ್ಲ. ಈ ಆಧಿಕರಣದಲ್ಲಿ ನಿರವಕಾಶವಾದ ಆದಿತ್ಯಾದಿ ದೇವತಾಲಿಂಗಗಳಿದ್ದಂತೆ ಅಂತರಧಿಕರಣದ ವಿಷಯವಾಕ್ಯದಲ್ಲಿ ಅಂತಹ ದೇವತಾಲಿಂಗಗಳೂ ಸಹ ಇರುವುದಿಲ್ಲ. ಆದ್ದರಿಂದಲೇ ಟೀಕೆಯಲ್ಲಿ ಆದಿತ್ಯಾದಿ ಶಬ್ದಗಳು ಅಂತರಧಿಕರಣದ ನ್ಯಾಯಕ್ಕೆ ವಿಷಯವಾಗಿಲ್ಲವೆಂಬುದನ್ನು ತೋರಿಸುವುದಕ್ಕಾಗಿಯೇ ದೇವತಾಲಿಂಗಪ್ರತಿಪಾದಕವಾದ ಅಂಶವನ್ನೂ ಸಹ ಉದಾಹರಿಸಿದ್ದಾರೆ.

ವಸ್ತುತಃ ಒಬ್ಬ ದೇವತೆಯನ್ನೇ ಹೇಳುವ ಪರ್ಯಾಯ ಶಬ್ದಗಳ ಸಮನ್ವಯವನ್ನು ಬೇರೆ ಬೇರೆ ಅಧಿಕರಣಗಳಲ್ಲಿ ಮಾಡುತ್ತಿದ್ದಾರೆ. ಇದೇನು ತಪ್ಪಲ್ಲ ? ಏಕೆಂದರೆ ಪರ್ಯಾಯ ಶಬ್ದವಾಗಿದ್ದರೂ ಸಹ ಆಯಾ ಅಧಿಕರಣದ ನ್ಯಾಯಕ್ಕೆ ವಿಷಯವಾದದ್ದನ್ನು ಮಾತ್ರ ಆಯಾ ಅಧಿಕರಣದಲ್ಲಿ ಸಮನ್ವಯ ಮಾಡುತ್ತಾರೆ. ಹೊರತು ಆಯಾ ಅಧಿಕರಣದ ನ್ಯಾಯಕ್ಕೆ ವಿಷಯವಾಗದ ಶಬ್ದಸಮನ್ವಯವನ್ನು ಮಾಡುವುದಿಲ್ಲ.

ಸರ್ವಗತತ್ವಾಧಿಕರಣವು ನಾಮಪಾದದಲ್ಲಿ ಸೇರದು

ಸರ್ವಗತತ್ವಾಧಿಕರಣವನ್ನು ನಾಮಪಾದದಲ್ಲಿ ಸೇರಿಸಬಹುದು. ಅಥವಾ ಲಿಂಗಪಾದದಲ್ಲಿ ಸೇರಿದರೂ ನಾಮಸಮನ್ವಯವನ್ನೇ ಮಾಡಬಹುದೆಂದು ಪ್ರಶ್ನಿಸುತ್ತಿದ್ದಾರೆ. ಏಕೆಂದರೆ ಆದಿತ್ಯಶ್ರುತಿಯ ಬೆಂಬಲದಿಂದಷ್ಟೇ ಸರ್ವಗತತ್ವವನ್ನು ಆನ್ಯತ್ರಪ್ರಸಿದ್ಧವೆನ್ನಬೇಕು. ಹೀಗಿರುವಾಗ ಆದಿತ್ಯವೆಂಬ ಶ್ರುತಿಸಮನ್ವಯವನ್ನೇ ಮಾಡುವುದು ಹೆಚ್ಚು ಸ್ವರಸ. ಮತ್ತು ವೈಶ್ವಾನರಾಧಿಕರಣದಲ್ಲಿ ಒಂದು ನಾಮದ ಸಮನ್ವಯದಿಂದ ಅನೇಕ ಲಿಂಗಗಳನ್ನು ಸಮನ್ವಯ ಮಾಡಿದಂತೆ ಇಲ್ಲಿಯೂ 'ಸಂವತ್ಸರಸಾರತ್ವ' ಮೊದಲಾದ ಅನೇಕ ಲಿಂಗಗಳ ಸಮನ್ವಯವು ಒಂದೇ ಆದಿತ್ಯಶಬ್ದದ

ಸಮನ್ವಯದಿಂದ ಸಿದ್ಧವಾಗುತ್ತದೆ. ಆದ್ದರಿಂದ ಸರ್ವಗತತ್ವಲಿಂಗದ ಸಮನ್ವಯಕ್ಕೋಸ್ಕರ ಈ ಅಧಿಕರಣವು ಹೊರಟಿದೆ ಎಂದು ಹೇಗೆ ಹೇಳುತ್ತೀರಿ ?

ಈ ಪ್ರಶ್ನೆಗೆ ಗ್ರಂಥಕಾರರು ಹಲವು ಮುಖಗಳಲ್ಲಿ ಉತ್ತರಿಸಿದ್ದಾರೆ. ಲಿಂಗಪಾದದಲ್ಲಿರುವ ಎಲ್ಲಾ ಅಧಿಕರಣಗಳಲ್ಲಿಯೂ ಹೀಗೆಯೇ ಪ್ರಶ್ನಿಸುತ್ತಿರೋ? ಅಥವಾ ಈ ಅಧಿಕರಣದಲ್ಲಿ ಮಾತ್ರ ನಾಮಸಮನ್ವಯ ಮಾಡಬಹುದೆಂದು ಪ್ರಶ್ನಿಸುತ್ತಿರೋ? ಎಲ್ಲಾ ಅಧಿಕರಣಗಳಲ್ಲಿಯೂ ನಾಮಸಮನ್ವಯವನ್ನೇ ಮಾಡಿರಿ? ಎಂದು ಪ್ರಶ್ನಿಸಲಾಗದು. ಏಕೆಂದರೆ ಅಂತರ್ಯಾಮ್ಯಧಿಕರಣದಲ್ಲಿ ನಾಮಾತ್ಮಕ ಶಬ್ದಗಳ ಪ್ರಸಕ್ತಿಯೇ ಇರುವುದಿಲ್ಲ. ಕೇವಲ ಲಿಂಗಗಳ ಬೆಂಬಲದಿಂದಷ್ಟೇ ಅಂತರ್ಯಾಮಿತ್ವ ಮೊದಲಾದ ಲಿಂಗಗಳಿಗೆ ಅನ್ಯತ್ರಪ್ರಸಿದ್ಧತ್ವವನ್ನು ಸಮರ್ಥಿಸಲಾಗಿದೆ. ಈ ಅಂತರ್ಯಾಮ್ಯಧಿಕರಣಕ್ಕೋಸ್ಕರವಂತು ಲಿಂಗಪಾದವು ಹೊರಡಲೇಬೇಕು. ಇನ್ನು ಸರ್ವಗತತ್ವಾಧಿಕರಣಕ್ಕೆ ಮಾತ್ರ ಈ ಪಾದದಲ್ಲಿ ಸಂಗತಿಯಿಲ್ಲವೆನ್ನಬೇಕು. ಆದರೆ ಅಂತರಧಿಕರಣದಿಂದ ಆದಿತ್ಯಶ್ರುತಿಯ ಸಮನ್ವಯವು ಸಿದ್ಧವಾಗಿರುವಾಗ ಪುನಃ ಈ ಅಧಿಕರಣಕ್ಕೆ ಸಂಗತಿಯಿರುವುದಿಲ್ಲ. ಮತ್ತು ಪೂರ್ವಪಕ್ಷ ಪ್ರಾಪಕವಾದ ಅಥವಾ ಸಿದ್ಧಾಂತಪ್ರಾಪಕವಾದ ಯುಕ್ತಿಗಳೆಲ್ಲವೂ ದೊರೆಯುವುದು ಸರ್ವಗತತ್ವವೆಂಬ ಲಿಂಗವನ್ನು ಸಮನ್ವಯ ಮಾಡಲು ಹೊರಟಾಗ ಮಾತ್ರ. ಈ ಎಲ್ಲಾ ಯುಕ್ತಿಗಳನ್ನು ಆಲೋಚಿಸಿದಾಗ ವೈಶ್ವಾನರಾಧಿಕರಣದಂತೆ ಸರ್ವಗತತ್ವಾಧಿಕರಣವನ್ನು ವಿವಕ್ಷಿಸಲು ಸಾಧ್ಯವಿಲ್ಲ.

ಸಕಲ ಜೀವರೇ ಸರ್ವಗತರೆಂದು ಪೂರ್ವಪಕ್ಷ

ಇಲ್ಲಿಯ ತನಕ ಆದಿತ್ಯಪ್ರಾಪಕವಾದ ಪೂರ್ವಪಕ್ಷ ಲಿಂಗಗಳನ್ನು ನಿರೂಪಿಸಿದರು. ಈಗ ಜೀವಪ್ರಾಪಕವಾದ ಪೂರ್ವಪಕ್ಷಲಿಂಗಗಳನ್ನು ಹೇಳುತ್ತಿದ್ದಾರೆ. 'ಚಕ್ಷುರ್ಮಯತ್ವ' ಎಂಬುದು ಜೀವನೇ ಸರ್ವಗತನೆನ್ನಲು ಲಿಂಗವಾಗಿದೆ. ಒಂದುವೇಳೆ 'ಚಕ್ಷುರ್ಮಯ' ಎಂಬಲ್ಲಿರುವ ಮಯಟ್ ಪ್ರತ್ಯಯಕ್ಕೆ 'ಪ್ರಾಚುರ್ಯ' ಎಂಬರ್ಥವನ್ನು ಹೇಳಿದರೆ ಮಾತ್ರ ಪರಮಾತ್ಮನೇ ಚಕ್ಷುರ್ಮಯನೆನ್ನಬಹುದು. ಆದರೆ ಅನೇಕ ಬಾಧಕಗಳಿರುವುದರಿಂದ ಇಲ್ಲಿರುವ 'ಮಯಟ್' ಪ್ರತ್ಯಯಕ್ಕೆ 'ಪ್ರಾಚುರ್ಯ' ಎಂಬರ್ಥವನ್ನು ಹೇಳಲು ಸಾಧ್ಯವಿಲ್ಲ. ಹೊರತಾಗಿ 'ವಿಕಾರ' ಎಂಬರ್ಥವನ್ನೇ ಹೇಳಬೇಕು. ಆವಾಗ ಜೀವನೇ ಚಕ್ಷುರ್ಮಯನಾಗುತ್ತಾನೆ. ಈ ಕಾರಣದಿಂದ ಜೀವನನ್ನೇ ಸರ್ವಗತನೆನ್ನಬೇಕು.

ಜೀವನ ಪ್ರಾಪಕಲಿಂಗಗಳು ಆದಿತ್ಯನಲ್ಲಿಲ್ಲ

ಚಕ್ಷುರ್ಮಯತ್ವ ಎಂಬ ಲಿಂಗದಿಂದ ಜೀವನನ್ನು ಸರ್ವಗತನೆಂದು ಪೂರ್ವಪಕ್ಷ ಮಾಡಲಾಗಿದೆ. ಈ ಚಕ್ಷುರ್ಮಯತ್ವವು ಜೀವನಲ್ಲಿಯೇ ಪರ್ಯವಸಾನವಾಗುತ್ತದೆ ಹೊರತು ಆದಿತ್ಯನಲ್ಲಲ್ಲ. ಏಕೆಂದರೆ ಉಪಕ್ರಮ ಹಾಗೂ ಉಪಸಂಹಾರದಲ್ಲಿ ಒಂದೇ ವಿಷಯವು ಪ್ರಸಕ್ತವಾಗಿರುವುದರಿಂದ ಒಬ್ಬನನ್ನೇ ಹೇಳಬೇಕು. ಆದ್ದರಿಂದ ಆದಿತ್ಯನೇ ಪ್ರತಿಪಾದ್ಯನೆಂಬ ಶಂಕೆಯು ಸಹಜವಾಗಿ ಬರುತ್ತದೆ. ಆದರೆ ಪ್ರಾರಂಭದಿಂದ ಕೊನೆಯತನಕ ಅನೇಕ ಬಾರಿ 'ಏತತ್' ಎಂಬ ಪದವು ಕೇಳಿಸುತ್ತಿದೆ. ಈ ಪದವು ಮುಂದೆ ಪ್ರಸಕ್ತನಾಗುವ ಜೀವನನ್ನೇ ಪರಾಮರ್ಶಿಸುತ್ತದೆ. ಆದ್ದರಿಂದ ಚಕ್ಷುರ್ಮಯತ್ವವು ಜೀವಪ್ರಾಪಕವೇ ಹೊರತು ಆದಿತ್ಯ ಪ್ರಾಪಕವಲ್ಲ.

ಅಲ್ಪದೇಶದಲ್ಲಿರುವವನು ಸರ್ವಗತನಾಗಲಾರ

ಆದಿತ್ಯ ಅಥವಾ ಜೀವನು ಸರ್ವಗತನಾಗಬಹುದೇ ಹೊರತು ವಿಷ್ಣು ಸರ್ವಗತನಾಗಲು ಸಾಧ್ಯವಿಲ್ಲ. ಅಂತರಧಿಕರಣದಲ್ಲಿ, ಅಂತರ್ಯಾಮ್ಯಧಿಕರಣದಲ್ಲಿ ಮತ್ತು 'ಉಪಾಸಾತ್ಯೈವಿಧ್ಯಾತ್' ಇತ್ಯಾದಿ

ಸೂತ್ರಗಳಲ್ಲಿ ಭಗವಂತನನ್ನು ಹೃದಯಾಕಾಶದಲ್ಲಿರುವವನೆಂದು ಬಣ್ಣಿಸಲಾಗಿದೆ. ಹೃದಯಾಕಾಶವು ಅಂಗುಷ್ಠಪರಿಮಾಣದಲ್ಲಿರುವುದರಿಂದ ಅಲ್ಲಿರುವ ಭಗವಂತನೂ ಸಹ ಅಂಗುಷ್ಠಪರಿಮಾಣವುಳ್ಳವನೇ ಆಗುತ್ತಾನೆ. ಇಷ್ಟು ಸಣ್ಣರೂಪವುಳ್ಳ ಭಗವಂತನು ಎಲ್ಲೆಡೆ ವ್ಯಾಪಿಸಿರಲು ಹೇಗೆ ಸಾಧ್ಯ ? ''ಸರ್ವಭೂತಾಶಯಃ ಸ್ಥಿತಃ'' ಎಂಬ ಶ್ರುತಿಯ ಆಧಾರದಿಂದಲೂ ಈ ವಿಷಯವು ಮತ್ತಷ್ಟು ದೃಢವಾಗುತ್ತದೆ.

ಒಂದು ವೇಳೆ ಅಲ್ಪದೇಶದಲ್ಲಿರುವವನು ಸರ್ವಗತನೂ ಆಗಬಹುದೆಂದು ಎಲ್ಲಾದರೂ ಸಮರ್ಥಿಸಿದ್ದರೆ ಭಗವಂತನನ್ನು ಸರ್ವಗತನೆನ್ನಬಹುದಿತ್ತು. ಆದರೆ ಎಲ್ಲಿಯೂ ಸಹ ಈ ವಿರೋಧವನ್ನು ಪರಿಹರಿಸಿಯೇ ಇಲ್ಲ. ಆದ್ದರಿಂದ ಭಗವಂತನನ್ನು ಹೃದಯದಲ್ಲಿದ್ದಾನೆಂದು ಹೇಳಿ ಆದಿತ್ಯಾದಿಗಳನ್ನು ಎಲ್ಲೆಡೆ ಇದ್ದಾರೆಂದು ಹೇಳುವುದೇ ಸ್ವರಸವೆಂದು ಪೂರ್ವಪಕ್ಷದ ಆಶಯ.

ಸರ್ವಗತನಾದವನು ಅಲ್ಪದೇಶದಲ್ಲಿರಲಾರ

ಅಂತರ್ಯಾಮಿಯಲ್ಲಿಯೂ ಸಹ ಅಲ್ಪಸ್ಥಾನಸ್ಥಿತತ್ವವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ''ಹೃದಯೇ ಜ್ಯಾಯಾನ್ ಪೃಥಿವ್ಯಾಃ'' ಎಂಬ ಶ್ರುತಿಯು ಹೃದಯದಲ್ಲಿರುವ ಅಂತರ್ಯಾಮಿಗೆ ಸರ್ವಗತತ್ವವನ್ನೇ ಹೇಳುತ್ತಿದೆ. ಸರ್ವಗತನಲ್ಲಿಅಲ್ಪದೇಶಸ್ಥಿತತ್ವವನ್ನು ಹೇಳಲಾಗದೆಂದು ವಾದ ಮಾಡಿದರೆ ಆದಿತ್ಯನಲ್ಲಿಯೂ ಅಲ್ಪದೇಶಸ್ಥಿತತ್ವವನ್ನು ಹೇಳಲು ಸಾಧ್ಯವಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಆದಿತ್ಯಶ್ರುತಿಗೆ ಅನುಸಾರಿಯಾಗಿ ಆದಿತ್ಯನಲ್ಲಿರುವ ಸರ್ವಗತತ್ವವನ್ನು ಸಂಕೋಚ ಮಾಡಬೇಕಾಗುತ್ತದೆ. ಆದಿತ್ಯನಲ್ಲಿ ಸಂಕುಚಿತವಾದ ಅರ್ಥವನ್ನು ಹೇಳಿದಂತೆ ಬ್ರಹ್ಮನಲ್ಲಿ ಹೇಳಲಾಗದೆಂಬುದನ್ನು ಮಾತ್ರ ಗಮನಿಸಬೇಕು.

ಬಾಧಕಪರಿಹಾರದೊಂದಿಗೆ ಪೂರ್ವಪಕ್ಷದ ಉಪಸಂಹಾರ

ಆದಿತ್ಯನೇ ಸರ್ವಗತನೆನ್ನಲು ಅನೇಕ ಸಾಧಕಯುಕ್ತಿಗಳನ್ನು ಪೂರ್ವಪಕ್ಷಕಾರರು ಮಂಡಿಸಿ ಈಗ ಭಾಧಕವನ್ನು ಪರಿಹರಿಸಿಕೊಳ್ಳುತ್ತಿದ್ದಾರೆ. ಯಾವ ಶ್ರುತಿಭಾಗದಲ್ಲಿ ಸರ್ವಗತತ್ವವು ಕೇಳಿಸುತ್ತಿದೆಯೋ ಅಲ್ಲಿ ಬ್ರಹ್ಮಶಬ್ದವೇ ಮೊದಲಾದ ವಿಷ್ಣುಲಿಂಗಗಳೂ ಸಹ ಇವೆ. ಇದರ ಬಲದಿಂದ ವಿಷ್ಣುವೇ ಸರ್ವಗತನಾಗುತ್ತಾನೆಂಬುದು ಪೂರ್ವಪಕ್ಷಕಾರರಿಗಿರುವ ದೊಡ್ಡ ಸವಾಲು ? ಅರ್ಭಕೌಕಸ್ತ್ವ ಎಂಬ ಧರ್ಮವೂ ಸಹ ಅದೇ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ಸೂರ್ಯನೇ ಸರ್ವಗತನಾಗಬೇಕು. ಅರ್ಭಕೌಕಸ್ತ್ವ ಎಂಬ ಪ್ರಬಲವಾದ ಒಂದೇ ಯುಕ್ತಿಯಿಂದ ಬ್ರಹ್ಮನ ಲಿಂಗಗಳೆಲ್ಲವನ್ನೂ ಬಾಧಿಸಬೇಕು. ಅರ್ಭಕೌಕಸ್ತ್ವ ಲಿಂಗವನ್ನು ವಿಷ್ಣುವಿನಲ್ಲಿ ಹೇಳಲು ಸಾಧ್ಯವೂ ಇಲ್ಲ. ಆದ್ದರಿಂದ ಸೂರ್ಯ ಆಥವಾ ಸಕಲ ಜೀವರು ಸರ್ವಗತರಾಗುತ್ತಾರೆಂಬ ಪೂರ್ವಪಕ್ಷವು ಉದಯವಾಗುತ್ತದೆ.

ವಿಷ್ಣುವೇ ಸರ್ವಗತನೆಂದು ಸಿದ್ಧಾಂತ

ಸಿದ್ಧಾಂತವು ಪ್ರಾರಂಭವಾಗುತ್ತಿದೆ. ಸೂತ್ರಕಾರರು ಹೇಳಿದ ಸಿದ್ಧಾಂತಲಿಂಗಗಳನ್ನು ಸಮರ್ಥಿಸುವುದಕ್ಕಿಂತ ಮೊದಲು ಪೂರ್ವಪಕ್ಷಪ್ರಾಪಕಲಿಂಗಗಳನ್ನು ವಿಷ್ಣುವಿನಲ್ಲಿ ಸಮರ್ಥಿಸುತ್ತಾರೆ.

ಪೂರ್ವಪಕ್ಷ ಮಾಡುವಾಗ ಆದಿತ್ಯನೇ ಸರ್ವಗತನೆನ್ನಲು ಸಂವತ್ಸರಸಾರತ್ವ, ಆದಿತ್ಯನಲ್ಲಿ ಪ್ರಸಿದ್ಧವಾದ ಯಚ್ಚಬ್ದೋಪಬಂಧ ಹಾಗೂ ಸರ್ವಪುರುಷಾಭಿಮುಖ್ಯ ಎಂಬುದಾಗಿ ಮೂರು ಹೇತುಗಳನ್ನು ಹೇಳಿದ್ದರು. ಇವುಗಳಲ್ಲಿ ಸಂವತ್ಸರಸಾರತ್ವವು ಆದಿತ್ಯನಲ್ಲಿ ಬರುವುದಿಲ್ಲ ಹೊರತಾಗಿ ವಿಷ್ಣುವಿನಲ್ಲಿಯೇ ಬರುತ್ತದೆಂದು ಇಲ್ಲಿ ಸಮರ್ಥಿಸುತ್ತಿದ್ದಾರೆ.

೩೬೦ ದಿವಸಗಳೆಂಬ ಒಂದು ವರ್ಷವು ಸಂವತ್ಸರಶಬ್ದದ ಅರ್ಥವಲ್ಲ, ಹೊರತಾಗಿ ಚತುರ್ಮುಖಬ್ರಹ್ಮನೆಂದು ಅರ್ಥ. 'ಸಂವತ್ಸರನಾಮ ಬ್ರಹ್ಮಾಣಂ'' ಇತ್ಯಾದಿಯಾಗಿ ಸ್ಮೃತಿಶ್ರುತಿಗಳೆಲ್ಲವು ಚತುರ್ಮುಖಬ್ರಹ್ಮನನ್ನೇ ಸಂವತ್ಸರ

ಎನ್ನುತ್ತಿವೆ. ಏತರೇಯೋಪನಿಷತ್ತಿನಲ್ಲಿಯೂ ಸಹ ಮಹಾಪುರುಷ ಎಂಬುದಾಗಿ ಚತುರ್ಮುಖನನ್ನೇ ಸಂವತ್ಸರನೆಂದು ಹೇಳಿರುವುದು ಕಾಣಿಸುತ್ತಿದೆ. ಆದ್ದರಿಂದ ಸಂವತ್ಸರ ಸಾರನೆಂದರೆ ಸಂವತ್ಸರ ಎನಿಸಿದ ಚತುರ್ಮುಖನಿಗಿಂತ ಪರಮಾತ್ಮನು ಉತ್ತಮನಾಗಿದ್ದಾನೆಂದು ತಿಳಿಯಬೇಕು.

ಉಳಿದೆರಡು ಪೂರ್ವಪಕ್ಷ ಯುಕ್ತಿಗಳು ಬ್ರಹ್ಮನಲ್ಲೇ ಇವೆ

'ಯಚ್ಛಬ್ದೋಪಬಂಧ' 'ಸರ್ವಪುರುಷಾಭಿಮುಖ್ಯ' ಎಂಬೆರಡು ಪೂರ್ವಪಕ್ಷಯುಕ್ತಿಗಳೂ ಸಹ ವಿಷ್ಣುವಿನಲ್ಲಿಯೇ ಬರುತ್ತವೆ. ಶ್ರುತಿಪ್ರಸಿದ್ಧವಾದ ವಿಷ್ಣುವನ್ನು 'ಯಶ್ಚಾಸಾವಾದಿತ್ಯೇ' ಎಂಬಲ್ಲಿರುವ 'ಯತ್' ಶಬ್ದದಿಂದ ಗ್ರಹಣ ಮಾಡಬಹುದು. ಆದಿತ್ಯಶಬ್ದವೂ ಸಹ 'ಆದಿತ್ಯೋ ಜ್ಯೋತಿರಾದಿತ್ಯಃ' ಎಂಬ ವಿಷ್ಣುಸಹಸ್ರನಾಮ ಹೇಳುವಂತೆ ವಿಷ್ಣುವಿನಲ್ಲಿಯೇ ಪ್ರಸಿದ್ಧವಾಗಿದೆ.

ಸಕಲಪುರುಷಾಭಿಮುಖ್ಯವೆಂಬ ಲಿಂಗವು ವಿಷ್ಣುವಿನಲ್ಲಿಯೇ ಮುಖ್ಯವಾಗಿವೆ. ವಿಚಾರ ಮಾಡಿದರೆ ಪ್ರತಿಯೊಬ್ಬ ಪುರುಷನಿಗೆ ಅಭಿಮುಖವಾದದ್ದು ಸೂರ್ಯಮಂಡಲವೇ ಹೊರತು ಸೂರ್ಯನಲ್ಲ. ಆದರೂ ಸೂರ್ಯಮಂಡಲದ ಮೂಲಕವಾಗಿ ಸೂರ್ಯನೇ ಅಭಿಮುಖನೆಂದು ಪೂರ್ವಪಕ್ಷಕಾರರು ಹೇಳುವುದಾದರೆ ಅಲ್ಲಿಯೇ ಇರುವ ಸೂರ್ಯನಾರಾಯಣನನ್ನು ಅಭಿಮುಖನೆಂದು ಏಕೆ ಹೇಳಬಾರದು.

ಆದಿತ್ಯ ಹಾಗೂ ಜೀವರ ಲಿಂಗಗಳೆಲ್ಲವು ವಿಷ್ಣುವಿನಲ್ಲಿ ಸಾವಕಾಶವಾಗಿವೆ

ಆದಿತ್ಯಲಿಂಗಗಳು ವಿಷ್ಣುವಿನಲ್ಲಿಯೇ ಇವೆಯೆಂದು ಸಮರ್ಥಿಸಿದ್ದಾಯಿತು. ಪ್ರಕೃತ ಆದಿತ್ಯಲಿಂಗಗಳ ಬಲದಿಂದ ಸೂರ್ಯ ಮೊದಲಾದ ಶಬ್ದಗಳು ಆದಿತ್ಯನನ್ನೇ ಪ್ರತಿಪಾದಿಸುತ್ತವೆಂಬುದನ್ನು ನಿರಾಕರಿಸುತ್ತಿದ್ದಾರೆ. ಯಾವ ಮಂತ್ರವು ಸೂರ್ಯನನ್ನು ಪ್ರತಿಪಾದಿಸುತ್ತದೆಂದು ನೀವು ಹೇಳುತ್ತಿದ್ದೀರೋ ಅದೇ ಮಂತ್ರದಲ್ಲಿ ವಿಷ್ಣುವಿನ ಅಸಾಧಾರಣ ಲಿಂಗವೆನಿಸಿದ ಸಕಲಜಗನ್ನಿಯಾಮಕತ್ವವು ಕೇಳಿಸುತ್ತಿದೆ. ಆದ್ದರಿಂದ ಸೂರ್ಯಮಂತ್ರವು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತಿದೆ. ಸಕಲ ದೇವತೆಗಳಿಗೆ ಕಣ್ಣಿನಂತಿರುವ ವಿಷ್ಣುವೇ 'ಚಕ್ಷುಃ' ಎನಿಸುತ್ತಾನೆ.

ಎಲ್ಲವನ್ನು ನೋಡುವ ಶಕ್ತಿಯುಳ್ಳವನಾದ್ದರಿಂದ ಅಥವಾ ಚಕ್ಷುರಾದಿ ಸಮಸ್ತ ಇಂದ್ರಿಯಗಳಿಗೆ ಸ್ವಾಮಿಯಾದ್ದರಿಂದ ವಿಷ್ಣುವೇ ಚಕ್ಷುರ್ಮಯನಾಗಬೇಕು. ಜೀವನಲ್ಲಿ ಇಂತಹ ಚಕ್ಷುರ್ಮಯತ್ವವು ಬರಲು ಸಾಧ್ಯವಿಲ್ಲ.

ಸರ್ವಗತನಾದ ವಿಷ್ಣುವಿನಲ್ಲಿ ಅಲ್ಪದೇಶಸ್ಥಿತತ್ವವನ್ನು ಹೇಳುವುದು ವಿರುದ್ಧವೆಂದು ಹಿಂದೆ ಆಕ್ಷೇಪಿಸಲಾಗಿತ್ತು. ಇದೂ ಸಹ ತಪ್ಪು. ಒಂದು ವೇಳೆ ಸೂತ್ರಕಾರರು ಅಲ್ಪದೇಶದಲ್ಲಿ ಮಾತ್ರ ಇದ್ದಾನೆಂದು ಹೇಳಿದ್ದರೆ ನಿಮ್ಮ ಮಾತು ಸರಿಯಾಗುತ್ತಿತ್ತು. ಸರ್ವದೇಶದಲ್ಲಿರಬೇಕಾದರೆ ಅಲ್ಪದೇಶದಲ್ಲಿ ಇರಲೇಬೇಕು. ಅಲ್ಪದೇಶದಲ್ಲಿಯೇ ಇರದವನು ಸಕಲದೇಶದಲ್ಲಿ ಇರಲು ಹೇಗೆ ಸಮರ್ಥನಾಗುತ್ತಾನೆ ? ನೂರು ರೂಪಾಯಿಗಳು ಇರಬೇಕಾದರೆ ಹತ್ತು ರೂಪಾಯಿ ಇರಲೇಬೇಕಲ್ಲವೇ? ಆದ್ದರಿಂದ ಭಗವಂತನು ಅಲ್ಪದೇಶವೆನಿಸಿದ ಹೃದಯದಲ್ಲೂ ಇದ್ದಾನೆ. ವಿಶಾಲವಾದ ಜಗತ್ತಿನಲ್ಲಿಯೂ ವ್ಯಾಪಿಸಿದ್ದಾನೆ. ಯಾವುದೇ ವಿರೋಧಕ್ಕೆ ಇಲ್ಲಿ ಅವಕಾಶವಿಲ್ಲ.

ಸ್ವಪಕ್ಷದಲ್ಲಿ ಸಾಧಕ ಪ್ರಮಾಣಗಳೂ ಸಹ ಇವೆ

ಹಿಂದೆ ಪೂರ್ವಪಕ್ಷ ಮಾಡುವಾಗ 'ಸರ್ವೇಷು ಭೂತೇಷು' ಎಂಬುದಾಗಿ ಖಿದ್ದಾಗಿ ಭೂತಪದವನ್ನು ಬಳಸಿದ್ದರಿಂದ ಭೂತಪದಾರ್ಥದಲ್ಲಷ್ಟೇ ಬ್ರಹ್ಮನಿದ್ದಾನೆಂದು ಹೇಳಬೇಕು ಎಂದು ಆಕ್ಷೇಪಿಸಿದ್ದರು. ಆದರೆ ಉಪಾಸನೆಗೋಸ್ಕರವಷ್ಟೇ ಭೂತಪದವನ್ನು ಬಳಸಲಾಗಿದೆ. ಸಕಲಭೂತಗಳಲ್ಲಿಯೂ ಭಗವಂತನನ್ನು ಉಪಾಸನೆ ಮಾಡಬೇಕು.

ಶ್ರುತಿಯಲ್ಲಿರುವ ಸರ್ವಪದದಿಂದಲೇ ಆದಿತ್ಯನನ್ನು ಸಂಗ್ರಹಿಸಬಹುದಾದ್ದರಿಂದ ಚಂದ್ರ, ನಕ್ಷತ್ರಾದಿಗಳನ್ನು ಹೇಳಿ ಆದಿತ್ಯನನ್ನು ಹೇಳಿಲ್ಲ ಎಂಬ ಶಂಕೆಗೆ ಅವಕಾಶವಿಲ್ಲ.

ಮತ್ತು ವಿಷ್ಣುವಿನ ಲಿಂಗವೆನಿಸಿದ ಬ್ರಹ್ಮಶಬ್ದ ಅಶ್ರುತತ್ವಾದಿಗಳನ್ನು ಆಮುಖ್ಯವೆಂದು ಹೇಳಲಾಗದು. ಏಕೆಂದರೆ ಈಗಾಗಲೇ ಸಮರ್ಥಿಸಿದಂತೆ ಸಂವತ್ಸರಸಾರತ್ವ ಮೊದಲಾದ ಲಿಂಗಗಳು ವಿಷ್ಣುವಿನಲ್ಲೇ ಇರುವುದರಿಂದ.

ಸಕಲ ಶ್ರುತಿಗಳಲ್ಲಿರುವ ಬ್ರಹ್ಮಶಬ್ದವು ವಿಷ್ಣುವಿನಲ್ಲೇ ಪ್ರಸಿದ್ಧವಾಗಿವೆ ಎಂಬುದನ್ನು ಸಮರ್ಥಿಸಲು ಸೂತ್ರದಲ್ಲಿ ಪ್ರಸಿದ್ಧ ಪದವನ್ನು ಪ್ರಯೋಗಿಸಿದ್ದಾರೆ. 'ತದೇವ ಬ್ರಹ್ಮ' ಎಂಬಲ್ಲಿರುವ ಬ್ರಹ್ಮಶಬ್ದವು ಅವಧಾರಣ ಸಹಿತವಾಗಿ ವಿಷ್ಣುವೊಬ್ಬನನ್ನೇ ಬ್ರಹ್ಮನೆನ್ನುತ್ತಿದೆ. ಉಳಿದವರು ಬ್ರಹ್ಮರಲ್ಲವೆಂದೂ ಸಹ ಸಮರ್ಥಿಸುತ್ತಿದೆ. ಈ ಅರ್ಥವನ್ನು ಜೀವಾದಿಗಳು ಬ್ರಹ್ಮರೆಂದು ಒಪ್ಪಿದಾಗ ಹೇಳಲಾಗದು. ಜ್ಞಾನಿಪ್ರಸಿದ್ಧಿಯೂ ಸಹ ವಿಷ್ಣುವಿನಲ್ಲೇ ಇರುತ್ತದೆ. ಉಪಸಂಹಾರದಲ್ಲಿ ಅಶ್ರುತತ್ವಾದಿಲಿಂಗಗಳು ಕೇಳಿಸುತ್ತಿರುವುದರಿಂದಲೂ ಉಪಕ್ರಮದಲ್ಲಿರುವ ಆರ್ಭಕೌಕಸ್ತ್ವಾದಿಲಿಂಗಗಳನ್ನು ವಿಷ್ಣುವಿನಲ್ಲೇ ಸಮರ್ಥಿಸಬೇಕು.

ಅಣುಜೀವನು ಎಲ್ಲೆಡೆ ವ್ಯಾಪಿಸಲಾರ

ಪೂರ್ವಪಕ್ಷಕಾರರು ಜೀವನನ್ನು ಸರ್ವಗತನೆಂದು ಸಮರ್ಥಿಸಿದ್ದರು. ಅದೂ ಸಹ ತಪ್ಪು. ಜೀವನು ಸರ್ವಗತನೆಂದರೆ ಒಬ್ಬೊಬ್ಬ ಜೀವನು ಜಗತ್ತಿನಲ್ಲಿರುವ ಕೋಟ್ಯಾಂತರ ಶರೀರಗಳಲ್ಲಿದ್ದಾನೆಂದು ಅರ್ಥ. ಆಗ ಪ್ರತಿಯೊಬ್ಬರೂ ಅನುಭವಿಸುವ ಕಷ್ಟ-ನಷ್ಟಗಳಿಂದ ಬರುವ ದುಃಖವು ಪ್ರತಿಯೊಬ್ಬರಿಗೂ ಬರಬೇಕಾದೀತು. ಮತ್ತು ಈ ಶರೀರವೇ ದೇವದತ್ತನದ್ದು ಮತ್ತೊಂದು ದೇವದತ್ತನದ್ದಲ್ಲವೆಂದು ವ್ಯವಸ್ಥೆಯನ್ನೇ ಮಾಡಲಾಗದು. ಆದ್ದರಿಂದ ಅಣುವಾದ ಜೀವನನ್ನು ಸರ್ವಗತನೆಂದು ಹೇಳುವುದು ಹಾಸ್ಯಾಸ್ಪದ ಮಾತು.

ಭಗವಂತನೇ ಸರ್ವಗತನಾಗಿದ್ದಾನೆ. ಸಕಲಜೀವರ ಶರೀರದ ಸಂಬಂಧವೂ ಸಹ ಭಗವಂತನಿಗಿದೆ. ಆದರೂ ತನ್ನಲ್ಲಿರುವ ಸ್ವಾಭಾವಿಕವಾದ ಸಾಮರ್ಥ್ಯದಿಂದ ಆಯಾ ಶರೀರಗಳಲ್ಲುಂಟಾಗುವ ಸುಖದುಃಖಾದಿಗಳನ್ನು ಅನುಭವಿಸಲಾರ. ಇಂತಹ ಭಗವಂತನನ್ನೇ ಶ್ರುತಿಯು ಸರ್ವಗತನೆಂದು ಕೊಂಡಾಡುತ್ತಿದೆ.

ಕರ್ಮಕರ್ತೃಗಳಿಗೆ ಭೇದವಿರುವುದರಿಂದಲೂ ವಿಷ್ಣುವೇ ಸರ್ವಗತನು

ಒಂದೇ ಕ್ರಿಯೆಗೆ ಯಾವುದು ಕರ್ಮವೋ ಅದು ಕರ್ತೃವಾಗುವುದಿಲ್ಲವೆಂಬ ವ್ಯಾಪ್ತಿಯು ಲೋಕದಲ್ಲಿ ಸಿದ್ಧವಾಗಿದೆ. 'ಆತ್ಮಾನಂ ಪರಸ್ಮೈ ಶಂಸತಿ' ಎಂಬಲ್ಲಿ ಪರಮಾತ್ಮನು 'ಶಂಸನ' ಎಂಬ ಕ್ರಿಯೆಯಲ್ಲಿ ಕರ್ಮನಾದ್ದರಿಂದ ಕರ್ತೃವಾಗಲು ಸಾಧ್ಯವಿಲ್ಲ. ಇದರಿಂದ ಸರ್ವಗತನೆನಿಸಿದ ಆತ್ಮನೇ ಬೇರೆ ಕರ್ತೃವೆನಿಸಿದ ಜೀವನೇ ಬೇರೆ ಎಂದು ನಿರ್ಣಯವಾಗುತ್ತದೆ.

'ಮಾಮಹಂ ಜಾನಾಮಿ' ಇತ್ಯಾದಿ ಸ್ಥಳಗಳಲ್ಲಿ ಈ ನಿಯಮಕ್ಕೆ ವ್ಯಭಿಚಾರವಿರಬಹುದು. ಆದರೆ ಅನುಭವವೆಂಬ ಪ್ರಬಲ ಪ್ರಮಾಣದ ಬಲದಿಂದ ಕರ್ಮ ಹಾಗೂ ಕರ್ತೃಗಳು ಒಂದೇ ಆಗಬಹುದು 'ಆತ್ಮಾನಂ ಪರಸ್ಮೈ ಶಂಸತಿ' ಎಂಬಲ್ಲಿ ಇಂತಹ ಅಪವಾದ ಪ್ರಮಾಣವಿರುವುದಿಲ್ಲ. ಹೀಗೆ ಕರ್ಮಕರ್ತೃಗಳ ಭೇದವ್ಯಪದೇಶದಿಂದ ಸರ್ವಗತನು ಪರಮಾತ್ಮನೆಂದು ತಿಳಿಯುತ್ತದೆ.

ಸರ್ವಗತನೆಂದರೆ ಸಕಲ ಪದಾರ್ಥಗಳಲ್ಲಿ ಆಕಾಶದಂತೆ ಹೆಣೆದುಕೊಂಡಿದ್ದಾನೆಂದಷ್ಟೇ ಅರ್ಥ ಅಲ್ಲ. ಹಾಗೇನಾದರು ಹೇಳಿದರೆ ಅದು ಗುಣವೇ ಆಗುವುದಿಲ್ಲ. ಆದ್ದರಿಂದ ಪ್ರತಿಯೊಂದು ಪದಾರ್ಥಗಳಲ್ಲಿ ನೆಲೆಸಿ ಆಯಾ ಪದಾರ್ಥಗಳ ಶಕ್ತಿಯನ್ನು ಪ್ರಕಟಪಡಿಸಿ ನಿಯಮನ ಮಾಡುವಂತಹ ಗುಣವೇ ಸರ್ವಗತವೆಂಬುದರಿಂದ ತಿಳಿಯುತ್ತದೆ.

ವಸ್ತುತಸ್ತು ಭಗವಂತನು ದೂರದಲ್ಲಿದ್ದೂ ಸಹ ಸಕಲ ಪದಾರ್ಥಗಳನ್ನೂ ನಿಯಂತ್ರಣ ಮಾಡಬಹುದು ಆದರೂ ಕೇವಲ ಲೀಲೆಯಿಂದ ಆಯಾ ವಸ್ತುಗಳಲ್ಲೇ ಇದ್ದು ಸಕಲಪದಾರ್ಥಗಳನ್ನು ನಿಯಂತ್ರಣ ಮಾಡುವುದು ಆವನಲ್ಲಿರುವ ಮತ್ತೊಂದು ದೊಡ್ಡಗುಣ.

ಸೂತ್ರಗಳ ಜೋಡಣೆಯಲ್ಲೂ ಸ್ವಾರಸ್ಯ

ಸೂತ್ರದ ಜೋಡಣೆಯಲ್ಲಿ ಬಹಳ ಸ್ವಾರಸ್ಯವಿದೆ. ವಿಷಯವಾಕ್ಯದಲ್ಲಿರುವ ಬ್ರಹ್ಮಶಬ್ದವನ್ನು ಸ್ವಪಕ್ಷಸಾಧಕವನ್ನಾಗಿ ಪ್ರಥಮಸೂತ್ರವು ಹೇಳುವುದರಿಂದ ಮೊದಲು ಉಕ್ತವಾಗಿದೆ. ಅದೇ ವಿಷಯವಾಕ್ಯದ ಮುಂದಿನ ಶ್ರುತಿಯಲ್ಲಿರುವ ಲಿಂಗವನ್ನು ಸಾಧಿಸುತ್ತಿರುವುದರಿಂದ 'ಅನುಪಪತ್ತೇಸ್ತು' ಎಂಬ ಸೂತ್ರವು ಆನಂತರ ಬಂದಿದೆ. ಹೀಗೆ ಮೊದಲೆರಡು ಸೂತ್ರಗಳಲ್ಲಿ ಸ್ವಪಕ್ಷಸಾಧಕಗಳನ್ನು ಸಮರ್ಥಿಸಿ ಅಣುವಾದ ಜೀವನಲ್ಲಿ ಸರ್ವಗತತ್ವವು ಅತ್ಯಂತ ಅನುಪಪನ್ನವಾಗಿದೆಯೆಂದು ಮೂರನೆಯ ಸೂತ್ರವು ಹೇಳುತ್ತಿದೆ.

ನಾಲ್ಕನೆಯ ಸೂತ್ರವು ಕರ್ಮಕರ್ತೃಭಾವ ವಿರೋಧದಿಂದ ಜೀವನಲ್ಲಿ ಸರ್ವಗತತ್ವವನ್ನು ಅಲ್ಲಗಳೆಯುತ್ತಿದೆ. ಆದ್ದರಿಂದ ಮೂರನೆ ಮತ್ತು ನಾಲ್ಕನೆಯ ಸೂತ್ರಗಳು ಪರಪಕ್ಷದಲ್ಲಿ ಬಾಧಕಗಳನ್ನು ತೋರಿಸುವುದಕ್ಕಾಗಿ ಹೊರಟಿರುವುದರಿಂದ ಆನಂತರ ಪ್ರಸಕ್ತವಾಗಿವೆ. ಅವುಗಳಲ್ಲಿಯೂ ಆಂತರಂಗಹೇತುವನ್ನು ಮೂರನೆಯ ಸೂತ್ರವು ಹೇಳುವುದರಿಂದ ಬಹಿರಂಗಹೇತುವನ್ನು ಸಮರ್ಥಿಸುವ ನಾಲ್ಕನೆಯ ಸೂತ್ರಕ್ಕಿಂತ ಮೊದಲು ಪ್ರಸಕ್ತವಾಗಿದೆ.

'ಶಬ್ದವಿಶೇಷಾತ್' ಮೊದಲಾದ ಸೂತ್ರಗಳ ವಿನ್ಯಾಸಕ್ರಮ

ನಾಲ್ಕನೆಯ ಸೂತ್ರದಲ್ಲಿ ಹೇಳುವ ಕರ್ಮಕರ್ತೃಭಾವವೆಂಬ ಬಾಧಕವನ್ನು ಸಮರ್ಥಿಸುವುದಕ್ಕಾಗಿ ಐದನೆಯ ಸೂತ್ರವು ಹೊರಟಿದೆ. ಈ ಸೂತ್ರದಲ್ಲಿ ಅವಧಾರಣ ಸಹಿತವಾದ ಬ್ರಹ್ಮಶಬ್ದವೆಂಬ ಸ್ವಪಕ್ಷಸಾಧಕವನ್ನು ಹೇಳಿದ್ದರೂ ಸಹ ನಾಲ್ಕನೆಯ ಸೂತ್ರವನ್ನು ಸಮರ್ಥಿಸಿರುವುದರಿಂದ ಐದನೆಯ ಸ್ಥಾನವೇ ಇದಕ್ಕೆ ಯುಕ್ತವಾಗಿದೆ.

ಶ್ರುತಿಗೆ ಸಂಬಂಧಿಸಿದ ಸ್ವಪಕ್ಷಸಾಧಕವನ್ನು ಐದನೆಯ ಸೂತ್ರವು ಸಮರ್ಥಿಸಿದ ಮೇಲೆ ಸ್ಮೃತಿಗೆ ಸಂಬಂಧಿಸಿದ ಸ್ವಪಕ್ಷಸಾಧಕವನ್ನು ಆರನೆಯ ಸೂತ್ರವು ಹೇಳುತ್ತಿದೆ. ಏಳನೆಯ ಸೂತ್ರದಲ್ಲಿ ಸ್ವಪಕ್ಷಬಾಧಕವನ್ನು ಉದ್ಧರಿಸಲಾಗಿದೆ. ಆದ್ದರಿಂದ ಉಳಿದ ಆರು ಸೂತ್ರಗಳಲ್ಲಿ ಪ್ರಸಕ್ತವಾದ ವಿಷಯದ ಮೇಲೆ ಬರುವ ತೊಂದರೆಗಳನ್ನೆಲ್ಲಾ ನಿರಾಕರಿಸುವುದರಿಂದ ಇದಕ್ಕೆ ಏಳನೆಯ ಸ್ಥಾನವು ಯುಕ್ತವಾಗಿದೆ.

ಸರ್ವಗತನಾದ ಬ್ರಹ್ಮನು ಎಲ್ಲೆಡೆ ಇರುವಂತೆ ಜೀವನ ಜೊತೆಗೂ ಸಹ ಇರುತ್ತಾನೆ. ಆವಾಗ ಜೀವನಿಗುಂಟಾಗುವ ಸುಖದುಃಖಾದಿಗಳ ಅನುಭವವು ಚೇತನನಾದ ಬ್ರಹ್ಮನಿಗೂ ಸಹ ಬರಬೇಕಲ್ಲವೇ? ಎಂಬ ಸ್ವಪಕ್ಷಬಾಧಕವನ್ನು ಪರಿಹರಿಸಲು ಎಂಟನೆಯ ಸೂತ್ರವು ಹೊರಟಿದೆ. ತನ್ನಲ್ಲಿರುವ ಅದ್ಭುತ ಸಾಮರ್ಥ್ಯದಿಂದ ಭಗವಂತನು ಜೀವನ ಜೊತೆಗಿದ್ದರೂ ಸುಖದುಃಖಾದಿಗಳನ್ನು ಅನುಭವಿಸಲಾರ.

ಲಿಂಗಪಾದದ ಏಳು ಅಧಿಕರಣಗಳ ಉಪಾಧಿಗಳು

ಅಧಿಕರಣಗಳ ಉಪಾಧಿ ಹೀಗಿವೆ -

೧. ಸರ್ವಗತತ್ವಾಧಿಕರಣ - 'ಸರ್ವತ್ರಾವಸ್ಥಿತಿ' ಎಂಬ ಧರ್ಮರೂಪ ಲಿಂಗಸಮನ್ವಯ.

೨. ಅತ್ಯತ್ವಾಧಿಕರಣ - 'ಸಂಹಾರವೆಂಬ' ಕ್ರಿಯಾರೂಪ ಲಿಂಗಸಮನ್ವಯ.

೩. ಗುಹಾಧಿಕರಣ - 'ಕರ್ಮಫಲಭೋಗ' ಎಂಬ ಕ್ರಿಯಾರೂಪ ಲಿಂಗಸಮನ್ವಯ.

೪. ಆಂತರಾಧಿಕರಣ - 'ಆಂತಸ್ಥಿತನಾಗಿದ್ದು ರಮಣ ಮಾಡುವಿಕೆಯೆಂಬ' ಧರ್ಮಸಹಿತವಾದ ಕ್ರಿಯಾರೂಪದ ಲಿಂಗಸಮನ್ವಯ.

೫. ಆಂತರ್ಯಾಮ್ಯಧಿಕರಣ - 'ಧರ್ಮಸಹಿತವಾದ ನಿಯಮನ' ಎಂಬ ಕ್ರಿಯಾರೂಪ ಲಿಂಗಸಮನ್ವಯ.

೬. ಅದೃಶ್ಯತ್ವಾಧಿಕರಣ - 'ಅಭಾವ ರೂಪ' ಲಿಂಗಸಮನ್ವಯ

೭. ವೈಶ್ವಾನರಾಧಿಕರಣ - 'ಪಾಚಕತ್ವವೇ' ಮೊದಲಾದ ಅನೇಕ ಲಿಂಗಗಳಿಂದ ಸಹಿತವಾದ 'ವೈಶ್ವಾನರ' ಎಂಬ ನಾಮಸಮನ್ವಯ.

ಅಧಿಕರಣಸಂಗತಿ ಹೀಗಿದೆ - ಸರ್ವಗತತ್ವಾಧಿಕರಣದಲ್ಲಿ ಭಾವರೂಪವಾದ ಲಿಂಗವನ್ನು ಸಮನ್ವಯ ಮಾಡಿದ್ದಾರೆ. ಅತ್ಯತ್ವಾಧಿಕರಣದಲ್ಲಿ ಕ್ರಿಯಾರೂಪವಾದ ಲಿಂಗವನ್ನು ಸಮನ್ವಯ ಮಾಡಿದ್ದಾರೆ. ವಸ್ತು ಇದ್ದರೆ ಮಾತ್ರ ಆದರಲ್ಲಿ ಕ್ರಿಯೆ ಉಂಟಾಗಲು ಸಾಧ್ಯ. ಆದ್ದರಿಂದ ಇರುವಿಕೆಯನ್ನು ಮೊದಲಿನ ಅಧಿಕರಣದಲ್ಲಿ ಹೇಳಿ ಆನಂತರ ಕ್ರಿಯೆಯನ್ನು ಹೇಳುವುದು ಸೂಕ್ತವೆಂದು ತಿಳಿದು ಅತ್ಯತ್ವಾಧಿಕರಣವು ಆನಂತರವೇ ಪ್ರಸಕ್ತವಾಗುತ್ತದೆ. ಮುಂದಿನ ಗುಹಾಧಿಕರಣದಲ್ಲಿಯೂ ಕರ್ಮಫಲಭೋಕ್ತೃತ್ವವೆಂಬ ಕ್ರಿಯಾರೂಪವಾದ ಲಿಂಗವನ್ನೇ ಸಮನ್ವಯ ಮಾಡುತ್ತಾರೆ. ಆದರೆ ಸಂಹರ್ತೃತ್ವಕ್ಕಿಂತ ಕರ್ಮಫಲಭೋಕ್ತೃತ್ವದ ಸಮನ್ವಯವು ಕಷ್ಟಸಾಧ್ಯವಾದ್ದರಿಂದ ಆನಂತರವೇ ಹೇಳಿದ್ದಾರೆ.

ಮೊದಲು ಭಾವ ಹಾಗೂ ಕ್ರಿಯಾರೂಪವಾದ ಲಿಂಗಗಳನ್ನು ಸಮನ್ವಯ ಮಾಡಿದ ಮೇಲೆ ಕ್ರಿಯಾವಿಶಿಷ್ಟವಾದ ಲಿಂಗವನ್ನು ಸಮನ್ವಯ ಮಾಡುವುದು ಯುಕ್ತ. ಆದ್ದರಿಂದ ಆಂತರಾಧಿಕರಣ ಹಾಗೂ ಆಂತರ್ಯಾಮ್ಯಧಿಕರಣಗಳು ಆನಂತರ ಹೊರಟಿವೆ. ಭಾವರೂಪವಾದ ಲಿಂಗಗಳ ಸಮನ್ವಯದ ಆನಂತರ ಭಾವನಿರೂಪ್ಯವಾದ ಅಭಾವರೂಪಧರ್ಮವನ್ನು ಅದೃಶ್ಯತ್ವಾಧಿಕರಣದಲ್ಲಿ ಸಮನ್ವಯ ಮಾಡಲಾಗಿದೆ. ಆನೇಕ ಲಿಂಗಗಳ ಸಮನ್ವಯಕ್ಕಾಗಿ ಕೊನೆಯ ವೈಶ್ವಾನರಾಧಿಕರಣ ಹೊರಟಿದೆ.

ಅದ್ವೈತಿಗಳ ಅಧಿಕರಣಶರೀರ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - 'ಮನೋಮಯಃ ಪ್ರಾಣಶರೀರಃ ಭಾರೂಪಃ ಸತ್ಯಸಂಕಲ್ಪಃ' ಎಂಬುದು ವಿಷಯವಾಕ್ಯ. ಮನಸ್ಸು ಮೊದಲಾದವುಗಳ ಸಂಬಂಧವಿರುವ ಜೀವನೇ ಮನೋಮಯನೆಂದು ಉಪಾಸಿಸಬೇಕೆಂದು ಪೂರ್ವಪಕ್ಷ. ಸತ್ಯಕಾಮತ್ವಾದಿಲಿಂಗಗಳಿರುವುದರಿಂದ ಬ್ರಹ್ಮನೇ ಉಪಾಸ್ಯನೆಂದು ಸಿದ್ಧಾಂತ. ಮನೋಮಯತ್ವ ಮೊದಲಾದ ಜೀವನ ಧರ್ಮಗಳೆಲ್ಲವನ್ನು ಜೀವಾಭಿನ್ನನಾದ್ದರಿಂದ ಬ್ರಹ್ಮನಲ್ಲಿಯೇ ಹೊಂದಿಸಬೇಕು.

ಜೀವನ ಧರ್ಮವನ್ನು ಬ್ರಹ್ಮನಲ್ಲಿ ಕೂಡಿಸುವುದಾದರೆ ಬ್ರಹ್ಮನಲ್ಲಿರುವ ಸತ್ಯಸಂಕಲ್ಪತ್ವವೇ ಮೊದಲಾದ ಬ್ರಹ್ಮನ ಧರ್ಮಗಳನ್ನು ಜೀವನಲ್ಲೇಕೆ ಕೂಡಿಸಬಾರದು? ಎಂಬ ಪ್ರಶ್ನೆಗೆ ಅದ್ವೈತಿಗಳ ಉತ್ತರ ಹೀಗಿದೆ - ಜೀವನು ಬ್ರಹ್ಮನಲ್ಲಿ ಅಧ್ಯಸ್ತನಾಗಿದ್ದಾನೆ. ಅಧ್ಯಸ್ತಪದಾರ್ಥದಲ್ಲಿರುವ ಧರ್ಮವು ಅಧಿಷ್ಠಾನದಲ್ಲಿ ಬರಬಹುದು. ಆದರೆ ಅಧಿಷ್ಠಾನದಲ್ಲಿರುವ ಧರ್ಮವು ಅಧ್ಯಸ್ತದಲ್ಲಿ ಬರಲು ಸಾಧ್ಯವಿಲ್ಲ. ಹಗ್ಗವನ್ನು ನೋಡಿ ಹಾವು ಎಂದು ಭ್ರಮಿಸಿದಾಗ ಭಯವನ್ನು ಹುಟ್ಟಿಸುವಿಕೆ ಎಂಬುದು ಸರ್ಪದಲ್ಲಿರುವ ಧರ್ಮವಾಗಿದೆ. ಇದು ರಜ್ಜುವಿನಲ್ಲಿ ಬರುವುದು ಕಂಡಿದೆ. ಆದರೆ ರಜ್ಜುವಿನಲ್ಲಿ ಅಭಿಮುಖವಾಗಿ ಹೋಗುವಿಕೆ ಎಂಬ ಧರ್ಮವಿದೆ. ಈ ಧರ್ಮವು ಸರ್ಪದಲ್ಲಿರುವುದು ಕಂಡಿಲ್ಲ. ಅಂದರೆ ಹಗ್ಗವನ್ನು ಸ್ವೀಕರಿಸಲು ಹೋಗುತ್ತೇವೆ. ಆದರೆ ಸರ್ಪವನ್ನು ಸ್ವೀಕರಿಸಲು ಯಾರೂ ಹೋಗುವುದಿಲ್ಲ.

ಅದ್ವೈತಮತ ವಿಮರ್ಶೆ

ಅದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ. ತಮ್ಮ ಸಿದ್ಧಾಂತದಲ್ಲಿ ಜೀವಬ್ರಹ್ಮರ ಅಭೇದವನ್ನು

ಒಪ್ಪಿ ಜೀವನಲ್ಲಿರುವ ಮನೋಮಯತ್ವಾದಿ ಧರ್ಮಗಳನ್ನು ಬ್ರಹ್ಮನಲ್ಲಿ ಸಮರ್ಥಿಸಿದ್ದು ಸರಿಯಲ್ಲ. ಏಕೆಂದರೆ ಸತ್ಯಸಂಕಲ್ಪತ್ವವೇ ಮೊದಲಾದ ಧರ್ಮಗಳಿಂದ ಅಧಿಷ್ಠಾನಭೂತನಾದ ಬ್ರಹ್ಮನು ತೋರುತ್ತಿರುವಾಗ ಜೀವನಲ್ಲಿರುವ ಮನೋಮಯತ್ವಾದಿಧರ್ಮಗಳನ್ನು ಆರೋಪಿಸಲು ಸಾಧ್ಯವೇ ಇಲ್ಲ. ಶುಕ್ತಿಯಲ್ಲಿ ಶುಕ್ತಿತ್ವವೆಂಬ ಧರ್ಮವು ಸ್ಪಷ್ಟವಾಗಿ ತೋರುವ ಕಾಲದಲ್ಲಿ ರಜತತ್ವವನ್ನು ಆರೋಪಿಸಲು ಹೇಗೆ ಸಾಧ್ಯ ? ಕಾಮಾಲೆಯಿರುವಂತಹ ವ್ಯಕ್ತಿಗೆ ಶಂಖವು ಬಿಳಿಯೆಂದು ತಿಳಿದಿದ್ದರೂ ಹಳದಿಬಣ್ಣವನ್ನು ಆರೋಪಿಸುವುದು ಕಂಡಿದೆಯಲ್ಲವೇ? ಆದರಂತೆ ಬ್ರಹ್ಮನಲ್ಲಿ ಸತ್ಯಕಾಮತ್ವಾದಿ ಧರ್ಮಗಳು ತೋರುತ್ತಿದ್ದರೂ ಮನೋಮಯತ್ವಾದಿಗಳನ್ನು ಆರೋಪಿಸುತ್ತೇವೆಂದು ಅದ್ವೈತಿಗಳು ತಮ್ಮ ವಾದವನ್ನು ಸಮರ್ಥಿಸಿಕೊಳ್ಳಬಹುದು. ಆದರೆ ಇದು ವಿಷಮದೃಷ್ಟಾಂತವಾಗಿದೆ. ಶಂಖದಲ್ಲಿ ಮಾಡುತ್ತಿರುವ ಹಳದಿಬಣ್ಣದ ಆರೋಪವು ಅಪರೋಕ್ಷವಾಗಿದೆ ಮತ್ತು ಸೋಪಾಧಿಕವಾಗಿದೆ. ಆದರೆ ಬ್ರಹ್ಮನಲ್ಲಿ ಅದ್ವೈತಿಗಳು ಮಾಡುತ್ತಿರುವ ಮನೋಮಯತ್ವಾದಿ ಧರ್ಮಗಳ ಆರೋಪವು ಅಪರೋಕ್ಷವಾಗಿದೆ. ಮತ್ತು ನಿರುಪಾಧಿಕವಾಗಿದೆ. ಆದ್ದರಿಂದ ಸೋಪಾಧಿಕ ಬ್ರಹ್ಮಸ್ಥಳದಲ್ಲಿ ಮಾತ್ರ ಅಧಿಷ್ಠಾನದಲ್ಲಿರುವ ಧರ್ಮವು ತೋರಿದರೂ ಆರೋಪವನ್ನು ಮಾಡಬಹುದು. ಆದರೆ ನಿರುಪಾಧಿಕಬ್ರಹ್ಮಸ್ಥಳದಲ್ಲಿ ಹೀಗೆ ಆರೋಪಿಸುವುದು ಎಲ್ಲಿಯೂ ಕಂಡುಬಂದಿಲ್ಲ.

ಅಧಿಷ್ಠಾನ ತತ್ತ್ವಜ್ಞಾನವಿದ್ದಾಗ ಆರೋಪವು ಅಸಂಭಾವಿತ

'ಪ್ರಾಣಶರೀರಃ ಭಾವರೂಪಃ' ಎಂಬ ವಾಕ್ಯವು ಸಗುಣಬ್ರಹ್ಮ ವಿಷಯಕವೆಂದು ನೀವು ಹೇಳಿದಂತಾಯಿತು. ಜೀವ ಹಾಗೂ ಸಗುಣಬ್ರಹ್ಮರಿಬ್ಬರು ನಿರ್ಗುಣಬ್ರಹ್ಮನಲ್ಲಿ ಆರೋಪಿತರಾದ್ದರಿಂದ ಜೀವ ಹಾಗೂ ಸಗುಣಬ್ರಹ್ಮರಿಗೆ ಪರಸ್ಪರವಾಗಿ ಅಧಿಷ್ಠಾನ ಅಧ್ಯಸ್ತಭಾವವು ಕೂಡುವುದಿಲ್ಲ.

ಹುತ್ತವನ್ನು ನೋಡಿ ಕಂಬವೆಂದು ಮೊದಲು ಭ್ರಾಂತಿ ಬರುತ್ತದೆ. 'ಇದು ಕಂಬವಲ್ಲ ಪುರುಷನು' ಎಂಬ ಭ್ರಾಂತಿ ಬರುತ್ತದೆ. ಈ ಸ್ಥಳದಲ್ಲಿ ಸ್ಥಾಣುತ್ವ ಹಾಗೂ ಪುರುಷತ್ವ ಆರೋಪಗಳಿಗೆ ಅಧಿಷ್ಠಾನವು ಒಂದೇ ಆಗಿವೆ. ಆದರಂತೆ ನಿರ್ಗುಣಬ್ರಹ್ಮನನ್ನು ಮೊದಲು ಸತ್ಯಕಾಮನೆಂದು ತಿಳಿದು ಅನಂತರ ಮನೋಮಯನೆಂದು ತಿಳಿಯುತ್ತಾನೆ. ಈ ಸ್ಥಳದಲ್ಲಿ ಸತ್ಯಕಾಮತ್ವ ಹಾಗೂ ಮನೋಮಯತ್ವ ಎಂಬ ಆರೋಪಗಳಿಗೆ ಒಬ್ಬನೇ ನಿರ್ಗುಣ ಬ್ರಹ್ಮನು ಅಧಿಷ್ಠಾನನಾಗಿದ್ದಾನಲ್ಲವೇ? ಇದೂ ಸಹ ತಪ್ಪು. ಹಾಗಾದರೆ ಹಗ್ಗವನ್ನು ನೋಡಿ ಭಯಾನಕವೆಂಬ ವ್ಯವಹಾರವು ಹೇಗೆ ಅಪ್ರಮಾಣವಾಗುತ್ತದೋ ಅದರಂತೆ ಬ್ರಹ್ಮನಲ್ಲಿ ಮಾಡುವ ಮನೋಮಯತ್ವಾದಿ ವ್ಯವಹಾರಗಳೂ ಸಹ ಅಪ್ರಮಾಣವಾಗಬೇಕಾದೀತು. ಮತ್ತು ಬ್ರಹ್ಮನಲ್ಲಿ ಅಸತ್ಯವಾದ ಮನೋಮಯತ್ವಾದಿಗಳನ್ನು ಉಪಾಸನೆ ಮಾಡುವುದಕ್ಕಾಗಿ ಈ ವಾಕ್ಯವು ಹೊರಟಿದೆ ಎಂದು ಹೇಳಿದರೆ ಜೀವನಲ್ಲಿ ಸತ್ಯಸಂಕಲ್ಪತ್ವಾದಿಗಳನ್ನು ಉಪಾಸನೆ ಮಾಡುವುದಕ್ಕಾಗಿ ಈ ವಾಕ್ಯ ಹೊರಟಿದೆ ಎಂದು ಏಕೆ ಹೇಳಬಾರದು? ಮನೋಮಯತ್ವ ಹಾಗೂ ಸತ್ಯಸಂಕಲ್ಪತ್ವಗಳು ಒಟ್ಟಿಗೆ ಕೇಳಿಸುತ್ತಿರುವಾಗ ಒಂದನ್ನು ಉಪಾಸನೆ ಮಾಡಬೇಕು. ಮತ್ತೊಂದನ್ನು ಉಪಾಸನೆ ಮಾಡಬಾರದೆನ್ನಲು ವಿನಿಗಮಕ ಪ್ರಮಾಣವಿಲ್ಲ.

ಅದ್ವೈತಿಗಳ ಸೂತ್ರವ್ಯಾಖ್ಯಾನ ನಿರಾಕರಣೆ

ಅದ್ವೈತಿಗಳ ಸೂತ್ರವ್ಯಾಖ್ಯಾನವು ಅಯುಕ್ತವಾಗಿದೆ. ಪ್ರಥಮಸೂತ್ರದಲ್ಲಿ ಪ್ರತಿಜ್ಞಾಭಾಗವನ್ನು ಹೇಳದೆ ಹೇತುಭಾಗವನ್ನಷ್ಟೇ ಹೇಳಿದಂತಾಗುತ್ತದೆ. ಆವಾಗ ಪ್ರತಿಜ್ಞಾಭಾಗವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಮತ್ತು ಹೇತುವಿನಲ್ಲಿರುವ ಸರ್ವತ್ರ ಎಂಬ ಪದವನ್ನು ವ್ಯರ್ಥವೆಂದು ಹೇಳಬೇಕಾಗುತ್ತದೆ.

ಪರಿಪೂರ್ಣಚಂದ್ರಿಕಾ

ಎರಡನೆಯ ಸೂತ್ರದಲ್ಲಿ ಮಿಥ್ಯಾಭೂತವಾದ ಸತ್ಯಕಾಮತ್ವಾದಿಗುಣಗಳನ್ನು ಬ್ರಹ್ಮನಲ್ಲಿ ಸಮರ್ಥಿಸುತ್ತೀರಿ. ಆದರೆ ಈ ಗುಣಗಳ ಪ್ರತಿಪಾದನೆಯಲ್ಲಿ ಶ್ರುತಿಗೆ ತಾತ್ಪರ್ಯವೇ ಇಲ್ಲದ ಕಾರಣ ಸೂತ್ರದಲ್ಲಿರುವ ವಿವಕ್ಷಿತ ಹಾಗೂ ಉಪಪತ್ತಿಪದಗಳು ಅಸ್ವರಸವಾಗುತ್ತವೆ.

ಮೂರನೆಯ ಸೂತ್ರದಲ್ಲಿ ಸತ್ಯಕಾಮತ್ವಾದಿಗುಣಗಳು ಜೀವನಲ್ಲಿ ಅನುಪಪನ್ನವೆನ್ನುತ್ತೀರಿ ಆದರೆ ಎರಡನೆಯ ಸೂತ್ರದಲ್ಲಿ ಬ್ರಹ್ಮನಲ್ಲಿ ಸತ್ಯಕಾಮತ್ವಾದಿಗುಣಗಳು ಉಪಪನ್ನವಾಗುತ್ತವೆಂದು ಹೇಳಿದ್ದರಿಂದಲೇ ಜೀವನಲ್ಲಿ ಅನುಪಪನ್ನವಾಗುತ್ತವೆಂದು ತಿಳಿಯುವುದಿಲ್ಲವೇ?

ನಾಲ್ಕನೆಯ ಸೂತ್ರದಲ್ಲಿ ವಿರುದ್ಧವಿಭಕ್ತಿಗಳಿಂದ ಕರ್ಮಕರ್ತೃಭಾವವು ತಿಳಿಯುತ್ತದೆನ್ನುತ್ತೀರಿ. ಇದೂ ಸಹ ಐದನೆಯ ಸೂತ್ರಾರ್ಥದಿಂದ ಪುನರುಕ್ತವಾಗುತ್ತದೆ.

ಐದನೆಯ ಸೂತ್ರಾರ್ಥವೂ ಅಯುಕ್ತ

ಆದ್ವೈತಿಗಳ ಐದನೇ ಸೂತ್ರವ್ಯಾಖ್ಯಾನವೂ ಸಹ ಸರಿಯಿಲ್ಲ. ಏಕೆಂದರೆ ವಿರುದ್ಧ ವಿಭಕ್ತಿಗಳಿಂದ ಒಬ್ಬನೇ ಪ್ರತಿಪಾದ್ಯನಾಗುವುದಿಲ್ಲವೆಂದು ಅವರ ವ್ಯಾಖ್ಯಾನ. ಆದರೆ ಬೇರೆ ಬೇರೆ ಶ್ರುತಿಯಲ್ಲಿರುವ ವಿರುದ್ಧ ವಿಭಕ್ತಿಗಳನ್ನು ಆಶ್ರಯಿಸಿ ಕಷ್ಟ ಕೊಡುವುದಕ್ಕಿಂತ ಅನಾಯಾಸವಾಗಿ ಸಾವಧಾರಣವಾದ ಬ್ರಹ್ಮಶಬ್ದದಲ್ಲಿಯೇ ಶಬ್ದವಿಶೇಷವನ್ನು ಹೇಳುವುದು ಶ್ರೇಯಸ್ಕರವಾಗಿದೆ. ಇದರಂತೆ ಆದ್ವೈತಿಗಳ ಆರನೆಯ ಸೂತ್ರವು ಐದನೆಯ ಸೂತ್ರದಿಂದ ಗತಾರ್ಥವಾಗಿದೆ. ಏಳನೆಯ ಸೂತ್ರದಲ್ಲಿ ವೈಪರೀತ್ಯ ದೋಷವಿದೆ. ಎಂಟನೆಯ ಸೂತ್ರದಲ್ಲಿ ಅನಿಷ್ಟಾಪಾದನವನ್ನೇ ಪೂರ್ವಪಕ್ಷಿಗೆ ಮಾಡಲಾಗದೆಂಬ ದೋಷವಿದೆ. ಹೀಗೆ ಪ್ರತಿಯೊಂದು ಸೂತ್ರಗಳಲ್ಲಿಯೂ ಅನೇಕ ದೋಷಗಳಿರುವುದರಿಂದ ಆದ್ವೈತಿಗಳು ಸೂತ್ರವನ್ನು ವ್ಯಾಖ್ಯಾನಿಸಲು ಅನರ್ಹರಾಗಿದ್ದಾರೆ.

ಹಿಂದಿನ ಅಧಿಕರಣದಂತೆ ಇಲ್ಲಿಯೂ ಸಹ ಜೀವಬ್ರಹ್ಮರ ಭೇದವನ್ನೇ ಆದ್ವೈತಿಗಳು ಒಪ್ಪಿದ್ದಾರೆ. ಬ್ರಹ್ಮನಲ್ಲಿರುವ ಗುಣಗಳು ಜೀವನಲ್ಲಿ ಅನುಪಪನ್ನವಾಗಿವೆ ಎಂದು ಹೇಳುವಾಗ ಜೀವಬ್ರಹ್ಮರ ಭೇದವನ್ನು ಒಪ್ಪಿದಂತಾಯಿತು. ಮತ್ತು ಬ್ರಹ್ಮಮೀಮಾಂಸಾ ಶಾಸ್ತ್ರವು ನಿರ್ಗುಣಬ್ರಹ್ಮ ಪ್ರತಿಪಾದಕವೆನ್ನುತ್ತಾರೆ. ಆದರೆ 'ವಿವಕ್ಷಿತಗುಣೋಪಪತ್ತೇಃ' ಎಂಬ ಸೂತ್ರದಲ್ಲಿ ನಿರ್ಗುಣತ್ವಕ್ಕೆ ಪ್ರತಿಕೂಲವಾದ ಗುಣಗಳನ್ನು ಸಮರ್ಥಿಸಿದ್ದಾರೆ.

ರಾಮಾನುಜರ ಅಧಿಕರಣ ಶರೀರ

ಛಾಂದೋಗ್ಯದಲ್ಲಿರುವ 'ಮನೋಮಯಃ ಪ್ರಾಣಶರೀರಃ' ಎಂಬ ವಾಕ್ಯವೇ ಈ ಅಧಿಕರಣದ ವಿಷಯವೆನ್ನುತ್ತಾರೆ ರಾಮಾನುಜರು. 'ಸರ್ವಂ ಖಲ್ವಿದಂ' ಎಂಬ ವಾಕ್ಯವು ಆಪಾತತಃ ಬ್ರಹ್ಮಪರವೆಂದು ತಿಳಿದರೂ ಸಹ ಮನೋಮಯ ಶಬ್ದವಿರುವುದರಿಂದ ಜೀವನೇ ಪ್ರತಿಪಾದ್ಯನು. ಆದ್ದರಿಂದ 'ಸರ್ವಂ ಖಲ್ವಿದಂ' ಎಂಬ ವಾಕ್ಯವನ್ನೂ ಸಹ ಜೀವಪರವೆಂದೇ ಹೇಳಬೇಕೆಂದು ಪೂರ್ವಪಕ್ಷ.

ಸಕಲ ವೇದಾಂತ ವಾಕ್ಯಗಳಲ್ಲಿ ಎಲ್ಲೆಲ್ಲಿ ಮನೋಮಯ ಶಬ್ದಗಳಿವೆಯೋ? ಅವೆಲ್ಲವೂ ಬ್ರಹ್ಮನನ್ನೇ ಪ್ರತಿಪಾದಿಸುತ್ತವೆ. 'ಮನೋಮಯಃ ಪ್ರಾಣಶರೀರನೇತಾ' ಎಂಬುದಾಗಿ ಮಾಂಡೂಕ್ಯದಲ್ಲಿ, ತೈತ್ತಿರೀಯಾದಲ್ಲೂ 'ತಸ್ಮಿನ್ ಅಯಂ ಪುರುಷಃ ಮನೋಮಯಃ' ಎಂಬುದಾಗಿ ಮನೋಮಯಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆ. ಹೀಗೆ ಬ್ರಹ್ಮನನ್ನು ಬೇರೆ ಉಪನಿಷತ್ತುಗಳು ಮನೋಮಯನೆಂದು ಕರೆದಿರುವಾಗ ಛಾಂದೋಗ್ಯದಲ್ಲಿ ಹೇಳಿರುವ ಮನೋಮಯನೂ ಸಹ ಬ್ರಹ್ಮನೇ ಆಗುತ್ತಾನೆ. ಜೀವನಿಗೆ ಸರ್ವಾತ್ಮಕತ್ವನ್ನಾಗಲೀ ಸಕಲಜಗತ್ಕಾರಣತ್ವವನ್ನಾಗಲೀ ಹೇಳಲು ಸಾಧ್ಯವಿಲ್ಲದ ಕಾರಣ 'ಸರ್ವಂ ಖಲ್ವಿದಂ' ಎಂಬ ವಾಕ್ಯದಿಂದ ಪ್ರತಿಪಾದ್ಯನಾಗಲಾರನೆಂದು ಸಿದ್ಧಾಂತ.

ರಾಮಾನುಜರ ಸೂತ್ರ ವ್ಯಾಖ್ಯಾನ ಹೀಗಿದೆ - ಸರ್ವತ್ರ = 'ಸರ್ವಂ ಖಲ್ವಿದಂ' ಎಂಬ ಶ್ರುತಿಯಿಂದ ಪ್ರತಿಪಾದ್ಯನಾದವನು ಪರಬ್ರಹ್ಮನೇ ಆಗಿದ್ದಾನೆ. ಪ್ರಸಿದ್ಧೋಪದೇಶಾತ್ = ಶ್ರುತ್ಯಂತರದಲ್ಲಿ ಪ್ರಸಿದ್ಧವಾದ ಜಗತ್ಕಾರಣತ್ವವನ್ನು ಹೇಳಿರುವುದರಿಂದ

ರಾಮಾನುಜರ ಮತನಿರಾಕರಣೆ

ರಾಮಾನುಜರ ಉಳಿದ ಸೂತ್ರಗಳ ವ್ಯಾಖ್ಯಾನ ಹೀಗಿದೆ -

ವಿವಕ್ಷಿತಗುಣೋಪಪತ್ತೇಶ್ಚ - ಮನೋಮಯನೆನಿಸಿರುವ ಬ್ರಹ್ಮನಲ್ಲಿ ವಿವಕ್ಷಿತವಾದ ಸತ್ಯಕಾಮತ್ವಾದಿ-ಗುಣಗಳು ಉಪಪನ್ನವಾಗುತ್ತವೆ. ಜೀವನಲ್ಲಿ ಆ ಗುಣಗಳು ಇಲ್ಲದ ಕಾರಣ ಉಪಪನ್ನವಾಗುವುದಿಲ್ಲ.

ಅನುಪತ್ತೇಸ್ತು ನ ಶಾರೀರಃ - ಆ ಸತ್ಯಕಾಮತ್ವಾದಿಗುಣಗಳು ಜೀವನಲ್ಲಿಲ್ಲದ ಕಾರಣ ಮನೋಮಯನಾಗಿ ವಿವಕ್ಷಿತನಾಗುವುದಿಲ್ಲ.

ಕರ್ಮಕರ್ತೃವ್ಯಪದೇಶಾಚ್ಚ - 'ಏತಂ ಇತಃ ಪ್ರೇತ್ಯ' ಎಂಬಲ್ಲಿ ಮನೋಮಯನನ್ನು ಪ್ರಾಪ್ತನೆಂದು ಜೀವನನ್ನು ಪ್ರಾಪ್ಯವೆಂದು ಹೇಳಲಾಗಿದೆ. ಈ ಕಾರಣದಿಂದಲೂ ಜೀವನು ಮನೋಮಯನಲ್ಲ.

ಶಬ್ದವಿಶೇಷಾತ್ - 'ಏಷ ಮೇ ಆತ್ಮ' ಎಂಬ ಶ್ರುತಿಯಲ್ಲಿ ಷಷ್ಠಿ ವಿಭಕ್ತಿಯಲ್ಲಿ ಮೇ ಎಂಬ ಪದದಿಂದ ಆತ್ಮಾ ಎಂಬ ಪ್ರಥಮಾವಿಭಕ್ತಿಪದದಿಂದ ಮನೋಮಯನನ್ನು ನಿರ್ದೇಶಿಸಲಾಗಿದೆ. ಈ ಕಾರಣದಿಂದಲೂ ಜೀವನು ಮನೋಮಯನಲ್ಲ.

ಸ್ಮೃತೇಶ್ಚ - 'ಸರ್ವತ್ರ ಚ' ಎಂಬ ಗೀತೆಯಲ್ಲಿ ಜೀವನ ಹೃದಯದಲ್ಲಿರುವವನು ಬ್ರಹ್ಮನೇ ಎಂದು ಹೇಳಲಾಗಿದೆ. ಪ್ರಕೃತ ಉಪನಿಷತ್ತಿನಲ್ಲಿಯೂ ಸರ್ವಗತನೆಂದು ಹೇಳಲ್ಪಟ್ಟಿರುವವನು ಬ್ರಹ್ಮನೇ ಆಗಬೇಕು.

'ಆರ್ಭಕೌಕಸ್ತ್ವಾತ್ತದ್ವ್ಯಪದೇಶಾಚ್ಚ ನೇತಿ ಚೇನ್ನ ನಿಚಾಯ್ಯತ್ವಾದೇವಂ ವ್ಯೋಮವಚ್ಚ' ಅಲ್ಪದೇಶದಲ್ಲಿ ಇರುವಂತಹ ಬ್ರಹ್ಮನು ಸರ್ವಗತನಾಗಲಾರನೆಂದು ಆಕ್ಷೇಪಿಸಬಾರದು. ಕೇವಲ ಉಪಾಸನೆಗಾಗಿ ಅಲ್ಪದೇಶದ ಇರುವಿಕೆಯು ಹೇಳಲಾಗಿದೆ. ಎಲ್ಲೆಡೆ ವ್ಯಾಪಿಸಿರುವ ಆಕಾಶವು ಅಲ್ಪದೇಶದಲ್ಲಿಯೂ ಇರುವಂತೆ.

ಸಂಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್ - ಒಂದೇ ದೇಹದಲ್ಲಿ ಜೀವನೊಡನೆ ನೆಲೆಸಿರುವ ಬ್ರಹ್ಮನಿಗೆ ಸುಖದುಃಖಗಳು ಬರಬೇಕಲ್ಲವೇ? ಎಂದು ಪ್ರಶ್ನಿಸಿದರೆ ಪಾಪದ ಸಂಪರ್ಕವಿಲ್ಲದ ಕಾರಣ ಬ್ರಹ್ಮನಿಗೆ ಸುಖದುಃಖಗಳ ಅನುಭವವು ಬರುವುದಿಲ್ಲವೆಂದು ಉತ್ತರಿಸಲು ಕೊನೆಯ ಸೂತ್ರ ಹೊರಟಿದೆ.

ರಾಮಾನುಜರ ಅಧಿಕರಣಶರೀರವಾಗಲೀ, ಸೂತ್ರಾರ್ಥವಾಗಲಿ ಸಮಂಜಸವಲ್ಲ. ಸೂತ್ರದಲ್ಲಿರುವ 'ಸರ್ವತ್ರ' ಎಂಬ ಪದಕ್ಕೆ ಎಲ್ಲೆಡೆ ಇರುವ ಎಂಬರ್ಥವನ್ನು ಹೇಳಬೇಕು. ಆದರೆ ಅವರು ''ಎಲ್ಲವೂ'' ಎಂಬರ್ಥವನ್ನು ಹೇಳುತ್ತಾರೆ. ಈ ಅರ್ಥದಲ್ಲಿ 'ಸರ್ವಂ' ಎಂಬ ಪದವಿರಬೇಕೇ ಹೊರತು 'ಸರ್ವತ್ರ' ಎಂಬ ಪದವು ತಪ್ಪಾಗುತ್ತದೆ. ಮತ್ತು 'ಪ್ರಸಿದ್ಧತ್ವೇನ ಉಪದೇಶಾತ್' ಎಂದು ಅವರ ಪ್ರಕಾರ ಹೇಳಬೇಕಾಗುತ್ತದೆ. ಇದೂ ಸಹ ಸ್ವಾರಸ್ಯವಲ್ಲ. ಮತ್ತು ಬೇರೆ ವಾಕ್ಯಗಳಲ್ಲಿ ಜಗತ್ಕಾರಣತ್ವವು

ಪ್ರಸಿದ್ಧವಾಗಿದೆಯೆಂದು ಪೂರ್ವಪಕ್ಷಿಯು ಒಪ್ಪುವುದೇ ಇಲ್ಲ. ಇವೇ ಮೊದಲಾದ ಕಾರಣಗಳಿಂದ ರಾಮಾನುಜರ ಮತವು ಅಸಾಧುವಾಗಿದೆ. ಆದ್ವೈತ ಮತ ನಿರಾಕರಣೆಯಿಂದಲೇ ಆವರ ಸೂತ್ರಾರ್ಥಗಳನ್ನೂ ಸಹ ನಿರಾಕರಿಸಿದಂತಾಗುತ್ತದೆ.

ರಾಮಾನುಜರ ಸೂತ್ರಾರ್ಥ ನಿರಾಕರಣೆ

ರಾಮಾನುಜರ ಸೂತ್ರಾರ್ಥವೂ ಸಹ ತಪ್ಪದೆ. ಸರ್ವಾತ್ಮಕತ್ವವನ್ನು ಸಾಧ್ಯವೆನ್ನುತ್ತಾರೆ. ಆದರೆ ಸರ್ವಾತ್ಮಕತ್ವವನ್ನು ಪ್ರತಿಪಾದನೆ ಮಾಡುವುದಕ್ಕಾಗಿ 'ಸರ್ವಂ' ಎಂದೇ ಸೂತ್ರದಲ್ಲಿ ನಿರ್ದೇಶಿಸಬೇಕು. ಹಾಗೇ ನಿರ್ದೇಶಿಸುವುದರಿಂದ ಶ್ರುತಿಯ ಆನುಗುಣ್ಯವೂ ಸಹ ಬರುತ್ತದೆ. ಏಕೆಂದರೆ 'ಸರ್ವತ್ರ' ಎಂಬ ಪದದಿಂದ ಸರ್ವಾತ್ಮಕತ್ವ ತಿಳಿಯುವುದಿಲ್ಲ. ಕೇವಲ ಸರ್ವಗತತ್ವ ತಿಳಿಯುತ್ತದೆ. ಮತ್ತು ಸೂತ್ರದಲ್ಲಿರುವ ಪ್ರಸಿದ್ಧಶಬ್ದಕ್ಕೆ ಕಾರಣವಿಲ್ಲದೆ ಭಾವಪ್ರಧಾನವಾಚಿತ್ವವನ್ನು ಒಪ್ಪಬೇಕಾಗುತ್ತದೆ.

ಮತ್ತು ರಾಮಾನುಜರು 'ಅರ್ಭಕೌಕಸ್ತ್ವಾತ್' ಎಂಬ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸಿದ್ದಾರೆ - ''ಏಷ ಮೇ ಆತ್ಮಾಂತರ್ಹೃದಯೇಽಣೀಯಾನ್ ವ್ರೀಹೇರ್ವಾ ಯವಾದ್ವಾ ಸರ್ಷಪಾದ್ವಾ'' ಎಂಬಲ್ಲಿ ಹೇಳಲ್ಪಟ್ಟ ಅಣೀಯಸ್ತ್ವವು ಔಪಾಧಿಕವಾಗಿದೆ. ಏಕೆಂದರೆ ಹೃದಯವೆಂಬ ಉಪಾಧಿಯನ್ನು ಹೇಳಿರುವುದರಿಂದ ಆದರೆ 'ಜ್ಯಾಯಾನ್ ಪೃಥಿವ್ಯಾಃ' ಎಂಬಲ್ಲಿ ಹೇಳಲ್ಪಟ್ಟ ಮಹತ್ವವು ಸ್ವಾಭಾವಿಕವಾಗಿದೆ. ಏಕೆಂದರೆ ಇಲ್ಲಿ ಯಾವುದೇ ವಿಧವಾದ ಉಪಾಧಿಯನ್ನು ಹೇಳಿರುವುದಿಲ್ಲವೆಂದು

ಇದು ತಪ್ಪು. 'ಹೃದ್ಯಪೇಕ್ಷಯಾ' ಎಂಬಲ್ಲಿ ಹೃದಯವು ಅಂಗುಷ್ಠಪ್ರಮಾಣವುಳ್ಳದ್ದಾಗಿದೆಯೆಂದು ನೀವೇ ಒಪ್ಪಿರುತ್ತೀರಿ? ಹೀಗಿರುವಾಗ ಪರಮಾತ್ಮನು ಸರ್ಷಪಕ್ಕಿಂತ ಅಣುವಾಗಿದ್ದಾನೆನ್ನಲು ಇಂತಹ ಹೃದಯವು ಉಪಾಧಿಯಾಗುವುದಿಲ್ಲ.

ಅತ್ಯತ್ವಾಧಿಕರಣ

ಪ್ರತ್ಯುದಾಹರಣ ಸಂಗತಿಯ ಪ್ರದರ್ಶನ

ಅತ್ಯತ್ವಾಧಿಕರಣವು ಪ್ರಾರಂಭವಾಗುತ್ತಿದೆ. 'ತತ್ತದತ್ತುಮಧ್ಯಿಯತ' ಎಂಬುದು ಈ ಅಧಿಕರಣದ ವಿಷಯವಾಕ್ಯ. ಈ ವಿಷಯವಾಕ್ಯದಲ್ಲಿ ಸಕಲ ಪದಾರ್ಥಗಳ ಅತ್ಯತ್ವವನ್ನು ಅದಿತಿಗೆ ಹೇಳಲಾಗಿದೆ. ಇಲ್ಲಿರುವ ಅದಿತಿ ಶಬ್ದವು ದೇವಮಾತೆಯಾದ ಅದಿತಿದೇವಿಯನ್ನು ಹೇಳುತ್ತಿದೆಯೋ ಅಥವಾ ವಿಷ್ಣುವನ್ನು ಹೇಳುತ್ತಿದೆಯೋ? ಎಂದು ಸಹಜವಾಗಿ ಸಂಶಯ ಬರುತ್ತದೆ.

ಒಂದು ವೇಳೆ ಕೆಲವು ಪದಾರ್ಥಗಳನ್ನಷ್ಟೇ ಸರ್ವಶಬ್ದವು ಹೇಳುವುದಾದರೆ ಕೆಲವು ಪದಾರ್ಥಗಳನ್ನು ಅದಿತಿದೇವಿಯು ತಿನ್ನುವುದರಿಂದ ಅದಿತಿಯಲ್ಲಿಯೇ ಅತ್ಯತ್ವದರ್ಮವು ಬರುತ್ತದೆ. ಅದಿತಿ ಶಬ್ದವು ಅದಿತಿದೇವಿಯಲ್ಲಿ ರೂಢವಾಗಿರುವುದೂ ಸಹ ಮತ್ತೊಂದು ಕಾರಣ.

ಒಂದು ವೇಳೆ ಸರ್ವಶಬ್ದಕ್ಕೆ ಸಂಕೋಚ ಮಾಡದಿದ್ದರೆ ಸಕಲ ಪದಾರ್ಥಗಳನ್ನು ತಿನ್ನುವ ವಿಷ್ಣುವನ್ನೇ ಅದಿತಿಯೆನ್ನಬೇಕಾಗುತ್ತದೆ. ಇದರಿಂದ ಸಕಲ ಸಂಹರ್ತೃತ್ವ ಎಂಬ ಗುಣವು ವಿಷ್ಣುವಿನಲ್ಲಿ ಸಿದ್ಧವಾಗುತ್ತದೆ.

ಅದಿತಿಶ್ರುತಿ ಹಾಗೂ ಅದಿತಿತ್ವಲಿಂಗಗಳಿಂದ ಪೂರ್ವಪಕ್ಷ

'ಆದಿತೇಯ' ಶಬ್ದದಿಂದ ವಾಚ್ಯಳಾದವಳು ಅದಿತಿದೇವಿಯೇ ಆಗಿದ್ದಾಳೆಂದು ಪೂರ್ವಪಕ್ಷ. ಕಾರಣವೇನೆಂದರೆ ಅದಿತಿಶ್ರುತಿ ಹಾಗೂ ಅದಿತಿತ್ವವೆಂಬ ಲಿಂಗ. ಇವರೆಡೂ ಸಹ ನಿರವಕಾಶವೇ ಆಗಿವೆ. ಹಿಂದೆ ಅಂತರಧಿಕರಣದಲ್ಲಿ ಅದಿತಿಶಬ್ದದ ಪರ್ಯಾಯಶಬ್ದಗಳನ್ನು ಸಮನ್ವಯ ಮಾಡದ ಕಾರಣ ಅದಿತಿಶ್ರುತಿಯು ನಿರವಕಾಶವಾಗಲು ಒಂದು ಕಾರಣ. ಅದಿತಿಶ್ರುತಿಯ ಸಮನ್ವಯವನ್ನು ಅಂತರಧಿಕರಣದಲ್ಲಿ ಮಾಡದಿದ್ದರೂ ಅಸಾಧಾರಣವಾದ ವಿಷ್ಣುಲಿಂಗಗಳಿರುವಿಕೆಯೆಂಬ ಅಂತರಧಿಕರಣದ ನ್ಯಾಯಕ್ಕೆ ವಿಷಯವಾಗದಿರುವಿಕೆಯು ಅದಿತಿಶ್ರುತಿ ನಿರವಕಾಶಕ್ಕೆ ಮತ್ತೊಂದು ಕಾರಣ. ಹೀಗೆ ಶ್ರುತಿ ಹಾಗೂ ಲಿಂಗಗಳೆರಡು ನಿರವಕಾಶಗಳೆಂದು ಒಪ್ಪಿ ಪೂರ್ವಪಕ್ಷವನ್ನು ಪುಷ್ಟೀಕರಿಸಲಾಗಿದೆ. ಹಿಂದಿನ ಅಧಿಕರಣದಲ್ಲಿ ಲಿಂಗವನ್ನು ಮಾತ್ರ ನಿರವಕಾಶವೆಂದು ಒಪ್ಪಲಾಗಿತ್ತು. ಆದ್ದರಿಂದ ಹಿಂದಿನ ಅಧಿಕರಣದಿಂದ ಈ ಅಧಿಕರಣಕ್ಕಿರುವ ವೈಷಮ್ಯವನ್ನೂ ಸಹ ಗಮನಿಸಬೇಕು.

ಆದರೆ ಟೀಕೆಯಲ್ಲಿ ಅದಿತಿಶ್ರುತಿಯನ್ನು ಸಾವಕಾಶವೆಂದು ಒಪ್ಪಿ ಲಿಂಗವನ್ನು ನಿರವಕಾಶವೆಂದು ಹೇಳಿದ್ದಾರೆ. ನಿರವಕಾಶವಾದ ಒಂದೇ ಲಿಂಗದಿಂದ ಪೂರ್ವಪಕ್ಷವನ್ನು ದೃಢಗೊಳಿಸಬಹುದು. ಏಕೆಂದರೆ ಅದಿತಿತ್ವವು ಜಾತಿರೂಪವಾದ್ದರಿಂದ ವಿಷ್ಣುವಿನಲ್ಲಿ ಬರಲು ಸಾಧ್ಯವೇ ಇಲ್ಲ. ಮತ್ತು ಲೋಕರೂಢಿಯೂ ಸಹ ಅದಿತಿದೇವಿಯಲ್ಲಿಯೇ ಇರುತ್ತದೆ. ಆದ್ದರಿಂದ ಕೇವಲ ಲಿಂಗದಿಂದ ಪೂರ್ವಪಕ್ಷ ಮಾಡಿದ್ದು ತಪ್ಪಲ್ಲ.

ಜಾತಿರೂಪವಾದ ಅದಿತಿತ್ವವು ಬಲಿಷ್ಠಲಿಂಗ

ಶ್ರುತಿ ಹಾಗೂ ಲಿಂಗಗಳೆರಡೂ ನಿರವಕಾಶವೆಂದು ಗ್ರಂಥಕಾರರು ಸಮರ್ಥಿಸಿದರು. ಆದರೆ ಟೀಕೆಯಲ್ಲಿ ಲಿಂಗವನ್ನಷ್ಟೇ ನಿರವಕಾಶವೆಂದು ಹೇಳಿದ್ದಾರೆ. ಈ ಟೀಕೆಯ ಅಭಿಪ್ರಾಯವನ್ನು ಹಿಂದೆ ಒಂದು ಪ್ರಕಾರದಲ್ಲಿ ಸ್ಪಷ್ಟಪಡಿಸಿದರು. ಈಗ ಮತ್ತೊಂದು ಪ್ರಕಾರದಲ್ಲಿ ಟೀಕೆಯ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಅದಿತಿತ್ವ ಎಂಬ ಲಿಂಗಕ್ಕೆ ಪ್ರವೃತ್ತಿನಿಮಿತ್ತವೆಂಬರ್ಥವನ್ನು ಪರಿಗಣಿಸಿದರೆ ತೀರದಲ್ಲಿ ಗಂಗಾಶಬ್ದವು ಬಂದರೂ ಸಹ ಗಂಗಾಪದಪ್ರವೃತ್ತಿನಿಮಿತ್ತವು ಬರುವುದಿಲ್ಲವೆಂದು ಹೇಗೆ ನಿರ್ಣಯವಾಗಿದೆಯೋ ಆದರಂತೆ ಅದಿತಿಶ್ರುತಿಯು ಪರಮಾತ್ಮನಲ್ಲಿ ಬಂದರೂ ಅದಿತಿತ್ವವೆಂಬ ಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಬರುವುದಿಲ್ಲವೆಂದು ಹಿಂದೆ ಸಮರ್ಥಿಸಿದರು.

ಈಗ ಅದಿತಿತ್ವವೆಂಬ ಲಿಂಗವನ್ನು ಜಾತಿರೂಪವೆಂದು ಪರಿಗಣಿಸಿ ಭಗವಂತನಲ್ಲಿ ಬರಲು ಸಾಧ್ಯವಿಲ್ಲವೆಂದು ಸಮರ್ಥಿಸುತ್ತಿದ್ದಾರೆ. ಈ ಪಕ್ಷದಲ್ಲಿ ಅಂತರಧಿಕರಣ ನ್ಯಾಯಕ್ಕೆ ಅದಿತಿಶ್ರುತಿಯು ವಿಷಯವಾಗಿದೆಯೆಂದು ಒಪ್ಪಲಾಗಿದೆ. ಅದಿತಿಶ್ರುತಿಯು ಪರಮಾತ್ಮನಲ್ಲಿ ಬರುವ ಮಾತ್ರದಿಂದ ಅದಿತಿತ್ವಲಿಂಗವು ಬರಬೇಕಾಗಿಲ್ಲ. ಏಕೆಂದರೆ 'ಅನಶ್ನನ್ನನ್ಯಃ' ಎಂಬ ಶ್ರುತಿಯು ಭಗವಂತನು ಏನನ್ನೂ ತಿನ್ನಲಾರನೆಂದು ಸ್ಪಷ್ಟವಾಗಿ ಹೇಳುತ್ತಿದೆ.

ಮುಂದಿನ ಅಧಿಕರಣದಲ್ಲಿ ಕರ್ಮಫಲಗಳನ್ನು ಭಗವಂತನು ತಿನ್ನುತ್ತಾನೆಂದು ಸಮರ್ಥಿಸುತ್ತಾರೆ. ಆದರಿಂದಲೇ ಈ ಅಧಿಕರಣದಲ್ಲಿ ಹೇಳುತ್ತಿರುವ ಸಕಲಪದಾರ್ಥಗಳನ್ನು ತಿನ್ನುತ್ತಾನೆಂದು ನಿರ್ಣಯವಾಗುತ್ತದೆ. ಕೋಲನ್ನೇ ತಿನ್ನುವವನು ಅಪೂಪವನ್ನು ತಿನ್ನಲು ಅಸಮರ್ಥನಾಗುತ್ತಾನೆಯೇ ? ಎಂದು ಪ್ರಶ್ನಿಸಬಾರದು. ಈ ಅಧಿಕರಣದ ಸಿದ್ಧಾಂತವನ್ನು ಅಪೇಕ್ಷಿಸಿ ಮುಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ವೈಯರ್ಥ್ಯವನ್ನು ಹೇಳಬಾರದು.

ಶ್ರುತಿಲಿಂಗಗಳ ನಿರವಕಾಶತ್ವವು ನ್ಯಾಯವಿವರಣಕ್ಕೆ ಸಮ್ಮತ

ಇಲ್ಲಿಯ ತನಕ ತತ್ತ್ವಪ್ರಕಾಶಿಕಾ ವಾಕ್ಯಕ್ಕೆ ಎರಡು ಬಗೆಯಲ್ಲಿ ವ್ಯಾಖ್ಯಾನಿಸಿ ಪ್ರಕೃತ ನ್ಯಾಯವಿವರಣಕ್ಕೆ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. ಅದಿತಿಶ್ರುತಿ ಹಾಗೂ ಅದಿತಿತ್ವಲಿಂಗ ಎರಡೂ ಸಹ ನಿರವಕಾಶಗಳೇ

ಆಗಿವೆ. ಅದಿತಿಶ್ರುತಿಯಲ್ಲಿ ಯಾವುದೇ ವಿಷ್ಣುಲಿಂಗಗಳು ಇಲ್ಲದ ಕಾರಣ ದೇವಮಾತೆಯನ್ನೇ ಅದಿತಿಶಬ್ದವು ಪ್ರತಿಪಾದಿಸುತ್ತದೆ. ಆದ್ದರಿಂದ ಅದಿತಿಶ್ರುತಿಯು ನಿರವಕಾಶವಾಯಿತು. ಇದರಂತೆ ಅದಿತಿತ್ವವೆಂಬ ಲಿಂಗವೂ ಸಹ ನಿರವಕಾಶವಾಗಿದೆ. ಏಕೆಂದರೆ ಅದಿತಿತ್ವ ಎಂಬಲ್ಲಿರುವ ಅದಿತಿ ಎಂಬ ಪ್ರಾತಿಪದಿಕವು ಅದಿತಿದೇವಿಯನ್ನು ಪ್ರತಿಪಾದಿಸಿದ ಮೇಲೆ 'ತ್ವ' ಪ್ರತ್ಯಯವೂ ಸಹ ಅದಿತಿದೇವಿಯಲ್ಲಿರುವ ಧರ್ಮವನ್ನೇ ಪ್ರತಿಪಾದಿಸಬೇಕಲ್ಲವೇ? ಹೀಗೆ ಶ್ರುತಿ ಹಾಗೂ ಲಿಂಗಗಳೆರಡು ನಿರವಕಾಶಗಳಾಗುತ್ತವೆ. 'ಶ್ರುತಿರ್ಲಿಂಗಂಚ' ಎಂಬಲ್ಲಿರುವ ನ್ಯಾಯವಿವರಣದ 'ಚ' ಶಬ್ದವೂ ಸಹ ಅತ್ಯಂತ ಸ್ವರಸವಾಗುತ್ತದೆ.

ವಿಷ್ಣುಲಿಂಗ ಹಾಗೂ ವಿಷ್ಣುಪ್ರಕರಣಗಳು ಸಾವಕಾಶವಾಗಿವೆ

ಸರ್ವಾತ್ಮತ್ವ ಹಾಗೂ ವಿಷ್ಣುಪ್ರಕರಣ ಎಂಬುದು ವಿಷ್ಣುವೇ ಅದಿತಿಶಬ್ದವಾಚ್ಯನಾಗಿದ್ದಾನೆನ್ನಲು ಪ್ರಮಾಣಗಳಾಗಿವೆಯೆಂದು ಹೇಳಬೇಕು. ಆದರೆ ಸರ್ವಾತ್ಮತ್ವವೆಂಬ ವಿಷ್ಣುಲಿಂಗ್ನ ಅದಿತಿದೇವಿಯಲ್ಲಿ ಸಾವಕಾಶವಾಗಿದೆ. ಪ್ರಕರಣವು ನಿರವಕಾಶವಾದರೂ ಅಥವಾ ಸಾವಕಾಶವಾದರೂ ಅದಿತಿಯೇ ಅದಿತಿಶಬ್ದವಾಚ್ಯಳಾಗುತ್ತಾಳೆ.

ಸರ್ವಾತ್ಮತ್ವವು ಏಕೆ ಸಾವಕಾಶವೆಂದರೆ ಸರ್ವಶಬ್ದದ ಅರ್ಥಕ್ಕೆ ಸಂಕೋಚ ಮಾಡುವುದು ಅನಿವಾರ್ಯ. ತನಗೆ ಯೋಗ್ಯವಾದ ಸಕಲ ಪದಾರ್ಥಗಳನ್ನು ಅದಿತಿ ದೇವಿ ತಿನ್ನುತ್ತಾಳೆನ್ನಬಹುದು. ಅಥವಾ ಸರ್ವಶಬ್ದದ ಅರ್ಥವನ್ನು ಸಂಕೋಚ ಮಾಡದಿದ್ದರೂ ಸಕಲ ಪದಾರ್ಥಗಳ ಆತ್ಮತ್ವವನ್ನು ಅದಿತಿದೇವಿಯಲ್ಲಿ ಹೇಳಬಹುದು. ಇದರಿಂದ ಸರ್ವಸಂಹರ್ತತ್ವವೆಂಬ ವಿಷ್ಣುವಿನ ಲಕ್ಷಣವು ಅಸಂಭವದೋಷಗ್ರಸ್ತವಾಗಿದೆಯೆಂದು ತಿಳಿಯುತ್ತದೆ.

'ಅದ ಭಕ್ಷಣೇ' ಎಂಬ ಧಾತುವಿನಿಂದ 'ಅತ್ತಾ' ಎಂಬ ರೂಪವು ನಿಷ್ಪನ್ನವಾಗಿದೆ. ಇದರಿಂದ ಎಲ್ಲವನ್ನು ತಿನ್ನುತ್ತಾಳೆಂಬ ಅರ್ಥವನ್ನು ಹೇಳಬಹುದು ಹೊರತು, ಎಲ್ಲವನ್ನು ಸಂಹಾರ ಮಾಡುತ್ತಾಳೆಂಬುದನ್ನು ಹೇಗೆ ಸಂಹಾರ ಮಾಡುವುದು ಎಂದೇ ಅರ್ಥ. ಆದ್ದರಿಂದ ಅತ್ಮತ್ವ ಹಾಗೂ ಸಂಹರ್ತೃತ್ವ ಎಂಬೆರಡು ಪದಗಳು ಪರ್ಯಾಯಶಬ್ದಗಳಾಗಿವೆ. ಅಥವಾ ಭಕ್ಷಣಾರ್ಥದಲ್ಲಿ ಅದ ಧಾತುವು ಪ್ರಸಿದ್ಧವಾದಂತೆ ಸಂಹಾರ ಎಂಬರ್ಥದಲ್ಲಿಯೂ ಅದ ಧಾತುವು ಪ್ರಸಿದ್ಧವಾಗಿದೆ.

ಸಮಗ್ರ ಪ್ರಕರಣವು ವಿಷ್ಣು ಪರವಾದ್ದರಿಂದ 'ತತ್ತದತ್ತುಮಧ್ಯಿಯತ' ಎಂಬ ವಾಕ್ಯವು ವಿಷ್ಣುವನ್ನೇ ಹೇಳಬೇಕಲ್ಲವೇ? ಎಂಬ ಪ್ರಶ್ನೆಗೂ ಈಗ ಅವಕಾಶವಿಲ್ಲ. ಏಕೆಂದರೆ ಮಹಾಪ್ರಕರಣವು ವಿಷ್ಣುಪರವಾಗಿದ್ದರೂ 'ತತ್ತದತ್ತುಮಧ್ಯಿಯತ' ಎಂಬುದು ಅವಾಂತರ ಪ್ರಕರಣವಾಗಿದೆ. ಈ ಅವಾಂತರ ಪ್ರಕರಣವು ಅದಿತಿದೇವಿಯನ್ನು ಪ್ರತಿಪಾದಿಸಲು ತೊಂದರೆ ಇಲ್ಲ. ಏಕೆಂದರೆ ಪ್ರಕರಣ ಪ್ರಮಾಣಕ್ಕಿಂತ ಶ್ರುತಿಲಿಂಗಗಳು ಬಲಿಷ್ಠವಾದ ಪ್ರಮಾಣಗಳಾಗಿವೆ. ಅಥವಾ ಈ ಬಲಿಷ್ಠವಾದ ಶ್ರುತಿಲಿಂಗಪ್ರಮಾಣಗಳಿಂದಲೇ ಸಂಪೂರ್ಣ ಮಹಾಪ್ರಕರಣವೂ ಸಹ ಅದಿತಿದೇವಿಯನ್ನೇ ಪ್ರತಿಪಾದಿಸುತ್ತದೆ.

ಈ ಎಲ್ಲಾ ಕಾರಣಗಳಿಂದ 'ತತ್ತದತ್ತುಮಧ್ಯಿಯತ' ಎಂಬ ವಿಷಯವಾಕ್ಯದಿಂದ ಪ್ರತಿಪಾದ್ಯಳಾದವಳು ಅದಿತಿದೇವಿಯೇ ಹೊರತು ಮಹಾವಿಷ್ಣುವಲ್ಲ. ಇಲ್ಲಿಗೆ ಪೂರ್ವಪಕ್ಷವು ಸಮಾಪ್ತವಾಯಿತು.

ಸರ್ವಾತ್ಮತ್ವ ವಿಷ್ಣುವಿನಲ್ಲಿ ಮಾತ್ರವೆಂದು ಸಿದ್ಧಾಂತ

ಸಿದ್ಧಾಂತವನ್ನು ಪ್ರಾರಂಭಿಸುತ್ತಿದ್ದಾರೆ - ಸಿದ್ಧಾಂತದ ಸಾರ ಹೀಗಿದೆ - ಸರ್ವಾತ್ಮತ್ವವೆಂಬ ಲಿಂಗವು ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ ಯುಕ್ತವಾಗುವುದಿಲ್ಲ. ಮತ್ತು ವಿಷ್ಣುವಿನಲ್ಲಿ ಅದಿತಿಶಬ್ದವು ಪ್ರಯುಕ್ತವಾಗಿದೆಯೆಂದು ಬೇರೊಂದು ಶ್ರುತಿಯಿಂದ ಸ್ಪಷ್ಟವಾಗುತ್ತದೆ.

ಬಾಧಕವಿಲ್ಲದ ಸರ್ವಶಬ್ದಕ್ಕೆ ಸಂಕೋಚವನ್ನು ಮಾಡಬಾರದು. ಪೂಷಾದಿದೃಷ್ಟಾಂತದಲ್ಲಿ ಬಾಧಕವಿದ್ದಂತೆ ಇಲ್ಲಿ ಬಾಧಕವಿಲ್ಲದ ಕಾರಣ ಮತ್ತೊಂದೆಡೆ ಅಪಕರ್ಷ ಮಾಡಬೇಕಾಗಿಲ್ಲ.

ಪರಿಪೂರ್ಣಚಂದ್ರಿಕಾ

ಅವಾಂತರ ಪ್ರಕರಣವೆಂದು ಪೂರ್ವೋತ್ತರ ವಾಕ್ಯಗಳ ಪರಾಮರ್ಶದಿಂದ ನಿರ್ಣಯಿಸಬೇಕು. 'ಅಭಿಕ್ರಾಮಂ ಜುಹೋತಿ' ಎಂಬಲ್ಲಿ ಹಾಗೆ ಸಂದಂಶ ಇರುವುದರಿಂದ ಅವಾಂತರ ಪ್ರಕರಣವೆಂದು ಹೇಳಬಹುದು. ಆದರೆ ಪ್ರಕೃತದಲ್ಲಿ ಸಂದಂಶ ಇರುವುದಿಲ್ಲ.

ವಿಷ್ಣುವಿನ ಸರ್ವಾತ್ಮತ್ವಕ್ಕೆ ಅದಿತಿಶಬ್ದವೇ ಹೇತು

'ಸಃ ಯದ್ಯದೇವಾऽಸೃಜತ' ಎಂಬುವ ಮೊದಲು ವಿಷ್ಣುವನ್ನು ಸರ್ವತ್ಮಾ ಎನ್ನಲಾಗಿದೆ. ಏಕೆ? ಎಂಬ ಪ್ರಶ್ನೆ ಬಂದರೆ 'ಸರ್ವಂ ವಾ ಅತ್ತಿ,' ಎಂಬುದಾಗಿ ಅದಿತಿಶಬ್ದದ ನಿರ್ವಚನದ ಮೂಲಕವಾಗಿ ಹೇತುವನ್ನು ನಿರೂಪಿಸಲಾಗಿದೆ. ಒಂದು ವೇಳೆ ಹಿಂದಿನ ವಾಕ್ಯದಲ್ಲಿ ವಿಷ್ಣುವಿನಲ್ಲಿ ಅಥವಾ ಅದಿತಿದೇವಿಯಲ್ಲಿ ಆ ಅದಿತಿಶಬ್ದವನ್ನು ಪ್ರಯೋಗಿಸಿದ್ದರೆ ಅನುಶಾಸನದ ಆಕಾಂಕ್ಷೆ ಬರುತ್ತಿತ್ತು. ಆದರೆ ಮೊದಲು ಅದಿತಿಶಬ್ದವನ್ನು ಪ್ರಯೋಗಿಸದ ಕಾರಣ ಅನುಶಾಸನದ ಆಕಾಂಕ್ಷೆಯು ಬರುವುದಿಲ್ಲ.

ಮೊದಲನೆಯ ಸೂತ್ರದಲ್ಲಿ ಸರ್ವಾತ್ಮತ್ವವೆಂಬ ಲಿಂಗವು ಹೇಳಲ್ಪಟ್ಟದೆ. ಎರಡನೆಯ ಸೂತ್ರದಲ್ಲಿ ಪ್ರಕರಣ ಪ್ರಮಾಣವು ಹೇಳಲ್ಪಟ್ಟದೆ. ಪ್ರಕರಣಕ್ಕಿಂತ ಲಿಂಗವು ಶ್ರೇಷ್ಠವಾದ್ದರಿಂದ ಸೂತ್ರಕ್ರಮವು ಸ್ಪಷ್ಟವಾಗಿಯೇ ಇದೆ.

ಅದ್ವೈತಿಗಳ ಅಧಿಕರಣ ಶರೀರ

ಶಾಂಕರಭಾಷ್ಯದಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾರೆ -

ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ । ಮೃತ್ಯುರ್ಯಸ್ಯೋಪಸೇಚನಂ ॥ ಖ ಇತ್ಥಾ ವೇದ ಯತ್ರ ಸಃ ॥

ಎಂಬ ಕಾಠಕದಲ್ಲಿರುವ ವಾಕ್ಯವೇ ಈ ಅಧಿಕರಣದ ವಿಷಯ. ಈ ವಾಕ್ಯದಲ್ಲಿ ಬ್ರಾಹ್ಮಣ ಹಾಗೂ ಕ್ಷತ್ರಿಯರನ್ನು ಅನ್ನವೆಂದು ಯಮನನ್ನು ಉಪಸೇಚನವೆಂದು ಹೇಳಿ ಯಾರು ಇವರನ್ನು ತಿನ್ನುತ್ತಾರೋ ಅಂತಹ ವ್ಯಕ್ತಿಯನ್ನು ತಿಳಿದವರು ಯಾರೆಂಬುದನ್ನೂ ಹೇಳಲಾಗಿದೆ.

ಪೂರ್ವಪಕ್ಷ - ಕಾಠಕೋಪನಿಷತ್ತು ಯಮ ಹಾಗೂ ನಚಿಕೇತರ ಸಂವಾದ ರೂಪವಾಗಿದೆ. ಅಗ್ನಿ, ಜೀವ, ಬ್ರಹ್ಮ ಮೂವರ ಪ್ರಸ್ತಾಪ ಇದರಲ್ಲಿದೆ. 'ಅನಶ್ನನ್' ಎಂಬ ಶ್ರುತಿ ಪ್ರಮಾಣದಿಂದ ಬ್ರಹ್ಮನಿಗೆ ಭೋಗ ಇರುವುದಿಲ್ಲ. ಆದ್ದರಿಂದ ಉಳಿದ ಜೀವನಿಗೆ ಅಥವಾ ಅಗ್ನಿಗೆ ಭೋಕ್ತೃತ್ವವನ್ನು ಹೇಳಬೇಕು. ಸೂತ್ರದಲ್ಲಿರುವ 'ಅತ್ತಾ' ಎಂಬ ಪದವು ತಿನ್ನುತ್ತಾನೆಂಬರ್ಥವನ್ನು ಹೇಳುತ್ತದೆ ಹೊರತು ಸಂಹಾರ ಎಂಬ ಅರ್ಥವನ್ನು ಹೇಳುವುದಿಲ್ಲ. ತಿನ್ನುವಿಕೆಯು ಜೀವನಲ್ಲೇ ಬರುತ್ತದೆ.

ಸಿದ್ಧಾಂತ - ಜೀವನಾಗಲಿ ಅಗ್ನಿಯಾಗಲಿ ಬ್ರಾಹ್ಮಣ ಅಥವಾ ಕ್ಷತ್ರಿಯರ ಅನ್ನವನ್ನು ತಿನ್ನಲು ಸಾಧ್ಯವಿಲ್ಲ. ಅಂತಹ ಸಾಮರ್ಥ್ಯ ಜೀವನಲ್ಲಿ ಅಸಂಭಾವಿತ. ಆದ್ದರಿಂದ ಸೂತ್ರದಲ್ಲಿ 'ಅತ್ತಾ' ಎಂಬ ಪದಕ್ಕೆ ಸಂಹಾರ ಮಾಡುತ್ತಾನೆಂಬ ಅರ್ಥವನ್ನೇ ಹೇಳಬೇಕು. ತಿನ್ನುತ್ತಾನೆಂಬ ಅರ್ಥವನ್ನು ಹೇಳಬಾರದು. ಬ್ರಹ್ಮನು ಸಮಸ್ತ ಜಗತ್ತನ್ನು ಸಂಹಾರ ಮಾಡುತ್ತಾನಾದ್ದರಿಂದ ಈ ವಾಕ್ಯದಿಂದ ಪ್ರತಿಪಾದ್ಯನಾದವನು ಬ್ರಹ್ಮನೇ ಆಗಿದ್ದಾನೆ.

ಅದ್ವೈತಮತ ನಿರಾಕರಣೆ

ಶಾಂಕರಭಾಷ್ಯದಲ್ಲಿ ಅತ್ಯತ್ವವು ಭೋಕ್ತೃತ್ವರೂಪವಾಗಿದೆ. ಬ್ರಹ್ಮನು ಭೋಕ್ತೃವಲ್ಲದ ಕಾರಣ ಅತ್ಯವಲ್ಲ ಎಂದು ಪೂರ್ವಪಕ್ಷ ಮಾಡಿ ಸಂಹಾರಕತ್ವವನ್ನೇ ಅತ್ಯತ್ವವೆನ್ನಬೇಕು. ಸಂಹಾರಕತ್ವವು ಬ್ರಹ್ಮನ ಧರ್ಮವೆಂದು ಸಿದ್ಧಾಂತ ಮಾಡಲಾಗಿದೆ. ಇದು ತಪ್ಪು. ವಿಚಾರ ಮಾಡಿದರೆ ಸಂಹಾರಕರ್ತೃತ್ವವನ್ನೇ ಶುದ್ಧ ಬ್ರಹ್ಮನಲ್ಲಿ ಹೇಳಲು ಸಾಧ್ಯವಿಲ್ಲ. ಮಾಯಾವಿಶಿಷ್ಟಬ್ರಹ್ಮನಲ್ಲಿ ಸಂಹಾರಕರ್ತೃತ್ವವನ್ನು ಹೇಳಬೇಕು. ಆವನಲ್ಲಿ ಭೋಕ್ತೃತ್ವವೂ ಸಹ ಇದ್ದೇ ಇದೆ. ''ಅನಶ್ನನ್'' ಎಂಬ ಶ್ರುತಿಯು ಶುದ್ಧಬ್ರಹ್ಮನಲ್ಲಿ ಭೋಕ್ತೃತ್ವವನ್ನು ನಿಷೇಧ ಮಾಡುತ್ತಿದೆ. ಹೀಗೆ ಹೇಳಲು ಬರುವುದರಿಂದ ಅತ್ಯತ್ವವು ಭೋಕ್ತೃತ್ವರೂಪವಲ್ಲ. ಸಂಹಾರ ಕರ್ತೃತ್ವವೆಂದು ಸಿದ್ಧಾಂತ ಮಾಡುವುದು ಹೇಗೆ ಸರಿ?

ಮತ್ತು ಸೂತ್ರದಲ್ಲಿ ಹೇಳಲ್ಪಟ್ಟ ಪ್ರತಿಜ್ಞಾವಾಕ್ಯದಿಂದ ಅಥವಾ ಹೇತುವಾಕ್ಯದಿಂದ ಸೂತ್ರಕ್ಕೆ ಆನುಗುಣ್ಯವೂ ಬರುವುದಿಲ್ಲ. ಆದರೆ ನಾವು ಉಲ್ಲೇಖಿಸಿದ 'ಸರ್ವಂ ವಾ ಆತ್ತಿ' ಎಂಬ ವಿಷಯವಾಕ್ಯದಲ್ಲಿ 'ಅತ್ತಾ' ಎಂಬ ಪದವಿದೆ. ಮತ್ತು 'ಸರ್ವಂ' ಎಂಬ ಪದವಿದೆ. ಇವುಗಳಿಂದ ಸೂತ್ರದಲ್ಲಿರುವ ಪ್ರತಿಜ್ಞಾಭಾಗ ಹಾಗೂ ಹೇತು ವಾಕ್ಯಗಳಿಗೆ ನೇರವಾಗಿ ಆನುಗುಣ್ಯವನ್ನು ಹೇಳಬಹುದು.

ಅದ್ವೈತಿಗಳು 'ಪ್ರಕರಣಾಚ್ಚ' ಎಂಬ ಎರಡನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - ಈ ಮಂತ್ರಕ್ಕಿಂತ ಕೆಲವು ಮಂತ್ರಗಳ ಹಿಂದೆ 'ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್' ಎಂದು ಬ್ರಹ್ಮನ ಪ್ರಸ್ತಾಪವಿರುವುದರಿಂದ ಈ ಪ್ರಕರಣದಿಂದ ಬ್ರಹ್ಮನೇ 'ಅತ್ತಾ' ಎಂದು ನಿರ್ಧಾರವಾಗುತ್ತದೆ.

''ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್'' ಎಂಬ ವಾಕ್ಯದ ನಂತರ ''ನ ಹನ್ಯತೇ ಹನ್ಯಮಾನೇಽಪಿ'' ಎಂಬುದಾಗಿ ಜೀವನೂ ಸಹ ಪ್ರಸ್ತುತನಾಗಿದ್ದಾನೆ. ಆದ್ದರಿಂದ ಬ್ರಹ್ಮನೇ ಈ ಪ್ರಕರಣ ಪ್ರತಿಪಾದ್ಯನೆಂದು ಹೇಗೆ ನಿರ್ಣಯಿಸುತ್ತೀರಿ ?

ರಾಮಾನುಜರು ಈ ಎರಡು ಸೂತ್ರಗಳನ್ನು ಪ್ರತ್ಯೇಕ ಅಧಿಕರಣವೆಂದು ಪರಿಗಣಿಸಿಲ್ಲ. ಗುಹಾಧಿಕರಣದಲ್ಲೇ ಸೇರಿಸುತ್ತಾರೆ. ಆದ್ದರಿಂದ ಗ್ರಂಥಕಾರರು ರಾಮಾನುಜ ಮತವನ್ನು ಮುಂದೆಯೇ ನಿರಾಕರಿಸುತ್ತಾರೆ.

ಟೀಕೆಯ ಕಠಿಣಪದಾರ್ಥ

'ಸಃ ಯದ್ಯದೇವಾऽಸೃಜತ' ಎಂಬ ಬೃಹದಾರಣ್ಯಕ ವಾಕ್ಯವು ಈ ಅಧಿಕರಣಕ್ಕೆ ವಿಷಯಕವಾಗಿದೆ. ಈ ವಾಕ್ಯದಿಂದ ಅದಿತಿದೇವಿಯು ಪ್ರತಿಪಾದ್ಯಳಾದರೆ 'ಸಃ' ಎಂಬ ಪುಲ್ಲಿಂಗ ಪ್ರಯೋಗವು ಹೇಗೆ ಕೂಡುತ್ತದೆ. 'ಸಾ' ಎಂದು ಪ್ರಯೋಗಿಸಬೇಕಲ್ಲವೇ? ಎಂದರೆ ಹೌದು. ಆದರೆ ಪುರುಷ ಸಾಮರ್ಥ್ಯವನ್ನು ಸ್ತ್ರೀಯಾದ ಅದಿತಿದೇವಿಯು ಪಡೆದಿರುವುದರಿಂದ ಅವಳಲ್ಲಿ ಪುಲ್ಲಿಂಗ ಪ್ರಯೋಗವು ಕೂಡುತ್ತದೆ. ಗೀತೆಯಲ್ಲಿಯೂ ಸಹ ಲಕ್ಷ್ಮಿಯಲ್ಲಿ ಕೂಟಸ್ಥಃ ಎಂಬ ಪುಲ್ಲಿಂಗ ಪ್ರಯೋಗವು ಕಾಣಿಸುತ್ತದೆ. ಆದ್ದರಿಂದ ಅದಿತಿಗೂ 'ಸಃ' ಎಂದು ಹೇಳಿದ್ದು ತಪ್ಪಲ್ಲ. ಹೀಗೆ ಶ್ರೀಮದಾಚಾರ್ಯರು ಭಾಷ್ಯದಲ್ಲಿ ಪ್ರಶ್ನಿಸಿಕೊಂಡು ಉತ್ತರಿಸಿದ್ದಾರೆ.

ತತ್ತ್ವಪ್ರಕಾಶಿಕೆ ಹಾಗೂ ಚಂದ್ರಿಕೆಯಲ್ಲಿ ಭಾಷ್ಯದಲ್ಲಿ ಮಾಡಿಕೊಂಡ ಪ್ರಶ್ನೆಯು ಸಮಂಜಸವೋ? ಅಲ್ಲವೋ ? ಎಂದು ವಿಮರ್ಶಿಸಿ ಆಚಾರ್ಯರ ಪ್ರಶ್ನೆಯನ್ನು ಸಮರ್ಥಿಸಿದ್ದಾರೆ. 'ಸಃ ಯದ್ಯದೇವ' ಎಂಬ ವಾಕ್ಯದ

ಹಿಂದೆ ಸಂವತ್ಸರನೆನೆಸಿದ ಚತುರ್ಮುಖನು ಪ್ರಸ್ತುತನಾಗಿದ್ದಾನೆ. ಅವನ ಪರಾಮರ್ಶವನ್ನೇ 'ಸಃ ' ಎಂಬುದರಿಂದ ಮಾಡಬೇಕು. ಹೀಗಿರುವಾಗ ಪುಲ್ಲಿಂಗಪ್ರಯೋಗ ಹೇಗೆ ? ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂಬ ಶಂಕೆ ಬರುತ್ತದೆ. ಆದರೆ ಮೃತ್ಯುವೆನಿಸಿದ ಅದಿತಿದೇವಿಯೇ ಹಿಂದೆ ಪ್ರಸಕ್ತಳಾಗಿದ್ದಾಳೆ. ಅವಳ ಪರಾಮರ್ಶವನ್ನೇ ಇಲ್ಲಿ 'ಸಃ' ಎಂಬ ಪದದಿಂದ ಮಾಡಬೇಕು. ಆದ್ದರಿಂದ ಆಚಾರ್ಯರು ಮಾಡಿಕೊಂಡ ಪ್ರಶ್ನೆ ಸಮಂಜಸವೇ ಆಗಿದೆ.

ಗುಹಾಧಿಕರಣ

ಆವಾಂತರ ಸಂಗತಿ ನಿರೂಪಣೆ

ಗುಹಾಧಿಕರಣದಲ್ಲಿ ಕರ್ಮಫಲಭೋಕ್ತೃತ್ವವೆಂಬ ಲಿಂಗವನ್ನು ಸಮನ್ವಯ ಮಾಡುತ್ತಿದ್ದಾರೆ. ಆತ್ಮತ್ವದಂತೆ ಇದೂ ಸಹ ಕ್ರಿಯಾರೂಪವೇ ಆಗಿದೆ. ಅಷ್ಟೇ ಅಲ್ಲದೆ ಆತ್ಮತ್ವದ ವಿಶೇಷಧರ್ಮವೂ ಆಗಿದೆ. ಆದರೆ ಹಿಂದಿನ ಅಧಿಕರಣದಿಂದ ಈ ಲಿಂಗವು ನಿರ್ಣಯವಾಗುವುದಿಲ್ಲ. ಏಕೆಂದರೆ 'ಋತಂ ಪಿಬಂತೌ' ಎಂಬ ಶ್ರುತಿಯಲ್ಲಿ ದ್ವಿವಚನವು ಕೇಳಿಸುತ್ತಿದೆ. ಇಬ್ಬರು ವ್ಯಕ್ತಿಗಳು ಭೋಕ್ತೃಗಳಾದರೆ ಮಾತ್ರ ಈ ದ್ವಿವಚನವು ಉಪಪನ್ನವಾಗಲು ಸಾಧ್ಯವೆಂಬ ಆಕ್ಷೇಪ ಬರುತ್ತದೆ. ಇದರ ಪರಿಹಾರಕ್ಕಾಗಿ ಈ ಅಧಿಕರಣ ಹೊರಟಿದೆ.

ಹಿಂದಿನ ಅಧಿಕರಣದಲ್ಲಿ ಆದಿತಿಯೆಂಬ ಪ್ರಕೃತಿಶ್ರುತಿಯ ಬಲದಿಂದ ಪೂರ್ವಪಕ್ಷವು ಪ್ರಾಪ್ತವಾಗಿತ್ತು. ಈ ಅಧಿಕರಣದಲ್ಲಿ ದ್ವಿವಚನವೆಂಬ ಪ್ರತ್ಯಯಶ್ರುತಿಯ ಬಲದಿಂದ ಪೂರ್ವಪಕ್ಷವು ಪ್ರಾಪ್ತವಾಗುತ್ತಿದೆ. ಪ್ರಕೃತಿ ವಿಚಾರದ ಅನಂತರ ಪತ್ಯಯದ ವಿಚಾರವೂ ಸಂಗತವಾಗಿದೆಯೆಂದು ಅವಾಂತರಸಂಗತಿಯನ್ನು ಈ ಅಧಿಕರಣಕ್ಕೆ ತಿಳಿಯಬೇಕು. ಪ್ರತ್ಯುದಾಹರಣ ರೂಪಸಂಗತಿ ಹಾಗೂ ಆಕ್ಷೇಪಿಕೀಸಂಗತಿಗಳು ಮುಂದಿನ ವಿಷಯಭಾಗದಿಂದ ಸ್ವತಃ ಸ್ಪಷ್ಟವಾಗುತ್ತದೆ.

ಸಂಶಯ ಪರಂಪರೆ

ಒಂದು ವೇಳೆ 'ಅನಶ್ನನ್' ಇತ್ಯಾದಿ ಶ್ರುತಿಯು ಭೋಕ್ತೃತ್ವಸಾಮಾನ್ಯವನ್ನು ವಿಷ್ಣುವಿನಲ್ಲಿ ನಿಷೇಧಿಸುವುದಾದರೆ, ಪ್ರಾತಿಪದಿಕಾರ್ಥಭೋಕ್ತೃತ್ವ ಕೂಡುವುದಿಲ್ಲ. ಆದ್ದರಿಂದ 'ಪಿಬತ್' ಎಂಬ ಪ್ರಾತಿಪದಿಕಾರ್ಥ ರೂಪವಾದ ಬಾಧಕವಿರುವುದರಿಂದ ಬ್ರಹ್ಮಶಬ್ದಾದಿಗಳಿಗೆ ಮುಖ್ಯಾರ್ಥವನ್ನು ಹೇಳಲಾಗದು. ಆದ್ದರಿಂದ ಜೀವೇಶ್ವರರೇ ಕರ್ಮಫಲಭೋಕ್ತೃಗಳಾಗಿದ್ದಾರೆಂಬುದು ಪೂರ್ವಪಕ್ಷದ ಫಲ.

ಒಂದು 'ಅನಶ್ನನ್' ಇತ್ಯಾದಿ ಶ್ರುತಿಯು ಭೋಕ್ತೃತ್ವ ವಿಶೇಷವನ್ನು ನಿಷೇಧಿಸುವುದಾದರೆ ಆವಾಗ ಬ್ರಹ್ಮನಲ್ಲಿ ಶುಭಫಲಭೋಕ್ತೃತ್ವವು ಯುಕ್ತವಾಗುತ್ತದೆ. ಯಾವುದೇ ಬಾಧಕವಿಲ್ಲದ ಕಾರಣ ಬ್ರಹ್ಮಶಬ್ದಾದಿಗಳಿಗೆ ಮುಖ್ಯಾರ್ಥವನ್ನು ಹೇಳಬಹುದು. ಆದ್ದರಿಂದ 'ಪಿಬಂತೌ' ಎಂಬ ಶ್ರುತಿಯಿಂದ ಭಗವಂತನ ಎರಡು ರೂಪವಿಶೇಷಗಳೇ ಪ್ರತಿಪಾದ್ಯಗಳಾದ್ದರಿಂದ ಭಗವಂತನೇ ಕರ್ಮಫಲಭೋಕ್ತೃವಾಗುತ್ತಾನೆಂಬುದು ಸಿದ್ಧಾಂತದ ಫಲ.

ಪ್ರಬಲವಾದ ಪೂರ್ವಪಕ್ಷ

ಈ ಅಧಿಕರಣದ ಪೂರ್ವಪಕ್ಷ ಹೀಗಿದೆ - ಹಿಂದಿನ ಅಧಿಕರಣದಲ್ಲಿ ಹೇಳಲಟ್ಟ ಅತ್ಮತ್ವವನ್ನು ಬ್ರಹ್ಮನ ಧರ್ಮವೆಂದು ಒಪ್ಪೋಣ. ಏಕೆಂದರೆ ಪ್ರಾತಿಪದಿಕಾರ್ಥವೆನಿಸಿದ ಸಂಹರ್ತತ್ವವಾಗಲಿ ಪ್ರತ್ಯಯಾರ್ಥವೆನಿಸಿದ ಏಕತ್ವವಾಗಲಿ ಬ್ರಹ್ಮನಲ್ಲಿ ಯುಕ್ತವಾಗುತ್ತದೆ. ಆದರೆ ಈ ಅಧಿಕರಣದಲ್ಲಿ ಪ್ರಾತಿಪದಿಕಾರ್ಥವೆನಿಸಿದ ಕರ್ಮಫಲಭೋಕ್ತೃತ್ವವಾಗಲಿ,

ಪ್ರತ್ಯಯಾರ್ಥವೆನಿಸಿದ ದ್ವಿತ್ವವಾಗಲಿ ಬ್ರಹ್ಮನಲ್ಲಿ ಕೂಡುವುದಿಲ್ಲ. ವಸ್ತುತಃ ಭಗವಂತನಲ್ಲಿ 'ದ್ವಿತ್ವ' 'ಅನೇಕತ್ವ' ಮೊದಲಾದ ಸಂಖ್ಯೆಗಳು ಅನುಪಪನ್ನವಾಗುವುದಿಲ್ಲ ಎಂಬ ವಿಚಾರವನ್ನು ಆನಂದಮಯಾಧಿಕರಣದಲ್ಲಿಯೇ ಹೇಳಿದ್ದಾಗಿದೆ. ಆದರೆ ನ್ಯಾಯವಿವರಣದಲ್ಲಿ 'ದ್ವಿತ್ವಾದಿ ಸಂಖ್ಯೆಗಳನ್ನು ಆನಂದಮಯಾಧಿಕರಣದಲ್ಲಿ ಸಮರ್ಥನೆ ಮಾಡದ ಕಾರಣ ಈ ಅಧಿಕರಣವು ಹೊರಟಿದೆ' ಎಂದು ಹೇಳಿದ್ದಾರೆ. ಆನಂದಮಯಾಧಿಕರಣದಲ್ಲಿ ಕೇವಲ ಅನ್ನಮಯಾದಿಶಬ್ದಗಳು ಭಿನ್ನಭಿನ್ನವಾದ್ದರಿಂದ ಬ್ರಹ್ಮನೂ ಸಹ ಭಿನ್ನನಾಗಬೇಕಲ್ಲವೇ ? ಎಂಬ ಪೂರ್ವಪಕ್ಷವನ್ನಷ್ಟೇ ನಿರಾಕರಿಸಲಾಗಿದೆ ಹೊರತು ಸಂಖ್ಯಾಭೇದದಿಂದ ಬ್ರಹ್ಮನ ಭೇದವನ್ನು ಆಶಂಕಿಸಿಲ್ಲ. ಪ್ರಕೃತ ಈ ಅಧಿಕರಣದಲ್ಲಿ ಸಂಖ್ಯಾಭೇದದಿಂದ ಬ್ರಹ್ಮನ ಭೇದವು ಆಕ್ಷಿಪ್ತವಾಗುತ್ತಿದೆ ಎಂದು ಪೂರ್ವಪಕ್ಷ ಮಾಡಿದ್ದು ಯುಕ್ತವಾಗಿದೆ.

ದ್ವಿವಚನಶ್ರುತಿ ನಿರವಕಾಶವೆಂದು ಪೂರ್ವಪಕ್ಷ

ಆನಂದಮಯಾಧಿಕರಣದಿಂದ ಗುಹಾಧಿಕರಣವು ಗತಾರ್ಥವಾಗುವುದಿಲ್ಲವೆಂದು ಮತ್ತೊಂದು ಬಗೆಯಲ್ಲಿಯೂ ತಿಳಿಯಬಹುದು - ಅನ್ನಮಯಾದಿ ಶಬ್ದಗಳಲ್ಲವು ಬ್ರಹ್ಮನ ಅವಯವಗಳನ್ನು ಪ್ರತಿಪಾದಿಸುತ್ತಿವೆ. ಆದ್ದರಿಂದ ಬ್ರಹ್ಮನನ್ನು ಅನ್ನಮಯಾದಿ ಶಬ್ದಗಳಿಂದ ಕರೆಯಲಾಗದೆಂಬ ಪೂರ್ವಪಕ್ಷವನ್ನು ಆನಂದಮಯಾಧಿಕರಣದಲ್ಲಿ ಪರಿಹರಿಸಲಾಗಿದೆ. ಆದರೆ ಈ ಅಧಿಕರಣದಲ್ಲಿ ಅನೇಕತ್ವ ಸಂಖ್ಯೆಯಿಂದ ಒಬ್ಬನೇ ಬ್ರಹ್ಮನು ಅನ್ನಮಯಾದಿಶಬ್ದಗಳಿಂದ ಪ್ರತಿಪಾದ್ಯನಾಗಲಾರನೆಂಬ ಆಕ್ಷೇಪವನ್ನು ಪರಿಹರಿಸಲಾಗಿದೆ. ಆದ್ದರಿಂದ ಈ ಅಧಿಕರಣದಲ್ಲಿ ದ್ವಿತ್ವ ಅನೇಕತ್ವ ಮೊದಲಾದ ಸಂಖ್ಯೆಗಳಿಂದ ಬ್ರಹ್ಮನು ಶ್ರುತಿಪ್ರತಿಪಾದ್ಯನಲ್ಲ ಎಂಬ ಪೂರ್ವಪಕ್ಷವು ನಿರವಕಾಶವಾಗಿದೆಯೆಂದು ಸಿದ್ಧವಾಯಿತು.

೧. 'ಪಿಬಂತೌ' ಎಂಬಲ್ಲಿರುವ ದ್ವಿವಚನವು ಶಬ್ದಸಾಧುತ್ವ ಮಾತ್ರದಿಂದ ನಿವಿಷ್ಟವಾಗಿದೆಯೆಂದು ಹೇಳಬೇಕು.

೨. ವಸ್ತುತಃ ಏಕವಚನಾಂತ ಶಬ್ದವಾಗಿದ್ದರೂ ಸಹ ಛಾಂದಸವಾದ್ದರಿಂದ ದ್ವಿವಚನವಾಗಿದೆ.

೩. ದ್ವಿತ್ವವನ್ನು ಬೋಧಿಸಿದರೂ ಸಹ ಉದ್ದೇಶದಲ್ಲಿ ವಿಶೇಷಣವಾಗಿದ್ದರಿಂದ ದ್ವಿತ್ವವನ್ನು ವಿವಕ್ಷಿಸಬೇಕಾಗಿಲ್ಲ.

೪. ಹಿಂದಿನ ಮುಂದಿನ ವಾಕ್ಯಗಳಲ್ಲಿ ಏಕವಚನಾಂತವಾದ ಪದಗಳೇ ಪ್ರಸಕ್ತವಾಗದ್ದರಿಂದ ಅವುಗಳಿಂದ ಸಂದಷ್ಟವಾದ 'ಪಿಂಬತೌ' ಎಂಬುದೂ ಸಹ ಏಕತ್ವವನ್ನೇ ತಿಳಿಸುತ್ತದೆ. ಹೊರತು ದ್ವಿವಚನವಿರುವುದರಿಂದ ದ್ವಿತ್ವವನ್ನು ತಿಳಿಸುವುದಿಲ್ಲ.

೫. ದ್ವಿವಚನಕ್ಕೆ ಪ್ರತಿರೂಪಕವಾದ ಅವ್ಯವಾಗಿದೆ. ಆಂದರೆ ದ್ವಿವಚನದಂತೆ ಕಾಣಿಸುತ್ತದೆ ಹೊರತು ದ್ವಿವಚನ ಪ್ರತ್ಯಯವಲ್ಲ.

ಈ ಐದು ಕಾರಣಗಳಿಂದ ದ್ವಿವಚನಶ್ರುತಿಯನ್ನು ಸಾವಕಾಶವೆನ್ನಬಹುದು. ಆದರೆ ಬಾಧಕವಿಲ್ಲದ ಕಾರಣ ಶಬ್ದಸಾಧುತ್ವಕ್ಕೋಸ್ಕರ ದ್ವಿವಚನ ಪ್ರತ್ಯಯವೆಂಬ ಮೊದಲನೆಯ ಪಕ್ಷವು ನಿರಾಕರಣವಾಗುತ್ತದೆ. ಮತ್ತು ಬಾಧಕವಿಲ್ಲದೇ ವಿಭಕ್ತಿವ್ಯತ್ಯಾಸವನ್ನು ಮಾಡಬಾರದು. ಆದ್ದರಿಂದ ಎರಡನೇ ಪಕ್ಷವು ನಿರಾಕೃತವಾಗುತ್ತದೆ. 'ಪಿಬಂತೌ' ಎಂಬುದನ್ನು ಉದ್ದೇಶವೆಂದೇ ಹೇಳಲಾಗದ ಕಾರಣ ಉದ್ದೇಶವಿಶೇಷಣವಾದ್ದರಿಂದ ದ್ವಿತ್ವವು ಅವಿವಕ್ಷಿತವೆಂಬ ಮೂರನೇ ಪಕ್ಷವು ನಿರಾಕೃತವಾಗುತ್ತದೆ. ಅತಿದೇಶದಿಂದ ಪ್ರಾಪ್ತವಾಗಿದ್ದರೆ ಮಾತ್ರ ಏಕತ್ವ ಸಂಖ್ಯೆಯನ್ನು ಊಹಿಸಬಹುದಿತ್ತು. ಆದರೆ ಇದೇ ಮೊದಲು ಶ್ರುತಿಯಲ್ಲಿ 'ಪಿಬಂತೌ' ಎಂದು ಪ್ರಸಕ್ತವಾಗುತ್ತಿರುವುದರಿಂದ ನಾಲ್ಕನೇ ಪಕ್ಷವು ನಿರಾಕೃತವಾಗುತ್ತದೆ. 'ಪಿಬಂತೌ' ಎಂಬ ಪದವು ಯೌಗಿಕವಾದ್ದರಿಂದ ದ್ವಿವಚನ ಪ್ರತಿರೂಪಕವಾದ ಅವ್ಯಯವೆಂದು ಹೇಳಲಾಗದ

ಕಾರಣ ಐದನೇ ಪಕ್ಷವು ನಿರಾಕೃತವಾಗುತ್ತದೆ. ಆದ್ದರಿಂದ 'ಋತಂ ಪಿಬಂತೌ' ಎಂಬ ಶ್ರುತಿಯು ಜೀವೇಶ್ವರರನ್ನೇ ಪ್ರತಿಪಾದಿಸುತ್ತದೆ. ಗುಹಾಪ್ರವಿಷ್ಟತ್ವ ಬ್ರಹ್ಮಶಬ್ದಾದಿಗಳು ಜೀವವಿಷಯದಲ್ಲಿ ಬಾಧಕವಾಗಿರುವುದಿಲ್ಲ.

ಸಂದಂಶ ನ್ಯಾಯದಿಂದ ವಿಷ್ಣುವೇ ದ್ವಿವಚನಶ್ರುತಿ ಪ್ರತಿಪಾದ್ಯನೆಂದು ಸಿದ್ಧಾಂತ

ಸಿದ್ಧಾಂತವನ್ನು ಮಾಡುತ್ತಿದ್ದಾರೆ. ಹೃದಯಗುಹಾವಿಷ್ಟತ್ವ, ಬ್ರಹ್ಮಶಬ್ದ, ಸೇತುತ್ವ, ಆಕ್ಷರತ್ವ, ಪರತ್ವ, ಅಭಯತ್ವ ಮೊದಲಾದ ಅನೇಕ ಲಿಂಗಗಳು ವಿಷ್ಣುವಿನಲ್ಲಿ ನಿರವಕಾಶವಾಗಿರುವುದರಿಂದ ವಿಷ್ಣುವೇ ದ್ವಿವಚನಶ್ರುತಿಯಿಂದ ಪ್ರತಿಪಾದ್ಯನಾಗುತ್ತಾನೆ.

ಜೀವ ಹಾಗೂ ಈಶ್ವರ ಇಬ್ಬರಲ್ಲಿಯು ಹೃದಯಗುಹಾನಿಹಿತತ್ವವನ್ನು ಹೇಳಬಹುದು. ಆದರೆ ಮಿಥಿಲಾ ಪಟ್ಟಣದಲ್ಲಿ ಹುಟ್ಟಿದ ರಾಜನಲ್ಲಿ ಮಾತ್ರ 'ಮೈಥಿಲಃ' ಎಂಬ ಪ್ರಯೋಗವಿರುತ್ತದೆ ಹೊರತು ಉಳಿದ ಸಾಮಾನ್ಯ ಪ್ರಜೆಗಳನ್ನು 'ಮೈಥಿಲಃ' ಎಂದು ಯಾರೂ ಸಹ ಹೇಳುವುದಿಲ್ಲ. ಆದರಂತೆ ಜೀವೇಶ್ವರರಿಬ್ಬರು ಹೃದಯದಲ್ಲಿದ್ದರೂ ಈಶ್ವರನನ್ನೇ ಹೃದಯಗುಹಾನಿಹಿತನೆಂದು ಹೇಳಬೇಕು.

ಮತ್ತು ಮುಂದಿನ ವಾಕ್ಯದಲ್ಲಿ ಬ್ರಹ್ಮನಲ್ಲಿ ಪರತ್ವವನ್ನು ವಿಶೇಷಣವನ್ನಾಗಿ ಹೇಳಲಾಗಿದೆ. 'ಏಷ ಸೇತುಃ' ಇತ್ಯಾದಿ ಶ್ರುತಿಗಳು ಸೇತುತ್ವವೇ ಮೊದಲಾದ ವಿಷ್ಣುವಿನ ಲಿಂಗಗಳನ್ನೇ ಹೇಳುತ್ತಿವೆ. ಆದ್ದರಿಂದ ವಿಷ್ಣುವೇ ದ್ವಿವಚನಶ್ರುತಿ ಪ್ರತಿಪಾದ್ಯನೆನ್ನಬೇಕು.

ಮತ್ತೊಂದು ಪ್ರಬಲ ಕಾರಣ - 'ಋತಂ ಪಿಬಂತೌ' ಎಂಬ ಶ್ರುತಿಯು ಯಾವ ಪ್ರಕರಣದಲ್ಲಿದೆಯೋ ಅದರ ಹಿಂದಿನ ಮುಂದಿನ ವಾಕ್ಯಗಳಲ್ಲಿ 'ಯಃ ಸೇತುಃ' 'ಯಸ್ಯ ಬ್ರಹ್ಮಕ್ಷತ್ರಂಚ' ಕೇವಲ ವಿಷ್ಣುವೊಬ್ಬನೇ ಪ್ರತಿಪಾದ್ಯನಾಗಿದ್ದಾನೆ. 'ಸಂದಂಶ' ನ್ಯಾಯದಿಂದ ಮಧ್ಯದಲ್ಲಿರುವ ಈ ದ್ವಿವಚನಶ್ರುತಿಯಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂದು ಸುಲಭವಾಗಿ ತಿಳಿಯುವ ವಿಚಾರ.

ಭೋಕ್ತೃ ಶ್ರೀಹರಿಯೇ ಹೊರತು ಜೀವನಲ್ಲ

ಪೂರ್ವಪಕ್ಷವನ್ನು ಮಾಡುವಾಗ ಶ್ರೀಹರಿಯಲ್ಲಿ ಭೋಕ್ತೃತ್ವ ಇಲ್ಲವೆಂದು ಸಮರ್ಥಿಸಿದ್ದರು. ಆದರೆ ಅನೇಕ ಸ್ಮೃತಿ ಶ್ರುತಿಗಳು ಭಗವಂತನನ್ನು ಭೋಕ್ಯವೆಂದೇ ಪ್ರತಿಪಾದಿಸುತ್ತಿವೆ. ಅಷ್ಟೇ ಅಲ್ಲದೆ ಕಣ್ಣು, ಕಿವಿ ಮೊದಲಾದ ಎಲ್ಲ ಇಂದ್ರಿಯಗಳಿಂದಲೂ ಭಗವಂತನು ಸುಖವನ್ನು ಅನುಭವಿಸುತ್ತಾನೆಂದು ಶ್ರುತಿಗಳು ಪ್ರತಿಪಾದಿಸುತ್ತಿವೆ. ಸಾಕ್ಷಾತ್ ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ 'ಶ್ರೋತ್ರಂ ಚಕ್ಷುಃ ಸ್ಪರ್ಶನಂಚ' ಎಂಬ ಶ್ಲೋಕದಲ್ಲಿ ಎಲ್ಲಾ ಇಂದ್ರಿಯಗಳಿಂದ ತಾನು ಸುಖವನ್ನು ಅನುಭವಿಸುತ್ತೇನೆಂದು ಹೇಳಿಕೊಂಡಿದ್ದಾನೆ.

ಹಾಗಾದರೆ 'ಅನ್ನಶನ್ನನ್ಯಃ' ಎಂಬ ಶ್ರುತಿಯು ಭಗವಂತನು ಏನನ್ನೂ ತಿನ್ನಲಾರನೆಂದು ಹೇಳುತ್ತಿದೆಯಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಅನೇಕ ಶ್ರುತಿಸ್ಮೃತಿಗಳು ಸ್ಪಷ್ಟವಾಗಿ ಭೋಕ್ಯತ್ವವನ್ನು ಪರಮಾತ್ಮನಲ್ಲಿ ಪ್ರತಿಪಾದಿಸುತ್ತಿರುವುದರಿಂದ 'ಅನಶ್ನನ್ನನ್ಯಃ' ಎಂಬ ಒಂದು ಶ್ರುತಿಗೆ ಗೌಣಾರ್ಥವನ್ನು ಮಾಡಬೇಕಾಗುತ್ತದೆ. ಅಂದರೆ ಶುಭಫಲಗಳನ್ನಷ್ಟೇ ಭಗವಂತನು ತಿನ್ನುತ್ತಾನೆ ಹೊರತು, ಅಶುಭ ಕರ್ಮಗಳನ್ನು ಎಂದೂ ಸಹ ತಿನ್ನಲಾರನು. ಅಶುಭಫಲವನ್ನು ತಿನ್ನದ ಕಾರಣ ಶ್ರುತಿಯು 'ಅನಶ್ನನ್' ಎಂದು ಹೇಳುತ್ತಿದೆ.

ಅಥವಾ ಪೂರ್ಣಾನಂದಸ್ವರೂಪಿಯಾದ ಭಗವಂತನು ಆಹಾರದಿಂದ ಉಪಜೀವನ ಮಾಡಲಾರ. ಆಹಾರವನ್ನು ತಿನ್ನುವುದರಿಂದ ಅವನಲ್ಲಿ ಆಧಿಕ್ಯವಾಗಲಿ ತಿನ್ನದಿರುವುದರಿಂದ ನ್ಯೂನತೆಯಾಗಲಿ ಉಂಟಾಗುವುದಿಲ್ಲ.

ಹೀಗೆ ವಿಷಯಪದಾರ್ಥಗಳ ಭೋಗದಲ್ಲಿ ರಾಗವಿಲ್ಲದ್ದರಿಂದ ಶ್ರುತಿಯು 'ಅನಶ್ನನ್' ಎಂದು ಹೇಳುತ್ತಿದೆ. ವಿಚಾರ ಮಾಡಿದರೆ 'ಋತಂ ಪಿಬಂತೌ' ಎಂಬ ಶ್ರುತಿಯು ಜೀವನ ಭೋಕ್ತೃತ್ವಕ್ಕೆ ಮಾರಕವಾಗಿದೆ. ಏಕೆಂದರೆ 'ಋತ' ಶಬ್ದಕ್ಕೆ ಪುಣ್ಯಫಲವೆಂದರ್ಥ. ಜೀವನು ಪಾಪದ ಫಲವನ್ನೂ ಸಹ ಉಣ್ಣುವುದರಿಂದ ಕೇವಲ ಪುಣ್ಯದ ಫಲವನ್ನು ತಿನ್ನಲು ಆವನಿಗೆ ಸಾಮರ್ಥ್ಯವಿಲ್ಲ. ಇಂತಹ ಜೀವನನ್ನು 'ಋತಂ ಪಿಬಂತೌ' ಎಂಬ ಶ್ರುತಿಯು ಪ್ರತಿಪಾದಿಸಲು ಹೇಗೆ ಸಾಧ್ಯ ? ಈ ಎಲ್ಲ ಕಾರಣಗಳಿಂದ 'ಋತಂ ಪಿಬಂತೌ' ಎಂಬ ಶ್ರುತಿಯಿಂದ ಪರಮಾತ್ಮನೇ ಪ್ರತಿಪಾದ್ಯನೆಂಬ ವಿಚಾರವು ಮನದಟ್ಟಾಗುತ್ತದೆ.

ದ್ವಿವಚನವೂ ಸಹ ಬಾಧಕವಲ್ಲ

ಭೋಕ್ತೃತ್ವವು ಈಶ್ವರನಲ್ಲಿರುವುದರಿಂದ ಅಭೋಕ್ತೃತ್ವವು ಬಾಧಕವಾಗುವುದಿಲ್ಲವೆಂದು ಸಮರ್ಥಿಸಿದ್ದಾಯಿತು. ಆದರಂತೆ ದ್ವಿವಚನವೂ ಸಹ ಬಾಧಕವಾಗುವುದಿಲ್ಲ. ಏಕೆಂದರೆ ಪೂರ್ವಮೀಮಾಂಸೆಯಲ್ಲಿ ಅನೇಕ ಹೆಂಡಂದಿರಿರುವ ಯಾಗದಲ್ಲಿಯೂ 'ಪತ್ನೀಂ ಸನ್ಯಹ್ಯ'' ಎಂಬುದಾಗಿ ಏಕವಚನದಲ್ಲಿಯೇ ಪ್ರಯೋಗಿಸಿರುವುದು ಕಂಡಿದೆ. ಮತ್ತು 'ಅದಿತಿಃ ಪಾಶಾನ್' ಎಂಬುದಾಗಿ ಒಂದೇ ಹಗ್ಗವಿರುವ ಯಾಗದಲ್ಲಿ ಬಹುವಚನ ಪ್ರಯೋಗ ಮಾಡುವುದು ಕಂಡಿದೆ. ಆದರಂತೆ ಒಬ್ಬನೇ ಈಶ್ವರನಲ್ಲಿ 'ಪಿಬಂತೌ' ಎಂಬುದಾಗಿ ದ್ವಿವಚನ ಪ್ರಯೋಗವನ್ನು ಮಾಡಬಹುದು.

ಪ್ರಾತಿಪದಿಕಾರ್ಥವಾದ ಸಂಖ್ಯೆಗೆ ಅನ್ವಯ ಮಾಡಬಹುದು

'ದ್ವಯೋಃ ಯಜಮಾನಯೋಃ ಪ್ರತಿಪದಮ್ ಕುರ್ಯಾತ್' ಎಂಬುದು ಕರ್ಮಮೀಮಾಂಸೆಯ ಸೂತ್ರ. ಯಾವ ಜ್ಯೋತಿಷ್ಟೋಮಯಾಗದಲ್ಲಿ 'ಯುವಂ ಹಿ ಸ್ಥಃ ಸ್ವರ್ಪತಿ' ಎಂಬ ಮಂತ್ರವನ್ನು ಮೊದಲು ಉಚ್ಚರಿಸಬೇಕೆಂದು ಹೇಳುತ್ತಿದ್ದಾರೋ ಆ ಜ್ಯೋತಿಷ್ಟೋಮಯಾಗದಲ್ಲಿ ಇಬ್ಬರು ಯಜಮಾನರಿಗೆ ಅವಕಾಶವೇ ಇರುವುದಿಲ್ಲ. ಆದರೆ 'ದ್ವಯೋಃ ಯಜಮಾನಯೋಃ' ಎಂಬ ಇಬ್ಬರು ಯಜಮಾನರನ್ನು ಕರ್ತೃವನ್ನಾಗಿ ಸೂತ್ರವು ಹೇಳುತ್ತಿದೆ. ಆದ್ದರಿಂದ ಅನಿವಾರ್ಯವಾಗಿ ಮತ್ತೊಂದು ಯಾಗದಲ್ಲಿ ಇದರ ಸಾರ್ಥಕ್ಯವನ್ನು ಸಂಪಾದಿಸಬೇಕು. ಆದರೆ 'ಋತಂ ಪಿಬಂತೌ' ಎಂಬಲ್ಲಿ ಮತ್ತೊಂದೆಡೆ ದ್ವಿತ್ವದ ಅನ್ವಯ ಮಾಡುವ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಇಬ್ಬರು ಯಜಮಾನರು ಜ್ಯೋತಿಷ್ಟೋಮ ಯಾಗದಲ್ಲಿ ಇರಲು ಸಾಧ್ಯವಿಲ್ಲ. ಆದ್ದರಿಂದ 'ದ್ವಿತ್ವ' ಸಂಖ್ಯೆಗೆ ಅನ್ವಯ ಮಾಡಲು ಅಲ್ಲಿ ಅವಕಾಶವಿಲ್ಲ. ಆದರೆ 'ಋತಂ ಪಿಬಂತೌ' ಎಂಬಲ್ಲಿ ಬ್ರಹ್ಮನ ಎರಡು ರೂಪಗಳಲ್ಲಿ ಅನ್ವಯ ಮಾಡಬಹುದಾದ್ದರಿಂದ ದೋಷವಿಲ್ಲ.

ನಿರ್ಜ್ಞಾತ ವಿರುದ್ಧವಿಶೇಷಣತ್ವವೇ ಅವಿವಕ್ಷೆಗೆ ಪ್ರಯೋಜಕ

ಪೂರ್ವಮೀಮಾಂಸೆಯಲ್ಲಿ 'ಪ್ರೋದ್ಗಾತ್ರ್ಹಣಾಂ' ಎಂಬ ಶ್ರುತಿಯನ್ನು ವ್ಯಾಖ್ಯಾನಿಸುವಾಗ ಬಹುವಚನದ ಅರ್ಥವನ್ನು ಬಿಡಬಾರದೆಂದು ವಿವಕ್ಷಿಸಿ 'ಉದ್ಗಾತೃ' ಶಬ್ದಕ್ಕೆ ಹೋತೃ ಪ್ರಸ್ತೋತ್ರಾದಿಗಳಲ್ಲಿ ಲಕ್ಷಣಾ ಮಾಡುವುದು ಕಂಡಿದೆ. ಆದರಂತೆ 'ಋತಂ ಪಿಬಂತೌ' ಎಂಬಲ್ಲಿಯೂ ದ್ವಿವಚನದಿಂದ ತಿಳಿಯುವ ದ್ವಿತ್ವವನ್ನು ಕೂಡಿಸುವುದಕ್ಕಾಗಿ 'ಪಿಬತ್' ಪ್ರಾತಿಪದಿಕಕ್ಕೆ ಲಕ್ಷಣಾ ಮಾಡಬಹುದಲ್ಲವೇ ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ.

ಆದರೆ 'ಉದ್ಗಾತೃ' ಶಬ್ದವಿರುವ ಪ್ರಕರಣದಲ್ಲಿಯೇ ಪ್ರಸ್ತೋತ್ರಾದಿಗಳು ಪ್ರಸ್ತುತರಾದ್ದರಿಂದ ಅವರಲ್ಲಿ ಲಕ್ಷಣಾವನ್ನು ಮಾಡಬಹುದು. ಮತ್ತು 'ಉದ್ಗಾತೃ' ಶಬ್ದಕ್ಕೆ ಸಾಮಗಾನ ಮಾಡುವವರು ಎಂದರ್ಥ. ಪ್ರಸ್ತೋತ್ರಾದಿಗಳೂ

ಸಹ ಸಾಮವೇದವನ್ನು ಅಧ್ಯಯನ ಮಾಡಿರುವ ಪ್ರಯುಕ್ತ ಅವರಲ್ಲಿ ಲಕ್ಷಣಾ ಮಾಡಬಹುದು. ಆದರೆ 'ಪಿಬತ್' ಪ್ರಾತಿಪದಿಕಕ್ಕೆ ಜೀವನಲ್ಲಿ ಲಕ್ಷಣಾ ಮಾಡಲು ಸಾಧ್ಯವಿಲ್ಲ. ಏಕೆಂದರೆ ಬ್ರಹ್ಮಪ್ರಕರಣವಾಗಿರುವುದರಿಂದ ಜೀವನ ಪ್ರಸಕ್ತಿಯೇ ಇರುವುದಿಲ್ಲ. ಮತ್ತು ಲಕ್ಷಣಾ ಮಾಡಲು ಉಪಯೋಗಿಯಾದ ಅಸಾಧಾರಣವಾದ ಯಾವುದೇ ಧರ್ಮಗಳೂ ಸಹ ಜೀವನಲ್ಲಿ ಇರುವುದಿಲ್ಲ. ಈ ಕಾರಣದಿಂದ ಪೂರ್ವಮೀಮಾಂಸಾದೃಷ್ಟಾಂತವು ವಿಷಮವಾಗಿದೆ.

ಮತ್ತು ಪೂರ್ವಪಕ್ಷ ಮಾಡುವಾಗ ಉದ್ದೇಶವಿಶೇಷಣವು ಅವಿವಕ್ಷಿತವಾಗಿರುತ್ತದೆ. ವಿಧೇಯವಿಶೇಷಣವು ವಿವಕ್ಷಿತವಾಗಿರುತ್ತದೆಂದು ಹೇಳಿದ್ದರು. ಇದೂ ಸಹ ತಪ್ಪು. 'ಆಗ್ನೀನಾದಧೀತ' ಎಂಬಲ್ಲಿ ಉದ್ದೇಶವಿಶೇಷಣವನ್ನೂ ಸಹ ಪೂರ್ವಮೀಮಾಂಸಕರು ವಿವಕ್ಷಿಸಿದ್ದಾರೆ. 'ಸತ್ರಾದುದವಸಾಯ ಪೃಷ್ಠಶಮನೀಯೇನ ಯಜರೇನ್' ಎಂಬಲ್ಲಿ ಹೃದಯವಿಶೇಷಣವನ್ನು ಅವಿವಕ್ಷಿತವೆಂದಿದ್ದಾರೆ. ಆದ್ದರಿಂದ ನಿರ್ಜ್ಞಾತವಿರುದ್ಧವಿಶೇಷಣವಾಗಿದ್ದನ್ನೇ ಅವಿವಕ್ಷಿತವೆಂದು ಹೇಳಬೇಕು. ಅಂದರೆ ವಿರುದ್ಧವಾದ ಸಂಖ್ಯೆಯು ಮೊದಲೇ ತಿಳಿದಿದ್ದರೆ ಅವಿವಕ್ಷಿತವಾಗುತ್ತದೆಂದು ಅಭಿಪ್ರಾಯ. 'ಗುಹಾಂ ಪ್ರವಿಷ್ಟೌ' ಎಂಬಲ್ಲಿ ದ್ವಿತ್ವಸಂಖ್ಯೆಯು ತಿಳಿಯುವ ಮೊದಲೇ ಬ್ರಹ್ಮನಲ್ಲಿ ಏಕತ್ವ ಸಂಖ್ಯೆಯು ನಿರ್ಣೀತವಾಗಿದೆ. ಆದ್ದರಿಂದ 'ಗುಹಾಂ ಪ್ರವಿಷ್ಟೌ' ಎಂಬಲ್ಲಿ ದ್ವಿವಚನದಿಂದ ತಿಳಿಯುವ ದ್ವಿತ್ವಸಂಖ್ಯೆಯನ್ನು ವಿವಕ್ಷಿಸಬಾರದು.

ಮೊದಲು ನಿರ್ಣೀತವಾದದ್ದನ್ನು ಎಂದೂ ಬಿಡಬಾರದು

ಪೂರ್ವಮೀಮಾಂಸೆಯಲ್ಲಿ 'ಏಕಾದಶಪ್ರಯಾಜಂ ಯಜತೇ' ಎಂಬಲ್ಲಿ ಮೊದಲೇ ಪ್ರಾಪ್ತವಾದ ಪಂಚತ್ವ ಸಂಖ್ಯೆಯನ್ನು ಆವೃತ್ತಿ ಮಾಡಿಯೇ ಏಕಾದಶತ್ವ ಸಂಖ್ಯೆಯನ್ನು ಕೂಡಿಸಿದ್ದಾರೆ. ಅದರಂತೆ 'ಯಸ್ಯ ಬ್ರಹ್ಮ ಚ ಕ್ಷತ್ರಂ ಚ' ಎಂಬುದರಿಂದ ಮೊದಲೇ ನಿರ್ಣೀತವಾದ ಏಕತ್ವಸಂಖ್ಯೆಯನ್ನೇ 'ಋತಂ ಪಿಬಂತೌ' ಎಂಬಲ್ಲಿಯೂ ಬಿಡಬಾರದೆಂದು ತಿಳಿಯಬೇಕು.

ಒಬ್ಬನೇ ಪರಮಾತ್ಮನಲ್ಲಿ ದ್ವಿತ್ವಾದಿ ಸಂಖ್ಯೆಗಳಿವೆ

ಇಲ್ಲಿಯ ತನಕ ಮಾಡಿದ್ದೆಲ್ಲವೂ ಪ್ರೌಢಿವಾದ. ನಿಜವಾದ ಸಿದ್ಧಾಂತದ ಪ್ರಮೇಯವೇನೆಂದರೆ ಒಬ್ಬನೇ ಬ್ರಹ್ಮನಲ್ಲಿ ದ್ವಿತ್ವಾದಿ ಸಂಖ್ಯೆಗಳನ್ನು ಹೇಳಬಹುದು. ಸಂಬಂಧ ಭೇದ ಮೊದಲಾದವು ಅನೇಕ ಪದಾರ್ಥಗಳಲ್ಲಿರುವುದೆಂದು ಲೋಕಸಿದ್ಧವಾದ ವಿಚಾರ. ಆದರೆ 'ಪ್ರಮೇಯತ್ವಂ ಪ್ರಮೇಯಂ' 'ಆನಂದಂ ಬ್ರಹ್ಮಣಃ' ಇತ್ಯಾದಿ ಸ್ಥಳಗಳಲ್ಲಿ ತನ್ನಲ್ಲಿಯೇ ಇರುವುದು ಕಂಡಿದೆ. 'ಭೇದೋ ಭಿನ್ನಃ' ಎಂಬಲ್ಲಿ ಭೇದವು ತನ್ನಲ್ಲೇ ಇರುವುದು ಕಂಡಿದೆ. ಅದರಂತೆ ದ್ವಿತ್ವವಿದ್ದಲ್ಲಿ ಏಕತ್ವವು ವಿರುದ್ಧವೆಂಬುದು ಲೋಕಸಿದ್ಧವಿಚಾರ. ಆದರೆ ಸಂಬಂಧಾದಿಗಳಂತೆ ಏಕತ್ವವಿದ್ದಲ್ಲಿ ದ್ವಿತ್ವ ಏಕೆ ಇರಬಾರದು?. ಒಬ್ಬನೇ ಬ್ರಹ್ಮನಲ್ಲಿ ಏಕತ್ವ, ದ್ವಿತ್ವ, ಬಹುತ್ವಾದಿ ಸಂಖ್ಯೆಗಳನ್ನು ಉಪಪಾದಿಸಲು ಏನೂ ಆತಂಕಗಳಿಲ್ಲವೆನ್ನಲು ಅನೇಕ ಶ್ರುತಿ ಸ್ಮೃತಿಗಳು ಆಧಾರವಾಗಿವೆ.

'ನೇಹ ನಾನಾ' ಎಂಬ ಶ್ರುತಿಯು ಗುಣಕರ್ಮಾದಿಗಳಿಂದ ಬ್ರಹ್ಮನಲ್ಲಿ ಭೇದವಿಲ್ಲವೆಂದು ಸಮರ್ಥಿಸುತ್ತಿದೆ, ಹೊರತು ಭೇದವನ್ನೇ ಇಲ್ಲವೆಂದು ಹೇಳುತ್ತಿಲ್ಲ. ಆದ್ದರಿಂದ 'ಅಯಂ ವೈ ಹರಯಃ' ಇತ್ಯಾದಿ ಶ್ರುತಿಗಳ ಆಧಾರದಂತೆ ಅನೇಕತ್ವ ಸಂಖ್ಯೆಯನ್ನು ಪರಮಾತ್ಮನಲ್ಲಿ ಹೇಳುವುದು ತಪ್ಪಲ್ಲ. ಏಕತ್ವ ಮತ್ತು ಅನೇಕತ್ವಗಳಿಗೆ ವಿರೋಧ ಬಂದರೆ ಭೇದಪ್ರತಿನಿಧಿಯಾಗಿರುವ ವಿಶೇಷವು ಅದನ್ನು ಪರಿಹರಿಸುತ್ತದೆ.

ದೃಷ್ಟಾಂತಪುರಸ್ಸರವಾಗಿ ಬ್ರಹ್ಮನಲ್ಲಿ ದ್ವಿತ್ವ ಏಕತ್ವಗಳ ಸಮರ್ಥನೆ

ಒಬ್ಬನೇ ಬ್ರಹ್ಮನಲ್ಲಿ ದ್ವಿತ್ವ ಬಹುತ್ವಾದಿಗಳನ್ನು ಹೇಳುವುದು ಅದ್ವೈತಿಗಳಿಗೂ ಅನಿವಾರ್ಯ. ಬ್ರಹ್ಮನಲ್ಲಿರುವ ಆನಂದವು ಸ್ಫುರಣವಾಗುತ್ತದೆಂದರೆ ಆನಂದಾತ್ಮಕ ಹಾಗೂ ಜ್ಞಾನಾತ್ಮಕತ್ವಗಳನ್ನು ಒಪ್ಪದಂತಾಯಿತು.

ಉಭಯಸ್ವರೂಪನಾದ ಬ್ರಹ್ಮನನ್ನು ಒಬ್ಬನೇ ಎಂದು ಹೇಳಿದಾಗ ಏಕತ್ವ ದ್ವಿತ್ವವನ್ನು ಆದ್ವೈತಿಗಳೂ ಸಹ ಒಪ್ಪಿದಂತಾಯಿತು. ಪೂರ್ವಮೀಮಾಂಸಕರೂ ಸಹ ಅಗ್ನಿಷೋಮರಲ್ಲಿ ಪ್ರಯೋಗಿಸಿದ ಏಕವಚನವನ್ನು ನಿರ್ವಹಿಸುವುದಕ್ಕಾಗಿ ದೇವತಾತ್ವ ಧರ್ಮದಿಂದ ವಕ್ಯವನ್ನು ಹೇಳುತ್ತಾರೆ. ದ್ವಿವಚನವನ್ನು ನಿರ್ವಹಿಸುವುದಕ್ಕಾಗಿ ಅಧಿಷ್ಠಾನ ರೂಪದಿಂದ ದ್ವಿತ್ವವನ್ನು ಹೇಳುತ್ತಾರೆ. ಹೀಗೆ ದ್ವಿತ್ವ ಏಕತ್ವಗಳ ಸಮುಚ್ಚಯವು ಪೂರ್ವಮೀಮಾಂಸಕರಿಗೂ ಸಹ ಸಮ್ಮತವಾಗಿದೆ. ಆದರಂತೆ ಬ್ರಹ್ಮನಲ್ಲಿ ಸ್ವರೂಪತಃ ಏಕ್ಯವಿದ್ದರೂ ರೂಪವಿಶೇಷದಿಂದ ದ್ವಿತ್ವವನ್ನು ಹೇಳಬಹುದು. ಬ್ರಹ್ಮನಲ್ಲಿರುವ ಈ ದ್ವಿತ್ವೈಕತ್ವಗಳ ಸಮುಚ್ಚಯ ವಿಷಯದಲ್ಲಿ ''ಏಕಂ ರೂಪಂ ಬಹುಧಾ ಯಃ ಕರೋತಿ'' ಇತ್ಯಾದಿ ಶ್ರುತಿ ಸ್ಮೃತಿಗಳ ಆಧಾರವೂ ಇರುತ್ತದೆ.

ನ ಸಂಖ್ಯೋಪಸಂಗ್ರಹಾಧಿಕರಣದಿಂದ ಪುನರುಕ್ತಿ ಬರುವುದಿಲ್ಲ

ಈ ಅಧಿಕರಣದಲ್ಲಿ ಭಗವಂತನಲ್ಲಿ ಅನೇಕತ್ವಸಂಖ್ಯೆಯು ಅನುಪಪನ್ನವಾಗುತ್ತದೆಂಬ ಆಕ್ಷೇಪವನ್ನು ಪರಿಹರಿಸಲಾಗಿದೆ. ಆದರೆ ಚತುರ್ಥಪಾದದಲ್ಲಿರುವ 'ನ ಸಂಖ್ಯೋಪಸಂಗ್ರಹಾಧಿಕರಣ'ದಲ್ಲಿಯೂ ಸಹ ಅನೇಕತ್ವವು ಬರುವುದಿಲ್ಲವೆಂಬ ಅನುಪಪತ್ತಿಯನ್ನೇ ಪರಿಹರಿಸಲಾಗಿದೆ. ಆದ್ದರಿಂದ ಒಂದೇ ವಿಚಾರವನ್ನು ಎರಡು ಅಧಿಕರಣದಲ್ಲಿ ಹೇಳಿದಂತಾಗುವುದರಿಂದ ಪುನರುಕ್ತಿ ಬರುತ್ತದಲ್ಲವೆ ? ಎಂಬ ಪ್ರಶ್ನೆಯು ಸಹಜವಾಗಿ ಬರುತ್ತದೆ. ಆದರೆ ಈ ಪ್ರಶ್ನೆಗೆ ಗ್ರಂಥಕಾರರು ಅನೇಕ ಬಗೆಯಲ್ಲಿ ಸಮಾಧಾನವನ್ನು ನೀಡಿದ್ದಾರೆ. ನ ಸಂಖ್ಯೋಪಸಂಗ್ರಹಾಧಿಕರಣದಲ್ಲಿ ಆಧಾರಾಧೇಯಭಾವವು ಒಬ್ಬನೇ ಭಗವಂತನಲ್ಲಿ ಬರಲಾರದೆಂದು ಪೂರ್ವಪಕ್ಷ ಮಾಡಿದ್ದಾರೆ ಹೊರತು, ಅನೇಕತ್ವ ಸಂಖ್ಯೆಯು ಬರುವುದಿಲ್ಲವೆಂದು ಪೂರ್ವಪಕ್ಷ ಮಾಡಿರುವುದಿಲ್ಲ. ಆದ್ದರಿಂದ ಪುನರುಕ್ತಿಗೆ ಅವಕಾಶವಿಲ್ಲವೆಂಬುದು ಮೊದಲನೆಯ ಸಮಾಧಾನ.

ಅಥವಾ ಅನೇಕತ್ವಸಂಖ್ಯೆಯ ಅನುಪಪತ್ತಿಯನ್ನೇ ನ ಸಂಖೋಪಸಂಗ್ರಹಾಧಿಕರಣದಲ್ಲಿ ಪರಿಹರಿಸಿಕೊಳ್ಳುತ್ತಾರೆಂದು ಇಟ್ಟುಕೊಳ್ಳೋಣ, ಆವಾಗ ಈ ಗುಹಾಧಿಕರಣದಲ್ಲಿ ಕರ್ಮಬಂಧರಹಿತನಾದ ಭಗವಂತನಿಗೆ ಭೋಕ್ತೃತ್ವವನ್ನಷ್ಟೇ ಸಮರ್ಥಿಸಲಾಗಿದೆ ಎಂದು ವಿವಕ್ಷಿಸಬೇಕು. ಈ ಕಾರಣದಿಂದಲೂ ಪುನರುಕ್ತಿ ಬರುವುದಿಲ್ಲವೆಂಬುದು ಮತ್ತೊಂದು ಬಗೆಯ ಸಮಾಧಾನ.

ವಿಷ್ಣುಪರವೆನ್ನಲು ಛಾಯಾತಪ ಶಬ್ದವೆನ್ನಲು ಬಾಧಕವಲ್ಲ

ಹಿಂದೆ 'ಋತಂ ಪಿಬಂತೌ' ಎಂಬ ಶ್ರುತಿಯು ಪರಮಾತ್ಮಪರವೆನ್ನಲು ದ್ವಿವಚನಶ್ರುತಿಯು ಬಾಧಕವಾಗುವುದಿಲ್ಲವೆಂದು ಹೇಳಿದ್ದರು. ಈಗ ಛಾಯಾತಪಶಬ್ದಗಳೂ ಸಹ ಬಾಧಕವಲ್ಲವೆಂದು ಹೇಳುತ್ತಿದ್ದಾರೆ. ಹೃದಯಗುಹೆಯಲ್ಲಿ ನೆಲೆಸಿರುವ ಪರಮಾತ್ಮನು ಜ್ಞಾನಿಗಳಿಗೆ ಸುಖಪ್ರದನಾದ್ದರಿಂದ 'ಛಾಯಾ' ಎನಿಸಿದ್ದಾನೆ. ಅಜ್ಞಾನಿಗಳಿಗೆ ದುಃಖಪ್ರದನಾದ್ದರಿಂದ ಆತಪನೆನಿಸಿದ್ದಾನೆ.

ಸೂತ್ರದಲ್ಲಿ 'ಋತಂ ಪಿಬಂತೌ' ಎಂದು ಹೇಳಬಹುದಿತ್ತಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಗುಹಾಪ್ರವಿಷ್ಟತ್ವವೆಂಬ ಲಿಂಗವನ್ನು ಹೇಳುವುದಕ್ಕಾಗಿ 'ಗುಹಾಂ ಪ್ರವಿಷ್ಟೌ' ಎಂದೇ ಹೇಳಿದ್ದಾರೆ.

ಮೊದಲು 'ಋತಂ ಪಿಬಂತೌ' ಎಂಬ ವಾಕ್ಯವಿರುವುದರಿಂದ ಅದನ್ನು ವ್ಯಾಖ್ಯಾನಿಸುವ 'ಗುಹಾಂ ಪ್ರವಿಷ್ಟೌ' ಎಂಬ ಸೂತ್ರವನ್ನು ಮೊದಲು ಹೇಳಿದ್ದಾರೆ. 'ಯಸ್ತೇತುಃ' ಎಂಬ ಶ್ರುತಿಯು ಅನಂತರ ಇರುವುದರಿಂದ

'ವಿಶೇಷಣಾಚ್ಚ' ಎಂಬ ಸೂತ್ರವನ್ನು ಅನಂತರ ಹೇಳಿದ್ದಾರೆ. ವಸ್ತುತಃ ಶ್ರುತಿಯೆಂಬ ಸಾಧಕಪ್ರಮಾಣವನ್ನು ಹೇಳುವ ಕಾರಣ 'ವಿಶೇಷಣಾಚ್ಚ' ಎಂಬ ಸೂತ್ರವು ಮೊದಲು ಬರಬೇಕು. ಆದರೆ ಆ ಸಾಧಕವು ವಿಷಯವಾಕ್ಯದಲ್ಲಿಲ್ಲದ ಕಾರಣ ವಿಷಯವಾಕ್ಯಕ್ಕೆ ಅನುಗುಣವಾಗಿಯೇ ಮಾಡಿದ ಸೂತ್ರದ ಕ್ರಮವು ಸ್ವರಸವಾಗಿದೆ.

ಶಂಕರಭಾಷ್ಯದಲ್ಲಿ ಗುಹಾಧಿಕರಣ

ಅದ್ವೈತಿಗಳು ಗುಹಾಧಿಕರಣವನ್ನು ಹೀಗೆ ರಚಿಸಿದ್ದಾರೆ -

ಪೂರ್ವಪಕ್ಷ - ಕಾಠಕೋಪನಿಷತ್ತಿನಲ್ಲಿ 'ಋತಂ ಪಿಬಂತೌ' ಎಂಬ ಶ್ರುತಿಯು ಕೇಳಿಸುತ್ತಿದೆ. ಈ ಶ್ರುತಿಯು ಜೀವ ಹಾಗೂ ಬುದ್ಧಿತತ್ವವನ್ನು ಪ್ರತಿಪಾದಿಸುತ್ತಿದೆಯೋ? ಅಥವಾ ಜೀವಬ್ರಹ್ಮರನ್ನು ಪ್ರತಿಪಾದಿಸುತ್ತಿದೆಯೋ ? ಎಂದು ಸಂಶಯ.

ಜೀವ ಹಾಗೂ ಬುದ್ಧಿತತ್ವಗಳೇ ಪ್ರತಿಪಾದ್ಯರೆಂದು ಪೂರ್ವಪಕ್ಷ. ಏಕೆಂದರೆ ಭೋಗವು ಜೀವನಿಗೆ ಮಾತ್ರವಿದ್ದರೂ ಸಹ ಛತ್ರಿನ್ಯಾಯದಿಂದ ಬುದ್ಧಿಯಲ್ಲೂ ಸಹ ಕರ್ತೃತ್ವವು ಪ್ರಾಪ್ತವಾಗುತ್ತದೆ. ವ್ಯಾಪ್ತನಾದ ಬ್ರಹ್ಮನನ್ನು ಸಂಕುಚಿತವಾದ ಹೃದಯಪ್ರದೇಶದಲ್ಲಿ ಇರಲು ಸಾಧ್ಯವಿರದ ಕಾರಣ 'ಗುಹಾಪ್ರವಿಷ್ಟೌ' ಎಂಬಲ್ಲಿರುವ ವಿಶೇಷಣವು ಬ್ರಹ್ಮನಲ್ಲಿ ಬರುವುದಿಲ್ಲ. ಮತ್ತು 'ಛಾಯಾತಪೌ' ಎಂಬಲ್ಲಿ ಹೇಳಲ್ಪಟ್ಟ ನೆರಳು ಹಾಗೂ ಬೆಳಕುಗಳು ಬುದ್ಧಿಜೀವರಲ್ಲಿ ಬರುತ್ತದೇ ಹೊರತು ಜೀವೇಶ್ವರರಲ್ಲಿ ಬರುವುದಿಲ್ಲ. ಆದ್ದರಿಂದ ಈ ಶ್ರುತಿಯಿಂದ ಪ್ರತಿಪಾದ್ಯರಾದವರು ಬುದ್ಧಿತತ್ವ ಹಾಗೂ ಜೀವರೆಂದೇ ಹೇಳಬೇಕು.

ಸಿದ್ಧಾಂತ - ಈ ಎತ್ತಿಗೆ ಸರಿಯಾದ ಜೊತೆಯನ್ನು ಹುಡುಕಬೇಕು ಎಂದು ಹೇಳಿದಾಗ, ಮತ್ತೊಂದು ಎತ್ತನ್ನು ಹುಡುಕಬೇಕೆಂದೇ ತಿಳಿಯುತ್ತಾರೆಯೇ ಹೊರತು ಕುದುರೆಯನ್ನು ಹುಡುಕಬೇಕೆಂದು ಯಾರೂ ತಿಳಿಯುವುದಿಲ್ಲ. ಅದರಂತೆ 'ಪಿಬಂತೌ' ಎಂಬಲ್ಲಿ ಒಬ್ಬನಂತೂ ಚೇತನನೆಂದು ನಿಶ್ಚಿತನಾಗಿದ್ದಾನೆ. ಅವನಿಗೆ ಸರಿಯಾದ ಮತ್ತೊಬ್ಬನೆಂದರೆ ಚೇತನನೇ ಆಗಬೇಕು. ಆದ್ದರಿಂದಲೇ ಸೂತ್ರಕಾರರು 'ಆತ್ಮಾನೌ' ಎಂದಿದ್ದಾರೆ. ಆತ್ಮನನ್ನು ಬಿಟ್ಟು ಅನಾತ್ಮವಾದ ಬುದ್ಧಿಯನ್ನು ವಿವಕ್ಷಿಸುವುದು ತಪ್ಪಾಗುತ್ತದೆ. ಇದರಂತೆ ವ್ಯಾಪ್ತನಾದ ಪರಮಾತ್ಮನು ಸರ್ವಗತನಾಗಿದ್ದರೂ ಸಹ ಹೃದಯಗುಹಾದಲ್ಲಿಯೂ ಇರುತ್ತಾನೆಂದು ಪ್ರಮಾಣಸಿದ್ಧವಾಗಿದೆ. ಆದರಂತೆ ಜೀವನು ಸಂಸಾರಿಯಾಗಿ ಪರಬ್ರಹ್ಮನು ಸಂಸಾರಿಯಾಗದ ಕಾರಣ ವಿರುದ್ಧಸ್ವಭಾವವನ್ನು ಹೊಂದಿದ್ದಾನೆ. ಆದ್ದರಿಂದಲೇ ಶ್ರುತಿಯು ಜೀವಬ್ರಹ್ಮರನ್ನು ಛಾಯಾತಪರೆಂದು ಕರೆದಿದೆ. ವಾಸ್ತವಿಕವಾಗಿ ಬ್ರಹ್ಮನು ಭೋಕ್ತೃವಾಗದಿದ್ದರೂ ಛತ್ರಿನ್ಯಾಯದಿಂದ ಜೀವನ ಜೊತೆಗೆ 'ಪಿಬಂತೌ' ಎಂಬ ವಿಶೇಷಣವನ್ನು ಹೊಂದಿಸಬೇಕು.

ಅದ್ವೈತಿಗಳಿಗೆ ಮುಳ್ಳಾದ ದ್ವಿವಚನ

ಅದ್ವೈತಮತದಲ್ಲಿ ಜಡವಾದ ಬುದ್ಧಿಯಲ್ಲಿರುವ ಕರ್ತೃತ್ವ ಭೋಕ್ತೃತ್ವಗಳನ್ನು ಚೇತನನಾದ ಜೀವನಲ್ಲಿ ಆರೋಪಿಸಲಾಗುತ್ತದೆ. ಸ್ಫಟಿಕದ ಸಮೀಪದಲ್ಲಿ ಕೆಂಪಾದ ದಾಸವಾಳ ಹೂವಿದ್ದರೆ ಅದರ ಕೆಂಪು ಬಣ್ಣವು ಬಿಳಿಯಾದ ಸ್ಫಟಿಕದಲ್ಲಿ ಆರೋಪಿಸಲಾಗುತ್ತದೆ. ಅದರಂತೆ ಬುದ್ಧಿಯಲ್ಲಿರುವ ಭೋಕ್ತೃತ್ವಾದಿಗಳು ಹತ್ತಿರದಲ್ಲಿರುವ ಜೀವನಲ್ಲಿ ಆರೋಪಿಸಲಾಗುತ್ತದೆ. ಇಂತಹ ಭೋಕ್ತೃತ್ವವನ್ನು ಜೀವನ ಧರ್ಮವೆಂದು ಪರಿಗಣಿಸಿ ಚೇತನನೆಂದು ಒಬ್ಬನನ್ನು ನಿರ್ಣಯಿಸುತ್ತೇವೆಂದು ಹೇಗೆ ಹೇಳುತ್ತೀರಿ? ಹಾಗೆ ನಿರ್ಣಯಿಸಿದ್ದಲ್ಲಿ ಒಬ್ಬ ಜೀವನ ಸಾರೂಪ್ಯದಿಂದ ಮತ್ತೊಬ್ಬನನ್ನೂ ಸಹ ಚೇತನನೆಂದು ನಿರ್ಣಯಿಸಬಹುದಿತ್ತು. ಆದರೆ ಆರೋಪಿತವಾದ ಭೋಕ್ತೃತ್ವವು ಇದ್ದ ಮಾತ್ರದಿಂದ ಅವನನ್ನು 'ಪಿಬಂತೌ' ಎಂದು ಹೇಳಬಹುದಾದರೆ ದೇಹದಲ್ಲಿಯೂ ಸಹ ಆರೋಪಿತವಾದ ಆತ್ಮತ್ವವಿರುವುದರಿಂದ 'ಆತ್ಮಾ

ದ್ರಷ್ಟವ್ಯಃ' ಎಂಬಲ್ಲಿಯೂ ಆತ್ಮಪದಕ್ಕೆ ದೇಹವೆಂಬರ್ಥವನ್ನು ಹೇಳಬೇಕಾದೀತು. ಆದರೆ ಯಾರೂ ಸಹ ಲೋಕದಲ್ಲಿ ದೇಹದಲ್ಲಿ ಆತ್ಮತ್ವವು ಆರೋಪಿತವಾಗಿದೆಯೆಂದು ದೇಹವನ್ನೇ ಆತ್ಮವೆಂದು ಹೇಳಲಾರರು.

ಮತ್ತು ಭೋಕ್ತೃತ್ವಾದಿಗಳು ಚಿದಚಿತ್‌ಸಂವಲನಧರ್ಮವಾದ್ದರಿಂದ ಬುದ್ಧಿ ಹಾಗೂ ಜೀವರಲ್ಲಿ ಸಮಾನವಾಗಿದೆಯೆಂದು ನೀವು ಹೇಳಬೇಕು. ಈ ಪಕ್ಷದಲ್ಲಿ ಬುದ್ಧಿಜೀವರಲ್ಲಿರುವ ಧರ್ಮಗಳನ್ನು ಪರಸ್ಪರವಾಗಿ ಆರೋಪಿಸುವುದು ಅಯುಕ್ತವಾಗುತ್ತದೆ. ಆದ್ದರಿಂದ ಭೋಕ್ತೃತ್ವವನ್ನು ಜೀವನಲ್ಲಿ ಹೇಳಲು ಸಾಧ್ಯವಿಲ್ಲ. ಬುದ್ಧಿಯಲ್ಲಿ ಮಾತ್ರ ಹೇಳಬೇಕು. ಬುದ್ಧಿಯೇ ಪ್ರಕೃತ್ಯರ್ಥವಾಗುತ್ತದೆ. ಆವಾಗ 'ಪಿಬಂತೌ' ಎಂಬಲ್ಲಿರುವ ದ್ವಿವಚನದಿಂದ ಬುದ್ಧಿಯ ಜೊತೆಗಿರುವ ಮತ್ತೊಂದು ವಸ್ತುವನ್ನು ಯಾವುದೆಂದು ನಿಶ್ಚಯಿಸಬೇಕು. ಎರಡನೆಯ ವಸ್ತು ಜೀವನಾಗದಿದ್ದಾಗ ಬ್ರಹ್ಮನೂ ಸಹ ಆಗುವುದಿಲ್ಲ. ಆದ್ದರಿಂದ ಬುದ್ಧಿಯಲ್ಲಿ ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿಗಳು ಇರುವುದರಿಂದ ಇವೆರಡನ್ನೂ ವಿವಕ್ಷಿಸಿ ಪ್ರತ್ಯಯಾರ್ಥವೆನಿಸಿದ ದ್ವಿತ್ವವನ್ನು ಹೇಗಾದರೂ ಕೂಡಿಸಬೇಕು. ಆದ್ದರಿಂದ ಪ್ರಾಣಸಹಿತವಾದ ಬುದ್ಧಿಯೇ 'ಪಿಬಂತೌ' ಎಂಬ ಶ್ರುತಿಯಿಂದ ಪ್ರತಿಪಾದ್ಯವಾಗಿದೆಯೆಂದು ಸಿದ್ಧಾಂತ ಮಾಡುವುದೇ ಉಚಿತವಾಗಿದೆ.

ಒಂದೇ ಬುದ್ಧಿಯು ಪ್ರಾತಿಪದಿಕದಿಂದ ಪ್ರತಿಪಾದ್ಯವಾದಲ್ಲಿ ಪ್ರತ್ಯಯಾರ್ಥವಾದ ದ್ವಿತ್ವವು ಅಸ್ವರಸವಾಗುತ್ತದೆ. ಆದ್ದರಿಂದ ಪ್ರತ್ಯಯಾರ್ಥದ ಸ್ವಾರಸ್ಯವನ್ನು ನೀನು ಅಪೇಕ್ಷಿಸುವಿಯಾದರೆ ಹೀಗೂ ಸಿದ್ಧಾಂತ ಮಾಡಬಹುದು - ಆರೋಪಿತವಾದ ಭೋಕ್ತೃತ್ವದಿಂದ ಜೀವನು ಯುಕ್ತನಾಗಿದ್ದಾನೆ. ಇಂತಹ ಜೀವನಿಗೆ ಭೋಕ್ತೃತ್ವವಿರುವ ಬುದ್ಧಿಯು ಎರಡನೆಯ ಪದಾರ್ಥವಾಗಿದೆ. ಹೊರತು ಆರೋಪಿತವಾದ ಭೋಕ್ತೃತ್ವವು ಇಲ್ಲದ ಬ್ರಹ್ಮನು ಎರಡನೆಯ ಪದಾರ್ಥವಾಗಲಾರನು ಎಂದು.

'ಪಿಬಂತೌ' ಎಂಬ ಶ್ರುತಿಯಲ್ಲಿ ದ್ವಿತ್ವವು ಶಬ್ದದಿಂದ ಕೇಳಿಸುತ್ತಿದೆ. ಆದ್ದರಿಂದ ದ್ವಿತ್ವಕ್ಕೆ ಮುಖ್ಯಾರ್ಥವನ್ನೇ ಸ್ವೀಕರಿಸಬೇಕೆಂದರೆ ತಾತ್ವಿಕವಾದ ಭೇದವುಳ್ಳ ಎರಡೂ ವಸ್ತುಗಳನ್ನೇ ಸ್ವೀಕರಿಸಬೇಕು ಹೊರತು ಅತಾತ್ವಿಕವಾದ ಭೇದವುಳ್ಳ ಜೀವಬ್ರಹ್ಮರನ್ನು ಸ್ವೀಕರಿಸಲು ಸಾಧ್ಯವಿಲ್ಲ.

ಅದ್ವೈತಿಗಳ ಸಿದ್ಧಾಂತ ಕೇವಲ ಶಬ್ದದ ಕಲಹ

ಅದ್ವೈತಿಗಳು ಮಾಡಿದ ಸಿದ್ಧಾಂತದಲ್ಲಿ ಹುರುಳಿಲ್ಲ. ಈ 'ಎತ್ತಿಗೆ ಜೊತೆ ಹುಡಕಬೇಕು' ಎಂದು ಹೇಳಿದಾಗ ಮತ್ತೊಂದು ಎತ್ತು ಎಂದು ಅರ್ಥವಾಗುವಂತೆ ಜೀವನಿಗೆ ಸರಿಸಾಟಿಯಾದ ಮತ್ತೊಬ್ಬ ಚೇತನನೆಂದರೆ ಪರಬ್ರಹ್ಮನೇ ಆಗುತ್ತಾನೆಂದು ಅವರು ಸಿದ್ಧಾಂತ ಮಾಡಿದ್ದರು. ಆದರೆ ಈ ನಿಯಮವೇ ತಪ್ಪು. 'ಈ ಮುದಿ ಎತ್ತಿಗೆ ಸರಿಸಾಟಿಯಾದ ಬಲಿಷ್ಠವಾದ್ದನ್ನು ಹುಡುಕಬೇಕು' ಎಂದಾಗ ಯಾರೂ ಸಹ ಮತ್ತೊಂದು ಮುದಿ ಎತ್ತನ್ನು ಹುಡುಕುವುದಿಲ್ಲ ಹೊರತಾಗಿ, ಬಲಿಷ್ಠವಾದ ಎತ್ತನ್ನು ಹುಡುಕಬೇಕೆಂದು ತಿಳಿಯುತ್ತಾರೆ. ಆದರಂತೆ ಪ್ರಕೃತದಲ್ಲಿಯೂ 'ಋತಂ ಪಿಬಂತೌ' ಎಂಬಲ್ಲಿ ಗುಹಾಪ್ರವಿಷ್ಟತ್ವವು ಶಬ್ದದಿಂದ ಸ್ಪಷ್ಟವಾಗಿ ಕೇಳಿಸುತ್ತಿರುವಾಗ ಈ ಅರ್ಥವನ್ನು ಬಿಟ್ಟು ಆಕ್ಷೇಪಬಲದಿಂದ ತಿಳಿಯುವ ಚೇತನತ್ವದಿಂದ ಸಾಜಾತ್ಯವನ್ನು ವಿವಕ್ಷಿಸಬಾರದು.

ಮತ್ತು ಅದ್ವೈತಿಗಳು ಭೋಕ್ತೃತ್ವದಿಂದ ಚೇತನತ್ವವು ಆರ್ಥಾತ್ ಸಿದ್ಧವಾಗುತ್ತದೆಂದು ಹೇಳಿ ಚೇತನತ್ವ ಧರ್ಮದಿಂದ ಪರಮಾತ್ಮನನ್ನು ವಿವಕ್ಷಿಸುತ್ತಾರೆ. ಆದರೆ ಭೋಕ್ತೃತ್ವದಿಂದ ಚೇತನತ್ವವು ತಿಳಿಯುವಂತೆ ಪಾರತಂತ್ರ್ಯವೂ ಸಹ ಆರ್ಥಾತ್ ತಿಳಿಯುತ್ತದೆ. ಇಂತಹ ಪಾರತಂತ್ರ್ಯವೆಂಬ ಧರ್ಮದಿಂದ ಬುದ್ಧಿಯನ್ನೇಕೆ ವಿವಕ್ಷಿಸಬಾರದು?

ಬುದ್ಧಿಯು ಅಚೇತನವಾದ್ದರಿಂದ ಛಾಯಾ ಎನಿಸಿದೆ. ಜೀವನು ಚೇತನನಾದ್ದರಿಂದ ಆತಪನೆನಿಸಿದ್ದಾನೆ. ಆದ್ದರಿಂದ ಛಾಯಾತಪತ್ವದ ವಿರೋಧವೂ ಬರುವುದಿಲ್ಲ.

ವಿಚಾರ ಮಾಡಿದರೆ ಅದ್ವೈತಿಗಳ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ ಭೋಕ್ತನಾದವನು ಜೀವನೇ ಆಗಿದ್ದಾನೆ. ಬುದ್ಧಿ ಹಾಗೂ ಬ್ರಹ್ಮರಲ್ಲಿ ಛತ್ರಿನ್ಯಾಯದಿಂದ ಗೌಣವಾದ ಕರ್ತೃತ್ವವನ್ನು ಹೇಳಲಾಗಿದೆ. ಭೋಕ್ತೃತ್ವವು ಜಡವಾದ ಬುದ್ಧಿಗೂ ಇಲ್ಲ ಬ್ರಹ್ಮನಿಗೂ ಇಲ್ಲ. ಹೀಗೆ ಪ್ರಮೆಯಯದಲ್ಲಿ ಏನೂ ವ್ಯತ್ಯಾಸವಿಲ್ಲದಿದ್ದಾಗ ಇದರ ಬಗ್ಗೆ ಪೂರ್ವಪಕ್ಷ ಸಿದ್ಧಾಂತಗಳೆಂಬ ಚರ್ಚೆಯೇ ವ್ಯರ್ಥವಾಗಿದೆ.

ದ್ವಿತೀಯ ಸೂತ್ರಾರ್ಥ ನಿರಾಕರಣೆ

'ವಿಶೇಷಣಾಚ್ಚ ' ಎಂಬ ಎರಡನೆಯ ಸೂತ್ರಕ್ಕೆ ಮಾಡಿದ ಅದ್ವೈತಿಗಳ ಎರಡನೆಯ ವ್ಯಾಖ್ಯಾನವು ಅಯುಕ್ತವಾಗಿದೆ. 'ಆತ್ಮಾನಂ ರಥಿನಂ ವಿದ್ಧಿ'' ಎಂಬಲ್ಲಿ ಗಂತೃತ್ವದಿಂದ 'ಸೋऽಧ್ವನಃ ಪರಮಾಪ್ನೋತಿ' ಎಂಬಲ್ಲಿ ಗಮ್ಯತ್ವದಿಂದ ಜೀವ ಪರಮಾತ್ಮರು ವಿಶೇಷಣಭೂತರಾಗಿದ್ದಾರೆ. ಈ ಕಾರಣದಿಂದಲೂ 'ಪಿಬಂತೌ' ಎಂಬ ಶ್ರುತಿಯಿಂದ ಜೀವ ಪರಮಾತ್ಮರೇ ಪ್ರತಿಪಾದ್ಯರೆಂದು ತಿಳಿಯಬೇಕೆಂದು ಅವರ ವ್ಯಾಖ್ಯಾನ. ಆದರೆ ಜೀವ ಪರಮಾತ್ಮರು ವಿಶೇಷಣವಾಗಿರುವಂತೆ 'ಬುದ್ಧಿಂ ತು ಸಾರಥಿಂ ವಿಶೇಷಣಂ' ಎಂಬುದಾಗಿ ಸಾರಥಿಯಂತೆ ಬುದ್ಧಿಯೂ ಸಹ ವಿಶೇಷವಾಗಿದೆ. ಆದ್ದರಿಂದ ಬುದ್ಧಿತತ್ವ ಮತ್ತು ಜೀವರೇ 'ಪಿಬಂತೌ' ಎಂಬ ಶ್ರುತಿಯಿಂದ ಪ್ರತಿಪಾದ್ಯರೆಂದು ಏಕೆ ಹೇಳಬಾರದು?

ಮತ್ತು 'ಪಿಬಂತೌ' ಎಂಬ ಶ್ರುತಿಯನ್ನು ಬ್ರಹ್ಮನಲ್ಲಿ ಸಮನ್ವಯ ಮಾಡುವ ಅದ್ವೈತಿಗಳು ಜೀವನಲ್ಲಿ ಜೀವಪರತ್ವವನ್ನು ಅಲ್ಲಗಳೆಯುವುದಿಲ್ಲ. ಅನ್ಯಪರತ್ವವನ್ನು ನಿರಾಕರಣ ಮಾಡಿ ಕೇವಲ ಬ್ರಹ್ಮಪರತ್ವವನ್ನು ಒಪ್ಪಿದಾಗ ಮಾತ್ರ ಪ್ರಥಮಾಧ್ಯಾಯದಲ್ಲಿ ಸಂಗತವಾಗಲು ಸಾಧ್ಯ. ಆದರೆ ಜೀವಪರತ್ವವನ್ನು ನಿರಾಕರಣ ಮಾಡದ ಕಾರಣ ಗುಹಾಧಿಕರಣಕ್ಕೆ ಪ್ರಥಮಾಧ್ಯಾಯದಿಂದ ಸಂಗತಿಯು ದೊರೆಯುವುದಿಲ್ಲ.

ಪ್ರತಿಯೊಂದು ಅಧಿಕರಣಗಳಲ್ಲಿಯೂ ಅದ್ವೈತಿಗಳು ಜೀವಬ್ರಹ್ಮರ ಭೇದವನ್ನೇ ಒಪ್ಪುವ ಪರಿಸ್ಥಿತಿ ಬರುತ್ತಿದೆ. ಈ ಅಧಿಕರಣದಲ್ಲಿಯೂ ಬಹ್ಮನಿಗೆ ಭೋಕ್ತೃತ್ವವಿಲ್ಲ. ಜೀವನಿಗೆ ಭೋಕ್ತೃತ್ವವಿದೆ ಎಂದಾಗ ಜೀವಬ್ರಹ್ಮರ ಭೇದವೇ ಸಿದ್ಧವಾಗುತ್ತದೆ.

ರಾಮನುಜರಿಗೆ ನಾಲ್ಕು ಸೂತ್ರಗಳು ಸೇರಿ ಒಂದೇ ಅಧಿಕರಣ

ಅದ್ವೈತಿಗಳಂತೆ ರಾಮಾನುಜರೂ ಸಹ 'ಗುಹಾಪ್ರವಿಷ್ಟೌ' ಇತ್ಯಾದಿ ಸೂತ್ರಗಳನ್ನು ವ್ಯಾಖ್ಯಾನಿಸುತ್ತಾರೆ. ಆದರೆ ಹಿಂದಿನ ಅಧಿಕರಣದ ಎರಡು ಸೂತ್ರಗಳು ಈ ಅಧಿಕರಣದ ಎರಡು ಸೂತ್ರಗಳು ಸೇರಿ ಒಂದೇ ಅಧಿಕರಣವೆಂದು ರಾಮಾನುಜರು ಹೇಳುವ ಹೊಸ ವಿಚಾರ.

ಮೊದಲೆರಡು ಸೂತ್ರಗಳಿಗೆ ಕಾಠಕದ ಪ್ರಥಮಾಧ್ಯಾಯದ ಎರಡನೆಯ ವಲ್ಲಿಯಲ್ಲಿರುವ ಇಪ್ಪತ್ತನಾಲ್ಕನೆಯ ''ಯಸ್ಯ ಬ್ರಹ್ಮ ಚ ಕ್ಷತ್ರಂ ಚ'' ಎಂಬ ಮಂತ್ರವು ವಿಷಯವಾಕ್ಯ. ಮುಂದಿನ 'ಗುಹಾಂಪ್ರವಿಷ್ಟೌ' ಇತ್ಯಾದಿ ಸೂತ್ರಗಳಿಗೆ ಅದೇ ಕಾಠಕದ ಪ್ರಥಮಾಧ್ಯಾಯದಲ್ಲಿರುವ ಮೂರನೆಯ ವಲ್ಲಿಯ 'ಋತಂ ಪಿಬಂತೌ' ಎಂಬುದು ವಿಷಯವಾಕ್ಯ. ಹೀಗೆ ವಿಷಯವಾಕ್ಯಗಳು ಭಿನ್ನಭಿನ್ನವಾದ್ದರಿಂದ ಅಧಿಕರಣಗಳೂ ಸಹ ಬೇರೆ ಬೇರೆಯಾಗುತ್ತವೆಂದು ಅದ್ವೈತಿಗಳು ಹೇಳುತ್ತಾರೆ.

ಆದರೆ ಇದು ತಪ್ಪು. ಈ ಎರಡೂ ಅಧಿಕರಣಗಳು ಒಂದರ ಮುಂದೆ ಮತ್ತೊಂದು ಇವೆ. ಈ ಎರಡು ವಿಷಯವಾಕ್ಯಗಳಲ್ಲಿ ಪರಸ್ಪರ ಉಪಜೀವ್ಯಜೀವಕಭಾವವೂ ಇದೆ. ಮತ್ತು ಬೇರೆ ಪಾದವೆಂಬ ವ್ಯವಧಾನವೂ ಇಲ್ಲ. ಆದ್ದರಿಂದ 'ಋತಂ ಪಿಬಂತೌ' ಎಂಬ ಮುಂದಿರುವ ವಾಕ್ಯವು ಬುದ್ಧಿತತ್ವ ಹಾಗೂ ಜೀವರನ್ನು ಪ್ರತಿಪಾದಿಸುವುದಾದರೆ ಆದರ ಹಿಂದಿನ ''ಯಸ್ಯ ಬ್ರಹ್ಮ ಚ ಕ್ಷತ್ರಂ ಚ'' ಎಂಬ ವಾಕ್ಯವೂ ಸಹ ಜೀವನನ್ನೇ ಪ್ರತಿಪಾದಿಸಬೇಕು. 'ಮಹಾತಂ ವಿಭುಮಾತ್ಮಾನಂ' ಎಂಬ ವಾಕ್ಯವು ಬ್ರಹ್ಮಪ್ರಕರಣವೆಂದು ಹೇಳಿದರೂ ಆದು ಭಗ್ನವಾಗುತ್ತದೆ. ಒಂದು ವೇಳೆ 'ಋತಂ ಪಿಬಂತೌ' ಎಂಬ ವಾಕ್ಯವು ಜೀವಬ್ರಹ್ಮರನ್ನು ವಿಷಯೀಕರಿಸುವುದಾದರೆ 'ಯಸ್ಯ ಬ್ರಹ್ಮ ಚ ಕ್ಷತ್ರಂ ಚ' ಎಂಬ ವಾಕ್ಯವೂ ಸಹ ಜೀವಬ್ರಹ್ಮರನ್ನೇ ವಿಷಯೀಕರಿಸುತ್ತದೆ.

ಹೀಗೆ ಹಿಂದಿನ ಶ್ರುತಿ ವಾಕ್ಯವು ಮುಂದಿನ ವಾಕ್ಯದ ಅರ್ಥವನ್ನು ಉಪಜೀವಿಸಿರುವುದರಿಂದ ಪರಸ್ಪರ ಉಪಜೀವ್ಯಉಪಜೀವಕಭಾವವು ಕಾಣಿಸುತ್ತದೆ. ಆದ್ದರಿಂದ ಈ ಎರಡೂ ವಿಷಯ ವಾಕ್ಯಗಳು ಒಂದೇ ಅಧಿಕರಣಕ್ಕೆ ಸಂಬಂಧಪಡಬೇಕೆಂದು ರಾಮಾನುಜರ ವಾದ.

ರಾಮಾನುಜರ ವಿಷಯವಾಕ್ಯಗಳಿಗೆ ಉಪಜೀವ್ಯ ಉಪಜೀವಕ ಭಾವವಿಲ್ಲ

ರಾಮಾನುಜರು ಆದ್ವೈತಿಗಳಂತೆ ಕಠೋಪನಿಷತ್ತಿನಲ್ಲಿರುವ ವಾಕ್ಯಗಳನ್ನೇ ನಾಲ್ಕೂ ಸೂತ್ರಗಳ ವಿಷಯವಾಕ್ಯವೆನ್ನುತ್ತಾರೆ. ಒಂದೇ ಪ್ರಕರಣದಲ್ಲಿರುವ ವಿಷಯವಾಕ್ಯದ ಸಮನ್ವಯಕ್ಕಾಗಿ ಎರಡು ಅಧಿಕರಣವು ಅನಾವಶ್ಯಕವೆಂಬ ದೋಷವು ಆದ್ವೈತಿಗಳಿಗೆ ಬರುತ್ತದೆ ಹೊರತು ನಮಗೆ ಬರುವುದಿಲ್ಲ. ಏಕೆಂದರೆ ಹಿಂದಿನ ಅಧಿಕರಣಕ್ಕೆ ಬೃಹದಾರಣ್ಯಕವು ವಿಷಯವಾಗಿದೆ. ಈ ಅಧಿಕರಣಕ್ಕೆ 'ಋತಂ ಪಿಬಂತೌ' ಎಂಬುದು ಕಾಠಕದ ವಿಷಯವಾಗಿದೆ ಎಂಬುದು ನಮ್ಮ ಸಿದ್ಧಾಂತ.

ಈ ಅಧಿಕರಣದಲ್ಲಿ ವಿಚಾರ ಮಾಡುವ 'ಋತಂ ಪಿಬಂತೌ' ಎಂಬ ವಾಕ್ಯವನ್ನು ಉಪಜೀವಿಸಿಕೊಂಡು ಹಿಂದಿನ ಅಧಿಕರಣದ 'ಯಸ್ಯ ಬ್ರಹ್ಮ ಚ ಕ್ಷತ್ರಂ ಚ' ಎಂಬ ವಾಕ್ಯವು ಬ್ರಹ್ಮಪರವಾಗುತ್ತದೆಂಬುದು ರಾಮಾನುಜರ ವಾದ. ಆದರೆ 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯವು 'ಋತಂ ಪಿಬಂತೌ' ಎಂಬ ವಾಕ್ಯಕ್ಕಿಂತ ಮೊದಲೇ ಪ್ರಸಕ್ತವಾಗಿರುವುದರಿಂದ 'ಮಹಾಂತಂ ವಿಭುಂ' ಇತ್ಯಾದಿ ಹಿಂದಿನ ವಾಕ್ಯದ ಬಲದಿಂದ ಬ್ರಹ್ಮಪರವೆಂದು ಮೊದಲೇ ನಿರ್ಣಯವಾಗಿದೆ. ಹೀಗಿರುವಾಗ ಮುಂದಿರುವ 'ಋತಂ ಪಿಬಂತೌ' ಎಂಬ ವಾಕ್ಯದ ಬಲದಿಂದ ಬ್ರಹ್ಮಪ್ರಕರಣವಾಗುವುದಿಲ್ಲವೆಂಬ ಶಂಕೆಯೇ ತಪ್ಪಾಗುತ್ತದೆ. ಸಾನ್ನಿಧ್ಯ ಪ್ರಮಾಣದಿಂದ 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯವು ಬ್ರಹ್ಮಪ್ರಕರಣಕ್ಕೆ ವಿಚ್ಛೇದವಾಗಬಹುದಲ್ಲವೇ ಎಂಬುದು ಅವರ ಆಕ್ಷೇಪ.

ಆದರೆ ಪರಮಪ್ರಮಾಣವೆಂದು ಅವರೇ ಒಪ್ಪಿಕೊಂಡಿರುವ ಪೂರ್ವಮೀಮಾಂಸೆಯಲ್ಲಿ ಸಾನ್ನಿಧ್ಯ ಪ್ರಮಾಣಕ್ಕಿಂತ ಪ್ರಕರಣ ಪ್ರಮಾಣವು ಬಲಿಷ್ಠವೆಂದು ನಿರ್ಣಯಿಸಲಾಗಿದೆ.

ಯಾವ ಕಾರಣದಿಂದ 'ಸಾಮಿಧೇನೀ' ಪ್ರಕರಣವು 'ನಿವಿನ್ನಾಮಕ' ಮಂತ್ರಗಳಿಂದ ವಿಚ್ಛೇದವಾಗುತ್ತದೋ? ಆ ಕಾರಣದಿಂದಲೇ ಪುನಃ 'ಕಾಮ್ಯಸಾಮಿಧೇನೀ' ಮಂತ್ರಗಳಿಂದ. 'ಉಪವೀಯತೇ' ಎಂಬ ಮಂತ್ರವು ಸಂಧಾನ ಹೊಂದಲು ಸಮರ್ಥವಾಗುವುದಿಲ್ಲ. ಹೀಗೆ ಪೂರ್ವಮೀಮಾಂಸೆಯಲ್ಲಿ ನಿರ್ಣಯಿಸಿದಂತೆ ಮೊದಲೇ ಪ್ರಾಪ್ತವಾದ ಬ್ರಹ್ಮಪ್ರಕರಣಕ್ಕೆ 'ಋತಂ ಪಿಬಂತೌ' ಎಂಬ ವಾಕ್ಯವು ವಿಚ್ಛೇದಕವಾಗುವುದಿಲ್ಲ. ಆದ್ದರಿಂದ 'ಋತಂ ಪಿಬಂತೌ'

ಎಂಬ ಶ್ರುತಿಯು 'ಯಸ್ಯ ಬ್ರಹ್ಮ ಚ' ಎಂಬ ಶ್ರುತಿಗೆ ಉಪಜೀವ್ಯವಾಗಿದೆಯೆಂದು ಯಾವುದೇ ಕಾರಣದಿಂದಲೂ ಹೇಳಲಾಗದು.

ಒಂದೇ ಪ್ರಕರಣದಲ್ಲಿರುವಿಕೆಯು ವಿಕಾಧಿಕರಣ್ಯಕ್ಕೆ ತಂತ್ರವಲ್ಲ

ಇದೇ ಪಾದದಲ್ಲಿರುವ ಅದೃಶ್ಯತ್ವಾಧಿಕರಣದ ವಿಷಯವಾಕ್ಯವು ಮುಂದಿನ ಪಾದದಲ್ಲಿರುವ ದ್ಯುಭ್ವಾದ್ಯಧಿಕರಣದ ವಿಷಯವಾಕ್ಯವು 'ಮಾಂಡೋಕ್ಯೋಪನಿಷತ್' ಎಂಬ ಒಂದೇ ಪ್ರಕರಣದಲ್ಲಿದೆ. ಮತ್ತು ಆ ಎರಡು ವಿಷಯವಾಕ್ಯಗಳಿಗೆ ಪರಸ್ಪರ ಉಪಜೀವ್ಯಜೀವಕಭಾವವೂ ಸಹ ಇದೆ. ಆದರೂ ಸಹ ಸೂತ್ರಕಾರರು ಬೇರೆ ಬೇರೆ ಅಧಿಕರಣಗಳನ್ನಾಗಿ ಪರಿಗಣಿಸಿದ್ದಾರೆ. ಅದರಂತೆ ಪ್ರಕೃತದಲ್ಲಿಯೂ ವಿಷಯವಾಕ್ಯಗಳು ಒಂದೇ ಪ್ರಕರಣದಲ್ಲಿದ್ದರೂ ವಿಭಿನ್ನವಾಗಿರುವುದರಿಂದ ಅಧಿಕರಣಗಳೂ ಸಹ ಪ್ರತ್ಯೇಕವೇ ಆಗುತ್ತವೆ.

ಒಂದು ವಾಕ್ಯವೇ ಅನೇಕ ಅಧಿಕರಣಗಳಿಗೆ ವಿಷಯವಾಗಬಹುದು

ಒಂದೇ ಪ್ರಕರಣದಲ್ಲಿರುವ ವಿಷಯವಾಕ್ಯವನ್ನು ವಿಚಾರ ಮಾಡಿದರೆ ಅಥವಾ ಪರಸ್ಪರ ಆಯಾ ಎರಡು ವಾಕ್ಯಗಳಿಗೆ ಪರಸ್ಪರ ಉಪಜೀವ್ಯೋಪಜೀವಕಭಾವವಿದ್ದರೆ ಪಾದ ಅಥವಾ ಅಧಿಕರಣಗಳಿಂದ ತಡೆಯಿಲ್ಲದಿದ್ದರೆ ಅಧಿಕರಣ ಭೇದವನ್ನು ಮಾಡಬಾರದೆಂಬುದು ರಾಮಾನುಜರ ಸಮರ್ಥನೆ. ಇಲ್ಲಿಯ ತನಕ ಒಂದೇ ಪ್ರಕರಣದಲ್ಲಿರುವಿಕೆಯು ಅಧಿಕರಣ ಭೇದಕ್ಕೆ ವಿರೋಧವಲ್ಲವೆಂದು ಸಮರ್ಥಿಸಿದೆವು. ಈಗ ಪೂರ್ವಮೀಮಾಂಸೆಯ ದೃಷ್ಟಾಂತದಿಂದ ಒಂದೇ ವಾಕ್ಯವನ್ನು ಅನೇಕ ಅಧಿಕರಣದಲ್ಲಿ ವಿಚಾರ ಮಾಡುವುದೂ ಸಹ ತಪ್ಪಲ್ಲವೆಂದು ಸಮರ್ಥಿಸುತ್ತಿದ್ದಾರೆ.

ಔದುಂಬರಾಧಿಕರಣದಲ್ಲಿ 'ಔದುಂಬರೋ ಯೂಪೋ ಭವತಿ' ಎಂಬ ವಾಕ್ಯವನ್ನು ವಿಚಾರ ಮಾಡಿದಂತೆ 'ಯಸ್ಯ ಪರ್ಣಮಯಿ ಜುಹೂರ್ಭವತಿ' ಎಂಬವಾಕ್ಯವನ್ನೂ ಸಹ ವಿಚಾರಮಾಡಿದ್ದಾರೆ. ಈ ಎರಡು ವಾಕ್ಯಗಳನ್ನೇ ಪುನಃ ಪರ್ಣಮಯ್ಯಧಿಕರಣದಲ್ಲಿಯೂ ವಿಚಾರ ಮಾಡುತ್ತಾರೆ. ಈ ವಾಕ್ಯಗಳಿಗೆ ಪರಸ್ಪರ ಉಪಜೀವ್ಯೋಪಜೀವಕಭಾವವಿದೆ. ಆದರೂ ಒಂದೇ ವಾಕ್ಯಗಳನ್ನು ವಿಚಾರ ಮಾಡಲು ಎರಡು ಅಧಿಕರಣಗಳು ಅನಿವಾರ್ಯವೆಂದು ಮೀಮಾಂಸಕರು ಒಪ್ಪಿದ್ದಾರೆ. ಹೀಗಿರುವಾಗ ಒಂದು ಪ್ರಕರಣದಲ್ಲಿರುವ ಬೇರೆ ಬೇರೆ ವಾಕ್ಯಗಳನ್ನು ವಿಚಾರ ಮಾಡಲು ಎರಡು ಅಧಿಕರಣಗಳು ಹೊರಡುವುದರಲ್ಲಿ ಏನೂ ತಪ್ಪಿಲ್ಲ.

ಆದ್ದರಿಂದಲೇ ನಮ್ಮ ಸಿದ್ಧಾಂತದಲ್ಲಿ ಅಂತಿಮಪ್ರಾಣಾಧಿಕರಣ ಹಾಗೂ ಸರ್ವಗತತ್ವಾಧಿಕರಣವು ಒಂದೆ ಪ್ರಕರಣದಲ್ಲಿರುವ ಎರಡು ವಾಕ್ಯವನ್ನು ವಿಚಾರ ಮಾಡುತ್ತಿದ್ದರೂ ಅವುಗಳಿಗೆ ಪರಸ್ಪರ ಉಪಜೀವ್ಯೋಜೀವ್ಯಕಭಾವವಿದ್ದರೂ ಅಧಿಕರಣದ ಭೇದವು ತಪ್ಪಾಗುವುದಿಲ್ಲ. ಮುಂದೆಯೂ ಸಹ 'ಅನುಕೃತೇಃ' ಎಂಬ ಅಧಿಕರಣದಲ್ಲಿ ಮತ್ತು 'ಶಬ್ದಾದೇವ' ಎಂಬ ಅಧಿಕರಣದಲ್ಲಿ ಒಂದೇ ಪ್ರಕರಣದಲ್ಲಿರುವ ವಾಕ್ಯವನ್ನೇ ವಿಚಾರ ಮಾಡುವವರಿದ್ದೇವೆ.

ಪೂರ್ವಮೀಮಾಂಸಾಶಾಸ್ತ್ರದಿಂದ ಪುನರುಕ್ತಿ

''ಅತ್ತಾ ಚರಾಚರಗ್ರಹಣಾತ್'' ಎಂಬ ಸೂತ್ರಕ್ಕೆ ಸಾಧಾರಣಾಕಾರವಾದ ಗೌಣಾರ್ಥವನ್ನು ಬಿಟ್ಟು ಅಸಾಧಾರಣಾಕಾರವಾದ ಗೌಣಾರ್ಥವನ್ನು ಮಾಡಬೇಕೆನ್ನುತ್ತಾರೆ. ಈ ವಿಚಾರವನ್ನು ಪೂರ್ವಮೀಮಾಂಸಾ ಶಾಸ್ತ್ರದಲ್ಲಿ

ನಿರ್ಣಯ ಮಾಡಿದ್ದರಿಂದ ಇಲ್ಲಿ ನಿರ್ಣಯಿಸಬೇಕಾಗಿಲ್ಲ. 'ಪ್ರೋದ್ಗಾತೃಣಾಂ' ಎಂಬಲ್ಲಿ ಮತ್ತು 'ಮಾಸಮಗ್ನಿಹೋತ್ರಂ' ಎಂಬಲ್ಲಿ ಅಸಾಧಾರಣಾಕಾರವಾದ ಲಕ್ಷಣವನ್ನು ಮಾಡದೆ ಸಾಧಾರಣಾಕಾರವಾದ ಲಕ್ಷಣವನ್ನೇ ಮಾಡಬೇಕೆಂದು ಪ್ರೋದ್ಗಾತೃಧಿಕರಣದಲ್ಲಿ ಮತ್ತು ಮಾಸಾಗ್ನಿಹೋತ್ರಾಧಿಕರಣದಲ್ಲಿ ನಿರ್ಣಯಿಸಿದ್ದಾಗಿದೆ. ಪುನಃ ಇಲ್ಲಿ ಆದನ್ನೇ ಸಾಧಿಸಿದರೆ ಪುನರುಕ್ತಿ ಬರುತ್ತದೆ. ಪೂರ್ವಮೀಮಾಂಸಾಶಾಸ್ತ್ರವೂ ಸೇರಿ ಇಪ್ಪತ್ತು ಅಧ್ಯಾಯವು ಒಂದೇ ಶಾಸ್ತ್ರವೆಂದು ಹೇಳುವ ರಾಮಾನುಜರಿಗೆ ಮಾತ್ರ ಈ ದೋಷ.

ಅಂತರಾಧಿಕರಣ

ಅಕ್ಷಿವಾಕ್ಯವೇ ವಿಷಯ ಅಗ್ನಿಯೋ, ವಿಷ್ಣುವೋ ? ಎಂದು ಸಂಶಯ

ಅಂತರಾಧಿಕರಣವು ಪ್ರಾರಂಭವಾಗುತ್ತಿದೆ. ಛಾಂದೋಗ್ಯದ ನಾಲ್ಕನೆಯ ಅಧ್ಯಾಯದಲ್ಲಿ ಉಪಕೋಸಲ ವಿದ್ಯೆಯು ಪ್ರಸಕ್ತವಾಗಿದೆ. ಆ ಸಂದರ್ಭದಲ್ಲಿ ''ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚ ಏತದಮೃತಮಭಯಮೇತದ್ ಬ್ರಹ್ಮ'' ಎಂಬ ವಾಕ್ಯವು ಕೇಳಿಸುತ್ತಿದೆ. ಮೇಲ್ನೋಟಕ್ಕೆ ಅಗ್ನಿಯನ್ನು ಇದು ಪ್ರತಿಪಾದಿಸುವಂತೆ ಕಾಣಿಸುತ್ತಿದೆ. ಆದರೆ ವಿಷ್ಣುವೇ ಪ್ರತಿಪಾದ್ಯನೆಂಬುದು ಅಂತಿಮ ನಿರ್ಣಯ.

ಆದ್ದರಿಂದ ಒಂದುವೇಳೆ ವಿದ್ಯಾಭೇದವು ಅಯುಕ್ತವಾದರೆ ಆವಾಗ ''ಕಂ ಬ್ರಹ್ಮ'' ಎಂಬುದು ಆಧ್ಯಾತ್ಮವಿದ್ಯೆಯೆಂದು ''ಯ ಏಷೋಂತರಾದಿತ್ಯೇ'' ಎಂಬುದು ಆಸ್ಮದ್‌ವಿದ್ಯೆಯೆಂದು ಹೇಳಬೇಕಾಗುತ್ತದೆ. ಆವಾಗ ಆದಿತ್ಯಸ್ಥ ಪುರುಷನಲ್ಲಿ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅಗ್ನಿಪರವಾಗುವುದರಿಂದ ಬಾಧಕವಶಾತ್ ಅಗ್ನಿಯಿಂದ ಅಭಿನ್ನನಾದ ಕಣ್ಣಿನಲ್ಲಿರುವವನಲ್ಲಿ ಕೇಳಿಸಲ್ಪಟ್ಟ ಅಮೃತತ್ವಾದಿಗಳನ್ನು ಗೌಣವನ್ನಬೇಕಾಗುತ್ತದೆ. ಹೀಗೆ ಅಗ್ನಿಶ್ರುತ್ಯಾದಿಗಳ ಬಲದಿಂದ ಅಗ್ನಿಯೇ ಚಕ್ಷುರಂತಸ್ಥನಾಗಿದ್ದಾನೆಂದು ಸಿದ್ಧವಾಗುತ್ತದೆ. ಇದು ಪೂರ್ವಪಕ್ಷದ ಫಲ.

ಒಂದು ವೇಳೆ ವಿದ್ಯಾಭೇದವು ಕೂಡುವುದಾದರೆ 'ಅಹಂ' ಶಬ್ದವು ಶಾಸ್ತ್ರದ ಪ್ರಕಾರ ಬ್ರಹ್ಮಪರವಾಗುತ್ತದೆ. ಆವಾಗ ಯಾವುದೇ ಬಾಧಕವಿಲ್ಲದ ಕಾರಣ ಅಮೃತತ್ವಾದಿಗಳು ಮುಖ್ಯವೇ ಆಗುತ್ತವೆ. ಇಂತಹ ಅಮೃತತ್ವಾದಿ ಲಿಂಗಗಳ ಬಲದಿಂದ ವಿಷ್ಣುವೇ ಶ್ರುತಿಪ್ರತಿಪಾದ್ಯನಾಗುತ್ತಾನೆಂಬುದು ಸಿದ್ಧಾಂತದ ಫಲ.

ಅಕ್ಷಿ ಶಬ್ದವು ಅಭಿಮಾನಿಪರವೆಂದು ಪೂರ್ವಪಕ್ಷ

'ಯ ಏಷಃ ಅಂತರಕ್ಷಿಣಿ' ಎಂಬ ಶ್ರುತಿಯಲ್ಲಿ ಚಕ್ಷುರಂತರ್ಗತನಾದವನು ಅಗ್ನಿದೇವತೆಯೆಂದು ಪೂರ್ವಪಕ್ಷ. ಏಕೆಂದರೆ ಅಗ್ನಿಯೇ ಸ್ವತಃ ತನ್ನನ್ನು ಆದಿತ್ಯದೇವತೆಯೆಂದು ಹೇಳಿಕೊಂಡಿದ್ದಾನೆ. ಚಕ್ಷುರಭಿಮಾನಿದೇವತೆ ಹಾಗೂ ಆದಿತ್ಯ ದೇವತೆ ಒಬ್ಬನೇ ಎಂದು 'ಆದಿತ್ಯಶ್ಚಕ್ಷುರ್ಭೂತ್ವಾऽಕ್ಷಿಣಿ ಪ್ರಾವಿಶತ್' ಎಂಬ ಶ್ರುತಿಯಿಂದ ತಿಳಿಯುತ್ತದೆ.

'ಅಕ್ಷಿ' ಶಬ್ದವು ಮುಖ್ಯವಾಗಿ ಕಣ್ಣಿಗೆ ಅಭಿಮಾನಿಯಾದ ದೇವತೆಯನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತಿದ ಎಂದು ಅಭಿಮಾನ್ಯಧಿಕರಣದಿಂದ ನಿರ್ಣಯವಾಗಿದೆ. ಮತ್ತು 'ಯಶ್ಚಕ್ಷುಷಿ ತಿಷ್ಠನ್' ಎಂಬ ಮತ್ತೊಂದು ಶ್ರುತಿಯಲ್ಲಿ ಪ್ರತಿಪಾದ್ಯವಾದ 'ಚಕ್ಷುಸ್ಸೇ ಅಂತರಕ್ಷಿಣಿ ಪುರುಷಃ' ಎಂಬಲ್ಲಿರುವ ಅಕ್ಷಿಶಬ್ದದಿಂದ ವಿವಕ್ಷಿತವಾಗಿದೆ. ಆ ಶ್ರುತಿಯಲ್ಲಿ

ಹೇಳಲ್ಪಟ್ಟ 'ಚಕ್ಷುಷಃ ಯಂ ಚಕ್ಷುರ್ನ ವೇದ' ಎಂಬ ವಾಕ್ಯಶೇಷದಿಂದ ಚೇತನಪರವೆಂದು ಸಿದ್ಧವಾದ ಮೇಲೆ ಅಂತರಕ್ಷಿಣಿ ಎಂಬಲ್ಲಿರುವ ಅಕ್ಷಿಯೂ ಸಹ ಚೇತನಪರವೇ ಆಗಬೇಕು. ಈ ವಿಷಯದಲ್ಲಿ ಭಾಷ್ಯ ಹಾಗೂ ಸನ್ಯಾಯರತ್ನಾವಳಿಗಳ ಸಮ್ಮತಿಯೂ ಇದೆ.

ಅಕ್ಷಿಶಬ್ದವು ಜಡಪರವೂ ಆಗಬಹುದು

ಅಥವಾ 'ಅಂತರಕ್ಷಿಣಿ ಪುರುಷಃ' ಎಂಬಲ್ಲಿರುವ ಅಕ್ಷಿ ಶಬ್ದವು ಜಡಪರವೆಂದು ಹೇಳಲು ಯಾವುದೇ ಶ್ರುತಿಯಿಲ್ಲ. ಪ್ರತ್ಯುತ ಸ್ಥಾನಾದಿಸೂತ್ರಗಳೆಲ್ಲವು ಸ್ವರಸವೇ ಆಗುತ್ತವೆ. 'ಯ ಏಷಃ ಆದಿತ್ಯೇ' ಎಂಬ ಮತ್ತೊಂದು ವಾಕ್ಯದ ಉಲ್ಲೇಖವು ಅನಾವಶ್ಯಕವಾಗುತ್ತದೆ.

ಆದಿತ್ಯಮಂಡಲ ಹಾಗೂ ಅಕ್ಷಿಗೋಲಕದಲ್ಲಿ ಒಬ್ಬನೇ ಚೇತನನಿರುವುದರಿಂದ 'ಏಕವಿಧತ್ವಾತ್' ಎಂಬ ಟೀಕೆಯು ಸ್ವಾರಸ್ಯವಾಗುತ್ತದೆ. ಆದ್ದರಿಂದ ಜಡಭೂತವಾದ ಅಧಿಷ್ಠಾನಗಳು ಭಿನ್ನವಾದ್ದರಿಂದ ಚೇತನರೂ ಸಹ ಭಿನ್ನರೇ ಆಗಬೇಕೆಂದು ಹೇಳಲಾಗದು.

'ಸೋऽಹಮಸ್ಮಿ' ಎಂಬುದು ಅಗ್ನಿಯದ್ದೇ ಉಪದೇಶ

ವಸ್ತುತಃ 'ಸೋऽಹಮಸ್ಮಿ' ಎಂಬ ಉಪದೇಶವು ವಿಷ್ಣುವಿನದ್ದೆಂದು ಪ್ರಶ್ನಿಸಬಹುದು. ಆದರೆ ಹಿಂದಿನ ಮುಂದಿನ ಪ್ರಕರಣವನ್ನು ನೋಡಿದಾಗ ಅಗ್ನಿಯ ಉಪದೇಶವೆಂದೇ ಸ್ಪಷ್ಟವಾಗುತ್ತದೆ. ಏಕೆಂದರೆ 'ಅಗ್ನಿಂ ಪರಿಚಚಾರ' ಇತ್ಯಾದಿಯಾಗಿ ಅನೇಕ ಬಾರಿ ಅಗ್ನಿ ಶಬ್ದವು ಕೇಳಿಸುತ್ತಿದೆ. ಮತ್ತು ಬಹುವಚನಾಂತವಾಗಿ ನಿರ್ದಿಷ್ಟವಾಗಿವೆ. ಮತ್ತು 'ಗಾರ್ಹಪತ್ಯ' ಮೊದಲಾದ ಅಗ್ನಿಯ ವಿಶೇಷ ರೂಪಗಳನ್ನು ಉಲ್ಲೇಖಿಸಿದೆ. ಈ ಮೂರು ಕಾರಣಗಳಿಂದ ಅಗ್ನಿಯೇ ಪ್ರತಿಪಾದ್ಯನೆನ್ನಬೇಕು.

ಅಂತಿಮಪ್ರಾಣಾಧಿಕರಣದ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿರುವ ನ್ಯಾಯದಂತೆ 'ಅಹಂ' ಶಬ್ದವು ಅಂತರ್ಯಾಮಿಯಾದ ವಿಷ್ಣುವನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೂ ಅವಕಾಶವಿಲ್ಲ. ಸ್ವತಃ ಅಗ್ನಿಯು ತನ್ನನ್ನು ಉಪಾಸನೆ ಮಾಡುವವರನ್ನು ರಕ್ಷಿಸುತ್ತೇನೆಂದು ಹೇಳಿಕೊಂಡಿದ್ದಾನೆ. ಬ್ರಹ್ಮನನ್ನು ಉಪಾಸನೆ ಮಾಡಿದರೆ ಅಗ್ನಿಯನ್ನು ರಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ತನ್ನ ಉಪಾಸನೆಯನ್ನೇ ಅಗ್ನಿಯು ಹೇಳಿಕೊಂಡಿದ್ದಾನೆಂದು ಹೇಳಬೇಕು.

ಅಗ್ನಿಯೇ ಪ್ರತಿಪಾದ್ಯನೆನ್ನಲು ಅಭ್ಯಾಸ ಅರ್ಥವಾದ ಬಹುಶ್ರುತಿಪ್ರಮಾಣಗಳ ಆಧಾರ

ಅಕ್ಷಿ ಶ್ರುತಿಯಿಂದ ಅಗ್ನಿಯೇ ಪ್ರತಿಪಾದ್ಯನೆನ್ನಲು ಅನೇಕ ಬಾರಿ ಕೇಳಿಸುವ ಅಗ್ನಿ ಶಬ್ದವೇ ಪ್ರಮಾಣವೆಂದು ಸಾಧಿಸಿದರೂ ಆಪ್ತೇ ಅಲ್ಲ 'ಸೋऽಹಮಸ್ಮಿ ಸ ಏವाऽಹಮಸ್ಮಿ' ಎಂಬಲ್ಲಿ ಅವಧಾರಣಸಹಿತವಾದ ಅಭ್ಯಾಸವೂ ಸಹ ಪ್ರಮಾಣವಾಗಿದೆ. ಸ್ವರಸಪ್ರತಿಪನ್ನವಾದ ಅರ್ಥವನ್ನಷ್ಟೇ ಅಭ್ಯಾಸವು ಸ್ಪಷ್ಟಪಡಿಸುತ್ತದೆ.

ಉದಾ :- 'ಗಂಗಾಯಾಂ ಮೀನಃ' ಎಂದು ಹೇಳಿದಾಗ ಗಂಗಾ ಶಬ್ದಕ್ಕೆ ತೀರವೆಂಬರ್ಥವನ್ನು ಭ್ರಾಂತಿಯಿಂದ ಒಬ್ಬನು ತಿಳಿಯುತ್ತಾನೆ. ಆ ಭ್ರಾಂತಿಯನ್ನು ನಿರಾಸ ಮಾಡುವುದಕ್ಕಾಗಿ ಆಪ್ತನಾದವನು 'ಗಂಗಾಯಾಂ ಮೀನಃ' ಎಂಬ ಪದವನ್ನು ಅನೇಕ ಬಾರಿ ಪ್ರಯೋಗಿಸುತ್ತಾನೆ. ಅಂದರೆ ತೀರದಲ್ಲಿ ಮೀನು ಇರುವುದಿಲ್ಲ. ಗಂಗಾಪ್ರವಾಹದಲ್ಲೇ ಮೀನು ಇರುತ್ತದೆಂದು ಗಂಗಾಶಬ್ದದ ಅಭ್ಯಾಸದಿಂದ ಸ್ಪಷ್ಟಪಡಿಸುತ್ತಾನೆ. ಇದರಿಂದ ಮೊದಲು ಪ್ರಯೋಗಿಸಲ್ಪಟ್ಟ ಗಂಗಾಶಬ್ದವು

ಸ್ವರಸವಾದ ಪ್ರವಾಹ ಎಂಬರ್ಥವನ್ನೇ ಹೇಳುತ್ತದೆಂದು ತಿಳಿಯಬೇಕು. ಆದರಂತೆ ಪ್ರಕೃತ ಅಗ್ನಿಯೂ ನಾನೇ ಆಗಿದ್ದೇನೆ ಎಂಬ ಮಾತನ್ನು ಅನೇಕ ಬಾರಿ ಪ್ರಯೋಗಿಸುತ್ತಿದ್ದಾನೆ. ಇದರಿಂದ ಉಪದೇಶಕನು ಹೊರತು ವಿಷ್ಣುವಲ್ಲವೆಂದು ನಿರ್ಣಯವಾಗುತ್ತದೆ.

ಮತ್ತು ಉಪನಿಷತ್ತಿನಲ್ಲಿ 'ಅಸ್ಯದ್ವಿದ್ಯಾ ಆತ್ಮವಿದ್ಯಾ' ಎಂಬುದಾಗಿ 'ಕಂ ಬ್ರಹ್ಮ,' ಎಂಬ ಬ್ರಹ್ಮವಿದ್ಯೆಯೇ ಬೇರೆ ಆದಿತ್ಯನ ಅಂತರ್ಗತನಾದವನ ವಿದ್ಯೆಯೇ ಬೇರೆಯೆಂದು ಹೇಳಲಾಗಿದೆ. ಇದರಿಂದಲೂ ಸಹ ಅಗ್ನಿವಿದ್ಯೆಯನ್ನು ಬ್ರಹ್ಮವಿದ್ಯೆಯನ್ನಬಾರದೆಂದು ತಿಳಿಯುತ್ತದೆ.

ಪೂರ್ವಪಕ್ಷ ಟೀಕೆಯಲ್ಲಿರುವ ಗೊಂದಲಗಳ ಪರಿಹಾರ

ಟೀಕೆಯ ಪೂರ್ವಪಕ್ಷದಲ್ಲಿ ಅಗ್ನಿಯನ್ನು ಅಕ್ಷಿಸ್ಥನೆಂದು ಹೇಳಿದರೆ 'ಸಮಾಖ್ಯಾಶ್ರುತಿ' ವಿರೋಧ ಬರುತ್ತದೆಂದು ಹೇಳಿದ್ದಾರೆ, ಇದೇನೂ ತಪ್ಪಲ್ಲ. ಪೂರ್ವಪಕ್ಷಿಯು ಆದಿತ್ಯನಲ್ಲಿರುವವನು ಅಗ್ನಿಯೇ ಆಗಿದ್ದಾನೆಂದು ಎಲ್ಲಿಯ ತನಕ ನಿರ್ಣಯಿಸುವುದಿಲ್ಲವೋ ಅಲ್ಲಿಯ ತನಕ 'ಸಮಾಖ್ಯಾಶ್ರುತಿಯು' ವಿಷ್ಣುಪರವೇ ಆಗಿರುತ್ತದೆ.

ಇದರಂತೆ 'ಅಹಂ' ಶಬ್ದದ ಪ್ರಯೋಗವನ್ನು ವಿಷ್ಣುವಿನಲ್ಲಿ ಔಪಚಾರಿಕವೆನ್ನಲಾಗಿದೆ. ಇದರ ಅಭಿಪ್ರಾಯವೇನೆಂದರೆ ಆದಿತ್ಯನಲ್ಲಿ ಅಂತರ್ಗತನಾದ ವಿಷ್ಣುವಿನ ವಿಷಯದಲ್ಲಿ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಔಪಚಾರಿಕವಾಗಿದೆಯೆಂದು ಅಭಿಪ್ರಾಯ.

ಮತ್ತು ಅಕ್ಷಿಸ್ಥನಾದವನು ವಿಷ್ಣುವೆಂದು ಹೇಳಿದರೆ ಅಪೂರ್ವತ್ವವು ಬರುತ್ತದೆಂದು ಹೇಳಿದ್ದಾರೆ. ಇದೂ ಸಹ ತಪ್ಪಲ್ಲ. ಅಗ್ನಿಯಲ್ಲಿ ಕಣ್ಣಿಗೆ ಕಾಣಿಸದ ಪ್ರಯುಕ್ತ ಅಪೂರ್ವತ್ವವನ್ನು ಹೇಳಬಹುದು. ಆದರೆ ವಿಷ್ಣು ಅತ್ಯಂತ ಅಲೌಕಿಕನಾದ್ದರಿಂದ ಅಗ್ನಿಗಿಂತ ಅತಿಶಯವಾದ ಅಪೂರ್ವತ್ವವು ವಿಷ್ಣುವಿನಲ್ಲೇ ಇರುತ್ತದೆ. ಅಥವಾ ಹಗಲಿನ ಹೊತ್ತು ಅಗ್ನಿಯ ಪ್ರಭೆಯು ಕಾಣಿಸದ ಕಾರಣ ಆದಿತ್ಯನಲ್ಲಿ ಪ್ರವೇಶವಾಗಿರುತ್ತದೆಂದು ಅನುಮಾನದಿಂದ ಸಾಧಿಸಬಹುದು. ಈ ಕಾರಣದಿಂದಲೂ ಅಗ್ನಿಯಲ್ಲಿ ಅಪೂರ್ವತ್ವವನ್ನು ಹೇಳಲಾಗದು.

'ಅಪಹತೇ ಪಾಪಕೃತ್ಯಾಂ' ಎಂಬುದನ್ನು ಟೀಕೆಯಲ್ಲಿ ಅರ್ಥವಾದ ವಾಕ್ಯವೆಂದಿದ್ದಾರೆ. ಆದರೆ ಇದು ಫಲವಾಕ್ಯವೂ ಆಗಿದೆ. ಅರ್ಥವಾದತ್ವ ಫಲತ್ವ ಎರಡೂ ಇರುವುದರಿಂದ ಟೀಕೆಯಲ್ಲಿ ಅರ್ಥವಾದ ವಾಕ್ಯವೆಂದು ಪರಿಗಣಿಸಿದ್ದು ತಪ್ಪಲ್ಲ? ಅಥವಾ ಫಲವನ್ನು ಹೇಳುವ ವಾಕ್ಯದಲ್ಲಿ ಫಲತ್ವ ಹಾಗೂ ಅರ್ಥವಾದತ್ವಗಳೆರಡೂ ಇದ್ದೇ ಇರುತ್ತದೆಂದು ತಿಳಿಯಬಹುದು.

ಮತ್ತು ಅಮೃತತ್ವ ಅಭಯತ್ವಗಳನ್ನು ಅಗ್ನಿಯಲ್ಲಿ ಉಪಪಾದಿಸಿದ್ದೂ ಸಹ ತಪ್ಪಲ್ಲ. ತನಗಿಂತ ಅಧಮ ದೇವತೆಗಿಂತ ಹೆಚ್ಚು ಅಮೃತತ್ವ ಅಭಯತ್ವಗಳು ಅಗ್ನಿಯಲ್ಲಿ ಇರುತ್ತದೆ. ಅಥವಾ ಈ ಹಿಂದೆ ಉಪಪಾದಿಸಿದ ಅರ್ಥವಾದ ಸಹಿತವಾದ ಬಹುಶ್ರುತಿಗಳ ಬಲದಿಂದ ಮುಖ್ಯವಾದ ಅಮೃತತ್ವವನ್ನೇ ಅಗ್ನಿಯಲ್ಲಿ ಹೇಳಬಹುದು.

ಕಣ್ಣಿನಲ್ಲಿರುವವನು ವಿಷ್ಣುವೇ ಎಂದು ಸಿದ್ಧಾಂತ

ಕಣ್ಣಿನಲ್ಲಿರುವವನು ಭಗವಂತನೇ ಹೊರತು ಅಗ್ನಿಯಲ್ಲ. ಪ್ರತಿಯೊಬ್ಬ ಪುರುಷರ ಎಡಗಣ್ಣಿನಲ್ಲಿ ಸ್ತ್ರೀಪ್ರೇರಕವಾದ ಭಗವಂತನ 'ವಾಮನಿ' ಎಂಬ ರೂಪವಿದೆ. ಬಲಗಣ್ಣಿನಲ್ಲಿ ಪುರುಷ ಪ್ರೇರಕವಾದ 'ಭಾಮನಿ' ಎಂಬ ರೂಪವಿದೆ. ಈ ರೂಪಗಳನ್ನು ಅಗ್ನಿ ಸ್ವರೂಪವೆಂದು ಹೇಳಲು ಸಾಧ್ಯವೇ ಇಲ್ಲ. ಹಾಗೇನಾದರೂ ಹೇಳಿದರೆ ಕಣ್ಣಿನ ಒಳಗಡೆ ಕುಳಿತಿರುವ ಅಗ್ನಿಯನ್ನು ಪ್ರೇರಣೆ ಮಾಡಲು ಅನೇಕ ಜೀವಿಗಳ ಪ್ರವಾಹವೇ ಹರಿಯಬೇಕಾಗುತ್ತದೆ.

ಅಗ್ನಿದೇವತೆಯು 'ಪರಿಹ್ಯೇನಂ ಮ್ರಿಯಂತೇ' ಎಂಬ ಶ್ರುತಿ ಹೇಳುವಂತೆ ಮರಣಶೀಲನಾಗಿದ್ದಾನೆ. 'ಭೀಷಾಸ್ಮಾತ್' ಎಂಬ ಶ್ರುತಿ ಹೇಳುವಂತೆ ಭಗವಂತನಿಗೆ ಹೆದರಿ ಪಲಾಯನ ಮಾಡುತ್ತಾನೆ. ಆದ್ದರಿಂದ ಅಮೃತತ್ವ ಅಭಯತ್ವಗಳೆಲ್ಲವೂ ಸಹ ವಿಷ್ಣುವಿನ ನಿರವಕಾಶಲಿಂಗಗಳೆಂದು ಸಾಬೀತಾಗುತ್ತದೆ.

'ಸೋಽಹಮಸ್ಮಿ' ಎಂದು ಉಪದೇಶಿಸಿದವನು ಅಂತರ್ಯಾಮಿಯೇ ಹೊರತು ಅಗ್ನಿಯಲ್ಲ. ಅಗ್ನಿ ಶಬ್ದದ ಅಭ್ಯಾಸವೂ ಸಹ ಅಗ್ನಿಗೆ ಪ್ರಚೋದಕವಲ್ಲ. ಹಿಂದಿನ ಮುಂದಿನ ವಾಕ್ಯಗಳೆಲ್ಲವೂ ವಿಷ್ಣುವನ್ನು ಬೆಂಬಲಿಸುತ್ತಿರುವಾಗ ಮಧ್ಯದಲ್ಲಿರುವ ಅಭ್ಯಾಸದ ಶಕ್ತಿ ಹೀನವಾಗುತ್ತದೆ.

'ಆಸದ್ವಿದ್ಯೆ' 'ಆತ್ಮವಿದ್ಯೆ' ಎಂಬ ವಿದ್ಯಾಭೇದದಿಂದ ಅಗ್ನಿಯು ಶ್ರುತಿಪ್ರತಿಪಾದ್ಯನೆಂಬ ಪೂರ್ವಪಕ್ಷದಲ್ಲಿ ಹುರುಳಿಲ್ಲ. ಏಕೆಂದರೆ ಒಬ್ಬನೇ ಬ್ರಹ್ಮನನ್ನು ವಿಷಯೀಕರಿಸುವ ವಿದ್ಯೆಗಳು ಪ್ರಕಾರಭೇದದಿಂದ ಅನೇಕ ಹೆಸರನ್ನು ಪಡೆಯಬಹುದು. ಬ್ರಹ್ಮವಿಷಯಕವಾದ ದಹರವಿದ್ಯೆ, ಪ್ರಾಣವಿದ್ಯೆ, ವೈಶ್ವಾನರವಿದ್ಯೆಗಳೇ ಇದಕ್ಕೆ ಉದಾಹರಣೆ.

ಪ್ರಥಮಸೂತ್ರದ ವಿನ್ಯಾಸದಲ್ಲಿ ಸ್ವಾರಸ್ಯ

ಈ ಅಧಿಕರಣದಲ್ಲಿ ಒಟ್ಟು ಐದು ಸೂತ್ರಗಳಿವೆ. ಐದು ಸೂತ್ರಗಳ ಜೋಡಣೆಯು ಆತ್ಯಂತ ಸ್ವಾರಸ್ಯಮಯವಾಗಿದೆ. ಆದು ಹೀಗೆ - ಪ್ರಥಮ ಸೂತ್ರವು ವಿಷಯವಾಕ್ಯದಲ್ಲೇ ಇರುವ ಶ್ರುತಿಲಿಂಗಾದಿಗಳನ್ನು ಹೇಳುತ್ತಿರುವ ಕಾರಣ ಮೊದಲೇ ಉಲ್ಲೇಖಿಸಲು ಅರ್ಹವಾಗಿದೆ.

ಸೂತ್ರದಲ್ಲಿರುವ ಅಂತರ ಎಂಬ ಪದಕ್ಕೆ ಕೇವಲ ಅಂತರ್ಯಾಮಿ ಎಂದರ್ಥವಲ್ಲ. ಕಣ್ಣಿನ ಒಳಗಡೆ ಅಂತರ್ಯಾಮಿಯಾಗಿದ್ದು ರಮಿಸುತ್ತಾನೆಂದರ್ಥ. 'ಅಂತರ' ಎಂಬರಲ್ಲಿರುವ 'ಅಂತ' ಎಂಬ ಉಪಪದವು ಅಂತರ್ಯಾಮಿಯೆಂಬರ್ಥವನ್ನು ಹೇಳಿದರೆ 'ರ' ಎಂಬ ಧಾತು 'ರಮಣ' ಎಂಬರ್ಥವನ್ನು ಹೇಳುತ್ತಿದೆ. ಕೇವಲ ಅಂತರ್ಯಾಮಿಯೆಂಬರ್ಥವು ವಿವಕ್ಷಿತವಾಗಿದ್ದಲ್ಲಿ 'ಅಂತ' ಎಂಬ ಶಬ್ದವು ಸಾಕಾಗಿತ್ತು. ಈ ರಮಣ ಎಂಬರ್ಥವನ್ನು ಶ್ರುತಿಯಲ್ಲಿರುವ ಆತ್ಮಶಬ್ದವು 'ಆದೇಯಂ ಮಾತಿ' ಎಂಬ ವ್ಯುತ್ಪತ್ತಿಯಿಂದ ಸ್ಪಷ್ಟಪಡಿಸುತ್ತಿದೆ. ಆದ್ದರಿಂದ ಪ್ರಥಮಸೂತ್ರಕ್ಕೆ ಹೀಗರ್ಥ. ಕಣ್ಣಿನ ಒಳಗಡೆ ಅಂತರ್ಯಾಮಿಯಾಗಿ ರಮಿಸುವವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಅಮೃತತ್ವ, ಅಭಯತ್ವ ಮತ್ತು ಬ್ರಹ್ಮಶಬ್ದ ಆತ್ಮಶಬ್ದಗಳೆಂಬ ಲಿಂಗಗಳೆಂದು ಎಂದು.

ಉಳಿದ ಸೂತ್ರಗಳ ಜೋಡಣೆಯೂ ಆತ್ಯಂತ ಸ್ವಾರಸ್ಯಮಯ

ವಿಷಯವಾಕ್ಯಗಳಲ್ಲಿರುವ ಶ್ರುತಿಲಿಂಗಗಳನ್ನು ಪ್ರಮಾಣವನ್ನಾಗಿ ಹೇಳುತ್ತಿರುವುದರಿಂದ ''ಆಂತರ ಉಪಪತ್ತೇಃ'' ಎಂಬ ಸೂತ್ರವು ಮೊದಲು ನಿಮಿತ್ತವಾಗಿವೆ. ಮುಂದಿನ ವಾಕ್ಯದಲ್ಲಿರುವ ಸ್ಥಾನಶಕ್ತಿ ಹಾಗೂ ಸ್ವರೂಪಶಕ್ತಿಗಳೆಂಬ ಲಿಂಗಗಳನ್ನು ಪ್ರತಿಪಾದಿಸುತ್ತಿರುವುದರಿಂದ 'ಸ್ಥಾನಾದಿವ್ಯಪದೇಶಾಚ್ಚ' ಎಂಬ ಸೂತ್ರವು ಎರಡನೆಯ ಸ್ಥಾನವನ್ನು ಹೊಂದಿದೆ.

ಪ್ರಕರಣದ ಪ್ರಾರಂಭದಲ್ಲಿರುವ ಬ್ರಹ್ಮನ ಲಿಂಗವನ್ನು ಪ್ರತಿಪಾದಿಸುವ ಕಾರಣ 'ಸುಖವಿಶಿಷ್ಟಾಭಿಧಾನಾದೇವಚ' ಎಂಬ ಸೂತ್ರವು ಮೂರನೆಯ ಸ್ಥಾನವನ್ನು ಅಲಂಕರಿಸಿದೆ.

ಉಪಕ್ರಮದಿಂದ ಪ್ರಾಪ್ತವಾದ ಬ್ರಹ್ಮಪ್ರಕರಣಕ್ಕೆ ವಿದ್ಯಾಭೇದವು ವಿಚ್ಛೇದಕವಾದಾಗ ಆದನ್ನು ಪರಿಹರಿಸಲು ಉಪಸಂಹಾರದಲ್ಲಿರುವ ಲಿಂಗವನ್ನು ಉಲ್ಲೇಖಿಸುವ ''ಶ್ರುತೋಪನಿಷತ್‌ಗತ್ಯಭಿಧಾನಾಚ್ಚ'' ಎಂಬ ಸೂತ್ರವು ನಾಲ್ಕನೆಯ ಸ್ಥಾನವನ್ನು ಪಡೆದಿದೆ.

ಪರಪಕ್ಷದಲ್ಲಿ ಬಾಧಕಗಳನ್ನು ಸಾಧಿಸುವುದರಿಂದ 'ಆನವಸ್ಥಿತೇರಸಂಭವಾಚ್ಚ ನೇತರಃ' ಎಂಬ ಸೂತ್ರವು ಕೊನೆಯ ಸ್ಥಾನವನ್ನು ಅಲಂಕರಿಸಿದೆ. ಹೀಗೆ ಸೂತ್ರಕಾರರ ಸೂತ್ರದ ಜೋಡಣೆ ಅತ್ಯಂತ ಸ್ವಾರಸ್ಯಮಯವಾಗಿದೆ.

ಅದ್ವೈತಿಗಳಿಗೆ ರಾಮಾನುಜರಿಗೆ ಪುನರುಕ್ತಿ ದೋಷ

ಅದ್ವೈತ ಮತದ ಪ್ರಕಾರ ಮತ್ತು ರಾಮಾನುಜ ಮತದ ಪ್ರಕಾರ ಈ ಅಧಿಕರಣವು ಪುನರುಕ್ತವಾಗಿದೆ. ಏಕೆಂದರೆ ಪ್ರಥಮಾಧ್ಯಾಯದ ಮೊದಲನೆಯ ಪಾದದಲ್ಲಿರುವ ಅಂತಸ್ತದ್ಧರ್ಮಾಧಿಕರಣವನ್ನು ಇವರಿಬ್ಬರು ಅಂತರಧಿಕರಣವೆಂದೇ ಗುರುತಿಸುತ್ತಾರೆ. ಮತ್ತು ಇಲ್ಲಿಯಂತೆ ಅಲ್ಲಿಯೂ ಸಹ ಛಾಂದೋಗ್ಯದ ಪ್ರಥಮಾಧ್ಯಾಯದ ವಾಕ್ಯವನ್ನು ಬ್ರಹ್ಮಪರವೆಂದು ಸಿದ್ಧಾಂತ ಮಾಡುತ್ತಾರೆ. ಅಲ್ಲಿ 'ಅತ ಯ ಏಷೋ ಅಂತರಕ್ಷಿಣ ಪುರುಷೋ ದೃಶ್ಯತೇ' ಎಂಬ ವಾಕ್ಯವನ್ನೇ ಬ್ರಹ್ಮಪರವೆಂದು ಸಿದ್ಧಾಂತ ಮಾಡಿದ ಮೇಲೆ ಪುನಃ ಇಲ್ಲಿ ಆಕ್ಷೇಪಕ್ಕೆ ಅವಕಾಶವೇ ಇರುವುದಿಲ್ಲ.

ಇನ್ನು ಭಾಮತಿಯಲ್ಲಿ ಆಕ್ಷಿಯಲ್ಲಿರುವ ಜೀವವಿಶೇಷನು ಆ ಅಧಿಕರಣದ ಪೂರ್ವಪಕ್ಷಕ್ಕೆ ವಿಷಯನಾಗಿದ್ದಾನೆ. ಈ ಅಧಿಕರಣದ ಪೂರ್ವಪಕ್ಷಕ್ಕೆ ಛಾಯಾಪುರುಷನು ವಿಷಯನಾಗಿದ್ದಾನೆ. ಈ ಅಧಿಕರಣದ ವಿಷಯವಾಕ್ಯದಲ್ಲಿ ದೃಶ್ಯತ್ವಾದಿಗಳು ಕೇಳಿಸುತ್ತಿರುವುದರಿಂದ ಜೀವವಿಶೇಷನಲ್ಲಿ ದೃಶ್ಯತ್ವಾದಿಗಳು ಅಸಂಭಾವಿತವಾಗಿವೆ. ಆದರೆ ಛಾಯಾಪುರುಷನು ಪ್ರತ್ಯಕ್ಷಸಿದ್ಧನಾದ್ದರಿಂದ ದೃಶ್ಯತ್ವಕ್ಕೆ ಆಧಾರನಾಗಿದ್ದಾನೆಂದು ಅಭ್ಯಧಿಕಾಶಂಕೆಯನ್ನು ತೋರಿಸಿದೆ.

ಭಾಮತಿಯ ಈ ಧೋರಣೆ ಸರಿಯಿಲ್ಲ. ಕೇವಲ ದೃಶ್ಯತ್ವವೆಂಬ ಒಂದು ಹೇತು ಇಲ್ಲದ ಕಾರಣ ಜೀವಪಕ್ಷವನ್ನು ಬಿಡುವುದಾದರೆ ಪುರುಷತ್ವ, ಅಮೃತತ್ವ, ಸಂಯದ್ವಾಮತ್ವವೇ ಮೊದಲಾದ ಅನೇಕ ಧರ್ಮಗಳಿಲ್ಲದ ಛಾಯಾಪುರುಷ ಪಕ್ಷವನ್ನು ಖಂಡಿತವಾಗಿಯೂ ಬಿಡಬೇಕು. ಛಾಯಾಪುರುಷನಲ್ಲಿ ಸ್ತೋತ್ರ ಮಾಡುವುದಕ್ಕಾಗಿ ಅಮೃತ ಅಭಯ ಮೊದಲಾದ ಶಬ್ದಗಳನ್ನು ಪ್ರಯೋಗಿಸಲಾಗಿದೆಯೆಂದು ಹೇಳುವುದಾದರೆ ಜೀವಪಕ್ಷದಲ್ಲಿಯೂ ಇದು ಸಮಾನ. ಆದ್ದರಿಂದ ಯಾವುದೇ ಪ್ರಕಾರದಲ್ಲಿಯೂ ಅಭ್ಯಧಿಕಾಶಂಕೆಯನ್ನು ತೋರಿಸಲು ಸಾಧ್ಯವಿಲ್ಲದ ಕಾರಣ ಪುನರುಕ್ತಿದೋಷವನ್ನು ತಪ್ಪಿಸಿಕೊಳ್ಳಲಾಗದು.

ಅದ್ವೈತಿಗಳ ಸೂತ್ರಾರ್ಥ ನಿರಾಕರಣೆ

ಅದ್ವೈತಿಗಳ ಸಿದ್ಧಾಂತರಚನೆಯೂ ಸರಿಯಿಲ್ಲ. ಆಕ್ಷಿಸ್ಥನಾದವನು ಕಾರ್ಯಬ್ರಹ್ಮನಾದ ಚತುರ್ಮುಖನೆಂದು ಹೇಳಿದರೆ ಅವನಲ್ಲಿ 'ಅಮೃತತ್ವ', 'ಅಭಯತ್ವ' ಮೊದಲಾದ ಧರ್ಮಗಳು ಬರುವುದಿಲ್ಲ. ಅಕಾರ್ಯಬ್ರಹ್ಮನಾದರೆ ಅವನ ಉಪಾಸನೆಯಿಂದ ಅರ್ಚಿರಾದಿಮಾರ್ಗಗಮನವನ್ನು ಹೇಳಿದ್ದು ಅಯುಕ್ತವಾಗುತ್ತದೆ. ಏಕೆಂದರೆ ಕಾರ್ಯಬ್ರಹ್ಮನನ್ನು ಉಪಾಸನೆ ಮಾಡುವವರು ಮಾತ್ರ ಅರ್ಚಿರಾದಿಮಾರ್ಗದಲ್ಲಿ ಹೋಗುತ್ತಾರೆ. ಇದರಂತೆ ಅದ್ವೈತಿಗಳ ಸೂತ್ರ ವ್ಯಾಖ್ಯಾನವೂ ಸಮಂಜಸವಲ್ಲ.

೧. ''ಅಂತರ ಉಪಪತ್ತೇಃ'' ಎಂಬಲ್ಲಿ 'ರ' ಶಬ್ದವು ವ್ಯರ್ಥವಾಗುತ್ತದೆ. 'ಅಮೃತತ್ವಾದಿ' ಉಪಪತ್ತಿಗಳು ಕಾರ್ಯಬ್ರಹ್ಮನಲ್ಲಾಗಲೀ ಅಕಾರ್ಯಬ್ರಹ್ಮನಲ್ಲಾಗಲೀ ಕೂಡುವುದಿಲ್ಲ.

೨. ''ಸ್ಥಾನಾದಿವ್ಯಪದೇಶಾಶ್ಚ'' ಎಲ್ಲೆಡೆ ವ್ಯಾಪ್ತನಾದ ಪರಬ್ರಹ್ಮನು ಅಲ್ಪಸ್ಥಾನದಲ್ಲಿದ್ದಾನೆಂದು ''ಅರ್ಭಕೌಕಸ್ತ್ವಾತ್'' ಎಂಬ ಸೂತ್ರದಿಂದಲೇ ಸಮರ್ಥಿಸಿದ್ದಾಗಿದೆ. ಅದೇ ವಿಷಯವನ್ನು ಪ್ರತಿಪಾದಿಸುವ ಈ ಸೂತ್ರಕ್ಕೆ ಸಾರ್ಥಕ್ಯವಿಲ್ಲ.

೩. ''ಸುಖವಿಶಿಷ್ಟಾಭಿಧಾನಾದೇವಚ'' ಸುಖವಿಶಿಷ್ಟ ಶಬ್ದಕ್ಕೆ ಸುಖ ಸಂಬಂಧವೆಂಬರ್ಥವನ್ನು ಹೇಳಿದರೆ ಜೀವನಲ್ಲಿ ಹೇತು ವ್ಯಭಿಚರಿತವಾಗುತ್ತದೆ. ಅಪರಿಚ್ಛಿನ್ನತ್ವವೆಂಬ ಶ್ರೇಷ್ಠಸುಖದ ಸಂಬಂಧವನ್ನು ವಿವಕ್ಷಿಸಿದರೆ ಸುಖಸ್ವರೂಪನಾದ ನಿಮ್ಮ ಬ್ರಹ್ಮನಲ್ಲಿ ಸುಖಸಂಬಂಧ ಬರುವುದಿಲ್ಲ. ವಿಶಿಷ್ಟಬ್ರಹ್ಮನಲ್ಲಿ ಸುಖಸಂಬಂಧವಿದ್ದರೂ ಸುಖವು ಅಪರಿಚ್ಛಿನ್ನವಾಗಿಲ್ಲ.

೪. ''ಶ್ರುತೋಪನಿಷತ್ಕಗತ್ಯಭಿಧಾನಾತ್''ಅರ್ಚಿರಾದಿ ಮಾರ್ಗವು ಬ್ರಹ್ಮನನ್ನು ಮಿಥ್ಯಾಭೂತವಾಗಿ ಯಾರು ಉಪಾಸನೆ ಮಾಡುತ್ತಾನೋ ಅಂತಹವನಿಗೆ ಮಾತ್ರ ದೊರೆಯುತ್ತದೆಂಬುದು ನಿಮ್ಮ ಸಿದ್ಧಾಂತ. ನಿಜವಾದ ಬ್ರಹ್ಮಜ್ಞಾನಿಗೆ ಈ ಯಾವ ಮಾರ್ಗಗಳೂ ಸಹ ದೊರೆಯುವುದಿಲ್ಲ. ಆದ್ದರಿಂದ ಅರ್ಚಿರಾದಿಮಾರ್ಗ ಗಮನಕ್ಕೆ ಪರಬ್ರಹ್ಮನು ವಿಷಯನಾಗಲು ಸಾಧ್ಯವಿಲ್ಲದ ಕಾರಣ ಅಕ್ಷಿಸ್ಥನು ಬ್ರಹ್ಮನಾಗುವುದಿಲ್ಲ. ಮತ್ತು 'ಶ್ರುತೋಪನಿಷತ್ಕಸ್ಯ' ಎಂದು ಪದವಿಭಾಗ ಮಾಡುವುದಾದರೆ ಸೂತ್ರದಲ್ಲಿರುವ 'ಕ' ಶಬ್ದವು ವ್ಯರ್ಥವಾಗುತ್ತದೆ. ಸೂತ್ರದಲ್ಲಿರುವ 'ಗತಿ' ಶಬ್ದಕ್ಕೆ 'ಮಾರ್ಗ' ಎಂಬರ್ಥವೂ ಅಸ್ವರಸವಾಗಿದೆ.

೫. ''ಆನವಸ್ಥಿತೇರಸಂಭವಾಚ್ಚ ನೇತರಃ'' ಅನವಸ್ಥಾಶಬ್ದಕ್ಕೆ ಅಪ್ರಮಾಣಕವಾದ ಅನಂತ ವ್ಯಕ್ತಿ ಕಲ್ಪನೆಯೆಂಬ ದೋಷವು ಅರ್ಥವೆಂದು ಎಲ್ಲರೂ ಒಪ್ಪಿದ್ದಾರೆ. ಇದನ್ನು ಬಿಟ್ಟು ಚಕ್ಷುರಿಂದ್ರಿಯದಲ್ಲಿ ಛಾಯಾಪುರುಷನು ಅವಸ್ಥಿತನಾಗಿಲ್ಲ ಎಂಬರ್ಥವನ್ನು ಹೇಳುವುದು ತಪ್ಪಾಗುತ್ತದೆ. ಮತ್ತು ಸದಾಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳುವುದು ತಪ್ಪು. ಅಷ್ಟೇ ಅಲ್ಲದೆ 'ಉಪಪತ್ತೇಃ' ಎಂಬ ಮೊದಲನೇ ಸೂತ್ರದಿಂದಲೇ ಛಾಯಾಪುರುಷಾದಿಗಳಲ್ಲಿ ಅಮೃತತ್ವಾದಿಗಳು ಇರುವುದಿಲ್ಲವೆಂದು ತಿಳಿಯಲು ಬರುವಾಗ ಪುನಃ ಅದೇ ವಿಚಾರಕ್ಕಾಗಿ ಕೊನೆಯ ಸೂತ್ರ ಹೊರಡುವುದು ವ್ಯರ್ಥ. ಈ ಎಲ್ಲಾ ಕಾರಣಗಳಿಂದ ಅದ್ವೈತಿಗಳ ಸೂತ್ರವ್ಯಾಖ್ಯಾನವು ಅಸಾಧುವಾಗಿದೆ.

ರಾಮಾನುಜರೂ ಸಹ ಅದ್ವೈತಮತದ ಸಿದ್ಧಾಂತಕ್ಕೆ ಜೋತುಬಿದ್ದಿದ್ದಾರೆ. ಅವರನ್ನು ಪ್ರತ್ಯೇಕವಾಗಿ ನಿರಾಕರಿಸಬೇಕಿಲ್ಲ. ಇನ್ನು ರಾಮಾನುಜರ ಮತದಲ್ಲಿ ಹೊಸವಿಚಾರವೆಂದರೆ 'ಅತ ಏವ ಚ ಸ ಬ್ರಹ್ಮ' ಎಂಬ ಪ್ರಕ್ಷಪ್ತವಾದ ಸೂತ್ರವನ್ನು ನಾಲ್ಕನೆಯ ಸೂತ್ರವೆಂದು ಪರಿಗಣಿಸುತ್ತಾರೆ. ಆದರೆ ಯಾವರೀತಿಯಾಗಿ ಈಕ್ಷತ್ಯಧಿಕರಣದಲ್ಲಿ 'ಪ್ರತಿಜ್ಞಾವಿರೋಧಾತ್' ಎಂಬ ಸೂತ್ರವನ್ನು ಪ್ರಕ್ಷಿಪ್ತವಾದ್ದರಿಂದ ಉಪೇಕ್ಷಿಸಲಾಗಿತ್ತೋ ಅದರಂತೆ ಇದನ್ನೂ ಸಹ ಉಪೇಕ್ಷಿಸಬೇಕು.

ಅದ್ವೈತಿಗಳು ಏನೇ ವ್ಯಾಖ್ಯಾನಿಸಿದರೂ ಎಲ್ಲಾ ಅಧಿಕರಣಗಳಂತೆ ಇಲ್ಲಿಯೂ ಸಹ ಜೀವಬ್ರಹ್ಮಭೇದವನ್ನೇ ಒಪ್ಪಿಕೊಂಡಂತಾಯಿತು. ಚಕ್ಷುರಿಂದ್ರಿಯದಲ್ಲಿ ಜೀವನು ನೆಲೆಸಿಲ್ಲ ಬ್ರಹ್ಮನು ನೆಲೆಸಿದ್ದಾನೆಂದು ಅವರು ಸಾಧಿಸಿದ ಮೇಲೆ ಪುನಃ ಜೀವಬ್ರಹ್ಮಭೇದವನ್ನು ಬಾಯಿಬಿಟ್ಟು ಹೇಳಬೇಕಾಗಿಲ್ಲ.

॥ ಶ್ರೀಕೃಷ್ಣಾರ್ಪಣಮಸ್ತು ॥

ಪರಿಪೂರ್ಣಚಂದ್ರಿಕಾ

ವಿಷಯಾನುಕ್ರಮಣಿಕೆ

ಸರ್ವಗತತ್ವಾಧಿಕರಣ
ಭಾಷ್ಯ ತತ್ತ್ವಪ್ರಕಾಶಿಕಾ

ಯೌಗಿಕ ಶಬ್ದಗಳ ಸಮನ್ವಯಕ್ಕಾಗಿ ಲಿಂಗಪಾದ	೨
ನಾರಾಯಣನೇ ಸರ್ವಗತನು	೨೪
ಜೀವ ಅಥವಾ ಸೂರ್ಯರು ಸರ್ವಗತರಲ್ಲ	೩೩
ಕರ್ಮಕರ್ತೃಭಾವವಿದ್ದಲ್ಲಿ ಭೇದವಿರಲೇಬೇಕು	೩೯
ವಿಷ್ಣು ಒಬ್ಬನೇ ಬ್ರಹ್ಮನು	೪೪
ತನ್ನನ್ನು ಸರ್ವಗತನೆಂದು ಶ್ರೀಕೃಷ್ಣನೇ ಹೇಳಿಕೊಂಡಿದ್ದಾನೆ	೫೧
ವ್ಯಾಪ್ತನಾದ ವಿಷ್ಣು ಸಣ್ಣ ಹೃದಯದಲ್ಲೂ ಇದ್ದಾನೆ	೬೧
ಜೀವನ ಜೊತೆಗಿದ್ದರೂ ಸಮಾನ ಭೋಗವಿಲ್ಲ	೭೨

ತಾತ್ಪರ್ಯಚಂದ್ರಿಕಾ

ನಾಮಾತ್ಮಕಶಬ್ದಗಳ ಸಮನ್ವಯಸಿದ್ಧಿಗಾಗಿ ಲಿಂಗಸಮನ್ವಯ	೮೨
ಸರ್ವಗತತ್ವದ ಬಗ್ಗೆ ಸಂಶಯ ಪರಂಪರೆ	೮೯
ಆದಿತ್ಯನೇ ಸರ್ವಗತನೆಂದು ಪೂರ್ವಪಕ್ಷ	೯೨

ಅಂತರಧಿಕರಣದಿಂದ ಪುನರುಕ್ತಿ ದೋಷ	೯೮
ಜೀವನೆಂಬ ಪೂರ್ವಪಕ್ಷಕ್ಕೂ ಅವಕಾಶವಿಲ್ಲ	೧೦೩
ಅಗ್ನೀಷೋಮೀಯ ಪಶುತಾಧಿಕರಣಮ್ ಪಶುಚೋದನಾಯಾ ಅನಿಯಮೋಽವಿಶೇಷಾತ್ (೬-೮-೧೦)	೧೦೬
ಪೂರ್ವಪಕ್ಷ ಹುಟ್ಟುವುದರಿಂದ ಅಧಿಕರಣವು ಆರಂಭಣೀಯ	೧೧೦
ಅಂತರಾದ್ಯಧಿಕರಣಗಳಿಂದ ಪುನರುಕ್ತಿ ಇಲ್ಲ	೧೧೬
ಒಬ್ಬ ದೇವತೆಯ ಪರ್ಯಾಯಶಬ್ದಗಳ ಸಮನ್ವಯವನ್ನು ಬೇರೆ ಬೇರೆ ಅಧಿಕರಣಗಳಲ್ಲಿ ಮಾಡಬಹುದು	೧೨೩
ಸರ್ವಗತತ್ವಾಧಿಕರಣವು ನಾಮಪಾದದಲ್ಲಿ ಸೇರದು	೧೨೭
ಸಕಲ ಜೀವರೇ ಸರ್ವಗತರೆಂದು ಪೂರ್ವಪಕ್ಷ	೧೩೩
ಜೀವನ ಪ್ರಾಪಕಲಿಂಗಗಳು ಆದಿತ್ಯನಲ್ಲಿಲ್ಲ	೧೩೮
ಅಲ್ಪದೇಶದಲ್ಲಿರುವವನು ಸರ್ವಗತನಾಗಲಾರ	೧೪೨
ಸರ್ವಗತನಾದವನು ಅಲ್ಪದೇಶದಲ್ಲಿರಲಾರ	೧೪೭
ಬಾಧಕಪರಿಹಾರದೊಂದಿಗೆ ಪೂರ್ವಪಕ್ಷದ ಉಪಸಂಹಾರ	೧೫೪
ವಿಷ್ಣುವೇ ಸರ್ವಗತನೆಂದು ಸಿದ್ಧಾಂತ	೧೬೧
ಉಳಿದೆರಡು ಪೂರ್ವಪಕ್ಷ ಯುಕ್ತಿಗಳು ಬ್ರಹ್ಮನಲ್ಲೇ ಇವೆ	೧೬೫
ಆದಿತ್ಯ ಹಾಗೂ ಜೀವರ ಲಿಂಗಗಳೆಲ್ಲವು ವಿಷ್ಣುವಿನಲ್ಲಿ ಸಾವಕಾಶವಾಗಿವೆ	೧೭೧
ಸ್ವಪಕ್ಷದಲ್ಲಿ ಸಾಧಕ ಪ್ರಮಾಣಗಳೂ ಸಹ ಇವೆ	೧೮೦

ಅಣುಜೀವನು ಎಲ್ಲೆಡೆ ವ್ಯಾಪಿಸಲಾರ ೧೮೮
ಕರ್ಮಕರ್ತೃಗಳಿಗೆ ಭೇದವಿರುವುದರಿಂದಲೂ ವಿಷ್ಣುವೇ ಸರ್ವಗತನು ೧೯೩
ಸೂತ್ರಗಳ ಜೋಡಣೆಯಲ್ಲೂ ಸ್ವಾರಸ್ಯ ೧೯೮
'ಶಬ್ದವಿಶೇಷಾತ್' ಮೊದಲಾದ ಸೂತ್ರಗಳ ವಿನ್ಯಾಸಕ್ರಮ ೨೦೩
ಲಿಂಗಪಾದದ ಏಳು ಅಧಿಕರಣಗಳ ಉಪಾಧಿಗಳು ೨೦೭
ಅದ್ವೈತಿಗಳ ಅಧಿಕರಣಶರೀರ ೨೧೭
ಅದ್ವೈತಮತ ವಿಮರ್ಶೆ ೨೩೧
ಅಧಿಷ್ಠಾನ ತತ್ತ್ವಜ್ಞಾನವಿದ್ದಾಗ ಆರೋಪವು ಅಸಂಭಾವಿತ ೨೩೬
ಅದ್ವೈತಿಗಳ ಸೂತ್ರವ್ಯಾಖ್ಯಾನ ನಿರಾಕರಣೆ ೨೪೧
ಐದನೆಯ ಸೂತ್ರಾರ್ಥವೂ ಅಯುಕ್ತ ೨೪೬
ರಾಮಾನುಜರ ಅಧಿಕರಣ ವಿಮರ್ಶೆ ೨೫೧
ರಾಮಾನುಜರ ಮತನಿರಾಕರಣೆ ೨೫೭
ರಾಮಾನುಜರ ಸೂತ್ರಾರ್ಥ ನಿರಾಕರಣೆ ೨೬೬
ಟೀಕೆಯ ಕಠಿಣಪದಾರ್ಥ ೨೭೮
ಸರ್ವಗತತ್ವಾಧಿಕರಣದ ಪರಿಶಿಷ್ಟಗ್ರಂಥಗಳು (೨೮೫-೩೧೨)

ಅತ್ಯತ್ವಾಧಿಕರಣ -
ಭಾಷ್ಯ ತತ್ತ್ವಪ್ರಕಾಶಿಕಾ

ಸಕಲ ಸಂಹಾರಕನಾದ ವಿಷ್ಣುವೇ ಎಲ್ಲವನ್ನು ತಿನ್ನುತ್ತಾನೆ. ೩೧೪

ವಿಷ್ಣುಪ್ರಕರಣವಾದ್ದರಿಂದಲೂ ವಿಷ್ಣುವೇ ಸಂಹಾರಕ ೩೩೦

ತಾತ್ಪರ್ಯಚಂದ್ರಿಕಾ

ಪ್ರತ್ಯುದಾಹರಣ ಸಂಗತಿಯ ಪ್ರದರ್ಶನ ೩೪೨

ಅದಿತಿಶ್ರುತಿ ಹಾಗೂ ಅದಿತಿತ್ವಲಿಂಗಗಳಿಂದ ಪೂರ್ವಪಕ್ಷ ೩೪೫

ಜಾತಿರೂಪವಾದ ಅದಿತಿತ್ವವು ಬಲಿಷ್ಠಲಿಂಗ ೩೫೨

ಶ್ರುತಿಲಿಂಗಗಳ ನಿರವಕಾಶತ್ವವು ನ್ಯಾಯವಿವರಣಕ್ಕೆ ಸಮ್ಮತ ೩೫೬

ವಿಷ್ಣುಲಿಂಗ ಹಾಗೂ ವಿಷ್ಣುಪ್ರಕರಣಗಳು ಸಾವಕಾಶವಾಗಿವೆ ೩೬೦

ಪೌಷ್ಣಂ ಪೇಷಣಂ ವಿಕೃತೌ ಪ್ರತೀಯೇತಾಚೋದನಾತ್ಪ್ರಕೃತೌ (೩-೩-೧೮) ೩೬೬

ಕರ್ತೃಗುಣೇ ತು ಕರ್ಮಾಸಮವಾಯಾದ್ವಾಕ್ಯಭೇದಸ್ಸ್ಯಾತ್ (೩-೧-೯) ೩೬೭

ಸರ್ವಾತ್ಮತ್ವ ವಿಷ್ಣುವಿನಲ್ಲಿ ಮಾತ್ರವೆಂದು ಸಿದ್ಧಾಂತ ೩೭೧

ವಿಷ್ಣುವಿನ ಸರ್ವಾತ್ಮತ್ವಕ್ಕೆ ಅದಿತಿಶಬ್ದವೇ ಹೇತು ೩೮೧

ಅದ್ವೈತಿಗಳ ಅಧಿಕರಣ ಶರೀರ ೩೮೭

ಅದ್ವೈತಮತ ನಿರಾಕರಣೆ ೩೯೨

ಟೀಕೆಯ ಕಠಿಣಪದಾರ್ಥ ೩೯೯

ಅತ್ಯತ್ವಾಧಿಕರಣದ ಪರಿಶಿಷ್ಟಗ್ರಂಥಗಳು (೪೦೫-೪೧೬)

ಗುಹಾಧಿಕರಣ -
ಭಾಷ್ಯ ತತ್ತ್ವಪ್ರಕಾಶಿಕಾ

ಪರಮಾತ್ಮನ ಎರಡು ರೂಪಗಳೇ ಹೃದಯಗುಹೆಯಲ್ಲಿವೆ ೪೧೮

ಬ್ರಹ್ಮ ಮೊದಲಾದ ವಿಶೇಷಣಗಳೂ ಕೂಡ ಪೂರಕವಾಗಿವೆ ೪೪೪

ತಾತ್ಪರ್ಯಚಂದ್ರಿಕಾ

ಆವಾಂತರ ಸಂಗತಿ ನಿರೂಪಣೆ ೪೬೨

ಸಂಶಯ ಪರಂಪರೆ ೪೬೭

ಪ್ರಬಲವಾದ ಪೂರ್ವಪಕ್ಷ ೪೭೪

ಪೃಥಕ್ತ್ವನಿವೇಶಾತ್ಸಂಖ್ಯಾ ಕರ್ಮಭೇದಃ ಸ್ಯಾತ್ (೨-೨-೭) ೪೭೬

ದ್ವಿವಚನಶ್ರುತಿ ನಿರವಕಾಶವೆಂದು ಪೂರ್ವಪಕ್ಷ ೪೮೧

ಪ್ರಯಾಜೇಽಪೀತಿ ಚೇತ್ (೯-೨-೨೦) ೪೯೧

ಸಂದಂಶ ನ್ಯಾಯದಿಂದ ವಿಷ್ಣುವೇ ದ್ವಿವಚನಶ್ರುತಿ ಪ್ರತಿಪಾದ್ಯನೆಂದು ಸಿದ್ಧಾಂತ ೪೯೮

ಭೋಕ್ತೃ ಶ್ರೀಹರಿಯೇ ಹೊರತು ಜೀವನಲ್ಲ ೫೦೩

ದ್ವಿವಚನವೂ ಸಹ ಬಾಧಕವಲ್ಲ ೫೧೫

'ಅಪೂರ್ವೇ ತ್ವವಿಕಾರೋಽಪ್ರದೇಶಾತ್ತೃತೀಯತೇ' (೯-೩-೫) ೫೧೮

ವಿಪ್ರತಿಪತ್ತೌ ವಿಕಲ್ಪಃ ಸ್ಯಾದ್ಗುಣೇ ತ್ವನ್ಯಾಯ್ಯ ಕಲ್ಪನೈಕದೇಶತ್ವಾತ್ (೯-೩-೪) ೫೧೯

ಪ್ರಾತಿಪದಿಕಾರ್ಥವಾದ ಸಂಖ್ಯೆಗೆ ಅನ್ವಯ ಮಾಡಬಹುದು ೫೨೩

''ದ್ವಿತ್ವಬಹುತ್ವಯುಕ್ತಂ ವಾ ಚೋದನಾತ್ತಸ್ಯ'' (೩-೩-೧೪)	೫೨೫
'ಅರ್ಥಾಭಾವಾತ್ ನೈವಂ ಸ್ಯಾದ್ಗುಣಮಾತ್ರಮಿತರತ್'	೫೨೬
ನಿರ್ಜ್ಞಾತ ವಿರುದ್ಧವಿಶೇಷಣತ್ವವೇ ಅವಿವಕ್ಷೆಗೆ ಪ್ರಯೋಜಕ	೫೩೦
ತೇಷಾಂ ತು ವಚನಾದ್ ದ್ವಿಯಜ್ಞವತ್ ಸಹ ಪ್ರಯೋಗಸ್ಸ್ಯಾತ್ (೧೦-೨-೧೩)	೫೩೫
ಮೊದಲು ನಿರ್ಣೀತವಾದದ್ದನ್ನು ಎಂದೂ ಬಿಡಬಾರದು	೫೪೦
ವಿವೃದ್ಧಿಃ ಕರ್ಮಭೇದಾತ್ಪ್ರಪದಾಜ್ಯವತ್ತಸ್ಯ ತಸ್ಯೋಪದಿಶ್ಯತೇ (೫-೩-೧)	೫೪೧
ನೈಮಿತ್ತಿಕಂತೂತ್ತರೋತ್ತರತ್ವಮಾನಂತರ್ಯಾತ್ಪತ್ತೀಯೇತ (೯-೨-೪)	೫೪೪
ಒಬ್ಬನೇ ಪರಮಾತ್ಮನಲ್ಲಿ ದ್ವಿತ್ವಾದಿ ಸಂಖ್ಯೆಗಳಿವೆ	೫೪೬
ದೃಷ್ಟಾಂತಪುರಸ್ಸರವಾಗಿ ಬ್ರಹ್ಮನಲ್ಲಿ ದ್ವಿತ್ವ ಏಕತ್ವಗಳ ಸಮರ್ಥನೆ	೫೫೦
ಮೇಧಪತಿತ್ವಂ ಸ್ವಾಮಿದೇವತಸ್ಯ ಸಮವಾಯಾತ್ಸರ್ವತ್ರ ಚ ಪ್ರಯುಕ್ತತ್ವಾತ್ತಸ್ಯ ಚಾನ್ಯಾಯ್ಯನಿಗದತ್ವಾತ್ ಸರ್ವತ್ರೈವಾವಿಕಾರಃ ಸ್ಯಾತ್ (೯-೩-೧೨)	೫೫೩
ನ ಸಂಖ್ಯೋಪಸಂಗ್ರಹಾಧಿಕರಣದಿಂದ ಪುನರುಕ್ತಿ ಬರುವುದಿಲ್ಲ	೫೫೮
ನ ಸಂಖ್ಯೋಪಸಂಗ್ರಹಾದಪಿ ನಾನಾಭಾವಾದತಿರೇಕಾಚ್ಚ (೧-೪-೩)	೫೬೦
ವಿಷ್ಣುಪರವೆನ್ನಲು ಧಾಯಾತಪ ಶಬ್ದವೆನ್ನಲು ಬಾಧಕವಲ್ಲ	೫೬೩
ಶಂಕರಭಾಷ್ಯದಲ್ಲಿ ಗುಹಾಧಿಕರಣ	೫೭೧
ಅದ್ವೈತಿಗಳಿಗೆ ಮುಳ್ಳಾದ ದ್ವಿವಚನ	೫೭೫
ಅದ್ವೈತಿಗಳ ಸಿದ್ಧಾಂತ ಕೇವಲ ಶಬ್ದದ ಕಲಹ	೫೮೧
ದ್ವಿತೀಯ ಸೂತ್ರಾರ್ಥ ನಿರಾಕರಣೆ	೫೮೮

ರಾಮನುಜರಿಗೆ ನಾಲ್ಕು ಸೂತ್ರಗಳು ಸೇರಿ ಒಂದೇ ಅಧಿಕರಣ ೫೯

ರಾಮಾನುಜರ ವಿಷಯವಾಕ್ಯಗಳಿಗೆ ಉಪಜೀವ್ಯ ಉಪಜೀವಕಭಾವವಿಲ್ಲ ೬೦೮

ಸಂದಿಗ್ಧೇ ತು ವ್ಯವಾಯಾದ್ವಾಕ್ಯಭೇದಸ್ಯ (೩-೧-೧೦) ೬೧೨

ಶ್ರುತಿಲಿಂಗವಾಕ್ಯಪ್ರಕರಣಸ್ಥಾನಸಮಾಖ್ಯಾನಾಂ ಸಮವಾಯೇ
ಪರದೌರ್ಬಲ್ಯಮರ್ಥವಿಪ್ರಕರ್ಷಾತ್ (೩-೩-೧೦) ೬೧೫

ಒಂದೇ ಪ್ರಕರಣದಲ್ಲಿರುವಿಕೆಯು ಐಕಾಧಿಕರಣ್ಯಕ್ಕೆ ತಂತ್ರವಲ್ಲ ೬೧೮

ಒಂದು ವಾಕ್ಯವೇ ಅನೇಕ ಅಧಿಕರಣಗಳಿಗೆ ವಿಷಯವಾಗಬಹುದು ೬೨೨

ಪೂರ್ವಮೀಮಾಂಸಾಶಾಸ್ತ್ರದಿಂದ ಪುನರುಕ್ತಿ ೬೩೧

ಟೀಕೆಯ ಕಠಿಣಪದಾರ್ಥ ೬೩೪

ಗುಹಾಧಿಕರಣದ ಪರಿಶಿಷ್ಟಗ್ರಂಥಗಳು (೬೪೧-೬೫೬)

ಅಂತರಾಧಿಕರಣ

ಭಾಷ್ಯ ತತ್ತ್ವಪ್ರಕಾಶಿಕಾ

ಚಕ್ಷುರಿಂದ್ರಿಯದಲ್ಲಿರುವವನೂ ಸಹ ವಿಷ್ಣುವೇ ೬೫೮

ಸ್ಥಾನಶಕ್ತಿಯಿಂದಲೂ ವಿಷ್ಣುವೇ ಅಂತರನು ೬೮೯

ಬ್ರಹ್ಮಪ್ರಕರಣದಲ್ಲಿ ಅಗ್ನಿಯು ಪ್ರಸಕ್ತನಾಗಲಾರ ೬೯೯

ಬ್ರಹ್ಮಪ್ರಾಪ್ತಿವೆಂಬ ಪ್ರಯೋಜನವೂ ಸಹ ಆಧಾರವಾಗಿದೆ ೭೦೮

ಅಗ್ನಿಯು ಅಂತರನಾದಲ್ಲಿ ಬಾಧಕವಿದೆ ೭೨೧

ತಾತ್ಪರ್ಯಚಂದ್ರಿಕಾ

ಅಕ್ಷಿವಾಕ್ಯವೇ ವಿಷಯ, ಅಗ್ನಿಯೋ, ವಿಷ್ಣುವೋ ? ಎಂದು ಸಂಶಯ	೭೩೪
ಅಕ್ಷಿ ಶಬ್ದವು ಅಭಿಮಾನಿಪರವೆಂದು ಪೂರ್ವಪಕ್ಷ	೭೪೮
ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್ (೨-೧-೩)	೭೫೨
ಅಕ್ಷಿಶಬ್ದವು ಜಡಪರವೂ ಆಗಬಹುದು	೭೫೫
'ಸೋಽಹಮಸ್ಮಿ' ಎಂಬುದು ಅಗ್ನಿಯದ್ದೇ ಉಪದೇಶ	೭೫೯
ಅಗ್ನಿಯೇ ಪ್ರತಿಪಾದ್ಯನೆನ್ನಲು ಅಭ್ಯಾಸ ಅರ್ಥವಾದ	
ಬಹುಶ್ರುತಿಪ್ರಮಾಣಗಳ ಆಧಾರ	೭೬೪
ಪೂರ್ವಪಕ್ಷ ಟೀಕೆಯಲ್ಲಿರುವ ಗೊಂದಲಗಳ ಪರಿಹಾರ	೭೬೯
ಕಣ್ಣಿನಲ್ಲಿರುವವನು ವಿಷ್ಣುವೇ ಎಂದು ಸಿದ್ಧಾಂತ	೭೭೮
ಪ್ರಥಮಸೂತ್ರದ ವಿನ್ಯಾಸದಲ್ಲಿ ಸ್ವಾರಸ್ಯ	೭೮೬
ಉಳಿದ ಸೂತ್ರಗಳ ಜೋಡಣೆಯೂ ಅತ್ಯಂತ ಸ್ವಾರಸ್ಯಮಯ	೭೯೨
ಅದ್ವೈತಿಗಳಿಗೆ ರಾಮಾನುಜರಿಗೆ ಪುನರುಕ್ತಿ ದೋಷ	೭೯೮
ಅದ್ವೈತಿಗಳ ಸೂತ್ರಾರ್ಥ ನಿರಾಕರಣೆ	೮೧೫
ಟೀಕೆಯ ಕಠಿಣಪದಾರ್ಥ	೮೪೦
ಅಂತರಾಧಿಕರಣದ ಪರಿಶಿಷ್ಟಗ್ರಂಥಗಳು	(೮೫೧-೮೭೦)

* * * * *

೦೧-ಸರ್ವಗತತ್ವಾಧಿಕರಣ

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ, ಭಾಷ್ಯದೀಪಿಕಾ,
ಸತ್ತರ್ಕದೀಪಾವಳಿ, ತತ್ವಪ್ರಕಾಶಿಕಾ,
ಭಾವದೀಪ, ವಾಕ್ಯಾರ್ಥಮಂಜರೀ

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಬ್ರಹ್ಮಾಂಡನಾಯಕ, ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

ಬ್ರಹ್ಮಮೀಮಾಂಸಾಶಾಸ್ತ್ರ

ಸರ್ವಗತತ್ವಾಧಿಕರಣ

ಯೌಗಿಕ ಶಬ್ದಗಳ ಸಮನ್ವಯಕ್ಕಾಗಿ ಲಿಂಗಪಾದ

ಸೂ – ॐ ॥ सर्वत्र प्रसिद्धोपदेशात् ॥ ॐ (೧ - ೨-೧)

ಐತರೇಯ ಶ್ರುತಿಯಲ್ಲಿ ಪೃಥಿವ್ಯಾದಿಗಳಲ್ಲಿ ಯಾರು ಇರುತ್ತಾನೆಂದು ಹೇಳಲ್ಪಟ್ಟದ್ದಾನೋ ಅಂತಹವನು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಪ್ರಸಿದ್ಧವಾದ ಬ್ರಹ್ಮಶಬ್ದವಿರುವುದರಿಂದ.

* * *

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ – तत्तु इति वर्तते । सर्वत्र पृथिव्यादिषु । उच्यमानं वस्तु तत्तु नाराणाख्यं ब्रह्मैव नतु अन्यत् । कुतः प्रसिद्धोपदेशात् ''एतमेव ब्रह्म'' इति (ऐ. आ. ३-२-३-१२.) सर्वगते वस्तुनि नारायणवाचित्वेन श्रुत्यादिप्रसिद्धब्रह्मशब्दश्रवणादित्यर्थः ।

''ತತ್ತು'' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಸರ್ವತ್ರ = ಪೃಥಿವ್ಯಾದಿಗಳಲ್ಲಿ ಇರುವವನೆಂದು ಹೇಳಲ್ಪಟ್ಟ ವಸ್ತು ತತ್ತು = ನಾರಾಯಣನೆಂಬ ಬ್ರಹ್ಮನೇ ಆಗಿದ್ದಾನೆ ಹೊರತು ಬೇರೆಯವರಲ್ಲ. ಏಕೆಂದರೆ ''ಪ್ರಸಿದ್ಧೋಪದೇಶಾತ್'' = ''ಏತಮೇವ ಬ್ರಹ್ಮ'' ಎಂಬ ಐತರೇಯ ಆರಣ್ಯಕದ ವಾಕ್ಯದಲ್ಲಿ ಸರ್ವಗತನಾದ ವಸ್ತು ನಾರಾಯಣನೇ ಆಗಿದ್ದಾನೆನ್ನಲು ನಾರಾಯಣನಲ್ಲಿಯೇ ಪ್ರಸಿದ್ಧವಾದ ಬ್ರಹ್ಮಶಬ್ದವನ್ನು ಹೇಳಿದ್ದರಿಂದ.

* * * *

श्रीमदानन्दतीर्थभगवत्पादाचार्यविरचित-

ब्रह्मसूत्रभाष्यम्

भाष्यम् – लिङ्गात्मकानां शब्दानां विष्णौ प्रवृत्तिं दर्शयत्यस्मिन् पादे प्राधान्येन ।

ಅನುವಾದ - ಇದು ಲಿಂಗಪಾದ. ಇದರಲ್ಲಿ ಪ್ರಧಾನವಾಗಿ ಧರ್ಮವಿಶಿಷ್ಟವಾದ ಅನ್ಯತ್ರಪ್ರಸಿದ್ಧವಾದ ಶಬ್ದಗಳನ್ನು ಭಗವಂತನಲ್ಲಿ ಪ್ರತಿಪಾದಿಸಲಾಗಿದೆ.

ಪ್ರತಿಪದಾರ್ಥ – ನಾಮಪಾದವು ಮುಗಿಯಿತು; ಲಿಂಗಪಾದವು ಪ್ರಾರಂಭವಾಗುತ್ತಿದೆ. ಹಿಂದಿನ ಪಾದಕ್ಕಿಂತ ಈ ಪಾದಕ್ಕೆ ವೈಲಕ್ಷಣ್ಯವನ್ನು ತೋರಿಸುವ ಮೂಲಕ ಎರಡನೆಯ ಪಾದವು ಒಂದೇ ವಿಷಯವನ್ನು ಪ್ರತಿಪಾದಿಸುತ್ತಿದೆಯೆಂಬುದನ್ನು ತಿಳಿಸುವುದಕ್ಕಾಗಿಯೂ ಪಾದಪ್ರತಿಪಾದ್ಯವಾದ ಪ್ರಮೇಯವನ್ನು ಪ್ರದರ್ಶಿಸುತ್ತಿದ್ದಾರೆ -

ಅಸ್ಮಿನ್ ಪಾದೇ = ಈ ಲಿಂಗಪಾದದಲ್ಲಿ, ಪ್ರಾಧಾನ್ಯೇನ = ಮುಖ್ಯವಾಗಿ, ಲಿಂಗಾತ್ಮಕಾನಾಂ = ಧರ್ಮವಿಶಿಷ್ಟಧರ್ಮವಾಚಕಗಳಾದ, ಶಬ್ದಾನಾಂ = ಅನ್ಯತ್ರಪ್ರಸಿದ್ಧವಾದ ಶಬ್ದಗಳಿಗೆ, ವಿಷ್ಣೌ = ಬ್ರಹ್ಮನಲ್ಲಿ, ಪ್ರವೃತ್ತಿಂ = ಮುಖ್ಯವಾಚ್ಯತ್ವವನ್ನು, ದರ್ಶಯತಿ = ತೋರಿಸುತ್ತಿದ್ದಾರೆ.(೧)

भाष्यम् – 'ब्रह्म ततमम्' इति सर्वगतत्वमुक्तं विष्णोः। तच्च 'तस्यैतस्यासावादित्यो रसः' (ऐ.आ.३.२.३) इत्यादिनाऽऽदित्यस्य प्रतीयते ॥

(१) भाष्यदीपिका – पूर्वोत्तरपादभेदस्य स्वस्मिन्नेकवाक्यतायाश्च सिद्धये एतत्पादप्रतिपाद्यं दर्शयति – लिङ्गेति ।। लिङ्गमनुमापको धर्मः । स आत्मेवाऽत्मा प्रवृत्तिनिमित्तं येषां ते तथोक्ताः । 'निमित्तनिमित्तिनोरभेदोपचारात्' इति सुधोक्तेः । स्वरूपार्थो वा आत्मशब्दः । पूर्वयोजनायामात्मप्रतिपादके गौणी वृत्तिः । द्वितीयायां तु सामानाधिकरण्यमिति भेदः । स्वार्थे कः । तथा च व्याप्यधर्मद्वारा धर्मिबोधकानामापाततो यौगिकानामित्यर्थः । विष्णोरन्यत्रप्रसिद्धानामिति च संयोज्यम् । 'शब्दानामिति' एकप्रातिपदिकरूपाणामनेकपदसमभिव्याहाररूपाणां चेत्यर्थः । 'विष्णौ प्रवृत्तिं' प्रकर्षेण वृत्तिं महायोगविद्बृहद्भिश्च विष्णुपरत्वमिति यावत् । 'प्रदर्शयति' प्रकर्षेण साधयति सूत्रकार इत्यर्थः । वैश्वानराधिकरणे नामसमन्वयकरणादव्याप्तिनिरासाय प्राधान्येन इत्युक्तम् । तथा च तत्रापि नामसमन्वयमुखेन प्राधान्येन फलतो बहुलिङ्गसमन्वयस्यैव करणान्नाव्याप्तिरिति भावः ।।

ಅನುವಾದ - ಐತರೇಯೋಪನಿಷತ್ತಿನಲ್ಲಿ 'ಬ್ರಹ್ಮ ತತಮಮ್' ಎಂದು ಬ್ರಹ್ಮನು ವ್ಯಾಪ್ತನಾಗಿದ್ದಾನೆಂದು ಹೇಳಲಾಗಿದೆ. ಅದೇ ಪ್ರಕರಣದಲ್ಲಿ 'ತಸ್ಯೈತಸ್ಯಾಸಾವಾದಿತ್ಯೋ ರಸಃ' ಎಂದು ಸಂವತ್ಸರಕ್ಕೆ ಈ ಸೂರ್ಯನೇ ಅಧಿಪತಿಯೆಂಬುದಾಗಿ ಸೂರ್ಯನ ಉಲ್ಲೇಖವಿದೆ. ಆದ್ದರಿಂದ ಸರ್ವಗತನಾದವನು ಸೂರ್ಯನೇ ಹೊರತು ವಿಷ್ಣುವಲ್ಲ ಎಂದು ಪೂರ್ವಪಕ್ಷ.

ಪ್ರತಿಪದಾರ್ಥ - 'ಬ್ರಹ್ಮ ತತಮಮ್' ಇತಿ = ಬ್ರಹ್ಮನು ವ್ಯಾಪ್ತನಾಗಿದ್ದಾನೆಂದು ಹಿಂದಿನ ಅಧಿಕರಣದಲ್ಲಿ, ವಿಷ್ಣೋಃ = ವಿಷ್ಣುವಿಗೆ, ಸರ್ವಗತತ್ವಂ = ಸರ್ವಗತತ್ವವನ್ನು, ಉಕ್ತಂ = ಹೇಳಲಾಗಿದೆ, ತಚ್ಚ = ಆ ಸರ್ವಗತತ್ವವಾದರೂ ಮುಂದೆ ಐತರೇಯೋಪನಿಷತ್ತಿನಲ್ಲಿಯೇ, ತಸ್ಯ = ಹಿಂದೆ ಹೇಳಿದ ಪ್ರಾಣನಿಗಿಂತಲೂ, ಏತಸ್ಯ = ಹಿಂದೆ ಹೇಳಿದ ಚತುರ್ಮುಖನಿಗಿಂತಲೂ, ಅಸೌ = ಪ್ರಸಿದ್ಧನಾದ, ಆದಿತ್ಯಃ = ಸೂರ್ಯನು, ರಸಃ = ಶ್ರೇಷ್ಠನಾಗಿದ್ದಾನೆ. ಇತ್ಯಾದಿನಾ = ಇವೇ ಮೊದಲಾದ ಶ್ರುತಿವಾಕ್ಯಗಳಿಂದ, ಆದಿತ್ಯಸ್ಯ = ಆದಿತ್ಯನಿಗೆ, ಪ್ರತೀಯತೇ = ತೋರುತ್ತದೆ.(೧)

---

(೧) **ಭಾಷ್ಯದೀಪಿಕಾ** – यद्यपि पूर्वपादान्त्याधिकरणेनैतत्पादाद्यस्य नावान्तरसङ्गत्यपेक्षेति न सा प्रदर्शनीया । तथाऽपीह तस्याः सम्भवात् फलस्यावश्यवक्तव्यत्वाच्च सा प्रदर्श्यत इत्याशयेन पूर्वाधिकरणसङ्गतिं विषयादिकं च दर्शयति – **ब्रह्मेति** ।। इति वाक्ये विष्णोः निरवधिकसर्वगतत्वमुक्तमित्यर्थः । ततः किमित्यत आह – **तच्चेति** ।। तदित्यावर्तते, उक्तमिति च वर्तते । तथा च 'ब्रह्म ततमम्' (ऐ.आ. २.४.३) इति यत् ततमत्वमुक्तं प्राणाख्यविष्णोस्तत्तदेकदेशभूतं सर्वगतत्वान्तर्गतं सर्वप्राणिहृदयस्थत्वं तत्रैवैतरेयके 'एतं ह्येव बह्वृचा महत्युक्थे मीमांसन्त एतमग्नावध्वर्यव एतं महाव्रते छन्दोगाः एतमस्यामेतं दिव्येतं वायावेतमाकाश एतमप्सु एतमोषधीष्वेतं वनस्पतिष्वेतं चन्द्रमस्येतं नक्षत्रेष्वेतं सर्वेषु भूतेष्वेतमेव ब्रह्मेत्याचक्षते'(ऐ.आ-२-४-४) इत्यादौ एतमित्युत्तरवाक्येन उक्तमित्यर्थः । ततोऽपि किमित्यतः सयुक्तिकं पूर्वपक्षमाह – **तच्चेति** ।। चोऽवधारणे । आदिशब्देन 'स यश्चायमशरीरः प्रज्ञात्मा यश्चासावादित्य एकमेतदिति विद्यात् तस्मात् पुरुषं पुरुषं प्रत्यादित्यो भवति ... सूर्य आत्मा जगतस्तस्थुषश्च ... एतं सर्वेषु भूतेषु' (ऐ. ३-२-३.) इत्यादिवाक्यं गृह्यते । अत्र तस्येत्यादेरुपन्यासः एतमिति परामर्शनीयसमर्पकतयाऽऽवश्यकत्वात् पूर्वपक्षयुक्तिप्रदर्शनार्थं च कृतः । तथा च यत एतमित्युत्तरवाक्येनोक्तं सर्वप्राणिहृदयस्थत्वं तस्येत्यादिना पूर्ववाक्येन प्रकृतत्वात् तस्याऽदित्यस्यैव प्रतीयते, अतस्तस्यैव तत्पूर्वोक्तं ततमत्वमपि भवेत् । न विष्णोरिति योजना । अत्र पूर्वपक्षे ततमत्वं सङ्कुचितं सर्वभूतगतत्वरूपं विवक्षितम् । न चैवं सिद्धान्त्यभिमतनिरवधिकसर्वगतत्वाक्षेपापाप्तिरिति वाच्यम् । पूर्वपक्षे 'एतमेव' इत्यवधारणेन विष्णोरन्यस्यैव सर्वभूतगतत्वाद् विष्णोर्भूतादन्यत्र सत्त्वेऽपि सर्वभूतगतत्वापाप्त्याऽऽक्षेपोपपत्तेः ।।

ಭಾಷ್ಯಮ್ – ಅತೋऽಬ್ರವೀತ್ -

ಸೂ – ॐ ॥ ಸರ್ವತ್ರ ಪ್ರಸಿದ್ಧೋಪದೇಶಾತ್ ॥ ॐ ॥ ೧ ॥

ಅನುವಾದ - ಇದನ್ನು ನಿರಾಕರಿಸುವುದಕ್ಕಾಗಿ ಸರ್ವಗತನಾದವನು ವಿಷ್ಣುವೇ ಆಗಿದ್ದಾನೆನ್ನಲು ಬ್ರಹ್ಮಶಬ್ದವು ಅಧಾರವಾಗಿದೆ ಎಂಬುದಾಗಿ ಸೂತ್ರಕಾರರು ಹೇಳುತ್ತಿದ್ದಾರೆ.

ಪ್ರತಿಪದಾರ್ಥ – ಅತಃ = ಆ ಕಾರಣದಿಂದ ವಿಷ್ಣು ಸರ್ವಗತನೆಂದು ಹಿಂದಿನ ಅಂತಿಮಪ್ರಾಣಾಧಿಕರಣದಲ್ಲಿ ಹೇಳಿರುವುದು ಸರಿಯಲ್ಲ. ಇತಿ = ಈ

अनेन पूर्वोक्ततत्वान्तर्गतसर्वभूतगतत्वस्य विष्णोरन्यत्राऽक्षेपात् तेनास्याऽक्षेपिकी सङ्गतिः, विषयसंशयौ, विष्णोरन्यस्यैव सर्वप्राणिगतत्वमिति सयुक्तिकपूर्वपक्षश्च दर्शितो भवति ।

सिद्धान्ते श्रुत्यर्थस्तु – 'तस्य' प्रकृतस्य 'एतस्य' संवत्सरनामकस्य चतुर्मुखस्य सर्वादित्व ततमत्वनियामकत्वनिमित्तैरादित्यनामा प्रद्युम्नो रसः सारभूतः । स यश्चायं पुरुषदेहगतः प्राकृतदेहवर्जनादशरीरः 'प्रज्ञात्मा' ज्ञानरूपोऽनिरुद्धः । यश्चासावादित्ये स्थितः प्रद्युम्न एतत्स्थानद्वयगतं रूपमेकमिति विद्यात् । तस्मात् पुरुषादित्यगतानिरुद्ध-प्रद्युम्नयोरैक्यादादित्यः 'पुरुषं पुरुषं प्रति' प्रतिपुरुषं 'भवति' अभिमुखो भवति । प्रतिगृहं कूप इतिवत् सर्वपुरुषगतो भवतीति चेति । 'जगतः' जङ्गमस्य 'तस्थुषः' स्थावरस्य 'आत्मा' आदानादिकर्ता 'सूर्यः' सूरिप्राप्यो विष्णुर्दिवं पृथिवीमन्तरिक्षं च 'आऽप्राः' आ समन्तादपूरयदित्यर्थः । एतमित्यादीनां सप्तम्यन्तपदैः प्रत्येकं सम्बन्धः । तथा च 'बह्वृचाः' ऋग्वेदिनः 'एतं ह्येव' एतमेव पुरुषादित्यगतमेव हि विष्णुं 'महत्युक्थे' महदुक्थनामकबृहतीसहस्रे तदेवताविषये तदेवतामिति यावत् 'मीमांसन्ते' जानन्ति । 'अध्वर्यवः' यजुर्वेदिनः 'अग्नौ' चयनसाधनेष्टकादेवताविषये तदेवतां मीमांसन्ते । 'छन्दोगाः' सामवेदिनः 'महाव्रते' तदाख्यस्तोत्रस्य देवतां स्तोत्रे मीमांसन्ते । 'अस्यां' पृथिव्यां एतं 'दिवि' अन्तरिक्षे वाय्वादौ चैवं एतमेव 'सर्वेषु भूतेषु' सर्वप्राणिष्वन्तर्व्याप्तमाचक्षते विद्वांस इत्यर्थः । सर्वेष्वित्येव पूर्तेः पुनर्भूतेष्वित्युक्तिरत्र भूतवृत्तित्वमात्रं प्रतिपाद्यतयाऽभिप्रेतमिति ज्ञापयितुम् । एतं सर्वभूतगतमेव विष्णुं गुणपूर्णत्वाद् व्याप्तत्वाच्च एतं मुख्यतो ब्रह्मेत्याचक्षते इति वाक्यशेषार्थः ॥ नस्थानाधिकरणटीकायां तु – सर्वेषु भूतेषु चक्षुरादिस्थानेषु एतमेकमेव ब्रह्म गुणपूर्णमाचक्षत इति व्याख्यातम् । पूर्वपक्षी तु तस्यैतस्य प्रकृतप्रसिद्धसंवत्सरस्यासौ प्रसिद्ध आदित्यः सूर्यो रसः सारभूतोऽधिपतिरित्यर्थं मन्यते ।

ಕಾರಣವಿರುವುದರಿಂದ, ಅತೋಽಬ್ರವೀತ್ = ಶಂಕೆಯನ್ನು ಪರಿಹರಿಸಲು ಸೂತ್ರಕಾರರು ಹೇಳುತ್ತಿದ್ದಾರೆ.(೧)

ಓಂ ॥ ಸರ್ವತ್ರ ಪ್ರಸಿದ್ಧೋಪದೇಶಾತ್ ॥ ಓಂ ಎಂಬುದಾಗಿ.

'स यश्चायमशरीरः प्रज्ञात्मा' (ऐ.आ. ३-२-४.)

इत्यादिना सर्वत्रोच्यमानो नारायण एव ।

ಅನುವಾದ - ಐತರೇಯೋಪನಿಷತ್ತಿನಲ್ಲಿ 'ಸ ಯಶ್ಚಾಯಂ' ಮುಂತಾದ ವಾಕ್ಯಗಳಿಂದ ಸರ್ವಗತನೆಂದು ಪ್ರತಿಪಾದ್ಯನಾದವನು ನಾರಾಯಣನೇ ಆಗಿದ್ದಾನೆ ಹೊರತು ಸೂರ್ಯಾದಿಗಳಲ್ಲ.

ಪ್ರತಿಪದಾರ್ಥ - ಸಮನ್ವಯಸೂತ್ರದಿಂದ 'ತತ್ತು' ಎಂಬುದನ್ನು ಅನುವೃತ್ತಿ ಮಾಡಿಕೊಂಡು ಲಿಂಗವನ್ನು ವ್ಯತ್ಯಾಸಮಾಡಿ ಉಚ್ಯಮಾನಪದವನ್ನು ಅಧ್ಯಾಹಾರ ಮಾಡಿಕೊಂಡು ಸೂತ್ರದ ಅಭಿಪ್ರಾಯವನ್ನು 'ಸ ಯಶ್ಚಾಯಂ' ಎಂಬ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ - ಯಃ = ಯಾವಾತನು ಐತರೇಯದಲ್ಲಿ ಪ್ರತಿಪಾದ್ಯನಾಗಿದ್ದಾನೋ, ಸ ಚ = ಆವನು, ಅಶರೀರಃ = ಪ್ರಾಕೃತ ಶರೀರ ರಹಿತನು. ಅಯಂ = ಅವನೇ, ಪ್ರಜ್ಞಾತ್ಮಾ = ಜ್ಞಾನಸ್ವರೂಪನು, ಇತ್ಯಾದಿನಾ = ಇವೇ ಮೊದಲಾದ ವಾಕ್ಯಗಳಿಂದ ಸರ್ವತ್ರ = ಎಲ್ಲಾಕಡೆಯೂ, ಉಚ್ಯಮಾನಃ = ವಾಪ್ತನೆಂದು ಕರೆಸಿಕೊಳ್ಳುವವನು, ನಾರಾಯಣಃ ಏವ = ನಾರಾಯಣನೇ ಆಗಿದ್ದಾನೆ.(೨)

---

(೧) **भाष्यदीपिका** – अथ सिद्धान्तयत्सूत्रमवतारयति – अत इति ।। इति सङ्गतिसम्भवादाक्षेपसङ्गावाच्च अतस्तत्परिहारायोत्तरमब्रवीद् बादरायण इत्यर्थः । तदेव सूत्रं पठति – **सर्वत्रेति**

(೨) **भाष्यदीपिका** – अत्र समन्वयसूत्रात् तत्त्वित्यस्यानुवृत्तिं लिङ्गव्यत्ययम् 'उच्यमानम्' इत्यध्याहारं चाभिप्रेत्य प्रतिज्ञांशं व्याचष्टे – **स यश्चेति** ।। वाक्येनेति शेषः । यद्यपि 'तस्यैतस्यासौ' इत्यादिनेति वक्तव्यम् । पूर्ववाक्यत्वात् । तथाऽपि तस्य पूर्वपक्षयुक्ति-प्रदर्शनार्थत्वेनोपन्यस्तत्वात् तद् विहाय सिद्धान्तयुक्तिप्रदर्शकवाक्यज्ञापनाय 'स यश्चायमशरीरः प्रज्ञात्मा' इत्यादिनेत्येवोक्तम् । वस्तुतस्तु – न 'तस्यैतस्यासौ' इत्यस्येव 'स यश्च' इत्यस्य युक्तिप्रदर्शनमात्रतात्पर्येणोपन्यासः, नापि विषयमात्रप्रदर्शनतात्पर्येण । अपि तु पूर्वं विषयवाक्यस्यानुदाहृतत्वात् तदर्थतया तद्गतैतच्छब्दपरामर्शनीय-समर्पणार्थमनन्यसाधारणस्वतोऽशरीरत्वयुक्तिप्रदर्शनार्थं चेति ध्येयम् । 'सर्वत्र' सर्वप्राणि-हृदयेष्वन्तर्गततयोच्यमानो नारायण एवेति नारायणशब्दप्रयोगेन -

ಭಾಷ್ಯಮ್ – 'तदेव ब्रह्म परमं कवीनाम्' (महाना. १-६.)
परमं यो महद्ब्रह्म' (महाभारते विष्णुसहस्रनामसु)

ಅನುವಾದ - ಏಕೆಂದರೆ ಜ್ಞಾನಿಗಳ ದೃಷ್ಟಿಯಿಂದ ವಿಷ್ಣುವೇ ಪರಬ್ರಹ್ಮನಾಗಿದ್ದಾನೆ ಎಂಬುದಾಗಿ ಮತ್ತು ಸರ್ವೋತ್ತಮನಾದ ಪರಬ್ರಹ್ಮನಿದ್ದಾನೆ ಎಂಬುದಾಗಿ ಪ್ರಮಾಣಗಳಿವೆ.

ಪ್ರತಿಪದಾರ್ಥ - ನಾರಾಯಣೋಪನಿಷತ್ತಿನಲ್ಲಿ ಹೀಗೆ ಹೇಳಲಾಗಿದೆ - कवीनाम् = ಜ್ಞಾನಿಗಳಿಗೆ, तदेव = ವ್ಯಾಪ್ತವಾದ ವಸ್ತುವೇ, परमं ब्रह्म = ಪರಬ್ರಹ್ಮ ವಸ್ತುವಾಗಿದೆ. ಮತ್ತು ಮಹಾಭಾರತದಲ್ಲಿ, यः = ಯಾವುದು, परमं = ಪೂರ್ಣವಾಗಿದೆಯೋ, तत् = ಆ ವಸ್ತುವೇ, महद् ब्रह्म = ಮಹಾಮಹಿಮೋಪೇತವಾದ ವಸ್ತುವಾಗಿದೆ ಎಂಬ ಮಾತಿದೆ.(೧)

ಭಾಷ್ಯಮ್ –

'वासुदेवात् परः को नु ब्रह्मशब्दोदितो भवेत् ।
स हि सर्वगुणैः पूर्णस्तदन्ये तूपचारतः ॥'

इति तस्मिन्नेव प्रसिद्धब्रह्मशब्दोपदेशात् ॥ १ ॥

ಅನುವಾದ - ವಾಸುದೇವನನ್ನು ಬಿಟ್ಟು ಬೇರೆ ಯಾರೂ ಬ್ರಹ್ಮಪದ ವಾಚ್ಯರಲ್ಲ. ಆದ್ದರಿಂದ ಅವನೇ ಸಕಲ ಗುಣಗಳಿಂದ ಪೂರ್ಣನಾಗಿದ್ದಾನೆ; ಬೇರೆಯವರು ಅಮುಖ್ಯವಾಗಿ ಬ್ರಹ್ಮಶಬ್ದದಿಂದ ವಾಚ್ಯರಾಗುತ್ತಾರೆಂಬುದಾಗಿಯೂ ಪ್ರಮಾಣಗಳು ಇರುವುದರಿಂದ ಬ್ರಹ್ಮಶಬ್ದ ಪ್ರಯೋಗವು ನಾರಾಯಣನಲ್ಲಿಯೇ ಉಪಪನ್ನವಾಗುತ್ತದೆ.

ಪ್ರತಿಪದಾರ್ಥ - ಮತ್ತೊಂದು ಶ್ರುತಿಯಲ್ಲಿ वासुदेवात् = ಎಲ್ಲೆಡೆ ವ್ಯಾಪಿಸಿರುವ ನಾರಾಯಣನಿಗಿಂತಲೂ, परः = ಬೇರೆ, कः नु = ಯಾರು ತಾನೆ, ब्रह्मशब्दोदितः = ಬ್ರಹ್ಮಶಬ್ದವಾಚ್ಯನು, भवेत् = ಆದಾನು, स हि = ಆ

'यच्च किञ्चिज्जगत्सर्वं दृश्यते श्रूयतेऽपि वा ।
अन्तर्बहिश्च तत्सर्वं व्याप्य नारायणः स्थितः ॥'

इति वाक्यमपि सङ्गृहीतं भवति । तेन च सूत्रे सङ्कुचितवृत्तिना सर्वत्रेत्यनेन सर्वभूतहृद्गतत्वस्यैवाभिप्रेतत्वेनान्यत्र बहिर्नेति प्राप्तशङ्कानिरस्ता भवति ॥

(१) ಭಾಷ್ಯದೀಪಿಕಾ – हेत्वंशं व्याचष्टे – तदेवेति ॥ व्याख्यातमेतज्जिज्ञासानये । ईश्वर-ब्रह्मणोरभेदबोधनार्थं प्रवृत्तस्य 'परमं यो महद्ब्रह्म परमं यः परायणम्' इति भारतवाक्यस्य यः परमं महद्ब्रह्म यः परमं परायणं तस्य लोकप्रधानस्य जगन्नाथस्य नाम्नामित्युत्तर-वाक्येनान्वयः ॥

ಕಾರಣದಿಂದಲೇ, ನಾರಾಯಣನು ಸರ್ವಗುಣೈಃ = ಸಕಲ ಗುಣಗಳಿಂದ, ಪೂರ್ಣಃ = ತುಂಬಿದ್ದಾನೆ, ತದನ್ಯೇ = ಇತರ ಚತುರ್ಮುಖಾದಿ ಜೀವರುಗಳು, ಉಪಚಾರತಃ = ಅಮುಖ್ಯವಾಗಿಯೇ ಬ್ರಹ್ಮಶಬ್ದವಾಚ್ಯರು. ಇತಿ = ಹೀಗೆ ಹೇಳಿರುವುದರಿಂದಲೇ, ತ್ಸ್ಮನ್ = ಆ ವಿಷ್ಣುವಿನಲ್ಲಿ, ಪ್ರಸಿದ್ಧಬ್ರಹ್ಮಶಬ್ದೋಪದೇಶಾತ್ = ಬ್ರಹ್ಮಶಬ್ದದ ಪ್ರಸಿದ್ಧಿಯನ್ನು ಹೇಳಿರುವುದರಿಂದಲೂ ಸರ್ವಗತನಲ್ಲಿ ಹೇಳಲ್ಪಟ್ಟ ಬ್ರಹ್ಮಶಬ್ದವಾಚ್ಯನಾದವನು ವಿಷ್ಣುವೇ ಆಗುತ್ತಾನೆ. ಆದಿತ್ಯಾದಿಗಳು ಆಗುವುದಿಲ್ಲ.(೧)

श्रीपद्मनाभतीर्थविरचितसत्तर्कदीपावळ्याम्ः
सर्वगतत्वाधिकरणम्

ॐ सर्वत्र प्रसिद्धोपदेशात् ॐ ।। १-२-१ ।।

अभिहितोऽर्थान्तरप्रसिद्धानां नाम्नां पूर्वं समन्वयो विष्णौ । अधुना लिङ्गवाचिनां बाहुल्येनार्थान्तररूढानामपि केषाञ्चिद् वैश्वानरादिशब्दानां सङ्गतिविशेषात् समन्वयोऽस्मिन् पाद इत्याह – लिङ्गेति ।।

(१) **भाष्यदीपिका** — वासुदेवादित्यपरा स्मृतिः ।। 'वासुदेवात्' कृष्णादन्यः को वा ब्रह्मशब्दमुख्यवाच्यो भवेत्, न कोऽपि । किन्तु स एव मुख्यवाच्यः । कुतः ? 'हि' यस्मात् 'सः' वासुदेवः सर्वगुणैः पूर्णस्तदन्ये त्वपूर्णाः तस्मात् । तर्हि 'ब्रह्माणि जीवाः सर्वेऽपि' इत्यादि कथमित्यत आह – तदन्य इति ।। वासुदेवादन्ये जीवाः 'उपचारतः' अमुख्यत एव ब्रह्मशब्दोदिताः, न तु मुख्यत इत्यर्थः – इतीति ।। वाक्येष्विति शेषः । अनेन सर्वत्रेत्यस्य हेतावप्यन्वयो दर्शितः । तथा च सर्वत्रोदाहृतवाक्येषु 'तस्मिन्नेव' विष्णावेव 'प्रसिद्धस्य' रूढत्वेनावगतस्य 'ब्रह्मशब्दस्योपदेशात्' सर्वगते वस्तुनि श्रवणादित्यर्थः । तस्मिन्नेवेत्यनेन श्रुतेर्निरवकाशत्वमुक्तं भवति ।।

अनेन 'स यश्चायमशरीरः प्रज्ञात्मा' (ऐ. आ. ३-२-३.) इत्यादिना 'सर्वेषु भूतेष्वेतमेव ब्रह्मेत्याचक्षते' (ऐ. आ. ३-२-३.) इति शाखाशेषेण सर्वत्र सर्वेषु भूतेष्वन्तर्गततयोच्यमानो नारायण एव न त्वादित्यादिः । कुतः ? 'एतमेव ब्रह्मेत्याचक्षते' इति सर्वभूतगते वस्तुनि नारायणैकनिष्ठत्वेन श्रुत्यादिप्रसिद्धब्रह्मशब्दोपदेशाच्छ्रुतेरिति सूत्रार्थ उक्तो भवति ।।

ಗತಾಧಿಕರಣೇನಾಸ್ಯಾಧಿಕರಣಸ್ಯ ಸಙ್ಗತಿಂ ದರ್ಶಯನ್ ಪೂರ್ವಪಕ್ಷಂ ದರ್ಶಯತಿ – ಬ್ರಹ್ಮೇತಿ ।। ಇದಮಾಮ್ನಾಯತೇ – ''ಏತಂ ತ್ವೇವ ಬಹ್ವೃಚಾ ಮಹತ್ಯುಕ್ಥೇ ಮೀಮಾಂಸನ್ತ ಏತಮಗ್ನಾವಧ್ವರ್ಯವ ಏತಂ ಮಹಾವ್ರತೇ ಚ್ಛನ್ದೋಗಾ ಏತಮಸ್ಯಾಮೇತಂ ದಿವ್ಯೇತಂ ವಾಯಾವೇತಂ ವಿದ್ಯುತಿ'' ಇತಿ ।

ಪೃಥಿವ್ಯಾದಿಸರ್ವಗತತ್ವೇನ ಮೀಮಾಂಸ್ಯಮಾನಃ 'ತಸ್ಯೈತಸ್ಯಾಸಾವಾದಿತ್ಯೋ ರಸಃ' 'ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ' ಇತ್ಯುಪಕ್ರಮವಶಾದಾದಿತ್ಯೋ ಭವೇತ್ । ಅತಶ್ಚ 'ಬ್ರಹ್ಮ ತತಮಮ್' ಇತಿ ಯತ್ ತತಮತ್ವಂ ವಿಷ್ಣೋರುಕ್ತಂ ತದಪ್ಯೇಕವಾಕ್ಯವಶಾದಾದಿತ್ಯಸ್ಯೈವ ಯುಕ್ತಮಿತ್ಯೇತಂ ಪಕ್ಷಂ ಪ್ರತಿಕ್ಷೇಪ್ತುಂ ಸೂತ್ರಮುಪನ್ಯಸ್ಯ ವ್ಯಾಚಷ್ಟೇ – ಸರ್ವತ್ರೇತ್ಯಾದಿನಾ ।।

ಹಿಂದಿನ ಪಾದದಲ್ಲಿ ಬೇರೆ ಅರ್ಥದಲ್ಲಿ ಪ್ರಸಿದ್ಧವಾದ ನಾಮಾತ್ಮಕ ಶಬ್ದಗಳ ಸಮನ್ವಯವನ್ನು ವಿಷ್ಣುವಿನಲ್ಲಿ ಮಾಡಿದ್ದಾಯಿತು. ಈ ಪಾದದಲ್ಲಿ ಲಿಂಗವಾಚಿಯಾದ ಬೇರೆ ಅರ್ಥದಲ್ಲಿ ಪ್ರಸಿದ್ಧವಾದ ಶಬ್ದಗಳ ಸಮನ್ವಯವನ್ನು ಬಹಳವಾಗಿ ಮಾಡುತ್ತಿದ್ದಾರೆ. ಆದರೆ ವಿಶೇಷ ಸಂಗತಿಯಿಂದ ಕೆಲವು ವೈಶ್ವಾನರ ಮೊದಲಾದ ನಾಮಾತಕ್ಮ ಶಬ್ದಗಳ ಸಮನ್ವಯವನ್ನು ಈ ಪಾದದಲ್ಲಿ ಮಾಡುತ್ತಿದ್ದಾರೆ. ಈ ವಿಷಯವನ್ನೆಲ್ಲಾ ಭಾಷ್ಯದಲ್ಲಿ ''ಲಿಂಗಾತ್ಮಕಾನಾಮ್'' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

ಹಿಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ಸಂಗತಿಯನ್ನು ತೋರಿಸುತ್ತಾ ಪೂರ್ವಪಕ್ಷವನ್ನು 'ಬ್ರಹ್ಮ' ಇತ್ಯಾದಿ ವಾಕ್ಯದಿಂದ ಮಾಡುತ್ತಿದ್ದಾರೆ. ಈ ಅಧಿಕರಣದ ವಿಷಯವಾಕ್ಯ ಹೀಗಿದೆ ''ಏತಮ್ ಹ್ಯೇವ ಬಹುಋಚಾ ಮಹತ್ಯುಕ್ಥೇ ಮೀಮಾಂಸಂತ ಏತಮಗ್ನಾವಧ್ವರ್ಯವ ಏತಂ ಮಹಾವ್ರತೇ ಚ್ಛಂದೋಗಾ ಏತಮಸ್ಯಾಮೇತಂ ದಿವ್ಯೇತಂ ವಾಯಾವೇತಂ ವಿದ್ಯುತಿ ॥'' ಎಂದು.

ಪೃಥಿವಿ ಮೊದಲಾದ ಸಕಲ ಪದಾರ್ಥಗಳ ಒಳಗಡೆ ನೆಲೆಸಿರುವವನು ಯಾರೆಂದು ಜಿಜ್ಞಾಸೆ ಬರುತ್ತದೆ. ಆವಾಗ ''ತಸ್ಯ ಏತಸ್ಯಾಸಾವಾದಿತ್ಯೋ ರಸಃ ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ'' ಎಂಬ ಉಪಕ್ರಮದಲ್ಲಿ ಪ್ರಸಕ್ತವಾದ ಆದಿತ್ಯನೇ ಸರ್ವಗತನೆಂದು ತಿಳಿಯುತ್ತದೆ. ಆದ್ದರಿಂದ ಹಿಂದಿನ ಅಧಿಕರಣದಲ್ಲಿ ವಿಷ್ಣುವಿಗೆ ಹೇಳಲ್ಪಟ್ಟ ''ತತಮತ್ವವು'' ಏಕವಾಕ್ಯದ ಅಧೀನವಾಗಿ ಆದಿತ್ಯನಲ್ಲಿ ಬರುತ್ತದೆಂದು ಪೂರ್ವಪಕ್ಷ. ಇದನ್ನು ನಿರಾಕರಿಸುವುದಕ್ಕಾಗಿ ಭಾಷ್ಯಕಾರರು ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ಸರ್ವತ್ರ'' ಇತ್ಯಾದಿಯಾಗಿ.

ಸರ್ವೇಷು ಭೂತೇಷ್ವೇತಮೇವ ಬ್ರಹ್ಮೇತ್ಯಾಚಕ್ಷತ ಇತಿ ಬ್ರಹ್ಮಶಬ್ದಾಭಿಧೇಯತ್ವಶ್ರವಣಾದತ್ರ ಸರ್ವಗತತ್ವೇನೋಚ್ಯಮಾನೋ ವಿಷ್ಣುರೇವ ನಾದಿತ್ಯಃ । 'ಅಶರೀರಃ ಪ್ರಜ್ಞಾತ್ಮಾ' ಇತ್ಯುಪಕ್ರಮಾಚ್ಚ । ನಚಾದಿತ್ಯೇ ಬ್ರಹ್ಮಶಬ್ದಃ ಶಙ್ಕನೀಯಃ । 'ತದೇವ ಬ್ರಹ್ಮ ಪರಮಮ್' 'ಯಚ್ಚಕ್ತ್ಯಾ ಪುಂಡರೀಕಾಕ್ಷಂ

ಸ್ತವೈರ್ಚೇನ್ನರಃ ಸದಾ ।' 'ಪರಮಂ ಯೋ ಮಹದ್ ಬ್ರಹ್ಮ' ಇತ್ಯಾದಿವಾಕ್ಯೇಷು ವಿಷ್ಣೋರೇವ ಪ್ರಸಿದ್ಧತ್ವಾತ್ ನಾದಿತ್ಯಸ್ಯ ಮುಖ್ಯತೊ ಬ್ರಹ್ಮತ್ವಂ ಯುಜ್ಯತೇ ।।

''ಸರ್ವೇಷು ಭೂತೇಷು ಏತಮೇವ ಬ್ರಹ್ಮೇತ್ಯಾಚಕ್ಷತೇ'' ಎಂಬಲ್ಲಿ ಬ್ರಹ್ಮಶಬ್ದ ಕೇಳಿಸುತ್ತಿರುವುದರಿಂದ ಬ್ರಹ್ಮಶಬ್ದ ವಾಚ್ಯನಾದ ವಿಷ್ಣುವೇ ಸರ್ವಗತನಾಗುತ್ತಾನೆ. ಮತ್ತು ''ಅಶರೀರಃ ಪ್ರಜ್ಞಾತ್ಮಾ'' ಎಂಬ ಉಪಕ್ರಮವೂ ಸಹ ಈ ವಿಷಯದಲ್ಲಿ ಪ್ರಮಾಣವಾಗಿದೆ. ಆದಿತ್ಯನಲ್ಲಿ ಬ್ರಹ್ಮಶಬ್ದವನ್ನು ಕೂಡಿಸಬಹುದಲ್ಲವೆ ? ಎಂದು ಶಂಕಿಸಬಾರದು. ''ತದೇವ ಬ್ರಹ್ಮ ಪರಮಂ'' ''ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ'' ''ಪರಮಂ ಯೋ ಮಹದ್ ಬ್ರಹ್ಮ'' ಇತ್ಯಾದಿ ವಾಕ್ಯಗಳಲ್ಲಿ ವಿಷ್ಣುವಿನಲ್ಲಿ ಬ್ರಹ್ಮಶಬ್ದದ ಪ್ರಯೋಗವು ಪ್ರಸಿದ್ಧವಾಗಿದೆ. ಆದ್ದರಿಂದ ಆದಿತ್ಯನು ಮುಖ್ಯವಾಗಿ ಬ್ರಹ್ಮಶಬ್ದ ಪ್ರತಿಪಾದ್ಯನಾಗಲಾರನು.

ತತ್ತ್ವಪ್ರಕಾಶಿಕಾ – ಏತತ್ಪಾದಪ್ರತಿಪಾದ್ಯಂ ದರ್ಶಯತಿ – ಲಿಙ್ಗೇತಿ ।। ಲಿಙ್ಗಾತ್ಮಕಾನಾಮಿತಿ ಧರ್ಮವಿಶಿಷ್ಟಧರ್ಮಿವಾಚಿನಾಮಿತ್ಯರ್ಥಃ । ಅನ್ಯತ್ರ ಪ್ರಸಿದ್ಧಾನಾಮಿತಿ ಸಂಯೋಜ್ಯಮ್ । ವೈಶ್ವಾನರಾಧಿಕರಣೇ ನಾಮಸಮನ್ವಯಸಿದ್ಧೇಃ ಪ್ರಾಧಾನ್ಯೇನೇತ್ಯುಕ್ತಮ್ । ಅತ್ರ ಲೋಕತೋऽನ್ಯತ್ರಪ್ರಸಿದ್ಧಾದಿತ್ಯಶ್ರುತಿಸಹಪಠಿತಸರ್ವಗತತ್ವಲಿಙ್ಗಾತ್ಮಕಶಬ್ದಸ್ಯ ಪರಬ್ರಹ್ಮಣಿ ಸಮನ್ವಯ-ಪ್ರತಿಪಾದನಾದಸ್ತಿ ಶಾಸ್ತ್ರಾದಿಸಙ್ಗತಿಃ । ಶ್ರುತ್ಯಾದಿಸಙ್ಗತಿಂ ವಿಷಯಸಂಶಯೌ ಚ ಸೂಚಯತಿ – ಬ್ರಹ್ಮೇತಿ ।।

ಈ ಎರಡನೆಯ ಪಾದದಲ್ಲಿ ಪ್ರತಿಪಾದನೆ ಮಾಡುವ ವಿಷಯವನ್ನು 'ಲಿಂಗಾತ್ಮಕಾನಾಂ' ಎಂಬ ಗ್ರಂಥದಿಂದ ಹೇಳುತ್ತಿದ್ದಾರೆ. ಲಿಂಗಾತ್ಮಕಶಬ್ದವೆಂದರೆ 'ಧರ್ಮವಿಶಿಷ್ಟ ಧರ್ಮಿಯನ್ನು' ಹೇಳುವ ಎಂದರ್ಥ. 'ಲಿಂಗಾತ್ಮಕಾನಾಂ' ಎಂಬ ಪದದ ಜೊತೆಗೆ ''ಅನ್ಯತ್ರಪ್ರಸಿದ್ಧವಾದ'' ಎಂಬುದನ್ನು ಜೋಡಿಸಿಕೊಳ್ಳಬೇಕು.

ಈ ಪಾದದ ವೈಶ್ವಾನರಾಧಿಕರಣದಲ್ಲಿ ನಾಮಾತ್ಮಕಶಬ್ದವನ್ನು ಸಮನ್ವಯ ಮಾಡಿದ್ದರಿಂದ ''ಪ್ರಾಧಾನ್ಯೇನ'' ಎಂದು ಭಾಷ್ಯಕಾರರು ಹೇಳಿದ್ದಾರೆ.

ಈ ಅಧಿಕರಣದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ಆದಿತ್ಯಶ್ರುತಿಯ ಜೊತೆಗೆ ಪಠಿತವಾದ ಸರ್ವಗತತ್ವವೆಂಬ ಲಿಂಗಾತ್ಮಕಶಬ್ದವನ್ನು ಪರಬ್ರಹ್ಮನಲ್ಲಿ ಸಮನ್ವಯ ಮಾಡಿದ್ದಾರೆ. ಆದ್ದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿಗಳನ್ನು ತಿಳಿಯಬೇಕು. ಶ್ರುತಿಸಂಗತಿ ಮೊದಲಾದವುಗಳನ್ನು ಮತ್ತು ಸಂಶಯಗಳನ್ನು ''ಬ್ರಹ್ಮ'' ಇತ್ಯಾದಿ ಗ್ರಂಥದಿಂದ ಸೂಚಿಸುತ್ತಿದ್ದಾರೆ.

ಭಾವದೀಪಃ – ದ್ವಿತ್ರನಯಮಾತ್ರೇಣ ಪ್ರವೃತ್ತಿಂ ದರ್ಶಯತೀತ್ಯಪಿ ಭಾಷ್ಯಾರ್ಥೋಪಪತ್ತ್ಯಾ ಪಾದಾರ್ಥತ್ವಾಪ್ರತೀತೇರಾಹ – ಏತತ್ಪಾದೇತಿ ।।

ಎರಡನೆಯ ಪಾದವು ಪ್ರಾರಂಭವಾಗುತ್ತಿದೆ. ಈ ಪಾದದಲ್ಲಿ ಅನ್ಯತ್ರಪ್ರಸಿದ್ಧವಾದ ಲಿಂಗಾತ್ಮಕಶಬ್ದಗಳ ಸಮನ್ವಯವನ್ನು ಮಾಡುತ್ತಿದ್ದಾರೆ.

'ಲಿಂಗಾತ್ಮಕಾನಾಂ ಶಬ್ದನಾಂ' ಇತ್ಯಾದಿಯಾಗಿ ಭಾಷ್ಯವು ಪ್ರಾರಂಭವಾಗುತ್ತಿದೆ. ಭಾಷ್ಯದ ಈ ಮಾತನ್ನು ನೋಡಿದಾಗ ಸಂಪೂರ್ಣ ಪಾದವು ಲಿಂಗಾತ್ಮಕಶಬ್ದಗಳ ಸಮನ್ವಯಕ್ಕೋಸ್ಕರವೇ ಹೊರಟಿದೆಯೆಂದು ತಿಳಿಯುವುದಿಲ್ಲ. ಎರಡು ಅಥವಾ ಮೂರು ಅಧಿಕರಣಗಳಲ್ಲಿ ಲಿಂಗಾತ್ಮಕಶಬ್ದಗಳ ಸಮನ್ವಯ ಮಾಡಿದರೂ ಸಾಕು; ಈ ಪಾದವು ಲಿಂಗಪಾದವೆನಿಸುತ್ತದೆಂದು ಭಾಷ್ಯದ ಮಾತಿಗೆ ಅರ್ಥವನ್ನು ತಿಳಿಯಬಹುದು. ಆದರೆ ಇದು ನಿಜವಾದ ಅರ್ಥವಲ್ಲ. ಹಾಗಾದಲ್ಲಿ ಈ ಪಾದದಿಂದ ಪ್ರತಿಪಾದ್ಯವಾದ ಪ್ರಮೇಯವೇ ಯಾವುದೆಂದು ತಿಳಿಯುವುದಿಲ್ಲ. ಆದ್ದರಿಂದ ಭಾಷ್ಯದ ನಿಜಾರ್ಥವನ್ನು ತಿಳಿಸುವುದಕ್ಕಾಗಿ ಟೀಕೆಯಲ್ಲಿ 'ಏತತ್‌ಪಾದಪ್ರತಿಪಾದ್ಯಂ ದರ್ಶಯತಿ' ಎಂದು ಹೇಳಿದ್ದಾರೆ. ಅಂದರೆ ಸಂಪೂರ್ಣ ಪಾದಪ್ರಮೇಯವನ್ನೇ ಶ್ರೀಮದಾಚಾರ್ಯರು 'ಲಿಂಗಾತ್ಮಕಾನಾಂ' ಇತ್ಯಾದಿ ವಾಕ್ಯಗಳಿಂದ ಹೇಳಿದ್ದಾರೆ ಹೊರತು ಕೇವಲ ಎರಡು ಅಥವಾ ಮೂರು ಅಧಿಕರಣದ ಪ್ರಮೇಯವನ್ನು ಈ ವಾಕ್ಯದಿಂದ ಹೇಳಿಲ್ಲ.

ಭಾವದೀಪಃ – ಶಬ್ದಾದೇವೇತ್ಯತ್ರ ವಕ್ಷ್ಯಮಾಣದಿಶಾ ಅಸಾಧಾರಣಧರ್ಮಸ್ಯ ಲಿಙ್ಗತ್ವಾತ್ಕಥಂ ತದಾತ್ಮಕತ್ವಂ ಶಬ್ದಾನಾಮಿತ್ಯತೊ ಲಿಙ್ಗಂ ಧರ್ಮಃ ಸ ಆತ್ಮೇವಾತ್ಮಾ ಪ್ರವೃತ್ತಿನಿಮಿತ್ತಂ ಯೇಷಾಂ ತೇ ಲಿಙ್ಗಾತ್ಮಕಾಃ । ಸ್ವರೂಪಾರ್ಥೋ ವಾ ಆತ್ಮಶಬ್ದೋ ನಿಮಿತ್ತನಿಮಿತ್ತನೋರಭೇದೋಪಚಾರಾದಿತಿ ಸುಧೋಕ್ತದಿಶಾ ಸಮಾಸಂ ಮತ್ವಾऽರ್ಥಮಾಹ – ಧರ್ಮವಿಶಿಷ್ಟೇತಿ ।। ಯೌಗಿಕಾನಾಮಿತ್ಯರ್ಥಃ ।

ಪ್ರಶ್ನೆ - ಇದೇ ಅಧ್ಯಾಯದ ಮೂರನೆಯ ಪಾದದಲ್ಲಿ ಬರುವ ವಾಮನಾಧಿಕರಣದ 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಲ್ಲಿ ಲಿಂಗ ಎಂದರೆ ಅಸಾಧಾರಣ ಧರ್ಮ ಎಂದು ಹೇಳಿದ್ದಾರೆ. ಹೀಗಿರುವಾಗ ಪ್ರಕೃತ ಶಬ್ದವನ್ನೇ ಲಿಂಗಸ್ವರೂಪವೆಂದು ಹೇಗೆ ಹೇಳುತ್ತಿದ್ದೀರಿ?

ಉತ್ತರ - ಈ ಪ್ರಶ್ನೆಗೆ ಎರಡು ರೀತಿಯಾಗಿ ಉತ್ತರವನ್ನು ಹೇಳಬಹುದು -

೧) 'ಲಿಂಗಂ ಆತ್ಮಾ ಇವ ಆತ್ಮಾ ಯೇಷಾಂಸ್ತೇ ಲಿಂಗಾತ್ಮಕಾಃ ತೇಷಾಂ ಲಿಂಗಾತ್ಮಕಾನಾಂ' ಎಂದು ಸಮಾಸ ಮಾಡಿದ್ದಾರೆ. 'ಲಿಂಗ' ಶಬ್ದಕ್ಕೆ 'ಧರ್ಮ' ಎಂದರ್ಥ. 'ಆತ್ಮಾ' ಎಂದರೆ 'ಪ್ರವೃತ್ತಿನಿಮಿತ್ತ' ಎಂದರ್ಥ. ಅಂದರೆ ಹೇಗೆ ಶರೀರಪ್ರವೃತ್ತಿಗೆ ಆತ್ಮನು ನಿಮಿತ್ತನಾಗಿದ್ದಾನೋ, ಹಾಗೆ ಶಬ್ದದ ಪ್ರವೃತ್ತಿಗೆ ಧರ್ಮವು ನಿಮಿತ್ತವಾಗಿದೆಯೆಂದರ್ಥ.

೨) ಆತ್ಮಶಬ್ದಕ್ಕೆ ಸ್ವರೂಪ ಎಂದರ್ಥ. ನಿಮಿತ್ತಕ್ಕೂ ಮತ್ತು ನಿಮಿತ್ತಿಗೂ ಔಪಚಾರಿಕವಾಗಿ ಅಭೇದಪ್ರಯೋಗ ಮಾಡುವುದು ಕಂಡಿದೆ. ಈ ರೀತಿಯಾಗಿ ಸುಧೆಯಲ್ಲಿ ಹೇಳಿರುವಂತೆ ಎರಡು ಬಗೆಯ ಸಮಾಸವನ್ನು ತಿಳಿದು ಅರ್ಥವನ್ನು ಹೇಳುತ್ತಿದ್ದಾರೆ 'ಧರ್ಮವಿಶಿಷ್ಟ' ಇತ್ಯಾದಿಯಾಗಿ. 'ಧರ್ಮವಿಶಿಷ್ಟ' ಎಂದರೆ ಯೌಗಿಕಶಬ್ದಗಳೆಂದರ್ಥ.

ಭಾವದೀಪಃ – ಪ್ರಾಚೀನಾನಾಮಪಿ ಪ್ರಾಗುಕ್ತದಿಶಾ 'ಯಚ್ಛಬ್ದಾ ಯೋಗವೃತ್ತಯಃ' ಇತ್ಯಣುಭಾಷ್ಯೋಕ್ತ್ಯಾ ಚ ಯೌಗಿಕತ್ವಾತ್ ತಚ್ಚಾವೃತ್ತ್ಯರ್ಥಮ್ ಆಪಾತತೋऽಪೀತಿ ಯೋಜ್ಯಮ್ । ಭಾಷ್ಯೇ ಪ್ರವೃತ್ತಿಮಿತ್ಯಸ್ಯ ಮಹಾಯೋಗವಿದ್ಭದ್ಭೂಢಿಭ್ಯಾಂ ಪ್ರಕೃಷ್ಟವೃತ್ತಿತ್ವಮಿತಿ ತತ್ತ್ವಪ್ರದೀಪೋಕ್ತೇರತ್ರಾನುಕ್ತಿಃ ।

ಪ್ರಶ್ನೆ - ಹಿಂದಿನ ಪಾದದಲ್ಲಿಯೂ ಸಹ ಆಕಾಶ, ಪ್ರಾಣ ಇವೇ ಮೊದಲಾದ ಶಬ್ದಗಳ ಸಮನ್ವಯವನ್ನೂ ಸಹ ಯೌಗಿಕವಾಗಿಯೇ ಮಾಡಲಾಗಿದೆ. ಅಲ್ಲದೆ ಅಣುಭಾಷ್ಯದಲ್ಲಿಯೂ ಸಹ 'ಯಚ್ಛಬ್ದಾಃ ಯೋಗವೃತ್ತಯಃ' ಎಂದು ಎಲ್ಲಾ ಶಬ್ದಗಳೂ ಸಹ ಯೌಗಿಕವಾಗಿವೆಯೆಂದು ಹೇಳಿದ್ದಾರೆ. ಹೀಗಿರುವಾಗ ಈ ಪಾದವನ್ನು ಪ್ರಥಮಪಾದಕ್ಕಿಂತ ಭಿನ್ನವೆಂದು ಹೇಗೆ ಪರಿಗಣಿಸುತ್ತೀರಿ ?

ಉತ್ತರ - ಈ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ ಟೀಕೆಯಲ್ಲಿ 'ಆಪಾತತೋ' ಎಂದು ಯೋಜನೆ ಮಾಡಬೇಕು. ಅಂದರೆ ಮೇಲ್ನೋಟಕ್ಕೆ ಯಾವ ಶಬ್ದಗಳು ರೂಢವೆನ್ನುತ್ತವೋ ಆ ಶಬ್ದಗಳು ನಾಮಾತ್ಮಕವೆನಿಸುತ್ತವೆ. ಮೇಲ್ನೋಟಕ್ಕೆ ಯಾವಶಬ್ದಗಳು ಲಿಂಗಶಬ್ದಗಳೆನಿಸುತ್ತವೆಯೋ ಆ ಶಬ್ದಗಳು ಲಿಂಗಾತ್ಮಕವೆನಿಸುತ್ತವೆ. ಈ ದೃಷ್ಟಿಯಿಂದಷ್ಟೇ ನಾಮಪಾದವೆಂಬ ಮತ್ತು ಲಿಂಗಪಾದವೆಂಬ ಭೇದವನ್ನು ಸೂತ್ರಕಾರರು ಪರಿಗಣಿಸಿದ್ದಾರೆ.

ಭಾಷ್ಯದಲ್ಲಿರುವ 'ಪ್ರವೃತ್ತಿಂ' ಎಂಬ ಪದಕ್ಕೆ ಟೀಕೆಯಲ್ಲಿ ವ್ಯಾಖ್ಯಾನ ಮಾಡಿಲ್ಲ. ಏಕೆಂದರೆ 'ಮಹಾಯೋಗವಿದ್ವದ್ರೂಢಿಭ್ಯಾಂ ಪ್ರಕೃಷ್ಟವೃತ್ತಿತ್ವಂ' ಎಂದು ತತ್ವಪ್ರದೀಪದಲ್ಲಿ ಸ್ವರಸವಾದ ಅರ್ಥವನ್ನು ಹೇಳಿದ್ದರಿಂದ.

ಭಾವದೀಪಃ – ತೃತೀಯಾದಿಸಾಙ್ಕರ್ಯಪ್ರಸಙ್ಗಾದಾಹ – ಅನ್ಯತ್ರೇತಿ ।। ನಾಮಸಮನ್ವಯೇತಿ ।। 'ವಿಶ್ವಜೀವಾನ್ತರತ್ವಾದ್ವೈರ್ಲಿಙ್ಗೈಃ' ಇತ್ಯಣುಭಾಷ್ಯೇ ಸಿದ್ಧಾನ್ತ್ಯಭಿಮತಯೌಗಿಕತ್ವಾಭಿಪ್ರಾಯೇಣ ವೈಶ್ವಾನರಶಬ್ದಸ್ಯ ಲಿಙ್ಗತ್ವೋಕ್ತಾವಪಿ 'ಶ್ರುತಿಲಿಙ್ಗಾಧಿಕಾ ಪರಾ' ಇತಿ ವಿಷಯಯುಕ್ತಿಮಾಲಾಯಾಂ ಲೋಕರೂಢ್ಯಾ ನಾಮತ್ವೋಕ್ತೇರಿತಿ ಭಾವಃ ।। ಸರ್ವಗತತ್ವಲಿಙ್ಗೇತಿ ।। ಸರ್ವಪ್ರಾಣಿಹೃದಯಗುಹಾಸ್ಥತ್ವರೂಪಸರ್ವಗತತ್ವಲಿಙ್ಗೇತ್ಯರ್ಥಃ । ತಸ್ಯ ಚ ಸ್ವತಃ ಸೂರ್ಯೇ ಅಪ್ರಸಿದ್ಧೇರಾಹ – ಲೋಕತोऽನ್ಯತ್ರಪ್ರಸಿದ್ಧೇತ್ಯಾದಿ ।। ಅರ್ಭಕೌಕಸ್ತ್ವಾದಿತತ್ಪ್ರಸಿದ್ಧೋಪದೇಶಾದಿಪೂರ್ವೋತ್ತರಪಕ್ಷ-ಯುಕ್ತಿಸಾಹಿತ್ಯಾಲ್ಲಿಙ್ಗಮೇವ ಸಮನ್ವೀಯತೇ ನ ತ್ವಾದಿತ್ಯನಾಮೇತಿ ಭಾವಃ । ಏವಮಗ್ರೇऽಪಿ ।। ಶಾಖಾದೀತಿ ।। ಪೂರ್ವತ್ರೈವ ಸಙ್ಗತಿತ್ರಯೋಪಪಾದಕತ್ವಂ ಲೋಕತ ಇತ್ಯಾದಿಪದಾನಾಂ ಧ್ಯೇಯಮ್ । ಏವಮಗ್ರೇऽಪಿ ।

ಪ್ರಶ್ನೆ - ಮೂರನೆಯ ಮತ್ತು ನಾಲ್ಕನೆಯ ಪಾದಗಳಲ್ಲಿಯೂ ಸಹ ಲಿಂಗಾತ್ಮಕಶಬ್ದಗಳನ್ನು ಸಮನ್ವಯ ಮಾಡಿದ್ದರಿಂದ ಆ ಪಾದಗಳಿಂದ ಎರಡನೆಯ ಪಾದಕ್ಕೆ ಸಾಂಕರ್ಯದೋಷ ಬರುತ್ತದಲ್ಲವೇ?

ಉತ್ತರ - ಈ ಪ್ರಶ್ನೆಗೆ ಉತ್ತರಿಸಲು ಟೀಕೆಯಲ್ಲಿ 'ಅನ್ಯತ್ರಪ್ರಸಿದ್ಧಾನಾಂ' ಎಂದು ಹೇಳಿದ್ದಾರೆ. ಮೂರನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಅನ್ಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯ ಮಾಡುತ್ತಿಲ್ಲವಾದ್ದರಿಂದ ಸಾಂಕರ್ಯದೋಷಕ್ಕೆ ಅವಕಾಶವಿಲ್ಲ.

ಪ್ರಶ್ನೆ - ಭಾಷ್ಯದಲ್ಲಿರುವ 'ಪ್ರಾಧಾನ್ಯೇನ' ಪದಕ್ಕೆ ಟೀಕೆಯಲ್ಲಿ ಹೀಗೆ ಅವತಾರಿಕೆ ನೀಡಿದ್ದಾರೆ - ವೈಶ್ವಾನರಾಧಿಕರಣದಲ್ಲಿ ನಾಮಾತ್ಕಶಬ್ದದ ಸಮನ್ವಯ ಮಾಡಿರುವುದರಿಂದ 'ಪ್ರಾಧಾನ್ಯೇನ' ಎಂದಿದ್ದಾರೆ. ಆದರೆ ಆಣುಭಾಷ್ಯದಲ್ಲಿ ವೈಶ್ವಾನರಾಧಿಕರಣದ ತಾತ್ಪರ್ಯವನ್ನು 'ವಿಶ್ವಜೀವಾಂತರತ್ವಾದ್ಯೈಃ ರ್ಲಿಂಗೈಃ' ಎಂದು ಹೇಳಿದ್ದಾರೆ. ಈ ಅರ್ಥವು ಸಿದ್ಧಾಂತಿಗೆ ಅಭಿಮತವಾದ ಯೌಗಿಕತ್ವಾಭಿಪ್ರಾಯದಿಂದ ಇರುತ್ತದೆ. ಅಂದರೆ ವೈಶ್ವಾನರಶಬ್ದವನ್ನು ಲಿಂಗಾತ್ಮಕವೆಂದು ಹೇಳಿದಂತಾಯಿತು. ಹೀಗಿರುವಾಗ ಟೀಕೆಯಲ್ಲಿ ವೈಶ್ವಾನರ ಶಬ್ದವನ್ನು ನಾಮಾತ್ಕವೆಂದು ಹೇಗೆ ಪರಿಗಣಿಸಿದ್ದಾರೆ ?

ಉತ್ತರ - ಹೌದು, ಆದರೆ ವಿಷಯಯುಕ್ತಿಮಾಲೆಯಲ್ಲಿ ವೈಶ್ವಾನರಶಬ್ದವನ್ನು ನಾಮಾತ್ಕವೆಂದು ವಿವಕ್ಷಿಸಿದ್ದರಿಂದ ಪ್ರಕೃತ ಟೀಕೆಯಲ್ಲಿಯೂ ನಾಮಾತ್ಕವೆಂದೇ ಹೇಳಿದ್ದಾರೆ.

'ಸರ್ವಗತತ್ವಲಿಂಗ' ಎಂದರೆ ಸರ್ವಪ್ರಾಣಿಗಳ ಹೃದಯಗುಹೆಯಲ್ಲಿರುವಿಕೆಯೆಂಬ ಲಿಂಗ ಎಂದರ್ಥ. ಈ ಸರ್ವಪ್ರಾಣಿಹೃದಯಗುಹೆಯಲ್ಲಿರುವಿಕೆಯಾದರೂ ಸೂರ್ಯನಲ್ಲಿ ಅಪ್ರಸಿದ್ಧವಾದ್ದರಿಂದ 'ಲೋಕತೋऽನ್ಯತ್ರಪ್ರಸಿದ್ಧ' ಎಂಬ ವಾಕ್ಯ ಹೊರಟಿದೆ.

ಈ ಅಧಿಕರಣಕ್ಕೆ ವಿಷಯವಾಕ್ಯವಾದ 'ತಸ್ಯೈತಸ್ಯಾಸಾವಾದಿತ್ಯೋ ರಸಃ' ಎಂಬಲ್ಲಿ ಏನನ್ನು ಸಮನ್ವಯ ಮಾಡುತ್ತಿದ್ದಾರೆಂದು ತಿಳಿಯುವುದಿಲ್ಲ. 'ಅರ್ಭಕೌಕಸ್ತ್ವ' ಮೊದಲಾದ ಪೂರ್ವಪಕ್ಷಯುಕ್ತಿಗಳು ಮತ್ತು 'ತತ್ಪಸಿದ್ಧೋಪದೇಶಾತ್' ಮೊದಲಾದ ಸಿದ್ಧಾಂತಯುಕ್ತಿಗಳ ಬಲದಿಂದ ಲಿಂಗವನ್ನು ಇಲ್ಲಿ ಸಮನ್ವಯ ಮಾಡುತ್ತಿದ್ದಾರೆ ಹೊರತು ಆದಿತ್ಯನಾಮವನ್ನಲ್ಲ. ಇದೇ ರೀತಿಯಾಗಿ ಮುಂದೆಯೂ ತಿಳಿಯಬೇಕು.

'ಲೋಕತೋऽನ್ಯತ್ರಪ್ರಸಿದ್ಧ' ಎಂಬುದರಿಂದ ಪಾದಸಂಗತಿಯನ್ನು, 'ಪರಬ್ರಹ್ಮ' ಎಂಬುದರಿಂದ ಶಾಸ್ತ್ರಸಂಗತಿಯನ್ನು, 'ಸಮನ್ವಯ' ಪದದಿಂದ ಅಧ್ಯಾಯಸಂಗತಿಯನ್ನು ತಿಳಿಸುತ್ತಿದ್ದಾರೆ. ಇದೇ ರೀತಿಯಾಗಿ ಮುಂದೆಯೂ ತಿಳಿಯಬೇಕು.

तत्वप्रकाशिका – 'ब्रह्म ततमम्' इति विष्णोः सर्वगतत्वमुक्तम् । तदेवैतरेयके 'एतं ह्येव बह्वृचा महत्युक्थे मीमांसन्त, एतमशावध्वर्यवः एतं महाव्रते च्छन्दोगा एतमस्यामेतं दिव्येतं वायावेतमाकाशे एतमप्स्वेतमोषधीष्वेतं वनस्पतिष्वेतं चन्द्रमस्येतं नक्षत्रेष्वेतं सर्वेषु भूतेष्वेतमेव ब्रह्मेत्याचक्षते' इत्याम्नायते ।

''ಬ್ರಹ್ಮ ತತಮಂ'' (ಬ್ರಹ್ಮನು ಸರ್ವ ವ್ಯಾಪಕನು) ಎಂದು ಬೃಹತೀಸಹಸ್ರದಲ್ಲಿ ವಿಷ್ಣುವಿಗೆ ಸರ್ವಗತತ್ವವನ್ನು ಹೇಳಲಾಗಿದೆ. ಅದನ್ನೇ ಐತರೇಯ ಆರಣ್ಯಕವು ಹೀಗೆ ಹೇಳಿದೆ - ''ಏತಂ ಹ್ಯೇವ ಬಹ್ವೃಚಾ ಮಹತ್ಯುಕ್ಥೇ ಮೀಮಾಂಸಂತೇ ಏತಮಗ್ನೌ ಅಧ್ವರ್ಯವಃ ಏತಂ ಮಹಾವ್ರತೇ ಚ್ಛಂದೋಗಾ ಏತಮಸ್ಯಾಮೇತಂ ದಿವ್ಯೇತಂ ವಾಯಾವೇತಮಾಕಾಶೇ ಏತಮಪ್ಸು ಏತಮೋಷಧೀಷು ಏತಂ ವನಸ್ಪತಿಷ್ವೇತಂ ಚಂದ್ರಮಸ್ಯೇತಂ ನಕ್ಷತ್ರೇಷ್ವೇತಂ ಸರ್ವೇಷು ಭೂತೇಷ್ವೇತಮೇವ ಬ್ರಹ್ಮೇತ್ಯಾಚಕ್ಷತೇ''

(ಈ ವಿಷ್ಣುವನ್ನು ಋಗ್ವೇದಿಗಳು 'ಮಹದುಕ್ಥ' ಎಂಬ ಬೃಹತೀಸಹಸ್ರದಿಂದ ಪ್ರತಿಪಾದ್ಯನೆಂದು ತಿಳಿಯುತ್ತಾರೆ, ಯಜುರ್ವೇದಿಗಳು ಅಗ್ನಿದೇವತಾ ರೂಪದಿಂದ ಇವನನ್ನು ತಿಳಿಯುತ್ತಾರೆ, ಸಾಮವೇದಿಗಳು 'ಮಹಾವ್ರತವೆಂಬ' ಕರ್ಮಾಂಗಸ್ತೋತ್ರದಿಂದ ಪ್ರತಿಪಾದ್ಯನೆಂದು ತಿಳಿಯುತ್ತಾರೆ. ಇಂತಹ ವಿಷ್ಣುವೇ ಭೂಮಿಯಲ್ಲಿ, ಅಂತರಿಕ್ಷದಲ್ಲಿ, ವಾಯು, ಆಕಾಶ, ನೀರು, ಓಷಧಿ, ವನಸ್ಪತಿ, ಚಂದ್ರ, ನಕ್ಷತ್ರಗಳು ಮತ್ತು ಸಕಲಭೂತಗಳಲ್ಲಿ ವ್ಯಾಪ್ತನಾಗಿದ್ದಾನೆ) ಎಂದು ಹೇಳುತ್ತಾರೆ. ಇಷ್ಟು ಈ ಅಧಿಕರಣದ ವಿಷಯ.

ತತ್ವಪ್ರಕಾಶಿಕಾ – ತದ್ ಯದಿ ವಿಷ್ಣೋರನ್ಯಸ್ಯ ಸ್ಯಾತ್ತರ್ಹಿ ಪ್ರಾಚೀನಪ್ರಾಣೋऽಪ್ಯನ್ಯ ಏವ ಸ್ಯಾದೇಕಪ್ರಕರಣತ್ವಾತ್ । ಅತೋऽವಶ್ಯಂ ವಿಚಾರ್ಯಂ ಭವತಿ । ತತ್ಸರ್ವಗತತ್ವಂ ವಿಷಯಃ । ವಿಷ್ಣೋರನ್ಯಸ್ಯ ವೇತಿ ಸನ್ದೇಹಃ । 'ಬ್ರಹ್ಮತತಮಮ್' ಇತ್ಯುಕ್ತಿರಾದಿತ್ಯಶ್ರುತಿಶ್ಚ ಸನ್ದೇಹಬೀಜಮಿತಿ ಭಾವಃ ।

ಈ ವಿಷಯವಾಕ್ಯದಿಂದ ಸರ್ವಗತತ್ವಧರ್ಮವು ವಿಷ್ಣುವಿಗಿಂತ ಬೇರೆಯವರಲ್ಲಿ ಬರುವುದಾದರೆ ಹಿಂದಿನ ಅಧಿಕರಣದಲ್ಲಿ ಪ್ರತಿಪಾದ್ಯನಾದ ಪ್ರಾಣನೂ ಕೂಡ ವಿಷ್ಣುವಿಗಿಂತ ಬೇರೆಯವನೇ ಆಗಬೇಕು. ಏಕೆಂದರೆ ಪ್ರಾಣಶ್ರುತಿ ಹಾಗೂ ಸರ್ವಗತತ್ವ ಶ್ರುತಿಗಳು ಒಂದೇ ಪ್ರಕರಣದಲ್ಲಿವೆ. ಆದ್ದರಿಂದ ಸರ್ವಗತತ್ವಧರ್ಮವು ಯಾರ ಧರ್ಮವೆಂದು ಅವಶ್ಯವಾಗಿ ವಿಚಾರ ಮಾಡಬೇಕು.

ಸರ್ವಗತತ್ವವೇ ಈ ಅಧಿಕರಣದ ವಿಷಯವು.

ಈ ಸರ್ವಗತತ್ವವು ವಿಷ್ಣುವಿನ ಧರ್ಮವೋ? ಅಥವಾ ಇತರರ ಧರ್ಮವೋ? ಎಂಬುದೇ ಸಂದೇಹ. ''ಬ್ರಹ್ಮತತಮಂ'' ಎಂಬ ಶ್ರುತಿವಾಕ್ಯ ಮತ್ತು ಆದಿತ್ಯ ಶ್ರುತಿಯು ಸಂದೇಹಕ್ಕೆ ಕಾರಣ.

ಭಾವದೀಪಃ – ಇತ್ಯನ್ತಭಾಷ್ಯಂ ಸಙ್ಗತಿಸೂಚನಪರತ್ವೇನಾಕಾಙ್ಕಿತಪೂರ್ತ್ಯಾ ವ್ಯಾಚಷ್ಟೇ – ಬ್ರಹ್ಮೇತಿ ।। ತಚ್ಚೇತ್ಯಸ್ಯಾರ್ಥಃ – ತದೇವೇತಿ ।। ತತಮತ್ವಾನ್ತಃಪಾತ್ಯೇವೇತ್ಯರ್ಥಃ । ಸರ್ವಹೃದಯಗುಹಾಸ್ಥ ತ್ವರೂಪಸರ್ವಗತತ್ವಸ್ಯ ತತಮತ್ವೈಕದೇಶತ್ವಾತ್ । ಯದ್ವಾ ಪೂರ್ವಪಕ್ಷೇ ತತಮತ್ವಸ್ಯ ಸಙ್ಗೋಚಾತ್ತದೇವೇತ್ಯುಕ್ತಿಃ । ತದೇವೇತ್ಯಸ್ಯ ಇತ್ಯಾಮ್ನಾಯತ ಇತ್ಯನ್ವಯಃ । ತಚ್ಚೇತ್ಯಾದೇಸ್ತಾತ್ಪರ್ಯಮ್ – ತದ್ ಯದೀತಿ ।। ಅನ್ಯಸ್ಯೇತಿ ।। ಆದಿತ್ಯಶ್ರುತ್ಯಾದಿನಾ ಆದಿತ್ಯಾದೇಃ ಸ್ಯಾದಿತ್ಯರ್ಥಃ । ಉಕ್ತಮಿತ್ಯನ್ತವಾಕ್ಯಸ್ಯ ತಾತ್ಪರ್ಯಮ್ – ತರ್ಹಿ ಪ್ರಾಚೀನೇತಿ ।। ನನ್ವತ್ರತ್ಯಸರ್ವಹೃದಯಸ್ಥತ್ವರೂಪಂ ಸರ್ವಗತತ್ವಮನ್ಯಸ್ಯ ಚೇತ್ ತತಮತ್ವೇನೋಕ್ತಪ್ರಾಣೋऽಪಿ ಕುತೋऽನ್ಯ ಇತ್ಯತ ಆಹ – ಏಕೇತಿ ।।

'ಇತಿ' ಎಂಬಲ್ಲಿಯ ತನಕದ ಭಾಷ್ಯವು ಸಂಗತಿಯನ್ನು ತಿಳಿಸುತ್ತಿದೆ. ಆದ್ದರಿಂದ ಆಕಾಂಕ್ಷೆಯು ಶಾಂತವಾಗುತ್ತದೆಂದು 'ಬ್ರಹ್ಮ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ತಚ್ಚ' ಎಂಬುದರ ಅರ್ಥವನ್ನು

'ತದೇವ' ಎಂದಿದ್ದಾರೆ. ಅಂದರೆ 'ತತಮತ್ವ' ಮತ್ತು 'ಅಂತಃಪಾತಿತ್ವ' ಇವುಗಳನ್ನೇ ಎಂದರ್ಥ. ಏಕೆಂದರೆ ಸರ್ವಹೃದಯಗುಹಾಸ್ಥತ್ವವೆಂಬ ಸರ್ವಗತತ್ವವು ತತಮತ್ವದ ಏಕದೇಶರೂಪವಾಗಿದೆ. ಅಥವಾ ಪೂರ್ವಪಕ್ಷದಲ್ಲಿ ತತಮತ್ವವನ್ನು ಸಂಕೋಚ ಮಾಡಿದ್ದರಿಂದ 'ತದೇವ' ಎಂದು ಹೇಳಿದ್ದಾರೆ. 'ತದೇವ' ಎಂಬ ಪದಕ್ಕೆ 'ಆಮ್ನಾಯತೇ' ಎಂಬಲ್ಲಿ ಅನ್ವಯ. 'ತಚ್ಚ' ಎಂಬ ಭಾಷ್ಯದ ವಾಕ್ಯದ ತಾತ್ಪರ್ಯವನ್ನು 'ತದ್‌ಯದಿ' ಎಂಬುದರಿಂದ ನಿರೂಪಿಸಿದ್ದಾರೆ. 'ಅನ್ಯಸ್ಯ' ಎಂದರೆ ಆದಿತ್ಯಾದಿ ಶ್ರುತಿಗಳಿಂದ ಆದಿತ್ಯಾದಿಗಳಲ್ಲಿಯೂ ಪ್ರಾಪ್ತವಾಗುತ್ತದೆಂದರ್ಥ.

ಭಾಷ್ಯದಲ್ಲಿರುವ 'ಉಕ್ತಂ' ಎಂಬಲ್ಲಿಯ ತನಕದ ವಾಕ್ಯದ ತಾತ್ಪರ್ಯವನ್ನು 'ತರ್ಹಿ ಪ್ರಾಚೀನ' ಎಂಬುದರಿಂದ ಹೇಳಿದ್ದಾರೆ.

ಇಲ್ಲಿ ಹೇಳಲ್ಪಟ್ಟ ಸರ್ವಹೃದಯಸ್ಥತ್ವವೆಂಬ ಸರ್ವಗತತ್ವವು ಬೇರೆಯವನಿಗೆ ಬರುವುದಾದರೆ ವ್ಯಾಪ್ತನೆಂದು ಪ್ರತಿಪಾದ್ಯನಾದ ಹಿಂದಿನ ಅಧಿಕರಣದ ಪ್ರಾಣನು ಬೇರೆಯವನೇ ಆಗುತ್ತಾನೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ 'ಏಕಪ್ರಕರಣತ್ವಾತ್' ಎಂದು ಉತ್ತರಿಸಿದ್ದಾರೆ.

तत्वप्रकाशिका – तत्र सयुक्तिकं पूर्वपक्षयति – तच्चेति ।। तत्सर्वगतत्वमादित्यस्यैव भवेत् । 'तस्यैतस्यासावादित्यो रसः यश्चासावादित्यस्तस्मात् पुरुषं पुरुषं प्रत्यादित्यो भवति' इत्यादिबह्वादित्यश्रुतेः।

ಈ ವಿಷಯದಲ್ಲಿ ಯುಕ್ತಿಬದ್ಧವಾದ ಪೂರ್ವಪಕ್ಷವನ್ನು 'ತಚ್ಚ' ಇತ್ಯಾದಿ ಗ್ರಂಥದಿಂದ ತೋರಿಸುತ್ತಿದ್ದಾರೆ. ಶ್ರುತಿಯಲ್ಲಿ ಪ್ರತಿಪಾದ್ಯವಾದ ಸರ್ವಗತತ್ವ ಧರ್ಮವು ಆದಿತ್ಯನದ್ದೇ ಹೊರತು ವಿಷ್ಣುವಿನದ್ದಲ್ಲ. ಏಕೆಂದರೆ ಆದಿತ್ಯಶ್ರುತಿಯು ಸರ್ವಗತತ್ವವನ್ನು ಸ್ಪಷ್ಟವಾಗಿ ಆದಿತ್ಯನಲ್ಲಿ ಹೇಳುತ್ತಿದೆ. ''ತಸ್ಯೈತಸ್ಯಾಸಾವಾದಿತ್ಯೋ ರಸಃ ಯಶ್ಚಾಸಾವಾದಿತ್ಯಃ ತಸ್ಮಾತ್ ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ'' ''ಅವನಿಗೆ ಆದಿತ್ಯನು ಉತ್ತಮನೆನಿಸಿದ್ದಾನೆ. ಆದಿತ್ಯನೆಂದು ಪ್ರಸಿದ್ಧನಾದ ಇವನು ಪ್ರತಿಯೊಬ್ಬ ಪುರುಷನಲ್ಲಿ ನಿಂತಿದ್ದಾನೆ'' ಹೀಗೆ ಈ ಪ್ರಕರಣದಲ್ಲಿ ಅನೇಕಬಾರಿ ಆದಿತ್ಯಶಬ್ದವು ಕೇಳಿಸುತ್ತಿದೆ.

तत्वप्रकाशिका – 'सूर्य आत्मा जगतः' इति सौरमन्त्रोदाहरणाच्च । 'एतमस्याम्' इति क्षित्यादिषूक्त्वाऽऽदित्येऽस्यानुक्तत्वलिङ्गाच्च । अन्यथैतमादित्य इत्युक्तिः स्यात् । सजातीयचन्द्रादावुदितत्वात् । अत एव न श्रुतेरन्तर्यामिविषयत्वं युज्यते ।

ಇದರಂತೆ ''ಸೂರ್ಯ ಆತ್ಮಾ ಜಗತಃ'' ''ಸೂರ್ಯನು ಸಮಸ್ತ ಜಗತ್ತಿಗೆ ಆತ್ಮನಾಗಿದ್ದಾನೆ'' ಎಂಬ ಸೌರಸೂಕ್ತವು ಆದಿತ್ಯನನ್ನೇ ಹೇಳುತ್ತಿದೆ. ಅಷ್ಟೇ ಅಲ್ಲದೆ ''ಏತಮಸ್ಯಾಂ'' ಎಂದು ಭೂಮಿ ಮೊದಲಾದವುಗಳಲ್ಲಿ ಇದ್ದಾನೆಂದು ತಿಳಿಸಿ, ಆದಿತ್ಯನಲ್ಲಿದ್ದಾನೆಂದು ಹೇಳದ ಕಾರಣ ಆದಿತ್ಯನಿಗೆ

ಸರ್ವಗತತ್ವವು ಸಿದ್ಧವಾಗುತ್ತದೆ. ಈ ಅಭಿಪ್ರಾಯವಿಲ್ಲದಿದ್ದರೆ ''ಏತಮಾದಿತ್ಯೇ'' ಸೂರ್ಯನಲ್ಲಿಯೂ ಆ ದೇವತೆ ಇದ್ದಾನೆಂದು ಹೇಳಬೇಕಾಗಿತ್ತು. ಸೂರ್ಯನಿಗೆ ಸಜಾತಿಯರಾದ ಚಂದ್ರಾದಿಗಳಲ್ಲಿ ಆದಿತ್ಯನ ಸ್ಥಿತಿಯನ್ನು ಹೇಳಿದ್ದರಿಂದ ಈ ಶ್ರುತಿಗೆ ಅಂತರ್ಯಾಮಿಯಾದ ವಿಷ್ಣುವು ವಿಷಯನಾಗಲಾರ.

तत्वप्रकाशिका – सर्वजीवानां वा एतत्सर्वगतत्वमुच्यते । 'चक्षुर्मयः श्रोत्रमयश्छन्दोमयो मनोमयो वाङ्मय आत्मा' इति तल्लिङ्गश्रवणात् ।

ಮತ್ತೊಂದು ಬಗೆಯ ಪೂರ್ವಪಕ್ಷ - ಸಕಲ ಜೀವರಿಗೆ ಸರ್ವಗತತ್ವಧರ್ಮವನ್ನು ಹೇಳಬಹುದು. ಏಕೆಂದರೆ ''ಚಕ್ಷುರ್ಮಯಃ ಶ್ರೋತ್ರಮಯಶ್ಛಂದೋಮಯೋ ಮನೋಮಯೋ ವಾ ಯೋ ಆತ್ಮಾ'' ಎಂಬ ಶ್ರುತಿಯಲ್ಲಿ ಸ್ಪಷ್ಟವಾಗಿ ಜೀವಧರ್ಮವು ಕೇಳಿಸುತ್ತಿದೆ.

तत्वप्रकाशिका – नच तल्लिङ्गमन्तर्यामिविषयम् । तस्यापरिच्छिन्नत्वेन 'सर्वेषु भूतेषु' इत्युक्ताल्पौकस्त्वायोगाच्चक्षुर्मयत्वाद्ययोगाच्च । अतो विष्वन्यस्यैव सर्वगतत्वादन्यस्यैव प्राणत्वमानन्दमयत्वं चेति भावः ।

ಈ ಧರ್ಮವನ್ನು ಅಂತರ್ಯಾಮಿಯಲ್ಲಿ ಹೇಳಬಾರದು. ಏಕೆಂದರೆ ಅಂತರ್ಯಾಮಿಯು ಅಪರಿಚ್ಛಿನ್ನನಾಗಿದ್ದಾನೆ. ಅಂತಹ ಅಪರಿಚ್ಛಿನ್ನನಾದ ಆತ್ಮನಲ್ಲಿ ಅಲ್ಪಸ್ಥಾನದಲ್ಲಿರುವಿಕೆಯನ್ನು ಹೇಳುವುದು ಕೂಡುವುದಿಲ್ಲ. ಅಷ್ಟೇ ಅಲ್ಲದೆ ಚಕ್ಷುರ್ಮಯತ್ವಾದಿಗಳನ್ನೂ ಕೂಡ ಅವನಲ್ಲಿ ಹೇಳುವುದು ಅಸಂಭಾವಿತ.

ಆದ್ದರಿಂದ ವಿಷ್ಣುವಿಗಿಂತ ಭಿನ್ನನಾದವನೇ ಸರ್ವಗತನಾಗುತ್ತಾನೆ. ಅವನೇ ಪ್ರಾಣನೂ ಆನಂದಮಯನೂ ಆಗುತ್ತಾನೆ.

भावदीपः – ननु सर्वगतत्वाख्यसर्वहृदयस्थत्वरूपार्भकौकस्त्वं प्रागुक्ततमत्व-रूपव्याप्तत्वं चैकस्य विरुद्धमिति न शङ्क्यम् । ततमत्वस्यादित्यादौ सङ्कोचसम्भवादिति

।। अतोऽवश्यमिति ।। एतेनेत्यत इति भाष्यस्य इति सङ्गतिसम्भवादित्यर्थः सूचितः । एवमग्रेऽपि । तदेव भाष्यं पूर्वपक्षपरतयाऽपि व्याचष्टे – तत्र संशयादौ सतीति ।।

आदित्यस्यैवेति ।। तच्चेति चकारोऽवधारणार्थः सन्नादित्यस्येत्यत्रान्वेतीति भावः । तस्य चैतस्य संवत्सरस्य रसः सारोऽधिपतिः ।

अन्तर्नयन्यायेन सावकाशत्वनिवृत्त्यर्थं निरवकाशसंवत्सरसारत्वरूपादित्य-लिङ्गद्योतनाय रस इत्यन्तानुवादः ।

ಟೀಕೆಯಲ್ಲಿ ''ಅತೋऽವಶ್ಯಂ'' ಎಂದಿದೆ. ಇದರಿಂದ ''ಇತ್ಯತಃ'' ಎಂಬ ಭಾಷ್ಯಕ್ಕೆ 'ಸಂಗತಿಯು ಬರುವುದರಿಂದ' ಎಂಬರ್ಥವನ್ನು ಸೂಚಿಸಿದಂತಾಯಿತು. ಹೀಗೆ ಮುಂದೆಯೂ ತಿಳಿಯಬೇಕು. ಸಂಗತಿಯಪರವಾಗಿ ವ್ಯಾಖ್ಯಾನಿಸಿದ ಭಾಷ್ಯದ ವಾಕ್ಯವನ್ನೇ ಪೂರ್ವಪಕ್ಷಪರವಾಗಿಯೂ ವ್ಯಾಖ್ಯಾನಿಸುತ್ತಿದ್ದಾರೆ 'ತತ್ರ' ಎಂಬುದಾಗಿ. 'ಸಂಶಯಾದೌ ಸತಿ' ಎಂದರ್ಥ.

'ಆದಿತ್ಯಸ್ಯೈವ' ಎಂದು ಟೀಕೆಯಲ್ಲಿದೆ. ಇದು 'ತಚ್ಚ' ಎಂಬ ಭಾಷ್ಯದ ವ್ಯಾಖ್ಯಾನ. 'ಚ' ಕಾರವು ಅವಧಾರಣಾರ್ಥದಲ್ಲಿದ್ದು 'ಆದಿತ್ಯಸ್ಯ' ಎಂಬಲ್ಲಿ ಅನ್ವಯವಾಗುತ್ತದೆಂದು ತಿಳಿಯಬೇಕು. 'ತಸ್ಯ' ಎಂಬ ಶ್ರುತಿಯಲ್ಲಿರುವ 'ಏತಸ್ಯ' ಪದಕ್ಕೆ ಸಂವತ್ಸರ ಎಂದರ್ಥ. 'ಸಾರ' ಶಬ್ದಕ್ಕೆ ಅಧಿಪತಿ ಎಂದರ್ಥ. ವಸ್ತುತಃ ಶ್ರುತಿಯಲ್ಲಿರುವ 'ರಸಃ' ಎಂಬಲ್ಲಿಯ ತನಕ ಅನುವಾದವನ್ನು ಭಾಷ್ಯದಲ್ಲಿ ಮಾಡಬೇಕಾಗಿರಲಿಲ್ಲ.

ಆದರೆ ಆಂತರಧಿಕರಣದ ನ್ಯಾಯದಂತೆ ಆದಿತ್ಯ ಶ್ರುತಿಯು ವಿಷ್ಣುವಿನಲ್ಲಿ ಸಾವಕಾಶವಾದ್ದರಿಂದ ಆದಿತ್ಯನನ್ನು ಪ್ರತಿಪಾದಿಸುವುದಿಲ್ಲವೆಂಬ ಶಂಕೆಯು ಪ್ರಾಪ್ತವಾಗುತ್ತದೆ. ಇದನ್ನು ನಿರಾಕರಿಸಿ ನಿರವಕಾಶವಾದ ಶತಸಂವತ್ಸರತ್ವವೆಂಬ ಲಿಂಗವು ಆದಿತ್ಯನಲ್ಲಿರುವುದರಿಂದ ಆದಿತ್ಯನೇ ಶ್ರುತಿಪ್ರತಿಪಾದ್ಯನೆಂಬ ಪೂರ್ವಪಕ್ಷವು ಹುಟ್ಟುತ್ತದೆಂಬುದನ್ನು ತಿಳಿಸಲು 'ರಸಃ' ಎಂಬಲ್ಲಿಯ ತನಕ ಅನುವಾದ ಮಾಡಿದ್ದಾರೆ.

भावदीपः – बहवो ह्यत्रादित्यशब्दाः क्षित्यादिषूक्त्वा आदित्येऽनुक्तिरित्यादिलिङ्गं चेति न्यायविवरणदिशा भाष्यस्थादिपदार्थमाह – **यश्चासाविति ।।**

।। **अस्येति** ।। एतमिति प्रकृतस्येत्यर्थः ।। **अन्ययेति** ।। आदित्यादन्यस्य सर्वगतत्व इत्यर्थः।

।। **अत एवेति** ।। विशिष्यादित्येऽनुक्तत्वरूपनिरवकाशलिङ्गादेवेत्यर्थः । अत्र भाष्ये आदित्यस्येत्युक्तावप्यग्रे चक्षुर्मयत्वादेश्च जीव इत्युक्तेराह – **सर्वजीवानां वेति ।**

।। **नचेति** ।। आनन्दमयनयरीत्या मयट् प्राचुर्यार्थः । सम्पूर्णदर्शनादि-शक्त्यादिमानिति तदर्थ इति भावः । तस्य सावकाशत्वमभ्युपेत्यार्भकौकस्त्वादिति सूत्रोक्तनिरवकाशलिङ्गेन जीवपक्षमुज्जीवयति – **तस्यापरिच्छिन्नत्वेनेति** ।। 'एष म आत्मा अन्तर्हृदये ज्यायान्' इति श्रुतेरिति भावः ।

भूतेष्वित्युक्त्या प्रतीतमेकदेशस्थत्वरूपमल्पौकस्त्वं सर्वगतसर्षपान्तःस्थत्वं ब्रह्माण्ड इव न युक्तमित्यर्थः ।

ಇಲ್ಲಿ ಹೇಳಲ್ಪಟ್ಟಿರುವ ಸರ್ವಗತತ್ವವೆಂದರೆ ಸಕಲರ ಹೃದಯದಲ್ಲಿರುವಿಕೆಯೆಂದರ್ಥ. ಇದನ್ನೇ 'ಅರ್ಭಕೌಕಸ್ತ್ವ' ಎನ್ನಲಾಗಿದೆ. ಆದರೆ ಹಿಂದಿನ ಅಧಿಕರಣದಲ್ಲಿ ಪ್ರಾಣನಿಗೆ ಹೇಳಲ್ಪಟ್ಟ ತತಮತ್ವವು ಸರ್ವತ್ರ ವ್ಯಾಪ್ತತ್ವವನ್ನು ಹೇಳುತ್ತಿದೆ. ವಿರುದ್ಧವಾದ ಈ ಎರಡು ಧರ್ಮಗಳನ್ನು ಒಬ್ಬನೇ ವ್ಯಕ್ತಿಗೆ ಹೇಳಲು ಹೇಗೆ ಸಾಧ್ಯ? ಎಂದು ಶಂಕಿಸಬಾರದು. ಆದಿತ್ಯನಲ್ಲಿರುವ ತತಮತ್ವವನ್ನು ಸಂಕೋಚ ಮಾಡಿದಾಗ ವಿರೋಧ ಬರುವುದಿಲ್ಲ.

ಶ್ರುತಿಯಲ್ಲಿ ಅನೇಕ ಆದಿತ್ಯಶಬ್ದಗಳಿರುವಿಕೆ ಮತ್ತು 'ಏತಮಸ್ಯಾಂ' ಎಂಬ ಶ್ರುತಿಯಲ್ಲಿ ಆ ದೇವತೆಯು ಪೃಥ್ವಿಯಲ್ಲಿದೆ ಎಂದು ಹೇಳಿ ಆದಿತ್ಯನಲ್ಲಿ ಹೇಳದಿರುವಿಕೆಯೇ ಮೊದಲಾದ ಲಿಂಗಗಳು ಭಾಷ್ಯದಲ್ಲಿರುವ ''ಆದಿ'' ಪದದಿಂದ ವಿವಕ್ಷಿತವಾಗಿವೆ. ಈ ವಿಚಾರವನ್ನು ನ್ಯಾಯವಿವರಣದ ಪ್ರಕಾರ 'ಯಶ್ಚಾಸೌ' ಇತ್ಯಾದಿಯಾಗಿ ವಿವರಿಸುತ್ತಿದ್ದಾರೆ. 'ಅಸ್ಯ' ಎಂದರೆ 'ಏತಂ' ಎಂಬುದಾಗಿ ಪ್ರಕೃತವಾದ ಎಂದರ್ಥ. 'ಅನ್ಯಥಾ' ಎಂದರೆ ಆದಿತ್ಯನಿಗಿಂತ ಬೇರೆಯವನು ಸರ್ವಗತನಾದರೆಂದರ್ಥ. 'ಅತಃ' ಎಂದರೆ ಖಿದ್ದಾಗಿ ಆದಿತ್ಯನಲ್ಲಿ ಹೇಳದಿರುವಿಕೆ ಎಂಬ ನಿರವಕಾಶಲಿಂಗದಿಂದ ಎಂದರ್ಥ.

ಪ್ರಕೃತ ಭಾಷ್ಯದಲ್ಲಿ 'ಆದಿತ್ಯಸ್ಯ ಪ್ರತೀಯತೇ' ಎಂದು ಹೇಳಿದ್ದರೂ ಸಹ, 'ತಸ್ಯೈತಸ್ಯ' ಎಂಬ ಮಂತ್ರದಲ್ಲಿ ಮುಂದೆ 'ಚಕ್ಷುರ್ಮಯಃ ಶ್ರೋತ್ರಮಯಃ' ಇವೇ ಮೊದಲಾದ ಜೀವಧರ್ಮಗಳೂ ಕೇಳಿಬರುತ್ತಿವೆ. ಟೀಕೆಯಲ್ಲಿ 'ಸರ್ವಜೀವಾನಾಂ ವಾ' ಎಂಬುದಾಗಿ ಎರಡನ್ನೂ ಸಂಗ್ರಹಿಸಿದ್ದಾರೆ.

'ನ ಚ' ಇತ್ಯಾದಿ ಟೀಕಾಮಾತಿಗೆ ಹೀಗರ್ಥ - ಆನಂದಮಯಾಧಿಕರಣದ ಪ್ರಕಾರ ಮಯಟ್ ಶಬ್ದಕ್ಕೆ ಪ್ರಾಚುರ್ಯಾರ್ಥವಿರುವುದರಿಂದ ಸಂಪೂರ್ಣ ಜ್ಞಾನವೇ ಮೊದಲಾದ ಶಕ್ತಿವುಳ್ಳವನು ಎಂದರ್ಥವೆಂದು ತಿಳಿಯಬೇಕು. ಹೀಗೆ ಮನೋಮಯ ಶಬ್ದಕ್ಕೆ ಸಾವಕಾಶತ್ವವನ್ನು ಅಂಗೀಕರಿಸಿ 'ಅರ್ಭಕೌಕಸ್ತ್ವಾತ್' ಎಂಬ ಸೂತ್ರದಲ್ಲಿರುವ ನಿರವಕಾಶಲಿಂಗದಿಂದ ಜೀವಪಕ್ಷಕಪೂರ್ವಪಕ್ಷವನ್ನು 'ತಸ್ಯಾಪರಿಚ್ಛಿನ್ನತ್ವೇನ' ಎಂಬುದರಿಂದ ಸಮರ್ಥಿಸುತ್ತಿದ್ದಾರೆ. 'ಏಷ ಮೇ ಆತ್ಮಾ ಅಂತರ್ಹೃದಯೇ ಜ್ಯಾಯಾನ್' ಎಂಬ ಶ್ರುತಿಯೇ ಈ ವಿಷಯದಲ್ಲಿ ಆಧಾರವಾಗಿದೆ.

'ಭೂತೇಷು' ಎಂದು ಹೇಳಿದ್ದರಿಂದ ತಿಳಿಯುವ ಏಕದೇಶದಲ್ಲಿರುವಿಕೆಯೆಂಬ ಅಲ್ಪೌಕಸ್ತ್ವವು ಬ್ರಹ್ಮಾಂಡದಲ್ಲಿ ಹೇಗೆ ಕೊಡುವುದಿಲ್ಲವೋ ಅದೇ ರೀತಿ ಬ್ರಹ್ಮನಲ್ಲಿಯೂ ಕೂಡುವುದಿಲ್ಲವೆಂದರ್ಥ.

भावदीपः – नन्वेवं प्रागुक्तं ततमत्वमपि जीवानामेव वाच्यम् एकप्रकरणत्वात्। तथाच ततमेषु जीवेषु अल्पौकस्त्वायोगतुल्य इति चेन्मैवम् ।

जीवेषु ततमत्वस्य सङ्कोचसम्भवात् ।

परिपूर्णचंद्रिका

नचान्तर्यामिण तथा । ब्रह्मत्वव्याघातादिति भावः । कथं तर्हि भाष्ये 'तद्व्यपदेशाच्च' इति सूत्रे च चक्षुर्मयत्वादिलिङ्गोक्तिरित्यतो हेत्वन्तरेण पूर्वपक्षे सति अभ्युच्चयत्वेन तदुक्तिरिति सुधोक्तदिशाऽर्भकौकस्त्वरूपानवकाशलिङ्गे सति प्रसिद्धचक्षुःकरणकत्वमेव चक्षुर्मयत्वादि स्यात् । तच्च नित्यज्ञानेऽन्तर्यामिण न युक्तमिति भावेनाऽऽह – चक्षुर्मयत्वेति ।।

अत एव सूत्रेऽर्भकौकस्त्वादित्युक्तत्वैव तद्व्यपदेशादित्युक्तमिति भावः ।

ಪ್ರಶ್ನೆ - ಹಾಗಾದರೆ ಹಿಂದೆ ಹೇಳಿದ ತತಮತ್ವವೂ ಸಹ ಏಕಪ್ರಕರಣವಾದ್ದರಿಂದ ಜೀವನಲ್ಲಿಯೇ ಹೇಳಬೇಕು. ಆವಾಗ ಎಲ್ಲೆಡೆ ವ್ಯಾಪ್ತನಾದ ಜೀವನಲ್ಲಿ ಅಲ್ಪೌಕಸ್ತ್ವವು ಕೂಡುವುದಿಲ್ಲವೆಂಬ ದೋಷವು ಸಮಾನವಲ್ಲವೇ?

ಉತ್ತರ - ಹಾಗೇನಿಲ್ಲ. ಜೀವನಲ್ಲಿ ಹೇಳಿರುವ ತತಮತ್ವವನ್ನು ಸಂಕೋಚ ಮಾಡಬಹುದು. ಆದರೆ ಬ್ರಹ್ಮನಲ್ಲಿ ತತಮತ್ವವನ್ನು ಸಂಕೋಚ ಮಾಡಲು ಬರುವುದಿಲ್ಲ. ಹಾಗೆ ಸಂಕೋಚ ಮಾಡಿದರೆ ಬ್ರಹ್ಮವೆಂಬ ಶಬ್ದದಿಂದಲೇ ವ್ಯಾಹತಿದೋಷ ಬರುತ್ತದೆಂದರ್ಥ.

ಪ್ರಶ್ನೆ - ಹಾಗಾದರೆ ಭಾಷ್ಯದಲ್ಲಿ ಮತ್ತು 'ತದ್ವ್ಯಪದೇಶಾಚ್ಚ' ಎಂಬ ಸೂತ್ರದಲ್ಲಿ ಚಕ್ಷುರ್ಮಯತ್ವಾದಿ ಲಿಂಗಗಳನ್ನು ಏಕೆ ಹೇಳಿದ್ದಾರೆ ?

ಉತ್ತರ - ಮತ್ತೊಂದು ಹೇತುವಿನಿಂದ ಪೂರ್ವಪಕ್ಷವು ಪ್ರಾಪ್ತವಾದರೆ ಅಭ್ಯುಚ್ಚಯಯುಕ್ತಿಗಾಗಿ ಹೀಗೆ ಹೇಳಿದ್ದಾರೆಂದು ಸುಧೆಯಲ್ಲಿ ಹೇಳಿದ್ದಾರೆ. ಈ ಪ್ರಕಾರ ಅರ್ಭಕೌಕಸ್ತ್ವವೆಂಬ ನಿರವಕಾಶಲಿಂಗವಿರಬೇಕಾದರೆ ಪ್ರಸಿದ್ಧವಾದ ಚಕ್ಷುರಿಂದ್ರಿಯವುಳ್ಳವನೇ ಚಕ್ಷುರ್ಮಯನೆನಿಸುತ್ತಾನೆ. ಇದು ನಿತ್ಯಜ್ಞಾನಿಯಾದ ಅಂತರ್ಯಾಮಿಯಲ್ಲಿ ಕೂಡುವುದಿಲ್ಲ ಎಂಬ ಅಭಿಪ್ರಾಯದಿಂದ 'ಚಕ್ಷುರ್ಮಯತ್ವಾದಿ' ಎಂಬ ವಾಕ್ಯ ಹೊರಟಿದೆ. ಆದ್ದರಿಂದಲೇ ಸೂತ್ರದಲ್ಲಿ 'ಅರ್ಭಕೌಕಸ್ತ್ವಾತ್' ಎಂದು ಹೇಳದೇ 'ತದ್ವ್ಯಪದೇಶಾತ್' ಎಂದು ಹೇಳಿದ್ದಾರೆ.

भावदीपः – भाष्यस्थेतिशब्दं हेत्वर्थं मत्वा 'ततमम्' इति वाक्यस्य पूर्वाक्षेपरूपसङ्गतिपरत्वेन व्याख्यातस्यापि पूर्वपक्षफलपरतयापि तात्पर्यमाह – अत इति ।। निरवकाशश्रुतिलिङ्गसत्वादित्यर्थः । आदित्यजीवयोरन्यतरानिश्चयेऽपि अन्यत्वेन तन्निश्चयः स्यादतो न पूर्वपक्षस्य सन्देहादविशेष इति भावेनोक्तम् – विष्वन्यस्यैवेति ।। सर्वगतत्वादिति ।। सर्वहृत्स्थत्वरूपसर्वगतत्वादित्यर्थः ।।

भूतेष्वित्युक्त्या प्रतीतमेकदेशस्थत्वरूपमल्पौकस्त्वं सर्वगतसर्षपान्तःस्थत्वं ब्रह्माण्ड इव न युक्तमित्यर्थः ।

ಇಲ್ಲಿ ಹೇಳಲ್ಪಟ್ಟಿರುವ ಸರ್ವಗತತ್ವವೆಂದರೆ ಸಕಲರ ಹೃದಯದಲ್ಲಿರುವಿಕೆಯೆಂದರ್ಥ. ಇದನ್ನೇ 'ಅರ್ಭಕೌಕಸ್ತ್ವ' ಎನ್ನಲಾಗಿದೆ. ಆದರೆ ಹಿಂದಿನ ಅಧಿಕರಣದಲ್ಲಿ ಪ್ರಾಣನಿಗೆ ಹೇಳಲ್ಪಟ್ಟ ತತಮತ್ವವು ಸರ್ವತ್ರ ವ್ಯಾಪ್ತತ್ವವನ್ನು ಹೇಳುತ್ತಿದೆ. ವಿರುದ್ಧವಾದ ಈ ಎರಡು ಧರ್ಮಗಳನ್ನು ಒಬ್ಬನೇ ವ್ಯಕ್ತಿಗೆ ಹೇಳಲು ಹೇಗೆ ಸಾಧ್ಯ? ಎಂದು ಶಂಕಿಸಬಾರದು. ಆದಿತ್ಯನಲ್ಲಿರುವ ತತಮತ್ವವನ್ನು ಸಂಕೋಚ ಮಾಡಿದಾಗ ವಿರೋಧ ಬರುವುದಿಲ್ಲ.

ಶ್ರುತಿಯಲ್ಲಿ ಅನೇಕ ಆದಿತ್ಯಶಬ್ದಗಳಿರುವಿಕೆ ಮತ್ತು 'ಏತಮಸ್ಯಾಂ' ಎಂಬ ಶ್ರುತಿಯಲ್ಲಿ ಆ ದೇವತೆಯು ಪೃಥ್ವಿಯಲ್ಲಿದೆ ಎಂದು ಹೇಳಿ ಆದಿತ್ಯನಲ್ಲಿ ಹೇಳದಿರುವಿಕೆಯೇ ಮೊದಲಾದ ಲಿಂಗಗಳು ಭಾಷ್ಯದಲ್ಲಿರುವ "ಆದಿ" ಪದದಿಂದ ವಿವಕ್ಷಿತವಾಗಿವೆ. ಈ ವಿಚಾರವನ್ನು ನ್ಯಾಯವಿವರಣದ ಪ್ರಕಾರ 'ಯಶ್ಚಾಸೌ' ಇತ್ಯಾದಿಯಾಗಿ ವಿವರಿಸುತ್ತಿದ್ದಾರೆ. 'ಅಸ್ಯ' ಎಂದರೆ 'ಏತಂ' ಎಂಬುದಾಗಿ ಪ್ರಕೃತವಾದ ಎಂದರ್ಥ. 'ಅನ್ಯಥಾ' ಎಂದರೆ ಆದಿತ್ಯನಿಗಿಂತ ಬೇರೆಯವನು ಸರ್ವಗತನಾದರೆಂದರ್ಥ. 'ಅತಃ' ಎಂದರೆ ಖಿದ್ದಾಗಿ ಆದಿತ್ಯನಲ್ಲಿ ಹೇಳದಿರುವಿಕೆ ಎಂಬ ನಿರವಕಾಶಲಿಂಗದಿಂದ ಎಂದರ್ಥ.

ಪ್ರಕೃತ ಭಾಷ್ಯದಲ್ಲಿ 'ಆದಿತ್ಯಸ್ಯ ಪ್ರತೀಯತೇ' ಎಂದು ಹೇಳಿದ್ದರೂ ಸಹ, 'ತಸ್ಯೈತಸ್ಯ' ಎಂಬ ಮಂತ್ರದಲ್ಲಿ ಮುಂದೆ 'ಚಕ್ಷುರ್ಮಯಃ ಶ್ರೋತ್ರಮಯಃ' ಇವೇ ಮೊದಲಾದ ಜೀವಧರ್ಮಗಳೂ ಕೇಳಿಬರುತ್ತಿವೆ. ಟೀಕೆಯಲ್ಲಿ 'ಸರ್ವಜೀವಾನಾಂ ವಾ' ಎಂಬುದಾಗಿ ಎರಡನ್ನೂ ಸಂಗ್ರಹಿಸಿದ್ದಾರೆ.

'ನ ಚ' ಇತ್ಯಾದಿ ಟೀಕಾಮಾತಿಗೆ ಹೀಗರ್ಥ - ಆನಂದಮಯಾಧಿಕರಣದ ಪ್ರಕಾರ ಮಯಟ್ ಶಬ್ದಕ್ಕೆ ಪ್ರಾಚುರ್ಯಾರ್ಥವಿರುವುದರಿಂದ ಸಂಪೂರ್ಣ ಜ್ಞಾನವೇ ಮೊದಲಾದ ಶಕ್ತಿವುಳ್ಳವನು ಎಂದರ್ಥವೆಂದು ತಿಳಿಯಬೇಕು. ಹೀಗೆ ಮನೋಮಯ ಶಬ್ದಕ್ಕೆ ಸಾವಕಾಶತ್ವವನ್ನು ಅಂಗೀಕರಿಸಿ 'ಅರ್ಭಕೌಕಸ್ತ್ವಾತ್' ಎಂಬ ಸೂತ್ರದಲ್ಲಿರುವ ನಿರವಕಾಶಲಿಂಗದಿಂದ ಜೀವಪಕ್ಷಕಪೂರ್ವಪಕ್ಷವನ್ನು 'ತಸ್ಮಾಪರಿಚ್ಛಿನ್ನತ್ವೇನ' ಎಂಬುದರಿಂದ ಸಮರ್ಥಿಸುತ್ತಿದ್ದಾರೆ. 'ಏಷ ಮೇ ಆತ್ಮಾ ಅಂತರ್ಹೃದಯೇ ಜ್ಯಾಯಾನ್' ಎಂಬ ಶ್ರುತಿಯೇ ಈ ವಿಷಯದಲ್ಲಿ ಆಧಾರವಾಗಿದೆ.

'ಭೂತೇಷು' ಎಂದು ಹೇಳಿದ್ದರಿಂದ ತಿಳಿಯುವ ಏಕದೇಶದಲ್ಲಿರುವಿಕೆಯೆಂಬ ಅಲ್ಪೌಕಸ್ತ್ವವು ಬ್ರಹ್ಮಾಂಡದಲ್ಲಿ ಹೇಗೆ ಕೊಡುವುದಿಲ್ಲವೋ ಅದೇ ರೀತಿ ಬ್ರಹ್ಮನಲ್ಲಿಯೂ ಕೂಡುವುದಿಲ್ಲವೆಂದರ್ಥ.

भावदीपः – नन्वेवं प्रागुक्तं ततमत्वमपि जीवानामेव वाच्यम् एकप्रकरणत्वात्। तथाच ततमेषु जीवेषु अल्पौकस्त्वायोगतुल्य इति चेन्मैवम् ।

जीवेषु ततमत्वस्य सङ्कोचसम्भवात् ।

ಪರಿಪೂರ್ಣಚಂದ್ರಿಕಾ

नचान्तर्यामिण तथा । ब्रह्मत्वव्याघातादिति भावः । कथं तर्हि भाष्ये 'तद्व्यपदेशाच्च' इति सूत्रे च चक्षुर्मयत्वादिलिङ्गोक्तिरित्यतो हेत्वन्तरेण पूर्वपक्षे सति अभ्युच्चयत्वेन तदुक्तिरिति सुधोक्तदिशाऽभैकौकस्त्वरूपानवकाशलिङ्गे सति प्रसिद्धचक्षुःकरणकत्वमेव चक्षुर्मयत्वादि स्यात् । तच्च नित्यज्ञानेऽन्तर्यामिण न युक्तमिति भावेनाऽऽह – **चक्षुर्मयत्वेति ।।**

अत एव सूत्रेऽभैकौकस्त्वादित्युक्तवैव तद्व्यपदेशादित्युक्तमिति भावः ।

ಪ್ರಶ್ನೆ - ಹಾಗಾದರೆ ಹಿಂದೆ ಹೇಳಿದ ತತಮತ್ವವೂ ಸಹ ಏಕಪ್ರಕರಣವಾದ್ದರಿಂದ ಜೀವನಲ್ಲಿಯೇ ಹೇಳಬೇಕು. ಆವಾಗ ಎಲ್ಲೆಡೆ ವ್ಯಾಪ್ತನಾದ ಜೀವನಲ್ಲಿ ಅಲ್ಪೈಕಸ್ವತ್ವವು ಕೂಡುವುದಿಲ್ಲವೆಂಬ ದೋಷವು ಸಮಾನವಲ್ಲವೇ?

ಉತ್ತರ - ಹಾಗೇನಿಲ್ಲ. ಜೀವನಲ್ಲಿ ಹೇಳಿರುವ ತತಮತ್ವವನ್ನು ಸಂಕೋಚ ಮಾಡಬಹುದು. ಆದರೆ ಬ್ರಹ್ಮನಲ್ಲಿ ತತಮತ್ವವನ್ನು ಸಂಕೋಚ ಮಾಡಲು ಬರುವುದಿಲ್ಲ. ಹಾಗೆ ಸಂಕೋಚ ಮಾಡಿದರೆ ಬ್ರಹ್ಮವೆಂಬ ಶಬ್ದದಿಂದಲೇ ವ್ಯಾಹತಿದೋಷ ಬರುತ್ತದೆಂದರ್ಥ.

ಪ್ರಶ್ನೆ - ಹಾಗಾದರೆ ಭಾಷ್ಯದಲ್ಲಿ ಮತ್ತು 'ತದ್ವ್ಯಪದೇಶಾಚ್ಚ' ಎಂಬ ಸೂತ್ರದಲ್ಲಿ ಚಕ್ಷುರ್ಮಯತ್ವಾದಿ ಲಿಂಗಗಳನ್ನು ಏಕೆ ಹೇಳಿದ್ದಾರೆ ?

ಉತ್ತರ - ಮತ್ತೊಂದು ಹೇತುವಿನಿಂದ ಪೂರ್ವಪಕ್ಷವು ಪ್ರಾಪ್ತವಾದರೆ ಅಭ್ಯುಚ್ಚಯಯುಕ್ತಿಗಾಗಿ ಹೀಗೆ ಹೇಳಿದ್ದಾರೆಂದು ಸುಧೆಯಲ್ಲಿ ಹೇಳಿದ್ದಾರೆ. ಈ ಪ್ರಕಾರ ಅರ್ಭಕೌಕಸ್ತ್ವವೆಂಬ ನಿರವಕಾಶಲಿಂಗವಿರಬೇಕಾದರೆ ಪ್ರಸಿದ್ಧವಾದ ಚಕ್ಷುರಿಂದ್ರಿಯವುಳ್ಳವನೇ ಚಕ್ಷುರ್ಮಯನೆನಿಸುತ್ತಾನೆ. ಇದು ನಿತ್ಯಜ್ಞಾನಿಯಾದ ಅಂತರ್ಯಾಮಿಯಲ್ಲಿ ಕೊಡುವುದಿಲ್ಲ ಎಂಬ ಅಭಿಪ್ರಾಯದಿಂದ 'ಚಕ್ಷುರ್ಮಯತ್ವಾದಿ' ಎಂಬ ವಾಕ್ಯ ಹೊರಟಿದೆ. ಆದ್ದರಿಂದಲೇ ಸೂತ್ರದಲ್ಲಿ 'ಅರ್ಭಕೌಕಸ್ತ್ವಾತ್' ಎಂದು ಹೇಳದೇ 'ತದ್ವ್ಯಪದೇಶಾತ್' ಎಂದು ಹೇಳಿದ್ದಾರೆ.

भावदीपः – भाष्यस्थेतिशब्दं हेत्वर्थं मत्वा 'ततमम्' इति वाक्यस्य पूर्वाक्षेपरूपसङ्गतिपरत्वेन व्याख्यातस्यापि पूर्वपक्षफलपरतयापि तात्पर्यमाह – **अत इति ।।** निरवकाशश्रुतिलिङ्गसत्वादित्यर्थः । आदित्यजीवयोरन्यतरानिश्चयेऽपि अन्यत्वेन तन्निश्चयः स्यादतो न पूर्वपक्षस्य सन्देहादविशेष इति भावेनोक्तम् – **विष्वन्यस्यैवेति ।। सर्वगतत्वादिति ।।** सर्वहृत्स्थत्वरूपसर्वगतत्वादित्यर्थः ।।

प्राणत्वमिति ।। एकप्रकरणत्वादिति भावः । असङ्कुचितसर्वगतत्ववति विष्णावल्पौकस्त्वायोगेऽपि अल्पौकस्त्ववत्त्वादित्यादौ ततमत्वेनोक्तप्राणत्वं युक्तम् । ततमत्वस्य यथायोगं सङ्कोचसम्भवादिति भावः ।

ಭಾಷ್ಯದಲ್ಲಿರುವ 'ಇತಿ' ಶಬ್ದವು ಹೇತ್ವರ್ಥದಲ್ಲಿದೆ ಎಂದು ತಿಳಿದು 'ತತಮಮ್' ಎಂಬ ವಾಕ್ಯಕ್ಕೆ ಆಕ್ಷೇಪರೂಪವಾದ ಸಂಗತಿಯನ್ನು ಹೇಳುವ ಮೂಲಕ ವ್ಯಾಖ್ಯಾನಿಸಿದ್ದಾಯಿತು. ಈಗ ಪೂರ್ವಪಕ್ಷಫಲಪರವಾಗಿಯೂ ಅದೇ ವಾಕ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಅತಃ' ಎಂಬ ವಾಕ್ಯದಿಂದ. 'ಅತಃ' ಎಂಬ ಪದಕ್ಕೆ ನಿರವಕಾಶಶ್ರುತಿಲಿಂಗವಿರುವುದಿಂದಲೇ ಎಂದರ್ಥ. ಆದಿತ್ಯ ಹಾಗೂ ಜೀವರಲ್ಲಿ ಒಬ್ಬರು ಸರ್ವಗತರೆಂದು ನಿಶ್ಚಯವಾಗದ್ದಿದ್ದರೂ ವಿಷ್ಣುವಿಗಿಂತ ಅನ್ಯರು ಸರ್ವಗತರಾಗಿದ್ದಾರೆಂದು ಪೂರ್ವಪಕ್ಷವನ್ನು ದೃಢಪಡಿಸಬಹುದು. ಆದ್ದರಿಂದ ಪೂರ್ವಪಕ್ಷವು ಸಂದೇಹರೂಪವೇ ಆಗಿದೆಯೆಂಬ ಆಕ್ಷೇಪಕ್ಕೆ ಅವಕಾಶವಿಲ್ಲ. ಈ ಅಭಿಪ್ರಾಯದಿಂದ 'ವಿಷ್ಣ್ವನ್ಯಸ್ಯೈವ' ಎಂಬ ಮಾತನ್ನು ಟೀಕೆಯಲ್ಲಿ ಹೇಳಿದ್ದಾರೆ.

'ಸರ್ವಗತತ್ವಾತ್' ಎಂಬ ಪದಕ್ಕೆ ಸಕಲಜೀವರ ಹೃದಯದಲ್ಲಿರುವಿಕೆಯೆಂಬ ಸರ್ವಗತತ್ವವೆಂಬ ಧರ್ಮದಿಂದೆಂದರ್ಥ. 'ಪ್ರಾಣತ್ವ' ಎಂಬ ಪದಕ್ಕೆ ಒಂದೇ ಪ್ರಕರಣದಲ್ಲಿರುವುದರಿಂದ ಎಂದು ಅಭಿಪ್ರಾಯ.

ಎಲ್ಲೆಡೆ ವ್ಯಾಪ್ತನಾದ ವಿಷ್ಣುವಿನಲ್ಲಿ ಅರ್ಭಕೌಕಸ್ತ್ವವು ಕೂಡುವುದಿಲ್ಲ. ಆದರೆ ಅರ್ಭಕೌಕಸ್ತ್ವ ಇರುವಂತಹ ಆದಿತ್ಯಾದಿಗಳಲ್ಲಿ ತತಮತ್ವವು ಯುಕ್ತವಾಗುತ್ತದೆ. ಏಕೆಂದರೆ ತತಮತ್ವಕ್ಕೆ ಸರಿಯಾಗಿ ಸಂಕೋಚವನ್ನು ಮಾಡಬಹುದು.

भावदीपः – महाभोगत्वेनोक्तप्राणत्वं च प्राणत्वमित्यनेन गृह्यते । ततमत्वेन महाभोगत्वेन चोक्तयोर्द्वयोरपि लाभाय प्राणत्वमित्येव सामान्योक्तिः । एवं चानन्दमयत्वं चेत्याक्षेपः शिष्टो भवति । यत्त्वस्य पूर्वाक्षेपेण सङ्गतिमत्त्वे पादविभागभङ्गप्रसङ्ग इति तन्न प्रमेयभेदेन तदुपपत्तेरिति । भाष्ये 'स यश्चायम्' इति प्रतीकोपादानेन 'एतमस्याम्' इत्यादिवाक्यमेवाभिप्रेतमिति भावेनाह – इत्यादिना वाक्येन सर्वत्र पृथिव्यादिषूच्यमान इति ।

ಮಹಾಭೋಗನೆಂದು ಹೇಳಲ್ಪಟ್ಟ ಪ್ರಾಣನನ್ನು 'ಪ್ರಾಣತ್ವವೆಂಬ' ವಾಕ್ಯದಿಂದ ವಿವಕ್ಷಿಸಲಾಗಿದೆ. ತತಮತ್ವದಿಂದ ಮತ್ತು ಮಹಾಭೋಗದಿಂದ ಹೇಳಲ್ಪಟ್ಟ ಎರಡನ್ನೂ ಸಂಗ್ರಹಿಸಲು 'ಪ್ರಾಣತ್ವ,' ಎಂದು ಸಾಮಾನ್ಯವಾಗಿ ಹೇಳಿದ್ದಾರೆ. ಆದ್ದರಿಂದ ಆನಂದಮಯನೂ ಆಗಿದ್ದಾನೆಂಬ ಆಕ್ಷೇಪ ಹಾಗೆಯೇ ಉಳಿಯುತ್ತದೆ.

ಕೆಲವರು ಈ ಅಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಆಕ್ಷೇಪವನ್ನು ಮಾಡುವ ಮೂಲಕ ಸಂಗತಿಯನ್ನು ಹೇಳುವುದಾದರೆ ಪಾದವಿಭಾಗವೇ ಭಗ್ನವಾಗುವ ಪ್ರಸಂಗ ಬರುತ್ತದೆಂದು ಆಕ್ಷೇಪಿಸುತ್ತಾರೆ. ಇದು ಸರಿಯಲ್ಲ. ಏಕೆಂದರೆ ಪ್ರಮೇಯಭೇದದಿಂದ ಪಾದಭೇದವು ಉಪಪನ್ನವಾಗುತ್ತದೆ.

ಭಾಷ್ಯದಲ್ಲಿ 'ಸ ಯಶ್ಚಾಯಂ' ಎಂಬುದಾಗಿ ಪ್ರತೀಕವನ್ನು ಗ್ರಹಣ ಮಾಡಿದ್ದರಿಂದ 'ಏತಮಸ್ಯಾಂ' ಇತ್ಯಾದಿ ವಾಕ್ಯವೇ ಅಭಿಪ್ರೇತವಾಗಿದೆಯೆಂದು ತಿಳಿಯುತ್ತದೆ. ಇದನ್ನೇ ಟೀಕೆಯಲ್ಲಿ 'ಇತ್ಯಾದಿನಾ ವಾಕ್ಯೇನ ಸರ್ವತ್ರ ಪೃಥಿವ್ಯಾದಿಷೂಚ್ಯಮಾನ' ಎಂಬುದಾಗಿ ಹೇಳಿದ್ದಾರೆ.

ತತ್ವಪ್ರಕಾಶಿಕಾ – ಸಿದ್ಧಾನ್ತಯತ್ಸೂತ್ರಮವತಾರ್ಯ ವ್ಯಾಚಷ್ಟೇ – ಅತ ಇತಿ ।। 'ಸ ಯಶ್ಚಾಯಮ್' ಇತ್ಯಾದಿನಾ ವಾಕ್ಯೇನ ಸರ್ವತ್ರ ಪೃಥಿವ್ಯಾದಿಷ್ವಭಿಧೀಯಮಾನೋ ನಾರಾಯಣ ಏವ । 'ಏತಮೇವ ಬ್ರಹ್ಮೇತ್ಯಾಚಕ್ಷತೇ' ಇತಿ ಸರ್ವಗತೇ ಬ್ರಹ್ಮಶಬ್ದೋಪದೇಶಾತ್ । ಬ್ರಹ್ಮಶಬ್ದಸ್ಯ ಚ ಶ್ರುತ್ಯಾದೌ ನಾರಾಯಣ ಏವ ಪ್ರಸಿದ್ಧತ್ವಾದಿತ್ಯರ್ಥಃ । ತಥಾಚ ಶ್ರುತಿಃ 'ಯಚ್ಚ ಕಿಞ್ಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ । ಅನ್ತರ್ಬಹಿಶ್ಚ ತತ್ ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ।।'

ಸಿದ್ಧಾಂತ - ಸಿದ್ಧಾಂತ ಮಾಡುವ ಸೂತ್ರವನ್ನು ಹೇಳಿ 'ಅತಃ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ. ''ಸ ಯಶ್ಚಾಯಮ್'' ಎಂಬ ವಾಕ್ಯದಿಂದ ಪೃಥಿವ್ಯಾದಿಗಳೆಲ್ಲಡೆ ವ್ಯಾಪ್ತನಾದವನು ನಾರಾಯಣನೇ ಆಗಿದ್ದಾನೆಂದು ತಿಳಿಯಬೇಕು. ಏಕೆಂದರೆ ''ಏತಮೇವ ಬ್ರಹ್ಮೇತ್ಯಾಕ್ಷತೇ'' ಎಂಬುದಾಗಿ ಸರ್ವಗತನಲ್ಲಿ ಬ್ರಹ್ಮಶಬ್ದವನ್ನು ಉಲ್ಲೇಖಿಸಿದೆ. ಅಂದರೆ ಎಲ್ಲಾ ಶ್ರುತಿಗಳು ನಾರಾಯಣನಲ್ಲೇ ಬ್ರಹ್ಮಶಬ್ದವನ್ನು ಪ್ರಯೋಗಿಸಿವೆ. ಈ ವಿಷಯದಲ್ಲಿ ಶ್ರುತಿ ಹೀಗಿದೆ - ''ಯಚ್ಚ ಕಿಂಚಿತ್‌ಜಗತ್ಸರ್ವಂ ದೃಶ್ಯತೇ ಶ್ರೂಯತೇಪಿ ವಾ ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ'' (ಯಾವ ಈ ಜಗತ್ತು ಕಣ್ಣಿನಿಂದ ಕಾಣಿಸುತ್ತಿದೆಯೋ ಕಿವಿಯಿಂದ ಕೇಳಿಸುತ್ತಿದೆಯೋ ಇವೆಲ್ಲವನ್ನು ಒಳಗಿನಿಂದ ಮತ್ತು ಹೊರಗಿನಿಂದ ನಾರಾಯಣನು ವ್ಯಾಪಿಸಿದ್ದಾನೆ) ಎಂದು.

ತತ್ವಪ್ರಕಾಶಿಕಾ – ಇತ್ಯತ್ರ 'ಸ ಯಶ್ಚಾಯಮ್' ಇತಿ ವಾಕ್ಯೋದಾಹರಣಂ ಪೂರ್ವೆ ವಿಷಯ-ವಾಕ್ಯಸ್ಯಾನುದಾಹೃತತ್ವಾತ್ ಕೃತಮಶರೀರತ್ವಯುಕ್ತಿಸೂಚನಾರ್ಥಂ ಚ । ನಹಿ ನಾರಾಯಣೇತರಚೇತನಾನಾಂ ಸ್ವತೋಽಶರೀರತಾ ಸಮ್ಭವತಿ ।। ೧ ।।

ವಾಕ್ಯದ ಉದಾಹರಣೆಯನ್ನು ಹಿಂದಿನ ಅಧಿಕರಣಗಳಲ್ಲಿ ''ಸ ಯಶ್ಚಾಯಮ್'' ಎಂಬ ವಿಷಯವಾಕ್ಯವನ್ನು ಹೇಳಿಲ್ಲವಾದ್ದರಿಂದ ಈಗ ಉದಾಹರಿಸಿದ್ದಾರೆ. ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಧರ್ಮವು ಪರಮಾತ್ಮನದ್ದೇ ಆಗಿದೆ. ಅಶರೀರತ್ವಯುಕ್ತಿಯನ್ನೂ ಸಹ ವಿಷಯವಾಕ್ಯದಿಂದ ಸೂಚಿಸಿದ್ದಾರೆ. ಏಕೆಂದರೆ ನಾರಾಯಣನನ್ನು ಬಿಟ್ಟು ಉಳಿದವರಿಗೆ ಅಶರೀರತ್ವಧರ್ಮ ಬರಲು ಸಾಧ್ಯವಿಲ್ಲ.

ಭಾವದೀಪಃ – ಯದ್ವಾ 'ಆದಿತ್ಯೋ ರಸಃ' 'ಯಶ್ಚಾಸಾವಾದಿತ್ಯಃ' ಇತಿ ಪೂರ್ವೋತ್ತರವಾಕ್ಯಯೋ ರಾದಿತ್ಯಪದೇನೈವಾದಿತ್ಯಸ್ಥಸ್ಯ ಸರ್ವೇನ್ದ್ರಿಯಮಯ ಇತಿ ವಕ್ಷ್ಯಮಾಣಸ್ಮೃತ್ಯಾ ಗ್ರಹಣಾದುದಾಹರಣಮೇ-

ವೇದಮ್ । ಸರ್ವತ್ರೇತಿ ಭಾಷ್ಯಪದಾನುವಾದಃ । ಉಕ್ಥಾದಿಷ್ವಿತಿ ವಾಚ್ಯೇ ಪೃಥಿವ್ಯಾದಿಷ್ವಿತ್ಯನುಕ್ತಿಃ 'ಸ ಯಶ್ಚಾಯಮ್' ಇತಿ ವಾಕ್ಯೇ ಸ್ಪಷ್ಟಮ್ ಆದಿತ್ಯೇ ಏಷ ಇತ್ಯಪ್ರತೀತೇಶ್ಚೇತಿ ಭಾವಃ । ವಿಶಿಷ್ಟಸ್ಯ ಹೇತುತ್ವೇ ಪ್ರಸಿದ್ಧಪದವ್ಯಾವರ್ತ್ಯಾಭಾವಾತ್ ಕೇವಲಬ್ರಹ್ಮಶಬ್ದಸ್ಯೈವ ಹೇತುತ್ವೇ ದೋಷಾಭಾವಾಚ್ಚ ವಿಭಜ್ಯ ಭಾಷ್ಯಂ ಹೇತೋಃ ಪಕ್ಷಧರ್ಮತಾಂ ದರ್ಶಯನ್ ವ್ಯಾಚಷ್ಟೇ – ಎತಮೇವೇತಿ ।। ಸರ್ವಗತ ಇತಿ ।। 'ಎತಮ್' ಇತ್ಯನೇನ ಪೃಥಿವ್ಯಾದಿಷು ಸರ್ವತ್ರೋಕ್ತಸ್ಯ ಪರಾಮರ್ಶ ಇತಿ ಭಾವಃ ।। ಪ್ರಸಿದ್ಧತ್ವಾದಿತಿ ।। ತಥಾ ಚಾನ್ಯಸ್ಯೋಕ್ತೌ ಪ್ರಸಿದ್ಧಿಬಾಧ ಇತಿ ಭಾವಃ ।

ಅಥವಾ 'ಆದಿತ್ಯೋ ರಸಃ ಯಶ್ಚಾಸಾವಾದಿತ್ಯಃ' ಎಂಬುದಾಗಿ ಹಿಂದಿನ ಮತ್ತು ಮುಂದಿನ ವಾಕ್ಯಗಳಲ್ಲಿ ಆದಿತ್ಯಪದವಿದೆ. ಇದರಿಂದಲೇ ಆದಿತ್ಯನಲ್ಲಿರುವನನ್ನು ಸ್ವೀಕರಿಸಬಹುದು. 'ಸರ್ವೇಂದ್ರಿಯಮಯ' ಎಂದು ಮುಂದೆ ಹೇಳುವ ಸ್ಮೃತಿಯೂ ಸಹ ಇದಕ್ಕೆ ಸಂವಾದಿಯಾಗಿದೆ.

ಆದ್ದರಿಂದ ಇದು ಸಂಪೂರ್ಣವಾಗಿ ಉದಾಹರಣೆಯಾಗುತ್ತದೆ. ಭಾಷ್ಯದಲ್ಲಿರುವ 'ಸರ್ವತ್ರ' ಎಂಬ ಪದದ ಅನುವಾದರೂಪವಾಗಿದೆ.

ವಸ್ತುತಃ ಟೀಕೆಯಲ್ಲಿ 'ಉಕ್ಥಾದಿಷು' ಎಂದು ಹೇಳಬೇಕಾಗಿತ್ತು. ಆದರೆ 'ಪೃಥಿವ್ಯಾದಿಷು' ಎಂಬುದಾಗಿ ಹೇಳಲು ಕಾರಣವೇನೆಂದರೆ 'ಸರ್ವಭೂತಾಶಯಃ ಸ್ಥಿಥಃ' ಎಂಬ ಮುಂದೆ ಹೇಳುವ ಸ್ಮೃತಿಯ ಅನುಗುಣ್ಯವನ್ನು ತೋರಿಸಿದ್ದಾರೆ. ಆದ್ದರಿಂದಲೇ 'ಆದಿತ್ಯಾದಿಷು' ಎಂಬುದಾಗಿಯೂ ಸಹ ಹೇಳಿರುವುದಿಲ್ಲ. ಏಕೆಂದರೆ 'ಸ ಯಶ್ಚಾಯಂ' ಎಂಬ ವಾಕ್ಯದಲ್ಲಿ ಸ್ಪಷ್ಟವಾಗಿ ಆದಿತ್ಯ ಎಂದು ಪ್ರತೀತವಾಗುತ್ತಿಲ್ಲ.

ವಿಶಿಷ್ಟವಾದದ್ದನ್ನು ಹೇತು ಮಾಡಿದರೆ ಪ್ರಸಿದ್ಧ ಪದದಿಂದ ವ್ಯಾವರ್ತ್ಯವಾದದ್ದು ಇರುವುದಿಲ್ಲ. ಕೇವಲ ಬ್ರಹ್ಮ ಶಬ್ದವನ್ನು ಹೇತು ಮಾಡಿದರೆ ದೋಷ ಇರುವುದಿಲ್ಲ. ಆದ್ದರಿಂದ ಭಾಷ್ಯವನ್ನು ವಿಭಾಗಿಸಿ ಹೇತುವಿಗೆ ಪಕ್ಷಧರ್ಮವನ್ನು ತೋರಿಸುವುದಕ್ಕಾಗಿ ಹೇತುವನ್ನು ವ್ಯಾಖ್ಯಾನ ಮಾಡಿದ್ದಾರೆ. 'ಸರ್ವಗತಃ' ಎಂದು ಟೀಕೆಯಲ್ಲಿದೆ. 'ಏತಂ' ಎಂಬುದರಿಂದ ಪೃಥಿವ್ಯಾದಿಗಳೆಲ್ಲೆಡೆ ಹೇಳಲ್ಪಟ್ಟದ್ದನ್ನು ಪರಾಮರ್ಶಿಸಬೇಕು. ಅನ್ಯರನ್ನು ಸರ್ವಗತರೆಂದರೆ ಪ್ರಸಿದ್ಧಿಬಾಧ ಬರುತ್ತದೆಂದು ಅಭಿಪ್ರಾಯ.

ಭಾವದೀಪಃ – 'ಸ್ಮೃತೇಶ್ಚ' ಇತಿ ಸೂತ್ರೇ ಸರ್ವಭೂತೇತಿ ಸ್ಮೃತಿಸಮಾಖ್ಯಾನೋಕ್ತ್ಯಾ ಶ್ರುತೌ ಭೂತೇಷ್ವಿತ್ಯುಕ್ತ್ಯಾ ಚ ಭೂತಾದನ್ಯತ್ರ ನೇತಿ ಪ್ರಾಪ್ತಶಙ್ಕಾನಿರಾಸಾಯ ಭಾಷ್ಯೇ ನಾರಾಯಣ ಏವೇತ್ಯುಕ್ತಿಃ ಶ್ರುತಿಸಮಾಖ್ಯಾಸೂಚನಾಯೇತಿ ಮತ್ವಾಹ – ತಥಾಚ ಶ್ರುತಿರಿತಿ ।। ತೈತ್ತಿರೀಯೋಪನಿಷದೀತ್ಯರ್ಥಃ । ತಥಾಚೇಹ ನಾರಾಯಣಸ್ಯೈವ ಬಹಿರಪಿ ವಿದ್ಯಮಾನಸ್ಯೈವ ಚ ಸರ್ವಾನ್ತಃಸ್ಥತ್ವರೂಪಸರ್ವಗತತ್ವಮಿತಿ ಭಾವಃ ।। ಕೃತಮಿತಿ ।। ತರ್ಹಿ ಏತಂ ಹ್ಯೇವೇತ್ಯಾದ್ಯೇವೋಚ್ಯತೇತ್ಯತೋ ವಾ ಪೂರ್ವಮಾದಿತ್ಯರಸ ಇತಿ ವಿಷಯವಾಕ್ಯಸ್ಯೋಕ್ತತ್ವಾದೇತದುಕ್ತಿರ್ವ್ಯರ್ಥೇತ್ಯತೋ ವಾऽऽಹ – ಅಶರೀರತ್ವೇತಿ ।। ತಾಂ ನಿರವಕಾಶತೋಕ್ತ್ಯಾ ವ್ಯನಕ್ತಿ – ನಹೀತಿ ।। ಸ್ವತ ಇತಿ ।। ಮುಕ್ತಾನಾಮಪಿ ಸಾ

ತತ್ಪ್ರಸಾದಾದಾಗತೇತಿ ಭಾವಃ । ನಾರಾಯಣೇತರೇತ್ಯುಕ್ತ್ಯಾ 'ಯಸ್ಯ ಪ್ರಸಾದ್' ಇತ್ಯಾದಿಶ್ರುತಿಃ ಸೂಚಿತಾ । ಅತ ಏವೋತ್ತರಸೂತ್ರೇ ಶಾರೀರಪದೇನೈವ ಜೀವಾದಿತ್ಯಯೋರುಕ್ತಿರಿತಿ ಭಾವಃ ।। ೧ ।।

'ಸ್ಮೃತೇಶ್ಚ' ಎಂಬ ಸೂತ್ರದಲ್ಲಿ ''ಸರ್ವಭೂತಾಶಯಃ'' ಎಂಬ ಸ್ಮೃತಿಸಮಾಖ್ಯಾವನ್ನು ಹೇಳಿದ್ದಾರೆ. ಮತ್ತು ಶ್ರುತಿಯಲ್ಲಿ 'ಭೂತೇಷು' ಎಂದು ಹೇಳಿದ್ದರಿಂದ ಭೂತಪದಾರ್ಥಗಳನ್ನು ಬಿಟ್ಟು ಬೇರೆಡೆ ಭಗವಂತನು ಇಲ್ಲವೆಂದು ತಿಳಿಯುತ್ತದಲ್ಲವೆ? ಎಂಬ ಶಂಕೆಗೆ ಉತ್ತರಿಸುವುದಕ್ಕಾಗಿ ಭಾಷ್ಯದಲ್ಲಿ 'ನಾರಾಯಣೇ ಏವ' ಎಂದು ಹೇಳಿದ್ದಾರೆ. ಸ್ಮೃತಿಸಮಾಖ್ಯಾನವೆಂದು ಸೂಚಿಸಬೇಕೆಂದು ತಿಳಿದು 'ಯಥಾ ಚ ಶ್ರುತಿಃ' ಎಂದು ಹೇಳಿದ್ದಾರೆ. ತೈತ್ತಿರೀಯೋಪನಿಷತ್ತಿನಲ್ಲಿ ಎಂದರ್ಥ. ಆದ್ದರಿಂದ ಹೊರಗಡೆ ಇರುವ ನಾರಾಯಣನನ್ನೇ ಸಕಲರ ಹೃದಯದಲ್ಲಿದ್ದಾನೆಂಬ ಸರ್ವಗತತ್ವವನ್ನು ಹೇಳಿದಂತಾಗುತ್ತದೆಂದು ತಿಳಿಯಬೇಕು. ಟೀಕೆಯಲ್ಲಿ 'ಕೃತಂ' ಎಂಬ ಪದವಿದೆ. ಹಾಗಾದರೆ 'ಏತಂ ಹ್ಯೇವ' ಇತ್ಯಾದಿಯಾಗಿಯೇ ಹೇಳಬಹುದಿತ್ತಲ್ಲವೆ ? ಆಥವಾ ಹಿಂದೆ 'ಆದಿತ್ಯೋ ರಸಃ' ಎಂಬ ವಿಷಯವಾಕ್ಯವನ್ನು ಹೇಳಿದ್ದರಿಂದ ಈ ಮಾತು ವ್ಯರ್ಥವಲ್ಲವೇ ? ಎಂಬ ಪ್ರಶ್ನೆಗೆ ''ಅಶರೀರತ್ವಯುಕ್ತಿಸೂಚನಾರ್ಥಂ'' ಎಂದು ಹೇಳಿದ್ದಾರೆ. ಈ ಅಶರೀರತ್ವಯುಕ್ತಿಯು ನಿರವಕಾಶವಾಗಿದೆಯೆಂದು 'ನಹಿ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. 'ಸ್ವತಃ' ಎಂದು ಹೇಳಿದ್ದರಿಂದ ಮುಕ್ತರಿಗೂ ಸಹ ಅಶರೀರತ್ವವು ಭಗವಂತನ ಪ್ರಸಾದದಿಂದಷ್ಟೇ ಪ್ರಾಪ್ತವಾಗುತ್ತದೆಂದು ತಿಳಿಯಬೇಕು. ಆದ್ದರಿಂದಲೇ ಮುಂದಿನ ಸೂತ್ರದಲ್ಲಿ ಶಾರೀರಪದದಿಂದಲೇ ಜೀವ ಮತ್ತು ಆದಿತ್ಯರನ್ನು ಹೇಳಿದ್ದಾರೆಂದು ತಿಳಿಯಬೇಕು.

ವಾಕ್ಯಾರ್ಥಮಞ್ಜರಿ – ಶಬ್ದಾನಾಂ ಲಿಙ್ಗಾತ್ಮಕತ್ವಂ ನಾಮ ತತ್ಸ್ವರೂಪತ್ವಂ ವಾ ತದ್ವಾಚಕತ್ವಂ ವಾ । ನಾಽಃ, ಶಬ್ದಸ್ಯಾರ್ಥಸ್ವರೂಪತ್ವಾಪತ್ತೇಃ । ನ ದ್ವಿತೀಯಃ, ಲಿಙ್ಗವಾಚಿನಾಂ ಸರ್ವಗತತ್ವಮಿತ್ಯಾದೀನಾಂ ಭಗವತಿ ಸಮನ್ವಯಾನಭಿಧಾನಾದಿತ್ಯತ ಆಹ – **ಧರ್ಮವಿಶಿಷ್ಟೇತಿ ।। ಸಹಪಠಿತೇತಿ ।।** ಸ್ವತಃಪ್ರಸಿದ್ಧತ್ವಭಾವಾದಿಯಮುಕ್ತಿಃ । ಅತ್ರ ಲಿಙ್ಗಾತ್ಮಕೇತಿ ಪದಸಙ್ಗತಿಃ । ಶೇಷ ಪೂರ್ವವತ್ ।। **ತದೇವೇತಿ ।।** ತದೇಕದೇಶಭೂತಮೇವೇತ್ಯರ್ಥಃ । ಏತಮೇವೇತ್ಯವಧಾರಣೇಣ ವಿಷ್ಣೋರನ್ಯಸ್ಯೈವ ಸರ್ವಭೂತಗತತ್ವಾವಗಮಾದ್ ವಿಷ್ಣೌ ಭೂತಾನ್ವಯಸತ್ವೇऽಪಿ ನ ಪೂರ್ವೋಕ್ತನಿರುಪಚರಿತಸರ್ವಗತತ್ವಮಿತಿ ಭಾವಃ ।। ಏತಂ **ತ್ವೇವೇತಿ ।।** ಋಗ್ವೇದಿನ ಏತಮೇವ ಪರಮಾತ್ಮಾನಂ ಮಹದುಕ್ಥನಾಮಕಬೃಹತೀಸಹಸ್ರೇ ಯಜುರ್ವೇದಿನೋऽಗ್ನೌ ಸಾಮವೇದಿನೋ ಮಹಾವ್ರತಾಖ್ಯಕರ್ಮಾಙ್ಗಭೂತಸ್ತೋತ್ರೇ ಮೀಮಾಂಸನ್ತೇ ವಿಚಾರಯನ್ತಿ । ಅಸ್ಯಾಂ ಪೃಥಿವ್ಯಾಂ ವನಸ್ಪತಿಷು ವೃಕ್ಷೇಷು । ಭೂತೇಷು ಪ್ರಾಣೇಷು ಬ್ರಹ್ಮ ಪೂರ್ಣಮ್ ಆಚಕ್ಷತೇ ವದನ್ತಿ ಆಮ್ನಾಯತೇ ಅಭ್ಯಸ್ಯತೇ ಅಭಿಧೀಯತೇ ಇತಿ ಯಾವತ್ ।। **ಏಕಪ್ರಕರಣತ್ವಾದಿತಿ ।।** ಬ್ರಹ್ಮ ತತಮಮ್ ಏತಂ ತ್ವೇವೇತ್ಯನಯೋರೇಕಪ್ರಕರಣಸ್ಯತ್ವಾದಿತ್ಯರ್ಥಃ । ಬ್ರಹ್ಮ ತತಮಮಪಶ್ಯದಿತ್ಯುಕ್ತಿಃ ಪ್ರಾಣಾಖ್ಯಹರೌ ತೇನ ವಾಕ್ಯೇನ ಸರ್ವಗತತ್ವೋಕ್ತಿಃ ಆದಿತ್ಯಶ್ರುತಿರೂಪಲಕ್ಷಣಮ್ । ಚಕ್ಷುರ್ಮಯತ್ವಾದಿಜೀವಲಿಙ್ಗ ಚೇತ್ಯಪಿ ಗ್ರಾಹ್ಯಮ್ । 'ತಸ್ಯೈತಸ್ಯಾಸಾವಾದಿತ್ಯೋ ರಸಃ' 'ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ' 'ಯಶ್ಚಾಸಾವಾದಿತ್ಯಃ' 'ಏಕಮೇತದಿತಿ ವಿದ್ಯಾತ್' 'ತಸ್ಮಾತ್ ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ' ಇತ್ಯಸ್ಯಾಯಮರ್ಥಃ ।

ತಸ್ಯೈತಸ್ಯ ಸಂವತ್ಸರಸ್ಯ ಸರ್ವಸ್ಯಾದಿತ್ವಾತ್ ಸರ್ವಸ್ಮಿಂಸ್ತತತ್ವಾತ್ ಸರ್ವಜೀವ-ನಿಯಾಮಕತ್ವಾದಾದಿತ್ಯನಾಮಾತ್ರ ಪ್ರದ್ಯುಮ್ನೋ ರಸಃ ಶ್ರೇಷ್ಠಃ । ಸ ಯಶ್ಚಾಯಮಶರೀರಃ ಪ್ರಾಕೃತದೇಹರಹಿತಃ । ಪ್ರಜ್ಞಾತ್ಮಾ ಜ್ಞಾನಾತ್ಮಕೋऽನಿರುದ್ಧಃ । ಯಶ್ಚಾಸಾವಾದಿತ್ಯಗತಃ ಪ್ರದ್ಯುಮ್ನಃ ಏತತ್ಸ್ಥಾನದ್ವಯಗತಂ ಭಗವದ್ರೂಪಮೇಕಮಿತಿ ಜಾನೀಯಾತ್ । ತಸ್ಮಾತ್ಪುರುಷಗತಾನಿರುದ್ಧಸ್ಯಾದಿತ್ಯಗತಪ್ರದ್ಯುಮ್ನಸ್ಯ ಚೈಕ್ಯಾದಾದಿತ್ಯಪುರುಷಂ ಪುರುಷಂ ಪ್ರತಿ ಪುರುಷಮಭಿಮುಖೋ ಭವತೀತಿ ।। **ಸೂರ್ಯ ಇತಿ** ।। ಸೂರಿಭಿಃ ಪ್ರಾಪ್ಯತ್ವಾತ್ ಸೂರ್ಯೋ ಹರಿಃ ಜಗತಃ ಜಙ್ಗಮಸ್ಯ ತಸ್ಥುಷಃ ಸ್ಥಾವರಸ್ಯಾತ್ಮಾನ್ತರ್ನಿಯಾಮಕ ಇತ್ಯರ್ಥಃ । ಅತ ಏವ ವಿಶಿಷ್ಯಾದಿತ್ಯೇऽನುಕ್ತತ್ವಲಿಙ್ಗೇನಾದಿತ್ಯಶಬ್ದಸ್ಯಾದಿತ್ಯಾನನ್ತರ್ಗತ ಪರತ್ವಾವಗಮೇನ ತದನ್ತರ್ಗತಾನ್ತರ್ಯಾಮಿಪರತ್ವಕಥನಮಯುಕ್ತಮಿತಿ ಭಾವಃ । ಛನ್ದೋಮಯಃ ವೇದಪ್ರಚುರಃ ।। **ಅಲ್ಪೌಕಸ್ತ್ವೇತಿ** ।। ಅಲ್ಪಮ್ ಓಕಃ ಸ್ಥಾನಂ ಯಸ್ಯ ತಸ್ಯ ಭಾವಃ ಅಲ್ಪೌಕಸ್ತ್ವಮ್ । ತಚ್ಚ ಸರ್ವಗತಸ್ಯಾನ್ತರ್ಯಾಮಿಣೋ ಬ್ರಹ್ಮಾಣ್ಡಸ್ಯ ಸರ್ಷಪಸ್ಯತ್ವಮಿವಾಯುಕ್ತಮಿತ್ಯರ್ಥಃ ।। **ಚಕ್ಷುರ್ಮಯತ್ವಾಚ್ಚ ಯೋಗಾಚ್ಚೇತಿ** ।। ನಿತ್ಯಜ್ಞಾನವದನ್ತರ್ಯಾಮಿಣೋ ಜ್ಞಾನಕರಣಚಕ್ಷುರಾದಿಪ್ರಾಚುರ್ಯಾಯೋಗಾಚ್ಚೇತ್ಯರ್ಥಃ ।।

।। ॐ ಸರ್ವತ್ರ ಪ್ರಸಿದ್ಧೋಪದೇಶಾತ್ ॐ ।।

ಸರ್ವತ್ರ ಪೃಥಿವ್ಯಾದಿಷ್ವುಚ್ಯಮಾನಂ ಬ್ರಹ್ಮೈವ । ಶ್ರುತ್ಯಾದೌ ಬ್ರಹ್ಮಣ್ಯೇವ ಪ್ರಸಿದ್ಧಬ್ರಹ್ಮಶಬ್ದಸ್ಯ ಏತಮೇವ ಬ್ರಹ್ಮೇತ್ಯಾಚಕ್ಷತ ಇತ್ಯಾದಿನಾ ತತ್ರೋಪದೇಶಾದಿತ್ಯರ್ಥಃ । ನಾರಾಯಣಪದೋಪಾದಾನಸೂಚಿತಾಂ ಶ್ರುತಿಮಾಹ – **ತಥಾಚೇತಿ** ।। ಯತ್ ಕಿಞ್ಚಿದಲ್ಪಂ ಯಚ್ಚ ಸರ್ವಂ ಮಹಜ್ಜಗತ್ಪ್ರತ್ಯಕ್ಷೇಣ ದೃಶ್ಯತೇ ಶಬ್ದೇನ ಜ್ಞಾಯತೇऽಪಿಚ ನಾರಾಯಣಸ್ತತ್ಸರ್ವಮನ್ತರ್ಬಹಿಶ್ಚಾಭಿವ್ಯಾಪ್ಯ ಸ್ಥಿತ ಇತ್ಯರ್ಥಃ । ಸ್ವತ ಇತ್ಯನೇನ ಶ್ರೀತತ್ವಾದೌ ವ್ಯಭಿಚಾರಪರಿಹಾರಃ ।।

ಬ್ರಹ್ಮಮೀಮಾಂಸಾಶಾಸ್ತ್ರ

ನಾರಾಯಣನೇ ಸರ್ವಗತನು

।। ॐ ವಿವಕ್ಷಿತಗುಣೋಪಪತ್ತೇಶ್ಚ ॐ ।।

ಮುಂದೆ ಹೇಳಲ್ಪಡುವ ವಿವಕ್ಷಿತವಾದ ಅಶ್ರುತತ್ವಾದಿ ಗುಣಗಳೆಲ್ಲವು ವಿಷ್ಣುವಿನಲ್ಲಿಯೇ ಉಪಪನ್ನವಾಗುವುದರಿಂದಲೂ ವಿಷ್ಣುವೇ ಸರ್ವಗತನಾಗಿದ್ದಾನೆ.

* * *

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ – ॐ विवक्षितगुणोपपत्तेश्च ॐ ।। चः समुच्चयेऽवधारणे वा । सर्वगते । श्रुत्येतिशेषः । तथाच विवक्षितानामितःपरं सर्वगते श्रुत्या तन्निष्ठतया वक्तुं योग्यानां वक्ष्यमाणानां वा अश्रुतत्वादिगुणानां विष्णोरेव योग्यत्वेन तस्मिन्नेवोपपत्तेः अन्यत्रानुपपत्तेश्च विष्णुरेव सर्वगत इत्यर्थः ।

'च' ಶಬ್ದವು ಸಮುಚ್ಚಯಾರ್ಥದಲ್ಲಿದೆ ಅಥವಾ ಅವಧಾರಣಾರ್ಥದಲ್ಲಿದೆ. ''ಸರ್ವಗತೇ'' ''ಶ್ರುತ್ಯಾ'' ಎಂಬ ಪದಗಳನ್ನು ಶೇಷಪೂರಣ ಮಾಡಿಕೊಳ್ಳಬೇಕು. ಆದ್ದರಿಂದ ವಿವಕ್ಷಿತಾನಾಮ್ = ಸರ್ವಗತನಲ್ಲಿ ಶ್ರುತಿಯಿಂದ ಅವನಲ್ಲಿರಲು ಯೋಗ್ಯವಾದ ಗುಣಾನಾಂ = ಅಶ್ರುತತ್ವಾದಿ ಗುಣಗಳು, ಉಪಪತ್ತೇಃ = ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. ಬೇರೆಯವರಲ್ಲಿ ಉಪಪನ್ನವಾಗುವುದಿಲ್ಲ. ಆದ್ದರಿಂದ ವಿಷ್ಣುವೇ ಸರ್ವಗತನಾಗಿದ್ದಾನೆ.

सूत्रभाष्यम्

।। ॐ विवक्षितगुणोपपत्तेश्च ॐ ।।

'स योऽतोऽश्रुतः' (ऐ. आ. ३-२-४) इत्यादि ।

ಅನುವಾದ - ಐತರೇಯ ಶ್ರುತಿಯಲ್ಲಿ 'ಸ ಯೋಽತೋಽಶ್ರುತಃ' ಮುಂತಾದ ಅನೇಕ ಗುಣಗಳು ನಾರಾಯಣನಲ್ಲಿ ಹೇಳಲಾಗಿದೆ. ಆದ್ದರಿಂದಲೂ ಸರ್ವಗತನಾಗಿ ಪ್ರಸ್ತುತನಾದವನು ನಾರಾಯಣನೇ ಆಗಿದ್ದಾನೆ.

ಪ್ರತಿಪದಾರ್ಥ - ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಸರ್ವಗತನಾಗಿದ್ದಾನೆಂದು ಪ್ರತಿಪಾದಿಸುವ ಸೂತ್ರವನ್ನು ಉಪನ್ಯಾಸ ಮಾಡಿ ಸೂತ್ರದಲ್ಲಿ ಉದಾಹರಿಸಿದ ಸೂತ್ರವನ್ನು ಉಲ್ಲೇಖಿಸುತ್ತಿದ್ದಾರೆ. ಸಃ = ಆ ಬ್ರಹ್ಮನು, ಯೋಽತಃ = ಪ್ರಾಪ್ಯನು, ಅಶ್ರುತಃ = ಸಂಪೂರ್ಣವಾಗಿ ತಿಳಿಯಲು ಅಶಕ್ತನು, ಇತ್ಯಾದಿ = ಇವೇ ಮೊದಲಾದ ಪ್ರಮಾಣಗಳು ಇರುವುದರಿಂದ.(೧)

---

(೧) भाष्यदीपिका – युक्त्यन्तरेण विष्णोरेवात्रोक्तसर्वगतत्वं प्रतिपादयत्सूत्रमुपन्यस्य तदुपात्त-श्रुतिमेवोदाहरति – **विवक्षितेति** ।। आदिपदेन 'अगतोऽमतोऽनतोऽदृष्टोऽविज्ञातोऽनादिष्टः । श्रोता मन्ता द्रष्टाऽऽदेष्टा घोष्टा विज्ञाता प्रज्ञाता सर्वेषां भूतानामन्तरपुरुषः सम आत्मेति विधात्' (ऐ.आ.३-२-४.) इति वाक्यशेषो गृह्यते । इत्यादीति लुप्ततृतीयाविभक्तिकं पदम् । अस्यविवक्षितेति सूत्रपदेनान्वयः । अत एव सूत्रभाष्ययोरेकीभाव इति तत्त्वप्रदीपोक्तिः । अनेन सूत्रे श्रुत्येति शेषः सूचितः । चः

ಭಾಷ್ಯಮ್ -- ಸ ಹಿ 'ನ ವಿಷ್ಣೋ ಜಾಯಮಾನ' (ರು.ಸಂ. ೭-೧೯-೨) ಇತ್ಯಾದಿನಾऽಶ್ರುತತ್ವಾದಿ-ಗುಣಕಃ।

ಅನುವಾದ - ಋಗ್ವೇದ ಸಂಹಿತೆಯಲ್ಲಿಯೂ 'ನ ತೇ ವಿಷ್ಣೋಃ ಜಾಯಮಾನಃ' = 'ಎಲೈ ವಿಷ್ಣುವೇ ನಿನ್ನ ಮಹಿಮೆಯ ಕೊನೆಯನ್ನು ಯಾರೂ ಸಹ ಕೇಳಿ ತಿಳಿದಿಲ್ಲ' ಎಂದು ಹೇಳಲಾಗಿದೆ.

ಪ್ರತಿಪದಾರ್ಥ - 'ಹೇ ವಿಷ್ಣೋ = ಎಲೈ ಪರಮಾತ್ಮನೇ, ತೇ = ನಿನ್ನ, ಮಹಿಮ್ನಃ = ಮಹಿಮೆಯನ್ನು, ಜಾತಃ = ಇದುವರೆಗೂ ಹುಟ್ಟರುವ, ಜಾಯಮಾನಃ = ಮುಂದೆ ಹುಟ್ಟಲಿರುವ, ದೇವಃ = ದೇವತಾಸಮೂಹವು, ನ = ತಿಳಿಯಲಾರದು. ಸ ಹಿ = ಅಂತಹ ಮಾಹಾಮಹಿಮನು ನೀನೇ ಆಗಿದ್ದಿ. ಇತ್ಯಾದಿನಾ = ಇವೇ ಮೊದಲಾದ

ಪೂರ್ವೋಕ್ತಹೇತುಸಮುಚ್ಚಯेऽವಧಾರणे च । यतो वक्तुं योग्ये विवक्षा भवति । अतो विवक्षिताः वक्तुं योग्याः वक्ष्यमाणा इति वा । ये तु श्रुतीनां ब्रह्मगुणेषु तात्पर्याभावं वदन्ति, तन्निरासाय विवक्षितपदमुपनिबबन्ध सूत्रकृदिति तत्त्वप्रदीपोक्तेः श्रुतितात्पर्यविषयभूता इति वा । सर्वत्रेत्यनुवर्तते । गते इति शेषः । तथा च सर्वत्र गते विवक्षितानां श्रुत्या सर्वत्र गतनिष्ठतया वक्तुं योग्यानां इतःपरं श्रुत्या सर्वगतनिष्ठतया वक्ष्यमाणानां श्रुतितात्पर्यविषयी भूतानां वा गुणानामुपसंहारगताश्रुतत्वादीनां विष्णोरेव योग्यत्वेन तस्मिन्नेवोपपत्तेरन्यत्रानुपपत्तेश्च सर्वत्रोच्यमानो नारायण एव इति सूत्रार्थ उक्तो भवति ।। यः प्रकृतो विष्णुः सः 'अतः' देशकालगुणैर्व्याप्तः । 'अत सातत्यगमने' इति धातुव्याख्यानात् 'सन्ततो ह्यत उच्यते' इति वचनाच्च । यद्वा -- अतोऽतिः । तृतीयेऽतिशये । अधिक इत्यर्थः । 'अश्रुतः' सर्वात्मना श्रोतुमशक्यः । स्वयमेव स्वात्मानं स्वातन्त्र्येण शृणोति । 'नर्ते त्वत्' (ऋ. १०-११२-९.) इति श्रुतेः । 'अगतः' अप्राप्तः पूर्णत्वात् सर्वात्मनाऽज्ञात इति वा । सर्वात्मना मननविषयो न भवतीत्यमतः । अनतो नेतृरहितः स्वतन्त्र इति यावत् । 'अदृष्टः' प्रत्यक्षेण केनचित्, सर्वात्मना पूर्णत्वात् । अत एव सर्वात्मना 'अविज्ञातः' विशेषतो न ज्ञातः । 'अनादिष्टः' नियोजकशून्योऽन्यैरनाज्ञप्त इति वा ।।

यथाऽन्यैः स्वयमश्रुतादिर्न तथाऽन्ये, सर्वात्मना श्रुत्याद्या इत्याह -- **श्रोतेति** ।। 'श्रोता' युगपत्स्वातन्त्र्येण श्रवणकर्ता । 'मन्ता' स्वातन्त्र्येण सर्वमननकर्ता । स्वातन्त्र्येण सर्वद्रष्टा । 'आदेष्टा' नियोजन कर्ता । 'आघोष्टा' सम्यग्वक्ता । 'विज्ञाता' विशेषेण ज्ञाता । प्रकर्षेण ज्ञाता । 'सर्वेषां भूतानां' जीवानाम् 'अन्तरः' अन्तःस्थः 'पुरुषः' पूर्णः 'समः' समानः, सर्वरूपेण 'आत्मा' आदानादिकर्तेति विधादित्यैतरेयभाष्यतत्त्वप्रदीप-विश्वेश्वरतीर्थीयदिशा श्रुत्यर्थः

ಋಜ್‌ಮಂತ್ರಗಳಿಂದ, ಅಶ್ರುತತ್ವಾದಿಗುಣಕಃ = ಅಶ್ರುತತ್ವವೇ ಮೊದಲಾದ ಗುಣಗಳುಳ್ಳವನು.(೧)

ಭಾಷ್ಯಮ್ – 'स सविता स वायुः स इन्द्रः सोऽश्रुतः सोऽदृष्टो यो परमो यो विष्णुर्योऽनन्त' इत्यादि चतुर्वेदशिखायां ॥ ೨

ಅನುವಾದ - ಚತುರ್ವೇದ ಶಿಖೆಯಲ್ಲೂ ಸಹ ಅತ್ಯಂತ ಸ್ಪಷ್ಟವಾಗಿ - 'स सविता स वायुः' ಎಂಬುದಾಗಿ ಯಾರು ಜಗತ್ತಿಗೆ ಕಾರಣನಾಗಿದ್ದಾನೋ ಅವನೇ ಶ್ರೀಹರಿ, ವಾಯುದೇವನೂ ಸಹ ಪರಮಾತ್ಮನೇ, ಇಂದ್ರನೂ ಸಹ ವಿಷ್ಣುವೇ. ಅಶ್ರುತನು ಅದೃಷ್ಟನೂ ಆದವನು ಅನಂತನಾದ ಆ ಪರಮಾತ್ಮನೇ ಆಗಿದ್ದಾನೆಂದು ಹೇಳಲಾಗಿದೆ.

ಪ್ರತಿಪದಾರ್ಥ - ಮತ್ತು ಸಃ = ಆ ವಿಷ್ಣುವೇ ಸವಿತಾ = ಜಗತ್ತಿಗೆ ಕಾರಣನು, ವಾಯುಃ = ವಾಯುದೇವತೆಯು, ಸಃ ಇಂದ್ರಃ = ಅವನೇ ಐಶ್ವರ್ಯಪೂರ್ಣನು, ಸಃ ಅಶ್ರುತಃ = ಅವನೇ ಸಾಕಲ್ಯೇನ ತಿಳಿಯನಾರನು, ಸಃ ಅದೃಷ್ಟಃ = ಸಂಪೂರ್ಣವಾಗಿ ಕಾಣಲು ಸಹ ಸಾಧ್ಯವಿಲ್ಲದವನು, ಯಃ = ಯಾವ, ಹರಿಃ = ಸಕಲಪಾಪ ಪರಿಹಾರಕನಾದ, ಯಃ = ಯಾವ, ಪರಮಃ = ಪರಮಶಬ್ದವಾಚ್ಯನಾದ, ಯಃ = ಯಾವ, ವಿಷ್ಣುಃ = ವಿಷ್ಣು ಶಬ್ದವಾಚ್ಯನಾದ, ಯಃ = ಯಾವ, ಅನಂತಃ = ದೇಶ, ಕಾಲ, ಗುಣಗಳಿಂದ ಕೊನೆಯಿಲ್ಲದವನು, ಇತ್ಯಾದಿ = ಇವೇ ಮೊದಲಾದ ಗುಣಗಳಿಂದ. ಚತುರ್ವೇದಶಿಖಾಯಾಂ = ಚತುರ್ವೇದಶಿಖಾವೆಂಬ ವೇದಭಾಗದಲ್ಲಿ ಪ್ರತಿಪಾದ್ಯನಾಗಿರುವುದರಿಂದ ವಿಷ್ಣುವೇ ಸರ್ವಗತನಾಗಿದ್ದಾನೆ.(೨)

---

(೧) **ಭಾಷ್ಯದೀಪಿಕಾ** – नन्वेतच्छ्रुत्युक्तानाम् अश्रुतत्वादिगुणानां कुतो विष्णुनिष्ठत्वमित्यत आह – स इति ।। हिशब्दः प्रसिद्धौ । 'सः' विष्णुः 'न ते' इत्यादिना वाक्येनाश्रुतत्वादिगुणः तद्वत्तया प्रसिद्ध इत्यर्थः । श्रुतौ 'श्रोत्रादिना' इति पदाध्याहारेणेति भावः । यद्यपि श्रुतावतत्वस्य प्रथमोक्तत्वादतत्वादिगुण इति वक्तव्यम् । तथाऽपि तस्य सर्वगतत्वरूपत्वेन विष्णुनिष्ठतया साध्यत्वाद् असिद्धत्वात् स विष्णुरतत्वादिगुणकः प्रसिद्ध इति सिद्धनिर्देशायोगाद् अश्रुतत्वादीत्युक्तम् । यद्वा – विष्णुरतत्वादिगुणकः 'न ते विष्णो' (ऋ. ७-९९-२.) इत्यादिश्रुतेरिति प्रयोगे सर्वगतत्वरूपस्यातत्वस्य साध्यत्वात्तस्य च 'न ते विष्णो' इत्यादावनुक्तेर्हेत्वनन्वयादश्रुतत्वादीत्युक्तम्

(೨) **ಭಾಷ್ಯದೀಪಿಕಾ** – 'न ते' इत्यादिश्रुतौ मुखतोऽश्रुतत्वादिकं विष्णोर्न प्रतीयते इत्यतोऽत्रैवार्थे स्पष्टश्रुतिं चाऽह – स इति । यः 'सविता' जगदुत्पादकः स हरिरेव । यो 'वायुः' बलज्ञानरूपो देवः स परमः परमात्मैव । यः 'इन्द्रः' परमैश्वर्यवान् स विष्णुरेव, न प्रसिद्धादिः । योऽश्रुतोऽदृष्टः सोऽनन्तोऽपरिमितो हरिरेव नान्य इत्यर्थः ।। यद्वा – यो हर्यादिशब्दवाच्यः प्रसिद्धः, स एव सवितृत्वादिगुणवाचिशब्दवाच्य इत्यर्थः । इत्यादीति ।।

श्रीपद्मनाभतीर्थविरचितसत्तर्कदीपावलिः

ॐ विवक्षितगुणोपपत्तेश्च ॐ ।। १-२-२ ।।

हेत्वन्तरेणैतमर्थं साधयत्सूत्रमुपन्यस्य व्याचष्टे – विवक्षितेत्यादिना ।। 'एतमस्यामेतं दिवि' इत्यादिना यः प्रस्तुतः तस्य उपरि अश्रुतत्वादिगुणा वक्ष्यन्ते । 'स योऽतोऽश्रुतोऽगतोऽमतोऽनतोऽदृष्टोऽविज्ञातोऽनादिष्टः श्रोता मन्ता द्रष्टा देष्टा विज्ञाता प्रज्ञाता' इति । तत्र साकल्येन श्रोतुमशक्यत्वादयो युगपत् सर्वमन्तृत्वादयो गुणाः नहि विष्णुमन्तरेणान्यस्य सम्भाव्यन्ते । 'न ते विष्णो जायमानो न जातो देव महिम्नः परमं तमाप ।' 'स सर्वविद्' इत्यादिश्रुतेः 'श्रोता मन्ता' इत्यादिना श्रवणमननादिषु जीवश्रोत्रादिव्यवस्थाभावश्च विष्णोः प्रतिपाद्यते । 'सर्वतः पश्यति सर्वतः शृणोति विश्वतश्चक्षुः' इत्यादिश्रुतेः ।।

ಮತ್ತೊಂದು ಹೇತುವಿನಿಂದ ಹಿಂದೆ ಹೇಳಿದ ವಿಷಯವನ್ನು ಸಮರ್ಥಿಸುವುದಕ್ಕಾಗಿ ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ವಿವಕ್ಷಿತ ಇತ್ಯಾದಿಯಾಗಿ. ''ಏತಮಸ್ಯಾಮೇತಂ ದಿವಿ'' ಎಂಬ ವಾಕ್ಯದಿಂದ ಯಾರು ಪ್ರಸ್ತುತನಾಗಿದ್ದಾನೋ ಅವನಲ್ಲಿ ಅಶ್ರುತತ್ವಾದಿ ಗುಣಗಳನ್ನು ಹೇಳುತ್ತಾರೆ. 'ಸ ಯೋಽತೋಽಶ್ರುತೋಽಗತೋಽಮತೋಽನತೋಽದೃಷ್ಟೋಽವಿಜ್ಞಾತೋಽನಾದಿಷ್ಟಃ ಶ್ರೋತಾ ಮಂತಾ ದ್ರಷ್ಟಾ ದೇಷ್ಟಾ ವಿಜ್ಞಾತಾ ಪ್ರಜ್ಞಾತಾ' ಎಂದು.

ಈ ಶ್ರುತಿಯಲ್ಲಿ ಸಾಕಲ್ಯೇನ ಕೇಳಲು ಅಶಕ್ಯವಾದ ಯಾವ ಅಶ್ರುತತ್ವಾದಿ ಗುಣಗಳಿವೆಯೋ ಅವುಗಳು ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ ಸರ್ವಥಾ ಬರಲಾರವು ''ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂ ತಮಾಪ'' ''ಸಃ ಸರ್ವವಿತ್'' ಇತ್ಯಾದಿ ಶ್ರುತಿಗಳಲ್ಲಿ ಶ್ರವಣ ಮನನಾದಿಗಳಿಗೆ ವಿಷಯನಾದವನೆಂದು ಪ್ರತಿಪಾದ್ಯನಾದವನು ವಿಷ್ಣುವೇ ಆಗುತ್ತಾನೆ. ''ಸರ್ವತಃ ಪಶ್ಯತಿ ಸರ್ವತಃ ಶೃಣೋತಿ ವಿಶ್ವತಶ್ಚಕ್ಷುಃ'' ಇತ್ಯಾದಿ ಶ್ರುತಿಗಳು ಪ್ರಮಾಣವಾಗಿರುವುದರಿಂದ.

यतः चतुर्वेदशिखायामित्याद्युक्तमतोऽपि स एवाश्रुतत्वादिगुण इत्यन्वयः ।।

ತತ್ವಪ್ರಕಾಶಿಕಾ –

ॐ विवक्षितगुणोपपत्तेश्च ॐ ।। १-२-२ ।।

युक्त्यन्तरेण विष्णोरेवात्रोक्तसर्वगतत्वं प्रतिपादयत्सूत्रमुपन्यस्य तदुपात्तश्रुतिमेवोदाहरति – विवक्षितेति ।। 'स योऽतोऽश्रुतोऽगतोऽमतोऽनतोऽदृष्टोऽविज्ञातोऽनादिष्टः श्रोता मन्ता द्रष्टा देष्टा घोष्टा विज्ञाता प्रज्ञाता सर्वेषां भूतानामन्तरपुरुषः' इति सर्वगते अश्रुतत्वादिगुणश्रवणात् । तेषां च विष्णोरेव योग्यत्वेन तस्मिन्नेवोपपत्तेः अन्यत्रानुपपत्तेश्च विष्णुरेवायं सर्वगत इति भावः ।

॥ ೨೦ ವಿವಕ್ಷಿತ ಗುಣೋಪಪತ್ತೇಶ್ಚ ೨೦॥

ಸುಧೆಯಲ್ಲಿ ಹೇಳಿರುವ ಸರ್ವಗತನು ವಿಷ್ಣುವೇ ಆಗಿದ್ದಾನೆಂದು ಮತ್ತೊಂದು ಯುಕ್ತಿಯಿಂದ ಪ್ರತಿಪಾದನೆ ಮಾಡುತ್ತಿದ್ದಾರೆ. ಆದಕೋಸ್ಕರ ಸೂತ್ರವನ್ನು ಉಲ್ಲೇಖಿಸಿ ಸೂತ್ರದಿಂದ ತಿಳಿಯುವ ಶ್ರುತಿಯನ್ನು 'ವಿವಕ್ಷಿತ' ಇತ್ಯಾದಿ ವಾಕ್ಯದಿಂದ ಉದಾಹರಿಸುತ್ತಿದ್ದಾರೆ. "स योऽतोऽश्रुतोऽगतोऽमतोऽनतोऽदृष्टोऽविज्ञातोऽनादिष्टः श्रोता मंता द्रष्टा देष्टा घोष्टा विज्ञाता प्रज्ञाता सर्वेषाम भूतानाम अंतरपुरुषः" "ಯಾವ ಪರಮಾತ್ಮನು ಸರ್ವವ್ಯಾಪಕನಾಗಿದ್ದಾನೋ ಮತ್ತು ಶ್ರವಣ ಮನನ ನಿದಿಧ್ಯಾಸನಗಳಿಂದ ಸಂಪೂರ್ಣ ತಿಳಿಯಲಾರನೋ, ಸ್ವತಂತ್ರನೋ, ಪ್ರತ್ಯಕ್ಷದಿಂದ ತಿಳಿಯಲಾರನೋ, ವಿಶೇಷಜ್ಞಾನದಿಂದಷ್ಟೇ ತಿಳಿಯುತ್ತಾನೋ, ಮತ್ತೊಬ್ಬರ ಅಧೀನನಾಗದವನೋ, ಸ್ವತಃ ಶ್ರವಣ ಮನನಾದಿಗಳನ್ನು ಮಾಡಲು ಸಮರ್ಥನೋ, ಎಲ್ಲರನ್ನು ಆಜ್ಞೆ ಮಾಡುವವನೋ, ವಿಶೇಷವಾಗಿ ತಿಳಿಯುವವನೋ, ಮತ್ತು ಎಲ್ಲಾ ಭೂತಗಳಲ್ಲಿ ಅಂತರ್ಯಾಮಿಯಾಗಿ ಇರುವವನೋ, ಅವನೇ ಪುರುಷನೆನಿಸಿದ್ದಾನೆ".

ಈ ಶ್ರುತಿಯಲ್ಲಿ ಅಶ್ರುತತ್ವಾದಿಗುಣಗಳು ಸರ್ವಗತನಲ್ಲಿ ಕೇಳಿಸುತ್ತಿವೆ. ಈ ಎಲ್ಲಗುಣಗಳು ವಿಷ್ಣುವಿನಲ್ಲಷ್ಟೇ ಇರಲು ಸಾಧ್ಯ. ಆದ್ದರಿಂದ ವಿಷ್ಣುವೇ ಸರ್ವಗತನಾಗುತ್ತಾನೆ. ಮತ್ತು ಯಾರಲ್ಲೂ ಈ ಗುಣಗಳು ಕೂಡುವುದಿಲ್ಲ.

भावदीपः – ॐ विवक्षितगुणोपपत्तेश्च ॐ ।। १-२-२ ।। युक्त्यन्तरेणेति ।। सौत्रचशब्दः पूर्वसमुच्चय इति भावः । एवमग्रेऽपि ।। अत्रोक्तेति ।। सर्वशरीरस्थत्वरूपेत्यर्थः । भाष्यस्य सूत्रेणान्वयांत्वायोजयति – स योऽत इत्यादिना ।। अतः व्याप्तः –

'ದೇಶತಃ ಕಾಲತಶ್ಚೈವ ಗುಣತಶ್ಚಾಪಿ ಪೂರ್ತಿತಃ ।
ಅತ ಇತ್ಯುಚ್ಯತೇ ವಿಷ್ಣುಃ ಸನ್ತತೋ ಹ್ಯತ ಉಚ್ಯತೇ '।।

ಇತಿ ತದ್ಭಾಷ್ಯೋಕ್ತೇಃ । 'ಅತ ಸಾತತ್ಯಗಮನೇ' 'ಪಚಾದ್ಯಚ್' । ಅಶ್ನುತಃ ಸಾಕಲ್ಯೇನ । ಅಗತೋऽಪ್ರಾಪ್ತಃ ಅಮತೋ ಮನನಾವಿಷಯಃ ಅನತಃ ಸ್ವತನ್ತ್ರಃ । ಅನಾದಿಷ್ಟಃ ಸಾಕಲ್ಯೇನಾನುಪದಿಷ್ಟಃ ಆದೇಷ್ಟಾ ವಕ್ತಾಘೋಷಾ ನಿಯೋಕ್ತಾ ಅನ್ತರಪುರುಷಃ ಅನ್ತಃಸ್ಥಪುರುಷಃ । ಶಿಷ್ಟಂ ಸ್ಪಷ್ಟಮ್ । ಉಪಪತ್ತೇರಿತ್ಯುಕ್ತಿಲಬ್ಧಮಾಹ – **ಅನ್ಯತ್ರೇತಿ** ।। ಅಯೋಗ್ಯತ್ವೇನೇತಿ ಭಾವಃ । ಅತ ಏವ ಶ್ರುತಾವನ್ಯೇಷಾಂ ಸಾಕಲ್ಯೇನ ಶ್ರುತತ್ವಾದಿಕಮೇವ ವಿಧತ ಇತಿ ವಕ್ತುಂ ಶ್ರೋತಾ ಮನ್ತೇತ್ಯಾದ್ಯುಕ್ತಿಃ । ಸರ್ವತ್ರೇತಿ ತತ್ತ್ವಿತಿ ಚಾನುವೃತ್ತ್ಯಾऽರ್ಥಮಾಹ – **ವಿಷ್ಣುರೇವೇತಿ** ।।

ಸೂತ್ರದಲ್ಲಿರುವ 'ಚ' ಶಬ್ದವು ಹಿಂದೆ ಹೇಳಿದ್ದನ್ನು ಸಮುಚ್ಚಯ ಮಾಡುತ್ತದೆ. ಇದೇ ರೀತಿಯಾಗಿ ಮುಂದೆಯೂ ತಿಳಿಯಬೇಕು. 'ಅತ್ರೋಕ್ತ' ಎಂಬ ಪದಕ್ಕೆ ಸರ್ವಶರೀರದಲ್ಲಿ ಇದ್ದಾನೆಂದು ಹೇಳಲ್ಪಟ್ಟ ಎಂದರ್ಥ. ಭಾಷ್ಯದಲ್ಲಿರುವ ಪದಗಳಿಗೆ ಸೂತ್ರದ ಜೊತೆಗೆ ಅನ್ವಯವನ್ನು ತಿಳಿದು 'ಸ ಯೋऽತಃ' ಎಂಬುದರಿಂದ ಯೋಜನೆ ಮಾಡುತ್ತಿದ್ದಾರೆ. 'ಅತಃ' ಎಂಬ ಪದಕ್ಕೆ ವ್ಯಾಪ್ತನಾಗಿದ್ದಾನೆಂದರ್ಥ.

ದೇಶತಃ ಕಾಲತಶ್ಚೈವ ಗುಣತಶ್ಚಾಪಿ ಪೂರ್ತಿತಃ।
ಅತಃ ಇತ್ಯುಚ್ಯತೇ ವಿಷ್ಣುಃ ಸಂತತೋ ಹ್ಯತ ಉಚ್ಯತೇ॥

ದೇಶದಿಂದ ಕಾಲದಿಂದ ಹಾಗೂ ಗುಣದಿಂದ ಪೂರ್ಣನಾಗಿದ್ದರಿಂದ 'ಅತಃ' ಎನಿಸಿದ್ದಾನೆ.

'ಅತ ಸಾತತ್ಯಗಮನೇ' ಎಂಬ ಧಾತುವಿನಿಂದ ನಿಷ್ಪನ್ನವಾದ ಶಬ್ದಕ್ಕೆ 'ಪಚಾದ್ಯಚ್' ಎಂಬ ಸೂತ್ರದಿಂದ 'ಅಚ್' ಪ್ರತ್ಯಯ ಮಾಡಿದಾಗ 'ಅತಃ' ಎಂಬ ಶಬ್ದವು ನಿಷ್ಪನ್ನವಾಗಿದೆ. 'ಅಶ್ನುತಃ' ಎಂಬ ಪದಕ್ಕೆ ಸಂಪೂರ್ಣವಾಗಿ ಕೇಳಿ ತಿಳಿಯಲು ಸಾಧ್ಯವಿಲ್ಲವೆಂದು, 'ಅಗತಃ' ಎಂದರೆ ಪ್ರಾಪ್ತನಾಗಲಾರನೆಂದು, 'ಅಮತಃ' ಎಂದರೆ ಮನನಕ್ಕೆ ವಿಷಯನಲ್ಲವೆಂದು, 'ಅನತಃ' ಎಂದರೆ ಸ್ವತಂತ್ರನೆಂದು, 'ಅನಾದಿಷ್ಟಃ' ಎಂದರೆ ಸಂಪೂರ್ಣವಾಗಿ ಉಪದೇಶಿಸಲು ಸಾಧ್ಯವಿಲ್ಲದವನು ಎಂದರ್ಥ. ಉಳಿದ ಪದಗಳ ಅರ್ಥವು ಸ್ಪರಸವಾಗಿದೆ.

'ಉಪಪತ್ತೇಃ' ಎಂಬ ಪದದಿಂದ ತಿಳಿಯುವ ಅರ್ಥವನ್ನು 'ಅನ್ಯತ್ರ' ಎಂಬುದರಿಂದ ಹೇಳುತ್ತಿದ್ದಾರೆ. 'ಅನ್ಯತ್ರ' ಎಂಬ ಪದಕ್ಕೆ ಅಯೋಗ್ಯವೆಂದರ್ಥ. ಆದ್ದರಿಂದಲೇ ಶ್ರುತಿಯಲ್ಲಿ ಬೇರೆಯವರಿಗೆ ಸಾಕಲ್ಯೇನ ಶ್ರುತತ್ವಾದಿಗಳನ್ನು ಹೇಳಬಹುದೆಂದು 'ಶ್ರೋತಾ ಮಂತಾ' ಎಂದು ಹೇಳಿದ್ದಾರೆ. 'ಸರ್ವತ್ರ' ಹಾಗೂ 'ತತ್ತು' ಎಂಬ ಪದಗಳನ್ನು ಅನುವೃತ್ತಿ ಮಾಡಿಕೊಂಡು 'ವಿಷ್ಣುರೇವ' ಎಂಬುದಾಗಿ ಸೂತ್ರಾರ್ಥವನ್ನು ಹೇಳುತ್ತಿದ್ದಾರೆ.

ತತ್ತ್ವಪ್ರಕಾಶಿಕಾ – ವಿವಕ್ಷಿತಾ ಇತಿ ವಕ್ತುಂ ಯೋಗ್ಯಾಃ । ನನ್ವೇತದ್ಗುಣಾನಾಂ ಕುತೋ ವಿಷ್ಣುನಿಷ್ಠತ್ವಮಿತ್ಯತ ಆಹ – ಸ ಹೀತಿ ।। ತೇ ಮಹಿಮ್ನಃ ಪರಮನ್ತಂ ಕೋऽಪಿ ಶ್ರೋತ್ರಾದಿನಾ ನಾಪ ಇತ್ಯರ್ಥಃ । ಅತ್ರ ಮುಖ್ಯತೋऽಶ್ರುತತ್ವಾದಿಕಂ ವಿಷ್ಣೋರ್ನ ಶ್ನೂಯತ ಇತ್ಯತಃ ಸ್ಪಷ್ಟಶ್ರುತಿಂ ಚಾऽನಹ

– स इति ।। अत्रातत्त्वस्यादिमत्त्वेऽपि तस्य सर्वगतत्वानतिरिक्तत्वेन साध्यत्वादश्रुतत्वादीनामेव ग्रहणम् ।। २ ।।

ಸೂತ್ರದಲ್ಲಿರುವ 'ವಿವಕ್ಷಿತ' ಶಬ್ದಕ್ಕೆ 'ಹೇಳಲಿಕ್ಕೆ ಯೋಗ್ಯವಾದದ್ದು' ಎಂದರ್ಥ. ಈ ಗುಣಗಳು ಕೇವಲ ವಿಷ್ಣುವಿನಲ್ಲಿರಲು ಏನು ಆಧಾರ? ಎಂಬ ಪ್ರಶ್ನೆಗೆ 'स हि' ಇತ್ಯಾದಿವಾಕ್ಯದಿಂದ ಉತ್ತರಿಸುತ್ತಿದ್ದಾರೆ. ನಿನ್ನ ಮಹಿಮೆಯ ಕೊನೆಯನ್ನು ಯಾರೂ सह ಶ್ರೋತ್ರಾದಿ ಇಂದ್ರಿಯಗಳಿಂದ ತಿಳಿಯಲಾರರೆಂದು ಶ್ರುತ್ಯರ್ಥ. ಈ ಶ್ರುತಿವಾಕ್ಯದಲ್ಲಿ ಅಶ್ರುತತ್ವ ಮೊದಲಾದ ಧರ್ಮಗಳು ಸ್ಪಷ್ಟವಾಗಿ ವಿಷ್ಣುವಿನಲ್ಲಿ ಕೇಳಿಸುತ್ತಿಲ್ಲ. ಆದಕೋಸ್ಕರ ಸ್ಪಷ್ಟ ಶ್ರುತಿಯನ್ನು 'स सविता' ಇತ್ಯಾದಿ ವಾಕ್ಯಗಳಿಂದ ತೋರಿಸಿದ್ದಾರೆ. ವಸ್ತುತಃ ಈ ಶ್ರುತಿಯಲ್ಲಿ ಸರ್ವವ್ಯಾಪ್ಯತ್ವ ಎಂಬ ಗುಣವನ್ನು ಮೊದಲು ಹೇಳಿದ್ದಾರೆ. ಆದರೂ सह ಸರ್ವಗತತ್ವದಿಂದ ಅದು ಭಿನ್ನವಲ್ಲವಾದ್ದರಿಂದ ಸರ್ವಗತತ್ವವು ವಿಷ್ಣುವಿನಲ್ಲಿ ಸಿದ್ಧವಾಗುತ್ತದೆ. ಸರ್ವಗತತ್ವಕ್ಕಿಂತ ಅಭಿನ್ನವಾದ್ದರಿಂದಲೇ ಭಾಷ್ಯಕಾರರು ''ಅದೃಶ್ಯತ್ವಾದಿಗುಣಕಂ'' ಎಂದಿದ್ದಾರೆ.

भावदीपः – योग्यत्वेनेति प्रागुक्तं तत्कस्यार्थ इत्यत आह – विवक्षिता इति ।। वक्तुं योग्ये हि विवक्षा भवतीति भावः । तत्त्वप्रदीपे तु विवक्षितास्तात्पर्यविषया इत्यर्थ उक्तः । जन्मादिसूत्रे यथाश्रुतस्यैवार्थोक्तावपीहोपयोगितयाऽध्याहृत्यार्थमाह – श्रोत्रादिनेति ।। स्पष्टश्रुतिं चेति ।। अश्रुतत्वादिकं विष्णोर्न सर्वात्मना किन्त्वपरिच्छिन्नत्वात् कात्स्न्येनैवेति दर्शयितुं श्रुतावनन्त इत्युक्तिः । भाष्ये इत्यादीत्यादिना अतत्त्वादिगुण इति वाच्येऽश्रुतत्वादिगुण इत्युक्तिस्तथा 'सोऽश्रुत' इत्यादि श्रुत्युक्तिश्च कुत इत्यत आह – अत्रेति ।। 'स योऽत' इति श्रुताविति्यर्थः ।। साध्यत्वादिति ।। साध्यकोटिनिविष्टत्वात् सन्दिग्धत्वादिति यावत् ।। ग्रहणमिति ।। भाष्य इत्यर्थः ।। २ ।। ।।

'ಯೋಗ್ಯತ್ವೇನ' ಎಂದು ಹಿಂದೆ ಹೇಳಿದ್ದಕ್ಕೆ ಏನು ಅರ್ಥ ? ಎಂಬ ಪ್ರಶ್ನೆಗೆ 'ವಿವಕ್ಷಿತಾಃ' ಎಂದು ಉತ್ತರಿಸುತ್ತಿದ್ದಾರೆ.

ಹೇಳಲು ಇಷ್ಟವಾದರಷ್ಟೇ ವಿವಕ್ಷೆ ಬರುತ್ತದೆ. ತತ್ವಪ್ರದೀಪದಲ್ಲಿ ವಿವಕ್ಷಿತ ಶಬ್ದಕ್ಕೆ ತಾತ್ಪರ್ಯವಿಷಯಭೂತವಾದದ್ದು ಎಂದು ಹೇಳಿದ್ದಾರೆ. ಜನ್ಮಾದಿ ಸೂತ್ರದಲ್ಲಿ ಯಥಾಶ್ರುತವಾದದ್ದರ ಅರ್ಥವನ್ನು ಹೇಳಿದ್ದರೂ सह ಪ್ರಕೃತಕ್ಕೆ ಉಪಯೋಗವಾಗುವಂತೆ ಅಧ್ಯಾಹಾರ ಮಾಡಿಕೊಂಡು 'ಶ್ರೋತ್ರಾದಿನಾ' ಎಂಬ ವಾಕ್ಯದಿಂದ ಅರ್ಥವನ್ನು ಹೇಳುತ್ತಿದ್ದಾರೆ. 'ಸ್ಪಷ್ಟಶ್ರುತಿಂ ಚ' ಎಂದರೆ ಅಶ್ರುತತ್ವಾದಿಗಳು ವಿಷ್ಣುವಿನಲ್ಲಿ ಸರ್ವಾತ್ಮನಾ ವಿವಕ್ಷಿಸಬಾರದು ಹೊರತಾಗಿ ಅಪರಿಚ್ಛಿನ್ನನಾದದ್ದರಿಂದ ಸಂಪೂರ್ಣನಾಗಿ

ತಿಳಿಯಲಾರನೆಂದಷ್ಟೇ ಹೇಳಬೇಕು. ಅದಕೊಸ್ಕರ ಶ್ರುತಿಯಲ್ಲಿ 'ಅನಂತ' ಎಂದು ಹೇಳಲಾಗಿದೆ. ಭಾಷ್ಯದಲ್ಲಿ "ಇತ್ಯಾದಿ" ಎಂಬುದರಿಂದ "ಅತತ್ವಾದಿಗುಣಃ" ಎಂದು ಹೇಳುವ ಬದಲು "ಅಶ್ರುತತ್ವಾದಿಗುಣಃ" ಎಂದೇಕೆ ಹೇಳಿದರು ? ಮತ್ತು 'ಸೋ೭ಶ್ರುತಃ' ಎಂಬ ಶ್ರುತಿಯನ್ನೇಕೆ ಹೇಳಿದರು ? ಎಂಬ ಪ್ರಶ್ನೆಗೆ 'ಅತ್ರ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಅಂದರೆ 'ಸ ಯೋ೭ತಃ' ಎಂಬ ಶ್ರುತಿಯಲ್ಲಿ ಎಂದರ್ಥ. 'ಸಾಧ್ಯತ್ವಾತ್' ಎಂದರೆ ಸಾಧ್ಯಕೋಟಿಯಲ್ಲಿ ನಿವಿಷ್ಟವಾಗಿದ್ದರಿಂದ ಸಂದಿಗ್ಧವಾಗಿದೆಯೆಂದರ್ಥ. 'ಗ್ರಹಣಂ' ಎಂದರೆ ಭಾಷ್ಯದಲ್ಲಿ ಸ್ವೀಕರಿಸಿದ್ದಾರೆಂದರ್ಥ.

ವಾಕ್ಯಾರ್ಥಮಞ್ಜರಿ

।। ॐ विवक्षितगुणोपपत्तेश्च ॐ ।।

विवक्षितानां वक्तुं योग्यानां वक्ष्यमाणानामुपसंहारे श्रुतानां गुणानामश्रुतत्वादि-धर्माणामुपपन्नत्वाच्च सर्वगतं ब्रह्मैव नादित्यादिः तेषां तत्रानुपपत्तेरित्यर्थः ।। **स योऽत इति ।।** यो भगवानतो व्याप्तः अन्यैः साकल्येनाश्रुतः अगतः अप्राप्तः । अमतः अविचारितः, अनतः स्वतन्त्रः, अदृष्टः प्रत्यक्षेण, अविज्ञातः विशेषज्ञानाविषयः, अनादिष्टः उपदेष्टुमशक्यः । स्वयं च साकल्येन श्रोता मन्ता विचारयिता द्रष्टा देष्टोपदेष्टा घोष्टा शब्दकर्ता । विशेषेण ज्ञाताप्रकर्षेण ज्ञाता स

नारायणः सर्वेषां भूतानामन्तरपुरुषः अन्तर्यामी पूर्णश्चेत्यर्थः । ज्ञानावान्तरवि शेषसद्भावान्नात्र पुनरुक्तिः शङ्क्या ।। **विवक्षिता इति ।।** अस्येति शेषः ।। **वक्तुं योग्या इति ।।** इत्यर्थ इति शेषः । मुखतः कण्ठतः श्रोत्रादिनेति पूरणीयत्वादिति भावः । अश्रुतत्वादिकं साकल्येनैव न सर्वात्मनेति सूचयितुं भाष्येऽनन्त इत्युक्तम् ।। **सर्वगतत्वाननतिरिक्तत्वेनेति ।।** 'अत सातत्यगमन' इति धातोः सततोह्यत उच्यत इति वचनाच्चातत्वं सर्वगतत्वाननतिरिक्तमित्यर्थः । अन्यथा साध्याविशेषप्रसङ्ग इति भावः ।।

ಬ್ರಹ್ಮಮೀಮಾಂಸಾಶಾಸ್ತ್ರ

ಜೀವ ಅಥವಾ ಸೂರ್ಯರು ಸರ್ವಗತರಲ್ಲ

ಸೂ - ॥ ॐ अननुपपत्तेस्तु न शारीरः ॐ ॥१-२- ३ ॥

ಸರ್ವಗತತ್ವವು ಇಲ್ಲದ ಕಾರಣ ಜೀವನಾಗಲಿ ಆದಿತ್ಯನಾಗಲಿ ಸರ್ವಗತರಾಗುವುದಿಲ್ಲ.

***

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ –'तु' ಶಬ್ದ ಏವಾರ್ಥೌ । शारीरो जीवः । आदित्यो वा । न सर्वगतः । कुतः अनुपपत्तेः एकस्य जीवस्य सर्वशरीरस्थत्वायोगादेवेत्यर्थः ।

'ತು' ಶಬ್ದವು ಅವಧಾರಣಾರ್ಥದಲ್ಲಿದೆ. शारीरः = ಜೀವನು, ಅಥವಾ ಆದಿತ್ಯನು, न सर्वगतः = ಸರ್ವಗತನಲ್ಲ. ಏಕೆಂದರೆ ಅನುಪಪತ್ತೇಃ = ಒಬ್ಬನೇ ಜೀವನು ಎಲ್ಲಾ ಶರೀರಗಳಲ್ಲಿರಲು ಸಾಧ್ಯವಿಲ್ಲದ್ದರಿಂದಲೇ.

ಸೂತ್ರಭಾಷ್ಯಮ್

ಭಾಷ್ಯಮ್ - न चाऽदित्यशब्दाचक्षुर्मयत्वादेश्च जीव इति वाच्यम् ॥

॥ ॐ अननुपपत्तेस्तु न शारीरः ॐ ॥ ३ ॥

एकस्य सर्वशरीरस्थत्वानुपपत्तेरेव ॥ ३ ॥

ಅನುವಾದ - ಮಂತ್ರದ ಪ್ರಾರಂಭದಲ್ಲಿ ಆದಿತ್ಯ ಶಬ್ದವಿರುವುದರಿಂದ ಸೂರ್ಯನು ಸರ್ವಗತನಾಗಬಹುದಲ್ಲವೇ. ಅಥವಾ ಈ ಮಂತ್ರದ ಮಧ್ಯಭಾಗದಲ್ಲಿ ಚಕ್ಷುರ್ಮಯವೆಂಬ ಜೀವವಾಚಕ ಶಬ್ದವಿರುವುದರಿಂದ ಜೀವನೂ ಸಹ ಸರ್ವಗತನಾಗಬಹುದಲ್ಲವೇ ? ಎಂದು ಪ್ರಶ್ನಿಸಬಾರದು. ಏಕೆಂದರೆ ಒಬ್ಬನೇ ಜೀವನು ಸಕಲ ಪ್ರಾಣಿಗಳಲ್ಲಿ ಹೇಗೆ ನೆಲೆಸುತ್ತಾನೆ ?

ಪ್ರತಿಪದಾರ್ಥ - ಯಾವ ರೀತಿಯಾಗಿ ಬ್ರಹ್ಮಶಬ್ದದ ಆಧಾರದಿಂದ ಮತ್ತು ಅಶ್ರುತತ್ವಾದಿ ಲಿಂಗಗಳಿಂದ ವಿಷ್ಣು ಸರ್ವಗತನಾಗಿದ್ದಾನೆಂದು ಹೇಳಿತ್ತಿದ್ದೀರೋ ಸರ್ವಗತತ್ವಾಧಿಕರಣ (೧-೨-೧)

ಆದರಂತೆ ಆದಿತ್ಯಾದಿ ಶಬ್ದಗಳ ಆಧಾರದಿಂದ ಜೀವನ ಲಿಂಗವಿರುವುದರಿಂದಲೂ, ಆದಿತ್ಯನು ಅಥವಾ ಜೀವನು ಸರ್ವಗತನೆಂದು ಏಕಾಗಬಾರದು ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಆದಿತ್ಯಶಬ್ದಾತ್ = ಏತರೇಯೋಪನಿಷತ್ತಿನಲ್ಲಿ ಸರ್ವಗತನಾದವನನ್ನು ಆದಿತ್ಯಪದದಿಂದ ಹೇಳಿರುವುದರಿಂದ, ಚ = ಮತ್ತು, ಚಕ್ಷುರ್ಮಯತ್ವಾದೇಃ = ಕಣ್ಣಿನಲ್ಲಿದ್ದಾನೆಂಬ ಜೀವನ ಲಿಂಗವನ್ನು ಹೇಳಿರುವುದರಿಂದ. ಜೇವಃ = ಸೂರ್ಯನು ಅಥವಾ ಸಕಲ ಜೀವರುಗಳು ಸರ್ವಗತರೇಕಾಗಬಾರದು, ಇತಿ = ಹೀಗೆ, ನ ವಾಚ್ಯಮ್ = ಹೇಳಬಾರದು.

ಏಕೆಂದರೆ, ಏಕಸ್ಯ = ಒಬ್ಬನೇ ಜೀವನಿಗೆ, ಸರ್ವಶರೀರಸ್ಥತ್ವ = ಎಲ್ಲಾ ಜೀವರ ಶರೀರಗಳಲ್ಲಿರುವಿಕೆಯು, ಅನುಪಪತ್ತೇರೇವ = ಸಾಧ್ಯವಾಗುವುದಿಲ್ಲ. ಆದ್ದರಿಂದ ಆದಿತ್ಯನಾಗಲಿ ಉಳಿದ ಜೀವರುಗಳಾಗಲಿ ಸರ್ವಗತರಾಗಲು ಸಾಧ್ಯವಿಲ್ಲ.(೧)

श्रीपद्मनाभतीर्थविरचितसत्तर्कदीपावलिः

ॐ अनुपपत्तेस्तु न शारीरः ॐ ।। १-२-३ ।।

ननु 'एतमस्याम्' इत्यादिना प्रस्तुतस्य चक्षुर्मयत्वादिजीवलिङ्गं श्रूयते । चक्षुर्मयः श्रोत्रमय इति ।। अतोऽत्र सर्वगतत्वेनोच्यमानो जीवः स्यात् । 'तस्यैतस्यासावादित्यो रसः' इत्युपक्रमाद् आदित्याख्यजीवविशेषो न विष्णुरिति चेन्मैवम् । सर्वेषु भूतेष्वेतमेवेति सर्वशरीराधिष्ठितत्वश्रवणाज्जीवस्य तदनुपपत्तेः । तदाह – नचेति ।।

(೧) ಭಾಷ್ಯದೀಪಿಕಾ – ननु यथा ब्रह्मशब्दादश्रुतत्वादिलिङ्गैश्च विष्णुः सर्वगत इत्युच्यते । तथाऽऽदित्यादिशब्दात् सर्वजीवलिङ्गाच्चाऽदित्यः सर्वजीवा वा सर्वगताः किं न स्युरित्यत आह – न चेति ।। 'आदित्यो रसः' इत्यादित्यशब्दात् सर्वगतत्वप्रकरणे 'चक्षुर्मयः श्रोत्रमयः छन्दोमयो मनोमयो वाङ्मय आत्मा' (ऐ.आ.३-२-१) इति श्रुतौ ज्ञानकरण-चक्षुराद्यात्मकदेहाभिमानित्वेन जीवे प्रसिद्धाच्चक्षुर्मयत्वादेश्चेत्यर्थः । हेतुसमुच्चये चशब्दः । 'जीवः' इत्यनेन सूत्रगतं शारीरपदं व्याख्यातम् ।

'शारीरौ तावुभौ प्रोक्तौ जीवश्च परमस्तथा' इति स्मृतेः । शरीराभिमानित्वाच्च जीवस्य शारीरत्वं युक्तम् । जीव इत्येकवचनं समुदायाभिप्रायम् । जीवश्चेत्यपि चशब्दान्वयः । तेनाऽदित्यप्रतिज्ञा समुच्चीयते । सर्वत्र गतइति शेषः ।इति न वाच्यमिति सम्बन्धः।।

'ಏತಮಸ್ಯಾಂ' ಇತ್ಯಾದಿಯಾಗಿ ಪ್ರಸ್ತುತನಾದವನಲ್ಲಿ ಜೀವಲಿಂಗಗಳಾದ ಚಕ್ಷುರ್ಮಯತ್ವಾದಿಗಳು ಕೇಳಿಸುತ್ತಿವೆ 'ಚಕ್ಷುರ್ಮಯಃ ಶ್ರೋತ್ರಮಯಃ' ಇತ್ಯಾದಿಯಾಗಿ. ಆದ್ದರಿಂದ ಸರ್ವಗತನೆಂದು ಪ್ರತಿಪಾದ್ಯನಾದವನು ಜೀವನೇ ಆಗುತ್ತಾನೆ. 'ತಸ್ಯೈತಸ್ಯಾಸಾವಾದಿತ್ಯೋ ರಸಃ' ಎಂದು ಉಪಕ್ರಮದಲ್ಲಿ ಆದಿತ್ಯನು ಪ್ರಸಕ್ತನಾಗಿದ್ದಾನೆ. ಆದ್ದರಿಂದ ಆದಿತ್ಯನೆಂಬ ಜೀವವಿಶೇಷನೇ ಸರ್ವಗತನಾಗುತ್ತಾನೆ ಹೊರತು ವಿಷ್ಣುವಲ್ಲ.

ಈ ಆಕ್ಷೇಪವು ತಪ್ಪು. ಏಕೆಂದರೆ 'ಸರ್ವೇಷು ಭೂತೇಷು' ಎಂಬುದಾಗಿ ಸಕಲ ಶರೀರಗಳಿಗೆ ಆಶ್ರಯನಾಗಿದ್ದಾನೆಂಬ ಧರ್ಮವನ್ನು ಹೇಳಿರುವುದರಿಂದ ಜೀವನಲ್ಲಿ ಇದು ಅನುಪಪನ್ನವಾಗುತ್ತದೆ. ಈ ಎಲ್ಲ ವಿಷಯಗಳನ್ನು ಭಾಷ್ಯಕಾರರು 'ನಚ' ಇತ್ಯಾದಿ ವಾಕ್ಯದಿಂದ ನಿರೂಪಣೆ ಮಾಡಿದ್ದಾರೆ.

ತತ್ವಪ್ರಕಾಶಿಕಾ –

ॐ ಅನುಪಪತ್ತೇಸ್ತು ನ ಶಾರೀರಃ ॐ ।। ೧-೨-೩ ।।

ನನು ಯಥಾ ಬ್ರಹ್ಮಶಬ್ದಾದಶ್ರುತತ್ವಾದಿಲಿಙ್ಗೈಶ್ಚ ವಿಷ್ಣುಃ ಸರ್ವಗತ ಇತ್ಯುಚ್ಯತೇ, ತಥಾ ಆದಿತ್ಯಶಬ್ದಾತ್ ಸರ್ವಜೀವಲಿಙ್ಗಾಚ್ಚ ಆದಿತ್ಯಃ ಸರ್ವಜೀವಾ ವಾ ಕಿನ್ನ ಸ್ಯುರಿತ್ಯತ ಆಹ – ನಚೇತಿ ।। ಜೀವಃ ಸರ್ವಗತ ಇತಿ ಶೇಷಃ । ತತ್ರ ಹೇತ್ವಾಕಾಙ್ಕಾಯಾಂ ಸೂತ್ರಮುಪನ್ಯಸ್ಯ ಪ್ರತಿಜ್ಞಾಂಶಸ್ಯ ಸಮ್ಬನ್ಧಭಾಷ್ಯೇಣೈವ ವ್ಯಾಖ್ಯಾತತ್ವಾದ್ಧೇತ್ವಂಶಮೇವ ವ್ಯಾಚಷ್ಟೇ – ಅನುಪಪತ್ತೇರಿತಿ ।।

ಸೂತ್ರ - ।। ಓಂ ಅನುಪಪತ್ತೇಸ್ತು ನ ಶಾರೀರಃ ಓಂ ।।

ವಿಷ್ಣು ಸರ್ವಗತನಾಗಿದ್ದಾನೆನ್ನಲು ಬ್ರಹ್ಮಶಬ್ದ ಹಾಗೂ ಅಶ್ರುತತ್ವಾದಿಲಿಂಗಗಳನ್ನು ಪ್ರಮಾಣವನ್ನಾಗಿ ಹೇಳಿದಿರಿ. ಇದರಂತೆ ಆದಿತ್ಯಶಬ್ದವಿರುವುದರಿಂದ ಮತ್ತು ಸರ್ವಜೀವಸಾಧಾರಣವಾದ ಚಕ್ಷುರ್ಮಯತ್ವಾದಿ ಲಿಂಗಗಳಿರುವುದರಿಂದ ಆದಿತ್ಯ ಅಥವಾ ಜೀವರೇಕೆ ಸರ್ವಗತರಾಗಬಾರದು ? ಈ ಶಂಕೆಯನ್ನು ಪರಿಹರಿಸಲು ''ನಚ'' ಇತ್ಯಾದಿ ಭಾಷ್ಯವು ಹೊರಟಿದೆ. 'ಜೀವಃ' ಎಂಬ ಪದದ ಮುಂದೆ 'ಸರ್ವಗತಃ' ಎಂಬ ಪದವನ್ನು ಸೇರಿಸಿಕೊಳ್ಳಬೇಕು. ಆದಿತ್ಯ ಅಥವಾ ಜೀವನನ್ನು ಸರ್ವಗತನೆನ್ನಲು ಹೇತು ಯಾವುದು ? ಎಂಬ ಶಂಕೆಯನ್ನು ಪರಿಹರಿಸಲು ಸೂತ್ರವನ್ನು ಉಪನ್ಯಾಸ ಮಾಡುತ್ತಿದ್ದಾರೆ. ''ಅನುಪಪತ್ತೇಸ್ತು ನ ಶಾರೀರಃ'' ಎಂದು ಪ್ರತಿಜ್ಞೆಯ ಅಂಶವನ್ನು ಅವತಾರಿಕೆಯನ್ನು ನೀಡುವ ಭಾಷ್ಯದಿಂದಲೇ ವ್ಯಾಖ್ಯಾನಿಸಿದ್ದಾಗಿದೆ. ಆದ್ದರಿಂದ ಪ್ರಕೃತ 'ಅನುಪಪತ್ತೇಃ' ಇತ್ಯಾದಿ ಗ್ರಂಥದಿಂದ ಹೇತ್ವಂಶವನ್ನೇ ವ್ಯಾಖ್ಯಾನ ಮಾಡುತ್ತಿದ್ದಾರೆ.

तत्वप्रकाशिका – भवेदन्यस्य सर्वगतत्वं यद्यन्यस्मिन्नुपपद्येत । नच उपपद्यते । तथाहि, किं मिलितसर्वजीवानां सर्वगतत्वम्, उत प्रत्येकमुच्यते । नाद्यः तत्कथनवैय्यर्थ्यात् । स्वस्वदेहस्थितमात्रस्य सिद्धत्वात् । न द्वितीयः, सर्वशरीरगतसुखदुःखादिप्राप्त्यैकस्य सर्वशरीरस्थत्वानुपपत्तेः । अतोऽन्यप्रापक-सद्भावेऽपि तस्य सर्वगतत्वानुपपत्तेरेव न जीवोऽयं सर्वगत इत्याशयः । तु शब्द एवार्थः । नच वाच्यं स्वकर्मनिर्मितमेवास्य भोगायतनमिति न भोगाव्यवस्था व्रीह्यादिगतजीवान्तरवदिति । अनादितः सर्वेषां सर्वशरीरस्थत्वे कर्मभेदस्यापि साधयितुमशक्यत्वात् । नचाऽऽदित्यस्यास्तु सर्वशरीरस्थत्वं भवदभ्युपगमादिति वाच्यम् । तस्यापि ब्रह्मादिसर्वशरीरस्थत्वानुपपत्तेः ।। ३ ।।

ಆದಿತ್ಯ ಅಥವಾ ಜೀವರಲ್ಲಿ ಸರ್ವಗತತ್ವವು ಕೂಡುವುದೇ ಇಲ್ಲ. ಏಕೆಂದರೆ ಸಕಲ ಜೀವರಲ್ಲಿ ಅನುಗತವಾಗಿ ಸರ್ವಗತತ್ವವನ್ನು ಹೇಳುತ್ತೀರೋ ? ಅಥವಾ ಪ್ರತಿಯೊಬ್ಬ ಜೀವರಲ್ಲಿ ಪ್ರತ್ಯೇಕವಾಗಿ ಸರ್ವಗತತ್ವವನ್ನು ಹೇಳುತ್ತೀರೋ ? ಮೊದಲನೆಯ ಪಕ್ಷದಲ್ಲಿ ಹಾಗೆ ಹೇಳುವುದು ವ್ಯರ್ಥ. ಏಕೆಂದರೆ ತಮ್ಮ ತಮ್ಮ ದೇಹಗಳಲ್ಲಿ ಜೀವನು ಇದ್ದಾನೆಂಬುದು ಪ್ರಸಿದ್ಧವೇ ಆಗಿದೆ.

ಎರಡನೆಯ ಪಕ್ಷವನ್ನು ಒಪ್ಪಿದರೆ ಎಲ್ಲ ಶರೀರಗಳಲ್ಲಿ ಒಬ್ಬನೇ ಜೀವನಿದ್ದಾನೆಂದು ಹೇಳುವುದು ತಪ್ಪಾಗುತ್ತದೆ. ಹಾಗಾದಲ್ಲಿ ಪ್ರತಿಯೊಂದು ಶರೀರಗಳಲ್ಲಿ ಸುಖ ದುಃಖಗಳ ಅನುಭವವು ಒಬ್ಬನಿಗೆ ಉಂಟಾಗಬೇಕಾದೀತು. ಆದ್ದರಿಂದ ಪರಮಾತ್ಮನಿಂದ ಭಿನ್ನವಾದ ಜೀವಾದಿಗಳನ್ನು ಸಾಧಿಸುವ ಚಕ್ಷುರ್ಮಯತ್ವಾದಿ ಧರ್ಮಗಳಿದ್ದರೂ ಸರ್ವಗತತ್ವವನ್ನು ಸಾಧಿಸಲಾಗದು. ಆದ್ದರಿಂದ ಜೀವನು ಸರ್ವಗತನಲ್ಲವೆಂದು ಅಭಿಪ್ರಾಯ. ಸೂತ್ರದಲ್ಲಿರುವ 'ತು' ಶಬ್ದವು ''ಏವ'' ಎಂಬರ್ಥದಲ್ಲಿದೆ.

ಪ್ರಶ್ನೆ - ಒಬ್ಬನೇ ಜೀವನು ಎಲ್ಲ ಶರೀರದಲ್ಲಿದ್ದಾನೆಂದು ಹೇಳಬಹುದು. ಆದರೂ ಪ್ರತಿಯೊಬ್ಬರ ಸುಖ ದುಃಖಗಳ ಅನುಭವವು ಇವನಿಗೆ ಬರಬೇಕಾಗಿಲ್ಲ. ಆಯಾ ಜೀವರ ಕರ್ಮದಿಂದ ಲಭಿಸಿದ ಶರೀರದಲ್ಲಷ್ಟೇ ಸುಖದುಃಖಾದಿಗಳ ಅನುಭವವು ಉಂಟಾಗುತ್ತದೆ. ಹಾಗಾಗಿ ಇತರ ಶರೀರದಿಂದಲೂ ಭೋಗವು ದೊರೆಯಲೆಂಬ ಅವ್ಯವಸ್ಥೆಗೆ ಅವಕಾಶವಿಲ್ಲ. ಭತ್ತ ಮೊದಲಾದ ಧಾನ್ಯಗಳಲ್ಲಿ ಪಿತೃಶರೀರವನ್ನು ಪ್ರವೇಶಿಸುವ ಜೀವನಿದ್ದರೂ ಆಯಾ ಧಾನ್ಯಗಳ ಸುಖದುಃಖ ಭೋಗವನ್ನು ಹೇಗೆ ಅನುಭವಿಸುವುದಿಲ್ಲವೋ ಅದರಂತೆ.

ಉತ್ತರ - ಇದು ತಪ್ಪು. ಅನಾದಿಕಾಲದಿಂದ ಜೀವನು ಎಲ್ಲ ಶರೀರಗಳಲ್ಲಿ ಇರುವುವವನಾದರೆ ಕರ್ಮಭೇದವನ್ನೂ ಸಹ ಸಾಧಿಸಲು ಆಗುವುದಿಲ್ಲ.

ಪ್ರಶ್ನೆ - ಸಾಮಾನ್ಯಜೀವರು ಸಕಲ ಶರೀರಗಳಲ್ಲಿರಲು ಸಾಧ್ಯವಿಲ್ಲವೆಂದು ಒಪ್ಪೋಣ; ಆದರೆ ಆದಿತ್ಯ ಮೊದಲಾದ ವಿಶೇಷಜೀವರು ಸಕಲ ಜೀವರಲ್ಲಿ ಇರಬಹುದಲ್ಲವೇ? ಸಿದ್ಧಾಂತಿಗಳೇ ಕಣ್ಣು ಮೊದಲಾದ ಇಂದ್ರಿಯಗಳಲ್ಲಿ ಆದಿತ್ಯ ಮೊದಲಾದ ಜೀವರನ್ನು ಒಪ್ಪಿದ್ದಾರೆ.

ಉತ್ತರ - ಉಳಿದ ಜೀವರಲ್ಲಿ ಆದಿತ್ಯಾದಿ ದೇವತೆಗಳಿದ್ದರೂ ಸಹ ತಮಗಿಂತ ಉತ್ತಮರಾದ ಬ್ರಹ್ಮಾದಿ ದೇವತೆಗಳಲ್ಲಿ ಪ್ರೇರಕರಾಗಿ ಇರಲಾರರು.

ॐ अनुपपत्तेस्तु न शारीरः ॐ ।। १-२-३ ।।

ಭಾವದೀಪಃ – अत्रैव न चेत्यादिशङ्कोत्पत्तौ बीजं वदन् आदित्य इति शेषोक्तिपूर्वं भाष्यमवतारयति – **ननु यथेति** ।। जीव इति भाष्यस्यैकवचनं शारीर इति सूत्रानुरोधात् समुदायाभिप्रायम् एवेत्यत्र हेत्वभावाद् वक्ष्यमाणदोषायोगाच्चेति भावेनोक्तम् – **सर्वजीवा वेति** ।। **सम्बन्धेति** ।। आदित्यो जीवो वा सर्वगतो नचेत्यवतारिकारूपभाष्येणेत्यर्थः । आदित्यशब्दाच्छारीर आदित्यस्सर्वगत इति न । जीवलिङ्गाच्छारीरो जीवः सर्वगतो नेति प्रापकभेदाच्छारीरपदमप्यावृत्त्या योज्यमिति सूत्रे शारीरावित्यनुक्त्वा शारीर इत्येकवचनोक्तिरिति भावः । एवकारतात्पर्यं व्यनक्ति – **भवेदित्यादिना** ।। सम्भावितः प्रतिज्ञाया अर्थः साध्येत हेतुना । न तस्य हेतुभिस्त्राणमुत्पतन्नेव यो मृतः ।। इति न्यायेन तस्य तत्र जीवादौ योग्यत्वे सति भवेत्प्रापकबलेनान्यस्य सर्वगतत्वम् । नच तदन्यस्य योग्यमित्यर्थः।। **अनुपपत्तेरेवेति** ।। असम्भावितत्वादेवेत्यर्थः । किं तत्र युक्त्यन्तरान्वेषणेनेत्येवकारार्थः ।

ಪ್ರಕೃತ 'ನಚ' ಇತ್ಯಾದಿಯಾಗಿ ಸಂಶಯ ಹುಟ್ಟಲು ಕಾರಣವನ್ನು ನಿರೂಪಿಸುತ್ತಾ 'ಆದಿತ್ಯೇ' ಎಂಬುದನ್ನು ಶೇಷ ಪೂರಣ ಮಾಡಿಕೊಳ್ಳಬೇಕೆಂದು ಭಾಷ್ಯಕ್ಕೆ ಅವತಾರಿಕೆಯನ್ನು ನೀಡುತ್ತಿದ್ದಾರೆ. ಭಾಷ್ಯದಲ್ಲಿ 'ಜೀವಃ' ಎಂದು ಏಕವಚನವನ್ನೇಕೆ ಪ್ರಯೋಗಿಸಿದ್ದಾರೆಂದರೆ ಸೂತ್ರದಲ್ಲಿರುವ 'ಶಾರೀರಃ' ಎಂದು ಪ್ರಯೋಗಕ್ಕೆ ಅನುಸಾರಿಯಾಗಿ ಸಮುದಾಯಾರ್ಥವನ್ನು ವಿವಕ್ಷಿಸಿ ಏಕವಚನವನ್ನು ವಿವಕ್ಷಿಸಿದ್ದಾರೆ. ಹೇತುವಿಲ್ಲದ ಕಾರಣ ಹಾಗೂ ಮುಂದೆ ಹೇಳುವ ದೋಷಗಳು ಆಯುಕ್ತವಾದ ಕಾರಣ 'ಏವ' ಎಂಬುದಾಗಿ ಹೇಳಿದ್ದಾರೆ. 'ಸಂಬಂಧ' ಎಂದಿದೆ. ಆದಿತ್ಯನಾಗಲಿ, ಜೀವನಾಗಲಿ ಸರ್ವಗತನಾಗಲಾರ ಎಂಬುದಾಗಿ ಅವತಾರಿಕೆ ನೀಡುವ ಭಾಷ್ಯದಿಂದ ಎಂದರ್ಥ. ಆದಿತ್ಯಶಬ್ದವಿರುವುದರಿಂದ ಶಾರೀರನಾದ ಆದಿತ್ಯನು ಸರ್ವಗತನಲ್ಲ. ಜೀವ ಲಿಂಗವಿರುವುದರಿಂದ ಶಾರೀರನಾದ ಜೀವನು ಸರ್ವಗತನಲ್ಲ. ಹೀಗೆ ಬೇರೆ ಬೇರೆ ಕಾರಣಗಳು

ಇರುವುದರಿಂದ ಶಾರೀರ ಪದವನ್ನು ಆವೃತ್ತಿ ಮಾಡಿಕೊಂಡು ಯೋಜನೆ ಮಾಡಿಕೊಳ್ಳಬೇಕು. ಆದ್ದರಿಂದ ಸೂತ್ರದಲ್ಲಿ 'ಶಾರೀರೌ' ಎಂದು ಹೇಳದೆ 'ಶಾರೀರಃ' ಎಂದು ಏಕವಚನವನ್ನು ಪ್ರಯೋಗಿಸಿದ್ದಾರೆಂದು ತಿಳಿಯಬೇಕು. 'ಏವ' ಕಾರದ ಅರ್ಥವನ್ನು 'ಭವೇತ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. 'ಸಂಭಾವಿತಃ ಪ್ರತಿಜ್ಞಾಯಾ ಅರ್ಥಃ ಸಾಧ್ಯೇತ ಹೇತುನಾ । ನ ತಸ್ಯ ಹೇತುಭಿಸ್ತ್ರಾಣಮುತ್ತತ್ತ್ವೇವ ಯೋ ಮೃತಃ' ಎಂಬ ನ್ಯಾಯದಂತೆ ಜೀವಾದಿಗಳಲ್ಲಿ ಸರ್ವಗತತ್ವವು ಬರಲು ಕಾರಣಗಳು ಇದ್ದರೆ ಅದನ್ನು ಹೇಳಬಹುದಿತ್ತು. ಆದರೆ ಬೇರೆಯವರಲ್ಲಿ ಅಂತಹ ಕಾರಣಗಳೇ ಇರುವುದಿಲ್ಲ ಏಕೆಂದರೆ 'ಅನುಪಪತ್ತೇಃ' ಅಸಂಭಾವಿತವಾದ್ದರಿಂದಲೇ ಎಂದರ್ಥ. ಹೀಗಿರುವಾಗ ಮತ್ತೊಂದು ಯುಕ್ತಿಯಿಂದ ಏಕೆ ಅನ್ವೇಷಣೆ ಮಾಡಬೇಕೆಂದು ಏವಕಾರದ ಅರ್ಥ.

ಭಾವದೀಪಃ – ಭಾಷ್ಯಸ್ಥೈವಕಾರವ್ಯಾಖ್ಯೇಯಮಾಹ – ತುಶಬ್ದ ಇತಿ ।। ಸೌತ್ರ ಇತ್ಯರ್ಥಃ ।। ವ್ರೀಹ್ಯಾದೀತಿ ।। ಸ್ವರ್ಗಾಚ್ಯುತಃ ಸ್ಥೂಲಶರೀರಸಮ್ಬನ್ಧಾರ್ಥೆ ಪಿತ್ರಾದಿದೇಹಪ್ರವೇಶಾಯಾನ್ಯಕರ್ಮನಿರ್ಮಿತ-ವ್ರೀಹ್ಯಾದಿಗತೋ ಯೋ ಜೀವಸ್ತಾದೃಶಜೀವಾನ್ತರವದಿತ್ಯರ್ಥಃ । ವಕ್ಷ್ಯತಿ ಚೈತದ್ 'ಅನ್ಯಾಧಿಷ್ಠಿತೇ ಪೂರ್ವವದಭಿಲಾಪಾದ್' ಇತ್ಯತ್ರ

ಭಾಷ್ಯದಲ್ಲಿರುವ ಏವ ಕಾರಕ್ಕೆ ವ್ಯಾಖ್ಯೇಯವನ್ನು 'ತು' ಶಬ್ದದಿಂದ ತೋರಿಸುತ್ತಿದ್ದಾರೆ. ಸೂತ್ರಕ್ಕೆ ಸಂಬಂಧಿಸಿದ ಎಂದರ್ಥ. 'ವ್ರೀಹ್ಯಾದಿ' ಪದಗಳಿಗೆ ಹೀಗರ್ಥ - ಸ್ವರ್ಗದಿಂದ ಬೀಳುವ ಜೀವನು ಸ್ಥೂಲ ಶರೀರಸಂಬಂಧದ ಸಲುವಾಗಿ ಪಿತ್ರಾದಿಗಳ ದೇಹವನ್ನು ಹೊಂದಲಿಚ್ಛಿಸುತ್ತಾನೆ. ಅದಕೋಸ್ಕರ ಅನ್ಯಕರ್ಮದಿಂದ ನಿರ್ಮಿತವಾದ ವ್ರೀಹ್ಯಾದಿ ದೇಹಗಳನ್ನು ಪ್ರವೇಶಿಸುತ್ತಾನೆ. ಅಂತಹ ಜೀವನೆಂದು ತಿಳಿಯಬೇಕು. ಇದನ್ನು 'ಅನ್ಯಾಧಿಷ್ಠಿತೇ ಪೂರ್ವವದಭಿಲಾಪಾತ್' ಎಂಬಲ್ಲಿ ಹೇಳುತ್ತಾರೆ.

ಭಾವದೀಪಃ – ಭವದಿತಿ ।। ವಯಮೇತದ್ಭಾಣಮವಷ್ಟಭ್ಯ ವಿಧಾರಯಾಮ ಇತಿ ಶ್ರುತ್ಯಾ ತತ್ತ್ವಾಭಿಮಾನಿತಯಾ ಸರ್ವದೇಹೇಷ್ವವಸ್ಥಿತೇರಙ್ಗೀಕಾರ್ಯತ್ವಾದಿತ್ಯರ್ಥಃ ।। ಬ್ರಹ್ಮಾದೀತಿ ।। ಉತ್ತಮೇಷು ನಿಯಮನಾಭಾವಾತ್ತದರ್ಥತ್ವೇನೈವೇಹ ಶರೀರಸ್ಥತ್ವಸ್ಯಾಭಿಮತತ್ವಾದಿತಿ ಭಾವಃ । ಯದ್ವಾ ಬ್ರಹ್ಮಾದೀನಾಂ ಯಾನಿ ಸರ್ವಶರೀರಾಣಿ ತತ್ಸ್ಥತ್ವಾನುಪಪತ್ತೇರೇವೇತ್ಯರ್ಥಃ । 'ಸೂರ್ಯಾಚನ್ದ್ರಮಸೌ ಧಾತಾ ಯಥಾ ಪೂರ್ವಮಕಲ್ಪಯದ್' ಇತಿ ಪ್ರತಿಕಲ್ಪಮಾದಿತ್ಯಾದೇರ್ಭೇದಾದಿತಿ ಭಾವಃ ।। ೩ ।।

ಟೀಕಾದಲ್ಲಿ 'ಭವತ್' ಎಂದಿದೆ. ಅಂದರೆ 'ವಯಮೇತದ್ಭಾಣಮವಷ್ಟಭ್ಯ ವಿಧಾರಯಾಮಃ' ಎಂಬ ಶ್ರುತಿಯಿಂದ ತತ್ವಾಭಿಮಾನಿಗಳು ಸಕಲ ದೇಹದಲ್ಲಿದ್ದಾರೆಂದು ತಿಳಿಯುತ್ತದೆ. 'ಬ್ರಹ್ಮಾದಿ' ಎಂಬ ಪದಕ್ಕೆ ಉತ್ತಮರಲ್ಲಿ ನಿಂತು ನಿಯಮನ ಮಾಡಲು ಸಾಧ್ಯವಿಲ್ಲದ ಕಾರಣ ಪ್ರಕೃತ ಶರೀರಸ್ಥತ್ವವು ಅಭಿಮತವಾಗಿದೆಯೆಂದು ತಿಳಿಯಬೇಕು. ಅಥವಾ ಬ್ರಹ್ಮಾದಿ ಚೇತನರು ಎಷ್ಟು ಶರೀರದಲ್ಲಿದ್ದಾರೋ ಆ ಶರೀರಗಳಲ್ಲಿ ಇರುವಿಕೆಯು ಅನುಪನ್ನವಾಗದಿರುವುದೆಂದರ್ಥ. ಏಕೆಂದರೆ 'ಸೂರ್ಯಚಂದ್ರಮಸೌ ಧಾತಾ ಯಥಾ ಪೂರ್ವಮಕಲ್ಪಯತ್'ಎಂಬ ಶ್ರುತಿಯಂತೆ ಪ್ರತಿಯೊಂದು ಕಲ್ಪದಲ್ಲಿ ಬೇರೆ ಬೇರೆ ಆದಿತ್ಯರಿರುತ್ತಾರೆ.

ವಾಕ್ಯಾರ್ಥಮಞ್ಜರಿ –

ಸಮ್ಬನ್ಧಭಾಷ್ಯೇಣ ಸೂತ್ರಸङ್ಗತಿಪ್ರದರ್ಶಕಪ್ರಾಚೀನಭಾಷ್ಯೇಣ

।। ॐ ಅನುಪಪತ್ತೇಸ್ತು ನ ಶಾರೀರಃ ॐ ।।

ಶಾರೀರಃ ಶರೀರಸಮ್ಬನ್ಧಿರಾದಿತ್ಯೋಜೀವೋನಸರ್ವಗತಃ ಸರ್ವಗತತ್ವಾನುಪಪತ್ತೇರೇವೇತ್ಯರ್ಥಃ। ಪ್ರತ್ಯೇಕಮೇಕೈಕಸ್ಯ ।। **ತುಶಬ್ದ ಇತಿ** ।। ತೇನಾನುಪಪತ್ತೇರಪರಿಹಾರ್ಯತ್ವಂ, ಕಿಂ ತತ್ರ ಯುಕ್ತಿಗವೇಷಣಯೇತಿ ಸೂಚಿತಮಿತಿ ಭಾವಃ । ಉಪಪತ್ತಿಮಾಶङ್ಕ್ಯ ನಿರಾಕರೋತಿ – **ನಚೇತಿ** ।। ಸ್ವರ್ಗಾದವಾಗತಸ್ಯ-ಸ್ಥೂಲಶರೀರಸಮ್ಬನ್ಧಾರ್ಥಂ ಬ್ರಹ್ಮಾದಿಶರೀರಗತಸ್ಯಾಪಿ ಜೀವಾನ್ತರಸ್ಯ ಛೇದಾದಿನಾದುಃಖಾಭಾವಾತ್ ಸ್ವಕರ್ಮನಿರ್ಮಿತಶರೀರಮೇವ ಭೋಗಸಾಧನಮङ्ಗೀಕಾರ್ಯಮ್, ನಚ ಸರ್ವಶರೀರಾಣ್ಯೇಕಕರ್ಮನಿರ್ಮಿತಾನಿ ಯೇನ ತಸ್ಯ ಸರ್ವಶರೀರಜನ್ಯದುಃಖಾದಿಪ್ರಸङ್ಗ ಇತ್ಯರ್ಥಃ । ಕರ್ಮಭೇದಸ್ಯ ಅಸ್ಯೈವೇದಂ ಕರ್ಮಣೈತಸ್ಯೇತಿ ವಿವೇಕಸ್ಯ, ದೃಷ್ಟಾನ್ತೇ ತು ಪೌರ್ವಾಪರ್ಯಸತ್ವಾನ್ನೈವಮಿತಿ ಭಾವಃ ।। **ಭವದಭ್ಯುಪಗಮಾದಿತಿ** ।। ತಸ್ಯ ತತ್ವಾಭಿಮಾನಿತ್ವಾದಿತಿ ಭಾವಃ ।। **ಬ್ರಹ್ಮಾದೀತಿ** ।। ನನು ತದ್ದೇಹಸ್ಯಾಪಿ ಚತುರ್ವಿಂಶತಿತತ್ವಾತ್ಮಕ ತ್ವೇನಾಸ್ತ್ಯೇವ ತತ್ರ ಸೂರ್ಯಪ್ರವೇಶಃ । ಅನ್ಯಥಾ ವಿರಾಡ್ದೇಹೇ ತತ್ವಾಭಿಮಾನಿನಾಂ ಪ್ರವೇಶನಿರ್ಗಮಾಭ್ಯಾಂ ವಾಯುಶ್ರೇಷ್ಠತ್ವನಿಶ್ಚಯಾನುಪಪತ್ತಿರಿತಿ ಚೇನ್ನ, ಅತ್ರ ಭೂತಾನಾಮನ್ತರಪುರುಷಃ ಸೂರ್ಯ ಆತ್ಮೇತ್ಯಾದಿನಾದಿತ್ಯಸ್ಯ ಪ್ರೇರಕತ್ವಶ್ರವಣೇನ ಬ್ರಹ್ಮಾದಿಶರೀರೇ ಪ್ರೇರಕತ್ವೇನ ತತ್ಪ್ರವೇಶಾಯೋಗಸ್ಯೋಕ್ತತ್ವಾದ್ ಬಹಿಃಸ್ಥಪುತ್ರಾಮಕಬ್ರಹ್ಮದೇಹಸ್ಯ ಮಹತ್ತತ್ವಮಾತ್ರಾತ್ಮಕತ್ವೇನ ತತ್ಪ್ರವೇಶಾಭಾವಾಚ್ಚ । ತದೇತದಾಹ – **ಸರ್ವಶರೀರೇತಿ** ।

****

ಬ್ರಹ್ಮಮೀಮಾಂಸಾಶಾಸ್ತ್ರ

ಕರ್ಮಕರ್ತೃಭಾವವಿದ್ದಲ್ಲಿ ಭೇದವಿರಲೇಬೇಕು

ಸೂ - ॐ ।। ಕರ್ಮಕರ್ತೃವ್ಯಪದೇಶಾಚ್ಚ ।। ॐ।। ೧-೨-೪ ।।

'ಆತ್ಮಾನಂ ಪರಸ್ಮೈ ಶಂಸತಿ' ಎಂಬ ಶ್ರುತಿಯಲ್ಲಿ ಸರ್ವಗತನಾದವನನ್ನು 'ಆತ್ಮಾನಂ' ಎಂಬುದಾಗಿ ಕರ್ಮನೆಂದು ಜೀವನನ್ನು 'ಶಂಸತಿ' ಎಂದು ಕರ್ತೃವನ್ನಾಗಿ ಹೇಳಿದ್ದರಿಂದಲೂ ಜೀವನು ಸರ್ವಗತನಾಗಲಾರ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ – ಸರ್ವಗತೇ ವಸ್ತುನಿ ''ಆತ್ಮಾನಮ್'' ಇತಿ (ಐ. ಆ ೩-೨-೩) ಕರ್ಮತ್ವಸ್ಯ ಜೀವೇ ಚ ಶಂಸತೀತಿ ತದ್ವಿರುದ್ಧಕರ್ತೃತ್ವಸ್ಯ ವ್ಯಪದೇಶಾತ್ ಉಕ್ತತ್ವಾಚ್ಚ ನ ಜೀವಃ ಸರ್ವಗತ ಇತ್ಯರ್ಥಃ ।

ಸರ್ವಗತನಾದ ವಸ್ತುವಿನಲ್ಲಿ 'ಆತ್ಮಾನಮ್' ಎಂದು ಕರ್ಮತ್ವವು ಕೇಳಿಸುತ್ತಿದೆ. ಜೀವನಲ್ಲಿ ''ಶಂಸತಿ'' ಎಂದು ಕರ್ಮಕ್ಕೆ ವಿರುದ್ಧವಾದ ಕರ್ತೃತ್ವವು ಕೇಳಿಸುತ್ತಿದೆ. ಆದ್ದರಿಂದ ಜೀವನು ಸರ್ವಗತನಾಗಲಾರನು.

ಸೂತ್ರಭಾಷ್ಯಮ್

ಅನುವಾದ - ಪೂರ್ವಪಕ್ಷ ಹೀಗಿದೆ - ಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವಗತನು ಆದಿತ್ಯನೇ ಆಗಿದ್ದಾನೆ. ಏಕೆಂದರೆ 'ತಸ್ಯೈತಸ್ಯಾಸಾವಾದಿತ್ಯೋ ರಸಃ' ಇತ್ಯಾದಿಯಾಗಿ ಪ್ರಕೃತನಾದ ಆದಿತ್ಯನನ್ನೇ 'ಏತಮ್' ಎಂದು ಪರಾಮರ್ಶೆ ಮಾಡಿದ್ದಾರೆ. ಲೋಕತಃಅನ್ಯತ್ರಪ್ರಸಿದ್ಧವಾದ ಆದಿತ್ಯಶಬ್ದವು ಅಂತರಧಿಕರಣದ ನ್ಯಾಯದಂತೆ ವಿಷ್ಣುವಾಚಿಯೆಂದು ಸಿದ್ಧವಾಗಿದೆ. ಹೀಗಿರುವಾಗ ಆದಿತ್ಯಶಬ್ದದ ಬಲದಿಂದ ಅನ್ಯನು ಸರ್ವಗತನೆಂದು ಇಲ್ಲಿ ಹೇಗೆ ಪೂರ್ವಪಕ್ಷ ಮಾಡುತ್ತೀರಿ? ಅಂತರಧಿಕರಣದಲ್ಲಿ ಸಮುದ್ರಾಂತಸ್ಥತ್ವ ಮೊದಲಾದ ವಿಷ್ಣುಲಿಂಗಗಳಿರುವುದರಿಂದ ದೇವತಾವಾಚಿಶಬ್ದಗಳಿಗೆ ವಿಷ್ಣುಪರತ್ವವನ್ನು ಹೇಳಲಾಗಿದೆ. ಆದರೆ ಈ ಅಧಿಕರಣದ ವಿಷಯವಾಕ್ಯದಲ್ಲಿ ಅಂತಹ ವಿಷ್ಣುಲಿಂಗಗಳೇನು ಕೇಳಿಸುತ್ತಿಲ್ಲ. 'ಗಂಗಾಯಾಂ ಘೋಷಃ' ಎಂಬಲ್ಲಿ ಗಂಗಾಶಬ್ದವು ತೀರಪರವಾದ ಮಾತ್ರದಿಂದ 'ಗಂಗಾಯಾಂ ಮತ್ಸ್ಯಃ' ಎಂಬಲ್ಲಿಯೂ ಗಂಗಾಪದವು ತೀರವನ್ನು ಹೇಳುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಅಂತರಧಿಕರಣದಲ್ಲಿ ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಸ್ವತಂತ್ರವಾಗಿದೆ. ಮತ್ತು ನಿರವಧಿಕವಾಗಿದೆ. ಆದ್ದರಿಂದ ಎಲ್ಲಾ ಶಬ್ದಗಳು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆಂದು ಹೇಳಿದ್ದಾಗಿದೆ. ಆದ್ದರಿಂದ ಈ ಅಧಿಕರಣದಲ್ಲಿ ಪೂರ್ವಪಕ್ಷ ಮಾಡಲು ಸಾಧ್ಯವಿಲ್ಲ.

ಹೀಗೆ ಹೇಳಿದ್ದರಿಂದ ಮತ್ತೊಂದು ಶಂಕೆ ನಿರಾಕೃತವಾಯಿತು - 'ಆದಿತ್ಯೋ ರಸಃ' 'ಯಶ್ಚಾಸಾವಾದಿತ್ಯಃ' 'ಆದಿತ್ಯೋ ಭವತಿ'' ಹೀಗೆ ಆದಿತ್ಯಶ್ರುತಿಗಳು ಬಹಳವಾಗಿರುವುದರಿಂದ ಸೂರ್ಯನು ಆದಿತ್ಯಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಶಂಕಿಸಬಹುದು. ಆದರೆ ವಿಷ್ಣುವಿನಲ್ಲಿ ಶ್ರುತಿಗೆ ಮುಖ್ಯಾರ್ಥವಿರುವುದರಿಂದ ಸೂರ್ಯನು ಆದಿತ್ಯಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯನಾಗಲಾರ. ಆದ್ದರಿಂದ ಸೂರ್ಯನನ್ನು ಆದಿತ್ಯನೆಂದು ವಿವಕ್ಷಿಸಿ ಪೂರ್ವಪಕ್ಷ ಮಾಡಲು ಸಾಧ್ಯವಿಲ್ಲ.

ಕೂಡುವುದಿಲ್ಲವೋ, ಅಥವಾ ಕೂಡುತ್ತದೋ? ೪) ಇದಕ್ಕಾಗಿ ಮಯಟ್‌ಪ್ರತ್ಯಯವು ಪ್ರಸಿದ್ಧವಾದ ಚರ್ಕ್ಷುಮಯಾದಿರೂಪಗಳನ್ನು ಹೇಳುತ್ತದೋ? ಅಥವಾ ಆ ಇಂದ್ರಿಯಗಳ ಸ್ವಾಮಿತ್ವವನ್ನು ಹೇಳುತ್ತದೋ? ಇತ್ಯಾದಿಯಾಗಿ ಸಂಶಯಕೋಟಿಯನ್ನು ಊಹಿಸಿಕೊಳ್ಳಬೇಕು. ಆದಿತ್ಯಕೋಟಿಯ ಪೂರ್ವಪಕ್ಷವನ್ನು 'ಅಯಮ್' ಇತ್ಯಾದಿ ಗ್ರಂಥದಿಂದ ಆರಂಭಿಸುತ್ತಿದ್ದಾರೆ.

ಸಾರ

'ಸರ್ವೇಷು ಭೂತೇಷು' ಎಂಬಲ್ಲಿರುವ ಭೂತಪದದ ಮಹಿಮೆಯಿಂದ ಬೇರೆಲ್ಲೂ ಇಲ್ಲದೆ ಕೇವಲ ಭೂತಪದಾರ್ಥಗಳಲ್ಲಿ ಇರುವಿಕೆಯೇ ಅಲೌಕಿಕತ್ವ ಎಂದು ತಿಳಿಯುತ್ತದೆ. (ಅನ್ಯತ್ರಾನವಸ್ಥಿತತ್ವೇ ಸತಿ ಭೂತಮಾತ್ರಾವಸ್ಥಿತತ್ವರೂಪಾಲೌಕಿಕತ್ವಂ) ಇದು ಅಯುಕ್ತವಾದರೆ ಬ್ರಹ್ಮಶಬ್ದಾದಿಗಳನ್ನು ಗೌಣವೆಂದು ಅವಶ್ಯ ಅಂಗೀಕರಿಸಬೇಕು. ಆವಾಗ ಬ್ರಹ್ಮಶಬ್ದದ ವಿರೋಧವಿಲ್ಲದ ಕಾರಣ ಹಿಂದಿನ ಶ್ರುತಿವಾಕ್ಯವು ಆದಿತ್ಯವಿಷಯಕವಾಗುತ್ತದೆ. ಆದ್ದರಿಂದ 'ಏತಮಸ್ಯಾಮ್' ಎಂಬಲ್ಲಿ 'ಏತದ್' ಶಬ್ದದಿಂದ ಆದಿತ್ಯನನ್ನೇ ಪರಾಮರ್ಶಿಸಬಹುದು. ಆವಾಗ ಆದಿತ್ಯನೇ ಸರ್ವಗತನಾಗುತ್ತಾನೆಂಬುದು ಪೂರ್ವಪಕ್ಷದ ಗುರಿ.

ಒಂದು ವೇಳೆ ಹಿಂದೆ ಹೇಳಿದ ಅಲೌಕಿಕತ್ವವು ಯುಕ್ತವಾದರೆ ಆವಾಗ ಬಾಧಕವಿಲ್ಲದ ಕಾರಣ ಬ್ರಹ್ಮಶಬ್ದಾದಿಗಳನ್ನು ಗೌಣವೆನ್ನಬೇಕಿಲ್ಲ. ಅದಕ್ಕೆ ವಿರುದ್ಧವಾಗಿ ಹಿಂದಿನ ವಾಕ್ಯವು ಆದಿತ್ಯನನ್ನು ವಿಷಯೀಕರಿಸುವುದಿಲ್ಲ. ಆದ್ದರಿಂದ ವಿಷ್ಣುವೇ ಸರ್ವಗತನಾಗುತ್ತಾನೆಂಬುದು ಸಿದ್ಧಾಂತದ ಗುರಿ.

● ● ● ● ●

ಆದಿತ್ಯನೇ ಸರ್ವಗತನೆಂದು ಪೂರ್ವಪಕ್ಷ

ತಾತ್ಪರ್ಯಚನ್ದ್ರಿಕಾ

ಪೂರ್ವಪಕ್ಷಸ್ತು – ಅಯಂ ಸರ್ವಗತ ಆದಿತ್ಯಃ, ''ತಸ್ಯೈತಸ್ಯಾಸಾವಾದಿತ್ಯೋ ರಸಃ'' ಇತ್ಯಾದಿನಾ ಪ್ರಕೃತಸ್ಯ ಆದಿತ್ಯಸ್ಯೈವ 'ಏತಂ' ಇತಿ ಪರಾಮರ್ಶಾತ್ । ನನು ಲೋಕತೋऽನ್ಯತ್ರಪ್ರಸಿದ್ಧಸ್ಯಾಪಿ ಆದಿತ್ಯಶಬ್ದಸ್ಯ ಅನ್ತರಧಿಕರಣನ್ಯಾಯೇನ ವಿಷ್ಣುವಾಚಿತ್ವಾತ್ ಕಥಂ ತೇನ ತದನ್ಯಸ್ಯ ಪ್ರಾಪ್ತಿಃ । ನಚ ವಾಚ್ಯಂ ತತ್ರ ದೇವತಾವಾಚಿನಾಂ ಸಮುದ್ರಾನ್ತಸ್ಥತ್ವಾದಿಲಿಙ್ಗಾತ್ ವಿಷ್ಣುಪರತೋಕ್ತಾ, ಅತ್ರ ತು ನ ವಿಷ್ಣುಲಿಙ್ಗಮಸ್ತಿ, ನಹಿ 'ಗಙ್ಗಾಯಾಂ ಘೋಷಃ' ಇತ್ಯತ್ರ ಗಙ್ಗಾಶಬ್ದಸ್ತೀರಪರ ಇತಿ 'ಗಙ್ಗಾಯಾಂ ಮತ್ಸ್ಯಃ' ಇತ್ಯತ್ರಾಪಿ ತಥೇತಿ, ತತ್ರ ಪ್ರವೃತ್ತಿನಿಮಿತ್ತಸ್ಯಾನನ್ಯಾಧೀನತ್ವಾದಿನಾ ವಿಷ್ಣಾವೇವ ತೇಷಾಂ ಮುಖ್ಯತಾಯಾ ಉಕ್ತತ್ವಾತ್ । ಏತೇನ ''ಆದಿತ್ಯೋ ರಸಃ'' ''ಯಶ್ಚಾಸಾವಾದಿತ್ಯಃ'' ''ಆದಿತ್ಯೋ ಭವತಿ'' ಇತ್ಯಾದಿತ್ಯಶ್ರುತೇರ್ಬಹುತ್ವಾತ್ ಅನ್ಯಪ್ರಾಪ್ತಿರಿತಿ ನಿರಸ್ತಮ್ । ವಿಷ್ಣೌ ಮುಖ್ಯಶ್ರುತಿಬಾಹುಲ್ಯೇನ ಅನ್ಯಪ್ರಾಪ್ತ್ಯಯೋಗಾತ್ । ನಚ

तत्र तत्प्रकरणस्थानां सवित्रादिशब्दानामेव विष्णुवाचितोक्ता, ननु तत्पर्यायादित्यादि शब्दानामपीति युक्तम्, तथात्वे तत्प्रकरणेऽदितिशब्दस्याप्यभावेन उत्तराधिकरण-टीकायामदितिशब्दस्योक्तन्यायेन सावकाशत्वशङ्काऽनुपपत्तेः ।

देवतान्तरगास्सर्वे शब्दा वृत्तिनिमित्ततः ।
विष्णुमेव वदन्त्यद्धा तत्सङ्गादुपचारतः ।।

इत्यनुव्याख्यानस्थसर्वशब्दविरोधाच्च । तत्रेन्द्रशब्दपर्यायाणामश्रवणेन तत्समन्वयार्थमधिकरणान्तरारम्भापाताच्च । तत्र लिङ्गमात्रेण सवित्रादिशब्दानां विष्णुवाचित्वस्य तत्परत्वस्य वा सिद्धावत्र श्रुतिसहितलिङ्गेनाऽऽदित्यादिशब्दानां विष्णुवाचित्वस्य तत्परत्वस्य वा सुतरां सिद्धेश्च ।

ಅನುವಾದ - ಪೂರ್ವಪಕ್ಷ ಹೀಗಿದೆ - ಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವಗತನು ಆದಿತ್ಯನೇ ಆಗಿದ್ದಾನೆ. ಏಕೆಂದರೆ 'ತಸ್ಯೈತಸ್ಯಾಸಾವಾದಿತ್ಯೋ ರಸಃ' ಇತ್ಯಾದಿಯಾಗಿ ಪ್ರಕೃತನಾದ ಆದಿತ್ಯನನ್ನೇ 'ಏತಮ್' ಎಂದು ಪರಾಮರ್ಶ ಮಾಡಿದ್ದಾರೆ. ಲೋಕತಃಅನ್ಯತ್ರಪ್ರಸಿದ್ಧವಾದ ಆದಿತ್ಯಶಬ್ದವು ಅಂತರಧಿಕರಣದ ನ್ಯಾಯದಂತೆ ವಿಷ್ಣುವಾಚಿಯೆಂದು ಸಿದ್ಧವಾಗಿದೆ. ಹೀಗಿರುವಾಗ ಆದಿತ್ಯಶಬ್ದದ ಬಲದಿಂದ ಅನ್ಯನು ಸರ್ವಗತನೆಂದು ಇಲ್ಲಿ ಹೇಗೆ ಪೂರ್ವಪಕ್ಷ ಮಾಡುತ್ತೀರಿ? ಅಂತರಧಿಕರಣದಲ್ಲಿ ಸಮುದ್ರಾಂತಸ್ಥತ್ವ ಮೊದಲಾದ ವಿಷ್ಣುಲಿಂಗಗಳಿರುವುದರಿಂದ ದೇವತಾವಾಚಿಶಬ್ದಗಳಿಗೆ ವಿಷ್ಣುಪರತ್ವವನ್ನು ಹೇಳಲಾಗಿದೆ. ಆದರೆ ಈ ಅಧಿಕರಣದ ವಿಷಯವಾಕ್ಯದಲ್ಲಿ ಅಂತಹ ವಿಷ್ಣುಲಿಂಗಗಳೇನು ಕೇಳಿಸುತ್ತಿಲ್ಲ. 'ಗಂಗಾಯಾಂ ಘೋಷಃ' ಎಂಬಲ್ಲಿ ಗಂಗಾಶಬ್ದವು ತೀರಪರವಾದ ಮಾತ್ರದಿಂದ 'ಗಂಗಾಯಾಂ ಮತ್ಸ್ಯಃ' ಎಂಬಲ್ಲಿಯೂ ಗಂಗಾಪದವು ತೀರವನ್ನು ಹೇಳುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಅಂತರಧಿಕರಣದಲ್ಲಿ ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಸ್ವತಂತ್ರವಾಗಿದೆ. ಮತ್ತು ನಿರವಧಿಕವಾಗಿದೆ. ಆದ್ದರಿಂದ ಎಲ್ಲಾ ಶಬ್ದಗಳು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆಂದು ಹೇಳಿದ್ದಾಗಿದೆ. ಆದ್ದರಿಂದ ಈ ಅಧಿಕರಣದಲ್ಲಿ ಪೂರ್ವಪಕ್ಷ ಮಾಡಲು ಸಾಧ್ಯವಿಲ್ಲ.

ಹೀಗೆ ಹೇಳಿದ್ದರಿಂದ ಮತ್ತೊಂದು ಶಂಕೆ ನಿರಾಕೃತವಾಯಿತು - 'ಆದಿತ್ಯೋ ರಸಃ' 'ಯಶ್ಚಾಸಾವಾದಿತ್ಯಃ' 'ಆದಿತ್ಯೋ ಭವತಿ'' ಹೀಗೆ ಆದಿತ್ಯಶ್ರುತಿಗಳು ಬಹಳವಾಗಿರುವುದರಿಂದ ಸೂರ್ಯನು ಆದಿತ್ಯಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಶಂಕಿಸಬಹುದು. ಆದರೆ ವಿಷ್ಣುವಿನಲ್ಲಿ ಶ್ರುತಿಗೆ ಮುಖ್ಯಾರ್ಥವಿರುವುದರಿಂದ ಸೂರ್ಯನು ಆದಿತ್ಯಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯನಾಗಲಾರ. ಆದ್ದರಿಂದ ಸೂರ್ಯನನ್ನು ಆದಿತ್ಯನೆಂದು ವಿವಕ್ಷಿಸಿ ಪೂರ್ವಪಕ್ಷ ಮಾಡಲು ಸಾಧ್ಯವಿಲ್ಲ.

ಆಯಾ ಪ್ರಕರಣಗಳಲ್ಲಿರುವ ಸವಿತ್ರಾದಿಶಬ್ದಗಳಿಗಷ್ಟೇ ವಿಷ್ಣುವಾಚಿತ್ವವನ್ನು ಅಂತರಧಿಕರಣದಲ್ಲಿ ಸಮರ್ಥಿಸಿದ್ದಾರೆ; ಹೊರತು ಸವಿತ್ರಾದಿಶಬ್ದಗಳಿಗೆ ಪರ್ಯಾಯಶಬ್ದವೆನಿಸಿದ ಆದಿತ್ಯಾದಿಶಬ್ದಗಳನ್ನು ಅಲ್ಲಿ ಸಮನ್ವಯ ಮಾಡಿಲ್ಲವೆಂದು ಶಂಕಿಸಬಾರದು. ಹಾಗಾದಲ್ಲಿ ಮುಂದಿನ ಅಧಿಕರಣದಲ್ಲಿ ಆದಿತಿ ಶಬ್ದವನ್ನು ಸಾವಕಾಶವೆಂದು ಶಂಕಿಸಿದ್ದೇ ತಪ್ಪಾಗುತ್ತದೆ. ಏಕೆಂದರೆ ಅಂತರಧಿಕರಣದಲ್ಲಿ ಉಲ್ಲೇಖಿಸಿದ ಪ್ರಕರಣದಲ್ಲಿ ಆದಿತಿ ಶಬ್ದವು ಇರುವುದಿಲ್ಲ. ಸಮಾನನ್ಯಾಯದಿಂದಷ್ಟೇ ಆದಿತಿಶಬ್ದವನ್ನು ಅಂತರಧಿಕರಣದಲ್ಲಿ ಸಮನ್ವಯ ಮಾಡಬೇಕು. ಇಲ್ಲದಿದ್ದರೆ ಮುಂದಿನ ಆತ್ಮತ್ವಾಧಿಕರಣದಲ್ಲಿ ಆದಿತಿ ಶಬ್ದವು ಅಂತರಧಿಕರಣನ್ಯಾಯದಂತೆ ಸಾವಕಾಶವಾಗಿದೆ ಎಂಬ ಶಂಕೆಯೇ ತಪ್ಪಾಗುತ್ತದೆ.

ದೇವತಾಂತರಗಾಃ ಸರ್ವೇ ಶಬ್ದಾ ವೃತ್ತಿನಿಮಿತ್ತತಃ।
ವಿಷ್ಣುಮೇವ ವದಂತ್ಯದ್ಧಾ ತತ್ಸಂಗಾದುಪಚಾರತಃ ॥

ಅಂತರಧಿಕರಣದಲ್ಲಿ ಹೇಳಿದ ಸಕಲ ದೇವತಾವಾಚಕ ಶಬ್ದ ಪ್ರವೃತ್ತಿನಿಮಿತ್ತಗಳು ವಿಷ್ಣುವಿನಲ್ಲಿರುವುದರಿಂದ ವಿಷ್ಣುವನ್ನೇ ಹೇಳುತ್ತವೆ. ವಿಷ್ಣುವಿನ ಸಂಬಂಧದಿಂದ ಔಪಚಾರಿಕವಾಗಿ ಬೇರೆ ದೇವತೆಗಳನ್ನು ಹೇಳುತ್ತವೆ.

ದೇವತಾವಾಚಕವಾದ ಸಕಲಶಬ್ದಗಳಿಗೆ ವಿಷ್ಣುಪರತ್ವವನ್ನು ಒಪ್ಪದಿದ್ದರೆ ಅನುವ್ಯಾಖ್ಯಾನದಲ್ಲಿರುವ ಸರ್ವಶಬ್ದದ ವಿರೋಧ ಬರುತ್ತದೆ. ಮತ್ತು ಅಂತರಧಿಕರಣದ ಈ ವಾಕ್ಯದಲ್ಲಿ ಇಂದ್ರಾದಿ ಶಬ್ದಗಳ ಪರ್ಯಾಯಶಬ್ದಗಳು ಕೇಳಿಸದ ಕಾರಣ ಅವುಗಳ ಸಮನ್ವಯಕ್ಕಾಗಿ ಮತ್ತೊಂದು ಅಧಿಕರಣವು ಹೊರಡಬೇಕಾಗುತ್ತದೆ. ಅಷ್ಟೇ ಅಲ್ಲದೆ ಕೇವಲ ಲಿಂಗದ ಬಲದಿಂದ ಸವಿತ್ರಾದಿ ಶಬ್ದಗಳು ವಿಷ್ಣುವನ್ನು ಸಮರ್ಥಿಸುತ್ತವೆಂದು ಅಂತರಧಿಕರಣದಲ್ಲಿ ಸಿದ್ಧವಾಗಿದೆ. ಹೀಗಿರುವಾಗ ಶ್ರುತಿಸಹಿತವಾದ ಲಿಂಗಗಳಿಂದ ಆದಿತ್ಯಾದಿ ಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುತ್ತವೆಂದು ಈ ಅಧಿಕರಣದಲ್ಲಿ ನಿಶ್ಚಯವಾಗಿ ಸಿದ್ಧವಾಗುತ್ತದೆ.

ಪ್ರಕಾಶಃ –

ಆದಿತ್ಯಕೋಟಿಕಪೂರ್ವಪಕ್ಷಂ ತಾವದಾರಭತೇ – **ಅಯಮಿತಿ । ಪ್ರಕೃತಸ್ಯೇತಿ ।** ಪ್ರಕೃತಶ್ಚಾದಿತ್ಯ ಏವ – ''ಆದಿತ್ಯೋ ರಸಃ ಯಶ್ಚಾಸಾವಾದಿತ್ಯಃ ಪುರುಷಂ ಪುರುಷಂ ಪ್ರತ್ಯಾದಿತ್ಯಃ'' ಇತ್ಯಾದಿತ್ಯಶ್ರುತಿಬಾಹುಲ್ಯಾತ್, ''ಸೂರ್ಯ ಆತ್ಮಾ ಜಗತಃ'' ಇತಿ ಸೌರಮನ್ತ್ರೋದಾಹರಣಾಚ್ಚ ।

ವಿವರಣೆ - ಆದಿತ್ಯನೇ ಸರ್ವಗತನೆಂದು ಪೂರ್ವಪಕ್ಷ ಮಾಡುತ್ತಿದ್ದಾರೆ. 'ಅಯಂ' ಇತ್ಯಾದಿ ಗ್ರಂಥದಿಂದ. 'ಪ್ರಕೃತಸ್ಯ' ಎಂಬ ಗ್ರಂಥದಿಂದ ಆದಿತ್ಯನೇ ಪ್ರಕೃತನಾಗಿದ್ದಾನೆಂದು ಹೇಳಿದ್ದಾರೆ. ಅದು ಹೀಗೆ - 'ಆದಿತ್ಯೋ ರಸಃ ಯಶ್ಚಾಸಾವಾದಿತ್ಯಃ, ಪುರುಷಂ ಪುರುಷಂ ಪ್ರತ್ಯಾದಿತ್ಯಃ' ಎಂದು ಆದಿತ್ಯಶ್ರುತಿಯು ಅನೇಕಬಾರಿ ಕೇಳಿಸುತ್ತಿದೆ. ಮತ್ತು 'ಸೂರ್ಯ ಆತ್ಮಾ ಜಗತಃ' ಎಂಬ ಸೌರಮಂತ್ರವನ್ನು ಉದಾಹರಿಸಿದ್ದಾರೆ.

ಪ್ರಕಾಶಃ – ''ಏತಂ ಚನ್ದ್ರಮಸಿ'' ಇತ್ಯುಕ್ತ್ವಾ 'ಏತಮಾದಿತ್ಯೇ' 'ಇತ್ಯನುಕ್ತತ್ವಲಿಙ್ಗಾಚ್ಚ' ಇತಿ ಟೀಕೋಕ್ತೇರಿತಿ ಭಾವಃ । ನ್ಯಾಯವಿವರಣಟೀಕಾಯಾಂ – ''ನ ಚೈತದನ್ತಸ್ಯತ್ವಾಧಿಕರಣನ್ಯಾಯೇನ ''ಉಪಾಸಾತ್ರೈವಿಧ್ಯಾತ್'' ಇತಿ ವಾ ಪರಿಹೃತಮಿತಿ ವಾಚ್ಯಂ, ಸಮ್ಭವತಿ ಹೀಶ್ವರೇ ಕಲ್ಪನೈಷಾ । ನ ಚಾಸಾವತ್ರ ಸಮ್ಭವತಿ, ''ಸರ್ವೇಷು ಭೂತೇಷು'' ಇತ್ಯಲ್ಪೌಕಸ್ತ್ವಶ್ರವಣಾತ್'' ಇತ್ಯಾದಿನಾऽऽಕ್ಷಿಪ್ಯ ಸಮಾಹಿತಮ್ । ತದಯುಕ್ತಮಿವ, ತತ್ರೈವಾತ್ರ ಲಿಙ್ಗಾಭಾವಾತ್, ಆದಿತ್ಯಶಬ್ದಸ್ಯ ಪ್ರಾಕ್ ಸಮನ್ವಯಾನುಕ್ತೇಶ್ಚ, ಟೀಕಾಯಾಂ ಪ್ರಾಪಕಬಾಹುಲ್ಯೋಕ್ತೇಶ್ಚೇತ್ಯಾಶಙ್ಕ್ಯ ''ಟೀಕಾಸು ಚ ಯದಸ್ಪಷ್ಟಂ'' ಇತಿ ಪ್ರತಿಜ್ಞಾತತ್ವಾತ್ತದ್ವಾಕ್ಯಂ ವಿವರಿತುಂ ಪೂರ್ವಪಕ್ಷಾಕ್ಷೇಪಪ್ರಕಾರಮಾಹ – ನನ್ವಿತಿ ।

ಮತ್ತು 'ಏತಂ ಚಂದ್ರಮಸಿ' ಎಂದು ಹೇಳಿ. 'ಏತಮಾದಿತ್ಯೇ' ಎಂಬ ಲಿಂಗವೂ ಹೇಳಲಾಗಿದೆ. ಹೀಗೆ ಟೀಕೆಯಲ್ಲಿ ಹೇಳಿದ್ದನ್ನು ಇಲ್ಲಿ ವ್ಯಾಖ್ಯಾನಿಸಿದ್ದಾರೆ. ನ್ಯಾಯವಿವರಣೆಯ ಟೀಕೆಯಲ್ಲಿ 'ನ ಚೈತದಂತಸ್ಯತ್ವಾದ್ಧಿಕರಣನ್ಯಾಯೇನ ''ಉಪಾಸಾತ್ರೈವಿಧ್ಯಾತ್'' ಇತಿ ವಾ ಪರಿಹೃತಮಿತಿ ವಾಚ್ಯಂ, ಸಂಭವತಿ ಹೀಶ್ವರೇ ಕಲ್ಪನೈಷಾ । ನ ಚಾಸಾವತ್ರ ಸಂಭವತಿ, ''ಸರ್ವೇಷು ಭೂತೇಷು'' ಇತ್ಯಲ್ಪೌಕಸ್ತ್ವಶ್ರವಣಾತ್'' ''ಈ ಅಧಿಕರಣದಲ್ಲಿ ಮಾಡಿದ ಪೂರ್ವಪಕ್ಷವನ್ನು ಅಂತಸ್ಥತ್ವಾಧಿಕರಣನ್ಯಾಯದಂತೆ ಮೂರುವಿಧ ಉಪಾಸನೆಗಳಿಂದ ಪರಿಹರಿಸಲು ಸಾಧ್ಯವಿಲ್ಲ. ಈಶ್ವರನಲ್ಲಿ ಇದನ್ನು ಕಲ್ಪಿಸಬಹುದು. ಆದರೆ ಆದಿತ್ಯನಲ್ಲಿ ಕಲ್ಪಿಸಲು ಸಾಧ್ಯವಿಲ್ಲ. 'ಸರ್ವೇಷು ಭೂತೇಷು' ಎಂದು ಅಲ್ಪೌಕಸ್ತ್ವವನ್ನು ಹೇಳಿದ್ದರಿಂದ'' ಹೀಗೆ ಆಕ್ಷೇಪಿಸಿ ಸಮಾಧಾನ ಹೇಳಿದ್ದಾರೆ. ಇದು ತಪ್ಪು. ಏಕೆಂದರೆ ಅಂತಸ್ಥತ್ವಾಧಿಕರಣದಿಂದ ಈ ಅಧಿಕರಣವು ಗತಾರ್ಥವಾಯಿತೆಂಬ ಶಂಕೆಯೇ ಕೂಡುವುದಿಲ್ಲ. ಏಕೆಂದರೆ ಅಂತಸ್ಥತ್ವಾಧಿಕರಣದಲ್ಲಿ ಆದಿತ್ಯಶಬ್ದವನ್ನು ಸಮನ್ವಯ ಮಾಡಿಲ್ಲ. ಮತ್ತು ಅಂತಸ್ಥತ್ವಾಧಿಕರಣದಲ್ಲಿ ಹೇಳಿದ ಲಿಂಗವೂ ಇಲ್ಲಿ ಕೇಳಿಸುತ್ತಿಲ್ಲ. ಮತ್ತು ಟೀಕೆಯಲ್ಲಿ ಸೂರ್ಯನಿಗೆ ಆದಿತ್ಯಶಬ್ದವಷ್ಟೇ ಅಲ್ಲದೆ ಅನೇಕ ಪ್ರಾಪಕಗಳನ್ನೂ ಹೇಳಿದ್ದಾರೆ. ಆದ್ದರಿಂದ ನ್ಯಾಯವಿವರಣಟೀಕೆಯಲ್ಲಿ ಮಾಡಿದ ಗತಾರ್ಥತ್ವವೆಂಬ ಶಂಕೆ ತಪ್ಪಲ್ಲವೇ? ಎಂಬ ಪ್ರಶ್ನೆಗೆ 'ನನು' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಪೂರ್ವನ್ಯಾಯವಿಷಯತ್ವಮಾಶಙ್ಕ್ಯಾಹ – ನಚ ವಾಚ್ಯಮಿತಿ । 'ತಥೇತಿ' ಇತ್ಯನೇನಾನ್ವಯಃ । ವಿಷ್ಣುಪರತೇತಿ । ನನು ಮುಖ್ಯಾತಾऽಪೀತ್ಯರ್ಥಃ । 'ತತ್ರ' ಅನ್ತರಧಿಕರಣೇ । ಆದಿಪದೇನಾನ್ಯಗತಂ ಪ್ರತಿ ಸ್ವಾತನ್ತ್ರ್ಯೇಣೇತಿ ಗೃಹ್ಯತೇ । ಶ್ರುತಿಬಹುತ್ವಮುಜ್ಜೀವಕಮಸ್ತ್ವ, ಕಿಂ ಲಿಙ್ಗೇನೇತ್ಯತಸ್ತಟ್ಟೀಕೋಕ್ತಮಾದಿತ್ಯಾಶ್ರುತಿಬಾಹುಲ್ಯಮಪಿ ನಾನ್ಯಪ್ರಾಪಕಮಿತ್ಯಾಹ – ಏತೇನೇತಿ ।

'ಟೀಕಾಸು ಚ ಯದಸ್ಪಷ್ಟಮ್' ಎಂದು ಗ್ರಂಥಪ್ರಾರಂಭದಲ್ಲಿ ಪ್ರತಿಜ್ಞೆ ಮಾಡಿದಂತೆ ನ್ಯಾಯವಿವರಣ ಟೀಕೆಯು ಅಸ್ಪಷ್ಟವಾದ್ದರಿಂದ ಅದನ್ನು ವ್ಯಾಖ್ಯಾನಿಸುತ್ತಿದ್ದಾರೆ. ಹಿಂದೆ ಅಂತಸ್ಥತ್ವಾಧಿಕರಣದಲ್ಲಿ ವಿಷ್ಣುಲಿಂಗವಿರುವ ದೇವತಾವಾಚಕಪದಗಳಷ್ಟೇ ವಿಷ್ಣುವಿನಲ್ಲಿ ಸಮನ್ವಯ ಮಾಡಲಾಯಿತು. ಆದರೆ ಈ ಅಧಿಕರಣದ ವಿಷಯವಾಕ್ಯದಲ್ಲಿ ಅಂತಹ ವಿಷ್ಣುಲಿಂಗಗಳು ಕೇಳಿಸುತ್ತಿಲ್ಲ. ಪೂರ್ವನ್ಯಾಯವಿಷಯತ್ವವನ್ನು ಇಲ್ಲಿ ಹೇಳಲು ಸಾಧ್ಯವಿಲ್ಲವಲ್ಲ? ಎಂಬ ಪ್ರಶ್ನೆಗೆ 'ನಚ ವಾಚ್ಯಮ್' ಎಂದು ಉತ್ತರಿಸಿದ್ದಾರೆ. ಈ

ವಿಷಯವಾಕ್ಯದಲ್ಲಿ ವಿಷ್ಣುಲಿಂಗವು ಕೇಳಿಸದಿದ್ದರೂ ಆದಿತ್ಯಶಬ್ದವು ವಿಷ್ಣುವಿನಲ್ಲಿ ಮುಖ್ಯವಾದ್ದರಿಂದ ಗತಾರ್ಥತ್ವವು ಬಂದೇ ಬರುತ್ತದೆಂದು ಅಭಿಪ್ರಾಯ. 'ನಚ ವಾಚ್ಯಮ್' ಎಂಬುದಕ್ಕೆ 'ತಥೇತಿ' ಎಂಬಲ್ಲಿ ಅನ್ವಯ.

'ಅನನ್ಯಾಧೀನತ್ವಾದಿನಾ' ಎಂಬಲ್ಲಿರುವ ಆದಿಪದದಿಂದ ಅನ್ಯರನ್ನು ಕುರಿತು ಇರುವ ಸ್ವಾತಂತ್ರ್ಯವನ್ನು ವಿವಕ್ಷಿಸಬೇಕು. ಪೂರ್ವಪಕ್ಷಕ್ಕೆ ಉಜ್ಜೀವಕವಾಗಿ ಶ್ರುತಿಬಹುತ್ವವನ್ನು ಹೇಳಿದರೆ ಸಾಕು. ಲಿಂಗವನ್ನು ಹೇಳಬೇಕಾಗಿಲ್ಲ. ಆದ್ದರಿಂದ ಅರ್ಭಕೌಕಸ್ತ್ವವನ್ನು ನ್ಯಾಯವಿವರಣ ಟೀಕೆಯಲ್ಲಿ ಹೇಳುವ ಅವಶ್ಯಕತೆ ಇರಲಿಲ್ಲೆಂಬ ಪ್ರಶ್ನೆ ಬರುತ್ತದೆ. ಆದರೆ ಕೇವಲ ಶ್ರುತಿಬಾಹುಲ್ಯವು ಪೂರ್ವಪಕ್ಷಪ್ರಾಪಕವಲ್ಲವೆಂಬುದನ್ನು 'ಏತೇನ' ಎಂಬ ವಾಕ್ಯದಿಂದ ಹೇಳುತ್ತಾರೆ 'ಏತೇನ' ಎಂಬುದರ ಅರ್ಥವನ್ನು 'ವಿಷ್ಣೌ' ಎಂಬ ವಾಕ್ಯದಿಂದ ಹೇಳಿದ್ದಾರೆ.

ಪ್ರಕಾಶಃ – ಏತಚ್ಛಬ್ದಾರ್ಥಮೇವಾಹ – ವಿಷ್ಣಾವಿತಿ । ಮನ್ದಾನಾಂ ಭ್ರಮಂ ವಾರಯತಿ – ನಚೇತಿ । ಟೀಕಾಯಾಮಿತಿ । ''ನಚ ಶ್ರುತಿರ್ವಿಷ್ಣುವಿಷಯಾ ಕಿಂ ನ ಸ್ಯಾದುಕ್ತನ್ಯಾಯಾತ್'' ಇತಿ ವಾಕ್ಯೇನೇತ್ಯರ್ಥಃ । ಉಕ್ತನ್ಯಾಯೇನೇತಿ । ಅನ್ತರಧಿಕರಣನ್ಯಾಯೇನೇತ್ಯರ್ಥಃ । ಅನುವ್ಯಾಖ್ಯಾನೇತಿ । ತೃತೀಯಾಧ್ಯಾಯತೃತೀಯಪಾದೀಯಾನುವ್ಯಾಖ್ಯಾನಸ್ಥೇತ್ಯರ್ಥಃ । ಸರ್ವೇ ದೇವತಾನ್ತರಗತಾಃ ಶಬ್ದಾಃ ಶಬ್ದವೃತ್ತ್ಯೋರ್ಯೌಗರೂಢ್ಯೋರ್ನಿಮಿತ್ತಾನಾಂ ಬಹುಲಪ್ರಯೋಗಾದೀನಾಂ ಹರೌ ಸತ್ತ್ವಾತ್ 'ಅಜ್ಞಾ' ವಚನವೃತ್ತ್ಯೈವ ವದನ್ತಿ, ಅನ್ಯತ್ರ ತತ್ಸಙ್ಗಾದುಪಚಾರತಃ ಪ್ರಯೋಗ ಇತ್ಯರ್ಥಃ । ನನು ತತ್ರ ಸರ್ವಶಬ್ದಸ್ಯ ಸಙ್ಕೋಚಃ ಕ್ರಿಯತಾಮಿತ್ಯತ ಆಹ – ತತ್ರೇತಿ । ಅನ್ತರಧಿಕರಣೋದಾಹರಣ ಇತ್ಯರ್ಥಃ ।

ಅಂತಸ್ಥತ್ವಾದ್ಧಿಕರಣದಲ್ಲಿ ಆಯಾ ಪ್ರಕರಣಗಳಲ್ಲಿರುವ ಸವಿತ್ರಾದಿಶಬ್ದಗಳನ್ನಷ್ಟೇ ಸಮನ್ವಯ ಮಾಡಿದ್ದಾರೆ. ಹೊರತು ಆದರ ಪರ್ಯಾಯಶಬ್ದಗಳೆನಿಸಿದ ಆದಿತ್ಯಾದಿ ಶಬ್ದಗಳನ್ನು ಸಮನ್ವಯ ಮಾಡಿಲ್ಲವೆಂಬುದು ಮಂದರ ಶಂಕೆ. ಇದನ್ನು 'ನಚ' ಎಂಬ ಗ್ರಂಥದಿಂದ ಪರಿಹರಿಸಿದ್ದಾರೆ. 'ನಚ ಶ್ರುತಿರ್ವಿಷ್ಣುವಿಷಯಾ ಕಿಂ ನ ಸ್ಯಾದುಕ್ತನ್ಯಾಯಾತ್' ಎಂಬ ವಾಕ್ಯದಿಂದ ಮುಂದಿನ ಅತ್ಯತ್ಥಾಧಿಕರಣದಲ್ಲಿ ಆದಿತಿ ಶಬ್ದವನ್ನು ಸಾವಕಾಶವೆಂದು ಶಂಕಿಸಿದ್ದಾರೆ. ಅನುವ್ಯಾಖ್ಯಾನದ ಮೂರನೇ ಅಧ್ಯಾಯದ ಮೂರನೇ ಪಾದದಲ್ಲಿ ಎಲ್ಲಾ ದೇವತಾವಾಚಕಶಬ್ದವೃತ್ತಿಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದ್ದಾರೆ. ಯೋಗರೂಢಿಗಳಿಗೆ ನಿಮಿತ್ತವಾದ ಬಹಳ ಪ್ರಯೋಗವು ವಿಷ್ಣುವಿನಲ್ಲಿರುವುದರಿಂದ ವಿಷ್ಣುವಿನಲ್ಲಿ ವಚನವೃತ್ತಿಯನ್ನೇ ಹೇಳಬಹುದು. ಇತರ ದೇವತೆಗಳಲ್ಲಿ ವಿಷ್ಣುವಿನ ಸಂಪರ್ಕದಿಂದ ಔಪಚಾರಿಕಪ್ರಯೋಗವನ್ನು ಹೇಳಬೇಕು. ಅನುವ್ಯಾಖ್ಯಾನದಲ್ಲಿರುವ ಸರ್ವಶಬ್ದಕ್ಕೆ ಆಯಾ ಪ್ರಕರಣಗಳಲ್ಲಿರುವ ಸರ್ವಶಬ್ದಗಳೆಂಬರ್ಥದಲ್ಲಿ ಸಂಕೋಚ ಮಾಡೋಣವೆಂಬ ಪ್ರಶ್ನೆಗೆ 'ತತ್ರ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ನನು ತತ್ರ ಪರ್ಯಾಯಾಣಾಮಪಿ ನಿರವಕಾಶವಿಷ್ಣುಲಿಙ್ಗೋಪೇತಾನಾಮೇವ ಸಮನ್ವಯೋ ನಾನ್ಯೇಷಾಮಿತ್ಯಾಶಙ್ಕ್ಯಾಹ – ತತ್ರೇತಿ । ಶ್ರುತೀತಿ । ಬ್ರಹ್ಮಶ್ರುತಿಸಹಿತಾಶ್ರುತತ್ವಾದಿಲಿಙ್ಗೇನೇತ್ಯರ್ಥಃ ।

ಪರ್ಯಾಯಶಬ್ದಗಳಾಗಿದ್ದರೂ ನಿರವಕಾಶವಿಷ್ಣುಲಿಂಗಗಳಿದ್ದರೆ ಮಾತ್ರ ಆಯಾ ಶಬ್ದಗಳ ಸಮನ್ವಯವನ್ನು ಅಂತರಧಿಕರಣದಲ್ಲಿ ಮಾಡಲಾಗಿದೆ. ಹೊರತು ಬೇರೆ ಶಬ್ದಗಳನ್ನಲ್ಲವೆಂಬ ಶಂಕೆಗೆ 'ತತ್ರ ಲಿಂಗಮಾತ್ರೇಣ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ಈ ಪ್ರಕರಣದಲ್ಲಿ ಕೇವಲ ಲಿಂಗವಷ್ಟೇ ಅಲ್ಲದೆ ಬೃಹತ್ಶ್ರುತಿಸಹಿತವಾದ ಅಶ್ರುತತ್ವಾದಿಲಿಂಗಗಳು ಕೇಳಿಸುತ್ತಿರುವುದರಿಂದ ಸುತರಾಮ್ ವಿಷ್ಣುಪರತ್ವವು ಸಿದ್ಧವಾಗುತ್ತದೆ.

गुरुराजीयम् – एतमितीति ।। ''एतं ह्येव बह्वृचा'' इत्यादिनेत्यर्थः ।। किमत्रादित्यश्रुत्या पूर्वपक्षो बह्वित्यादिश्रुत्या वा सौरमन्त्रेण वा आदित्येऽनुक्तत्वलिङ्गेन वा चक्षुर्मयत्वादिना वा अर्भकौकस्त्वेन वा । नाद्य इत्याह – **नन्विति ।।** ननु लोकतोऽन्यत्रप्रसिद्धानां देवतावाचीन्द्रादिशब्दानां समुद्रान्तस्थितत्वादिलिङ्गैर्विष्णुपरत्वे निर्णीते अन्यत्रप्रसिद्धस्याप्यादित्यशब्दस्य विष्णुवाचकत्वं स्यादित्याशङ्क्याह – **न हीति ।।** अन्यथा ''गङ्गायां घोषः'' इत्यत्र गङ्गाशब्दार्थभूतप्रवाहस्य घोषाधिकरणत्वानुपपत्त्या तीरपरत्वे चान्यत्र ''गङ्गायां मत्स्यः'' इत्यत्रापि तीरपरत्वं स्यात् । ''गङ्गायां घोषः'' इत्यत्र मुख्यार्थानुपपत्तिरित्यादिवत् ''गङ्गायां मत्स्यः'' इत्यादौ तदभावाद्यदि न तीरपरत्वं तर्ह्यन्तः प्रविष्टमित्यादिवाक्ये समुद्रान्तस्थितत्वादिलिङ्गैर्विष्णुपरत्वेप्यत्र 'स यश्चायम्' इत्यादौ तल्लिङ्गाभावान्न विष्णुपरत्वमिति सममित्यर्थः । तथेतीत्यत्रत्यस्येतिशब्दस्य इति नच वाच्यमिति पूर्वेण सम्बन्धः । द्वितीयं दूषयति – **एतेनेति ।।** एतेनेत्यनेन परामृष्टं हेतुं दर्शयति – **विष्णाविति ।।** विष्णौ मुख्या या श्रुतिस्तद्बाहुल्येनेत्यर्थः । अन्तिमाधिकरणस्य तत्प्रकरणस्थानां सवित्रादिशब्दानां विष्णुमात्रवाचित्वपरत्वे अनुल्याख्यानविरोधश्चेत्याह – **देवतान्तरगा इति ।।** नन्वनुल्याख्याने सर्वशब्दोऽन्तरधिकरणन्याय विषयसर्वपर एव । नत्वसङ्कुचितसर्वपर इत्यतो न तद्विरोध इति पूर्वत्रारुच्या दोषान्तरमाह – **तत्रेति** । नच वासवादिशब्दानामन्तरधिकरणन्यायविषयत्वेनैव भगवत्परत्वसम्भवान्न तदर्थमधिकरणान्तरारम्भ इत्यरुच्याह – **तत्रलिङ्गेति ।।**

ಸಾರ

ಆದಿತ್ಯನೇ ಸರ್ವಗತನೆಂಬ ಪೂರ್ವಪಕ್ಷವನ್ನು ವಿವರವಾಗಿ ಮಾಡುತ್ತಿದ್ದಾರೆ.

'ತಸ್ಸೃತಸ್ಯಾಸಾವಾದಿತ್ಯೋ ರಸಃ' ಇತ್ಯಾದಿಯಾಗಿ ಪ್ರಕೃತನಾದ ಆದಿತ್ಯನನ್ನೇ 'ಏತಮ್' ಎಂದು ಪರಾಮರ್ಶಿಸಲಾಗಿದೆ. ಆದ್ದರಿಂದ ಆದಿತ್ಯನೇ ಸರ್ವಗತನಾಗಬೇಕು. ಅಂತರಧಿಕರಣದ ನ್ಯಾಯದಿಂದ ಈ

ಆದಿತ್ಯಶಬ್ದವೂ ಸಹ ವಿಷ್ಣುವಿನಲ್ಲಿ ಸಮನ್ವಯವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಬಲಿಷ್ಠವಾಗಿ ವಿಷ್ಣುಲಿಂಗಗಳಿದ್ದರೆ ಮಾತ್ರ ವಿಷ್ಣುಪರತ್ವವನ್ನು ಅಲ್ಲಿ ಹೇಳಿದ್ದಾರೆ. ಆದರೆ ಪ್ರಕೃತ ಅಂತಹ ಲಿಂಗಗಳು ಕಾಣಸುತ್ತಿಲ್ಲ.

ಇಷ್ಟಾದರೂ ಪೂರ್ವಪಕ್ಷ ಹುಟ್ಟಲು ಸಾಧ್ಯವಿಲ್ಲವೆಂಬ ಆಕ್ಷೇಪ ಬಂದೇ ಬರುತ್ತದೆ. ದೇವತಾವಾಚಿಯಾದ ಎಲ್ಲಾ ಶಬ್ದಗಳನ್ನು ಸಮನ್ವಯ ಮಾಡಿದ ಮೇಲೆ ವಿಷ್ಣುಲಿಂಗಗಳು ಇರುವುದು ಅಥವಾ ಇಲ್ಲದಿರುವುದು ಕಾರಣವಾಗುವುದಿಲ್ಲ. ಸಮಾನನ್ಯಾಯದಿಂದ ಎಲ್ಲಾ ದೇವತಾವಾಚಕಶಬ್ದಗಳ ಸಮನ್ವಯವು ಸಿದ್ಧವಾಗುತ್ತದೆ.

• • • • •

ಅಂತರಧಿಕರಣದಿಂದ ಪುನುರುಕ್ತಿ ದೋಷ

तात्पर्यचन्द्रिका

एतेन ''सूर्य आत्मा'' इति सौरमन्त्रोदाहरणात्सूर्यप्राप्तिरिति निरस्तम् । उक्तन्यायेन मन्त्रस्थसूर्यादिशब्दस्यापि विष्णौ मुख्यत्वात् । नच ''अन्तः'' इत्यादौ चन्द्रादिकतिपयगतत्वादिकमुक्तं, अत्र तु सर्वगतत्वमुच्यत इति भेदः,

व्यधिकरणत्वात् । नहि प्रतिपाद्याभेदः शङ्कितः, किन्तु पूर्वपक्षानुदयः ।

नच ''चन्द्रमस्येतं'' इति सजातीये चन्द्रादावुक्तत्वा आदित्ये अनुक्तत्वाल्लिङ्गात्तत्प्राप्तिः,

'सर्वेषु' इति सर्वशब्देन आदित्यस्यापि ग्रहणसम्भवेन सावकाशलिङ्गेन श्रुत्यादिबाधायोगात्: सन्ति चात्र 'एतमेव ब्रह्म' इति ब्रह्मशब्दाद्याः श्रुतयः, '' स योऽतोऽश्रुतोऽगतोऽमतोऽदृष्टः'' इत्यश्रुतत्वादिलिङ्गानि च, ब्रह्मशब्दस्य च विष्णौ मुख्यतायाः आनन्दमयाधिकरणे सिद्धत्वात् ज्योतिरधिकरणे च ज्योतिषो विष्णुत्वे अश्रुतत्वादेर्हेतूकृतत्वात्, अदृष्टत्वस्य च विष्णुधर्मतायाः ''अदृश्यत्वादिगुणकः'' इत्यत्र वक्ष्यमाणत्वात् ।

''स योऽतोऽश्रुतः'' इत्यादिसन्निधाने च ''अन्तरपुरुषः'' इत्यन्तरत्व-श्रवणात्तस्य चान्तर्याम्यधिकरणे विष्णुलिङ्गतायाः सेत्स्यमानत्वात् ।

ಅನುವಾದ - 'ಸೂರ್ಯ ಆತ್ಮಾ' ಎಂದು ಏತರೇಯಮಂತ್ರದಲ್ಲಿ ಸೌರಮಂತ್ರವನ್ನು ಉದಾಹರಿಸಲಾಗಿದೆ. ಇದರಿಂದ ಸೂರ್ಯನೇ ಪ್ರತಿಪಾದ್ಯನಾಗುತ್ತಾನೆಂಬ ಆಕ್ಷೇಪವು ಈಗ ಪರಿಹಾರವಾಯಿತು. ಹಿಂದೆ ಹೇಳಿದ ನ್ಯಾಯದಂತೆ ಮಂತ್ರವಾಕ್ಯದಲ್ಲಿರುವ ಸೂರ್ಯ ಮೊದಲಾದ ಶಬ್ದಗಳೂ ಸಹ ವಿಷ್ಣುವಿನಲ್ಲಿ ಮುಖ್ಯವಾಗಿವೆ.

ಪ್ರಶ್ನೆ - ಅಂತರಧಿಕರಣದಲ್ಲಿ ಚಂದ್ರಾದಿ ಕೆಲವು ದೇವತೆಗಳಲ್ಲಷ್ಟೇ ವಿಷ್ಣು ಅಂತರ್ಯಾಮಿಯಾಗಿದ್ದಾನೆಂದು ಹೇಳಲಾಗಿದೆ. ಈ ಅಧಿಕರಣದಲ್ಲಿ ಸರ್ವಾಂತರ್ಯಾಮ್ಯತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸಲಾಗಿದೆ. ಹೀಗೆ ಎರಡು ಅಧಿಕರಣಗಳಿಗೆ ವೈಲಕ್ಷಣ್ಯವಿರುವುದರಿಂದ ಗತಾರ್ಥತ್ವದೋಷವು ಬರುವುದಿಲ್ಲ.

ಈ ಉತ್ತರವು ವ್ಯಧಿಕರಣವಾಗಿದೆ. ಏಕೆಂದರೆ ಎರಡು ಅಧಿಕರಣದ ಪ್ರತಿಪಾದ್ಯವಿಷಯವು ಒಂದೇ ಆಗಿದೆಯೆಂದು ನಾವು ಆಕ್ಷೇಪ ಮಾಡಿಯೇ ಇಲ್ಲ ಹೊರತು ಎಲ್ಲಾ ದೇವತಾವಾಚಕ ಪದಗಳು ವಿಷ್ಣುವಿನಲ್ಲಿ ಮುಖ್ಯವೆಂದು ಅಂತರಧಿಕರಣದಲ್ಲಿ ನಿರ್ಣಯವಾಗಿರುವಾಗ ಪುನಃ ಇಲ್ಲಿ ಆದೇ ಆದಿತ್ಯಾದಿಶಬ್ದಗಳನ್ನು ವಿಷ್ಣುಪರವಲ್ಲವೆಂದು ಪೂರ್ವಪಕ್ಷವನ್ನು ಮಾಡಲು ಬರುವುದಿಲ್ಲವೆಂದು ಆಕ್ಷೇಪಿಸುತ್ತಿದ್ದೇವೆ. ಹೀಗಿರುವಾಗ ಪ್ರತಿಪಾದ್ಯವಿಷಯವು ಭಿನ್ನವಾಗಿದೆಯೆಂಬ ನಿಮ್ಮ ಉತ್ತರವು ವ್ಯಧಿಕರಣವಾಗಿದೆ.

ಪ್ರಶ್ನೆ - ಆದಿತ್ಯನನ್ನು ಸರ್ವಗತನೆಂದು ಪೂರ್ವಪಕ್ಷ ಮಾಡಬಹುದು. 'ಚಂದ್ರಮಸ್ಯೇತಮ್' ಇತ್ಯಾದಿಯಾಗಿ ಸಜಾತಿಯರಾದ ಚಂದ್ರಾದಿಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿ ಆದಿತ್ಯಶಬ್ದವನ್ನು ಸಮನ್ವಯ ಮಾಡಿಲ್ಲ. ಹೀಗೆ ಅಂತರಧಿಕರಣದಲ್ಲಿ ಚಂದ್ರನನ್ನು ಹೇಳಿ ಆದಿತ್ಯನನ್ನು ಹೇಳದಿರುವಿಕೆ ಎಂಬ ಕಾರಣದಿಂದಲೇ ಪ್ರಕೃತ ಪೂರ್ವಪಕ್ಷವು ಉದಯವಾಗಬಹುದಲ್ಲವೇ?

ಉತ್ತರ - 'ಚಂದ್ರಮಸ್ಯೇತಮ್' ಇತ್ಯಾದಿ ಶ್ರುತಿಯಲ್ಲಿ 'ಸರ್ವೇಷು ಭೂತೇಷು' ಎಂಬುದಾಗಿ ಎಲ್ಲವನ್ನು ಸರ್ವಶಬ್ದದಿಂದ ಸಂಗ್ರಹಿಸಲಾಗಿದೆ. ಇಲ್ಲಿರುವ ಸರ್ವಶಬ್ದದಿಂದ ಆದಿತ್ಯನನ್ನೂ ಕೂಡ ಗ್ರಹಣ ಮಾಡಬಹುದು. ಆದ್ದರಿಂದ ಆದಿತ್ಯೇ ಅನುಕೃತ್ವವೆಂಬುದು ಸಾವಕಾಶಲಿಂಗ ಎನಿಸಿದೆ. ಈ ಸಾವಕಾಶಲಿಂಗದಿಂದ ಶ್ರುತಿಲಿಂಗ ಮೊದಲಾದವುಗಳನ್ನು ಸಾಧಿಸಲು ಸಾಧ್ಯವಿಲ್ಲ. 'ಏತಮೇವ ಬ್ರಹ್ಮ' ಇತ್ಯಾದಿಯಾಗಿ ಬ್ರಹ್ಮಶಬ್ದವಿರುವ ಶ್ರುತಿಗಳು ಆದಿತ್ಯನನ್ನೇ ವಿಷ್ಣುವೆನ್ನಲು ಪ್ರಮಾಣಗಳಾಗಿವೆ. ಮತ್ತು 'ಸ ಯೋತೋಽಶ್ರುತೋಽಗತೋಽಮತೋಽನತೋಽದೃಷ್ಟಃ' ಎಂದು ಅಶ್ರುತತ್ವಾದಿಲಿಂಗಗಳು ವಿಷ್ಣುವಿನಲ್ಲಿವೆ. ಬ್ರಹ್ಮಶಬ್ದವು ವಿಷ್ಣುವಿನಲ್ಲಿ ಮುಖ್ಯವೆಂದು ಆನಂದಮಯಾಧಿಕರಣದಲ್ಲಿ ನಿರ್ಣಯಿಸಲಾಗಿದೆ. ಜ್ಯೋತಿರಧಿಕರಣದಲ್ಲಿಯೂ ಜ್ಯೋತಿಯನ್ನು ವಿಷ್ಣುವೆಂದು ಸಮರ್ಥಿಸಲು

ಅಶ್ರುತತ್ವಾದಿಗಳನ್ನು ಹೇತು ಮಾಡಿದ್ದಾರೆ. ಹೇತು ಮಾಡಬೇಕಾದರೆ ವಿಷ್ಣುಲಿಂಗವೆಂದು ಸಿದ್ಧವಾಗಿರಬೇಕು. ಮತ್ತು ಮುಂದೆ 'ಅದೃಶ್ಯತ್ವಾದಿಗುಣಕೋಧರ್ಮೋಕ್ತೇಃ' ಎಂಬ ಸೂತ್ರದಲ್ಲಿ ಅದೃಶ್ಯತ್ವಾದಿಗಳನ್ನು ವಿಷ್ಣುಧರ್ಮವೆಂದು ಸಾಧಿಸುತ್ತಾರೆ.

'ಸ ಯೋತೋऽಶ್ರುತಃ' ಎಂಬ ವಾಕ್ಯದ ಸನ್ನಿಧಾನದಲ್ಲಿ 'ಸರ್ವೇಷಾಮ್ ಭೂತಾನಾಮ್ ಅಂತರ ಪುರುಷಃ' ಎಂದು ಕೇಳಿಸುತ್ತದೆ. ಈ ಅಂತರತ್ವವನ್ನು ಅಂತರ್ಯಾಮ್ಯಧಿಕರಣದಲ್ಲಿ ವಿಷ್ಣುಲಿಂಗವೆಂದು ಸಾಧಿಸುತ್ತಾರೆ. ಆದ್ದರಿಂದ ಅನೇಕ ವಿಷ್ಣುಶ್ರುತಿಗಳು ಅನೇಕ ವಿಷ್ಣುಲಿಂಗಗಳು ಬಲಿಷ್ಠವಾಗಿರುವಾಗ ಒಂದೇ ಲಿಂಗದಿಂದ ಸೂರ್ಯನೇ ಸರ್ವಗತನೆಂಬ ಪೂರ್ವಪಕ್ಷ ಹುಟ್ಟಲು ಹೇಗೆ ಸಾಧ್ಯ ?

ಪ್ರಕಾಶಃ –

ಟೀಕೋಕ್ತಂ ಸೌರಮನ್ತ್ರೋದಾಹರಣರೂಪಂ ಪ್ರಾಪಕಾನ್ತರಮಪ್ಯಾಕ್ಷಿಪತಿ – ಏತೇನೇತಿ । ಆಶಯಮಬುಧ್ವಾ ಭ್ರಾನ್ತಸ್ಯ ಚೋದ್ಯಂ ಪರಿಹರತಿ – ನಚೇತಿ । ಅತ್ರ ತು ಪೃಥಿವ್ಯಾದಿಸರ್ವಗತತ್ವಮತೋ ನ ಪೌನರುಕ್ತ್ಯಂ ಪ್ರತಿಪಾದ್ಯಭೇದಾದಿತಿ ಭಾವಃ । ಕಿನ್ತ್ವಿತಿ । ಸರ್ವಸ್ಯ ವಿಷ್ಣುಪ್ರಾಪಕತ್ವೇನ ಆದಿತ್ಯಾದಿಪ್ರಾಪಕಾಭಾವೇನ ಪೂರ್ವಪಕ್ಷಾನುದಯಶ್ಚೋದ್ಯತ ಇತ್ಯರ್ಥಃ ।

ವಿವರಣೆ - ಟೀಕೆಯಲ್ಲಿ ಪೂರ್ವಪಕ್ಷಪ್ರಾಪಕವಾಗಿ ಸೌರಮಂತ್ರವನ್ನು ಉದಾಹರಿಸಿದ್ದಾರೆ. ಅದನ್ನು ಪ್ರಕೃತ 'ಏತೇನ' ಎಂಬ ಗ್ರಂಥದಿಂದ ಆಕ್ಷೇಪಿಸುತ್ತಿದ್ದಾರೆ. ಪೂರ್ವಪಕ್ಷಗಳ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳದ ಭ್ರಾಂತನ ಕುಚೋದ್ಯವನ್ನು 'ನಚ' ಎಂಬ ಗ್ರಂಥದಿಂದ ಪರಿಹರಿಸುತ್ತಿದ್ದಾರೆ. ಈ ಅಧಿಕರಣದಲ್ಲಿ ಪೃಥಿವ್ಯಾದಿ ಸರ್ವಗತತ್ವವನ್ನು ಆದಿತ್ಯನಲ್ಲಿ ಆಕ್ಷೇಪಿಸುತ್ತಿರುವುದರಿಂದ ಪುನರುಕ್ತಿಗೆ ಅವಕಾಶವಿಲ್ಲ. ಏಕೆಂದರೆ ಎರಡೂ ಅಧಿಕರಣಗಳ ಪ್ರತಿಪಾದ್ಯವಿಷಯವು ಭಿನ್ನಭಿನ್ನವಾಗಿದೆ. 'ಕಿಂತು ಪೂರ್ವಪಕ್ಷಾನುದಯಃ' ಎಂಬ ವಾಕ್ಯಕ್ಕೆ ಹೀಗೆ ಅರ್ಥ - ಎಲ್ಲಾ ಶಬ್ದಗಳು ವಿಷ್ಣುವನ್ನೇ ಪ್ರತಿಪಾದಿಸುವುದರಿಂದ ಆದಿತ್ಯಾದಿಗಳನ್ನು ಪ್ರತಿಪಾದಿಸುವುದಿಲ್ಲ. ಆದ್ದರಿಂದ ಪೂರ್ವಪಕ್ಷವು ಹುಟ್ಟಲಾರದು.

ಪ್ರಕಾಶಃ – ಟೀಕೋಕ್ತಂ ಪ್ರಾಪಕಾನ್ತರಮಪ್ಯಾಕ್ಷಿಪತಿ – ನಚೇತಿ । ಆದಿತ್ಯಾದನ್ಯಶ್ಚೇತ್ಯ-ಸರ್ವಗತೋऽತ್ರಾಭಿಮತಸ್ತದಾ 'ಆದಿತ್ಯೇ ಏತಂ' ಇತ್ಯಪಿ ಶ್ರುತೇತಿ ಭಾವಃ । ಸಾವಕಾಶೇತಿ । ಅನುಕ್ತತ್ವಲಿಙ್ಗೇನೇತ್ಯರ್ಥಃ । ಆದ್ಯಪದೇನ ''ಅನ್ತರಪುರುಷಃ'' ಇತಿ ಪುರುಷಶಬ್ದಾದಿರ್ಗ್ರಾಹ್ಯಃ ಶ್ರುತ್ಯಾದೀನಾಂ ವಿಷ್ಣೌ ಗತತ್ವಮುಪಪಾದಯತಿ – ಬ್ರಹ್ಮಶಬ್ದಸ್ಯೇತಿ ।

ಟೀಕೆಯಲ್ಲಿ ಹೇಳಿದ ಮತ್ತೊಂದು ಪೂರ್ವಪಕ್ಷವನ್ನು 'ನಚ' ಎಂಬ ಗ್ರಂಥದಿಂದ ಆಕ್ಷೇಪಿಸುತ್ತಿದ್ದಾರೆ. ಆದಿತ್ಯನನ್ನು ಬಿಟ್ಟು ವಿಷ್ಣುವು ಸರ್ವಗತನಾಗುವುದಾದರೆ ಚಂದ್ರ, ನಕ್ಷತ್ರ ಮೊದಲಾದವರಲ್ಲಿ ವಿಷ್ಣುವು ಇದ್ದಾನೆಂದು ಹೇಳಿ 'ಆದಿತ್ಯೇ ಏತಮ್' ಆದಿತ್ಯನಲ್ಲಿಯೂ ವಿಷ್ಣು ಇದ್ದಾನೆಂದು ಹೇಳಬೇಕಿತ್ತು. ಆದರೆ

'ಚಂದ್ರಮಸ್ಯೇತಮ್' ಎಂಬಂತೆ 'ಆದಿತ್ಯೇ ಏತಮ್' ಎಂದು ಕೇಳಿಸುತ್ತಿಲ್ಲ. ಆದ್ದರಿಂದ ಆದಿತ್ಯನೇ ಸರ್ವಗತನಾಗುತ್ತಾನೆ. ಈ ಅನುಕ್ತತ್ವಲಿಂಗವು ಸಾವಕಾಶವಾಗಿದೆ. ಸಾವಕಾಶಲಿಂಗದಿಂದ ಆದಿತ್ಯನನ್ನು ಸರ್ವಗತನೆಂದು ಆಕ್ಷೇಪಿಸಲಾಗದು. 'ಬ್ರಹ್ಮಶಬ್ದಾದ್ಯಾಃ' ಎಂದು ಗ್ರಂಥಕಾರರು ಹೇಳಿದ್ದಾರೆ. ಇಲ್ಲಿರುವ ಆದ್ಯಪದದಿಂದ 'ಅಂತರ ಪುರುಷಃ' ಎಂಬಲ್ಲಿರುವ ಪುರುಷಶಬ್ದವನ್ನು ಇಟ್ಟುಕೊಳ್ಳಬೇಕು. ಶ್ರುತಿಲಿಂಗಗಳು ವಿಷ್ಣುವಿನಲ್ಲಿ ಮುಖ್ಯವೆಂದು 'ಬ್ರಹಶಬ್ದಸ್ಯ' ಎಂಬುದರಿಂದ ಸಮರ್ಥಿಸಿದ್ದಾರೆ.

ಪ್ರಕಾಶಃ – ಆನನ್ದಮಯಾಧಿಕರಣ ಇತಿ । ಪ್ರಾಗುಕ್ತಾಶಯೋऽನುಸನ್ಧೇಯಃ । ಪುರುಷಶಬ್ದಸ್ಯ ಚ ಗಾಯತ್ರ್ಯಧಿಕರಣೇ ಮುಖ್ಯತ್ವಸ್ಯೋಕ್ತತ್ವಾದಿತ್ಯಪಿ ಧ್ಯೇಯಮ್ । ಲಿಙ್ಗಾನಿ ಚ ವೈಷ್ಣವಾನೀತ್ಯಾಹ **– ಜ್ಯೋತಿರಧಿಕರಣ ಇತಿ ।** ''ಹೃದಯ ಆಹಿತಂ ಯತ್'' ಇತ್ಯತ್ರ ಜ್ಯೋತಿರಗ್ನಿರ್ವಿಷ್ಣುರ್ವೇತಿ ವಿಶಯೇ, ಪ್ರಸಿದ್ಧೇರಗ್ನಿರಿತಿ ಪ್ರಾಪ್ತೇ, ಕರ್ಣಾದಿವಿಚರಣಾಭಿಧಾನಾದ್ವಿಷ್ಣುರೇವೇತಿ ಚರಣಪದೇನ ಕರ್ಣಾದಿವಿಚರಣರೂಪಾಶ್ರುತತ್ವಾದೇರ್ಜ್ಯೋತಿಷೋ ವಿಷ್ಣುತ್ವೇ ಹೇತೂಕರಣಾತ್ ಅಸಿದ್ಧಸ್ಯ ತತ್ತ್ವಾಯೋಗಾತ್ ತತ್ರೈವ ಮುಖ್ಯಾನೀತ್ಯರ್ಥಃ ।

ಆನಂದಮಯಾಧಿಕರಣದಲ್ಲಿ ಹೇಳಿದ ಅಭಿಪ್ರಾಯವನ್ನು ಇಲ್ಲಿ ಅನುಸಂಧಾನ ಮಾಡಬೇಕೆಂದು 'ಆನಂದಮಯಾಧಿಕರಣೇ ಸಿದ್ಧತ್ವಾತ್' ಎಂದು ಹೇಳಿದ್ದಾರೆ. ಪುರುಷಶಬ್ದವು ಪರಮಾತ್ಮನಲ್ಲಿ ಮುಖ್ಯವಾಗಿದೆಯೆಂದು ಗಾಯತ್ರ್ಯಧಿಕರಣದಲ್ಲಿ ಸಮರ್ಥಿಸಲಾಗಿದೆ. ಲಿಂಗಗಳೂ ಸಹ ವಿಷ್ಣುಪರವೆಂದು ಜ್ಯೋತಿರಧಿಕರಣದಲ್ಲಿ ಸಮರ್ಥಿಸಲಾಗಿದೆ.

ಮಾತಿನ ಆಂತರ್ಯ ಹೀಗಿದೆ - 'ಜ್ಯೋತಿರಧಿಕರಣೇ' 'ಹೃದಯೇ ಆಹಿತಂ ಯತ್' ಎಂಬಲ್ಲಿ ಜ್ಯೋತಿಶಬ್ದವು ಅಗ್ನಿಪರವೊ? ಅಥವಾ ವಿಷ್ಣುಪರವೊ? ಎಂದು ಸಂಶಯ. ಲೋಕಪ್ರಸಿದ್ಧಿಬಲದಿಂದ ಅಗ್ನಿಯೆಂದು ಪೂರ್ವಪಕ್ಷ. ಕರ್ಣಾದೀನಾಂ ವಿಚರಣಾಭಿಧಾನಲಿಂಗದಿಂದ ವಿಷ್ಣುವೇ ಜ್ಯೋತಿಯೆಂದು ಸಿದ್ಧಾಂತ. ಕರ್ಣಾದಿವಿಚರಣವೆಂಬ ಅಶ್ರುತತ್ವವನ್ನು ಸೂತ್ರದಲ್ಲಿ ಹೇತು ಮಾಡಿದ್ದರಿಂದಲೇ ಅಸಿದ್ಧವಲ್ಲವೆಂದು ತಿಳಿಯುತ್ತದೆ.

ಪ್ರಕಾಶಃ – ''ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ'' ಇತ್ಯತ್ರ ''ಯತ್ತದದ್ರೇಶ್ಯಮಗ್ರಾಹ್ಯಮ-ಗೋತ್ರಮವರ್ಣಮಚಕ್ಷುಶ್ರೋತ್ರಂ'' ಇತ್ಯಾದಾವದೃಶ್ಯತ್ವಾದಿಗುಣಕೋ ವಿಷ್ಣುರನ್ಯೋ ವೇತಿ ವಿಶಯೇ, ''ಅಕ್ಷರಾತ್ಪರತಃಪರಃ'' ಇತಿ ಪರಾವಧಿತ್ವೇನೋಕ್ತಾಕ್ಷರಶಬ್ದೇನ ''ಯಯಾ ತದಕ್ಷರಮಧಿಗಮ್ಯತೇ'' ಇತಿ ಅಕ್ಷರಸಾಮಾನಾಧಿಕರಣ್ಯಾದನ್ಯ ಇತಿ ಪ್ರಾಪ್ತೇ, ''ಅಥ ಪರಾ ಯಯಾ ತದಕ್ಷರಂ'' ಇತಿ ಪರವಿದ್ಯಾವಿಷಯತ್ವೋಕ್ತೇರದೃಶ್ಯತ್ವಾದಿಗುಣಕಮಕ್ಷರಂ ವಿಷ್ಣುರೇವೇತಿ ವಕ್ಷ್ಯಮಾಣತ್ವಾದಿತ್ಯರ್ಥಃ ।

'ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ' ಎಂಬಲ್ಲಿ ''ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮ-ಚಕ್ಷುಶ್ರೋತ್ರಮ್'' ಎಂಬುದು ವಿಷಯವಾಕ್ಯ. ಇಲ್ಲಿ ಕೇಳಿಸುತ್ತಿರುವ ಅದೃಶ್ಯತ್ವಾದಿಗುಣವುಳ್ಳವನು

विष्णुर्वा? अथवा वेरेयवनो? एंदु संशय. 'अक्षरात्परतः परः' एंबल्लि परक्के अक्षरवन्नु अवधि एन्नलागिदे. ई अक्षरवे 'अथ परा यया तदक्षरमधिगम्यते' एंबल्लि अदृश्यत्वादिगुणकनिगे समानाधिकरणवागि हेळलागिदे. आदुदरिंद अदृश्यत्वादिगुणवुळ्ळवनु विष्णुवल्लवेंदु पूर्वपक्ष. 'अथ परा यया तदक्षरम्' एंबल्लि यावुदु अक्षरन तिळुवळिकेगे कारणवागिदेयो? अदन्नु परविद्या एन्नलागिदे. ई परविद्याविषयत्ववन्नु अक्षरनिगे हेळलायितु. परविद्याविषयनु विष्णुवे आगिरुवुदरिंद अदृश्यत्वादिगुणवुळ्ळवनु विष्णुवे आगुत्तानेंदु सिद्धांत.

प्रकाशः – ''अन्तर्याम्यधिदैवादिषु'' इत्यत्र ''यः पृथिव्यां तिष्ठन् पृथिव्या अन्तरो यं पृथवी न वेद'' इत्यादौ पृथिव्यादिगतत्वेन श्रुतः किं विष्णुरन्यो वेति संशये, पृथिव्यादिशरीरत्वस्याशरीरे विष्णावयोगादन्य इति प्राप्ते, पृथिव्याद्यविदित्वादन्तरत्वादिधर्मोपदेशाद्विष्णुरेवेत्यन्तरत्वस्य विष्णुलिङ्गतायास्साध-यिष्यमाणत्वादित्यर्थः ।

अंतर्याम्यधिकरणद 'अंतर्याम्यधिदैवादिषु' एंब सूत्रदल्लि 'यः पृथिव्यां तिष्ठन् पृथिव्या अंतरो यं पृथिवी न वेद' एंबुदु विषयवाक्य. इल्लि पृथिवीगतत्वेन केळसुत्तिरुववनु विष्णुवो अथवा वेरेयवनो? एंदु संदेह. अशरीरियाद विष्णुविगे पृथिव्यादिगळु शरीरवागुवुदिल्ल. श्रुतियल्लि पृथिवीयन्नु शरीरवेंदु हेळिद्दरिंद विष्णु पृथिव्यादिगळ गति आगुवुदिल्लवेंदु पूर्वपक्ष. पृथिव्यादिगळिंद (अभिमानिदेवतेगळिंद) संपूर्ण तिळियलारनेंदु श्रुति हेळिदे. मत्तु अंतरत्वादिधर्मगळन्नु हेळिद्दरिंद विष्णुवे पृथ्व्यादिगतनागुत्तानें. नियमवादरिंद पृथिव्यादिगळन्नु भगवंतन शरीरवेंदु हेळबहुदु. इप्पु सिद्धांत.

गुरुराजीयम् – तृतीयं पक्षमनूद्य दूषयति – **एतेनेति ।। उक्तन्यायेनेति ।।** अन्तरधिकरणन्यायेनेत्यर्थः ।

चतुर्थं प्रत्याह – **नचेति ।। सावकाशलिङ्गेनेति ।।** आदित्येऽनुक्तत्व-लिङ्गेनेत्यर्थः । अत्र लिङ्गस्य सावकाशत्वं नाम सन्दिग्धत्वं विवक्षितमिति बोध्यम् । अत एवादित्यस्यापीत्यपिशब्दः ।

ननु मास्तु सावकाशलिङ्गेन श्रुत्यादिबाधः । प्रकृते तु श्रुत्यादिकमेव नास्तीत्यत आह – **सन्ति चेति ।।** नन्वादित्येऽनुक्तत्वलिङ्गस्येव ब्रह्मश्रुत्यादेरपि

सावकाशत्वात्कथं ब्रह्मश्रुत्यादिनापि तद्बाध इत्यतस्तस्या निरवकाशत्वमुपपादयति – ब्रह्मशब्दस्य चेति ।।

ಸಾರ

ಅಂತರಧಿಕರಣದಿಂದ ಈ ಅಧಿಕರಣ ಪುನರುಕ್ತವಾಗಿದೆ. ದೇವತಾವಾಚಿಯಾದ ಸಕಲಶಬ್ದಗಳ ಸಮನ್ವಯದಿಂದ ಆದಿತ್ಯಶಬ್ದದ ಸಮನ್ವಯವೂ ಸಹ ಸಿದ್ಧವಾಗುತ್ತದೆಂದು ಹಿಂದೆ ಆಕ್ಷೇಪಿಸಿದ್ದಾಯಿತು. ಈಗ ಅಂತರಧಿಕರಣದಲ್ಲಿ ಚಂದ್ರಾದಿ ದೇವತೆಗಳ ಅಂತರ್ಯಾಮಿಯಾಗಿದ್ದಾನೆಂದು ಹೇಳಿದ್ದರಿಂದಲೇ ಈ ಅಧಿಕರಣದಲ್ಲಿ ಸಮನ್ವಯ ಮಾಡಲ್ಪಡುವ ಸರ್ವಗತತ್ವವೂ ಸಿದ್ಧವಾಗುತ್ತದೆ. ವಸ್ತುತಃ ಅಂತರಧಿಕರಣದಲ್ಲಿ ಆದಿತ್ಯನಲ್ಲಿದ್ದಾನೆಂದು ಹೇಳದಿರಬಹುದು. ಆದಕ್ಕೋಸ್ಕರ ಈ ಅಧಿಕರಣ ಹೊರಡಬೇಕಾಗಿಲ್ಲ. 'ಸರ್ವೇಷು ಭೂತೇಷು' ಎಂಬಲ್ಲಿರುವ ಸರ್ವಶಬ್ದದಿಂದಲೇ ಆದಿತ್ಯನನ್ನೂ ವಿವಕ್ಷಿಸಬಹುದು. ಆದ್ದರಿಂದ 'ಆದಿತ್ಯೇ ಅನುಕ್ತತ್ವ' ಎಂಬ ಲಿಂಗವು ಸಾವಕಾಶವಾಗಿದೆ.

ಮತ್ತು ವಿಷ್ಣು ಸಕಲರ ಅಂತರ್ಯಾಮಿಯಾಗಿದ್ದಾನೆನ್ನಲು ಅನೇಕ ಬಲಿಷ್ಠವಾದ ಶ್ರುತಿಲಿಂಗಗಳು ಆಧಾರವಾಗಿವೆ. ಪ್ರಕೃತ ಈ ಅಧಿಕರಣದಲ್ಲಿ ಕೇವಲ ಒಂದೇ ಆದಿತ್ಯಲಿಂಗದಿಂದ ಸೂರ್ಯನನ್ನೂ ಅಂತರ್ಯಾಮಿ ಎನ್ನಲಾಗದು. ಹೀಗಿರುವಾಗ ಈ ಅಧಿಕರಣ ಹೊರಟಿದ್ದು ವ್ಯರ್ಥವಲ್ಲವೇ?

• • • • •

ಜೀವನೆಂಬ ಪೂರ್ವಪಕ್ಷಕ್ಕೂ ಅವಕಾಶವಿಲ್ಲ

तात्पर्यचन्द्रिका

नच चक्षुर्मयत्वादिना सर्वजीवानां प्राप्तिः, तस्यापि आनन्दमयाधिकरणन्यायेन प्राचुर्यार्थतया, पादान्त्यप्राणाधिकरणन्यायेन शतसंवत्सरत्वादेरिव अन्तर्यामिविषतया वा सम्भवात् । पशुशब्दस्य तद्विशेषच्छाग इव, आदित्यश्रुत्या चक्षुर्मयत्वादिजीवलिङ्गानां तद्विशेषादित्ये पर्यवसानेन सर्वजीवप्रापकाभावाच्च ।

नच अर्भकौकस्त्वलिङ्गादन्यस्य प्राप्तिः, तस्यापि विष्णुधर्मतायाः ''अन्तस्तद्धर्मोपदेशात्'' इत्यत्र ''उपासात्रैविध्यात्'' इत्यत्र च उक्तत्वात् । ''हृद्यपेक्षया'' इत्यादौ वक्ष्यमाणत्वाच्च ।

वक्ष्यमाणसिद्धान्तन्यायाच्छादनेन पूर्वपक्षकरणे च तन्न्यायेनैवैतत्सिद्धान्त-फलसिद्ध्या एतस्य वैयर्थ्यात् । ''सर्वेषु भूतेषु'' इत्यनेन सर्वगतत्वस्यैवोक्ततया अर्भकौकस्त्वाभावाच्च ।

अन्यथा अत्रोक्तः सर्वगतो न विष्णुश्चेत्, पूर्वोक्तोऽपि सर्वगतो न विष्णुः स्यात् इत्याक्षेपायोगात् ।

ಅನುವಾದ - ಚಕ್ಷುರ್ಮಯತ್ವಾದಿಲಿಂಗಗಳಿರುವುದರಿಂದ ಸಕಲಜೀವರು ಸರ್ವಗತರಾಗಿದ್ದಾರೆಂದು ಹೇಳಬಾರದು. ಆನಂದಮಯಾಧಿಕರಣದ ನ್ಯಾಯದಂತೆ ಮಯಟ್‌ಪ್ರತ್ಯಯಕ್ಕೆ ಪ್ರಾಚುರ್ಯ ಎಂದರ್ಥ. ಪೂರ್ಣಜ್ಞಾನವುಳ್ಳವನಾದ್ದರಿಂದ ಭಗವಂತನು ಚಕ್ಷುರ್ಮಯ ಎನಿಸುತ್ತಾನೆ. ಅಥವಾ ಪಾದಾಂತ್ಯಪ್ರಾಣಾಧಿಕರಣದ ನ್ಯಾಯದಂತೆ ಜೀವಾಂತರ್ಯಾಮಿರೂಪದಿಂದ ಭಗವಂತನು ಈ ಶರೀರದಲ್ಲಿರುತ್ತಾನೆ. ಆದ್ದರಿಂದ ಶತಸಂವತ್ಸರತ್ವಾದಿಗಳು ಅಂತರ್ಯಾಮಿವಿವಕ್ಷೆಯಿಂದ ವಿಷ್ಣುವಿನಲ್ಲಿ ಬರುತ್ತವೆಂದು ಹೇಗೆ ಸಮರ್ಥಿಸಿದ್ದಾರೋ, ಅದರಂತೆ ಚಕ್ಷುರ್ಮಯತ್ವಾದಿಗಳನ್ನೂ ಕೂಡ ಅಂತರ್ಯಾಮಿವಿವಕ್ಷೆಯಿಂದ ಕೂಡಿಸಬಹುದು. (ಚಕ್ಷುರ್ಮಯನಾದ ಜೀವನ ಅಂತರ್ಯಾಮಿಯಾದ್ದರಿಂದ ಪರಮಾತ್ಮನು ಚಕ್ಷುರ್ಮಯನೆನಿಸಿದ್ದಾನೆ.)

ವಸ್ತುತಃ ಇಲ್ಲಿ ಸರ್ವಜೀವರು ಸರ್ವಗತರೆಂಬ ಪೂರ್ವಪಕ್ಷವೇ ಬರುವುದಿಲ್ಲ. ಆದಿತ್ಯಶ್ರುತಿಯ ಬಲದಿಂದ ಆದಿತ್ಯನನ್ನು ಪೂರ್ವಪಕ್ಷ ಮಾಡಬಹುದು. ಉದಾಹರಣೆ - 'ಪಶುನಾ ಯಜೇತ' ಎಂಬಲ್ಲಿ ಪಶು ಶಬ್ದದಿಂದ ಯಾವ ಪಶುವನ್ನು ಇಟ್ಟುಕೊಳ್ಳಬೇಕೆಂದು ತಿಳಿಯುವುದಿಲ್ಲ. ಮುಂದಿನ ವಾಕ್ಯವನ್ನು ನೋಡಿದಾಗ ಛಾಗಪಶುವನ್ನು ಪ್ರಶಂಸಿಸಲಾಗಿದೆ. ಅದರ ಬಲದಿಂದ ಪಶುಶಬ್ದಕ್ಕೆ ಮೇಕೆಯೆಂದು ಅರ್ಥೈಸಬೇಕು. ಅದರಂತೆ ಇಲ್ಲಿ ಆದಿತ್ಯಶ್ರುತಿಯಿಂದ ಚಕ್ಷುರ್ಮಯತ್ವಾದಿಲಿಂಗಗಳನ್ನು ಆದಿತ್ಯನೆಂಬ ವಿಶೇಷ ಜೀವನಲ್ಲಿ ಪರ್ಯವಸಾನ ಮಾಡಬೇಕು. ಆದ್ದರಿಂದ ಸಕಲಜೀವಪ್ರಾಪಕವಾದ ಲಿಂಗವಿಲ್ಲದ ಕಾರಣ ಪೂರ್ವಪಕ್ಷವೇ ಹುಟ್ಟುವುದಿಲ್ಲ.

ಅಲ್ಪಸ್ಥಾನಸ್ಥಿತತ್ವವೆಂಬ ಲಿಂಗದಿಂದ ಆದಿತ್ಯಾದಿಜೀವರೇ ಸರ್ವಗತರಾಗುತ್ತಾರೆ. ವಿಷ್ಣುವಲ್ಲವೆಂದು ಶಂಕಿಸಬಾರದು. ಅಲ್ಪಸ್ಥಾನಸ್ಥಿತತ್ವವನ್ನು ವಿಷ್ಣುವಿನ ಧರ್ಮವೆಂದು 'ಅಂತಸ್ತದ್ಧರ್ಮೋಪದೇಶಾತ್' ಎಂಬ ಸೂತ್ರದಲ್ಲಿ ಮತ್ತು 'ಉಪಾಸಾತ್ರೈವಿಧ್ಯಾತ್' ಎಂಬ ಸೂತ್ರದಲ್ಲಿಯೂ ಸಮರ್ಥಿಸಿದ್ದೇವೆ. ಮತ್ತು 'ಹೃದ್ಯಪೇಕ್ಷಯಾ' ಎಂದು ವ್ಯಾಪ್ತನಾದ ನಾರಾಯಣನಿಗೆ ಅಂಗುಷ್ಠಪರಿಮಾಣವನ್ನು ಮುಂದೆ ಸಮರ್ಥಿಸುತ್ತಾರೆ. ಆದ್ದರಿಂದ ಅರ್ಭಕೌಕಸ್ತ್ವಲಿಂಗವನ್ನು ವಿಷ್ಣುವಿನಲ್ಲಿ ಈ ಹಿಂದೆ ಸಮರ್ಥಿಸಿದ್ದಾರೆ. ಮುಂದೆಯೂ ಸಮರ್ಥಿಸುತ್ತಾರೆ.

ಮುಂದೆ ಹೇಳುವ ಸಿದ್ಧಾಂತನ್ಯಾಯವನ್ನು ಮುಚ್ಚಟ್ಟು ಇಲ್ಲಿ ಪೂರ್ವಪಕ್ಷ ಮಾಡಿದರೆ ಆ ಅಧಿಕರಣದ ನ್ಯಾಯದಿಂದಲೇ ಈ ಅಧಿಕರಣದ ಸಿದ್ಧಾಂತನ್ಯಾಯವು ಸಿದ್ಧವಾಗುತ್ತದೆ. ಆದ್ದರಿಂದಲೇ ಈ ಅಧಿಕರಣಕ್ಕೆ ವೈಯರ್ಥ್ಯ ಬರುತ್ತದೆ. ಮತ್ತು 'ಸರ್ವೇಷು ಭೂತೇಷು' ಎಂಬ ವಾಕ್ಯದಿಂದ ಸರ್ವಗತತ್ವವು ಹೇಳಲ್ಪಟ್ಟಿರುವಾಗ ಅರ್ಭಕೌಕಸ್ತ್ವವನ್ನು ಹೇಳಲು ಸಾಧ್ಯವಿಲ್ಲ. ಈ ಸರ್ವಗತನು ಅಲ್ಪಸ್ಥಾನಸ್ಥಿತನಾದ್ದರಿಂದ ಸರ್ವಗತನು ವಿಷ್ಣುವಲ್ಲವೆಂದು ಹೇಳಿದರೆ ಪ್ರಾಣಾಧಿಕರಣದಲ್ಲಿ ಹೇಳಿದ ಐತರೇಯ ಪ್ರಾಣನೂ ವಿಷ್ಣುವಾಗಲಾರ ಎಂದು ಆಕ್ಷೇಪಿಸಲು ಸಾಧ್ಯವಿಲ್ಲ.

प्रकाशः –

एवमादित्यकोटिकपूर्वपक्षमाक्षिप्य जीवकोटिकमप्याक्षिपति – **नचेति** । परमतदूषणप्रस्तावे सुधायामुक्तं ''मनोमयत्वादीनां आनन्दमयाधिकरणन्यायेन सावकाशत्वात्'' इति वाक्यं हृदि कृत्वाऽऽह – **प्राचुर्येति** । पूर्वज्ञानत्वादिरूपार्थ तयेत्यर्थः । चक्षुःकरणकसम्बन्धमेव मयडर्थमाश्रित्याह – **पादान्त्येति** ।

ವಿವರಣೆ - ಇಲ್ಲಿಯ ತನಕ ಆದಿತ್ಯಕೋಟಿಕಪೂರ್ವಪಕ್ಷವನ್ನು ಮಾಡಿದ್ದಾಯಿತು. ಪ್ರಕೃತ ಜೀವಕೋಟಿಕ ಪೂರ್ವಪಕ್ಷವನ್ನು 'ನಚ' ಎಂಬ ಗ್ರಂಥದಿಂದ ಆಕ್ಷೇಪ ಮಾಡುತ್ತಿದ್ದಾರೆ. ನ್ಯಾಯಸುಧೆಯಲ್ಲಿ ಪರಮತವನ್ನು ಸೂಚಿಸುವಾಗ ''ಮನೋಮಯತ್ವಾದೀನಾಂ ಆನಂದಮಯಾಧಿಕರಣನ್ಯಾಯೇನ ಸಾವಕಾಶತ್ವಾತ್'' (ಆನಂದಮಯಾಧಿಕರಣದಿಂದ ಮನೋಮಯತ್ವಾದಿಗಳು ಸಾವಕಾಶಗಳಾಗಿವೆ) ಎಂದು ಹೇಳಿದ್ದಾರೆ. ಈ ವಾಕ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಕೃತ ಗ್ರಂಥಕಾರರು ಪ್ರಾಚುರ್ಯವೆಂದು ಹೇಳುತ್ತಿದ್ದಾರೆ. ಆನಂದಮಯಾಧಿಕರಣದಲ್ಲಿ ಚಕ್ಷುರ್ಮಯಶಬ್ದಕ್ಕೆ ಪೂರ್ಣಜ್ಞಾನವುಳ್ಳವನೆಂಬರ್ಥವನ್ನು ಹೇಳಿದ್ದಾರೆ. ಮಯಟ್‌ಪ್ರತ್ಯಯಕ್ಕೆ ಪ್ರಾಚುರ್ಯವೆಂಬರ್ಥವನ್ನು ಒಪ್ಪದೆ ಚಕ್ಷುರಿಂದ್ರಿಯದ ಸಂಬಂಧವೆಂಬರ್ಥವನ್ನು ಆಶ್ರಯಿಸಿ ಭಗವತ್‌ಪರತ್ವವನ್ನು 'ಪಾದಾಂತ್ಯ' ಎಂಬುದರಿಂದ ಸಮರ್ಥಿಸುತ್ತಿದ್ದಾರೆ.

प्रकाशः – पशुशब्दस्येति । षष्ठे ''पशुचोदनायामनियमोऽविशेषात्'' इत्यन्तिमाधिकरणे ''अग्नीषोमीयं पशुमालभेत'' इत्यत्र किं यः कश्चित्पशुरालब्धव्यः उत च्छाग एवेति संशये, ''छागस्य वपाया मेदसोऽनुब्रूहि'' इति मन्त्रस्य चोदितार्थप्रकाशनार्थतया पारतन्त्र्याच्छिन्नवाक्यतया, ''तेजो वै घृतं'' इति घृतार्थवादवैलक्षण्याच्च मन्त्रगतच्छागशब्दस्य पशुमात्रे यौगिकत्वेन वा पाक्षिकानुवादत्वेन वोपपत्तेः पशुशब्दाविशेषकत्वादालम्भनचोदनायाः सामान्यपर्यवसानसम्भवेन यः कश्चन पशुरिति प्राप्ते, चोदनाप्रतिपन्नस्य सामान्यस्य

प्रतिव्यक्तिसमाप्त्या च्छागेप्यवैकल्याद्दृदिप्राबल्येन योगासम्भवान्नित्याम्नातस्य पाक्षिकत्वायोगाच्च च्छाग एवालब्धव्य इति सिद्धान्तितम् । अत्र यथा पशुशब्दस्य तद्विशेषे छागे पर्यवसानं, तद्वदित्यर्थः ।

ಅಗ್ನೀಷೋಮೀಯ ಪಶುತಾಧಿಕರಣಮ್

ಪಶುಚೋದನಾಯಾ ಅನಿಯಮೋಽವಿಶೇಷಾತ್ (೬-೮-೧೦)[೧]

'ಅಗ್ನೀಷೋಮೀಯಂ ಪಶುಮಾಲಭೇತ' ಈ ವಾಕ್ಯವು ಅಗ್ನಿಷ್ಟೋಮಯಾಗದಲ್ಲಿ ಪಶುವಿನ ಆಲಂಬನವನ್ನು ಹೇಳುತ್ತಿದೆ. ಯಾವುದಾದರೂ ಪಶುವನ್ನು ಆಲಂಬನ ಮಾಡಬಹುದೋ? ಅಥವಾ ಛಾಗ (ಮೇಕೆ) ಪಶುವನ್ನೇ ಆಲಂಬನ ಮಾಡಬೇಕೋ? ಎಂದು ಸಂಶಯ.

ಪೂರ್ವಪಕ್ಷ - 'ಅಗ್ನೀಷೋಮೀಯಂ ಪಶುಮಾಲಭೇತ' ಎಂಬಲ್ಲಿ ಸಾಮಾನ್ಯವಾಗಿ ಪಶುಶಬ್ದವನ್ನು

(೧) ಭಾಟ್ಟಸಙ್ಗ್ರಹಃ –

अथ दशमं छागस्यैवाग्नीषोमीयपशुताधिकरणम् (सूत्राणि ३०-४२)

पशुचोदनायामनियमोऽविशेषात् ॥३०॥

(छागो वा मन्त्रवर्णात् ॥३१॥ न चोदनाविरोधात् ॥३२॥ आर्षेयवदिति चेत् ॥३३॥ न तत्र ह्याचोदितत्वात् ॥३४॥ नियमो वैकार्थ्यं ह्यर्थभेदाद्भेदः पृथक्त्वेनाभिधानात् ॥३५॥ अनियमो वाऽर्थान्तरत्वादन्यत्वं व्यतिरेकशब्दभेदाभ्याम् ॥३६॥ रूपालिङ्गाच्च ॥३७॥ छागे न कर्माख्यारूपलिङ्गाभ्याम् ॥३८ ॥ रूपान्यत्वान्न जातिशब्दः स्यात् ॥३९॥ विकारो नौत्पत्तिकत्वात् ॥४०॥ स नैमित्तिकः पशोर्गुणस्याचोदितत्वात् ॥४१॥ जातेर्वा तत्प्राय-वचनार्थवत्त्वाभ्याम् ॥४२॥)

पूर्वन्यायेनात्र शङ्कनात्सङ्गतिः । ज्योतिष्टोमे ''अग्नीषोमीयं पशुमालभेत'' इति श्रुतः पशुर्यः कश्चिदालभ्यः, उत छाग इति **सन्देहे**, प्रधानविधिवाक्ये विशेषाश्रवणात्पशुसामान्यमेवावगम्यते । तथा च प्रधानक्रतुविरोधाद्गक्षस्य पाक्षिकत्ववदिहापि प्रधानभूतविधिवाक्यविरोधात् ''छागस्य वपायाः'' इति मन्त्रस्य प्रधानाविरोधाय पाक्षिकानुवादत्वसम्भवाद्यः कश्चित्पशुरालब्धव्य इति **प्राप्तम्** । तदुक्तम् **पशुचोदनायामित्यादि** । **व्यक्तोऽर्थः** । न चात्राक्ताधिकरणन्यायः । विधिस्तुत्योरेकवाक्यत्वात्स्तुतितः पूर्वमपर्यवसितोऽञ्जन-विधिरर्थवादगतघृतविषय एव पर्यवस्यति । मन्त्रपशुचोदनयोस्तु वाक्यभेदाद्विधिवाक्यं पशुसामान्य एव पर्यवस्यतीति वैषम्यमादित्याहुः । **सिद्धान्तस्तु**, पशुविधावगतसामान्यस्य प्रतिव्यक्ति समाप्यत्वेन छागेप्यविकलत्वान्मन्त्रस्य प्रकरणपाठेन नित्यत्वावगमान्मन्त्र-वर्णोक्तछाग एव पशुरालभ्यत इति । **तदाह** सूत्रकारः । **छागो वा मन्त्रवर्णादिति** ।

इति दशमं छागस्यैवाग्नीषोमीयपशुतादिकरणम् (सूत्राणि ३०-४२)

ಹೇಳಿದ್ದರಿಂದ ಛಾಗಪಶುವನ್ನೇ ತೆಗೆದುಕೊಳ್ಳಬೇಕಿಲ್ಲ. ಯಾವುದಾದರೂ ಪಶುವನ್ನು ಆಲಂಬನ ಮಾಡಬಹುದು. 'ಛಾಗಸ್ಯ ವಪಾಯಾಃ ಮೇದಸೋऽನುಬ್ರೂಹಿ' ಈ ಮಂತ್ರದಲ್ಲಿ ಛಾಗಪಶುವನ್ನು ಹೇಳಿದ್ದರಿಂದ 'ಅಗ್ನೀಷೋಮೀಯಂ' ಎಂಬಲ್ಲಿರುವ ಪಶುಶಬ್ದದಿಂದ ಛಾಗಪಶುವನ್ನೇ ತೆಗೆದುಕೊಳ್ಳಬೇಕಲ್ಲವೇ? ಉದಾಹರಣೆ - ನೆನೆದಿರುವ ಸಕ್ಕರೆಯನ್ನು ತೆಗೆದುಕೊಳ್ಳಬೇಕು ಎಂದು ಹೇಳಿದಾಗ ಸಕ್ಕರೆಯು ಯಾವುದರಲ್ಲಿ ನೆನೆದಿರಬೇಕು ಎಂಬ ಪ್ರಶ್ನೆ ಬರುತ್ತದೆ. ಆವಾಗ 'ತೇಜೋ ವೈ ಘೃತಮ್' ಎಂಬ ಮುಂದಿನ ಅರ್ಥವಾದವಾಕ್ಯದಿಂದ ತುಪ್ಪದಲ್ಲಿ ನೆನೆದಿರಬೇಕೆಂದು ತಿಳಿಯುತ್ತದೆ. ಅದರಂತೆ 'ಛಾಗಸ್ಯ ವಪಾಯಾಃ' ಎಂಬ ಮಂತ್ರದಿಂದ ಪಶುಶಬ್ದಕ್ಕೆ ಛಾಗಪಶುವೆಂದು ಅರ್ಥೈಸಬಹುದು. ಆದ್ದರಿಂದ ಯಾವುದಾದರೂ ಪಶುವನ್ನು ತೆಗೆದುಕೊಳ್ಳಲು ಹೇಗೆ ಸಾಧ್ಯ ? ಎಂದು ಪ್ರಶ್ನಿಸಬಾರದು. 'ತೇಜೋ ವೈ ಘೃತಮ್' ಎಂಬ ಅರ್ಥವಾದಮಂತ್ರಕ್ಕೂ 'ಛಾಗಸ್ಯ ವಪಾಯಾಃ' ಎಂಬ ಮಂತ್ರಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಮಂತ್ರವು ಚೋದಿತವಾದ ಅರ್ಥವನ್ನಷ್ಟೇ ಪ್ರಕಾಶನ ಮಾಡುತ್ತದೆ. 'ಪಶುಮಾಲಭೇತ' ಎಂಬ ಮಂತ್ರವು ಸಾಮಾನ್ಯವಾಗಿ ಪಶುವೆಂದಷ್ಟೇ ಹೇಳಿದ್ದರಿಂದ ಮೊದಲು ಛಾಗವು ವಿಧಾನ ಮಾಡಲ್ಪಡದ ಕಾರಣ 'ಛಾಗಸ್ಯ ವಪಾಯಾಃ' ಎಂಬ ಮಂತ್ರಕ್ಕೆ ಚೋದಿತಾರ್ಥವನ್ನು ಪ್ರಕಾಶನ ಮಾಡುವ ಸಾಮರ್ಥ್ಯವಿಲ್ಲ. ಮತ್ತು 'ಅಗ್ನೀಷೋಮೀಯಂ ಪಶುಮಾಲಭೇತ' ಎಂಬುದು ಬ್ರಾಹ್ಮಣವಾಕ್ಯ. 'ಛಾಗಸ್ಯ ವಪಾಯಾಃ' ಎಂಬುದು ಮಂತ್ರವಾಕ್ಯ. ಹೀಗೆ ಎರಡೂ ಭಿನ್ನಪ್ರಕರಣದಲ್ಲಿರುವ ವಾಕ್ಯಗಳಾದ್ದರಿಂದ ಪಶುಶಬ್ದದಿಂದ ಛಾಗಪಶುವನ್ನು ವಿವಕ್ಷಿಸಲಾಗದು. ಆದರೆ 'ಅತ್ರಾಃ ಶರ್ಕರಾಃ' ಎಂಬ ವಾಕ್ಯ ಮತ್ತು 'ತೇಜೋ ವೈ ಘೃತಮ್' ಎಂಬ ವಾಕ್ಯ ಒಂದೇ ಪ್ರಕರಣದಲ್ಲಿರುವುದರಿಂದ ಏಕವಾಕ್ಯತ್ವವನ್ನು ಹೊಂದಿವೆ. ಹೀಗೆ ನೀವು ನೀಡಿದ ದೃಷ್ಟಾಂತವು ವಿಷಮವಾಗಿದೆ. ಅಥವಾ ಮಂತ್ರದಲ್ಲಿರುವ ಛಾಗಶಬ್ದವು ಪಶುಸಾಮಾನ್ಯದಲ್ಲಿ ಯೌಗಿಕವಾಗಿದೆ. ಅಥವಾ ಎಲ್ಲಾ ಪಶುಗಳ ಆಲಂಬನವು ಪ್ರಾಪ್ತವಾದಾಗ ಛಾಗಪಶುವಿನ ಆಲಂಬನವು ಪ್ರಾಪ್ತವಾಗಿದೆ. ಪಾಕ್ಷಿಕವಾಗಿ ಪ್ರಾಪ್ತವಾದ ಛಾಗಪಶುವನ್ನು 'ಛಾಗಸ್ಯ ವಪಾಯಾಃ' ಎಂಬ ಮಂತ್ರವು ಅನುವಾದ ಮಾಡುತ್ತದೆ. ಆದ್ದರಿಂದ 'ಪಶುಮಾಲಭೇತ' ಎಂಬಲ್ಲಿರುವ ಪಶುಶಬ್ದದ ಅರ್ಥವಿವರಣೆಗಾಗಿ 'ಛಾಗಸ್ಯ' ಎಂಬ ಮಂತ್ರವು ಹೊರಟಿಲ್ಲ. 'ಅಗ್ನೀಷೋಮೀಯಂ ಪಶುಮಾಲಭೇತ' ಎಂಬ ಚೋದನವಾಕ್ಯವು ಯಾವುದಾದರೊಂದು ಪಶುವಿನ ಆಲಂಬನವನ್ನು ಹೇಳುತ್ತಿದೆಂಬರ್ಥವು ಸಿದ್ಧವಾಗುತ್ತದೆ.

ಸಿದ್ಧಾಂತ - 'ಅಗ್ನೀಷೋಮೀಯಂ ಪಶುಮಾಲಭೇತ' ಎಂಬ ಚೋದನಾವಾಕ್ಯದಲ್ಲಿರುವ 'ಪಶು' ಎಂಬ ಸಾಮಾನ್ಯಶಬ್ದವನ್ನು ಯಾವುದೇ ವಿಶೇಷಪ್ರಾಣಿಯಲ್ಲಿ ಪರ್ಯವಸಾನ ಮಾಡಬಹುದು. ಆವಾಗ ಛಾಗಪಶುವು ಚೋದಿತವೇ ಆಯಿತು. ಒಂದು ವೇಳೆ ಅಶ್ವಾದಿಶಬ್ದಗಳನ್ನು ಹೇಳಿದಲ್ಲಿ ಛಾಗಪಶುವು ಅಚೋದಿತವೆಂದು ಹೇಳಬಹುದಿತ್ತು. ಹೀಗೆ ಚೋದಿತವಾದ ಛಾಗವೆಂಬರ್ಥವನ್ನು ಪ್ರಕಾಶನ ಮಾಡುವ ಸಾಮರ್ಥ್ಯ 'ಛಾಗಸ್ಯ' ಎಂಬ ಮಂತ್ರಕ್ಕೆ ಇದ್ದೇ ಇರುತ್ತದೆ. ಇನ್ನು 'ಛಾಗಸ್ಯ' ಎಂಬ ಮಂತ್ರದಲ್ಲಿರುವ ಛಾಗಶಬ್ದಕ್ಕೆ ಪಶುಸಾಮಾನ್ಯವೆಂಬ ಯೌಗಿಕಾರ್ಥವನ್ನು ಹೇಳಬಹುದೆಂಬ ಪೂರ್ವಪಕ್ಷಿಗಳ ವಾದವು ಸರಿಯಿಲ್ಲ. ಛಾಗಶಬ್ದದಿಂದ ಮೇಕೆಯು ಮೊದಲು ಬುದ್ಧಿಯಲ್ಲಿ ಬರುವುದರಿಂದ ಇದನ್ನು ಬಿಟ್ಟು ಪಶುಸಾಮಾನ್ಯವೆಂಬರ್ಥವನ್ನು ಹೇಳುವುದರಲ್ಲಿ ಹುರುಳಿಲ್ಲ. ಮತ್ತು ಪಾಕ್ಷಿಕ ಅನುವಾದವೆನ್ನಲು ವಿಕಲ್ಪಸೂಚಕಪದಗಳು 'ಛಾಗಸ್ಯ' ಎಂಬ ಮಂತ್ರದಲ್ಲಿ

ಕಾಣಿಸುತ್ತಿಲ್ಲ. ಆದ್ದರಿಂದ ಚೋದಿತಾರ್ಥಪ್ರಕಾಶಿತವಾದ 'ಛಾಗಸ್ಯ ವಪಾಯಾಃ' ಎಂಬ ಮಂತ್ರದ ಬಲದಿಂದ 'ಪಶುಮಾಲಭೇತ' ಎಂಬ ವಾಕ್ಯದಲ್ಲಿರುವ ಪಶುಶಬ್ದಕ್ಕೆ ಛಾಗಪಶುವೆಂದೇ ಅರ್ಥೈಸಬೇಕು.

ಈ ಮೀಮಾಂಸಾಧಿಕರಣದಲ್ಲಿ ಪಶುಶಬ್ದವು ಛಾಗಪಶುವನ್ನೇ ಹೇಗೆ ಹೇಳುತ್ತದೋ, ಅದರಂತೆ ಚಕ್ಷುರ್ಮಯತ್ವಾದಿಲಿಂಗಗಳು ಜೀವಸಾಮಾನ್ಯಪ್ರಾಪಕವಾಗಿದ್ದರೂ ಆದಿತ್ಯಶ್ರುತಿಯ ಬಲದಿಂದ ಆದಿತ್ಯನೆಂಬ ಜೀವವಿಶೇಷವನ್ನು ಹೇಳಬಹುದು.

प्रकाशः – टीकोक्तं प्रापकान्तरमपि पराचष्टे – नचेति । अन्तरिति । अन्तस्स्थत्वस्यापि ''निहितं गुहासु'' इति गुहास्थत्वरूपतयाऽर्भकौकस्त्वरूपत्वादिति भावः । उपासेति । ''सीमानं विदार्यैतया द्वारा प्रापद्यत'' इति हृदयस्थत्वोक्तेरिति भावः ।

ಇಲ್ಲಿಯ ತನಕ ಆದಿತ್ಯಶ್ರುತಿ, ಆದಿತ್ಯಶ್ರುತಿಬಾಹುಲ್ಯ, ಸೌರಮಂತ್ರೋದಾಹರಣೆ, ಚಕ್ಷುರ್ಮಯತ್ವಾದಿಗಳು, ಇವುಗಳಲ್ಲಿ ಯಾವುದೊಂದೂ ಸಹ ಪೂರ್ವಪಕ್ಷಪ್ರಾಪಕವಲ್ಲವೆಂದು ನಿರಾಕರಿಸಿದರು. ಈಗ ಅರ್ಭಕೌಕಸ್ತ್ವ ಎಂಬ ಧರ್ಮವೂ ಸಹ ಪೂರ್ವಪಕ್ಷಪ್ರಾಪವಲ್ಲವೆಂದು 'ನಚ' ಎಂಬ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ. ಅಂತಸ್ಥತ್ವಾಧಿಕರಣದಲ್ಲಿ 'ನಿಹಿತಮ್ ಗುಹಾಸು' ಎಂಬ ಅಂತಸ್ಥತ್ವವನ್ನು ಹೇಳಿದ್ದಾರೆ. ಅಂದರೆ ಸರ್ವಭೂತಗುಹಾಸ್ಥತ್ವ ಎಂದು ಅರ್ಥ. ಇದೇ ಅರ್ಭಕೌಕಸ್ತ್ವವೆನಿಸಿದೆ. ಆದ್ದರಿಂದ ಅರ್ಭಕೌಕಸ್ತ್ವಲಿಂಗವನ್ನು ಅಂತಸ್ಥತ್ವಾಧಿಕರಣದಲ್ಲಿ ನಿರಾಕರಿಸಿದ ಮೇಲೆ ಪುನಃ ಇಲ್ಲಿ ಅದೇ ಧರ್ಮದಿಂದ ಪೂರ್ವಪಕ್ಷ ಮಾಡಲು ಸಾಧ್ಯವಿಲ್ಲ. ಈ ವಿಷಯವನ್ನು 'ಅಂತಸ್ಥದ್ಧರ್ಮ' ಎಂಬ ಶಬ್ದದಿಂದ ಹೇಳಿದ್ದಾರೆ. 'ಉಪಾಸಾತ್ಯೈವಿಧ್ಯಾತ್' ಎಂಬಲ್ಲಿಯೂ ಅರ್ಭಕೌಕಸ್ತ್ವವನ್ನು ಹೇಳಿದ್ದಾರೆ. 'ಸೀಮಾನಾಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತೇ' ಎಂಬಲ್ಲಿ ಅಂತರುಪಾಸನಾ ಬಹಿರುಪಾಸನಾ ಮತ್ತು ವ್ಯಾಪ್ತ್ಯುಪಾಸನಾವನ್ನು ಹೇಳಲಾಗಿದೆ. ಇವುಗಳಲ್ಲಿ ಅಂತರುಪಾಸನಾವನ್ನು ಹೇಳಬೇಕಾದರೆ ಹೃದಯಸ್ಥತ್ವವನ್ನು ಹೇಳಿದ್ದಾರೆ. ಇದರಿಂದ ಅರ್ಭಕೌಕಸ್ತ್ವವನ್ನು ಹೇಳಿದಂತಾಗುತ್ತದೆ.

प्रकाशः – एतेन 'उपासात्रैविध्यादिति च' इति न्यायविवरणटीका-वाक्यमन्यथाऽपि व्याख्यातं ध्येयम् । हृदीति । तृतीयपादे ''हृद्यपेक्षया तु मनुष्याधिकारत्वात्'' इति गुणसूत्रेण ''अङ्गुष्ठमात्रः पुरुषो मध्य आत्मनि तिष्ठति'' इत्यत्राङ्गुष्ठमात्रपरिमितहृदयावकाशस्थत्वोक्तेरिति भावः । ''शब्दादिभ्योऽन्तः प्रतिष्ठानात्'' इत्यादिरादिपदार्थः । ननु वक्ष्यमाणाज्ञानेन पूर्वपक्षोऽस्त्वित्यत आह – वक्ष्यमाणेति । 'आच्छादनेन' अनाविष्करणेन, तदाविष्कृत्य तद्वैलक्षण्यादिक-मनुक्त्वेत्यर्थः ।

ಯದ್ವಾ – 'आच्छादनेन' अनुपमर्देनेत्यर्थः ।

ಹೀಗೆ ಹೇಳಿದ್ದರಿಂದ 'ಉಪಾಸಾತ್ರೈವಿಧ್ಯಾತ್' ಎಂಬ ನ್ಯಾಯವಿವರಣ ಟೀಕೆಗೆ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನಿಸಿದಂತಾಯಿತು. ಈಗ ಹೇಳಿದಂತೆ ಅರ್ಭಕೌಕಸ್ತ್ವವನ್ನು ಕೂಡಿಸಲು ಉಪಾಸಾತ್ರೈವಿಧ್ಯವು ಉಪಯೋಗವಾಗಿದೆ. ಮತ್ತು ಹಿಂದೆ ಹೇಳಿದಂತೆ ಚಕ್ಷುರ್ಮಯತ್ವಾದಿಜೀವಲಿಂಗಗಳನ್ನು ಪರಮಾತ್ಮನಲ್ಲಿ ಕೂಡಿಸಲು ಉಪಾಸಾತ್ರೈವಿಧ್ಯವು ಉಪಯೋಗವಾಗಿದೆ.

'ಹೃದ್ಯಪೇಕ್ಷಯಾ' ಎಂಬ ವಾಕ್ಯಕ್ಕೆ ಹೀಗೆ ಅರ್ಥ - ತೃತೀಯಪಾದದಲ್ಲಿ ಬರುವ ವಾಮನಾಧಿಕರಣದ ಗುಣಸೂತ್ರ 'ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್' ಈ ಸೂತ್ರದಲ್ಲಿ 'ಅಂಗುಷ್ಠಮಾತ್ರಃ ಪುರುಷೋ ಮಧ್ಯೇ ಆತ್ಮನಿ ತಿಷ್ಠತಿ' ಎಂಬಲ್ಲಿ ಅಂಗುಷ್ಠಮಾತ್ರಪರಿಮಿತವಾದ ಹೃದಯಾಕಾಶಸ್ಥತ್ವವನ್ನು ಹೇಳಲಾಗಿದೆ. 'ಇತ್ಯಾದೌ' ಎಂಬಲ್ಲಿರುವ ಆದಿಪದದಿಂದ 'ಶಬ್ದಾದಿಭ್ಯೋऽಂತಃ ಪ್ರತಿಷ್ಠಾನಾತ್' ಎಂಬ ಸೂತ್ರವನ್ನು ತೆಗೆದುಕೊಳ್ಳಬೇಕು. ಈ ಸೂತ್ರದಲ್ಲಿ 'ಅಂತಃಪ್ರತಿಷ್ಠಾನ' ಶಬ್ದದಿಂದ ಹೃದಯಾಕಾಶಸ್ಥತ್ವವನ್ನು ಆಶಂಕಿಸಿ ಉತ್ತರ ನೀಡಿದ್ದಾರೆ.

ಮುಂದೆ ಹೇಳುವ ಹೃದಯಕಾಶಸ್ಥಿತತ್ವವು ಮೊದಲು ತಿಳಿಯದ ಕಾರಣ ಈ ಅಧಿಕರಣದ ಪೂರ್ವಪಕ್ಷವು ಹೊರಡಬಹುದಲ್ಲವೇ? ಎಂಬ ಪ್ರಶ್ನೆಗೆ 'ವಕ್ಷ್ಯಮಾಣನ್ಯಾಯ' ಇತ್ಯಾದಿ ಗ್ರಂಥದಿಂದ ಉತ್ತರಿಸಿದ್ದಾರೆ. 'ಆಚ್ಛಾದನೇನ' ಎಂಬ ಪದಕ್ಕೆ 'ಅವಿಷ್ಕಾರ ಮಾಡದೇ' ಎಂದರ್ಥ. ಅಂದರೆ ಹೃದ್ಯಪೇಕ್ಷಗಳನ್ನು ತೋರಿಸಿ ಅದರಿಂದ ವೈಷಮ್ಯವನ್ನು ತೋರಿಸದೆ ಮಾಡುವ ಪೂರ್ವಪಕ್ಷವೆಂದರ್ಥ. ಅಥವಾ ಮುಂದೆ ಹೇಳುವ ಪೂರ್ವಪಕ್ಷವನ್ನು ನಿರಾಕರಣ ಮಾಡದೆ ಎಂದೂ ಅರ್ಥೈಸಬಹುದು.

ಪ್ರಕಾಶಃ – अर्भकौकस्त्वमुपेत्य न तत् पूर्वपक्षप्रापकमित्युक्तं, इदानीं तदेव नास्तीत्याह – सर्वेष्विति । अन्ययेति । भाष्ये ''स इदं ब्रह्म ततममपश्यत्'' इति पूर्वोक्तसर्वगतत्वमन्यस्येत्याक्षिप्तम् । तन्न स्यात्, अर्भकौकस्त्वस्यान्यगतत्वे प्रागुक्तसर्वगतत्वस्य विष्णुधर्मत्वाविरोधादित्यर्थः ।

ಇಲ್ಲಿಯ ತನಕ ಅರ್ಭಕೌಕಸ್ತ್ವವನ್ನು ಅಂಗೀಕರಿಸಿ ಪೂರ್ವಪಕ್ಷಪ್ರಾಪಕ ಅಲ್ಲವೆಂದು ತೋರಿಸಿದ್ದಾಯಿತು. ಈಗ ಅರ್ಭಕೌಕಸ್ತ್ವವು ಇಲ್ಲಿ ಇಲ್ಲವೇ ಇಲ್ಲ ಎಂದು 'ಸರ್ವೇಷು' ಎಂಬ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ. 'ಅನ್ಯಥಾ' ಎಂಬ ಗ್ರಂಥಕ್ಕೆ ಹೀಗರ್ಥ - 'स इदम् ब्रह्म ततमपश्यत्' ಎಂದು ಭಾಷ್ಯದಲ್ಲಿ ಪ್ರಾಣಿನಿಗೆ ಹೇಳಿದ ಸರ್ವಗತತ್ವವು ವಿಷ್ಣುವಿನಲ್ಲಿಯೂ ಇಲ್ಲವೆಂದು ಆಕ್ಷೇಪಿಸಿದ್ದಾರೆ. ಇದು ತಪ್ಪಾದೀತು. ಇಲ್ಲಿ ಅರ್ಭಕೌಕಸ್ತ್ವವು ಅನ್ಯಗತವಾದರೆ ಹಿಂದೆ ಹೇಳಿದ ಸರ್ವಗತತ್ವವು ವಿಷ್ಣು ಧರ್ಮವೆನಿಸಲು ವಿರೋಧವಿಲ್ಲ.

ಗುರುರಾಜೀಯಮ್ – नच चक्षुर्मयत्वादिनेति ।। नन्वानन्दमयोक्तस्य कोशेवान्यादिति प्राचुर्यार्थे हेतुत्वपदेशस्य तत्प्रायपाठस्य चात्राभावेन

तन्यायाविषयत्वात् कथं तन्यायेन प्राचुर्यार्थतया चक्षुर्मयत्वादेर्ब्रह्मणि सावकाशत्वमित्यरुच्याह – पादान्तयेति ।। अन्ययेति ।। सर्वेषु भूतेष्वित्यत्राल्प-स्यानस्थितत्वरूपार्भकौकस्त्वोक्तवित्यर्थः ।



ಆದಿತ್ಯನೇ ಸರ್ವಗತನೆಂಬ ಪೂರ್ವಪಕ್ಷ ಹುಟ್ಟಲು ಹೇಗೆ ಸಾಧ್ಯವಿಲ್ಲವೋ? ಆದರಂತೆ ಜೀವನು ಸರ್ವಗತನೆಂಬ ಪೂರ್ವಪಕ್ಷವೂ ಹುಟ್ಟುವುದಿಲ್ಲ. ಆನಂದಮಯಾಧಿಕರಣದ ನ್ಯಾಯದಂತೆ ವಿಶೇಷಜ್ಞಾನ ಹೊಂದಿರುವ ಕಾರಣ ಭಗವಂತನೇ ಚಕ್ಷುರ್ಮಯನಾಗುತ್ತಾನೆ. ಅಥವಾ ಆದಿತ್ಯಶ್ರುತಿಯ ಬಲದಿಂದ ಚಕ್ಷುರ್ಮಯತ್ವಾದಿಲಿಂಗಗಳನ್ನು ಆದಿತ್ಯಪರವೆನ್ನಬಹುದು. ಹೀಗೆ ಜೀವಪ್ರಾಪಕವಾದ ಲಿಂಗವಿಲ್ಲದ ಕಾರಣ ಪೂರ್ವಪಕ್ಷ ಹುಟ್ಟುವುದಿಲ್ಲ. ಈ ಕಾರಣದಿಂದಲೂ ಈ ಅಧಿಕರಣಕ್ಕೆ ಸಾರ್ಥಕ್ಯವಿಲ್ಲ.

• • • • •

ಪೂರ್ವಪಕ್ಷ ಹುಟ್ಟುವುದರಿಂದ ಅಧಿಕರಣವು ಆರಂಭಣೀಯ

ತಾತ್ಪರ್ಯಚನ್ದ್ರಿಕಾ

ಮೈವಮ್, ''ಸಂವತ್ಸರ ಏವ ಪ್ರಧ್ವಂಸಯನ್ ತಸ್ಯೈತಸ್ಯಾಸಾವಾದಿತ್ಯೋ ರಸಃ'' ಇತಿ ಸಂವತ್ಸರಾಧಿಪತಿತ್ವರೂಪಸಂವತ್ಸರಸಾರತ್ವಲಿಙ್ಗಾತ್,

''ಯಶ್ಚಾಸಾವಾದಿತ್ಯಃ'' ಇತಿ ಪ್ರಸಿದ್ಧಾರ್ಥಯಚ್ಛಬ್ದೋಪಬನ್ಧಾತ್,

''ತಸ್ಮಾತ್ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ'' ಇತಿ ಸರ್ವಪುರುಷಾಭಿಮುಖ್ಯಲಿಙ್ಗಾಚ್ಚಾದಿತ್ಯ ಶಬ್ದಸ್ಯ ಪ್ರಸಿದ್ಧಾದಿತ್ಯಪರತ್ವಾತ್ ।

ಅತ ಏವ ಭಾಷ್ಯಟೀಕಯೋರಾದಿತ್ಯಶಬ್ದಸ್ಯ ಪ್ರಸಿದ್ಧಪರತ್ವಂ ಲಿಙ್ಗಾಧೀನಮಿತಿ ದರ್ಶಯಿತುಂ ''ತಸ್ಯೈತಸ್ಯಾಸಾವಾದಿತ್ಯೋ ರಸಃ'' ಇತ್ಯಾದಿಲಿಙ್ಗಪ್ರತಿಪಾದಕಾಂಶೋऽಪ್ಯುಪಾತ್ತಃ ।

ಉಕ್ತಂ ಚಾನುವ್ಯಾಖ್ಯಾನೇ –

ಪುನಶ್ಚ ಪ್ರಾಪಕಾದ್ಧೇತೋಸ್ತತ್ರಾಧಿಕರಣಾನ್ತರಮ್ ।

ಇತಿ ।

न चैवं सत्यावश्यकत्वाल्लिङ्गैरेव पूर्वपक्षः, लिङ्गसाहचर्यादेव च सर्वगतत्वस्यान्यत्रप्रसिद्धत्वं चोच्यताम्, किं तदुपजीविश्रुत्युपन्यासेनेति वाच्यम्, उक्तलिङ्गानामादित्यविशेषणतयैव प्रतीत्य सर्वगतविशेषणत्वाप्रतीतेः साक्षात्तैः पूर्वपक्षाद्यसम्भवात् ।

तदेतदभिप्रेत्योक्तं न्यायविवरणे – ''बहवो ह्यत्रादित्यशब्दाः क्षित्यादिषूक्त्वाऽऽदित्येऽनुक्तिरित्यादिलिङ्गञ्च'' इति ।

ಅನುವಾದ - ಇದು ತಪ್ಪು. ''ಸಂವತ್ಸರ ಏವ ಪ್ರಧ್ವಂಸಯನ್ ತಸ್ಸೈತಸ್ಯಾಸಾವಾದಿತ್ಯೋ ರಸಃ'' ಎಂಬಲ್ಲಿ 'ಸಂವತ್ಸರಾಧಿಪತಿತ್ವ' ಎಂಬ ಸಂವತ್ಸರಸಾರತ್ವಲಿಂಗವು ಕೇಳಿಸುತ್ತಿದೆ. ''ಯಶ್ಚಾಸಾವಾದಿತ್ಯಃ'' ಎಂಬಲ್ಲಿ ಪ್ರಸಿದ್ಧಾರ್ಥವನ್ನು ತಿಳಿಸುವ 'ಯತ್' ಶಬ್ದವು ಕೇಳಿಸುತ್ತಿದೆ. ''ತಸ್ಮಾತ್ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ'' ಎಂಬಲ್ಲಿ ಪ್ರತಿಯೊಬ್ಬ ಪುರುಷರ ಅಭಿಮುಖ್ಯವೆಂಬ ಲಿಂಗವು ಕೇಳಿಸುತ್ತಿದೆ. ಆದ್ದರಿಂದ ಶ್ರುತಿಯಲ್ಲಿರುವ ಆದಿತ್ಯ ಶಬ್ದವು ಪ್ರಸಿದ್ಧನಾದ ಆದಿತ್ಯನನ್ನೇ ಪ್ರತಿಪಾದಿಸುತ್ತದೆ. ಆದ್ದರಿಂದಲೇ ಭಾಷ್ಯ ಹಾಗೂ ಟೀಕೆಗಳಲ್ಲಿ ಆದಿತ್ಯಶಬ್ದಕ್ಕೆ ಪ್ರಸಿದ್ಧಪರತ್ವವನ್ನೇ ಹೇಳಬೇಕು. ಈ ಪ್ರಸಿದ್ಧಪರತ್ವವು ಲಿಂಗಾಧೀನವಾಗಿದೆ ಎಂಬುದನ್ನು ತೋರಿಸುವುದಕ್ಕಾಗಿಯೇ ''ತಸ್ಸೈತಸ್ಯಾಸಾವಾದಿತ್ಯೋ ರಸಃ'' ಇತ್ಯಾದಿಯಾದ ಲಿಂಗಪ್ರತಿಪಾದಕ ಅಂಶವನ್ನೂ ಸಹ ಉಲ್ಲೇಖಿಸಿದ್ದಾರೆ. ಇದನ್ನೇ ಅನುವ್ಯಾಖ್ಯಾನದಲ್ಲಿ ''ಪುನಶ್ಚ ಪ್ರಾಪಕಾದ್ಧೇತೋಸ್ತತ್ರಾಧಿಕರಣಾಂತರಂ'' (ಲಿಂಗಬಾಹುಲ್ಯವಿರುವ ಪ್ರಯುಕ್ತ ಆದಿತ್ಯ ಶಬ್ದವು ಪ್ರಸಿದ್ಧನಾದ ಸೂರ್ಯನನ್ನೇ ಹೇಳುತ್ತದೆಂಬ ಆಕ್ಷೇಪ ಪರಿಹಾರಕ್ಕಾಗಿ ಮತ್ತೊಂದು ಅಧಿಕರಣವು ಹೊರಡುತ್ತಿದೆ.) ಎಂಬುದಾಗಿ ಹೇಳಿದ್ದಾರೆ.

ಆದಿತ್ಯ ಶ್ರುತಿಯನ್ನು ಪುಷ್ಟೀಕರಿಸುವುದಕ್ಕಾಗಿ ಲಿಂಗವನ್ನು ಆಶ್ರಯಿಸುತ್ತಿದ್ದೀರಿ. ಹಾಗಾದರೆ ಇಂತಹ ಲಿಂಗಗಳಿಂದಲೇ ಪೂರ್ವಪಕ್ಷವನ್ನು ನೇರವಾಗಿ ಮಾಡಬಹುದು. ಮತ್ತು ಲಿಂಗಸಾಹಚರ್ಯದಿಂದಲೇ ಸರ್ವಗತತ್ವಕ್ಕೆ ಅನ್ಯತ್ರಪ್ರಸಿದ್ಧತ್ವವನ್ನೂ ಸಹ ಹೇಳಬಹುದಿತ್ತು. ಹೊರತಾಗಿ ಲಿಂಗವನ್ನು ಉಪಜೀವಿಸಿದ ಶ್ರುತಿಯನ್ನು ಏಕೆ ಉಪನ್ಯಾಸ ಮಾಡಬೇಕು?

ಹೀಗೆ ಶಂಕಿಸಬಾರದು. ಏಕೆಂದರೆ ಇದುವರೆಗೂ ನಿರೂಪಿಸಿದ ಲಿಂಗಗಳೆಲ್ಲವೂ ಆದಿತ್ಯನಲ್ಲೇ ವಿಶೇಷಣವಾಗಿ ಕೇಳಿಸುತ್ತಿವೆ; ಹೊರತು ಸರ್ವಗತನಲ್ಲಿ ವಿಶೇಷಣವಾಗಿ ಕಾಣಿಸುತ್ತಿಲ್ಲ. ಆದ್ದರಿಂದ ನೇರವಾಗಿ ಲಿಂಗಗಳಿಂದಲೇ ಪೂರ್ವಪಕ್ಷ ಮಾಡಲು ಸಾಧ್ಯವಿಲ್ಲ.

ಈ ಅಭಿಪ್ರಾಯದಿಂದಲೇ ನ್ಯಾಯವಿವರಣೆಯಲ್ಲಿ 'ಬಹವೋ ಹ್ಯತ್ರಾದಿತ್ಯಶಬ್ದಾಃ । ಕ್ಷಿತ್ಯಾದಿಷೂಕ್ತ್ವಾऽऽದಿತ್ಯೇऽನುಕ್ತಿರಿತ್ಯಾದಿಲಿಂಗಂಚ'' (ಶ್ರುತಿಯಲ್ಲಿ ಅನೇಕ ಆದಿತ್ಯ ಶಬ್ದಗಳಿಗವೆ. ಮತ್ತು ಕ್ಷಿತ್ಯಾದಿಗಳಲ್ಲಿ ಹೇಳಿ ಆದಿತ್ಯನಲ್ಲಿ ಹೇಳಲ್ಪಡದಿರುವಿಕೆ ಇತ್ಯಾದಿ ಲಿಂಗಗಳೂ ಸಹ ಕೇಳಿಸುತ್ತಿವೆ.)

ಪ್ರಕಾಶಃ –

ಏವಮುಕ್ತರೀತ್ಯಾ ಆದಿತ್ಯಶ್ರುತೇಸ್ಸಾವಕಾಶತ್ವೇऽಪಿ ''ಜ್ಯೋತಿಃ'' ಇತ್ಯತ್ರ ನಿರವಕಾಶ-ಪ್ರಕರಣೇನ ಜ್ಯೋತಿಶ್ಶ್ರುತೇರಿವ ನಿರವಕಾಶಾದಿತ್ಯಲಿಙ್ಗವಶೇನಾದಿತ್ಯಶ್ರುತೇ-ರ್ನಿರವಕಾಶತ್ವೇನ ವಾ,

ಪೂರ್ವಂ ವಿಷ್ಣೌ ಸಮನ್ವಯೇऽಪಿ ಮುಖ್ಯತ್ವಸ್ಯಾನುಕ್ತ್ಯಾ ಸಾವಕಾಶತ್ವಸ್ಯೈವಾಭಾವೇನ ಸ್ವತೋ ನಿರವಕಾಶತ್ವೇನ ವಾ,

ತಚ್ಛಾಯಾವಿಷಯತ್ವೇನ ತತ್ರಾಸ್ಯಾಂ ಸಮನ್ವಯಸ್ಯೈವಾಭಾವೇನ ವಾ ತ್ರೇಧಾ ಶ್ರುತೇರ್ನಿರವಕಾಶತ್ವೇನ ತಯಾ ಪೂರ್ವಪಕ್ಷೋದಯೋ ಯುಜ್ಯತ ಇತಿ ಭಾವೇನಾಹ – ಸಂವತ್ಸರ ಏವೇತಿ ।

''ಮಹಾಪುರುಷ ಇತಿ ಯಮವೋಚಾಮ, ಸಂವತ್ಸರ ಏವ ಪ್ರಧ್ವಂಸಯನ್ನನ್ಯಾನಿ ಭೂತಾನಿ ಐಕ್ಯಾಭಾವಯನ್ನನ್ಯಾನಿ ತಸ್ಯೈತಸ್ಯಾಸಾವಾದಿತ್ಯೋ ರಸಃ ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ ಯಶ್ಚಾಸಾವಾದಿತ್ಯ ಏಕಮೇತದಿತಿ ವಿಘಾತ್ ತಸ್ಮಾತ್ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ । ತದಪ್ಯೇತದೃಷಿಣೋಕ್ತಂ -

ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ।
ಆಪ್ರಾ ದ್ಯಾವಾಪೃಥಿವೀ ಅನ್ತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ।।''

ಇತ್ಯತ್ರ 'ತಸ್ಯೈತಸ್ಯ' ಇತಿ ಸಂವತ್ಸರಂ ಪರಾಮೃಶ್ಯ ರಸಪದೇನ ತದಧಿಷ್ಠಾತೃತ್ವೋಕ್ತೇಸ್ತಸ್ಯ ಚ ರಥವೇಗೇನ ಸಂವತ್ಸರಕರ್ತರಿ ಸೂರ್ಯ ಏವ ಪ್ರಸಿದ್ಧೇಃ,

ಯಚ್ಛಬ್ದಸ್ಯ ಪ್ರಸಿದ್ಧಾರ್ಥಕತ್ವಾತ್ಸೂರ್ಯಸ್ಯೈವಾದಿತ್ಯತ್ವೇನ ಲೋಕಪ್ರಸಿದ್ಧತ್ವಾತ್,

ಸರ್ವಪುರುಷಾಭಿಮುಖ್ಯಸ್ಯ ಸೂರ್ಯ ಏವ ಪ್ರತ್ಯಕ್ಷತ್ವೇನ ವಿಷ್ಣಾವದರ್ಶನಾಲ್ಲಿಙ್ಗತ್ರಯೇಣ ಶ್ರುತೇರುಜೀವನಾದಿತ್ಯರ್ಥಃ । ಏತೇನ ಲಿಙ್ಗಬಾಹುಲ್ಯಕಥನೇನ ''ಬಹುಲಿಙ್ಗಸಹಿತಶ್ರುತೇರಪಿ ಸಾವಕಾಶಾಯಾಃ ನಿರವಕಾಶಶ್ರುತ್ಯಾದೀನಾಮೇವ ಬಲವತ್ತ್ವಂ'' ಇತಿ ನ್ಯಾಯವಿವರಣಗತಬಹುಶಬ್ದಾರ್ಥೋ ವಿವೃತಃ ।

ವಿವರಣೆ - ಇದುವರೆಗೂ ಆದಿತ್ಯ ಶ್ರುತಿಯನ್ನು ವಿಷ್ಣುವಿನಲ್ಲಿಯೂ ಸಮನ್ವಯ ಮಾಡಬಹುದ್ದಾದ್ದರಿಂದ ಸಾವಕಾಶವೆಂದು ಹೇಳಿದರು. ಆದರೆ ಜ್ಯೋತಿರಧಿಕರಣದಲ್ಲಿ ನಿರವಕಾಶವಾದ ಪ್ರಕರಣದ ಬಲದಿಂದ ಜ್ಯೋತಿಶ್ರುತಿಯೂ ಸಹ ನಿರವಕಾಶವೆಂದು ಸಮರ್ಥಿಸಿದಂತೆ ಪ್ರಕೃತ ನಿರವಕಾಶವಾದ ಆದಿತ್ಯನ ಲಿಂಗದಿಂದ ಆದಿತ್ಯಶ್ರುತಿಯೂ ಸಹ ನಿರವಕಾಶತ್ವವನ್ನು ಹೇಳಬಹುದು.

ಅಥವಾ ಹಿಂದಿನ ಅಂತರಧಿಕರಣದಲ್ಲಿ ಆದಿತ್ಯ ಮೊದಲಾದ ದೇವತಾವಾಚಕ ಪದಗಳ ಸಮನ್ವಯವನ್ನು ಮಾಡಿದ್ದರೂ ಮುಖ್ಯತ್ವವನ್ನು ವಿಷ್ಣುವಿನಲ್ಲಿ ಹೇಳಿರುವುದಿಲ್ಲ. ಆದ್ದರಿಂದ ಆದಿತ್ಯ ಶ್ರುತಿಯು ಸಾವಕಾಶವೆಂದು ಶಂಕಿಸಲಾಗದ ಕಾರಣ ಸ್ವತಃ ನಿರವಕಾಶವೆಂದಂತಾಯಿತು.

ಅಥವಾ ಅಂತರಧಿಕರಣದ ನ್ಯಾಯಕ್ಕೆ ಈ ಆದಿತ್ಯಶ್ರುತಿಯು ವಿಷಯವೇ ಆಗುವುದಿಲ್ಲ. ಆದ್ದರಿಂದ ಈ ಶ್ರುತಿಯ ಸಮನ್ವಯವು ಅಂತರಧಿಕರಣದಿಂದ ಗತಾರ್ಥವಾಗುವುದಿಲ್ಲ.

ಹೀಗೆ ಮೂರು ಬಗೆಯಲ್ಲಿ ಆದಿತ್ಯಶ್ರುತಿಗೆ ನಿರವಕಾಶತ್ವವನ್ನು ಹೇಳಬಹುದಾದ್ದರಿಂದ ಆದಿತ್ಯಶ್ರುತಿಯಿಂದ ಹುಟ್ಟುವ ಪೂರ್ವಪಕ್ಷವು ಯುಕ್ತವೇ ಆಗಿದೆ. ಈ ಅಭಿಪ್ರಾಯದಿಂದ ''ಸಂವತ್ಸರ ಏವ'' ಇತ್ಯಾದಿ ಗ್ರಂಥವೂ ಹೊರಟಿದೆ.

''ಮಹಾಪುರುಷ ಇತಿ ಯಮವೋಚಾಮ, ಸಂವತ್ಸರ ಏವ ಪ್ರಧ್ವಂಸಯನ್ನ್ಯಾನಿ ಭೂತಾನಿ ಐಕ್ಯಾಭಾವಯನ್ನ್ಯಾನಿ ತಸ್ಯೈತಸ್ಯಾಸಾವಾದಿತ್ಯೋ ರಸಃ ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ ಯಶ್ಚಾಸಾವಾದಿತ್ಯ ಏಕಮೇತದಿತಿ ವಿದ್ಯಾತ್ ತಸ್ಮಾತ್ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ । ತದಪ್ಯೇತದೃಷಿಣೋಕ್ತಂ -

ಚಿತ್ರಂ ದೇವನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ।
ಆಪ್ರಾ ದ್ಯಾವಾಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ॥''

ಎಂಬ ವಿಷಯದಲ್ಲಿ 'ತಸ್ಯೈತಸ್ಯ' ಎಂಬುದಾಗಿ ಸಂವತ್ಸರವನ್ನು ಪರಾಮರ್ಶಿಸಿ ರಸಪದದಿಂದ ಆ ಸಂವತ್ಸರಕ್ಕೆ ನಿಯಾಮಕನಾಗಿದ್ದಾನೆಂದು ಹೇಳಲಾಗಿದೆ. ಈ ಧರ್ಮವು ರಥವೇಗದಿಂದ ಸಂಚರಿಸುವ ಸಂವತ್ಸರಕರ್ತೃವಾದ ಸೂರ್ಯನಲ್ಲಿಯೇ ಪ್ರಸಿದ್ಧವಾಗಿದೆ.

ಮತ್ತು 'ಯತ್' ಶಬ್ದವು ಎಲ್ಲೆಡೆ ಪ್ರಸಿದ್ಧಾರ್ಥವನ್ನೇ ಹೇಳುತ್ತದೆ. ಆದಿತ್ಯ ಶಬ್ದಕ್ಕೆ ಸೂರ್ಯನೆಂಬರ್ಥವು ಲೋಕದಲ್ಲಿ ಪ್ರಸಿದ್ಧವಾಗಿದೆ.

ಮತ್ತು 'ಸರ್ವಪುರುಷಾಭಿಮುಖ್ಯ' ಎಂಬ ಧರ್ಮವೂ ಸಹ ಸೂರ್ಯನಲ್ಲಿಯೇ ಪ್ರತ್ಯಕ್ಷವಾಗಿ ಗೋಚರಿಸುತ್ತಿದೆ. (ಪ್ರತಿಯೊಬ್ಬ ಪುರುಷನಿಗೂ ಸೂರ್ಯನು ಅಭಿಮುಖನಾಗಿದ್ದಾನೆಂದೇ ಅನಿಸುತ್ತದೆ.) ಹೊರತಾಗಿ ವಿಷ್ಣುವಿನಲ್ಲಿ ಈ ಧರ್ಮವು ಕಾಣಸುತ್ತಿಲ್ಲ.

ಹೀಗೆ 'ಸಂವತ್ಸರ ಅಧಿಷ್ಠಾತೃತ್ವ', 'ಯಚ್ಛಬ್ದಸ್ಯ ಲೋಕೇ ಪ್ರಸಿದ್ಧತ್ವ', 'ಸರ್ವಪುರುಷಾಭಿಮುಖ್ಯ' ಎಂಬ ಮೂರು ಲಿಂಗಗಳು ಆದಿತ್ಯಶ್ರುತಿಯನ್ನು ಉಪೋದ್ಬಲಿಸುತ್ತವೆ.

ಹೀಗೆ ಲಿಂಗಬಾಹುಲ್ಯವನ್ನು ಹೇಳಿದ್ದರಿಂದ ''ಬಹುಲಿಂಗಸಹಿತಶ್ರುತೇರಪಿ ಸಾವಕಾಶಾಯಾಃ ನಿರವಕಾಶಶ್ರುತ್ಯಾದೀನಾಮೇವ ಬಲವತ್ತ್ವಂ'' ''ಆದಿತ್ಯಶ್ರುತಿಯೂ ಬಹುಲಿಂಗಗಳಿಂದ ಸಹಿತವಾಗಿದ್ದರೂ

ಸಾವಕಾಶವೇ ಆಗಿದೆ. ನಿರವಕಾಶವಾದ ವಿಷ್ಣುಶ್ರುತಿಗಳೇ ಬಲಿಷ್ಠವಾಗಿವೆ.'' ಎಂಬ ನ್ಯಾಯವಿವರಣದಲ್ಲಿರುವ 'ಬಹು' ಎಂಬ ಪದವನ್ನು ವ್ಯಾಖ್ಯಾನಿಸಿದಂತಾಯಿತು.

ಪ್ರಕಾಶಃ – ಅತ ಏವೇತಿ । ಲಿಙ್ಗೈಃಶ್ರುತ್ಯುಜ್ಜೀವನಸ್ಯಾಭಿಪ್ರೇತತ್ವಾದೇವೇತ್ಯರ್ಥಃ । ಅನ್ಯಥಾ ಶ್ರುತಿಬಾಹುಲ್ಯಮಾತ್ರ ಪ್ರದರ್ಶನಪರತ್ವೇ ''ಅಸಾವಾದಿತ್ಯಃ'' ಇತ್ಯೇತಾವದೇವೋದಾಹೃಯೇತೇತ್ಯರ್ಥಃ ।।

ಉಕ್ತಂ ಹೀತಿ ।। ಆನನ್ದಮಯಾದಿಕರಣೇ । 'ತತ್ರ' ಪೂರ್ವಾಧಿಕರಣವ್ಯುತ್ಪಾದಿತನ್ಯಾಯವಿಷಯೇऽಪ್ಯರ್ಥೇ ಯದಧಿಕರಣಾನ್ತರಮಾರಭ್ಯತೇ, ತತ್ಪೂರ್ವನ್ಯಾಯಾಚ್ಛಾದಕಾಧಿಕಾಶಙ್ಕಾಲಕ್ಷಣಾತ್ಪುನರಧಿಕರಣಾನ್ತರಾರಮ್ಭ-ಪ್ರಾಪಕಾದ್ಧೇತೋರ್ಯುಕ್ತ ಇತ್ಯರ್ಥಃ ।

ನನು ಟೀಕಾರೀತ್ಯಾ ಸರ್ವಗತತ್ವಸ್ಯಾನ್ಯತ್ರಪ್ರಸಿದ್ಧಯೇ ಶ್ರುತ್ಯನುಸರಣಮಿತ್ಯತ ಆಹ – ಲಿಙ್ಗೈತಿ । ತದೇತದಿತಿ । ಲಿಙ್ಗೈಃ ಶ್ರುತಿಮುಜ್ಜೀವ್ಯ ತಯಾ ಪೂರ್ವಪಕ್ಷ ಇತ್ಯೇತದಿತ್ಯರ್ಥಃ ।

ಎತೇನ ಭಾಷ್ಯನ್ಯಾಯವಿವರಣಯೋರೇಕವಿಷಯತ್ವಂ ವಿವೃತಮ್, ''ಆದಿತ್ಯೋ ಭವಿತುಮರ್ಹತಿ, ತದೀಯಶ್ರುತಿಲಿಙ್ಗಾನಾಮತ್ರ ದರ್ಶನಾತ್'' ಇತಿ ನ್ಯಾಯವಿವರಣಟೀಕಾ ಚ ವಿವೃತಾ ।

ಯದ್ಯಪ್ಯತ್ರ ಆದಿತ್ಯಶಬ್ದ ಏಕ ಏವ, ತಥಾऽಪ್ಯಾವೃತ್ತಿಬಹುತ್ವಾದ್ವಾऽऽದಿತ್ಯ-ಪ್ರತಿಪಾದಾಕಾದಿತ್ಯಸೂರ್ಯಮಿತ್ರಾದಿಶಬ್ದಾನಾಂ ಸತ್ತ್ವಾದ್ವಾ 'ಬಹವಃ' ಇತ್ಯುಕ್ತಮ್ ।

ಯದ್ಯಪ್ಯತ್ರ 'ಶಬ್ದಾಃ' ಇತ್ಯನ್ತಮೇವೋದಾಹಾರ್ಯೆ, ಶಿಷ್ಟಂ ತು ಪೂರ್ವಪಕ್ಷೇ ಪ್ರಾಪಕಾನ್ತರತ್ವಾದುದಾಹೃತಮ್। ಆದಿಪದೇನ ಚಕ್ಷುರ್ಮಯತ್ವಾದಿಕಂ ಜೀವಲಿಙ್ಗಂ ಗ್ರಾಹ್ಯಮ್ ।

ಯದ್ವಾ – ಆದಿಪದೇನ ಸಂವತ್ಸರಸಾರತ್ವಾದಿಪ್ರಾಗುಕ್ತಲಿಙ್ಗಗ್ರಹಃ । ತೇನ ತದಂಶೋऽಪಿ ಪ್ರಕೃತೋಪಯೋಗ್ಯೇವೇತಿ ಭಾವಃ ।

ಗ್ರಂಥದಲ್ಲಿರುವ 'ಅತ ಏವ' ಎಂಬ ಪದಕ್ಕೆ ಲಿಂಗಗಳಿಂದ ಶ್ರುತಿಯ ಉಜ್ಜೀವನವು ಅಭಿಪ್ರೇತವಾದ್ದರಿಂದಲೇ ಎಂದರ್ಥ. ಹೀಗೆ ಅಭಿಪ್ರಾಯವಿಲ್ಲದಿದ್ದಲ್ಲಿ ಕೇವಲ ಶ್ರುತಿಬಾಹುಲ್ಯವನ್ನಷ್ಟೇ ತೋರಿಸುವುದಾದಲ್ಲಿ, 'ಅಸಾವಾದಿತ್ಯಃ' ಎಂದಷ್ಟೇ ಶ್ರುತಿಯನ್ನು ಉದಾಹರಿಸಿದ್ದರೆ ಸಾಕಾಗುತ್ತಿತ್ತು ಎಂದರ್ಥ.

'ಉಕ್ತಂ ಹಿ' ಎಂದರೆ ಆನಂದಮಯಾಧಿಕರಣದಲ್ಲಿ ಹೇಳಿದ್ದಾರೆ ಎಂದರ್ಥ. 'ತತ್ರ' ಎಂದರೆ ಹಿಂದಿನ ಅಧಿಕರಣದ ಸಿದ್ಧಾಂತದ ನ್ಯಾಯಕ್ಕೆ ವಿಷಯವಾದರೂ ಸಹ ಎಂದರ್ಥ. ಎಲ್ಲಿ ಅಧಿಕರಣಾಂತರವು ಹೊರಡುತ್ತದೋ ಅಲ್ಲಿ ಹಿಂದಿನ ಅಧಿಕರಣದ ಸಿದ್ಧಾಂತ ನ್ಯಾಯವನ್ನು ಮುಚ್ಚುವ ಅಭ್ಯಧಿಕಾಶಂಕೆಯನ್ನು ಮಾಡಿ ಅಧಿಕರಣಾಂತರಕ್ಕೆ ಪೂರಕವಾದ ಪೂರ್ವಪಕ್ಷಯುಕ್ತಿಯನ್ನು ಹೇಳಬೇಕು ಎಂದರ್ಥ.

ಗ್ರಂಥದಲ್ಲಿ ಲಿಂಗಗಳಿಂದಲೇ ನೇರವಾಗಿ ಪೂರ್ವಪಕ್ಷ ಮಾಡಬಹುದಲ್ಲವೇ? ಎಂದು ಪ್ರಶ್ನಿಸಿದ್ದಾರೆ. ಆದರೆ ಟೀಕೆಯಲ್ಲಿ ಹೇಳಿದ ಪ್ರಕಾರ ಸರ್ವಗತತ್ವವು ಅನ್ಯತ್ರಪ್ರಸಿದ್ಧವಾಗುವುದಕ್ಕಾಗಿ ಶ್ರುತಿಯನ್ನು

ಅನುಸರಿಸಲೇಬೇಕು. ಹೀಗಿರುವಾಗ ಕೇವಲ ಲಿಂಗದಿಂದಲೇ ಹೇಗೆ ಪೂರ್ವಪಕ್ಷ ಮಾಡುತ್ತೀರಿ ? ಎಂಬ ಪ್ರಶ್ನೆಗೆ ಗ್ರಂಥದಲ್ಲಿ ''ಲಿಂಗೈರೇವ'' ಇತ್ಯಾದಿಯಾಗಿ ಉತ್ತರಿಸುತ್ತಿದ್ದಾರೆ.

'ತದೇತತ್' ಎಂಬ ಮಾತಿಗೆ ಲಿಂಗಗಳಿಂದ ಶ್ರುತಿಯನ್ನು ಉಜ್ಜೀವನಗೊಳಿಸಿ ಅಂತಹ ಶ್ರುತಿಯಿಂದ ಪೂರ್ವಪಕ್ಷ ಮಾಡುವುದು ಎಂದರ್ಥ. ಹೀಗೆ ಹೇಳಿದ್ದರಿಂದ ಭಾಷ್ಯ ಹಾಗೂ ನ್ಯಾಯವಿವರಣಗಳಿಗೆ ಒಂದೇ ಅಭಪ್ರಾಯವೆಂದಂತಾಯಿತು. ಮತ್ತು ''ಆದಿತ್ಯೋ ಭವಿತುಮರ್ಹತಿ ತದೀಯಶ್ರುತಿಲಿಂಗಾನಾಮತ್ರ ದರ್ಶನಾತ್'' ಎಂಬ ನ್ಯಾಯವಿವರಣೆಯ ಟೀಕೆಯನ್ನೂ ಸಹ ವಿವರಿಸಿದಂತಾಯಿತು.

ವಸ್ತುತಃ ಇಲ್ಲಿ 'ಆದಿತ್ಯ' ಎಂಬ ಒಂದೇ ಶಬ್ದವು ಕೇಳಿಸುತ್ತಿದೆ. ಹೀಗಿರುವಾಗ ನ್ಯಾಯವಿವರಣದಲ್ಲಿ 'ಬಹವಃ' ಎಂದು ಹೇಗೆ ಹೇಳಿದರು? ಎಂದರೆ ಒಂದೇ ಆದಿತ್ಯಶಬ್ದವು ಅನೇಕ ಬಾರಿ ಕೇಳಿಸುತ್ತಿದೆಯೆಂದು ತಿಳಿಯಬಹುದು. ಅಥವಾ ಆದಿತ್ಯನನ್ನು ಪ್ರತಿಪಾದಿಸುವ 'ಆದಿತ್ಯ, ಸೂರ್ಯ, ಮಿತ್ರ ಮೊದಲಾದ ಶಬ್ದಗಳು ವಿಷಯವಾಕ್ಯದಲ್ಲಿರುವುದರಿಂದಲೂ ಸಹ 'ಬಹವಃ' ಎಂದು ಹೇಳಿದ್ದಾರೆ.

ವಸ್ತುತಃ ನ್ಯಾಯವಿವರಣದಲ್ಲಿ 'ಶಬ್ದಾಃ' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು. ಆದರೂ ಸಹ ಪೂರ್ವಪಕ್ಷಕ್ಕೆ ಮತ್ತೊಂದು ಯುಕ್ತಿಯನ್ನು ತಿಳಿಸುವುದಕ್ಕಾಗಿ 'ಕ್ಷತ್ಯಾದಿಷು' ಇತ್ಯಾದಿ ಮಾತುಗಳನ್ನು ಹೇಳಿದ್ದಾರೆ. 'ಆದಿತ್ಯಾದಿ' ಎಂಬಲ್ಲಿರುವ ಆದಿಪದದಿಂದ ಜೀವಲಿಂಗವೆನಿಸಿದ ಚಕ್ಷುರ್ಮಯತ್ವಾದಿಗಳನ್ನು ವಿವಕ್ಷಿಸಬೇಕು.

ಅಥವಾ 'ಆದಿ' ಪದದಿಂದ 'ಸಂವತ್ಸರಸಾರತ್ವ' ಮೊದಲಾದ ಹಿಂದಿನ ಲಿಂಗಗಳನ್ನು ವಿವಕ್ಷಿಸಬೇಕು. ಅದಕ್ಕೋಸ್ಕರ ಉಳಿದ ಅಂಶಗಳನ್ನು ಹೇಳಿದ್ದೂ ಸಹ ಪ್ರಕೃತಕ್ಕೆ ಉಪಯೋಗಿಯೇ ಆಗಿದೆ.

ಗುರುರಾಜೀಯಮ್ – ತತ್ರಾದಿತ್ಯಶ್ರುತಿಮಾತ್ರೇಣೈವ ಪೂರ್ವಃಪಕ್ಷ ಇತ್ಯಭಿಪ್ರೇತ್ಯಾದಿತ್ಯಶಬ್ದಸ್ಯ ಬ್ರಹ್ಮಪರತ್ವಮನ್ತರಧಿಕರಣನ್ಯಾಯೇನೇತಿ ಶಙ್ಕಾಂ ಪರಿಹರನ್ನೇವ ಪ್ರಸಿದ್ಧಾದಿತ್ಯಪರತ್ವಮುಪಪಾದಯತಿ – ಮೈವಮಿತ್ಯಾದಿನಾ ।।

ನನು ಸಂವತ್ಸರಸಾರತ್ವಮಪಿ ಶತಸಂವತ್ಸರತ್ವಾದಿವದನ್ತರ್ಯಾಮಿಣಿ ಸಾವಕಾಶಂ ನಾದಿತ್ಯಶ್ರುತೇಃ ಪ್ರಸಿದ್ಧಾದಿತ್ಯಪರತ್ವಂ ಸಮ್ಪಾದಯಿತುಮಲಮಿತ್ಯತ ಆಹ – **ಯಶ್ಚಾಸಾವಾದಿತ್ಯ ಇತಿ ।। ಪ್ರಸಿದ್ಧಾರ್ಥಯಚ್ಛಬ್ದೋಪಸಮ್ಬನ್ಧಾದಿತಿ ।। ಯಚ್ಛಬ್ದೋಹಿ ಪ್ರಸಿದ್ಧಚರ್ಯಃ । ಪ್ರಸಿದ್ಧಿರ್ಹಿ ಲೋಕತಃ । ಸ ಚಾದಿತ್ಯ ಏವೇತಿ ಪ್ರಸಿದ್ಧಚರ್ಯಕಯಚ್ಛಬ್ದಸಮಭಿವ್ಯಾಹಾರಾದಾದಿತ್ಯಶಬ್ದಃ ಪ್ರಸಿದ್ಧಾದಿತ್ಯಪರ ಇತ್ಯರ್ಥಃ ।**

ನನು ಚ ಯಚ್ಛಬ್ದೋಪಬನ್ಧೋಪಿ ಸಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯ ಇತ್ಯಾದಿ ಪ್ರಸಿದ್ಧೇ ಬ್ರಹ್ಮಣ್ಯಪಿ ಸಮ್ಭವತೀತಿ ಕಯಮೇತದನುಸಾರೇಣಾದಿತ್ಯಶ್ರುತೇಃ ಪ್ರಸಿದ್ಧಪರತ್ವಮಿತ್ಯರುಚೇರಾಹ – **ತಸ್ಮಾದಿತಿ ।। ಬ್ರಹ್ಮಣ ಏವಾದಿತ್ಯತ್ವೇ ತಸ್ಯೈವ ಪುರುಷಾಭಿಮುಖ್ಯಮಭ್ಯುಪೇಯಮ್ । ನಚ**

तत्सम्भवः । तस्य पुरुषाभिमुख्यताया असम्भवादिति भावः ।। अत एवेति ।। लिङ्गोपोद्बलितादित्यश्रुतेः प्रसिद्धादित्यपरत्वस्य भाष्यटीकयोरभिप्रेतत्वादेवेत्यर्थः ।। तदेतदभिप्रेत्योक्तं न्यायविवरण इति ।। आदित्यशब्दस्य लिङ्गाधीनमन्यपरत्वं लिङ्गैरेव पूर्वपक्षासम्भवं चाभिप्रेत्येत्यर्थः ।

सार

ಇಲ್ಲಿಯ ತನಕ ಮಾಡಿದ ಆಕ್ಷೇಪದಲ್ಲಿ ಹುರುಳಿಲ್ಲ.

ಆದಿತ್ಯನು ಸರ್ವಗತನೆಂಬ ಪೂರ್ವಪಕ್ಷ ಹುಟ್ಟಲು ಅನೇಕ ಲಿಂಗಗಳಿವೆ. 'ಸವಂತ್ಸರಾಧಿಪತಿತ್ವ', 'ಪ್ರತಿಪುರುಷಾಭಿಮುಖ್ಯ', 'ಯಚ್ಚಬ್ದಸ್ಯ ಲೋಕೇ ಪ್ರಸಿದ್ಧತ್ವ' ಮೊದಲಾದ ಲಿಂಗಗಳು ಸೂರ್ಯನಲ್ಲಿ ಮಾತ್ರ ಪ್ರಸಿದ್ಧವಾಗಿವೆ. ಇವುಗಳಿಂದ ಆದಿತ್ಯಶ್ರುತಿಯು ಉಪೋದ್ಬಲಿತವಾಗುತ್ತದೆ.

• • • • •

ಅಂತರಾದ್ಯಧಿಕರಣಗಳಿಂದ ಪುನರುಕ್ತಿ ಇಲ್ಲ

तात्पर्यचन्द्रिका

यद्वा – अन्तराद्यधिकरणेष्विन्द्रादिशब्दानां तैस्तैर्लिङ्गैर्विष्णुपरतैव व्युत्पादिता, नतु तत्र मुख्यता ।

तस्मान्मुख्यार्थता विष्णोरिति कृत्वा हृदि प्रभुः ।
समन्वयं साधयति ..... ।।

इत्यनुव्याख्याने मुख्यत्वोक्तिः, आकाशादिपदप्रवृत्तिनिमित्तस्य भगवदधीनत्वोक्तिश्च, स्थितायां त्रिपाद्यां प्रवृत्ते ''तदधीनत्वात्'' इत्यत्र सर्वशब्दानां भगवति मुख्यताया वक्ष्यमाणत्वात्तदभिप्राया । अत एव 'हृदि कृत्वा' इत्युक्तम् ।

ईक्षत्यधिकरणे वाच्यत्वोक्तिरपि तदुपयोगितया । टीकायां प्रत्यधिकरणं तत्तच्छब्दवाच्यत्वोक्तिरपि तदभिप्राया । तत्तच्छब्दप्रवृत्तिनिमित्तगुणलाभस्य

वक्ष्यमाणसापेक्षत्वेऽपि तत्तत्प्रकरणस्थगुणमात्रलाभः, पूर्वाधिकरणाक्षेपः, समाधानं च तत्तदधिकरणमात्रसाध्यम् । एवं चादित्यादिशब्दानां विष्णौ मुख्यतायाअनुक्तत्वात्तैः पूर्वपक्षोदय इति न्यायविवरणाभिप्रायः ।

ಅನುವಾದ - ಅಥವಾ ಅಂತರಾದ್ಯಧಿಕರಣಗಳಲ್ಲಿ ಆಯಾ ಲಿಂಗಗಳಿಂದ ವಿಷ್ಣುಪರತ್ವವನ್ನಷ್ಟೇ ಸಮರ್ಥಿಸಿದ್ದಾರೆ ಹೊರತಾಗಿ, ಇಂದ್ರಾದಿ ಶಬ್ದಗಳ ಮುಖ್ಯಪ್ರತಿಪಾದ್ಯತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸಿಲ್ಲ.

तस्मान्मुख्यार्थता विष्णोरिति कृत्वा हृदि प्रभुः ।
समन्वयं साधयति ..... ॥

ಎಂಬ ಅನುವ್ಯಾಖ್ಯಾನದಲ್ಲಿ ಮುಖ್ಯತ್ವವನ್ನು ಹೇಳಿದ್ದು, ಮತ್ತು ಆಕಾಶಾದಿಪ್ರವೃತ್ತಿನಿಮಿತ್ತಕ್ಕೆ ಭಗವದಧೀನತ್ವವನ್ನು ಹೇಳಿದ್ದು, ಮೂರುಪಾದಗಳು ಮುಗಿದಮೇಲೆ ''ತದಧೀನತ್ವಾತ್'' ಎಂಬ ಸೂತ್ರದಲ್ಲಿ ನಿರೂಪಿಸುವ ಸಕಲಶಬ್ದಗಳಿಗೆ ಭಗವತ್ಪರತ್ವವನ್ನು ಸಮರ್ಥಿಸುವುದಕ್ಕಾಗಿ, ಅಂದರೆ ನಾಲ್ಕನೇ ಪಾದದಲ್ಲಿ ಬರುವ ''ತದಧೀನತ್ವಾತ್'' ಎಂಬ ಸೂತ್ರದ ಅಭಿಪ್ರಾಯವನ್ನಿಟ್ಟುಕೊಂಡು ಇಲ್ಲಿ ಮುಖ್ಯತ್ವವನ್ನು ಹೇಳಿದ್ದಾರೆ. ಆದ್ದರಿಂದಲೇ 'ಹೃದಿ ಕೃತ್ವಾ' ಎಂಬ ಪ್ರಯೋಗವನ್ನು ಕಾಣಬಹುದು.

ಈಕ್ಷತ್ಯಧಿಕರಣದಲ್ಲಿ ಭಗವಂತನಿಗೆ ಶಬ್ದವಾಚ್ಯತ್ವವನ್ನು ಹೇಳಿದ್ದೂ ಸಹ ಮುಂದಿನ ''ತದಧೀನತ್ವಾತ್'' ಎಂಬ ನ್ಯಾಯಕ್ಕೆ ಉಪಯೋಗವಾಗುವುದಕ್ಕೆ ಮಾತ್ರ ತಿಳಿಯಬೇಕು. ಮತ್ತು ಟೀಕೆಯ ಪ್ರತಿಯೊಂದು ಅಧಿಕರಣಗಳಲ್ಲಿಯೂ ಆಯಾ ಶಬ್ದಗಳ ವಾಚ್ಯತ್ವವನ್ನು ಹೇಳಿದ್ದು ಮುಂದಿನ ನ್ಯಾಯಕ್ಕೆ ಪೂರಕವಾಗಿ ಹೊರತು ಈಗಾಗಲೇ ನಿರ್ಣಯವಾಗಿದೆ ಎಂಬ ಅಭಿಪ್ರಾಯದಿಂದಲ್ಲ.

ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಗುಣಗಳು ಲಾಭವಾಗಬೇಕೆಂದರೆ ವಕ್ಷ್ಯಮಾಣನ್ಯಾಯದ ಅಪೇಕ್ಷೆಯಿರುತ್ತದೆ. ಆದರೆ ಆಯಾ ಪ್ರಕರಣದಲ್ಲಿರುವ ಗುಣಗಳಷ್ಟೇ ತಿಳಿಯಬೇಕೆಂದರೆ ಹಿಂದಿನ ಅಧಿಕರಣದ ಮೇಲೆ ಬರುವ ಆಕ್ಷೇಪವನ್ನು ನಿರಾಕರಿಸಿದರೆ ಸಾಕು. ಆದ್ದರಿಂದ ಪೂರ್ವಾಧಿಕರಣದ ಆಕ್ಷೇಪ ಹಾಗೂ ಸಮಾಧಾನ ಮಾಡುವುದು ಆಯಾ ಅಧಿಕರಣಗಳಿಂದಷ್ಟೇ ಸಾಧ್ಯವಾಗುತ್ತದೆ. ಈ ಪ್ರಯೋಜನವು 'ತದಧೀನತ್ವ' ಸೂತ್ರದಿಂದ ದೊರೆಯುವುದಿಲ್ಲ. ಆದ್ದರಿಂದ ಆದಿತ್ಯಾದಿಶಬ್ದಗಳಿಗೆ ವಿಷ್ಣುವಿನಲ್ಲಿ ಮುಖ್ಯಪ್ರತಿಪಾದ್ಯತ್ವವನ್ನು ಅಂಗೀಕರಿಸದ ಕಾರಣ ಪೂರ್ವಪಕ್ಷವು ಹುಟ್ಟಬಹುದೆಂದು ನ್ಯಾಯವಿವರಣದ ಅಭಿಪ್ರಾಯ.

प्रकाशः –

न्यायविवरणे लिङ्गेन श्रुत्युज्जीवनं न स्पष्टं, प्रत्युत श्रुतीनामेव लिङ्गसमकक्षतया प्राबल्यं प्रतीयते । अतस्तत्स्वारस्यानुरोधेन भाष्यादौ लिङ्गांशोक्तेर्भावं विवक्षुः पक्षद्वयमाह –

यद्वेत्यादिना । **विष्णुपरतैवेति** ।। तस्या अपि समन्वयरूपत्वात् । इह तु तत्परत्वं नास्ति, तल्लिङ्गाभावादिति भावः ।

ವಿವರಣೆ - ನ್ಯಾಯವಿವರಣದಲ್ಲಿ ಲಿಂಗದಿಂದ ಶ್ರುತಿಯು ಉಜ್ಜೀವನವಾಗುತ್ತದೆಂಬ ವಿಚಾರವು ಸ್ಪಷ್ಟವಾಗಿ ತಿಳಿಯುವುದಿಲ್ಲ. ಹೊರತಾಗಿ ಲಿಂಗಗಳಿಗೆ ಸಮಾನವಾದ ಬಲವನ್ನೇ ಶ್ರುತಿಗೆ ಹೇಳಿದಂತೆ ಕಾಣಿಸುತ್ತದೆಂದು ನ್ಯಾಯವಿವರಣದ ಮಾತಿನ ಸ್ವಾರಸ್ಯವನ್ನು ತಿಳಿಸಬೇಕು. ಮತ್ತು ಭಾಷ್ಯ ಟೀಕೆ ಮೊದಲಾದಡೆ ವಿಷಯವಾಕ್ಯದಲ್ಲಿ ಲಿಂಗವನ್ನು ತಿಳಿಸುವ ಅಂಶವನ್ನು ತಿಳಿಸಿದ್ದೂ ಸಹ ಅತ್ಯಂತ ಅರ್ಥಪೂರ್ಣವಾಗಿದೆಯೆಂದು ತೋರಿಸುವುದಕ್ಕಾಗಿ 'ಯದ್ವಾ' ಇತ್ಯಾದಿಯಾಗಿ ಎರಡು ಪಕ್ಷಗಳನ್ನು ಹೇಳುತ್ತಿದ್ದಾರೆ.

ಇಲ್ಲಿ 'ವಿಷ್ಣುಪರತೈವ' ಎಂಬ ಗ್ರಂಥಕ್ಕೆ ಹೀಗರ್ಥ - ಇಂದ್ರಾದಿ ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲು ವಿಷ್ಣುಲಿಂಗಗಳು ಅಲ್ಲಿ ಕೇಳಿಸುತ್ತಿವೆ. ಆದ್ದರಿಂದ ವಿಷ್ಣು ಇಂದ್ರಾದಿಪದಗಳಿಂದ ಪ್ರತಿಪಾದ್ಯನಾಗುತ್ತಾನೆ. ಆದರೆ ಇಲ್ಲಿ ವಿಷ್ಣುಲಿಂಗಗಳಿಲ್ಲದ ಕಾರಣ ಆದಿತ್ಯಾದಿಶಬ್ದಗಳಿಂದ ವಿಷ್ಣು ಪ್ರತಿಪಾದ್ಯನಾಗುವುದಿಲ್ಲವೆಂದು ತಿಳಿಯಬೇಕು.

प्रकाशः – नन्वेवमानन्दमयाधिकरणान्ते,

अतो नारायणो देवो निश्शेषगुणवाचकैः ।
गुणिसामान्यवचनैरपि मुख्यतयोदितः ।।
अध्यात्मगैश्च प्राणाद्यैस्तथैव ह्यधिभूतगैः ।
अन्नादिशब्दैर्भगवानेको मुख्यतयोदितः ।।

इत्युपक्रम्य,

शब्दप्रवृत्तिहेतूनां तस्मिन् मुख्यसमन्वयात् ।
अन्यार्थेष्वल्पता हेतोस्तन्निमित्तत्वतस्तथा ।।

इत्यादिना भगवति विद्वद्रूढिमहायोगावभिधाय, ''तस्मात्'' इति श्लोके 'तस्मात्' महायोगविद्वद्रूढिसत्त्वात्सर्वशब्दमुख्यार्थता विष्णोरुपपन्नेति 'मुख्यत्वोक्तो-

स्तन्निमित्तत्वतः' इत्यादिनाऽन्यगतप्रवृत्तिनिमित्तस्य भगवदधीनत्वोक्तेश्च, ईक्षत्यधिकरणे वक्ष्यमाणसमन्वयोपयोगितया वाच्यत्वोक्तेश्च टीकायां ''तस्माद-शेषाधिदैवगतशब्दवाच्यो हरिः'' इत्यादिना सर्वत्र तत्तच्छब्दवाच्यत्वोपसंहारात्त-द्विरोध इत्यतः, सर्वस्य गतिमाह – तस्मादिति ।।

ಇಂದ್ರಾದಿಶಬ್ದಗಳಿಂದ ಭಗವಂತನು ಮುಖ್ಯವಾಗಿ ವಾಚ್ಯನಾಗಿದ್ದಾನೆಂದು ಇದುವರೆಗೂ ಹೇಳಿಯೇ ಇಲ್ಲವೆಂದು ಹೇಳಿದಿರಿ. ಹಾಗಾದರೆ ಆನಂದಮಯಾಧಿಕರಣದ ಕೊನೆಯಲ್ಲಿ ಹೇಳಿದ ಈ ಮಾತುಗಳು ಅಸಂಗತವಾಗುತ್ತವಲ್ಲವೇ? ಆನಂದಯಮಯಾಧಿಕರಣದ ಮಾತು ಹೀಗಿದೆ -

ಅತೋ ನಾರಾಯಣೋ ದೇವೋ ನಿಶ್ಶೇಷಗುಣವಾಚಕೈಃ।
ಗುಣಸಾಮಾನ್ಯವಚನೈರಪಿ ಮುಖ್ಯತಯೋದಿತಃ॥

ಅಧ್ಯಾತ್ಮಗೈಶ್ಚ ಪ್ರಾಣಾದ್ಯೈಸ್ತಥೈವ ಹ್ಯಧಿಭೂತಗೈಃ।
ಅನ್ನಾದಿಶಬ್ದೈರ್ಭಗವಾನೇಕೋ ಮುಖ್ಯತಯೋದಿತಃ॥

ಶಬ್ದಪ್ರವೃತ್ತಿಹೇತೂನಾಂ ತಸ್ಮಿನ್ ಮುಖ್ಯಸಮನ್ವಯಾತ್।
ಅನ್ಯಾರ್ಥೇಷ್ವಲ್ಪತಾ ಹೇತೋಸ್ತನ್ನಿಮಿತ್ತತ್ವತಸ್ತಥಾ॥

ಆದ್ದರಿಂದ ಕ್ರೀಡಾದಿಗುಣವಿಶಿಷ್ಟನಾದ ನಾರಾಯಣನು ಸಕಲಗುಣವಾಚಕಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ. ಅಷ್ಟೇ ಅಲ್ಲದೇ ಗುಣಸಾಮಾನ್ಯವಾಚಕವಾದ ಶಬ್ದಗಳಿಂದಲೂ ಮುಖ್ಯವಾಗಿಯೇ ಪ್ರತಿಪಾದ್ಯನಾಗಿದ್ದಾನೆ. ಪ್ರಾಣ ಮೊದಲಾದ ಅಧ್ಯಾತ್ಮಶಬ್ದಗಳಿಂದ ಅನ್ನ ಮೊದಲಾದ ಆಧಿಭೌತಿಕಶಬ್ದಗಳಿಂದ ಮುಖ್ಯವಾಗಿ ಭಗವಂತನೇ ಪ್ರತಿಪಾದ್ಯನು. ಏಕೆಂದರೆ ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವು ಭಗವಂತನಲ್ಲಿಯೇ ಮುಖ್ಯವಾಗಿರುತ್ತವೆ. ಉಳಿದ ಪದಾರ್ಥಗಳಲ್ಲಿ ಪ್ರವೃತ್ತಿನಿಮಿತ್ತಗಳು ಅಲ್ಪವಾಗಿರುವುದರಿಂದ ಅಮುಖ್ಯವಾಗಿ ಪ್ರತಿಪಾದಿತವಾಗಿವೆ. ಮತ್ತು ಭಗವದಧೀನವಾಗಿವೆ. ಇತ್ಯಾದಿಯಾಗಿ ಭಗವಂತನಲ್ಲಿ ವಿದ್ವದ್ರೂಢಿ ಹಾಗೂ ಮಹಾಯೋಗಗಳನ್ನು ಹೇಳಿ 'ತಸ್ಮಾದ್' ಇತ್ಯಾದಿ ಶ್ಲೋಕದಿಂದ ಮಹಾಯೋಗ ಹಾಗೂ ವಿದ್ವದ್ರೂಢಿಗಳಿರುವುದರಿಂದ ಸಕಲ ಶಬ್ದಗಳ ಮುಖ್ಯಾರ್ಥನು ವಿಷ್ಣುವೇ ಆಗಿದ್ದಾನೆಂದು ಮುಖ್ಯತ್ವವನ್ನೇ ಹೇಳಿದ್ದಾರೆ. ಅಷ್ಟೇ ಅಲ್ಲದೆ ಉಳಿದ ಪದಾರ್ಥಗಳಲ್ಲಿರುವ ಪ್ರವೃತ್ತಿನಿಮಿತ್ತಗಳಿಗೆ ಅಸ್ವಾತಂತ್ರ್ಯವನ್ನು ಹೇಳಿದ್ದಾರೆ. ಮತ್ತು ಈಕ್ಷತ್ಯಧಿಕರಣದಲ್ಲಿ ಮುಂದಿನ ಅಧಿಕರಣಗಳಲ್ಲಿ ಮಾಡುವ ಸಮನ್ವಯಕ್ಕೆ ಉಪಯೋಗಿಯಾಗಿ ವಾಚ್ಯತ್ವವನ್ನೂ ಸಹ ಹೇಳಿದ್ದಾರೆ. ಟೀಕೆಯಲ್ಲಿಯೂ 'ತಸ್ಮಾದಶೇಷಾಧಿದೈವಗತಶಬ್ದವಾಚ್ಯೋ ಹರಿಃ' ಆದ್ದರಿಂದ ಎಲ್ಲಾ ಆಧಿದೈವಿಕ ಶಬ್ದಗಳಿಂದ ಭಗವಂತನೇ ವಾಚ್ಯನಾಗಿದ್ದಾನೆಂದು ತಿಳಿಸಿದ್ದಾರೆ. ಮತ್ತು ಪ್ರತಿಯೊಂದು ಅಧಿಕರಣಗಳಲ್ಲಿಯೂ ಆಯಾ ಶಬ್ದಗಳ ವಾಚ್ಯತ್ವವನ್ನು ಪರಮಾತ್ಮನಲ್ಲಿ ಉಪಸಂಹಾರ ಮಾಡಿದ್ದಾರೆ. ಈಗ ತದಧೀನತ್ವ ಸೂತ್ರದಲ್ಲಿಯೇ ಈ ಎಲ್ಲಾ ವಿಷಯಗಳು ನಿರ್ಣಯವಾಗುತ್ತವೆಂದು ಹೇಳುವುದಾದರೆ, ಈ ಎಲ್ಲಾ ವಿಧ ಮಾತುಗಳ ವಿರೋಧ ಬರುತ್ತದಲ್ಲವೇ? ಎಂಬ ಶಂಕೆಯನ್ನು

ಪರಿಹರಿಸುವುದಕ್ಕಾಗಿ ಮತ್ತು ಈ ಎಲ್ಲಾ ಮಾತುಗಳ ನಿಜವಾದ ಅಭಿಪ್ರಾಯವನ್ನು ಸ್ಪಷ್ಟಪಡಿಸುವುದಕ್ಕಾಗಿ 'ತಸ್ಮಾತ್' ಇತ್ಯಾದಿ ವಾಕ್ಯವು ಹೊರಟಿದೆ.

प्रकाशः – उक्तिश्चेति ।। 'अनुव्याख्याने' इत्यन्वेति । 'तदभिप्राया' इत्यन्वयः। पादत्रये नानावाक्यगतभगवल्लिङ्गैस्तत्तद्वाक्यगताधिदैविकादिसर्वशब्दानां भगवत्परत्वे' सर्वस्य तदधीनत्वे च निर्णीते सति, किं तेषां तत्परत्वं ऐन्द्र्या गार्हपत्यपरत्वस्येवामुख्यवृत्त्योत मुख्यवृत्येति, तथा त्रिपाद्यां तत्तच्छब्दप्रवृत्तिहेतोरीशाधीनत्वोक्तेः किं फलमिति च शङ्कायाः पादत्रयानन्तरमेवोदयात्तच्छङ्कानिवृत्त्यर्थं त्रिपाद्यनन्तरं प्रवृत्ते ''तदधीनत्वात्'' इत्यव्यक्तनयगुणसूत्रे स्वातन्त्र्यस्य शब्दवृत्तौ मुख्यनिमित्तत्वात्सर्वस्वतन्त्रे भगवति अव्यक्तादिशब्दोपलक्षितसर्वशब्दमुख्यवृत्तिरिति वक्ष्यमाणत्वात्तदभिप्रायेणात्र मुख्यत्वाद्युक्तित्यर्थः । 'तदुपयोगितया' वक्ष्यमाणमुख्यत्वोपयोगितया । अन्यथा ब्रह्मण एव वाच्यत्वे शब्दानां तत्र मुख्यत्वोक्तिरसङ्गता स्यादिति भावः ।

ननु शब्दप्रवृत्तिनिमित्तस्य गुणस्याव्यक्तनयेनैव लब्धत्वात्किं पूर्वतनैरधिकरणैरित्यत आह – **तत्तच्छब्दप्रवृत्तीति** । अवयवशक्तिलभ्यपरमैश्वर्यादिमत्त्वरूपगुणलाभस्येत्यर्थः । ननु तत्र त्रिपाद्यं सिद्धं स्वातन्त्र्यं शब्दप्रवृत्तौ निमित्तं भवति नवेति विशये, नेति प्राप्ते, भवतीति सिद्धान्तयिष्यते, नतु तत्तच्छब्दप्रवृत्तिनिमित्तमपि भगवद्गतमिति । तथा च कथमेवमुक्तिरिति चेत् सत्यं, ''सूक्ष्मं तु तदर्हत्वात्'' इत्यनेनोपलक्षणतयाऽशेषशब्दप्रवृत्तिहेतूनामपि ईशगतत्वव्युत्पादनमस्तीत्याशयात् । **यद्वा** – 'तत्तच्छब्दप्रवृत्तिनिमित्तगुणलाभस्य' इत्यस्य स्वातन्त्र्यरूपगुणलाभस्येत्येवार्थः । स्वातन्त्र्यमपि ''तदधीनत्वात्'' इत्यत्रैव वक्ष्यतीति भावः ।

ಅನುವ್ಯಾಖ್ಯಾನದಲ್ಲಿ 'ಉಕ್ತಿಃ' ಎಂಬುದನ್ನು ಅನ್ವಯ ಮಾಡಬೇಕು. ಒಟ್ಟು ಅಭಿಪ್ರಾಯ - ಮೂರು ಪಾದಗಳಲ್ಲಿ ಅನೇಕ ಶ್ರುತಿವಾಕ್ಯಗಳಲ್ಲಿರುವ ಭಗವಂತನ ಲಿಂಗಗಳಿಂದ ಆಯಾ ಶ್ರುತಿಗಳಲ್ಲಿರುವ ಆಧಿದೈವಿಕ, ಆಧಿಭೌತಿಕ ಮೊದಲಾದ ಸಕಲಶಬ್ದಗಳ ಸಮನ್ವಯವನ್ನು ಭಗವಂತನಲ್ಲೇ ಮಾಡಲಾಗಿದೆ. ಮತ್ತು ಸಕಲ ಪದಾರ್ಥಗಳು ಅವನ ಅಧೀನವೆಂದು ನಿರ್ಣಯಿಸಲಾಗಿದೆ. ಹೀಗೆ ನಿರ್ಣಯವಾದ ಮೇಲೆ ಆ ಎಲ್ಲ ಶಬ್ದಗಳು 'ಐಂದ್ರೀ' ಶಬ್ದವು 'ಗಾರ್ಹಪತ್ಯ' ಎಂಬರ್ಥದಲ್ಲಿ ಅಮುಖ್ಯವಾಗಿರುವಂತೆ ಅಮುಖ್ಯ ಪ್ರತಿಪಾದಕವಾಗುತ್ತವೋ, ಅಥವಾ ಮುಖ್ಯಪ್ರತಿಪಾದಕವಾಗುತ್ತವೋ? ಎಂಬ ಸಂಶಯ ಬರುತ್ತದೆ. ಮತ್ತು

ಮೂರು ಪಾದಗಳಲ್ಲಿ ಆಯಾ ಶಬ್ದಗಳ ಪ್ರವೃತ್ತಿನಿಮಿತ್ತಕ್ಕೆ ಈಶಾಧೀನತ್ವವನ್ನು ಹೇಳಿದ್ದರಿಂದ ಏನು ಪ್ರಯೋಜನ ? ಎಂಬ ಶಂಕೆಯೂ ಬರುತ್ತದೆ. ಈ ಬಗೆಯ ಸಂಶಯವು ಮೂರು ಪಾದಗಳನ್ನು ಚಿಂತನೆ ಮಾಡಿದ ಮೇಲಷ್ಟೇ ಬರುತ್ತದೆ. ಆವಾಗ ಆದರ ಪರಿಹಾರಕ್ಕಾಗಿ ಮೂರು ಪಾದಗಳ ಅನಂತರ 'ತದಧೀನತ್ವಾತ್' ಎಂಬ ಸೂತ್ರವು ಹೊರಟಿದೆ. ಈ ಸೂತ್ರವು ಅವ್ಯಕ್ತಾಧಿಕರಣದ ಗುಣಸೂತ್ರವೆನಿಸಿದೆ. ಇದರಲ್ಲಿ ಸ್ವಾತಂತ್ರ್ಯವು ಶಬ್ದಗಳ ಪ್ರವೃತ್ತಿಗೆ ಮುಖ್ಯಕಾರಣವಾಗಿದೆಯೆಂದು ಸಮರ್ಥಿಸಲಾಗಿದೆ. ಮತ್ತು ಸರ್ವಸ್ವತಂತ್ರನಾದ ಭಗವಂತನಲ್ಲಿ ಅವ್ಯಕ್ತ ಶಬ್ದದಿಂದ ಉಪಲಕ್ಷಿತವಾದ ಸಕಲ ಶಬ್ದಗಳ ಮುಖ್ಯವಾದ ಸಮನ್ವಯವನ್ನು ಹೇಳುತ್ತಿದೆ. ಈ ಅಭಿಪ್ರಾಯದಿಂದ ಆನಂದಮಯಾಧಿಕರಣ ಮೊದಲಾದಡೆ ಅಮುಖ್ಯತ್ವಾದಿಗಳನ್ನು ಹೇಳಿದ್ದಾರೆ. ಅಂದರೆ ನಾಲ್ಕನೇ ಪಾದದಲ್ಲಿ ಹೇಳುವ ವಿಚಾರಕ್ಕೆ ಉಪಯೋಗಿಯಾಗಿ ಈ ವಿಚಾರಗಳು ಅಲ್ಲಲ್ಲಿ ಹೇಳಲ್ಪಟ್ಟವೆ.

ಹೀಗೆ ಹೇಳದಿದ್ದರೆ ಬ್ರಹ್ಮನು ಅವಾಚ್ಯನೆಂದಾಗಿ ಶಬ್ದಗಳ ಮುಖ್ಯಪ್ರತಿಪಾದ್ಯತ್ವವನ್ನೇ ಸಮರ್ಥಿಸಲು ಸಾಧ್ಯವಾಗದಿರಬೇಕಾದೀತು.

ಹಾಗಾದರೆ ಶಬ್ದಪ್ರವೃತ್ತಿನಿಮಿತ್ತವಾದ ಗುಣಗಳೆಲ್ಲವೂ ಅವ್ಯಕ್ತಾಧಿಕರಣದಿಂದಲೇ ಸಿದ್ಧವಾಗುವಾಗ ಉಳಿದ ಅಧಿಕರಣಗಳೆಲ್ಲವೂ ವ್ಯರ್ಥವಲ್ಲವೇ ? ಎಂಬ ಪ್ರಶ್ನೆಗೆ 'ತತ್ತಚ್ಛಬ್ದಪ್ರವೃತ್ತಿ' ಇತ್ಯಾದಿವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಂದರೆ ಅವಯವಶಕ್ತಿಯಿಂದ ದೊರೆಯುವ ಪರಮೈಶ್ವರ್ಯವೆಂಬ ಗುಣಲಾಭಕ್ಕಾಗಿ ಎಂದರ್ಥ.

ಮೂರು ಪಾದಗಳಲ್ಲಿ ಸ್ವಾತಂತ್ರ್ಯವೆಂಬುದು ಶಬ್ದಪ್ರವೃತ್ತಿನಿಮಿತ್ತವೆಂದು ಸಿದ್ಧವಾಗಿದೆಯೋ ಇಲ್ಲವೋ? ಎಂಬ ಸಂಶಯವು ಬಂದರೆ ಸ್ವಾತಂತ್ರ್ಯವು ಶಬ್ದಪ್ರವೃತ್ತಿನಿಮಿತ್ತವಾಗಿದೆಯೆಂದು ಅವ್ಯಕ್ತಾಧಿಕರಣದಲ್ಲಿ ಸಿದ್ಧಾಂತ ಮಾಡುತ್ತಾರೆ. ಹೊರತು ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವು ಅಥವಾ ಭಗವಂತನಲ್ಲಿವೆಯಂದು ಸಿದ್ಧಾಂತ ಮಾಡಿರುವುದಿಲ್ಲ. ಹೀಗಿರುವಾಗ ನಿಮ್ಮ ಈ ಮಾತು ಹೇಗೆ ಸರಿಹೊಂದುತ್ತದೆ?

ಹೌದು, ಆದರೆ 'ಸೂಕ್ಷ್ಮಂ ತು ತದರ್ಹತ್ವಾತ್' ಎಂಬ ಸೂತ್ರದಲ್ಲಿ ಉಪಲಕ್ಷಣಯಾ ಸಕಲಶಬ್ದಗಳ ಪ್ರವೃತ್ತಿನಿಮಿತ್ತವನ್ನೂ ಸಹ ಈಶಗತವೆಂದು ಸಮರ್ಥಿಸಿದ್ದಾರೆ.

ಅಥವಾ 'ತತ್ತಚ್ಛಬ್ದಪ್ರವೃತ್ತಿನಿಮಿತ್ತಗುಣಲಾಭಸ್ಯ' ಎಂಬುದಕ್ಕೆ ಸ್ವಾತಂತ್ರ್ಯವೆಂಬ ಗುಣಲಾಭಕ್ಕಾಗಿ ಎಂದೇ ಅರ್ಥ. ಸ್ವಾತಂತ್ರ್ಯವಾದರೂ ಸಹ 'ತದಧೀನಾತ್ವತ್' ಎಂಬ ಸೂತ್ರದಲ್ಲಿಯೇ ಪ್ರವೃತ್ತಿನಿಮಿತ್ತವೆಂದು ಸಮರ್ಥಿಸುತ್ತಾರೆಂದು ತಿಳಿಯಬೇಕು.

ಗುರುರಾಜೀಯಮ್ – ಏವಮಧಿಕಾಶಙ್କಾಪಕ್ಷೇ ಪೂರ್ವಪಕ್ಷೋದಯಂ ಕಿಞ್ಚಿದ್ವಕ್ಷ್ಯನ್ನಾದೌ ಪ್ರಾಗುಕ್ತಯಥಾ-ಭಾಷ್ಯಪೂರ್ವಪಕ್ಷಸಿದ್ಧಾನ್ತಮವಲಮ್ಬ್ಯಾಹ – ಯಚ್ಚೇತಿ ।।

ಅಥವಾ ನನು ತಥಾಪಿ ಕಿಂ ಶ್ರುತಿಮಾತ್ರೇಣ ಪೂರ್ವಃ ಪಕ್ಷ ಉತ ಲಿಙ್ಗೈರ್ವಾ । ನಾದ್ಯಃ । ಅನ್ತರಧಿಕರಣನ್ಯಾಯೇನ ಶ್ರುತಿಮಾತ್ರಸ್ಯ ಭಗವತ್ಪರತ್ವೇನ ಪೂರ್ವಪಕ್ಷಾಸಾಧಕತ್ವಸ್ಯೋಕ್ತತ್ವಾತ್ । ಲಿಙ್ಗಾನಾಮಪ್ಯನ್ತರ್ಯಾಮಿಣಿ ಸಾವಕಾಶತ್ವಾನ್ನ ದ್ವಿತೀಯೋಪೀತ್ಯರುಚ್ಯಾ ಪಕ್ಷಾನ್ತರಮಾಹ – ಯಚ್ಚೇತಿ ।।

ननु यद्यन्तराद्यधिकरणेष्विन्द्रादिशब्दानां भगवति मुख्यत्वं नाभिप्रेतं तर्ह्यनुव्याख्यानविरोधस्स्यात् । तत्रेन्द्रादिशब्दानां भगवति मुख्यत्वस्याभिधानादित्यत आह – **तस्मादिति** ।। अत्रैवानुव्याख्यानीयं ज्ञापकमाह – **अत एवेति** ।। अन्यथा हृदीत्यस्य वैयर्थ्यं स्यादित्यर्थः ।

ननु समन्वयसूत्रे सर्वेषां शब्दानां मुख्यवृत्त्या भगवत्परत्व उक्ते अवाच्यत्वात्कथं तत्र शब्दानां मुख्यत्वमित्याशङ्क्य ईक्षतेरित्यनेन वाच्यत्वोपपादनेन परिहृतेति शब्दानां मुख्यार्थत्वमेवाभ्युपेयम् । अन्यथा ईक्षत्यधिकरणे वाच्यत्वोपपादनमयुक्तं स्यादित्यत आह – **ईक्षत्यधिकरण इति** ।। तदुपयोगितया तदधीनत्वादित्यत्रोच्यमानमुख्यतोपयोगितयेत्यर्थः ।

ननु तथापि प्रत्यधिकरणं टीकायामाकाशशब्दवाच्यत्वसमर्थनादित्युपक्रमे तस्मादाकाशोपलक्षितसकलशब्दवाच्यमित्युपसंहारटीकायां च वाच्यत्वोक्तेः का गतिरित्यत आह – **टीकायामिति** ।। उक्त एवाभिप्रायः ।

नन्वेवं तदधीनत्वादित्यधिकरणसिद्धान्तेनैव सकलपूर्वपक्षाणां निराससम्भवेनाधिकरणान्तरस्य वैयर्थ्यमित्यत आह – **तत्तदिति** ।।

ಸಾರ

ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಗುಣಗಳು ಲಾಭವಾಗಬೇಕೆಂದರೆ ವಕ್ಷ್ಯಮಾಣನ್ಯಾಯದ ಅಪೇಕ್ಷೆಯಿರುತ್ತದೆ. ಆದರೆ ಆಯಾ ಪ್ರಕರಣದಲ್ಲಿರುವ ಗುಣಗಳಷ್ಟೇ ತಿಳಿಯಬೇಕೆಂದರೆ ಹಿಂದಿನ ಅಧಿಕರಣದ ಮೇಲೆ ಬರುವ ಆಕ್ಷೇಪವನ್ನು ನಿರಾಕರಿಸಿದರೆ ಸಾಕು. ಆದ್ದರಿಂದ ಪೂರ್ವಾಧಿಕರಣದ ಆಕ್ಷೇಪ ಹಾಗೂ ಸಮಾಧಾನ ಮಾಡುವುದು ಆಯಾ ಅಧಿಕರಣಗಳಿಂದಷ್ಟೇ ಸಾಧ್ಯವಾಗುತ್ತದೆ. ಈ ಪ್ರಯೋಜನವು 'ತದಧೀನತ್ವ' ಸೂತ್ರದಿಂದ ದೊರೆಯುವುದಿಲ್ಲ. ಆದ್ದರಿಂದ ಆದಿತ್ಯಾದಿಶಬ್ದಗಳಿಗೆ ವಿಷ್ಣುವಿನಲ್ಲಿ ಮುಖ್ಯಪ್ರತಿಪಾದ್ಯತ್ವವನ್ನು ಅಂಗೀಕರಿಸದ ಕಾರಣ ಪೂರ್ವಪಕ್ಷವು ಹುಟ್ಟಬಹುದು

ಒಬ್ಬ ದೇವತೆಯ ಪರ್ಯಾಯಶಬ್ದಗಳ ಸಮನ್ವಯವನ್ನು ಬೇರೆ ಬೇರೆ ಅಧಿಕರಣಗಳಲ್ಲಿ ಮಾಡಬಹುದು

तात्पर्यचन्द्रिका

अत एवात्र टीकादावादित्यशब्दस्य न विष्णुपरता, तल्लिङ्गाभावात्, प्रत्युत आदित्यलिङ्गसद्भावादिति दर्शयितुं तल्लिङ्गप्रतिपादकांशोऽप्युपात्तः । एवं चोत्तरत्रापि अ(आ)दित्यादिशब्दैः पूर्वत्रापि प्राणादिशब्दैः पूर्वपक्षोदयस्सुलभः । अन्यथा अन्यश्रुतीनामन्यलिङ्गानां च तदधीनत्वन्यायेन ब्रह्मणि मुख्यत्वस्य सिद्धत्वेनान्यश्रुत्याद्याश्रयणेन पूर्वपक्षः कापि नोदीयात् ।

यद्वा "अन्तः" इत्यत्रेन्द्रादिशब्दानां विष्णौ मुख्यत्वोक्तिरस्तु, तथाऽप्यादित्यशब्दो नान्तरधिकरणविषयवाक्ये श्रुतः, नापि तन्न्यायविषयः, अत्रेव तत्र निरवकाशलिङ्गभावात् ।

अत एव टीकादौ तदविषयतां दर्शयितुं देवतालिङ्गप्रतिपादकांशोऽप्युदाहृतः । पर्यायाणामपि तदधिकरणन्यायविषयाणामेव तेन समन्वयसिद्धिः, नतु तदविषयाणम् । उत्तराधिकरणटीकाऽप्यदितिसजातीयेन्द्रादि शब्दसमन्वयस्योक्तत्वाभिप्राया । अनुव्याख्याने सर्वशब्दोऽपि न्यायविषयसर्वपरः । तत्राधिदैविकत्वाद्युपाध्युक्तिरपि अधिकरणान्तरविषयाधिभौतिकादिव्यावृत्त्यर्था, नतु सर्वाधिदैविकसङ्ग्रहार्था । तस्माद्युक्तः पूर्वपक्षः ।

ಅನುವಾದ - ಆದ್ದರಿಂದಲೇ ಈ ಅಧಿಕರಣದ ಟೀಕೆ ಭಾಷ್ಯ ಮೊದಲಾದವುಗಳಲ್ಲಿ ಆದಿತ್ಯ ಶಬ್ದಕ್ಕೆ ವಿಷ್ಣುಪರತ್ವವನ್ನು ಹೇಳಿರುವುದಿಲ್ಲ. ಏಕೆಂದರೆ ವಿಷ್ಣುಲಿಂಗವೇ ಇರುವುದಿಲ್ಲ. ಹೊರತಾಗಿ ಆದಿತ್ಯಪ್ರಾಪಕವಾದ ಲಿಂಗವೇ ಇರುತ್ತದೆಂಬುದನ್ನು ತಿಳಿಸುವುದಕ್ಕಾಗಿ ಆದಿತ್ಯಲಿಂಗಪ್ರತಿಪಾದಕವಾದ ಅಂಶವನ್ನೂ ಸಹ ಹೇಳಿದ್ದಾರೆ. ಹೀಗೆ ವಿವಕ್ಷಿಸಿದ್ದರಿಂದ ಮುಂದಿನ ಆತ್ಮತ್ವಾಧಿಕರಣದಲ್ಲಿಯೂ ಅದಿತಿಶಬ್ದಗಳಿಂದ ಮತ್ತು ಹಿಂದಿನ ಪ್ರಾಣಾದಿಕರಣದಲ್ಲಿ ಪ್ರಾಣಾದಿಶಬ್ದಗಳಿಂದ ಪೂರ್ವಪಕ್ಷದ ಉದಯವು ಸುಲಭವಾಗುತ್ತದೆ. ಇಲ್ಲದಿದ್ದಲ್ಲಿ ಶ್ರುತಿಗಳು ಹಾಗೂ ಅನ್ಯಲಿಂಗಗಳು ತದಧೀನತ್ವನ್ಯಾಯದಂತೆ ಬ್ರಹ್ಮನಲ್ಲಿ ಮುಖ್ಯವಾಗಿವೆಯೆಂದು ಈಗಾಗಲೇ ನಿರ್ಣಯವಾಗಿರುವುದರಿಂದ ಅನ್ಯಪ್ರಾಪಕಶ್ರುತ್ಯಾದಿಗಳನ್ನು ಆಶ್ರಯಿಸಿದ ಪೂರ್ವಪಕ್ಷ ಯಾವುದೇ ಅಧಿಕರಣದಲ್ಲಿಯೂ ಉದಯವಾಗದಿರಬೇಕಾದೀತು.

ಅಥವಾ ಹಿಂದಿನ ಅಂತರಧಿಕರಣದಲ್ಲಿ ಇಂದ್ರಾದಿಶಬ್ದಗಳು ವಿಷ್ಣುವಿನಲ್ಲೇ ಮುಖ್ಯವಾಗಿವೆಯೆಂದು ನಿರ್ಣಯಿಸಲಾಗಿದೆಯೆಂಬ ವಿಚಾರವನ್ನು ಒಪ್ಪಿಕೊಳ್ಳೋಣ. ಆದರೂ ಸಹ ಆದಿತ್ಯಾದಿಶಬ್ದವು ಅಂತರಧಿಕರಣದ ವಿಷಯವಾಕ್ಯದಲ್ಲಿ ಕೇಳಿಸುತ್ತಿಲ್ಲ. ಮತ್ತು ಅಂತರಧಿಕರಣದ ನ್ಯಾಯಕ್ಕೆ ವಿಷಯವೂ ಆಗಿಲ್ಲ. ಈ ಅಧಿಕರಣದಲ್ಲಿ ನಿರವಕಾಶವಾದ ಆದಿತ್ಯಾದಿ ದೇವತಾಲಿಂಗಗಳಿದ್ದಂತೆ ಅಂತರಧಿಕರಣದ ವಿಷಯವಾಕ್ಯದಲ್ಲಿ ಅಂತಹ ದೇವತಾಲಿಂಗಗಳೂ ಸಹ ಇರುವುದಿಲ್ಲ. ಆದ್ದರಿಂದಲೇ ಟೀಕೆಯಲ್ಲಿ ಆದಿತ್ಯಾದಿ ಶಬ್ದಗಳು ' ಅಂತರಧಿಕರಣದ ನ್ಯಾಯಕ್ಕೆ ವಿಷಯವಾಗಿಲ್ಲವೆಂಬುದನ್ನು ತೋರಿಸುವುದಕ್ಕಾಗಿಯೇ ದೇವತಾಲಿಂಗಪ್ರತಿಪಾದಕವಾದ ಅಂಶವನ್ನೂ ಸಹ ಉದಾಹರಿಸಿದ್ದಾರೆ.

ವಸ್ತುತಃ ಒಬ್ಬ ದೇವತೆಯನ್ನೇ ಹೇಳುವ ಪರ್ಯಾಯ ಶಬ್ದಗಳ ಸಮನ್ವಯವನ್ನು ಬೇರೆ ಬೇರೆ ಅಧಿಕರಣಗಳಲ್ಲಿ ಮಾಡುತ್ತಿದ್ದಾರೆ. ಇದೇನು ತಪ್ಪಲ್ಲ ? ಏಕೆಂದರೆ ಪರ್ಯಾಯ ಶಬ್ದವಾಗಿದ್ದರೂ ಸಹ ಆಯಾ ಅಧಿಕರಣದ ನ್ಯಾಯಕ್ಕೆ ವಿಷಯವಾದದ್ದನ್ನು ಮಾತ್ರ ಆಯಾ ಅಧಿಕರಣದಲ್ಲಿ ಸಮನ್ವಯ ಮಾಡುತ್ತಾರೆ. ಹೊರತು ಆಯಾ ಅಧಿಕರಣದ ನ್ಯಾಯಕ್ಕೆ ವಿಷಯವಾಗದ ಶಬ್ದಸಮನ್ವಯವನ್ನು ಮಾಡುವುದಿಲ್ಲ.

ಹಾಗಾದರೆ ಮುಂದಿನ ಅತ್ಯತ್ವಾಧಿಕರಣದ ಟೀಕೆಯಲ್ಲಿ ''ದೇವತಾವಾಚಕ ಪದಗಳನ್ನು ಸಮನ್ವಯ ಮಾಡಿದ್ದಾಗಿದೆಯಲ್ಲವೇ ?'' ಎಂದು ಪ್ರಶ್ನಿಸಿದ್ದಾರೆ. ಇದು ಹೇಗೆ ಕೂಡುತ್ತದೆ ? ಎಂಬ ಗೊಂದಲಕ್ಕೆ ಅವಕಾಶವಿಲ್ಲ. ಏಕೆಂದರೆ ಅದಿತಿ ಶಬ್ದಕ್ಕೆ ಸಜಾತೀಯವಾದ ಇಂದ್ರಾದಿಶಬ್ದಗಳ ಸಮನ್ವಯವೂ ಸಿದ್ಧವಾಗಿದೆ ಎಂಬ ಅಭಿಪ್ರಾಯದಿಂದಷ್ಟೇ ಟೀಕೆಯ ಮಾತು ಹೊರಟಿದೆ. ಅನುವ್ಯಾಖ್ಯಾನದಲ್ಲಿಯೂ ಸಹ ಸರ್ವಶಬ್ದದಿಂದ ಸಕಲ ದೇವತಾವಾಚಕ ಪದಗಳ ಸಮನ್ವಯಗಳನ್ನು ನಿರ್ಣಯಿಸಲಾಗಿದೆ ಎಂದು ತಿಳಿಯಬಾರದು. ಆಯಾ ಅಧಿಕರಣದ ನ್ಯಾಯಕ್ಕೆ ವಿಷಯವಾದ ಸಕಲಶಬ್ದಗಳ ಸಮನ್ವಯಗಳಷ್ಟೇ ನಿರ್ಣಯವಾಗಿದೆ ಎಂದರ್ಥವೇ ಹೊರತು. ಅಧಿಕರಣ ನ್ಯಾಯಕ್ಕೆ ವಿಷಯವಾಗದ ಶಬ್ದ ಸಮನ್ವಯವೂ ನಿರ್ಣಯವಾಗಿದೆ ಎಂದರ್ಥವಲ್ಲ.

ಹಾಗಾದರೆ ಅಂತರಧಿಕರಣದಲ್ಲಿ ಆಧಿದೈವಿಕತ್ವವೆಂಬ ಉಪಾಧಿಯನ್ನು ಹೇಳುವ ಮೂಲಕ ಸಕಲದೇವತಾವಾಚಕ ಪದಗಳ ಸಮನ್ವಯವನ್ನು ಮಾಡಿದ್ದಾರಲ್ಲವೇ ? ಎಂದು ಪ್ರಶ್ನಿಸಬಾರದು. ಆಧಿದೈವಿಕತ್ವ ಎಂಬ ಉಪಾಧಿಯನ್ನು ಹೇಳಿದ್ದು ಕೇವಲ ಆಧಿಭೌತಿಕಾದಿ ಶಬ್ದಗಳ ಸಮನ್ವಯವನ್ನು ಮಾಡುತ್ತಿಲ್ಲವೆಂಬ ವ್ಯಾವೃತ್ತಿಜ್ಞಾನಕ್ಕಾಗಿ ಮಾತ್ರ ಹೊರತು ಆಧಿದೈವಿಕವಾದ ಎಲ್ಲಾ ಶಬ್ದಗಳ ಸಂಗ್ರಹಕ್ಕಾಗಿ ಅಲ್ಲ. ಹಾಗಾಗಿ ಇಲ್ಲಿ ಸಮನ್ವಯ ಮಾಡುತ್ತಿರುವ ಆದಿತ್ಯಾದಿ ಶಬ್ದಗಳೂ ಅಂತರಧಿಕರಣದ ನ್ಯಾಯದಿಂದ ಗತಾರ್ಥವಾಗುವುದಿಲ್ಲ. ಆದ್ದರಿಂದ ಪೂರ್ವಪಕ್ಷವು ಯುಕ್ತವೇ ಆಗಿದೆ.

ಪ್ರಕಾಶಃ –

ನನ್ವೇವಂ ಭಾಷ್ಯಾದೌ ''ತಸ್ಯೈತಸ್ಯಾಸೌ'' ಇತಿ ಲಿಙ್ಗಭಾಗೋಕ್ತಿಃ ಕಿಮರ್ಥೇತ್ಯತಃ ತದಾಶಯಮಾಹ – ಅತ ಏವೇತಿ । ತನ್ನಚಾಯಾವಿಷಯತ್ವಮೇವಾಹ – ಅತ್ರೇವೇತಿ । ನನ್ವೇವಮುತ್ತರಾಧಿಕರಣ-ಟೀಕಾಯಾಮದಿತಿಶ್ರುತೇಃ ಸಾವಕಾಶತ್ವೋಕ್ತಿರಯುಕ್ತಾ, ತಸ್ಯಾ ಅಪಿ ತದ್ವಿಷಯವಾಕ್ಯೇ ಅಶ್ರುತತ್ವಾತ್ । ತನ್ನಚಾಯಾವಿಷಯತ್ವಾಚ್ಚ । ಅತ ಏವ 'ಅದಿತಿತ್ವಲಿಙ್ಗಾತ್' ಇತಿ ವಕ್ಷ್ಯತೀತ್ಯತ ಆಹ – ಉಕ್ತೇರಿತಿ । ನನ್ವೇವಂ ''ದೇವತಾನ್ತರಗಾಃ ಸರ್ವೇ'' ಇತ್ಯುಕ್ತಿವಿರೋಧ ಇತ್ಯತ ಆಹ – ಅನುವ್ಯಾಖ್ಯಾನ ಇತಿ । ನನ್ವೇವಂ ಸಙ್ಕೋಚೇ ''ದೇವತಾನ್ತರಗಾಃ'' ಇತ್ಯಧಿದೈವಿಕಶಬ್ದತ್ವಂ ''ಅಧ್ಯಾತ್ಮಗೈಶ್ಚ ಪ್ರಾಣಾದ್ಯೈಃ'' ಇತ್ಯಧ್ಯಾತ್ಮಶಬ್ದತ್ವಮಿತ್ಯಾದ್ಯುಪಾಧ್ಯುಕ್ತಿರಯುಕ್ತಾ, ಸರ್ವಸಙ್ಗ್ರಹಾರ್ಥತ್ವಾತ್ತಸ್ಯ ಇತ್ಯತ ಆಹ – ತತ್ರೇತಿ ।

ವಿವರಣೆ - ಹಾಗಾದರೆ ಭಾಷ್ಯ ಟೀಕೆ ಮೊದಲಾದವುಗಳಲ್ಲಿ ''ತಸ್ಯೈತಸ್ಯಾಸೌ'' ಎಂಬ ಲಿಂಗ ಭಾಗವನ್ನು ಏಕೆ ಹೇಳಿದ್ದಾರೆ ? ಎಂಬ ಪ್ರಶ್ನೆಗೆ ಉತ್ತರಿಸುವವರಾಗಿ ಭಾಷ್ಯಟೀಕೆಗಳ ಅಭಿಪ್ರಾಯವನ್ನು 'ಅತ ಏವ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. ಅಂತರಧಿಕರಣದ ನ್ಯಾಯಕ್ಕೆ ಆದಿತ್ಯಾದಿ ಶಬ್ದಗಳು ವಿಷಯವಾಗುವುದಿಲ್ಲವೆಂಬುದನ್ನು 'ಅತ್ರೇವ' ಎಂಬ ವಾಕ್ಯದಿಂದ ನಿರೂಪಿಸಿದ್ದಾರೆ.

ಪ್ರಶ್ನೆ - ಮುಂದಿನ ಅತ್ಯತ್ವಾದಿಕರಣದ ಟೀಕೆಯಲ್ಲಿ ಅದಿತಿಶ್ರುತಿಗೆ ಸಾವಕಾಶತ್ವವನ್ನು ಹೇಳಿದ್ದು ತಪ್ಪಲ್ಲವೇ? ಏಕೆಂದರೆ ಅದಿತಿಶಬ್ದವು ವಿಷಯವಾಕ್ಯದಲ್ಲಿ ಕೇಳಿಸುತ್ತಲೇ ಇಲ್ಲ. ಮತ್ತು ಆ ಅಧಿಕರಣದ ನ್ಯಾಯಕ್ಕೆ ವಿಷಯವೂ ಆಗಿಲ್ಲ ಆದ್ದರಿಂದಲೇ 'ಅದಿತಿತ್ವಲಿಂಗಾತ್' ಎಂದು ಹೇಳುತ್ತಾರಲ್ಲವೇ ?

ಉತ್ತರ - ಈ ಪ್ರಶ್ನೆಗೆ 'ಉತ್ತರಾಧಿಕರಣ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಅದಿತಿ' ಶಬ್ದವು ಈಗಾಗಲೇ ಸಮನ್ವಯವಾಗಿದೆ ಎಂಬ ಅಭಿಪ್ರಾಯವನ್ನು ಅತ್ಯತ್ವಾದಿಕರಣದ ಟೀಕಾಮಾತಿಗೆ ತಿಳಿಯಬಾರದು ಹೊರತಾಗಿ 'ಅದಿತಿ' ಶಬ್ದದಂತಿರುವ ಇಂದ್ರಾದಿ ಶಬ್ದಗಳ ಸಮನ್ವಯವಷ್ಟೇ ನಿರ್ಣಯವಾಗಿದೆಯೆಂದು ತಿಳಿಯಬೇಕು.

ಪ್ರಶ್ನೆ - ''ದೇವತಾಂತರಗಾಃ ಸರ್ವೇ'' ಎಂಬುದಾಗಿ ಅನುವ್ಯಾಖ್ಯಾನದಲ್ಲಿ ಸಕಲದೇವತಾವಾಚಕಪದಗಳು ಅಂತರಧಿಕರಣದಲ್ಲಿ ಸಮನ್ವಯವಾಗಿವೆ ಎಂದು ಹೇಳಿದ್ದಾರಲ್ಲವೇ ?

ಉತ್ತರ - ಈ ಪ್ರಶ್ನೆಗೆ 'ಅನುವ್ಯಾಖ್ಯಾನೇ' ಎಂಬ ಮಾತಿನಿಂದ ಉತ್ತರಿಸುತ್ತಿದ್ದಾರೆ. ಸರ್ವಶಬ್ದಕ್ಕೆ ಅಂತರಧಿಕರಣದ ನ್ಯಾಯಕ್ಕೆ ವಿಷಯವಾಗುವ ದೇವತಾಪದಗಳನ್ನಷ್ಟೇ ವಿವಕ್ಷಿಸಿ ಸಂಕೋಚ ಮಾಡಬೇಕು.

ಪ್ರಶ್ನೆ - ಅನುವ್ಯಾಖ್ಯಾನದ ಮಾತಿಗೆ ಸಂಕೋಚ ಮಾಡುವುದಾದರೆ ''ದೇವತಾಂತರಗಾಃ'' ಎಂಬುದಾಗಿ ಅಧಿದೈವಿಕಶಬ್ದತ್ವವನ್ನು ಉಪಾಧಿಯನ್ನಾಗಿ ಹೇಳಿದ್ದು ಮತ್ತು ''ಅಧ್ಯಾತ್ಮಗೈಶ್ಚ ಪ್ರಾಣಾದ್ಯೈಃ'' ಎಂಬುದಾಗಿ ಅಧ್ಯಾತ್ಮಶಬ್ದತ್ವವನ್ನು ಉಪಾಧಿಯನ್ನಾಗಿ ಹೇಳಿದ್ದು ಅಯುಕ್ತವಾಗುತ್ತದೆ. ಸಕಲದೇವತಾವಾಚಕ ಪದಸಮನ್ವಯಕ್ಕೋಸ್ಕರವೇ ಉಪಾಧಿಯನ್ನು ಹೇಳಿದ್ದಾರೆಂದು ಇದರಿಂದ ತಿಳಿಯುತ್ತಲ್ಲವೇ ?

ಉತ್ತರ - ಈ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ 'तत्र' ಇತ್ಯಾದಿ ವಾಕ್ಯವು ಹೊರಟಿದೆ. ಅಂದರೆ ಆಂತರಧಿಕರಣದ ನ್ಯಾಯಕ್ಕೆ ವಿಷಯವಾಗುವ ಸಕಲದೇವತಾವಾಚಕ ಪದಸಮನ್ವಯವನ್ನಷ್ಟೇ ಆಧಿದೈವಿಕತ್ವ ಎಂಬ ಉಪಾಧಿಯಿಂದ ಸಂಗ್ರಹಿಸಬೇಕೇ ಹೊರತು ಆ ಅಧಿಕರಣದ ನ್ಯಾಯಕ್ಕೆ ವಿಷಯವಾಗದ ಸಕಲದೇವತಾವಾಚಕ ಪದಗಳನ್ನು ಸಂಗ್ರಹಿಸಬಾರದು.

गुरुराजीयम् – नन्वेवं श्रुतिमात्रेण टीकायां लिङ्गप्रतिपादकांशोदाहरणमयुक्तं स्यादित्यत आह – **अत एवेति ।।**

नन्वेवमनुव्याख्याने तत्राभ्यधिकाशङ्कोक्तिरयुक्ता । सुधायां च नन्वेवमपि तु पूर्वन्यायेन गतार्थं नाधिकरणारम्भं प्रयोजयतीत्युक्तत्वात्तद्विरोधश्च । आकाशाधिकरणे तदधीनत्वादित्यत्र सर्वस्येश्वराधीनतामङ्गीकृत्य तस्याः प्रवृत्तिनिमित्तत्वं नेति प्राप्तेऽस्तीति सिद्धान्त इत्येवं प्रतिपाद्यते । ननु मुख्यत्वमित्युक्तत्वेन तद्विरोधश्चेत्यरुच्या पक्षान्तरमाह – **यद्वेति ।।**

ननु तत्र कथं निरवकाशदेवतालिङ्गाभावः । 'सप्त युञ्जन्ति रथमेकचक्रं' इति निरवकाशलिङ्गानां तत्रापि सद्भावादिति चेन्न ।

क्वचिन्निरवकाशलिङ्गसद्भावेप्यसार्वत्रिकत्वान्न तस्य विवक्षा । नहि तत्र स एवान्तस्थ इत्येक एव पूर्वपक्ष । किं त्वनेके । नच सर्वत्रापि लिङ्गं निरवकाशं यच्चास्ति निरवकाशं लिङ्गं तदप्येतदधिकरणन्यायेनैव सावकाशं भविष्यतीति तत्र न विवक्षितम् । किन्तु श्रुतिमात्रेण पूर्वपक्षे लिङ्गेन सिद्धान्तः । अत्र तु श्रुतिलिङ्गाभ्यां पूर्वपक्षिते निरवकाशश्रुतिलिङ्गाभ्यां सिद्धान्तोऽतो युक्तो न्यायभेदः । नन्वन्तरधिकरणन्यायेन सवितृशब्दस्य भगवत्परत्वे निर्णीते तत्पर्यायत्वादादित्य-शब्दस्यापि भगवत्परत्वमावश्यकमित्यत आह – **पर्यायाणामिति ।।** नन्वेवमन्तस्थ-प्रकरणेप्यदितिशब्दस्याप्यभावेनोत्तराधिकरणटीकायामदितिशब्दस्यान्तरधिकरणन्यायेन सावकाशत्वशङ्कानुपपत्तिरित्यत आह – **उत्तराधिकरणटीकापीति ।।** आदित्य-शब्दस्योत्तराधिकरणन्यायेन भगवत्परत्वाभावे देवतान्तरगा इत्यनुव्याख्यानविरोध इत्यत आह – **अनुव्याख्यान इति ।।** नन्वेवमन्तरधिकरणटीकायामधिदैवगतसर्वशब्द समन्वयः प्रतिपाद्यत इत्युपाध्युक्तेः कागतिरित्यत आह – **तत्रेति ।।**

ಸಾರ

ಅಥವಾ ಹಿಂದಿನ ಅಂತರಧಿಕರಣದಲ್ಲಿ ಇಂದ್ರಾದಿಶಬ್ದಗಳು ವಿಷ್ಣುವಿನಲ್ಲೇ ಮುಖ್ಯವಾಗಿವೆಯೆಂದು ನಿರ್ಣಯಿಸಲಾಗಿದೆಯೆಂಬ ವಿಚಾರವನ್ನು ಒಪ್ಪಿಕೊಳ್ಳೋಣ. ಆದರೂ ಸಹ ಆದಿತ್ಯಾದಿಶಬ್ದವು ಅಂತರಧಿಕರಣದ ವಿಷಯವಾಕ್ಯದಲ್ಲಿ ಕೇಳಿಸುತ್ತಿಲ್ಲ. ಮತ್ತು ಅಂತರಧಿಕರಣದ ನ್ಯಾಯಕ್ಕೆ ವಿಷಯವೂ ಆಗಿಲ್ಲ. ಈ ಅಧಿಕರಣದಲ್ಲಿ ನಿರವಕಾಶವಾದ ಆದಿತ್ಯಾದಿ ದೇವತಾಲಿಂಗಗಳಿದ್ದಂತೆ ಅಂತರಧಿಕರಣದ ವಿಷಯವಾಕ್ಯದಲ್ಲಿ ಅಂತಹ ದೇವತಾಲಿಂಗಗಳೂ ಸಹ ಇರುವುದಿಲ್ಲ. ಆದ್ದರಿಂದಲೇ ಟೀಕೆಯಲ್ಲಿ ಆದಿತ್ಯಾದಿ ಶಬ್ದಗಳು ಅಂತರಧಿಕರಣದ ನ್ಯಾಯಕ್ಕೆ ವಿಷಯವಾಗಿಲ್ಲವೆಂಬುದನ್ನು ತೋರಿಸುವುದಕ್ಕಾಗಿಯೇ ದೇವತಾಲಿಂಗಪ್ರತಿಪಾದಕವಾದ ಅಂಶವನ್ನೂ ಸಹ ಉದಾಹರಿಸಿದ್ದಾರೆ.

ವಸ್ತುತಃ ಒಬ್ಬ ದೇವತೆಯನ್ನೇ ಹೇಳುವ ಪರ್ಯಾಯ ಶಬ್ದಗಳ ಸಮನ್ವಯವನ್ನು ಬೇರೆ ಬೇರೆ ಅಧಿಕರಣಗಳಲ್ಲಿ ಮಾಡುತ್ತಿದ್ದಾರೆ. ಇದೇನು ತಪ್ಪಲ್ಲ ? ಏಕೆಂದರೆ ಪರ್ಯಾಯ ಶಬ್ದವಾಗಿದ್ದರೂ ಸಹ ಆಯಾ ಅಧಿಕರಣದ ನ್ಯಾಯಕ್ಕೆ ವಿಷಯವಾದದ್ದನ್ನು ಮಾತ್ರ ಆಯಾ ಅಧಿಕರಣದಲ್ಲಿ ಸಮನ್ವಯ ಮಾಡುತ್ತಾರೆ. ಹೊರತು ಆಯಾ ಅಧಿಕರಣದ ನ್ಯಾಯಕ್ಕೆ ವಿಷಯವಾಗದ ಶಬ್ದಸಮನ್ವಯವನ್ನು ಮಾಡುವುದಿಲ್ಲ.

• • • • •

ಸರ್ವಗತತ್ವಾಧಿಕರಣವು ನಾಮಪಾದದಲ್ಲಿ ಸೇರದು

तात्पर्यचन्द्रिका

न चैवं यत्सम्बन्धात्सर्वगतत्वस्यान्यत्रप्रसिद्धता, तन्नामसमन्वय एवोच्यतामिति वाच्यम्,

अन्तर्यामित्वादेर्लिङ्गस्य पृथिवीशरीरत्वादिलिङ्गसम्बन्धादेव अन्यत्रप्रसिद्धत्वात्तत् समन्वयार्थं पादान्तरे कार्ये, तत्सङ्गत्यर्थमत्रापि लिङ्गस्यैव समन्वेतव्यत्वात् ।

नच यत्र लिङ्गं नामसम्बन्धादन्यत्रप्रसिद्धम्, तदधिकरणं नामसमन्वयपरं आद्यपादस्थं चास्त्विति वाच्यम्,

तथात्वे आदित्यादिशब्दप्रवृत्तिनिमित्तगुणस्यान्तरधिकरणेनैव लब्धतया साक्षादपूर्वगुणालाभात् । अर्भकौकस्त्वादिपूर्वपक्षमूलयुक्तेः प्रसिद्धोपदेशादिसिद्धान्त-युक्तेश्च सर्वगतवाक्य इव आदित्यवाक्येऽसत्त्वाच्च ।

नामपादे नामसमन्वये हेतुतयोक्तलिङ्गसमन्वयस्यैव इह आकाङ्क्षितत्वाच्च । तस्मादादित्यश्रुतितः सूर्यप्राप्तिर्युक्ता ।

सौरमन्त्रोदाहरणाच्च तत्प्राप्तिः, मन्त्रे ''चक्षुर्मित्रस्य'' इति चक्षुष्ट्वस्य श्रवणात्तस्य च ''आदित्यश्चक्षुर्भूत्वा'' इत्यादित्यश्रुत्याऽऽदित्यलिङ्गत्वात् । उक्तादित्यश्रुत्युपोद्बलिताद्विशिष्याऽऽदित्येऽनुक्तत्वलिङ्गाच्च तत्प्राप्तिः ।

ಅನುವಾದ - ಶಂಕೆ - 'ಆದಿತ್ಯ' ಎಂಬ ನಾಮಬಲದಿಂದ ಸರ್ವಗತತ್ವಕ್ಕೆ ಅನ್ಯತ್ರಪ್ರಸಿದ್ಧತ್ವವನ್ನು ಸಮರ್ಥಿಸುತ್ತಿದ್ದೀರಿ. ಹಾಗಾದರೆ ನಾಮಸಮನ್ವಯವನ್ನೇ ಈ ಅಧಿಕರಣದಲ್ಲಿ ನೇರವಾಗಿ ಮಾಡಬಹುದಲ್ಲವೇ?

ಸಮಾಧಾನ - ಇದು ತಪ್ಪು. ಅಂತರ್ಯಾಮಿತ್ವ ಮೊದಲಾದ ಲಿಂಗಗಳೆಂತು ಪೃಥ್ವೀಶರೀರ ಮೊದಲಾದ ಲಿಂಗಗಳ ಅಧೀನವಾಗಿದೆ. ಅನ್ಯತ್ರಪ್ರಸಿದ್ಧವೆನಿಸಿದೆ. ಇದಕ್ಕೋಸ್ಕರ ಲಿಂಗಪಾದವೆಂತು ಹೊರಡಲೇ ಬೇಕು. ಈ ಅಂತರ್ಯಾಮ್ಯಧಿಕರಣದ ಸಂಗತಿಗೋಸ್ಕರ ಇಲ್ಲಿಯೂ ಸಹ ಸರ್ವಗತತ್ವ ಎಂಬ ಲಿಂಗವನ್ನೇ ಸಮನ್ವಯ ಮಾಡುವುದು ಸೂಕ್ತವಾಗಿದೆ.

ಶಂಕೆ - ಹಾಗಾದರೆ ಎಲ್ಲಿ ಲಿಂಗವು ನಾಮಸಮನ್ವಯದ ಅಧೀನವಾಗಿ ಅನ್ಯತ್ರಪ್ರಸಿದ್ಧವಾಗಿದೆಯೋ ಆ ಅಧಿಕರಣವು ನಾಮಸಮನ್ವಯಪರವಾಗಲಿ; ಮತ್ತು ಪ್ರಥಮ ಪಾದದಲ್ಲಿಯೇ ಅಂತರ್ಭೂತವಾಗಲಿ. ಆದ್ದರಿಂದ ಅಂತರ್ಯಾಮ್ಯಧಿಕರಣವು ಎರಡನೇ ಪಾದದಲ್ಲಿರಲಿ. ಈ ಅಧಿಕರಣವು ಪ್ರಥಮಪಾದದಲ್ಲಿ ಸೇರಲಿ?

ಸಮಾಧಾನ - ಹಾಗೇ ಪ್ರಥಮಪಾದದಲ್ಲಿ ಸೇರಿಸುವುದಾದರೆ 'ಆದಿತ್ಯ' ಮೊದಲಾದ ಶಬ್ದಪ್ರವೃತ್ತಿ ಮೊದಲಾದ ಗುಣಗಳೆಲ್ಲವೂ ಅಂತರಧಿಕರಣದ ನ್ಯಾಯದಿಂದಲೇ ತಿಳಿದಿರುವಾಗ ಪುನಃ ಈ ಅಧಿಕರಣದಲ್ಲಿ ಹೊಸದಾದ ಗುಣವನ್ನು ಹೇಳಿದಂತಾಗುವುದಿಲ್ಲ. ಮತ್ತು ಪೂರ್ವಪಕ್ಷಕ್ಕೆ ಮೂಲಭೂತವಾದ 'ಅರ್ಭಕೌಕಸ್ತ್ವ' ಮೊದಲಾದ ಯುಕ್ತಿಗಳಾಗಲೀ, ಸಿದ್ಧಾಂತಕ್ಕೆ ಮೂಲಭೂತವಾದ 'ಪ್ರಸಿದ್ಧೋಪದೇಶ' ಮೊದಲಾದ ಯುಕ್ತಿಗಳಾಗಲೀ ಸರ್ವಗತ ವಾಕ್ಯದಲ್ಲಿರುವಂತೆ ಆದಿತ್ಯವಾಕ್ಯದಲ್ಲಿ ಇರುವುದೇ ಇಲ್ಲ. ಈ ಕಾರಣಕ್ಕಾಗಿಯೂ ಸರ್ವಗತತ್ವ ಲಿಂಗದಿಂದ ಕೂಡಿರುವ ವಾಕ್ಯವನ್ನೇ ಸಮನ್ವಯ ಮಾಡಬೇಕಾಗಿದೆ.

ಮತ್ತು ನಾಮಪಾದದಲ್ಲಿ ನಾಮಸಮನ್ವಯ ಮಾಡಲು ಹೇತುವಾಗಿ ಹೇಳಲ್ಪಟ್ಟ ಲಿಂಗಸಮನ್ವಯದ ಆಕಾಂಕ್ಷೆಯೂ ಬರುತ್ತದೆ. ಆದರ ಪರಿಹಾರಕ್ಕಾಗಿ ಲಿಂಗಸಮನ್ವಯವನ್ನೇ ಮಾಡಬೇಕು. ಆದ್ದರಿಂದ ಆದಿತ್ಯಶ್ರುತಿಯಿಂದ ಸೂರ್ಯನ ಬಗ್ಗೆ ಮಾಡುವ ವಿಚಾರವು ಸಮಂಜಸವೇ ಆಗಿದೆ.

ಸೂರ್ಯಪ್ರತಿಪಾದಕವಾದ ಮಂತ್ರವನ್ನು ಉದಾಹರಿಸಿದ್ದರಿಂದಲೂ ಸೂರ್ಯನೇ ಶ್ರುತಿಪ್ರತಿಪಾದ್ಯನಾಗುತ್ತಾನೆ. ಏಕೆಂದರೆ ಮಂತ್ರದಲ್ಲಿ ''ಚಕ್ಷುರ್ಮಿತ್ರಸ್ಯ'' ಇತ್ಯಾದಿಯಾಗಿ 'ಚಕ್ಷುಶ್ಚ'' ಎಂಬ ಧರ್ಮವು ಕೇಳಿಸುತ್ತಿದೆ. ''ಆದಿತ್ಯಶ್ಚಕ್ಷುರ್ಭೂತ್ವಾ'' ಎಂಬ ಶ್ರುತಿಯಿಂದ ಆದಿತ್ಯನದ್ದೇ ಎಂದು ನಿರ್ಣಯವಾಗಿದೆ.

ಮತ್ತು ಹಿಂದೆ ಹೇಳಿದ ಆದಿತ್ಯಶ್ರುತಿಯಿಂದ ಉಪೋದ್ಬಲಿತವಾದ ವಿಶೇಷವಾಗಿ ಆದಿತ್ಯನಲ್ಲಿರುವ 'ಅನುಕ್ತತ್ವ' ಎಂಬ ಲಿಂಗದಿಂದಲೂ ಸಹ ಸೂರ್ಯನೇ ಪ್ರತಿಪಾದ್ಯನಾಗುತ್ತಾನೆ.

ಕಠಿಣಪದಾರ್ಥ

ಯತ್ಸಂಬಂಧಾತ್ = ನಾಮಸಂಬಂಧದಿಂದ, ತತ್ಸಮನ್ವಯಾತ್ = ಅಂತರ್ಯಾಮಿತ್ವ ಎಂಬ ಲಿಂಗದ ಸಮನ್ವಯಕ್ಕೋಸ್ಕರ, ತತ್ಸಂಗತ್ಯರ್ಥಂ = ಅಂತರ್ಯಾಮಿಧಿಕರಣದ ಸಂಗತಿಗಾಗಿ, ಅತ್ರಾಪಿ = ಸರ್ವಗತತ್ವಾಧಿಕರಣದಲ್ಲಿಯು, ತಥಾತ್ವೇ = ಆದಿತ್ಯಶ್ರುತಿಯನ್ನು ಸಮನ್ವಯ ಮಾಡುವುದಾದರೆ, ಅಪೂರ್ವಗುಣಾಲಾಭಾತ್ = ಹೊಸದಾದ ಸಿದ್ಧಾಂತ ಯುಕ್ತಿಯನ್ನು ಹೇಳದಂತಾಗುವುದಿಲ್ಲ. ಹೇತುತಯೋಕ್ತಲಿಂಗಸಮನ್ವಯಸ್ಯ = ಕಾರಣವನ್ನಾಗಿ ನಿರೂಪಿಸಿದ ಸಂವರ್ಗ ಸಾರತ್ವ ಮೊದಲಾದ ಲಿಂಗಗಳ ಸಮನ್ವಯಕ್ಕೆ.

ಪ್ರಕಾಶಃ – ನನೂಕ್ತರೀತ್ಯಾ ಆದಿತ್ಯಶ್ರುತೇರ್ನಿರವಕಾಶತ್ವೇ ತಸ್ಯಾ ಏವ ಸಮನ್ವಯ ಉಚ್ಯತಾಂ, ತಸ್ಯಾಸ್ತ್ವತ ಏವಾನ್ಯತ್ರಪ್ರಸಿದ್ಧತ್ವಾತ್, ಕಿಂ ತತ್ಸಾಹಿತ್ಯೇನ ಅನ್ಯತ್ರಪ್ರಸಿದ್ಧಲಿಙ್ಗಸಮನ್ವಯೇನ । ನಚಾಽದ್ಯಪಕ್ಷೇ ಶ್ರುತೇರಪ್ಯನ್ಯಸಾಹಿತ್ಯೇನೈವ ಅನ್ಯತ್ರಪ್ರಸಿದ್ಧಿರ್ನತು ಸ್ವತ ಇತಿ ವಾಚ್ಯಂ, ಉತ್ತರಪಕ್ಷದ್ವಯೇ ತದಭಾವಾತ್ । ಆದ್ಯೇऽಪಿ ಶ್ರುತೇರ್ಲಿಙ್ಗಸಾಹಿತ್ಯೇನೈವಾನ್ಯತ್ರಪ್ರಸಿದ್ಧತಾ, ಸರ್ವಗತತ್ವಸ್ಯ ತು ಆದಿತ್ಯಶ್ರುತಿಸಾಹಿತ್ಯೇನಾಪೀತಿ ವಿಲಮ್ಬಿತತ್ವಮಿತಿ ಭಾವೇನಾऽऽಶಙ್ಕ್ಯ ನಿರಸ್ಯತಿ – ನ ಚೈವಮಿತಿ ।

ಕಿಂ ಸರ್ವತ್ರೈವಂ ಸಮ್ಭವೇನ ಲಿಙ್ಗಸಮನ್ವಯಾರ್ಥಮ್ಪಾದಾನ್ತರಮೇವ ಮಾಸ್ತ್ವಿತಿ ಆಶಯಃ, ಉತ ಪಾದಾನ್ತರಾರಮ್ಭೇऽಪ್ಯಸ್ಯೋಕ್ತರೀತ್ಯಾಶ್ರಯಣೇನ ಪೂರ್ವತ್ರೈವ ನಿವೇಶಃ ಸ್ಯಾದಿತಿ । ಆದ್ಯ ಆಹ – **ಅನ್ತರ್ಯಾಮಿತ್ವೇತಿ । ಅತ್ರಾಪೀತಿ** । ನನು ವೈಶ್ವಾನರಾಧಿಕರಣಸ್ಯೇವ ಫಲತಃ ಸಾ ಭವಿಷ್ಯತಿ । ನಚ ಪಾಚಕತ್ವಾದ್ಯನೇಕಲಿಙ್ಗಸಮನ್ವಯಾರ್ಥಮೇಕನಾಮಸಮನ್ವಯಸ್ತತ್ರೋಚ್ಯತ ಇತಿ ವಾಚ್ಯಂ, ಇಹಾಪಿ

संवत्सरसारत्वाद्यनेकलिङ्गसमन्वयार्थत्वसम्भवादिति चेत्, सत्यं, साक्षात्सङ्गतिसम्भवे फलतस्तदुक्त्ययोगात्, नामसमन्वयस्य वक्ष्यमाणदोषग्रस्तत्वाच्चेति तात्पर्यात् ।

द्वितीयमाशङ्क्य निराह – **नचेति** । **अन्तरिति** । तत्र सर्वदेवतावाचिपदप्रवृत्ति-निमित्तस्येशगतत्वस्यान्यगतस्य भगवदधीनत्वस्य च साधानादिति भावः । एताच्चाऽऽद्यपक्षानुरोधेनोक्तमिति ध्येयम् । अग्रिमपक्षद्वये आदित्यादिशब्दप्रवृत्तिनिमित्त-गुणलाभस्य ''अन्तः'' इत्यत्राभावद्युत्पन्तरमाह – **अर्भकौकस्त्वादीति** । **हेतुतयोक्तेति** । उक्तलिङ्गजातीयेत्यर्थः । आक्षिप्तं पूर्वोक्तं प्रापकान्तरं च साधयति – **सौरेति** । नच सूर्यादिशब्दः सावकाश इत्युक्तमिति वाच्यं, चक्षुष्टलिङ्गेन तदुज्जीवनादित्याह – **मन्त्रइति** । ''आदित्यश्चक्षुर्भूत्वाऽक्षिणी प्राविशत्'' इति तस्यामेव श्रुतौ चक्षुष्टोक्तेरित्यर्थः ।

प्रागाक्षिप्तं टीकोक्तं प्रापकान्तरमपि समर्थयते – **उक्तेति** । यद्यपि ''सर्वेषु भूतेषु'' इति सामान्येन भूतपदेनाऽऽदित्यस्यापि ग्रहणात्तद्गतत्वोक्तिरस्ति, तथाऽपि ''चन्द्रमस्येतं'' इतिवत् ''आदित्य एतं'' इति विशिष्यानुक्तत्वलिङ्गात्तत्प्राप्तिः । अन्यथा तथोक्तिः स्यादेव, अनुक्तौ कारणाभावादित्यर्थः । अत एव टीकायां – '' –'एतमादित्ये' इत्युक्तिस्स्यात्'' इत्युक्तम् ।

ವಿವರಣೆ - **ಶಂಕೆ** - ಇಲ್ಲಿಯ ತನಕ ನಿರೂಪಿಸಿದಂತೆ ನಿರವಕಾಶವಾದ ಆದಿತ್ಯಶ್ರುತಿಯ ಬಲದಿಂದ ಸರ್ವಗತತ್ವವು ಉಜ್ಜೀವನವಾಗುತ್ತಿದೆ. ಹಾಗಾದರೆ ಆದಿತ್ಯಶ್ರುತಿಯನ್ನೇ ಈ ಅಧಿಕರಣದಲ್ಲಿ ನೇರವಾಗಿ ಸಮನ್ವಯ ಮಾಡಲು ಬರುವಾಗ ಆದಿತ್ಯಶ್ರುತಿಯಿಂದ ಸರ್ವಗತತ್ವಲಿಂಗವನ್ನು ಉಜ್ಜೀವನಗೊಳಿಸಿ ಅಂತಹ ಸರ್ವಗತತ್ವ ಲಿಂಗವನ್ನು ಸಮನ್ವಯ ಮಾಡುವುದು ಗೌರವವಾಗಿದೆ. ಆದಿತ್ಯ ಶ್ರುತಿಯು ಸ್ವತಃ ಅನ್ಯತ್ರಪ್ರಸಿದ್ಧವಾಗಿದ್ದರಿಂದ ನೇರವಾಗಿ ಆದರ ಸಮನ್ವಯವನ್ನು ಮಾಡಿದಾಗ ಲಾಭವಾಗಿದೆ. ಆದ್ದರಿಂದ ಆದಿತ್ಯಶ್ರುತಿಯಿಂದ ಕೂಡಿರುವಂತಹ ಅನ್ಯತ್ರಪ್ರಸಿದ್ಧವಾದ ಲಿಂಗಸಮನ್ವಯವನ್ನು ಏಕೆ ಮಾಡಬೇಕು ?

ಸಮಾಧಾನ - ಹಿಂದೆ ಗ್ರಂಥಕಾರರು ಮೂರು ಪಕ್ಷಗಳನ್ನು ಹೇಳಿದ್ದರು - ೧. ಅನೇಕ ಲಿಂಗಗಳಿಂದ ಆದಿತ್ಯಶ್ರುತಿಯು ಬಲಿಷ್ಠವಾಗುತ್ತದೆ. ೨. ಅಂತರಧಿಕರಣದಲ್ಲಿ ಆದಿತ್ಯ ಮೊದಲಾದ ಶಬ್ದಗಳನ್ನು ಮುಖ್ಯವಾಗಿ ಸಮನ್ವಯವನ್ನೇ ಮಾಡಿರುವುದಿಲ್ಲ. ೩. ಅಂತರಧಿಕರಣದ ನ್ಯಾಯಕ್ಕೆ ವಿಷಯವೇ ಆಗಿರುವುದಿಲ್ಲ ಎಂದು. ಈ ಮೂರು ಪಕ್ಷಗಳಲ್ಲಿ ಮೊದಲನೇ ಪಕ್ಷವನ್ನು ವಿವಕ್ಷಿಸಿದಾಗ ಶ್ರುತಿಯೂ ಸಹ ಲಿಂಗಗಳ ಬಲದಿಂದಲೇ

ಅನ್ಯತ್ರಪ್ರಸಿದ್ಧವೆನಿಸುತ್ತದೆ ಹೊರತು, ಸ್ವತಃ ಅನ್ಯತ್ರಪ್ರಸಿದ್ಧವಾಗುವುದಿಲ್ಲ. ಆದ್ದರಿಂದ ಪ್ರಕೃತ ಶ್ರುತಿಯಿಂದ ಲಿಂಗವು ಬಲಿಷ್ಠವಾಗುತ್ತಿದೆ ಎಂದು ಹೇಗೆ ಹೇಳುತ್ತಿದ್ದೀರಿ ? ಎಂದು ಪ್ರಶ್ನಿಸಬಾರದು.

ಗ್ರಂಥಕಾರರೇ ಹೇಳಿದ ಉಳಿದೆರಡು ಪಕ್ಷಗಳಲ್ಲಿ ನಾವು ಮಾಡುತ್ತಿರುವ ಶಂಕೆಯು ಸಮಂಜಸವಾಗುತ್ತದೆ. ಏಕೆಂದರೆ ಆ ಎರಡು ಪಕ್ಷಗಳಲ್ಲಿ ಲಿಂಗಗಳ ಬಲದಿಂದ ಶ್ರುತಿಗೆ ಅನ್ಯತ್ರಪ್ರಸಿದ್ಧತ್ವವನ್ನು ಹೇಳಿರುವುದಿಲ್ಲ. ಅಥವಾ ಮೊದಲನೇ ಪಕ್ಷದಲ್ಲಿಯೂ ಸಹ ಶ್ರುತಿಗೆ ಲಿಂಗಸಾಹಿತ್ಯದಿಂದಲೇ ಅನ್ಯತ್ರಪ್ರಸಿದ್ಧತ್ವವು ಬರುತ್ತದೆ. ಆದರೆ ಸರ್ವಗತತತ್ವಕ್ಕೆ ಆದಿತ್ಯಶ್ರುತಿಯ ಸಾಹಚರ್ಯದಿಂದ ಎಂದು ವಿಲಂಬವಾಗುತ್ತದೆ. ಈ ಎಲ್ಲಾ ವಿಷಯಗಳನ್ನೂ 'ನಚೈವಂ' ಇತ್ಯಾದಿ ವಾಕ್ಯಗಳಿಂದ ಸಮರ್ಥಿಸುತ್ತಿದ್ದಾರೆ.

ಶಂಕೆ - ನಿಮ್ಮ ಆಕ್ಷೇಪದ ಅಭಿಪ್ರಾಯವೇನು. ಎಲ್ಲಾ ಅಧಿಕರಣಗಳಲ್ಲಿಯೂ ನಾಮಸಮನ್ವಯವನ್ನೇ ಮಾಡಿದರೆ ಸಾಕು. ಲಿಂಗಸಮನ್ವಯವೇ ಬೇಡವೋ ? ಅಥವಾ ಲಿಂಗಸಮನ್ವಯಕ್ಕೋಸ್ಕರ ಲಿಂಗಪಾದವೇ ಇರಲಿ. ಆದರೆ ಸರ್ವಗತತ್ವಾಧಿಕರಣವು ಮಾತ್ರ ನಾಮಪಾದದಲ್ಲಿ ಸೇರಲಿ ಎಂದೋ?

ಸಮಾಧಾನ - ಮೊದಲನೇ ಪಕ್ಷಕ್ಕೆ 'ಅಂತರ್ಯಾಮಿತ್ವ' ಇತ್ಯಾದಿಯಾಗಿ ಉತ್ತರಿಸುತ್ತಿದ್ದಾರೆ. ಅಂದರೆ ಎಲ್ಲಾ ಅಧಿಕರಣಗಳಲ್ಲಿಯೂ ನಾಮಸಮನ್ವಯದ ಆಪೇಕ್ಷೆಯು ಲಿಂಗಸಮನ್ವಯಕ್ಕೆ ಇರುವುದಿಲ್ಲ. ಆದ್ದರಿಂದ ಲಿಂಗಪಾದವು ಹೊರಡಲೇಬೇಕಾಗುತ್ತದೆ.

ಶಂಕೆ - ಯಾವ ರೀತಿಯಾಗಿ ವೈಶ್ವಾನರಾಧಿಕರಣದಲ್ಲಿ ನಾಮಸಮನ್ವಯವನ್ನೇ ಮಾಡಿದರೂ ಫಲತಃ ಲಿಂಗಸಮನ್ವಯವೂ ಸಿದ್ಧವಾಗುತ್ತದೆಯೋ, ಆದರಂತೆ ಈ ಅಧಿಕರಣದಲ್ಲಿಯೂ ನಾಮಸಮನ್ವಯವನ್ನೇ ಮಾಡಿರಿ. ಫಲತಃ ಅನೇಕ ಲಿಂಗಗಳ ಸಮನ್ವಯವು ಸಿದ್ಧವಾಗುತ್ತದೆ. ಇನ್ನು ವಾಚಕತ್ವ ಮೊದಲಾದ ಅನೇಕ ಲಿಂಗಗಳ ಸಮನ್ವಯಕ್ಕೋಸ್ಕರ 'ವೈಶ್ವಾನರ' ಎಂಬ ಒಂದು ನಾಮದ ಸಮನ್ವಯವನ್ನು ಅಲ್ಲಿ ಮಾಡುತ್ತಿದ್ದೇವೆ. ಆದ್ದರಿಂದ ವೈಶ್ವಾನರಾಧಿಕರಣದಂತೆ ಇಲ್ಲಿ ಹೇಳಲಾಗದು ಎಂದು ಪ್ರಶ್ನಿಸಬಾರದು. ಏಕೆಂದರೆ ಇಲ್ಲಿಯೂ ಸಹ ಆದಿತ್ಯವೆಂಬ ಒಂದು ನಾಮವನ್ನು ಸಮನ್ವಯ ಮಾಡಿದಾಗ 'ಸಂವತ್ಸರಸಾರತ್ವ' ಮೊದಲಾದ ಅನೇಕ ಲಿಂಗಗಳ ಸಮನ್ವಯವು ಸಿದ್ಧವಾಗುತ್ತವೆ. ಆದ್ದರಿಂದ ವೈಶ್ವಾನರಾಧಿಕರಣದಂತೆ ಇಲ್ಲಿಯೂ ನಾಮಸಮನ್ವಯವನ್ನೇ ಮಾಡಿರಿ.

ಸಮಾಧಾನ - ನೇರವಾಗಿ ಲಿಂಗಸಮನ್ವಯವನ್ನು ಮಾಡುವ ಮೂಲಕವೇ ಈ ಅಧಿಕರಣಕ್ಕೆ ಸಂಗತಿಯನ್ನು ಹೇಳಲು ಬರುವಾಗ ನಾಮಸಮನ್ವಯವನ್ನು ಮಾಡಿ ಫಲತಃ ಸಿದ್ಧವಾಗುವ ಲಿಂಗಸಮನ್ವಯದಿಂದ ಸಂಗತಿ ಹೇಳುವುದು ಸ್ವರಸವಲ್ಲ. ಅಷ್ಟೇ ಅಲ್ಲದೇ ಈ ಅಧಿಕರಣದಲ್ಲಿ ನಾಮಸಮನ್ವಯವನ್ನು ನೇರವಾಗಿ ಮಾಡಲು ಸಾಧ್ಯವೇ ಇಲ್ಲ. ಹಾಗೆ ನಾಮಸಮನ್ವಯ ಮಾಡಿದಾಗ ಬರುವ ದೋಷವನ್ನು ಈ ಮುಂದೆ ಹೇಳುವವರಿದ್ದೇವೆ.

ಎರಡನೇ ಪಕ್ಷವನ್ನು ಆಶಂಕಿಸಿ 'ನಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಂದರೆ ಸರ್ವಗತತ್ವಾಧಿಕರಣವನ್ನು ನಾಮಪಾದದಲ್ಲಿ ಸೇರಿಸಲಾಗದು. ನಾಮಪಾದದಲ್ಲಿ ಸೇರಿಸುವುದಾದರೆ ಆದಿತ್ಯಶ್ರುತಿಯನ್ನೇ ಸಮನ್ವಯ ಮಾಡಬೇಕು. ಹೊರತು ಸರ್ವಗತತ್ವಲಿಂಗವನ್ನು ಸಮನ್ವಯ

ಮಾಡಲಾಗದು. ಆದರೆ ಆದಿತ್ಯ ಮೊದಲಾದ ದೇವತಾವಾಚಕ ಶ್ರುತಿಗಳೆಲ್ಲವೂ ಅಂತರಧಿಕರಣದಲ್ಲಿಯೇ ಸಮನ್ವಯ ಮಾಡಿದ್ದಾಗಿದೆ. ಸಕಲದೇವತಾವಾಚಕವಾದ ಪ್ರವೃತ್ತಿನಿಮಿತ್ತಗಳೆಲ್ಲವು ಈಶಗತವಾಗಿವೆ. ಮತ್ತು ಬೇರೆಯವರಲ್ಲಿದ್ದರೂ ಆ ಪ್ರವೃತ್ತಿನಿಮಿತ್ತಗಳು ಈಶಾಧೀನವಾಗಿವೆಯೆಂದು ಅಂತರಧಿಕರಣದಲ್ಲಿ ಸಮರ್ಥಿಸಿದ್ದಾರೆ.

ಈ ವಿಚಾರವು ಗ್ರಂಥಕಾರರು ಹಿಂದೆ ಹೇಳಿದ ಮೂರುವಿಧಪಕ್ಷಗಳಲ್ಲಿ ಮೊದಲನೇ ಪಕ್ಷಕ್ಕೇ ಮಾತ್ರ ಸಂಬಂಧಪಟ್ಟವೆ. ಉಳಿದರೆಡು ಪಕ್ಷಗಳಲ್ಲಿ ಆದಿತ್ಯ ಮೊದಲಾದ ಶಬ್ದಪ್ರವೃತಿನಿಮಿತ್ತವಾದ ಗುಣಗಳ ಲಾಭವು ಅಂತರಧಿಕರಣದಿಂದ ದೊರೆಯುವುದಿಲ್ಲ. ಅದಕ್ಕೋಸ್ಕರ ಮತ್ತೊಂದು ಯುಕ್ತಿಯನ್ನು 'ಅರ್ಭಕೌಕಸ್ತ್ವಾದಿ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಟೀಕೆಯಲ್ಲಿ ಆಕ್ಷೇಪಿಸಿದ ಮತ್ತೊಂದು ಪೂರ್ವಪಕ್ಷವನ್ನು 'ಸೌರ' ಇತ್ಯಾದಿ ವಾಕ್ಯಗಳಿಂದ ಸಾಧಿಸುತ್ತಿದ್ದಾರೆ. ಸೂರ್ಯಾದಿ ಶಬ್ದಗಳು ವಿಷ್ಣುವಿನಲ್ಲಿ ಸಾವಕಾಶವಾಗಿರುವಾಗ 'ಸೌರ' ಮಂತ್ರವು ಹೇಗೆ ಪ್ರಮಾಣವಾಗುತ್ತದೆ? ಎಂದು ಪ್ರಶ್ನಿಸಬಾರದು. ಏಕೆಂದರೆ 'ಚಕ್ಷುಷ್ಟ್ವ' ಎಂಬ ಲಿಂಗದಿಂದ 'ಸೌರ' ಮಂತ್ರವು ಉಪೋದ್ಬಲಿತವಾಗುತ್ತದೆ. ಈ ವಿಚಾರವನ್ನು 'ಮಂತ್ರ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. ''ಆದಿತ್ಯಶ್ಚಕ್ಷುರ್ಭೂತ್ವಾऽಕ್ಷಣೀ ಪ್ರಾವಿಶತ್'' ಎಂಬುದಾಗಿ ಆದೇ ಶ್ರುತಿಯಲ್ಲಿ 'ಚಕ್ಷುಷ್ಟ್ವ' ಲಿಂಗವು ಕೇಳಿಸುತ್ತಿದೆ.

ಟೀಕೆಯಲ್ಲಿ ಹಿಂದೆ ಮಾಡಿದ ಮತ್ತೊಂದು ಆಕ್ಷೇಪವನ್ನು 'ಉಕ್ತ' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ. ವಸ್ತುತಸ್ತು 'ಸರ್ವೇಷು ಭೂತೇಷು' ಎಂಬಲ್ಲಿರುವ ಸಾಮಾನ್ಯವಾಚಕವಾದ 'ಭೂತ' ಎಂಬ ಪದದಿಂದಲೇ ಆದಿತ್ಯನನ್ನೂ ಸಹ ಸಂಗ್ರಹಿಸಬಹುದು. ಆದ್ದರಿಂದ ಪರಮಾತ್ಮನು ಉಳಿದ ಪದಾರ್ಥಗಳಲ್ಲಿರುವಂತೆ ಆದಿತ್ಯನಲ್ಲಿಯೂ ಇದ್ದಾನೆನ್ನಬಹುದು. ಆದರೆ 'ಚಂದ್ರಮಸ್ಯೇತಂ' ಎಂಬಲ್ಲಿ ಯಾವರೀತಿಯಾಗಿ ವಿಶೇಷವಾಗಿ 'ಚಂದ್ರ' ಎಂಬ ಪದದಿಂದಲೇ ಚಂದ್ರನನ್ನು ಹೇಳಿದ್ದಾರೋ, ಅದರಂತೆ ಆದಿತ್ಯವೆಂಬ ಪದದಿಂದ ಆದಿತ್ಯನನ್ನು ಗ್ರಹಣ ಮಾಡಿರುವುದಿಲ್ಲ. ಆದ್ದರಿಂದ ಆದಿತ್ಯನಲ್ಲಿ ಭಗವಂತನಿದ್ದಾನೆಂದು ಹೇಳಲು ಸಾಧ್ಯವಿಲ್ಲ. ಹೊರತಾಗಿ ಆದಿತ್ಯನೇ ಎಲ್ಲೆಡೆ ಇದ್ದಾನೆಂದು ಹೇಳಬಹುದು. ಹೀಗೆ 'ಅನುಕ್ತತ್ವ' ಎಂಬ ಲಿಂಗದಿಂದ ಆದಿತ್ಯನೇ ಸರ್ವಗತನೆಂದು ತಿಳಿಯುತ್ತದೆ. ಆದ್ದರಿಂದಲೇ ಟೀಕೆಯಲ್ಲಿ ''ಏತಮಾದಿತ್ಯೇ ಇತ್ಯುಕ್ತಿಃ ಸ್ಯಾತ್'' ಎಂಬ ಮಾತು ಹೊರಟಿರುತ್ತದೆ.

ಗುರುರಾಜೀಯಮ್ – ನನ್ವಾದಿತ್ಯಶ್ರುತೇರ್ಭಗವತ್ಪರತ್ವೇ ತನ್ನಿಷ್ಠತ್ವೇನ ಶ್ರುತಸ್ಯ ಸರ್ವಗಸ್ಯಾಪಿ ಭಗವತ್ಪರತ್ವಸಿದ್ಧಿಃ ಸ್ಯಾದೇವೇತ್ಯತ – ಉಕ್ತಂ ಸಾಕ್ಷಾದಿತಿ ।

ಅಸ್ತು ವಾ ಸೌರಮನ್ತ್ರೋದಾಹರಣಾತ್ಸೂರ್ಯಪ್ರಾಸಿರಿತ್ಯಾಹ – ಸೌರೇತಿ । ನನು ಸರ್ವೇಷ್ವಿತಿ ಸರ್ವಶಬ್ದೇನಾದಿತ್ಯಸ್ಯಾಪಿ ಗ್ರಹಣಸಮ್ಭವಾತ್ಕಥಂ ಸಾವಕಾಶೇನಾನುಕ್ತತ್ವಲಿಙ್ಗೇನ ನಿರ್ಣಯಃ ಸ್ಯಾದಿತ್ಯತ ಆಹ – ಉಕ್ತಾದಿತ್ಯೇತಿ ।।

ಸಾರ

ಸರ್ವಗತತ್ವಾಧಿಕರಣವನ್ನು ನಾಮಪಾದದಲ್ಲಿ ಸೇರಿಸಬಹುದು. ಅಥವಾ ಲಿಂಗಪಾದದಲ್ಲಿ ಸೇರಿದರೂ ನಾಮಸಮನ್ವಯವನ್ನೇ. ಮಾಡಬಹುದೆಂದು ಪ್ರಶ್ನಿಸುತ್ತಿದ್ದಾರೆ. ಏಕೆಂದರೆ ಆದಿತ್ಯಶ್ರುತಿಯ ಬೆಂಬಲದಿಂದಷ್ಟೇ ಸರ್ವಗತತ್ವವನ್ನು ಅನ್ಯತ್ರಪ್ರಸಿದ್ಧವೆನ್ನಬೇಕು. ಹೀಗಿರುವಾಗ ಆದಿತ್ಯವೆಂಬ ಶ್ರುತಿಸಮನ್ವಯವನ್ನೇ ಮಾಡುವುದು ಹೆಚ್ಚು ಸ್ವರಸ. ಮತ್ತು ವೈಶ್ವಾನರಾಧಿಕರಣದಲ್ಲಿ ಒಂದು ನಾಮದ ಸಮನ್ವಯದಿಂದ ಅನೇಕ ಲಿಂಗಗಳನ್ನು ಸಮನ್ವಯ ಮಾಡಿದಂತೆ ಇಲ್ಲಿಯೂ 'ಸಂವತ್ಸರಸಾರತ್ವ' ಮೊದಲಾದ ಅನೇಕ ಲಿಂಗಗಳ ಸಮನ್ವಯವು ಒಂದೇ ಆದಿತ್ಯಶಬ್ದದ ಸಮನ್ವಯದಿಂದ ಸಿದ್ಧವಾಗುತ್ತದೆ. ಆದ್ದರಿಂದ ಸರ್ವಗತತ್ವಲಿಂಗದ ಸಮನ್ವಯಕ್ಕೋಸ್ಕರ ಈ ಅಧಿಕರಣವು ಹೊರಟಿದೆ ಎಂದು ಹೇಗೆ ಹೇಳುತ್ತೀರಿ ?

ಈ ಪ್ರಶ್ನೆಗೆ ಗ್ರಂಥಕಾರರು ಹಲವು ಮುಖಗಳಲ್ಲಿ ಉತ್ತರಿಸಿದ್ದಾರೆ. ಲಿಂಗಪಾದದಲ್ಲಿರುವ ಎಲ್ಲಾ ಅಧಿಕರಣಗಳಲ್ಲಿಯೂ ಹೀಗೆಯೇ ಪ್ರಶ್ನಿಸುತ್ತಿರೋ? ಅಥವಾ ಈ ಅಧಿಕರಣದಲ್ಲಿ ಮಾತ್ರ ನಾಮಸಮನ್ವಯ ಮಾಡಬಹುದೆಂದು ಪ್ರಶ್ನಿಸುತ್ತಿರೋ? ಎಲ್ಲಾ ಅಧಿಕರಣಗಳಲ್ಲಿಯೂ ನಾಮಸಮನ್ವಯವನ್ನೇ ಮಾಡಿರಿ? ಎಂದು ಪ್ರಶ್ನಿಸಲಾಗದು. ಏಕೆಂದರೆ ಅಂತರ್ಯಾಮ್ಯಧಿಕರಣದಲ್ಲಿ ನಾಮಾತ್ಮಕ ಶಬ್ದಗಳ ಪ್ರಸಕ್ತಿಯೇ ಇರುವುದಿಲ್ಲ. ಕೇವಲ ಲಿಂಗಗಳ ಬೆಂಬಲದಿಂದಷ್ಟೇ ಅಂತರ್ಯಾಮಿತ್ವ ಮೊದಲಾದ ಲಿಂಗಗಳಿಗೆ ಅನ್ಯತ್ರಪ್ರಸಿದ್ಧತ್ವವನ್ನು ಸಮರ್ಥಿಸಲಾಗಿದೆ. ಈ ಅಂತರ್ಯಾಮ್ಯಧಿಕರಣಕ್ಕೋಸ್ಕರವಂತು ಲಿಂಗಪಾದವು ಹೊರಡಲೇಬೇಕು. ಇನ್ನು ಸರ್ವಗತತ್ವಾಧಿಕರಣಕ್ಕೆ ಮಾತ್ರ ಈ ಪಾದದಲ್ಲಿ ಸಂಗತಿಯಿಲ್ಲವೆನ್ನಬೇಕು. ಆದರೆ ಅಂತರಧಿಕರಣದಿಂದ ಆದಿತ್ಯಶ್ರುತಿಯ ಸಮನ್ವಯವು ಸಿದ್ಧವಾಗಿರುವಾಗ ಪುನಃ ಈ ಅಧಿಕರಣಕ್ಕೆ ಸಂಗತಿಯಿರುವುದಿಲ್ಲ. ಮತ್ತು ಪೂರ್ವಪಕ್ಷ ಪ್ರಾಪಕವಾದ ಅಥವಾ ಸಿದ್ಧಾಂತಪ್ರಾಪಕವಾದ ಯುಕ್ತಿಗಳೆಲ್ಲವೂ ದೂರೆಯವುದು ಸರ್ವಗತತ್ವವೆಂಬ ಲಿಂಗವನ್ನು ಸಮನ್ವಯ ಮಾಡಲು ಹೊರಟಾಗ ಮಾತ್ರ. ಈ ಎಲ್ಲಾ ಯುಕ್ತಿಗಳನ್ನು ಆಲೋಚಿಸಿದಾಗ ವೈಶ್ವಾನರಾಧಿಕರಣದಂತೆ ಸರ್ವಗತತ್ವಾಧಿಕರಣವನ್ನು ವಿವಕ್ಷಿಸಲು ಸಾಧ್ಯವಿಲ್ಲ.

• • • • •

ಸಕಲ ಜೀವರೇ ಸರ್ವಗತರೆಂದು ಪೂರ್ವಪಕ್ಷ

तात्पर्यचन्द्रिका

चक्षुर्मयत्वादिलिङ्गाच्च सर्वजीवानां प्राप्तिः, आनन्दमयोक्तस्य ''को ह्येवान्यात्'' इति प्राचुर्यार्थे हेतुव्यपदेशस्य तत्प्रायपाठस्य च अत्राभावेन तन्न्यायाविषयत्वात् ।

सर्वगतत्वाधिकरण (१-३-१)

ज्ञानकरणतया प्रसिद्धचक्षुरादिसम्बन्धस्यैव नित्यज्ञानेऽनन्तर्यामिण्यसम्भवेन तत्प्राचुर्यस्य सुतरामसम्भवाच्च ।

चक्षुश्शब्दस्य विष्णुपरत्वे च मयटो वैयर्थ्यम् ।

ಅನುವಾದ - ಚಕ್ಷುರ್ಮಯತ್ವಾದಿಲಿಂಗಗಳು ಕೇಳಿಸುತ್ತಿರುವುದರಿಂದ, ಸಕಲಜೀವರು ಸರ್ವಗತರಾಗಬಹುದು. ಆನಂದಮಯ ಎಂಬಲ್ಲಿರುವ 'ಮಯಟ್' ಪ್ರತ್ಯಯಕ್ಕೆ 'ಕೋ ಹ್ಯೇವಾನ್ಯಾತ್' ಇತ್ಯಾದಿಯಾಗಿ ಪ್ರಾಚುರ್ಯವೆಂಬ ಎಂಬರ್ಥವನ್ನು ಹೇಳಲಾಗಿದೆ. ಈ ಅರ್ಥವನ್ನೇ ಸ್ವೀಕರಿಸಲು ಜಗಚ್ಚೇಷ್ಟಕತ್ವ ಮೊದಲಾದ ಲಿಂಗಗಳನ್ನು ಅಲ್ಲಿ ಹೇಳಿದ್ದಾರೆ. ಉಳಿದ ಮನೋಮಯಾದಿ ಶಬ್ದಗಳಲ್ಲಿರುವ 'ಮಯಟ್' ಪ್ರತ್ಯಯಕ್ಕೆ ಪ್ರಾಚುರ್ಯವೆಂಬರ್ಥವನ್ನು ಸ್ವೀಕರಿಸಲು ಪ್ರಾಯಪಾಠವನ್ನು ಪ್ರಮಾಣವನ್ನಾಗಿ ನಿರೂಪಿಸಿದ್ದಾರೆ. ಆದರಂತೆ ಪ್ರಕೃತ ಚಕ್ಷುರ್ಮಯವೆಂಬಲ್ಲಿ 'ಮಯಟ್' ಪ್ರತ್ಯಯಕ್ಕೆ ಪ್ರಾಚುರ್ಯವೆಂಬರ್ಥವನ್ನು ಹೇಳಲು ಅಂತಹ ಹೇತುವಾಗಲಿ ಪ್ರಾಯಪಾಠವಾಗಲಿ ಇರುವುದಿಲ್ಲ. ಆದ್ದರಿಂದ ಆನಂದಮಯಾಧಿಕರಣದ ನ್ಯಾಯಕ್ಕೆ ಇದು ವಿಷಯವಾಗುವುದಿಲ್ಲ.

ಮತ್ತು ಇಲ್ಲಿರುವ 'ಚಕ್ಷುರ್ಮಯ' ಶಬ್ದದಿಂದ ಭಗವಂತನನ್ನು ಸ್ವೀಕರಿಸಲು ಸಾಧ್ಯವೂ ಇಲ್ಲ. ಏಕೆಂದರೆ 'ಚಕ್ಷುಃ' ಎಂಬ ಪದವು ಜ್ಞಾನಕರಣವಾದ ಇಂದ್ರಿಯದಲ್ಲಿ ಪ್ರಸಿದ್ಧವಾಗಿದೆ. ಅಂದರೆ ಯಾರಿಗೆ ಜ್ಞಾನವು ಹುಟ್ಟುತ್ತದೋ, ಅಂತಹವನಲ್ಲಿ ಮಾತ್ರ ಚಕ್ಷುರ್ಮಯತ್ವವನ್ನು ಹೇಳಬಹುದು. ನಿತ್ಯಜ್ಞಾನಿಯಾದ ಭಗವಂತನಿಗೆ ಇಂತಹ ಚಕ್ಷುರಿಂದ್ರಿಯದ ಸಂಬಂಧವನ್ನಾದರೂ ಹೇಳಲು ಹೇಗೆ ಸಾಧ್ಯ ? ಮತ್ತು ಅಂತರ್ಯಾಮಿಯಾದ ಭಗವಂತನಲ್ಲಿ ಬಾಹ್ಯಶರೀರದಲ್ಲಿರುವ ಚಕ್ಷುರಿಂದ್ರಿಯದ ಸಂಬಂಧವನ್ನು ಹೇಳಲಾಗದು. ಹೀಗೆ ಚಕ್ಷುರಿಂದ್ರಿಯದ ಸಂಬಂಧವನ್ನೇ ಹೇಳಲು ಸಾಧ್ಯವಿಲ್ಲದ್ದಾಗ ಆದರ ಪ್ರಾಚುರ್ಯವನ್ನಂತು ಸುತರಾಂ ಹೇಳಲು ಸಾಧ್ಯವಿಲ್ಲ.

ಶ್ರುತಿಯಲ್ಲಿರುವ 'ಚಕ್ಷುಃ' ಎಂಬ ಶಬ್ದವು ವಿಷ್ಣುಪರವೆಂದು ಹೇಳಿದಾಗ 'ಮಯಟ್' ಪ್ರತ್ಯಯವು ವ್ಯರ್ಥವಾಗುತ್ತದೆ.

ಕಠಿಣಪದಾರ್ಥ

ಹೇತುವ್ಯಪದೇಶಸ್ಯ = ಜಗಚ್ಚೇಷ್ಟಕತ್ವವೆಂಬ ಹೇತುವಿನ ಹೇಳುವಿಕೆ. ತತ್ಪ್ರಾಯಪಾಠಸ್ಯ = ಆನಂದಮಯ ಶಬ್ದದ ಪ್ರಾಯಪಾಠವು, ಆತ್ರ = ಚಕ್ಷುರ್ಮಯನಿಗೆ, ನಿತ್ಯಜ್ಞಾನೇ - ಹೇತುಗರ್ಭವಿಶೇಷಣ, ತತ್ಪ್ರಾರ್ಯುಸ್ಯ = ಚಕ್ಷುರಿಂದ್ರಿಯದ ಪ್ರಾಚುರ್ಯವು.

प्रकाशः – एवमादित्यकोटिकपूर्वपक्षं टीकोक्तं समर्थ्येदानीं न्यायविवरणगताऽऽदिपदोपात्तजीवलिङ्गेन ''सर्वजीवानां चैतत्सर्वगतत्वं'' इति टीकोक्तजीवकोटिकपूर्वपक्षं च समर्थयते – चक्षुर्मयत्यादि इति ।

ಪರಿಪೂರ್ಣಚಂದ್ರಿಕಾ

''चक्षुर्मयः श्रोत्रमयश्छन्दोमयो मनोमयो वाङ्मय आत्मा'' इति वाक्ये श्रुतानि टीकोक्तान्यादिपदार्थः । ननूक्तमत्र मयटः प्राचुर्यार्थत्वेन पूर्णज्ञानत्वादिना तदुपपत्तेरित्यतः तद्वैषम्यमाह – **आनन्दमयेति ।**

ವಿವರಣೆ - ಇಲ್ಲಿಯ ತನಕ ಆದಿತ್ಯಕೋಟಿಕ ಪೂರ್ವಪಕ್ಷವನ್ನು ಟೀಕೆಯ ಪ್ರಕಾರ ಸಮರ್ಥಿಸಿದ್ದಾಯಿತು. ಪ್ರಕೃತ ನ್ಯಾಯವಿವರಣದಲ್ಲಿರುವ ಆದಿಪದದಿಂದ ತಿಳಿಯುವ ಜೀವನ ಲಿಂಗವನ್ನು ತೋರಿಸುತ್ತಾ 'ಸರ್ವಜೀವಾನಾಂ ಚೈತನ್ಯವರ್ಗಗತತ್ವಂ' ಎಂಬ ಟೀಕೆಯಲ್ಲಿ ಹೇಳಿದ ಜೀವಕೋಟಿಕಪೂರ್ವಪಕ್ಷವನ್ನು 'ಚಕ್ಷುಮರ್ಯತ್ವಾದಿ' ಇತ್ಯಾದಿಯಾಗಿ ಸಮರ್ಥಿಸುತ್ತಿದ್ದಾರೆ. ''ಚಕ್ಷುರ್ಮಯಃಶ್ರೋತ್ರಮಯ-ಶ್ಛಂದೋಮಯೋ ಮನೋಮಯೋ ವಾಂಙ್ಮಯ ಆತ್ಮಾ'' ಎಂಬ ವಾಕ್ಯದಲ್ಲಿ ಕೇಳಿಸುತ್ತಿರುವ ಮನೋಮಯತ್ವಾದಿಗಳು ಆದಿಪದದ ಅರ್ಥವಾಗಿದೆ.

'ಮಯಟ್' ಪ್ರತ್ಯಯಕ್ಕೆ ಪ್ರಾಚುರ್ಯವೆಂಬರ್ಥವನ್ನು ಅಂಗೀಕರಿಸಿ ಮನೋಮಯನೆಂದರೆ ಪೂರ್ಣಜ್ಞಾನವೆಂಬ ಅರ್ಥವನ್ನು ಆನಂದಮಯಾಧಿಕರಣದಲ್ಲಿ ಹೇಳಿದೆಯಲ್ಲವೇ? ಎಂಬ ಪ್ರಶ್ನೆಗೆ ಚಕ್ಷುರ್ಮಯಶಬ್ದಕ್ಕೂ ಮನೋಮಯಾದಿ ಶಬ್ದಗಳಿಗೂ ವೈಲಕ್ಷಣ್ಯವಿದೆಯೆಂದು 'ಆನಂದಮಯ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

प्रकाशः – यदेष आकाशनाम विष्णुः पूर्णानन्दो न स्यात्, तर्ह्ययं न जगच्चेष्टयेत्, प्रवृत्तिहेतूनां चतुर्णां मध्ये दुःखोद्रेकरागद्वेषशून्यस्य सुखोद्रेकैकनिबन्धनत्वात्प्रवृत्तेः। यद्ययं न चेष्टयेत्तर्हि चेष्टयेन्न कोऽपीति पूर्णानन्दत्वसाधकजगच्चेष्टकत्वरूपहेतुव्यपदेशस्य भावेन तत्र प्राचुर्यार्थत्वेऽपीह तदभावेन तन्न्यायाविषयत्वादित्यर्थः । अत एव ''हेतुव्यपदेशात्'' इति सूत्रं प्राचुर्यार्थत्वेऽपि योजितमिति भावः ।

ಒಂದು ವೇಳೆ ಆಕಾಶನೆಂಬ ವಿಷ್ಣುವು ಪೂರ್ಣಾನಂದನಾಗದಿದ್ದಲ್ಲಿ ಜಗತ್ತನ್ನು ಪ್ರೇರಣೆ ಮಾಡಲಾರನು. ಏಕೆಂದರೆ ನಾಲ್ಕುವಿಧ ಪ್ರವೃತ್ತಿಹೇತುಗಳಲ್ಲಿ ರಾಗದ್ವೇಷವಿಲ್ಲದ ಭಗವಂತನಿಗೆ ದುಃಖೋದ್ರೇಕದಿಂದ ಪ್ರವೃತ್ತಿಯು ಉಂಟಾಗದು. ಆದ್ದರಿಂದ ಸುಖೋದ್ರೇಕದಿಂದಲೇ ಪ್ರವೃತ್ತಿಯನ್ನು ಹೇಳಬೇಕು. ಒಂದು ವೇಳೆ ಇವನು ಪ್ರವೃತ್ತಿಯನ್ನು ಮಾಡಿಸದಿದ್ದರೆ ಯಾರೂ ಸಹ ಪ್ರವೃತ್ತರೇ ಆಗಲಾರರು ಎಂಬ ಪೂರ್ಣಾನಂದತ್ವಕ್ಕೆ ಸಾಧಕವಾದ ಜಗಚ್ಚೇಷ್ಟಕತ್ವವೆಂಬ ಹೇತುವನ್ನು ಆನಂದಮಯಾಧಿಕರಣದಲ್ಲಿ ಹೇಳಿದ್ದಾರೆ. ಈ ಕಾರಣದಿಂದಲೇ 'ಮಯಟ್' ಪ್ರತ್ಯಯಕ್ಕೆ ಪ್ರಾಚುರ್ಯವೆಂಬರ್ಥವನ್ನು ಅಂಗೀಕರಿಸಬೇಕು. ಆದರೆ ಪ್ರಕೃತ ಅಂತಹ ಹೇತುಗಳು ಯಾವುದೂ ಕಾಣಸದ ಕಾರಣ ಆನಂದಮಯಾಧಿಕರಣದ ನ್ಯಾಯಕ್ಕೆ ಚಕ್ಷುರ್ಮಯತ್ವವು ವಿಷಯವಾಗುವುದಿಲ್ಲ. ಆದ್ದರಿಂದ ಇಲ್ಲಿರುವ 'ಮಯಟ್' ಪ್ರತ್ಯಯಕ್ಕೂ ಸಹ ಪ್ರಾಚುರ್ಯವೆಂಬರ್ಥವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದಲೇ 'ಹೇತುವ್ಯಪದೇಶಾತ್' ಎಂಬ ಸೂತ್ರವನ್ನು ಪ್ರಾಚುರ್ಯಾರ್ಥದಲ್ಲಿ

ಯೋಜನೆ ಮಾಡಲಾಗಿದೆಯೆಂದು ತಿಳಿಯಬೇಕು.

प्रकाशः – नन्वानन्दमये हेतुव्यपदेशेऽपि विज्ञानमयमनोमयादौ तदभावेऽपि प्राचुर्यार्थत्वं स्वीकृतमित्यत आह – तत्प्रायेति । आनन्दमयप्रायपाठस्यैवेत्यर्थः ।

जीवेऽपि विकारार्थत्वायोगादकामेनाप्युपेयं प्राचुर्यार्थत्वमित्यत आह – **ज्ञानेति ।**

ಆನಂದಮಯನಲ್ಲಿ ಜಗಚ್ಚೇಷ್ಟಕತ್ವವೆಂಬ ಹೇತುವಿನ ವ್ಯಪದೇಶವಿದ್ದರೂ ವಿಜ್ಞಾನಮಯ, ಮನೋಮಯಗಳಲ್ಲಿ ಜಗಚ್ಚೇಷ್ಟಕತ್ವ ಎಂಬ ಹೇತುಗಳು ಕಾಣಸುತ್ತಿಲ್ಲವಲ್ಲ? ಎಂದು ಶಂಕಿಸಬಾರದು. ಏಕೆಂದರೆ ಪ್ರಾಯಪಾಠದ ಬಲದಿಂದ 'ಮಯಟ್' ಪ್ರತ್ಯಯಕ್ಕೆ ಪ್ರಾಚುರ್ಯವೆಂಬರ್ಥವನ್ನು ಅಂಗೀಕರಿಸಬೇಕಾಗುತ್ತದೆ. ಅಂತಹ ಪ್ರಾಯಪಾಠವನ್ನು ಇಲ್ಲಿ ಹೇಳಬಹುದಲ್ಲವೇ ? ಎಂಬ ಪ್ರಶ್ನೆಗೆ 'ತತ್ಪ್ರಾಯಪಾಠಸ್ಯ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಆನಂದಮಯ ಶಬ್ದದ ಪ್ರಾಯಪಾಠವೆಂದರ್ಥ.

ಜೀವನಲ್ಲಿ ಕೇಳಿಸುತ್ತಿರುವ ಚಕ್ಷುರ್ಮಯ ಎಂಬಲ್ಲಿರುವ ಮಯಟ್‌ಪ್ರತ್ಯಯಕ್ಕೂ ಸಹ ವಿಕಾರವೆಂಬರ್ಥವನ್ನು ಹೇಳಲಾಗದು. ಆದ್ದರಿಂದ ಇಷ್ಟವಿಲ್ಲದಿದ್ದರೂ ಪ್ರಾಚುರ್ಯವೆಂಬರ್ಥವನ್ನೇ ಹೇಳಬೇಕಲ್ಲವೇ? ಎಂಬ ಪ್ರಶ್ನೆಗೆ 'ಜ್ಞಾನಕರಣತಯಾ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

प्रकाशः – यद्वा – प्राचुर्यार्थत्वेऽप्यनुपपत्तिमाह – ज्ञानेति । ज्ञानकरणत्वेन प्रसिद्धं यच्चक्षुरादि तत्सम्बन्धस्यैवासम्भवेन तद्बाहुल्यरूपप्राचुर्यस्य सुतरामयोगादित्यर्थः ।

प्रसिद्धपदेन चक्षुःपदस्याप्रसिद्धार्थस्वीकारे प्रसिद्धिबाध इति सूचितम् । ''ज्योतिराद्यधिष्ठानं तु तदामननात्'' इत्यत्र द्वितीये चक्षुरादिकरणानामीश्वर-प्रयोज्यत्वेन तदीयत्वमुच्यते, नतु जीवस्यैव ज्ञानजनकतया तत्सम्बन्ध इति भावेनोक्तं – **सम्बन्धस्यैवेति ।**

तत्र हेतुः – **नित्यज्ञाने इति ।** एतेनन्तर्यामिविषयतयोपपन्नमिति प्रत्युक्तं, तस्यापि नित्यज्ञानत्वादिति ।

ननु न ज्ञानकरणमिह चक्षुः, किन्तु ''चक्षुषश्चक्षुः'' इत्यादाविव विष्णुरेवेत्यत आह – **चक्षुश्शब्दस्येति ।**

ಅಥವಾ ಪ್ರಾಚುರ್ಯವೆಂಬರ್ಥವನ್ನು ಅಂಗೀಕರಿಸಿದರೂ ಅನುಪಪತ್ತಿ ಬರುತ್ತದೆಂದು ಜ್ಞಾನಕರಣತಯಾ ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಚಕ್ಷುರಾದಿ ಇಂದ್ರಿಯಗಳು ಜ್ಞಾನಕ್ಕೆ ಕರಣವಾಗಿದೆಯೆಂದು ಪ್ರಸಿದ್ಧವಾಗಿದೆ.

ಇಂತಹ ಚಕ್ಷುರಾದಿ ಇಂದ್ರಿಯಗಳ ಸಂಬಂಧವನ್ನು ಅಂತರ್ಯಾಮಿಯಲ್ಲಿ ಹೇಳಲು ಸಾಧ್ಯವಾಗದಿದ್ದಾಗ ಅವುಗಳ ಪ್ರಾಚುರ್ಯವನ್ನಂತು ಸುತರಾಂ ಹೇಳಲು ಸಾಧ್ಯವಿಲ್ಲ ಎಂದರ್ಥ.

'ಪ್ರಸಿದ್ಧ' ಎಂಬ ಪದದಿಂದ 'ಚಕ್ಷುಃ' ಎಂಬ ಪದಕ್ಕೆ ಅಪ್ರಸಿದ್ಧಾರ್ಥವನ್ನು ಸ್ವೀಕರಿಸಿದರೆ ಪ್ರಸಿದ್ಧಿಬಾಧದೋಷ ಬರುತ್ತದೆಂದು ಸೂಚಿಸಿದ್ದಾರೆ. ''ಜ್ಯೋತಿರಾದ್ಯಧಿಷ್ಠಾನಂ ತು ತದಾಮನನಾತ್'' ಎಂಬ ಎರಡನೇ ಅಧ್ಯಾಯದ ಸೂತ್ರದಲ್ಲಿ ಚಕ್ಷುರಾದಿ ಇಂದ್ರಿಯಗಳು ಈಶ್ವರನಿಂದ ನಿಯಮ್ಯವಾಗಿವೆಯೆಂದು ಹೇಳುತ್ತಾರೆ ಹೊರತಾಗಿ ಜೀವನಂತೆ ಜ್ಞಾನಜನಕವಾದ ಸಂಬಂಧವನ್ನು ಪರಮಾತ್ಮನಿಗೆ ಹೇಳುವುದಿಲ್ಲವೆಂಬ ಅಭಿಪ್ರಾಯದಿಂದ 'ಸಂಬಂಧಸ್ಸ್ಯೈವ' ಎಂಬ ಮಾತು ಹೊರಟಿದೆ.

ಈ ವಿಷಯದಲ್ಲಿ 'ನಿತ್ಯಜ್ಞಾನೇ' ಎಂಬುದು ಹೇತುವಾಗಿದೆ. ಹೀಗೆ ಹೇಳಿದ್ದರಿಂದ ಅಂತರ್ಯಾಮಿಯಾದ್ದರಿಂದ ಪರಮಾತ್ಮನಿಗೆ ಚಕ್ಷುರ್ಮಯತ್ವವನ್ನು ಹೇಳಬಹುದೆಂಬ ಶಂಕೆಯನ್ನು ಪರಿಹರಿಸಿದಂತಾಯಿತು. ಏಕೆಂದರೆ ಪರಮಾತ್ಮನು ನಿತ್ಯಜ್ಞಾನಿಯಾಗಿದ್ದಾನೆ.

ಈ ಶ್ರುತಿಯಲ್ಲಿ ಪ್ರಸಕ್ತವಾಗಿರುವ 'ಚಕ್ಷುಃ' ಶಬ್ದವು ಜ್ಞಾನಕರಣವಾದ ಇಂದ್ರಿಯವನ್ನು ಹೇಳುತ್ತಿಲ್ಲ ಹೊರತಾಗಿ 'ಚಕ್ಷುಷಶ್ಚಕ್ಷುಃ' ಎಂಬ ಮಾತಿನಂತೆ ವಿಷ್ಣುವನ್ನೇ ಪ್ರತಿಪಾದಿಸುತ್ತದಲ್ಲವೇ? ಎಂಬ ಪ್ರಶ್ನೆಗೆ 'ಚಕ್ಷುಶ್ಶಬ್ದಸ್ಯ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ನನು ಸುಧಾಯಾಂ ಚಕ್ಷುರ್ಮಯತ್ವಾದೇಸ್ಸಾವಕಾಶತ್ವಮಾಹ್ಯ ''ಹೇತ್ವನ್ತರೇಣ ಪೂರ್ವಪಕ್ಷೇ ಸತ್ಯಭ್ಯುಚ್ಚಯಮಾತ್ರತ್ವೇನ ತೇಷಾಮುಪನ್ಯಾಸಃ'' ಇತಿ, ಟೀಕಾಯಾಂ ಚ ''ನಚ ತಲ್ಲಿಙ್ಗಮನ್ತರ್ಯಾಮಿವಿಷಯಂ, ತಸ್ಯಾಪರಿಚ್ಛಿನ್ನತ್ವೇನಾಲ್ಪೌಕಸ್ತ್ವಾಯೋಗಾತ್'' ಇತಿ ಚಕ್ಷುರ್ಮಯತ್ವಾದೇಸ್ಸಾವಕಾಶತ್ವಮುಪೇತ್ಯ ಸೌತ್ರಾಲ್ಪೌಕಸ್ತ್ವಮೇವ ಮೂಲಯುಕ್ತಿತ್ವೇನೋಕ್ತಮ್ ।

ನ್ಯಾಯವಿವರಣಟೀಕಾಯಾಂ ಚ ತಥೈವೋಕ್ತಮ್ । ತಥಾ ಚ ತದ್ವಿರುಧ್ಯತ ಇತಿ ಚೇನ್ನ,

ಅಭ್ಯುಪೇತ್ಯವಾದೇನ ತಥೋಕ್ತಾವಪಿಹ ವಾಸ್ತವಾಶಯೇನ ನಿರವಕಾಶತ್ವೋಕ್ತೇಃ । ಅತ ಏವಾಗ್ರೇ ಟೀಕಾ ''ಚಕ್ಷುರ್ಮಯತ್ವಾದ್ಯಯೋಗಾಚ್ಚ'' ಇತಿ । ವಕ್ಷ್ಯತಿ ಚೈತದಕ್ಷರಾರ್ಥೋಕ್ತಿಪ್ರಸ್ತಾವೇ ।

ಆಕ್ಷೇಪ - ನ್ಯಾಯಸುಧೆಯಲ್ಲಿ 'ಚಕ್ಷುರ್ಮಯತ್ವ' ಮೊದಲಾದವುಗಳನ್ನು ಸಾವಕಾಶವೆಂದು ಆಶಂಕಿಸಿ ''ಹೇತ್ವಂತರೇಣ ಪೂರ್ವಪಕ್ಷೇ ಸತ್ಯಭ್ಯುಚ್ಚಯಮಾತ್ರತ್ವೇನ ತೇಷಾಮುಪನ್ಯಾಸಃ'' ''ಮತ್ತೊಂದು ಹೇತುವಿನಿಂದ ಪೂರ್ವಪಕ್ಷ ಮಾಡಿದಾಗ ಹೊಸದಾದ ಯುಕ್ತಿಗಳನ್ನು ಹೇಳಿದ್ದಾರೆ.'' ಎಂಬುದಾಗಿ ನಿರೂಪಿಸಿರುತ್ತಾರೆ. ಟೀಕೆಯಲ್ಲಿಯೂ ಸಹ ''ನಚ ತಲ್ಲಿಂಗಂ ಅಂತರ್ಯಾಮ್ಯಧಿವಿಷಯಮ್, ತಸ್ಯಾಪರಿಚ್ಛಿನ್ನತ್ವೇನಾಲ್ಪೌಕಸ್ತ್ವಾಯೋಗಾತ್'' ಚಕ್ಷುರ್ಮಯತ್ವ ಎಂಬ ಲಿಂಗವು ಅಂತರ್ಯಾಮಿಯಲ್ಲಿ ಬರುವುದಿಲ್ಲ. ಹಾಗಾದರೆ ಸರ್ವಗತನಲ್ಲಿ ಅಲ್ಪೌಕಸ್ತ್ವವನ್ನು ಹೇಳುವ ಪ್ರಸಂಗ ಬರುತ್ತದೆಂಬುದಾಗಿ ಚಕ್ಷುರ್ಮಯತ್ವಾದಿ-ಲಿಂಗಗಳಿಗೆ ಸಾವಕಾಶತ್ವವನ್ನು ಅಂಗೀಕರಿಸಿದ್ದಾರೆ. ಇದಕ್ಕೆ ಸೂತ್ರದಲ್ಲಿರುವ ಅಲ್ಪೌಕಸ್ತ್ವವನ್ನೇ ಮೂಲ ಯುಕ್ತಿಯನ್ನಾಗಿ ಹೇಳಿದ್ದಾರೆ.

ನ್ಯಾಯವಿವರಣದ ಟೀಕೆಯಲ್ಲಿಯೂ ಸಹ ಹೀಗೆಯೇ ಹೇಳಿದ್ದಾರೆ. ಆದರೆ ನೀವು ಚಕ್ಷುರ್ಮಯತ್ವವೆಂಬ ಲಿಂಗವನ್ನು ಜೀವನಲ್ಲಿ ನಿರವಕಾಶವೆನ್ನುತ್ತಿದ್ದೀರಿ. ನಿಮ್ಮ ಮಾತಿಗೆ ನ್ಯಾಯಸುಧಾ ಮೊದಲಾದ ಗ್ರಂಥಗಳ ವಿರೋಧ ಬರುತ್ತದಲ್ಲವೇ ?

ಸಮಾಧಾನ - ಇದು ತಪ್ಪು. ಅಂಗೀಕಾರವಾದ ಮಾಡಿ ಹಾಗೆ ಹೇಳಿದ್ದಾರೆ. ವಾಸ್ತವಾಭಿಪ್ರಾಯದಿಂದ ಇಲ್ಲಿ ನಿರವಕಾಶತ್ವವನ್ನು ಹೇಳಲಾಗಿದೆ. ಆದ್ದರಿಂದಲೇ ಮುಂದೆ ಟೀಕೆಯಲ್ಲಿ ''ಚಕ್ಷುರ್ಮಯತ್ವಾದ್ಯಯೋಗಾಚ್ಚ'' ಎಂಬುದಾಗಿ ಟೀಕಾಕ್ಷರಾರ್ಥವನ್ನು ನಿರೂಪಿಸುವ ಸಂದರ್ಭದಲ್ಲಿ ಹೇಳಿದ್ದಾರೆ.

ಗುರುರಾಜೀಯಮ್ – ನನು ಕಥಂ ಚಕ್ಷುರ್ಮಯತ್ವಾದಿಲಿಙ್ಗಾಜ್ಜೀವಪ್ರಾಪ್ತಿಃ । ಆನನ್ದಮಯಾಧಿಕರಣನ್ಯಾಯೇನ ಪ್ರಾಚುರ್ಯಾರ್ಥತಯಾ ಚಕ್ಷುರ್ಮಯತ್ವಾದೇರ್ಬ್ರಹ್ಮಣಿ ಸಾವಕಾಶತ್ವಾದಿತ್ಯತ ಆಹ – **ಆನನ್ದಮಯೋಕ್ತಸ್ಯೇತಿ** ।। ನನು ತಥಾಪಿ ಪಾದಾನ್ತ್ಯಪ್ರಾಣಾಧಿಕರಣನ್ಯಾಯೇನಾನ್ತರ್ಯಾಮಿ-ವಿಷಯತಯಾ ಚಕ್ಷುರ್ಮಯತ್ವಂ ಭಗವತಿ ಸಾವಕಾಶಮಿತ್ಯತ ಆಹ – **ಜ್ಞಾನಕರಣತಯೇತಿ** ।।

ಸಾರ

ಇಲ್ಲಿಯ ತನಕ ಆದಿತ್ಯಪ್ರಾಪಕವಾದ ಪೂರ್ವಪಕ್ಷ ಲಿಂಗಗಳನ್ನು ನಿರೂಪಿಸಿದರು. ಈಗ ಜೀವಪ್ರಾಪಕವಾದ ಪೂರ್ವಪಕ್ಷಲಿಂಗಗಳನ್ನು ಹೇಳುತ್ತಿದ್ದಾರೆ. 'ಚಕ್ಷುರ್ಮಯತ್ವ' ಎಂಬುದು ಜೀವನೇ ಸರ್ವಗತನೆನ್ನಲು ಲಿಂಗವಾಗಿದೆ. ಒಂದುವೇಳೆ 'ಚಕ್ಷುರ್ಮಯ' ಎಂಬಲ್ಲಿರುವ ಮಯಟ್ ಪ್ರತ್ಯಯಕ್ಕೆ 'ಪ್ರಾಚುರ್ಯ' ಎಂಬರ್ಥವನ್ನು ಹೇಳಿದರೆ ಮಾತ್ರ ಪರಮಾತ್ಮನೇ ಚಕ್ಷುರ್ಮಯನೆನ್ನಬಹುದು. ಆದರೆ ಅನೇಕ ಬಾಧಕಗಳಿರುವುದರಿಂದ ಇಲ್ಲಿರುವ 'ಮಯಟ್' ಪ್ರತ್ಯಯಕ್ಕೆ 'ಪ್ರಾಚುರ್ಯ' ಎಂಬರ್ಥವನ್ನು ಹೇಳಲು ಸಾಧ್ಯವಿಲ್ಲ. ಹೊರತಾಗಿ 'ವಿಕಾರ' ಎಂಬರ್ಥವನ್ನೇ ಹೇಳಬೇಕು. ಆವಾಗ ಜೀವನೇ ಚಕ್ಷುರ್ಮಯನಾಗುತ್ತಾನೆ. ಈ ಕಾರಣದಿಂದ ಜೀವನನ್ನೇ ಸರ್ವಗತನೆನ್ನಬೇಕು.

● ● ● ● ●

ಜೀವನ ಪ್ರಾಪಕಲಿಂಗಗಳು ಆದಿತ್ಯನಲ್ಲಿಲ್ಲ

तात्पर्यचन्द्रिका

नच चक्षुर्मयत्वादीनां आदित्ये पर्यवसानम्, ''चत्वारः पुरुषा इति बाध्वः'' इति बाध्वचिह्नितोपक्रमस्य ''इति ह स्माह बाध्वः'' इति बाध्वचिह्नितोपसंहारस्यैव च वाक्यस्यैकत्वात्तन्मध्यस्थादित्यशब्दस्य सूर्यपरत्वेऽपि तदुपरितने ''एतं खेव बहृचाः'' इत्यादौ ''सर्वेषु भूतेष्वेतं'' इत्यन्ते च वाक्ये बहुकृत्वः श्रुतस्य एतच्छब्दस्य ''अथैष ज्योतिः'' इत्यादाविव वक्ष्यमाणजीवरूपचक्षुर्मयादिपरत्वात्,

ಅನುವಾದ - ಚಕ್ಷುರ್ಮಯತ್ವಾದಿಗಳನ್ನು ಆದಿತ್ಯನಲ್ಲಿ ಪರ್ಯವಸಾನ ಮಾಡಬಹುದಲ್ಲವೇ ? ಎಂದು ಪ್ರಶ್ನಿಸಬಾರದು. ಏಕೆಂದರೆ ''ಚತ್ವಾರಃ ಪುರುಷಾ ಇತಿ ಬಾಧ್ವಃ'' ಎಂಬುದಾಗಿ 'ಬಾಧ್ವ' ಎಂಬ ಶಬ್ದದಿಂದ ಚಿಹ್ನಿತವಾದ ಉಪಕ್ರಮ ಹಾಗೂ ''ಇತಿ ಹ ಸ್ಮಾಹ ಬಾಧ್ವಃ'' ಎಂಬ ಬಾಧ್ವಚಿಹ್ನದಿಂದ ಕೂಡಿರುವ ಉಪಸಂಹಾರವು ಶ್ರುತಿವಾಕ್ಯದಲ್ಲಿರುವುದರಿಂದ ಒಂದೇ ವಿಷಯವನ್ನು ಶ್ರುತಿಯು ಪ್ರತಿಪಾದಿಸಬೇಕು.

ವಸ್ತುತಃ ಇದೇ ಶ್ರುತಿವಾಕ್ಯದ ಮಧ್ಯದಲ್ಲಿ ಆದಿತ್ಯ ಶಬ್ದವಿರುವುದರಿಂದ ಸೂರ್ಯಪರವೆನ್ನಬಹುದು. ಆದರೆ ಆದರ ಮುಂದಿನ ವಾಕ್ಯದಲ್ಲಿ ''ಏತಂ ಹ್ಯೇವ ಬಹ್ವೃಚಾಃ'' ಇತ್ಯಾದಿಯಾಗಿ ಪ್ರಾರಂಭವಾಗುವ 'ಸರ್ವೇಷು ಭೂತೇಷ್ವೇತಂ' ಎಂಬುದಾಗಿ ಪರ್ಯವಸಾನಗೊಳ್ಳುವ ವಾಕ್ಯದಲ್ಲಿ ಅನೇಕ ಬಾರಿ 'ಏತತ್' ಎಂಬ ಶಬ್ದವು ಕೇಳಿಸುತ್ತಿದೆ. ಯಾವರೀತಿಯಾಗಿ 'ಅಥೈಷ ಜ್ಯೋತಿಃ' ಎಂಬಲ್ಲಿ 'ಏತತ್' ಶಬ್ದವು ಮುಂದೆ ಪ್ರಸಕ್ತವಾಗುವುದನ್ನು ಪರಾಮರ್ಶಿಸುತ್ತದೋ ಅದೇ ರೀತಿಯಾಗಿ ಇಲ್ಲಿರುವ 'ಏತತ್' ಶಬ್ದವೂ ಸಹ ಮುಂದೆ ಪ್ರಸಕ್ತನಾಗುವ ಜೀವನೆಂಬ ಚಕ್ಷುರ್ಮಯನನ್ನೇ ಪರಾಮರ್ಶಿಸುತ್ತದೆ.

ಕಠಿಣ ಪದಾರ್ಥ

ಬಾಧ್ವಃ = ವಾಯು, ಬಾಧ್ವಚಿಹ್ನೋತೋಪಕ್ರಮಸ್ಯ = ಬಾಧ್ವ ಎಂಬ ಚಿಹ್ನೆಯಿಂದ ಕೂಡಿರುವ ಉಪಕ್ರಮವುಳ್ಳ ವಾಕ್ಯದಲ್ಲಿ, ಬಹ್ವೃಚಃ = ಅನೇಕ ಋಕ್‌ಗಳಿಂದ ಕೂಡಿರುವ ವಾಕ್ಯ.

ಪ್ರಕಾಶಃ – ಪ್ರಾಗುಕ್ತಂ ವಿಶೇಷೇ ಪರ್ಯವಸಾನಂ ನಿರಾಹ – ನಚೇತಿ ।

'ಬಾಧ್ವಃ' ವಾಯುಃ । ''ಚತ್ವಾರಃ ಪುರುಷಾ ಇತ್ಯಾಹ'' ಇತ್ಯುಪಕ್ರಮ್ಯ, ಶರೀರಪುರುಷಃ ಛಂದಃಪುರುಷೋ, ವೇದಪುರುಷಃ, ಮಹಾಪುರುಷ ಇತಿ ಪುರುಷಚತುಷ್ಟಯಂ ನಿರ್ದಿಶ್ಯ, ಕ್ರಮೇಣ ತೇಷಾಂ ಪ್ರಜ್ಞಾತ್ಮಾಕಾರಬ್ರಹ್ಮಾದಿತ್ಯಾಖ್ಯರಸಾನುತ್ತ್ವಾऽನ್ತೇ ''ಇತಿ ಹ ಸ್ಮಾಹ ಬಾಧ್ವಃ'' ಇತ್ಯುಪಸಂಹಾರಾದೇಕ-ವಾಕ್ಯತ್ವಮ್ ।

''ಬಾಧ್ವಚಿಹ್ನಿತ'' ಇತಿ ಬಹುವ್ರೀಹಿಃ, ವಾಕ್ಯಸ್ಯ ವಿಶೇಷಣಮ್ । 'ಬಹ್ವೃಚಾ ಇತ್ಯಾದೌ' ಇತ್ಯಾದಾವಪಿ ಬಹುವ್ರೀಹಿರೇವ,

ಭಾಷಿತಪುಂಸ್ಕತ್ವಾತ್ । ''ತೃತೀಯಾದಿಷು ಭಾಷಿತಪುಂಸ್ಕಂ ಪುಂವದ್ಗಾಲವಸ್ಯ'' ಇತಿ ಪುಂವದ್ಭಾವಃ । 'ತದುಪರಿತನೇ ವಾಕ್ಯೇ, ಇತಿ ಆದೌ ಅನ್ತೇ, ಚಕಾರಾತ್ ಮಧ್ಯೇ ಚ ಬಹುಕೃತ್ವಃ ಶ್ರುತಸ್ಯ' ಇತಿ ವಾ ವಾಕ್ಯಂ ವ್ಯಾಖ್ಯೇಯಮ್ ।

ವಿವರಣೆ - ಸೂರ್ಯನಲ್ಲಿ ಚಕ್ಷುರ್ಮಯತ್ವವನ್ನು ಪರ್ಯವಸಾನ ಮಾಡಲಾಗದೆಂದು 'ನಚ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

'ಬಾಧ್ವಃ' ಎಂದರೆ 'ವಾಯು' ಎಂದರ್ಥ. ''ಚತ್ವಾರಃ ಪುರುಷಾ ಇತ್ಯಾಹ'' ಎಂದು ಪ್ರಾರಂಭವಾಗಿ ಶರೀರಪುರುಷನನ್ನು ಪ್ರಜ್ಞಾತ್ಮನೆಂದು ಛಂದಃಪುರುಷನನ್ನು ಆಕಾರನೆಂದು ವೇದಪುರುಷನನ್ನು ಬ್ರಹ್ಮನೆಂದು ಮಹಾಪುರುಷನನ್ನು ಆದಿತ್ಯನೆಂದು ಇವರುಗಳನ್ನು ಶ್ರೇಷ್ಠ ಎಂಬುದಾಗಿ ಕೊನೆಯಲ್ಲಿ 'ಇತಿ ಹ ಸ್ಮಾಹ ಬಾಧ್ವಃ'' ಎಂಬುದಾಗಿ ಉಪಸಂಹಾರ ಮಾಡಲಾಗಿದೆ. ಹೀಗೆ 'ಬಾಧ್ವಃ' ಎಂದು ಪ್ರಾರಂಭವಾಗಿ 'ಬಾಧ್ವಃ' ಎಂದೇ ಮುಕ್ತಾಯವಾಗಿರುವುದರಿಂದ ಒಬ್ಬನನ್ನೇ ಸಮಗ್ರ ವಾಕ್ಯವು ಪ್ರತಿಪಾದಿಸುತ್ತದೆಂದಂತಾಯಿತು.

'ಬಾಧ್ವಚಿಹ್ನಿತೋಪಕ್ರಮಸ್ಯ' ಎಂಬ ಪದಕ್ಕೆ 'ಬಾಧ್ವಚಿಹ್ನಿತಃ ಉಪಕ್ರಮಃ ಯಚ್ಚ ತತ್ ಬಾಧ್ವಚಿಹ್ನಿತೋಪಕ್ರಮಂ ತಸ್ಯ ಬಾಧ್ವಚಿಹ್ನಿತೋಪಕ್ರಮಸ್ಯ' ಎಂಬುದಾಗಿ ಬಹುವ್ರೀಹಿಸಮಾಸ ಮಾಡಬೇಕು. ಇದರಂತೆ 'ಬಾಧ್ವಚಿಹ್ನಿತೋಪಸಂಹಾರಸ್ಯ' ಎಂಬ ಪದಕ್ಕೂ ಸಹ 'ಬಾಧ್ವಚಿಹ್ನಿತಃ ಉಪಸಂಹಾರಃ ಯಚ್ಚ ತತ್ ಬಾಧ್ವಚಿಹ್ನೋತೋಪಸಂಹಾರಂ, ತಸ್ಯ ಬಾಧ್ವಚಿಹ್ನಿತೋಪಸಂಹಾರಸ್ಯ' ಎಂಬುದಾಗಿ ಬಹುವ್ರೀಹಿಸಮಾಸವನ್ನೇ ಮಾಡಬೇಕು. ವಾಕ್ಯದಲ್ಲಿ ಇವೆರಡಕ್ಕೂ ಇದನ್ನು ವಿಶೇಷಣವನ್ನಾಗಿ ತಿಳಿಯಬೇಕು. 'ಬಹ್ವೃಚಾ' ಎಂಬ ಪದಕ್ಕೂ ಸಹ ಹೀಗೆ ಬಹುವ್ರೀಹಿಸಮಾಸವನ್ನು ಮಾಡಬೇಕು.

ಪ್ರಶ್ನೆ - ಗ್ರಂಥದಲ್ಲಿ 'ಇತ್ಯಾದೌ' ಎಂಬ ಪದವನ್ನು ಬಳಸಿದ್ದಾರೆ. ಹೇಗೆ ಸರಿ ? ಏಕೆಂದರೆ ವಾಕ್ಯದಲ್ಲಿ ವಿಶೇಷಣವನ್ನಾಗಿ ಹೇಳಿದಾಗ 'ಇತಿ ಆದಿ ಯಸ್ಯ ತತ್ ಇತ್ಯಾದಿ ತಸ್ಮಿನ್ ಇತ್ಯಾದಿನಿ' ಎಂದೇ ಹೇಳಬೇಕು. ವಾಕ್ಯಶಬ್ದವು ನಪುಂಸಕಲಿಂಗದಲ್ಲಿರುವುದರಿಂದ ಅದರಲ್ಲಿ ವಿಶೇಷಣವಾಗಿರುವ ಆದಿಶಬ್ದವನ್ನೂ ಸಹ ನಪುಂಸಕಲಿಂಗದಲ್ಲಿಯೇ ಹೇಳಬೇಕು. ಆವಾಗ 'ಇತ್ಯಾದಿನಿ' ಎಂದೇ ಆಗುತ್ತದೆ. ಹೊರತು 'ಇತ್ಯಾದೌ' ಎಂಬ ಪುಲ್ಲಿಂಗ ಪ್ರಯೋಗವು ತಪ್ಪಾಗುತ್ತದಲ್ಲವೆ ?

ಉತ್ತರ - ಎರಡು ಬಗೆಯಲ್ಲಿ ಇದಕ್ಕೆ ಉತ್ತರಿಸಬಹುದು. ''ತೃತೀಯಾದಿಷು ಭಾಷಿತಪುಂಸ್ಕಂ ಪುಂವದ್ಭಾಲವಸ್ಯ'' ಎಂಬ ಸೂತ್ರದಲ್ಲಿ ತೃತೀಯಾದಿ ವಿಭಕ್ತಿಗಳಲ್ಲಿ ಆದಿ ಪದಕ್ಕೆ ಪುಂವದ್ಭಾವವನ್ನು ಹೇಳಿದ್ದಾರೆ. (ಶುಚಿ ಶಬ್ದಂತೆ) ಆದ್ದರಿಂದ ನಪುಂಸಕಲಿಂಗವೇ ಆಗಿದ್ದರೂ ತೃತೀಯಾದಿ ವಿಭಕ್ತಿಗಳಲ್ಲಿ ಪುಲ್ಲಿಂಗದ ರೂಪಗಳೂ ಇರುವುದರಿಂದ 'ಇತ್ಯಾದೌ' ಎಂದು ಪ್ರಯೋಗಿಸಬಹುದು. ಆದ್ದರಿಂದ ವಾಕ್ಯೇ ಎಂಬುವುದರಿಂದ 'ಆದೌ' ಎಂಬುದು ವಿಶೇಷಣವಾಗುತ್ತದೆ.

ಅಥವಾ 'ಆದೌ' ಎಂಬುದನ್ನು ವಾಕ್ಯೇ ಎಂಬಲ್ಲಿ ವಿಶೇಷಣ ಮಾಡುವುದೇ ಬೇಡ. ವಾಕ್ಯೇ ಎಂಬುದನ್ನು ತದುಪರಿತನೇ ಎಂಬಲ್ಲಿ ಅನ್ವಯ ಮಾಡಿ 'ಇತ್ಯಾದೌ ಅಂತೇ ಚ' ಎಂಬಲ್ಲಿ ಬಹುಕೃತ್ವಃ ಶ್ರುತಸ್ಯ ಎಂಬುದನ್ನು ಇಟ್ಟುಕೊಳ್ಳಬೇಕು. ಹೀಗೆ ಅನ್ವಯದಲ್ಲಿ ವ್ಯತ್ಯಾಸ ಮಾಡಿದಾಗ ವಾಕ್ಯದ ಆದಿಯಲ್ಲಿ ಮತ್ತು ಕೊನೆಯಲ್ಲಿ ಅನೇಕ ಬಾರಿ ಕೇಳಿಸುತ್ತಿರುವ ಎಂದು ಹೇಳಿದಂತಾಗುತ್ತದೆ. ಈ ಪಕ್ಷದಲ್ಲಿ 'ಆದೌ' ಎಂಬ ಪದವು ವಿಶೇಷಣವಾಗುವುದೇ ಇಲ್ಲ. ಆದ್ದರಿಂದ ಪುಲ್ಲಿಂಗದ ಪ್ರಯೋಗವು ಹೇಗೆ ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ.

ಪ್ರಕಾಶಃ – ಅಥೈಷ ಇತಿ । ಸಂಜ್ಞಾಧಿಕರಣಮುಕ್ತಮಾನನ್ದಮಯಾಧಿಕರಣೇ ತತ್ರ ಯಥೈತಚ್ಛಬ್ದಸ್ಯ ''ಏತೇನ ಸಹಸ್ರದಕ್ಷಿಣೇನ ಯಜೇತ'' ಇತಿ ವಕ್ಷ್ಯಮಾಣಯಾಗಪರತ್ವಂ ನತು ಪ್ರಕೃತಜ್ಯೋತಿಷ್ಟೋಮಪರತ್ವಂ, ತದ್ವದಿತ್ಯರ್ಥಃ ।

ನನು ಸಂಜ್ಞಾಭೇದಾತ್ತತ್ರ ತಥಾತ್ವಮುಪೇತಮಿತಿ ಚೇದಿಹಾಪಿ ವಾಕ್ಯಭೇದಾತ್ತಥಾऽಸ್ತಿತಿ ಭಾವಃ ।

ಪೂರ್ವಮೀಮಾಂಸೆಯ 'ಅಥೈಷ ಜ್ಯೋತಿಃ' ಎಂಬ ಸಂಜ್ಞಾಧಿಕರಣವನ್ನು ಆನಂದಮಯಾಧಿಕರಣದಲ್ಲಿ ವಿವರಿಸಲಾಗಿದೆ. ಈ ಅಧಿಕರಣದಲ್ಲಿ ಸಂಜ್ಞಾಭೇದದಿಂದ ಕರ್ಮಭೇದವನ್ನು ನಿರೂಪಿಸಿದ್ದಾರೆ. ಮತ್ತು 'ಏಷಃ' ಎಂಬ 'ಏತತ್' ಶಬ್ದವು "ಏತೇ ಸಹಸ್ರದಕ್ಷಿಣೇನ ಯಜೇತ' ಎಂಬುದಾಗಿ ಮುಂದೆ ಪ್ರಸಕ್ತವಾಗುವ ಯಾಗವನ್ನು ಮೊದಲೇ ಪರಾಮರ್ಶಿಸುತ್ತಿದೆ ಹೊರತು, ಹಿಂದೆ ಪ್ರಸಕ್ತವಾದ ಜ್ಯೋತಿಷ್ಟೋಮವನ್ನು ಪರಾಮರ್ಶಿಸುತ್ತಿಲ್ಲ. ಆದರಂತೆ ಪ್ರಕೃತ 'ಬಾಧ್ದ' ಶ್ರುತಿಯಲ್ಲಿರುವ 'ಏತತ್' ಶಬ್ದವೂ ಸಹ ಮುಂದೆ ಪ್ರಸಕ್ತವಾಗುವ ಜೀವನೆಂಬ ಚಕ್ಷುರ್ಮಯನನ್ನೇ ಪರಾಮರ್ಶಿಸುತ್ತದೆ.

ಪ್ರಶ್ನೆ - ಪೂರ್ವಮೀಮಾಂಸಾಧಿಕರಣದಲ್ಲಿ ಸಂಜ್ಞಾಭೇದದಿಂದ ಕರ್ಮಭೇದವನ್ನು ಹೇಳುತ್ತಿರುವುದರಿಂದ ಮುಂದೆ ಹೇಳುವುದನ್ನು ಪರಾಮರ್ಶಿಸುವುದು ತಪ್ಪಲ್ಲ. ಆದರೆ ಇಲ್ಲಿ ಹಾಗೇ ಹೇಳದ ಕಾರಣ ಮುಂದೆ ಹೇಳುವುದನ್ನು ಹೇಗೆ ಪರಾಮರ್ಶಿಸುತ್ತೀರಿ?

ಉತ್ತರ - ಇಲ್ಲಿಯೂ ಸಹ ವಾಕ್ಯಭೇದವಿರುವುದರಿಂದ ಮುಂದೆ ಹೇಳುವುದನ್ನು ಪರಾಮರ್ಶಿಸಬಹುದು. ಪೂರ್ವಮೀಮಾಂಸೆಯಲ್ಲಿ ಕರ್ಮಭೇದವು ವಿವಕ್ಷಿತವಾಗಿದೆ. ಇಲ್ಲಿ ವಾಕ್ಯಭೇದವು ವಿವಕ್ಷಿತವಾಗಿದೆ.

गुरुराजीयम् – पशुशब्दस्य तद्विशेषच्छागवादादित्यश्रुत्या चक्षुर्मयत्वादिजीवलिङ्गानां जीवविशेषादित्य एव पर्यवसानेन सर्वजीवप्रापकाभावात्कथं सर्वजीवानां प्राप्तिरित्याशङ्क्ते – नचेति ।। ननु सर्वेषु भूतेष्वित्यनेन सर्वगतत्वस्यैवोक्तत्वेनार्भकौकस्त्वानुक्तेः कथमर्भकौकस्त्वेन सर्वजीवप्राप्तिरित्यत आह – सर्वेष्विति ।।

ಸಾರ

ಚಕ್ಷುರ್ಮಯತ್ವ ಎಂಬ ಲಿಂಗದಿಂದ ಜೀವನನ್ನು ಸರ್ವಗತನೆಂದು ಪೂರ್ವಪಕ್ಷ ಮಾಡಲಾಗಿದೆ. ಈ ಚಕ್ಷುರ್ಮಯತ್ವವು ಜೀವನಲ್ಲಿಯೇ ಪರ್ಯವಸಾನವಾಗುತ್ತದೆ ಹೊರತು ಆದಿತ್ಯನಲ್ಲಲ್ಲ. ಏಕೆಂದರೆ ಉಪಕ್ರಮ ಹಾಗೂ ಉಪಸಂಹಾರದಲ್ಲಿ ಒಂದೇ ವಿಷಯವು ಪ್ರಸಕ್ತವಾಗಿರುವುದರಿಂದ ಒಬ್ಬನ್ನೇ ಹೇಳಬೇಕು. ಆದ್ದರಿಂದ ಆದಿತ್ಯನೇ ಪ್ರತಿಪಾದ್ಯನೆಂಬ ಶಂಕೆಯು ಸಹಜವಾಗಿ ಬರುತ್ತದೆ. ಆದರೆ ಪ್ರಾರಂಭದಿಂದ ಕೊನೆಯತನಕ ಅನೇಕ ಬಾರಿ 'ಏತತ್' ಎಂಬ ಪದವು ಕೇಳಿಸುತ್ತಿದೆ. ಈ ಪದವು ಮುಂದೆ ಪ್ರಸಕ್ತನಾಗುವ ಜೀವನನ್ನೇ ಪರಾಮರ್ಶಿಸುತ್ತದೆ. ಆದ್ದರಿಂದ ಚಕ್ಷುರ್ಮಯತ್ವವು ಜೀವಪ್ರಾಪಕವೇ ಹೊರತು ಆದಿತ್ಯ ಪ್ರಾಪಕವಲ್ಲ.

ತಾತ್ಪರ್ಯಚನ್ದ್ರಿಕಾ

ಅರ್ಭಕೌಕಸ್ತ್ವಾಚ್ಚ ನ ವಿಷ್ಣೋಃ ಸರ್ವಗತತಾ । ''ಅನ್ತಃ'' ಇತ್ಯತ್ರ ''ಅನ್ತರಃ'' ಇತ್ಯತ್ರ ''ಅನ್ತರ್ಯಾಮಿ'' ಇತ್ಯತ್ರ ಚ ಸರ್ವಗತತ್ವಾಲ್ಪೌಕಸ್ತ್ವಯೋರವಿರೋಧೋ ನೋಕ್ತಃ,

ತತ್ಪ್ರಕರಣೇ ಸರ್ವಗತತ್ವಸ್ಯಾಭಾವೇನ ವಿರೋಧಶಙ್ಕಾಯಾ ಅನುದಯಾತ್, ಉದಯೇ ವಾ ತತ್ರತ್ಯನ್ತಯಾಯೇನೈವ ಪರಿಹಾರ್ಯತ್ವಾತ್ ।

''ಉಪಾಸಾತ್ರೈವಿಧ್ಯಾತ್'' ಇತ್ಯತ್ರ ತು ಅನ್ತಸ್ಥತ್ವಾಭ್ಯುಕ್ತೇಃ ಪ್ರಯೋಜನಮಾತ್ರಮುಕ್ತಮ್, ನ ತ್ವವಿರೋಧಃ । ''ಹೃದ್ಯಪೇಕ್ಷಯಾ'' ಇತ್ಯತ್ರ ತು ತಯೋಸ್ತ್ರಾವಿರೋಧೇ ಉಕ್ತೇಽಪಿ ''ಅಙ್ಗುಷ್ಠಮಾತ್ರಃ ಪುರುಷಃ'' ಇತ್ಯತ್ರ ಮಾತ್ರಶಬ್ದಸ್ಯ ಅವಧಾರಣಾರ್ಥತ್ವಾತ್ಸರ್ವಗತಸ್ಯ ಸಾವಧಾರಣಮಙ್ಗುಷ್ಠಪರಿಮಾಣತ್ವಮ-ಯುಕ್ತಮಿತಿ ಶಙ್ಕಿತೇ, ಮೂರ್ತಿವಿಶೇಷೇ ವ್ಯಕ್ತ್ಯಾತ್ಮನಾ ·ಸಾವಧಾರಣಮಪಿ ತದ್ಯುಕ್ತಮಿತಿ ಸಮಾಧಾಸ್ಯತೇ ।

''ಸರ್ವೇಷು ಭೂತೇಷು'' ಇತ್ಯತ್ರ ಚ ಅಲ್ಪೌಕಸ್ತ್ವಮುಚ್ಯತೇ, ಭೂತಾದನ್ಯತ್ರಾಭಾವಪ್ರತೀತೇಃ । ಅನ್ಯಥಾ ಭೂತಪದವೈಯರ್ಥ್ಯಾತ್ । ಸಿದ್ಧಾನ್ತಿನಾ ''ಸರ್ವಭೂತಾಶಯಃ ಸ್ಥಿತಃ'' ಇತಿ ಸ್ಮೃತಿಸಮಾಖ್ಯಯಾ ಸರ್ವಜೀವಹೃದಯಸ್ಥತ್ವಸ್ಯೈವ ವಕ್ತವ್ಯತ್ವಾಚ್ಚ ।

ಪೂರ್ವಾಧಿಕರಣಾಕ್ಷೇಪಸ್ತ್ವಿತ್ಥಮ್ – ತಸ್ಯ ಸರ್ವಭೂತಗತಸ್ಯೈವ ಸಿದ್ಧಾನ್ತಿನಾ ಸರ್ವಗತತ್ವಾಙ್ಗೀಕಾರಾತ್ತದಭಾವೇ ತದಭಾವ ಇತಿ । ಯದ್ವಾ ''ಏತಮೇವ'' ಇತ್ಯವಧಾರಣೇನ ವಿಷ್ಣೋರನ್ಯಸ್ಯೈವ ಸರ್ವಭೂತಗತತ್ವಾತ್ ವಿಷ್ಣೋರ್ಭೂತಾದನ್ಯತ್ರ ಸತ್ತ್ವೇಽಪಿ ಸರ್ವಗತತ್ವಾಯೋಗ ಇತಿ ।

ಅನುವಾದ - ವಿಷ್ಣುವು ಅಲ್ಪದೇಶಸ್ಥನಾದ್ದರಿಂದಲೂ ಸರ್ವಗತನಾಗಲಾರ. ಅಲ್ಪದೇಶದಲ್ಲಿರುವಿಕೆಗೂ, ಸರ್ವದೇಶದಲ್ಲಿರುವಿಕೆಗೂ ಪರಸ್ಪರ ವಿರೋಧವಿದೆ.

'ಅಂತಸ್ತದ್ಧರ್ಮೋಪದೇಶಾತ್' ಎಂಬ ಸೂತ್ರದಲ್ಲಾಗಲೀ 'ಅಂತರ ಉಪಪತ್ತೇಃ' ಎಂಬ ಸೂತ್ರದಲ್ಲಾಗಲೀ, ಅಂತರ್ಯಾಮ್ಯಧಿಕರಣದಲ್ಲಾಗಲೀ, ಅಲ್ಪದೇಶಸ್ಥಿತತ್ವವನ್ನು ವಿಷ್ಣುವಿಗೆ ಹೇಳಿದ್ದಾರೆ ಹೊರತು ಸರ್ವಗತತ್ವಕ್ಕೂ ಅಲ್ಪದೇಶಸ್ಥಿತತ್ವಕ್ಕೂ ಇರುವಂತಹ ವಿರೋಧವನ್ನು ಪರಿಹರಿಸಿಲ್ಲ. ಏಕೆಂದರೆ ಅಲ್ಪದೇಶಸ್ಥಿತತ್ವವನ್ನು ಹೇಳುವ ಪ್ರಕರಣದಲ್ಲಿ ಸರ್ವಗತತ್ವವು ಕೇಳಿಸುತ್ತಿಲ್ಲ. ಆದ್ದರಿಂದ ವಿರೋಧಶಂಕೆಯೇ ಹುಟ್ಟದ ಕಾರಣ ಅದರ ಪರಿಹಾರವನ್ನೂ ಸಹ ಅಲ್ಲಿ ಮಾಡಿರುವುದಿಲ್ಲ. ಒಂದು

ವೇಳೆ ಹಾಗೇನಾದರೂ ವಿರೋಧಶಂಕೆಯು ಹುಟ್ಟುವುದಾದಲ್ಲಿ ಈ ಅಧಿಕರಣದ ನ್ಯಾಯದಿಂದಲೇ ಆ ವಿರೋಧವನ್ನು ಪರಿಹರಿಸಬೇಕು.

ಇದರಂತೆ 'ಉಪಾಸಾತ್ರೈವಿಧ್ಯಾತ್' ಎಂಬ ಸೂತ್ರದಲ್ಲಿ 'ಅಂತಸ್ಥತ್ವ' ಎಂಬ ವಚನಕ್ಕೆ ಪ್ರಯೋಜನವನ್ನಷ್ಟೇ ಹೇಳಿದ್ದಾರೆ ಹೊರತು ವಿರೋಧವನ್ನು ಪರಿಗಣಿಸಿಲ್ಲ. ವಸ್ತುತಸ್ತು 'ಹೃದ್ಯಪೇಕ್ಷಯಾ' ಎಂಬ ಸೂತ್ರದಲ್ಲಿ ವಿರೋಧವನ್ನೇನೋ ಪರಿಹರಿಸಿದ್ದಾರೆ. ಆದರೆ ವಿರೋಧಪರಿಹಾರದ ಮಾರ್ಗವೇ ಬೇರೆ ಬಗೆಯಲ್ಲಿದೆ. ''ಅಂಗುಷ್ಠಮಾತ್ರಃ ಪುರುಷಃ'' ಎಂಬಲ್ಲಿ ಮಾತ್ರಶಬ್ದಕ್ಕೆ ಅವಧಾರಣ ಎಂದರ್ಥ. ಅಂದರೆ ಅಲ್ಪದೇಶದಲ್ಲಿ ಮಾತ್ರ ಇರುತ್ತಾನೆಂದು 'ಮಾತ್ರ' ಪದದಿಂದ ತಿಳಿಯುತ್ತಿದೆ. ಸರ್ವಗತನಾದ ಬ್ರಹ್ಮನಲ್ಲಿ ಕೇವಲ ಅಂಗುಷ್ಠ ಪರಿಮಾಣವನ್ನು ಹೇಳುವುದು ತಪ್ಪಲ್ಲವೇ? ಎಂಬ ಶಂಕೆ ಪ್ರಾಪ್ತವಾದರೆ ಹೃದಯದಲ್ಲಿರುವ ಮೂರ್ತಿವಿಶೇಷವು ವ್ಯಕ್ತಾತ್ಮನಾ ಅಂಗುಷ್ಠ ಪರಿಮಾಣದಲ್ಲಿರುತ್ತದೆ. ಆದ್ದರಿಂದ ಮಾತ್ರಪದದಿಂದ ಅವಧಾರಣವು ಯುಕ್ತವೇ ಆಗಿದೆಯೆಂದು ಸಮಾಧಾನವನ್ನು ನೀಡಿದ್ದಾರೆ; ಹೊರತಾಗಿ ಸರ್ವಗತತ್ವಕ್ಕೂ ಅಲ್ಪದೇಶಸ್ಥಿತ್ವಕ್ಕೂ ಬರುವಂತಹ ವಿರೋಧವನ್ನು ಪರಿಹರಿಸಿಲ್ಲ. ಅವಧಾರಣಾರ್ಥವನ್ನು ಮಾತ್ರ ನಿರ್ಣಯಿಸಿದ್ದಾರೆ.

ಶ್ರುತಿಯಲ್ಲಿರುವ 'ಸರ್ವೇಷು ಭೂತೇಷು' ಎಂಬುದರಿಂದಲೂ ಅಲ್ಪದೇಶಸ್ಥಿತತ್ವವನ್ನು ಹೇಳಲಾಗಿದೆ. ಏಕೆಂದರೆ ಭೂತಪದಾರ್ಥಗಳನ್ನು ಬಿಟ್ಟು ಬೇರೆಡೆ ಇಲ್ಲವೆಂದು ಹೇಳಿದ್ದರಿಂದ. ಇಲ್ಲದಿದ್ದರೆ, ಭೂತಪದವೇ ವ್ಯರ್ಥವಾಗುತ್ತದೆ. ಸಿದ್ಧಾಂತಿಯೂ ಸಹ ''ಸರ್ವಭೂತಾಶಯಸ್ಥಿತಃ'' ಎಂಬ ಶ್ರುತಿ ಸಮಾಖ್ಯಾಪ್ರಮಾಣದಿಂದ ಸರ್ವಜೀವಹೃದಯಸ್ಥತ್ವವನ್ನೇ ಹೇಳಬೇಕು ಹೊರತು ಸರ್ವಗತನೆಂದು ಹೇಳಬೇಕಾಗಿಲ್ಲ.

ಹಿಂದಿನ ಅಧಿಕರಣದ ಆಕ್ಷೇಪವಾದರೂ ಹೀಗಿದೆ - ಸರ್ವಭೂತಗತನಾದ್ದರಿಂದಲೇ ವಿಷ್ಣು ಸರ್ವಗತನಾಗಿದ್ದಾನೆಂದು ಅಂಗೀಕರಿಸಲಾಗಿದೆ. ಸರ್ವಗತತ್ವ ಇಲ್ಲದಿದ್ದಲ್ಲಿ ಸರ್ವಭೂತಗತತ್ವವನ್ನೂ ಸಹ ಒಪ್ಪಲು ಸಾಧ್ಯವಿಲ್ಲ.

ಅಥವಾ 'ಏತಮೇವ' ಎಂಬಲ್ಲಿ ಅವಧಾರಣ ಮಾಡಿದ್ದರಿಂದ ವಿಷ್ಣುವಿಗಿಂತ ಅನ್ಯರಾದ ಆದಿತ್ಯಾದಿಗಳೇ ಸರ್ವಭೂತಗತರಾಗಿದ್ದಾರೆ. ವಿಷ್ಣುವು ಭೂತಪದಾರ್ಥಗಳಿಗಿಂತ ಬೇರೆಡೆ ಇದ್ದರೂ ಸರ್ವಗತನಾಗಲಾರ ಎಂಬುದನ್ನು ತಿಳಿಯಬೇಕು.

ಕಠಿಣ ಪದಾರ್ಥ

ಆರ್ಭಕೌಕಸ್ತ್ವಾಚ್ಚ = ಅಲ್ಪದೇಶದಲ್ಲಿರುವವನಾದ್ದರಿಂದ, ನೋಕ್ತಃ = ಮೂರು ಅಧಿಕರಣಗಳಲ್ಲಿಯೂ ವಿರೋಧಪರಿಹಾರವನ್ನು ಹೇಳಿಲ್ಲ. ತತ್ಕರಣೇ = ಅಲ್ಪದೇಶಸ್ಥಿತತ್ವವನ್ನು ಹೇಳುವ ಪ್ರಕರಣದಲ್ಲಿ, ಉದಯೇ ವಾ = ವಿರೋಧಶಂಕೆಯು ಹುಟ್ಟಿದರೂ ಸಹ, ತದ್ಯುಕ್ತಂ = ಅಂಗುಷ್ಠಪರಿಮಾಣತ್ವವು ಯುಕ್ತವಾಗುತ್ತದೆ.

ಸರ್ವಗತತ್ವಾಧಿಕರಣ (೧-೨-೧)

ತಯೋಃ = ಸರ್ವಗತತ್ವ ಹಾಗೂ ಅಲ್ಪದೇಶಸ್ಥಿತತ್ವಗಳಿಗೆ, ಅಲ್ಪೌಕಸ್ತ್ವಂ = ಸ್ವಲ್ಪದೇಶದಲ್ಲಿರುವಿಕೆ. ತದಭಾವೇ = ಸರ್ವಭೂತಗಳಲ್ಲಿಲ್ಲದಿದ್ದರೆ. ತದಭಾವಃ = ಸರ್ವಗತತ್ವ ಕೂಡುವುದಿಲ್ಲ.

ಪ್ರಕಾಶಃ – 'ಅರ್ಭಕೌಕಸ್ತ್ವಾತ್' ಇತಿ ಸೌತ್ರಂ ಪ್ರಾಪಕಾನ್ತರಮಪ್ಯಾಹ – **ಅರ್ಭಕೇತಿ** । ''ಸರ್ವೇಷು ಭೂತೇಷು'' ಇತಿ ಶ್ರುತಾವಿತ್ಯರ್ಥಃ । 'ಸರ್ವಗತತಾ' ದ್ಯುಪೃಥಿವ್ಯಾದಿಸರ್ವಗತತೇತ್ಯರ್ಥಃ । ನನೂಕ್ತಮಾತ್ರಾಲ್ಪೌಕಸ್ತ್ವಂ ತತ್ರ ತತ್ರ ಸಮರ್ಥಿತಮಿತಿ, ತತ್ರಾಹ – **ಅನ್ತರಿತ್ಯತ್ರೇತಿ** । ''ಪುರುಷ ಏವೇದಂ ಸರ್ವಂ'' ಇತ್ಯಾದಿನಾ ಸರ್ವಗತತ್ವಧರ್ಮಸ್ತತ್ರಾಪ್ಯಸ್ತೀತ್ಯತ ಆಹ – **ಉದಯೇ ವೇತಿ** । ಅತ ಏವ ಸಙ್ಗ್ರಹೇಪಭಾಷ್ಯೇ ''ಅನ್ತರಃ ಖವತ್'' ಇತಿ ಅನ್ತರ್ನಯೇ 'ವ್ಯೋಮವತ್' ಇತ್ಯುಕ್ತ್ಯಾऽತ್ರತ್ಯ-ನ್ಯಾಯೇನೈವಾವಿರೋಧ ಉಕ್ತಃ । **ಅನ್ತಸ್ಥತ್ವಾದೀತಿ** । **ಬಹಿಷ್ಠತ್ವಸರ್ವಗತತ್ವೋಕ್ತೇರಿತ್ಯಾದಿಪದಾರ್ಥಃ** ।

ವಿವರಣೆ - ಸೂತ್ರದಲ್ಲಿ 'ಅರ್ಭಕೌಕಸ್ತ್ವಾತ್' ಎಂದು ತಿಳಿಯುವ ಮತ್ತೊಂದು ಪೂರ್ವಪಕ್ಷ ಪ್ರಾಪಕವನ್ನು 'ಅರ್ಭಕೌಕಸ್ತ್ವಾತ್' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. 'ಸರ್ವೇಷು ಭೂತೇಷು' ಎಂಬುದನ್ನು ಶ್ರುತಿ ಎಂಬುದಾಗಿ ತಿಳಿಯಬೇಕು. ಸರ್ವಗತ ಎಂದರೆ ಅಂತರಿಕ್ಷ ಪೃಥಿವೀ ಮೊದಲಾದೆಡೆ ಎಂದರ್ಥ. ಅಲ್ಪೌಕಸ್ತ್ವವನ್ನು ಅಲ್ಲಲ್ಲಿ ಸಮರ್ಥಿಸಿದ್ದಾಗಿದೆಯಲ್ಲವೇ? ಎಂಬ ಪ್ರಶ್ನೆಗೆ ''ಅಂತರಿತ್ಯತ್ರ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಅಲ್ಪದೇಶಸ್ಥಿತತ್ವವನ್ನು ಹೇಳಿದ ಸ್ಥಳದಲ್ಲಿಯೇ 'ಪುರುಷ ಏವೇದಂ ಸರ್ವಂ' ಇತ್ಯಾದಿಯಾಗಿ ಸರ್ವಗತತ್ವ ಧರ್ಮವು ಕೇಳಿಸುತ್ತಿದೆಯಲ್ಲವೇ ? ಎಂಬ ಪ್ರಶ್ನೆಗೆ 'ಉದಯೇ ವಾ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಆದ್ದರಿಂದ ಆಣುಭಾಷ್ಯದ 'ಅಂತರಃ ಖವತ್' ಎಂಬ ಅಂತರಧಿಕರಣದಲ್ಲಿ 'ಖವತ್' ಎಂಬುದಾಗಿ ಆಕಾಶದ ದೃಷ್ಟಾಂತವನ್ನು ನೀಡುವ ಮೂಲಕ ಈ ಅಧಿಕರಣದ ನ್ಯಾಯದಿಂದಲೇ ವಿರೋಧವನ್ನು ಪರಿಹರಿಸಲಾಗಿದೆ. ('ಅಂತರಃ ಖವತ್' ಎಂಬ ಆಣುಭಾಷ್ಯವು 'ಅಂತರಃ' ಎಂಬುದಾಗಿ ಅಂತರಧಿಕರಣದ ವಿಷಯವನ್ನು 'ಖವತ್' ಎಂಬ ಆಕಾಶಾಧಿಕರಣದ ಪ್ರಮೇಯವನ್ನು ನಿರೂಪಿಸುತ್ತಿದೆ. ಇದೇ ಮಾತಿಗೆ ಮತ್ತೊಂದು ಬಗೆಯ ಅರ್ಥ ಖವತ್ = ಆಕಾಶದಂತೆ, ಅಂತಃ = ಅಂತಸ್ಥಿತನಾಗಿದ್ದಾನೆಂಬ ತತ್ವಮಂಜರಿಯ ಎರಡು ಬಗೆಯ ವ್ಯಾಖ್ಯಾನವನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.)

'ಅಂತಸ್ಥತ್ವಾದಿ' ಎಂಬಲ್ಲಿರುವ ಆದಿಪದಿಂದ ಬಹಿಷ್ಠತ್ವ ಮತ್ತು ಸರ್ವಗತತ್ವಗಳ ವಚನಗಳನ್ನು ವಿವಕ್ಷಿಸಬೇಕು.

ಪ್ರಕಾಶಃ – ಇಹ ತು ತಯೋರ್ವಿರೋಧಾತ್ಸರ್ವಗತಸ್ಯ ಹರೇರಲ್ಪೌಕಸ್ತ್ವಂ ನ ಯುಕ್ತಮಿತಿ ಪ್ರಾಪ್ತೇ, 'ವ್ಯೋಮವತ್' ಇತ್ಯಂಶೇನ ಸಮಾವೇಶಸ್ಮಮರ್ಥಿತ ಇತಿ ಭಾವಃ । 'ತಯೋಃ' ಸರ್ವಗತತ್ವಾಲ್ಪೌಕಸ್ತ್ವಯೋಃ । **ವ್ಯಕ್ತ್ಯಾತ್ಮನೇತಿ** । ಸರ್ವಗತತ್ವಸ್ಯ ಶಕ್ತ್ಯಾತ್ಮನಾऽವಸ್ಥಾನेऽಲ್ಪೌಕಸ್ತ್ವಮಾತ್ರಸ್ಯ ವ್ಯಕ್ತತಯಾ ತದಭಿಪ್ರಾಯೇಣಾಙ್ಗುಷ್ಠಮಾತ್ರತ್ವೋಕ್ತಿರಿತಿ ವಕ್ಷ್ಯತ ಇತ್ಯರ್ಥಃ । ತಥಾ ಚಾಧಿಕಾಶಙ್ಕಯಾ ತಸ್ಯೋತ್ಥಿತಿರಿತ್ಯರ್ಥಃ ।

ಅಲ್ಪದೇಶಸ್ಥಿತತ್ವ ಮತ್ತು ಸರ್ವಗತತ್ವಗಳಿಗೆ ವಿರೋಧವಿರುವುದರಿಂದ ಸರ್ವಗತನಾದ ಶ್ರೀಹರಿಗೆ ಅಲ್ಪದೇಶಸ್ಥಿತತ್ವವು ಅಯುಕ್ತವಾಗುತ್ತದಲ್ಲವೆ? ಎಂಬ ಶಂಕೆಗೆ 'ವ್ಯೋಮವತ್' ಎಂಬಂಶದಿಂದ ಉತ್ತರಿಸಲಾಗಿದೆ ಎಂದು ತಿಳಿಯಬೇಕು. ವ್ಯಕ್ತ್ಯಾತ್ಮನಾ ಎಂಬುದಕ್ಕೆ ಹೀಗರ್ಥ - ಸರ್ವಗತನಾದ ಭಗವಂತನು ಶಕ್ತ್ಯಾತ್ಮನಾ ಎಲ್ಲೆಡೆ ಇದ್ದರೂ ವ್ಯಕ್ತಾತ್ಮನಾ ಅಂಗುಷ್ಠಪರಿಮಾಣದಲ್ಲಿ ಇರುತ್ತಾನೆ. ಈ ಅಭಿಪ್ರಾಯದಿಂದ ಅಂಗುಷ್ಠಮಾತ್ರ ಎಂದು ಹೇಳಲಾಗಿದೆ. ಆದ್ದರಿಂದ ಅಧಿಕಾಶಂಕೆಯ ಪರಿಹಾರಕ್ಕಾಗಿ 'ಹೃದ್ಯಪೇಕ್ಷಯಾ' ಎಂಬ ಸೂತ್ರವು ಹೊರಟಿದೆ.

ಪ್ರಕಾಶಃ – ननु हृदि विद्यमानावकाशस्याङ्गुष्ठमात्रत्वेन तदपेक्षया तन्मात्रत्वोक्तिरुपचारेणेति सूत्रे भाष्यादौ च प्रतीयते । सत्यं, पक्षान्तरमुपेत्यैवैतत्। अत एव तत्र टीकायां ''भगवन्मूर्तिविशेषस्य व्यक्त्वा तन्मात्रपरिमाणत्वात्'' इत्युक्तमिति भावः । सूत्रमपि हृदि व्यक्तरूपापेक्षयेति व्याख्येयम् ।

ಪ್ರಶ್ನೆ - ಸೂತ್ರ, ಭಾಷ್ಯ ಹಾಗೂ ಟೀಕೆಗಳಲ್ಲಿ 'ತದಪೇಕ್ಷಯಾ' ಎಂಬ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸಿದ್ದಾರೆ. ಹೃದಯದಲ್ಲಿರುವ ಅವಕಾಶವು ಅಂಗುಷ್ಠಪರಿಮಾಣದಲ್ಲಿರುವುದರಿಂದ ಇದನ್ನು ವಿವಕ್ಷಿಸಿ ಮಾತ್ರಪದವನ್ನು ಬಳಸಿದ್ದಾರೆಂದು, ಆಂದರೆ ಹೃದಯದಲ್ಲಿರುವ ದೇಶವು ಅಂಗುಷ್ಠಪರಿಮಾಣದಲ್ಲಿರುವುದರಿಂದ ಆಲ್ಲಿರುವ ಭಗವಂತನೂ ಸಹ ಅಂಗುಷ್ಠಪರಿಮಾಣದಲ್ಲಿದ್ದಾನೆಂದು ಔಪಚಾರಿಕವಾಗಿ ಪ್ರಯೋಗಿಸಲಾಗಿದೆ. ಆದರೆ ನೀವು ಭಗವಂತನ ಮೂರ್ತಿಯನ್ನೇ ಅಂಗುಷ್ಠಪರಿಮಾಣವೆಂದು ವ್ಯಾಖ್ಯಾನಿಸುತ್ತಿದ್ದೀರಿ. ಇದು ತಪ್ಪಲ್ಲವೇ ?

ಉತ್ತರ - ಹೌದು, ಇದು ಸೂತ್ರಕ್ಕೆ ಮತ್ತೊಂದು ಬಗೆಯ ವ್ಯಾಖ್ಯಾನವೇ ಆಗಿದೆ. ಆದ್ದರಿಂದಲೇ ಟೀಕೆಯಲ್ಲಿ 'ಭಗವನ್ಮೂರ್ತಿವಿಶೇಷಸ್ಯ ವ್ಯಕ್ತ್ಯಾ ತನ್ಮಾತ್ರಪರಿಮಾಣತ್ವಾತ್' ಭಗವಂತನ ಮೂರ್ತಿವಿಶೇಷವು ವ್ಯಕ್ತ್ಯಾತ್ಮನಾ ಹೃದಯಪರಿಮಾಣದಷ್ಟು ಇದೆ ಎಂದು ಹೇಳಿದ್ದಾರೆ. ಸೂತ್ರವನ್ನೂ ಸಹ 'ಹೃದಿ ವ್ಯಕ್ತರೂಪಾಪೇಕ್ಷಯಾ' ಎಂದೇ ವ್ಯಾಖ್ಯಾನಿಸಬೇಕು. ಆದ್ದರಿಂದ ಹೃದಯದಲ್ಲಿರುವ ಭಗವಂತನ ಮೂರ್ತಿಯು ವ್ಯಕ್ತಾತ್ಮನಾ ಅಂಗುಷ್ಠಪರಿಮಾಣದಲ್ಲಿದೆ ಎಂಬುದು ಒಂದು ಬಗೆಯ ಅರ್ಥ. ಹೃದಯಾಕಾಶವು ಅಂಗುಷ್ಠಪರಿಮಾಣದಲ್ಲಿರುವುದರಿಂದ ಇಲ್ಲಿರುವ ಭಗವಂತನ ಮೂರ್ತಿಯು ವ್ಯಕ್ತಾತ್ಮನಾ ಅಂಗುಷ್ಠಪರಿಮಾಣದಲ್ಲಿದೆ ಎಂಬುದು ಮತ್ತೊಂದು ಬಗೆಯ ಅರ್ಥ.

ಪ್ರಕಾಶಃ – ननूक्तमर्भकौकस्त्वमेवात्र न श्रूयते, अन्यथा पूर्वाक्षेपायोगादिति, तत्राह – सर्वेष्विति ।

नन्ववधारणाभावात्कथमेतदित्यतो भूतपदोपादानादेव, अन्यथा 'सर्वेषु' इत्येव ब्रूयादिति भावेनाह – अन्यथेति । सिद्धान्तिनेति ।

अत एव दहराधिकरणे ''अल्पश्रुतेरिति चेत्तदुक्तम्'' इत्यत्राल्पस्थान-माशङ्क्योक्तपरिहारस्मारणं, क्रियते,

अत्र तत्त्वप्रदीपे च 'सर्वजीवहृदयसुषिराणामल्पत्वात्' इत्युक्तमिति भावः ।

ಶ್ರುತಿಯಲ್ಲಿ ಅರ್ಭಕೌಕಸ್ತ್ವವೇ ಕೇಳಿಸುತ್ತಿಲ್ಲ. ಹಾಗೆ ಕೇಳಿಸದಿದ್ದರೆ ಪೂರ್ವಾಕ್ಷೇಪವು ಹೇಗೆ ಕೂಡುತ್ತದೆ? ಎಂಬ ಪ್ರಶ್ನೆಗೆ 'ಸರ್ವೇಷು' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಶ್ರುತಿಯಲ್ಲಿ ಅವಧಾರಣೆ ಇಲ್ಲದಿರುವುದರಿಂದ ಅಲ್ಪದೇಶದಲ್ಲಿ ಮಾತ್ರ ವಿಷ್ಣು ಇರುತ್ತಾನೆಂದು ಹೇಗೆ ಹೇಳುತ್ತೀರಿ ? ಎಂದರೆ ಭೂತಪದದಿಂದಲೇ ಅವಧಾರಣೆ ತಿಳಿಯುತ್ತದೆ. ಇಲ್ಲದಿದ್ದರೆ 'ಸರ್ವೇಷು' ಎಂದಷ್ಟೇ ಹೇಳಬೇಕಿತ್ತು. ಈ ಅಭಿಪ್ರಾಯದಿಂದಲೇ 'ಅನ್ಯತ್ರ' ಎಂಬ ಮಾತು ಹೊರಟಿದೆ. 'ಸಿದ್ಧಾಂತಿನಾ' ಎಂಬ ವಾಕ್ಯದಿಂದ ಸರ್ವಭೂತಗಳಲ್ಲಿ ನೆಲೆಸಿದರೆ ಮಾತ್ರ ಸರ್ವಗತನಾಗುತ್ತಾನೆಂದು ಹೇಳಿದ್ದಾರೆ.

ಆದ್ದರಿಂದಲೇ ದಹರಾಧಿಕರಣದಲ್ಲಿ 'ಅಲ್ಪಶ್ರುತೇರಿತಿ ಚೇತ್ತದುಕ್ತಂ'' ಎಂಬುದಾಗಿ ಅಲ್ಪಸ್ಥಾನವನ್ನು ಆಶಂಕಿಸಿ ಹಿಂದೆ ಹೇಳಿದ ಪರಿಹಾರವನ್ನು ಸ್ಮರಿಸಿಕೊಳ್ಳಬೇಕೆನ್ನುತ್ತಾರೆ. ಅಲ್ಲಿ ಸ್ಮರಿಸಿಕೊಳ್ಳಬೇಕೆಂದರೆ ಈ ಅಧಿಕರಣದಲ್ಲಿ ವಿಷಯವು ಪ್ರಸಕ್ತವಾಗಿರಬೇಕಲ್ಲವೇ ?

ಮತ್ತು ಈ ಅಧಿಕರಣದ ತತ್ತ್ವಪ್ರದೀಪದಲ್ಲಿಯೂ 'ಸರ್ವಜೀವಹೃದಯಸುಷಿರಾಣಾಮಲ್ಪತ್ವಾತ್' ಸಕಲಜೀವರ ಹೃದಯಾಕಾಶವು ಅಲ್ಪವಾಗಿರುವುದರಿಂದ ಎಂದು ಹೇಳಿದ್ದಾರೆ.

प्रकाशः – नन्वेवमल्पौकस्त्वस्यान्यगतत्वे विष्णोः प्रागुक्तसर्वगतत्वस्याक्षेपो भाष्यादावयुक्त इत्यतस्तत्साधयति – पूर्वेति ।

सत्यं, न साक्षादाक्षेपः, अवधारणद्वारा तु सेत्स्यतीति भावः । **विष्णोः सर्वगतत्वायोग इति ।** 'किन्त्वादित्यस्य वा सर्वजीवानां वा ''ततमं'' इत्युक्त-सर्वगतत्वमेकप्रकरणत्वात्' इति वाक्यशेषः । तेन ''आदित्यनिष्ठत्वात्'' इत्यग्रेतनोक्तिर्युक्तेति बोध्यम् । एतेन ''तद्यदि विष्णोरन्यस्य स्यात्'' इति टीका विवृता ध्येया ।

ಒಂದು ವೇಳೆ ಅಲ್ಪೌಕಸ್ತ್ವವನ್ನು ಬೇರೆಯವನಲ್ಲಿ ಹೇಳಿದರೆ ವಿಷ್ಣುವಿಗೆ ಸರ್ವಗತತ್ವವೇ ಇಲ್ಲವೆಂಬ ಆಕ್ಷೇಪವನ್ನೂ ಸಹ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಭಾಷ್ಯದಲ್ಲಿ ಹೇಳಿದ ಸರ್ವಗತತ್ವದ ಆಕ್ಷೇಪವನ್ನು 'ಪೂರ್ವಾಧಿಕರಣಾಕ್ಷೇಪಸ್ತು' ಎಂಬ ವಾಕ್ಯದಿಂದ ಪರಿಹರಿಸುತ್ತಿದ್ದಾರೆ.

ಹೌದು, ನೇರವಾಗಿ ಆಕ್ಷೇಪಿಸಲಾಗದು. ಆದ್ದರಿಂದ ಅವಧಾರಣದ ಮೂಲಕ ಆಕ್ಷೇಪ ಸುಲಭವಾಗುತ್ತದೆಂದು ತಿಳಿಯಬೇಕು. 'ಸರ್ವಗತತ್ವಾಯೋಗಃ' ಎಂಬುದಕ್ಕೆ ಹೀಗರ್ಥ - ವಿಷ್ಣುವಿಗಂತು

ಸರ್ವಗತತ್ವವನ್ನು ಹೇಳಲಾಗದು. ಆದ್ದರಿಂದ ಆದಿತ್ಯನಿಗೋ ಅಥವಾ ಸಕಲಜೀವರಿಗೋ ಸರ್ವಗತತ್ವವನ್ನು ಹೇಳಬೇಕು ಎಂದು. 'ಒಂದೇ ಪ್ರಕರಣವಾದ್ದರಿಂದ' ಎಂಬುದಾಗಿ ಶೇಷಪೂರಣ ಮಾಡಬೇಕು. ಆದ್ದರಿಂದ ಆದಿತ್ಯನಲ್ಲಿ ಹೇಳಿದ ಸರ್ವಗತತ್ವವೂ ಯುಕ್ತವೇ ಆಗಿದೆ.

ಈ ಬಗೆಯಲ್ಲಿ ವ್ಯಾಖ್ಯಾನಿಸಿದ್ದರಿಂದ ''ತದ್ಯದಿ ವಿಷ್ಣೋರನ್ಯಸ್ಯ ಸ್ಯಾತ್'' ಇತ್ಯಾದಿ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು.

ಸಾರ

ಆದಿತ್ಯ ಅಥವಾ ಜೀವನು ಸರ್ವಗತನಾಗಬಹುದೇ ಹೊರತು ವಿಷ್ಣು ಸರ್ವಗತನಾಗಲು ಸಾಧ್ಯವಿಲ್ಲ. ಅಂತರಧಿಕರಣದಲ್ಲಿ, ಅಂತರ್ಯಾಮ್ಯಧಿಕರಣದಲ್ಲಿ ಮತ್ತು 'ಉಪಾಸಾತ್ರೈವಿಧ್ಯಾತ್' ಇತ್ಯಾದಿ ಸೂತ್ರಗಳಲ್ಲಿ ಭಗವಂತನನ್ನು ಹೃದಯಾಕಾಶದಲ್ಲಿರುವವನೆಂದು ಬಣ್ಣಿಸಲಾಗಿದೆ. ಹೃದಯಾಕಾಶವು ಅಂಗುಷ್ಠಪರಿಮಾಣದಲ್ಲಿರುವುದರಿಂದ ಅಲ್ಲಿರುವ ಭಗವಂತನೂ ಸಹ ಅಂಗುಷ್ಠಪರಿಮಾಣವುಳ್ಳವನೇ ಆಗುತ್ತಾನೆ. ಇಷ್ಟು ಸಣ್ಣರೂಪವುಳ್ಳ ಭಗವಂತನು ಎಲ್ಲೆಡೆ ವ್ಯಾಪಿಸಿರಲು ಹೇಗೆ ಸಾಧ್ಯ ? ''ಸರ್ವಭೂತಾಶಯಃ ಸ್ಥಿತಃ'' ಎಂಬ ಶ್ರುತಿಯ ಆಧಾರದಿಂದಲೂ ಈ ವಿಷಯವು ಮತ್ತಷ್ಟು ದೃಢವಾಗುತ್ತದೆ.

ಒಂದು ವೇಳೆ ಅಲ್ಪದೇಶದಲ್ಲಿರುವವನು ಸರ್ವಗತನೂ ಆಗಬಹುದೆಂದು ಎಲ್ಲಾದರೂ ಸಮರ್ಥಿಸಿದ್ದರೆ ಭಗವಂತನನ್ನು ಸರ್ವಗತನೆನ್ನಬಹುದಿತ್ತು. ಆದರೆ ಎಲ್ಲಿಯೂ ಸಹ ಈ ವಿರೋಧವನ್ನು ಪರಿಹರಿಸಿಯೇ ಇಲ್ಲ. ಆದ್ದರಿಂದ ಭಗವಂತನನ್ನು ಹೃದಯದಲ್ಲಿದ್ದಾನೆಂದು ಹೇಳಿ ಆದಿತ್ಯಾದಿಗಳನ್ನು ಎಲ್ಲೆಡೆ ಇದ್ದಾರೆಂದು ಹೇಳುವುದೇ ಸ್ವರಸವೆಂದು ಪೂರ್ವಪಕ್ಷದ ಆಶಯ.

• • • • •

ಸರ್ವಗತನಾದವನು ಅಲ್ಪದೇಶದಲ್ಲಿರಲಾರ

ತಾತ್ಪರ್ಯಚಂದ್ರಿಕಾ

ನಚಾರ್ಭಕೌಕಸ್ತ್ವಮನ್ತರ್ಯಾಮಿಣ್ಯಪಿ ಯುಕ್ತಮ್, ''ಏಷ ಮ ಆತ್ಮಾऽನ್ತರ್ಹೃದಯೇ ಜ್ಯಾಯಾನ್ ಪೃಥಿವ್ಯಾಃ'' ಇತ್ಯಾದಿಶ್ರುತ್ಯಾ ತಸ್ಯಾಪಿ ಸರ್ವಗತತ್ವೇನ ತದ್ವಿರುದ್ಧಾಲ್ಪೌಕಸ್ತ್ವಾಯೋಗಾತ್ ।

ನಚ ಪೂರ್ವಪಕ್ಷೇ ''ಬ್ರಹ್ಮ ತತಮಮ್'' ಇತ್ಯುಕ್ತಸ್ಯ ಸರ್ವಗತತ್ವಸ್ಯಾಪ್ಯಾದಿತ್ಯನಿಷ್ಠತ್ವಾತ್ತಸ್ಯಾಪ್ಯಲ್ಪೌಕಸ್ತ್ವಾಯೋಗ ಇತಿ ವಾಚ್ಯಮ್,

ಆದಿತ್ಯಶ್ರುತ್ಯಾದ್ಯನುಸಾರೇಣ ತತಮತ್ವಸ್ಯ ಸಙ್ಕೋಚನಾತ್ । ನಚ ಬ್ರಹ್ಮಣಿ ತಥಾ, ಬ್ರಹ್ಮತ್ವವ್ಯಾಘಾತಾತ್ ।

ಅನುವಾದ - ಅಂತರ್ಯಾಮಿಯಲ್ಲಿಯೂ ಸಹ ಅರ್ಭಕೌಕಸ್ತ್ವವು ಕೂಡುವುದಿಲ್ಲ. ಏಕೆಂದರೆ ''ಏಷ ಮ ಆತ್ಮಾಽಂತರ್ಹೃದಯೇ ಜ್ಯಾಯಾನ್ ಪೃಥಿವ್ಯಾಃ'' ಇತ್ಯಾದಿ ಶ್ರುತಿಯಿಂದ ಅಂತರ್ಯಾಮಿಯೂ ಸಹ ಸರ್ವಗತನೆಂದು ತಿಳಿಯುತ್ತದೆ. ಹೀಗಿರುವಾಗ ಸರ್ವಗತತ್ವಕ್ಕೆ ವಿರುದ್ಧವಾದ ಅಲ್ಪೌಕಸ್ತ್ವವನ್ನು ಅಂತರ್ಯಾಮಿಯಲ್ಲಿ ಹೇಳಲು ಸಾಧ್ಯವಿಲ್ಲ.

ಹಾಗಾದರೆ ಪೂರ್ವಫಲ್ಗುದಲ್ಲಿ 'ಬ್ರಹ್ಮತತಮಂ' ಎಂಬುದಾಗಿ ಹೇಳಲ್ಪಟ್ಟ ಸರ್ವಗತತ್ವವನ್ನು ಆದಿತ್ಯನಲ್ಲಿ ಸಮರ್ಥಿಸಿದ್ದರಿಂದ ಆದಿತ್ಯನಿಗೂ ಅಲ್ಪೌಕಸ್ತ್ವವನ್ನು ಹೇಳಲು ಸಾಧ್ಯವಿಲ್ಲವಲ್ಲವೆ ?

ಹೀಗೆ ಹೇಳಬಾರದು. ಆದಿತ್ಯಶ್ರುತಿ ಸಂವತ್ಸರಸಾರತ್ವ ಮೊದಲಾದ ಲಿಂಗಗಳ ಬಲದಿಂದ ಸೂರ್ಯನಲ್ಲಿರುವ ಸರ್ವಗತತ್ವವನ್ನು ಸಂಕೋಚ ಮಾಡಬಹುದು. (ಕೇವಲ ಪ್ರಾಣಿಗಳ ಹೃದಯದಲ್ಲಿದ್ದಾನೆನ್ನಬಹುದು.) ಆದರೆ ಬ್ರಹ್ಮನಲ್ಲಿರುವ ಸರ್ವಗತತ್ವವನ್ನು ಸಂಕೋಚಗೊಳಿಸಲು ಸಾಧ್ಯವಿಲ್ಲ. ಹಾಗಾದರೆ ಬ್ರಹ್ಮ ಎಂಬ ಶಬ್ದದಿಂದಲೇ ವ್ಯಾಹತಿ ಬರುತ್ತದೆ.

ಕಠಿಣಪದಾರ್ಥ

ತಸ್ಯಾಪಿ = ಅಂತರ್ಯಾಮಿಯೂ ಸಹ, ತದ್ವಿರುದ್ಧ = ಸರ್ವಗತತ್ವಕ್ಕೆ ವಿರುದ್ಧವಾದ,
ತತಮಂ = ವ್ಯಾಪ್ತನಾದ, ತಥಾ = ಗೌಣಾರ್ಥವನ್ನು.

ಪ್ರಕಾಶಃ – ನನು ಸರ್ವಭೂತಗತಸ್ಯಾನ್ಯತ್ವೇ ''ಸ ಯೋऽತೋऽಶ್ರುತೋऽಗತಃ'' ಇತ್ಯಶ್ರುತತ್ವಾದಿಕಮಪಿ ತಸ್ಯೈವೇತಿ ಪ್ರಾಗುಕ್ತಕರ್ಣಾದಿವಿದೂರತ್ವಮಪಿ ತಸ್ಯೈವೇತಿ ಜ್ಯೋತಿಸ್ಸೂತ್ರಮಪ್ಯಾಕ್ಷಿಪ್ತುಂ ಶಕ್ಯತೇ ।

ನಚ ಸನ್ನಿಹಿತಾಕ್ಷೇಪಂ ವಿನಾ ವ್ಯವಹಿತಾಕ್ಷೇಪೋ ನ ಯುಕ್ತ ಇತಿ ವಾಚ್ಯಂ, ಉತ್ತರನಯಾಭಾಷ್ಯಾದೌ ಜನ್ಮಾದಿಸೂತ್ರಾಕ್ಷೇಪಸ್ಯ ದರ್ಶಯಿಷ್ಯಮಾಣತ್ವಾತ್ । ಪೂರ್ವಪಾದಾನ್ತ್ಯನಯೇನ ಸಙ್ಗತ್ಯಾವಶ್ಯಕತ್ವ-ನಿರ್ಬನ್ಧಾಭಾವಾಚ್ಚ ।

ಏವಞ್ಚಾಶ್ರುತತ್ವಾದಿವಿಷ್ಣುಲಿಙ್ಗಶ್ರವಣಾದ್ವಿಷ್ಣುರೇವಾತ್ರೋಚ್ಯತ ಇತಿ ಪ್ರಾಗುಕ್ತಶಙ್ಕಾऽಪಿ ನೋದೇಷ್ಯತಿ, ಆಕ್ಷೇಪಶ್ಚ ಋಜುರ್ಭವತೀತಿ ಚೇನ್ನ,

ಸೂತ್ರೋಪಾತ್ತಾಲ್ಪೌಕಸ್ತ್ವಮುಖೇನೈವಾऽऽಕ್ಷೇಪಸ್ಯೋಚಿತತ್ವಾತ್, ಶ್ರುತಿಸಙ್ಗತಿಪ್ರದರ್ಶನಾರ್ಥತ್ವಾತ್,

ಸಾಕ್ಷಾತ್ಸಮನ್ವೀಯಮಾನಲಿಙ್ಗಮುಖೇನಾऽऽಕ್ಷೇಪಸಮ್ಭವೇ ವ್ಯವಹಿತಾಶ್ರುತತ್ವಾದಿಮುಖೇನಾऽऽಕ್ಷೇಪಾ-ಯೋಗಾಚ್ಚೇತಿ ತಾತ್ಪರ್ಯಾತ್ ।

ವಿವರಣೆ - ಆಕ್ಷೇಪ - ಸರ್ವಭೂತನಲ್ಲಿರುವನು ಬೇರೆಯವನಾದರೆ ''ಸ ಯೋऽತೋऽಶ್ರುತೋऽಗತಃ'' ಎಂಬಲ್ಲಿ ಕೇಳಿಸುತ್ತಿರುವ ಅಶ್ರುತತ್ವಾದಿ ಧರ್ಮಗಳೂ ಸಹ ಅವನಲ್ಲಿಯೇ ಬರುತ್ತವೆ.

ಆಷ್ಟೇ ಅಲ್ಲದೆ ಜ್ಯೋತಿರಧಿಕರಣದಲ್ಲಿ ಹೇಳಲ್ಪಟ್ಟ ಕರ್ಣಾದಿವಿದೂರತ್ವವೂ ಸಹ ಅವನಲ್ಲಿಯೇ ಹೇಳಬೇಕು. ಆದ್ದರಿಂದ ಆದಿತ್ಯನು ಸರ್ವಗತನಾದ್ದರಿಂದ ಜ್ಯೋತಿರಧಿಕರಣದಲ್ಲಿ ಸಮರ್ಥಿಸಲ್ಪಟ್ಟ ಕರ್ಣಾದಿವಿದೂರನೂ ಸಹ ಆದಿತ್ಯನೇ ಆಗುತ್ತಾನೆ. ಹೀಗೆ ಜ್ಯೋತಿರಧಿಕರಣವನ್ನು ಆಕ್ಷೇಪಿಸಬಹುದು. ಆದ್ದರಿಂದ ಈ ಅಧಿಕರಣಕ್ಕೆ ಜ್ಯೋತಿರಧಿಕರಣದಿಂದಲೇ ಸಂಗತಿಯನ್ನು ಹೇಳಬಹುದಲ್ಲವೇ?

ಹತ್ತಿರದಲ್ಲಿರುವ "ಅಂತಿಮಪ್ರಾಣಾಧಿಕರಣದಿಂದಲೇ ಸಂಗತಿಯನ್ನು ತೋರಿಸಲು ಬರುವಾಗ ದೂರದಲ್ಲಿರುವ ಜ್ಯೋತಿರಧಿಕರಣದಲ್ಲಿರುವ ಸಂಗತಿಯನ್ನು ತೋರಿಸುವುದು ತಪ್ಪಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಮುಂದಿನ ಅಧಿಕರಣದ ಭಾಷ್ಯ ಟೀಕೆ ಮೊದಲಾದೆಡೆ ಜನ್ಮಾದಿ ಸೂತ್ರದಿಂದಲೇ ಸಂಗತಿಯನ್ನು ತೋರಿಸುತ್ತಾರೆ. ಮತ್ತು ಈ ಅಧಿಕರಣವು ಬೇರೆ ಪಾದದಲ್ಲಿದೆ; ಅಂತಿಮಪ್ರಾಣಾಧಿಕರಣವು ಹಿಂದಿನ ಪಾದದಲ್ಲಿದೆ. ಆದ್ದರಿಂದ ಹಿಂದಿನ ಪಾದದಲ್ಲಿರುವ ಅಂತಿಮಪ್ರಾಣಾಧಿಕರಣದಿಂದ ಸಂಗತಿಯನ್ನು ತೋರಿಸಲೇಬೇಕೆಂಬ ನಿರ್ಬಂಧವಿರುವುದಿಲ್ಲ. ಆದ್ದರಿಂದಲೇ ಅಶ್ರುತತ್ವಾದಿ ವಿಷ್ಣುಲಿಂಗಗಳು ಈ ಶ್ರುತಿಯಲ್ಲಿ ಕೇಳಿಸುತ್ತಿರುವುದರಿಂದ ವಿಷ್ಣುವೇ ಇಲ್ಲಿ ಪ್ರತಿಪಾದ್ಯನಾಗಿದ್ದಾನೆಂಬ ಹಿಂದಿನ ಶಂಕೆಯೂ ಸಹ ಹುಟ್ಟುವುದಿಲ್ಲ. ಹೀಗೆ ಹೇಳಿದಾಗ ಆಕ್ಷೇಪವೂ ಸಹ ಸುಲಭವಾಗುತ್ತದೆ.

ಸಮಾಧಾನ - ಇದು ತಪ್ಪು. ಏಕೆಂದರೆ ಸೂತ್ರದಲ್ಲಿ ಹೇಳಲ್ಪಟ್ಟ ಆಲ್ಪೌಕಸ್ತ್ವದಿಂದಲೇ ಆಕ್ಷೇಪ ಮಾಡಲು ಬರುವಾಗ ಸೂತ್ರದಲ್ಲಿ ಹೇಳದ ಕರ್ಣಾದಿವಿದೂರತ್ವದಿಂದ ಆಕ್ಷೇಪ ಮಾಡುವುದು ಉಚಿತವಲ್ಲ. ಹೀಗೆ ಆಲ್ಪೌಕಸ್ತ್ವಮುಖದಿಂದ ಆಕ್ಷೇಪ ಮಾಡಿದಾಗ ಶ್ರುತಿಸಂಗತಿಯನ್ನೂ ಸಹ ತೋರಿಸಿದಂತಾಗುತ್ತದೆ.

ಮತ್ತು ಸಮನ್ವಯ ಮಾಡುವ ಲಿಂಗದಿಂದಲೇ ನೇರವಾಗಿ ಆಕ್ಷೇಪ ಮಾಡಲು ಬರುವಾಗ ವ್ಯವಹಿತವಾದ ಅಶ್ರುತತ್ವಾದಿಗಳ ಮೂಲಕವಾಗಿ ಆಕ್ಷೇಪ ಮಾಡುವುದು ಅಯುಕ್ತವಾಗಿದೆಯೆಂದು ತಾತ್ಪರ್ಯ.

प्रकाशः – यद्वा – अत्रैव तत्र निरवाकाशादित्यादिलिङ्गाभावाद्विष्णौ मुख्यस्याश्रुतत्वादेरादित्ये गौणतास्वीकारेण तदाक्षेपे हेत्वभावात्सन्निहितमेवाक्षिप्तम्। अत एवाग्रे – ''ज्योतिः, अदृश्यत्वादि'' इत्यादिना तदाक्षेपप्रकारासम्भवं वक्ष्यति ।

ಅಥವಾ ಸರ್ವಗತತ್ವ ಪ್ರತಿಪಾದಕವಾದ ಶ್ರುತಿಯಲ್ಲಿ ನಿರವಕಾಶವಾದ ಆದಿತ್ಯಾದಿ ಲಿಂಗಗಳಿರುವಂತೆ ಕರ್ಣಾದಿವಿದೂರತ್ವ ಪ್ರಾಪಕವಾದ ಶ್ರುತಿಯಲ್ಲಿ ಅಂತಹ ನಿರವಕಾಶವಾದ ಲಿಂಗಗಳಿರುವುದಿಲ್ಲ. ಆದ್ದರಿಂದ ವಿಷ್ಣುವಿನಲ್ಲಿ ಮುಖ್ಯವಾಗಿರುವ ಅಶ್ರುತತ್ವಾದಿಗಳನ್ನು ಆದಿತ್ಯನಲ್ಲಿ ಗೌಣವಾಗಿ ಸ್ವೀಕರಿಸಿ ಆಕ್ಷೇಪ ಮಾಡಲು ಕಾರಣವಿಲ್ಲ. ಹೀಗೆ ವಿಚಾರ ಮಾಡಿದಾಗ ಸನ್ನಿಹಿತವಾದ ಸರ್ವಗತತ್ವವನ್ನು ಆಕ್ಷೇಪಿಸುವುದೇ ಸುಲಭ. ಆದ್ದರಿಂದಲೇ ಮುಂದೆ ''ಜ್ಯೋತಿಃ ಅದೃಶ್ಯತ್ವಾದಿ'' ಇತ್ಯಾದಿಯಾಗಿ ಅದೃಶ್ಯತ್ವಾದಿ ಧರ್ಮಗಳಿಂದ ಆಕ್ಷೇಪ ಮಾಡಲು ಬರುವುದಿಲ್ಲವೆಂದು ಸಮರ್ಥಿಸುತ್ತಾರೆ.

प्रकाशः – ननु पूर्वपक्षे हृदयनिहितत्वरूपार्भकौकस्त्वस्य काप्यन्यत्र विष्णावसम्मततया निरवकाशेन तेन विचरणरूपाश्रुतत्वादेर्गौणत्वाश्रयणेन ज्योतिरादिसूत्रमप्याक्षेप्यं स्यात् । अत एवाग्रेतनं 'बाधकाभावात्' इत्येतदसदिति चेन्न, तत्राश्रुतत्वादीनामनेकेषां बाधादप्येकस्य हृदयस्थत्वस्य कथञ्चिद्विष्णौ गौणतया वर्णनीयत्वात् । अश्रुतत्वामततत्वादिरूपविष्णुधर्मसन्दष्टत्वाच्च ।

अक्षराधिकरणटीकायां वक्ष्यमाणरीत्या तत्र प्रधानश्रुतविचाररूपाश्रुतत्वादेर्गौणत्ववर्णनायोगाच्च ।

अत्र त्वादित्यप्रापकाणां बहुत्वेन तत्सद्गीचीनस्यार्भकौकस्त्वस्य मुख्यत्वसम्भवे त्यागायोगाच्चरमश्रुताश्रुतत्वादेर्गौणत्वसम्भवात् 'बाधकाभावात्' इत्येतदप्येतदभिप्रायं नेयम् ।

ಆಕ್ಷೇಪ - ಜ್ಯೋತಿರಧಿಕರಣದಿಂದ ಆಕ್ಷೇಪ ಮಾಡುವುದೇ ಸುಲಭ. ಪೂರ್ವಪಕ್ಷ ಸಂದರ್ಭದಲ್ಲಿ ಹೃದಯನಿಹಿತತ್ವವೆಂಬ ಅಲ್ಪಸ್ಥಾನಸ್ಥಿತತ್ವವು ಯಾವುದೇ ವಿಷಯವಾಕ್ಯದಲ್ಲಿಯೂ ವಿಷ್ಣುವಿನಲ್ಲಿ ಒಪ್ಪಲಾಗದು. ಜ್ಯೋತಿರಧಿಕರಣದಲ್ಲಾಗಲಿ, ಅಂತರಧಿಕರಣದಲ್ಲಾಗಲೀ ಹೃದಯನಿಹಿತತ್ವವೆಂಬ ಧರ್ಮವನ್ನು ವಿಷ್ಣುವಿನಲ್ಲಿ ಒಪ್ಪಲಾಗದೆಂದು ಪೂರ್ವಪಕ್ಷಿಯು ಹೇಳುತ್ತಿದ್ದಾನೆ. ಆದ್ದರಿಂದ ಈ ಅಧಿಕರಣದಲ್ಲಿ ಅಶ್ರುತತ್ವಾದಿಗಳು ಆದಿತ್ಯನಲ್ಲಿ ಬರುತ್ತವೆ. ಆದರೆ ಕರ್ಣಾದಿವಿದೂರತ್ವಾದಿಗಳು ಬಾಧಕವಿಲ್ಲದ್ದರಿಂದ ವಿಷ್ಣುವಿನಲ್ಲಿ ಬರಬಹುದೆಂದು ಹೇಳಲು ಸಾಧ್ಯವೇ ಇಲ್ಲ. ಏಕೆಂದರೆ ಅಲ್ಪಸ್ಥಾನಸ್ಥಿತತ್ವವನ್ನು ಎಲ್ಲಿಯೇ ಹೇಳಿದ್ದರೂ ಅದು ವಿಷ್ಣುವಿನಲ್ಲಿ ಬರುವುದಿಲ್ಲ. ಆದ್ದರಿಂದ ಅಲ್ಪಸ್ಥಾನಸ್ಥಿತತ್ವ ಎಂಬ ಲಿಂಗವು ನಿರವಕಾಶವಾಯಿತು. ಇಂತಹ ನಿರವಕಾಶಲಿಂಗದಿಂದ ವಿಚರಣವೆಂಬ ಅಶ್ರುತತ್ವಾದಿಗಳಿಗೆ ಗೌಣತ್ವವನ್ನು ಆಶ್ರಯಿಸುವ ಮೂಲಕ ಜ್ಯೋತಿರಧಿಕರಣವನ್ನು ಆಕ್ಷೇಪಿಸಬಹುದಿತ್ತು. ಆದ್ದರಿಂದಲೇ ಮುಂದೆ ಗ್ರಂಥಕಾರರು ಹೇಳುವ 'ಬಾಧಕಾಭಾವಾತ್' ಎಂಬ ಮಾತು ತಪ್ಪಾಗುತ್ತದೆ. ಆದ್ದರಿಂದ ಹೃದಯನಿಹಿತತ್ವವೆಂಬ ಬಾಧಕದಿಂದಲೇ ಕರ್ಣಾದಿವಿದೂರತ್ವವನ್ನೂ ಸಹ ಆದಿತ್ಯನಲ್ಲಿ ಹೇಳಬಹುದು. ಆದ್ದರಿಂದ ಜ್ಯೋತಿರಧಿಕರಣವನ್ನು ಆಕ್ಷೇಪಿಸಬಹುದಲ್ಲವೇ ?

ಸಮಾಧಾನ - ಎರಡು ಅಧಿಕರಣಗಳಿಗೂ ಬಹಳ ವ್ಯತ್ಯಾಸವಿದೆ. ಹಿಂದಿನ ಜ್ಯೋತಿರಧಿಕರಣದಲ್ಲಿ ಹೃದಯನಿಹಿತತ್ವವೆಂಬ ಒಂದು ಧರ್ಮವನ್ನು ಇಟ್ಟುಕೊಂಡು, ಕರ್ಣಾದಿವಿದೂರತ್ವ ಮೊದಲಾದ ಅನೇಕ ಧರ್ಮಗಳಿಗೆ ಗೌಣಾರ್ಥವನ್ನು ಹೇಳುವುದಕ್ಕಿಂತ ಕರ್ಣಾದಿವಿದೂರತ್ವವೇ ಮೊದಲಾದ ಅನೇಕ ಧರ್ಮಗಳಿಂದ ಹೃದಯನಿಹಿತತ್ವವೆಂಬ ಒಂದು ಧರ್ಮಕ್ಕೆ ಗೌಣಾರ್ಥವನ್ನು ಹೇಳುವುದು ಅತ್ಯಂತ ಸೂಕ್ತ. ಏಕೆಂದರೆ ಅನೇಕ ಧರ್ಮಗಳನ್ನು ಬಾಧಿಸುವುದಕ್ಕಿಂತ ಒಂದು ಧರ್ಮವನ್ನು ಬಾಧಿಸುವುದು ನ್ಯಾಯವಾಗಿದೆ.

ಮತ್ತು ಹೃದಯನಿಹಿತತ್ವ ಧರ್ಮವನ್ನು ಹೇಳುವ ಹಿಂದಿನ ಮುಂದಿನ ವಾಕ್ಯದಲ್ಲಿ ಅಶ್ರುತತ್ವ, ಅಮೃತತ್ವ ಮೊದಲಾದ ವಿಷ್ಣುವಿನ ಧರ್ಮಗಳೇ ಹೆಚ್ಚಾಗಿ ಕೇಳಿಸುತ್ತಿವೆ.

ಮುಂದೆ ಆಕ್ಷರಾಧಿಕರಣದ ಟೀಕೆಯಲ್ಲಿ ಹೇಳುವಂತೆ ಪ್ರಧಾನವಾಗಿ ಕೇಳಿಸುತ್ತಿರುವ ಅಶ್ರುತತ್ವಾದಿಗಳಿಗೆ ಗೌಣಾರ್ಥವನ್ನು ಮಾಡಬಾರದು ಹೊರತಾಗಿ ಅಪ್ರಧಾನವಾಗಿ ಕೇಳಿಸುತ್ತಿರುವ ಹೃದಯನಿಹಿತತ್ವವನ್ನೇ ಗೌಣವನ್ನಾಗಿ ವ್ಯಾಖ್ಯಾನಿಸಬೇಕು.

ಆದರೆ ಈ ಅಧಿಕರಣದಲ್ಲಿ ಆದಿತ್ಯಪ್ರಾಪಕವಾದ ಶ್ರುತಿ ಹಾಗೂ ಲಿಂಗಗಳು ಬಹಳವಾಗಿ ಕೇಳಿಸುತ್ತಿವೆ. ಇವುಗಳ ಜೊತೆಗೆ ಕೂಡಿರುವಂತಹ ಅರ್ಚಿಕೌಕಸ್ತ್ವಕ್ಕೆ ಮುಖ್ಯತ್ವವನ್ನು ಹೇಳಲು ಬರುವಾಗ ಅನಂತರ ಕೇಳಿಸುತ್ತಿರುವ ಅಶ್ರುತತ್ವಾದಿಗಳಿಗೆ ಗೌಣತ್ವವನ್ನೇ ಹೇಳಬೇಕಾಗುತ್ತದೆ. ಆದ್ದರಿಂದ ವಿಷ್ಣುವಿನ ಧರ್ಮಗಳೆನಿಸಿದ ಅಶ್ರುತತ್ವಾದಿಗಳಿಗೆ ಆದಿತ್ಯಾದಿಗಳಲ್ಲಿ ಗೌಣಾರ್ಥವನ್ನೇ ಮಾಡಬೇಕಾಗುತ್ತದೆ. ಹೀಗೆ ಜ್ಯೋತಿರಧಿಕರಣಕ್ಕೂ ಈ ಅಧಿಕರಣಕ್ಕೂ ಈ ರೀತಿಯಾದ ವ್ಯತ್ಯಾಸವಿದೆ. ಆದ್ದರಿಂದ ಜ್ಯೋತಿರಧಿಕರಣದಲ್ಲಿ ಬಾಧಕವಿಲ್ಲ. ಈ ಅಧಿಕರಣದಲ್ಲಿ ಬಾಧಕವಿದೆಯೆಂಬ ಗ್ರಂಥಕಾರರ ಮಾತನ್ನು ಈ ಅಭಿಪ್ರಾಯದಲ್ಲಿಯೇ ಕೂಡಿಸಬೇಕು. (ರಾಯರು ತೋರಿಸಿದ ಆಳವಾದ ಈ ವಿಚಾರವನ್ನು ಸಜ್ಜನರು ಗಮನಿಸಬೇಕು.)

प्रकाशः – केचित्तु – ''सर्वेषु भूतेषु'' इत्यत्र हृदयस्थत्वाश्रवणान्न तदाक्षेप इत्याहुः ।

तत्पक्षे ''उपासात्रैविध्यात्'' इत्यादिनाऽगतत्वशङ्कासमाधानादिकं कथमिति चिन्त्यम् ।

ನಮಲ್ಲೇ ಕೆಲವು ವಿದ್ವಾಂಸರು ಹೀಗೆ ಹೇಳುತ್ತಾರೆ - ''ಸರ್ವೇಷು ಭೂತೇಷು'' ಎಂಬಲ್ಲಿ ಹೃದಯದಲ್ಲಿರುವಿಕೆ ಎಂಬ ಧರ್ಮವೇ ಕೇಳಿಸುತ್ತಿಲ್ಲ. ಕೇವಲ ಸಕಲ ಭೂತಗಳ ಒಳಗಿದ್ದಾನೆಂದಷ್ಟೇ ಕೇಳಿಸುತ್ತಿದೆ. ಆದ್ದರಿಂದ ಜ್ಯೋತಿರಧಿಕರಣದಲ್ಲಿ ಹೇಳಿರುವಂತಹ ಹೃದಯನಿಹಿತತ್ವವನ್ನು ಈ ಅಧಿಕರಣದಲ್ಲಿ ಆಕ್ಷೇಪಿಸಲು ಸಾಧ್ಯವಿಲ್ಲ ಎನ್ನುತ್ತಾರೆ.

ಇವರ ವಿಚಾರವೂ ತಪ್ಪು, 'ಉಪಾಸಾತ್ರೈವಿಧ್ಯಾತ್' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ಅಂತರುಪಾಸನಾವನ್ನು ಗತತಾರ್ಥತ್ವಶಂಕೆಯಿಂದ ಅದಕ್ಕೆ ಸಮಾಧಾನವನ್ನು ಈ ಅಧಿಕರಣದಲ್ಲಿ ಹೇಳುತ್ತಿದ್ದಾರೆ. ಇವರು ಹೇಳುವಂತೆ ಹೃದಯನಿಹಿತತ್ವವನ್ನು ಇಲ್ಲಿ ಹೇಳದಿದ್ದರೆ ಗತಾರ್ಥತ್ವ ಶಂಕೆಯನ್ನೇ ಮಾಡಿದ್ದು ತಪ್ಪಾಗುತ್ತದೆ. ಆದ್ದರಿಂದ ಭೂತಗಳ ಒಳಗಿದ್ದಾನೆ ಎಂಬ ಮಾತಿಗೆ ಸಕಲ ಭೂತಗಳ ಹೃದಯಲ್ಲಿದ್ದಾನೆಂದೇ ಅರ್ಥ.

प्रकाशः – लिङ्गं पूर्वन्यायेन सावकाशमित्याशङ्क्य निराह – नचेति । इत्यादि श्रुत्येति । एतेन ''तस्यापरिच्छिन्नत्वेन ''सर्वेषु भूतेषु'' इत्युक्तात्पौकस्त्वायोगात्'' इति टीकोपपादिता ।

ननु ''एष म आत्माऽन्त र्हृदयेऽणीयान्व्रीहेर्वा यवाद्वा'' इत्यणीयस्त्वमपि श्रुयत इति चेन्न, द्वयोर्विरोधेनाणीयस्त्वस्य जीवधर्मत्वादिना कथञ्चिन्नेयत्वात् इति भावेनोक्तं – **तद्विरुद्धाल्पौकस्त्वायोगादिति ।**

आदित्यनिष्ठत्वादिति । एतच्च प्रागेव विवृतमस्माभिः । ननु ब्रह्मणोऽपि सर्वगतत्वं सङ्कोच्यात्र प्रतिपाद्यत्वमुपेयतामित्यत आह – **नचेति ।।**

ಅರ್ಭಕೌಕಸ್ತ್ವವೆಂಬ ಲಿಂಗವು ಹಿಂದೆ ಹೇಳಿದ ನ್ಯಾಯದಂತೆ ಸಾವಕಾಶವಲ್ಲವೇ? ಎಂದು ಆಶಂಕಿಸಿ 'ನಚ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. 'ಇತ್ಯಾದಿ ಶ್ರುತ್ಯಾ' ಎಂಬ ಮಾತುಗಳಿಂದ ''ತಸ್ಯಾಪರಿಚ್ಛನ್ನತ್ವೇನ ''ಸರ್ವೇಷು ಭೂತೇಷು'' ಇತ್ಯುಕ್ತಾಲ್ಪೌಕಸ್ತ್ವಾಯೋಗಾತ್'' ಎಂಬ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು.

ಪ್ರಶ್ನೆ - ಗ್ರಂಥದಲ್ಲಿ ಹೇಳಿದ 'ಜ್ಯಾಯಾನ್ ಪೃಥಿವ್ಯಾ' ಎಂಬ ಶ್ರುತಿಯಿಂದ ಆಂತರ್ಯಾಮಿಗೆ ಸರ್ವಗತತ್ವವನ್ನು ಹೇಳಲಾಗಿದೆ. ಆದರೆ ಆದೇ ಶ್ರುತಿಯ ಮುಂದಿನ ವಾಕ್ಯದಲ್ಲಿ ''ಏಷ ಮ ಆತ್ಮಾಂತರ್ಹೃದಯೇಽಣೀಯಾನ್ವ್ರೀಹೇರ್ವಾ ಯವಾದ್ವಾ'' ಎಂಬುದಾಗಿ ಅಲ್ಪಸ್ಥಾನಸ್ಥಿತತ್ವವು ಕೇಳಿಸುತ್ತಿದೆಯಲ್ಲವೇ?

ಉತ್ತರ - ಇದು ತಪ್ಪು. ಎರಡೂ ಶ್ರುತಿವಾಕ್ಯಗಳಿಗೆ ಪರಸ್ಪರ ವಿರೋಧ ಬರುವುದರಿಂದ ಸರ್ವಗತತ್ವವನ್ನು ಆಂತರ್ಯಾಮಿಯಲ್ಲಿ ಹೇಳಿ ಅಣೀಯಸ್ತ್ವವನ್ನು ಜೀವಧರ್ಮವೆಂದು ಗೌಣ ಮಾಡಬೇಕು. ಈ ಅಭಿಪ್ರಾಯದಿಂದ ಗ್ರಂಥಕಾರರು 'ತದ್ವಿರುದ್ಧಾಲ್ಪೌಕಸ್ತ್ವಾಯೋಗಾತ್' ಎಂದು ಹೇಳಿದ್ದಾರೆ.

ಗ್ರಂಥದಲ್ಲಿ 'ಆದಿತ್ಯನಿಷ್ಠತ್ವಾತ್' ಎಂದಿದೆ. ಆದಿತ್ಯನಲ್ಲಿ ಸರ್ವಗತತ್ವವು ಹೇಗೆ ಬರುತ್ತದೆಂಬುದನ್ನು ಈ ಹಿಂದೆಯೇ ಉಪಪಾದಿಸಿದ್ದಾಗಿದೆ. ಬ್ರಹ್ಮನಲ್ಲಿಯೂ ಸಹ ಸರ್ವಗತತ್ವವನ್ನು ಸಂಕೋಚ ಮಾಡಿ ಈ ಶ್ರುತಿಯಿಂದ ಪ್ರತಿಪಾದ್ಯನೆಂದು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ 'ನಚ ಬ್ರಹ್ಮಣಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಏತೇನ, ನನು ಯಥಾ ಪೂರ್ವಪಕ್ಷೇ ಕಿಞ್ಚಿದಾದಿತ್ಯವಾಕ್ಯಂ ಕಿಞ್ಚಿಜ್ಜೀವವಾಕ್ಯಮಿತ್ಯುಭಯ-ಪ್ರಾಪಕಸತ್ತ್ವಾದ್ವಾಕ್ಯಭೇದ ಆಶ್ರೀಯತೇ, ತಥಾ ಪೂರ್ವಪ್ರಕರಣಂ ಪೂರ್ವೋಕ್ತರೀತ್ಯಾऽನೇಕಶ್ರುತಿ-ಲಿಙ್ಗೋಪೇತತ್ವೇನ ಬ್ರಹ್ಮಪರಂ, ''ಚತ್ವಾರಃ ಪುರುಷಾಃ'' ಇತ್ಯಾದಿತ್ವನ್ಯಪರಮಸ್ತು, ಅತ್ರೋಕ್ತಬಾಧಕಾ-ನಾಮರ್ಭಕೌಕಸ್ತ್ವಾದಿತ್ಯಶ್ರುತ್ಯಾದೀನಾಂ ತತ್ರಾಭಾವಾದಿತಿ ನಿರಸ್ತಮ್ । ''ಬ್ರಹ್ಮ ತತಮಂ'' ಇತಿ ಪೂರ್ವವಾಕ್ಯಮಸಙ್ಕುಚಿತಸರ್ವಗತತ್ವಪರಂ ಚೇತ್, ''ಭೂತೇಷ್ವೇತಮೇವ'' ಇತ್ಯವಧಾರಣವಿರೋಧೇನ ನ ಬ್ರಹ್ಮ ಪ್ರತಿಪಾದಯಿತುಮಲಮ್, ಸಙ್ಕುಚಿತಪರಂ ಚೇತ್ತಸ್ಯ ಬ್ರಹ್ಮತ್ವವ್ಯಾಘಾತೇನ ನ ತತ್ಪ್ರತಿಪಾದಯಿತುಂ ಶಕ್ತಮಿತ್ಯುಭಯಥಾ ತಸ್ಯ ಬ್ರಹ್ಮಪರತ್ವಾಯೋಗಾತ್,

ಆಕ್ಷೇಪ - ಇಲ್ಲಿಯ ತನಕ ಆದಿತ್ಯಕೋಟಿಕ ಪೂರ್ವಪಕ್ಷವನ್ನು ಮತ್ತು ಜೀವಕೋಟಿಕಪೂರ್ವಪಕ್ಷವನ್ನು ಮಾಡಿದರು. ಜೀವಕೋಟಿಕ ಪೂರ್ವಪಕ್ಷವನ್ನು ಮಾಡುವಾಗ ವಾಕ್ಯಭೇದವನ್ನು ಆಶ್ರಯಿಸಿದ್ದರು. ಸಂವತ್ಸರಸಾರತ್ವ ಮೊದಲಾದ ಆದಿತ್ಯನ ಲಿಂಗಗಳು ಯಾವ ಶ್ರುತಿವಾಕ್ಯಗಳಲ್ಲಿ ಕೇಳಿಸುತ್ತಿವೆಯೋ, ಅವೆಲ್ಲವೂ ಆದಿತ್ಯನನ್ನೇ ಪ್ರತಿಪಾದಿಸಲಿ. ಆದರೆ 'ಏತಂ ಹ್ಯೇವಾ ಬಹ್ವೃಚಾಃ' ಎಂಬ ವಾಕ್ಯದಿಂದ ಪ್ರಾರಂಭಿಸಿ ಮುಂದಿನ ವಾಕ್ಯಗಳೆಲ್ಲವೂ ಜೀವಪರವಾಗುತ್ತವೆ. ಹೀಗೆ ಉಭಯಪ್ರಾಪಕಗಳಿರುವುದರಿಂದ ವಾಕ್ಯಭೇದವನ್ನು ಆಶ್ರಯಿಸಲಾಗಿದೆ. ಆದರಂತೆ ಏತರೇಯೋಪನಿಷತ್ತಿನ ಪ್ರಾರಂಭದಲ್ಲಿ ಬರುವ ''ಬ್ರಹ್ಮ ತತಮಂ'' ಇತ್ಯಾದಿ ಪ್ರಕರಣದ ಅನೇಕ ಭಾಗದಲ್ಲಿ ವಿಷ್ಣುಶ್ರುತಿ ಹಾಗೂ ವಿಷ್ಣುಲಿಂಗಗಳಿಂದ ಕೂಡಿರುವುದರಿಂದ ಬ್ರಹ್ಮಪರವಾಗಲಿ; ''ಚತ್ವಾರಃ ಪುರುಷಾಃ'' ಎಂದು ಪ್ರಾರಂಭವಾಗುವ ಮುಂದಿನ ಪ್ರಕರಣವೆಲ್ಲವೂ ಜೀವಪರವೋ ಆದಿತ್ಯಪರವೋ ಆಗಲಿ. ಆದ್ದರಿಂದ 'ಬ್ರಹ್ಮ ತತಮಂ' ಎಂದು ಪ್ರಸಕ್ತವಾಗುವ ಪ್ರಕರಣದಲ್ಲಿ ಇಲ್ಲಿ ಹೇಳಲ್ಪಟ್ಟ ಯಾವುದೇ ಬಾಧಕಗಳು ಇರುವುದಿಲ್ಲ. ಆದಿತ್ಯಶ್ರುತಿಗಳಾಗಲೀ, ಅರ್ಭಕೌಕಸ್ತ್ವವಾಗಲೀ ಅಲ್ಲಿ ಇರುವುದಿಲ್ಲ. ಆದ್ದರಿಂದ ಹಿಂದಿನ ಅಧಿಕರಣವನ್ನು ಹೇಗೆ ಆಕ್ಷೇಪಿಸುತ್ತೀರಿ ?

ಸಮಾಧಾನ - ಪೂರ್ವಪ್ರಕರಣವನ್ನು ಬ್ರಹ್ಮಪರವೆಂದೇ ಹೇಳಲು ಸಾಧ್ಯವಿಲ್ಲ. ಏಕೆಂದರೆ ಬ್ರಹ್ಮನಲ್ಲಿ ತತಮತ್ವವನ್ನು (ಸರ್ವಗತತ್ವವನ್ನು) ಅಸಂಕುಚಿತವಾಗಿ ಹೇಳುತ್ತೀರೋ ? ಅಥವಾ ಸಂಕುಚಿತವಾಗಿ ಹೇಳುತ್ತೀರೋ ? ಅಸಂಕುಚಿತವಾದ ವ್ಯಾಪ್ತಿಯನ್ನು ಹೇಳುವುದಾದರೆ 'ಏತಮೇವ' ಎಂಬ ಅವಧಾರಣದ ವಿರೋಧ ಬರುತ್ತದೆ. ಏಕೆಂದರೆ ಮುಂದಿನ ಪ್ರಕರಣದಲ್ಲಿ 'ಏತಮೇವ' ಎಂಬುದನ್ನು ಆದಿತ್ಯಪರವೆಂದು ನೀವೇ ಹೇಳುತ್ತೀರಿ. ಈ ವಾಕ್ಯದಲ್ಲಿ ಆದಿತ್ಯನೊಬ್ಬನೇ ಸರ್ವಗತನೆಂದು ನಿರ್ಣಯವಾದ ಮೇಲೆ ಪುನಃ ಇಲ್ಲಿ ಬ್ರಹ್ಮನನ್ನು ಸರ್ವಗತನೆಂದು ಹೇಳಿದರೆ ವಿರೋಧ ಬರುತ್ತದೆ. ಇನ್ನು ಸಂಕುಚಿತವಾದ ವ್ಯಾಪ್ತಿಯನ್ನು ಬ್ರಹ್ಮನಲ್ಲಿ ಹೇಳಬೇಕು. ಹಾಗೆ ಸಂಕೋಚ ಮಾಡಿದರೆ ಬ್ರಹ್ಮತ್ವದಿಂದಲೇ ವ್ಯಾಹತಿ ಬರುತ್ತದೆ. ಬ್ರಹ್ಮನೆಂದರೆ ಎಲ್ಲೆಡೆ ಇದ್ದಾನೆಂದರ್ಥ. ಪುನಃ ಪ್ರಥಮಂ ಎಂಬ ಪದದಿಂದ ಕೆಲವೆಡೆ ಮಾತ್ರ ಇದ್ದಾನೆಂದು ಹೇಳಿದರೆ ವ್ಯಾಹತಿ ದೋಷ ಬರುತ್ತದೆ. ಆದ್ದರಿಂದ ಎರಡು ಬಗೆಯಿಂದ ಚಿಂತನೆ ಮಾಡಿದರೂ ಪೂರ್ವಪ್ರಕರಣವನ್ನು ಬ್ರಹ್ಮಪರವೆಂದು ಹೇಳಲಾಗದು.

प्रकाशः – प्रकृतवाक्यभेद इव पूर्वोत्तरप्रकरणभेदे ज्ञापकाभावात्, अत्राऽऽदित्यश्रुत्याद्यनुसारेण ब्रह्मशब्दाश्रुतत्वादिलिङ्गानामन्यथात्वमिव पूर्वत्राप्यन्यथयितुं शक्यत्वे सर्वत्राऽऽदित्यपरत्वे पूर्वपक्षिणं प्रति प्रबलबाधकाभावात् । अत एव टीकायां ''एकप्रकरणत्वात्'' इत्युक्तमिति ।

ಪೂರ್ವಪಕ್ಷದಲ್ಲಿ ಯಾವರೀತಿಯಾಗಿ ಕೆಲವು ವಾಕ್ಯಗಳನ್ನು ಆದಿತ್ಯಪ್ರತಿಪಾದಕವೆಂದು, ಇನ್ನು ಕೆಲವು ವಾಕ್ಯಗಳನ್ನು ಜೀವಪ್ರತಿಪಾದಕವೆಂದು ಒಪ್ಪಿ ವಾಕ್ಯಭೇದವನ್ನು ಹೇಳುತ್ತಾರೋ, ಅದರಂತೆ ಪ್ರಕೃತ ಏತರೇಯೋಪನಿಷತ್ತಿನ ಹಿಂದಿನ ಮುಂದಿನ ಪ್ರಕರಣಗಳಲ್ಲಿ ವಾಕ್ಯಭೇದವನ್ನು ಒಪ್ಪಲು ಕಾರಣವಿಲ್ಲ. ಅಂದರೆ ಹಿಂದಿನ ಪ್ರಕರಣವು ಬ್ರಹ್ಮನನ್ನೇ ಪ್ರತಿಪಾದಿಸುತ್ತದೆನ್ನೆಲು ಮುಂದಿನ ಪ್ರಕರಣವು ಆದಿತ್ಯನನ್ನೇ

ಪ್ರತಿಪಾದಿಸುತ್ತಿದೆನ್ನಲು ಆಧಾರವಿಲ್ಲ. ಆದ್ದರಿಂದ ಮುಂದಿನ ಪ್ರಕರಣದಲ್ಲಿರುವ ಆದಿತ್ಯಶ್ರುತಿಗೆ ಅನುಸಾರಿಯಾಗಿ ಬ್ರಹ್ಮಶಬ್ದ ಅಶ್ರುತತ್ವ ಮೊದಲಾದ ಲಿಂಗಗಳನ್ನು ಹೇಗೆ ಗೌಣವಾಗಿ ವ್ಯಾಖ್ಯಾನಿಸಲಾಗುತ್ತದೋ, ಅದರಂತೆ ಹಿಂದಿನ ಪ್ರಕರಣದಲ್ಲಿರುವ ಬ್ರಹ್ಮನ ಲಿಂಗಗಳನ್ನೂ ಸಹ ಆದಿತ್ಯಪರವಾಗಿ ವ್ಯಾಖ್ಯಾನಿಸಬಹುದು. ಒಟ್ಟಾರೆ ಸಂಪೂರ್ಣ ಏತರೇಯದಲ್ಲಿ ಬರುವ ಪ್ರಕರಣವು ಆದಿತ್ಯಪರವೆಂದು ಹೇಳಿದಾಗ ಪೂರ್ವಪಕ್ಷೆಯನ್ನು ಕುರಿತು ಯಾವುದೇ ಪ್ರಬಲವಾದ ಬಾಧಕವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದಲೇ ಟೀಕೆಯಲ್ಲಿ ''ಏಕಪ್ರಕರಣತ್ವಾತ್'' ಎಂದು ಹೇಳಿದ್ದಾರೆ.

ಗುರುರಾಜೀಯಮ್ – ನನು ಯದಿ ಸರ್ವೇಷು ಭೂತೇಷ್ವಿತ್ಯತ್ರಾಲ್ಪೌಕಸ್ತ್ವಮುಚ್ಯೇತ ತರ್ಹ್ಯತ್ರೋಕ್ತಸರ್ವಗತೋ ನ ವಿಷ್ಣುಶ್ಚೇತ್ಪೂರ್ವೋಕ್ತೋऽಪಿ ನ ಸರ್ವಗತೋ ವಿಷ್ಣುಃ ಸ್ಯಾದಿತ್ಯಾಕ್ಷೇಪಾಯೋಗಾತ್ಪೂರ್ವಾಧಿಕರಣಾಕ್ಷೇಪಾನುಪಪತ್ತಿರಿತ್ಯತ ಆಹ – **ಪೂರ್ವಾಧಿಕರಣಾಕ್ಷೇಪಸ್ತ್ವಿತಿ** ।।

ಸಾರ

ಆಂತರ್ಯಾಮಿಯಲ್ಲಿಯೂ ಸಹ ಅಲ್ಪಸ್ಥಾನಸ್ಥಿತತ್ವವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ''ಹೃದಯೇ ಜ್ಯಾಯಾನ್ ಪೃಥಿವ್ಯಾಃ'' ಎಂಬ ಶ್ರುತಿಯು ಹೃದಯದಲ್ಲಿರುವ ಆಂತರ್ಯಾಮಿಗೆ ಸರ್ವಗತತ್ವವನ್ನೇ ಹೇಳುತ್ತಿದೆ. ಸರ್ವಗತನಲ್ಲಿ ಅಲ್ಪದೇಶಸ್ಥಿತತ್ವವನ್ನು ಹೇಳಲಾಗದೆಂದು ವಾದ ಮಾಡಿದರೆ ಆದಿತ್ಯನಲ್ಲಿಯೂ ಅಲ್ಪದೇಶಸ್ಥಿತತ್ವವನ್ನು ಹೇಳಲು ಸಾಧ್ಯವಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಆದಿತ್ಯಶ್ರುತಿಗೆ ಅನುಸಾರಿಯಾಗಿ ಆದಿತ್ಯನಲ್ಲಿರುವ ಸರ್ವಗತತ್ವವನ್ನು ಸಂಕೋಚ ಮಾಡಬೇಕಾಗುತ್ತದೆ. ಆದಿತ್ಯನಲ್ಲಿ ಸಂಕುಚಿತವಾದ ಅರ್ಥವನ್ನು ಹೇಳಿದಂತೆ ಬ್ರಹ್ಮನಲ್ಲಿ ಹೇಳಲಾಗದೆಂಬುದನ್ನು ಮಾತ್ರ ಗಮನಿಸಬೇಕು.

• • • • •

ಬಾಧಕಪರಿಹಾರದೊಂದಿಗೆ ಪೂರ್ವಪಕ್ಷದ ಉಪಸಂಹಾರ

ತಾತ್ಪರ್ಯಚನ್ದ್ರಿಕಾ

ಬ್ರಹ್ಮಶಬ್ದಸ್ಯ ಚ ವಿಷ್ಣೌ ಮುಖ್ಯತ್ವೇऽಪ್ಯಲ್ಪೌಕಸ್ತ್ವಾದಿಲಿಙ್ಗಾದಿಹಾಮುಖ್ಯಾರ್ಥತ್ವಾತ್,

ಜ್ಯೋತಿರದೃಶ್ಯತ್ವಾದ್ಯಧಿಕರಣಯೋಶ್ಚ ಬಾಧಕಾಭಾವಾನ್ಮುಖ್ಯಸ್ಯಾಶ್ರುತತ್ವಾದೇರ್ವಿಷ್ಣುಧರ್ಮೇತ್ವೇऽಪಿ ಪ್ರಕೃತೇ ಅರ್ಭಕೌಕಸ್ತ್ವಾದಿಬಾಧಕೇನ ಅಮುಖ್ಯಸ್ಯ ತಸ್ಯ ಜೀವೇऽಪ್ಯುಪಪತ್ತೇಃ । ''ಅನ್ತರ್ಯಾಮಿ'' ಇತ್ಯತ್ರ ಚ ಇಹ ವಿಷ್ಣುಲಿಙ್ಗತ್ವೇನ ನಿಶ್ಚಿತಸ್ಯಾನ್ತರತ್ವಸ್ಯ ''ಯಃ ಪೃಥಿವ್ಯಾ ಅನ್ತರಃ'' ಇತಿ ಶ್ರವಣಾದನ್ತರ್ಯಾಮೀ ವಿಷ್ಣುರಿತಿ ವಕ್ಷ್ಯತೇ, ನ ತ್ವೇತತ್ಸಿದ್ಧಾನ್ತಾತ್ಪ್ರಾಕ್ ತತ್ರಾನ್ತರತ್ವಾದೀನಾಂ ವಿಷ್ಣುಧರ್ಮತ್ವನಿಶ್ಚಯಃ । ಅತ ಏವ ತತ್ರ ಭಾಷ್ಯಕಾರೋ ವಕ್ಷ್ಯತಿ ''ಸ ಹಿ ''ಸರ್ವೇಷಾಂ

भूतानामन्तरपुरुषः'' इत्यादिना अन्तरः'' इति । अन्तराधिकरणे तु चक्षुरन्तस्थत्वं विष्णोरिति वक्ष्यते । न चेह तच्छ्रूयते, किन्त्वन्तरशब्दमात्रमित्याद्यूह्यम् । तस्माद्युक्तः पूर्वपक्षोदयः ।।

ಅನುವಾದ - ಆದಿತ್ಯಾದಿಗಳು ಸರ್ವಗತರಾಗಿದ್ದಾರೆನ್ನಲು ಬ್ರಹ್ಮಶಬ್ದ ಬಾಧಕವಾಗುವುದಿಲ್ಲ. ವಸ್ತುತಃ ಬ್ರಹ್ಮಶಬ್ದವು ವಿಷ್ಣುವಿನಲ್ಲಿ ಮುಖ್ಯಾರ್ಥವಾಗಿರಬಹುದು. ಆದರೆ ಆದಿತ್ಯನ ವಿಷಯದಲ್ಲಿ 'ಆಲ್ಪೌಕಸ್ತ್ವ' ಮೊದಲಾದ ಲಿಂಗಗಳ ಬಲದಿಂದ ಅಮುಖ್ಯಾರ್ಥವೇ ಆಗಿರುತ್ತದೆ.

ಇದರಂತೆ ಜ್ಯೋತಿರಧಿಕರಣ ಹಾಗೂ ಅದೃಶ್ಯತ್ವಾದ್ಯಧಿಕರಣಗಳಲ್ಲಿ ಬಾಧಕವನ್ನು ಹೇಳದ ಕಾರಣ ಅದೃಶ್ಯತ್ವ, ಅಶ್ರುತತ್ವ ಮೊದಲಾದ ಧರ್ಮಗಳನ್ನು ವಿಷ್ಣುವಿನಲ್ಲಿ ಮುಖ್ಯವಾಗಿಯೇ ಹೇಳಬಹುದು. ಆದರೆ ಪ್ರಕೃತ ಆದಿತ್ಯ ಮತ್ತು ಜೀವನಲ್ಲಿ ಆರ್ಥೌಕೌಕಸ್ತ್ವ ಮೊದಲಾದ ಬಾಧಕಗಳಿರುವುದರಿಂದ ಈ ಅದೃಶ್ಯತ್ವಾದಿಗಳನ್ನು ಅಮುಖ್ಯವೆಂದು ಹೇಳಬಹುದು.

ಅಂತರ್ಯಾಮ್ಯಧಿಕರಣದಲ್ಲಿ ಅಂತರತ್ವವು ವಿಷ್ಣುವಿನ ಲಿಂಗವೆಂದು ಹೇಳಿದ್ದಾರಲ್ಲವೆ? ಎಂದರೆ ಈ ಅಧಿಕರಣದಲ್ಲಿ ನಿರ್ಣಯವಾದ ಮೇಲೆ ''ಯಃ ಪೃಥಿವ್ಯಾ ಅಂತರಃ'' ಎಂಬಲ್ಲಿ ಕೇಳಿಸುತ್ತಿರುವ ಅಂತರತ್ವವನ್ನು ವಿಷ್ಣುವಿನ ಧರ್ಮವೆಂದು ಅಲ್ಲಿ ಹೇಳಿದ್ದಾರೆ. ಆದ್ದರಿಂದ ಅಲ್ಲಿರುವ ಅಂತರತ್ವವನ್ನು ಈ ಅಧಿಕರಣದ ಸಿದ್ಧಾಂತದ ಮೊದಲು ಪೂರ್ವಪಕ್ಷದ ಸಂದರ್ಭದಲ್ಲಿ ಅಂತರತ್ವವನ್ನು ವಿಷ್ಣುವಿನ ಧರ್ಮವೆಂದು ವಿವಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಮುಂದೆ ಭಾಷ್ಯಕಾರರು ''ಸಹ ಸರ್ವೇಷಾಂ ಭೂತಾನಾಮಂತರಪುರುಷಃ'' ಎಂಬುದಾಗಿ ಹೇಳುತ್ತಾರೆ. 'ಅಂತರಃ' ಎಂಬುದಾಗಿ ಅಂತರಧಿಕರಣದಲ್ಲಂತೂ ವಿಷ್ಣುವನ್ನು ಚಕ್ಷುರಂತಸ್ಥನೆಂದು ಹೇಳಿದ್ದಾರೆ. ಆದರೆ ಈ ಅಧಿಕರಣದಲ್ಲಿ ಆ ಮಾತು ಕೇಳಿಸುತ್ತಿಲ್ಲ. ಹೊರತಾಗಿ ಕೇವಲ 'ಅಂತರ' ಎಂಬ ಶಬ್ದವಷ್ಟೇ ಕೇಳಿಸುತ್ತಿದೆ. ಇವೇ ಮೊದಲಾದ ಹಲವು ಪೂರ್ವಪಕ್ಷವನ್ನು ಸ್ವತಃ ಶಿಷ್ಯಂದಿರೇ ಊಹಿಸಿಕೊಳ್ಳಬೇಕು. ಆದ್ದರಿಂದ ಪೂರ್ವಪಕ್ಷವು ಉದಯವಾಯಿತು.

प्रकाशः –

नन्वत्र ब्रह्मशब्दादयोऽपि ब्रह्मत्वसाधकाः सन्तीत्युक्तमित्यत्राह – ब्रह्मशब्दस्य चेति । एतेन ''ब्रह्मशब्दस्य जीवेऽपि सम्भवात्'' इति टीका विवृता । अश्रुतत्वादेर्गतिमाह – ज्योतिरिति । एतेन न तदाक्षेप इति सूचितम् ।

ವಿವರಣೆ - ಇಲ್ಲಿಯ ತನಕ ಆದಿತ್ಯಶ್ರುತಿಯು ಪ್ರಸಿದ್ಧನಾದ ಸೂರ್ಯನನ್ನೇ ಪ್ರತಿಪಾದಿಸುತ್ತದೆನ್ನಲು ಅನೇಕ ಸಾಧಕಗಳನ್ನು ಹೇಳಿದರು. ಪ್ರಕೃತ ಬಾಧಕಗಳನ್ನು ಪರಿಹರಿಸುತ್ತಿದ್ದಾರೆ.

ಆದಿತ್ಯಪ್ರಕರಣದಲ್ಲಿಯೂ ಬ್ರಹ್ಮತ್ವಪ್ರತಿಪಾದಕವಾದ ಬ್ರಹ್ಮಶಬ್ದವೇ ಮೊದಲಾದವುಗಳು ಕಾಣಿಸುತ್ತಿವೆಯಲ್ಲವೇ? ಎಂಬ ಪ್ರಶ್ನೆಗೆ ''ಬ್ರಹ್ಮಶಬ್ದಸ್ಯ ಚ'' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಹೀಗೆ ಹೇಳಿದ್ದರಿಂದ ''ಬ್ರಹ್ಮಶಬ್ದಸ್ಯ ಜೀವೇಽಪಿ ಸಂಭವಾತ್'' ಎಂಬ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು. ಅಶ್ರುತತ್ವ ಮೊದಲಾದವುಗಳು ಆದಿತ್ಯನು ಪ್ರತಿಪಾದ್ಯನನ್ನಲು ಬಾಧಕವಾಗಿವೆಯಲ್ಲವೇ? ಎಂಬ ಪ್ರಶ್ನೆಗೆ 'ಜ್ಯೋತಿಃ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಈ ವಾಕ್ಯದಿಂದ ಜ್ಯೋತಿರಧಿಕರಣವನ್ನು ಆಕ್ಷೇಪಿಸಲಾಗದೆಂದೂ ಸಹ ಸೂಚಿಸಿದಂತಾಯಿತು.

प्रकाशः – बाधकाभावादिति । उक्ताभिप्रायमेतत् । यदप्यन्तरत्वं विष्णुलिङ्गमिति, तत्राह – **अन्तर्यामीति** ।

ननु ''अन्तर उपपत्तेः'' इत्यत्रान्तरत्वं विष्णुलिङ्गतया सिद्धमित्यत आह – **अन्तरेति** । तत्र ''य एषोऽन्तरक्षिणि पुरुषः'' इति चक्षुरन्तस्स्थत्वं श्रूयते, न त्विह तथेत्यर्थः ।

'ಬಾಧಕಾಭಾವಾತ್' ಎಂಬ ವಾಕ್ಯದ ಅಭಿಪ್ರಾಯವನ್ನು ಈ ಹಿಂದೆಯೇ ನಿರೂಪಿಸಿದ್ದಾಗಿದೆ. ಅಂತರತ್ವವೆಂಬ ವಿಷ್ಣುಲಿಂಗವು ಬಾಧಕವೆಂಬ ಪ್ರಶ್ನೆಗೆ 'ಅಂತರ್ಯಾಮಿ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ.

ಅಂತರ್ಯಾಮ್ಯಧಿಕರಣವು ಬೇಡ, ಆದರೆ ''ಅಂತರ ಉಪಪತ್ತೇಃ'' ಎಂಬ ಆಧಿಕರಣದಲ್ಲಿ ಅಂತರತ್ವವನ್ನು ವಿಷ್ಣುಲಿಂಗವೆಂದು ಹೇಳಿದ್ದಾರಲ್ಲವೇ? ಎಂಬ ಪ್ರಶ್ನೆಗೆ 'ಅಂತರ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ. ಅಂತರಧಿಕರಣದಲ್ಲಿ ''ಯ ಏಷೋಽಂತರಕ್ಷಿಣಿ ಪುರುಷಃ'' ಎಂದು ಚಕ್ಷುರಂತಸ್ಥತ್ವವು ಕೇಳಿಸುತ್ತಿದೆ ಹೊರತು ಹೃದಯನಿಹಿತತ್ವ ಕೇಳಿಸುತ್ತಿಲ್ಲವೆಂದು ತಿಳಿಯಬೇಕು.

प्रकाशः – नन्वथापि ''अन्योऽन्तर आत्माऽऽनन्दमयः'' इत्यत्रान्तरत्वस्य विष्णुधर्मत्वं सिद्धमिति चेन्न, तत्र देहदेहिभावेनान्तस्स्थत्वमुच्यते,

बहिष्टो देहवद्विष्णुरन्तस्स्थो देहिवत्स्मृतः ।

इति तद्भाष्यात्तेः । न चेह तथा श्रूयते, किन्तु सर्वजीवान्तरत्वम् ।

उक्तञ्च –

अन्तस्स्थस्सर्वजीवानां पूर्णत्वात्पुरुषाभिधः ।

इति ऐतरेयभाष्ये ।

ಪ್ರಶ್ನೆ - ಅಂತರ್ಯಾಮ್ಯಧಿಕರಣದಲ್ಲಾಗಲೀ, ಅಂತರಧಿಕರಣದಲ್ಲಾಗಲೀ, ಅಂತರತ್ವವು ವಿಷ್ಣುಲಿಂಗವೆಂದು ಸಿದ್ಧವಾಗದಿರಬಹುದು. ಆದರೆ ಆನಂದಮಯಾಧಿಕರಣದಲ್ಲಿರುವ ಪ್ರಸಕ್ತವಾಗುವ 'ಆನ್ಯೋಽಂತರ ಆತ್ಮಾಽನಂದಮಯಃ' ಎಂಬಲ್ಲಿ ಅಂತರತ್ವವು ವಿಷ್ಣುಧರ್ಮವೆಂದು ನಿಶ್ಚಯವಾಗಿದೆಯಲ್ಲವೇ?

ಉತ್ತರ - ಆನಂದಮಯಾಧಿಕರಣದಲ್ಲಿ ಹೇಳಿರುವ ಅಂತರತ್ವವೇ ಬೇರೆ, ಇಲ್ಲಿ ಹೇಳುತ್ತಿರುವ ಅಂತರತ್ವವೇ ಬೇರೆ. ದೇಹದೇಹಿಭಾವದಿಂದ ಅಂತರತ್ವವು ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟಿದೆ. ಏಕೆಂದರೆ

ಬಹಿಷ್ಠೋ ದೇಹವದ್ವಿಷ್ಣುರಂತಸ್ಥೋ ದೇಹಿವತ್ಸ್ವಲ್ಪತಃ।

ಹೊರಗಿರುವ ಭಗವದ್ರೂಪವು ದೇಹದಂತಿದೆ. ಒಳಗಿರುವ ಭಗವದ್ರೂಪವು ದೇಹಿಯಂತಿದೆಯೆಂದು ಅದೇ ಅಧಿಕರಣದ ಭಾಷ್ಯದಲ್ಲಿ ಹೇಳಿದ್ದಾರೆ. ಆದರೆ ಈ ಅಧಿಕರಣದಲ್ಲಿ ಹಾಗೆ ಕೇಳಿಸುತ್ತಿಲ್ಲ ಹೊರತಾಗಿ ಸಕಲ ಜೀವರ ಅಂತರ್ಯಾಮಿಯಾಗಿದ್ದಾನೆಂಬ ಅಭಿಪ್ರಾಯದಿಂದ ಅಂತರತ್ವವನ್ನು ಹೇಳುತ್ತಿದ್ದಾರೆ. ಏಕೆಂದರೆ

ಅಂತಸ್ಥಸ್ಸರ್ವಜೀವಾನಾಂ ಪೂರ್ಣತ್ವಾತ್ಪುರುಷಾಭಿಧಃ।

ಎಂಬುದಾಗಿ ಐತರೇಯಭಾಷ್ಯದಲ್ಲಿ ಹೇಳಿದ್ದಾರೆ.

ಪ್ರಕಾಶಃ – ನನ್ವೇವಮಪಿ ''ಅನ್ಯಭಾವವ್ಯಾವೃತ್ತೇಃ'' ಇತಿ ಸೂತ್ರೇऽಕ್ಷರನಯೇऽಣುತ್ವಮಹತ್ತ್ವಯೋರ-ವಿರೋಧೋ ವಕ್ಷ್ಯತೇ, ಅಣುತ್ವಮಹತ್ತ್ವೇ ಏವಾಲ್ಪೌಕಸ್ತ್ವಸರ್ವಗತತ್ವೇ । ಅತ ಏವ ವೈಶೇಷಿಕಾಧಿಕರಣೇ–

ಮಹತोऽಲ್ಪತ್ವಮಪಿ ಹಿ ವ್ಯೋಮವತ್ಪ್ರಾಹ ವೇದವಿತ್ ।
ಯದ್ಯಲ್ಪದೇಶಸಂಸ್ಥಾನಂ ನ ಸರ್ವತ್ರಾಪಿ ನೋ ಭವೇತ್ ।।

ಇತ್ಯಾದಿನಾ ''ವ್ಯೋಮವಚ್ಚ'' ಇತಿ ಸೂತ್ರಾಂಶಂ ಮನಸಿ ನಿಧಾಯ ವ್ಯೋಮದೃಷ್ಟಾನ್ತೇನಾತ್ರೋಕ್ತಮಲ್ಪೌ ಕಸ್ತ್ವರೂಪಮಣುತ್ವಂ ವಿಷ್ಣಾವಪಪಾದಿತಮ್ । ನಚ ತತ್ರ ಪ್ರಾಕೃತಸ್ಥೌಲ್ಯಾದಿರಾಹಿತ್ಯಮೇವೋಕ್ತಂ,

ಅಸ್ಥೂಲಾನಣುರೂಪोऽಸಾವೈಶ್ವರ್ಯಾತ್ಪುರುಷोತ್ತಮಃ ।

ಇತಿ ಭಾಷ್ಯೋಕ್ತೇಃ ।

ಅನ್ಯವಸ್ತುಸ್ವಭಾವಾನಾಂ ಸ್ಥೌಲ್ಯಾದೀನಾಮಪಾಕೃತಿಮ್ ।
ನಾರಾಯಣೇ ಶ್ರುತಿರ್ವಕ್ತಿ..... ।।

ಇತ್ಯನುವ್ಯಾಖ್ಯಾನೋಕ್ತೇರಿತಿ ವಾಚ್ಯಂ, ''ಅನ್ಯಭಾವ'' ಇತಿ ಸೂತ್ರೋಕ್ತಸ್ಥೌಲ್ಯಾದ್ಯಭಾವಪ್ರತಿಪಾದನेऽಪಿ ಸೌತ್ರಚಶಬ್ದನೇ ಸ್ಥೌಲ್ಯಾದಿವಿರುದ್ಧಾಣುತ್ವಾದೇರಪಿ

ಸಮುಚಿತತಯಾऽಣುತ್ವಾದೇರಪಿ ತತ್ರೈವೋಕ್ತೇಃ । ಅತ ಏವಾನುವ್ಯಾಖ್ಯಾನೇ –

ಅತೋ ವಿರುದ್ಧವಜ್ಞಾತಮಪಿ ವ್ಯಾಖ್ಯಾಯ ತತ್ತ್ವತಃ ।
ಯೋಜನೀಯಂ ಹರೌ ವಾಕ್ಯಂ ವಿರುದ್ಧೈರ್ಲಕ್ಷಣೈರ್ಯುತಮ್ ।।

ಇತ್ಯಣುತ್ವಾದಿಕಮಪ್ಯುಕ್ತಮ್ । ಭಾಷ್ಯೇऽಪಿ ''ಅಸ್ಥೂಲोऽನಣುರಮಧ್ಯಮೋ ಮಧ್ಯಮೋ ವ್ಯಾಪಕोऽವ್ಯಾಪಕಃ'' ಇತಿ ಶ್ರುತೌ ಮಧ್ಯಮಾದಿಪದೇನ ತತ್ಸೂಚನಾಚ್ಚ ।

ನಚಾತ್ರಾವಿರುದ್ಧತ್ವೇನೋಕ್ತಸ್ಯೈವಾಣುತ್ವಾದೇಸ್ತತ್ರ ಹೇತ್ವಕರಣಂ, ನತು ತತ್ರ ವ್ಯುತ್ಪಾದ್ಯತಯಾ । ಅತ ಏವ ಚಶಬ್ದನೇ ತಸ್ಯೋಪಾದಾನಮಿತಿ ಯುಕ್ತಂ,

''ಇಹಾಣುತ್ವಮಹತ್ತ್ವಯೋರ್ಭಾವಯೋರ್ವಿರೋಧಪರಿಹಾರः'' ಇತ್ಯಾದ್ಯಕ್ಷರಾಧಿಕರಣಚನ್ದ್ರಿಕಾವಿರೋಧಾತ್। ಎವಞ್ಚಾಗ್ರೇ ಹೇತ್ವಕರಣೇನ ಬ್ರಹ್ಮಲಿಙ್ಗತಯಾ ನಿರ್ಣೀತಸ್ಯಾಲ್ಪೌಕಸ್ತ್ವಸ್ಯ ನ ಸಮನ್ವಯೇತಾಯೋಗ್ಯತ್ವಂ, ನಾಪಿ ತೇನ ಪೂರ್ವಪಕ್ಷೋದಯಃ । ಪೂರ್ವಪಕ್ಷೇ ವಾ ಅಶ್ರುತತ್ವಾದೇರ್ಗೌಣತ್ವವರ್ಣನಂ ಚಾಯುಕ್ತಮಿತಿ ಚೇತ್ ।

ಆಕ್ಷೇಪ - ಈ ಅಧಿಕರಣದಲ್ಲಿ 'ಅಣುತ್ವ' ಹಾಗೂ 'ಮಹತ್ವ'ಗಳಿಗೆ ವಿರೋಧವನ್ನು ಹೇಳುತ್ತಿದ್ದಾರೆ. ಆದರೆ ಅಕ್ಷರಾಧಿಕರಣದಲ್ಲಿ ಬರುವ 'ಅನ್ಯಭಾವವ್ಯಾವೃತ್ತೇः' ಎಂಬ ಸೂತ್ರದಲ್ಲೂ ಇದನ್ನೇ ಹೇಳಿರುವುದರಿಂದ ಅಕ್ಷರಾಧಿಕರಣದಿಂದ ಈ ಅಧಿಕರಣಕ್ಕೆ ಗತಾರ್ಥತ್ವ ದೋಷವು ಬರುತ್ತದೆ.

ಅಣುತ್ವ ಅಲ್ಪೌಕಸ್ತ್ವ ಮಹತ್ವವೆಂದರೆ ಸರ್ವಗತತ್ವವೆಂದರ್ಥ. ಅಲ್ಪೌಕಸ್ತ್ವವನ್ನೇ ಸರ್ವಗತತ್ವವೆಂದು ಹೇಗೆ ಹೇಳುತ್ತೀರಿ ? ಎಂದರೆ ಶ್ರೀಮದಾಚಾರ್ಯರೇ ವೈಶೇಷಿಕಾಧಿಕರಣದಲ್ಲಿ ಹೀಗೆ ಹೇಳಿದ್ದಾರೆ -

ಮಹತೋऽಲ್ಪತ್ವಮಪಿ ಹಿ ವ್ಯೋಮವತ್ ಪ್ರಾಹ ವೇದವಿತ್ ।
ಯದ್ಯಲ್ಪದೇಶಸಂಸ್ಥಾನಂ ನ ಸರ್ವತ್ರಾಪಿ ನೋ ಭವೇತ್ ।।

ಮಹತ್ವ ಇರುವ ಸ್ಥಳದಲ್ಲಿಯೇ ಅಣುತ್ವ ಇರುತ್ತದೆನ್ನಲು ಆಕಾಶ ದೃಷ್ಟಾಂತವನ್ನು ನೀಡಿದ್ದಾರೆ. 'ವ್ಯೋಮವತ್' ಎಂಬ ಸೂತ್ರವನ್ನೇ ಮನಸ್ಸಿನಲ್ಲಿಟ್ಟುಕೊಂಡು ಇಲ್ಲಿ ಹೇಳುತ್ತಿರುವ ಅಲ್ಪೌಕಸ್ತ್ವ ಅಂದರೆ ಅಣುತ್ವವನ್ನೇ ವಿಷ್ಣುವಿನಲ್ಲಿ ಉಪಪಾದಿಸಿದ್ದಾರೆ. ಇದರಿಂದ ಅಲ್ಪೌಕಸ್ತ್ವವೇ ಅಣುತ್ವವೆಂದು ನಿರ್ಣಯವಾಗುತ್ತದೆ.

ಅಲ್ಲಿ ಕೇವಲ ಪ್ರಾಕೃತಸೌಲ್ಕ್ಯವಿಲ್ಲವೆಂದಷ್ಟೇ ಹೇಳಿದ್ದಾರೆ ಹೊರತು ಅಣುತ್ವವನ್ನಾಗಲೀ ಮಹತ್ವವನ್ನಾಗಲೀ ವಿಧಿಸಿರುವುದಿಲ್ಲ. ಏಕೆಂದರೆ ''ಅಸ್ಥೂಲोऽನಣುರೂಪೋऽಸಾವೈಶ್ವರ್ಯಾತ್ಪುರುಷೋತ್ತಮः'' ಎಂಬ ಭಾಷ್ಯದ ಮಾತು ಮತ್ತು ''ಅನ್ಯವಸ್ತುಸ್ವಭಾವಾನಾಂ ಸೌಲ್ಕ್ಯಾದೀನಾಮಪಾಕೃತಿಮ್ । ನಾರಾಯಣೇ ಶ್ರುತಿರ್ವಕ್ತಿ.....।।'' ಎಂಬ ಅನುವ್ಯಾಖ್ಯಾನದ ಮಾತು ಈ ವಿಷಯದಲ್ಲಿ ಆಧಾರವಾಗಿದೆ.

ಹೀಗೆ ಹೇಳಬಾರದು - ಏಕೆಂದರೆ 'ಅನ್ಯಭಾವ' ಎಂಬ ಸೂತ್ರದಲ್ಲಿ ಸ್ಥೌಲ್ಯಾದಿಗಳಿಲ್ಲವೆಂದು ಹೇಳಿದ್ದರೂ, ಸೂತ್ರದಲ್ಲಿರುವ 'ಚ' ಶಬ್ದದಿಂದ ಸ್ಥೌಲ್ಯಾದಿಗಳಿಗೆ ವಿರುದ್ಧವಾದ ಅಣುತ್ವಾದಿಗಳನ್ನು ಸಮುಚ್ಚಯ ಮಾಡಿದ್ದಾರೆ. ಇದರಿಂದ ಅಣುತ್ವಾದಿಗಳನ್ನೂ ಸಹ ವಿಧಿಸಿದಂತಾಗುತ್ತದೆ. ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ

ಅತೋ ವಿರುದ್ಧವದ್ಭಾತಮಪಿ ವ್ಯಾಖ್ಯಾಯ ತತ್ತ್ವತಃ।
ಯೋಜನೀಯಂ ಹರೌ ವಾಕ್ಯಂ ವಿದುರ್ದ್ಧೈರ್ಲಕ್ಷಣೈರ್ಯುತಮ್ ॥

ಎಂಬುದಾಗಿ ಅಣುತ್ವಾದಿಗಳನ್ನು ಹೇಳಿದ್ದಾರೆ. 'ಭಾಷ್ಯದಲ್ಲಿ ''ಅಸ್ಥೂಲೋಽನಣುರಮಧ್ಯಮೋ ಮಧ್ಯಮೋ ವ್ಯಾಪಕೋಽವ್ಯಾಪಕಃ'' ಎಂಬ ಶ್ರುತಿಯಲ್ಲಿ 'ಮಧ್ಯಮ' ಮೊದಲಾದ ಪದಗಳಿಂದ ಅಣುತ್ವಾದಿಗಳನ್ನು ಸೂಚಿಸಿದ್ದಾರೆ.

ಈ ಅಧಿಕರಣದಲ್ಲಿ ಅಣುತ್ವ ಮತ್ತು ಮಹತ್ತ್ವಗಳಿಗೆ ವಿರೋಧವಿಲ್ಲವೆಂದು ಉಪಪಾದಿಸಿ ಮುಂದಿರುವ ಅಕ್ಷರಾಧಿಕರಣದಲ್ಲಿ ಇದನ್ನು ಹೇತುವನ್ನಾಗಿ ಮಾಡಲಾಗಿದೆ, ಹೊರತು ಅಲ್ಲಿ ಈ ಅಣುತ್ವ ಮಹತ್ತ್ವಗಳನ್ನು ಉಪಪಾದಿಸುತ್ತಿಲ್ಲ. ಆದ್ದರಿಂದಲೇ 'ಚ' ಶಬ್ದದಿಂದ ಅಣುತ್ವ ಮಹತ್ವವನ್ನು ವ್ಯಾಖ್ಯಾನಿಸಿದ್ದಾರಲ್ಲವೇ?

ಇದು ಆಯುಕ್ತ. ಏಕೆಂದರೆ 'ಇಹಾಣುತ್ವಮಹತ್ತ್ವಯೋರ್ಭಾವಯೋರ್ವಿರೋಧಪರಿಹಾರಃ'' ಎಂಬ ಅಕ್ಷರಾಧಿಕರಣದ ಚಂದ್ರಿಕಾಗ್ರಂಥದ ಅಕ್ಷರಾಧಿಕರಣದಲ್ಲಿಯೇ ಅಣುತ್ವ ಮಹತ್ತ್ವಗಳ ವಿರೋಧಗಳನ್ನು ಪರಿಹರಿಸಲಾಗಿದೆ ಎಂದಿದ್ದಾರೆ. ಇದರ ವಿರೋಧವು ಬರುತ್ತದೆ. ಆದ್ದರಿಂದ ಮುಂದೆ ಯಾವುದನ್ನು ಹೇತುವನ್ನಾಗಿ ಮಾಡುತ್ತಾರೋ ಆವಾಗ ಅದು ಬ್ರಹ್ಮಲಿಂಗವೆಂದು ನಿರ್ಣಯವಾಗಿರಬೇಕು. ಅಂತಹ ಅಲ್ಪೌಕಸ್ತ್ವವನ್ನು ಇಲ್ಲಿ ಸಮನ್ವಯ ಮಾಡಲು ಯೋಗ್ಯವಲ್ಲ. ಮತ್ತು ಇಂತಹ ಅಲ್ಪೌಕಸ್ತ್ವದಿಂದ ದೃಢವಾದ ಪೂರ್ವಪಕ್ಷವನ್ನು ಹೇಗೆ ಮಾಡುತ್ತೀರಿ ? ಇಂತಹ ಅಲ್ಪೌಕಸ್ತ್ವದಿಂದ ಅಶ್ರುತತ್ವಾದಿಗಳನ್ನು ಗೌಣವೆಂದು ಹೇಗೆ ವರ್ಣಿಸುತ್ತೀರಿ?

ಪ್ರಕಾಶಃ – ಮೈವಂ, ಅಲ್ಪೌಕಸ್ತ್ವಸರ್ವಗತತ್ವಯೋರಣುತ್ವಮಹತ್ತ್ವಾವಿನಾಭೂತತಯಾऽನ್ಯತ್ವಾತ್ । ತಥಾ ಚ ತಯೋರೇವಾತ್ರಾವಿರೋಧ ಉಚ್ಯತೇ, ನ ತ್ವಣುತ್ವಮಹತ್ತ್ವಯೋಃ । ಅತ ಏವ ಸುಧಾಯಾಂ ವೈಶೇಷಿಕನಯೇ ''ಅಲ್ಪಾಲ್ಪತರದೇಶಾವಸ್ಥಾನेऽಲ್ಪಾಲ್ಪತರಪರಿಮಾಣಮವರ್ಜನೀಯಮ್'' ಇತ್ಯುಕ್ತಂ, ನತು ತದೇವೈತದಿತಿ।

ನನ್ವನಯೋರವಿರೋಧೋಕ್ತೌ ತದಾಕ್ಷೇಪ್ಯಯೋರಣುತ್ವಮಹತ್ತ್ವಯೋರಪಿ ಸ ಸಿದ್ಧ ಇತಿ ನ ತಯೋಃ ಪುನರ್ವಿರೋಧಶಙ್ಕೇತೀತಿ ಚೇನ್ನ, ಅತ್ರೈತದ್ವಾराऽವಿರೋಧेऽಪಿ ಸಾಕ್ಷಾದವಿರೋಧಾನುಕ್ತೇಃ ।

ತಯಾರ್ವಿರೋಧೇ ಪ್ರಾಕೃತತ್ವಂ ತನ್ತ್ರಂ, ಬ್ರಹ್ಮ ತು ಪ್ರಾಕೃತಪದಾರ್ಥವ್ಯಾವೃತ್ತಮಿತಿ ಸಮಾಖ್ಯುಕ್ತಾರ್ಥತ್ವೇನ ಪುನರ್ವಿರೋಧ ಶಙ್ಕೇತ್ಯಾನೋಪಪತ್ತೇರಿತ್ಯಾದ್ಯಭಿಪ್ರೇತ್ಯೋಕ್ತಂ – **ಇತ್ಯಾದ್ಯುಕ್ತಮಿತಿ ।**

ಇದು ತಪ್ಪು. ಅಲ್ಪೌಕಸ್ತ್ವ ಹಾಗೂ ಅಣುತ್ವ, ಸರ್ವಗತತ್ವ ಹಾಗೂ ಮಹತ್ತ್ವಗಳು ಒಂದೇ ಆಗಿದ್ದರೆ ನಿಮ್ಮ ಆಕ್ಷೇಪವು ಸಮಂಜಸವಾಗುತ್ತಿತ್ತು. ಆದರೆ ಅಲ್ಪೌಕಸ್ತ್ವ ಹಾಗೂ ಸರ್ವಗತತ್ವಗಳು ಅಣುತ್ವ ಹಾಗೂ

ಮಹತ್ತ್ವಗಳ ಜೊತೆ ಇರುತ್ತವೆ. ಯಾವ ಪದಾರ್ಥವು ಜೊತೆಯಲ್ಲಿರುತ್ತವೋ ಅದು ಆ ಪದಾರ್ಥಕ್ಕಿಂತ ಭಿನ್ನವಾಗಿರಬೇಕು. ಆದ್ದರಿಂದ ಅಲ್ಪೌಕಸ್ತ್ವ ಹಾಗೂ ಸರ್ವಗತತ್ವಗಳ ವಿರೋಧವನ್ನು ಈ ಅಧಿಕರಣದಲ್ಲಿ ಪರಿಹರಿಸಲಾಗಿದೆ. ಅಣುತ್ವ ಹಾಗೂ ಮಹತ್ತ್ವಗಳ ವಿರೋಧವನ್ನು ಅಕ್ಷರಾಧಿಕರಣದಲ್ಲೇ ಮಾಡಲಾಗಿದೆ. ಆದ್ದರಿಂದಲೇ ಸುಧೆಯ ವೈಶೇಷಿಧಿಕರಣದಲ್ಲಿ ''ಅಲ್ಪಾಲ್ಪತರದೇಶಾವಸ್ಥಾನೇಽಲ್ಪಾಲ್ಪತರಪರಿಮಾಣಮ-ವರ್ಜನೀಯಂ'' ಎಂದು ಹೇಳಿದ್ದಾರೆ ಹೊರತು ಎರಡಕ್ಕೂ ಐಕ್ಯವನ್ನು ಹೇಳಿರುವುದಿಲ್ಲ.

ಹೀಗೆ ಇವೆರಡು ಅಲ್ಪೌಕಸ್ತ್ವ, ಸರ್ವಗತತ್ವ ಧರ್ಮಗಳಿಗೆ ಅವಿರೋಧವನ್ನು ಹೇಳುವುದಾದರೆ ಇದರಿಂದ ಆಕ್ಷೇಪ್ಯವಾಗುವ ಅಣುತ್ವ ಮಹತ್ತ್ವಗಳಿಗೂ ಸಹ ವಿರೋಧವನ್ನು ಪರಿಹರಿಸಿದಂತಾಗುತ್ತದೆ. ಪುನಃ ಅಕ್ಷರಾಧಿಕರಣದಲ್ಲಿ ಅಣುತ್ವ ಮಹತ್ತ್ವಗಳ ವಿರೋಧವನ್ನು ಏಕೆ ಪರಿಹರಿಸಬೇಕು ? ಎಂದು ಪ್ರಶ್ನಿಸಬಾರದು. ಪರಂಪರೆಯ ವಿರೋಧವನ್ನು ಪರಿಹರಿಸಿದರೂ ನೇರವಾಗಿ ವಿರೋಧವನ್ನು ಪರಿಹರಿಸದಂತಾಗದ ಕಾರಣ ಅಕ್ಷರಾಧಿಕರಣದ ವಿರೋಧಪರಿಹಾರವು ತಪ್ಪಾಗುವುದಿಲ್ಲ.

ಅಣುತ್ವ ಹಾಗೂ ಮಹತ್ತ್ವಗಳಿಗೆ ವಿರೋಧ ಬರುವುದಕ್ಕೆ ಪ್ರಾಕೃತತ್ವವೇ ಕಾರಣವಾಗಿದೆ. ಆದರೆ ಬ್ರಹ್ಮನು ಪ್ರಾಕೃತಪದಾರ್ಥಗಳಿಂದ ವ್ಯಾವೃತ್ತನಾಗಿದ್ದಾನೆ. ಈ ಬಗೆಯ ಇನ್ನೊಂದು ಸಮಾಧಾನವನ್ನು ಹೇಳುವುದಕ್ಕಾಗಿ ಅಕ್ಷರಾಧಿಕರಣದಲ್ಲಿ ಅಣುತ್ವ ಹಾಗೂ ಮಹತ್ತ್ವಗಳಿಗೆ ವಿರೋಧವನ್ನು ಆಶಂಕಿಸಿ ಸಮಾಧಾನವನ್ನು ಹೇಳಿದ್ದಾರೆ. ಆದ್ದರಿಂದ ಅಕ್ಷರಾಧಿಕರಣದಿಂದ ಸರ್ವಗತತ್ವಾಧಿಕರಣದ ವಿರೋಧ ಪರಿಹಾರಕ್ಕೆ ಗತಾರ್ಥತ್ವ ಶಂಕೆಯು ಬರುವುದಿಲ್ಲ. ಹೀಗೆಯೇ ಇನ್ನು ಅನೇಕ ಯುಕ್ತಿಗಳಿಂದ ವಿರೋಧಪರಿಹಾರದ ಮಾರ್ಗವನ್ನು ಶಿಷ್ಯಂದಿರು ಸ್ವತಃ ಊಹಿಸಿಕೊಳ್ಳಬೇಕು.

गुरुराजीयम् – एवमादित्यश्रुतेः प्रसिद्धादित्यपरत्वं साधकैरुपपाद्य तत्र बाधकं परिहरति – ब्रह्मशब्दस्य चेत्यादि ।।

ಸಾರ

ಆದಿತ್ಯನೇ ಸರ್ವಗತನೆನ್ನಲು ಅನೇಕ ಸಾಧಕಯುಕ್ತಿಗಳನ್ನು ಪೂರ್ವಪಕ್ಷಕಾರರು ಮಂಡಿಸಿ ಈಗ ಭಾಧಕವನ್ನು ಪರಿಹರಿಸಿಕೊಳ್ಳುತ್ತಿದ್ದಾರೆ. ಯಾವ ಶ್ರುತಿಭಾಗದಲ್ಲಿ ಸರ್ವಗತತ್ವವು ಕೇಳಿಸುತ್ತಿದೆಯೋ ಅಲ್ಲಿ ಬ್ರಹ್ಮಶಬ್ದವೇ ಮೊದಲಾದ ವಿಷ್ಣುಲಿಂಗಗಳೂ ಸಹ ಇವೆ. ಇದರ ಬಲದಿಂದ ವಿಷ್ಣುವೇ ಸರ್ವಗತನಾಗುತ್ತಾನೆಂಬುದು ಪೂರ್ವಪಕ್ಷಕಾರರಿಗಿರುವ ದೊಡ್ಡ ಸವಾಲು ? ಅರ್ಭಕೌಕಸ್ತ್ವ ಎಂಬ ಧರ್ಮವೂ ಸಹ ಅದೇ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ಸೂರ್ಯನೇ ಸರ್ವಗತನಾಗಬೇಕು. ಅರ್ಭಕೌಕಸ್ತ್ವ ಎಂಬ ಪ್ರಬಲವಾದ ಒಂದೇ ಯುಕ್ತಿಯಿಂದ ಬ್ರಹ್ಮನ ಲಿಂಗಗಳೆಲ್ಲವನ್ನೂ ಬಾಧಿಸಬೇಕು. ಅರ್ಭಕೌಕಸ್ತ್ವ ಲಿಂಗವನ್ನು ವಿಷ್ಣುವಿನಲ್ಲಿ ಹೇಳಲು ಸಾಧ್ಯವೂ ಇಲ್ಲ. ಆದ್ದರಿಂದ ಸೂರ್ಯ ಅಥವಾ ಸಕಲ ಜೀವರು ಸರ್ವಗತರಾಗುತ್ತಾರೆಂಬ ಪೂರ್ವಪಕ್ಷವು ಉದಯವಾಗುತ್ತದೆ.

ವಿಷ್ಣುವೇ ಸರ್ವಗತನೆಂದು ಸಿದ್ಧಾಂತ

तात्पर्यचन्द्रिका

सिद्धान्तस्तु –

''संवत्सरो वै प्रजापतिः'' ''तत्र सवंत्सरं नाम ब्रह्माणम्'' इत्यादिश्रुतिस्मृतिषु उत्तराधिकरणभाष्ये वक्ष्यमाणरीत्या संवत्सरशब्दस्य चतुर्मुखे प्रसिद्धत्वात्, श्रौतप्रसिद्धेश्च बलवत्त्वात् पूर्ववाक्ये च ''महापुरुष इति यमवोचाम संवत्सर एव'' इति संवत्सरे महापुरुषपदप्रयोगाच्च संवत्सरशब्दस्य चतुर्मुखपरत्वात्, तस्मादुत्तमत्वरूपस्य च तत्सारत्वस्य विष्णावेव सम्भवात्,

ಅನುವಾದ - ಸಂವತ್ಸರ ಸಾರತ್ವವು ಆದಿತ್ಯಲಿಂಗವಲ್ಲ ಹೊರತು ವಿಷ್ಣುಲಿಂಗವೇ ಆಗಿದೆ. ಏಕೆಂದರೆ ಸಂವತ್ಸರ ಶಬ್ದವು ಒಂದು ವರ್ಷವೆಂಬ ಕಾಲವಾಚಕವೇ ಅಲ್ಲ, ಹೊರತಾಗಿ ಚತುರ್ಮುಖ-ವಾಚಕವಾಗಿದೆ -

''ಸಂವತ್ಸರೋ ವೈ ಪ್ರಜಾಪತಿಃ'' ''ತತ್ರ ಸಂವತ್ಸರಂ ನಾಮ ಬ್ರಹ್ಮಾಣಮ್'' ಇದೇ ಶ್ರುತಿಗಳಲ್ಲಿ ಹಾಗೂ ಸ್ಮೃತಿಗಳಲ್ಲಿ ಚತುರ್ಮುಖನನ್ನೇ ಸಂವತ್ಸರನೆಂದು ಕರೆಯಲಾಗಿದೆ. ಮತ್ತು ಮುಂದಿನ ಅಧಿಕರಣದ ಭಾಷ್ಯದಲ್ಲಿಯೂ ಹೇಳುವಂತೆ ಚತುರ್ಮುಖನಲ್ಲಿಯೇ ಸಂವತ್ಸರ ಶಬ್ದವು ಪ್ರಸಿದ್ಧವಾಗಿದೆ. ಲೌಕಿಕಪ್ರಸಿದ್ಧಿಯು ಕಾಲದಲ್ಲಿರಬಹುದು ಶ್ರುತಿಪ್ರಸಿದ್ಧಿಯು ಲೌಕಿಕ ಪ್ರಸಿದ್ಧಿಗಿಂತ ಬಲಿಷ್ಠವಾದ್ದರಿಂದ ಚತುರ್ಮುಖನೇ ಸಂವತ್ಸರನೆಂದು ತಿಳಿಯಬೇಕು.

ಮತ್ತು ಐತರೇಯೋಪನಿಷತ್ತಿನ ಹಿಂದಿನ ವಾಕ್ಯದಲ್ಲಿಯೇ 'ಮಹಾಪುರುಷ ಇತಿ ಯಮವೋಚಾಮ ಸಂವತ್ಸರ ಏವ'' ಎಂಬುದಾಗಿ ಸಂವತ್ಸರದಲ್ಲಿ 'ಮಹಾಪುರುಷ' ಎಂಬ ಪದವನ್ನು ಪ್ರಯೋಗಿಸಲಾಗಿದೆ. ಕಾಲವಾಚಕವೆಂದು ಹೇಳಿದರೆ ಕಾಲವನ್ನು ಮಹಾಪುರುಷವೆಂದು ಹೇಗೆ ಹೇಳಲು ಸಾಧ್ಯ ? ಆದ್ದರಿಂದ ಸಂವತ್ಸರ ಶಬ್ದವು ಚತುರ್ಮುಖಪರವೆಂದೇ ಹೇಳಬೇಕು.

ಆದ್ದರಿಂದ ''ಸಂವತ್ಸರಸಾರ'' ಎಂಬ ಪದಕ್ಕೆ ಸಂವತ್ಸರನೆನೆಸಿದ ಚತುರ್ಮುಖಬ್ರಹ್ಮನಿಗಿಂತ ವಿಷ್ಣು ಶ್ರೇಷ್ಠವಾಗಿದ್ದಾನೆಂದು ಅರ್ಥ. ಸಾರ ಎಂಬ ಪದಕ್ಕೆ ಉತ್ತಮ ಎಂಬರ್ಥವು ಪ್ರಸಿದ್ಧವೇ ಆಗಿದೆ. ಚತುರ್ಮುಖಬ್ರಹ್ಮನಿಗಿಂತ ಉತ್ತಮತ್ವವು ವಿಷ್ಣುನಲ್ಲಿ ಬರುತ್ತದೆ ಹೊರತು ಆದಿತ್ಯನಲ್ಲಿ ಬರುವುದಿಲ್ಲ.

प्रकाशः –

अत्र पृथिव्यादिसर्वगतस्य विष्णुत्वे ब्रह्मशब्दोऽश्रुतत्वादिलिङ्गं च हेतूकृतम् । तच्चादित्यादिप्रापकवशादमुख्यार्थमिति न विष्णुप्रापकमिति यदुक्तं पूर्वपक्षिणा, तत्राऽऽदित्यप्रापकत्वेनोक्तानां भगवत्येव युक्तत्वेन आदित्यप्रापकत्वायोगात् तद्बाधाभावेन ब्रह्मशब्दादेरमुख्यार्थत्वायोगान्मुख्यब्रह्मशब्दादिना सर्वगतो विष्णुरेवेति भावेन सिद्धान्तयति – **सिद्धान्तस्त्विति ।**

तत्र यदुक्तं संवत्सरसारत्वादिलिङ्गैः श्रुतेः प्रसिद्धादित्यपरत्वमिति, तत्राऽऽद्यं लिङ्गं तावन्नेत्याह – **संवत्सर इति विष्णावेव सम्भवादित्यन्तेन ।** अत्र पञ्चम्यन्तप्रधानहेतूनां 'बाधकभावेन' इति वक्ष्यमाणसाध्येनान्वयः । संवत्सरशब्दस्य विरिञ्चिपरत्वे श्रौतस्मार्तप्रसिद्धिं महापुरुषपदप्रयोगं च साधकद्वयमाह – **संवत्सरो वा इत्यादिना ।**

ವಿವರಣೆ - ಪೃಥಿವಿಯೇ ಮೊದಲಾದ ಸಕಲಪದಾರ್ಥಗಳಲ್ಲಿ ವಿಷ್ಣು ವ್ಯಾಪ್ತನಾಗಿದ್ದಾನೆಂದು ತಿಳಿಸಲು ಬ್ರಹ್ಮಶಬ್ದ ಹಾಗೂ ಅಶ್ರುತತ್ವ ಮೊದಲಾದ ಲಿಂಗಗಳೇ ಸಿದ್ಧಾಂತದಲ್ಲಿ ಹೇತುಗಳಾಗಿವೆ. ಆದರೆ ಇಂತಹ ಸಿದ್ಧಾಂತಪ್ರಾಪಕಹೇತುವನ್ನು ಆದಿತ್ಯಪ್ರಾಪಕಹೇತುವಿನಿಂದ ಪೂರ್ವಪಕ್ಷಿಯು ಗೌಣಾರ್ಥ ಮಾಡಿದ್ದಾನೆ. ಅಮುಖ್ಯಾರ್ಥ ಮಾಡಿದಾಗ ಬ್ರಹ್ಮಶಬ್ದಾದಿ ಸಿದ್ಧಾಂತ ಹೇತುಗಳು ವಿಷ್ಣುಪ್ರಾಪಕಗಳೇ ಆಗುವುದಿಲ್ಲ. ಈ ಕಾರಣಕ್ಕಾಗಿ ಹಿಂದೆ ಪೂರ್ವಪಕ್ಷಿಯು ನಿರೂಪಿಸಿದ ಆದಿತ್ಯಪ್ರಾಪಕಲಿಂಗಗಳೆಲ್ಲವನ್ನು ಭಗವಂತನಲ್ಲಿಯೇ ಸಮರ್ಥಿಸಬೇಕು. ಆದಿತ್ಯನಲ್ಲಿ ಹೇಳಲಟ್ಟ ಲಿಂಗಗಳೆಲ್ಲವು ಆದಿತ್ಯನಲ್ಲಿಲ್ಲದೆ ವಿಷ್ಣುವಿನಲ್ಲಿಯೇ ಇರುವುದರಿಂದ ಇಂತಹ ಲಿಂಗಗಳಿಂದ ಬ್ರಹ್ಮಶಬ್ದವೇ ಮೊದಲಾದ ಸಿದ್ಧಾಂತಲಿಂಗಗಳನ್ನು ಬಾಧಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಆದಿತ್ಯನಲ್ಲಿ ಗೌಣಾರ್ಥವನ್ನಾಗಿ ಸ್ವೀಕರಿಸಲು ಸಾಧ್ಯವಿಲ್ಲ. ಆದ್ದರಿಂದ ಸೂತ್ರಕಾರರು ಹೇಳಿದ ಬ್ರಹ್ಮಶಬ್ದವೇ ಮೊದಲಾದ ಲಿಂಗಗಳು ನಿರವಕಾಶವಾಗಿ ಬಲಿಷ್ಠವಾಗಿವೆ. ಈ ಲಿಂಗಗಳಿಂದ ವಿಷ್ಣುವೇ ಸರ್ವಗತನೆಂದು ಸಿದ್ಧಾಂತ ಮಾಡಬಹುದೆಂಬ ಅಭಿಪ್ರಾಯದಿಂದ 'ಸಿದ್ಧಾಂತಸ್ತು' ಇತ್ಯಾದಿ ವಾಕ್ಯಗಳು ಹೊರಟಿವೆ. ಆದ್ದರಿಂದ ಪ್ರಕೃತ ಗ್ರಂಥಕಾರರು ಸೂತ್ರದಲ್ಲಿ ನಿರೂಪಿಸಿದ ಸಿದ್ಧಾಂತಲಿಂಗಗಳನ್ನು ಸಮರ್ಥನೆ ಮಾಡದೆ ಆದಿತ್ಯಪ್ರಾಪಕಲಿಂಗಗಳನ್ನು ವಿಷ್ಣುವಿನಲ್ಲಿ ಸಮರ್ಥಿಸುವುದು ಸೂತ್ರಕ್ಕೆ ಅನನುಗುಣವಾಗುತ್ತದಲ್ಲವೇ? ಎಂಬ ಪ್ರಶ್ನೆಗೆ ಅವಕಾಶವಿಲ್ಲ.

ಪೂರ್ವಪಕ್ಷ ಮಾಡುವ ಸಂದರ್ಭದಲ್ಲಿ ಪ್ರಬಲವಾದ ಮೂರು ಪೂರ್ವಪಕ್ಷ ಲಿಂಗಗಳನ್ನು ಸಮರ್ಥಿಸಿದ್ದರು. ಅವುಗಳಲ್ಲಿ ಸಂವತ್ಸರಸಾರತ್ವವೆಂಬ ಮೊದಲನೆಯ ಲಿಂಗವು ಆದಿತ್ಯಪ್ರಾಪಕವಲ್ಲವೆಂಬುದಾಗಿ 'ಸಂವತ್ಸರ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದಾರೆ. ''ವಿಷ್ಣೋವೇವ ಸಂಭವಾತ್'' ಎಂಬ ವಾಕ್ಯದ ತನಕ ಈ ವಿಚಾರವು ನಿರೂಪಿತವಾಗಿದೆ.

ಗ್ರಂಥಕಾರರು ಪಂಚಮ್ಯಂತವಾದ ಪ್ರಧಾನ ಹೇತುಗಳನ್ನು ಅನೇಕ ಹೇಳಿದ್ದಾರೆ. ಇವುಗಳಿಗೆಲ್ಲ ಮುಂದೆ ಬರುವ 'ಬಾಧಕಭಾವೇನ' ಎಂಬಲ್ಲಿ ಅನ್ವಯ ಮಾಡಬೇಕು. 'ಸಂವತ್ಸರ' ಶಬ್ದವು ಚತುರ್ಮುಖಪರವಾಗಿದೆ ಎಂಬ ವಿಷಯದಲ್ಲಿ ಶ್ರುತಿಪ್ರಸಿದ್ಧಿ ಹಾಗೂ ಸ್ಮೃತಿಪ್ರಸಿದ್ಧಿಯನ್ನು ತೋರಿಸುತ್ತಾ 'ಮಹಾಪುರುಷ' ಎಂಬ ಪದಪ್ರಯೋಗವನ್ನೂ ಸಹ ತೋರಿಸುತ್ತಾ ಎರಡು ಸಾಧಕಗಳನ್ನು 'ಸಂವತ್ಸರೋ ವಾ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಕಾಶಃ – ಆದಿಪದೇನ ''ಪ್ರಜಾಪತಿಃ ಪ್ರಜಾಃ ಸೃಷ್ಟಾ ವ್ಯಸೃಂಸತ ಸಂವತ್ಸರೋ ಬ್ರಹ್ಮಾ ವಿಶ್ವಃ ಕತಮಃ ಸ್ವಯಮ್ಭೂಃ ಪ್ರಜಾಪತಿಸ್ಸಂವತ್ಸರಃ'' ಇತ್ಯಾದಿಶ್ರುತಿಃ,

ತತಸ್ಸಂವತ್ಸರೋ ನಾಮ ಬ್ರಹ್ಮಾ ಸಮಭವತ್ಪ್ರಭೋಃ ।

ಇತ್ಯಾದಿಸ್ಮೃತಿಶ್ಚ ಗೃಹ್ಯತೇ ।

ನನು ಬ್ರಹ್ಮಣಿ ಶ್ರೌತಪ್ರಸಿದ್ಧಿರಿವ, ಕಾಲವಿಶೇಷೇ ಲೋಕಪ್ರಸಿದ್ಧಿರಪ್ಯಸ್ತೀತಿ ಚೇನ್ನ, ''ಶಾಸ್ತ್ರಸ್ಥಾ ವಾ ತನ್ನಿಮಿತ್ತತ್ವಾತ್'' ಇತಿ ಯವವರಾಹಾಧಿಕರಣನ್ಯಾಯೇನ ಶ್ರೌತಪ್ರಸಿದ್ಧೇರೇವಾನ್ತರಙ್ಗ-ತ್ವೇನಾವಿಷ್ಕೃತತ್ವೇನ ಚ ಶಾಸ್ತ್ರೇ ಗ್ರಾಹ್ಯತ್ವೇನಾಜ್ಞಪ್ರಸಿದ್ಧಿತೋ ಬಲವತ್ತ್ವಾದಿತ್ಯಾಹ – ಶ್ರೌತೇತಿ ।

ಗ್ರಂಥದಲ್ಲಿರುವ ಆದಿಪದದಿಂದ ''ಪ್ರಜಾಪತಿಃ ಪ್ರಜಾಃ ಸೃಷ್ಟಾ ವ್ಯಸೃಂಸತ ಸಂವತ್ಸರೋ ಬ್ರಹ್ಮಾ ವಿಶ್ವಃ ಕತಮಃ ಸ್ವಯಂಭೂಃ, ಪ್ರಜಾಪತಿಸ್ಸಂವತ್ಸರಃ'' ಇತ್ಯಾದಿ ಶ್ರುತಿಯನ್ನು ಮತ್ತು ''ಶತಸ್ಸಂವತ್ಸರೋ ನಾಮ'' ಇತ್ಯಾದಿ ಸ್ಮೃತಿಯನ್ನೂ ಸಹ ಸ್ವೀಕರಿಸಬೇಕು.

ಚತುರ್ಮುಖಬ್ರಹ್ಮನಲ್ಲಿ ಸಂವತ್ಸರಶಬ್ದಕ್ಕೆ ಶ್ರುತಿಪ್ರಸಿದ್ಧಿಯಿರುವಂತೆ ಕಾಲವಿಶೇಷದಲ್ಲಿ ಲೋಕಪ್ರಸಿದ್ಧಿಯಿದೆ ಆಲ್ಲವೇ? ಎಂಬ ಶಂಕೆಗೆ ಆವಕಾಶವಿಲ್ಲ. ಏಕೆಂದರೆ ''ಶಾಸ್ತ್ರಸ್ಥಾ ವಾ ತನ್ನಿಮಿತ್ತತ್ವಾತ್'' ಎಂಬ ಯವವರಾಹಾಧಿಕರಣದ ನ್ಯಾಯದಂತೆ ಲೋಕಪ್ರಸಿದ್ಧಿಗಿಂತ ಶ್ರೌತಪ್ರಸಿದ್ಧಿಯೇ ಅಂತರಂಗವಾಗಿದೆ. ಮತ್ತು ಅವಿಪ್ಲುತವಾಗಿರುತ್ತದೆ. ಅಂದರೆ ಲೌಕಿಕಪ್ರಸಿದ್ಧಿಯು ಕೆಲವೊಮ್ಮೆ ತಪ್ಪಾಗಬಹುದು, ಆದರೆ ಶ್ರೌತಪ್ರಸಿದ್ಧಿಯು ಎಂದೂ ತಪ್ಪಾಗುವುದಿಲ್ಲ. ನಿಯಮೇನ ಯಥಾರ್ಥವೇ ಆಗಿರುತ್ತದೆ. ಆದ್ದರಿಂದ ಆಗ್ನಿಪ್ರಸಿದ್ಧಿಗಿಂತ ಶ್ರೌತಪ್ರಸಿದ್ಧಿಯು ಬಲಿಷ್ಠವಾದ್ದರಿಂದ 'ಶ್ರೌತ' ಇತ್ಯಾದಿ ವಾಕ್ಯವು ಹೊರಟಿವೆ.

ಪ್ರಕಾಶಃ – ಕಾಲಪರತ್ವೇ ಮಹಾಪುರುಷಪದಾಯೋಗಾತ್,

ಸಂವತ್ಸರಾಭಿಮಾನೀ ತು ಬ್ರಹ್ಮೈವ ಹಿ ಮಹಾಪುಮಾನ್ ।।

ಇತಿ ಸ್ಮೃತಿಸಿದ್ಧತ್ವಾತ್ । ತಸ್ಮಾದಿತಿ । ''ಬ್ರಹ್ಮಾ ದೇವಾನಾಂ ಪ್ರಥಮಸ್ಸಮ್ಬಭೂವ'' ಇತ್ಯಾದಿನಾ ಸರ್ವದೇವೋತ್ತಮತ್ವೇನೋಕ್ತಚತುರ್ಮಖಸಾರತ್ವಂ ವಿಷ್ಣಾವೇವೇತ್ಯರ್ಥಃ ।

'ಸಂವತ್ಸರ' ಶಬ್ದವು ಕಾಲಪರವಾದರೆ ಏತರೇಯದಲ್ಲೇ ಹೇಳಿರುವ ಮಹಾಪುರುಷವೆಂಬ ಪದವು ತಪ್ಪಾಗುತ್ತದೆ. ಏಕೆಂದರೆ

ಸಂವತ್ಸರಾಭಿಮಾನೀ ತು ಬ್ರಹ್ಮೈವ ಹಿ ಮಹಾಪುಮಾನ್ ॥

ಎಂಬ ಶ್ರುತಿಯಂತೆ 'ಮಹಾಪುರುಷ' ಪದವು ಚತುರ್ಮುಖನಲ್ಲಿಯೇ ಪ್ರಸಿದ್ಧವಾಗಿದೆ.

'ತಸ್ಮಾತ್' ಎಂದು ಗ್ರಂಥದಲ್ಲಿದೆ. ಇಂತಹ ಚತುರ್ಮುಖನಿಗಿಂತ ಉತ್ತಮತ್ವವು ಪರಮಾತ್ಮನಲ್ಲಿಯೇ ಬರುತ್ತದೆಂದು ಅಭಿಪ್ರಾಯ. ಏಕೆಂದರೆ

''ಬ್ರಹ್ಮಾ ದೇವಾನಾಂ ಪ್ರಥಮಸ್ಸಂಬಭೂವ''

ಇತ್ಯಾದಿಯಾಗಿ ಸಕಲದೇವತೆಗಳಿಗಿಂತ ಉತ್ತಮನೆಂದು ಹೇಳಲ್ಪಟ್ಟ ಚತುರ್ಮುಖನಿಗಿಂತ ಉತ್ತಮತ್ವವು ವಿಷ್ಣುವಿನಲ್ಲಿಯೇ ಬರುತ್ತದೆ.

गुरुराजीयम् – अभ्यधिकाशङ्काविघटनक्रममालम्ब्य सौत्रक्रमोल्लङ्घनेन सिद्धान्तमाह – सिद्धान्तस्त्विति ।। आदित्यश्रुतेः प्रसिद्धादित्यपरत्वं उपोद्बलकत्वेनोक्तसंवत्सराधिपतित्वरूपं लिङ्गं ब्रह्मणि सावकाशयति – संवत्सर इति ।।

ಸಾರ

ಸಿದ್ಧಾಂತವು ಪ್ರಾರಂಭವಾಗುತ್ತಿದೆ. ಸೂತ್ರಕಾರರು ಹೇಳಿದ ಸಿದ್ಧಾಂತಲಿಂಗಗಳನ್ನು ಸಮರ್ಥಿಸುವುದಕ್ಕಿಂತ ಮೊದಲು ಪೂರ್ವಪಕ್ಷಪ್ರಾಪಕಲಿಂಗಗಳನ್ನು ವಿಷ್ಣುವಿನಲ್ಲಿ ಸಮರ್ಥಿಸುತ್ತಾರೆ.

ಪೂರ್ವಪಕ್ಷ ಮಾಡುವಾಗ ಆದಿತ್ಯನೇ ಸರ್ವಗತನೆನ್ನಲು ಸಂವತ್ಸರಸಾರತ್ವ, ಆದಿತ್ಯನಲ್ಲಿ ಪ್ರಸಿದ್ಧವಾದ ಯಚ್ಛಬ್ದೋಪಬಂಧ ಹಾಗೂ ಸರ್ವಪುರುಷಾಭಮುಖ್ಯ ಎಂಬುದಾಗಿ ಮೂರು ಹೇತುಗಳನ್ನು ಹೇಳಿದ್ದರು. ಇವುಗಳಲ್ಲಿ ಸಂವತ್ಸರಸಾರತ್ವವು ಆದಿತ್ಯನಲ್ಲಿ ಬರುವುದಿಲ್ಲ ಹೊರತಾಗಿ ವಿಷ್ಣುವಿನಲ್ಲಿಯೇ ಬರುತ್ತದೆಂದು ಇಲ್ಲಿ ಸಮರ್ಥಿಸುತ್ತಿದ್ದಾರೆ.

೩೬೦ ದಿವಸಗಳೆಂಬ ಒಂದು ವರ್ಷವು ಸಂವತ್ಸರಶಬ್ದದ ಅರ್ಥವಲ್ಲ, ಹೊರತಾಗಿ ಚತುರ್ಮುಖಬ್ರಹ್ಮನೆಂದು ಅರ್ಥ. 'ಸಂವತ್ಸರನಾಮ ಬ್ರಹ್ಮಾಣಂ'' ಇತ್ಯಾದಿಯಾಗಿ ಸ್ಮೃತಿಶ್ರುತಿಗಳೆಲ್ಲವು ಚತುರ್ಮುಖಬ್ರಹ್ಮನನ್ನೇ ಸಂವತ್ಸರ ಎನ್ನುತ್ತಿವೆ. ಐತರೇಯೋಪನಿಷತ್ತಿನಲ್ಲಿಯೂ ಸಹ ಮಹಾಪುರುಷ ಎಂಬುದಾಗಿ ಚತುರ್ಮುಖನನ್ನೇ ಸಂವತ್ಸರನೆಂದು ಹೇಳಿರುವುದು ಕಾಣಿಸುತ್ತಿದೆ. ಆದ್ದರಿಂದ ಸಂವತ್ಸರ ಸಾರನೆಂದರೆ ಸಂವತ್ಸರ ಎನಿಸಿದ ಚತುರ್ಮುಖನಿಗಿಂತ ಪರಮಾತ್ಮನು ಉತ್ತಮನಾಗಿದ್ದಾನೆಂದು ತಿಳಿಯಬೇಕು.

ಉಳಿದೆರಡು ಪೂರ್ವಪಕ್ಷ ಯುಕ್ತಿಗಳು ಬ್ರಹ್ಮನಲ್ಲೇ ಇವೆ

ತಾತ್ಪರ್ಯಚಂದ್ರಿಕಾ

ಯಚ್ಛಬ್ದೋಪಬನ್ಧಸ್ಯ ''ಸ ಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯೇ'' ಇತ್ಯಾದಾವಿವ ಶ್ರುತ್ಯಾದಿಪ್ರಸಿದ್ಧೇ ಬ್ರಹ್ಮಣ್ಯಪಿ ಸಮ್ಭವಾತ್,

''ಆದಿತ್ಯೋ ಜ್ಯೋತಿರಾದಿತ್ಯಃ'' ಇತ್ಯಾದೌ ಚ ಬ್ರಹ್ಮಣ್ಯಪ್ಯಾದಿತ್ಯಶಬ್ದಸ್ಯ ಪ್ರಸಿದ್ಧೇಃ,

''ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ'' ಇತ್ಯನೇನ ಚ 'ಪ್ರತಿಗೃಹಂ ಕೂಪಃ' ಇತ್ಯನೇನೇವ ಸರ್ವಪುರುಷಗತತ್ವಸ್ಯೈವೋಕ್ತತ್ವೇನ ತದಾಭಿಮುಖ್ಯೋಕ್ತ್ಯಭಾವಾತ್, ಭಾವೇ ವಾ ಆದಿತ್ಯಮಣ್ಡಲಸ್ಯೈವ ಪುರುಷಾಭಿಮುಖ್ಯದರ್ಶನಾತ್ ಅದರ್ಶನೇऽಪಿ ದೇವತಾಯಾಸ್ತದಙ್ಗೀಕಾರೇ ಚ ಈಶ್ವರೇऽಪಿ ತತ್ಸಮ್ಭವಾತ್ ।

ಅನುವಾದ - 'ಯಚ್ಛಬ್ದ' ಪ್ರಯೋಗವೂ ಸಹ ಶ್ರುತ್ಯಾದಿ ಪ್ರಸಿದ್ಧನಾದ ಬ್ರಹ್ಮನಲ್ಲಿಯೇ ಕೂಡುತ್ತದೆ. ಶ್ರೌತಪ್ರಯೋಗವನ್ನನುಸರಿಸಿ ಯಚ್ಛಬ್ದಪ್ರಯೋಗವನ್ನು ಕೂಡಿಸುವುದು 'ಸ ಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯೇ' ಎಂಬಲ್ಲಿ ಕಂಡಿದೆ. (ಪುರುಷೇ = ಅಧಮೇ ಜೀವನಲ್ಲಿ, ಆದಿತ್ಯೇ = ಉತ್ತಮಜೀವನಲ್ಲಿ ಯಾವ ಭಗವದ್ರೂಪವಿದೆಯೋ ಆ ರೂಪಗಳಲ್ಲಿ ತಾರತಮ್ಯವಿಲ್ಲ.) ಈ ಶ್ರುತಿಯಲ್ಲಿರುವ 'ತತ್' ಮತ್ತು 'ಯತ್' ಪದಗಳಿಂದ ಬ್ರಹ್ಮನನ್ನೇ ಸ್ವೀಕರಿಸಲಾಗಿದೆ. ವಸ್ತುತಃ ಪರಮಾತ್ಮನು ಆಪ್ರಸಿದ್ಧನಾಗಿದ್ದರೂ ಶ್ರುತ್ಯಾದಿಪ್ರಸಿದ್ಧನಾದ್ದರಿಂದ ಇಲ್ಲಿ 'ಯತ್' ಶಬ್ದದಿಂದ ಪರಮಾತ್ಮನನ್ನೇ ಸ್ವೀಕರಿಸಲಾಗಿದೆ. ಆದರಂತೆ ಪ್ರಕೃತದಲ್ಲಿಯೂ ಶ್ರುತಿಪ್ರಸಿದ್ಧನಾದ ಬ್ರಹ್ಮನನ್ನೇ 'ಯತ್' ಶಬ್ದದಿಂದ ವಿವಕ್ಷಿಸಬಹುದು.

ಆದಿತ್ಯಶಬ್ದವಂತೂ ವಿಷ್ಣುವಿನಲ್ಲಿಯೇ ಪ್ರಸಿದ್ಧವಾಗಿದೆ. 'ಆದಿತ್ಯೋ ಜ್ಯೋತಿರಾದಿತ್ಯಃ ಸ ವಿಷ್ಣುರ್ಗತಿಸತ್ತಮಃ' ಎಂಬ ವಿಷ್ಣುಸಹಸ್ರನಾಮದ ಆಧಾರದಿಂದ ಇದು ಸ್ಪಷ್ಟವಾಗುತ್ತದೆ.

ಪ್ರತಿಪುರುಷಾಭಿಮುಖ್ಯವೆಂಬ ಮೂರನೆಯ ಲಿಂಗವೂ ಸಹ ವಿಷ್ಣುವಿನಲ್ಲಿಯೇ ಬರುತ್ತದೆ. ಅದು ಹೀಗೆ - 'ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ'' ಎಂಬ ವಾಕ್ಯದಿಂದ ಸಕಲ ಪುರುಷರ ಆಭಿಮುಖ್ಯ ಹೇಳಲ್ಪಟ್ಟಿಲ್ಲ, ಹೊರತಾಗಿ ''ಪ್ರತಿಗೃಹಂ ಕೂಪಃ'' ಎಂಬ ಮಾತಿನಿಂದ ಸಕಲ ಪುರುಷರ ಮನೆಯಲ್ಲಿ ಕೂಪವಿದೆಯೆಂದು ಹೇಳಿದಂತೆ ಸಕಲಪುರುಷರಲ್ಲಿ ಭಗವಂತನು ಇದ್ದಾನೆಂದಷ್ಟೇ ಅರ್ಥ.

ಒಂದು ವೇಳೆ ಆಭಿಮುಖ್ಯವೆಂಬರ್ಥವನ್ನೇ ಹೇಳುವುದಾದರೆ ಆದಿತ್ಯಮಂಡಲಕ್ಕಷ್ಟೇ ಸಕಲಪುರುಷರ ಆಭಿಮುಖ್ಯವನ್ನು ಹೇಳಬೇಕು. ಸೂರ್ಯಮಂಡಲದಲ್ಲಿರುವ ಸೂರ್ಯನು ಕಾಣಿಸದಿದ್ದರೂ ಆಭಿಮುಖ್ಯವನ್ನು ಸೂರ್ಯನಿಗೇ ಹೇಳುವುದಾದರೆ ಈಶ್ವರನಿಗೂ ಸಹ ಅಂತಹ

ಆಭಮುಖ್ಯವನ್ನು ಹೇಳಬಹುದು. ಏಕೆಂದರೆ ಸೂರ್ಯಮಂಡಲದಲ್ಲಿ ಸೂರ್ಯನು ಹೇಗೆ ಇದ್ದಾನೋ ಅದರಂತೆ ನಾರಾಯಣನೂ ಸಹ ಇರುತ್ತಾನೆ.

ಕಠಿಣಪದಾರ್ಥ

ಯಚ್ಛಬ್ದೋಪಬಂಧಸ್ಯ = ಯತ್ ಶಬ್ದಾರ್ಥ ಗ್ರಹಣವೆಂಬ ಲಿಂಗಕ್ಕೆ, ಪ್ರಸಿದ್ಧೇಃ = ವಿಷ್ಣುಸಹಸ್ರನಾಮದಲ್ಲಿ ಪ್ರಸಿದ್ಧವಾಗಿದೆ. ಪ್ರತಿಗೃಹಂ = ಗೃಹೇ ಗೃಹೇ ಇತಿ ಪ್ರತಿಗೃಹಂ ಎಂದು ವಿಗ್ರಹ. ಪ್ರತಿಯೊಂದು ಮನೆಗಳಲ್ಲಿ ಎಂದರ್ಥ. ಭಾವೇವಾ = ಆಭಮುಖ್ಯವೆಂಬರ್ಥವನ್ನು ಒಪ್ಪಿದರೂ ಸಹ. ತದಂಗೀಕಾರೇ = ಸೂರ್ಯನಿಗೆ ಆಭಮುಖ್ಯವನ್ನು ಅಂಗೀಕರಿಸಿದರೆ.

ಪ್ರಕಾಶಃ – यच्छब्दोपबन्धरूपलिङ्गं चान्यथयति – यच्छब्देति । 'पुरुषे' जीवे । 'आदित्ये' देवातायां च । तत्र लोकप्रसिद्धस्य कस्यचिदभावेऽपि श्रुत्यादिसिद्धस्य हरेरेव ग्रहणं, तद्वदित्यर्थः ।

ವಿವರಣೆ - 'ಯಚ್ಛಬ್ದೋಪಬಂಧ' ಎಂಬ ಎರಡನೇ ಪೂರ್ವಪಕ್ಷವನ್ನು ವಿಷ್ಣುವಿನಲ್ಲಿ ಸಮರ್ಥಿಸುವುದಕ್ಕಾಗಿ 'ಯಚ್ಛಬ್ದ' ಇತ್ಯಾದಿ ವಾಕ್ಯವು ಹೊರಟಿದೆ. 'ಪುರುಷೇ'' ಎಂದರೆ ಜೀವನಲ್ಲಿ ಎಂದರ್ಥ. 'ಆದಿತ್ಯೇ'' ಎಂದರೆ ದೇವತೆಯಲ್ಲಿ ಎಂದರ್ಥ. 'ಸ ಯಚ್ಚಾಯಂ' ಎಂಬ ಶ್ರುತಿಯಲ್ಲಿ ಲೋಕಪ್ರಸಿದ್ಧನಾದ ಯಾರೊಬ್ಬನನ್ನೂ ವಿವಕ್ಷಿಸದೆ ಶ್ರುತ್ಯಾದಿಪ್ರಸಿದ್ಧನಾದ ಶ್ರೀಹರಿಯನ್ನೇ ಹೇಗೆ ವಿವಕ್ಷಿಸಿದ್ದಾರೋ ಆದರಂತೆ ಎಂದು ತಿಳಿಯಬೇಕು.

ಪ್ರಕಾಶಃ – ननु तत्र ''य आत्मनि तिष्ठन्, य आदित्ये तिष्ठन्'' इत्यादौ पुरुषादित्यान्तस्थ्यः प्रसिद्धः । प्रकृते कथमादित्यत्वेन हरिः प्रसिद्धः ? इत्यत आह – आदित्य इति ।

आदित्यो ज्योतिरादित्यः स विष्णुर्गतिसत्तमः ।

इति सहस्रनामसु विष्णौ प्रयोगादित्यर्थः ।

'ಯಚ್ಛಬ್ದ' ಪ್ರಯೋಗವನ್ನು ವಿಷ್ಣುವಿನಲ್ಲಿ ಹೇಳಲಾಗದು. ಏಕೆಂದರೆ ''ಯ ಆತ್ಮನಿ ತಿಷ್ಠನ್, ಯ ಆದಿತ್ಯೇ ತಿಷ್ಠನ್'' ಎಂಬಲ್ಲಿ ಪುರುಷ ಹಾಗೂ ಆದಿತ್ಯರಲ್ಲಿ ಅಂತಸ್ಥನಾಗಿ ಶ್ರೀಹರಿಯು ಪ್ರಸಿದ್ಧನಾದ್ದರಿಂದ 'ಸ ಯಶ್ಚಾಯಂ' ಎಂಬ ಶ್ರುತಿಯಲ್ಲಿ ವಿಷ್ಣುವನ್ನೇ ವಿವಕ್ಷಿಸಬಹುದು. ಆದರೆ ಪ್ರಕೃತ 'ಯಶ್ಚಾಸಾವಾದಿತ್ಯೇ' ಎಂಬಲ್ಲಿ ಶ್ರೀಹರಿಯು ಆದಿತ್ಯನೆಂದು ಪ್ರಸಿದ್ಧನಾಗಿಲ್ಲ. ಆದ್ದರಿಂದ 'ಸಯಚ್ಛಾಯಂ' ಎಂಬ ದೃಷ್ಟಾಂತ ವಾಕ್ಯದಲ್ಲಿ 'ಯತ್' ಶಬ್ದದಿಂದ ಶ್ರೀಹರಿಯನ್ನು ವಿವಕ್ಷಿಸಬಹುದು. ಆದರೆ 'ಯಶ್ಚಾಸಾವಾದಿತ್ಯೇ' ಎಂಬ ದಾರ್ಷ್ಟಾಂತಿಕದಲ್ಲಿ ಶ್ರೀಹರಿಯನ್ನು ವಿವಕ್ಷಿಸಲು ಸಾಧ್ಯವಿಲ್ಲವಲ್ಲವೇ? ಈ ಪ್ರಶ್ನೆಗೆ 'ಆದಿತ್ಯಃ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಆದಿತ್ಯೋ ಜ್ಯೋತಿರಾದಿತ್ಯಃ ಸ ವಿಷ್ಣುರ್ಗತಿಸತ್ತಮಃ' ಎಂಬುದಾಗಿ

ವಿಷ್ಣುಸಹಸ್ರನಾಮದಲ್ಲಿ ಆದಿತ್ಯಶಬ್ದವನ್ನು ವಿಷ್ಣುವಿನಲ್ಲಿ ಪ್ರಯೋಗಿಸಿದ್ದಾರೆ. ಈ ಸ್ಮೃತಿಯ ಆಧಾರದಿಂದ 'ಯಶ್ಚಾವಾದಿತ್ಯೇ' ಎಂಬಲ್ಲಿ 'ಯತ್' ಶಬ್ದದಿಂದ ವಿಷ್ಣುವನ್ನೇ ವಿವಕ್ಷಿಸಬೇಕು.

ಪ್ರಕಾಶಃ – ನನ್ವನಾದೌ ವೇದೇ ಕಥಂ ಸಾದಿಪೌರುಷೇಯಗ್ರನ್ಥಪ್ರಸಿದ್ಧ್ಯುಪಬನ್ಧ ಇತಿ ಚೇತ್, ಸ್ಮೃತಿಮೂಲಶ್ರುತಿಪ್ರಸಿದ್ಧೌ ತಾತ್ಪರ್ಯಾತ್ । ಸ್ಮೃತೇಸ್ಸಾದಿತ್ವೇऽಪಿ ತದರ್ಥಸ್ಯಾನಾದಿತ್ವಾಚ್ಚ । ಉಕ್ತಞ್ಚ ವಿಷ್ಣುತತ್ತ್ವನಿರ್ಣಯೇ –

ಪುರಾಣಾನಿ ತದರ್ಥಾನಿ ಸರ್ಗೇ ಸರ್ಗೇನ್ಯಥೈವ ತು ।
ಕ್ರಿಯನ್ತೇऽತಸ್ತ್ವನಿತ್ಯಾನಿ ತದರ್ಥಾ ಪೂರ್ವಸರ್ಗವತ್ ।।

ಇತಿ ।

ಪ್ರಶ್ನೆ - ಅಪೌರುಷೇಯವಾದ ವೇದದಲ್ಲಿರುವ 'ಯತ್' ಶಬ್ದದ ಅರ್ಥವನ್ನು ಪೌರುಷೇಯವಾದ ವಿಷ್ಣುಸಹಸ್ರನಾಮದ ಪ್ರಸಿದ್ಧಿಯಿಂದ ಹೇಗೆ ನಿರ್ಣಯಿಸುತ್ತೀರಿ ?

ಉತ್ತರ - ಪ್ರತಿಯೊಂದು ಸ್ಮೃತಿಗಳೂ ಸಹ ಶ್ರುತಿಮೂಲವಾಗಿರುತ್ತವೆ. ಪ್ರಕೃತ ವಿಷ್ಣುಸಹಸ್ರನಾಮವೂ ಸಹ ಯಾವುದೋ ಒಂದು ಶ್ರುತಿಮೂಲವಾಗಿರುತ್ತದೆ. ಮೂಲಭೂತವಾದ ಆ ಶ್ರುತಿಯಲ್ಲಿ ಆದಿತ್ಯನೆಂದು ವಿಷ್ಣುವು ಪ್ರಸಿದ್ಧನಾಗಿರುತ್ತಾನೆ. ಈ ವಿವಕ್ಷೆಯಿಂದ ವಿಷ್ಣುಸಹಸ್ರನಾಮವನ್ನು ಆಧರಿಸಲಾಗಿದೆ.

ಅಥವಾ ಸ್ಮೃತಿಯು ಸಾದಿಯಾಗಿದ್ದರೂ ಪ್ರತಿಯೊಂದು ಸ್ಮೃತಿಗಳ ಅರ್ಥವು ಅನಾದಿಯೇ ಆಗಿರುತ್ತದೆ. ಇದನ್ನೇ ವಿಷ್ಣುತತ್ವ ನಿರ್ಣಯದಲ್ಲಿ ಹೀಗೆ ಹೇಳಿದ್ದಾರೆ -

ಪುರಾಣಾನಿ ತದರ್ಥಾನಿ ಸರ್ಗೇ ಸರ್ಗೇऽನ್ಯಥೈವ ತು।
ಕ್ರಿಯಂತೇऽತಸ್ತ್ವನಿತ್ಯಾನಿ ತದರ್ಥಾಃ ಪೂರ್ವಸರ್ಗವತ್ ॥

ಎಂಬುದಾಗಿ ಪ್ರತಿಯೊಂದು ಕಲ್ಪಗಳಲ್ಲಿಯೂ ಪುರಾಣಗಳ ಆನುಪೂರ್ವಿಯನ್ನು ಭಗವಂತನು ವ್ಯತ್ಯಾಸ ಮಾಡುತ್ತಾನೆ. ಆದರೆ ಅರ್ಥವು ಮಾತ್ರ ಒಂದೇ ಆಗಿರುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಪುರಾಣಗಳ ಅರ್ಥವು ಅನಾದಿಯಾದ್ದರಿಂದ ವಿಷ್ಣುಸಹಸ್ರನಾಮದ ಪ್ರಸಿದ್ಧಿಯನ್ನು ವಿವಕ್ಷಿಸಬಹುದು.

ಪ್ರಕಾಶಃ – ಯದಪ್ಯುಕ್ತಂ ಸರ್ವಪುರುಷಾಭಿಮುಖ್ಯಂ ಸೂರ್ಯಲಿಙ್ಗಮಿತಿ, ತನ್ನೇತ್ಯಾಹ – ಪುರುಷಂ ಪುರುಷಮಿತಿ । ಸರ್ವಪುರುಷಗತತ್ವಂ ಚ

ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತಃ ।

ಇತ್ಯಾದಿಶ್ರುತ್ಯಾ ''ಅಲ್ಪೌಕಸ್ತ್ವಸ್ಯ ಚ'' ಇತ್ಯಾದಿನಾ ವಕ್ಷ್ಯಮಾಣರೀತ್ಯಾ ಚ ಯುಜ್ಯತ ಇತಿ ಭಾವಃ ।

ಸರ್ವಪುರುಷಾಭಿಮುಖ್ಯವೆಂಬ ಮೂರನೆಯ ಸೂರ್ಯಲಿಂಗವನ್ನು ವಿಷ್ಣುವಿನಲ್ಲಿ ಸಮರ್ಥಿಸುತ್ತಿದ್ದಾರೆ. 'ಪುರುಷಂ ಪುರುಷಂ' ಇತ್ಯಾದಿಯಾಗಿ. ಶ್ರೀಹರಿಯು ಸಕಲಪುರುಷಗತನಾಗಿದ್ದಾನೆಂದು 'ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃಸ್ಥಿತಃ' ಎಂಬ ಶ್ರುತಿಯಿಂದ ಮತ್ತು ಮುಂದೆ ಹೇಳುವ ''ಅಲೌಕಸ್ತ್ವಸ್ಯ ಚ'' ಎಂಬುದರಿಂದ ಯುಕ್ತವಾಗುತ್ತದೆಂದು ತಿಳಿಯಬೇಕು.

ಪ್ರಕಾಶಃ –

ಪ್ರತಿಪೂರುಷಮೇತಸ್ಮಾತ್ ಸ್ಥಿತೋ ವೈ ವಿಷ್ಣುನಾಮಕಃ ।
ಆದಿತ್ಯಾದಿಷು ಚ ಸ್ಥಿತ್ವಾ ದ್ಯೋತಕೋऽಸೌ ಪ್ರತಿಪ್ರತಿ ।

ಇತಿ ತಚ್ಛಾಸ್ತ್ರಂ ಹೃದಿ ಕೃತ್ವಾऽऽಹ – ಭಾವೇ ವೇತಿ ।

ಆಭಿಮುಖ್ಯೋಕ್ತಿಭಾವೇऽಪಿ ತಸ್ಯ ತ್ವಮನ್ಮತೇऽಪ್ಯಾದಿತ್ಯದೇವತಾಯಾ ಅತೀನ್ದ್ರಿಯತ್ವೇನ ತತ್ರಾದರ್ಶನಾತ್, ಮಂಡಲಸ್ಯಾऽऽಭಿಮುಖ್ಯದರ್ಶನಾತ್ ತದ್ಧಾರಾ ತತ್ರಸ್ಥದೇವತಾಯಾಮಙ್ಗೀಕಾರೇ ತನ್ನಿಷ್ಠಭಗವತೋऽಪಿ ತದ್ಧಾರಾ ಸ್ಯಾದೇವೇತ್ಯರ್ಥಃ ।

ಏವಂ ಲಿಙ್ಗಾನಾಮಪಾಕರಣೇನ ತನ್ಮೂಲಕಶ್ರುತಿಪ್ರಸಿದ್ಧಿರಪ್ಯಪಾಕೃತೇತಿ ನ ತತ್ರ ಯತಿತವ್ಯಮಿತಿ ಭಾವ ।

ಸರ್ವಪುರುಷಾಭಿಮುಖ್ಯವನ್ನು ಹೇಳಿಯೇ ಇಲ್ಲವೆಂದು ಶಂಕಿಸಬಾರದು. ಏಕೆಂದರೆ ಶ್ರೀಮದಾಚಾರ್ಯರೇ ಇತರೇಯ ಭಾಷ್ಯದಲ್ಲಿ ಎರಡು ಬಗೆಯಲ್ಲಿ ಸರ್ವಪುರುಷಾಭಿಮುಖ್ಯವನ್ನು ವಿಷ್ಣುವಿನಲ್ಲಿ ಸಮರ್ಥಿಸಿದ್ದಾರೆ -

ಪ್ರತಿಪೂರುಷಮೇತಸ್ಮಾತ್ ಸ್ಥಿತೋ ವೈ ವಿಷ್ಣುನಾಮಕಃ।
ಆದಿತ್ಯಾದಿಷು ಚ ಸ್ಥಿತ್ವಾದ್ಯೋತಕೋऽಸೌ ಪ್ರತಿಪ್ರತಿ।

ಪ್ರತಿಯೊಬ್ಬ ಪುರುಷನಲ್ಲಿಯೂ ನಿಂತಿರುವ ವಿಷ್ಣುವೇ ನಿಯಾಮಕನಾಗಿದ್ದಾನೆ. ಆದಿತ್ಯಾದಿಗಳಲ್ಲಿ ನಿಂತು ಪ್ರತಿಯೊಂದಕ್ಕೆ ದ್ಯೋತಕನಾಗಿದ್ದಾನೆ ಎಂಬ ಈ ಶ್ಲೋಕದಲ್ಲಿ ಪೂರ್ವಾರ್ಧದಿಂದ ಸಕಲಪುರುಷಗತತ್ವವನ್ನು ಹೇಳಿದ್ದಾರೆ. ಉತ್ತರಾರ್ಧದಲ್ಲಿ ಆದಿತ್ಯಾದಿಗಳಲ್ಲಿ ಅಭಿಮುಖನಾಗಿ ನಿಂತು ದ್ಯೋತಕನಾಗಿದ್ದಾನೆಂದು ಹೇಳಿದ್ದಾರೆ. ಆದ್ದರಿಂದ ಆಭಿಮುಖ್ಯವನ್ನು ಹೇಳಲಾಗದೆಂದು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ ''ಭಾವೇ ವಾ'' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಆಭಿಮುಖ್ಯವನ್ನು ಹೇಳಿದರೂ ಸಹ ಪೂರ್ವಪಕ್ಷಕಾರರಿಗೆ ಆದಿತ್ಯದೇವತೆಯು ಅತೀಂದ್ರಿಯನಾಗಿದ್ದರಿಂದ ಆದಿತ್ಯನಲ್ಲಿ ನೇರವಾಗಿ ಆಭಿಮುಖ್ಯವನ್ನು ಹೇಳಲಾಗದು. ಹೊರತಾಗಿ ಸೂರ್ಯಮಂಡಲವು ಆಭಿಮುಖವಾಗಿದೆಯೆಂದು ಹೇಳಿ ಅದರ ಮೂಲಕ ಒಳಗಿರುವ ಸೂರ್ಯದೇವತೆಯು ಆಭಿಮುಖನಾಗಿದ್ದಾನೆಂದು ಒಪ್ಪಬೇಕು. ಹಾಗಾದರೆ ಆ ಸೂರ್ಯಮಂಡಲದಲ್ಲಿರುವ ಸೂರ್ಯನಾರಾಯಣನೂ ಸಹ ಸೂರ್ಯಮಂಡಲದ ಮೂಲಕವಾಗಿ ಅಭಿಮುಖನಾಗುತ್ತಾನೆ.

ಹೀಗೆ ಪೂರ್ವಪಕ್ಷಕಾರರು ನಿರೂಪಿಸಿದ ಮೂರು ವಿಧಗಳನ್ನು ನಿರಾಕರಿಸಿದ್ದರಿಂದ ಈ ಲಿಂಗ ಮೂಲಕವಾದ ಆದಿತ್ಯಶ್ರುತಿಪ್ರಸಿದ್ಧಿಯನ್ನೂ ಸಹ ಸುಲಭವಾಗಿ ನಿರಾಕರಿಸಿದಂತಾಯಿತು. ಆದ್ದರಿಂದ ಆದಿತ್ಯಶ್ರುತಿಯ ನಿರಾಕರಣೆಗೆ ಪ್ರತ್ಯೇಕವಾಗಿ ಪ್ರಯತ್ನಿಸಬೇಕಾಗಿಲ್ಲ.

ಪ್ರಕಾಶಃ – ನನ್ವಸ್ತ್ವೇವಮಾದ್ಯಕಲ್ಪೇ ಶ್ರುತೇರ್ಲಿಙ್ಗೈರೇವೋಜ್ಜೀವನೋತ್ತೇಷಾಮನ್ಯಥಾಸಿದ್ಧೌ ಶ್ರುತೇರಪ್ಯನ್ತನರ್ಯನ್ಯಾಯೇನಾನ್ಯಥಾಸಿದ್ಧಿಃ । ಉತ್ತರಕಲ್ಪದ್ವಯೇ ತು ಕಥಂ, ಸ್ವತ ಏವ ತತ್ರ ಶ್ರುತೇಃ ನಿರವಕಾಶತೋಕ್ತೇರಿತಿ ಚೇನ್ನ, ಇತ್ಥಂ, ವಕ್ಷ್ಯಮಾಣದಿಶ ಬ್ರಹ್ಮಶ್ರುತ್ಯಾದೇರ್ಮುಖ್ಯತಯಾ ವಿಷ್ಣು-ಸಾಧಕತ್ವೇನಾನ್ತರಧಿಕರಣನ್ಯಾಯವಿಷಯತಯಾऽऽದಿತ್ಯಶ್ರುತೇರ್ವಿಷ್ಣುಪರತ್ವಂ ವಾ ತತ್ರ ಮುಖ್ಯತ್ವಂ ವಾ ಸೇತ್ಸ್ಯತೀತಿ ।

ಪ್ರಶ್ನೆ - ಮೂರು ಬಗೆಯ ಪೂರ್ವಪಕ್ಷಲಿಂಗಗಳಲ್ಲಿ ಮೊದಲನೆಯ ಕಲ್ಪದಲ್ಲಿ ಶ್ರುತಿಯು ಲಿಂಗಗಳಿಂದ ಉಪೋದ್ಬಲಿತವಾದ್ದರಿಂದ ಲಿಂಗಗಳು ವಿಷ್ಣುವಿನಲ್ಲಿ ಅನ್ಯಥಾಸಿದ್ಧವಾದಾಗ ಶ್ರುತಿಗಳೂ ಸಹ ಅಂತರಧಿಕರಣದ ನ್ಯಾಯದಂತೆ ಅನ್ಯಥಾಸಿದ್ಧವಾಗುತ್ತದೆ. ಆದರೆ ಉಳಿದೆರಡು ಕಲ್ಪಗಳಲ್ಲಿ ಶ್ರುತಿಗಳು ಲಿಂಗಗಳಿಂದ ಉಪೋದ್ಬಲಿತವಾಗಿರುವುದಿಲ್ಲ. ಸ್ವತಃ ನಿರವಕಾಶವಾಗಿವೆ. ಹೀಗಿರುವಾಗ ಲಿಂಗಗಳ ನಿರಾಕರಣೆಯಿಂದಲೇ ಆದಿತ್ಯಶ್ರುತಿಗಳ ನಿರಾಕರಣೆಯೂ ಸುಲಭವಾಯಿತೆಂದು ಹೇಳಿದ್ದು ಹೇಗೆ ಸರಿ?

ಉತ್ತರ - ಅಂತರಧಿಕರಣದಲ್ಲಿ ನಿರವಕಾಶವಾದ ವಿಷ್ಣುಲಿಂಗಗಳಿದ್ದರೆ, ದೇವತಾವಾಚಕ ಪದಗಳೆಲ್ಲವೂ ವಿಷ್ಣುವಿನಲ್ಲಿ ಸಮನ್ವಯವಾಗುತ್ತವೆಂದು ಹೇಳಿದ್ದಾರೆ. ಮುಂದೆ ಬ್ರಹ್ಮಶಬ್ದ ಮೊದಲಾದವುಗಳು ಪರಮಾತ್ಮನಲ್ಲಿ ಮುಖ್ಯವೆಂದು ಸಮರ್ಥಿಸುತ್ತೇವೆ. ಆದ್ದರಿಂದ ಎರಡು ಹಾಗೂ ಮೂರನೆಯ ಪಕ್ಷಗಳಲ್ಲಿಯೂ ಬ್ರಹ್ಮಶಬ್ದ ಮೊದಲಾದವು ನಿರವಕಾಶವಿಷ್ಣುಲಿಂಗಗಳೆಂದು ಹೇಳಬಹುದಾದ್ದರಿಂದ ಆದಿತ್ಯಶ್ರುತಿಯನ್ನು ವಿಷ್ಣುಪರವೆನ್ನಬಹುದು. ಅಥವಾ ಆದಿತ್ಯಶ್ರುತಿಯು ವಿಷ್ಣುವಿನಲ್ಲಿ ಮುಖ್ಯವೆನ್ನಬಹುದು.

ಪ್ರಕಾಶಃ – ನನು ಚೈವಂ ಬ್ರಹ್ಮಶ್ರುತ್ಯಾದೇರತ್ರ ಮುಖ್ಯತ್ವೇ ತದ್ಬಲಾದಾದಿತ್ಯಶ್ರುತಿರ್ವಿಷ್ಣುಪರಾ, ಸಿದ್ಧೇ ಚ ತಸ್ಯಾಃ ವಿಷ್ಣುಪರತ್ವೇ ಬಾಧಕಾಭಾವೇನ ಬ್ರಹ್ಮಶಬ್ದಾದೇರ್ಮುಖ್ಯತ್ವಮಿತ್ಯನ್ಯೋನ್ಯಾಶ್ರಯಃ । ನ ಚಾರ್ಭಕೌಕಸ್ತ್ವಮೇವ ಬಾಧಕಂ, ನ ಶ್ರುತಿರಿತ್ಯಸ್ತಿ ವಿಶೇಷಃ, ಶ್ರುತೇರಪ್ಯಸ್ಮಿನ್ ಪಕ್ಷೇ ನಿರವಕಾಶತ್ವೋಕ್ತೇರಿತಿ ಚೇನ್ನ, ''ಆದಿತ್ಯೋ ಜ್ಯೋತಿರಾದಿತ್ಯಃ'' ಇತ್ಯಾದಿಪ್ರಯೋಗಾದಾದಿತ್ಯಶಬ್ದಸ್ಯ ವಿಷ್ಣಾವವಕಾಶೇನ ಸಾವಕಾಶತ್ವಸ್ಯ ಬ್ರಹ್ಮಶಬ್ದಮುಖ್ಯತ್ವಾನಧೀನತ್ವಾತ್ । ಏತೇನ ತದಾವೃತ್ತಿರ್ಬಾಧಿಕೇತ್ಯಪಿ ನಿರಸ್ತಮ್ । ಸಾವಕಾಶತ್ವಾದೇವೇತಿ ।

ಯದ್ವಾ – ಬ್ರಹ್ಮಶ್ರುತ್ಯಾದೇವರುಪಸಂಹಾರಸ್ಥತ್ವೇನ ಬಲವತ್ತಯಾऽऽದಿತ್ಯಶ್ರುತೇರ್ವಿಷ್ಣುಪರತ್ವಮ್ । ವಕ್ಷ್ಯತಿ ಚೈತತ್ ''ಉಪಕ್ರಮಸ್ಥಾದಿತ್ಯಶ್ರುತೇಃ'' ಇತ್ಯಾದಿ ।

ಪ್ರಶ್ನೆ - ಹೀಗೆ ಹೇಳಿದರೆ ಅನ್ಯೋನ್ಯಾಶ್ರಯ ಬರುತ್ತದೆ. ಏಕೆಂದರೆ ಬ್ರಹ್ಮಶಬ್ದವು ವಿಷ್ಣುವಿನಲ್ಲಿ ಮುಖ್ಯವೆಂದು ನಿರ್ಣಯವಾದ ಮೇಲೆ ಅಂತರಧಿಕರಣ ನ್ಯಾಯಕ್ಕೆ ವಿಷಯವಾಗುವುದರಿಂದ ಬ್ರಹ್ಮಶಬ್ದದ ಬಲದಿಂದ ಆದಿತ್ಯಶ್ರುತಿಯು ವಿಷ್ಣುಪರವೆಂದು ನಿರ್ಣಯವಾಗುತ್ತದೆ. ಆದಿತ್ಯ ಶ್ರುತಿಯು ವಿಷ್ಣುಪರವೆಂದು ನಿರ್ಣಯವಾದ ಮೇಲೆ ಬಾಧಕವಿಲ್ಲದ ಕಾರಣ ಬ್ರಹ್ಮಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗಿದೆಯೆಂದು ನಿರ್ಣಯವಾಗುತ್ತದೆ. ಹೀಗೆ ಬ್ರಹ್ಮಶಬ್ದದ ಮುಖ್ಯತ್ವವು ಆದಿತ್ಯಶ್ರುತಿಯ ವಿಷ್ಣುಪರತ್ವವು ಒಂದನ್ನೊಂದು ಆಶ್ರಯಿಸಿರುವುದರಿಂದ ಅನ್ಯೋನ್ಯಾಶ್ರಯ ಬರುತ್ತದಲ್ಲವೆ?

ಉತ್ತರ - ಇದು ತಪ್ಪು. ಏಕೆಂದರೆ ಆದಿತ್ಯಶ್ರುತಿಯು ಬಾಧಕವೇ ಆಗಿಲ್ಲ, ಹೊರತಾಗಿ ಅರ್ಭಕೌಕಸ್ತ್ವವು ಬಾಧಕವೇ ಆಗಿದೆ. ಆದ್ದರಿಂದ ಬ್ರಹ್ಮಶಬ್ದವು ವಿಷ್ಣುವಿನಲ್ಲಿ ಮುಖ್ಯವೆಂದು ನಿರ್ಣಯಿಸಲು ಬಾಧಕಾಭಾವವು ಕಾರಣವಾಗಿಲ್ಲ.

ಪ್ರಶ್ನೆ - ಅರ್ಭಕೌಕಸ್ತ್ವವೇ ಬಾಧಕವಾಗಿದೆ. ಅಥವಾ ಶ್ರುತಿಯಿಲ್ಲವೆಂದು ಏಕೆ ನಿರ್ಣಯಿಸುತ್ತೀರಿ? ಆದಿತ್ಯಶ್ರುತಿಯನ್ನು ನಿರವಕಾಶವೆಂದು ಈ ಹಿಂದೆಯೇ ಹೇಳಿದ್ದಾರಲ್ಲವೇ? ಆದ್ದರಿಂದ ಆದಿತ್ಯಶ್ರುತಿಯು ಎಲ್ಲಿಯತನಕ ಸಾವಕಾಶವಾಗುವುದಿಲ್ಲವೋ ಅಲ್ಲಿಯ ತನಕ ಬ್ರಹ್ಮಶಬ್ದವನ್ನು ವಿಷ್ಣುವಿನಲ್ಲಿ ಮುಖ್ಯವಾಗಿ ಹೇಳಲಾಗದಲ್ಲವೇ?

ಉತ್ತರ - ಇದು ತಪ್ಪು. 'ಆದಿತ್ಯೋ ಜ್ಯೋತಿರಾದಿತ್ಯಃ' ಎಂಬ ಶ್ರುತಿಪ್ರಸಿದ್ಧಿಯಿಂದಷ್ಟೇ ಆದಿತ್ಯ ಶಬ್ದವು ವಿಷ್ಣುವಿನಲ್ಲಿ ಸಾವಕಾಶವೆನ್ನುತ್ತೇವೆ ಹೊರತು, ಸಾವಕಾಶತ್ವವು ಬ್ರಹ್ಮಶಬ್ದದ ಮುಖ್ಯತ್ವಕ್ಕೆ ಅಧೀನವಾಗಿರುವುದಿಲ್ಲ. ಆದ್ದರಿಂದ ಬ್ರಹ್ಮಶಬ್ದವು ಮುಖ್ಯವಾದರೆ ಮಾತ್ರ ಆದಿತ್ಯಶಬ್ದವು ಸಾವಕಾಶವಾಗುತ್ತೆಂಬುದನ್ನು ನಾವು ಒಪ್ಪಿರುವುದಿಲ್ಲ. ಹೀಗೆ ಹೇಳಿದ್ದರಿಂದ ''ತದಾವೃತ್ತಿಃ ಬಾಧಿಕಾ'' ಎಂಬುದನ್ನು ನಿರಾಕರಿಸಿದಂತಾಯಿತು. ಏಕೆಂದರೆ ಆದಿತ್ಯಶ್ರುತಿಯು ಸಾವಕಾಶವಾಗಿರುವುದರಿಂದ.

ಅಥವಾ ಬ್ರಹ್ಮಶ್ರುತಿ ಮೊದಲಾದವು ಉಪಸಂಹಾರದಲ್ಲಿರುವುದರಿಂದ ಬಲಿಷ್ಠವಾಗಿವೆ. ಇದನ್ನು ವಿವಕ್ಷಿಸಿ ಆದಿತ್ಯಶ್ರುತಿಯು ವಿಷ್ಣುಪರವೆನ್ನಬಹುದು. ಇದನ್ನು ''ಉಪಕ್ರಮಸ್ಥಾದಿತ್ಯಶ್ರುತಿಃ'' ಎಂಬುದಾಗಿ ಮುಂದೆ ಹೇಳುತ್ತಾರೆ.

ಗುರುರಾಜೀಯಮ್ – ಯಚ್ಛಬ್ದೋಪಬನ್ಧೋಪ್ಯಾದಿತ್ಯಶ್ರುತೇರ್ನ ಪ್ರಸಿದ್ಧಾದಿತ್ಯಪರತ್ವಸಮ್ಪಾದನಾಯಾಂ ಕ್ಷಮ ಇತ್ಯಾಹ – ಯಚ್ಛಬ್ದೇತಿ ।। ತೃತೀಯಂ ಲಿಙ್ಗಂ ಸಾವಕಾಶಯತಿ – ಪುರುಷಂ ಪುರುಷಮಿತಿ ।। ಪ್ರತಿಶಬ್ದ ಏವಾಭಿಮುಖ್ಯವಾಚಕ ಇತಿ ಭಾವೇನಾಹ – ಭಾವೇವೇತಿ ।। ನನ್ವಾದಿತ್ಯಮಣ್ಡಲಸ್ಯ ಪುರುಷಾಭಿಮುಖತ್ವಾತ್ತಚ್ಛರೀರಕಸ್ಯಾದಿತ್ಯಸ್ಯ ಪುರುಷಾಭಿಮುಖ್ಯಮುಪಪನ್ನಮಿತ್ಯತಃ ತರ್ಹ್ಯಾದಿತ್ಯ-ಶರೀರಕಸ್ಯ ಬ್ರಹ್ಮಣ ಏವ ಪುರುಷಾಭಿಮುಖ್ಯಂ ಸಮ್ಭವತೀತಿ ನ ಬ್ರಹ್ಮಪಕ್ಷೇ ತಸ್ಯ ಬಾಧಕತೇತ್ಯಾಹ – ಅದರ್ಶನೇऽಪೀತಿ ।।

ಸಾರ

'ಯಚ್ಚಬ್ದೋಪಬಂಧ' 'ಸರ್ವಪುರುಷಾಭಿಮುಖ್ಯ' ಎಂಬೆರಡು ಪೂರ್ವಪಕ್ಷಯುಕ್ತಿಗಳೂ ಸಹ ವಿಷ್ಣುವಿನಲ್ಲಿಯೇ ಬರುತ್ತವೆ. ಶ್ರುತಿಪ್ರಸಿದ್ಧವಾದ ವಿಷ್ಣುವನ್ನು 'ಯಶ್ಚಾಸಾವಾದಿತ್ಯೇ' ಎಂಬಲ್ಲಿರುವ 'ಯತ್' ಶಬ್ದದಿಂದ ಗ್ರಹಣ ಮಾಡಬಹುದು. ಆದಿತ್ಯಶಬ್ದವೂ ಸಹ 'ಆದಿತ್ಯೋ ಜ್ಯೋತಿರಾದಿತ್ಯಃ' ಎಂಬ ವಿಷ್ಣುಸಹಸ್ರನಾಮ ಹೇಳುವಂತೆ ವಿಷ್ಣುವಿನಲ್ಲಿಯೇ ಪ್ರಸಿದ್ಧವಾಗಿದೆ.

ಸಕಲಪುರುಷಾಭಿಮುಖ್ಯವೆಂಬ ಲಿಂಗವು ವಿಷ್ಣುವಿನಲ್ಲಿಯೇ ಮುಖ್ಯವಾಗಿವೆ. ವಿಚಾರ ಮಾಡಿದರೆ ಪ್ರತಿಯೊಬ್ಬ ಪುರುಷನಿಗೆ ಅಭಿಮುಖವಾದದ್ದು ಸೂರ್ಯಮಂಡಲವೇ ಹೊರತು ಸೂರ್ಯನಲ್ಲ. ಆದರೂ ಸೂರ್ಯಮಂಡಲದ ಮೂಲಕವಾಗಿ ಸೂರ್ಯನೇ ಅಭಿಮುಖನೆಂದು ಪೂರ್ವಪಕ್ಷಕಾರರು ಹೇಳುವುದಾದರೆ ಅಲ್ಲಿಯೇ ಇರುವ ಸೂರ್ಯನಾರಾಯಣನನ್ನು ಅಭಿಮುಖನೆಂದು ಏಕೆ ಹೇಳಬಾರದು.

• • • • •

ಆದಿತ್ಯ ಹಾಗೂ ಜೀವರ ಲಿಂಗಗಳೆಲ್ಲವು ವಿಷ್ಣುವಿನಲ್ಲಿ ಸಾವಕಾಶವಾಗಿವೆ

तात्पर्यचन्द्रिका

सौरमन्त्रे च ''सूर्य आत्मा जगतस्तस्थुषश्च'' इति ब्रह्मलिङ्गसद्भावात्, मन्त्रस्थस्य च ''चक्षुर्मित्रस्य वरुणस्याग्नेः'' इति चक्षुश्शब्दस्य ''चक्षुर्देवानाम्'' इति श्रुत्या ब्रह्मण्येव सम्भवात्,

पूर्णदर्शनशक्तित्वादिरूपस्य वा चक्षुरादिस्वामित्वरूपस्य वा चक्षुर्मयत्वादेः ''सर्वेन्द्रियमयो विष्णुः'' इत्यादिभाष्योक्तस्मृत्या विष्णौ सम्भवात्, जीवेऽपि चक्षुरादिविकारत्वस्यासम्भवात् ।

एतच्छब्दस्य च ''अथैष ज्योतिः'' इत्यादौ अथ शब्दादेरिव अत्र प्रकरणविच्छेदकस्याभावेन पूर्वोक्ताशरीरप्रज्ञात्मपरत्वात् । वक्ष्यमाणस्यापि च अश्रुतत्वादिगुणैर्विष्णुत्वेन तत्परत्वेऽप्यनिष्टाभावात् ।

अल्पौकस्त्वस्य च 'व्योमवत्' इति सौत्रपदसूचितेन –

एकत्राप्यनवस्थाने सर्वत्रावस्थितिः कथम् ।
एकत्रैव तु संस्थानं नैवात्र प्रतिपाद्यते ।।

सर्वगतत्वाधिकरण (೧-೨-೦)

इति न्यायेन सर्वगतेऽपि सम्भवात्, अनुव्याख्याने च –

स्थितस्य ह्यल्पदेशेषु सर्वगत्वं भवेद्ध्रुवम् ।
एकत्राप्यनवस्थस्य कुत एवाखिलस्थता ।।

इत्युक्तत्वात्,

ಅನುವಾದ - ಸೂರ್ಯಪ್ರತಿಪಾದಕ ಮಂತ್ರದಲ್ಲಿಯೂ ಸಹ ''ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ'' ಸ್ಥಾವರ ಜಂಗಮಾತ್ಮಕವಾದ ಪ್ರಪಂಚಕ್ಕೆ ನಿಯಾಮಕನಾಗಿದ್ದಾನೆಂಬ ಬ್ರಹ್ಮಲಿಂಗವೇ ಕೇಳಿಸುತ್ತಿವೆ. ಅದೇ ಮಂತ್ರದಲ್ಲಿರುವ ''ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ'' ಎಂಬ ಚಕ್ಷುಃಶಬ್ದವು ''ಚಕ್ಷುರ್ದೇವಾನಾಮ್'' ಶಬ್ದವೂ ಸಹ ಬ್ರಹ್ಮನಲ್ಲಿಯೇ ಕೂಡುತ್ತವೆ. ಆದಿತ್ಯನಲ್ಲಿ ಕೂಡುವುದಿಲ್ಲ.

ಚಕ್ಷುರ್ಮಯತ್ವವೆಂಬ ಜೀವನ ಲಿಂಗವೂ ಸಹ ಬ್ರಹ್ಮನಲ್ಲಿಯೇ ಯುಕ್ತವಾಗುತ್ತದೆ. ಚಕ್ಷುರ್ಮಯತ್ವ ಶಬ್ದಕ್ಕೆ ಎಲ್ಲವನ್ನು ನೋಡುವಿಕೆಯೆಂಬ ಶಕ್ತಿಯುಳ್ಳವನು ಎಂಬರ್ಥವನ್ನು ಹೇಳಬಹುದು. ಸಕಲ ಚಕ್ಷುರಾದಿಲಿಂಗಗಳಿಗೆ ಸ್ವಾಮಿಯಾಗಿದ್ದಾನೆಂಬರ್ಥವನ್ನು ಹೇಳಬಹುದು. ಈ ಎರಡು ಅರ್ಥಗಳೂ ಸಹ ''ಸರ್ವೇಂದ್ರಿಯಮಯೋ ವಿಷ್ಣುಃ'' ಇತ್ಯಾದಿಯಾಗಿ ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯಂತೆ ವಿಷ್ಣುವಿನಲ್ಲೇ ಉಪಪನ್ನವಾಗುತ್ತವೆ ಹೊರತು ಜೀವನು ಚಕ್ಷುರ್ಮಯನೆಂದು ಹೇಳಲು ಸಾಧ್ಯವಿಲ್ಲ. ಚಕ್ಷುರಾದಿವಿಕಾರತ್ವವನ್ನು ಹೇಳಿದರೂ ಜೀವನಲ್ಲಿ ಉಪಪನ್ನವಾಗುವುದಿಲ್ಲ.

ಶ್ರುತಿಯಲ್ಲಿರುವ ಏತಚ್ಛಬ್ದವೂ ಸಹ ವಿಷ್ಣುವನ್ನೇ ಹೇಳುತ್ತದೆ. ಏಕೆಂದರೆ 'ಅಥೈಷ ಜ್ಯೋತಿಃ' ಎಂಬಲ್ಲಿರುವ 'ಅಥ' ಶಬ್ದವು ಹೇಗೆ ಪ್ರಕರಣವಿಚ್ಛೇದಕವಾಗಿದೆಯೋ ಅದರಂತೆ ಇಲ್ಲಿ ಪ್ರಕರಣ ವಿಚ್ಛೇದಕವಾದ 'ಅಥ' ಮೊದಲಾದ ಶಬ್ದಗಳಿರುವುದಿಲ್ಲ. ಆದ್ದರಿಂದ ಹಿಂದೆ ಪ್ರಸಕ್ತನಾದ ಅಶರೀರನಾದ ಪ್ರಜ್ಞಾತ್ಮನೆನಿಸಿದ ವಿಷ್ಣುಪರತ್ವವನ್ನೇ ಹೇಳಬೇಕು. ಮುಂದೆ ಹೇಳುವುದನ್ನೂ 'ಏತತ್' ಶಬ್ದವು ಪರಾಮರ್ಶಿಸುತ್ತದೆಂದು ಒಪ್ಪಿದರೂ ಸಹ ಆತಂಕವಿಲ್ಲ. ಏಕೆಂದರೆ ಅಶ್ರುತತ್ವಾದಿಗುಣಗಳುಳ್ಳ ವಿಷ್ಣುವೇ ಮುಂದೆಯೂ ಪ್ರಸಕ್ತನಾಗಿದ್ದಾನೆ. ಅವನನ್ನು 'ಏತತ್' ಶಬ್ದದಿಂದ ಪರಾಮರ್ಶಿಸಬಹುದು.

ಅಲೌಕಸ್ತ್ವಲಿಂಗವೂ ಸಹ ಸರ್ವಗತನಾದ ವಿಷ್ಣುವಿನಲ್ಲಿ ಬರುತ್ತದೆ. 'ವ್ಯೋಮವತ್' ಎಂಬ ಸೂತ್ರಪದದಿಂದ ಈ ವಿಷಯವನ್ನು ಸೂಚಿಸಿದ್ದಾರೆ. ಆದ್ದರಿಂದ

ಏಕತ್ರಾಪ್ಯನವಸ್ಥಾನೇ ಸರ್ವತ್ರಾವಸ್ಥಿತಿಃ ಕಥಮ್ ।
ಏಕತ್ರೈವ ತು ಸಂಸ್ಥಾನಂ ನೈವಾತ್ರ ಪ್ರತಿಪಾದ್ಯತೇ ।।

ಪರಿಪೂರ್ಣಚಂದ್ರಿಕಾ

ಒಂದು ಸ್ಥಳದಲ್ಲಿ ಇಲ್ಲದಿರುವವನು ಎಲ್ಲಾ ಸ್ಥಳದಲ್ಲಿಯೂ ಇರಲು ಹೇಗೆ ಸಾಧ್ಯ ? ಆದರೆ ಒಂದೇ ಸ್ಥಳದಲ್ಲಿ ಇದ್ದಾನೆಂದು ಇಲ್ಲಿ ಪ್ರತಿಪಾದಿಸುತ್ತಿಲ್ಲ.

ಈ ನ್ಯಾಯದಂತೆ ಸರ್ವಗತನಾಗಬೇಕಾದರೆ ಅಲ್ಪದೇಶದಲ್ಲಿ ಅವನು ಇರಲೇಬೇಕು. ಈ ವಿಷಯವನ್ನು ಅನುವ್ಯಾಖ್ಯಾನದಲ್ಲಿಯೂ ಹೇಳಿದ್ದಾರೆ -

ಸ್ಥಿತಸ್ಯ ಹ್ಯಲ್ಪದೇಶೇಷು ಸರ್ವಗತ್ವಂ ಭವೇದ್ ಧ್ರುವಮ್ ।
ವಿಕತ್ರಾಪ್ಯನವಸ್ಥಸ್ಯ ಕುತ ವಿವಾಖಿಲಸ್ಥತಾ ॥

ಅಲ್ಪದೇಶದಲ್ಲಿ ಇರುವ ವಿಷ್ಣುವು ನಿಶ್ಚಯವಾಗಿ ಸರ್ವಗತನಾಗುತ್ತಾನೆ. ಅಲ್ಪದೇಶದಲ್ಲಿಯೂ ಇಲ್ಲದವನು ಸರ್ವಗತನಾಗಲು ಹೇಗೆ ಸಾಧ್ಯ ?

ಕಠಿಣ ಪದಾರ್ಥ

ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ = ಸ್ಥಾವರ ಜಂಗಮಾತ್ಮಕವಾದ ಪ್ರಪಂಚಕ್ಕೆ ಸೂರ್ಯನು ನಿಯಾಮಕನಾಗಿದ್ದಾನೆ, ಶ್ರುತ್ಯಾ = ಯಜ್ ಶಾಖೆಯಲ್ಲಿರುವ ಶ್ರುತಿಯಿಂದ, ಪೂರ್ಣದರ್ಶನಶಕ್ತ್ಯಾದಿರೂಪಸ್ಯ = ಎಲ್ಲವನ್ನು ನೋಡುವಿಕೆಯೆಂಬ ಶಕ್ತಿಯಿರುವಿಕೆಯು, ಅಘಾವೇನ = ಅಥ ಮೊದಲಾದ ಪದಗಳಿಲ್ಲದ್ದರಿಂದ.

ಪ್ರಕಾಶಃ – एवमादित्यश्रुत्युज्जीवकलिङ्गानामन्यथासिद्धिमुक्त्वेदानीं, यदपि मन्त्रे चक्षुष्ट्वलिङ्गात्सूर्यशब्दादित्यप्रापक इत्युक्तं, तदयुक्तं, अन्तरधिकरणन्याय-विषयताऽत्रत्यसूर्यशब्दस्य विष्णुपरत्वादिति भावेन निरवकाशविष्णुलिङ्गं वदन्नन्यलिङ्गस्यान्यथासिद्धिमाह – सौरमन्त्रे चेति ।

ವಿವರಣೆ - ಇಲ್ಲಿಯ ತನಕ ಆದಿತ್ಯಶ್ರುತಿಯನ್ನು ಉಪೋದ್ಬಲಿಸುವ ಮೂರು ಬಗೆಯ ಲಿಂಗಗಳನ್ನು ವಿಷ್ಣುವಿನಲ್ಲಿ ಸಮರ್ಥಿಸಿದ್ದಾಯಿತು. ಈಗ ಮಂತ್ರದಲ್ಲಿರುವ ಚಕ್ಷುಷ್ಟ್ವಲಿಂಗದಿಂದ ಸೂರ್ಯಶಬ್ದವು ಆದಿತ್ಯನನ್ನೇ ಪ್ರತಿಪಾದಿಸುತ್ತದೆಂಬ ಪೂರ್ವಪಕ್ಷವನ್ನು ನಿರಾಕರಿಸುತ್ತಿದ್ದಾರೆ. ಅಂತರಧಿಕರಣದ ನ್ಯಾಯಕ್ಕೆ ವಿಷಯವಾದ್ದರಿಂದ ಸೂರ್ಯಶಬ್ದವು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂಬ ಅಭಿಪ್ರಾಯದಿಂದ ನಿರವಕಾಶವಾದ ವಿಷ್ಣುಲಿಂಗವನ್ನು ಹೇಳುವವರಾಗಿ ಸೂರ್ಯಲಿಂಗಗಳನ್ನೆಲ್ಲಾ ವಿಷ್ಣುವಿನಲ್ಲಿಯೇ ಸಮರ್ಥಿಸುತ್ತಿದ್ದಾರೆ 'ಸೌರಮಂತ್ರೇಚ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ –

आदानात्सर्ववस्तूनामत्तृत्वात्प्रलयेऽपि च ।
आत्मेत्युक्तस्स भगवान् जगतस्स्थावरस्य च ॥

ಸರ್ವಗತತ್ವಾಧಿಕರಣ (೧-೨-೧)

इत्युक्तदिशा सर्वनियामकत्वरूपविष्णुलिङ्गादित्यर्थः । ''चक्षुर्देवानामुत मर्त्यानां'' इति यजुश्शाखास्थश्रुत्येत्यर्थः ।

''सर्वनामाभिधेयश्च'' इत्यनेनैव ''आदित्यशब्दस्येश्वरवाचित्वं चोक्तं भवति'' इति टीका उपलक्षणमिति भावः ।

आदानात्सर्ववस्तूनामत्तृत्वात्प्रलयेऽपि च ।
आत्मैत्युक्तस्स भगवान् जगतस्स्थावरस्य च ॥

सकलवस्तुगळिगे नियामकनादुदरिंद मत्तु प्रलयकालदल्लि एल्लवन्नु तिन्नुववनादुदरिंद सकलस्थावरजंगमात्मकवाद प्रपंचक्के भगवंतनु नियामकनागिद्दानेंब मातिनंते सर्वनियामकत्ववु विष्णुविन लिंगवागिदे एंदर्थ. ''चक्षुर्देवानामुत मर्त्यानाम्'' एंबुदागि यजुःशाखादल्लिरुव श्रुतियिंद एंदु तिळियबेकु.

ह्मंगे हेळिद्दरिंद ''सर्वनामाभिधेयश्च'' इत्यनेनैव ''आदित्यशब्दस्येश्वरवाचित्वं चोक्तं भवति'' एंब टीकेयु उपलक्षणवेंदु व्याख्यानिसिदंतायितु.

प्रकाशः – यदप्युक्तं चन्द्रादावुक्तत्वाऽऽदित्येऽनुक्तत्वमप्यादित्यलिङ्गमिति, तत्त्वग्रे निरसिष्यत इति भावेन चक्षुश्शब्दस्य विष्णावुक्ततया तत्सङ्गतत्वेन चक्षुर्मयत्वादि-जीवप्रापकाण्यपि सावकाशयति – पूर्णेति ।

वस्तुतस्तु चंद्रादिगळल्लि हेळि आदित्यनल्लि हेळदिरुविकेयेंब आदित्य लिंगवन्नु निराकरिसबेकित्तु. आदरे ई लिंगवन्नु मुंदे निराकरिसुत्तारे. ईग चक्षु शब्दिंद विष्णुवु प्रतिपाद्यनागिद्दानेंदु हेळिदाग जीवप्रापकवाद चक्षुर्मयत्व लिंगवन्नु विष्णुविनल्लि सावकाश माडुवुदु संगतवागिदेयेंब अभिप्रायदिंद 'पूर्ण' इत्यादि वाक्यदल्लि जीवप्रापकलिंगगळन्नु निराकरिसुत्तिद्दारे.

प्रकाशः –

पूर्णदर्शनशक्तित्वाच्चक्षुर्मय इतीरितः ।
तादृक्श्रवणशक्तित्वात्तथा श्रोत्रमयस्स्मृतः ।।

इत्यैतरेयभाष्यदिशा मयटः प्राचुर्यार्थत्वेनायमाद्योऽर्थः । ''इन्द्रियस्वामित्वेन'' इति टीकोपलक्षणमिति भावः ।

द्वितीयस्त्वेतद्भाष्यदिशेति व्यक्तम् । 'स्मृत्या' इत्युक्तत्वाऽयमेवार्थः स्मार्तत्वादत्र ग्राह्यो नतु प्रसिद्धकरणसम्बन्ध इति सूचितम् ।

पूर्णदर्शनशक्तित्वाच्चक्षुर्मय इतिरितः।
तादृक्श्रवणशक्तित्वात्तथा श्रोत्रमयस्स्मृतः॥

ಸಕಲವನ್ನು ನೋಡುವ ಶಕ್ತಿಯುಳ್ಳವನಾದ್ದರಿಂದ ಚಕ್ಷುರ್ಮಯನೆನಿಸಿದ್ದಾನೆ. ಸಕಲವನ್ನು ಕೇಳುವ ಶಕ್ತಿಯುಳ್ಳವನಾದ್ದರಿಂದಲೇ ಶ್ರೋತ್ರಮಯನೆನಿಸಿದ್ದಾನೆಂಬ ಏತರೇಯ ಭಾಷ್ಯದ ಪ್ರಕಾರ ಚಕ್ಷುರ್ಮಯ ಎಂಬಲ್ಲಿರುವ ಮಯಟ್ ಪ್ರತ್ಯಯಕ್ಕೆ ಪ್ರಾಚುರ್ಯ ಎಂಬರ್ಥವು ಸಿದ್ಧವಾಗಿದೆ. ಈ ಅರ್ಥವನ್ನು ವಿವಕ್ಷಿಸಿ ಗ್ರಂಥಕಾರರು 'ಪೂರ್ಣದರ್ಶನಶಕ್ತಿತ್ವಾದಿರೂಪಸ್ಯ' ಎಂಬ ಮೊದಲನೆಯ ಅರ್ಥವನ್ನು ಹೇಳಿದ್ದಾರೆ.

ಮತ್ತು 'ಇಂದ್ರಿಯಸ್ವಾಮಿತ್ವೇನ' ಎಂಬ ಟೀಕೆಯು ಉಪಲಕ್ಷಣವಾಗಿದೆಯೆಂದು ಇದರಿಂದ ತಿಳಿಯಬೇಕು. 'ಚಕ್ಷುರಾದಿಸ್ವಾಮಿತ್ವರೂಪಸ್ಯ' ಎಂಬ ಎರಡನೆಯ ಅರ್ಥವನ್ನು ಈ ಅಧಿಕರಣದ ಭಾಷ್ಯದ ಪ್ರಕಾರ ತಿಳಿಯಬೇಕು. ಗ್ರಂಥದಲ್ಲಿ 'ಸ್ಮೃತ್ಯಾ' ಎಂದು ಹೇಳಿದ್ದರಿಂದ ಈ ಅರ್ಥವು ಸ್ಮೃತಿಸಿದ್ಧವಾದ್ದರಿಂದ ಸ್ವೀಕರಿಸಬೇಕು ಹೊರತು ಪ್ರಸಿದ್ಧವಾದ ಇಂದ್ರಿಯಸಂಬಂಧವೆಂಬರ್ಥವನ್ನು ಇಲ್ಲಿರುವ ಚಕ್ಷುರ್ಮಯಶಬ್ದದಿಂದ ಸ್ವೀಕರಿಸಬಾರದೆಂದು ಸೂಚಿಸಿದ್ದಾರೆ.

प्रकाशः – यदपि जीवपक्षे एतच्छब्दः ''अथैषज्योतिः'' इत्यादाविव वक्ष्यमाणपर इति तत्राह – एतच्छब्दस्येति ।

''अथैष ज्योतिः'' इत्यादौ ज्योतिष्टोमप्रकरणविच्छेदकस्याथशब्दस्य श्रवणात्तत्र तथात्वेऽपि प्रकृते तथा प्रकरणभेदकं न किञ्चिदस्तीत्यर्थः ।

ಹಿಂದೆ ಪೂರ್ವಪಕ್ಷ ಮಾಡುವಾಗ ಜೀವಪಕ್ಷದಲ್ಲಿ ''ಏತಚ್ಛಬ್ದವು ಅಥೈಷ ಜ್ಯೋತಿಃ'' ಇತ್ಯಾದಿ ದೃಷ್ಟಾಂತದಂತೆ ಮುಂದೆ ಹೇಳುವುದನ್ನು ಪರಾಮರ್ಶಿಸುತ್ತದೆಂದು ಹೇಳಿದ್ದರು. ಇದೂ ಸಹ ತಪ್ಪೆಂದು 'ಏತಚ್ಛಬ್ದಸ್ಯ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

'ಅಥೈಷ ಜ್ಯೋತಿಃ' ಇತ್ಯಾದಿ ಸ್ಥಳದಲ್ಲಿ ಜ್ಯೋತಿಷ್ಟೋಮಪದಕ್ಕೆ ವಿಚ್ಛೇದಕವಾದ 'ಅಥ' ಶಬ್ದವು ಕೇಳಿಸುತ್ತಿದೆ. ಆದ್ದರಿಂದ ಮುಂದೆ ಹೇಳುವುದನ್ನು ಅಲ್ಲಿ ಪರಾಮರ್ಶಿಸಬಹುದು. ಆದರೆ ಪ್ರಕೃತದಲ್ಲಿರುವ 'ಏತತ್' ಶಬ್ದವು ಮುಂದೆ ಹೇಳುವುದನ್ನು ಪರಾಮರ್ಶಿಸಲು ಅಂತಹ ಪ್ರಕರಣವಿಚ್ಛೇದಕವಾದ ಯಾವುದೇ ಪದಗಳಿರುವುದಿಲ್ಲ.

प्रकाशः – ननूक्तमत्र बाध्वचिह्नितोपक्रमोपसंहाराभ्यां भिन्नवाक्यत्वं तस्यावगतमिति । तथा च कथं न प्रकरणविच्छेद इति चेत्, मैवं, ''एतामनुविधं संहितां सन्धीयमानां मन्य इति ह स्माह बाध्वः'' इत्यनिरुद्धादिचतुर्मूर्त्यात्मकस्य

विष्णोस्संहितादेवतात्वरूपावान्तरप्रमेये तात्पर्यज्ञापनाय तदुपक्रमादेरुपपत्तेः, अविच्छेदकत्वात् पुनस्तस्यैव परामर्शेन गुणान्तरविधिसम्भवादिति तात्पर्यात् ।

ಪ್ರಶ್ನೆ - ಹಿಂದೆ ಪೂರ್ವಪಕ್ಷ ಮಾಡುವಾಗ 'ಬಾಧ್ವ' ಚಿಹ್ನೆಯಿಂದ ಕೂಡಿರುವ ಉಪಕ್ರಮ ಹಾಗೂ ಉಪಸಂಹಾರಗಳಿಂದ ಭಿನ್ನವಾಕ್ಯವೆಂದು ತಿಳಿಯುತ್ತದೆ. ಇದೇ ಪ್ರಕರಣಕ್ಕೆ ವಿಚ್ಛೇದಕವಾಗಿದೆ. ಹೀಗಿರುವಾಗ ಪ್ರಕರಣವಿಚ್ಛೇದಕವಾದದ್ದು ಯಾವುದೂ ಇಲ್ಲವೆಂದು ಹೇಗೆ ಹೇಳಿದಿರಿ ?

ಉತ್ತರ - ಬಾಧ್ವ ಚಿಹ್ನೆಯಿಂದ ಕೂಡಿರುವ ಉಪಕ್ರಮೋಪಸಂಹಾರಗಳು ಪ್ರಕರಣಕ್ಕೆ ವಿಚ್ಛೇದಕವಾಗಿಲ್ಲ ಹೊರತಾಗಿ ''ಏತಾಮನುವಿಧಂ ಸಂಹಿತಾಂ ಸಂಧೀಯಮಾನಾಂ ಮನ್ಯ ಇತಿ ಹ ಸ್ಮಾಹ ಬಾಧ್ವಃ'' ಇತ್ಯಾದಿಯಾಗಿ ಅನಿರುದ್ಧವೇ ಮೊದಲಾದ ಭಗವಂತನ ನಾಲ್ಕು ರೂಪಗಳಿಗೆ ಸಂಹಿತಾದೇವತ್ವವನ್ನು ತಿಳಿಸಬೇಕಾಗಿದೆ. ಈ ಅವಾಂತರ ಪ್ರಮೇಯವನ್ನು ತಿಳಿಸುವುದಕ್ಕಾಗಿಯೇ ಶ್ರುತಿಗೆ ತಾತ್ಪರ್ಯವಿದೆ. ಇದನ್ನು ತಿಳಿಸುವುದಕ್ಕಾಗಿ ಉಪಕ್ರಮಾದಿಗಳು ಹೊರಟಿವೆ.

प्रकाशः – पूर्वोक्तेति । ''स यश्चायमशरीरः प्रज्ञात्मा, यश्चासावादित्य एकमेतदिति विद्यात्'' इत्यशरीरप्रज्ञात्मन आदित्यानाम्नश्चैकत्वादिति । 'आदित्यपरत्वात्' इत्यनुक्त्वा 'अशरीर' इत्युक्तिर्विष्णुपक्षेऽशरीरत्वयुक्तिसूचनार्था । एतेन ''स यश्चायमशरीरः'' इत्यादिटीका विवृता ।

''ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ, ಯಶ್ಚಾಸಾವಾದಿತ್ಯ ಏಕಮೇತದಿತಿ ವಿದ್ಯಾತ್'' ಎಂಬಂತೆ ಅಶರೀರ ಪ್ರಜ್ಞಾತ್ಮನಿಗೆ ಹಾಗೂ ಆದಿತ್ಯನಿಗೆ ಐಕ್ಯವಿದೆ. ವಸ್ತುತಃ ಗ್ರಂಥದಲ್ಲಿ 'ಆದಿತ್ಯಪರತ್ವಾತ್' ಎಂದೇ ಹೇಳಬಹುದಿತ್ತು. ಆದರೆ ಅಶರೀರ ಎಂದು ಹೇಳಿದ್ದು ವಿಷ್ಣುಪಕ್ಷದಲ್ಲಿ ಅಶರೀರತ್ವಯುಕ್ತಿಯನ್ನು ಸೂಚಿಸುವುದಕ್ಕಾಗಿ ಎಂದು ತಿಳಿಯಬೇಕು. ಇದರಿಂದ ''ಸ ಯಶ್ಚಾಯಮಿತ್ಯಾದಿನಾ'' ಇತ್ಯಾದಿ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು.

प्रकाशः – उपक्रमादिवशाद्भिन्नवाक्यत्वमुपेत्याप्याह – वक्ष्यमाणेति । प्रकृतपरत्वं च टीकाद्युक्तसमर्थनार्थमिति भावः । अनिष्टेति । जीवलिङ्गानां सावकाशितत्वादिति भावः ।

ಉಪಕ್ರಮಾದಿಗಳಿಗೆ ಅನುಸಾರಿಯಾಗಿ ಭಿನ್ನವಾಕ್ಯತ್ವವನ್ನು ಒಪ್ಪೋಣ. ಆದರೂ ಸಹ ನಮಗೆ ಅನಿಷ್ಟವಿಲ್ಲವೆಂದು 'ವಕ್ಷ್ಯಮಾಣಸ್ಯಾಪಿ' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಪ್ರಕೃತಪರತ್ವವನ್ನು ಇಲ್ಲಿ ಹೇಳಿದ್ದು ಟೀಕೆಯನ್ನು ಸಮರ್ಥಿಸುವುದಕ್ಕಾಗಿ ಎಂದು ತಿಳಿಯಬೇಕು. 'ಅನಿಷ್ಟಾಭಾವಾತ್' ಎಂದು ಗ್ರಂಥಕಾರರು ಹೇಳಿದ್ದಾರೆ. ಜೀವಲಿಂಗಗಳನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಿದ್ದರಿಂದ ವಕ್ಷ್ಯಮಾಣಪರವೆಂದು ಅರ್ಥೈಸಿದರು. ನಮಗೆ ಅನಿಷ್ಟವಿಲ್ಲವೆಂದು ಇದರ ಅಭಿಪ್ರಾಯ.

ಪರಿಪೂರ್ಣಚಂದ್ರಿಕಾ

ಪ್ರಕಾಶಃ – ಯದಪ್ಯುಕ್ತಮರ್ಭಕೌಕಸ್ತ್ವಾಚ್ಚ ನ ವಿಷ್ಣೋರತ್ರೋಕ್ತಸರ್ವಗತತೇತಿ, ತದಪಿ ನ ಬಾಧಕಮಿತಿ ಭಾವೇನಾಹ – ಅಲ್ಪೇತಿ । 'ಸೂಚಿತೇನ ನ್ಯಾಯೇನ' ಇತ್ಯನ್ವಯಃ । ತಮೇವ ನ್ಯಾಯಂ ಸ್ವಯಂ ಸಙ್ಗೃಹ್ಣಾಹ – ಏಕತ್ರೇತಿ ।

ಅರ್ಭಕೌಕಸ್ತ್ವಂ ನಾಮ ಅಲ್ಪದೇಶೇऽವಸ್ಥಿತತ್ವಂ, ನ ತ್ವಲ್ಪದೇಶ ಏವಾವಸ್ಥಾನವತ್ತ್ವಮ್ । ತಚ್ಚ ಸರ್ವಗತಸ್ಯ ವಿಷ್ಣೋರಾಕಾಶವದೇವ ಯುಜ್ಯತೇ, ಅಲ್ಪದೇಶೇ ಅವಿದ್ಯಮಾನಸ್ಯ ಸರ್ವಗತತ್ವಾಯೋಗಾತ್,

ಯತ್ರ ನಾಸ್ತಿ ಪದನ್ಯಾಸಃ ಕಸ್ತಂ ವಿಷಯಮಾಪ್ನುಯಾತ್ ।

ಇತಿ ನ್ಯಾಯಾದಿತ್ಯರ್ಥಃ ।

ಏಕತ್ರೈವೇತಿ । ಭೂತೇಷ್ವೇವ' ಇತ್ಯಶ್ರವಣಾತ್ । ತಥಾ ಶ್ರವಣೇ ಹಿ ತನ್ನೋಪಪದ್ಯೇತೇ, ನ ಚೈವಮಿತ್ಯರ್ಥಃ ।

ಹಿಂದೆ ಪೂರ್ವಪಕ್ಷ ಮಾಡುವಾಗ ವಿಷ್ಣು ಅಲ್ಪದೇಶನಾದ್ದರಿಂದ ಸರ್ವಗತನಾಗಲಾರನೆಂದು ಆಕ್ಷೇಪಿಸಲಾಗಿತ್ತು. ಇದೂ ಸಹ ತಪ್ಪು. ಅಲ್ಪದೇಶದಲ್ಲಿರುವಿಕೆಯು ಸರ್ವಗತತ್ವಕ್ಕೆ ಬಾಧಕವೇ ಅಲ್ಲವೆಂದು 'ಅಲೌಕಸ್ತ್ವ' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. 'ಸೂಚಿತೇನ' ಎಂಬುದಕ್ಕೆ 'ನ್ಯಾಯೇನ' ಎಂಬುದರಲ್ಲಿ ಅನ್ವಯ. ಇದೇ ನ್ಯಾಯವನ್ನು ಸ್ವತಃ ಗ್ರಂಥಕಾರರೇ 'ಏಕತ್ರಾಪಿ' ಎಂಬ ಶ್ಲೋಕದಿಂದ ಸಂಗ್ರಹಿಸಿದ್ದಾರೆ.

ಅರ್ಭಕೌಕಸ್ತ್ವವೆಂದರೆ ಅಲ್ಪದೇಶದಲ್ಲಿದ್ದಾನೆಂದಷ್ಟೇ ಅರ್ಥ ಹೊರತು ಅಲ್ಪದೇಶದಲ್ಲಿ ಮಾತ್ರ ಇದ್ದಾನೆಂದು ಎಂದರ್ಥವಲ್ಲ. ಈ ಅರ್ಥವು ಸರ್ವಗತನಾದ ವಿಷ್ಣುವಿನಲ್ಲಿ ಆಕಾಶದ ದೃಷ್ಟಾಂತದಂತೆ ಯುಕ್ತವೇ ಆಗುತ್ತವೆ. ಅಲ್ಪದೇಶದಲ್ಲಿ ಯಾರು ಇರುವುದಿಲ್ಲವೋ ಅವನು ಸರ್ವಗತನೂ ಆಗಲಾರ ಎಂಬ ವ್ಯಾಪ್ತಿಯನ್ನು ಇಲ್ಲಿ ತಿಳಿಯಬೇಕು. ''ಯತ್ರ ನಾಸ್ತಿ ಪದನ್ಯಾಸಃ ಕಸ್ತಂ ವಿಷಯಮಾಪ್ನುಯಾತ್'' ಯಾರು ಒಂದು ಹೆಜ್ಜೆಯನ್ನು ಇಡಲು ಬಯಸಲಾರನೋ ಅವನು ಗುರಿಯನ್ನು ಹೇಗೆ ತಾನೆ ತಲುಪುತ್ತಾನೆ ? ಎಂಬ ನ್ಯಾಯದಂತೆ ಅಲ್ಪದೇಶದಲ್ಲಿದ್ದರೆ ಮಾತ್ರ ಸರ್ವಗತನಾಗಲು ಸಾಧ್ಯನೆಂದು ತಿಳಿಯಬೇಕು.

'ಏಕತ್ರೈವ' ಎಂಬಲ್ಲಿರುವ ಏವಕಾರದಿಂದ ಸೂತ್ರದಲ್ಲಿ ಏವಕಾರವು ಕೇಳಿಸುತ್ತಿಲ್ಲವೆಂದು ಹೇಳುತ್ತಿದ್ದಾರೆ. ಒಂದು ವೇಳೆ ಹಾಗೆ ಏವಕಾರವನ್ನು ಹೇಳಿದರೆ ಅದು ಕೂಡುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ಉಕ್ತನ್ಯಾಯಸ್ಯ ಭಾಷ್ಯಾದಾವಸ್ಫುಟತ್ವಾದಾಹ – ಅನುವ್ಯಾಖ್ಯಾನ ಇತಿ । ದ್ವಿತೀಯೇ ವೈಶೇಷಿಕನಯೇ,

ಮಹತोऽಲ್ಪತ್ವಮಪಿ ಹಿ ವ್ಯೋಮವತ್ಪ್ರಾಹ ವೇದವಿತ್ ।
ಯದ್ಯಲ್ಪದೇಶಸಂಸ್ಥಾನಂ ನ ಸರ್ವತ್ರಾऽಪಿ ನೋ ಭವೇತ್ ।
ಸರ್ವಗತತ್ವಾಧಿಕರಣ (೧-೨-೦)

ಸ್ಥಿತಸ್ಯ ಹಿ ..... ।

ಇತ್ಯಾದಿನಾऽಸ್ಯ ನ್ಯಾಯಸ್ಯ ವಿವೃತತ್ವಾದಿತ್ಯರ್ಥ ।

ಯಥಾ ಖಲ್ವೇಕೈಕಂ ವರ್ಣಮುಚ್ಚಾರಯತ ಏವ ಸರ್ವವೇದೋಚ್ಚಾರಣಂ ನ ತ್ವೇಕಮಪ್ಯನುಚ್ಚಾರಯತಃ, ತಥाऽಲ್ಪದೇಶೇಷು ಸ್ಥಿತಸ್ಯೈವ ಸರ್ವಗತತ್ವಂ ಭವೇದಿತ್ಯರ್ಥಃ । ಏತೇನಾತ್ರ ಟೀಕಾದಾವೇತದವಿವೃತೌ ಬೀಜಮುದ್ಭಾವಿತಮ್ ।

ಇಲ್ಲಿ ಹೇಳಿರುವ ನ್ಯಾಯಗಳು ಭಾಷ್ಯಾದಿಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿಲ್ಲವಲ್ಲವೇ? ಎಂಬ ಪ್ರಶ್ನೆಗೆ 'ಅನುವ್ಯಾಖ್ಯಾನೇ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಎರಡನೇ ಅಧ್ಯಾಯದ ವೈಶೇಷಿಕಾಧಿರಣದಲ್ಲಿ ಈ ವಿಷಯವು ಹೇಳಲ್ಪಟ್ಟಿದೆ -

ಮಹತೋऽಲ್ಪತ್ವಮಪಿ ಹಿ ವ್ಯೋಮವತ್ಪ್ರಾಹ ವೇದವಿತ್ ।
ಯದ್ಯಲ್ಪದೇಶಸಂಸ್ಥಾನಂ ನ ಸರ್ವತ್ರಾऽಪಿ ನೋ ಭವೇತ್ ।
ಸ್ಥಿತಸ್ಯ ಹಿ ..... ।

ಮಹಾಪದಾರ್ಥವು ಅಲ್ಪವು ಆಗಿರುತ್ತದೆಂದು ಆಕಾಶದ ದೃಷ್ಟಾಂತದಿಂದ ಸರ್ವಜ್ಞರಾದ ಸೂತ್ರಕಾರರು ಹೇಳಿದ್ದಾರೆ. ಒಂದುವೇಳೆ ಅಲ್ಪದೇಶದಲ್ಲಿ ಇಲ್ಲದ್ದಿದರೆ ಸರ್ವದೇಶದಲ್ಲಿಯೂ ಇರಲು ಸಾಧ್ಯವಿಲ್ಲ. ಈ ರೀತಿಯಾಗಿ ನ್ಯಾಯವನ್ನು ವಿವರಿಸಿದ್ದಾರೆ.

ಸತ್ಯಕಾಮತ್ವವೇ ಮೊದಲಾದ ವಿವಕ್ಷಿತಗುಣಗಳು ಬ್ರಹ್ಮನಲ್ಲಿಯೇ ಉಪಪನ್ನವಾಗುತ್ತವೆ. ವಸ್ತುತಃ ಪೂರ್ವಪಕ್ಷದಲ್ಲಿ ಹೇಳಿದಂತೆ 'ಸರ್ವಂ ಖಲ್ವಿದಂ' ಎಂಬ ಹಿಂದಿನ ವಾಕ್ಯವು ಶಾಂತತ್ವವೆಂಬ ಗುಣವಿಧಾಯಕವಾಗಿ ಅನ್ಯಪರವಾಗಿರುತ್ತದೆ. ಆದರೂ ಸಹ ಉಪಸನಾ ಕರ್ಮಕ್ಕೆ ಆಕಾಂಕ್ಷಾನಿವರ್ತಕವಾಗಿ ಬ್ರಹ್ಮನೇ ಉಪಾಸ್ಯನೆಂದು ತಿಳಿಸುತ್ತದೆ. ಶ್ರುತಿಯಲ್ಲಿ ಕೇಳಿಸುತ್ತಿರುವ ಜೀವಧರ್ಮಗಳಿಂದಲೂ ವಿರೋಧ ಬರುವುದಿಲ್ಲ. ಏಕೆಂದರೆ ಅಂತಹ ಜೀವಧರ್ಮಗಳೆಲ್ಲವನ್ನು ಜೀವಾಭಿನ್ನವಾದ ಬ್ರಹ್ಮನಲ್ಲಿಯೂ

ಕೂಡಿಸಬಹುದು. ಜೀವಾಭೇದವಿರುವುದಾದರೆ ಬ್ರಹ್ಮನ ಧರ್ಮಗಳನ್ನೇ ಜೀವನಲ್ಲಿ ಕೂಡಿಸಬಹುದಲ್ಲವೇ? ಎಂದು ವಿಪರೀತವಾಗಿ ಶಂಕಿಸಬಾರದು.

ಪ್ರಕಾಶಃ – ತದುಕ್ತಂ ಭಾಮತ್ಯಾಂ –

ಸಮಾಸಸ್ಸರ್ವನಾಮಾರ್ಥಃ ಸನ್ನಿಕೃಷ್ಟಮಪೇಕ್ಷತೇ ।
ತದ್ಧಿತಾರ್ಥೋऽಪಿ ಸಾಮಾನ್ಯಾನ್ನಾಪೇಕ್ಷಾಯಾ ನಿವರ್ತಕಃ ।।
ತಸ್ಮಾದಪೇಕ್ಷಿತಂ ಬ್ರಹ್ಮ ಗ್ರಾಹ್ಯಮನ್ಯಪರಾದಪಿ ।
ತಥಾ ಚ ಸತ್ಯಸಙ್ಕಲ್ಪಪ್ರಭೃತೀನಾಂ ಯಥಾರ್ಥತಾ ।।

ಇತಿ । ''ಕ್ರತುಂ ಕುರ್ವೀತ'' ಇತ್ಯಸ್ಯ ಧ್ಯಾನಂ ಕುರ್ವೀತ ಉಪಾಸೀತೇತಿ ಯಾವದಿತ್ಯರ್ಥಃ । ''ಮನೋಮಯಃ'' ಇತ್ಯಂಶೋಕ್ತಿಃ ಪೂರ್ವಪಕ್ಷಯುಕ್ತಿಸೂಚನಾಯ, ''ಸತ್ಯಸಙ್ಕಲ್ಪಃ'' ಇತ್ಯಂಶೋಕ್ತಿಃ ಸಿದ್ಧಾನ್ತಯುಕ್ತಿಸೂಚನಾಯೇತಿ ಜ್ಞೇಯಮ್ ।

ಹಿಂದೆ ಹೇಳಿದ ವಿಚಾರವನ್ನೇ ಭಾಮತಿಯಲ್ಲಿ ಹೀಗೆ ಸಂಗ್ರಹಿಸಲಾಗಿದೆ -

ಸಮಾಸಸ್ಸರ್ವನಾಮಾರ್ಥಃ ಸನ್ನಿಕೃಷ್ಟಮಪೇಕ್ಷತೇ।
ತದ್ಧಿತಾರ್ಥೋऽಪಿ ಸಾಮಾನ್ಯಾನ್ನಾಪೇಕ್ಷಾಯಾ ನಿವರ್ತಕಃ॥
ತಸ್ಮಾದಪೇಕ್ಷಿತಂ ಬ್ರಹ್ಮ ಗ್ರಾಹ್ಯಮನ್ಯಪರಾದಪಿ।
ತಥಾ ಚ ಸತ್ಯಸಂಕಲ್ಪಪ್ರಭೃತೀನಾಂ ಯಥಾರ್ಥತಾ॥

'ಪ್ರಾಣಶರೀರಃ' ಎಂಬ ಸಮಾಸದಲ್ಲಿ ಅಡಗಿದ 'ಅಸ್ಯ' ಎಂಬ ಸರ್ವನಾಮದ ಅರ್ಥವು ಸನ್ನಿಹಿತವಾದದ್ದನ್ನೇ ಪರಾಮರ್ಶಿಸುತ್ತದೆ. 'ಮನೋಮಯಃ' ಎಂಬಲ್ಲಿರುವ ತದ್ಧಿತಾರ್ಥವೂ ಸಹ ಜೀವವಿಶೇಷಬೋಧಕವಾಗಿಲ್ಲ. ಆದ್ದರಿಂದ ಆಕಾಂಕ್ಷೆಗೆ ನಿವರ್ತಕವಾಗುವುದಿಲ್ಲ. ಉಪಾಸನೆಗೆ ಕರ್ಮಕಾಂಕ್ಷೆಯು ಪ್ರಾಪ್ತವಾದಾಗ 'ಸರ್ವಂ ಖಲ್ವಿದಂ' ಎಂಬ ವಾಕ್ಯವು ಅನ್ಯಪರವಾದರೂ ಸಹ ಬ್ರಹ್ಮನ್ನು ಕರ್ಮವೆಂದು ತಿಳಿಸುತ್ತದೆ. ಆದ್ದರಿಂದ 'ಸತ್ಯಸಂಕಲ್ಪತ್ವ' ಮೊದಲಾದ ಧರ್ಮಗಳು ಬ್ರಹ್ಮನಲ್ಲಿ ಯುಕ್ತವಾಗುತ್ತವೆ ಎಂದು.

ಶ್ರುತಿಯಲ್ಲಿರುವ ''ಕ್ರತುಂ ಕುರ್ವೀತ'' ಎಂಬುದಕ್ಕೆ ಧ್ಯಾನವನ್ನು ಮಾಡಬೇಕು ಅಂದರೆ ಉಪಾಸನೆ ಮಾಡಬೇಕೆಂದು ಅರ್ಥ. ವಿಷಯವಾಕ್ಯದಲ್ಲಿ 'ಮನೋಮಯಃ' ಎಂಬ ಅಂಶವನ್ನು ಸ್ವೀಕರಿಸಿದ್ದರಿಂದ ಪೂರ್ವಪಕ್ಷಯುಕ್ತಿಯನ್ನು ಸೂಚಿಸಿದ್ದಾರೆ. 'ಸತ್ಯಸಂಕಲ್ಪ' ಎಂಬ ಅಂಶವನ್ನು ಸ್ವೀಕರಿಸಿದ್ದರಿಂದ ಸಿದ್ಧಾಂತಯುಕ್ತಿಯನ್ನು ಸೂಚಿಸಿದ್ದಾರೆಂದು ತಿಳಿಯಬೇಕು.

ಪ್ರಕಾಶಃ – ನನು ಮನೋಮಯಾವಾಕ್ಯೋಕ್ತೋ ಜೀವಃ ಕ್ರತುಃ, ಬ್ರಹ್ಮೈವ ಕಿಂ ನೇತ್ಯತ ಆಹ – ತಸ್ಯೈವೇತಿ ।

ननु जीवस्य मनोमयत्वादयः स्वतः, ब्रह्मणस्तु तद्वारा । प्रथमं द्वारस्य बुद्धिस्थत्वात्तदेवोपास्यमस्तु, न पुनर्जघन्यं ब्रह्म, तल्लिङ्गानि च तदभेदाज्जीवेऽप्युपपत्स्यन्त इति भावेनाशङ्क्य निराह – नच वैपरीत्यमिति । 'रूपवती' धर्मवती । 'विषयः' अधिष्ठानं । रूपशब्दो धर्मपरः ।

ಮನೋಮಯ ವಾಕ್ಯದಿಂದ ಹೇಳಲ್ಪಟ್ಟವನು ಜೀವನೇ ಏಕಾಗಬೇಕು. ಬ್ರಹ್ಮನು ಏಕೆ ಪ್ರತಿಪಾದ್ಯನಾಗಬಾರದು? ಎಂಬ ಪ್ರಶ್ನೆಗೆ 'तस्मैव' ಎಂಬುದರಿಂದ ಉತ್ತರಿಸಿದ್ದಾರೆ.

ಜೀವನಲ್ಲಿ ಮನೋಮಯತ್ವಾದಿಗಳು ಸ್ವಾಭಾವಿಕವಾಗಿ ಜೀವನಲ್ಲಿ ಇರುತ್ತವೆ. ಬ್ರಹ್ಮನಲ್ಲಾದರೂ ಜೀವಾಭೇದಮೂಲಕವಾಗಿ ಇರುತ್ತವೆ. ಮೊದಲು ದ್ವಾರವೇ ಬುದ್ಧಿಯಲ್ಲಿ ಉಪಸ್ಥಿತವಾಗುವುದರಿಂದ ಅಂತಹ ಜೀವನೇ ಉಪಾಸ್ಯನಾಗಲಿ ಗೌಣನಾದ ಬ್ರಹ್ಮನು ಉಪಾಸ್ಯನಾಗುವುದು ಬೇಡ. ಶ್ರುತಿಯಲ್ಲಿ ಬ್ರಹ್ಮನ ಲಿಂಗಗಳು ಕೇಳಿಸುತ್ತಿರಬಹುದು. ಆದರೆ ಜೀವಾಭೇದವಿರುವುದರಿಂದ ಆ ಲಿಂಗಗಳೆಲ್ಲವನ್ನು ಜೀವನಲ್ಲಿ ಕೂಡಿಸಬಹುದು. ಹೀಗೆ ಆಶಂಕಿಸಿ 'नच वैपरीत्यं' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ರೂಪವತಿ' ಎಂದರೆ ಧರ್ಮವುಳ್ಳದ್ದು ಎಂದರ್ಥ. 'ವಿಷಯ' ಶಬ್ದಕ್ಕೆ ಅಧಿಷ್ಠಾನ ಎಂದರ್ಥ. 'ರೂಪ' ಶಬ್ದಕ್ಕೆ ಧರ್ಮ ಎಂದರ್ಥ.

गुरुराजीयम् – समारोप्यस्य रूपेणेति ।। ज्ञायमानेन समारोप्यरूपेणाधिष्ठानं विषयो रूपवान् भवेत् । तस्याज्ञायमानत्वेन समारोपकालेपि सत्वात् । विषयस्य तु रूपेणासाधारणाकारेण ज्ञायमानेन समारोप्यं न रूपवत् । अधिष्ठानासाधारणरूपज्ञाने सति समारोप्याभावादित्यर्थः ।

ಸಾರ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - 'मनोमयः प्राणशरीरः भारूपः सत्यसंकल्पः' ಎಂಬುದು ವಿಷಯವಾಕ್ಯ. ಮನಸ್ಸು ಮೊದಲಾದವುಗಳ ಸಂಬಂಧವಿರುವ ಜೀವನೇ ಮನೋಮಯನೆಂದು ಉಪಾಸಿಸಬೇಕೆಂದು ಪೂರ್ವಪಕ್ಷ. ಸತ್ಯಕಾಮತ್ವಾದಿಲಿಂಗಗಳಿರುವುದರಿಂದ ಬ್ರಹ್ಮನೇ ಉಪಾಸ್ಯನೆಂದು ಸಿದ್ಧಾಂತ. ಮನೋಮಯತ್ವ ಮೊದಲಾದ ಜೀವನ ಧರ್ಮಗಳೆಲ್ಲವನ್ನು ಜೀವಾಭಿನ್ನನಾದ್ದರಿಂದ ಬ್ರಹ್ಮನಲ್ಲಿಯೇ ಹೊಂದಿಸಬೇಕು.

ಜೀವನ ಧರ್ಮವನ್ನು ಬ್ರಹ್ಮನಲ್ಲಿ ಕೂಡಿಸುವುದಾದರೆ ಬ್ರಹ್ಮನಲ್ಲಿರುವ ಸತ್ಯಸಂಕಲ್ಪತ್ವವೇ ಮೊದಲಾದ ಬ್ರಹ್ಮನ ಧರ್ಮಗಳನ್ನು ಜೀವನಲ್ಲೇಕೆ ಕೂಡಿಸಬಾರದು? ಎಂಬ ಪ್ರಶ್ನೆಗೆ ಅದ್ವೈತಿಗಳ ಉತ್ತರ ಹೀಗಿದೆ - ಜೀವನು ಬ್ರಹ್ಮನಲ್ಲಿ ಅಧ್ಯಸ್ತನಾಗಿದ್ದಾನೆ. ಅಧ್ಯಸ್ತಪದಾರ್ಥದಲ್ಲಿರುವ ಧರ್ಮವು ಅಧಿಷ್ಠಾನದಲ್ಲಿ ಬರಬಹುದು. ಆದರೆ ಅಧಿಷ್ಠಾನದಲ್ಲಿರುವ ಧರ್ಮವು ಅಧ್ಯಸ್ತದಲ್ಲಿ ಬರಲು ಸಾಧ್ಯವಿಲ್ಲ. ಹಗ್ಗವನ್ನು ನೋಡಿ ಹಾವು ಎಂದು ಭ್ರಮಿಸಿದಾಗ ಭಯವನ್ನು ಹುಟ್ಟಿಸುವಿಕೆ ಎಂಬುದು ಸರ್ಪದಲ್ಲಿರುವ ಧರ್ಮವಾಗಿದೆ. ಇದು

ರಜ್ಜುವಿನಲ್ಲಿ ಬರುವುದು ಕಂಡಿದೆ. ಆದರೆ ರಜ್ಜುವಿನಲ್ಲಿ ಅಭಿಮುಖವಾಗಿ ಹೋಗುವಿಕೆ ಎಂಬ ಧರ್ಮವಿದೆ. ಈ ಧರ್ಮವು ಸರ್ಪದಲ್ಲಿರುವುದು ಕಂಡಿಲ್ಲ. ಅಂದರೆ ಹಗ್ಗವನ್ನು ಸ್ವೀಕರಿಸಲು ಹೋಗುತ್ತೇವೆ. ಆದರ ಸರ್ಪವನ್ನು ಸ್ವೀಕರಿಸಲು ಯಾರೂ ಹೋಗುವುದಿಲ್ಲ.

ಅದ್ವೈತಮತ ವಿಮರ್ಶೆ

ಅತ್ರ ಬ್ರೂಮಃ –

तत्त्वतो भात्यधिष्ठाने नारोप्यगतधर्मधीः ।
ब्रह्मणश्च तथा भानं त्वयाऽप्यत्राभ्युपेयते ।।

यद्यप्यारोप्यस्यासाधारणरूपेण ज्ञानदशायामधिष्ठानमस्ति, अधिष्ठानस्य तु तथा ज्ञानदशायां आरोप्यं नास्ति । तथाऽप्यधिष्ठानं तथा ज्ञानदशायां नारोप्यधर्मेण धर्मवत् । नहि रज्जू रज्जुत्वाभिगम्यत्वादिना ज्ञानदशयां भीषणत्वादिमत् । प्रकृते च अधिष्ठानं ब्रह्मत्वसाधकसत्यकामत्वाद्यसाधारणरूपेण भासते । नहि सिद्धान्तः ''सत्यकामः'' इत्यादिवाक्यशेषाज्ञानमूलः ।

यद्यपि ''सत्यकामः'' इत्यादिवाक्यजन्यमधिष्ठानतत्त्वज्ञानं परोक्षम्, तथाऽपि तत्परोक्षभ्रमविरोध्येव । इह चाणीयस्त्वादिविभ्रमः श्रौतत्वात्परोक्षः । अत एवायं न सोपाधिकः, येन तत्त्वज्ञानेऽप्यनुवर्तेत ।

ಅನುವಾದ - ಅದ್ವೈತಿಗಳಿಗೆ ಹೀಗೆ ಉತ್ತರಿಸುತ್ತೇವೆ -

ತತ್ತ್ವತೋ ಭಾತ್ಯಧಿಷ್ಠಾನೇ ನಾರೋಪ್ಯಗತಧರ್ಮಧೀಃ ।
ಬ್ರಹ್ಮಣಶ್ಚ ತಥಾ ಭಾನಂ ತ್ವಯಾऽಪ್ಯತ್ರಾಭ್ಯುಪೇಯತೇ ॥
ಭ್ರಾಂತಿಗೆ ಅಧಿಷ್ಠಾನನಾದ ಬ್ರಹ್ಮನು ತತ್ವತಃ ತೋರುವಾಗ

ವಸ್ತುತಸ್ತು ಯಾವ ಸಂದರ್ಭದಲ್ಲಿ ಆರೋಪ್ಯವು ತನ್ನಲ್ಲಿರುವ ಅಸಾಧಾರಣ ಧರ್ಮದಿಂದ ತೋರುತ್ತಿರುತ್ತದೋ ಆ ಸಂದರ್ಭದಲ್ಲಿ ಅಧಿಷ್ಠಾನವು ಇರಬಹುದು. ಅಧಿಷ್ಠಾನವು ತನ್ನಲ್ಲಿರುವ ಅಸಾಧಾರಣ ಧರ್ಮದಿಂದ ತೋರುವಾಗ ಆರೋಪ್ಯವು ಇರಲು ಸಾಧ್ಯವಿಲ್ಲ. ಆದರೆ ಅಧಿಷ್ಠಾನವು ಯಾವ ಸಂದರ್ಭದಲ್ಲಿ ತನ್ನಲ್ಲಿರುವ ಧರ್ಮದಿಂದ ಸಹಿತವಾಗಿ ತೋರುತ್ತಿರುತ್ತದೋ ಆ ಸಂದರ್ಭದಲ್ಲಿ ಆರೋಪ್ಯದಲ್ಲಿರುವ ಧರ್ಮದಿಂದ ಸಹಿತವಾಗಿ ತೋರಲು ಸಾಧ್ಯವಿಲ್ಲ. ಏಕೆಂದರೆ ಹಗ್ಗದಲ್ಲಿ

'ಅಭಮುಖೀಕೃತ್ಯ ಗಮ್ಯತ್ವ,' ಎಂಬ ಧರ್ಮವು ತೋರುವ ಸಂದರ್ಭದಲ್ಲಿ ಅಧ್ಯಸ್ತವಾದ ಸರ್ಪದಲ್ಲಿರುವ ಭೀಷಣತ್ವಾದಿಧರ್ಮಗಳು ಹಗ್ಗದಲ್ಲಿ ತೋರುವುದಿಲ್ಲ.

ಪ್ರಕೃತ ಅಧಿಷ್ಠಾನಭೂತನಾದ ಬ್ರಹ್ಮನು ಬ್ರಹ್ಮತ್ವಕ್ಕೆ ಸಾಧಕವಾದ ಸತ್ಯಕಾಮತ್ವವೇ ಮೊದಲಾದ ಅಸಾಧಾರಣ ಧರ್ಮದಿಂದ ಸಹಿತನಾಗಿ ತೋರುತ್ತಿರುವುದರಿಂದ ಜೀವನಲ್ಲಿರುವ ಮನೋಮಯತ್ವಾದಿಗಳನ್ನು ಆರೋಪಿಸಲು ಸಾಧ್ಯವಿಲ್ಲ. ಒಂದು ವೇಳೆ ಸತ್ಯಕಾಮತ್ವಾದಿಗಳ ಜ್ಞಾನವು ಇಲ್ಲದಿದ್ದರೆ ಮನೋಮಯತ್ವಾದಿಗಳನ್ನು ಆರೋಪಿಸಬಹುದಿತ್ತು. ಆದರೆ ಸಿದ್ಧಾಂತವು 'ಸತ್ಯಕಾಮಃ' ಇತ್ಯಾದಿ ವಾಕ್ಯಶೇಷದ ಅಜ್ಞಾನಮೂಲವಾಗಲು ಸಾಧ್ಯವಿಲ್ಲ.

ವಿಚಾರ ಮಾಡಿದರೆ 'ಸತ್ಯಕಾಮಃ' ಇತ್ಯಾದಿ ವಾಕ್ಯದಿಂದ ಹುಟ್ಟುವ ಅಧಿಷ್ಠಾನತತ್ವಜ್ಞಾನವು ಶಬ್ದಜನ್ಯಜ್ಞಾನದಿಂದ ಪರೋಕ್ಷವಾಗಿದೆ. ಆದರೂ ಸಹ ಪರೋಕ್ಷಭ್ರಮಕ್ಕೆ ಆ ಅಧಿಷ್ಠಾನತತ್ವಜ್ಞಾನವು ವಿರೋಧಿಯಾಗಿಯೇ ತೀರುತ್ತದೆ. ಪ್ರಕೃತ ಬ್ರಹ್ಮನಲ್ಲಿ ಬರುತ್ತಿರುವ ಮನೋಮಯತ್ವ ಅನೀಯತ್ವಾದಿ ಭ್ರಮೆಯು ಶ್ರುತಿಯಿಂದ ಬರುತ್ತಿರುವುದರಿಂದ ಪರೋಕ್ಷವಾದ್ದರಿಂದಲೇ ಶಂಖದಲ್ಲಿ ಬರುವ ಪೀತ ಭ್ರಮೆಯಂತೆ ಇದನ್ನು ಸೋಪಾಧಿಕವೆನ್ನಲಾಗದು. ಹಾಗೇ ಸೋಪಾಧಿಕವಾಗಿದ್ದಲ್ಲಿ ಅಧಿಷ್ಠಾನ-ತತ್ತ್ವಜ್ಞಾನವಿದ್ದಾಗಲೂ ಮನೋಮಯತ್ವಾದಿಗಳನ್ನು ಆರೋಪಿಸಬಹುದಿತ್ತು. ಅಂದರೆ ಭ್ರಮೆಯು ಅನುವೃತ್ತಿಯಾಗುತ್ತಿತ್ತು.

ಪ್ರಕಾಶಃ –

अत्रेदं दूषणं ध्येयं – अस्मद्गीत्या पूर्वसङ्गतस्य संशयपूर्वपक्षबीजयुक्तस्य स्ववाक्यस्थशब्दविशेषोपेतस्य वाक्यस्योदाहरणत्वसम्भवेऽनेवंविधवाक्योक्तत्वयोगात्। नहि तद्वाक्ये सत्यकामत्वादिब्रह्मधर्माणां सत्त्वात्सन्देहो युज्यते,

ವಿವರಣೆ – ಅದ್ವೈತಿಗಳ ಅಧಿಕರಣಶರೀರದಲ್ಲಿರುವ ದೋಷಗಳನ್ನು ಹೀಗೆ ತಿಳಿಯಬೇಕು - ನಮ್ಮ ಸಿದ್ಧಾಂತದಲ್ಲಿ 'ಏತಂಹ್ಯೇವ ಬಹ್ವ್ಯಃಚಾಃ' ಎಂಬುದಾಗಿ ವಿಷಯವಾಕ್ಯ. ಆದ್ವೈತಮತದಲ್ಲಿ 'ಪ್ರಾಣಶರೀರಃ ಭಾರೂಪಃ' ಎಂಬುದು ವಿಷಯವಾಕ್ಯ. ನಮ್ಮ ಸಿದ್ಧಾಂತದ ವಿಷಯವಾಕ್ಯದಲ್ಲಿ ಹಿಂದಿನಿಂದ ಸಂಗತವಾಗುವಂತೆ ಸಂಶಯಪೂರ್ವಪಕ್ಷಕ್ಕೆ ಕಾರಣವನ್ನು ತಿಳಿಯುವಂತೆ ವಿಷಯವಾಕ್ಯದಲ್ಲಿ ಶಬ್ದಗಳಿರುತ್ತವೆ. ಇದನ್ನೇ ವಿಷಯವಾಕ್ಯವನ್ನಾಗಿ ಪರಿಗಣಿಸಲು ಬರುವಾಗ ಸಂದೇಹ ಪೂರ್ವಾಪಕ್ಷಾದಿಗಳಿಗೆ ಅವಕಾಶವಿಲ್ಲದಂತಹ ವಾಕ್ಯವನ್ನು ಉದಾಹರಿಸುವುದು ಅಯುಕ್ತವಾಗಿದೆ. ಏಕೆಂದರೆ ಅದ್ವೈತಿಗಳು ಉಲ್ಲೇಖಿಸುವ ವಿಷಯವಾಕ್ಯದಲ್ಲಿ

ಸತ್ಯಕಾಮತ್ವವೇ ಮೊದಲಾದ ಬ್ರಹ್ಮನ ಧರ್ಮಗಳು ಸ್ಫುಟವಾಗಿ ತಿಳಿಯುತ್ತಿರುವುದರಿಂದ ಸಂದೇಹಕ್ಕೆ ಅವಕಾಶವೇ ಇಲ್ಲ.

ಪ್ರಕಾಶಃ – ಮನೋಮಯತ್ವಾದೇರಾನನ್ದಮಯಾಧಿಕರಣನ್ಯಾಯೇನ ಸಾವಕಾಶತ್ವಾತ್ । ಅಪಚ್ಛೇದನ್ಯಾಯೇನ ಪರಪ್ರಾಬಲ್ಯೇನ ಸತ್ಯಕಾಮತ್ವಾದಿನಾ ಪೂರ್ವಸ್ಯ ಮನೋಮಯತ್ವಾದೇರ್ಬಾಧ-ಸಮ್ಭವಾಚ್ಚ ।

ಪೂರ್ವಪ್ರಾಬಲ್ಯೇऽಪಿ ಸತ್ಯಕಾಮಾತ್ವಾದೇರ್ಬಹುತ್ವೇನ ನಿರವಕಾಶತ್ವೇನ ಚ ಬಲವತ್ತ್ವಾತ್ ಪೂರ್ವಸ್ಯಾಪ್ಯಲ್ಪಸ್ಯ ಸಾವಕಾಶಸ್ಯ ಬಾಧೋಪಪತ್ತೇಃ ।

ವಸ್ತುತಃ ಮನೋಮಯತ್ವವೇ ಮೊದಲಾದ ಜೀವನ ಲಿಂಗಗಳು ಕೇಳಿಸುತ್ತಿರುವುದರಿಂದ ಸಂದೇಹ ಹುಟ್ಟುತ್ತದೆನ್ನಬಹುದು. ಆದರೆ ಈಗಾಗಲೇ ಆನಂದಮಯಾಧಿಕರಣದ ನ್ಯಾಯದಿಂದ ಮನೋಮಯತ್ವಾದಿಗಳನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಿದ್ದಾಗಿದೆ. ಮತ್ತು 'ವಿಪ್ರತಿಷೇಧೇ ಪರಂ ಕಾರ್ಯಂ' ಎಂದು ಸಿದ್ಧಾಂತ ಮಾಡುವ ಅಪಚ್ಛೇದನ್ಯಾಯವನ್ನು ಅನುಸರಿಸಿದಾಗ ಪೂರ್ವಕ್ಕಿಂತ ಪರವೇ ಪ್ರಬಲವೆಂದು ತಿಳಿಯುತ್ತದೆ. ಆದ್ದರಿಂದ ಪರದಲ್ಲಿರುವ ಸತ್ಯಕಾಮತ್ವಾದಿ ಧರ್ಮಗಳು ಪೂರ್ವದಲ್ಲಿರುವ ಮನೋಮಯತ್ವಾದಿಗಳನ್ನು ಬಾಧಿಸುತ್ತವೆ.

ಒಂದು ವೇಳೆ ಪೂರ್ವಕ್ಕೆ ಪ್ರಾಬಲ್ಯವನ್ನು ಒಪ್ಪಿದರೂ ಸಹ ಬ್ರಹ್ಮನ ಲಿಂಗವೆನಿಸಿದ ಸತ್ಯಕಾಮತ್ವಾದಿಗಳು ಬಹಳವಾಗಿವೆ,' ಮತ್ತು ನಿರವಕಾಶಗಳಾಗಿವೆ. ಆದ್ದರಿಂದ ಅಲ್ಪವೂ ಸಾವಕಾಶವೂ ಆಗಿರುವ ಮನೋಮಯತ್ವಾದಿಗಳನ್ನು ಸತ್ಯಕಾಮಾತ್ವಾದಿಗಳು ಬಾಧಿಸುತ್ತವೆ.

ಪ್ರಕಾಶಃ – ಕಿಞ್ಚ ಯಥಾ ತ್ವನ್ಮತೇ ಪೂರ್ವಾಧಿಕರಣೇ ಉಪಕ್ರಮೋಪಸಂಹಾರಾಭ್ಯಾಂ ಪ್ರತೀತೈಕವಾಕ್ಯತಾನುರೋಧೇನ ಜೀವಮುಖ್ಯಪ್ರಾಣಲಿಙ್ಗೇ ತದನುಗುಣತಯಾ ಬ್ರಹ್ಮಣಿ ನೀತೇ, ತಥೇಹಾಪಿ ''ಸರ್ವಂ ಖಲ್ವಿದಂ ಬ್ರಹ್ಮ'' ಇತ್ಯುಪಕ್ರಮಾತ್ ''ಏತದ್ವೈ ಬ್ರಹ್ಮ'' ಇತ್ಯುಪಸಂಹಾರಾದೈಕವಾಕ್ಯತ್ವಾವಗಮೇನ ಬ್ರಹ್ಮವಿಷಯತ್ವಪ್ರತೀತಿಸ್ವಾರಸ್ಯೇನ ಮನೋಮಯತ್ವಾದೇರ್ನೇಯತ್ವಾತ್ । ಭಿನ್ನವಿಷಯತ್ವಪ್ರತಿತಿ-ಪೂರ್ವಪಕ್ಷಾಯೋಗಾಚ್ಚೇತಿ ।

ಮತ್ತು ನಿಮ್ಮ ಹಿಂದಿನ ಅಧಿಕರಣದ ಸಿದ್ಧಾಂತ ಹೀಗಿದೆ - ಉಪಕ್ರಮ ಹಾಗೂ ಉಪಸಂಹಾರಗಳಿಂದ ಏಕವಾಕ್ಯತ್ವವು ತಿಳಿಯುತ್ತದೆ. ಅದನ್ನು ಅನುಸರಿಸಿ ಜೀವ ಹಾಗೂ ಮುಖ್ಯಪ್ರಾಣರ ಲಿಂಗಗಳೆಲ್ಲವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಬೇಕು. ಆದರಂತೆ ಇಲ್ಲಿಯೂ ಸಹ 'ಸರ್ವಂ ಖಲ್ವಿದಂ ಬ್ರಹ್ಮ,' ಎಂಬ ವಾಕ್ಯವು ಉಪಕ್ರಮದಲ್ಲಿದೆ. 'ಏತದ್ವೈ ಬ್ರಹ್ಮ,' ಎಂಬ ವಾಕ್ಯವು ಉಪಸಂಹಾರದಲ್ಲಿದೆ. ಈ ಉಪಕ್ರಮ ಹಾಗೂ ಉಪಸಂಹಾರಗಳ ಬಲದಿಂದ ಸಮಗ್ರ ಪ್ರಕರಣವು ಬ್ರಹ್ಮವಿಷಯಕವೆಂದು ಸ್ಪಷ್ಟವಾಗಿ ತಿಳಿಯುವುದರಿಂದ ಮನೋಮಯತ್ವಾದಿಗಳನ್ನೂ ಸಹ ಬ್ರಹ್ಮನಲ್ಲಿಯೇ ಸಮನ್ವಯ ಮಾಡಬೇಕು. ಹೀಗಿರುವಾಗ ಮನೋಮಯತ್ವಾದಿಗಳು ಜೀವನನ್ನು ಹೇಳುತ್ತಿವೆ ಎಂಬ ಪೂರ್ವಪಕ್ಷವು ಕೂಡುವುದಿಲ್ಲ.

प्रकाशः – यदुक्तं, सिद्धान्ते जीवधर्माणां ब्रह्मण्यारोप इति, तत्र युक्तं, – रज्जुत्वसाधारणधर्मेण प्रतीतायां रज्जौ भीषणत्वाद्यनारोपस्येव सत्यकामत्वाद्य-साधारणधर्मेण प्रतीते ब्रह्मणि जीवधर्मारोपस्यायोगात्

सिद्धान्तानुदय इत्याह – तत्त्वत इति । अत्र तथाभानमसिद्धमित्यत आह – **ब्रह्मणश्चेति । सत्यकामात्वादिधर्मैस्सिद्धान्तितत्वादिति भावः ।**

ಸಂಶಯ ಹಾಗೂ ಪೂರ್ವಪಕ್ಷಗಳು ಹೇಗೆ ಕೂಡುವುದಿಲ್ಲವೋ? ಆದರಂತೆ ಸಿದ್ಧಾಂತವೂ ಸಹ ಕೂಡುವುದಿಲ್ಲ. ಏಕೆಂದರೆ ಜೀವನ ಧರ್ಮಗಳು ಬ್ರಹ್ಮನಲ್ಲಿ ಆರೋಪಿತವಾಗುತ್ತವೆಂದು ಸಿದ್ಧಾಂತ ಮಾಡಿದರು. ಇದು ತಪ್ಪು. ಅಧ್ಯಸ್ತವಾದ ಸರ್ಪದಲ್ಲಿರುವ ಭೀಷಣತ್ವಾದಿಗಳನ್ನು ಅಧಿಷ್ಠಾನಭೂತವಾದ ರಜ್ಜುವಿನಲ್ಲಿ ತಿಳಿಯುವುದು ಕಂಡಿದೆ. ಆದರೆ ಯಾವಾಗ ರಜ್ಜುವನ್ನು ರಜ್ಜುತ್ವವೆಂಬ ಸಾಧಾರಣ ಧರ್ಮದಿಂದ ತಿಳಿಯುತ್ತೇವೋ, ಆವಾಗ ಅಧ್ಯಸ್ತದಲ್ಲಿರುವ ಭೀಷಣತ್ವಾದಿಗಳನ್ನು ಆರೋಪಿಸಲು ಸಾಧ್ಯವಿಲ್ಲ. ಅಂದರೆ ಅಧಿಷ್ಠಾನದಲ್ಲಿ ತನ್ನಲ್ಲಿರುವ ಧರ್ಮವನ್ನು ತಿಳಿದಾಗ ಅಧ್ಯಸ್ತದಲ್ಲಿರುವ ಧರ್ಮವನ್ನು ಆರೋಪಿಸಲಾಗದು. ಆದರಂತೆ ಅಧಿಷ್ಠಾನನಾದ ಬ್ರಹ್ಮನಲ್ಲಿ ಸತ್ಯಕಾಮತ್ವಾದಿ ಧರ್ಮಗಳು ತಿಳಿಯುತ್ತಿರುವುದರಿಂದ ಅಧ್ಯಸ್ತದಲ್ಲಿರುವ ಜೀವನ ಧರ್ಮಗಳನ್ನು ಆರೋಪಿಸಲು ಸಾಧ್ಯವಿಲ್ಲ.

ಸಿದ್ಧಾಂತವು ಹುಟ್ಟುವುದಿಲ್ಲವೆಂದು 'तत्त्वतः' ಎಂಬ ಶ್ಲೋಕದಿಂದ ಪ್ರತಿಪಾದಿಸುತ್ತಿದ್ದಾರೆ. ಇಲ್ಲಿ ನೀವು ಹೇಳುವಂತೆ ತೋರುವಿಕೆಯು ಅಸಿದ್ಧವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ 'ब्रह्मणश्च' ಎಂಬ ಶ್ಲೋಕದ ಉತ್ತರಾರ್ಧದಿಂದ ಉತ್ತರಿಸುತ್ತಾರೆ. ಸತ್ಯಕಾಮತ್ವಾದಿ ಧರ್ಮಗಳಿಂದ ನೀವು ಸಿದ್ಧಾಂತ ಮಾಡಿದ್ದೀರೆಂದು ಅಭಿಪ್ರಾಯ.

प्रकाशः – प्रागुक्तानुवादपूर्वं श्लोकं व्यनक्ति – यद्यपीति ।

ननु तत्त्वतो ब्रह्मभानस्य शाब्दत्वेन परोक्षत्वात्कथमारोपविरोधित्वम् । नहि पैत्यानुमितिः शङ्के पैत्यारोपविरोधिनीत्याशङ्क्याह – यद्यपीति । अत एवेति । परोक्षत्वादेवेत्यर्थः । पैत्यारोपस्त्वपरोक्षः सोपाधिकश्चेति भावः ।

ಹಿಂದೆ ಹೇಳಿದ್ದನ್ನು ಅನುವಾದ ಮಾಡುವ ಮೂಲಕವಾಗಿ ಶ್ಲೋಕವನ್ನು ಸ್ವತಃ ವ್ಯಾಖ್ಯಾನಿಸುತ್ತಿದ್ದಾರೆ. 'यद्यपि' ಇತ್ಯಾದಿ ವಾಕ್ಯದಿಂದ.

ವಾಸ್ತವಿಕವಾದ ಬ್ರಹ್ಮನ ಭಾನವು ಶಬ್ದವೇದ್ಯವಾಗಿದೆ. ಆದ್ದರಿಂದ ಪರೋಕ್ಷವಾಗಿದೆ. ಹೀಗಿರುವಾಗ ಆರೋಪಕ್ಕೆ ವಿರೋಧಿಯೆಂದು ಹೇಗೆ ಹೇಳುತ್ತೀರಿ ? 'शंखः श्वेतः शंखात्वात्' ಎಂಬ ಅನುಮಾನದಿಂದ ಶಂಖವು ಶ್ವೇತವಾಗಿದೆಯೆಂಬ ಅನುಮಿತಿ ಬರುತ್ತದೆ. ಆದರೂ ಸಹ ಕಾಮಾಲೆ ದೋಷವಿರುವಂತಹ ವ್ಯಕ್ತಿಗೆ

ಶಂಖವು ಶ್ವೇತವರ್ಣದಲ್ಲಿದೆ ಎಂಬ ಜ್ಞಾನವಿರುವಾಗಲೇ ಶಂಖವು ಹಳದಿಯಾಗಿದೆ ಎಂಬ ಭ್ರಮೆಯು ಬರುತ್ತದೆ. ಈ ಸ್ಥಳದಲ್ಲಿ ಅಧಿಷ್ಠಾನದಲ್ಲಿರುವ ಧರ್ಮವು ತೋರುತ್ತಿದ್ದರೂ ಅಧ್ಯಸ್ತದಲ್ಲಿರುವ ಪೈತ್ಯವೂ ಸಹ ತೋರುತ್ತಿದೆ. ಆದ್ದರಿಂದ ಬ್ರಹ್ಮನಲ್ಲಿ ಸತ್ಯಕಾಮತ್ವಾದಿ ಧರ್ಮಗಳು ತೋರುವ ಕಾಲದಲ್ಲಿಯೂ ಮನೋಮಯತ್ವಾದಿಗಳನ್ನು ಅಧ್ಯಾಸ ಮಾಡಬಹುದಲ್ಲವೇ ? ಎಂಬ ಪ್ರಶ್ನೆಗೆ 'ಯದ್ಯಪಿ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಅಥೈವ' ಎಂದರೆ ಪರೋಕ್ಷವಾಗಿರುವುದರಿಂದಲೇ ಎಂದರ್ಥ. ಶಂಖದಲ್ಲಿ ಮಾಡುತ್ತಿರುವ ಪೈತ್ಯಾರೋಪವು ಅಪರೋಕ್ಷವಾಗಿರುವುದರಿಂದಲೂ ಸೋಪಾಧಿಕವಾಗಿದೆ. ಆದರೆ ಬ್ರಹ್ಮನಲ್ಲಿ ಮಾಡುತ್ತಿರುವ ಮನೋಮಯತ್ವಾದಿಗಳ ಆರೋಪವು ಶ್ರುತಿಸಿದ್ಧವಾದ್ದರಿಂದ ಪರೋಕ್ಷವಾಗಿದೆ. ಮತ್ತು ನಿರುಪಾಧಿಕವಾಗಿದೆ. ಹೀಗೆ ವ್ಯತ್ಯಾಸವಿರುವುದರಿಂದ ಶಂಖದಲ್ಲಿ ಬರುವ ಪೈತತ್ವ ಆರೋಪವನ್ನು ದೃಷ್ಟಾಂತವನ್ನಾಗಿ ನೀಡಲಾಗದು.

ಗುರುರಾಜೀಯಮ್ – ನನು ಸತ್ಯಕಾಮ ಇತ್ಯಾದಿವಾಕ್ಯಶೇಷಜನ್ಯಜ್ಞಾನಸ್ಯ ಪರೋಕ್ಷತ್ವಾತ್ ಕಥಂ ತಸ್ಯ ಮನೋಮಯತ್ವಾದ್ಯಾರೋಪವಿರೋಧಿತ್ವಮ್ । ಸಾಕ್ಷಾತ್ಕಾರಿಭ್ರಮೇ ಸಾಕ್ಷಾತ್ಕಾರಿವಿಶೇಷದರ್ಶನಸ್ಯೈವ ವಿರೋಧಿತ್ವೇನ ಪರೋಕ್ಷಸ್ಯ ತಸ್ಯಾವಿರೋಧಿತ್ವಾತ್ । ಅನ್ಯಥಾ 'ಪೀತಃ ಶಙ್ಖಃ' ಇತಿ ಭ್ರಮೋ ನ ಸ್ಯಾದಿತ್ಯತ ಆಹ – ಯದ್ಯಪೀತಿ ।।

ನನು ಮನೋಮಯತ್ವಾದ್ಯಾರೋಪಸ್ಯ ಸೋಪಾಧಿಕತ್ವಾತ್ ಸತ್ಯಕಾಮತ್ವಾದಿನಿರ್ಣಯೇऽಪ್ಯನುವೃತ್ತಿಃ ಸ್ಸಯಾದಿತ್ಯತ ಆಹ – ಅತ ಏವೇತಿ ।। ಪರೋಕ್ಷತ್ವಾದೇವೇತ್ಯರ್ಥಃ ।।

ಸಾರ

ಅದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ. ತಮ್ಮ ಸಿದ್ಧಾಂತದಲ್ಲಿ ಜೀವಬ್ರಹ್ಮರ ಅಭೇದವನ್ನು ಒಪ್ಪಿ ಜೀವನಲ್ಲಿರುವ ಮನೋಮಯತ್ವಾದಿ ಧರ್ಮಗಳನ್ನು ಬ್ರಹ್ಮನಲ್ಲಿ ಸಮರ್ಥಿಸಿದ್ದು ಸರಿಯಲ್ಲ. ಏಕೆಂದರೆ ಸತ್ಯಸಂಕಲ್ಪತ್ವವೇ ಮೊದಲಾದ ಧರ್ಮಗಳಿಂದ ಅಧಿಷ್ಠಾನಭೂತನಾದ ಬ್ರಹ್ಮನು ತೋರುತ್ತಿರುವಾಗ ಜೀವನಲ್ಲಿರುವ ಮನೋಮಯತ್ವಾದಿಧರ್ಮಗಳನ್ನು ಆರೋಪಿಸಲು ಸಾಧ್ಯವೇ ಇಲ್ಲ. ಶುಕ್ತಿಯಲ್ಲಿ ಶುಕ್ತಿತ್ವವೆಂಬ ಧರ್ಮವು ಸ್ಪಷ್ಟವಾಗಿ ತೋರುವ ಕಾಲದಲ್ಲಿ ರಜತತ್ವವನ್ನು ಆರೋಪಿಸಲು ಹೇಗೆ ಸಾಧ್ಯ ? ಕಾಮಾಲೆಯಿರುವಂತಹ ವ್ಯಕ್ತಿಗೆ ಶಂಖವು ಬಿಳಿಯಂದು ತಿಳಿದಿದ್ದರೂ ಹಳದಿಬಣ್ಣವನ್ನು ಆರೋಪಿಸುವುದು ಕಂಡಿದೆಯಲ್ಲವೇ? ಅದರಂತೆ ಬ್ರಹ್ಮನಲ್ಲಿ ಸತ್ಯಕಾಮತ್ವಾದಿ ಧರ್ಮಗಳು ತೋರುತ್ತಿದ್ದರೂ ಮನೋಮಯತ್ವಾದಿಗಳನ್ನು ಆರೋಪಿಸುತ್ತೇವೆಂದು ಅದ್ವೈತಿಗಳು ತಮ್ಮ ವಾದವನ್ನು ಸಮರ್ಥಿಸಿಕೊಳ್ಳಬಹುದು. ಆದರೆ ಇದು ವಿಷಮದೃಷ್ಟಾಂತವಾಗಿದೆ. ಶಂಖದಲ್ಲಿ ಮಾಡುತ್ತಿರುವ ಹಳದಿಬಣ್ಣದ ಆರೋಪವು ಅಪರೋಕ್ಷವಾಗಿದೆ ಮತ್ತು ಸೋಪಾಧಿಕವಾಗಿದೆ. ಆದರೆ ಬ್ರಹ್ಮನಲ್ಲಿ

ಅದ್ವೈತಿಗಳು ಮಾಡುತ್ತಿರುವ ಮನೋಮಯತ್ವಾದಿ ಧರ್ಮಗಳ ಆರೋಪವು ಅಪರೋಕ್ಷವಾಗಿದೆ. ಮತ್ತು ನಿರುಪಾಧಿಕವಾಗಿದೆ. ಆದ್ದರಿಂದ ಸೋಪಾಧಿಕ ಬ್ರಹ್ಮಸ್ಥಳದಲ್ಲಿ ಮಾತ್ರ ಅಧಿಷ್ಠಾನದಲ್ಲಿರುವ ಧರ್ಮವು ತೋರಿದರೂ ಆರೋಪವನ್ನು ಮಾಡಬಹುದು. ಆದರೆ ನಿರುಪಾಧಿಕಬ್ರಹ್ಮಸ್ಥಳದಲ್ಲಿ ಹೀಗೆ ಆರೋಪಿಸುವುದು ಎಲ್ಲಿಯೂ ಕಂಡುಬಂದಿಲ್ಲ.

• • • • •

ಅಧಿಷ್ಠಾನ ತತ್ತ್ವಜ್ಞಾನವಿದ್ದಾಗ ಆರೋಪವು ಅಸಂಭಾವಿತ

ತಾತ್ಪರ್ಯಚನ್ದ್ರಿಕಾ

किञ्च – त्वन्मतेऽप्यस्य वाक्यस्य सत्यसङ्कल्पत्वादियुक्तसगुणब्रह्मविषयत्वात् जीवसगुणब्रह्मणोश्च निर्गुणेऽध्यस्तत्वात् कथं परस्परमधिष्ठानाध्यस्तभावः । यथोक्तं सङ्क्षेपशारीरके –

स्वाज्ञानकल्पितजगत्परमेश्वरत्वजीवत्वभेदकलुषीकृतभूरिभावा ।
स्वाभाविकस्वमहिमस्थितिरस्तमोहा प्रत्यक्चितिर्विजयते भुवनैकयोनिः ।।

इति ।

किञ्च – रज्जुमुद्दिस्य भीषणमिति व्यपदेश इव, ब्रह्मणि मनोमयत्वादिश्रौतव्यपदेशोऽप्रमाणं स्यात् ।

अपिच – त्वयाऽस्य वाक्यस्य उपासनापरताया असत्योपासनायाश्च स्वीकृतत्वात्, सत्यसङ्कल्पत्वज्यायस्त्वादीनां जीवे स्वरूपेणासत्त्वेऽपि तथोपासनं किं न स्यात् । नच सहश्रुतेषु मनोमयत्वादिकमेव उपास्यं, नतु सत्यसङ्कल्पत्वादिकमित्यत्र हेतुरस्ति ।

ಅನುವಾದ - ಮತ್ತು ನಿಮ್ಮ ಮತದಲ್ಲಿ 'ಸತ್ಯಸಂಕಲ್ಪಃ' ಎಂಬ ವಿಷಯವಾಕ್ಯವು ಸತ್ಯಸಂಕಲ್ಪತ್ವವೇ ಮೊದಲಾದ ಗುಣಗಳಿಂದ ಕೂಡಿದ ಸಗುಣಬ್ರಹ್ಮನನ್ನು ಪ್ರತಿಪಾದಿಸುತ್ತದೆಂದು ಒಪ್ಪಿದ್ದೀರಿ. ಜೀವ ಹಾಗೂ ಸಗುಣಬ್ರಹ್ಮರು ನಿರ್ಗುಣಬ್ರಹ್ಮರಲ್ಲಿ ಅಧ್ಯಸ್ತರಾಗಿದ್ದಾರೆಂದು ನೀವು ಹೇಳುತ್ತೀರಿ. ಹೀಗಿರುವಾಗ ಜೀವ ಹಾಗೂ ಸಗುಣಬ್ರಹ್ಮರಿಗೆ ಪರಸ್ಪರವಾಗಿ ಅಧಿಷ್ಠಾನ ಅಧ್ಯಸ್ತಭಾವವನ್ನು ಹೇಳಲು ಹೇಗೆ ಸಾಧ್ಯ ? ಸಂಕ್ಷೇಪ ಶಾರೀರಕವೆಂಬ ಗ್ರಂಥದಲ್ಲಿ ಈ ವಿಷಯವು ಸ್ಪಷ್ಟವಾಗಿ ಉಲ್ಲೇಖವಾಗಿದೆ -

ಸ್ವಾಜ್ಞಾನಕಲ್ಪಿತಜಗತ್ಪರಮೇಶ್ವರತ್ವಜೀವತ್ವಭೇದಕಲುಷೀಕೃತಭೂರಿಭಾವಾ ।
ಸ್ವಾಭಾವಿಕಸ್ವಮಹಿಮಸ್ಥಿತಿರಸ್ತಮೋಹಾ ಪ್ರತ್ಯಕ್‌ಚಿತಿರ್ವಿಜಯತೇ ಭುವನೈಕಯೋನಿಃ ॥

ಬ್ರಹ್ಮನು ಎಲ್ಲರ ಮನಸ್ಸನ್ನು ತನ್ನ ಅಜ್ಞಾನದಿಂದಲೇ ಕಲ್ಪಿತವಾದ ಜಗತ್ತು, ಪರಮೇಶ್ವರತ್ವ, ಜೀವತ್ವ, ಭೇದ ಇವುಗಳಿಂದೆಲ್ಲಾ ಕಲುಷ ಗೊಳಿಸಿದ್ದಾನೆ. ಆದರೂ ತನ್ನಲ್ಲಿರುವ ಸ್ವಾಭಾವಿಕವಾದ ಮಹಿಮೆಯಿಂದ ಮೋಹವಿಲ್ಲದವನಾಗಿದ್ದಾನೆ. ಇಂತಹ ಪತ್ಯಕ್ ಚೈತನ್ಯನೆನಿಸಿದ ಬ್ರಹ್ಮನು ಸಮಸ್ತ ಜಗತ್ತಿಗೆ ಕಾರಣಪುರುಷನಾಗಿ ವಿಜಯಿಸುತ್ತಾನೆ ಎಂದು.

ಹಗ್ಗವನ್ನು ಉದ್ದೇಶಿಸಿ ಭಯಾನಕವೆಂಬ ಮಾತು ಹೇಗೆ ಅಪ್ರಮಾಣವಾಗುತ್ತದೋ ! ಆದರಂತೆ ಬ್ರಹ್ಮನಲ್ಲಿ ಶ್ರುತಿಸಿದ್ಧವಾದ ಮನೋಮಯತ್ವವೇ ಮೊದಲಾದ ಮಾತುಗಳೂ ಅಪ್ರಮಾಣವಾಗುತ್ತವೆ.

ಮತ್ತು ಈ ವಾಕ್ಯವನ್ನು ಉಪಾಸನಾ ಪರವಾದ್ದರಿಂದ ಅಸತ್ಕೋಪಾಸನೆಯನ್ನು ಹೇಳುತ್ತಿದೆಯೆಂದು ಅಂಗೀಕರಿಸಿದ್ದೀರಿ. ಹೀಗಿರುವಾಗ ಸತ್ಯಸಂಕಲ್ಪತ್ವ, ಜ್ಯಾಯಸ್ತ್ವ ಮೊದಲಾದ ಧರ್ಮಗಳು ಜೀವನಲ್ಲಿ ಸ್ವರೂಪತಃ ಇಲ್ಲದಿದ್ದರೂ ಹಾಗೇಕೆ ಉಪಾಸನೆ ಮಾಡಬಾರದು. ಒಟ್ಟಗೆ ಕೇಳಿಸುತ್ತಿರುವ ಮನೋಮಯತ್ವಾದಿಗಳನ್ನು ಮಾತ್ರ ಉಪಾಸನೆ ಮಾಡಬೇಕು. ಸತ್ಯಸಂಕಲ್ಪತ್ವಾದಿಗಳನ್ನು ಉಪಾಸನೆ ಮಾಡಬಾರದೆನ್ನಲು ಏನಿಗಮಕವಿಲ್ಲ.

प्रकाशः —

ननु सत्यकामत्वादिना ब्रह्मणोऽत्र भानेऽपि नाधिष्ठानस्य तत्त्वतो भानम् । नहि सत्यकामत्वादिकमधिष्ठानस्य तत्त्वं, किन्तु शुद्धस्वभावत्वं, नहि तथाऽत्र ब्रह्मणो भानमस्ति, सविशेषस्यैव भानाङ्गीकारादित्यनुशयेनाह — **किञ्चेति** ।

जगत्त्वेन परमेश्वरत्वेन जीवत्वेन त्रयाणां प्रतीत्यारोपितत्वप्रतीतेरिति भावः ।

ವಿವರಣೆ - ಸತ್ಯಕಾಮತ್ವಾದಿ ಧರ್ಮಗಳಿಂದ ಬ್ರಹ್ಮನು ತೋರಿದರೂ ಸಹ ಅಧಿಷ್ಠಾನವು ಸಾತ್ವಿಕವಾಗಿ ತೋರಿದಂತಾಗುವುದಿಲ್ಲ. ಏಕೆಂದರೆ ಸತ್ಯಕಾಮತ್ವಾದಿಗಳು ಅಧಿಷ್ಠಾನದ ತತ್ತ್ವವಲ್ಲ. ಹೊರತಾಗಿ ಶುದ್ಧಸ್ವಭಾವತ್ವವು ಅಧಿಷ್ಠಾನದ ತತ್ತ್ವವೆನಿಸಿದೆ. ಶುದ್ಧಸ್ವಭಾವನಾಗಿ ಬ್ರಹ್ಮನು ಇಲ್ಲಿ ತೋರುತ್ತಿಲ್ಲ. ಆದ್ದರಿಂದ ಸವಿಶೇಷಬ್ರಹ್ಮನ ಭಾನವನ್ನಷ್ಟೇ ಅಂಗೀಕರಿಸಿರುವುದರಿಂದ ಅಧಿಷ್ಠಾನದ ತತ್ತ್ವಜ್ಞಾನವನ್ನು ನಾವು ಹೇಳಿಲ್ಲ ಎಂಬ ಅಭಿಪ್ರಾಯದಿಂದ 'किंच त्वन्मते' ಇತ್ಯಾದಿ ವಾಕ್ಯಗಳು ಹೊರಟಿವೆ.

'ಸ್ವಜ್ಞಾನ' ಎಂಬ ಶ್ಲೋಕಕ್ಕೆ ಹೀಗರ್ಥ - ಶುದ್ಧಚೈತನ್ಯದಲ್ಲಿ ಜಗತ್ವ ಪರಮೇಶ್ವರತ್ವ, ಜೀವತ್ವವೆಂಬ ಮೂರು ಧರ್ಮಗಳು ಆರೋಪಿತವಾಗಿವೆಯೆಂಬ ಪ್ರತೀತಿ ಇರುವುದರಿಂದ ಎಂದು.

ಪ್ರಕಾಶಃ – ನನು ಯಸ್ಸತ್ಯಕಾಮಃ ಸೋऽಣೀಯಾನಿತಿ ಸತ್ಯಕಾಮತ್ವಾದಿಯುತಮುದ್ದಿಶ್ಯ ಅಣೀಯಸ್ತ್ವಾದಿವಿಧೌ ಯತ್ಸತ್ಯಕಾಮತ್ವಾದ್ಯಾರೋಪಾಧಿಷ್ಠಾನಂ ತದೇವಾಣೀಯಸ್ತ್ವಾದ್ಯಾರೋಪಾದ್ಯಧಿಷ್ಠಾನಂ ಭವಿಷ್ಯತಿ, ವಲ್ಮೀಕೇ ಯಃ ಸ್ಥಾಣುಃ ಸ ಪುರುಷ ಇತಿವದಿತ್ಯತ ಆಹ – ಕಿಞ್ಚೇತಿ ।

ನಿರ್ಗುಣಬ್ರಹ್ಮನಲ್ಲಿ ಜೀವ ಹಾಗೂ ಸಗುಣಬ್ರಹ್ಮರು ಆರೋಪಿತವೆಂಬುದು ವಾಸ್ತವ. ಹೊರತು ಸಗುಣಬಹ್ಮನಲ್ಲಿ ಜೀವನು ಆರೋಪಿತನಾಗಿಲ್ಲ. ಉದಾ: - ವಲ್ಮೀಕವನ್ನು ನೋಡಿ ಒಬ್ಬನು ಸ್ಥಾಣುವೆಂದು ತಿಳಿಯುತ್ತಾನೆ. ಅನಂತರ ಸ್ಥಾಣುವಲ್ಲ ಪುರುಷನೆಂದು ತಿಳಿಯುತ್ತಾನೆ. ಆ ಸಂದರ್ಭದಲ್ಲಿ 'ಯಃ ಸ್ಥಾಣುಃ ಸ ಪುರುಷಃ' ಎಂದು ಪ್ರಯೋಗಿಸುತ್ತೇವೆ. ಸ್ಥಾಣುತ್ವ ಆರೋಪ್ಯಕ್ಕೆ ಯಾವುದ ಅಧಿಷ್ಠಾನವೋ ಅದು ಪುರುಷ ಎಂದು ಅರ್ಥ. ಇಲ್ಲಿ ಪುರುಷತ್ವ ಪ್ರತೀತಿಯೂ ಸಹ ಭ್ರಮವೇ ಆಗಿದೆ. ಆದರಂತೆ ಪ್ರಕೃತದಲ್ಲಿಯೂ ನಿರ್ಗುಣಬ್ರಹ್ಮನನ್ನು ನೋಡಿ ಸತ್ಯಕಾಮನೆಂದು ಮೊದಲು ತಿಳಿದು ಅನಂತರ ಮನೋಮಯನೆಂದು ತಿಳಿಯುತ್ತಾನೆ. ಸತ್ಯಕಾಮತ್ವಾದಿಗಳ ಆರೋಪಕ್ಕೆ ಯಾರು ಅಧಿಷ್ಠಾನನೋ ಅವನೇ ಮನೋಮಯತ್ವಾದಿಗಳ ಆರೋಪಕ್ಕೂ ಸಹ ಅಧಿಷ್ಠಾನನಾಗಿದ್ದಾನೆ. ಆದ್ದರಿಂದ ಒಬ್ಬನೇ ನಿರ್ಗುಣಬ್ರಹ್ಮನು ಸತ್ಯಕಾಮತ್ವಾದಿಗಳ ಆರೋಪಕ್ಕೆ ಅಧಿಷ್ಠಾನನಾದಂತೆ ಮನೋಮಯತ್ವಾದಿಗಳ ಆರೋಪಕ್ಕೂ ಸಹ ಅಧಿಷ್ಠಾನನಾಗುತ್ತಾನೆ. ಅದ್ವೈತಿಗಳ ಈ ವಾದವನ್ನು 'ಕಿಂಚ ರಜ್ಜುಂ' ಎಂದು ನಿರಾಕರಿಸುತ್ತಿದ್ದಾರೆ.

ಪ್ರಕಾಶಃ – ನನು ತತ್ತ್ವಾವೇದಕಪ್ರಾಮಾಣ್ಯಾಭಾವೋऽಭ್ಯುಪೇಯತ । ಏವೇತಿ ಅತ ಆಹ – ಅಪಿಚೇತಿ । ಹೇತುರಸ್ತೀತಿ ।

ನನು ಮಯೋಮಯತ್ವಾದಿಕಂ ಬ್ರಹ್ಮಣಿ ವ್ಯಾವಹಾರಿಕಂ, ಸತ್ಯಕಾಮತ್ವಾದಿಕಂ ತು ಜೀವೇ ಪ್ರಾತೀತಿಕಮ್ । ನಚ ಶ್ರುತೇರ್ವ್ಯಾವಹಾರಿಕಪರತ್ವಸಮ್ಭವೇऽತ್ಯನ್ತಾಪ್ರಾಮಾಣ್ಯಾಪಾದಕಪ್ರಾತೀತಿಪರತ್ವಂ ಯುಕ್ತಮಿತಿ ಚೇನ್ನ,

''ಅಪ್ರಾಣೋ ಹ್ಯಮನಾಃ ಶುಭ್ರಃ'' ಇತಿ ಶ್ರುತ್ಯಾ ತದಭಾವಾವೇದನೇನ ತಸ್ಯಾಪಿ ಬ್ರಹ್ಮಣಿ ಪ್ರಾತೀತಿಕತ್ವಾತ್ । ಜೀವೇऽಪಿ ತ್ವನ್ಮತೇ ವ್ಯಾವಹಾರಿಕತಯಾ ಬ್ರಹ್ಮಣಿ ಪ್ರಾತಿಭಾಸಿಕತ್ವಾವಶ್ಯಮ್ಭಾವಾಚ್ಚೇತಿ ಭಾವಃ ।

ಮನೋಮಯತ್ವಾದಿಗಳ ವಾಕ್ಯಕ್ಕೆ ಅಪ್ರಾಮಾಣ್ಯವನ್ನು ನೀವು ಆಪಾದಿಸಿದರೆ ನಮಗೆ ಅದು ಇಷ್ಟವೇ ಆಗಿದೆ. ಏಕೆಂದರೆ ನಾವೂ ಸಹ ಅಂತಹ ವಾಕ್ಯಗಳಲ್ಲಿ ತತ್ತ್ವಾವೇದಕ ಪ್ರಾಮಾಣ್ಯವನ್ನು ಒಪ್ಪಿರುವುದಿಲ್ಲ. ಅದ್ವೈತಿಗಳ ಈ ಮಾತನ್ನು 'ಅಪಿಚ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

ಕೊನೆಯಲ್ಲಿ 'ಹೇತುರಸ್ತಿ' ಎಂದಿದ್ದಾರೆ. ಇದರ ಮೇಲೆ ಅದ್ವೈತಿಗಳು ಆಕ್ಷೇಪಿಸುತ್ತಾರೆ - ಮನೋಮಯತ್ವಾದಿಗಳು ಬ್ರಹ್ಮನಲ್ಲಿ ವ್ಯಾವಹಾರಿಕವಾಗಿದೆ. ಆದರೆ ಸತ್ಯಸಂಕಲ್ಪತ್ವಾದಿಗಳು ಜೀವನಲ್ಲಿ ಪ್ರಾತಿಭಾಸಿಕವಾಗಿವೆ. ಶ್ರುತಿಯು ಬ್ರಹ್ಮಪರವೆಂದು ಹೇಳಿದಾಗ ವ್ಯಾವಹಾರಿಕ ಪ್ರಾಮಾಣ್ಯವನ್ನಾದರೂ ಶ್ರುತಿಗೆ ಹೇಳಬಹುದು. ಜೀವಪರವೆಂದು ಹೇಳಿದರೆ ಪ್ರಾತಿಭಾಸಿಕ ಪ್ರಾಮಾಣ್ಯವನ್ನು (ಅತ್ಯಂತ ಅಪ್ರಾಮಾಣ್ಯವನ್ನು) ಒಪ್ಪುವ ಪ್ರಸಂಗ ಬರುತ್ತದೆ.

ಇದು ತಪ್ಪು. ''ಅಪ್ರಾಣೋ ಹ್ಯಮನಾಃ ಶುಭ್ರಃ'' ಎಂಬಲ್ಲಿ ಬ್ರಹ್ಮನಲ್ಲಿ ಪ್ರಾಣ ಮನಸ್ಸು ಮೊದಲಾದವುಗಳು ಇಲ್ಲವೆಂದು ತಿಳಿದು ಬರುತ್ತಿದೆ. ಹೀಗಿರುವಾಗ ಪ್ರಾಣಶರೀರತ್ವ ಮನೋಮಯತ್ವಾದಿಗಳು ಬ್ರಹ್ಮನಲ್ಲಿ ತೋರಿದರೆ ಇದು ಪ್ರಾತಿಭಾಸಿಕವೇ ಆಗುತ್ತದೆ.

ಮತ್ತು ನಿಮ್ಮ ಮತದಲ್ಲಿ ಜೀವನಲ್ಲಿ ಮನೋಮಯತ್ವಾದಿಗಳನ್ನು ವ್ಯವಹಾರಿಕವೆಂದು ಒಪ್ಪಿದ್ದೀರಿ. ಆದ್ದರಿಂದ ಅದೇ ಮನೋಮಯತ್ವಾದಿಗಳನ್ನು ಬ್ರಹ್ಮನಲ್ಲಿ ಪ್ರಾತಿಭಾಸಿಕವೆಂದು ಹೇಳಲೇಬೇಕು. ಒಂದು ಕಡೆ ವ್ಯಾವಹಾರಿಕವಾದದ್ದು ಮತ್ತೊಂದು ಕಡೆ ಪ್ರಾತಿಭಾಸಿಕವಾಗುತ್ತದೆಂಬುದು ನಿಮ್ಮ ಸಿದ್ಧಾಂತವಲ್ಲವೇ?

प्रकाशः – उपलक्षणमेतत् । यदप्यणीयस्त्वादिर्जीवधर्मो ज्यायस्त्वादिर्ब्रह्मधर्म इति, तन्न, ''अणोरणीयान्महतो महीयान्'' इत्यणीयस्त्वस्यापि ब्रह्मणि श्रुतत्वात् । न चोभयं विरुद्धं, तर्हि प्रथमोपस्थिताणीयस्त्वाङ्गीकारेण ज्यायस्त्वस्यैव चरमस्य परित्याज्यत्वात् । श्रुत्यन्तरविरोधस्योभयत्र तुल्यत्वात् ।

विरोधशान्तिप्रकारस्य ''व्योमवत्'' इत्यनेन सूत्रकृतैवोक्तत्वाच्च । तदुक्तमनुव्याख्याने –

महतोऽप्यत्वमपि हि व्योमवत् प्राह वेदवित् ।

इतीत्यपि ध्येयम् ।

ಉಪಲಕ್ಷಣಯಾ ಈ ದೋಷವನ್ನು ತಿಳಿಯಬೇಕು. ಅಣೀಯತ್ವಾದಿಗಳು ಜೀವಧರ್ಮವಾಗಿವೆ. ಜ್ಯಾಯಸ್ತ್ವಾದಿಗಳು ಬ್ರಹ್ಮಧರ್ಮವಾಗಿವೆ ಎಂಬ ವಾದವೂ ಸಹ ತಪ್ಪು. ಏಕೆಂದರೆ 'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬ ಶ್ರುತಿಯಂತೆ ಅಣೀಯಸ್ತ್ವ ಧರ್ಮವೂ ಸಹ ಬ್ರಹ್ಮನಲ್ಲಿಯೇ ಸಿದ್ಧವಾಗಿದೆ. ಒಬ್ಬನೇ ಬ್ರಹ್ಮನಲ್ಲಿ ಜ್ಯಾಯಸ್ತ್ವ ಹಾಗೂ ಅಣೀಯತ್ವಗಳೆಂಬ ವಿರುದ್ಧ ಧರ್ಮಗಳನ್ನು ಒಪ್ಪುವುದು ತಪ್ಪಲ್ಲವೇ? ಎಂದು ಪ್ರಶ್ನಿಸಿದರೆ ಪ್ರಥಮೋಪಸ್ಥಿತವಾದ ಅಣೀಯಸ್ತ್ವವನ್ನು ಅಂಗೀಕರಿಸಿ ಅನಂತರ ಉಪಸ್ಥಿತವಾಗುವ ಜ್ಯಾಯಸ್ತ್ವವನ್ನು ಪರಿತ್ಯಾಗ ಮಾಡಿರಿ. ಶ್ರುತ್ಯಂತರ ವಿರೋಧವಂತೂ ಎರಡೂ ಪಕ್ಷದಲ್ಲಿ ಸಮಾನವೇ ಆಗಿವೆ. ಜಾಯ್ಯಸ್ತ್ವವನ್ನು ಬಿಟ್ಟರೆ ಹೇಗೆ ಶ್ರುತಿವಿರೋಧ ಬರುತ್ತದೋ ಅದರಂತೆ ಅಣೀಯಸ್ತ್ವವನ್ನು ಬಿಟ್ಟರೂ ಸಹ ಶ್ರುತಿವಿರೋಧ ತಪ್ಪಿದ್ದಲ್ಲ.

ಅಣೀಯಸ್ತ್ವ ಹಾಗೂ ಜ್ಯಾಯಸ್ತ್ವಗಳಿಗೆ ವಿರೋಧ ಬರುವುದಿಲ್ಲವೆಂಬ ವಿಚಾರವನ್ನು ಸ್ವತಃ ಸೂತ್ರಕಾರರೇ ''ವ್ಯೋಮವತ್'' ಎಂಬಲ್ಲಿ ಸಮರ್ಥಿಸುತ್ತಾರೆ. ಇದನ್ನೇ ಅನುವ್ಯಾಖ್ಯಾನದಲ್ಲಿ

ಮಹತೋಲ್ಪತ್ವಮಪಿ ಹಿ ವ್ಯೋಮವತ್ ಪ್ರಾಹ ವೇದವಿತ್ ।

ಆಕಾಶಕ್ಕೆ ಮಹತ್ತ್ವವಿದ್ದರೂ ಅಲ್ಪತ್ವವೂ ಸಹ ಹೇಗೆ ಬರುತ್ತದೋ, ಅದರಂತೆ ಪರಬ್ರಹ್ಮನಲ್ಲಿಯೂ ಅಣುತ್ವ ಮಹತ್ತ್ವಗಳು ಒಟ್ಟಿಗೆ ಬರಬಹುದು ಎಂದು ಸಮರ್ಥಿಸಿದ್ದಾರೆ.

गुरुराजीयम् – स्वाज्ञानकल्पितेति ।। अस्यायमर्थः स्वस्मिन्नखण्डचैतन्ये यदध्यस्तमज्ञानं तटस्थमज्ञानमुपाधिरिष्यत इति वक्ष्यति । तेन कल्पितं यदुपाधित्रयं धेनुपदप्रवृत्तिनिमित्तगोत्वेश्वरत्वजीवत्वानि तैर्भेदैर्भेदहेतुभिरिदं जगत् अयमीश्वरः अहं जीव इति भिद्यमानैः कलुषीकृतः परित्याजितस्त्रिविधपरिच्छेदशून्यतापि यत्र सा तथा । स्वाभाविको यस्स्वमहिमा देशकालवस्तुपरिच्छेदराहित्यं तत्रैव स्थितिरचलमर्यादा यस्यास्सा तथा । स आत्मा कस्मिन्प्रतिष्ठितः स्वेमहिम्नीति श्रुतेः । तत्कुतः वस्तुतोऽस्तो निरस्तो मोहोऽविद्यालक्षणो यत्र । असङ्गो नहि सज्जते तमसः परस्तादिति श्रुतेः । तादृशोऽपि मायावशाद्भुवनैकयोनिः सृष्टिस्थितिप्रलयहेतुः प्रत्यक्चितिः चित्स्वरूपा देहादिजडवर्गान्तः पातिनी सती कर्तृभोक्तृतया विजयते प्रथयते । तत्सृष्ट्वा तदेवानुप्राविशत् । स इह प्रविष्ट आनखाग्रेभ्य इत्यादिश्रुतेरिति । तथाच स्तुतिव्याजेन पूर्वं तत्त्वमसीति वाक्यार्थोपयोगि तत्पदलक्ष्यं सत्यादिरूपं ब्रह्मोक्त्वाऽनेन त्वम्पदलक्ष्यस्योक्तत्वात्तस्य च शुद्धत्वेन तस्यैवाधिष्ठानत्वोक्तेर्जीवसगुणब्रह्मणोश्च न परस्पराधिष्ठानाध्यस्तभाव इति भावः ।

ಸಾರ

'प्राणशरीरः भ्रावरूपः' ಎಂಬ ವಾಕ್ಯವು ಸಗುಣಬ್ರಹ್ಮ ವಿಷಯಕವೆಂದು ನೀವು ಹೇಳಿದಂತಾಯಿತು. ಜೀವ ಹಾಗೂ ಸಗುಣಬ್ರಹ್ಮರಿಬ್ಬರು ನಿರ್ಗುಣಬ್ರಹ್ಮನಲ್ಲಿ ಆರೋಪಿತರಾದ್ದರಿಂದ ಜೀವ ಹಾಗೂ ಸಗುಣಬ್ರಹ್ಮರಿಗೆ ಪರಸ್ಪರವಾಗಿ ಅಧಿಷ್ಠಾನ ಅಧ್ಯಸ್ತಭಾವವು ಕೂಡುವುದಿಲ್ಲ.

ಹುತ್ತವನ್ನು ನೋಡಿ ಕಂಬವೆಂದು ಮೊದಲು ಭ್ರಾಂತಿ ಬರುತ್ತದೆ. 'ಇದು ಕಂಬವಲ್ಲ ಪುರುಷನು' ಎಂಬ ಭ್ರಾಂತಿ ಬರುತ್ತದೆ. ಈ ಸ್ಥಳದಲ್ಲಿ ಸ್ಥಾಣುತ್ವ ಹಾಗೂ ಪುರುಷತ್ವ ಆರೋಪಗಳಿಗೆ ಅಧಿಷ್ಠಾನವು ಒಂದೇ ಆಗಿವೆ. ಅದರಂತೆ ನಿರ್ಗುಣಬ್ರಹ್ಮನನ್ನು ಮೊದಲು ಸತ್ಯಕಾಮನೆಂದು ತಿಳಿದು ಅನಂತರ ಮನೋಮಯನೆಂದು ತಿಳಿಯುತ್ತಾನೆ. ಈ ಸ್ಥಳದಲ್ಲಿ ಸತ್ಯಕಾಮತ್ವ ಹಾಗೂ ಮನೋಮಯತ್ವ ಎಂಬ ಆರೋಪಗಳಿಗೆ ಒಬ್ಬನೇ ನಿರ್ಗುಣ ಬ್ರಹ್ಮನು ಅಧಿಷ್ಠಾನನಾಗಿದ್ದಾನಲ್ಲವೇ? ಇದೂ ಸಹ ತಪ್ಪು. ಹಾಗಾದರೆ ಹಗ್ಗವನ್ನು ನೋಡಿ ಭಯಾನಕವೆಂಬ ವ್ಯವಹಾರವು ಹೇಗೆ ಅಪ್ರಮಾಣವಾಗುತ್ತದೋ ಅದರಂತೆ ಬ್ರಹ್ಮನಲ್ಲಿ ಮಾಡುವ ಮನೋಮಯತ್ವಾದಿ ವ್ಯವಹಾರಗಳೂ ಸಹ ಅಪ್ರಮಾಣವಾಗಬೇಕಾದೀತು. ಮತ್ತು ಬ್ರಹ್ಮನಲ್ಲಿ ಅಸತ್ಯವಾದ ಮನೋಮಯತ್ವಾದಿಗಳನ್ನು ಉಪಾಸನೆ ಮಾಡುವುದಕ್ಕಾಗಿ ಈ ವಾಕ್ಯವು ಹೊರಟಿದೆ ಎಂದು ಹೇಳಿದರೆ ಜೀವನಲ್ಲಿ ಸತ್ಯಸಂಕಲ್ಪತ್ವಾದಿಗಳನ್ನು ಉಪಾಸನೆ ಮಾಡುವುದಕ್ಕಾಗಿ ಈ ವಾಕ್ಯ ಹೊರಟಿದೆ ಎಂದು ಏಕೆ ಹೇಳಬಾರದು? ಮನೋಮಯತ್ವ ಹಾಗೂ ಸತ್ಯಸಂಕಲ್ಪತ್ವಗಳು ಒಟ್ಟಿಗೆ ಕೇಳಿಸುತ್ತಿರುವಾಗ ಒಂದನ್ನು ಉಪಾಸನೆ ಮಾಡಬೇಕು. ಮತ್ತೊಂದನ್ನು ಉಪಾಸನೆ ಮಾಡಬಾರದೆನ್ನಲು ವಿನಿಗಮಕ ಪ್ರಮಾಣವಿಲ್ಲ.

ಆದ್ಯೈತಿಗಳ ಸೂತ್ರವ್ಯಾಖ್ಯಾನ ನಿರಾಕರಣೆ

ತಾತ್ಪರ್ಯಚನ್ದ್ರಿಕಾ

ಸೂತ್ರಾಕ್ಷರಾರ್ಥೋऽप್ಯಯುಕ್ತಃ,

ಆಚಸೂತ್ರೇ ಹೇತುಮಾತ್ರಸ್ಯೋಕ್ತತ್ವೇನ ಮನೋಮಯತ್ವಾದಿನೋಪಾಸ್ಯಂ ಬ್ರಹ್ಮೇತಿ ಪ್ರತಿಜ್ಞಾಂಶಸ್ಯಾಧ್ಯಾಹರ್ತವ್ಯತ್ವಾತ್ ।

ದ್ವಿತೀಯೇ ಸತ್ಯಕಾಮತ್ವಾದಿಮಿಥ್ಯಾಭೂತಗುಣೇಷು ಶ್ರುತಿತಾತ್ಪರ್ಯೋಪಪತ್ತಿಸಹಿತತ್ವಯೋರಭಾವೇನ ವಿವಕ್ಷಿತೋಪಪತ್ತಿಪದಯೋರಸ್ವಾರಸ್ಯಾತ್ ।

ತೃತೀಯೇ ಸತ್ಯಕಾಮತ್ವಾದಿಗುಣಾನಾಂ ಬ್ರಹ್ಮಣ್ಯುಪಪಪತ್ತಿಂ ವದತಾ ದ್ವಿತೀಯೇನೈವ ತೇಷಾಂ ಜೀವೇ ಅನುಪಪತ್ತೇರರ್ಥಾದುಕ್ತತ್ವೇನ ತೇನ ಪೌನರುಕ್ತ್ಯಾತ್ ।

ಚತುರ್ಥೇ ಆಧಾರಾಧಯೇಭಾವಸ್ಯೈವ ''ಏತಮಿತಃ ಪ್ರೇತ್ಯಾಭಿಸಮ್ಭವಿತಾಸ್ಮಿ'' ಇತಿ ಕರ್ಮಕರ್ತೃಭಾವಸ್ಯಾಪಿ ವಿರುದ್ಧವಿಭಕ್ತಿಕಶಬ್ದಂ ವದತಾ ಶಬ್ದವಿಶೇಷಶಬ್ದೇನೈವ ಗ್ರಹಣಸಮ್ಭವೇನ ಪಞ್ಚಮೇನ ಪೌನರುಕ್ತ್ಯಾತ್ ।

ಅನುವಾದ - ಆದ್ಯೈತಿಗಳು ಮಾಡಿದ ಸೂತ್ರಗಳ ವ್ಯಾಖ್ಯಾನವೂ ಸಹ ಅಯುಕ್ತವಾಗಿದೆ - ಪ್ರಥಮಸೂತ್ರದಲ್ಲಿ ಕೇವಲ ಹೇತುವನ್ನು ಹೇಳಿದ್ದರಿಂದ ''ಮನೋಮಯತ್ವಾದಿನೋಪಾಸ್ಯಂ ಬ್ರಹ್ಮ'' ಎಂಬ ಪ್ರತಿಜ್ಞಾಭಾಗವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.

'ವಿವಕ್ಷಿತಗುಣೋಪಪತ್ತೇಶ್ಚ' ಎಂಬ ಎರಡನೇ ಸೂತ್ರದಲ್ಲಿ ಸತ್ಯಕಾಮತ್ವವೇ ಮೊದಲಾದ ಮಿಥ್ಯಾಭೂತವಾದ ಗುಣಗಳಲ್ಲಿ ಶ್ರುತಿತಾತ್ಪರ್ಯ ಉಪಪತ್ತಿಸಹಿತತ್ವಗಳು ಇಲ್ಲದ ಕಾರಣ ವಿವಕ್ಷಿತ ಹಾಗೂ ಉಪಪತ್ತಿಪದಗಳ ಅರ್ಥವು ಅಸ್ವರಸವಾಗುತ್ತವೆ.

'ಅನುಪಪತ್ತೇಸ್ತು ನ ಶಾರೀರಃ' ಎಂಬ ಮೂರನೇ ಸೂತ್ರದಲ್ಲಿ ಸತ್ಯಕಾಮತ್ವಾದಿಗುಣಗಳನ್ನು ಬ್ರಹ್ಮನಲ್ಲಿ ಸಮರ್ಥಿಸುತ್ತೀರಿ. ಆದರೆ ಎರಡನೆಯ ಸೂತ್ರದಿಂದಲೇ ಸತ್ಯಕಾಮತ್ವಾದಿಗುಣಗಳನ್ನು ಜೀವನಲ್ಲಿ ಅನುಪಪನ್ನವೆಂದು ಹೇಳಿದ್ದರಿಂದ ಅರ್ಥಾತ್ ಬ್ರಹ್ಮನಲ್ಲಿ ಉಪಪನ್ನವಾಗು ಎಂದು ಹೇಳಿದಂತಾಗುವುದರಿಂದ ಎರಡನೇ ಸೂತ್ರದಿಂದ ಪುನರುಕ್ತಿದೋಷ ಬರುತ್ತದೆ.

'ಕರ್ಮಕರ್ತೃ ವ್ಯಪದೇಶಾಚ್ಚ' ಎಂಬ ನಾಲ್ಕನೇ ಸೂತ್ರದಲ್ಲಿ ಆಧಾರಾಧೇಯಭಾವವನ್ನು ಹೇಳುವಂತೆ ''ಏತಮಿತಃ ಪ್ರೇತ್ಯಾಭಿಸಂಭವಿತಾಸ್ಮಿ'' ಎಂಬುದಾಗಿ ಕರ್ಮಕರ್ತೃಭಾವವೂ ಸಹ ವಿರುದ್ಧ

ವಿಭಕ್ತಿಗಳಿಂದ ತಿಳಿಯಲ್ಪಟ್ಟದೆ ಎಂದು ಹೇಳುತ್ತೀರಿ. ಹಾಗಾದರೆ ಶಬ್ದವಿಶೇಷಶಬ್ದದಿಂದಲೇ ಈ ವಿಷಯವು ತಿಳಿಯುವಾಗ ನಾಲ್ಕನೆಯ ಸೂತ್ರಕ್ಕೆ ಐದನೆಯ ಸೂತ್ರದಿಂದ ಪುನರುಕ್ತಿ ಬರುತ್ತದೆ.

ಪ್ರಕಾಶಃ –

ಏವಮಧಿಕರಣಶರೀರಂ ಸಿದ್ಧಾನ್ತಾನುದಯೇನ ನಿರಸ್ಯೇದಾನೀಂ ಸೂತ್ರಾರ್ಥಸಾಮಞ್ಜಸ್ಯಮಾಹ – **ಸೂತ್ರೇತಿ ।**

ಏವಂ ಹಿ ಸೂತ್ರಾರ್ಥನಾಹುಃ – 'ಮನೋಮಯತ್ವಾದಿನೋಪಾಸ್ಯಂ ಬ್ರಹ್ಮೈವ' ಇತಿ ಸಾಧ್ಯಮಧ್ಯಾಹಾರ್ಯಮ್ । ಹೇತ್ವರ್ಥಃ ಪ್ರಾಗುಕ್ತಃ ।

'ವಿವಕ್ಷಿತಗುಣೋಪಪತ್ತೇಶ್ಚ' – 'ವಿವಕ್ಷಿತಾನಾಂ' ವಕ್ತುಮಿಷ್ಟಾನಾಂ ತಾತ್ಪರ್ಯ-ವಿಷಯೀಭೂತಾನಾಮಿತಿ ಯಾವತ್, ತೇಷಾಂ ಸತ್ಯಕಾಮತ್ವಾದೀನಾಂ ಬ್ರಹ್ಮಣ್ಯೇವೋಪಪತ್ತೇಃ ।

ವಿವರಣೆ - ಇಲ್ಲಿಯ ತನಕ ಅದ್ವೈತಿಗಳ ಅಧಿಕರಣ ಶರೀರವನ್ನು ಸಿದ್ಧಾಂತವೇ ಹುಟ್ಟುವುದಿಲ್ಲವೆಂಬುದಾಗಿ ನಿರಾಕರಿಸಿ ಪ್ರಕೃತ ಅವರ ಸೂತ್ರಾರ್ಥಗಳನ್ನು ಅಸಂಮಂಜಸವೆನ್ನುತ್ತಿದ್ದಾರೆ.

ಅದ್ವೈತಿಗಳು ವ್ಯಾಖ್ಯಾನಿಸುವ ಸೂತ್ರಾರ್ಥಗಳು ಹೀಗಿವೆ -

೧. ಸರ್ವತ್ರೋಪ್ರಸಿದ್ಧೋಪದೇಶಾತ್ = ಎಲ್ಲಾ ವೇದಾಂತಗಳಲ್ಲಿ ಪ್ರಸಿದ್ಧವಾದ ಯಾವ ಬ್ರಹ್ಮಶಬ್ದವಿದೆಯೋ ಅದರ ಉಪದೇಶದ ಬಲದಿಂದ ಎಂಬುದಾಗಿ ಸೂತ್ರವು ಹೇತುವನ್ನಷ್ಟೇ ಹೇಳುತ್ತಿದೆ. 'ಮನೋಮಯತ್ವಾದಿಗಳಿಂದ ಉಪಾಸ್ಯನಾದವನು ಬ್ರಹ್ಮನೇ ಆಗಿದ್ದಾನೆ' ಎಂಬ ಸಾಧ್ಯವನ್ನು ಅಧ್ಯಾಹಾರ ಮಾಡಬೇಕು.

೨. ವಿವಕ್ಷಿಗುಣೋಪಪತ್ತೇಶ್ಚ - ವಿವಕ್ಷಿತ = ಹೇಳಲು ಇಷ್ಟವಾದ ಅಂದರೆ ತಾತ್ಪರ್ಯವಿಷಯೀಭೂತವಾದ ಗುಣ = ಆ ಸತ್ಯಕಾಮತ್ವಾದಿಗುಣಗಳು, ಉಪಪತ್ತೇಃ = ಬ್ರಹ್ಮನಲ್ಲಿಯೇ ಉಪಪನ್ನವಾಗುತ್ತವೆ.

ಪ್ರಕಾಶಃ – 'ಅನುಪಪತ್ತೇಸ್ತು ನ ಶಾರೀರಃ' – ಪ್ರಾಗುಕ್ತಸತ್ಯಸಙ್ಕಲ್ಪತ್ವಾದೀನಾಂ ಜೀವೇऽನುಪಪತ್ತೇಃ ।

'ಕರ್ಮಕರ್ತೃವ್ಯಪದೇಶಾಚ್ಚ' – ''ಏತಮಿತಃ ಪ್ರೇತ್ಯಾಭಿಸಮ್ಭವಿತಾಸ್ಮಿ' ಇತ್ಯತ್ರ 'ಏತಂ' ಇತಿ ದ್ವಿತೀಯಯಾ ಬ್ರಹ್ಮಣಃ ಕರ್ಮತ್ವೇನ 'ಅಭಿಸಮ್ಭವಿತಾಸ್ಮಿ' ಇತಿ ಪ್ರಥಮಯಾ ಜೀವಸ್ಯ ಕರ್ತೃತ್ವೇನ ವ್ಯಪದೇಶಾಚ್ಚ ನ ಶಾರೀರೋऽತ್ರೋಪಾಸ್ಯಃ ।

೩. ಅನುಪಪತ್ತೇಸ್ತು ನ ಶಾರೀರಃ - ಅನುಪಪತ್ತೇಃ = ಬ್ರಹ್ಮನಲ್ಲಿ ಉಪಪನ್ನವಾದ ಸತ್ಯಸಂಕಲ್ಪತ್ವಾದಿಗುಣಗಳೇ ಜೀವನಲ್ಲಿ ಅನುಪಪನ್ನವಾಗಿವೆ. ಆದ್ದರಿಂದ 'ನ ಶಾರೀರಃ' = ಜೀವನು ಉಪಾಸ್ಯನಲ್ಲ.

೪.'ಕರ್ಮಕರ್ತೃ ವ್ಯಪದೇಶಾಚ್ಚ - ''ಏತಮಿತಃ ಪ್ರೇತ್ಯಾಭಿಸಂಭವಿತಾಸ್ಮಿ'' ಎಂಬಲ್ಲಿ 'ಏತಂ' ಎಂಬುದಾಗಿ ದ್ವಿತೀಯಾ ವಿಭಕ್ತಿಯಿಂದ ಬ್ರಹ್ಮನು ಕರ್ಮತ್ವೇನ ಉಕ್ತನಾಗಿದ್ದಾನೆ. 'ಅಭಿಸಂಭವಿತಾಸ್ಮಿ' ಎಂಬಲ್ಲಿ ಜೀವನು ಕರ್ತೃತ್ವೇನ ಉಕ್ತನಾಗಿದ್ದಾನೆ. ಆದ್ದರಿಂದ ಶಾರೀರನು ಇಲ್ಲಿ ಉಪಾಸ್ಯನಲ್ಲ.

ಪ್ರಕಾಶಃ – 'ಶಬ್ದವಿಶೇಷಾತ್' – ಸಮಾನಪ್ರಕರಣೇ ಶ್ರುತ್ಯನ್ತರೇ ''ಯಥಾ ವ್ರೀಹಿರ್ವಾ ಯವೋ ವಾ ಶ್ಯಾಮಾಕತಣ್ಡುಲೋ ವಾ ಏವಮಯಮನ್ತರಾತ್ಮನ್ಪುರುಷೋ ಹಿರಣ್ಮಯಃ'' ಇತಿ ಜೀವಬ್ರಹ್ಮಬೋಧಕ-ಸಸಮ್ಯನ್ತಪ್ರಥಮಾನ್ತರೂಪಶಬ್ದವಿಶೇಷಾಚ್ಚ ನ ಶಾರೀರೋऽತ್ರೋಚ್ಯತೇ ।

ಈಶ್ವರಸ್ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ ।

ಇತಿ ಸ್ಮೃತೇಶ್ಚ ನ ಶಾರೀರಃ ।

೫. ಶಬ್ದವಿಶೇಷಾತ್ = ಸಮಾನಪ್ರಕರಣದಲ್ಲಿ ಕೇಳಿಸುತ್ತಿರುವ ಮತ್ತೊಂದು ಶ್ರುತಿಯಲ್ಲಿ ''ಯಥಾ ವ್ರೀಹಿರ್ವಾ ಯವೋ ವಾ ಶ್ಯಾಮಾಕತಂಡುಲೋ ವಾ ಏವಮಯಮಂತರಾತ್ಮನ್'ಪುರುಷೋ ಹಿರಣ್ಮಯಃ'' ಎಂಬುದಾಗಿ ಸಪ್ತಮ್ಯಂತವಾದ 'ಅಂತರಾತ್ಮನ್' ಎಂಬ ಶಬ್ದದ ಹಾಗೂ ಪ್ರಥಮಾಂತವಾದ 'ವ್ರೀಹಿಃ ಯವಾಃ' ಇತ್ಯಾದಿ ಶಬ್ದವಿಶೇಷ ಇರುವುದರಿಂದ 'ಶಾರೀರಿ' ಎನಿಸಿದ ಜೀವನು ಇಲ್ಲಿ ಉಪಾಸ್ಯನಾಗಲಾರ.

೬. ಸ್ಮೃತೇಶ್ಚ = ಈಶ್ವರಸ್ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ । ಎಂಬ ಸ್ಮೃತಿ ಪ್ರಮಾಣದಿಂದಲೂ ಶಾರೀರನು ಉಪಾಸ್ಯನಲ್ಲ.

ಪ್ರಕಾಶಃ – ''ಏಷ ಮ ಆತ್ಮಾऽನ್ತರ್ಹೃದಯೇ'' ಇತ್ಯಲ್ಪಾಯತನತ್ವಾತ್ ''ಅಣೀಯಾನ್ ವ್ರೀಹೇರ್ವಾದ್ವಾ'' ಇತಿ ಅಣೀಸ್ತ್ವವ್ಯಪದೇಶಾಚ್ಚ ನ ಸರ್ವಗತಃ ಪರಮಾತ್ಮಾ ಮನೋಮಯತ್ವಾದಿಗುಣಕ ಇತಿ ಚೇತ್, ಸರ್ವಗತಸ್ಯಾಪಿ ಬ್ರಹ್ಮಣೋ ಹೃದಯಪುण्ಡರೀಕೇ ನಿಚಾಯ್ಯತ್ವಾದ್ಗೃಹ್ಯತ್ವಾದೇವಂ ವ್ಯಪದೇಶಃ 'ವ್ಯೋಮವತ್' ಯಥಾ ವ್ಯೋಮ ಸರ್ವಗತಮಪಿ ಸೂಚಿಪಾಶಾದ್ಯಪೇಕ್ಷಯಾऽರ್ಭಕೌಕೋऽಣೀಯೋ ವ್ಯಪದಿಶ್ಯತೇ ತದ್ವತ್ । ಬ್ರಹ್ಮಣಃ ಸರ್ವಪ್ರಾಣಿಹೃದಯಸಮ್ಬನ್ಧಾತ್ ಸುಖಾದಿಸಮ್ಭೋಗಪ್ರಾಪ್ತಿರಿತಿ ಚೇನ್ನ, ಅಪಹತ-ಪಾಪ್ಮತ್ವಾದಿವೈಶಿಷ್ಟ್ಯಾದಿತಿ ।

''ಏಷ ಮ ಆತ್ಮಾऽಂತರ್ಹೃದಯೇ'' ಎಂಬುದಾಗಿ ಅಲ್ಪಸ್ಥಾನದಲ್ಲಿರುವವನಾದ್ದರಿಂದ ''ಅಣೀಯಾನ್ ವ್ರೀಹೇರ್ಯವಾದ್ವಾ' ಎಂಬುದಾಗಿ ಅಣೀಯಸ್ತ್ವವನ್ನು ಹೇಳಿದ್ದರಿಂದ ಸರ್ವಗತನಾದ ಪರಮಾತ್ಮನು ಮನೋಮಯತ್ವಾದಿಗುಣಗಳಿಂದ ಉಪಾಸ್ಯನಾಗಲಾರ ಎಂದು ಶಂಕಿಸಬಾರದು. ಏಕೆಂದರೆ

ಸರ್ವಗತನಾದರೂ ಸಹ ಬ್ರಹ್ಮನು ಹೃದಯಲ್ಲಿರುವ ಕಮಲದಲ್ಲಿ ನೋಡಬೇಕು. ಯಾವರೀತಿಯಾಗಿ ಆಕಾಶವು ಎಲ್ಲೆಡೆ ಇದ್ದರೂ ಸೂಜಿ ಮೊದಲಾದ ಸಣ್ಣ ಸ್ಥಳದಲ್ಲಿಯೂ ನೋಡುತ್ತೇವೋ, ಅದರಂತೆ ಸರ್ವಗತನಾದ ಬ್ರಹ್ಮನನ್ನು ಅಲ್ಪಸ್ಥಾನಸ್ಥಿತನೆಂದು ಅಣುವೆಂದು ಕರೆಯಲಾಗಿದೆ.

ಬ್ರಹ್ಮನು ಸಕಲ ಪ್ರಾಣಿಗಳ ಹೃದಯಸಂಬಂಧವನ್ನು ಹೊಂದಿರುವುದರಿಂದ ಸುಖಾದಿ ಭೋಗಗಳನ್ನು ಬ್ರಹ್ಮನು ಹೊಂದಬೇಕಲ್ಲವೇ? ಎಂದು ಶಂಕಿಸಬಾರದು. ಅಪಹತಪಾಪ್ಮತ್ವಾದಿಗಳಿಂದ ಬ್ರಹ್ಮನು ವಿಶಿಷ್ಟನಾಗಿದ್ದಾನೆ. ಆದ್ದರಿಂದ ಸಕಲ ಪ್ರಾಣಿಗಳ ಹೃದಯದಲ್ಲಿದ್ದರೂ ಸುಖ-ದುಃಖಾದಿಗಳನ್ನು ಅನುಭವಿಸಲಾರ.

ಪ್ರಕಾಶಃ – ತತ್ಸರ್ವೆ ಕ್ರಮೇಣ ದೂಷಯತಿ – ಆದ್ಯ ಇತಿ । ಉಪಲಕ್ಷಣಮೇತತ್ 'ಸರ್ವತ್ರ' ಇತ್ಯಸ್ಯ ವೈಯರ್ಥ್ಯಾದಿತ್ಯಪಿ ಧ್ಯೇಯಮ್ । ಮಿಥ್ಯೇತಿ । ತ್ವನ್ಮತೇ ತೇಷಾಮಾರೋಪಿತತ್ವಾದಿತಿ ಭಾವಃ । ಆಧಾರೇತಿ । ''ಅಯಮನ್ತರಾತ್ಮನ್'' ಇತಿ ಸಪ್ತಮಿಪ್ರಥಮಾಭ್ಯಾಮುಕ್ತಸ್ಯೇತ್ಯರ್ಥಃ । ವದತೇತಿ । ವಕ್ತೃತ್ವಮುಪಚರಿತಂ, ಪ್ರತಿಪಾದಕೇನೇತಿ ಯಾವತ್ ।

ಅನ್ತರಾತ್ಮನ್ನಿತಿ । ''ಸುಪಾಂ ಸುಲುಕ್'' ಇತಿ ಸಪ್ತಮ್ಯಾ ಲುಕಿ ''ನ ಙಿಸಮ್ಬುದ್ಧ್ಯೋಃ'' ಇತಿ ನಲೋಪಾಭಾವೇ ಚ ರೂಪಮಿತಿ ಸಪ್ತಮ್ಯನ್ತತ್ವಂ ಬೋಧ್ಯಮ್ ।

ಆದ್ವೈತಿಗಳ ಈ ಎಲ್ಲಾ ಸೂತ್ರವ್ಯಾಖ್ಯಾನಗಳನ್ನು ಗ್ರಂಥಕಾರರು ಕ್ರಮವಾಗಿ ದೂಷಿಸುತ್ತಿದ್ದಾರೆ - 'ಆದ್ಯ' ಇತ್ಯಾದಿಯಾಗಿ. ಪ್ರತಿಜ್ಞಾಭಾಗವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆಂಬ ದೋಷವನ್ನು ಗ್ರಂಥದಲ್ಲಿ ಹೇಳಿದ್ದಾರೆ. ಉಪಲಕ್ಷಣಯಾ 'ಸರ್ವತ್ರ' ಎಂಬ ಪದವು ವೃರ್ಥವಾಗಬೇಕಾದೀತೆಂಬ ವೈಯರ್ಥ್ಯದೋಷವನ್ನು ತಿಳಿಯಬೇಕು.

ಎರಡನೇ ಸೂತ್ರದಲ್ಲಿ ಸತ್ಯಕಾಮತ್ವಾದಿಗುಣಗಳನ್ನು ಬ್ರಹ್ಮನಲ್ಲಿ ಆರೋಪಿತವೆನ್ನುತ್ತಾರೆ. ಆವಾಗ 'ವಿವಕ್ಷಿತ' ಹಾಗೂ 'ಉಪಪತ್ತೇಃ' ಎಂಬ ಎರಡು ಪದವು ವೃರ್ಥವಾಗುತ್ತದೆ.

ಗ್ರಂಥದಲ್ಲಿ 'ಆಧಾರಾಧೇಯಭಾವಸ್ಯೈವ' ಎಂದಿದೆ. ಇದರ ಅರ್ಥ ಹೀಗಿದೆ - 'ಆಯಮಂತರಾತ್ಮನ್' ಎಂಬುದಾಗಿ ಸಪ್ತಮೀವಿಭಕ್ತಿಯಿಂದ ಹೇಳಲ್ಪಟ್ಟ, 'ವ್ರೀಹಿಃ ಯವಾಃ' ಇತ್ಯಾದಿ ಪ್ರಥಮಾವಿಭಕ್ತಿಯಿಂದ ಹೇಳಲ್ಪಟ್ಟ ಎಂದು. 'ಶಬ್ದಂ ವದತಾ' ಎಂಬುದಾಗಿ ಕರ್ತೃತ್ವವು ಔಪಚಾರಿಕವಾಗಿ ಪ್ರಯುಕ್ತವಾಗಿದೆ. ('ಹಂತಾ ರಾಮಶರಃ' ಎಂಬಂತೆ) ಪ್ರತಿಪಾದಿಸುವ ಎಂದು ಇದರ ತಾತ್ಪರ್ಯ.

ಅಂತರಾತ್ಮನ್ ಎಂಬಲ್ಲಿ 'ಸುಪಾಂ ಸುಲುಕ್' ಎಂಬ ಸೂತ್ರದಿಂದ ಸಪ್ತಮೀ ವಿಭಕ್ತಿಯು ಲೋಪವಾದ ಮೇಲೆ 'ನ' ಲೋಪವು ಪ್ರಸಕ್ತವಾಗುತ್ತದೆ. ಆವಾಗ ''ನ ಙಿಸಂಬುದ್ಧ್ಯೋಃ'' ಎಂಬ ಸೂತ್ರದಿಂದ ಸಪ್ತಮೀವಿಭಕ್ತಿಯಲ್ಲಿ ನಲೋಪವಾಗುವುದಿಲ್ಲವೆಂದು ವಿಧಿಸಲಾಗಿದೆ. ಆದ್ದರಿಂದ 'ಅಂತರಾತ್ಮನ್' ಎಂಬುದನ್ನು ಸಪ್ತಮ್ಯಂತಪದವೆಂದೇ ತಿಳಿಯಬೇಕು.

ಗುರುರಾಜೀಯಮ್ – ದ್ವಿತೀಯೇ ಸತ್ಯಕಾಮತ್ವಾದೀತ್ಯಾದಿ ।। ವಕ್ತುಮಿಷ್ಟೋ ವಿವಕ್ಷಿತಃ । ಯದ್ಯಪ್ಯಪೌರುಷೇಯೇ ವೇದೇ ವಕ್ತುರಭಾವಾನ್ನೇಚ್ಛಾರ್ಥಸ್ಸಮ್ಭವತಿ । ತಥಾಪ್ಯುಪಾದೇಯೇನ ಫಲೇನೋಪಚರ್ಯತೇ । ಲೋಕೇ ಹಿ ಯಚ್ಛಬ್ದಾಭಿಹಿತಮುಪಾದೇಯಂ ಭವತಿ ತದ್ವಿವಕ್ಷಿತಮಿತ್ಯುಚ್ಯತೇ । ಯದನುಪಾದೇಯಂ ತದವಿವಕ್ಷಿತಮಿತಿ । ತದ್ಭೇದೇऽಪ್ಯುಪಾದೇಯತ್ವೇನಾಭಿಹಿತಂ ವಿವಕ್ಷಿತಂ ಭವತಿ । ಇತರದ-ವಿವಕ್ಷಿತಮ್ । ಉಪಾದಾನಾನುಪಾದಾನೇ ತು ವೇದವಾಕ್ಯತಾತ್ಪರ್ಯತಾತ್ಪರ್ಯಾಭ್ಯಾಮವಗಮ್ಯೇತೇ । ತದಿಹ ವಿವಕ್ಷಿತಗುಣಾ ಉಪಾಸನಾಯಾಮುಪಾದೇಯತ್ವೇನೋಪದಿಷ್ಟಾಃ ಸತ್ಯಸಙ್ಕಲ್ಪಪ್ರಭೃತಯಸ್ತೇ ಪರಸ್ಮಿನ್ ಬ್ರಹ್ಮಣ್ಯುಪಪದ್ಯನ್ತೇ । ಸತ್ಯಸಙ್ಕಲ್ಪತ್ವಂ ಹಿ ಸೃಷ್ಟಿಸ್ಥಿತಿಸಂಹಾರೇಷ್ವಪ್ರತಿಬದ್ಧಶಕ್ತಿತ್ವಾತ್ ಪರಮಾತ್ಮನೋऽವಕಲ್ಪ್ಯತೇ । ಪರಮಾತ್ಮಗುಣತ್ವೇನ ಚ ಯ ಆತ್ಮाऽಪಹತಾಪಾಪ್ಮೇತ್ಯತ್ರ ಸತ್ಯಕಾಮಸ್ಸತ್ಯಸಙ್ಕಲ್ಪ ಇತಿ ಶ್ರುತಮ್ । ಆಕಾಶಾತ್ಮೇತಿ ಆಕಾಶವದಾತ್ಮाऽಸ್ಯೇತ್ಯರ್ಥಃ । ಸರ್ವಗತತ್ವಾದಿಧರ್ಮೈಸ್ಸಮ್ಭವತ್ಯಾಕಾಶೇ ನ ಸಾಮ್ಯಂ ಬ್ರಹ್ಮಣಃ । ಜ್ಯಾಯಾನ್ ಪೃಥಿವ್ಯಾ ಇತ್ಯಾದಿನಾ ಚೈತದೇವ ದರ್ಶಯತಿ । ಯದಾऽಪ್ಯಾಕಾಶ ಆತ್ಮाऽಸ್ಯೇತಿ ವ್ಯಾಖ್ಯಾಯತೇ ತದಾಪಿ ಸಮ್ಭವತಿ ಸರ್ವಜಗತ್ಕಾರಣಸ್ಯ ಸರ್ವಾತ್ಮನೋ ಬ್ರಹ್ಮಣ ಆಕಾಶಾತ್ಮತ್ವಮ್ । ಅತ ಏವ ಸರ್ವಕರ್ಮೇತ್ಯಾದಿ । ಏವಮಿಹೋಪಾಸ್ಯತಯಾ ವಿವಕ್ಷಿತಗುಣ ಬ್ರಹ್ಮಣ್ಯುಪಪದ್ಯನ್ತೇ । ಇತ್ಯಾದಿ ವದತಾ ಭಾಷ್ಯಕೃತಾ ವಿವಕ್ಷಿತಶಬ್ದಾರ್ಥತ್ವೇನ ಶ್ರುತಿತಾತ್ಪರ್ಯೋಪಪತ್ತಿಸಹಿತಯೋರುಕ್ತತ್ವೇನ ಸತ್ಯಕಾಮತ್ವಾದಿಮಿಥ್ಯಾಭೂತ-ಗುಣೇಷು ತಯೋರಭಾವೇನ ವಿವಕ್ಷಿತೋಪಪತ್ತಿಪದಯೋರಸ್ವಾರಸ್ಯಾದಿತ್ಯರ್ಥಃ ।।

ಸಾರ

ಅದ್ವೈತಿಗಳ ಸೂತ್ರವ್ಯಾಖ್ಯಾನವು ಅಯುಕ್ತವಾಗಿದ. ಪ್ರಥಮಸೂತ್ರದಲ್ಲಿ ಪ್ರತಿಜ್ಞಾಭಾಗವನ್ನು ಹೇಳದೆ ಹೇತುಭಾಗವನ್ನಷ್ಟೇ ಹೇಳಿದಂತಾಗುತ್ತದೆ. ಆಗ ಪ್ರತಿಜ್ಞಾಭಾಗವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಮತ್ತು ಹೇತುವಿನಲ್ಲಿರುವ ಸರ್ವತ್ರ ಎಂಬ ಪದವನ್ನು ವ್ಯರ್ಥವೆಂದು ಹೇಳಬೇಕಾಗುತ್ತದೆ.

ಎರಡನೆಯ ಸೂತ್ರದಲ್ಲಿ ಮಿಥ್ಯಾಭೂತವಾದ ಸತ್ಯಕಾಮತ್ವಾದಿಗುಣಗಳನ್ನು ಬ್ರಹ್ಮನಲ್ಲಿ ಸಮರ್ಥಿಸುತ್ತೀರಿ. ಆದರೆ ಈ ಗುಣಗಳ ಪ್ರತಿಪಾದನೆಯಲ್ಲಿ ಶ್ರುತಿಗೆ ತಾತ್ಪರ್ಯವೇ ಇಲ್ಲದ ಕಾರಣ ಸೂತ್ರದಲ್ಲಿರುವ ವಿವಕ್ಷಿತ ಹಾಗೂ ಉಪಪತ್ತಿಪದಗಳು ಅಸ್ವರಸವಾಗುತ್ತವೆ.

ಮೂರನೆಯ ಸೂತ್ರದಲ್ಲಿ ಸತ್ಯಕಾಮತ್ವಾದಿಗುಣಗಳು ಜೀವನಲ್ಲಿ ಅನುಪಪನ್ನವೆನ್ನುತ್ತೀರಿ ಆದರೆ ಎರಡನೆಯ ಸೂತ್ರದಲ್ಲಿ ಬ್ರಹ್ಮನಲ್ಲಿ ಸತ್ಯಕಾಮತ್ವಾದಿಗುಣಗಳು ಉಪಪನ್ನವಾಗುತ್ತವೆಂದು ಹೇಳಿದ್ದರಿಂದಲೇ ಜೀವನಲ್ಲಿ ಅನುಪಪನ್ನವಾಗುತ್ತವೆಂದು ತಿಳಿಯುವುದಿಲ್ಲವೇ?

ನಾಲ್ಕನೆಯ ಸೂತ್ರದಲ್ಲಿ ವಿರುದ್ಧವಿಭಕ್ತಿಗಳಿಂದ ಕರ್ಮಕರ್ತೃಭಾವವು ತಿಳಿಯುತ್ತದೆನ್ನುತ್ತೀರಿ. ಇದೂ ಸಹ ಐದನೆಯ ಸೂತ್ರಾರ್ಥದಿಂದ ಪುನರುಕ್ತವಾಗುತ್ತದೆ.

ಐದನೆಯ ಸೂತ್ರಾರ್ಥವೂ ಅಯುಕ್ತ

तात्पर्यचन्द्रिका

पञ्चमेऽपि ''एष म आत्मान्तर्हृदये ज्यायान्'' इति वाक्यशेषे अन्तस्स्थत्वेनोक्तस्य मनोमयत्वादिगुणकस्य ''एवमयमन्तरात्मन् हिरण्मयः'' इति समानप्रकरणे श्रुत्यन्तरे जीवस्य यः शब्दः 'अन्तरात्मन्' इति सप्तम्यन्तस्ततोऽन्यो 'हिरण्मयः' इति प्रथमान्तो यो ब्रह्मणः शब्दः, तेन शब्दविशेषेण मनोमयत्वादिगुणको न जीव इति त्वदुक्तस्य शब्दविशेषस्य श्रुत्यन्तरस्थत्वेन अस्मदुक्तस्य प्रस्तुतब्रह्मशब्दे सावधारणत्वरूपविशेषस्येव स्वप्रकरणस्थत्वाभावात् ।

स्वतन्त्रहेत्वन्तरपरत्वेन चतुर्थ इवात्रापि चशब्दप्रसङ्गाच्च । एवं सूत्रान्तरेऽप्यनुपपत्तिरूह्या ।

अत्रापि परमतेऽपि ''अनुपपत्तेस्तु न शारीरः'' इत्यादिना भेदस्य, ''विवक्षितगुण'' इत्यनेन गुणानां चोक्तैरैक्यनिर्गुणत्वप्रतिकूलता स्फुटैवेति ।।

ಅನುವಾದ - 'ಶಬ್ದವಿಶೇಷಾತ್' ಎಂಬ ಐದನೆಯ ಸೂತ್ರದಲ್ಲಿಯೂ ''ಏಷ ಮ ಆತ್ಮಾಽಂತರ್ಹೃದಯೇ ಜ್ಯಾಯಾನ್'' ಎಂಬ ಛಾಂದೋಗ್ಯದ ವಾಕ್ಯಶೇಷದಲ್ಲಿ ಮನೋಮಯತ್ವಾದಿ-ಗುಣವುಳ್ಳ ಅಂತಸ್ಥನ ಬಗ್ಗೆ ಹೇಳಿದ್ದಾರೆ. ಅದೇ ಪ್ರಕರಣದ ಮತ್ತೊಂದು ಶ್ರುತಿಯಲ್ಲಿ ''ಏವಮಯಮಂತರಾತ್ಮನ್ ಹಿರಣ್ಮಯಃ'' ಎಂಬುದಾಗಿ ಈ ಮನೋಮಯತ್ವಾದಿ ಗುಣವುಳ್ಳವನನ್ನೇ ಪ್ರಥಮಾಂತವಾದ ಬ್ರಹ್ಮಶಬ್ದದಿಂದ ಹೇಳಿದ್ದಾರೆ. ಅಂದರೆ ಜೀವನಿಗೆ ಸಂಬಂಧಿಸಿದ 'ಅಂತರಾತ್ಮನ್' ಎಂಬ ಯಾವ ಸಪ್ತಮ್ಯಂತವಾದ ಶಬ್ದವಿದೆಯೋ ಅದಕ್ಕಿಂತ ಬೇರೆಯಾದ 'ಹಿರಣ್ಮಯಃ' ಎಂಬ ಪ್ರಥಮಾಂತವಾದ ಯಾವ ಬ್ರಹ್ಮನ ಶಬ್ದವಿದೆಯೋ ಅಂತಹ ಶಬ್ದವಿಶೇಷದಿಂದ ಮನೋಮಯತ್ವಾದಿಗುಣವುಳ್ಳವನು ಜೀವನಾಗುವುದಿಲ್ಲ. ಹೀಗೆ ನೀವು ಮಾಡಿದ ವ್ಯಾಖ್ಯಾನದಂತೆ ಶಬ್ದವಿಶೇಷವು ಮತ್ತೊಂದು ಶ್ರುತಿಯಲ್ಲಿದೆ ಎಂದಂತಾಯಿತು. ಆದರೆ ನಾವು ಮಾಡುವ ವ್ಯಾಖ್ಯಾನದಂತೆ ಸಾವಧಾರಣತ್ವರೂಪವಾದ ಶಬ್ದವಿಶೇಷವು ಪ್ರಸ್ತುತವಾದ ಬ್ರಹ್ಮಶಬ್ದದಲ್ಲಿಯೇ ಇರುವುದರಿಂದ ಸ್ವಪ್ರಕರಣಸ್ಥವಾಗಿದೆ. ಹೀಗೆ ಅನಾಯಾಸವಾಗಿಯೇ ವ್ಯಾಖ್ಯಾನಿಸಲು ಬರುತ್ತದೆ.

ನಿಮ್ಮ ಪ್ರಕಾರ ಸ್ವತಂತ್ರವಾದ ಮತ್ತೊಂದು ಹೇತುವನ್ನು ಈ ಸೂತ್ರವು ಹೇಳುತ್ತಿದೆಯೆಂದಂತಾಯಿತು. ಆವಾಗ ನಾಲ್ಕನೆಯ ಸೂತ್ರದಂತೆ ಈ ಸೂತ್ರದಲ್ಲಿಯೂ 'ಚ'

ಶಬ್ದವನ್ನು ಪ್ರಯೋಗಿಸಬೇಕಿತ್ತು. ಇದರಂತೆ ಉಳಿದ ಸೂತ್ರಗಳಲ್ಲಿಯೂ ಅನುಪಪತ್ತಿಯನ್ನು ಊಹಿಸಿಕೊಳ್ಳಬೇಕು.

ಈ ಅಧಿಕರಣದಲ್ಲಿಯೂ ಅದ್ವೈತಿಗಳು ''ಅನುಪಪತ್ತೇಸ್ತು ನ ಶಾರೀರಃ'' ಇತ್ಯಾದಿಯಾಗಿ ಜೀವಬ್ರಹ್ಮರ ಭೇದವನ್ನೇ ಒಪ್ಪಿದಂತಾಯಿತು. 'ವಿವಕ್ಷಿತಗುಣೋಪಪತ್ತೇಶ್ಚ' ಎಂಬುದರಿಂದ ಗುಣಗಳನ್ನು ಹೇಳಿದ್ದರಿಂದ ಆವಾಗ 'ಬ್ರಹ್ಮಮೀಮಾಂಸಾಶಾಸ್ತ್ರವು ನಿರ್ಗುಣತ್ವಪ್ರತಿಪಾದಕವಾಗಿದೆ' ಎಂಬ ಪ್ರಮೇಯಕ್ಕೆ ಈ ವಿಚಾರವು ಪ್ರತಿಕೂಲವಾಯಿತೆಂಬುದು ಸ್ಪಷ್ಟವಾಯಿತು.

ಪ್ರಕಾಶಃ —

ಏವಂ ಸೂತ್ರಾನ್ತರ ಇತಿ । ಷಷ್ಠೇ

ಈಶ್ವರಃ ಸರ್ವಭೂತಾನಾಂ ಹೃದೇಶೇऽರ್ಜುನ ತಿಷ್ಠತಿ ।

ಇತಿ ಸ್ಮೃತೌ ಆಧಾರತ್ವಪರ್ಯವಸನ್ನಷಷ್ಠ್ಯನ್ತಜೀವಸಮ್ಬನ್ಧಿಶಬ್ದಾದನ್ಯಸ್ಯ 'ಈಶ್ವರಃ' ಇತಿ ಪ್ರಥಮಾನ್ತಬ್ರಹ್ಮವಾಚಿಶಬ್ದಸ್ಯ ಸಙ್ಗಾವೇನಾಸ್ಯಾ ಸ್ಮೃತೇರೇವ ''ಅಯಮನ್ತರಾತ್ಮನ್'' ಇತಿ ಶ್ರುತ್ಯನ್ತರಸ್ಯೇವ ಪಞ್ಚಮೇನೈವ ಗ್ರಹಣಸಮ್ಭವೇನ ತಸ್ಯ ವೈಯರ್ಥ್ಯಾತ್,

'ಏವಂ ಸೂತ್ರಾಂತರೇ' ಎಂಬ ಗ್ರಂಥದಿಂದ ತಿಳಿಯಬೇಕಾದ ವಿಚಾರ ಹೀಗಿದೆ - ಆರನೆಯ ಸೂತ್ರವು ಐದನೆಯ ಸೂತ್ರದಿಂದ ಗತಾರ್ಥವಾಗಿದೆ. ಏಕೆಂದರೆ 'ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ' ಎಂಬ ಸ್ಮೃತಿಯಲ್ಲಿ ಆಧಾರತ್ವದಲ್ಲಿ ಪರ್ಯವಸಾನವಾಗುವ ಷಷ್ಠ್ಯಂತವಾದ 'ಭೂತಾನಾಂ' ಎಂಬ ಶಬ್ದವು ಜೀವನಿಗೆ ಸಂಬಂಧಿಸಿದೆ. ವಸ್ತುತಃ ಷಷ್ಠೀವಿಭಕ್ತಿಗೆ ಆಧಾರವೆಂಬರ್ಥವು ಇರುವುದಿಲ್ಲ. ಆದರೆ ಪ್ರಕೃತ ಆಧಾರತ್ವಾರ್ಥದಲ್ಲಿ ಷಷ್ಠೀವಿಭಕ್ತಿಯು ಪರ್ಯವಸಾನವಾಗುತ್ತಿದೆ. ಇಂತಹ ಶಬ್ದಕ್ಕಿಂತ ಬೇರೆಯಾದ 'ಈಶ್ವರಃ' ಎಂಬ ಪ್ರಥಮಾಂತವಾದ ಬ್ರಹ್ಮಪ್ರತಿಪಾದಕವಿದೆ. ಆದ್ದರಿಂದ ''ಅಯಮಂತರಾತ್ಮನ್'' ಎಂಬ ಶ್ರುತ್ಯಂತರದಂತೆ ಇಲ್ಲಿಯೂ ಆಧಾರಾಧೇಯಭಾವವಾಚಕವಾದ ಶಬ್ದವಿಶೇಷವಿರುವುದರಿಂದ ಐದನೆಯ ಸೂತ್ರದಿಂದಲೇ ಸ್ಮೃತಿಯನ್ನೂ ಸಹ ಸ್ವೀಕರಿಸಬಹುದು. ಪುನಃ ಆರನೆಯ ಸೂತ್ರವು ಬೇಕಾಗಿರುವುದಿಲ್ಲ.

ಪ್ರಕಾಶಃ – ಸಪ್ತಮೇ ಸರ್ವಗತೇ ಬ್ರಹ್ಮಣ್ಯಯುಕ್ತಾನಾಮಲ್ಪೌಕಸ್ತ್ವಾದೀನಾಂ ಉಪಾಸನಾರ್ಥೈ ವ್ಯಪದೇಶೇ ಜೀವೇऽಪ್ಯಯುಕ್ತಾನಾಂ ಜ್ಯಾಯಸ್ತ್ವಾದೀನಾಮುಪಾಸನಾರ್ಥೈ ವ್ಯಪದೇಶ ಇತಿ ವೈಪರೀತ್ಯಾಪಾತಾತ್,

ಅಷ್ಟಮೇ ಪೂರ್ವತ್ರ ಸರ್ವಗತತ್ವೇಪ್ಯಲ್ಪೌಕಸ್ತ್ವಾಧನುಪಪತ್ತ್ಯಾ ಪ್ರಕರಣಸ್ಯ ಬ್ರಹ್ಮವಿಷಯತ್ವಂ ನಿರಾಕುರ್ವತಾ ಪೂರ್ವಪಕ್ಷಿಣಾ ಸರ್ವಗತತ್ವೇऽನಿಷ್ಟಾಪಾದನಾಯೋಗಾತ್, ಸ್ವಾಭಾವಿಕಾಭೇದೇ ಸುಖಾದಿಭೋಗಸ್ಯಾವೈಶೇಷ್ಯಸ್ಯ ಚಾವರ್ಜನೀಯತ್ವಾತ್ ಇತ್ಯಾದ್ಯುಹ್ಯಮಿತ್ಯರ್ಥಃ ।

'ಇತ್ಯಾದಿನಾ' ಸೂತ್ರಚತುಷ್ಟಯೇನ । ನಚ ಮಿಥ್ಯಾತ್ವೇನೋಪಪತ್ತಿಃ' ಶ್ರುತೇರಪ್ರಾಮಾಣ್ಯಾಪತ್ತೇಃ, ಅಸ್ಯ ಸ್ಪಷ್ಟಂ ಟೀಕಾದೌ ನಿರಾಸಾಚ್ಚೇತಿ ।।

ಏಳನೆಯ ಸೂತ್ರಕ್ಕೆ ವೈಪರೀತ್ಯದೋಷವು ಬರುತ್ತದೆ. ಸರ್ವಗತನಾದ ಬ್ರಹ್ಮನಲ್ಲಿ ಅರ್ಭಕೌಕಸ್ತ್ವ ಮೊದಲಾದ ಧರ್ಮಗಳು ಇರಲು ಸಾಧ್ಯವಿಲ್ಲ. ಆದರೂ ಸಹ ಉಪಾಸನೆಗೋಸ್ಕರ ಹೇಳಿದ್ದಾರೆನ್ನಬೇಕು. ಆವಾಗ ಜೀವನಲ್ಲಿಯೂ ಅಯುಕ್ತವಾದ ಜ್ಯಾಯಸ್ತ್ವ ಮೊದಲಾದ ಲಿಂಗಗಳನ್ನು ಶ್ರುತಿಯ ಉಪಾಸನೆಗೋಸ್ಕರ ಹೇಳುತ್ತಿದೆಯೆಂದು ವಿಪರೀತವಾಗಿ ಏಕೆ ಹೇಳಬಾರದು?

ಎಂಟನೇ ಸೂತ್ರದಲ್ಲಿ ಸರ್ವಗತನಲ್ಲಿ ಅಲ್ಪಸ್ಥಾನಸ್ಥಿತತ್ವವು ಕೂಡದ ಕಾರಣ ಈ ಪ್ರಕರಣವು ಬ್ರಹ್ಮವಿಷಯಕವಾಗುವುದಿಲ್ಲವೆಂದು ಪೂರ್ವಪಕ್ಷಿಯು ನಿರಾಕರಿಸುತ್ತಿದ್ದಾನೆ. ಯಾವ ಪೂರ್ವಪಕ್ಷಿಯು ಈ ಪ್ರಕರಣವನ್ನೇ ಬ್ರಹ್ಮಪರವೆಂದು ಹೇಳುವುದಿಲ್ಲವೋ? ಅಂತಹವನನ್ನು ಕುರಿತು ಸಂಭೋಗಪ್ರಾಪ್ತಿಯನ್ನು ಆಕ್ಷೇಪಿಸಲು ಹೇಗೆ ಸಾಧ್ಯ? ಸ್ವಾಭಾವಿಕವಾದ ಅಭೇದವನ್ನು ಒಪ್ಪಿದಾಗ ಮಾತ್ರ ಸುಖಾದಿಭೋಗದ ಪ್ರಸಂಗವನ್ನು ಆಪಾದಿಸಬಹುದು. ಇತ್ಯಾದಿಯಾದ ದೋಷಗಳನ್ನು ಊಹಿಸಿಕೊಳ್ಳಬೇಕು.

'ಇತ್ಯಾದಿನಾ' ಎಂದರೆ ನಾಲ್ಕುಸೂತ್ರಗಳಿಂದ ಎಂದು ಅರ್ಥ. ಮಿಥ್ಯಾತ್ವವನ್ನು ಒಪ್ಪುವುದರಿಂದ ಇವುಗಳನ್ನು ಕೂಡಿಸಲು ಸಾಧ್ಯವಿಲ್ಲ. ಹಾಗಾದಲ್ಲಿ ಶ್ರುತಿಗೆ ಅಪ್ರಾಮಾಣ್ಯದೋಷವು ಬರುತ್ತದೆ. ಈ ವಿಷಯವು ಟೀಕೆ ಮೊದಲಾದವುಗಳಲ್ಲಿ ಸ್ಪಷ್ಟವಾಗಿದೆ.

ಗುರುರಾಜೀಯಮ್ – ಏವ ಸೂತ್ರಾನ್ತರೇಪೀತಿ ।। ಸ್ಮೃತೇಶ್ಚೇತಿಸೂತ್ರಸ್ಯ ಸ್ಮೃತಿಶ್ಚ ಶಾರೀರಪರಮಾತ್ಮನೋರ್ಭೇದೇನ ದರ್ಶಯತಿ ।।

ಈಶ್ವರಸ್ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ ।।

ಇತ್ಯಾದ್ಯಾ ।

ಇತಿ ವ್ಯಾಖ್ಯಾನಂ ತ್ವನ್ಮತೇ ಭೇದಸ್ಯ ಮಿಥ್ಯಾತ್ವೇನ ಶ್ರುತಿಸೂತ್ರಾಣಾಮಪ್ರಮಾಣ್ಯಾಪತ್ತ್ಯಾऽಯುಕ್ತಮ್ । ತಥಾ ಅರ್ಭಕೌಕಸ್ತ್ವಾದಿತಿ ಸೂತ್ರಸ್ಯ ಅರ್ಭಕಮಲ್ಪಮೋಕೋ ನೀಡಮ್ । ಏಷಮ ಆತ್ಮಾನ್ತರ್ಹೃದಯ ಇತಿ ಪರಿಚ್ಛಿನ್ನಾಯತನತ್ವಾತ್ । ಸ್ವಶಬ್ದೇನ ಚ ಅಣೀಯಾನ್ ವ್ರೀಹೇರ್ವಾ ಯವಾದ್ವೇತ್ಯಣೀಯಸ್ತ್ವವ್ಯಪದೇಶಾಚ್ಚಾರೀರ ಏವಾರಾಗ್ರಮಾತ್ರೋऽಯಂ ಜೀವ ಇಹೋಪದಿಶ್ಯತೇ ನ ಸರ್ವಗತಃ ಪರಮಾತ್ಮೇನತಿ ಯದುಕ್ತಂ ತತ್ಪರಿಹರ್ತವ್ಯಮ್ ।

ಅತ್ರೋಚ್ಯತೇ – ನಾಯಂ ದೋಷಃ । ನ ತಾವತ್ಪರಿಚ್ಛಿನ್ನದೇಶಸ್ಯ ಸರ್ವಗತತ್ವವ್ಯಪದೇಶಃ । ಕಥಮುಪಪದ್ಯತೇ । ಸರ್ವಗತಸ್ಯ ತು ಸರ್ವದೇಶೇಷು ವಿದ್ಯಮಾನತ್ವಾತ್ ಪರಿಚ್ಛಿನ್ನದೇಶೇ ವ್ಯಪದೇಶೋऽಪಿ

कयाचिद्विधया सम्भवति । यथा समस्तवसुधापतिरपि सन्नयोध्याधिपतिरिति व्यपदिश्यते । कया पुनरपेक्षया सर्वगतस्यनीचश्चोऽर्भकौका अणीयांश्च व्यपदिश्यत इति । निचाय्यत्वादेवमिति ब्रूमः । एवमणीयस्त्वादिगुणगणोपेत ईश्वरस्तत्र हृदयपुण्डरीके निचाय्यो द्रष्टव्य उपदिश्यते । यथा सालिग्रामे हरिः । तत्रास्य बुद्धिविज्ञानं ग्राहकम् । सर्वगतोऽपीश्वरस्तत्रोपास्यमानः प्रसीदति । व्योमवच्चैतद्रष्टव्यम् । यथा सर्वगतमपि व्योम सूचीपाशाद्यपेक्षयाऽर्भकौकोऽणीयश्च व्यपदिश्यते एवं ब्रह्माऽपि ।

तदेवं निचाय्यत्वापेक्षं ब्रह्मणोऽर्भकौकस्त्वमणीयस्त्वं च न पारमार्थिकमिति व्याख्यानम् । तत्रार्भकोकस्त्वाणीयस्त्वयोरपारमार्थिकत्वेन श्रुतेरप्रामाण्यम-सदुपासनाया अनर्थफलत्वं च । तथा सम्भोगप्राप्तिरित्यस्य व्योमवत्सर्वगतस्य ब्रह्मणस्सर्वप्राणिहृदयसम्बन्धाच्चिद्रूपतया च शारीरेणाविशिष्टत्वात्सुखदुःखादि-सम्भोगोऽप्यविशिष्टः प्रसज्येयैकत्वाच्च । नहि परस्मादात्मनोऽन्यः कश्चित्संसारी विद्यते । नान्योऽतोऽस्ति द्रष्टा विज्ञातेत्यादिश्रुतिभ्यः । तस्मात्परस्य सम्भोगप्राप्तिरिति चेन्न वैशेष्यात् । न तावत् सर्वप्राणिहृदयसम्बन्धाच्छारीरवद्ब्रह्मणः सम्भोगप्रसङ्गो वैशेष्यात् । शारीरपरमेश्वरयोरेकः कर्ता भोक्ता धर्माधर्मसाधनः सुखदुःखादिमांश्च । एकस्तद्विपरीतोऽपहतपाप्मत्वादिगुणः । एतस्मादनयो-र्विशेषादेकस्य भोगो नेतरस्य । यदि च सन्निधानमात्रेण वस्तुशक्तिमनाश्रित्य कार्य सम्बन्धोऽभ्युपगम्येताकाशादीनामपि दाहादिप्रसङ्गः । सर्वगतानेकात्मवादिनामपि समावेतौ चोद्यपरिहारौ ।

यदप्येकत्वाद्ब्रह्मण आत्मान्तराभावाच्छारीरस्य भोगेन ब्रह्मणो भोगप्रसङ्ग इति । अत्र वदामः । कथमयं त्वयाऽऽत्मान्तराभावोऽध्यवसित इति । तत्त्वमस्यहंब्रह्मास्मि नान्योतोस्ति विज्ञातेत्यादिशास्त्रेभ्य इति चेत् यथाशास्त्रं तर्हि शास्त्रीयोऽर्थः प्रतिपत्तव्यो न तत्रार्धजरतीयं लभ्यम् । शास्त्रं च तत्वमसीत्यपहत-पाप्मत्वादिविशेषणं ब्रह्मशारीरस्यात्मत्वेनोपदिशच्छारीरस्यैव तावदुपभोक्तृत्वं वारयति । कुतस्तदुपभोगेन ब्रह्मण उपभोगप्रसङ्गः ।

अथागृहीतं शारीरस्य ब्रह्मणैकत्वं तदा मिथ्याज्ञाननिमित्तः शारीरस्योपभोगोऽनेन परमार्थरूपस्य ब्रह्मणः संस्पर्शः । नहि

बालैस्तलमलिनतादिभिर्व्योम्नि विकल्प्यमाने तलमलिनतादिविशिष्टमेव परमार्थतो व्योम भवति । तदाह । न वैशेष्यादिति ।

नैकत्वेऽपि शारीरस्योपभोगेन ब्रह्मण उपभोगप्रसङ्गो वैशेष्यात् । विशेषो हि भाति मिथ्याज्ञानमम्यग्ज्ञानयोः । मिथ्याज्ञानकल्पित उपभोगः सम्यग्ज्ञानदृष्टमेकत्वम् । नच मिथ्याज्ञानकल्पितेनोप-भोगेन सम्यग्ज्ञानदृष्टं वस्तु संस्पृश्यते । तस्मान्नोपभोगसम्बन्धोऽपि शक्य ईश्वरस्य कल्पयितुमिति व्याख्यानम् । तच्चास्मद्गीत्या पारमार्थिकव्यवस्थोपपत्तौ काल्पनिकव्यवस्था क्लिष्टेवेत्यादिरूपेण सूत्रान्तरेऽप्यनुपपत्तिरूह्येत्यर्थः ।।

ಸಾರ

ಆದ್ವೈತಿಗಳ ಐದನೇ ಸೂತ್ರವ್ಯಾಖ್ಯಾನವೂ ಸಹ ಸರಿಯಿಲ್ಲ. ಏಕೆಂದರೆ ವಿರುದ್ಧ ವಿಭಕ್ತಿಗಳಿಂದ ಒಬ್ಬನೇ ಪ್ರತಿಪಾದ್ಯನಾಗುವುದಿಲ್ಲವೆಂದು ಅವರವ್ಯಾಖ್ಯಾನ. ಆದರೆ ಬೇರೆ ಬೇರೆ ಶ್ರುತಿಯಲ್ಲಿರುವ ವಿರುದ್ಧವಿಭಕ್ತಿಗಳನ್ನು ಆಶ್ರಯಿಸಿ ಕಷ್ಟ ಕೊಡುವುದಕ್ಕಿಂತ ಅನಾಯಾಸವಾಗಿ ಸಾವಧಾರಣವಾದ ಬ್ರಹ್ಮಶಬ್ದದಲ್ಲಿಯೇ ಶಬ್ದವಿಶೇಷವನ್ನು ಹೇಳುವುದು ಶ್ರೇಯಸ್ಕರವಾಗಿದೆ. ಇದರಂತೆ ಆದ್ವೈತಿಗಳ ಆರನೆಯ ಸೂತ್ರವು ಐದನೆಯ ಸೂತ್ರದಿಂದ ಗತಾರ್ಥವಾಗಿದೆ. ಏಳನೆಯ ಸೂತ್ರದಲ್ಲಿ ವೈಪರೀತ್ಯ ದೋಷವಿದೆ. ಎಂಟನೆಯ ಸೂತ್ರದಲ್ಲಿ ಅನಿಷ್ಟಪಾದನವನ್ನೇ ಪೂರ್ವಪಕ್ಷಿಗೆ ಮಾಡಲಾಗದೆಂಬ ದೋಷವಿದೆ. ಹೀಗೆ ಪ್ರತಿಯೊಂದು ಸೂತ್ರಗಳಲ್ಲಿಯೂ ಅನೇಕ ದೋಷಗಳಿರುವುದರಿಂದ ಆದ್ವೈತಿಗಳು ಸೂತ್ರವನ್ನು ವ್ಯಾಖ್ಯಾನಿಸಲು ಅನರ್ಹರಾಗಿದ್ದಾರೆ.

ಹಿಂದಿನ ಅಧಿಕರಣದಂತೆ ಇಲ್ಲಿಯೂ ಸಹ ಜೀವಬ್ರಹ್ಮರ ಭೇದವನ್ನೇ ಆದ್ವೈತಿಗಳು ಒಪ್ಪಿದ್ದಾರೆ. ಬ್ರಹ್ಮನಲ್ಲಿರುವ ಗುಣಗಳು ಜೀವನಲ್ಲಿ ಅನುಪಪನ್ನವಾಗಿವೆ ಎಂದು ಹೇಳುವಾಗ ಜೀವಬ್ರಹ್ಮರ ಭೇದವನ್ನು ಒಪ್ಪಿದಂತಾಯಿತು. ಮತ್ತು ಬ್ರಹ್ಮಮೀಮಾಂಸಾ ಶಾಸ್ತ್ರವು ನಿರ್ಗುಣಬ್ರಹ್ಮ ಪ್ರತಿಪಾದಕವೆನ್ನುತ್ತಾರೆ. ಆದರೆ 'ವಿವಕ್ಷಿತಗುಣೋಪಪತ್ತೇಃ' ಎಂಬ ಸೂತ್ರದಲ್ಲಿ ನಿರ್ಗುಣತ್ವಕ್ಕೆ ಪ್ರತಿಕೂಲವಾದ ಗುಣಗಳನ್ನು ಸಮರ್ಥಿಸಿದ್ದಾರೆ.

ರಾಮಾನುಜರ ಅಧಿಕರಣ ಶರೀರ

तात्पर्यचन्द्रिका

केचित्तु – ''सर्वं खल्विदं ब्रह्म'' इत्यादिवाक्यं ब्रह्मविषयम् मनोमयवाक्यं तु जीवविषयमिति भिन्नविषयत्वेन यः परकीयपूर्वपक्षः, तस्यैकविषयत्वसम्भवे अयोगादेवं पूर्वपक्षः – ''सर्वं खल्विदं'' इति ब्रह्मशब्दनिर्दिष्टो जीव एव, सर्वशब्दनिर्दिष्टब्रह्मादिस्तम्बपर्यन्तकृत्स्नात्मकतायाः अनादिसंसारे कर्मवशाज्जीवे सम्भवात्, निखिलहेयप्रत्यनीके च ब्रह्मणि तदयोगात्, जन्मादिकारणतायाश्च कर्मद्वारा जीवेऽपि सम्भवात्, ब्रह्मशब्दस्य च जीवेऽपि प्रयोगादिति ।

सिद्धान्तस्तु – जीवस्य जीवान्तरात्मकत्वाभावेन सर्वात्मकत्वायोगात्, सर्वात्मकता च सर्वप्रकारकतेति स्वीकारेण प्रकारभूतशरीरगतानां दोषाणां प्रकारिणि ब्रह्मण्यप्रसङ्गात्, ब्रह्मशब्दकारणतयोश्च जीवेऽस्वारस्यात्, ब्रह्मैव सर्वात्मकमिति ।

सूत्राक्षरार्थस्तु – 'सर्वत्र' ''सर्वं खलु'' इति निर्दिष्टे जगति तत्समानाधिकरणेन ब्रह्मशब्देन तदात्मकतयाऽभिधीयमानं परं ब्रह्मैव, खलुशब्देन सर्वात्मकतायाः, ''तज्जलान् इति'' इति हेतुत्वार्थेनेतिशब्देन च जन्मादिकारणतायाः प्रसिद्धत्वेनोपदेशात्, कारणत्वादेश्च ''आनन्दाद्ध्येव खल्विमानि भूतानि'' इत्यादिश्रुत्यन्तरे ब्रह्मण्येव प्रसिद्धत्वादित्याहुः ।

ಅನುವಾದ - ರಾಮಾನುಜರ ಅಧಿಕರಣ ಶರೀರ ಹೀಗಿದೆ - 'ಸರ್ವಂ ಖಲ್ವಿದಂ' ಇತ್ಯಾದಿ ವಾಕ್ಯವು ಬ್ರಹ್ಮವಿಷಯಕವಾಗಿದೆ. 'ಮನೋಮಯಃ ಪ್ರಾಣಶರೀರಃ' ಎಂಬ ವಾಕ್ಯವು ಜೀವವಿಷಯಕವಾಗಿದೆ. ಭಿನ್ನವಿಷಯಕವಾದ್ದರಿಂದ ಬ್ರಹ್ಮನು ಶ್ರುತಿಪ್ರತಿಪಾದ್ಯನಲ್ಲ ಎಂದು ಅದ್ವೈತಿಗಳು ಪೂರ್ವಪಕ್ಷ ಮಾಡಿದರು. ಆದರೆ ಭಿನ್ನವಿಷಯಕವೆಂದು ಒಪ್ಪದೆ ಏಕವಿಷಯಕತ್ವವನ್ನು ಒಪ್ಪಿ ಸುಲಭವಾಗಿ ಪೂರ್ವಪಕ್ಷ ಮಾಡಲು ಬರುವಾಗ ಭಿನ್ನವಿಷಯಕವಾದ ಪೂರ್ವಪಕ್ಷವು ಅಯುಕ್ತವಾಗಿದೆ.

ಅದು ಹೀಗೆ - 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತಿಯಲ್ಲಿ ಬ್ರಹ್ಮಶಬ್ದದಿಂದ ನಿರ್ದೇಶಿಸಲ್ಪಟ್ಟರುವವನು ಜೀವನೇ ಆಗಿದ್ದಾನೆ. ಏಕೆಂದರೆ ಸರ್ವಶಬ್ದವು ಚತುರ್ಮುಖಬ್ರಹ್ಮನಿಂದ ಆರಂಭಿಸಿ ತೃಣಪರ್ಯಂತ ಸಕಲಜೀವರಾಶಿಗಳ ತಾದಾತ್ಮ್ಯವನ್ನು ಹೇಳುತ್ತಿದೆ. ಅನಾದಿ ಸಂಸಾರದಲ್ಲಿ ಪ್ರತಿಯೊಬ್ಬ ಜೀವನೂ ಸಹ ತಮ್ಮ ತಮ್ಮ ಕರ್ಮಗಳಿಗೆ ಅನುಗುಣವಾಗಿ ಬ್ರಹ್ಮನಿಂದ ಆರಂಭಿಸಿ

ತೃಣಪರ್ಯಂತವಿರುವ ಪ್ರತಿಯೊಂದು ಜನ್ಮಗಳನ್ನು ಹೊಂದುತ್ತಾನೆ. ಈ ದೃಷ್ಟಿಯಿಂದ ಶ್ರುತಿಯು 'ಸರ್ವಂ ಖಲ್ವಿದಂ ಬ್ರಹ್ಮ' ಎಂದು ಜೀವನಿಗೆ ಸರ್ವಾತ್ಮಕತ್ವವನ್ನು ಹೇಳುತ್ತಿದೆ. ಇಂತಹ ಸರ್ವಾತ್ಮಕತ್ವವು ಹೇಯವೆನಿಸಿದ ಸಕಲ ಜನ್ಮಗಳಿಂದ ವಿನಿರ್ಮುಕ್ತನಾದ ಬ್ರಹ್ಮನಲ್ಲಿ ಕೂಡುವುದಿಲ್ಲ.

ಹಾಗಾದರೆ ಜನ್ಮಾದಿಕಾರಣತ್ವವು ಜೀವನಲ್ಲಿ ಹೇಗೆ ಬರುತ್ತದೆ? ಎಂದರೆ ಕರ್ಮದ ಮೂಲಕವಾಗಿ ಜನ್ಮಾದಿಕಾರಣತ್ವವನ್ನೂ ಸಹ ಜೀವನಲ್ಲಿ ಹೇಳಬಹುದು. ಆದ್ದರಿಂದ 'ಸರ್ವಂ ಖಲ್ವಿದಂ' ಇತ್ಯಾದಿ ಸಮಸ್ತ ವಾಕ್ಯದಿಂದ ಜೀವನೇ ಪ್ರತಿಪಾದ್ಯನಾಗಿದ್ದಾನೆಂದು ಪೂರ್ವಪಕ್ಷ.

ಸಿದ್ಧಾಂತ - ಒಬ್ಬ ಜೀವನು ಮತ್ತೊಬ್ಬ ಜೀವನ ತಾದಾತ್ಮ್ಯವನ್ನು ಹೊಂದಲು ಸಾಧ್ಯವಿಲ್ಲ. ಇಂತಹ ತಾದಾತ್ಮ್ಯವನ್ನೇ ಶ್ರುತಿಯು ಹೇಳುತ್ತಿದೆ. ಆದ್ದರಿಂದ ಸರ್ವಾತ್ಮಕತ್ವಶಬ್ದಕ್ಕೆ ಸರ್ವಪ್ರಕಾರತ್ವ ಎಂಬ ಅರ್ಥವನ್ನು ಹೇಳಬೇಕು. ಪ್ರಕಾರವೆಂದರೆ ಶರೀರಗಳೆಂದರ್ಥ. ಅಂದರೆ ಪರಬ್ರಹ್ಮನಿಗೆ ಸಕಲ ಜೀವರಾಶಿಗಳು ಶರೀರವಾಗಿರುವುದರಿಂದ ಸರ್ವಾತ್ಮಕತ್ವವನ್ನು ಹೇಳಬಹುದು. ಪ್ರಕಾರವೆನಿಸಿದ ಶರೀರದಲ್ಲಿರುವ ದೋಷಗಳು ಪ್ರಕಾರಿ ಎನಿಸಿದ ಬ್ರಹ್ಮನಲ್ಲಿ ಬರುವುದಿಲ್ಲ. ಬ್ರಹ್ಮಶಬ್ದ ಹಾಗೂ ಜಗತ್ಕಾರಣತ್ವಗಳು ಜೀವನಲ್ಲಿ ಸ್ವರಸವಾಗಿ ಕೂಡಿಸಲು ಬಾರದ ಕಾರಣ ಬ್ರಹ್ಮನೇ ಸರ್ವಾತ್ಮಕನೆಂದು ಹೇಳಬೇಕು. ಆದ್ದರಿಂದ 'ಸರ್ವಂ ಖಲ್ವಿದಂ' ಇತ್ಯಾದಿ ವಾಕ್ಯದಿಂದ ಪ್ರತಿಪಾದ್ಯನಾದವನು ಬ್ರಹ್ಮನೇ ಆಗಿದ್ದಾನೆಂದು ಸಿದ್ಧಾಂತ.

ಪ್ರಥಮ ಸೂತ್ರಾರ್ಥ ಹೀಗಿದೆ - ಸರ್ವತ್ರ = 'ಸರ್ವಂ ಖಲ್ವಿದಂ' ಎಂಬುದಾಗಿ ನಿರ್ದೇಶಿಸಲ್ಪಟ್ಟ ಜಗತ್ತಿನಲ್ಲಿ ಸರ್ವಶಬ್ದದ ಸಮಾನ ವಿಭಕ್ತಿಯಲ್ಲಿ ಪ್ರಯೋಗಿಸಲ್ಪಟ್ಟ ಬ್ರಹ್ಮಶಬ್ದದಿಂದ ಸರ್ವಾತ್ಮಕತ್ವವನ್ನು ಹೇಳಲಾಗಿದೆ. ಇಂತಹ ಸರ್ವಾತ್ಮಕನು ಪರಬ್ರಹ್ಮನೇ ಆಗಿದ್ದಾನೆ. 'ಖಲು' ಎಂಬ ಶಬ್ದದಿಂದ ಸರ್ವಾತ್ಮಕತ್ವವು ಪ್ರಸಿದ್ಧವಾಗಿದೆಯೆಂದು ತಿಳಿಸಲಾಗಿದೆ. 'ತಜ್ಜಲಾನ್ ಇತಿ' ಎಂಬಲ್ಲಿರುವ ಹೇತುತ್ವರ್ಥದಲ್ಲಿರುವ 'ಇತಿ' ಶಬ್ದದಿಂದಲೂ ಜನ್ಮಾದಿಕಾರಣತ್ವವು ಪ್ರಸಿದ್ಧವಾಗಿದೆಯೆಂದು ತಿಳಿಸಲಾಗಿದೆ. ಇಂತಹ 'ಸರ್ವಾತ್ಮಕತ್ವ' ಹಾಗೂ ಜಗತ್ಕಾರಣತ್ವಾದಿಗಳು 'ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ' ಇತ್ಯಾದಿಯಾಗಿ ಬೇರೆ ಶ್ರುತಿಯಲ್ಲಿ ಬ್ರಹ್ಮನಲ್ಲೇ ಪ್ರಸಿದ್ಧವಾಗಿವೆಯೆಂದು ತಿಳಿಯುತ್ತದೆ. ಇಷ್ಟು ರಾಮಾನುಜರ ವ್ಯಾಖ್ಯಾನ.

ಪ್ರಕಾಶಃ –

केचित्तु – सर्वमिति । परैः ''सर्वं खल्विदं ब्रह्म'' इति वाक्यं ब्रह्मपरमित्युपेत्य ''क्रतुं कुर्वीत'' इति वाक्यविहितोपासनानुवादेन शान्तत्वरूपगुण-विधिपरत्वान्नोपासनायां कर्मतया ब्रह्मार्पकं, किन्तु मनोमयवाक्यमेव जीवं कर्मतयाऽर्पयतीत्युक्तम् ।

एते तु, सर्वात्मकं ब्रह्म शान्तः सन्नुपासीतेत्यत्रैवोपासना विधीयते, ''क्रतुं कुर्वीत'' इति तु मनोमयत्वादिगुणविधानाय प्राग्विहितोपासनानुवादः । ततश्च सर्वात्मकं ब्रह्म मनोमयत्वादिगुणकमुपासीतेति समग्रवाक्यार्थः इत्येकवाक्यतामाहुः ।

ವಿವರಣೆ - ರಾಮಾನುಜರ ಅಧಿಕರಣಶರೀರವನ್ನು ನಿರಾಕರಿಸಲು ಅನುವಾದ ಮಾಡುತ್ತಿದ್ದಾರೆ 'ಕೇಚಿತ್ತು' ಇತ್ಯಾದಿಯಾಗಿ. ಅದ್ವೈತಿಗಳಿಗೂ ರಾಮಾನುಜರಿಗೂ ಇಷ್ಟು ವ್ಯತ್ಯಾಸಗಳಿವೆ - ಅದ್ವೈತಿಗಳು 'सर्वं खल्विदं ब्रह्म' ಇತ್ಯಾದಿ ವಾಕ್ಯಗಳನ್ನು ಬ್ರಹ್ಮಪರವೆಂದು ಒಪ್ಪಿ 'क्रतुं कुर्वीत' ಎಂಬ ವಾಕ್ಯದಿಂದ ವಿಹಿತವಾದ ಉಪಾಸನೆಯನ್ನು ಅನುವಾದ ಮಾಡುವ ಮೂಲಕ ಶಾಂತತ್ವವೆಂಬ ಗುಣವನ್ನು ವಿಧಿಸುತ್ತದೆ ಎನ್ನುತ್ತಾರೆ. ಈ ವಾಕ್ಯವು ಉಪಾಸನೆಗೆ ಬ್ರಹ್ಮನು ಕರ್ಮನಾಗಿದ್ದಾನೆಂದು ಹೇಳುವುದಿಲ್ಲ. ಹೊರತಾಗಿ ಮನೋಮಯವಾಕ್ಯವೇ ಉಪಾಸನೆಗೆ ಕರ್ಮನಾದವನು ಜೀವನೆಂದು ಹೇಳುತ್ತದೆ ಎಂದು ಪೂರ್ವಪಕ್ಷ ಮಾಡುತ್ತಾರೆ.

ಆದರೆ ರಾಮಾನುಜರು ಸರ್ವಾತ್ಮಕನಾದ ಬ್ರಹ್ಮನನ್ನು ಶಾಂತನಾಗಿ ಉಪಾಸನೆ ಮಾಡಬೇಕೆಂದು 'सर्वं खल्विदं' ಎಂಬ ವಾಕ್ಯವೇ ವಿಧಿಸುತ್ತಿದೆ. 'क्रतुं कुर्वीत' ಎಂಬ ವಾಕ್ಯವು ಮನೋಮಯತ್ವಾದಿ ಗುಣಗಳನ್ನು ವಿಧಾನ ಮಾಡುವುದಕ್ಕಾಗಿ ಹಿಂದೆ ವಿಹಿತವಾದ ಉಪಾಸನೆಯನ್ನು ಅನುವಾದ ಮಾಡುತ್ತಿದೆ. ಆದ್ದರಿಂದ ಸರ್ವಾತ್ಮಕನಾದ ಬ್ರಹ್ಮನೇ ಮನೋಮಯತ್ವಾದಿ ಗುಣಗಳಿಂದ ಉಪಾಸ್ಯನಾಗಿದ್ದಾನೆಂದು ಸಮಗ್ರವಾಕ್ಯದ ಅರ್ಥವೆನ್ನುತ್ತಾರೆ.

प्रकाशः – तथा च ब्रह्मपदनिर्दिष्टो यदि जीवस्तर्हि स तथोपास्यः । यदि ब्रह्म, तर्हि तदेव तथोपास्यमिति सेत्स्यतीति ब्रह्मपदनिर्दिष्टमेव किं जीव उत परमात्मेति विचार्यते । तत्र पूर्वपक्षाद्यनवदति – सर्वं खल्विदं ब्रह्मेतीति ।

अत्र ब्रह्मोद्दिश्य 'इदं सर्वं' इत्युच्यमानं सर्वात्मकत्वं चतुर्मुखादितृणपर्यन्त-जगदात्मकत्वम् । तच्चानाद्यविद्याकर्मवशेन नानायोनिषु जननसम्भवेन जीव एव भवति, नतु सर्वदोषदूरे परमात्मनीत्यर्थः । कथं तर्हि ''तज्जलान्'' इत्युक्तसृष्ट्यादि हेतुत्वमित्यत आह – **जन्मादीति ।**

ಆದ್ದರಿಂದ ಬ್ರಹ್ಮಪದದಿಂದ ನಿರ್ದೇಶಿಸಲ್ಪಡುವವನು ಜೀವನಾದರೆ ಉಪಾಸ್ಯನೂ ಸಹ ಅವನೇ ಆಗುತ್ತಾನೆ. ಒಂದು ವೇಳೆ ಬ್ರಹ್ಮನಾದರೆ ಬ್ರಹ್ಮನೇ ಉಪಾಸ್ಯನಾಗುತ್ತಾನೆ. ಆದ್ದರಿಂದ ಬ್ರಹ್ಮಪದದಿಂದ ನಿರ್ದೇಶಿಸಲ್ಪಟ್ಟವನು ಜೀವನೋ ಅಥವಾ ಪರಮಾತ್ಮನೋ ? ಎಂದು ಸಂಶಯ.

ಸರ್ವಗತತ್ವಾಧಿಕರಣ (೧-೨-೧)

ಈ ವಿಷಯದಲ್ಲಿ ಪೂರ್ವಪಕ್ಷ ಹಾಗೂ ಸಿದ್ಧಾಂತಗಳನ್ನು 'ಸರ್ವಂ ಖಲು' ಇತ್ಯಾದಿಯಾಗಿ ಅನುವಾದ ಮಾಡುತ್ತಿದ್ದಾರೆ. ಈ ಶ್ರುತಿಯಲ್ಲಿ ಬ್ರಹ್ಮನನ್ನು ಉದ್ದೇಶಿಸಿ 'ಇದಂ ಸರ್ವಂ' ಎಂದು ಹೇಳುತ್ತಿರುವ ಸರ್ವಾತ್ಮಕತ್ವವು ಚತುರ್ಮುಖನಿಂದ ಆರಂಭಿಸಿ ತೃಣಪರ್ಯಂತವಾದ ಜಗತ್ತಿನಸ್ವರೂಪವಾಗಿದೆ. ಇಂತಹ ಜಗದಾತ್ಮಕತ್ವವು ಅನಾದಿಯಾದ ಅವಿದ್ಯಾಕರ್ಮಗಳ ಅಧೀನವಾಗಿ ಅನೇಕ ಯೋನಿಗಳಲ್ಲಿ ಹುಟ್ಟುವವನಾದ್ದರಿಂದ ಜೀವನಲ್ಲೇ ಯುಕ್ತವಾಗುತ್ತದೆ ಹೊರತು, ಸಕಲದೋಷ ವಿದೂರನಾದ ಪರಮಾತ್ಮನಲ್ಲಿ ಇಂತಹ ತದಾತ್ಮಕತ್ವವು ಯುಕ್ತವಾಗುವುದಿಲ್ಲ. ಹಾಗಾದರೆ ''ತಜ್ಜಲಾನ್'' ಎಂಬುದಾಗಿ ಹೇಳಲ್ಪಟ್ಟ ಜನ್ಮಾದಿಕಾರಣತ್ವವನ್ನು ಜೀವನಲ್ಲಿ ಹೇಗೆ ಸಮರ್ಥಿಸುತ್ತೀರಿ? ಎಂಬ ಪ್ರಶ್ನೆಗೆ 'ಜನ್ಮಾದಿ' ಇತ್ಯಾದಿಯಾಗಿ ಉತ್ತರಿಸಿದ್ದಾರೆ.

प्रकाशः – सर्वप्रकारकतेतीति । सर्वविशेषणकत्वं देवतिर्यङ्मनुष्यशरीकत्वमिति यावत् । 'सर्वत्र' इति पदं प्रतिज्ञापरं मत्वा सूत्रार्थमनुवदति – सर्वत्रेति ।

'सर्वत्र' इत्यनुवादः जगतीति व्याख्या । हेत्वंशार्थमाह – खल्विति । 'प्रसिद्धोपदेशात्, इत्यस्य प्रसिद्धत्वेनोपदेशादित्यर्थः । कस्येति प्रतियोग्याकाङ्क्षायां ''तज्जलान्'' इतिवाक्योक्तस्य जन्मादिहेतुत्वस्य 'सर्वमिदं' इत्युक्तसर्वात्मकतायाश्चान्वयः ।

ಗ್ರಂಥದಲ್ಲಿ ಸರ್ವಪ್ರಕಾರತ್ವವನ್ನು ಹೇಳಿದ್ದಾರೆ. ಅಂದರೆ ಸರ್ವವೂ ವಿಶೇಷಣವಾಗಿರುವುದು ಎಂದರ್ಥ. ದೇವತೆಗಳು, ತಿರ್ಯಂಗ್‌ಜಂತುಗಳು, ಮನುಷ್ಯರು ಇವರೇ ಶರೀರವಾಗಿವುಳ್ಳವನು ಎಂದು ಅಭಿಪ್ರಾಯ.

ಸೂತ್ರದಲ್ಲಿರುವ 'ಸರ್ವತ್ರ' ಎಂಬ ಪದವು ಪ್ರತಿಜ್ಞಾವಾಕ್ಯವಾಗಿದೆ ಎಂದು ತಿಳಿದು ಸೂತ್ರಾರ್ಥವನ್ನು ಹೇಳುತ್ತಾರೆ. ಅದನ್ನು 'ಸರ್ವತ್ರ' ಇತ್ಯಾದಿಯಾಗಿ ಅನುವಾದ ಮಾಡಿದ್ದಾರೆ. 'ಸರ್ವತ್ರ' ಎಂಬ ಪದವು ಸೂತ್ರದ ಅನುವಾದವಾಗಿದ್ದು 'ಜಗತಿ' ಎಂಬುದು ಅದರ ವ್ಯಾಖ್ಯಾನವಾಗಿದೆ. ಹೇತ್ವಂಶದ ಅರ್ಥವನ್ನು 'ಖಲು' ಇತ್ಯಾದಿಯಾಗಿ ಹೇಳಿದ್ದಾರೆ. 'ಪ್ರಸಿದ್ಧೋಪದೇಶಾತ್' ಎಂಬ ಪದಕ್ಕೆ ಪ್ರಸಿದ್ಧವೆಂದು ಉಪದೇಶಿಸಿದ್ದರಿಂದ ಎಂದರ್ಥ. ಯಾವುದನ್ನು ? ಎಂಬ ಆಕಾಂಕ್ಷೆಗೆ 'ತಜ್ಜಲಾನ್' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಜನ್ಮಾದಿಹೇತುತ್ವವು ಮತ್ತು 'ಸರ್ವಮಿದಂ' ಎಂಬಲ್ಲಿ ಹೇಳಲ್ಪಟ್ಟ ಸರ್ವಾತ್ಮಕತ್ವವು ಎಂದು ಅನ್ವಯ.

प्रकाशः – सार्वात्म्यस्य प्रसिद्धत्वं खलुशब्देन, हेतुत्वस्य प्रसिद्धत्वमिति-शब्देनोच्यते, इतिशब्दस्य हेत्वर्थत्वात्, प्रसिद्धस्यैव हेतुत्वात्, जन्मादिहेतुत्वं प्रसिद्धमिति गम्यत इति, सार्वात्म्यहेतुत्वयोः खल्वितिशब्दाभ्यां प्रसिद्धत्वेनोपदेशादिति सूत्रार्थः पर्यवस्यतीत्यर्थः ।

अस्तु जन्मादिकारणत्वस्य प्रसिद्धत्वेनोपदेशः, ततश्च किमित्यत आह – कारणत्वादेश्चेति ।

ಸಾರ್ವಾತ್ಮ್ಯವು ಬ್ರಹ್ಮನಲ್ಲಿ ಪ್ರಸಿದ್ಧವಾಗಿದೆಯೆಂದು ಹೇಳಿದ್ದಾರೆ. ಜಗತ್‌ಕಾರಣತ್ವವು ಬ್ರಹ್ಮನಲ್ಲಿ ಪ್ರಸಿದ್ಧವಾಗಿದೆಯೆಂದು 'ಇತಿ' ಶಬ್ದದಲ್ಲಿ ಹೇಳಿದ್ದಾರೆ 'ಇತಿ' ಶಬ್ದವು ಹೇತ್ವರ್ಥದಲ್ಲಿರುವುದರಿಂದ ಪ್ರಸಿದ್ಧವೇ ಹೇತುವಾಗುವುದರಿಂದ ಜನ್ಮಾದಿಹೇತುತ್ವವು ಪ್ರಸಿದ್ಧವಾಗಿದೆಯೆಂದು ತಿಳಿಯುತ್ತದೆ. ಹೀಗೆ ಸರ್ವಾತ್ಮಕತ್ವ ಹಾಗೂ ಹೇತುತ್ವಗಳು ಪ್ರಸಿದ್ಧವಾಗಿವೆಯೆಂದು 'ಖಲು' ಹಾಗೂ 'ಇತಿ' ಶಬ್ದಗಳಿಂದ ಉಪದೇಶಿಸಿದ ಕಾರಣ ಎಂದು ಸೂತ್ರಾರ್ಥವು ಪರ್ಯವಸಾನವಾಗುತ್ತದೆ.

ಜನ್ಮಾದಿಕಾರಣತ್ವವು ಪ್ರಸಿದ್ಧವಾಗಿದೆಯೆಂದು ಉಪದೇಶಿಸಲ್ಪಡಲಿ ಆದರಿಂದೇನು ಪ್ರಯೋಜನ ? ಎಂಬ ಪ್ರಶ್ನೆಗೆ 'ಕಾರಣತ್ವಾದೇಶ್ಚ' ಎಂಬುದಾಗಿ ಉತ್ತರಿಸಿದ್ದಾರೆ.

प्रकाशः – आनन्दाद्ध्येव खल्विति । ''यतो वा इमानि भूतानि जायन्ते'' इति श्रुत्यन्तरे ब्रह्मणि प्रसिद्धस्यैव जगत्कारणत्वस्येहाऽऽम्नानात्, विवक्षितगुणानामुपपत्तेश्च ब्रह्मेत्येवावगम्यत इत्यर्थः । यथोक्तमधिकरणसारावल्यां -

> सर्वत्वं कर्मभिस्स्वैर्जनिमति घटते ब्रह्मशब्दोऽत्र चैवे-
> त्यल्पस्थानोऽल्पमानस्सुखतदितरभुक् जीव एवेति चेन्न ।
> तज्जत्वादेरनूक्तेर्विविधगुणभिदादर्शनात्सर्वतादेः
> स्वारस्यादप्यणुत्वं श्रुपधिकृतमिहोपास्तये ज्यायसि स्यात् ।।

इति ।

अत्र प्राग्वद्ब्रह्मधर्माणामेव भावेन संशयपूर्वपक्षयोरयोगात्, सत्यकामत्वादिभिरनेकैर्निरवकाशैः पूर्वस्यापि सर्वात्मत्वादेः कथञ्चिन्नेयत्वात्, स्वप्रकरणे शब्दविशेषाभावेनोदाहरणानौचित्यादिति ध्येयम् ।

'ಆನಂದಾದ್ಧ್ಯೇವ ಖಲು' ಎಂಬ ಶ್ರುತಿಯಲ್ಲಿ ಹಾಗೂ ''ಯತೋ ವಾ ಇಮಾನಿ ಭೂತಾನಿ ಜಾಯಂತೇ'' ಎಂಬ ಶ್ರುತಿಯಲ್ಲಿ ಬ್ರಹ್ಮನಲ್ಲಿ ಪ್ರಸಿದ್ಧವಾದ ಜಗತ್ಕಾರಣತ್ವವನ್ನು ಈ ಶ್ರುತಿಯಲ್ಲಿ ಹೇಳಲಾಗಿದೆ. ಹೀಗೆ ವಿವಕ್ಷಿತವಾದ ಜಗತ್ಕಾರಣತ್ವಾದಿ ಗುಣಗಳು ಉಪಪನ್ನವಾಗುವುದರಿಂದ ಬ್ರಹ್ಮನೇ ಸರ್ವಾತ್ಮಕನೆಂದು ತಿಳಿಯುತ್ತದೆ. ಈ ವಿಷಯವು ಅಧಿಕರಣಸಾರಾವಳಿಯಲ್ಲಿ ಹೀಗೆ ಸಂಗ್ರಹಿಸಲಾಗಿದೆ -

> ಸರ್ವತ್ವಂ ಕರ್ಮಭಿಸ್ಸ್ವೈರ್ಜನಿಮತಿ ಘಟತೇ ಬ್ರಹ್ಮಶಬ್ದೋಽತ್ರ ಚೈವೇ -
> ತ್ಯಲ್ಪಸ್ಥಾನೋಽಲ್ಪಮಾನಸ್ಸುಖತದಿತರಭುಕ್ ಜೀವ ಏವೇತಿ ಚೇನ್ನ।

ತದ್ವತ್ತಾದೇರನೂಕ್ತೇರ್ವಿವಿಧಗುಣಭೃದಾದರ್ಶನಾತ್ಸರ್ವತಾದೇಃ
ಸ್ವಾರಸ್ಯಾದಪ್ಯಣುತ್ವಂ ಹ್ಯುಪಧಿಕೃತಮಿಹೋಪಾಸ್ತಯೇ ಜ್ಯಾಯಸಿ ಸ್ಯಾತ್ ॥

ಜೀವನು ತನ್ನ ಕರ್ಮಗಳಿಂದ ಸರ್ವಾತ್ಕತ್ವವನ್ನು ಹೊಂದುತ್ತಾನೆ. ಹುಟ್ಟುವಿಕೆಯೂ ಸಹ ಇವನಲ್ಲಿ ಕೂಡುತ್ತದೆ. ಕೋಶದ ಆಧಾರದಿಂದ ಬ್ರಹ್ಮಶಬ್ದವು ಜೀವವಾಚಯಾಗಿದೆ. ಅಲ್ಪಸ್ಥಾನಸ್ಥಿತತ್ವವು ಮತ್ತು ಅಲ್ಪಪರಿಮಾಣವು ಇವನಲ್ಲಿ ಕೂಡುತ್ತದೆ. ಮತ್ತು ಸುಖದುಃಖ ಇವುಗಳ ಭೋಗವು ಜೀವನಲ್ಲೇ ಕೂಡುತ್ತದೆ. ಆದ್ದರಿಂದ 'ಸರ್ವಂ ಖಲ್ವಿದಂ' ಇತ್ಯಾದಿ ವಾಕ್ಯದಿಂದ ಪ್ರತಿಪಾದ್ಯನಾದವನು ಜೀವನೇ ಆಗಿದ್ದಾನೆಂದು ಪೂರ್ವಪಕ್ಷ.

ಇದು ತಪ್ಪು. ಜಗತ್ಕಾರಣತ್ವ, ಜಗತ್ತಿನ ಪ್ರಳಯ ಇವುಗಳೆಲ್ಲವನ್ನು ಶ್ರುತಿಯಲ್ಲಿ ಕೇವಲ ಅನುವಾದ ಮಾಡುತ್ತಿರುವುದರಿಂದ ಪ್ರಸಿದ್ಧನಾದ ಬ್ರಹ್ಮನಲ್ಲೇ ಕೂಡಿಸಬೇಕು. ಮತ್ತು ಸತ್ಯಸಂಕಲ್ಪತ್ವವೇ ಮೊದಲಾದ ಗುಣಗಳೆಲ್ಲವು ಬ್ರಹ್ಮನಲ್ಲೇ ಕೂಡುತ್ತವೆ. ಮತ್ತು ಸರ್ವಾತ್ಕತ್ವ ಮತ್ತು ಜಗತ್ಕಾರಣತ್ವಗಳು ಬ್ರಹ್ಮನಲ್ಲೇ ಸ್ವರಸವಾಗಿ ಕೂಡುತ್ತವೆ. ಅಣುತ್ವವನ್ನು ಔಪಾಧಿಕವಾಗಿ ಕೂಡಿಸಬಹುದು. ಆದ್ದರಿಂದ ಬ್ರಹ್ಮನ ಉಪಾಸನೆಗೋಸ್ಕರ ಮಹತ್ತ್ವಗುಣವುಳ್ಳ ಬ್ರಹ್ಮನಲ್ಲಿ ಅಣುತ್ವವನ್ನು ಹೇಳಲಾಗಿದೆ.

ಅದ್ವೈತಿಗಳಿಗೆ ಹೇಳಿದ ದೋಷವು ಇವರಿಗೂ ಸಹ ತಪ್ಪಿದ್ದಲ್ಲ. ಮುಂದಿನ ವಾಕ್ಯಗಳಲ್ಲಿ ಸತ್ಯಕಾಮತ್ವವೇ ಮೊದಲಾದ ನಿರವಕಾಶವಾದ ಬಹಳವಾದ ಅನೇಕ ಬ್ರಹ್ಮನ ಧರ್ಮಗಳು ಕೇಳಿಸುತ್ತಿವೆ. ಆದ್ದರಿಂದ ಸಂಶಯವಾಗಲಿ ಪೂರ್ವಪಕ್ಷವಾಗಲಿ ಹುಟ್ಟಲು ಸಾಧ್ಯವೇ ಇಲ್ಲ. ವಸ್ತುತಸ್ತು ಹಿಂದಿನ ವಾಕ್ಯದಲ್ಲಿ ಸರ್ವಾತ್ಕತ್ವವು ಹೇಳಲ್ಪಟ್ಟರಬಹುದು. ಆದರೆ ಸತ್ಯಕಾಮತ್ವವೇ ಮೊದಲಾದ ಅನೇಕ ಧರ್ಮಗಳ ಬಲದಿಂದ ಈ ಒಂದು ಸರ್ವಾತ್ಕತ್ವವನ್ನು ಗೌಣವಾಗಿ ವ್ಯಾಖ್ಯಾನಿಸಬೇಕಾಗುತ್ತದೆ. ಮತ್ತು ಸ್ವಪ್ರಕರಣದಲ್ಲಿಯೇ ಶಬ್ದವಿಶೇಷವು ಇಲ್ಲದ ಕಾರಣ ಉದಾಹರಣೆಯು ಅನುಚಿತವಾಗಿದೆಯೆಂದು ತಿಳಿಯಬೇಕು.

ಸಾರ

ಛಾಂದೋಗ್ಯದಲ್ಲಿರುವ 'ಮನೋಮಯಃ ಪ್ರಾಣಶರೀರಃ' ಎಂಬ ವಾಕ್ಯವೇ ಈ ಅಧಿಕರಣದ ವಿಷಯವೆನ್ನುತ್ತಾರೆ ರಾಮಾನುಜರು. 'ಸರ್ವಂ ಖಲ್ವಿದಂ' ಎಂಬ ವಾಕ್ಯವು ಆಪಾತತಃ ಬ್ರಹ್ಮಪರವೆಂದು ತಿಳಿದರೂ ಸಹ ಮನೋಮಯ ಶಬ್ದವಿರುವುದರಿಂದ ಜೀವನೇ ಪ್ರತಿಪಾದ್ಯನು. ಆದ್ದರಿಂದ 'ಸರ್ವಂ ಖಲ್ವಿದಂ' ಎಂಬ ವಾಕ್ಯವನ್ನೂ ಸಹ ಜೀವಪರವೆಂದೇ ಹೇಳಬೇಕೆಂದು ಪೂರ್ವಪಕ್ಷ.

ಸಕಲ ವೇದಾಂತ ವಾಕ್ಯಗಳಲ್ಲಿ ಎಲ್ಲೆಲ್ಲಿ ಮನೋಮಯ ಶಬ್ದಗಳಿವೆಯೋ ಅವೆಲ್ಲವೂ ಬ್ರಹ್ಮನನ್ನೇ ಪ್ರತಿಪಾದಿಸುತ್ತವೆ. 'ಮನೋಮಯಃ ಪ್ರಾಣಶರೀರನೇತಾ'' ಎಂಬುದಾಗಿ ಮಾಂಡೂಕ್ಯದಲ್ಲಿ, ತೈತ್ತಿರೀಯದಲ್ಲೂ 'ತಸ್ಮಿನ್ ಅಯಂ ಪುರುಷಃ ಮನೋಮಯಃ' ಎಂಬುದಾಗಿ ತೈತ್ತಿರೀಯಾದಲ್ಲಿಯೂ ಮನೋಮಯಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆ. ಹೀಗೆ ಬ್ರಹ್ಮ

ನನ್ನು ಬೇರೆ ಉಪನಿಷತ್ತುಗಳು ಮನೋಮಯನೆಂದು ಕರೆದಿರುವಾಗ ಛಾಂದೋಗ್ಯದಲ್ಲಿ ಹೇಳಿರುವ ಮನೋಮಯನೂ ಸಹ ಬ್ರಹ್ಮನೇ ಆಗುತ್ತಾನೆ. ಜೀವನಿಗೆ ಸರ್ವಾತ್ಮಕತ್ವವನ್ನಾಗಲೀ ಸಕಲಜಗತ್ಕಾರಣತ್ವವನ್ನಾಗಲೀ ಹೇಳಲು ಸಾಧ್ಯವಿಲ್ಲದ ಕಾರಣ 'ಸರ್ವಂ ಖಲ್ವಿದಂ' ಎಂಬ ವಾಕ್ಯದಿಂದ ಪ್ರತಿಪಾದ್ಯನಾಗಲಾರನೆಂದು ಸಿದ್ಧಾಂತ.

ರಾಮಾನುಜರ ಸೂತ್ರ ವ್ಯಾಖ್ಯಾನ ಹೀಗಿದೆ - ಸರ್ವತ್ರ = 'ಸರ್ವಂ ಖಲ್ವಿದಂ' ಎಂಬ ಶ್ರುತಿಯಿಂದ ಪ್ರತಿಪಾದ್ಯನಾದವನು ಪರಬ್ರಹ್ಮನೇ ಆಗಿದ್ದಾನೆ. ಪ್ರಸಿದ್ಧೋಪದೇಶಾತ್ = ಶ್ರುತ್ಯಂತರದಲ್ಲಿ ಪ್ರಸಿದ್ಧವಾದ ಜಗತ್ಕಾರಣತ್ವವನ್ನು ಹೇಳಿರುವುದರಿಂದ

ರಾಮಾನುಜರ ಮತನಿರಾಕರಣೆ

तात्पर्यचन्द्रिका

तत्र, त्वन्मते अन्तरधिकरणे छान्दोग्योक्तस्यादित्यान्तस्थस्य जीवत्वे ''यश्चासावादित्ये'' इत्यानन्दवल्लयुक्तस्यापि जीवत्वमिति पूर्वपक्षवत्, ''सर्वं खल्विदं'' इत्यत्रोक्तस्य कारणस्य जीवत्वे ''यतो व'' इत्यादावुक्तस्यापि तस्य जीवत्वमिति पूर्वपक्षस्य सम्भवेन कारणताया वाक्यान्तरे ब्रह्मणि प्रसिद्धय-भावात् । [१]

---

(१) सर्वत्र प्रसिद्धयधिकरणम्

प्रथमे पादे अधीतवेदः पुरुषः कर्ममीमांसाश्रवणाधिगतकर्मयाथात्म्यविज्ञानः केवल-कर्मणामल्पास्थिरफलत्वमवगम्य, वेदान्तवाक्येषु चापातप्रतीतानन्त स्थिरफलब्रह्मस्वरूप-तदुपासनसमुपजातपरमपुरुषार्थलक्षणमोक्षा पेक्षोऽवधारितपरिनिष्पन्नवस्तुबोधनशब्दशक्ति-र्वेदान्तवाक्यानां परस्मिन् ब्रह्मणि निश्चितप्रमाणभावस्तदितिकर्त्तव्यतारूपशारीरकमीमांसा-श्रवणमारभेतेत्युक्तं शास्त्रारम्भसिद्धये । अनन्तविचित्रस्थिरत्रसरूपभोक्तृभोग्यभोगोपकरण-भोगस्थान लक्षणनिखिलजगदुदयविभवलयमहानन्दैककारणं परं ब्रह्म 'यतो वा इमानि' इत्यादिवाक्यं बोधयतीति च प्रत्यपादि ॥२॥ जगदेककारणं परं ब्रह्म सकलेतरप्रमाणाविषयतया शास्त्रैकप्रमाणकमित्यभ्यधाम ॥३॥ शास्त्रप्रमाणकत्वं च ब्रह्मणः प्रवृत्तिनिवृत्त्यन्वयविरहेऽपि स्वरूपेणैव परमपुरुषार्थभूते परस्मिन् ब्रह्मणि वेदान्तवाक्यानां समन्वयान्निरूह्यत इत्यब्रूम ॥४॥ निखिलजगदेककारणतया वेदान्तवेद्यं ब्रह्म च ईक्षणाद्यन्वयादानुमानिकप्रधानादर्थान्तरभूतश्चेतनविशेष एवेत्युपापीपदाम ॥५॥ स च स्वाभाविकानवधिकातिशयानन्दविपश्चित्त्वनिखिलचेतनभयाभयहेतुत्वसत्यसङ्कल्पत्वसमस्त-चेतनाचेतनान्तरात्मत्वादिभिर्बद्धमुक्तोभयावस्था ञ्जीवशब्दाभिलपनीयाचार्यान्तरभूत इति च

समार्थितामहि ।।६।। स चाप्राकृताकर्मनिमित्तस्वासाधारणदिव्यरूप इत्युदैरिराम ।।७।। आकाशप्राणाद्यचेतनविशेषाभिधायिभिर्जगत्कारणतया प्रसिद्धवनिर्दिश्यमानस्सकलेतर चेतनाचेतनविलक्षणस्स एवेति समगरिष्महि ।।८।। परतत्त्वासाधारणनिरतिशयदीप्ति-युक्तज्योतिश्शब्दाभिधेयो द्युसम्बन्धितया प्रत्यभिज्ञानात्स एवेत्यातिष्ठामहि ।।९।। परमकारणासाधारणामृतत्वप्राप्तिहेतुभूतः परमपुरुष एव शास्त्रदृष्ट्या इन्द्रादिशब्दैरभिधीयत इत्यब्रूमहि ।।१०।। तदेवमतिपतितसकलेतरप्रमाणसम्भावनाभूमिः सार्वज्ञ्यसत्यसङ्कल्पत्वाद्य-परिमितोदारगुणसागरतया स्वेतरसमस्तवस्तुविलक्षणः परं ब्रह्म पुरुषोत्तमो नारायण एव वेदान्तवेद्य इत्युक्तम् । अतः परं द्वितीयतृतीयचतुर्थेषु पादेषु यद्यपि वेदान्तवेद्यं ब्रह्मैव, तथापि कानिचिद् वेदान्तवाक्यानि प्रधानक्षेत्रज्ञान्तर्भूतवस्तुविशेषस्वरूपप्रतिपादन-पराण्येवेत्याशङ्क्य तन्निरसनमुखेन तत्तद्वाक्योदितकल्याणगुणाकरत्वं ब्रह्मणः प्रतिपाद्यते । तत्रास्पष्टजीवादिलिङ्गकानि वाक्यानि द्वितीये पादे विचार्यन्ते, स्पष्टलिङ्गकानि तृतीये, तत्त त्प्रतिपादनच्छायानुसारीणि चतुर्थे ।।

सर्वत्र प्रसिद्धोपदेशात्

इदमाम्नायते छान्दोग्ये 'अथ खलु क्रतुमयः पुरुषो यथा क्रतुरस्मिंल्लोके पुरुषो भवति, तथेतः प्रेत्य भवति, स क्रतुं कुर्वीत मनोमयः प्राणशरीरो भारूपः' इत्यादि ।। अत्र 'स क्रतुं कुर्वीत' इति प्रतिपादितस्योपासनस्योपास्यः 'मनोमयः प्राणशरीरः' इति निर्दिश्यत इति प्रतीयते । तत्र संशयः – किं मनोमयत्वादिगुणकः क्षेत्रज्ञः? उत परमात्मा? इति । किं युक्तम्? क्षेत्रज्ञ इति । कुतः? मनःप्राणयोः क्षेत्रज्ञोपकरणत्वात्, परमात्मनस्तु 'अप्राणो ह्यमनाः' इति तत्प्रतिषेधाच्च । नच 'सर्वं खल्विदं ब्रह्म' इति पूर्वनिर्दिष्टं ब्रह्मात्रोपास्यतया सम्बन्द्धं शक्यते, 'शान्त उपासीत' इत्युपासनोपकरणशान्तिनिर्वृत्युपायभूतब्रह्मात्मकत्वोप - देशायोपात्तत्वात् । नच 'स क्रतुं कुर्वीत' इत्युपासनस्योपास्यसाकाङ्क्षत्वाद् वाक्यान्तरस्थमपि ब्रह्म सम्बद्ध्यत इति युक्तं वक्तुम् स्वावाक्योपात्तेन मनोमयत्वादिगुणकेन निराकाङ्क्षत्वात् 'मनोमयः प्राणशरीरः' इत्यनन्यार्थतया निर्दिष्टस्य विभक्तिविपरिणाम-मात्रेणोभयाकाङ्क्षानिर्वृत्तिसिद्धेः । एवं निश्चिते जीवत्वे 'एतद्ब्रह्म' इत्युपसंहारस्थब्रह्मपदमपि जीव एव पूजार्थं प्रयुक्तमित्यध्यवसीयत इति ।

एवं प्राप्ते ब्रूमः ।। **सर्वत्र प्रसिद्धोपदेशात् ।।** मनोमयत्वादिगुणकः परमात्मा । कुतः? सर्वत्र वेदान्तेषु परस्मिन्नेव ब्रह्मणि प्रसिद्धस्य मनोमयत्वादेरुपदेशात् । प्रसिद्धं हि मनोमयत्वादि ब्रह्मणः । यथा 'मनोमयः प्राणशरीरनेता' 'स एषोऽन्तर्हृदय आकाशः । तस्मिन्नयं पुरुषो मनोमयः । अमृतो हिरण्मयः' 'हृदा मनीषा मनसाभिक्लृप्तो य एनं विदुरमृतास्ते भवन्ति' । 'न चक्षुषा गृह्यते नापि वाचा' । 'मनसा तु विशुद्धेन' तथा 'प्राणस्य प्राणः'

'अथ खलु प्राण एव प्रज्ञात्मेदं शरीरं परिगृह्योत्थाप्यति' 'सर्वाणि ह वा इमानि भूतानि प्राणमेवाभिसंविशन्ति प्राणमभ्युज्जिहते' इत्यादिषु । मनोमयत्वम् विशुद्धेन मनसा ग्राह्यत्वम् । प्राणशरीरत्वम् प्राणस्याप्याधारत्वं नियन्तृत्वञ्च । एवञ्च सति 'एष म आत्माऽन्तर्हृदय एतद् ब्रह्म' इति ब्रह्मशब्दोऽपि मुख्य एव भवति । 'अप्राणो ह्यमनाः' इति मन आयत्तं ज्ञानं प्राणायत्तां स्थितिं च ब्रह्मणो निषेधति ।।

अथवा 'सर्वं खल्विदं ब्रह्म तज्जलानिति शान्त उपासीत' इत्यत्रैवोपासनं विधीयते, सर्वात्मकं ब्रह्म शान्तः सन्नुपासीतेति । 'स क्रतुं कुर्वीत' इति तस्यैव गुणोपादानार्थोऽनुवादः । उपादेयाश्च गुणाः मनोमयत्वादयः, अतः सर्वात्मकं ब्रह्म मनोमयत्वादिगुणकमुपासीतेति वाक्यार्थः । तत्र सन्देहः, किमिह ब्रह्मशब्देन प्रत्यगात्मा निर्दिश्यते, उत परमात्मा? इति । किं युक्तम्? प्रत्यगात्मेति । कुतः? तस्यैव सर्वपदसामानाधिकरण्यनिर्देशोपपत्तेः । सर्वशब्दनिर्दिष्टं हि ब्रह्मादिस्तम्बपर्यन्तं कृत्स्नं जगत् । ब्रह्मादिभावश्च प्रत्यगात्मनोऽनाद्यविद्यामूलकर्मविशेषोपाधिको विद्यत एव, परस्य तु ब्रह्मणः सर्वज्ञस्य सर्वशक्तेरपहतपाप्मनो निरस्तसमस्ताविद्यादिदोषगन्धस्य समस्तहेयाकारसर्वभावो नोपपद्यते । प्रत्यगात्मन्यपि कचित् कचिद् ब्रह्मशब्दः प्रयुज्यते, अत एव परमात्मा परं ब्रह्मेति परमेश्वरस्य कचित् सविशेषणो निर्देशः । प्रत्यगात्मनश्च निर्मुक्तोपाधेर्बृहत्त्वं च विद्यते । 'स चानन्त्याय कल्पते' इति श्रुतेः । 'अविदुषस्तस्यैव कर्मनिमित्तत्वाज्जगज्जन्मस्थितिलयानां तज्जलान्' इति हेतुनिर्देशोऽप्युपपद्यते । तदयमर्थः – अयं जीवात्मा स्वतः अपरिच्छिन्नस्वरूपत्वेन ब्रह्मभूतस्सन्ननाद्यविद्यया देवतिर्यङ्मनुष्यस्थावरात्मनाऽवतिष्ठत इति ।।

अत्र प्रतिविधीयते – **सर्वत्र प्रसिद्धोपदेशात्** ।। सर्वत्र 'सर्वं खल्विदम्' इति निर्दिष्टे सर्वस्मिन् जगति ब्रह्मशब्देन तदात्मतया अभिधीयमानं परं ब्रह्मैव न प्रत्यगात्मा । कुतः? प्रसिद्धोपदेशात् – 'तज्जलान्' इति हेतुतः 'सर्वं खल्विदं ब्रह्म' इति प्रसिद्धवदुपदेशात् । ब्रह्मणो जातत्वाद् ब्रह्मणि लीनत्वाद्ब्रह्माधीनजीवनत्वाच्च हेतोर्ब्रह्मात्मकं सर्वं खल्विदं जगदित्युक्ते यस्माज्जगज्जन्मस्थितिलयाः वेदान्तेषु प्रसिद्धाः तदेवात्र ब्रह्मेति प्रतीयते । तच्च परमेव ब्रह्म । तथाहि 'यतो वा इमानि भूतानि जायन्ते । येन जातानि जीवन्ति । यत्प्रयन्त्यभिसंविशन्ति । तद् विजिज्ञासस्व । तद् ब्रह्म' इत्युपक्रम्य 'आनन्दो ब्रह्मेति व्यजानात् । आनन्दाद्धयेव खल्विमानि भूतानि जायन्ते' इत्यादिना पूर्वानुवाकप्रतिपादितानवधिकातिशयानन्दयोगिनो विपश्चितः परस्माद् ब्रह्मण एव जगदुत्पत्तिस्थितिलया निर्दिश्यन्ते । तथा 'स कारणं करणाधिपाधिपो न चास्य कश्चिज्जनिता न चाधिपः' इति करणाधिपस्य जीवस्याधिपः परं ब्रह्मैव कारणं

व्यपदिश्यते । एवं सर्वत्र परस्यैव ब्रह्मणः कारणत्वं प्रसिद्धम् । अतः परब्रह्मणो जातत्वात् तस्मिन् प्रलीनत्वात् तेन प्राणनात् तदात्मकतया तादात्म्यमुपपन्नम् । अतस्सर्वप्रकारं सर्वशरीरं सर्वात्मभूतं परं ब्रह्म शान्तो भूत्वा उपासीतेति श्रुतिरेव परस्य ब्रह्मणः सर्वात्मकत्वमुपपाद्य तस्योपासनमुपदिशति । परं ब्रह्म हि कारणावस्थं कार्यावस्थं सूक्ष्मस्थूलचिदचिद्वस्तुशरीरतया सर्वदा सर्वात्मभूतम् । एवम्भूततादात्म्यस्य प्रतिपादने परस्य ब्रह्मणस्सकलहेयप्रत्यनीककल्याणगुणाकरत्वं न विरुद्ध्यते, प्रकारभूतशरीरगतानां दोषाणां प्रकारिण्यात्मन्यप्रसक्तात्, प्रत्युत निरतिशयैश्वर्यापादनेन गुणायैव भवतीति पूर्वमेवोक्तम् । यदुक्तं जीवस्य सर्वतादात्म्यमुपपद्यत इति, तदसत् । जीवानां प्रतिशरीरं भिन्नानामन्योन्यतादात्म्यासम्भवात् । मुक्तस्याप्यनवच्छिन्नस्वरूपस्यापि जगत्तादात्म्यं जगज्जन्मस्थितिप्रलयकारणत्वनिमित्तं न सम्भवतीति 'जगद्व्यापारवर्जम्' इत्यत्र वक्ष्यते । जीवकर्मनिमित्तत्वाज्जगज्जन्मस्थितिलयानां स एव कारणमित्यपि न साधीयः, तत्कर्मनिमित्तत्वेऽपीश्वरस्यैव जगत्कारणत्वात् । अतः परमात्मैवात्र ब्रह्मशब्दाभिधेयः । इममेव सूत्रार्थमभियुक्ता बहुमन्वते । यथाह वृत्तिकारः 'सर्वं खल्विति सर्वात्मा ब्रह्मेशः' इति ।।

'सर्वकर्मा सर्वकामस्सर्वगन्धः सर्वरसः सर्वमिदमभ्यात्तोऽवाक्यनादरः' इति । मनोमयः परिशुद्धेन मनसैकेन ग्राह्यः । विवेकविमोकादिसाधनसप्तकानुगृहीतपरमात्मोपासननिर्मलीकृतेन हि मनसा गृह्यते । अनेन हेयप्रत्यनीककल्याणैकतानतया सकलेतरविलक्षण-स्वरूपतोच्यते । मलिनमनोभिर्मलिनानामेव ग्राह्यत्वात् । प्राणशरीरः जगति सर्वेषां प्राणानां धारकः । प्राणो यस्य शरीरम् आधेयं विधेयं शेषभूतश्च स प्राणशरीरः । आधेय त्वविधेयत्वशेषत्वानि शरीरशब्दप्रवृत्तिनिमित्तानीत्युपपादयिष्यते । भारूपः भास्वररूपः । अप्राकृतस्वासाधारणनिरतिशयकल्याणदिव्यरूपत्वेन निरतिशयदीप्तियुक्त इत्यर्थः । सत्यसङ्कल्पः अप्रतिहतसङ्कल्पः । आकाशात्मा आकाशवत् सूक्ष्मस्वच्छस्वरूपः, सकलेतरकारणभूतस्याकाशस्याप्यात्मभूत इति वा आकाशात्मा । स्वयं च प्रकाशते अन्यानपि प्रकाशयतीति वा आकाशात्मा । सर्वकर्मा क्रियत इति कर्म, सर्वं जगद् यस्य कर्म असौ सर्वकर्मा, सर्वा वा क्रिया यस्यासौ सर्वकर्मा । सर्वकामः काम्यन्त इति कामाः, भोग्यभोगोपकरणादयः, ते परिशुद्धाः सर्वविधास्तस्य सन्तीत्यर्थः । सर्वगन्धस्सर्वरसः 'अशब्दमस्पर्शम्' इत्यादिना प्राकृतगन्धरसादिनिषेधादप्राकृताः स्वासाधारणा निरवद्याः निरतिशयाः कल्याणाः स्वभोग्यभूताः सर्वविधाः गन्धरसास्तस्य सन्तीत्यर्थः । सर्वमिदमभ्यात्तः – उक्तं रसपर्यन्तं सर्वमिदं कल्याणगुणजातं स्वीकृतवान् । 'अभ्यात्तः' इति 'भुक्ता ब्राह्मणाः' इतिवत्कर्तरि क्तः प्रतिपत्तव्यः । अवाकीवाकः उक्तिः, सोऽस्य

नास्तीति अवाकी । कुत इत्याह – अनादर इति ॥ अवाप्तसमस्तकामत्वेनादर्तव्याभावादादररहितः । अत एव अवाकी – अजल्पाकः, परिपूर्णैश्वर्यत्वाद् ब्रह्मादिस्तम्बपर्यन्तं निखिलं जगत् तृणीकृत्य जोषमासीन इत्यर्थः । त एते विवक्षिता गुणाः परमात्मन्येवोपपद्यन्ते ।।२।।

॥ अनुपपत्तेस्तु न शारीरः ॥ ३ ॥

तमिमं गुणसागरं पर्यालोचयतां खद्योतकल्पस्य शरीरसम्बन्धनिबन्धनापरिमितदुःखसम्बन्धयोग्यस्य बद्धमुक्तावस्थस्य जीवस्य प्रस्तुतगुणलेशसम्बन्धगन्धोऽपि नोपपद्यत इति नास्मिन् प्रकरणे शारीरपरिग्रहशङ्का जायत इत्यर्थः ।। ३ ।।

॥ कर्मकर्तृव्यपदेशाच्च ॥ ४ ॥

'एतमितः प्रेत्याभिसम्भवितास्मि' इति प्राप्यतया परं ब्रह्म व्यपदिश्यते, प्राप्तृता च जीवः, अतः प्राप्ता जीव उपासकः, प्राप्यं परं ब्रह्मोपास्यमिति प्राप्तुरन्यदेवेदमिति विज्ञायते ।। ४ ।।

॥ शब्दविशेषात् ॥ ५ ॥

'एष म आत्माऽन्तर्हृदये' इति शारीरः षष्ठ्या निर्दिष्टः, उपास्यस्तु प्रथमया । एवं समानप्रकरणे वाजिनाञ्च श्रुतौ शब्दविशेषः श्रूयते जीवपरयोः । यथा 'व्रीहिर्वा यवो वा श्यामाको वा श्यामाकतण्डुलो वा एवमयमन्तरात्मन् पुरुषो हिरण्मयो यथा ज्योतिरधूमम्' इति । अत्र 'अन्तरात्मन्' इति सप्तम्यन्तेन शारीरो निर्दिश्यते; 'पुरुषो हिरण्मयः' इति प्रथमयोपास्यः, अतः पर एवोपास्यः ।। इतश्च शारीरादन्यः ।। ५ ।।

॥ स्मृतेश्च ॥६ ॥

'सर्वस्य चाहं हृदि सन्निविष्टो मत्तः स्मृतिज्ञानमपोहनं च' 'यो मामेवसम्मूढो जानाति पुरुषोत्तमम्' 'ईश्वरस्सर्वभूतानां हृद्देशेऽर्जुन तिष्ठति । भ्रामयन् सर्वभूतानि यन्त्रारूढानि मायया ।। तमेव शरणं गच्छ' इति च शारीरमुपासकं परमात्मानं चोपास्यं स्मृतिर्दर्शयति ।। ६ ।।

॥ अर्भकौकस्त्वात्तद्व्यपदेशाच्च नेति चेन्न निचाय्यत्वादेवं व्योमवच्च ॥ ७ ॥

अल्पायतनत्वमर्भकौकस्त्वम्; तद्व्यपदेशः – अल्पत्वव्यपदेशः । 'एष म आत्माऽन्तर्हृदये' इत्यणीयसि हृदयायतने स्थितत्वात् 'अणीयान् व्रीहेर्वा यवाद्वा' इत्यादिनाऽणीयस्त्वस्य स्वरूपेण व्यपदेशाच्च नायं परमात्मा, अपितु जीव एव; 'सर्वगतं सुसूक्ष्मं तदव्ययं यद्भूतयोनिं परिपश्यन्ति धीराः' इत्यादिभिः परमात्मनोऽपरिच्छिन्नत्वावगमात्, जीवस्य चाराग्रमात्रत्वव्यवपदेशादिति चेत् । नैतदेवम्, परमात्मैव ह्यणीयानित्येवं निचाय्यत्वेन व्यपदिश्यते; एवं निचाय्यत्वेन एवं द्रष्टव्यत्वेन, एवमुपास्यत्वेनेति यावत् । न

किञ्च – ''आनन्दाद्धेयेव खलु'' इत्यत्र हिशब्दखलुशब्दयोः ''यतो वा इमानि'' ''आत्मावा इदम्'' इत्यादौ वैशब्दादेः श्रवणेन तत्रापि श्रुत्यन्तरप्रसिद्ध्यपेक्षा स्यात् । अपिच ''अन्नाद्धेयेव खल्विमानि भूतानि जायन्ते'' ''प्राणाद्धेयेव खल्विमानि भूतानि'' इत्यत्रेव खलुशब्दादेः श्रवणेऽप्यब्रह्मपरता किं न स्यात् ।

ಅನುವಾದ - ನಿಮ್ಮ ಮತದಲ್ಲಿ ಅಂತರಧಿಕರಣವನ್ನು ವ್ಯಾಖ್ಯಾನಿಸುವಾಗ ಛಾಂದೋಗ್ಯದಲ್ಲಿ

पुनरणीयस्त्वमेवास्य स्वरूपमिति; व्योमवच्चायं व्यपदिश्यते; स्वाभाविकं महत्त्वं चात्रैव व्यपदिश्यते, 'ज्यायान् पृथिव्या ज्यायानन्तरिक्षाज्ज्यायान् दिवो ज्यायानेभ्यो लोकेभ्यः' इति । अत उपासनार्थमेवाल्पत्व व्यपदेशः । तथाहि 'सर्वं खल्विदं ब्रह्म तज्जलानिति शान्त उपासीत' इति सर्वोत्पत्तिप्रलयकारणत्वेन सर्वस्यात्मतयाऽनुप्रवेशकृतजीवयितृत्वेन च सर्वात्मकं ब्रह्मोपासीतेत्युपासनं विधाय 'अथ खलु क्रतुमयः पुरुषो यथा क्रतुरस्मिंल्लोके पुरुषो भवति तथेतः प्रेत्य भवति' इति यथोपासनं प्राप्य सिद्धिमभिधाय 'स क्रतुं कुर्वीत' इति गुणविधानार्थमुपासनमनूद्य 'मनोमयः प्राणशरीरो भारूपस्सत्यसङ्कल्प आकाशात्मा सर्वकर्मा सर्वकामस्सर्वगन्धस्सर्वरसस्सर्वमिदमभ्यात्तोऽवाक्यनादरः' इति जगदैश्वर्यविशिष्टस्य स्वरूपगुणांश्चोपादेयान् प्रतिपाद्य 'एष म आत्माऽन्तर्हृदयेऽणीयान् व्रीहेर्वा यवाद्वा सर्षपाद्वा श्यामाकाद्वा श्यामाकतण्डुलाद्वा' इत्युपासकस्य हृदयेऽणीयस्त्वेन तदात्मतयोपास्यस्य परमपुरुषस्योपासनार्थमवस्थानमुक्त्वा 'एष म आत्माऽन्तर्हृदये ज्यायान् पृथिव्या ज्यायानन्तरिक्षाज्ज्यायान् दिवो ज्यायानेभ्यो लोकेभ्यः सर्वकर्मा सर्वकाम स्सर्वगन्धस्सर्वरसस्सर्वमिदमभ्यात्तोऽवाक्यनादरः' इत्यन्तर्हृदयेऽवस्थितस्योपास्यमानस्य प्राप्याकारं निर्दिश्य 'एष म आत्माऽन्तर्हृदय एतद् ब्रह्म' इत्येवम्भूतं परं ब्रह्म परमकारुण्येनास्मदुज्जिजीवयिषयाऽस्मद्धृदये सन्निहितमितीदमनुसन्धानं विधाय 'एतमितः प्रेत्याभिसम्भविताऽस्मि' इति यथोपासनं प्राप्तिनिश्चयानुसन्धानं च विधाय 'इति यस्य स्याद्धा न विचिकित्साऽस्ति' इत्येवंविधप्राप्यप्राप्तिनिश्चयोपेतस्योपासकस्य प्राप्तौ न संशयोऽस्तीत्युपसंहृतम् । अत उपासनार्थमर्भकौकस्त्वमणीयस्त्वञ्च ॥ ७ ॥

॥ सम्भोगप्राप्तिरिति चेन्न वैशेष्यात् ॥ ८ ॥

जीवस्येव परस्यापि ब्रह्मणः शरीरान्तर्वर्तित्वमभ्युगतञ्चेत् तद्वदेव शरीरसम्बन्धप्रयुक्तसुखदुःखोपभोगप्राप्तिरिति चेत् । तन्न । हेतुवैशेष्यात् । नहि शरीरान्तर्वर्तित्वमेव सुखदुःखोपभोगहेतुः, अपि तु पुण्यपापरूपकर्मपरवशत्वम्; तत्तु अपहतपाप्मनः परमात्मनो न सम्भवति । तथाच श्रुतिः 'तयोरन्यः पिप्पलं स्वाद्वत्त्यनश्नन्नन्यो अभिचाकशीति' इति ॥ ८ ॥

इति सर्वत्रप्रसिद्ध्यधिकरणम्

ಪರಿಪೂರ್ಣಚಂದ್ರಿಕಾ

ಪ್ರತಿಪಾದ್ಯನಾದ ಆದಿತ್ಯಾಂಸ್ಥನು ಜೀವನಾದರೆ 'ಯಶ್ಚಾಸಾವಾದಿತ್ಯೇ'' ಎಂಬಲ್ಲಿ ಆನಂದವಲ್ಲಿಯಲ್ಲಿ ಪ್ರತಿಪಾದ್ಯನಾದ ಆದಿತ್ಯಾಂತಸ್ಥನೂ ಸಹ ಜೀವನೇ ಆಗುತ್ತಾನೆಂದು ಪೂರ್ವಪಕ್ಷ ಮಾಡಿದ್ದೀರಿ. ಆದರಂತೆ ಪ್ರಕೃತದಲ್ಲಿಯೂ ''ಸರ್ವಂ ಖಲ್ವಿದಂ'' ಎಂಬಲ್ಲಿ ಹೇಳಲ್ಪಟ್ಟ ಜಗತ್‌ಕಾರಣತ್ವವು ಜೀವನಲ್ಲಿ ಬರುತ್ತದೆಂದು ಪೂರ್ವಪಕ್ಷ ಮಾಡುವುದಾದರೆ 'ಯತೋ ವಾ' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ಜಗತ್ಕಾರಣತ್ವವೂ ಸಹ ಜೀವನಿಗೆ ಬರುತ್ತದೆಂದು ಪೂರ್ವಪಕ್ಷವು ಪರ್ಯವಸಾನವಾಗುತ್ತದೆ. ಹೀಗಿರುವಾಗ ಕಾರಣತ್ವ ಪ್ರತಿಪಾದಕವಾದ ಎಲ್ಲಾ ವಾಕ್ಯಗಳೂ ಸಹ ಜೀವನಲ್ಲೇ ಪ್ರಸಿದ್ಧವಾಗುತ್ತವೆ. ವಾಕ್ಯಾಂತರದಿಂದ ಬ್ರಹ್ಮನಲ್ಲಿಜಗತ್‌ಕಾರಣತ್ವವು ಪ್ರಸಿದ್ಧಾವಾಗಿದೆಯೆಂದು ನಿಮಗೆ ಕಾರಣವನ್ನು ಹೇಳಲಾಗದು.

'ಆನಂದಾದ್ಧ್ಯೇವ ಖಲು' ಎಂಬಲ್ಲಿ 'ಹಿ' ಮತ್ತು 'ಖಲು' ಶಬ್ದಗಳಿವೆ. 'ಯತೋ ವಾ ಇಮಾನಿ' ಎಂಬಲ್ಲಿ ಮತ್ತು ''ಆತ್ಮಾವಾ ಇದಂ'' ಎಂಬಲ್ಲಿಯೂ ಪ್ರಸಿದ್ಧಾರ್ಥಕವಾದ ''ವೈ'' ಎಂಬ ಶಬ್ದವಿದೆ. ಈ ಸ್ಥಳಗಳಲ್ಲಿಯೂ ಸಹ ಶ್ರುತ್ಯಂತರಪ್ರಸಿದ್ಧಿಯನ್ನು ಅಪೇಕ್ಷಿಸಬೇಕಾದೀತು ಅಂದರೆ 'ಸರ್ವಂ ಖಲ್ವಿದಂ' ಎಂಬ ಶ್ರುತಿಯು ಜಗತ್ಕಾರಣ ಪ್ರತಿಪಾದಕವಾಗಿದೆಯೆನ್ನಲು 'ಖಲು' ಶಬ್ದದ ಆಧಾರದಿಂದ 'ಯತೋ ವಾ' ಮೊದಲಾದ ವಾಕ್ಯಗಳನ್ನು ಅಪೇಕ್ಷಿಸುತ್ತೀರಿ. ಆದರೆ ಆ ವಾಕ್ಯಗಳಲ್ಲಿಯೂ ಸಹ 'ಖಲು' ಮೊದಲಾದ ಶಬ್ದಗಳಿರುವುದರಿಂದ ಮತ್ತೊಂದು ಶ್ರುತಿಯನ್ನು ಅಪೇಕ್ಷಿಸಬೇಕಾಗುತ್ತದೆ. ಹೀಗೆ ಹೇಳುತ್ತಲೇ ಇರಬೇಕಾದ್ದರಿಂದ ನಿಮ್ಮ ಯುಕ್ತಿಯು ಅರ್ಥಹೀನವಾಗಿದೆ. ಮತ್ತು ಜಗತ್ಕಾರಣತ್ವ ಪ್ರತಿಪಾದಕವಾದ ''ಆನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ'' ''ಪ್ರಾಣಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ'' ಇತ್ಯಾದಿ ಸ್ಥಳಗಳಲ್ಲಿ 'ಖಲು' ಶಬ್ದವಿದೆ. ಆದರೂ ಸಹ ನೀವು ಬ್ರಹ್ಮಪರತ್ವವನ್ನು ಒಪ್ಪಿರುವುದಿಲ್ಲ. ಆದರಂತೆ 'ಸರ್ವಂ ಖಲ್ವಿದಂ' ಎಂಬ ಸ್ಥಳದಲ್ಲಿ 'ಖಲು' ಶಬ್ದವಿದ್ದರೂ ಬ್ರಹ್ಮಪರತ್ವವನ್ನು ಒಪ್ಪುವುದು ಬೇಡ.

प्रकाशः –

यदुक्तं – ''यतो वै'' इत्यादिवाक्यान्तरे ब्रह्मणि प्रसिद्धस्यैवेहाऽऽम्नानादिति, तत्र पूर्वपक्षे सर्वकारणवाक्ये ब्रह्मकारणत्वाक्षेपसम्भवेन न क्वापि ब्रह्मकारणत्व-प्रसिद्धिः । तथा च न सिद्धान्तोदय इति सदृशान्तमाह – तन्नेत्यादिना ।

''य एषोऽन्तरादित्ये हिरण्मयः पुरुषः'' इत्युक्तस्येत्यर्थः । 'तस्य' कारणस्य । तथा च सौत्रहेतोरसिद्धिरिति भावः ।

ವಿವರಣೆ - ರಾಮಾನುಜರ ಅಧಿಕರಣ ವಿಮರ್ಶೆಯು ಅಯುಕ್ತವಾಗಿದೆ. ''ಯತೋ ವಾ'' ಇತ್ಯಾದಿ ವಾಕ್ಯಾಂತರದಲ್ಲಿ ಬ್ರಹ್ಮನಲ್ಲಿ ಪ್ರಸಿದ್ಧವಾದ ಜಗತ್ಕಾರಣತ್ವವನ್ನೇ ಇಲ್ಲಿ ಹೇಳಲಾಗಿದೆಯೆಂದು ರಾಮಾನುಜರ

ಅಭಿಪ್ರಾಯ. ಆದರೆ ಪೂರ್ವಪಕ್ಷ ಮಾಡುವಾಗ ಕಾರಣತ್ವಪ್ರತಿಪಾದಕವಾದ ಸಕಲ ವಾಕ್ಯಗಳೂ ಸಹ ಬ್ರಹ್ಮಕಾರಣತ್ವವನ್ನು ಹೇಳಲಾರವೆಂದು ಆಕ್ಷೇಪಿಸಲು ಬರುತ್ತದೆ. ಆದ್ದರಿಂದ ಯಾವುದೇ ವಾಕ್ಯದಲ್ಲಿಯೂ ಬ್ರಹ್ಮಕಾರಣತ್ವದ ಪ್ರಸಿದ್ಧಿಯನ್ನು ನಿಮ್ಮಿಂದ ಉಪಪಾದಿಸಲಾಗದು. ಒಂದು ವೇಳೆ ಯಾವುದಾದರೂ ಒಂದು ವಾಕ್ಯದಲ್ಲಿ ಬ್ರಹ್ಮಕಾರಣತ್ವವೂ ಪ್ರಸಿದ್ಧವಾಗಿದ್ದರೆ ಅದರ ಬಲದಿಂದ ಸಿದ್ಧಾಂತವು ಉದಯವಾಗುತ್ತಿತ್ತು. ಈ ವಿಷಯದಲ್ಲಿ ದೃಷ್ಟಾಂತವೂ ಸಹ ಇದೆ ಎಂಬುದಾಗಿ 'ತನ್ನ' ಇತ್ಯಾದಿ ವಾಕ್ಯದಿಂದ ರಾಮಾನುಜರ ನಿಲುವನ್ನು ನಿರಾಕರಿಸುತ್ತಿದ್ದಾರೆ.

'ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷಃ' ಎಂಬುದಾಗಿ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ವಾಕ್ಯದಲ್ಲಿ ಎಂದರ್ಥ. 'ತಸ್ಯ' ಎಂಬ ಪದಕ್ಕೆ ಕಾರಣಕ್ಕೆ ಎಂದರ್ಥ. 'ತನ್ನತೇ' ಎಂಬ ವಾಕ್ಯದಿಂದ ಸೂತ್ರದಲ್ಲಿರುವ ಹೇತುವಿಗೆ ಅಸಿದ್ಧಿಯನ್ನು ಹೇಳಿದ್ದಾರೆಂದು ತಿಳಿಯಬೇಕು.

ಪ್ರಕಾಶಃ – ನನು ''यतो वै'' इत्युपक्रमस्य ''आनन्दाद्ध्येव खल्विमानि'' इति श्रवणात्, आनन्दस्य ब्रह्मवल्लक्षामनेकन्यायैर्ब्रह्मत्वेन निर्णीतानन्दमयस्थानपतित्वेन ब्रह्मत्वात् जीवत्वं न वक्तुं शक्यमिति चेत्, तर्ह्यत्रापि पूर्वपक्षानुदस्योक्तत्वात् ।

यद्यत्र प्रसिद्धिद्योतकखलुशब्दाक्तत्प्रसिद्धयर्थं श्रुत्यन्तरानुसरणं, तर्हि तत्रापि तथा श्रवणान्न क्वापि व्यवस्था स्यादिति । दोषान्तरमाह – किञ्चेति । 'प्रसिद्धोपदेशात्' इति हेतोर्व्यभिचारं चाह – अपिचेति । अत्रादेर्ब्रह्मत्वस्य त्वयाऽनङ्गीकारादिति भावः ।

ಆಕ್ಷೇಪ - 'ಯತೋ ವಾ' ಇತ್ಯಾದಿಯಾಗಿ ಉಪಕ್ರಮದಲ್ಲಿ ಜಗತ್ಕಾರಣತ್ವವು ಬ್ರಹ್ಮನಲ್ಲಿ ಕೇಳಿಸುತ್ತಿದೆ. ಅನಂತರ ''ಆನಂದಾದ್ಧ್ಯೇವ'' ಎಂಬ ಮಾತು ಹೊರಟಿದೆ. ಇಲ್ಲಿರುವ ಆನಂದವೆಂಬ ಶಬ್ದವು ಬ್ರಹ್ಮನನ್ನೇ ಪ್ರತಿಪಾದಿಸುತ್ತದೆ ಏಕೆಂದರೆ ಬ್ರಹ್ಮವಲ್ಲಿಯಲ್ಲಿರುವ ಅನೇಕ ನ್ಯಾಯಗಳಿಂದ ಆನಂದಮಯಶಬ್ದವು ಬ್ರಹ್ಮಪ್ರತಿಪಾದಕವೆಂದು ನಿರ್ಣಯವಾಗಿದೆ. ಅಂತಹ ಆನಂದಮಯ ಶಬ್ದದ ಸ್ಥಾನದಲ್ಲಿಯೇ ಆನಂದಶಬ್ದವು ಪ್ರಯುಕ್ತವಾದ್ದರಿಂದ ಇದೂ ಸಹ ಬ್ರಹ್ಮನನ್ನೇ ಪ್ರತಿಪಾದಿಸುತ್ತದೆ ಹೊರತು ಜೀವನನ್ನು ಪ್ರತಿಪಾದಿಸುವುದಿಲ್ಲ. ಹೀಗೆ ಹಿಂದಿನ ಮುಂದಿನ ಪ್ರಕರಣವನ್ನು ನೋಡಿ 'ಆನಂದಾದ್ಧ್ಯೇವ' ವಾಕ್ಯವು ಬ್ರಹ್ಮನ ಜಗತ್ಕಾರಣತ್ವವನ್ನು ಹೇಳುತ್ತಿದೆಯೆಂದು ನಿರ್ಣಯಿಸಬಹುದು. ಈ ವಾಕ್ಯದ ಬಲದಿಂದ 'ಸರ್ವಂ ಖಲ್ವಿದಂ' ಎಂಬ ವಾಕ್ಯವು ಬ್ರಹ್ಮನಿಗೆ ಜಗತ್ಕಾರಣತ್ವವನ್ನು ಪ್ರತಿಪಾದಿಸುತ್ತದೆಂದು ನಿರ್ಣಯ ಮಾಡಬಹುದಲ್ಲವೇ?

ಸಮಾಧಾನ - ಹಾಗಾದರೆ 'ಸರ್ವಂ ಖಲ್ವಿದಂ' ಎಂಬ ವಾಕ್ಯದಲ್ಲಿಯೂ ಹಿಂದಿನ ಮುಂದಿನ ಪ್ರಕರಣವನ್ನು ಗಮನಿಸಿದಾಗ ಬ್ರಹ್ಮಪರವೆಂದು ಸುಲಭವಾಗಿ ನಿರ್ಣಯವಾಗುತ್ತದೆ. ಆದ್ದರಿಂದ ಪೂರ್ವಪಕ್ಷವೇ ಹುಟ್ಟದಿರಬೇಕಾದೀತು.

ಒಂದು ವೇಳೆ ಪ್ರಸಿದ್ಧಿದ್ಯೋತಕವಾದ 'ಖಲು' ಶಬ್ದವಿರುವುದರಿಂದ ಮತ್ತೊಂದು ಶ್ರುತಿಯನ್ನು ಅನುಸರಿಸಬೇಕೆಂದು ಹೇಳುವುದಾದರೆ ಆವಾಗ 'ಅನಂದಾದ್ಯೈವ' ಎಂಬ ಶ್ರುತಿಯಲ್ಲಿಯೂ 'ಖಲು' ಶಬ್ದವಿರುವುದರಿಂದ ಅಲ್ಲಿಯೂ ಮತ್ತೊಂದು ಶ್ರುತಿಯನ್ನು ಅನುಸರಿಸಬೇಕಾದೀತು. ಹೀಗೆ ನಿಮ್ಮ ವ್ಯವಸ್ಥೆಯನ್ನು ಯಾವುದೇ ಶ್ರುತಿಯನ್ನು ಇಟ್ಟುಕೊಂಡಾಗಲೂ ಅನುಸರಿಸಲಾಗದೆಂದು ಮತ್ತೊಂದು ದೋಷವನ್ನು 'ಕಿಂಚ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ಸೂತ್ರದಲ್ಲಿರುವ 'ಪ್ರಸಿದ್ಧೋಪದೇಶಾತ್' ಎಂಬ ಹೇತುವಿಗೆ 'ಅಪಿಚ' ಇತ್ಯಾದಿ ವಾಕ್ಯದಿಂದ ವ್ಯಭಿಚಾರವನ್ನು ಹೇಳುತ್ತಿದ್ದಾರೆ. ಏಕೆಂದರೆ ಅನ್ನಾದಿಗಳಿಗೆ ಬ್ರಹ್ಮತ್ವವನ್ನು ರಾಮಾನುಜರೇ ಅಂಗೀಕರಿಸಿರುವುದಿಲ್ಲ.

ಸಾರ

ರಾಮಾನುಜರ ಉಳಿದ ಸೂತ್ರಗಳ ವ್ಯಾಖ್ಯಾನ ಹೀಗಿದೆ -

ವಿವಕ್ಷಿತಗುಣೋಪಪತ್ತೇಶ್ಚ - ಮನೋಮಯನೆನಿಸಿರುವ ಬ್ರಹ್ಮನಲ್ಲಿ ವಿವಕ್ಷಿತವಾದ ಸತ್ಯಕಾಮತ್ವಾದಿ-ಗುಣಗಳು ಉಪಪನ್ನವಾಗುತ್ತವೆ. ಜೀವನಲ್ಲಿ ಆ ಗುಣಗಳು ಇಲ್ಲದ ಕಾರಣ ಉಪಪನ್ನವಾಗುವುದಿಲ್ಲ.

ಅನುಪಪತ್ತೇಸ್ತು ನ ಶಾರೀರಃ - ಆ ಸತ್ಯಕಾಮತ್ವಾದಿಗುಣಗಳು ಜೀವನಲ್ಲಿಲ್ಲದ ಕಾರಣ ಮನೋಮಯನಾಗಿ ವಿವಕ್ಷಿತನಾಗುವುದಿಲ್ಲ.

ಕರ್ಮಕರ್ತೃವ್ಯಪದೇಶಾಚ್ಚ - 'ಏತಂ ಇತಃ ಪ್ರೇತ್ಯ' ಎಂಬಲ್ಲಿ ಮನೋಮಯನನ್ನು ಪ್ರಾಪ್ತನೆಂದು ಜೀವನನ್ನು ಪ್ರಾಪ್ಯವೆಂದು ಹೇಳಲಾಗಿದೆ. ಈ ಕಾರಣದಿಂದಲೂ ಜೀವನು ಮನೋಮಯನಲ್ಲ.

ಶಬ್ದವಿಶೇಷಾತ್ - 'ಏಷ ಮೇ ಆತ್ಮ' ಎಂಬ ಶ್ರುತಿಯಲ್ಲಿ ಷಷ್ಠಿ ವಿಭಕ್ತಿಯಲ್ಲಿ ಮೇ ಎಂಬ ಪದದಿಂದ ಆತ್ಮಾ ಎಂಬ ಪ್ರಥಮಾವಿಭಕ್ತಿಪದದಿಂದ ಮನೋಮಯನನ್ನು ನಿರ್ದೇಶಿಸಲಾಗಿದೆ. ಈ ಕಾರಣದಿಂದಲೂ ಜೀವನು ಮನೋಮಯನಲ್ಲ.

ಸ್ಮೃತೇಶ್ಚ - 'ಸರ್ವತ್ರ ಚ' ಎಂಬ ಗೀತೆಯಲ್ಲಿ ಜೀವನ ಹೃದಯದಲ್ಲಿರುವವನು ಬ್ರಹ್ಮನೇ ಎಂದು ಹೇಳಲಾಗಿದೆ. ಪ್ರಕೃತ ಉಪನಿಷತ್ತಿನಲ್ಲಿಯೂ ಸರ್ವಗತನೆಂದು ಹೇಳಲ್ಪಟ್ಟರುವವನು ಬ್ರಹ್ಮನೇ ಆಗಬೇಕು.

'ಆರ್ಭಕೌಕಸ್ತ್ವಾತ್ತದ್ವ್ಯಪದೇಶಾಚ್ಚ ನೇತಿ ಚೇನ್ನ ನಿಚಾಯ್ಯತ್ವಾದೇವಂ ವ್ಯೋಮವಚ್ಚ' ಅಲ್ಪದೇಶದಲ್ಲಿ ಇರುವಂತಹ ಬ್ರಹ್ಮನು ಸರ್ವಗತನಾಗಲಾರನೆಂದು ಆಕ್ಷೇಪಿಸಬಾರದು. ಕೇವಲ ಉಪಾಸನೆಗಾಗಿ ಅಲ್ಪದೇಶದ ಇರುವಿಕೆಯು ಹೇಳಲಾಗಿದೆ. ಎಲ್ಲೆಡೆ ವ್ಯಾಪಿಸಿರುವ ಆಕಾಶವು ಅಲ್ಪದೇಶದಲ್ಲಿಯೂ ಇರುವಂತೆ.

ಸರ್ವಗತತ್ವಾಧಿಕರಣ (೦-೨-೦)

ಸಂಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್ - ಒಂದೇ ದೇಹದಲ್ಲಿ ಜೀವನೊಡನೆ ನೆಲೆಸಿರುವ ಬ್ರಹ್ಮನಿಗೆ ಸುಖದುಃಖಗಳು ಬರಬೇಕಲ್ಲವೇ? ಎಂದು ಪ್ರಶ್ನಿಸಿದರೆ ಪಾಪದ ಸಂಪರ್ಕವಿಲ್ಲದ ಕಾರಣ ಬ್ರಹ್ಮನಿಗೆ ಸುಖದುಃಖಗಳ ಅನುಭವವು ಬರುವುದಿಲ್ಲವೆಂದು ಉತ್ತರಿಸಲು ಕೊನೆಯ ಸೂತ್ರ ಹೊರಟಿದೆ.

ರಾಮಾನುಜರ ಅಧಿಕರಣಶರೀರವಾಗಲೀ, ಸೂತ್ರಾರ್ಥವಾಗಲಿ ಸಮಂಜಸವಲ್ಲ. ಸೂತ್ರದಲ್ಲಿರುವ 'ಸರ್ವತ್ರ' ಎಂಬ ಪದಕ್ಕೆ ಎಲ್ಲೆಡೆ ಇರುವ ಎಂಬರ್ಥವನ್ನು ಹೇಳಬೇಕು. ಆದರೆ ಅವರು ''ಎಲ್ಲವೂ'' ಎಂಬರ್ಥವನ್ನು ಹೇಳುತ್ತಾರೆ. ಈ ಅರ್ಥದಲ್ಲಿ 'ಸರ್ವಂ' ಎಂಬ ಪದವಿರಬೇಕೇ ಹೊರತು 'ಸರ್ವತ್ರ' ಎಂಬ ಪದವು ತಪ್ಪಾಗುತ್ತದೆ. ಮತ್ತು 'ಪ್ರಸಿದ್ಧತ್ವೇನ ಉಪದೇಶಾತ್' ಎಂದು ಅವರ ಪ್ರಕಾರ ಹೇಳಬೇಕಾಗುತ್ತದೆ. ಇದೂ ಸಹ ಸ್ವಾರಸ್ಯವಲ್ಲ. ಮತ್ತು ಬೇರೆ ವಾಕ್ಯಗಳಲ್ಲಿ ಜಗತ್ಕಾರಣತ್ವವು ಪ್ರಸಿದ್ಧವಾಗಿದೆಯೆಂದು ಪೂರ್ವಪಕ್ಷಿಯು ಒಪ್ಪುವುದೇ ಇಲ್ಲ. ಇವೇ ಮೊದಲಾದ ಕಾರಣಗಳಿಂದ ರಾಮಾನುಜರ ಮತವು ಅಸಾಧುವಾಗಿದೆ. ಅದ್ವೈತ ಮತ ನಿರಾಕರಣೆಯಿಂದಲೇ ಅವರ ಸೂತ್ರಾರ್ಥಗಳನ್ನೂ ಸಹ ನಿರಾಕರಿಸಿದಂತಾಗುತ್ತದೆ.

• • • • •

ರಾಮಾನುಜರ ಸೂತ್ರಾರ್ಥ ನಿರಾಕರಣೆ

तात्पर्यचन्द्रिका

अक्षरार्थोप्ययुक्तः, सर्वात्मकत्वस्य हि साध्यत्वे तत्प्रतिपादनाय श्रुत्यनुगमाय च सूत्रे 'सर्वं' इति निर्देशः स्यात् । नहि 'सर्वत्र' इत्यनेन सर्वात्मकता लभ्यते, किन्तु सर्वगतता । सौत्रप्रसिद्धशब्दस्य भावप्रधानता च कल्प्या ।

यच्चोक्तं ''अर्भकौकस्त्वात्'' इति सूत्रे ''एष म आत्मान्तर्हृदयेऽणीयान् व्रीहेर्वा यवाद्वा सर्षपाद्वा'' इत्युक्तमणीयस्त्वमौपाधिकं, तदुपाधेर्हृदयस्योक्तत्वात्, ''ज्यायान् पृथिव्याः'' इत्यादिनोक्तमहत्त्वं तु स्वाभाविकं तदुपाधेरनुक्तत्वादिति ।

तन्न, ''हृद्यपेक्षया'' इत्यत्र हृदयस्याङ्गुष्ठमात्रप्रमाणतायास्त्वयाऽप्युक्तत्वात्, तस्य सर्षपादणीयस्त्वेऽनुपाधित्वात् ।

किञ्च ''प्रशस्यस्य श्रः'' ज्य च'' वृद्धस्य च'' इत्यत्र ''वृद्धस्य'' इति सूत्रेण वृद्धशब्दस्येव ''ज्य च'' इत्यनेन सूत्रेण प्रशस्यशब्दस्यापि ज्यादेशविधानात्, इह

श्रुतावणीयस्त्वं स्वाभाविकं, ज्यायस्त्वं तु अतिशयेन प्रशस्यत्वमिति किं न स्यात् । एतदप्यभिप्रेत्योक्तं भाष्ये – ''न चाप्रामाणिकं कल्प्यम्'' इति, नतु टीकोक्तरीत्या भेदसत्यत्वमात्रमभिप्रेत्य ।

ಅನುವಾದ - ರಾಮಾನುಜರ ಸೂತ್ರಾರ್ಥವೂ ಸಹ ತಪ್ಪಿದೆ. ಸರ್ವಾತ್ಮಕತ್ವವನ್ನು ಸಾಧ್ಯವೆನ್ನುತ್ತಾರೆ. ಆದರೆ ಸರ್ವಾತ್ಮಕತ್ವವನ್ನು ಪ್ರತಿಪಾದನೆ ಮಾಡುವುದಕ್ಕಾಗಿ 'ಸರ್ವಂ' ಎಂದೇ ಸೂತ್ರದಲ್ಲಿ ನಿರ್ದೇಶಿಸಬೇಕು. ಹಾಗೇ ನಿರ್ದೇಶಿಸುವುದರಿಂದ ಶ್ರುತಿಯ ಅನುಗುಣ್ಯವೂ ಸಹ ಬರುತ್ತದೆ. ಏಕೆಂದರೆ 'ಸರ್ವತ್ರ' ಎಂಬ ಪದದಿಂದ ಸರ್ವಾತ್ಮಕತ್ವ ತಿಳಿಯುವುದಿಲ್ಲ. ಕೇವಲ ಸರ್ವಗತತ್ವ ತಿಳಿಯುತ್ತದೆ. ಮತ್ತು ಸೂತ್ರದಲ್ಲಿರುವ ಪ್ರಸಿದ್ಧಶಬ್ದಕ್ಕೆ ಕಾರಣವಿಲ್ಲದೆ ಭಾವಪ್ರಧಾನವಾಚಿತ್ವವನ್ನು ಒಪ್ಪಬೇಕಾಗುತ್ತದೆ.

ಮತ್ತು ರಾಮಾನುಜರು 'ಅರ್ಭಕೌಕಸ್ತ್ವಾತ್' ಎಂಬ ಸೂತ್ರಕ್ಕೆ ಹೀಗೆ ವ್ಯಾಖ್ಯಾಸಿದ್ದಾರೆ - ''ಏಷ ಮೇ ಆತ್ಮಾಂತರ್ಹೃದಯೇऽಣೀಯಾನ್ ವ್ರೀಹೇರ್ವಾ ಯವಾದ್ವಾ ಸರ್ಷಪಾದ್ವಾ'' ಎಂಬಲ್ಲಿ ಹೇಳಲ್ಪಟ್ಟ ಅಣೀಯಸ್ತ್ವವು ಔಪಾಧಿಕವಾಗಿದೆ. ಏಕೆಂದರೆ ಹೃದಯವೆಂಬ ಉಪಾಧಿಯನ್ನು ಹೇಳಿರುವುದರಿಂದ ಆದರೆ 'ಜ್ಯಾಯಾನ್ ಪೃಥಿವ್ಯಾಃ' ಎಂಬಲ್ಲಿ ಹೇಳಲ್ಪಟ್ಟ ಮಹತ್ವವು ಸ್ವಾಭಾವಿಕವಾಗಿದೆ. ಏಕೆಂದರೆ ಇಲ್ಲಿ ಯಾವುದೇ ವಿಧವಾದ ಉಪಾಧಿಯನ್ನು ಹೇಳಿರುವುದಿಲ್ಲವೆಂದು

ಇದು ತಪ್ಪು. 'ಹೃದ್ಯಪೇಕ್ಷಯಾ' ಎಂಬಲ್ಲಿ ಹೃದಯವು ಅಂಗುಷ್ಠಪ್ರಮಾಣವುಳ್ಳದ್ದಾಗಿದೆಯೆಂದು ನೀವೇ ಒಪ್ಪಿರುತ್ತೀರಿ? ಹೀಗಿರುವಾಗ ಪರಮಾತ್ಮನು ಸರ್ಷಪಕ್ಕಿಂತ ಅಣುವಾಗಿದ್ದಾನೆನ್ನಲು ಇಂತಹ ಹೃದಯವು ಉಪಾಧಿಯಾಗುವುದಿಲ್ಲ.

ಮತ್ತೊಂದು ದೋಷ - 'ಪ್ರಶಸ್ಯಸ್ಯ ಶ್ರಃ' ಎಂಬ ಸೂತ್ರದಿಂದ 'ಪ್ರಶಸ್ಯಸ್ಯ' ಶಬ್ದಕ್ಕೆ 'ಶ' ಆದೇಶ ಬಂದರೆ 'ಶ್ರೇಷ್ಠಃ ಶ್ರೇಯಾನ್' ಇತ್ಯಾದಿ ರೂಪಗಳು ಶ್ರೇಷ್ಠವೆಂಬರ್ಥದಲ್ಲಿ ಉಂಟಾಗುತ್ತವೆ. ''ಜ್ಯ ಚ'' ಎಂಬ ಸೂತ್ರದಲ್ಲಿ ಪ್ರಶಸ್ಯ ಶಬ್ದಕ್ಕೆ 'ಜ್ಯ' ಆದೇಶವನ್ನೂ ಸಹ ಹೇಳಿದ್ದಾರೆ. ಆವಾಗ ''ಜ್ಯೇಷ್ಠ'' ಮೊದಲಾದ ರೂಪಗಳು ಉಂಟಾಗುತ್ತವೆ. ''ವೃದ್ಧಸ್ಯ ಚ '' ಎಂಬ ಸೂತ್ರದಿಂದ ವೃದ್ಧ ಶಬ್ದಕ್ಕೂ ಸಹ 'ಜ್ಯ' ಆದೇಶ ಬರುತ್ತದೆ. ಈ ಮೂರು ಸೂತ್ರಗಳಲ್ಲಿ 'ವೃದ್ಧಸ್ಯ' ಎಂಬ ಸೂತ್ರದಿಂದ ವೃದ್ಧ ಶಬ್ದಕ್ಕೆ 'ಜ್ಯ' ಎಂಬ ಆದೇಶವು ಬಂದಂತೆ 'ಜ್ಯ ಚ' ಎನ್ನುವ ಸೂತ್ರದಿಂದ ಪ್ರಶಸ್ಯಸ್ಯ ಶಬ್ದಕ್ಕೂ ಸಹ 'ಜ್ಯ' ಎಂಬ ಆದೇಶವನ್ನು ವಿಧಿಸಲಾಗಿದೆ. ಆದ್ದರಿಂದ ಈ ಶ್ರುತಿಯಲ್ಲಿ ಅಣೀಯತ್ವವೇ ಸ್ವಾಭಾವಿಕವಾಗಿವೆ. ಜ್ಯಾಯಸ್ತ್ವವು ಅತಿಶಯವಾಗಿ ಪ್ರಶಸ್ತವಾಗಿದೆ ಎಂಬರ್ಥದಲ್ಲಿದೆ. ಹೀಗೂ ಹೇಳಿ ಅಣೀಯತ್ವ ಹಾಗೂ ಜ್ಯಾಯಸ್ತ್ವಗಳನ್ನು ಪರಮಾತ್ಮನಲ್ಲಿ ಕೂಡಿಸಲು ಬರುವಾಗ ಮಹತ್ವವನ್ನು ಸ್ವಾಭಾವಿಕವೆಂದು ಅಣೀಯತ್ವವನ್ನು ಔಪಾಧಿಕವೆಂದು ಕಲ್ಪಿಸಬೇಕಾಗಿಲ್ಲ.

ಶ್ರೀಮದಾಚಾರ್ಯರು ರಾಮಾನುಜರ ಈ ಕಲ್ಪನೆಯನ್ನೂ ಸಹ ನಿರಾಕರಿಸುವುದಕ್ಕಾಗಿ ಭಾಷ್ಯದಲ್ಲಿ 'ನಚ ಅಪ್ರಾಮಾಣಿಕಂ ಕಲ್ಪ್ಯಮ್' ಅಪ್ರಮಾಣಕವಾದದ್ದನ್ನು ಕಲ್ಪಿಸಬಾರದು ಎಂದು ಹೇಳಿದ್ದಾರೆ. ಟೀಕೆಯಲ್ಲಿ ಹೇಳಿದಂತೆ ಭೇದಸತ್ಯತ್ವವನ್ನಷ್ಟೇ ಈ ವಾಕ್ಯಕ್ಕೆ ವಿವಕ್ಷಿಸಬಾರದು.

ಪ್ರಕಾಶಃ –

ಸೂತ್ರಾರ್ಥಂ ನಿರಾಹ – ಅಕ್ಷರಾರ್ಥೋಪೀತಿ । ಬ್ರಹ್ಮಶಬ್ದಾಭಿಧೇಯಸ್ಯ ಪರಬ್ರಹ್ಮತ್ವಂ ಸರ್ವಾತ್ಮತ್ವಂ ಚ ದ್ವಯಮಪಿ ಯದಿ ಸಾಧ್ಯತ್ವೇನಾಭಿಮತಂ, ತರ್ಹಿ ಸರ್ವಂ ಬ್ರಹ್ಮೇತಿ ವಾಚ್ಯಂ, ನತು ಸರ್ವತ್ರ ಬ್ರಹ್ಮೇತಿ, ತಥೋಕ್ತೌ ಪರಾಭಿಮತಾಸಿದ್ಧಿಂ ವ್ಯನಕ್ತಿ – ನಹೀತಿ । ಏತೇನಾಸ್ಮದರ್ಥೇ ಸೂತ್ರಾನುಗುಣ್ಯಂ ಸೂಚಿತಮ್ । ಉಪಲಕ್ಷಣಮೇತತ್ – 'ಸರ್ವತ್ರ' ಇತ್ಯನೇನ ಸರ್ವಸ್ಮಿನ್ ಜಗತೀತ್ಯುಕ್ತಾವಪಿ ಬ್ರಹ್ಮಶಬ್ದೇನೋಚ್ಯಮಾನಂ ಬ್ರಹ್ಮೈವೇತ್ಯಂಶಸ್ಯ ಬೋಧಕಪದಾಭಾವೇನಾಧ್ಯಾಹಾರ್ಯತ್ವಾತ್ ।

ವಿವರಣೆ - ರಾಮಾನುಜರ ಸೂತ್ರಾರ್ಥವನ್ನು 'ಅಕ್ಷರಾರ್ಥೋಪಿ' ಎಂಬ ಇತ್ಯಾದಿ ವಾಕ್ಯಗಳಿಂದ ನಿರಾಕರಿಸುತ್ತಿದ್ದಾರೆ. ಒಂದು ವೇಳೆ ಪ್ರಥಮಸೂತ್ರದಲ್ಲಿ ಬ್ರಹ್ಮಶಬ್ದದಿಂದ ಪರಬ್ರಹ್ಮತ್ವ ಹಾಗೂ ಸರ್ವಾತ್ಮಕತ್ವ ಎರಡೂ ಸಹ ಪ್ರತಿಪಾದ್ಯವೆಂದು ಹೇಳಿ ಎರಡನ್ನೂ ಸಾಧ್ಯವೆಂದು ಹೇಳುವುದಾದರೆ ಆವಾಗ 'ಸರ್ವಂ ಬ್ರಹ್ಮ' ಎಂದು ಹೇಳಬೇಕು ಹೊರತು 'ಸರ್ವತ್ರ ಬ್ರಹ್ಮ' ಎಂದು ಹೇಳಬಾರದು. ಒಂದು ವೇಳೆ ಹಾಗೆ 'ಸರ್ವತ್ರ ಬ್ರಹ್ಮ' ಎಂದು ಹೇಳಿದರೆ ರಾಮಾನುಜರಿಗೆ ಅಭಿಪ್ರೇತವಾದ ಅರ್ಥವು ಅಸಿದ್ಧವಾಗುತ್ತದೆಂದು 'ನಹಿ' ಇತ್ಯಾದಿ ವಾಕ್ಯದಿಂದ ಉಪಪಾದಿಸಿದ್ದಾರೆ. ಈ ವಾಕ್ಯದಿಂದ ನಮಗೆ ಅಭಿಮತವಾದ ಅರ್ಥವು ಸೂತ್ರಕ್ಕೆ ಅನುಗುಣವಾಗಿದೆಯೆಂದು ಸೂಚಿಸಿದಂತಾಯಿತು. 'ಸರ್ವತ್ರ' ಎಂಬ ಪದದಿಂದ 'ಸರ್ವಸ್ಮಿನ್ ಜಗತಿ' ಎಂದು ಹೇಳಿದರೂ ಸಹ ಬ್ರಹ್ಮಶಬ್ದದಿಂದ ಹೇಳಲ್ಪಟ್ಟ 'ಬ್ರಹ್ಮೈವ' ಎಂಬ ಅಂಶಕ್ಕೆ ಬೋಧಕವಾದ ಪದವು ಇರುವುದಿಲ್ಲ. ಆದನ್ನು ನೀವು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ.

ಪ್ರಕಾಶಃ – ಯದತ್ರೋಕ್ತಂ ಶ್ರುತಪ್ರಕಾಶೇ – 'ನಾಶಬ್ದಂ' ಇತಿ ವಾ, 'ನೇತರಃ' ಇತಿ ವಾ, 'ಅನ್ಯ' ಇತಿ ವಾ ಪೂರ್ವಪಾದಾದನುವರ್ತತೇ ವಾ, ''ನ ಶಾರೀರಃ'' ಇತಿ ವಕ್ಷ್ಯಮಾಣಮಪಕೃಷ್ಯತೇ ವಾ । ತಸ್ಯ ಪರ್ಯವಸಾನದ್ಬ್ರಹ್ಮೈವೇತಿ ಲಭ್ಯತೇ, ನಾಧ್ಯಾಹಾರ ಇತಿ,

ತನ್ನ, ಬ್ರಹ್ಮಶಬ್ದೇತಾಭಿಧೀಯಮಾನಮಿತ್ಯಸ್ಯೈತಾವತಾऽಧ್ಯಾಹಾರಾಪರಿಹಾರಾತ್

ಅಸ್ಮಾದ್ಧೀತ್ಯಾऽऽಧ್ಯಾಯಪರಿಸಮಾಪ್ತಿ ಪ್ರತ್ಯಧಿಕರಣಮನುವರ್ತಮಾನೇನ 'ತತ್ತು' ಇತಿ ಪದೇನೈವ ಸಾಕ್ಷಾತ್ಸಾಧ್ಯಬೋಧಸಂಭವೇ, ಅತ್ಯನ್ತವ್ಯವಹಿತಸ್ಯಾನುವರ್ತನೇನಾಪಕರ್ಷಣೇನ ವಾ ಪರ್ಯವಸಾನದ್ಧಾರಾ ಸಾಧ್ಯಬೋಧೋಕ್ತೇರಯುಕ್ತತ್ವಾತ್ ।

ಅತ ಏವ ದ್ವಿತೀಯೇ ''ವ್ಯವಾಯಾನ್ನಾನುಷಜ್ಯತೇ'' ಇತ್ಯತ್ರ ''ಸಂ ಯಜ್ಞಪತಿರಾಶಿಷಾ'' ಇತಿ ವಾಕ್ಯೇ ಕ್ರಿಯಾಧ್ಯಾಹಾರ ಇತ್ಯುಕ್ತಮಿತ್ಯಪಿ ಧ್ಯೇಯಮ್ ।

ಶ್ರುತಪ್ರಕಾಶದಲ್ಲಿ ಹೀಗೆ ಹೇಳಿದ್ದಾರೆ - ಹಿಂದಿನ ಪಾದದಿಂದ 'ನಾಶಬ್ದಂ' ಎಂಬ ಪದವನ್ನು ಅಥವಾ 'ನೇತರಃ' ಎಂಬ ಪದವನ್ನು, ಅಥವಾ 'ಅನ್ಯಃ' ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳಬಹುದು. ಅಥವಾ ಮುಂದಿರುವ 'ನ ಶಾರೀರಃ' ಎಂಬುದನ್ನು ಅಪಕರ್ಷ ಮಾಡಬಹುದು. ಇದರಿಂದ ಸರ್ವಾತ್ಮಕನೆಂದು ಹೇಳಲ್ಪಡುವವನು ಬ್ರಹ್ಮನೇ ಆಗಿದ್ದಾನೆಂದು ಪರ್ಯವಸಾನವಾಗುತ್ತದೆ. ಅನುವೃತ್ತಿ ಅಥವಾ ಅಪಕರ್ಷವನ್ನು ಮಾಡಿಕೊಂಡಿದ್ದರಿಂದ ಅಧ್ಯಾಹಾರ ದೋಷವು ಬರುವುದಿಲ್ಲ ಎಂದು.

ಶ್ರುತಪ್ರಕಾಶದಲ್ಲಿ ಹೀಗೆ ಹೇಳಿದ್ದರೂ ಅಧ್ಯಾಹಾರ ದೋಷವು ತಪ್ಪಿದ್ದಲ್ಲ. 'ಬ್ರಹ್ಮಶಬ್ದೇನ ಅಭಿಧೀಯಮಾನಂ' ಎಂಬ ಪಕ್ಷವನ್ನು ಇದರಿಂದ ಅಧ್ಯಾಹಾರ ಮಾಡಿದಂತಾಗುವುದಿಲ್ಲ. ಆದ್ದರಿಂದ 'ಬ್ರಹ್ಮೈವ' ಎಂಬ ಸಾಧ್ಯವು ಅನುವೃತ್ತಿಯಿಂದಲೋ ಅಪಕರ್ಷದಿಂದಲೋ ಲಾಭವಾದರೂ ಸಹ ಪಕ್ಷವನ್ನು ಅಧ್ಯಾಹಾರ ಮಾಡಿಕೊಳ್ಳಲೇಬೇಕು.

ನಮ್ಮ ಪ್ರಕಾರ ವ್ಯಾಖ್ಯಾನ ಮಾಡಿದಾಗ ಅಧ್ಯಾಯದ ಕೊನೆಯ ತನಕ ಪ್ರತಿಯೊಂದು ಅಧಿಕರಣಗಳಲ್ಲಿಯೂ 'ತತ್ತು' ಎಂಬ ಪದವು ಅನುವೃತ್ತಿಯಾಗುತ್ತದೆ. ಆಗ ನೇರವಾಗಿ 'ಬ್ರಹ್ಮೈವ' ಎಂಬ ಸಾಧ್ಯವು ತಿಳಿಯುತ್ತದೆ. ಹೀಗೆ ಸುಲಭವಾಗಿ ಸಾಧ್ಯವನ್ನು ತಿಳಿಯಲು ಬರುವಾಗ ಅತ್ಯಂತ ವ್ಯವಹಿತವಾದ ಅನುವೃತ್ತಿಯಿಂದ ಅಥವಾ ಅಪಕರ್ಷದಿಂದ ಪರ್ಯವಸಾನದ ಮೂಲಕವಾಗಿ ಸಾಧ್ಯವನ್ನು ತಿಳಿಯುವುದು ಅಯುಕ್ತವಾಗಿದೆ.

ಆದ್ದರಿಂದಲೇ ಪೂರ್ವಮೀಮಾಂಸೆಯ ದ್ವಿತೀಯಾಧ್ಯಾಯದಲ್ಲಿ ಹೀಗೆ ಹೇಳಿದ್ದಾರೆ - 'ವ್ಯವಾಯಾನ್ನಾನುಷಜ್ಯತೇ' ಎಂಬ ಸೂತ್ರದಲ್ಲಿ 'ಸಂ ಯಜ್ಞಪತಿರಾಶಿಷಾ' ಎಂಬ ವಾಕ್ಯದಲ್ಲಿ 'ಗಚ್ಛತಾಂ' ಎಂಬ ಕ್ರಿಯೆಯನ್ನು ಅಧ್ಯಾಹಾರವನ್ನು ಮಾಡಿಕೊಳ್ಳುವುದೇ ಸುಲಭವೆಂದು ಸಮರ್ಥಿಸಿದ್ದಾರೆ. ಆದ್ದರಿಂದ ನೀವೂ ಸಹ ಅನುವೃತ್ತಿ ಮಾಡಿಕೊಳ್ಳುವುದಕ್ಕಿಂತ ಅಧ್ಯಾಹಾರ ಮಾಡಿಕೊಳ್ಳುವುದೇ ಲೇಸು.

प्रकाशः – इतराणि सूत्राणि प्रागुक्तदिशा निरसनीयानीति भावः । तथा हि – यदुक्तं – 'विवक्षितगुणोपपत्तेः' 'विवक्षितानां' वक्ष्यमाणानां उपसंहारस्थानामिति यावत् । मनोमयत्वादीनां ''अवाक्यनादरः'' इत्यन्तानां गुणानां परमात्मन्येवोपपत्तेः परमात्मैवात्रोच्यते,

विवक्षितगुणानामनुपपत्तेः न शारीरोऽत्रोच्यते,

ಗ್ರಂಥಕಾರರು ಪ್ರಥಮಸೂತ್ರವನ್ನು ಮಾತ್ರ ನಿರಾಕರಿಸಿದ್ದಾರೆ. ಇದರಂತೆ ಉಳಿದ ಸೂತ್ರಗಳ ನಿರಾಕರಣೆಯನ್ನು ತಿಳಿಯಬೇಕು. ಅದು ಹೀಗೆ - 'ವಿವಕ್ಷಿತಗುಣೋಪಪತ್ತೇಃ' ಎಂಬ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸಿದ್ದಾರೆ. ವಿವಕ್ಷಿತವಾದ ಗುಣಗಳೆಂದರೆ ಮುಂದೆ ಹೇಳುವ ಅಂದರೆ ಉಪಸಂಹಾರದಲ್ಲಿರುವ ಗುಣಗಳೆಂದರ್ಥ. ಮನೋಮಯತ್ವದಿಂದ ಪ್ರಾರಂಭಿಸಿ 'ಅವಾಕ್ಯನಾದರಃ' ಎಂಬಲ್ಲಿಯ ತನಕ ಹೇಳಲ್ಪಟ್ಟ

ಗುಣಗಳೆಲ್ಲವು ಪರಮಾತ್ಮನಲ್ಲಿಯೇ ಉಪಪನ್ನವಾಗುತ್ತವೆ. ಆದ್ದರಿಂದ ಪರಮಾತ್ಮನೇ ವಿಷಯವಾಕ್ಯದಿಂದ ಪ್ರತಿಪಾದ್ಯನಾಗಿದ್ದಾನೆ. 'ಅನುಪಪತ್ತೇಸ್ತು ನ ಶಾರೀರಃ' ಎಂಬ ಸೂತ್ರದಲ್ಲಿ ವಿವಕ್ಷಿತವಾದ ಗುಣಗಳು ಅನುಪಪನ್ನವಾದ್ದರಿಂದ ಜೀವನು ವಿಷಯವಾಕ್ಯದಿಂದ ಪ್ರತಿಪಾದ್ಯನಲ್ಲ ಎಂದು ಹೇಳಿದ್ದಾರೆ.

ಪ್ರಕಾಶಃ – ''ಇತಃ ಪ್ರೇತ್ಯಾಭಿಸಮ್ಭವಿತಾಸ್ಮಿ'' ಇತಿ ಪ್ರಾಪ್ಯಪ್ರಾಪ್ತೃತಯಾ ಬ್ರಹ್ಮಜೀವಯೋಃ ಕರ್ಮಕರ್ತೃಭಾವೇನ ವ್ಯಪದೇಶಾಚ್ಚ,

''ಏವ ಮ ಆತ್ಮಾನ್ತರ್ಹೃದಯೇ'' ಇತಿ ಷಷ್ಠ್ಯನ್ತಪ್ರಥಮಾನ್ತರೂಪಾತ್, ವಾಜಸನೇಯಕಾನಾಂ ಶ್ರುತೌ ಚ ''ಏವಮಯಮನ್ತರಾತ್ಮನ್ಪುರುಷೋ ಹಿರಣ್ಮಯಃ'' ಇತಿ ಸಪ್ತಮ್ಯನ್ತಪ್ರಥಮಾನ್ತರೂಪಾಜ್ಜೀವಬ್ರಹ್ಮಣೋಃ ಶಬ್ದವಿಶೇಷಾಚ್ಚ, ''ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ'' ಇತ್ಯಾದಿಸ್ಮೃತೇಶ್ಚ ನ ಶಾರೀರ ಇತಿ,

''ಇತಃ ಪ್ರೇತ್ಯಾಭಿಸಂಭವಿತಾಸ್ಮಿ'' ಎಂದು ಬ್ರಹ್ಮನನ್ನು ಪ್ರಾಪ್ಯತ್ವೇನ ಜೀವನನ್ನು ಪ್ರಾಪ್ತೃತ್ವೇನ ಹೇಳಲಾಗಿದೆ. ಹೀಗೆ ಬ್ರಹ್ಮಹಾಗೂ ಜೀವರನ್ನು ಕರ್ಮಕರ್ತೃಭಾವದಿಂದ ವ್ಯಪದೇಶಿಸಿದ್ದರಿಂದ ಜೀವನು ಪ್ರತಿಪಾದ್ಯನಾಗಲಾರ.

'ಶಬ್ದವಿಶೇಷಾತ್' ಎಂಬ ಸೂತ್ರಕ್ಕೆ ಹೀಗರ್ಥ - 'ಏಷ ಮೇ ಆತ್ಮಾಽಂತರ್ಹೃದಯೇ' ಎಂದು ಛಾಂದೋಗ್ಯದಲ್ಲಿ ಷಷ್ಠ್ಯಂತ ಹಾಗೂ ಪ್ರಥಮಾಂತವಾದ ಶಬ್ದವಿಶೇಷವಿದೆ. ಮತ್ತು ಬೃಹದಾರಣ್ಯಕದಲ್ಲಿ ''ಏವಮಯಮಂತರಾತ್ಮಪುರುಷೋ ಹಿರಣ್ಮಯಃ' ಎಂಬುದಾಗಿ ಸಪ್ತಮ್ಯಂತ ಹಾಗೂ ಪ್ರಥಮಾಂತವಾದ ಜೀವಬ್ರಹ್ಮ ಪ್ರತಿಪಾದಕವಾದ ಶಬ್ದವಿಶೇಷವಿದೆ.

'ಸ್ಮೃತೇಶ್ಚ' ಎಂಬ ಸೂತ್ರಕ್ಕೆ 'ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ' ಎಂಬ ಶ್ರುತಿಪ್ರಮಾಣದಿಂದ ಜೀವನು ಪ್ರತಿಪಾದ್ಯನಲ್ಲವೆಂದು ವ್ಯಾಖ್ಯಾನಿಸಿದ್ದಾರೆ.

ಪ್ರಕಾಶಃ – ತನ್ನ, ಬ್ರಹ್ಮಣಿ ವಿವಕ್ಷಿತಗುಣಾನಾಮುಪಪತ್ತ್ಯುಕ್ತ್ಯಾऽರ್ಥಾಜ್ಜೀವೇ ತದನುಪಪತ್ತೇರುಕ್ತತ್ವಾತ್ ತೇನ ತೃತೀಯಸ್ಯ ಪೌನರುಕ್ತ್ಯಮ್ । ಚತುರ್ಥಷಷ್ಠಗೃಹೀತಯೋಃ ''ಏತಮಿತಃ ಪ್ರೇತ್ಯ'' ಇತಿ ''ಸರ್ವಸ್ಯ ಚಾಹಂ'' ಇತಿ ಶ್ರುತಿಸ್ಮೃತ್ಯೋರಪಿ ''ಏಷ ಮ ಆತ್ಮಾऽನ್ತರ್ಹೃದಯೇ'' ಇತಿ ವಿರುದ್ಧವಿಭಕ್ತಿಕಶಬ್ದಗ್ರಾಹಕೇಣ ಪಞ್ಚಮೇನೈವ ಗ್ರಹಣಸಮ್ಭವಾತ್ತೇನ ತಯೋಃ ಪೌನರುಕ್ತ್ಯಮ್ ।

'ಶಬ್ದವಿಶೇಷಾಚ್ಚ' ಇತಿ ಚಶಬ್ದಾಧ್ಯಾಹಾರಶ್ಚೇತ್ಯಾದಿ ಧ್ಯೇಯಮ್ ।

ರಾಮಾನುಜರ ಈ ಸೂತ್ರ ವ್ಯಾಖ್ಯಾನಕ್ಕೆ ಅದ್ವೈತಿಗಳಿಗೆ ಬಂದ ದೋಷವೇ ಬರುತ್ತವೆ. ಬ್ರಹ್ಮನಲ್ಲಿ ವಿವಕ್ಷಿತವಾದ ಗುಣಗಳು ಉಪಪನ್ನವಾಗುತ್ತವೆಂದು ಹೇಳಿದ್ದರಿಂದಲೇ ಅರ್ಥಾತ್ ಜೀವನಲ್ಲಿ ಆ ಗುಣಗಳು ಅನುಪಪನ್ನವಾಗುತ್ತವೆಂದು ತಿಳಿಯುತ್ತವೆ. ಆದ್ದರಿಂದ ಎರಡನೆಯ ಸೂತ್ರದಿಂದ ಮೂರನೆಯ ಸೂತ್ರಕ್ಕೆ ಪುನರುಕ್ತಿದೋಷ ಬರುತ್ತದೆ. ಮತ್ತು ನಾಲ್ಕು ಹಾಗೂ ಆರನೆಯ ಸೂತ್ರಗಳ ಪ್ರಮೇಯವು ಐದನೆಯ ಸೂತ್ರದಿಂದಲೇ ಸಿದ್ಧವಾಗುತ್ತದೆ. 'ಶಬ್ದವಿಶೇಷಾತ್' ಎಂಬ ಸೂತ್ರದಿಂದಲೇ 'ಏತಮಿತಃ ಪ್ರೇತ್ಯ' ಎಂಬ ಪ್ರಾಪ್ಯಪ್ರಾಪ್ತೃತ್ವವನ್ನು ಹೇಳುವ ಶಬ್ದವಿಶೇಷವನ್ನು ಸ್ವೀಕರಿಸಬಹುದು. ಆದರಂತೆ 'ಸರ್ವಸ್ಯ ಚಾಹಂ'

ಎಂಬಲ್ಲಿಯೂ ವಿರುದ್ಧ ವಿಭಕ್ತಿಗಳಿರುವುದರಿಂದ ಆರನೆಯ ಸೂತ್ರದ ಸ್ಮೃತಿವಾಕ್ಯವನ್ನು 'ಶಬ್ದವಿಶೇಷ' ಸೂತ್ರದಿಂದಲೇ ಸ್ವೀಕರಿಸಬಹುದು. ''ಏಷ ಮೇ ಆತ್ಮಾಂತರ್ಹೃದಯೇ' ಎಂಬಲ್ಲಿ ಯಾವರೀತಿಯಾಗಿ ವಿರುದ್ಧ ವಿಭಕ್ತಿವುಳ್ಳ ಶಬ್ದಗಳಿವೆಯೋ ನಾಲ್ಕು ಹಾಗೂ ಆರನೆಯ ಸೂತ್ರದಲ್ಲಿ ಉಲ್ಲೇಖಿಸುವ ಅಂತಹ ವಿರುದ್ಧ ವಿಭಕ್ತಿವುಳ್ಳ ಶ್ರುತಿ ಸ್ಮೃತಿ ವಾಕ್ಯಗಳೇ ಇರುವುದರಿಂದ ಐದನೆಯ ಸೂತ್ರದಿಂದ ಪುನರುಕ್ತಿ ದೋಷ ಬರುತ್ತದೆ.

ಮತ್ತು 'ಶಬ್ದವಿಶೇಷ' ಎಂಬುದು ಸ್ವತಂತ್ರಹೇತುವಾದ್ದರಿಂದ ಸೂತ್ರದಲ್ಲಿ 'ಚ' ಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ.

ಪ್ರಕಾಶಃ – ಸಪ್ತಮೇ ದೂಷ್ಯಭಾಗಮನೂದ್ಯ ನಿರಾಹ – **ಯಚ್ಚೇತಿ** । ಸೂತ್ರಾರ್ಥಸ್ತು – ಪೂರ್ವಮತ ಇವ ಧ್ಯೇಯಃ । **ತ್ವಯೇತಿ** । ''ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್'' ಇತ್ಯತ್ರ ''ಉಪಾಸಕ-ಹೃದಯಸ್ಯಾಙ್ಗುಷ್ಠಪ್ರಮಾಣತ್ವಾತ್'' ಇತಿ ತ್ವಚ್ಛಾಖೋಕ್ತೇರಿತಿ ಭಾವಃ । 'ತಸ್ಯ' ಹೃದಯಸ್ಯ ಆತ್ಮನಿ ಸರ್ಷಪಾದಣೀಯಸ್ತ್ವಸಮ್ಪಾದನೇऽನುಪಾಧಿತ್ವಾತ್, ತತ್ಪರಿಮಿತಸ್ಯೈವ ತತ್ರೋಪಾಧಿತ್ವೇನ ವಾಚ್ಯತ್ವಾದಿತ್ಯರ್ಥಃ ।

ಏಳನೆಯ ಸೂತ್ರದಲ್ಲಿ ದೂಷಣೆ ಮಾಡಬೇಕಾದ ಭಾಗವನ್ನಷ್ಟೇ ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ 'ಯಚ್ಚ' ಇತ್ಯಾದಿ ವಾಕ್ಯದಿಂದ. ಅರ್ಭಕೌಕಸ್ತ್ವವೆಂಬ ಏಳನೇ ಸೂತ್ರಾರ್ಥವನ್ನೂ ಅದ್ವೈತಿಗಳಂತೆ ಹೇಳುತ್ತಾರೆ. ಆದ್ದರಿಂದ ಆ ಸಂದರ್ಭದಲ್ಲಿ ಮಾಡಿದ ವ್ಯಾಖ್ಯಾನವನ್ನೇ ಇಲ್ಲಿಯು ತಿಳಿಯಬೇಕು. 'ತ್ವಯ' ಇತ್ಯಾದಿ ವಾಕ್ಯದಿಂದ ಗ್ರಂಥಕಾರರು ಹೃದಯವು ಅಂಗುಷ್ಠಪರಿಮಾಣದಲ್ಲಿದೆ ಎಂದು ನೀವೇ ಹೇಳಿದ್ದೀರಿ 'ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್' ಎಂಬ ಸೂತ್ರಕ್ಕೆ ವ್ಯಾಖ್ಯಾನಿಸುವಾಗ ''ಉಪಾಸಕ-ಹೃದಯಸ್ಯಾಂಗುಷ್ಠಪ್ರಮಾಣತ್ವಾತ್' ಎಂದು ರಾಮಾನುಜರು ಭಾಷ್ಯದಲ್ಲಿ ಹೇಳಿದ್ದಾರೆ. ಅದನ್ನು ಇಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು. 'ತಸ್ಯ' ಎಂಬ ಪದಕ್ಕೆ ಹೃದಯಕ್ಕೆ ಎಂದರ್ಥ. ಆತ್ಮನು ಸರ್ಷಪಕ್ಕಿಂತ ಅಣುವಾಗಿದ್ದಾನೆನ್ನಲು ಹೃದಯಪರಿಮಾಣವು ಉಪಾಧಿಯಾಗುವುದಿಲ್ಲ. ಸರ್ಷಪದಷ್ಟೇ ಪರಿಮಾಣವನ್ನು ಹೇಳಿದರೆ ಮಾತ್ರ ಅದು ಉಪಾಧಿಯಾಗುತ್ತದೆ.

ಪ್ರಕಾಶಃ – ಅತ ಏವ ಶ್ರುತಪ್ರಕಾಶೇ – 'ಅತ್ರ ಹೃದಯಮಲ್ಪತ್ವೋಪಾಧಿಭೂತಂ ಶ್ರುತಂ, ನತು ಜ್ಯಾಯಸ್ತ್ವೋಪಾಧಿಃ ಶ್ರುತಃ, ಪೃಥಿವ್ಯಾದಯಃ ತದುಪಾಧಯ ಇತಿ ನ ಶಙ್ಕನೀಯಂ, ತತोऽಪಿ ಜ್ಯಾಯಸ್ತ್ವಶ್ರವಣಾತ್ । ನಹಿ ತತोऽಧಿಕಪರಿಮಾಣತ್ವಂ ತದುಪಾಧಿಕಂ ಭವಿತುಮರ್ಹತಿ' ಇತ್ಯಧಿಕಪರಿಮಾಣಸ್ಯ ನ್ಯೂನಪರಿಮಾಣೋಪಾಧಿತ್ವಂ ನಿರಾಕೃತಮ್ । ತದ್ವದೇವೇಹಾಪಿ ನ್ಯೂನಪರಿಮಾಣಸ್ಯ ತತोऽಧಿಕಪರಿಮಾಣಹೃದಯೋಪಾಧಿಕತ್ವಮಯುಕ್ತಮಿತಿ ।

ಆದ್ದರಿಂದಲೇ ಶ್ರುತಪ್ರಕಾಶದಲ್ಲಿ ಅಣೀಯತ್ವಕ್ಕೂ ಮಹತ್ವಕ್ಕೂ ವಿರೋಧವನ್ನು ಪರಿಹರಿಸುವಾಗ ಹೀಗೆ ಹೇಳಿದ್ದಾರೆ. 'ಆತ್ರ ಹೃದಯಮಲ್ಪತ್ವೋಪಾಧಿಭೂತಂ ಶ್ರುತಂ, ನತು ಜ್ಯಾಯಸ್ತ್ವೋಪಾಧಿಃ ಶ್ರುತಃ, ಪೃಥಿವ್ಯಾದಯಃ ತದುಪಾದಯ ಇತಿ ನ ಶಂಕನೀಯಂ, ತತೋಽಪಿ ಜ್ಯಾಯಸ್ತ್ವಶ್ರವಣಾತ್ । ನಹಿ ತತೋಽಧಿಕಪರಿಮಾಣತ್ವಂ ತದುಪಾಧಿಕಂ ಭವಿತುಮರ್ಹತಿ' ಹೃದಯವು ಅಲ್ಪವಾದ ಪರಿಮಾಣವುಳ್ಳ ಉಪಾಧಿಯಾಗಿದೆಯೆಂದು ಶ್ರುತವಾಗಿದೆ. ಹೊರತು ಜ್ಯಾಯಸ್ತ್ವವು ಉಪಾಧಿಯೆಂದು ಕೇಳಿಸುತ್ತಿಲ್ಲ. ಪೃಥಿವಿಯಾಗಲೀ ದ್ಯುಲೋಕವಾಗಲಿ ಉಪಾಧಿಯಾಗುವುದಿಲ್ಲ. ಏಕೆಂದರೆ ಪಂಚಮಿವಿಭಕ್ತಿಯನ್ನು ಹೇಳಿರುವುದರಿಂದ ಪೃಥಿವಿಗಿಂತ ಬ್ರಹ್ಮನಲ್ಲಿ ಜ್ಯಾಯಸ್ತ್ವವು ಕೇಳಿಸುತ್ತಿದೆ. ಇದರಿಂದ ಬ್ರಹ್ಮನಲ್ಲಿರುವ ಅಧಿಕ ಪರಿಮಾಣಕ್ಕೆ ಪೃಥಿವೀ ಹಾಗೂ ದ್ಯುಲೋಕಗಳಲ್ಲಿರುವ ಮೂಲ ಪರಿಮಾಣವು ಉಪಾಧಿಯಾಗುವುದಿಲ್ಲವೆಂದು ತಿಳಿಯುತ್ತದೆ. ಹೀಗೆ ಶ್ರುತಪ್ರಕಾಶದಲ್ಲಿ ಅಧಿಕ ಪರಿಮಾಣಕ್ಕೆ ನ್ಯೂನಪರಿಮಾಣವು ಉಪಾಧಿಯಾಗುವುದಿಲ್ಲವೆಂದು ನಿರಾಕರಿಸಿದ್ದಾರೆ. ಅದರಂತೆ ಪ್ರಕೃತ ಸರ್ವಪಪರಿಮಾಣಕ್ಕೆ ಸರ್ವಪಕ್ಕಿಂತಲೂ ಅಧಿಕಪರಿಮಾಣವುಳ್ಳ ಹೃದಯವು ಉಪಾಧಿಯಾಗಲು ಸಾಧ್ಯವಿಲ್ಲ.

ಪ್ರಕಾಶಃ – ನನ್ವಣೀಯಸ್ತ್ವಜ್ಯಾಯಸ್ತ್ವಯೋರ್ವಿರೋಧಾದೇಕಸ್ಯಾವಶ್ಯಪರಿತ್ಯಾಗೇ ಕಥಞ್ಚಿದೌಪಾಧಿಕತ್ವೇನ ಸಮಾಧೇಯಮಿತ್ಯತೋऽವಿರೋಧಪ್ರಕಾರಮಾಹ – ಕಿಞ್ಚೇತಿ । ಅತ್ರ ಜ್ಯಾಯಸ್ತ್ವಂ ನಾಮ ನಾತಿಶಯಿತಮಹತ್ತ್ವಂ, ಕಿನ್ತು ಪ್ರಶಸ್ತತಮತ್ವಮುಚ್ಯತೇ, ಜ್ಯಾಯಶ್ಶಬ್ದಸ್ಯಾರ್ಥದ್ವಯೇऽಪಿ ವ್ಯುತ್ಪನ್ನತ್ವಾತ್,

ಆಕ್ಷೇಪ - ಅಣೀಯಸ್ತ್ವಕ್ಕೂ ಜ್ಯಾಯಸ್ತ್ವಕ್ಕೂ ಪರಸ್ಪರ ವಿರೋಧವಿದೆ. ಆದ್ದರಿಂದ ಎರಡಲ್ಲಿ ಒಂದನ್ನು ಅವಶ್ಯವಾಗಿ ಬಿಡಬೇಕಾಗುತ್ತದೆ. ಆದ್ದರಿಂದ ಅಣೀಯಸ್ತ್ವವನ್ನೇ ಔಪಾಧಿಕವೆಂದು ಸಮಾಧಾನ ಹೇಳುವುದು ಸೂಕ್ತವಲ್ಲವೇ?

ಸಮಾಧಾನ - ವಿರೋಧವನ್ನು ಬೇರೆ ಪ್ರಕಾರದಲ್ಲಿಯೂ ಪರಿಹರಿಸಬಹುದೆಂಬ 'ಕಿಂಚ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಇಲ್ಲಿ 'ಜ್ಯಾಯಸ್ತ್ವ' ಎಂಬ ಪದಕ್ಕೆ ಅತಿಶಯವಾದ ಮಹತ್ತ್ವವುಳ್ಳದ್ದು ಎಂದರ್ಥವಲ್ಲ. ಹೊರತು ಅತ್ಯಂತ ಪ್ರಶಸ್ತವಾದದ್ದು ಎಂದರ್ಥ. ಏಕೆಂದರೆ 'ಜ್ಯಾಯ' ಶಬ್ದವು ಎರಡು ಅರ್ಥದಲ್ಲಿ ನಿಷ್ಪನ್ನವಾಗಿದೆ.

ಪ್ರಕಾಶಃ – ಪ್ರಶಸ್ಯಶಬ್ದಸ್ಯಾತಿಶಾಯನೇ 'ಈಯಸುನ್'ಪ್ರತ್ಯಯೇ ಕೃತೇ ''ಪ್ರಶಸ್ಯಸ್ಯ ಶ್ರಃ'' ಇತಿ ಸೂತ್ರಾತ್ ಪ್ರಶಸ್ಯಸ್ಯೇತ್ಯನುವರ್ತ್ಯ ''ಜ್ಯ ಚ'' ಇತಿ ಸೂತ್ರೇಣ ಜ್ಯಾದೇಶೋ ವಿಹಿತಃ । ತದನನ್ತರಂ ''ವೃದ್ಧಸ್ಯ ಚ'' ಇತಿ ಸೂತ್ರೇ ವೃದ್ಧಶಬ್ದಸ್ಯಾಪೀಯಸುನ್ಪ್ರತ್ಯಯೇ ಪರತಃ ''ಜ್ಯ ಚ'' ಇತಿ ಸೂತ್ರಾಜ್ಜಶಬ್ದಮನುವರ್ತ್ಯ ಜ್ಯಾದೇಶೋ ವಿಹಿತಃ ।

ಅದು ಹೀಗೆ - 'ಪ್ರಶಸ್ಯ' ಎಂಬ ಶಬ್ದಕ್ಕೆ ಅತಿಶಯವೆಂಬ ಅರ್ಥದಲ್ಲಿ 'ಈಯಸುನ್' ಪ್ರತ್ಯಯವು ಬರುತ್ತದೆ. ಆವಾಗ ''ಪ್ರಶಸ್ಯಸ್ಯ ಶ್ರಃ' ಎಂಬ ಸೂತ್ರವು 'ಈಯಸುನ್' ಪ್ರತ್ಯಯವು ಮುಂದಿರುವಾಗ 'ಶ'

ಎಂಬ ಆದೇಶವನ್ನು ಹೇಳುತ್ತದೆ. ಅನಂತರ 'ಜ್ಯ ಚ' ಎಂಬ ಎರಡನೆಯ ಸೂತ್ರದಲ್ಲಿ 'ಪ್ರಶಸ್ಯ' ಎಂಬ ಶಬ್ದವನ್ನು ಅನುವೃತ್ತಿ ಮಾಡಿಕೊಂಡು 'ಜ್ಯ' ಎಂಬ ಆದೇಶವನ್ನು ವಿಧಿಸಲಾಗಿದೆ. ಅನಂತರ 'ವೃದ್ಧಸ್ಯ ಚ' ಎಂಬ ಮೂರನೇ ಸೂತ್ರದಲ್ಲಿ 'ವೃದ್ಧ' ಶಬ್ದಕ್ಕೆ 'ಈಯಸುನ್' ಪ್ರತ್ಯಯವು ಪರದಲ್ಲಿದ್ದಾಗ 'ಜ್ಯ ಚ' ಎಂಬ ಸೂತ್ರದಿಂದ 'ಜ್ಯ' ಎಂಬ ಶಬ್ದವನ್ನು ಅನುವೃತ್ತಿ ಮಾಡಿಕೊಂಡು 'ಜ್ಯ' ಎಂಬ ಆದೇಶವನ್ನು ವಿಧಿಸಲಾಗಿದೆ.

ಪ್ರಕಾಶಃ – तथा च 'ज्यायान्' इत्यस्यातिशयेन वृद्धत्वमतिशयेन प्रशस्तत्वं चेति द्वयमप्यर्थो भवति । तथा च प्रकृतेऽतिशयेन वृद्धिमत्त्वरूपमर्थं हित्वा प्रशस्ततमत्वरूपार्थमादायाणीयस्त्वं स्वाभाविकमित्यङ्गीक्रियतामित्यर्थः ।

इदमङ्गीकृत्योक्तेत् । वस्तुतस्तु–पूर्वोक्तरीत्याऽणुत्वमहत्त्वयोस्स्वाभाविकत्वेऽपि न विरोधलेश इति ध्येयम् ।

ಆದ್ದರಿಂದ 'ಜ್ಯಾಯಾನ್' ಎಂಬ ಪದಕ್ಕೆ ಅತಿಶಯವಾದ ವೃದ್ಧಿಯುಳ್ಳವನು ಮತ್ತು ಅತಿಶಯವಾಗಿ ಪ್ರಶಸ್ತನಾದವನು ಎಂದು ಎರಡು ಬಗೆಯಲ್ಲಿ ಅರ್ಥವನ್ನು ಹೇಳಿದಂತಾಗುತ್ತದೆ. ಆದ್ದರಿಂದ ಪ್ರಕೃತದಲ್ಲಿ ಎರಡು ಅತಿಶಯವಾದ ವೃದ್ಧಿವುಳ್ಳವನು ಎಂಬರ್ಥವನ್ನು ಬಿಟ್ಟು ಅತಂತ ಪ್ರಶಸ್ತನಾಗಿದ್ದಾನೆಂಬ ಅರ್ಥವನ್ನು ಸ್ವೀಕರಿಸಬಹುದು. ಹೀಗೆ ಸ್ವೀಕರಿಸಿ ಅಣೀಯಸ್ತ್ವವನ್ನು ಸ್ವಾಭಾವಿಕವೆಂದು ಅಂಗೀಕರಿಸಿಯೂ ಕೂಡ ವಿರೋಧವನ್ನು ಪರಿಹರಿಸಬಹುದು.

ಈ ವಿಚಾರವು ಅಂಗೀಕಾರವಾದವಾಗಿದೆ - ವಸ್ತುತಸ್ತು ಹಿಂದೆ ಹೇಳಿದ ಪ್ರಕಾರ ಪರಮಾತ್ಮನಲ್ಲಿ 'ಅಣುತ್ವ' ಹಾಗೂ 'ಮಹತ್ವ' ಎರಡನ್ನು ಸ್ವಾಭಾವಿಕವೆಂದು ಒಪ್ಪಿದರೂ ಸಹ ವಿರೋಧಕ್ಕೆ ಅವಕಾಶವಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – एतेन यत्केनचिदुक्तं – आद्यसूत्रद्वयमेकमधिकरणम् । तत्र ''मनोमयः प्राणशरीरः'' इति वाक्ये मनोमयत्वादियुतो जीवः शिवो वेति विशये,

''यथा क्रतुमयः पुरुषः यथाक्रतुरस्मिन् लोके पुरुषो भवति तदेतः प्रेत्य भवति'' इति कर्मवशादिहामुत्र भ्रमतो जीवस्य प्रस्तुत्वात्, 'सति' यथार्थेऽसङ्कल्प इत्यादिविभागेन सत्यसङ्कल्पत्वादेरुपपत्तेर्जीव इति प्राप्ते,

''सर्वं खल्विदं ब्रह्म तज्जलानिति'' इति सर्वकारणस्योपास्यत्वेनोपदेशात् विवक्षितसत्यकामत्वादिगुणानामुपपत्तेश्च शिव एव तथाविध इति सिद्धान्त इति,

ಹೀಗೆ ಆದ್ವೈತಿಗಳನ್ನು ಹಾಗೂ ರಾಮನುಜರುಗಳನ್ನು ನಿರಾಕರಿಸಿದ್ದರಿಂದಲೇ ಶೈವಮತವನ್ನೂ ಸಹ ನಿರಾಕರಿಸಿದಂತಾಯಿತು.

ಶೈವರ ಅಧಿಕರಣ ಶರೀರ ಹೀಗಿದೆ - ಮೊದಲೆರಡು ಸೂತ್ರಗಳು ಸೇರಿ ಒಂದು ಅಧಿಕರಣವಾಗಿದೆ. ಆ ಅಧಿಕರಣದಲ್ಲಿ 'ಮನೋಮಯಃ ಪ್ರಾಣಶರೀರಃ' ಎಂಬ ಪದವು ವಿಷಯವಾಕ್ಯವಾಗಿದೆ. ಈ ವಾಕ್ಯದಲ್ಲಿ ಮನೋಮಯತ್ವಾದಿ ಗುಣವುಳ್ಳವನು ಜೀವನೋ ಅಥವಾ ಶಿವನೋ? ಎಂದು ಸಂಶಯ.

''ಯಥಾ ಕ್ರತುಮಯಃ ಪುರುಷಃ ಯಥಾಕ್ರತುರಸ್ಮಿನ್ ಲೋಕೇ ಪುರುಷೋ ಭವತಿ ತದೇತಃ ಪ್ರೇತ್ಯ ಭವತಿ'' ಎಂಬ ವಾಕ್ಯದಲ್ಲಿ ಜೀವನು ಯಾವ ಪ್ರಕಾರದಲ್ಲಿ ಕರ್ಮಗಳನ್ನು ಆಚರಿಸುತ್ತಾನೋ ಅಂತಹ ಫಲವನ್ನೇ ಮೇಲಿನ ಲೋಕದಲ್ಲಿ ಅನುಭವಿಸುತ್ತಾನೆ ಎಂದು ಹೇಳಲಾಗಿದೆ. ಕರ್ಮದ ಅಧೀನವಾಗಿ ಇಹಲೋಕದಲ್ಲಿ ಹಾಗೂ ಪರಲೋಕದಲ್ಲಿ ಇರುವ ಜೀವನೇ ಇಲ್ಲಿ ಪ್ರಸ್ತುತನಾಗಿದ್ದಾನೆ. ಇಂತಹ ಜೀವನಲ್ಲಿ ಮನೋಮಯತ್ವಾದಿಗಳನ್ನು ಸುಲಭವಾಗಿ ಕೂಡಿಸಬಹುದು ಆದರೆ ಸತ್ಯಸಂಕಲ್ಪತ್ವವನ್ನು ಹೇಗೆ ಕೂಡಿಸುವುದೆಂದರೆ 'ಸತಿ ಅಸಂಕಲ್ಪಃ' ಎಂದು ಪದಚ್ಛೇದ ಮಾಡಬೇಕು. ಅಂದರೆ ಸತಿ = ಯಥಾರ್ಥವಾದ ವಿಚಾರದಲ್ಲಿ, ಅಸಂಕಲ್ಪಃ = ಸಂಕಲ್ಪ ಮಾಡಲಾರನು ಎಂಬರ್ಥವನ್ನು ಜೀವನಲ್ಲಿ ಹೇಳಬಹುದು. ಆದ್ದರಿಂದ 'ಮನೋಮಯಃ' ಇತ್ಯಾದಿ ವಾಕ್ಯದಿಂದ ಪ್ರತಿಪಾದ್ಯನಾದವನು ಜೀವನೇ ಆಗಿದ್ದಾನೆಂದು ಪೂರ್ವಪಕ್ಷ.

'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನ್' ಇತ್ಯಾದಿಯಾಗಿ ಸರ್ವಜಗತ್ಕಾರಣನಾದ ಬ್ರಹ್ಮನು ಉಪಾಸ್ಯನಾಗಿದ್ದಾನೆಂದು ಉಪದೇಶಿಸಲಾಗಿದೆ. ಇದು ಮೊದಲನೆಯ ಸೂತ್ರಾರ್ಥ. ಸತ್ಯಕಾಮತ್ವಾದಿಗುಣಗಳು ಶಿವನಲ್ಲಿ ಉಪಪನ್ನವಾಗುವುದರಿಂದ ಶಿವನೇ ಮನೋಮಯನೆಂಬ ವಾಕ್ಯದಿಂದ ಪ್ರತಿಪಾದ್ಯನಾಗಿದ್ದಾನೆಂಬುದು ಎರಡನೇ ಸೂತ್ರಾರ್ಥ. ಹೀಗೆ ಸಿದ್ಧಾಂತ ಮಾಡಿದ್ದಾರೆ.

ಪ್ರಕಾಶಃ – तन्निरस्तं, संशयाद्ययोगेनोदाहरणानौचित्यस्योक्तत्वात् । सूत्राक्षरासमाञ्जस्यस्य स्फुटत्वात् ।

तच्च ब्रह्म जलान् साक्षाद्योऽसौ विष्णुर्जलेऽनिति ।
महाज्ञानात्मकत्वात्तु प्रोक्तो विष्णुर्मनोमयः ।
यस्माद्बलशरीरोऽसावतः प्राणशरीरकः ।

इत्यादिस्मृतिविरुद्धत्वाच्च । ''अनुपपत्तेः'' इत्यादेरधिकरणान्तरत्वेऽत्रोक्ताभ्-कौस्त्वसम्भोगप्राप्त्यादिशङ्कासमाधानाभावेन सिद्धान्तनुत्थितेश्च । अणीयस्त्वस्या-समाधानाच्चेति ध्येयम् ।

ಶೈವರ ಈ ಅಧಿಕರಣ ಶರೀರವು ಅತ್ಯಂತ ಅನುಪಪನ್ನವಾಗಿದೆ. ಸಂಶಯ ಪೂರ್ವಪಕ್ಷಗಳೇ ಹುಟ್ಟಲು ಸಾಧ್ಯವಿಲ್ಲವೆಂಬ ಆದ್ಯೋಕ್ತಿಗಳಿಗೆ ಹೇಳಿದ ದೋಷ ಇವರಿಗೂ ತಪ್ಪಿದ್ದಲ್ಲ. ಆದ್ದರಿಂದ 'ಮನೋಮಯಃ' ಎಂಬ ವಾಕ್ಯವನ್ನು ವಿಷಯವಾಕ್ಯವನ್ನಾಗಿ ಪರಿಗಣಿಸುವುದು ಅನುಚಿತವಾಗಿದೆ. ಇನ್ನು ಶೈವರು ಹೇಳಿದ ಸೂತ್ರಾರ್ಥವೂ ಸಹ ಅಸಮಂಜಸವಾಗಿದೆಯೆಂದು ಸ್ಪಷ್ಟವಾಗಿ ತಿಳಿಯುತ್ತದೆ. 'ಕಾರಣತ್ವೇನ' ಎಂಬ ಪದವನ್ನು

ಅಧ್ಯಾಹಾರ ಮಾಡಿಕೊಳ್ಳಬೇಕು. ಪ್ರತಿಜ್ಞಾಭಾಗವೂ ಸಹ ಕಾಣಸುತ್ತಿಲ್ಲ. ಇತ್ಯಾದಿ ದೋಷಗಳನ್ನು ಸ್ವತಃ ಊಹಿಸಿಕೊಳ್ಳಬೇಕು.

ಮತ್ತು 'ತಜ್ಜಾಲಾನ್' ಎಂಬ ಶ್ರುತಿ ವಾಕ್ಯಕ್ಕೆ ಸ್ಮೃತಿಯಲ್ಲಿ ಹೀಗೆ ವ್ಯಾಖ್ಯಾನಿಸಲಾಗಿದೆ -

ತಚ್ಚ ಬ್ರಹ್ಮ ಜಲಾನ್ ಸಾಕ್ಷಾದ್ಯೋಽಸೌ ವಿಷ್ಣುರ್ಜಲೇಽನಿತಿ।
ಮಹಾಜ್ಞಾನಾತ್ಮಕತ್ವಾತ್ತು ಪ್ರೋಕ್ತೋ ವಿಷ್ಣುರ್ಮನೋಮಯಃ।
ಯಸ್ಮಾದ್ಬಲಶರೀರೋಽಸಾವತಃ ಪ್ರಾಣಶರೀರಕಃ।

'ತತ್' ಎಂದರೆ ಬ್ರಹ್ಮನು 'ಜಲೇ ಅನೀತಿ ಜಲಾನ್' ಎಂದರೆ 'ಮತ್ಸ್ಯಾದಿ' ಅವತಾರಗಳಲ್ಲಿ ನೀರಿನಲ್ಲಿ ಸಂಚರಿಸಿದ್ದಾನೆ 'ಮನೋಮಯಃ' ಎಂಬಲ್ಲಿರುವ 'ಮಯಟ್' ಪ್ರತ್ಯಯಕ್ಕೆ 'ಪ್ರಾಚುರ್ಯ' ಎಂಬರ್ಥವನ್ನು ಹೇಳಬೇಕಾಗಿದ್ದರಿಂದ ಪ್ರಧಾನಜ್ಞಾನಸ್ವರೂಪನೆಂದು ತಿಳಿಯಬೇಕು. ಯಾವ ಕಾರಣದಿಂದ ಪ್ರಾಣಶಬ್ದಕ್ಕೆ ಬಲ ಎಂಬರ್ಥವಿದೆಯೋ, ಆ ಕಾರಣದಿಂದ 'ಪ್ರಾಣಶಾರೀರಃ' ಎಂಬ ಪದಕ್ಕೆ ಬಲಿಷ್ಠವಾದ ಶರೀರವುಳ್ಳವನು ಎಂಬರ್ಥವನ್ನು ಹೇಳಬಹುದು. ಇವೇ ಮೊದಲಾದ ಶ್ರುತಿಗಳ ವಿರೋಧವೂ ಬರುತ್ತದೆ.

ಶೈವರು 'ಅನುಪಪತ್ತೇಃ' ಇತ್ಯಾದಿ ಸೂತ್ರಗಳನ್ನು ಮತ್ತೊಂದು ಅಧಿಕರಣವೆನ್ನುತ್ತಾರೆ. ಹಾಗಾದರೆ ಇಲ್ಲಿ ಹೇಳಲ್ಪಟ್ಟ 'ಅರ್ಭಕೌಕಸ್ತ್ವ' ಹಾಗೂ 'ಸಂಭೋಗಪ್ರಾಪ್ತಿತ್ವ' ಮೊದಲಾದವುಗಳ ಶಂಕೆಗೆ ಸಮಾಧಾನವನ್ನೇ ಹೇಳದಂತಾಗುವುದಿಲ್ಲ. ಆದ್ದರಿಂದ ಸಿದ್ಧಾಂತವೇ ಹುಟ್ಟುವುದಿಲ್ಲ. ಮತ್ತು ಅಣೀಯಸ್ತ್ವಾದಿಗಳಿಗೆ ಸಮಾಧಾನವನ್ನು ಶೈವರು ಹೇಳಿರುವುದಿಲ್ಲವೆಂಬುದನ್ನು ಗಮನಿಸಬೇಕು.

प्रकाशः – यदपि ''अनुपपत्तेस्तु'' इत्यादिषट्सूत्रीमधिकरणान्तरं मत्वा,

पतिं विश्वस्यात्मेश्वर ९ शाश्वत ९ शिवमच्युतम् ।
नारायणं महाज्ञेयं ..... ।।

इत्याद्युदाहृत्य, नारायणशब्दवाच्यश्चतुर्मूर्त्यात्मा विष्णुश्शिवो वेति संशये,

''समुद्रेऽन्तं विश्वशम्भुवं'' इति समुद्रान्तस्स्थत्वादिविष्णुलिङ्गनामच्युतादिश्रुतीनां सत्त्वेन विष्णुरिति प्राप्ते,

''पशूनां पतये वृक्षाणां पतये जगतां पतये'' ''विश्वाधिको रुद्रो महर्षिः'' इत्यादौ शिवे प्रसिद्धस्य विश्वपतित्वादेर्विष्णावनुपपत्तेः शिव एवेति सिद्धान्त इति,

'ಅನುಪಪತ್ತೇಃ' ಎಂಬ ಸೂತ್ರದಿಂದ ಪ್ರಾರಂಭಿಸಿ ಆರು ಸೂತ್ರಗಳು ಒಂದೇ ಅಧಿಕರಣವಾಗಿವೆಯೆಂದು ಶೈವರು ಹೇಳುತ್ತಾರೆ. ಆದರಲ್ಲಿ 'ಪತಿಂ ವಿಶ್ವಸ್ಯಾತ್ಮೇಶ್ವರ ९ ಶಾಶ್ವತ ९ ಶಿವಮಚ್ಯುತಮ್ । ನಾರಾಯಣಂ

महाज्ज्ञेयं ..... ॥ '' ಇತ್ಯಾದಿ ವಾಕ್ಯಗಳನ್ನು ವಿಷಯವಾಕ್ಯಗಳೆನ್ನುತ್ತಾರೆ. ಇಲ್ಲಿರುವ ನಾರಾಯಣ ಮೊದಲಾದ ಶಬ್ದಗಳಿಂದ ವಾಚ್ಯನಾದವನು ಮೂರ್ತಿಸ್ವರೂಪನಾದ ವಿಷ್ಣುವೋ ಅಥವಾ ಶಿವನೋ ? ಎಂದು ಸಂಶಯ.

'ಸಮುದ್ರೇಂತಂ ವಿಶ್ವಶಂಭುವಂ' ಎಂಬುದಾಗಿ ಸಮುದ್ರಾಂತಸ್ಥತ್ವ ಲಿಂಗಗಳು ಕೇಳಿಸುತ್ತಿರುವುದರಿಂದ ಅಚ್ಯುತಾದಿ ಶ್ರುತಿಗಳಿರುವುದರಿಂದ ವಿಷ್ಣುವೇ ನಾರಾಯಣಾದಿ ಶಬ್ದಗಳಿಂದ ವಾಚ್ಯನಾಗಿದ್ದಾನೆಂದು ಪೂರ್ವಪಕ್ಷ. ''ಪಶೂನಾಂ ಪತಯೇ ವೃಕ್ಷಾಣಾಂ ಪತಯೇ ಜಗತಾಂ ಪತಯೇ'' ''ವಿಶ್ವಾಧಿಕೋ ರುದ್ರೋ ಮಹರ್ಷಿಃ'' ಎಂಬಲ್ಲಿ ವಿಶ್ವಪತಿತ್ವವು ಶಿವನಲ್ಲೇ ಪ್ರಸಿದ್ಧವಾಗಿವೆ. ಇಂತಹ ವಿಶ್ವಪತಿತ್ವವು ವಿಷ್ಣುವಿನಲ್ಲಿ ಕೂಡುವುದಿಲ್ಲ. ಆದರೆ ಶಿವನೇ ಪ್ರತಿಪಾದ್ಯನೆಂದು ಸಿದ್ಧಾಂತ.

प्रकाशः – तदपि न, विष्णौ निरूढश्रुतिलिङ्गानां बाहुल्येन संशयादेरयोगात् । विश्वपतित्वादेः पालकत्वेन प्रसिद्धे विष्णौ

''न ते विष्णो जायमानः''

य उ त्रिधातु पृथिवीमुत द्यामेको दाधार भुवनानि विश्वा ।
समार्धगर्भा भुवनस्य रेतो विष्णोस्तिष्ठन्ति प्रदिशा विधर्मणि ।।

इत्यादिश्रुतिभिः ''श्रियः पतिर्यज्ञपतिः प्रजापतिः गिरां पतिर्लोकपतिः'' इत्यादिस्मृत्या विष्णोरेव प्रसिद्धेः ।

ಇದೂ ಸಹ ತಪ್ಪು. ಏಕೆಂದರೆ ವಿಷ್ಣುವಿನಲ್ಲಿ ನಿರೂಢವಾದ ಅನೇಕ ಶ್ರುತಿಗಳು ಹಾಗೂ ಅನೇಕ ಲಿಂಗಗಳು ಇರುವುದರಿಂದ ಸಂಶಯವು ಹುಟ್ಟಲು ಸಾಧ್ಯವೇ ಇಲ್ಲ. ವಿಶ್ವಪತಿತ್ವ ಮೊದಲಾದ ಧರ್ಮಗಳೂ ಸಹ ಜಗತ್ಪಾಲಕನೆಂದು ಪ್ರಸಿದ್ಧನಾದ ವಿಷ್ಣುವಿನಲ್ಲೇ ಕೂಡುತ್ತವೆ.

ಅದು ಹೀಗೆ -

'ನ ತೇ ವಿಷ್ಣೋ ಜಾಯಮಾನಃ' ಎಂಬ ಜಗತ್ಪಾಲಕತ್ವವು ವಿಷ್ಣುನಲ್ಲಿಯೇ ಪ್ರಸಿದ್ಧವಾಗಿವೆ.

प्रकाशः – ''विश्वाधिकः'' इत्यादिनिरवकाशचतुर्मुखजनकत्वलिङ्गेन रुद्रशब्दस्य विष्णावेवोपपत्तेः ।

अस्य स्वपक्षसाधकत्वे ''अन्तस्तद्धर्मोपदेशात्'' इत्यादाविव समन्वीयमानं लिङ्गं नाम वा निर्दिश्य तद्धर्मोपदेशादित्यन्वयमुखेन वचनं विना, व्यतिरेकमुखेन सूत्रविन्यासायोगादिति दिक् ।।

ಮತ್ತು ''ವಿಶ್ವಾಧಿಕಃ'' ಇತ್ಯಾದಿಯಾದ ಚತುರ್ಮುಖಜನಕತ್ವವೆಂಬ ನಿರವಕಾಶಲಿಂಗದ ಬಲದಿಂದ ರುದ್ರ ಶಬ್ದವು ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ.

ಮತ್ತು 'ಯಾವ ರೀತಿಯಾಗಿ ''ಅಂತಸ್ತದ್ಧರ್ಮೋಪದೇಶಾತ್'' ಎಂಬ ಸೂತ್ರದಲ್ಲಿ ಮೊದಲು ಸ್ವಪಕ್ಷಸಾಧಕವನ್ನು ಹೇಳಿದ್ದಾರೋ ಅದರಂತೆ ಇಲ್ಲಿಯೂ ಸ್ವಪಕ್ಷಸಾಧಕವನ್ನು ಹೇಳಿ ಅನಂತರ ಬಾಧಕವನ್ನು ಪರಿಹರಿಸಬೇಕು. ಆದರೆ ''ಅನುಪಪತ್ತೇಸ್ತು'' ಎಂಬುದಾಗಿ ಒಂದೇ ಬಾರಿಗೆ ಬಾಧಕವನ್ನು ಹೇಳುವುದು ತಪ್ಪಾಗುತ್ತದೆ. ಸಮನ್ವಯ ಮಾಡಬೇಕಾದ ಲಿಂಗವನ್ನೋ ಅಥವಾ ನಾಮವನ್ನು ನಿರ್ದೇಶ ಮಾಡಿ 'ತದ್ಧರ್ಮೋಪಪತ್ತೇಃ' ಎಂಬುದಾಗಿ ಸ್ವಪಕ್ಷಸಾಧಕವಾದ ಮಾತನ್ನು ಹೇಳದೆ ವ್ಯತಿರೇಕ ಮುಖದಿಂದ ಸೂತ್ರವನ್ನು ವಿನ್ಯಾಸ ಮಾಡಿದ್ದು ಅಯುಕ್ತವಾಗುತ್ತದೆ. ಈ ದೋಷಗಳೆಲ್ಲವೂ ಕೇವಲ ದಿಕ್‌ಪ್ರದರ್ಶನವಾಗಿದೆ. ಇನ್ನೂ ಹೆಚ್ಚಿನ ದೋಷಗಳನ್ನು ಸ್ವತಃ ಊಹಿಸಿಕೊಳ್ಳಬೇಕು.

गुरुराजीयम् – श्रुत्यनुगमायेति ।। सर्वं खल्विदं ब्रह्मेत्यादिश्रुत्याऽनुगमायेत्यर्थः ।। सौत्रेति ।। गत्यन्तराभाव एव तत्कल्पनं युक्तम् । प्रकृते चास्मद्रीत्या प्रकारान्तरेणोपपत्तिरिति भावः ।

किञ्च यद्यत्र प्रकरणेऽणुत्वं महत्त्वं चोच्येत तदा विरोधे प्राप्ते स्वाभाविकत्वौपाधिकत्वाभ्यां विरोधः परिहर्तव्यः स्यात् । न चाणुत्वमहत्त्वप्रतिपादनमस्ति । नच ज्यायानित्यनेनैव महत्त्वं प्रतिपादितमिति वाच्यम् । तस्य प्राशस्त्यप्रतिपादकत्वेन महत्त्वाप्रतिपादकत्वादित्याह – किञ्चेति ।।

ಸಾರ

ರಾಮಾನುಜರ ಸೂತ್ರಾರ್ಥವೂ ಸಹ ತಪ್ಪಿದೆ. ಸರ್ವಾತ್ಮಕತ್ವವನ್ನು ಸಾಧ್ಯವೆನ್ನುತ್ತಾರೆ. ಆದರೆ ಸರ್ವಾತ್ಮಕತ್ವವನ್ನು ಪ್ರತಿಪಾದನೆ ಮಾಡುವುದಕ್ಕಾಗಿ 'ಸರ್ವಂ' ಎಂದೇ ಸೂತ್ರದಲ್ಲಿ ನಿರ್ದೇಶಿಸಬೇಕು. ಹಾಗೇ ನಿರ್ದೇಶಿಸುವುದರಿಂದ ಶ್ರುತಿಯ ಅನುಗುಣ್ಯವೂ ಸಹ ಬರುತ್ತದೆ. ಏಕೆಂದರೆ 'ಸರ್ವತ್ರ' ಎಂಬ ಪದದಿಂದ ಸರ್ವಾತ್ಮಕತ್ವ ತಿಳಿಯುವುದಿಲ್ಲ. ಕೇವಲ ಸರ್ವಗತತ್ವ ತಿಳಿಯುತ್ತದೆ. ಮತ್ತು ಸೂತ್ರದಲ್ಲಿರುವ ಪ್ರಸಿದ್ಧಶಬ್ದಕ್ಕೆ ಕಾರಣವಿಲ್ಲದೆ ಭಾವಪ್ರಧಾನವಾಚಿತ್ವವನ್ನು ಒಪ್ಪಬೇಕಾಗುತ್ತದೆ.

ಮತ್ತು ರಾಮಾನುಜರು 'ಅರ್ಭಕೌಕಸ್ತ್ವಾತ್' ಎಂಬ ಸೂತ್ರಕ್ಕೆ ಹೀಗೆ ವ್ಯಾಖ್ಯಾಸಿದ್ದಾರೆ - ''ಏಷ ಮೇ ಆತ್ಮಾಂತರ್ಹೃದಯೇऽಣೀಯಾನ್ ವ್ರೀಹೇರ್ವಾ ಯವಾದ್ವಾ ಸರ್ಷಪಾದ್ವಾ'' ಎಂಬಲ್ಲಿ ಹೇಳಲ್ಪಟ್ಟ ಅಣೀಯಸ್ತ್ವವು ಔಪಾಧಿಕವಾಗಿದೆ. ಏಕೆಂದರೆ ಹೃದಯವೆಂಬ ಉಪಾಧಿಯನ್ನು ಹೇಳಿರುವುದರಿಂದ ಆದರೆ 'ಜ್ಯಾಯಾನ್ ಪೃಥಿವ್ಯಾಃ'

ಎಂಬಲ್ಲಿ ಹೇಳಲ್ಪಟ್ಟ ಮಹತ್ವವು ಸ್ವಾಭಾವಿಕವಾಗಿದೆ. ಏಕೆಂದರೆ ಇಲ್ಲಿ ಯಾವುದೇ ವಿಧವಾದ ಉಪಾಧಿಯನ್ನು ಹೇಳಿರುವುದಿಲ್ಲವೆಂದು

ಇದು ತಪ್ಪು. 'ಹೃದ್ಯಪೇಕ್ಷಯಾ' ಎಂಬಲ್ಲಿ ಹೃದಯವು ಅಂಗುಷ್ಠಪ್ರಮಾಣವುಳ್ಳದ್ದಾಗಿದೆಯೆಂದು ನೀವೇ ಒಪ್ಪಿರುತ್ತೀರಿ? ಹೀಗಿರುವಾಗ ಪರಮಾತ್ಮನು ಸರ್ವಪಕ್ಕಿಂತ ಅಣುವಾಗಿದ್ದಾನೆನ್ನಲು ಇಂತಹ ಹೃದಯವು ಉಪಾಧಿಯಾಗುವುದಿಲ್ಲ.

• • • • •

ಟೀಕೆಯ ಕಠಿಣಪದಾರ್ಥ

तात्पर्यचन्द्रिका

टीकाक्षरार्थस्तु – पूर्वं चक्षुर्मयत्वादिकमन्तर्यामिणि अङ्गीकृत्याल्पौकस्त्वं न युक्तमित्युक्तम् । इदानीं जीवधर्मत्वात्तस्य तदपि न युक्तमित्याह – चक्षुर्मयत्वाद्ययोगाच्चेति ।

सर्वगतत्वानतिरिक्तत्वेनेति । ''अत सातत्यगमने'' इति धातोः, ''सन्ततो ऋत उच्यते'' इति वचनाच्च अतत्वं सर्वगतत्वानतिरिक्तमित्यर्थः ।

व्रीह्यादिगतजीवान्तरवदिति । स्वर्गाच्युतः स्थूलशरीरसम्बन्धार्थं पित्रादिशरीर प्रवेशायान्यकर्मनिर्मितव्रीह्यादिशरीरगतो जीवो जीवान्तरशब्दार्थ ।

सर्वगततया सर्वजीवाग्रहणापातादिति । सर्वजीवानां कर्मत्वाभावे सर्वगतवाक्ये सर्वगततया ये सर्वजीवाः प्रकृतास्तेषां ''स य एवमेतमात्मानं'' इति कर्मीभूतात्मविशेषणेनैतच्छब्देन ग्रहणं न स्यात् । ग्रहणे च सर्वजीवानां कर्मत्वापत्तेः । तथा चैतच्छब्दस्य प्रकृतसर्वपरत्वसम्भवे तदेकदेशपरत्वम-युक्तमित्यर्थः ।

यद्वा – 'एतं' इत्यनेन सर्वजीवानामनिर्देशे एतच्छब्दस्वारस्यार्थं सर्वगतवाक्येऽपि सर्वगततया सर्वेषां ग्रहणं न स्यात् । तथा च सर्वे जीवाः सर्वगता इति पूर्वपक्षिणा यद्गृहीतं तद्धीयेतेत्यर्थः ।

तथा प्रतीत्यभावेनेति । कर्मिभूतात्मविशेषणेन चक्षुर्मयत्वादिना जीवसामान्यलिङ्गेन जीवमात्रस्यैव प्रतीतेरित्यर्थः । न केवलं कर्मत्वं जीवविशेषस्येत्ययुक्तम्, किन्तु कर्तृत्वमपि, ''योऽवगुरेत् तं शतेन यातयेत्'' इत्यत्रेव ''यः शंसति अस्य वेदा दुग्धदोहा भवन्ति'' इति सामान्येनैव प्रत्यवायश्रवणात् ।

अन्यथा केषाञ्चित्प्रत्यवायो न स्यादित्यपि द्रष्टव्यम् । असदपरोक्षतया प्रतीयते वाच्यत्वात् इति । धर्माधर्मादेरपि ईश्वरायपरोक्षत्वान्न तत्र व्यभिचार इति भावः ।।

।। इति श्रीब्रह्मण्यतीर्थपूज्यश्रीपादशिष्यव्यासतीर्थविरचिता तात्पर्यचन्द्रिकायां सर्वगतत्वाधिकरणं सम्पूर्णम् ।।

ಅನುವಾದ - ಟೀಕೆಯ ಕಠಿಣಪದಾರ್ಥ ಹೀಗಿದೆ - ಹಿಂದೆ ಚಕ್ಷುರ್ಮಯತ್ವಾದಿಗಳನ್ನು ಅಂತರ್ಯಾಮಿಯಲ್ಲಿ ಅಂಗೀಕರಿಸಿ ಅಲ್ಪೌಕಸ್ತ್ವವು (ಅಲ್ಪಸ್ಥಾನಸ್ಥಿತತ್ವವು) ಕೂಡುವುದಿಲ್ಲವೆಂದು ಹೇಳಿದ್ದರು. ಪ್ರಕೃತ ಚಕ್ಷುರ್ಮಯತ್ವಾದಿಗಳೂ ಸಹ ಜೀವಧರ್ಮವಾದ್ದರಿಂದ ಅಂತರ್ಯಾಮಿಯಲ್ಲಿ ಕೂಡುವುದಿಲ್ಲವೆಂದು ಹೇಳುತ್ತಿದ್ದಾರೆ ''ಚಕ್ಷುರ್ಮಯತ್ವಾದ್ಯಯೋಗಾಚ್ಚ'' ಇತ್ಯಾದಿ ವಾಕ್ಯಗಳಿಂದ.

''ಸರ್ವಗತತ್ವಾನತಿರಿಕ್ತತ್ವಾನ್'' ಎಂಬ ಮಾತು ಎರಡನೇ ಸೂತ್ರ ವ್ಯಾಖ್ಯಾನದಲ್ಲಿದೆ. ''ವಿವಿಕ್ಷಿತಗುಣೋಪಪತ್ತೇಶ್ಚ'' ಎಂಬ ಸೂತ್ರದಲ್ಲಿ 'ಅಶ್ರುತತ್ವ ಅಮೃತತ್ವ' ಮೊದಲಾದ ಧರ್ಮಗಳನ್ನು ಆಚಾರ್ಯರು ಹೇಳಿದ್ದಾರೆ. ಆದರೆ 'ಸ ಯೋಽತೋ ಅಶ್ರುತೋ' ಎಂಬಲ್ಲಿ ಮೊದಲಿರುವ 'ಅತಃ' ಎಂಬುದರಿಂದ ತಿಳಿಯುವ 'ಅತತ್ವ' ಧರ್ಮವನ್ನೇ ಆಚಾರ್ಯರು ಹೇಳಿಲ್ಲವಲ್ಲ? ಎಂಬ ಪ್ರಶ್ನೆಗೆ ಟೀಕೆಯಲ್ಲಿ ಉತ್ತರಿಸಿದ್ದಾರೆ. 'ಅತತ್ವ' ಧರ್ಮವೆಂದರೆ ಸರ್ವಗತತ್ವವೇ ಆಗುತ್ತದೆ. ಆವಾಗ ಸರ್ವಗತತ್ವವನ್ನು ಸಾಧನೆ ಮಾಡಲು ಈ ಅತತ್ವವನ್ನು ಹೇತುವನ್ನಾಗಿ ಮಾಡಿದರೆ ಸಾಧ್ಯಾವೈಶಿಷ್ಟ್ಯದೋಷವು ಬರುತ್ತದೆ. 'ಅತ ಸಾತತ್ಯಗಮನೇ' ಎಂಬ ಧಾತುವಿನಿಂದ 'ಅತಃ' ಎಂಬ ಪದವು ನಿಷ್ಪನ್ನವಾಗಿದೆ. 'ಸಂತೋ ಹತ ಉಚ್ಯತೇ' ವಚನವೂ ಸಹ ಅತತ್ವವು ಸರ್ವಗತತ್ವಕ್ಕಿಂತ ಅನತಿರಿಕ್ತವಾಗಿದೆಯೆನ್ನಲು ಆಧಾರವಾಗಿದೆ.

'ಅನುಪಪತ್ತೇಸ್ತು ನ ಶಾರೀರಃ' ಎಂಬ ಸೂತ್ರದ ವ್ಯಾಖ್ಯಾನದಲ್ಲಿ 'ವ್ರೀಹ್ಯಾದಿಗತಜೀವಾಂತರವತ್'

ಎಂಬ ಟೀಕಾವಾಕ್ಯವಿದೆ. ಒಬ್ಬ ಜೀವನಿಗೆ ಸಕಲಹೃದಯಗತತ್ವವನ್ನು ಹೇಳಲು ಹೇಗೆ ಸಾಧ್ಯ? ಹಾಗೇನಾದರೂ ಹೇಳಿದರೆ ಎಲ್ಲರ ದೇಹದಲ್ಲಿ ಉಂಟಾಗುವ ಸುಖದುಃಖಗಳ ಅನುಭವವು ಒಬ್ಬನೇ ಜೀವನಿಗೆ ಬರಬೇಕಾದೀತು. ವ್ರೀಹಿಯಲ್ಲಿ ಸೇರಿಕೊಂಡು ಸ್ವರ್ಗದಿಂದ ಜೀವನು ಪಿತೃಶರೀರವನ್ನು ಸೇರುವಂತೆ ಒಬ್ಬ ಜೀವನು ಮತ್ತೊಬ್ಬನ ಶರೀರದಲ್ಲಿ ಇರಬಹುದೆಂದು ಪೂರ್ವಪಕ್ಷ ಮಾಡುವ ವಾಕ್ಯವಾಗಿದೆ. ಟೀಕೆಯಲ್ಲಿರುವ 'ವ್ರೀಹ್ಯಾದಿಗತಜೀವಾಂತರವತ್' ಎಂಬಲ್ಲಿ ಜೀವಾಂತರ ಶಬ್ದಕ್ಕೆ ಹೀಗರ್ಥ - ಸ್ವರ್ಗದಿಂದ ಸ್ಥಿತನಾದ ಜೀವನು ಸ್ಥೂಲ ಶರೀರ ಸಂಬಂಧಕ್ಕೋಸ್ಕರ ಪಿತೃವಿನ ಶರೀರವನ್ನು ಪ್ರವೇಶಿಸುವುದಕ್ಕಾಗಿ ಅನ್ಯಕರ್ಮದಿಂದ ನಿರ್ಮಿತವಾದ ವ್ರೀಹ್ಯಾದಿಶರೀರದಲ್ಲಿರುವ ಕರ್ಮಿಯಾದ ಜೀವನು ಜೀವಾಂತರಶಬ್ದದ ಅರ್ಥನಾಗಿದ್ದಾನೆ. ಸಕಲಜೀವರಿಗೆ ಪರಮತ್ವವನ್ನು ಹೇಳಿದಿದ್ದರೆ ಸರ್ವಗತವಾಕ್ಯದಲ್ಲಿ ಸಕಲಜೀವರು ಸರ್ವಗತನೆಂದು ಪ್ರಕೃತನಾಗಿದ್ದಾನೆ. ಅವರು 'ಸ ಯ ಏವ ಮೇತ ಆತ್ಮಾನಾಂ' ಎಂಬುದಾಗಿ ಕರ್ಮಿಯಾದ ಆತ್ಮನಿಗೆ ವಿಶೇಷಣರಾಗಿರವುದರಿಂದ 'ಏತತ್' ಶಬ್ದದಿಂದ ಗ್ರಹಣ ಮಾಡದಿರಬೇಕಾದೀತು. ಒಂದು ವೇಳೆ ಸಕಲಜೀವರನ್ನು ಗ್ರಹಣ ಮಾಡಿದರೆ ಸಕಲಜೀವರುಗಳು ಉಪದೇಶದಲ್ಲಿ ಕರ್ಮಿಭೂತರಾಗಬೇಕಾದೀತು. ಆದ್ದರಿಂದ 'ಏತತ್' ಶಬ್ದಕ್ಕೆ ಪ್ರಕೃತರಾದ ಸಕಲಜೀವರನ್ನು ಸ್ವೀಕರಿಸಲು ಬರುವಾಗ ತದೇಕದೇಶನಾದ ಒಬ್ಬ ಜೀವನನ್ನು ಗ್ರಹಿಸುವುದು ಆಯುಕ್ತವಾಗುತ್ತದೆ.

ಅಥವಾ 'ಏತಂ' ಎಂಬ ವಾಕ್ಯದಲ್ಲಿಯೂ ಸಕಲ ಜೀವರನ್ನು ನಿರ್ದೇಶ ಮಾಡದೆ ಒಬ್ಬ ಜೀವನನ್ನೇ ನಿರ್ದೇಶಿಸುವುದಾದರೆ 'ಏತತ್' ಶಬ್ದದ ಸ್ವಾರಸ್ಯಕ್ಕೋಸ್ಕರ ಸರ್ವಗತವಾಕ್ಯದಲ್ಲಿಯೂ ಸರ್ವಗತರಾದ ಸಕಲಜೀವರನ್ನು ಗ್ರಹಣ ಮಾಡಿರುವುದಿಲ್ಲ. ಒಬ್ಬನೇ ಜೀವನನ್ನು ಗ್ರಹಣ ಮಾಡಿದ್ದಾರೆಂದು ಆಗಬೇಕಾದೀತು. ಆದ್ದರಿಂದ ಸಕಲಜೀವರೂ ಸರ್ವಗತರಾಗಿದ್ದಾರೆಂಬ ಪೂರ್ವಪಕ್ಷೆಯ ಅಭಿಪ್ರಾಯವನ್ನು ಬಿಡಬೇಕೆಂದು ಅಭಿಪ್ರಾಯ.

'ತಥಾ ಪ್ರತೀತ್ಯಭಾವೇನ' ಎಂದು ಟೀಕೆಯಲ್ಲಿದೆ. ಕರ್ಮವೆನಿಸಿದ ಆತ್ಮನಿಗೆ ವಿಶೇಷಣವಾಗಿ ಚಕ್ಷುರ್ಮಯತ್ವಾದಿಗಳನ್ನು ಹೇಳಲಾಗಿದೆ. ಆದರೆ ಈ ಚಕ್ಷುರ್ಮಯತ್ವಾದಿಗಳು ಜೀವ ಸಾಮಾನ್ಯರ ಲಿಂಗವಾದ್ದರಿಂದ ಒಬ್ಬನೇ ಜೀವನನ್ನು ಸ್ವೀಕರಿಸಲು ಕಾರಣವಾಗುವುದಿಲ್ಲ.

ಜೀವ ವಿಶೇಷನಿಗೆ ಕರ್ತೃತ್ವವನ್ನು ಹೇಳಿದಾಗ ಜೀವವಿಶೇಷನಲ್ಲಿ ಕರ್ಮತ್ವವು ಕೂಡುವುದಿಲ್ಲವೆಂದು ಇಲ್ಲಿಯ ತನಕ ಉಪಪಾದಿಸಿದರು. ಈಗ ಕರ್ತೃತ್ವವೂ ಸಹ ಜೀವವಿಶೇಷನಲ್ಲಿ ಕೂಡುವುದಿಲ್ಲವೆಂದು ಹೇಳುತ್ತಿದ್ದಾರೆ. ''ಯೋಽವಗುರೇತ್ ತಂ ಶತೇನ ಯಾತಯೇತ್'' 'ಯಾರು ಅವಮಾನ ಮಾಡುತ್ತಾನೋ ಅವನನ್ನು ನೂರು ಯಾತನೆಯಿಂದ ದಂಡಿಸಬೇಕು' ಎಂದು ಹೇಳಲಾಗಿದೆ. ಇದರಂತೆ ''ಯಃ ಶಂಸತಿ ಅಸ್ಯ ವೇದಾ ದುಗ್ಧದೋಹಾ ಭವಂತಿ'' ಎಂಬಲ್ಲಿಯೂ ಸಾಮಾನ್ಯವಾಗಿಯೇ ಪ್ರತ್ಯವಾಯವು ಕೇಳಿಸುತ್ತಿದೆ. ಹೀಗೆ ಹೇಳಿದಿದ್ದರೆ ಯಾರಿಗೂ ಪ್ರತ್ಯವಾಯವೇ ಬಾರದಿರಬೇಕಾಗುತ್ತದೆ.

ಟೀಕೆಯಲ್ಲಿ 'ಅಸದಪರೋಕ್ಷತಯಾ ಪ್ರತೀಯತೇ ವಾಚ್ಯತ್ವಾತ್' ಎಂದಿದೆ. ಧರ್ಮ ಹಾಗೂ ಅಧರ್ಮಗಳೆಲ್ಲವೂ ಈಶ್ವರನ ಅಪರೋಕ್ಷಕ್ಕೆ ವಿಷಯವಾದ್ದರಿಂದ ವ್ಯಭಿಚಾರಕ್ಕೆ ಅವಕಾಶವಿಲ್ಲವೆಂದು ಅಭಿಪ್ರಾಯ.

ಇಲ್ಲಿಗೆ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ
ಸರ್ವಗತತ್ವಾಧಿಕರಣವು ಸಂಪೂರ್ಣವಾಯಿತು.

प्रकाशः –

ननु 'नच तल्लिङ्गमन्तर्यामिविषयम्' इति चक्षुर्मयत्वादेरन्यथासिद्धौ शङ्कितायां तत्समाधानमकृत्वाऽल्पौकस्त्वायोगमभिधाय व्यवधानेन तदुक्तिरयुक्तेत्यत आह – पूर्वमिति । तात्पर्यं तु प्रागेव विवृतमिति भावः ।

ವಿವರಣೆ - ಗ್ರಂಥದಲ್ಲಿ ಟೀಕೆಯ ಕಠಿಣಪದದ ಅರ್ಥಗಳನ್ನು ಬರೆಯುತ್ತಿದ್ದಾರೆ. ಟೀಕೆಯಲ್ಲಿ 'ನಚ ತಲ್ಲಿಂಗಮಂತರ್ಯಾಮಿವಿಷಯಮ್' ಎಂಬುದಾಗಿ ಚಕ್ಷುರ್ಮಯತ್ವಾದಿ ಲಿಂಗಗಳು ಅನ್ಯಥಾ ಸಿದ್ಧವಾಗಿವೆಯೆಂದು ಮೊದಲು ಶಂಕಿಸಿದರು. ಆದರೆ ಮುಂದೆ ಇದಕ್ಕೆ ಸಮಾಧಾನವನ್ನು ಹೇಳದೆ ಅಲ್ಪೌಕಸ್ತ್ವವು ಅಂತರ್ಯಾಮಿಯಲ್ಲಿ ಕೂಡುವುದಿಲ್ಲವೆಂದು ಸಮಾಧಾನವನ್ನು ಹೇಳಿದ್ದಾರೆ. ಹೀಗೆ ವ್ಯವಧಾನದಿಂದ ಚಕ್ಷುರ್ಮಯತ್ವಾದಿಗಳ ಅನ್ಯಥಾಸಿದ್ಧಿಯನ್ನು ಪರಿಹರಿಸಿದ್ದಾರೆ ಇದು ತಪ್ಪಲ್ಲವೇ? ಎಂಬ ಪ್ರಶ್ನೆಗೆ 'ಪೂರ್ವಂ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಮೊದಲು ಅಂಗೀಕಾರವಾದವನ್ನು ಮಾಡಿ ಚಕ್ಷುರ್ಮಯತ್ವಾದಿಗಳನ್ನು ಅಂತರ್ಯಾಮಿಯಲ್ಲಿ ಒಪ್ಪಿದ್ದಾರೆ. ಆನಂತರ ಜೀವಧರ್ಮವಾದ್ದರಿಂದ ಆ ಚಕ್ಷುರ್ಮಯತ್ವ ಧರ್ಮವೇ ಅಂತರ್ಯಾಮಿಯಲ್ಲಿ ಕೂಡುವುದಿಲ್ಲವೆಂದು ಉಪಪಾದಿಸುತ್ತಿದ್ದಾರೆ. ಇದರ ತಾತ್ಪರ್ಯವನ್ನು ಈ ಹಿಂದೆ ವಿವರಿಸಿದ್ದಾಗಿದೆ.

प्रकाशः – विवक्षितसूत्रे टीकायां ''अतत्वस्यादिमत्वेऽपि तस्य सर्वगतत्वानतिरिक्तत्वेन साध्यत्वादश्रुतत्वादीनामेव ग्रहणम्'' इत्युक्तम् । तत्रातत्वस्य सर्वगतत्वरूपत्वं व्यनक्ति – अतेति । सातत्यागमनार्थादनधातोरचि कृते 'अतः' इति भवति ।

देशतः कालतश्चैव गुणतश्चापि पूर्तितः ।
अत इत्युच्यते विष्णुः सन्ततो ह्यत उच्यते ।।
सर्वगतत्वाधिकरण (೧-೨-೧)

ಇತ್ಯೈತರೇಯಭಾಷ್ಯೋಕ್ತವಚನಾಚ್ಚೇತ್ಯರ್ಥಃ ।

''ವಿವಕ್ಷಿತ ಗುಣೋಪಪತ್ತೇಶ್ಚ'' ಎಂಬ ಟೀಕೆಯಲ್ಲಿ ''ಅತತ್ವಸ್ಯಾದಿಮತ್ವೇऽಪಿ ತಸ್ಯ ಸರ್ವಗತತ್ವಾನತಿರಿಕ್ತತ್ವೇನ ಸಾಧನತ್ವಾದಶ್ರುತತ್ವಾದೀನಾಮೇವ ಗ್ರಹಣಮ್'' ಎಂಬ ಮಾತಿದೆ. ಅಂದರೆ ''ಸ ಯೋ ತೋ ಶ್ರುತಃ'' ಎಂಬ ಶ್ರುತಿಯಲ್ಲಿ 'ಅತಃ' ಎಂಬ ಶಬ್ದದಿಂದ ಅತತ್ವಧರ್ಮವು ಕೇಳಿಸುತ್ತಿದೆ. ಅನಂತರ ಅಶ್ರುತತ್ವಾದಿ ಧರ್ಮಗಳು ಕೇಳಿಸುತ್ತಿವೆ. ಅತತ್ವಧರ್ಮವು ಸರ್ವಗತತತ್ವಕ್ಕಿಂತ ಬೇರೆಯಲ್ಲದ್ದರಿಂದ ಸಾಧ್ಯರೂಪವಾಗಿದೆ ಎಂಬ ಅಭಿಪ್ರಾಯದಿಂದ ಅಶ್ರುತತ್ವಾದಿ ಗುಣಗಳನ್ನೇ ಆಚಾರ್ಯರು ಸ್ವೀಕರಿಸಿದ್ದಾರೆ.

ಅತತ್ವವು ಸರ್ವಗತತ್ವರೂಪವಾಗಿದೆಯೆಂಬುದನ್ನು ಪ್ರಕೃತ 'ಅತಃ' ಎಂಬುದರಿಂದ ವ್ಯಾಖ್ಯಾನಿಸುತ್ತಿದ್ದಾರೆ. ಸಾತತ್ಯಗಮನ ಎಂಬ ಅರ್ಥವಿರುವ 'ಅತ' ಧಾತುವಿಗೆ 'ಅಚ್' ಪ್ರತ್ಯಯವು ಬಂದಾಗ 'ಅತಃ' ಎಂಬ ರೂಪವು ನಿಷ್ಪನ್ನವಾಗುತ್ತದೆ.

ದೇಶತಃ ಕಾಲತಶ್ಚೈವ ಗುಣತಶ್ಚಾಪಿ ಪೂರ್ತಿತಃ।
ಅತ ಇತ್ಯುಚ್ಯತೇ ವಿಷ್ಣುಃ ಸಂತತೋ ಹ್ಯತ ಉಚ್ಯತೇ॥

'ದೇಶತಃ ಕಾಲತಃ ಗುಣತಃ ಪೂರ್ಣನಾದ ಪರಮಾತ್ಮನು ಅತಃ ಶಬ್ದದಿಂದ ವಾಚ್ಯನಾಗಿದ್ದಾನೆ' ಎಂಬ ಐತರೇಯ ಭಾಷ್ಯದ ಆಚಾರ್ಯರ ಮಾತು ಈ ವಿಷಯದಲ್ಲಿ ಆಧಾರವಾಗಿದೆ.

ಪ್ರಕಾಶಃ – ನನು ವ್ರೀಹ್ಯಭಿಮಾನಿಜೀವೇ ಕುಟ್ಟನಭರ್ಜನಾದಿನಾ ದುಃಖಭಾವಾತ್ ಕಥಂ ತದ್ಭಾಷ್ಟಾನ್ತ ಇತ್ಯತ ಆಹ – ಸ್ವರ್ಗಾದಿತಿ ।

ವ್ರೀಹಿಗೆ ಅಭಿಮಾನಿಯಾದ ಜೀವನಿಗೆ ವ್ರೀಹಿಯನ್ನು ಕುಟ್ಟುವುದರಿಂದ ಅಥವಾ ಹುರಿಯುವುದರಿಂದ ದುಃಖವಾಗುವಿಕೆಯು ಕಂಡಿದೆ. ಹೀಗಿರುವಾಗ ಇದು ಹೇಗೆ ದೃಷ್ಟಾಂತವಾಗುತ್ತದೆ ? ಎಂಬ ಪ್ರಶ್ನೆಗೆ 'ಸ್ವರ್ಗಾತ್' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ವ್ರೀಹಿಗೆ ಅಭಿಮಾನಿಯಾದ ಜೀವನನ್ನು ಇಲ್ಲಿ ವಿವಕ್ಷಿಸಬಾರದು. ಹೊರತಾಗಿ ಸ್ವರ್ಗದಿಂದ ಬಿದ್ದು ಪಿತೃಶರೀರವನ್ನು ಪ್ರವೇಶಿಸುವ ಮತ್ತೊಬ್ಬ ಜೀವನೆಂದು ತಿಳಿಯಬೇಕು.

ಪ್ರಕಾಶಃ – ಕರ್ಮಕರ್ತೃಸೂತ್ರೇ ''ನ ಚೈಕಸ್ಸರ್ವಗತೋ ಜೀವಸ್ಸರ್ವಗತಂ ಜೀವಾನ್ತರಂ ಶಂಸತೀತಿ ಯೋಜ್ಯಂ, ಸರ್ವಗತತಯಾ ಸರ್ವಜೀವಾಗ್ರಹಣಾಪಾತಾತ್'' ಇತಿ ವಾಕ್ಯಂ ದುರ್ಗಮತ್ವಾದ್ ದ್ವೇಧಾ ವ್ಯಾಚಷ್ಟೇ ಸರ್ವೇತಿ ।। ಸರ್ವಗತವಾಕ್ಯೇ' ''ಸರ್ವೇಷು ಭೂತೇಷ್ವೇತಂ'' ಇತಿ ವಾಕ್ಯೇ । ''ತಥಾ ಪ್ರತೀತ್ಯಭಾವೇನ ಕ್ಲಿಷ್ಟಕಲ್ಪನತ್ವಾಚ್ಚ'' ಇತಿ ತದುತ್ತರವಾಕ್ಯಂ ವ್ಯನಕ್ತಿ – ಕರ್ಮೀಭೂತೇತಿ ।

'ಕರ್ಮಕರ್ತೃ ವ್ಯಪದೇಶಾತ್' ಎಂಬ ಸೂತ್ರದಲ್ಲಿ 'ಆತ್ಮಾನಾಂ ಪ್ರರಸ್ಯೈ ಶಂಸತಿ' ಎಂಬುದಾಗಿ ಆತ್ಮನನ್ನು ಕರ್ಮವೆಂದು ಜೀವನನ್ನು ಕರ್ತೃವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಹೀಗೆ ಶಂಕೆ ಬರುತ್ತದೆ- ಸಕಲಜೀವರೂ ಸಹ ಸರ್ವಗತರೇ ಆಗಿದ್ದಾರೆ. ಸರ್ವಗತನಾದ ಒಬ್ಬ ಜೀವನು ಸರ್ವಗತನಾದ ಮತ್ತೊಬ್ಬ

ಜೀವನನ್ನು ಉಪದೇಶಿಸುತ್ತಾನೆಂದು ಹೇಳಬಹುದಲ್ಲವೇ? ಈ ಶಂಕೆಯನ್ನು ಟೀಕೆಯಲ್ಲಿ 'ಸರ್ವಗತತಯಾ ಸರ್ವಜೀವಗ್ರಹಣಾಪಾತಾತ್' ಎಂಬುದಾಗಿ ಉತ್ತರಿಸಿದ್ದಾರೆ. ಈ ವಾಕ್ಯವು ಸುಲಭವಾಗಿ ಅರ್ಥವಾಗದ ಕಾರಣ ಗ್ರಂಥದಲ್ಲಿ ಎರಡು ಬಗೆಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ 'ಸರ್ವಜೀವಾನಾಂ' ಇತ್ಯಾದಿಯಾಗಿ. ಸರ್ವಗತ ವಾಕ್ಯವೆಂದರೆ 'ಸರ್ವೇಷು ಭೂತೇಷು ವಿತಂ' ಎಂಬ ವಾಕ್ಯದಲ್ಲಿ 'ತಥಾ ಪ್ರತೀತ್ಯಭಾವೇನ ಕ್ಲಿಷ್ಟಕಲ್ಪನತ್ವಾಚ್ಚ' ಎಂಬ ಮುಂದಿನ ವಾಕ್ಯವನ್ನು 'ಕರ್ಮೀಭೂತ' ಇತ್ಯಾದಿಯಾಗಿ ವ್ಯಾಖ್ಯಾನಿಸಿದ್ದಾರೆ.

ಪ್ರಕಾಶಃ – ಕರ್ಮೀಭೂತಜೀವಸಙ್ಕೋಚೇ ಕ್ಲಿಷ್ಟಕಲ್ಪನತ್ವಮುಪಪಾದ್ಯ, ಯದುಕ್ತಂ ಕಶ್ಚಿತ್ಸರ್ವಗತೋ ಜೀವ ಇತಿ ''ಸ ಯ ಏವ'' ಇತ್ಯತ್ರ ತಚ್ಛಬ್ದೇನ ಸರ್ವಗತಃ ಕಶ್ಚಿದ್‌ಗೃಹ್ಯತ ಇತಿ, ತತ್ರಾಪಿ ಕ್ಲಿಷ್ಟಕಲ್ಪನತ್ವಂ ಧ್ಯೇಯಮಿತ್ಯಾಹ – **ನ ಕೇವಲಮಿತಿ** । 'ಅವಗುರೇತ್' ನಿನ್ದೇದಿತ್ಯರ್ಥಃ । ಶಿಷ್ಟಮುಪನ್ಯಾಸಮುಖೇನ ಸ್ಪಷ್ಟಮಿತಿ ಭಾವಃ ।।

ಇತಿ ಶ್ರೀಮತ್ಸರ್ವತನ್ತ್ರಸ್ವತನ್ತ್ರಸುಧೀನ್ದ್ರತೀರ್ಥಗುರುಪಾದಶಿಷ್ಯರಾಘವೇನ್ದ್ರಯತಿಕೃತೇ ಚನ್ದ್ರಿಕಾಪ್ರಕಾಶೇ ಸರ್ವಗತತ್ವಾಧಿಕರಣಂ ಸಮ್ಪೂರ್ಣಮ್ ।।೧।।

ಕರ್ಮೀಭೂತರಾದ ಜೀವರಲ್ಲಿ ಸಂಕೋಚ ಮಾಡುವುದಾದರೆ ಕ್ಲಿಷ್ಟಕಲ್ಪನೆಯನ್ನು ಮೊದಲು ಹೇಳಿ ಈಗ ಯಾರೋ ಒಬ್ಬ ಜೀವನು ಸರ್ವಗತನಾಗಿದ್ದಾನೆ. ಅವನೇ 'ಸ ಯ ಏವಂ' ಎಂಬಲ್ಲಿ 'ತತ್' ಶಬ್ದದಿಂದ ಸರ್ವಗತನೆಂದು ಪ್ರಸಿದ್ಧನಾಗಿದ್ದಾನೆ ಎಂದು ಆಕ್ಷೇಪಿಸಿದರೆ ಇದೂ ಸಹ ಕ್ಲಿಷ್ಟಕಲ್ಪನೆಯಾಗಿದೆ ಎಂದು 'ನ ಕೇವಲಂ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. 'ಅವಗುರೇತ್' ಎಂಬ ಪದಕ್ಕೆ 'ನಿಂದಿಸಿದರೆ' ಎಂದರ್ಥ. ಉಳಿದ ಟೀಕೆಯ ಕಠಿಣಪದಾರ್ಥಗಳು ಉಪನ್ಯಾಸಮುಖವಾಗಿ ವ್ಯಾಖ್ಯಾನಿಸುವ ಗ್ರಂಥದಲ್ಲಿಯೇ ಸ್ಪಷ್ಟವಾಗಿಯೇ ತಿಳಿಯುತ್ತದೆ.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ ಪ್ರಕಾಶಟಪ್ಪಣಿಯ ಕನ್ನಡಾನುವಾದದಲ್ಲಿ ಸರ್ವಗತತ್ವಾಧಿಕರಣವು ಮುಕ್ತಾಯವಾಯಿತು.

* * * * * * *

ಶ್ರೀಕೃಷ್ಣಾರ್ಪಣಮಸ್ತು.

ಗುರುರಾಜೀಯಮ್ – ನಚ ತಲ್ಲಿಙ್ಗಮನ್ಯಾಮಿವಿಷಯಮಿತ್ಯಾದಿಟೀಕಾऽನುಪಪನ್ನಾ । ತತ್ರ ಚಕ್ಷುರ್ಮಯತ್ವಾದೇರನ್ತರ್ಯಾಮಿವಿಷಯತ್ವೇ ಶಙ್ಕಿತೇऽರ್ಭಕೌಕಸ್ತ್ವಾಯೋಗಾದಿತಿ ಬಾಧಕಾನ್ತರಮುಚ್ಯತೇ । ತತ್ಕಿಂ ಚಕ್ಷುರ್ಮಯತ್ವಸ್ಯಾನ್ತರ್ಯಾಮಿವಿಷಯತ್ವಮಙ್ಗೀಕ್ರಿಯತೇ ನ ವಾ ನಾದ್ಯಃ। ತಥಾ ಸತಿ ಚಕ್ಷುರ್ಮಯತ್ವಾಯೋಗಾಚ್ಚೇತ್ಯುತ್ತರಟೀಕಾನುಪಪತ್ತಿಃ । ದ್ವಿತೀಯೇ ಚಕ್ಷುರ್ಮತ್ವಸ್ಯೈವ ಬಾಧಕತ್ವೇನ ವಕ್ತವ್ಯತ್ವೇನ ತತ್ಪರಿತ್ಯಜ್ಯಾರ್ಭಕೌಕಸ್ತ್ವಸ್ಯ ಬಾಧಕತ್ವೋಕ್ತಿರಯುಕ್ತಾ । ತಥಾ ಚ ಟೀಕಾ ಪೂರ್ವೋತ್ತರವಿರುದ್ಧತ್ವಾದನುಪಪನ್ನೇವೇತ್ಯತ ಆಹ – **ಪೂರ್ವಮಿತಿ** ।। ಅನೇನ ಚಕ್ಷುರ್ಮಯತ್ವಾಯೋಗಾಚ್ಚೇತ್ಯತ್ರ ತಸ್ಯ ಜೀವಧರ್ಮತ್ವಾದಿತಿ ಯುಕ್ತಿಃ ಸೂಚಿತಾ ಭವತಿ ।

अप्रतीतेर्व्याचष्टे – अत सातत्येति ।। ननु कथमेकस्मिञ्छरीरे जीवद्वय-सद्भावः । तथासति यावद्देहसद्भावमुभयोस्तत्र सद्भावेनोभयकर्मनिर्मितत्वापत्त्या सुखादिभोगस्स्यात् । सर्वस्यापि जीवान्तरत्वाज्जीवान्तरशब्देन किं विवक्षितमित्यतो व्याचष्टे – **स्वर्गाच्युत इति ।।** ननु सर्वजीवग्रहणापातादित्युक्तम् । तत्र किं सर्वेषु भूतेष्विति वाक्ये वा. सर्वगततया सर्वजीवग्रहणमुच्यते किं वा एतमात्मानमिति वाक्ये वा । नाद्यः । सर्वगतजीवानामेव सर्वजीवसाधारणस्य चक्षुर्मयत्वादेस्तत्र सद्भावने सर्वगततया सर्वजीवग्रहणोपपत्तेः । न द्वितीयः । तत्र कर्तृव्यतिरिक्त-सर्वगतजीवानामेव शंसनकर्मत्वापत्त्याऽनिष्टाभावात् । सर्वेषां सर्वगतत्वेऽपि केषाञ्चिदेतच्छब्देन परामर्शेऽपि बाधकाभावादित्यतस्तत्र बाधकं वक्तुं व्याचष्टे – **सर्वजीवानामिति ।।**

सर्वगतवाक्यानुसारेणैतमात्मानमिति वाक्यं व्याख्येयमित्युक्तम् ।। इदानीमेतमिति वाक्यानुसारेण सर्वगतवाक्यं व्याख्येयमित्याह – **यद्वेति ।। तद्वीयेतेत्यर्थ इति ।।** अंशे बाधादित्यर्थः । तद्व्यतिरिक्तिजीवपक्षाङ्गीकारे शंसनादिक र्तृत्वजीवान्यविवेकस्य शक्यत्वेन प्रतिज्ञायाः सम्भावनारूपत्वापत्तेः । विवेकेपि वा कर्तृजीवेषु परस्मा इत्युक्तासजीवविशेषेषु च व्यभिचारिणश्चक्षुर्मयत्वादिहेतोः कर्मीभूतजीवविशेषसर्वगतत्वसाधकत्वायोगात् । प्रथमपक्षतात्पर्यमप्येवं ज्ञेयम् ।। ।।

।। इति श्रीकेशवभट्टारकेण विरचितायां भावदीपिकायां
सर्वगतत्वाधिकरणम् सम्पूर्णम् ।। ।।

೦೧-ಸರ್ವಗತತ್ವಾಧಿಕರಣ

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಪಂಚಿಕಾ,
ಅಣುಭಾಷ್ಯ, ತತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿಃ,
ಸೂತ್ರಾರ್ಥರತ್ನಾವಳಿಃ

॥ ಶ್ರೀಗುರುಭ್ಯೋ ನಮಃ ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

सर्वगतत्वाधिकरणम् -१

ॐ सर्वत्र प्रसिद्धोपदेशात् ॐ ॥ १-२-१ ॥
ॐ विवक्षितगुणोपपत्तेश्च ॐ ॥ १-२-२ ॥
ॐ अनुपपत्तेस्तु न शारीरः ॐ ॥ १-२-३ ॥
ॐ कर्मकर्तृव्यपदेशाच्च ॐ ॥ १-२-४ ॥
ॐ शब्दविशेषात् ॐ ॥ १-२-५ ॥
ॐ स्मृतेश्च ॐ ॥ १-२-६ ॥
ॐ अर्भकौकस्त्वात्तद्व्यपदेशाच्च नेति चेन्न निचाय्यत्वादेवं व्योमवच्च ॐ ॥१-२-७ ॥
ॐ सम्भोगप्राप्तिरिति चेन्न वैशेष्यात् ॐ ॥ १-२-८ ॥

बहुलिङ्गसहितश्रुतेरपि सावकाशायाः निरवकाशश्रुत्यादीनामेव बलवत्त्वम् । बहवो ह्यत्रादित्यशब्दाः । क्षित्यादिषूक्त्वादित्येऽनुक्तिरित्यादिलिङ्गं च । तथाऽपि निरवकाशा एतमेवेत्यवधारणादयः ॥

ನ್ಯಾಯವಿವರಣೆ

ವಸ್ತುತಃ ಬಹಳವಾದ ಲಿಂಗಗಳಿಂದ ಸಹಿತವಾದ ಶ್ರುತಿಯು ಪೂರ್ವಪಕ್ಷದಲ್ಲಿರಬಹುದು. ಆದರೂ ಸಹ ಪೂರ್ವಪಕ್ಷದಲ್ಲಿರುವ ಶ್ರುತಿಲಿಂಗಾದಿಗಳು ಸಾವಕಾಶಗಳಾಗಿವೆ. ಇವುಗಳಿಗಿಂತ ಸಿದ್ಧಾಂತದಲ್ಲಿರುವ ಶ್ರುತಿಲಿಂಗಾದಿಗಳು ನಿರವಕಾಶವಾದ್ದರಿಂದ ಬಲಿಷ್ಠವಾಗಿವೆ. ಆದಿತ್ಯನನ್ನು ಪ್ರತಿಪಾದಿಸುವ ಶಬ್ದಗಳು ಬಹಳ ಇವೆ. ಭೂಮ್ಯಾದಿಗಳಲ್ಲಿದ್ದಾನೆಂದು ಹೇಳಿ 'ಏತಮಾದಿತ್ಯೇ'

ಆದಿತ್ಯನಲ್ಲಿದ್ದಾನೆಂದು ಹೇಳದಿರುವಿಕೆಯೆಂಬ ಲಿಂಗವು ಇದೆ. ಆದರೂ ಸಹ ಸಿದ್ಧಾಂತದಲ್ಲಿರತಕ್ಕ ಹೇತುಗಳು 'ಏತಮೇವ' ಎಂದು ಅವಧಾರಣಸಹಿತವಾದ ಬ್ರಹ್ಮಶಬ್ದಾದಿಗಳು ನಿರವಕಾಶಗಳಾಗಿವೆ.

ನ್ಯಾಯವಿವರಣಪಞ್ಜಿಕಾ

वाक्यार्थमञ्जरी – ॥ ॐ **प्रकरणाच्च** ॐ ॥ अप्संवत्सरसृष्ट्यादिना वैष्णवत्वेन निश्चितेनवेह **किञ्चनेत्यादिप्रकरणबलाच्चात्ता विष्णुरेवेत्यर्थः** ॥ **नैवेह किञ्चनेति** ॥ अग्रे प्रलये । इह अस्वतन्त्रवर्गे । किञ्चनजीवजडरूपंनैवासीत् । अनादिसिद्धजीवादेः सत्वात् कथमेतदित्यत उक्तम् – **मृत्युनैवेति** ॥ पृथङ् नासीदिति भावः । मृत्योरावरकत्वे हेतुः ॥ **अशनायेति** ॥ अश्यत इत्यशं जगत्, तं नयतीत्यशनाया । अन्यत्र नेतृत्वप्रतीतावपि श्रुतिषु प्रसिद्धेः स एव नेतेत्याह – **अशनाया हीति** ॥ मृत्युरशनाया हीति श्रुत्यादिप्रसिद्धमित्यर्थः । यस्मान्मृत्युः स्वयमेवासीदन्यन्नैवासीत्तस्मादात्मन्वी आत्मवान् । जगद्रूपशरीरवान् स्यामिति मनो कुरुत ऐच्छत् । स मृत्युः शरीररूपजगत्सिसृक्षयासृष्ट्यर्थं मनो कुरुतेति शेषः । तदनन्तरं स मृत्युरर्चयन् आत्मानं पूजयन् अचरत् चचार । तस्य अर्चयतः पूजयतः मृत्योः सकाशात् पूजासाधनभूता आपो जायन्त इत्यर्थः ॥ **तयेति** ॥ तत् तत्राप्सु । य अपां शरः फेनरूपो मण्ड आसीत् । स शरः मृत्युना स्वरेतसा समहन्यत । सङ्घातत्वं घनीभावमिति यावत् प्रापितः । यः सङ्घातः सा पृथिवी ब्रह्माण्डरूपाभावात् । मृत्युनामा जनार्दनः तस्यां पृथिव्यामश्राम्यत् शिश्य इत्यर्थः ।

सोऽकामयतेति स मृत्युनामा भगवान् मे ममात्मा ब्रह्मा द्वितीयो वाय्वपेक्षया जायेतेत्यकामयद् ऐच्छत् । तत् तदनन्तरम् । अशनायां द्वितीया प्रथमार्थे । सर्वाशननेता मृत्युर्मनसा स्वेच्छयैव वाचं वेदाभिमानिनीं श्रियं मिथुनं द्वन्द्वभावं समभवत् ।।

तत् तेन मिथुनीभावेन यद्रेत आसीत् स तदुपादानकदेहवान् संवत्सरः । सम्यगात्मनो वत्सान् पुत्रान् देवादीन् रमयतीति संवत्सरनामा चतुर्मुखोऽभवदित्यर्थः ।। **तं जातमिति ।।** मृत्युः जातं तं संवत्सरमभि अभिलक्ष्य अत्तुमिति यावत् । व्यददात् स्वमुखं विददार । संवत्सरो भयात् भाणं, भाणिति वाचमकरोत् निःसारितवान् । यद्भणिति वचः सैव तदभिमानी सरस्वत्यभवत् । अभिमन्यमानशब्दोच्चारणकाल एवाभिमानिनी देव्यभवदिति यावत् ।। **स इति ।।** स मृत्युः कृतरवं कुमारमालोक्य ऐक्षद् विचारमकरोत् । किमिति? यदीमं जातं संवत्सरम् अभिमंस्ये लीनं करिष्ये, तदा कनीयोऽल्पमन्नं करिष्ये अतोबह्वन्नं भवत्वित्यालोच्य-समृत्युस्तया पूर्वोत्पन्नया वाचा गायत्र्या तेन आत्मना चतुर्मुखेन चेदं सर्वमसृजत् जनयामासेत्यर्थः । स्मृतौ सोऽत्मनः स आत्मनः मन्त्रेष्वाङ्यादेरात्मनीत्याकारलोपः।।

।। इति श्रीशर्कराश्रीनिवासविचचिता वाक्यार्थमञ्जर्याम् अत्तृत्वाधिकरणम् ।।

ಅತ್ಮತ್ವಾಧಿಕರಣ
(೧-೨-೨)

ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ, ಗುರುರಾಜೀಯ,
ಭಾಟ್ಟಸಂಗ್ರಹ, ಶಂಕರಭಾಷ್ಯ, ಭಾಮತೀ,
ಶ್ರೀಭಾಷ್ಯ, ಶ್ರುತಪ್ರಕಾಶ ಇವುಗಳ ಆಯ್ದ ಭಾಗಗಳು

॥ ಶ್ರೀಲಕ್ಷ್ಮೀಪಯಗ್ರೀವೋ ವಿಜಯತೇತಮಾಮ್ ॥
॥ ಶ್ರೀಮಧ್ವರಾಜೋ ವಿಜಯತೇತರಾಮ್ ॥
॥ ಶ್ರೀಗುರುಭ್ಯೋ ನಮಃ ॥

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯವ್ಯಾಸತೀರ್ಥವಿರಚಿತಾ

ತಾತ್ಪರ್ಯಚಂದ್ರಿಕಾ

अथ अत्तृत्वाधिकरणम्

ಪ್ರತ್ಯುದಾಹರಣ ಸಂಗತಿಯ ಪ್ರದರ್ಶನ

॥ ॐ अत्ता चराचरग्रहणात् ॐ ॥

अत्र पूर्ववैषम्यप्रदर्शनेन पूर्वपक्षोत्थानादनन्तरसङ्गतिः ।

अत्र ''सर्वं वा अत्तीति तददितेरदितित्वम्'' इत्युक्तमत्तृत्वं किमदितेर्विष्णोर्वेति चिन्ता । तदर्थं सर्वशब्दसङ्कोचकमस्ति न वेति । तदर्थं ''सर्वं वै'' इति वाक्यं किं प्रसिद्धेऽर्थे शब्दान्वाख्यापकं, किं वा प्रसिद्धार्थं बाधित्वा योगोक्त्या तत्तदत्तुमध्रियत'' इति प्रतिज्ञाते सर्वात्तृत्वेन हेतुपरमिति ॥

ಅನುವಾದ - ಈ ಅಧಿಕರಣದಲ್ಲಿ ಹಿಂದಿನ ಅಧಿಕರಣದ ಪೂರ್ವಪಕ್ಷಕ್ಕಿಂತ ವಿಲಕ್ಷಣವಾದ ಪೂರ್ವಪಕ್ಷವು ಹುಟ್ಟುತ್ತಿರುವುದರಿಂದ ಆನಂತರಸಂಗತಿ ಇರುತ್ತದೆ. ''ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಮ್'' ಎಂಬುದು ವಿಷಯವಾಕ್ಯ. ಈ ವಾಕ್ಯದಲ್ಲಿ ಹೇಳಲ್ಪಟ್ಟ ಅತ್ತೃತ್ವವು ಅದಿತಿಯ ಧರ್ಮವೋ ಅಥವಾ ವಿಷ್ಣುವಿನ ಧರ್ಮವೋ ? ಎಂದು ಸಂಶಯ. ಇದಕ್ಕಾಗಿ ಸರ್ವಶಬ್ದವನ್ನು ಸಂಕೋಚ ಮಾಡಬೇಕೋ ಬೇಡವೋ ? ಎಂಬ ಸಂಶಯ ಹುಟ್ಟುತ್ತದೆ. ಇದರ ನಿರ್ಣಯಕ್ಕಾಗಿ 'ಸರ್ವಂ ವೈ' ಎಂಬ ವಾಕ್ಯವು ಪ್ರಸಿದ್ಧಾರ್ಥದಲ್ಲಿ ಪ್ರವೃತ್ತಿನಿಮಿತ್ತವನ್ನು ಉತ್ಪಾದನೆ ಮಾಡುತ್ತದೋ ಅಥವಾ ಪ್ರಸಿದ್ಧಾರ್ಥವನ್ನು ಬಾಧಿಸಿ ಯೋಗವೃತ್ತಿಯಿಂದ 'ತತ್ತದತ್ತುಮಧ್ರಿಯತ' ಎಂದು ಪ್ರತಿಜ್ಞೆ ಮಾಡಿದರೆ ಸರ್ವಾತ್ತಕ್ಕೆ ಹೇತುಪರವಾಗುತ್ತದೋ ಎಂಬ ಸಂಶಯವು ಬರುತ್ತದೆ.

ಶ್ರೀರಾಘವೇಂದ್ರತೀರ್ಥವಿರಚಿತ
ಪ್ರಕಾಶ

प्रकाशः – ।। श्रीः ।। ॐ अत्ता चराचरग्रहणात् ॐ ।। अत्र भाष्यदिशा जन्मादिसूत्रानन्तर्यभावेऽपि तत् फलपरमिति भावेन पूर्वेण प्रत्युदाहरणसङ्गतिमाह – **अत्रेति । वैषम्यं चाग्रे स्पष्टम् ।**

ವಿವರಣೆ - ಅತ್ಯತ್ವಾಧಿಕರಣವು ಪ್ರಾರಂಭವಾಗುತ್ತಿದೆ. ಭಾಷ್ಯದ ಪ್ರಕಾರ ಈ ಅಧಿಕರಣವು ಜನ್ಮಾದಿಸೂತ್ರದ ಅನಂತರ ಪ್ರಸಕ್ತವಾಗಬೇಕಿತ್ತು. ಆದರೆ ಜನ್ಮಾದಿಸೂತ್ರದ ಪ್ರಮೇಯದ ಸಿದ್ಧಿಯು ಈ ಅಧಿಕರಣದ ಫಲರೂಪವಾಗಿರುವುದರಿಂದ ಭಾಷ್ಯದಲ್ಲಿ ಜನ್ಮಾದಿಸೂತ್ರದಿಂದ ಸಂಗತಿಯನ್ನು ತೋರಿಸಿಲ್ಲ ಹೊರತಾಗಿ ಫಲವನ್ನಷ್ಟೇ ತೋರಿಸಿದ್ದಾರೆಂದು ತಿಳಿಯಬೇಕು. ಆದ್ದರಿಂದ ಹಿಂದಿನ ಅತ್ಯತ್ವಾಧಿಕರಣದಿಂದ ಈ ಅಧಿಕರಣಕ್ಕೆ ಪ್ರತ್ಯುದಾಹರಣ ಎಂಬ ಸಂಗತಿಯನ್ನು 'अत्र' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ.

ಹಿಂದಿನ ಅಧಿಕರಣದ ಪೂರ್ವಪಕ್ಷಕ್ಕಿಂತ ವಿಲಕ್ಷಣವಾದ ಪೂರ್ವಪಕ್ಷವನ್ನು ಈ ಅಧಿಕರಣದಲ್ಲಿ ಮಾಡಲಾಗಿದೆ. ವೈಲಕ್ಷಣ್ಯವು ಮುಂದಿನ ಭಾಗದಿಂದ ಸ್ಪಷ್ಟವಾಗುತ್ತದೆ.

प्रकाशः – एतेन टीकोक्तरीत्याऽदितिश्रुतेस्सावकाशत्वात् लिङ्गस्य निरवकाशत्वात् स्वत एव लिङ्गमन्यत्रप्रसिद्धं, नतु श्रुतितः, प्रत्युत लिङ्गाच्छ्रुतिरेव पूर्वत्रेवान्यत्रप्रसिद्धेति कथं लिङ्गस्य तत्साहित्येन तथात्वेक्तिरिति निरस्तम् ।

ಹೀಗೆ ಹೇಳಿದ್ದರಿಂದ ಮತ್ತೊಂದು ಶಂಕೆಯು ನಿರಸ್ತವಾಯಿತು. ಆ ಶಂಕೆಯು ಹೀಗಿದೆ - ಟೀಕೆಯಲ್ಲಿ ಹೇಳಿದಂತೆ ಅದಿತಿಶ್ರುತಿಯು ಸಾವಕಾಶವಾಗಿದೆ. ಅದಿತಿತ್ವಲಿಂಗವು ನಿರವಕಾಶವಾಗಿದೆ. ಆದ್ದರಿಂದ ಲಿಂಗವು ಸ್ವತಃ ಅನ್ಯತ್ರ ಪ್ರಸಿದ್ಧವಾಗಿದೆ ಹೊರತು ಶ್ರುತಿಯ ಬೆಂಬಲದಿಂದ ಅನ್ಯತ್ರಪ್ರಸಿದ್ಧವಾಗಿಲ್ಲ. ಹೊರತಾಗಿ ಲಿಂಗದ ಬೆಂಬಲದಿಂದಲೇ ಶ್ರುತಿಯು ಹಿಂದಿನ ಅಧಿಕರಣದಂತೆ ಅನ್ಯತ್ರಪ್ರಸಿದ್ಧವಾಗಿದೆ. ಹೀಗಿರುವಾಗ ಲಿಂಗಕ್ಕೆ ಶ್ರುತಿಸಾಹಿತ್ಯದಿಂದ ನಿರವಕಾಶತ್ವವನ್ನು ಹೇಗೆ ಹೇಳಿದಿರಿ? ಎಂದು.

प्रकाशः – **पूर्ववैषम्यस्य श्रुतेर्निरवकाशत्वस्य च वक्ष्यमाणत्वात् । लोकतः श्रुतेरेवान्यत्र रूढत्वाच्च । अत एव टीकायां 'लोकतः' इत्युक्तम् ।**

न चैवं नामैव समन्वीयतामिति वाच्यं, पादसङ्गत्यर्थं सर्वात्तृत्वरूपापूर्वगुण लाभार्थं च लिङ्गस्यैव समन्वयोक्तेरिति ।

ಮೇಲಿನ ಶಂಕೆಗೆ ಈಗ ಅವಕಾಶವಿಲ್ಲ. ಏಕೆಂದರೆ ಹಿಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ವೈಷಮ್ಯವನ್ನು ತೋರಿಸುವುದಕ್ಕಾಗಿ ಶ್ರುತಿಗೆ ನಿರವಕಾಶತ್ವವನ್ನು ಮುಂದೆ ಸಮರ್ಥಿಸುತ್ತಾರೆ. ಮತ್ತು ಶ್ರುತಿಯು

ಲೋಕದಲ್ಲಿ ಅನ್ಯತ್ರ ನಿರೂಢವಾಗಿದೆ. ಆದ್ದರಿಂದಲೇ ಟೀಕೆಯಲ್ಲಿ 'ಲೋಕತಃ' ಎಂಬ ಮಾತು ಕಾಣಿಸುತ್ತದೆ. ಆದ್ದರಿಂದ ಲಿಂಗವು ನಿರವಕಾಶವಾಗಿಲ್ಲ ಹೊರತಾಗಿ ಶ್ರುತಿಯೇ ನಿರವಕಾಶವಾಗಿದೆ.

ಹಾಗಾದರೆ ಅದಿತಿಶ್ರುತಿಯನ್ನೇ ಸಮನ್ವಯ ಮಾಡಬಹುದಲ್ಲವೇ? ಎಂದು ಕೇಳಬಾರದು. ಇದು ಲಿಂಗಪಾದವಾದ್ದರಿಂದ ಪಾದಸಂಗತಿಗೋಸ್ಕರ ಮತ್ತು ಸರ್ವಾತ್ಮತ್ವವೆಂಬ ಅಪೂರ್ವಗುಣದ ಲಾಭಕ್ಕಾಗಿ ಸರ್ವಾತ್ಮತ್ವವೆಂಬ ಲಿಂಗವನ್ನೇ ಸಮನ್ವಯ ಮಾಡಬೇಕು..

ಪ್ರಕಾಶಃ – ಸಂಶಯಟೀಕಾಂ ವ್ಯನಕ್ತಿ – ಅತ್ರೇತಿ । ''ಸ ಯದ್ಯದೇವಾಸೃಜತ ತತ್ತದತ್ತುಮಧ್ರಿಯತ, ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಮ್'' ಇತಿ ಬೃಹದಾರಣ್ಯಕೇ ತೃತೀಯೇऽಧ್ಯಾಯೇ ''ಸಃ ಅದಿತಿಃ ಯದ್ಯದೇವಾಸೃಜತ ತತ್ತದತ್ತುಂ ಮನೋऽಧ್ರಿಯತ ಆದಚ್ಚ । ಕುತಃ, ಸರ್ವಾತ್ರೀ ಸಾ । ಸರ್ವಂ ವಾ ಅತ್ತೀತಿ ಯತ್, ತದೇವ ಹ್ಯದಿತೇರದಿತಿತ್ವಮ್' ಇತಿ ಟೀಕ್ತೋಕ್ತದಿಶಾ ಶ್ರುತಂ ಸರ್ವಸಂಹರ್ತೃತ್ವರೂಪಮತ್ತೃತ್ವಮ್ ಇತ್ಯರ್ಥಃ । **ಪ್ರಸಿದ್ಧೇऽರ್ಥ ಇತಿ ।** ಅದಿತಿರೂಪದೇವತಾಯಾಂ ಅದಿತಿಶಬ್ದಪ್ರವೃತ್ತಿನಿಮಿತ್ತ-ವ್ಯುತ್ಪಾದಕಮಿತ್ಯರ್ಥಃ ।

ಸಂಶಯಟೀಕೆಯನ್ನು 'ಅತ್ರ' ಇತ್ಯಾದಿವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ''ಸ ಯದ್ಯದೇವಾಸೃಜತ ತತ್ತದತ್ತುಮಧ್ರಿಯತ, ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಮ್'' ಎಂಬುದಾಗಿ ಬೃಹದಾರಣ್ಯಕದ ಮೂರನೆಯ ಅಧ್ಯಾಯದಲ್ಲಿ ಪ್ರಸಕ್ತವಾಗಿದೆ. ಇದಕ್ಕೆ ಟೀಕೆಯಲ್ಲಿ ''ಸಃ ಅದಿತಿಃ ಯದ್ಯದೇವಾಸೃಜತ ತತ್ತದತ್ತುಂ ಮನೋऽಧ್ರಿಯತ ಆದಾಚ್ಚ । ಕುತಃ, ಸರ್ವಾತ್ರೀ ಸಾ । ಸರ್ವಂ ವಾ ಅತ್ತೀತಿ ಯತ್, ತದೇವ ಹ್ಯದಿತೇರದಿತಿತ್ವಮ್'' ಎಂದು ವ್ಯಾಖ್ಯಾನಿಸಿದ್ದಾರೆ. ಇದರಿಂದ ಸರ್ವಸಂಹರ್ತೃತ್ವವೆಂಬ ಅತ್ತೃತ್ವವನ್ನು ಹೇಳಿದಂತಾಗುತ್ತದೆ. 'ಪ್ರಸಿದ್ಧೇऽರ್ಥಃ' ಎಂದರೆ ಅದಿತಿ ಎಂಬ ದೇವತೆಯಲ್ಲಿ ಎಂದರ್ಥ. ಶಬ್ದಾನ್ವಖ್ಯಾಪಕಮ್ ಎಂದರೆ ಅದಿತಿಶಬ್ದ ಪ್ರವೃತ್ತಿನಿಮಿತ್ತಕ್ಕೆ ವ್ಯುತ್ಪಾದಕವಾದದ್ದು ಎಂದರ್ಥ.

ಪ್ರಕಾಶಃ – ಹೇತುಪರಮಿತಿ । ಯಸ್ಮಾತ್ಸರ್ವಾತ್ತೃತ್ವಾದೇವ ಅದಿತಿತ್ವಮತಃ ಸರ್ವಮತ್ತುಂ ಮನೋऽಕುರುತೇತಿ ಹೇತುಪರಮಿತ್ಯರ್ಥಃ ।

ಯದ್ಯನ್ವಾಖ್ಯಾಪಕಂ ತದಾ ತತ್ರ ಸಮ್ಭಾವಿತಕತಿಪಯಾತ್ತೃತ್ವಸ್ಯೈವ ಗ್ರಾಹ್ಯತ್ವೇನ ಸರ್ವಶಬ್ದ-ಸಙ್ಕೋಚಾದದಿತಿರೇವೇತಿ ಪೂರ್ವಪಕ್ಷೇ ಫಲಮ್,

ಯದಿ ಹೇತುಪರಂ ತದಾ ಸಙ್ಕೋಚಕಾಭಾವಾದ್ವಿಷ್ಣುರೇವೇತಿ ಸಿದ್ಧಾನ್ತೇ ಫಲಮಿತಿ ಸ್ಪಷ್ಟತ್ವಾನ್ನೋಕ್ತಮ್ ।

'ಹೇತುಪರಂ' ಎಂದರೆ ಯಾವ ಕಾರಣದಿಂದ ಸರ್ವಾತ್ಮತ್ವಗುಣವಿರುವುದರಿಂದಲೇ ಅದಿತಿತ್ವವು ಬರುತ್ತದೋ ಆದ್ದರಿಂದಲೇ ಸರ್ವವನ್ನು ತಿನ್ನಲು ಮನಸ್ಸು ಮಾಡಲಾಯಿತು ಎಂದರ್ಥ.

ಒಂದು ವೇಳೆ ಈ ವಾಕ್ಯವು ಅದಿತಿಶಬ್ದ ಪ್ರವೃತ್ತಿನಿಮಿತ್ತಕ್ಕೆ ವ್ಯುತ್ಪಾದಕವಾಗಿದ್ದಲ್ಲಿ ಆವಾಗ ಸಂಭಾವಿತವಾದ ಕೆಲವು ಪದಾರ್ಥಗಳ ಆತ್ಮತ್ವವನ್ನೇ ಹೇಳಬೇಕಾಗುತ್ತದೆ. ಸರ್ವಶಬ್ದಕ್ಕೆ ಸಂಕೋಚ ಮಾಡಿದ್ದರಿಂದ ಅದಿತಿಯೇ ಆತ್ಮತ್ವಗುಣವುಳ್ಳವಳಾಗುತ್ತಾನೆ. ಇದು ಪೂರ್ವಪಕ್ಷದ ಫಲ.

ಒಂದು ವೇಳೆ ಈ ವಾಕ್ಯವು ಹೇತು ಪರವಾದರೆ ಆವಾಗ ಸರ್ವಶಬ್ದಕ್ಕೆ ಸಂಕೋಚ ಮಾಡಲು ಕಾರಣವಿಲ್ಲದ್ದರಿಂದ ವಿಷ್ಣುವೇ ಆತ್ಮತ್ವಗುಣವುಳ್ಳವನಾಗುತ್ತಾನೆ. ಇದು ಸಿದ್ಧಾಂತದ ಫಲ. ಈ ಎರಡು ವಿಧ ಫಲಗಳು ಸ್ಪಷ್ಟವಾಗಿರುವುದರಿಂದ ಗ್ರಂಥಕಾರರು ಹೇಳಿರುವುದಿಲ್ಲ.

ಸಾರ

ಆತ್ಮತ್ವಾಧಿಕರಣವು ಪ್ರಾರಂಭವಾಗುತ್ತಿದೆ. 'ತತ್ಪದತ್ತುಮಧ್ಯಿತ' ಎಂಬುದು ಈ ಅಧಿಕರಣದ ವಿಷಯವಾಕ್ಯ. ಈ ವಿಷಯವಾಕ್ಯದಲ್ಲಿ ಸಕಲ ಪದಾರ್ಥಗಳ ಆತ್ಮತ್ವವನ್ನು ಅದಿತಿಗೆ ಹೇಳಲಾಗಿದೆ. ಇಲ್ಲಿರುವ ಅದಿತಿ ಶಬ್ದವು ದೇವಮಾತೆಯಾದ ಅದಿತಿದೇವಿಯನ್ನು ಹೇಳುತ್ತಿದೆಯೋ ಅಥವಾ ವಿಷ್ಣುವನ್ನು ಹೇಳುತ್ತಿದೆಯೋ? ಎಂದು ಸಹಜವಾಗಿ ಸಂಶಯ ಬರುತ್ತದೆ.

ಒಂದು ವೇಳೆ ಕೆಲವು ಪದಾರ್ಥಗಳನ್ನಷ್ಟೇ ಸರ್ವಶಬ್ದವು ಹೇಳುವುದಾದರೆ ಕೆಲವು ಪದಾರ್ಥಗಳನ್ನು ಅದಿತಿದೇವಿಯು ತಿನ್ನುವುದರಿಂದ ಅದಿತಿಯಲ್ಲಿಯೇ ಆತ್ಮತ್ವಧರ್ಮವು ಬರುತ್ತದೆ. ಅದಿತಿ ಶಬ್ದವು ಅದಿತಿದೇವಿಯಲ್ಲಿ ರೂಢವಾಗಿರುವುದೂ ಸಹ ಮತ್ತೊಂದು ಕಾರಣ.

ಒಂದು ವೇಳೆ ಸರ್ವಶಬ್ದಕ್ಕೆ ಸಂಕೋಚ ಮಾಡದಿದ್ದರೆ ಸಕಲ ಪದಾರ್ಥಗಳನ್ನು ತಿನ್ನುವ ವಿಷ್ಣುವನ್ನೇ ಅದಿತಿಯೆನ್ನಬೇಕಾಗುತ್ತದೆ. ಇದರಿಂದ ಸಕಲ ಸಂಹರ್ತೃತ್ವ ಎಂಬ ಗುಣವು ವಿಷ್ಣುವಿನಲ್ಲಿ ಸಿದ್ಧವಾಗುತ್ತದೆ.

• • • • •

ಅದಿತಿಶ್ರುತಿ ಹಾಗೂ ಅದಿತಿತ್ವಲಿಂಗಗಳಿಂದ ಪೂರ್ವಪಕ್ಷ

तात्पर्यचन्द्रिका

पूर्वपक्षस्तु – युक्तमादित्यश्रुतिसहचरितमपि सर्वगतत्वं विष्णौ, ''अन्तः'' इत्यत्र तत्पर्यायसवितृशब्दसमन्वयस्य सिद्धेः । अदितिशब्दपर्यायस्यापि न तत्र सिद्धिः । तथा च अदितिरेवात्री, ''तददितेरदितित्वं'' इत्यदितिश्रुतेरदितित्व-लिङ्गाच्च । तदुक्तं न्यायविवरणे – ''श्रुतिर्लिङ्गं च अदितिशब्दोऽदितित्वं च'' इति ।

नन्वत्र टीकायामुक्तन्यायेन श्रुतेस्सावकाशत्वे शङ्किते तामनुक्त्वा, लिङ्गमुक्त्वा, ''न ह्यदितिभिन्नस्यादितित्वं'' इति लिङ्गस्य निरवकाशत्वं चोक्तम्, तत्कथम्, अदितिश्रुतेर्ब्रह्मणि मुख्यत्वे अमुख्यत्वे वा अदितित्वलिङ्गस्यापि तत्र मुख्यस्यामुख्यस्य वा सम्भवादिति चेत्,

उच्यते, तीरादौ गङ्गादिपदप्रयोगेऽपि 'तीरे गङ्गात्वं' इत्यप्रयोगात् श्रुतेर्ब्रह्मण्य-मुख्यत्वेन सम्भवेऽपि लिङ्गस्यामुख्यत्वेनाप्यसम्भव इति टीकाभिप्रायः ।

ಅನುವಾದ - ಪೂರ್ವಪಕ್ಷ ಹೀಗಿದೆ - ಹಿಂದಿನ ಅಧಿಕರಣದಲ್ಲಿ ಆದಿತ್ಯಶ್ರುತಿಯ ಜೊತೆಗೆ ಹೇಳಲ್ಪಟ್ಟಿದ್ದರೂ ಸಹ ಸರ್ವಗತತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸಲಾಯಿತು. ಏಕೆಂದರೆ ಅಂತರಧಿಕರಣದಲ್ಲಿ ಆದಿತ್ಯಶಬ್ದಕ್ಕೆ ಪರ್ಯಾಯಶಬ್ದವಾಗಿರುವ ಸವಿತೃಶಬ್ದದ ಸಮನ್ವಯವನ್ನು ಮಾಡಲಾಗಿತ್ತು. ಆದರೆ ಅದಿತಿಶಬ್ದದ ಪರ್ಯಾಯಶಬ್ದವನ್ನು ಅಂತರಧಿಕರಣದಲ್ಲಿ ಸಮನ್ವಯ ಮಾಡಿಲ್ಲ. ಆದ್ದರಿಂದ ಅದಿತಿದೇವಿಯೇ ಅತ್ಯುತ್ತಮಗುಣವುಳ್ಳವಳಾಗುತ್ತಾಳೆ. ಈ ವಿಷಯದಲ್ಲಿ 'ತದದಿತೇಃ ಅದಿತಿತ್ವಂ' ಎಂಬ ಶ್ರುತಿಯಿಂದ ತಿಳಿಯುವ ಅದಿತಿಶ್ರುತಿ ಹಾಗೂ ಲಿಂಗ ಎರಡು ಪ್ರಮಾಣಗಳಿವೆ. ಈ ವಿಷಯವನ್ನೇ ನ್ಯಾಯವಿವರಣದಲ್ಲಿ ''ಶ್ರುತಿಲಿಂಗಂಚಾದಿತಿಶಬ್ದೋऽದಿತಿತ್ವಂಚ'' ಅದಿತಿ ಶಬ್ದವೆಂಬ ಶ್ರುತಿಯು ಅದಿತಿತ್ವ ಎಂಬ ಲಿಂಗವು ಪೂರ್ವಪಕ್ಷ ಪ್ರಾಪಕವೆಂದು ಹೇಳಿದ್ದಾರೆ.

ಆಕ್ಷೇಪ - ಅದಿತಿಶ್ರುತಿ ಹಾಗೂ ಅದಿತಿತ್ವ ಲಿಂಗ ಎರಡನ್ನೂ ನಿರವಕಾಶ ಪ್ರಮಾಣಗಳೆನ್ನುತ್ತಿದ್ದೀರಿ. ಆದರೆ ಟೀಕೆಯಲ್ಲಿ ಅಂತರಧಿಕರಣದ ನ್ಯಾಯದಿಂದ ಶ್ರುತಿಯು ಸಾವಕಾಶವಾಗಿದೆಯೆಂದು ಶಂಕಿಸಿದ್ದಾರೆ. ಸಾವಕಾಶವಾದ್ದರಿಂದಲೇ ಪೂರ್ವಪಕ್ಷಪ್ರಾಪಕವಾಗುವುದಿಲ್ಲವೆಂದು ಒಪ್ಪಿ ಲಿಂಗವನ್ನಷ್ಟೇ ಹೇಳಿದ್ದಾರೆ. ಮತ್ತು ''ನ ಹ್ಯದಿತಿಭಿನ್ನಸ್ಯಾದಿತಿತ್ವಂ'' ಅದಿತಿತ್ವಲಿಂಗವು ಅದಿತಿದೇವಿಯನ್ನು ಬಿಟ್ಟು ಬೇರೆ ಯಾರಲ್ಲಿಯೂ ಇಲ್ಲವೆಂದು ಅದಿತಿತ್ವಲಿಂಗಕ್ಕೆ ನಿರವಕಾಶತ್ವವನ್ನು ಹೇಳಿದ್ದಾರೆ. ಇದು ಹೇಗೆ ಕೂಡುತ್ತದೆ? ಏಕೆಂದರೆ ಅದಿತಿಶ್ರುತಿಯು ಬ್ರಹ್ಮನಲ್ಲಿ ಮುಖ್ಯವೃತ್ತಿಯಿಂದ ಅಥವಾ ಅಮುಖ್ಯವೃತ್ತಿಯಿಂದ ಕೂಡಿದರೆ ಮಾತ್ರ ಅದಿತಿತ್ವ ಲಿಂಗವೂ ಬ್ರಹ್ಮನಲ್ಲಿ ಮುಖ್ಯವೃತ್ತಿಯಿಂದ ಅಥವಾ ಅಮುಖ್ಯವೃತ್ತಿಯಿಂದ ಕೂಡಲು ಸಾಧ್ಯ. ಆದರೆ ನೀವು ಅದಿತಿಶ್ರುತಿಯನ್ನು ಒಪ್ಪದೆ ಅದಿತಿತ್ವಲಿಂಗವನ್ನು ಮಾತ್ರ ಒಪ್ಪುತ್ತಿದ್ದೀರಿ. ಇದು ಹೇಗೆ ಸಾಧ್ಯ ?

ಸಮಾಧಾನ - ಶ್ರುತಿಯು ಉಪಪನ್ನವಾಗದಿದ್ದರೂ ಲಿಂಗವು ಉಪಪನ್ನವಾಗುತ್ತದೆ. ಉದಾಹರಣೆ - ತೀರದಲ್ಲಿ ಗಂಗಾಪದದ ಪ್ರಯೋಗವಿದೆ. ಆದರೆ ತೀರದಲ್ಲಿ 'ಗಂಗಾತ್ವಂ' ಎಂಬುದರ ಪ್ರಯೋಗವಿಲ್ಲ. ಅದರಂತೆ ಶ್ರುತಿಯು ಬ್ರಹ್ಮನಲ್ಲಿ ಅಮುಖ್ಯವಾಗಿ ಕೂಡಿದರೂ ಸಹ ಲಿಂಗವು ಅಮುಖ್ಯವೃತ್ತಿಯಿಂದ ಕೂಡುವುದಿಲ್ಲವೆಂದು ಟೀಕೆಯ ಅಭಿಪ್ರಾಯ.

प्रकाशः —

अत्र सन्दिग्धश्रुतिलिङ्गाभ्यां निश्चितलिङ्गप्रकरणयोरेव बलवत्त्वं, ''सन्दिग्धश्रुतिर्लिङ्गं चादितिशब्दोऽदितित्वं च'' इति न्यायविवरणे श्रुतेरेव सन्दिग्धत्वविशेषणात्, लिङ्गस्य तदविशेषणात्, भाष्यटीकायां न्यायविवरणटीकायां च श्रुतेरन्तर्नयन्यायेन सावकाशत्वमुपेत्य लिङ्गस्य निरवकाशत्वेन पूर्वपक्षः कृतः ।

ಈ ಅಧಿಕರಣದ ನ್ಯಾಯವಿವರಣದಲ್ಲಿ ಹೀಗೆ ಹೇಳಲಾಗಿದೆ - ಸಂದಿಗ್ಧಶ್ರುತಿಲಿಂಗಾಭ್ಯಾಂ ನಿಶ್ಚಿತಲಿಂಗಪ್ರಕರಣಯೋರೇವ ಬಲವತ್ತ್ವಂ ''ಸಂದಿಗ್ಧಶ್ರುತಿರ್ಲಿಂಗಂ ಚಾದಿತಿಶಬ್ದೋऽದಿತಿತ್ವಂ ಚ'' ಸಂದಿಗ್ಧವಾದ (ಸಾವಕಾಶವಾದ) ಶ್ರುತಿಲಿಂಗಗಳಿಗಿಂತ ನಿಶ್ಚಿತವಾದ (ನಿರವಕಾಶವಾದ) ಲಿಂಗ ಹಾಗೂ ಪ್ರಕರಣಗಳೇ ಬಲಿಷ್ಠವಾಗಿವೆ. ಸಂದಿಗ್ಧವಾದ ಶ್ರುತಿ ಎಂದರೆ ಅದಿತಿಶಬ್ದ, ಸಂದಿಗ್ಧವಾದ ಲಿಂಗವೆಂದರೆ ಅದಿತಿತ್ವವೆಂಬ ಲಿಂಗ. ಹೀಗೆ ನ್ಯಾಯವಿವರಣದಲ್ಲಿ ಶ್ರುತಿಯಲ್ಲಿ ಸಂದಿಗ್ಧತ್ವವನ್ನು ವಿಶೇಷಣವನ್ನಾಗಿ ಹೇಳಿದ್ದಾರೆ, ಹೊರತು ಲಿಂಗದಲ್ಲಿ ವಿಶೇಷಣವನ್ನಾಗಿ ಹೇಳಿರುವುದಿಲ್ಲ. ಭಾಷ್ಯ ಹಾಗೂ ಟೀಕೆಗಳಲ್ಲಿ ಮತ್ತು ನ್ಯಾಯವಿವರಣದ ಟೀಕೆಯಲ್ಲಿ ಶ್ರುತಿಗೆ ಅಂತರಧಿಕರಣದ ನ್ಯಾಯದಿಂದ ಸಾವಕಾಶತ್ವವನ್ನು ಅಂಗೀಕರಿಸಿ ಲಿಂಗಕ್ಕೆ ನಿರವಕಾಶತ್ವದಿಂದ ಪೂರ್ವಪಕ್ಷವನ್ನು ಮಾಡಲಾಗಿದೆ.

प्रकाशः – तस्मिन्पक्षे लिङ्गस्य निरवकाशत्वं ''नन्वत्र'' इत्यादिना वक्ष्यमाणदिशोपपादनसापेक्षम् । श्रुतेरपि निरवकाशत्वे तु नोपपादनक्लेश इति भावेन न्यायविवरणस्थचशब्दने द्वयोरपि प्रत्येकं पूर्वपक्षप्रापकत्वभानात्तदनुरोधेन द्वयोरपि प्रत्येकं निरवकाशत्वं न्यायविवरणाभिमतम् । सन्दिग्धपदेन श्रुतेः सावकाशत्वोक्तिस्तु अन्तर्नये सजातीयेन्द्रादिदेवतावाचिशब्दस्य समन्वितत्वात् सिद्धान्तिना सावकाशयितव्यत्वाभिप्रायत्वादिति।

ಮೇಲೆ ಹೇಳಿದ ಪ್ರಕಾರ ಲಿಂಗವು ನಿರವಕಾಶವಾಗಿದೆ. ಏಕೆಂದರೆ ''ನನ್ವತ್ರ'' ಇತ್ಯಾದಿ ವಾಕ್ಯಗಳಲ್ಲಿ ಮುಂದೆ ಉಪಪಾದಿಸುವಂತೆ ಲಿಂಗವು ನಿರವಕಾಶವೆಂದು ಸ್ಪಷ್ಟವಾಗುತ್ತದೆ. ಶ್ರುತಿಯೂ ಸಹ ನಿರವಕಾಶವಾದರೆ ಪೂರ್ವಪಕ್ಷವನ್ನು ಸಮರ್ಥಿಸುವುದು ಸುಲಭವಾಗುತ್ತದೆ. ಈ ಅಭಿಪ್ರಾಯದಿಂದಲೇ ನ್ಯಾಯವಿವರಣದಲ್ಲಿ 'ಚ' ಶಬ್ದವನ್ನು ಪ್ರಯೋಗಿಸಿದ್ದಾರೆ. ಅಂದರೆ ಶ್ರುತಿ ಹಾಗೂ ಲಿಂಗ ಎರಡೂ ಸಹ ಪ್ರತ್ಯೇಕವಾಗಿ ಪೂರ್ವಪಕ್ಷಕ್ಕೆ ಪ್ರಾಪಕಗಳಾಗಿವೆ. ಆದಕ್ಕೆ ಅನುಸಾರಿಯಾಗಿ ಎರಡೂ ಸಹ ಪ್ರತ್ಯೇಕವಾಗಿ ನಿರವಕಾಶಗಳಾಗಿವೆ ಎಂಬುದು ನ್ಯಾಯವಿವರಣದ ಅಭಿಪ್ರಾಯ. ಹಾಗಾದರೆ ಸಂದಿಗ್ಧತ್ವವನ್ನು ಶ್ರುತಿಯಲ್ಲಿ ವಿಶೇಷಣವನ್ನಾಗಿ ಏಕೆ ಹೇಳಿದರು. ಹೀಗೆ ಹೇಳಿದ್ದರಿಂದ ಶ್ರುತಿಗೆ ಸಾವಕಾಶತ್ವವನ್ನು ಹೇಳಿದಂತಾಯಿತಲ್ಲವೆ? ಎಂದರೆ ಅಂತರಧಿಕರಣದ ನ್ಯಾಯದಿಂದ ಅದಿತಿ ಶಬ್ದಕ್ಕೆ ಸಜಾತೀಯವಾದ ಇಂದ್ರಾದಿ ದೇವತಾವಾಚಿಯಾದ ಶಬ್ದಗಳ ಸಮನ್ವಯವನ್ನು ಮಾಡಿದ್ದರಿಂದ ಪ್ರಕೃತ ಅದಿತಿಶಬ್ದವನ್ನು ವಿಷ್ಣುವಿನಲ್ಲಿ ಸಾವಕಾಶವೆಂದಿದ್ದಾರೆ. ಅಥವಾ ಮುಂದೆ ಸಿದ್ಧಾಂತ

ಮಾಡುವಾಗ ಅದಿತಿ ಶ್ರುತಿಯನ್ನು ಸಾವಕಾಶ ಮಾಡುತ್ತಾರಾದ್ದರಿಂದ ಅದನ್ನು ಉದ್ದೇಶಿಸಿಯೂ ನ್ಯಾಯವಿವರಣೆಯಲ್ಲಿ ಶ್ರುತಿಗೆ ಸಾವಕಾಶತ್ವವನ್ನು ಹೇಳಿದ್ದಾರೆ.

प्रकाशः – श्रुतेर्निरवकाशत्वं च द्वेधा, पूर्वमदितिशब्दपर्यायस्यापि विष्णावसमन्वयाद्वा श्रुतिबाधकनिरवकाशविष्णुलिङ्गाभावेनान्तर्नयन्यायाविषयत्वाद्वेत्यभिप्रेत्य, तत्राद्यं पूर्ववैषम्यप्रदर्शनपूर्वं व्यनक्ति – युक्तमित्यादिना । द्वितीयं ''अथवा'' इत्यादिनाऽग्रे विवरिष्यते इति ध्येयम् ।

ಒಟ್ಟು ಎರಡು ರೀತಿಯಲ್ಲಿ ಶ್ರುತಿಗೆ ಸಾವಕಾಶತ್ವವನ್ನು ಹೇಳಬಹುದು -

೧) ಹಿಂದಿನ ಅಂತರಧಿಕರಣದಲ್ಲಿ ಅದಿತಿಶಬ್ದದ ಪರ್ಯಾಯಪದವನ್ನೂ ಸಹ ವಿಷ್ಣುವಿನಲ್ಲಿ ಸಮನ್ವಯ ಮಾಡಿರುವುದಿಲ್ಲ. ಆದ್ದರಿಂದ ಇಲ್ಲಿ ಪ್ರಸಕ್ತವಾದ ಅದಿತಿ ಶಬ್ದಗಳು ವಿಷ್ಣುವಿನಲ್ಲಿ ಸಾವಕಾಶವೆಂದು ಹೇಳಲಾಗದು.

೨) ಅದಿತಿಶ್ರುತಿಗೆ ಬಾಧಕವಾದ ಯಾವುದೇ ವಿಷ್ಣುಲಿಂಗಗಳಿರುವುದಿಲ್ಲ. ಆದ್ದರಿಂದ ಅಂತರಧಿಕರಣದಲ್ಲಿ ಅದಿತಿಶಬ್ದವನ್ನು ಸಮನ್ವಯ ಮಾಡಲು ಬೇಕಾಗಿರುವ ಸಿದ್ಧಾಂತ ಸ್ಥಾಪಕನ್ಯಾಯಕ್ಕೆ ವಿಷಯವಾಗಿರುವುದಿಲ್ಲ. ಆದ್ದರಿಂದಲೂ ಇಲ್ಲಿ ಪ್ರಕೃತವಾದ ಅದಿತಿಶಬ್ದವು ನಿರವಕಾಶವಾಗಿದೆ.

ಈ ಎರಡು ಪಕ್ಷಗಳಲ್ಲಿ ಮೊದಲನೆಯ ಪಕ್ಷವನ್ನು ಸ್ವೀಕರಿಸಿ ಹಿಂದಿನ ಅಧಿಕರಣದ ಪೂರ್ವಪಕ್ಷಕ್ಕಿಂತ ವಿಲಕ್ಷಣವಾಗಿ ಈ ಅಧಿಕರಣದ ಪೂರ್ವಪಕ್ಷವು ಹುಟ್ಟುತ್ತಿದೆ ಎಂದು 'ಯುಕ್ತಂ ಆದಿತ್ಯಶ್ರುತಿ' ಇತ್ಯಾದಿ ವಾಕ್ಯಗಳಿಂದ ಸಮರ್ಥಿಸುತ್ತಿದ್ದಾರೆ. ಎರಡನೆಯ ಪಕ್ಷವನ್ನು ಸ್ವೀಕರಿಸಿ ಮುಂದೆ 'ಅಥವಾ' ಇತ್ಯಾದಿ ಗ್ರಂಥದಿಂದ ಪೂರ್ವಪಕ್ಷವನ್ನು ಸ್ಥಾಪಿಸುತ್ತಾರೆಂದು ತಿಳಿಯಬೇಕು.

प्रकाशः – अत्रैवं योजना – अदितिरेवात्तृत्वेनोच्यते, ''तददितेरदितित्वं'' इत्यदितिश्रुतेः । न चाऽऽदित्यश्रुतौ सत्यामपि सर्वगतत्वं विष्णोरिवात्तृत्वमपि किं न स्यादिति वाच्यं, युक्तमादित्यश्रुतीत्यादि । सवितृशब्देति । ''सवितारं बृहस्पतिं'' इति तत्र श्रवणादिति भावः ।

ಗ್ರಂಥದಲ್ಲಿರುವ ಮಾತುಗಳನ್ನು ಹೀಗೆ ಯೋಜಿಸಿಕೊಳ್ಳಬೇಕು - ಅದಿತಿಯೇ ಅತ್ಯತ್ವ ಧರ್ಮವುಳ್ಳವಳಾಗಿದ್ದಾಳೆ. 'ತದದಿತೇಃ' ಎಂಬ ಶ್ರುತಿ ಪ್ರಮಾಣವಿರುವುದರಿಂದ. ಹಾಗಾದರೆ ಆದಿತ್ಯಶ್ರುತಿಯು ಪ್ರಮಾಣವಾಗಿದ್ದರೂ ಸರ್ವಗತತ್ವವು ವಿಷ್ಣುವಿನಲ್ಲಿ ಬಂದಂತೆ ಪ್ರಕೃತ ಅದಿತಿಶ್ರುತಿಯು ಪ್ರಮಾಣವಾಗಿದ್ದರೂ ಅತ್ಯತ್ವಧರ್ಮವು ವಿಷ್ಣುವಿನಲ್ಲೇಕೆ ಬರಬಾರದು ? ಎಂದು ಪ್ರಶ್ನಿಸಬಾರದು. ಇದಕ್ಕೆ 'ಯುಕ್ತಮಾದಿತ್ಯಶ್ರುತಿ' ಇತ್ಯಾದಿ ವಾಕ್ಯದಿಂದಲೇ ಉತ್ತರಿಸುತ್ತಿದ್ದಾರೆ. ಅಂತರಧಿಕರಣದಲ್ಲಿ ಆದಿತ್ಯಶಬ್ದಕ್ಕೆ ಪರ್ಯಾಯಶಬ್ದವೆನಿಸಿದ ''ಸವಿತಾರಂ ಬೃಹಸ್ಪತಿಂ'' ಎಂಬಲ್ಲಿ ಕೇಳಿಸುತ್ತಿರುವ ಸವಿತೃ ಶಬ್ದವನ್ನು ಸಮನ್ವಯ ಮಾಡಲಾಗಿದೆ. ಅದಿತಿ ಶಬ್ದಕ್ಕೆ ಪರ್ಯಾಯ ಶಬ್ದದ ಸಮನ್ವಯವನ್ನು ಅಲ್ಲಿ ಮಾಡಿರುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ಏವಂ ಶ್ರುತ್ಯೈವ ಪೂರ್ವಪಕ್ಷೇ ತದರ್ಥ್ಯಾಯ ಲಿಙ್ಗಂ ಚಾಹ – **ಅದಿತಿತ್ವೇತಿ** । ಶ್ರುತೇರ್ನಿರವಕಾಶತ್ವೋಕ್ತ್ಯೈವಾದಿತಿತ್ವಲಿಙ್ಗಸ್ಯ ವಿಷ್ಣೌ ನಿರವಕಾಶತ್ವಂ ಸಿದ್ಧಮೇವ, ತಚ್ಛಬ್ದ-ಪ್ರವೃತ್ತಿನಿಮಿತ್ತರೂಪತ್ವಾತ್ತಸ್ಯ । ಅತೋ ನ ತತ್ರೋಪಾದನಾಪೇಕ್ಷೇತಿ ಭಾವೇನ ವಾ, ''ಅಥವಾ'' ಇತ್ಯತ್ರಾಗ್ರೇ ಸ್ಪಷ್ಟಮಿತ್ಯಭಿಪ್ರೇತ್ಯ ವಾऽದಿತಿತ್ವಲಿಙ್ಗಾಚ್ಚೇತ್ಯೇವೋಕ್ತಮ್ ।

ಟೀಕಾಯಾಮೇವಮದೃಷ್ಟೇಃ ಕಿಮಸ್ಯ ಮೂಲಮಿತ್ಯತೋ ನ್ಯಾಯವಿವರಣಟೀಕೋಕ್ತ-ವರ್ಣಕಾದ್ವರ್ಣಕಾನ್ತರಮೇತದಿತಿ ಭಾವೇನಾಹ – ತದುಕ್ತಮಿತಿ ।

ಹೀಗೆ ಶ್ರುತಿಯಿಂದಲೇ ಪೂರ್ವಪಕ್ಷ ಮಾಡಲು ಬರುವಾಗ ಶ್ರುತಿಯ ದಾರ್ಢ್ಯಕ್ಕಾಗಿ ಲಿಂಗವನ್ನು ಉಪಯೋಗಿಸಿಕೊಂಡಿದ್ದಾರೆಂದು 'ಅದಿತಿತ್ವಂ' ಇತ್ಯಾದಿಯಾಗಿ ಹೇಳಿದ್ದಾರೆ. ವಸ್ತುತಃ ಶ್ರುತಿಗೆ ನಿರವಕಾಶತ್ವವನ್ನು ಹೇಳಿದ್ದರಿಂದಲೇ ಅದಿತತ್ವವೆಂಬ ಲಿಂಗವೂ ಸಹ ವಿಷ್ಣುವಿನಲ್ಲಿ ನಿರವಕಾಶತ್ವವು ಸಿದ್ಧವಾಗಿದೆ. ಏಕೆಂದರೆ ಅದಿತಿತ್ವವೆಂಬ ಲಿಂಗವು ಅದಿತಿಶಬ್ದದ ಪ್ರವೃತ್ತಿನಿಮಿತ್ತರೂಪವಾಗಿದೆ. ಆದ್ದರಿಂದ ಲಿಂಗವನ್ನು ಇಲ್ಲಿ ಹೇಳಬೇಕಾಗಿರಲಿಲ್ಲ. ಅಥವಾ ಮುಂದೆ ''ಅಥವಾ'' ಇತ್ಯಾದಿ ಗ್ರಂಥದಿಂದ ಲಿಂಗವನ್ನು ಹೇಳಿದ್ದಕ್ಕೆ ಕಾರಣವನ್ನು ನಿರೂಪಿಸುತ್ತಾರೆ. ಈ ಅಭಿಪ್ರಾಯದಿಂದಲೂ 'ಅದಿತಿತ್ವಲಿಂಗಾಚ್ಚ' ಎಂದೇ ಹೇಳಿದ್ದಾರೆ.

ಟೀಕೆಯಲ್ಲಿ ಈ ರೀತಿಯಾಗಿ ಶ್ರುತಿ ಹಾಗೂ ಲಿಂಗ ಎರಡಕ್ಕೂ ನಿರವಕಾಶತ್ವವನ್ನು ಒಪ್ಪಿರುವುದು ಕಾಣಿಸುತ್ತಿಲ್ಲ. ಆದ್ದರಿಂದ ಯಾವ ಆಧಾರದಿಂದ ಗ್ರಂಥಕಾರರು ಶ್ರುತಿ ಹಾಗೂ ಲಿಂಗಗಳಿಗೆ ನಿರವಕಾಶತ್ವವನ್ನು ಸಮರ್ಥಿಸುತ್ತಿದ್ದಾರೆ ? ಎಂದರೆ ನ್ಯಾಯವಿವರಣದ ಟೀಕೆಯಲ್ಲಿ ಮಾಡಿದ ವ್ಯಾಖ್ಯಾನಕ್ಕಿಂತ ಭಿನ್ನವಾದ ಮತ್ತೊಂದು ವ್ಯಾಖ್ಯಾನ ಇದಾಗಿದೆಯೆಂಬ ಅಭಿಪ್ರಾಯದಿಂದ 'ತದುಕ್ತಂ' ಎಂದು ಹೇಳುತ್ತಿದ್ದಾರೆ.

ಪ್ರಕಾಶಃ – ''ಸನ್ದಿಗ್ಧಶ್ರುತಿರ್ಲಿಙ್ಗಾಚ್ಚ'' ಇತ್ಯಾದಿರೂಪೇಣ ತತ್ರ ಪಾಠೇऽಪಿ 'ಶ್ರುತಿರ್ಲಿಙ್ಗಾಚ್ಚ' ಇತ್ಯನುವಾದಸ್ತು ಸನ್ದಿಗ್ಧಪದಂ, ಟೀಕಾಯಾಂ ''ಶ್ರುತೇಃ ಸಾವಕಾಶತ್ವೋಕ್ತಿಸ್ತು'' ಇತ್ಯಾದಿನಾ ವಕ್ಷ್ಯಮಾಣಾಭಿಪ್ರಾಯಮಿತಿ ಸೂಚಯಿತುಮ್ ।

''ಶ್ರುತಿರ್ಲಿಙ್ಗಾಚ್ಚ'' ಇತ್ಯುಕ್ತಸ್ಯ ಯಥಾಕ್ರಮಂ ವಿವರಣಂ ''ಅದಿತಿಶಬ್ದोऽದಿತಿತ್ವಂ ಚ'' ಇತಿ । ನನ್ವಸ್ತ್ವೇವಮುಕ್ತದಿಶಾ ಶ್ರುತಿರ್ನಿರವಕಾಶೇತಿ, ಲಿಙ್ಗಮಪಿ ತಾದೃಶಂ, ಶ್ರುತಿಸ್ಸಾವಕಾಶೇತಿ ಪಕ್ಷೇ ಕಥಮಿತ್ಯಾಕ್ಷಿಪತಿ – **ನನ್ವಿತಿ ।**

ನ್ಯಾಯವಿವರಣದಲ್ಲಿ 'ಸಂದಿಗ್ಧಶ್ರುತಿರ್ಲಿಂಗಂಚ' ಇತ್ಯಾದಿಯಾಗಿ ಪಾಠವಿದೆ. ಆದರೆ ಪ್ರಕೃತ ಗ್ರಂಥಕಾರರು ಸಂದಿಗ್ಧಪದವನ್ನು ಬಿಟ್ಟು 'ಶ್ರುತಿರ್ಲಿಂಗಂ ಚ' ಎಂದು ಅನುವಾದ ಮಾಡಿದ್ದಾರೆ. ಇದಕ್ಕೆ ಕಾರಣವೇನೆಂದರೆ ನ್ಯಾಯವಿವರಣದಲ್ಲಿರುವ ಸಂದಿಗ್ಧಪದವು ಟೀಕೆಯಲ್ಲಿರುವ ''ಶ್ರುತೇಃ ಸಾವಕಾಶತ್ವೋಕ್ತೇಃ'' ಇತ್ಯಾದಿಯಾಗಿ ಮುಂದೆ ಹೇಳುವ ಅಭಿಪ್ರಾಯವನ್ನು ಒಳಗೊಂಡಿದೆ. ಇದನ್ನು ಸೂಚಿಸಲು ''ಶ್ರುತಿರ್ಲಿಂಗಂಚ'' ಎಂದು ಗ್ರಂಥಕಾರರು ಹೇಳಿದ್ದಾರೆ.

'ಶ್ರುತಿಃ' ಎಂಬ ಪದಕ್ಕೆ ಅದಿತಿ ಎಂಬರ್ಥ. ಲಿಂಗ ಪದಕ್ಕೆ ಅದಿತಿತ್ವಲಿಂಗವೆಂದರ್ಥ ಎಂದು ಯಥಾಕ್ರಮವಾಗಿ ಅರ್ಥೈಸಿಕೊಳ್ಳಬೇಕು.

ಇಲ್ಲಿಯ ತನಕ ಹೇಳಿದಂತೆ ಶ್ರುತಿ ಹಾಗೂ ಲಿಂಗ ಎರಡೂ ಸಹ ನಿರವಕಾಶಗಳಾಗಿವೆ. ಹಾಗಾದರೆ ಶ್ರುತಿಯು ಸಾವಕಾಶವೆಂಬ ಟೀಕೆಯಲ್ಲಿ ಹೇಳಿದ ಪಕ್ಷವನ್ನು ಆಶ್ರಯಿಸಿದಾಗ ಪೂರ್ವಪಕ್ಷವನ್ನು ಹೇಗೆ ತಿಳಿಯಬೇಕು ಎಂಬ ಆಕ್ಷೇಪಕ್ಕೆ 'ನನು' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ''ನಚ ಶ್ರುತಿರ್ವಿಷ್ಣುವಿಷಯಾ ಕಿಂ ನ ಸ್ಯಾದುಕ್ತನ್ಯಾಯಾತ್' ಇತ್ಯನ್ತರಧಿಕರಣನ್ಯಾಯೇನ ಶಙ್ಕಿತ ಇತ್ಯರ್ಥಃ ।

ಪೂರ್ವಪಾದೇ ಪ್ರತಿನಯಮಧಿದೈವಾಧಿಭೂತಾದಿಶಬ್ದಾನಾಂ ವಿಷ್ಣೌ ಶಕ್ತಿರಪ್ಯಸ್ತೀತ್ಯುಚ್ಯತ ಇತಿ ಪಕ್ಷಮಭ್ಯುಪೇತ್ಯಾಹ – ಶ್ರುತೇರ್ಬ್ರಹ್ಮಣಿ ಮುಖ್ಯತ್ವೇ ಇತಿ । ತಾತ್ಪರ್ಯಮಾತ್ರಮೇವೋಚ್ಯತೇ ನತು ಶಕ್ತಿರಿತಿ ಪಕ್ಷಮುಪೇತ್ಯಾಹ – ಅಮುಖ್ಯತ್ವೇ ವೇತಿ ।

ಶ್ರುತಿಯು ಏಕೆ ವಿಷ್ಣುವಿಷಯವಾಗುವುದಿಲ್ಲ; ಏಕೆಂದರೆ ಅಂತರಧಿಕರಣದ ನ್ಯಾಯದಿಂದ ಅದಿತಿ ಶಬ್ದವು ವಿಷ್ಣುವಿನಲ್ಲಿ ಸಮನ್ವಯವಾಗಿದೆಯಲ್ಲವೇ? ಎಂದು 'ಸಾವಕಾಶತ್ವೇ ಶಂಕಿತೇ' ಎಂಬುದರ ತಾತ್ಪರ್ಯ.

ಹಿಂದಿನ ನಾಮಪಾದದ ಪ್ರತಿಯೊಂದು ಅಧಿಕರಣಗಳಲ್ಲಿ ಸಮನ್ವಯ ಮಾಡಿದ ಅಧಿದೈವಿಕ ಹಾಗೂ ಅಧಿಭೌತಿಕ ಮೊದಲಾದ ಶಬ್ದಗಳು ವಿಷ್ಣುವಿನಲ್ಲಿ ಶಕ್ತಿರುಕ್ತಿಯಿಂದ ಸಿದ್ಧವಾಗಿವೆ ಎಂಬ ಪಕ್ಷವನ್ನು ಅಂಗೀಕರಿಸಿ 'ಶ್ರುತೇರ್ಬ್ರಹ್ಮಣಿ ಮುಖ್ಯತ್ವೇ' ಎಂಬುದಾಗಿ ಹೇಳುತ್ತಿದ್ದಾರೆ. ಹಿಂದಿನ ನಾಮಪಾದದಲ್ಲಿ ಅಧಿದೈವಿಕ ಮೊದಲಾದ ಶಬ್ದಗಳ ತಾತ್ಪರ್ಯವನ್ನಷ್ಟೇ ಹೇಳಲಾಗಿದೆ ಹೊರತು ಶಕ್ತಿರುಕ್ತಿಯನ್ನು ಹೇಳಿರುವುದಿಲ್ಲವೆಂಬ ಪಕ್ಷವನ್ನು ಅಂಗೀಕರಿಸಿ 'ಅಮುಖ್ಯತ್ವೇನ' ಎಂದು ಹೇಳಿದ್ದಾರೆ.

ಪ್ರಕಾಶಃ – ಯದ್ವಾ – ಲೋಕರೂಢ್ಯಭಾವಮದನರೂಪಪ್ರವೃತ್ತಿನಿಮಿತ್ತಾಭಾವಂ ವಾऽಭಿಪ್ರೇತ್ಯಾಹ – ಅಮುಖ್ಯತ್ವೇ ವೇತಿ ಲಿಙ್ಗಸ್ಯಾಪೀತಿ । ತಚ್ಛಬ್ದಪ್ರವೃತ್ತಿಹೇತ್ವಾತ್ತಸ್ಯೇತಿ ಭಾವಃ । ದ್ವೇಧಾ ಸಮಾಧಿಮಾಹ – ತೀರೇತಿ । 'ಸಮ್ಭವೇऽಪಿ' ಇತ್ಯಭ್ಯುಪಗಮವಾದಂ ಸೂಚಯತ್ಯಪಿಪದೇನ । ವಸ್ತುತೋऽದಿತಿಶಬ್ದಸ್ಯ ತತ್ಪರ್ಯಾಯಸ್ಯ ವಾ ಪ್ರಾಗಸಮನ್ವಯೇನ ಮುಖ್ಯತ್ವೇನ ಬ್ರಹ್ಮಣಿ ಸಮ್ಭವಾಯೋಗಾತ್ ।

ವಿಷ್ಣುವಿನಲ್ಲಿ ಅದಿತಿ ಶಬ್ದದ ಪ್ರಯೋಗವು ಲೋಕರೂಢಿಯಿಂದ ಸಿದ್ಧವಾಗಿಲ್ಲ. ಆಥವಾ ಅದನವೆಂಬ ಪ್ರವೃತ್ತಿನಿಮಿತ್ತವೂ ಸಹ ಸಿದ್ಧವಾಗಿಲ್ಲವೆಂಬ ಅಭಿಪ್ರಾಯದಿಂದ 'ಅಮುಖ್ಯತ್ವೇವಾ' ಎಂದು ಹೇಳಿದ್ದಾರೆ.

ಗ್ರಂಥದಲ್ಲಿ 'ಅದಿತಿತ್ವಲಿಂಗಸ್ಯಾಪಿ' ಎಂದಿದೆ. ಅಂದರೆ ಅದಿತಿತ್ವ ಲಿಂಗವು ಅದಿತಿ ಶಬ್ದದ ಪ್ರವೃತ್ತಿನಿಮಿತ್ತವಾದ್ದರಿಂದ ವಿಷ್ಣುವಿನಲ್ಲಿ ಹೇಳಬಹುದೆಂದು ಅಭಿಪ್ರಾಯ. ಆಕ್ಷೇಪಕ್ಕೆ ಎರಡು ಬಗೆಯಾಗಿ ಸಮಾಧಾನವನ್ನು 'ತೀರಾದೌ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. 'ಸಂಭವೇऽಪಿ' ಎಂಬುದಾಗಿ ಅಪಿ

ಪದದಿಂದ ಅಭ್ಯುಪಗಮವಾದವೆಂದು ಸೂಚಿಸಿದ್ದಾರೆ. ವಸ್ತುತಸ್ತು ಅದಿತಿಶಬ್ದವನ್ನಾಗಲೀ, ಅದಿತಿಶಬ್ದದ ಪರ್ಯಾಯಶಬ್ದವನ್ನಾಗಲೀ ಅಂತರಧಿಕರಣದಲ್ಲಿ ಸಮನ್ವಯ ಮಾಡಿಲ್ಲ. ಆದ್ದರಿಂದ ಆಮುಖ್ಯವಾಗಿಯೂ ಸಹ ಬ್ರಹ್ಮನಲ್ಲಿ ಅದಿತಿ ಶಬ್ದವನ್ನು ಹೇಳಲಾಗದು.

प्रकाशः – सजातीयेन्द्रादिशब्दसमन्वयोक्तिमात्रेणादितिशब्दप्रवृत्तिहेतोर्हरावसिद्धेः ''ब्रह्मण्यमुख्यत्वेन सम्भवेऽपि'' इत्युक्तम् । मुख्यत्वेन सम्भवे तु तच्छब्दप्रवृत्तिनिमित्तस्यादितित्वस्य ब्रह्मणि मुख्यत्वेन सम्भव एव स्यादिति भावः ।

ಅಥವಾ ಸಜಾತೀಯವಾದ ಇಂದ್ರಾದಿ ಶಬ್ದಗಳ ಸಮನ್ವಯವನ್ನು ಅಂತರಧಿಕರಣದಲ್ಲಿ ಮಾಡಿದ್ದಾರೆ. ಇಷ್ಟರಿಂದಲೇ ಅದಿತಿ ಶಬ್ದದ ಪ್ರವೃತ್ತಿನಿಮಿತ್ತವು ಶ್ರೀಹರಿಯಲ್ಲಿ ಸಿದ್ಧವಾಗುವುದಿಲ್ಲ. ಈ ಕಾರಣದಿಂದಲೂ ಗ್ರಂಥದಲ್ಲಿ ''ಬ್ರಹ್ಮಣ್ಯಮುಖ್ಯತ್ವೇನ ಸಂಭವೇऽಪಿ'' ಎಂದು ಹೇಳಿದ್ದಾರೆ. ಒಂದು ವೇಳೆ ಮುಖ್ಯ ವೃತ್ತಿಯಿಂದ ಅದಿತಿ ಶಬ್ದವು ಶ್ರೀಹರಿಯಲ್ಲಿ ಬರುವುದಾದರೆ ಅದಿತಿ ಶಬ್ದದ ಪ್ರವೃತ್ತಿನಿಮಿತ್ತವೇ ಆಗಿರುವ ಅದಿತಿತ್ವವೆಂಬ ಲಿಂಗವೂ ಸಹ ಬ್ರಹ್ಮನಲ್ಲಿ ಮುಖ್ಯವಾಗಿಯೇ ಬರುತ್ತದೆ. ಈ ಅಭಿಪ್ರಾಯವನ್ನು ಗ್ರಂಥದ ಮಾತುಗಳಿಂದ ತಿಳಿದುಕೊಳ್ಳಬೇಕು.

ಪಾಂಡುರಂಗಿಕೇಶವಾಚಾರ್ಯವಿರಚಿತ

ಗುರುರಾಜೀಯಮ್ (ಭಾವದೀಪ)

गुरुराजीयम् – ॐ अत्ताचराचरग्रहणात् ॐ ।। **पूर्ववैषम्येति ।।** युक्तमादित्यश्रुतिसहचरितमपि सर्वगतत्वं विष्णौ । अन्तरित्यत्र तत्पर्यायसवितृशब्द समन्वयस्य सिद्धत्वात् । नच प्रकृतेऽदितिशब्दपर्यायशब्दसमन्वयोऽन्तरित्यत्र सिद्धः । तथापूर्ववैषम्यमित्यर्थः ।

ಸಾರ

'ಅದಿತಿಯ' ಶಬ್ದದಿಂದ ವಾಚ್ಯಳಾದವಳು ಅದಿತಿದೇವಿಯೇ ಆಗಿದ್ದಾಳೆಂದು ಪೂರ್ವಪಕ್ಷ. ಕಾರಣವೇನೆಂದರೆ ಅದಿತಿಶ್ರುತಿ ಹಾಗೂ ಅದಿತಿತ್ವವೆಂಬ ಲಿಂಗ. ಇವರಡೂ ಸಹ ನಿರವಕಾಶವೇ ಆಗಿವೆ. ಹಿಂದೆ ಅಂತರಧಿಕರಣದಲ್ಲಿ ಅದಿತಿಶಬ್ದದ ಪರ್ಯಾಯಶಬ್ದಗಳನ್ನು ಸಮನ್ವಯ ಮಾಡದ ಕಾರಣ ಅದಿತಿಶ್ರುತಿಯು ನಿರವಕಾಶವಾಗಲು ಒಂದು ಕಾರಣ. ಅದಿತಿಶ್ರುತಿಯ ಸಮನ್ವಯವನ್ನು ಅಂತರಧಿಕರಣದಲ್ಲಿ ಮಾಡದಿದ್ದರೂ ಅಸಾಧಾರಣವಾದ ವಿಷ್ಣುಲಿಂಗಗಳಿರುವಿಕೆಯೆಂಬ ಅಂತರಧಿಕರಣದ ನ್ಯಾಯಕ್ಕೆ ವಿಷಯವಾಗದಿರುವಿಕೆಯು ಅದಿತಿಶ್ರುತಿಯ ನಿರವಕಾಶಕ್ಕೆ ಮತ್ತೊಂದು ಕಾರಣ. ಹೀಗೆ ಶ್ರುತಿ ಹಾಗೂ ಲಿಂಗಗಳೆರಡು ನಿರವಕಾಶಗಳೆಂದು ಒಪ್ಪಿ ಪೂರ್ವಪಕ್ಷವನ್ನು ಪುಷ್ಟೀಕರಿಸಲಾಗಿದೆ. ಹಿಂದಿನ ಅಧಿಕರಣದಲ್ಲಿ ಲಿಂಗವನ್ನು ಮಾತ್ರ ನಿರವಕಾಶವೆಂದು ಒಪ್ಪಲಾಗಿತ್ತು. ಆದ್ದರಿಂದ ಹಿಂದಿನ ಅಧಿಕರಣದಿಂದ ಈ ಅಧಿಕರಣಕ್ಕಿರುವ ವೈಷಮ್ಯವನ್ನೂ ಸಹ ಗಮನಿಸಬೇಕು.

ಅತ್ತ್ಯಾದ್ಯಧಿಕರಣ (೧-೨-೨)

ಆದರೆ ಟೀಕೆಯಲ್ಲಿ ಅದಿತಿಶ್ರುತಿಯನ್ನು ಸಾವಕಾಶವೆಂದು ಒಪ್ಪಿ ಲಿಂಗವನ್ನು ನಿರವಕಾಶವೆಂದು ಹೇಳಿದ್ದಾರೆ. ನಿರವಕಾಶವಾದ ಒಂದೇ ಲಿಂಗದಿಂದ ಪೂರ್ವಪಕ್ಷವನ್ನು ದೃಢಗೊಳಿಸಬಹುದು. ಏಕೆಂದರೆ ಅದಿತಿತ್ವವು ಜಾತಿರೂಪವಾದ್ದರಿಂದ ವಿಷ್ಣುವಿನಲ್ಲಿ ಬರಲು ಸಾಧ್ಯವೇ ಇಲ್ಲ. ಮತ್ತು ಲೋಕರೂಢಿಯೂ ಸಹ ಅದಿತಿದೇವಿಯಲ್ಲಿಯೇ ಇರುತ್ತದೆ. ಆದ್ದರಿಂದ ಕೇವಲ ಲಿಂಗದಿಂದ ಪೂರ್ವಪಕ್ಷ ಮಾಡಿದ್ದು ತಪ್ಪಲ್ಲ.

● ● ● ● ●

ಜಾತಿರೂಪವಾದ ಅದಿತಿತ್ವವು ಬಲಿಷ್ಠಲಿಂಗ

ತಾತ್ಪರ್ಯಚನ್ದ್ರಿಕಾ

यद्वा – अन्तरधिकरणन्यायेन रूढिबाधेन श्रुतेर्ब्रह्मपरत्वसम्भवेऽपि ''अनश्नन्'' इत्यादिश्रुत्या अनत्तुर्ब्रह्मणोऽत्तृत्वरूपादित्वलिङ्गं न सम्भवतीति टीकाभिप्रायः ।

नच कर्मफलात्तृत्वसाधकेनोत्तराधिकरणेन अत्रत्यानत्तृत्वशङ्कादण्डापूपनयपराहतेति वाच्यम्, तत्रात्रसिद्धमत्तृत्वसामान्यमुपेत्य कर्मफलात्तृत्वरूपस्तद्विशेषो नेति या शङ्का तस्य निरसिष्यमाणत्वेन, अत्रत्यपूर्वपक्षदशायां तत्रत्यसिद्धान्तानुन्मेषात् । अत एव तत्र भाष्ये विशेषाक्षेपार्थं 'सर्वात्तैकः पर उक्तः'' इत्यत्तृत्वसामान्यानुवादः ।

ಅನುವಾದ - ಅಥವಾ ಅಂತರಧಿಕರಣದ ನ್ಯಾಯದಿಂದ ಅದಿತಿ ಶಬ್ದದ ರೂಢಿಗೆ ಬಾಧವನ್ನು ಹೇಳಿ ಬ್ರಹ್ಮಪರತ್ವವನ್ನು ಒಪ್ಪಬಹುದು. ಆದರೆ ''ಅನಶ್ನನ್ನನ್ಯಃ'' ಇತ್ಯಾದಿ ಶ್ರುತಿಯಿಂದ ಬ್ರಹ್ಮನು ಏನನ್ನೂ ತಿನ್ನಲಾರನೆಂದು ಸಿದ್ಧವಾಗಿದೆ. ಈಗ ಅತ್ಯತ್ವವೆಂಬ ಲಿಂಗವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಿದರೆ ''ಅನಶ್ನನ್ನನ್ಯಃ'' ಎಂಬ ಶ್ರುತಿಯ ವಿರೋಧ ಬರುತ್ತದೆಂಬುದು ಟೀಕೆಯ ಅಭಿಪ್ರಾಯ.

ಪ್ರಶ್ನೆ - ಮುಂದಿನ ಗುಹಾಧಿಕರಣದಲ್ಲಿ ಕರ್ಮಫಲ ಅತ್ತೃತ್ವವನ್ನು ಪರಮಾತ್ಮನಲ್ಲಿ ಸಾಧಿಸುತ್ತಾರೆ. ಆದರಿಂದಲೇ ಈ ಅಧಿಕರಣದಲ್ಲಿ ಮಾಡುತ್ತಿರುವ ಪರಮಾತ್ಮನು ಏನನ್ನೂ ತಿನ್ನುವುದಿಲ್ಲವೆಂಬ ಪೂರ್ವಪಕ್ಷವನ್ನು ನಿರಾಕರಿಸಿದಂತಾಗುತ್ತದೆ. ದಂಡವನ್ನು ತಿನ್ನುವವನು ಅಪೂಪವನ್ನು ತಿನ್ನದೇ ಇರುತ್ತಾನೆಯೇ?

ಉತ್ತರ - ಇದು ತಪ್ಪು. ಮುಂದಿನ ಗುಹಾಧಿಕರಣದಲ್ಲಿ ಈ ಅಧಿಕರಣದಲ್ಲಿ ಸಿದ್ಧವಾದ ಅತ್ತೃತ್ವ ಸಾಮಾನ್ಯವನ್ನು ಪರಮಾತ್ಮನಲ್ಲಿ ಒಪ್ಪಿ ಕರ್ಮಫಲಾತ್ತೃತ್ವವೆಂಬ ವಿಶೇಷವನ್ನು ಪರಮಾತ್ಮನಲ್ಲಿ ಒಪ್ಪಲು ಸಾಧ್ಯವಿಲ್ಲವೆಂದು ಶಂಕಿಸಲಾಗಿದೆ. ಆ ಶಂಕೆಯನ್ನು ನಿರಾಸ ಮಾಡದಿದ್ದರೆ ಮತ್ತು ಆ ಶಂಕೆಯನ್ನು

ನಿರಾಕರಿಸಿದ್ದಾರೆ. ಹೀಗಿರುವಾಗ ಈ ಅಧಿಕರಣದ ಪೂರ್ವಪಕ್ಷದ ಸಂದರ್ಭದಲ್ಲಿ ಮುಂದಿನ ಅಧಿಕರಣದ ಸಿದ್ಧಾಂತವು ಹುಟ್ಟರಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಗುಹಾಧಿಕರಣದ ಪ್ರಾರಂಭದ ಭಾಷ್ಯದಲ್ಲಿ ಕರ್ಮಫಲಾತ್ಯತ್ವವೆಂಬ ವಿಶೇಷವನ್ನು ಆಕ್ಷೇಪಿಸುವುದಕ್ಕಾಗಿ ''ಸರ್ವಾತ್ಕೈಕಃ ಪರ ಉಕ್ತಃ'' ಎಂದು ಅತ್ಯತ್ವಸಾಮಾನ್ಯವನ್ನು ಅನುವಾದ ಮಾಡಿದ್ದಾರೆ.

ಪ್ರಕಾಶಃ —

ಪೂರ್ವಮದಿತಿತ್ವಂ ಗೋತ್ವಾದಿವಜ್ಜಾತಿರೂಪಮಿತ್ಯುಪೇತ್ಯ ಸಮಾಹಿತಂ, ಅಧುನಾऽದನ-ಕರ್ತೃತ್ವಮಿತ್ಯುಪೇತ್ಯಾಹ – **ಯಚ್ಚೇತಿ** ।

ಅತ್ರಾಪಿ ಭಗವಲ್ಲಿಙ್ಗಮಸ್ತೀತ್ಯುಪೇತ್ಯಾಹ – **ಅನ್ತರಧಿಕರಣನ್ಯಾಯೇನೇತಿ** । ಪೂರ್ವಪಾದೇ ಪ್ರತಿನಯಂ ಲಿಙ್ಗಾದಿಭಿರ್ನಾಮ್ನಾಂ ತತ್ಪರತ್ವಮೇವೋಕ್ತಂ, ನನು ತತ್ರ ಶಕ್ತಿರಪೀತಿ ಪಕ್ಷಮುಪೇತ್ಯೋಕ್ತಂ – **ಬ್ರಹ್ಮಪರತ್ವಸಮ್ಭವೇಪೀತಿ** ।

ಈ ಹಿಂದೆ ಆದಿತ್ವವನ್ನು ಗೋತ್ವಾದಿಗಳಂತೆ ಜಾತಿರೂಪವೆಂದು ಅಂಗೀಕರಿಸಿ ಸಮಾಧಾನವನ್ನು ಹೇಳಿದರು. ಈಗ ಅದನಕರ್ತೃತ್ವವೆಂದು ಪ್ರವೃತ್ತರೂಪವಾದದ್ದೆಂದು ಅಂಗೀಕರಿಸಿ ಮತ್ತೊಂದು ಬಗೆಯಲ್ಲಿ 'ಯದ್ವಾ,' ಇತ್ಯಾದಿ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಿದ್ದಾರೆ.

ಈ ಪಕ್ಷದಲ್ಲಿ ಆದಿತಿಶ್ರುತಿಯಲ್ಲಿ ಭಗವಲ್ಲಿಂಗವು ಇದೆಯೆಂದು ಒಪ್ಪಿ ಅಂತರಧಿಕರಣ ನ್ಯಾಯಕ್ಕೆ ಇದು ವಿಷಯವಾಗಿದೆಯೆಂದು 'ಅಂತರಧಿಕರಣ ನ್ಯಾಯೇನ' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಹಿಂದಿನ ಪಾದದಲ್ಲಿ ಪ್ರತಿಯೊಂದು ಅಧಿಕರಣದಲ್ಲಿಯೂ ಲಿಂಗಗಳ ಬಲದಿಂದ ನಾಮಾತ್ಯಶಬ್ದಗಳಿಗೆ ವಿಷ್ಣುಪರತ್ವವನ್ನೇ ಹೇಳಲಾಗಿದೆ ಹೊರತು ಅಯಾಶಬ್ದಗಳ ಶಕ್ತಿರುಕ್ತಿಯನ್ನು ಹೇಳಿರುವುದಿಲ್ಲವೆಂಬ ಪಕ್ಷವನ್ನು ಅಂಗೀಕರಿಸಿ 'ಬ್ರಹ್ಮಪರತ್ವಸಂಭವೇಪಿ' ಎಂದು ಹೇಳಿದ್ದಾರೆ. ಇಲ್ಲದಿದ್ದರೆ ಮುಖ್ಯಪರತ್ವವೆಂದು ಹೇಳಬೇಕಿತ್ತು.

ಪ್ರಕಾಶಃ – ಅನಶ್ನನ್ನಿತ್ಯಾದೀತಿ । ಯದ್ಯಪೀಯಂ ಶ್ರುತಿಃ ಕರ್ಮಫಲಾಶನಂ ನೇತ್ಯಾಹ, ಪಿಪ್ಪಲಮಿತಿ ಸನ್ನಿಧಾನಾತ್, ಅನ್ಯಥೋತ್ತರಾಧಿಕರಣಪೂರ್ವಪಕ್ಷಟೀಕಾದಾವೇತದುಕ್ತಿರ್ನ ಸ್ಯಾತ್ । ತಥಾऽಪಿ ''ನ ತದಶ್ನಾತಿ ಕಿಞ್ಚನ'' ಇತ್ಯಾದೌ ತಾತ್ಪರ್ಯಮ್ । ಅತ ಏವಾದಿತಿಪದೋಕ್ತಿಃ । ಏತಚ್ಚತ್ಯುಕ್ತಿಸ್ತೂತ್ತರಾಧಿಕರಣವೈಷಮ್ಯೋಕ್ತ್ಯರ್ಥಂ, ಶಙ್ಕೋತ್ಥಾಪನಾಯ ವಾ, ಸಾಮಾನ್ಯನಿಷೇಧಪರತ್ವಮಪಿ ಅಭಿಪ್ರೇತ್ಯ ವೇತಿ ।

ಪ್ರಶ್ನೆ - 'ಅನಶ್ನನ್ನನ್ಯಃ' ಎಂಬ ಶ್ರುತಿಯು ಕರ್ಮಫಲಭೋಕ್ತೃತ್ವವನ್ನು ನಿರಾಕರಿಸುತ್ತಿದೆ. ಏಕೆಂದರೆ 'ಪಿಪ್ಪಲಂ' ಎಂಬ ಪದವು ಹತ್ತಿರವಿರುವುದರಿಂದ, ಪಿಪ್ಪಲಪದಕ್ಕೆ ಕರ್ಮಫಲವೆಂದರ್ಥ. ಹೀಗೆ ಹೇಳದಿದ್ದರೆ ಮುಂದಿನ ಗುಹಾಧಿಕರಣದ ಪೂರ್ವಪಕ್ಷದ ಟೀಕೆಯಲ್ಲಿ ಕರ್ಮಫಲಭೋಕ್ತೃತ್ವವನ್ನು ಹೇಳಿದ್ದು ತಪ್ಪಾದೀತು.

ಆದ್ದರಿಂದ ಪ್ರಕೃತ ಸಕಲ ಪದಾರ್ಥಗಳ ಅತ್ಯತ್ವವು ಪರಮಾತ್ಮನಲ್ಲಿಲ್ಲ ಎಂಬುದಕ್ಕೆ ಇದು ಆಧಾರವಾಗುವುದಿಲ್ಲವಲ್ಲವೇ?

ಉತ್ತರ - ಹೌದು, 'ಅನಶ್ನನ್ನನ್ಯಃ' ಎಂಬ ಶ್ರುತಿಯು ಕರ್ಮಫಲಭೋಕ್ತೃತ್ವವನ್ನಷ್ಟೇ ನಿರಾಕರಿಸುತ್ತಿದೆ. ಆದರೆ ''ನ ತದಶ್ನಾತಿ ಕಿಂಚನ'' ಎಂಬ ಶ್ರುತಿಯನ್ನು ಇಲ್ಲಿ ವಿವಕ್ಷಿಸಬೇಕು. ಆದ್ದರಿಂದಲೇ ಗ್ರಂಥದಲ್ಲಿ ಆದಿಪದವನ್ನು ಹೇಳಿದ್ದಾರೆ. ಹಾಗಾದರೆ 'ಅನಶ್ನನ್ನನ್ಯಃ' ಎಂಬ ಶ್ರುತಿಯನ್ನೇಕೆ ಉಲ್ಲೇಖಿಸಿದರು ಎಂದರೆ ಮುಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ವೈಷಮ್ಯವನ್ನು ತೋರಿಸಬೇಕಾಗಿದೆ. ಅಂದರೆ ಈ ಅಧಿಕರಣದಲ್ಲಿ ಸಕಲ ಪದಾರ್ಥಗಳ ಅತ್ಯತ್ವವು ಭಗವಂತನಿಗೆ ಇಲ್ಲವೆಂದು ಪೂರ್ವಪಕ್ಷ ಮಾಡಿದರೆ ಮುಂದಿನ ಅಧಿಕರಣದಲ್ಲಿ ಕರ್ಮಫಲಭೋಕ್ತೃತ್ವವಿಲ್ಲವೆಂಬ ಪೂರ್ವಪಕ್ಷವನ್ನು ಮಾಡಲಾಗುತ್ತದೆ.

ಅಥವಾ 'ಅನಶ್ನನ್ನನ್ಯಃ' ಎಂಬ ಶ್ರುತಿಗೆ ಸಕಲಪದಾರ್ಥಗಳ ಅತ್ಯತ್ವವನ್ನೇ ನಿಷೇಧಿಸುತ್ತಿದೆ. ಏಕೆಂದರೆ ಕರ್ಮಫಲಭೋಕ್ತೃತ್ವವೆಂಬ ವಿಶೇಷವನ್ನು ತಿನ್ನಲು ಸಮರ್ಥನಾಗದವನು ಸಕಲ ಪದಾರ್ಥಗಳನ್ನು ತಿನ್ನಲು ಹೇಗೆ ಸಮರ್ಥನಾಗುತ್ತಾನೆ. ಈ ವಿವಕ್ಷೆಯಿಂದಲೂ 'ಅನಶ್ನನ್ನನ್ಯಃ' ಎಂಬ ಶ್ರುತಿಯನ್ನು ಉಲ್ಲೇಖಿಸಿದ್ದು ತಪ್ಪಾಗುವುದಿಲ್ಲ.

ಪ್ರಕಾಶಃ – ದಣ್ಡಾಪೂಪೇತಿ । यथा दण्डं भक्षयतोऽपूपभक्षणं न दुश्शकं, तद्वददन-विशेषसाधनेऽदनसामान्यस्यानायासेन सिद्धत्वादित्यर्थः ।

एतत्सिद्धान्तोपजीवनेनैव तस्य प्रवृत्तेरित्याह – तत्रेति ।

अन्यथा भावार्थाधिकरणेन स्वर्गकामाधिकरणस्य वैयर्थ्यापत्तेः, स्वर्गकामनय-सिद्धापूर्वोपजीवनेनैव तस्य प्रवृत्तेरिति भावः ।

ಕರ್ಮಫಲಭೋಕ್ತೃತ್ವವನ್ನು ತಿನ್ನುವ ಭಗವಂತನಿಗೆ ಜಗತ್ತನ್ನು ತಿನ್ನುವುದು ಕಷ್ಟವಲ್ಲ. ಉದಾಹರಣೆ - ಕೋಲನ್ನೇ ತಿನ್ನುವ ವ್ಯಕ್ತಿಗೆ ಅಪೂಪವನ್ನು ತಿನ್ನುವುದು ಹೇಗೆ ಕಷ್ಟವಲ್ಲವೋ, ಅದರಂತೆ ಕರ್ಮಫಲಭೋಕ್ತೃತ್ವವನ್ನು ತಿನ್ನುತ್ತಾನೆಂದು ಹೇಳಿದರೆ ಸಕಲಜಗತ್ತನ್ನೂ ಸಹ ತಿನ್ನುತ್ತಾನೆಂದು ಸಿದ್ಧವಾಯಿತು.

ಈ ಅಧಿಕರಣದ ಸಿದ್ಧಾಂತವನ್ನು ಅವಲಂಬಿಸಿ ಮುಂದಿನ ಗುಹಾಧಿಕರಣವು ಪ್ರವೃತ್ತವಾಗಿದೆಯೆಂದು 'ತತ್ರ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಸ್ವರ್ಗಕಾಮಾಧಿಕರಣದಲ್ಲಿ ಸಿದ್ಧವಾದ ಅಪೂರ್ವವನ್ನು ಅಪೇಕ್ಷಿಸಿ ಭಾವಾರ್ಥಾಧಿಕರಣವು ಹೊರಟಿದೆ. ಒಂದು ವೇಳೆ ಮುಂದಿನ ಅಧಿಕರಣದ ಸಿದ್ಧಾಂತದಿಂದ ಹಿಂದಿನ ಅಧಿಕರಣವು ಗತಾರ್ಥವೆಂದು ಹೇಳಿದರೆ ಭಾವಾರ್ಥಾಧಿಕರಣದಿಂದ ಸ್ವರ್ಗಕಾಮಾಧಿಕರಣಕ್ಕೆ ವೈಯರ್ಥ್ಯ ಬರಬೇಕಾಗುತ್ತದೆಂದು ಪೂರ್ವಮೀಮಾಂಸೆಯಲ್ಲಿ ನಿರ್ಣಯಿಸಿದ್ದಾರೆ. ಆದ್ದರಿಂದ ಪ್ರಕೃತ ಗುಹಾಧಿಕರಣದ ಸಿದ್ಧಾಂತದಿಂದ ಈ ಅಧಿಕರಣವು ಗತಾರ್ಥವೆಂದು ಹೇಳಬಾರದು.

ಗುರುರಾಜೀಯಮ್ – नन्वन्तरधिकरणन्यायेन श्रुतेर्मुख्यत्वाल्लिङ्गस्यापि ब्रह्मणि मुख्यत्वमेवेत्यभ्युपगन्तव्यम् । तथाच श्रुतेर्ब्रह्मण्यमुख्यत्वेन सम्भवेऽपि

लिङ्गस्यामुख्यत्वेनाप्यसम्भव इति कथं टीकाभिप्राय इत्यरुचेराह – यद्वेति ।। अभ्यधिकाशङ्कापक्षानुसारेण वाह – यद्वेति ।।

दण्डापूपनयेति ।। वेणुदण्डापाश्रितमध्यापूपपातनायन्दण्डपातनन्यायेनेत्यर्थः। तथाच वेण्वग्रापाश्रितापूपपातनार्थं न पृथक्प्रयासः । वंशपातनेनैव तत्सम्भवादिति भावः । एवं सामान्यस्यानुस्यूतत्वेन विशेषसिद्ध्या सामान्यस्यापि सिद्धेः । अन्यथा ऋग्वेदित्वे सिद्धेऽपि ब्राह्मण्याभावशङ्का स्यादिति भावः ।। तत्रेति ।। दण्डस्यापूपार्थमेव हन्तव्यत्वाकर्मफलात्तृत्वस्यात्तृत्वसामान्यसिद्ध्यर्थमेव साधनात् । सर्वात्तृत्वकर्मफल-भोक्तृत्वयोः प्रत्येकं स्वप्रधान्तवेनासिषाधयिषितत्वात् सामान्यविशेषभावस्य च पौर्वापर्यमात्रनिमित्तत्वान्नान्यतरेणान्यतरगतार्थतेति भावः ।

ಸಾರ

ಶ್ರುತಿ ಹಾಗೂ ಲಿಂಗಗಳೆರಡೂ ನಿರವಕಾಶವೆಂದು ಗ್ರಂಥಕಾರರು ಸಮರ್ಥಿಸಿದರು. ಆದರೆ ಟೀಕೆಯಲ್ಲಿ ಲಿಂಗವನ್ನಷ್ಟೇ ನಿರವಕಾಶವೆಂದು ಹೇಳಿದ್ದಾರೆ. ಈ ಟೀಕೆಯ ಅಭಿಪ್ರಾಯವನ್ನು ಹಿಂದೆ ಒಂದು ಪ್ರಕಾರದಲ್ಲಿ ಸ್ಪಷ್ಟಪಡಿಸಿದರು. ಈಗ ಮತ್ತೊಂದು ಪ್ರಕಾರದಲ್ಲಿ ವರ್ಣಿಸುತ್ತಿದ್ದಾರೆ. ಅದಿತಿತ್ವ ಎಂಬ ಲಿಂಗಕ್ಕೆ ಪ್ರವೃತ್ತಿನಿಮಿತ್ತವೆಂಬರ್ಥವನ್ನು ಪರಿಗಣಿಸಿದರೆ ತೀರದಲ್ಲಿ ಗಂಗಾಶಬ್ದವು ಬಂದರೂ ಸಹ ಗಂಗಾಪದಪ್ರವೃತ್ತಿನಿಮಿತ್ತವು ಬರುವುದಿಲ್ಲವೆಂದು ಹೇಗೆ ನಿರ್ಣಯವಾಗಿದೆಯೋ ಅದರಂತೆ ಅದಿತಿಶ್ರುತಿಯು ಪರಮಾತ್ಮನಲ್ಲಿ ಬಂದರೂ ಅದಿತಿತ್ವವೆಂಬ ಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಬರುವುದಿಲ್ಲವೆಂದು ಹಿಂದೆ ಸಮರ್ಥಿಸಿದರು.

ಈಗ ಅದಿತಿತ್ವವೆಂಬ ಲಿಂಗವನ್ನು ಜಾತಿರೂಪವೆಂದು ಪರಿಗಣಿಸಿ ಭಗವಂತನಲ್ಲಿ ಬರಲು ಸಾಧ್ಯವಿಲ್ಲವೆಂದು ಸಮರ್ಥಿಸುತ್ತಿದ್ದಾರೆ. ಈ ಪಕ್ಷದಲ್ಲಿ ಅಂತರಧಿಕರಣನ್ಯಾಯಕ್ಕೆ ಅದಿತಿಶ್ರುತಿಯು ವಿಷಯವಾಗಿದೆಯೆಂದು ಒಪ್ಪಲಾಗಿದೆ. ಅದಿತಿಶ್ರುತಿಯು ಪರಮಾತ್ಮನಲ್ಲಿ ಬರುವ ಮಾತ್ರದಿಂದ ಅದಿತಿತ್ವಲಿಂಗವು ಬರಬೇಕಾಗಿಲ್ಲ. ಏಕೆಂದರೆ 'ಅನಶ್ನನ್ನನ್ಯಃ' ಎಂಬ ಶ್ರುತಿಯು ಭಗವಂತನು ಏನನ್ನೂ ತಿನ್ನಲಾರನೆಂದು ಸ್ಪಷ್ಟವಾಗಿ ಹೇಳುತ್ತಿದೆ.

ಮುಂದಿನ ಅಧಿಕರಣದಲ್ಲಿ ಕರ್ಮಫಲಗಳನ್ನು ಭಗವಂತನು ತಿನ್ನುತ್ತಾನೆಂದು ಸಮರ್ಥಿಸುತ್ತಾರೆ. ಅದರಿಂದಲೇ ಈ ಅಧಿಕರಣದಲ್ಲಿ ಹೇಳುತ್ತಿರುವ ಸಕಲಪದಾರ್ಥಗಳನ್ನು ತಿನ್ನುತ್ತಾನೆಂದು ನಿರ್ಣಯವಾಗುತ್ತದೆ. ಕೋಲನ್ನೇ ತಿನ್ನುವವನು ಅಪೂಪವನ್ನು ತಿನ್ನಲು ಅಸಮರ್ಥನಾಗುತ್ತಾನೆಯೇ ? ಎಂದು ಪ್ರಶ್ನಿಸಬಾರದು. ಮುಂದಿನ ಅಧಿಕರಣವು ಈ ಅಧಿಕರಣದ ಸಿದ್ಧಾಂತವನ್ನು ಅಪೇಕ್ಷಿಸಿ ಹೊರಟಿರುವುದರಿಂದ ಮುಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ವೈಯರ್ಥ್ಯವನ್ನು ಹೇಳಬಾರದು.

• • • • •

ಶ್ರುತಿಲಿಂಗಗಳ ನಿರವಕಾಶತ್ವವು ನ್ಯಾಯವಿವರಣಕ್ಕೆ ಸಮ್ಮತ

तात्पर्यचन्द्रिका

अथवा – वक्ष्यमाणरीत्या अत्र विष्णुलिङ्गाभावेन अन्तरधिकरणन्यायविषयतया 'अदितेः' इत्यत्रेव 'अदितित्वं' इत्यत्रापि अदितिप्रातिपदिकस्य प्रसिद्धादितिपरत्वात्ततः परेण त्वप्रत्ययेनापि तद्गतधर्म एव वक्तव्यः ।

एवञ्च ''तद्दध्नो दधित्वं'' इत्यादाविव प्रसिद्धादित्युद्देशात् प्रसिद्धार्थ एव शब्दान्वाख्यानस्याऽऽकाङ्क्षितत्वाच्च श्रुतिलिङ्गञ्च निरवकाशमिति न्यायविवरणाभिप्रायः । अत एव न्यायविवरणस्थचशब्दस्वारस्यम् ।

टीकायां श्रुतेस्सावकाशत्वोक्तिस्तु सजातीयदेवतावाचिशब्दसमन्वयस्य सिद्धत्वमभिप्रेत्येति द्रष्टव्यम् ।

ಅನುವಾದ - ಮುಂದೆ ಹೇಳುವ ಪ್ರಕಾರ 'ತದದಿತೇಃ' ಎಂಬ ಶ್ರುತಿಯಲ್ಲಿ ನಿರವಕಾಶವಾದ ವಿಷ್ಣುಲಿಂಗವಿರುವುದಿಲ್ಲ. ಆದ್ದರಿಂದ ಅಂತರಧಿಕರಣದ ನ್ಯಾಯಕ್ಕೆ ಅದಿತಿಶ್ರುತಿಯು ವಿಷಯವಾಗುವುದಿಲ್ಲ. ಆದ್ದರಿಂದಲೇ ಅದಿತಿ ಶಬ್ದವು ಅದಿತಿದೇವಿಯನ್ನೇ ಪ್ರತಿಪಾದಿಸುತ್ತದೆ. ಹೀಗೆ ಅದಿತಿಶಬ್ದವು ಅದಿತಿದೇವಿಯನ್ನು ಪ್ರತಿಪಾದಿಸುವಂತೆ 'ಅದಿತಿತ್ವಂ' ಎಂಬಲ್ಲಿ 'ತ್ವ' ಪ್ರತ್ಯಯದ ಹಿಂದಿರುವ ಅದಿತಿಪ್ರಾತಿಪದಿಕವೂ ಸಹ ಪ್ರಸಿದ್ಧಾದ ಅದಿತಿದೇವಿಯನ್ನೇ ಪ್ರತಿಪಾದಿಸುತ್ತದೆ. ಆದ್ದರಿಂದ ಅದಿತಿಪ್ರಾತಿಪದಿಕದ ಮುಂದಿರುವ 'ತ್ವ' ಪ್ರತ್ಯಯವೂ ಸಹ ಅದಿತಿಯದೇವಿಯಲ್ಲಿರುವ ಧರ್ಮವನ್ನೇ ಹೇಳಬೇಕು.

'ತದ್ದಧ್ನೋ ದಧಿತ್ವಂ' ಎಂಬಲ್ಲಿ ಯಾವರೀತಿಯಾಗಿ ಪ್ರಸಿದ್ಧವಾದ ದಧಿಯನ್ನೇ ಉದ್ದೇಶವನ್ನಾಗಿ ಹೇಳಲಾಗುತ್ತದೋ ಅದರಂತೆ ಅದಿತಿಯನ್ನು ಉದ್ದೇಶಿಸಿ ಪ್ರಸಿದ್ಧಾರ್ಥದಲ್ಲೇ ಶಬ್ದದ ಅನ್ವಾಖ್ಯಾನವು ಆಕಾಂಕ್ಷಿತವಾಗುತ್ತದೆ. ಆದ್ದರಿಂದ ಶ್ರುತಿ ಹಾಗೂ ಲಿಂಗಗಳೆರಡು ನಿರವಕಾಶಗಳಾಗಿವೆ ಎಂಬುದು ನ್ಯಾಯವಿವರಣದ ಅಭಿಪ್ರಾಯ. ಹೀಗೆ ಶ್ರುತಿ ಹಾಗೂ ಲಿಂಗಗಳೆರಡೂ ನಿರವಕಾಶಗಳಾದ್ದರಿಂದಲೇ ನ್ಯಾಯವಿವರಣದಲ್ಲಿರುವ 'ಚ' ಶಬ್ದವು ಸ್ವರಸಾರ್ಥವುಳ್ಳದ್ದಾಗುತ್ತದೆ.

ಹಾಗಾದರೆ ಟೀಕೆಯಲ್ಲಿ ಶ್ರುತಿಗೆ ಸಾವಕಾಶತ್ವವನ್ನು ಏಕೆ ಹೇಳಿದರು ಎಂದರೆ ಅದಿತಿಶಬ್ದಕ್ಕೆ ಸಜಾತೀಯವಾದ ದೇವತಾವಾಚಕವಾದ ಇಂದ್ರಾದಿ ಶಬ್ದಗಳು ಅಂತರಧಿಕರಣದ ನ್ಯಾಯದಿಂದ ಸಿದ್ಧವಾಗಿವೆ ಎಂಬ ಅಭಿಪ್ರಾಯದಿಂದಷ್ಟೇ ಟೀಕೆಯಲ್ಲಿ ಅದಿತಿಶಬ್ದಕ್ಕೆ ಸಾವಕಾಶತ್ವವನ್ನು ಹೇಳಿದ್ದಾರೆಂದು ತಿಳಿಯಬೇಕು.

ಪ್ರಕಾಶಃ –

ಏವಂ ಟೀಕೋಕ್ತಂ ಶ್ರುತೇಃ ಸಾವಕಾಶತ್ವೇऽಪಿ ಲಿಙ್ಗಸ್ಯ ನಿರವಕಶತ್ವಂ ದ್ವೇಧೋಪಪಾದ್ಯ, ಅಧುನಾ ಪ್ರಾಗುಕ್ತನ್ಯಾಯವಿವರಣಸ್ಯ ತಾತ್ಪರ್ಯಾನ್ತರಮಾಹ – ಅಥ ವೇತಿ ।

ವಕ್ಷ್ಯಮಾಣೇತಿ । ''ಸರ್ವಶಬ್ದಸ್ತು ಯೋಗ್ಯಸರ್ವಪರಃ'' ಇತಿ ವಕ್ಷ್ಯಮಾಣರೀತ್ಯೇತ್ಯರ್ಥಃ । **ಅದಿತೇರಿತ್ಯತ್ರೇವೇತಿ ।** ಶ್ರುತಿಬಾಧಕಲಿಙ್ಗಾಭಾವೇನಾನ್ತರ್ನಯನ್ಯಾಯಾವಿಷಯತ್ವೇನ ಶ್ರುತೇರ್ವಿಷ್ಣೋ ನಿರವಕಾಶತ್ವಾದ್ಯಥಾ ಪ್ರಸಿದ್ಧಾದಿತಿದೇವತಾಪರತ್ವಂ ತದ್ವದಿತ್ಯರ್ಥಃ । ತಾವತಾ ವಾಕ್ಯಸ್ಯ ಕೋऽರ್ಥ ಇತ್ಯತ ಆಹ – **ಏವಞ್ಚೇತಿ ।** ಶ್ರುತೇಃ ಪ್ರಸಿದ್ಧಾರ್ಥತ್ವೇ ಸತೀತ್ಯರ್ಥಃ ।

ವಿವರಣೆ - ಇಲ್ಲಿಯ ತನಕ ಟೀಕೆಯಲ್ಲಿ ಹೇಳಲ್ಪಟ್ಟ ಶ್ರುತಿಗೆ ಸಾವಕಾಶತ್ವವನ್ನು ಲಿಂಗಕ್ಕೆ ನಿರವಕಾಶತ್ವವನ್ನು ಎರಡು ಬಗೆಯಲ್ಲಿ ಉಪಪಾದಿಸಿದರು. ಪ್ರಕೃತ ಹಿಂದೆ ಉಲ್ಲೇಖಿಸಿದ ನ್ಯಾಯವಿವರಣದ ಮಾತಿಗೆ ಮತ್ತೊಂದು ಬಗೆಯಲ್ಲಿ 'ಅಥವಾ' ಇತ್ಯಾದಿ ವ್ಯಾಕರಿಂದ ವ್ಯಾಖ್ಯಾನಿಸುತ್ತಿದ್ದಾರೆ.

'ವಕ್ಷ್ಯಮಾಣರೀತ್ಯಾ' ಎಂದರೆ ಸರ್ವಶಬ್ದಕ್ಕೆ ತನಗೆ ತಿನ್ನಲು ಯೋಗ್ಯವಾದ ಎಲ್ಲವನ್ನು ತಿನ್ನುತ್ತಾಳೆಂಬುದನ್ನು ಮುಂದೆ ಹೇಳುತ್ತಾರೆ. 'ಅದಿತಿರಿತ್ಯತ್ರೇವ' ಎಂಬುದಕ್ಕೆ ಹೀಗರ್ಥ - ಶ್ರುತಿಗೆ ಬಾಧಕವಾದ ಲಿಂಗವಿಲ್ಲದ ಕಾರಣ ಅಂತರಧಿಕರಣದ ನ್ಯಾಯಕ್ಕೆ ಅದಿತಿಶ್ರುತಿಯು ವಿಷಯವಾಗುವುದಿಲ್ಲ. ಆದ್ದರಿಂದ ಅದಿತಿಶ್ರುತಿಯನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದಂತಾಗಲಿಲ್ಲ, ಹೊರತಾಗಿ ಪ್ರಸಿದ್ಧಳಾದ ಅದಿತಿದೇವಿಯನ್ನೇ ಅದಿತಿಶ್ರುತಿಯು ಹೇಗೆ ಪ್ರತಿಪಾದಿಸುತ್ತದೋ ಅದರಂತೆ ಎಂದು ತಿಳಿಯಬೇಕು. ಹೀಗೆ ಹೇಳಿದ್ದರಿಂದ ವಾಕ್ಯಕ್ಕೆ ಯಾವ ಅರ್ಥವನ್ನು ಹೇಳಿದಂತಾಯಿತು? ಎಂಬ ಪ್ರಶ್ನೆಗೆ 'ಏವಂಚ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಶ್ರುತಿಗೆ ಪ್ರಸಿದ್ಧಾರ್ಥವನ್ನು ಹೇಳಿದ್ದಾರೆ ಎಂದರ್ಥ.

ಪ್ರಕಾಶಃ – ತದ್ಧ್ನ ಇತಿ । ''ಏತದಸ್ಮೈ ದಧಿ ಕುರುತೇತ್ಯಬ್ರವೀತ್ । ತದಸ್ಮೈ ದಧ್ನ್ಯಕುರ್ವನ್ ತದೇನಮಧಿನೋತ್ತದ್ಧ್ನೋ ದಧಿತ್ವಮ್'' ಇತಿ ಪೂರ್ವವಾಕ್ಯೇ ಪ್ರಕೃತಸ್ಯ ಪ್ರಸಿದ್ಧಸ್ಯೈವ ದಧ್ನಃ 'ತದೇನಮಧಿನೋತ್' ಧಿನು ಪುಷ್ಟೌ' ಅಪುಷ್ಣಾತ್, 'ಧಿವಿ ಪ್ರೀಣನೇ' ಅಪ್ರೀಣಾದ್ವಾ । ತತ್ಪೋಷಕತ್ವಾದ್ಧೇವ ಪ್ರಸಿದ್ಧದಧ್ನೋ ದಧಿಪದವಾಚ್ಯಸ್ಯ ದಧಿತ್ವಂ ದಧಿಪದಪ್ರವೃತ್ತಿನಿಮಿತ್ತಮಿತಿ ಪ್ರಸಿದ್ಧಸ್ಯೈವ ದಧಿಪದೇನೋದೇಶಾತ್ ತದ್ವಾಕ್ಯಂ ಯಥಾ ತತ್ರ ತಚ್ಛಬ್ದಾನ್ವಾಖ್ಯಾನಪರಂ, ತಥೇದಮಪಿ ದೇವಮಾತರ್ಯದಿತೌ ಅದಿತಿಶಬ್ದಪ್ರವೃತ್ತಿನಿಮಿತ್ತೋಕ್ತಿಪರಮಿತ್ಯರ್ಥಃ ।

''ಏತದಸ್ಮೈ ದಧಿ ಕುರುತೇತ್ಯಬ್ರವೀತ್ । ತದಸ್ಮೈ ದದ್ಧ್ನ್ಯಕುರ್ವನ್ ತದೇನಮಧಿನೋತ್ತದ್ಧ್ನೋ ದಧಿತ್ವಮ್'' ಎಂಬುದಾಗಿ ಹಿಂದಿನ ವಾಕ್ಯದಲ್ಲಿ ದಧಿಯು ಪ್ರಕೃತವಾಗಿದೆ. ಇಲ್ಲಿರುವ ದಧಿ ಶಬ್ದದಿಂದ ಪ್ರಸಿದ್ಧವಾದ ದಧಿಯನ್ನೇ ವಿವಕ್ಷಿಸಬೇಕು. ಏಕೆಂದರೆ 'ತದೇನಮಧಿನೋತ್' ಮತ್ತು 'ಧಿನು ಪುಷ್ಟೌ' ಎಂಬಂತೆ ದಧಿಯು ಪುಷ್ಟೀಕರಿಸುತ್ತದೆ. 'ಧಿವಿ ಪ್ರೀಣನೇ' ಎಂದು ವಿವಕ್ಷಿಸಿದಾಗ ದಧಿಯು ಸಂತೋಷ ಪಡಿಸುತ್ತದೆ. ಆದ್ದರಿಂದ ದಧಿ ಪದದಿಂದ ಪ್ರಸಿದ್ಧವಾದ ದಧಿಯೇ ವಾಚ್ಯವಾಗಿದೆ. ಆ ದಧಿಯಲ್ಲಿರುವ ದಧಿತ್ವವು

ದಧಿಪದದ ಪ್ರವೃತಿನಿಮಿತ್ತವಾಗಿದೆ. ಇಲ್ಲಿ ಯಾವರೀತಿಯಾಗಿ ಪ್ರಸಿದ್ಧವಾದ ದಧಿ ಪದದಿಂದ ಈ ವಾಕ್ಯವು ದಧಿಯನ್ನು ಉದ್ದೇಶಿಸಿರುವುದರಿಂದ ದಧಿಶಬ್ದದ ಅನ್ವಾಖ್ಯಾನಪರವಾಗಿದೆಯೋ ಅದರಂತೆ ಪ್ರಕೃತದಲ್ಲಿಯೂ ದೇವಮಾತೆಯಾದ ಅದಿತಿದೇವಿಯಲ್ಲಿ ಅದಿತಿಶಬ್ದದ ಪ್ರವೃತ್ತಿನಿಮಿತ್ತವನ್ನು ಹೇಳಬೇಕು.

ಪ್ರಕಾಶಃ – ಏತೇನ – ''ಅದಿತೇರದಿತಿತ್ವಂ'' ಇತಿ ಹಿ ಶ್ರೂಯತೇ । ತ್ವಪ್ರತ್ಯಯಶ್ಚ ಜಾತೇರ್ವಾಚಕಃ, ಯಥಾ ಪೃಥಿವೀತ್ವಂ ಗೋತ್ವಮಿತ್ಯಾದೌ । ತದಸಮ್ಭವೇ ಸ್ವರೂಪಸ್ಯೈವ, ಯಥಾऽऽಕಾಶತ್ವಂ ಚನ್ದ್ರತ್ವಂ ಇತ್ಯಾದೌ । ತಸ್ಮಾದದಿತಿತ್ವಂ ನ ಜಾತಿಃ, ವ್ಯಕ್ತೇರಭೇದಾತ್ । ತತೋऽದಿತಿತ್ವಂ ಅದಿತೇಸ್ತ್ವರೂಪಮೇವ । ನ ಚಾದಿತಿಸ್ವರೂಪಮೀಶ್ವರಸ್ಯ ಸಮ್ಭವತಿ, ಅತ್ಯನ್ತಭಿನ್ನತ್ವಾತ್ । ನ ಚಾದಿತಿಶಬ್ದೋ ಭಗವತ್ಪರ ಇತ್ಯನುಪಪತ್ತ್ಯಭಾವಃ, ಅದಿತಿತ್ವೇನಾದಿತಿಶಬ್ದಸ್ಯ ತತ್ರ ವಿಧಿತ್ಸಿತತ್ವೇನಾನುವಾದಾನುಪಪತ್ತೇಃ । ಅನ್ಯಥಾ ಅನ್ಯೋನ್ಯಾಶ್ರಯಪ್ರಸಙ್ಗಾದಿತಿ 'ಪೂರ್ವಪಕ್ಷೀ ಮನ್ಯತೇ' ಇತಿ ನ್ಯಾಯವಿವರಣಟೀಕಾ ವಿಕೃತಾ ।

ಟೀಕಾವಿರೋಧಂ ನಿರಾಹ – **ಟೀಕಾಯಾಮಿತಿ । ಸಜಾತೀಯೇತಿ** - ಅತ ಏವ ನ್ಯಾಯವಿವರಣಟೀಕಾಯಾಂ ''ನಚ ಶ್ರುತಿರಿನ್ದ್ರಾದಿಶ್ರುತಿರಿವ ವಿಷ್ಣೌ ಸಾವಕಾಶಾ'' ಇತ್ಯೇವೋಕ್ತಮಿತಿ ಭಾವಃ ।

ಹೀಗೆ ಹೇಳಿದ್ದರಿಂದ ನ್ಯಾಯವಿವರಣಕ್ಕೆ ಹೀಗೆ ವ್ಯಾಖ್ಯಾನಿಸಿದಂತಾಯಿತು - 'ಅದಿತೇರದಿತಿತ್ವಂ' ಎಂದು ಶ್ರುತಿಯಲ್ಲಿ ಕೇಳಿಸುತ್ತಿದೆ. ಇಲ್ಲಿರುವ ತ್ವಪ್ರತ್ಯಯವು ಜಾತಿವಾಚಕವಾಗಿದೆ. ಪೃಥಿವೀತ್ವಂ, ಗೋತ್ವಂ ಎಂಬಲ್ಲಿರುವ ಪ್ರತ್ಯಯವು ಜಾತಿವಾಚಕವಾದಂತೆ. ಒಂದು ವೇಳೆ 'ತ್ವ' ಪ್ರತ್ಯಯವು ಜಾತಿಯನ್ನು ಹೇಳಲು ಸಾಧ್ಯವಿಲ್ಲವೆಂದರೆ ಸ್ವರೂಪವನ್ನಷ್ಟೇ ಹೇಳುತ್ತದೆ. ಯಾವ ರೀತಿಯಾಗಿ ಆಕಾಶತ್ವಂ, ಚಂದ್ರತ್ವಂ ಇತ್ಯಾದಿ ಸ್ಥಳಗಳಲ್ಲಿ 'ತ್ವ' ಪ್ರತ್ಯಯವು ಆಕಾಶಸ್ವರೂಪ, ಚಂದ್ರಸ್ವರೂಪ ಎಂದಷ್ಟೇ ಅರ್ಥವನ್ನು ಹೇಗೆ ಹೇಳುತ್ತದೋ ಅದರಂತೆ ಅದಿತಿತ್ವ ಎಂಬಲ್ಲಿರುವ 'ತ್ವ' ಪ್ರತ್ಯಯವೂ ಸಹ ಜಾತಿಯನ್ನು ಹೇಳದೆ ಸ್ವರೂಪವನ್ನು ಹೇಳುತ್ತದೆ. ಏಕೆಂದರೆ ವ್ಯಕ್ತೇರಭೇದವು ಜಾತಿಬಾಧವಕಾಗಿದೆ. ಒಂದೇ ವ್ಯಕ್ತಿಯಲ್ಲಿ ಜಾತಿ ಇರಲು ಸಾಧ್ಯವಿಲ್ಲವೆಂದರ್ಥ. ಇಂತಹ ಅದಿತಿಸ್ವರೂಪವು ಈಶ್ವರನಾಗಲು ಸಾಧ್ಯವಿಲ್ಲ. ಈಶ್ವರನಿಗಿಂತ ಅದಿತಿದೇವಿಯು ಅತ್ಯಂತ ಭಿನ್ನಳಾಗಿದ್ದಾಳೆ. ಇನ್ನು ಅದಿತಿಶಬ್ದವು ಭಗವತ್ಪರವೆಂದಾಗ ಯಾವುದೇ ಅನುಪಪತ್ತಿ ಇಲ್ಲವೆಂದೂ ಸಹ ಹೇಳಬಾರದು. ಏಕೆಂದರೆ ಅದಿತಿಶಬ್ದವನ್ನು ಅನುವಾದ ಮಾಡಿ ಭಗವತ್ಪರತ್ವವೆಂದು ಸಾಧಿಸಬೇಕಾಗುತ್ತದೆ. ಆದರೆ ಅದಿತಿಶಬ್ದವು ಈಗ ತಾನೇ ಅದಿತಿತ್ವ ಧರ್ಮವನ್ನು ವಿಧಾನ ಮಾಡುತ್ತಿರುವುದರಿಂದ ಅನುವಾದವೆಂದು ಹೇಳಬಾರದು. ಪೂರ್ವದಲ್ಲಿ ವಿಧಾನ ಮಾಡಿದ್ದರೆ ಅದನ್ನು ಅನುವಾದ ಮಾಡಬಹುದಿತ್ತು. ಒಂದು ವೇಳೆ ವಿಧಾನ ಮಾಡಲು ಇಚ್ಛಿಸಿದ್ದೂ ಸಹ ಅನುವಾದಕ್ಕೆ ವಿಷಯವಾಗುವುದಾದರೆ ಅನ್ಯೋನ್ಯಾಶ್ರಯದೋಷವೂ ಬರುತ್ತದೆ. ಹೀಗೆ ಪೂರ್ವಪಕ್ಷಿಯು ತಿಳಿಯುತ್ತಾನೆ. ಇತ್ಯಾದಿಯಾಗಿ ನ್ಯಾಯವಿವರಣಟೀಕೆಯಲ್ಲಿ ಹೇಳಲಾಗಿದೆ. ಇದನ್ನು ಈಗ ವಿವರಿಸಿದಂತಾಯಿತು.

ತತ್ತ್ವಪ್ರಕಾಶಿಕೆಯ ವಿರೋಧವನ್ನು 'ಟೀಕಾಯಾಂ' ಎಂಬುದರಿಂದ ನಿರಾಕರಿಸುತ್ತಿದ್ದಾರೆ. ಆದ್ದರಿಂದ ಗ್ರಂಥದಲ್ಲಿ 'ಸಜಾತೀಯ' ಎಂಬ ಪದವಿದೆ. ಆದ್ದರಿಂದಲೇ ನ್ಯಾಯವಿವರಣೆಯ ಟೀಕೆಯಲ್ಲಿ ''ನಚ

ಶ್ರುತಿರಿಂದ್ರಾದಿಶ್ರುತಿರಿವ ವಿಷ್ಣೌ ಸಾವಕಾಶಾ'' ಅದಿತಿಶ್ರುತಿಯು ಇಂದ್ರಾದಿಶ್ರುತಿಗಳಂತೆ ವಿಷ್ಣುವಿನಲ್ಲಿ ಸಾವಕಾಶವಾಗಿಲ್ಲ ಎಂದು ಹೇಳಿದ್ದನ್ನು ಸ್ಮರಿಸಿಕೊಳ್ಳಬೇಕು.

ಗುರುರಾಜೀಯಮ್ – ನನು ಚಾನ್ತರಧಿಕರಣನ್ಯಾಯೋ ನಿರವಕಾಶಲಿಙ್ಗೇನ ಸಾವಕಾಶಶ್ರುತ್ಯಾದಿ ಬಾಧಃ । ತಥಾಚ ತತ್ತಚ್ಛಬ್ದಪ್ರವೃತ್ತಿನಿಮಿತ್ತಸ್ಯ ಭಗವದ್ಗತತ್ವಾತ್ ಸರ್ವೇಷಾಮಪಿ ಶಬ್ದಾನಾಂ ಭಗವತಿ ಮುಖ್ಯತ್ವಮಿತ್ಯಪ್ಯನ್ತರಧಿಕರಣನ್ಯಾಯಃ । ತತ್ರ ಪೂರ್ವಾಧಿಕರಣ ಇವ ನಾತ್ರ ನಿರವಕಾಶಬ್ರಹ್ಮಲಿಙ್ಗಮಸ್ತಿ । ಯೇನಾದಿತಿಶ್ರುತೇರ್ಭಗವತಿ ಮುಖ್ಯತ್ವಂ ಸ್ಯಾತ್ । ನಾಪಿ ತಚ್ಛಬ್ದಪ್ರವೃತ್ತಿನಿಮಿತ್ತಸ್ಯ ಭಗವದ್ಗತತ್ವೇನ ಭಗವತಿ ತಚ್ಛಬ್ದಸ್ಯ ಮುಖ್ಯತ್ವಮ್ । ಅನಶ್ನನ್ನನ್ಯ ಇತಿ ಚ ಶ್ರುತ್ಯಾऽನತ್ತೃತ್ವೇನ ಪ್ರಮಿತೇ ಬ್ರಹ್ಮಣ್ಯದಿತಿಶಬ್ದಪ್ರವೃತ್ತಿನಿಮಿತ್ತಸ್ಯ ಸರ್ವಾತ್ತೃತ್ವಸ್ಯಾಭಾವಾತ್ । ತಥಾಚ ಕಥಮನ್ತರಧಿಕರಣನ್ಯಾಯೇನ ಶ್ರುತೇರ್ಭಗವತಿ ಮುಖ್ಯತ್ವಮಿತ್ಯಪರಿತೋಷಾದಾಹ – **ಅಥವೇತಿ** ।।

ನನು ಪ್ರಾತಿಪದಿಕಸ್ಯ ಪ್ರಸಿದ್ಧಾದಿತಿಪರತ್ವೇऽಪಿ ತ್ವಪ್ರತ್ಯಯಸ್ಯ ತದ್ಗತಧರ್ಮಪ್ರತಿಪಾದಕತ್ವಂ ಕುತಃ । ಕುತ್ರಾಪ್ಯದರ್ಶನಾದಿತ್ಯತ ಆಹ – **ಏವಞ್ಚೇತಿ** ।। **ಪ್ರಸಿದ್ಧಾದಿತ್ಯುದೇಶಾದಿತಿ** ।। ಪ್ರಸಿದ್ಧಾಮದಿತಿಮುದ್ದಿಶ್ಯೇತ್ಯರ್ಥಃ ।

ನನು ಚಾದಿತಿರ್ದೇವತಾಮಯೀತ್ಯಾದಾವದಿತಿಶಬ್ದಸ್ಯ ಭಗವತ್ಯಪಿ ಪ್ರಯೋಗोऽಸ್ತೀತ್ಯತ ಆಹ – **ಪ್ರಸಿದ್ಧಾರ್ಥ ಏವೇತಿ** ।। **ಅತ ಏವೇತಿ** ।। ಶ್ರುತಿಲಿಙ್ಗಯೋರುಭಯೋರಪಿ ನಿರವಕಾಶತ್ವಾದೇವೇತ್ಯರ್ಥಃ । ನನ್ವೇವಂ ಟೀಕೋಕ್ತಾಯಾಃ ಸಾವಕಾಶತ್ವೋಕ್ತೇಃ ಕಾ ಗತಿರಿತ್ಯತ ಆಹ – **ಟೀಕಾಯಾಮಿತಿ** ।।

ಸಾರ

ಇಲ್ಲಿಯ ದರ್ಶಕ ತತ್ತ್ವಪ್ರಕಾಶಿಕಾ ವಾಕ್ಯಕ್ಕೆ ಎರಡು ಬಗೆಯಲ್ಲಿ ವ್ಯಾಖ್ಯಾನಿಸಿ ಪ್ರಕೃತ ನ್ಯಾಯವಿವರಣಕ್ಕೆ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. ಅದಿತಿಶ್ರುತಿ ಹಾಗೂ ಅದಿತಿತ್ವಲಿಂಗ ಎರಡೂ ಸಹ ನಿರವಕಾಶಗಳೇ ಆಗಿವೆ. ಅದಿತಿಶ್ರುತಿಯಲ್ಲಿ ಯಾವುದೇ ವಿಷ್ಣುಲಿಂಗಗಳು ಇಲ್ಲದ ಕಾರಣ ದೇವಮಾತೆಯನ್ನೇ ಅದಿತಿಶಬ್ದವು ಪ್ರತಿಪಾದಿಸುತ್ತದೆ. ಆದ್ದರಿಂದ ಅದಿತಿಶ್ರುತಿಯು ನಿರವಕಾಶವಾಯಿತು. ಇದರಂತೆ ಅದಿತಿತ್ವವೆಂಬ ಲಿಂಗವೂ ಸಹ ನಿರವಕಾಶವಾಗಿದೆ. ಏಕೆಂದರೆ ಅದಿತಿತ್ವ ಎಂಬಲ್ಲಿರುವ ಅದಿತಿ ಎಂಬ ಪ್ರಾತಿಪದಿಕವು ಅದಿತಿದೇವಿಯನ್ನು ಪ್ರತಿಪಾದಿಸಿದ ಮೇಲೆ 'ತ್ವ' ಪ್ರತ್ಯಯವೂ ಸಹ ಅದಿತಿದೇವಿಯಲ್ಲಿರುವ ಧರ್ಮವನ್ನೇ ಪ್ರತಿಪಾದಿಸಬೇಕಲ್ಲವೇ? ಹೀಗೆ ಶ್ರುತಿ ಹಾಗೂ ಲಿಂಗಗಳೆರಡು ನಿರವಕಾಶಗಳಾಗುತ್ತವೆ. 'ಶ್ರುತಿರ್ಲಿಂಗಂಚ' ಎಂಬಲ್ಲಿರುವ ನ್ಯಾಯವಿವರಣದ 'ಚ' ಶಬ್ದವೂ ಸಹ ಅತ್ಯಂತ ಸ್ವರಸವಾಗುತ್ತದೆ.

ವಿಷ್ಣುಲಿಂಗ ಹಾಗೂ ವಿಷ್ಣುಪ್ರಕರಣಗಳು ಸಾವಕಾಶವಾಗಿವೆ

तात्पर्यचन्द्रिका

श्रुतौ सर्वशब्दस्त्वदित्यदनयोग्यसर्वपरः । स्वीकृतश्च सिद्धान्तिनाऽप्यत्रैव प्रकरणे ''सर्वस्यैतस्यात्ता भवति, सर्वमस्यान्नं भवति, य एवमेतददितेरदितित्वं वेद'' इत्युत्तरवाक्यस्थसर्वशब्दस्य सङ्कोचः ।

यद्वा – श्रुतिबलाददितेरेव असङ्कुचितसर्वात्तृत्वमस्तु । अत्र चाद्यः पक्षः ''अदितिरपि स्वभोग्यस्यान्नपानादेर्भोक्त्री'' इति सुधोक्तः । द्वितीयस्तु अत्र टीकायाम्,

नचाऽऽद्यपक्षे भाष्यस्थजन्मादिसूत्रोक्तासङ्कुचितसर्वसंहर्तृत्वस्य अतिव्याप्युक्तिरयुक्तेति वाच्यम्,

अदितेः स्वातन्त्र्येण कतिपयसंहर्तृत्वे ब्रह्मणस्सर्वसंहर्तृत्वायोगेन कतिपयसंहर्तृत्वस्य लक्षणत्वेनातिव्याप्तिसम्भवात् ।

न चादेर्भक्षणार्थत्वेन अदितेरत्तृत्वेऽपि पक्षद्वयेऽपि संहर्तृत्वस्य नातिव्याप्तिरिति शङ्क्यम्, ''मृत्युनैवेदम्'' इत्युपक्रमे मृत्युशब्दात्, ''यद्यदेवासृजत तत्तदत्तुमध्रियत'' इति च सृष्टिप्रतियोगित्वाद्भक्षणस्यापि संहारविशेषत्वात् ऊर्णनाभ्यादिवच्च भगवतः संहर्तृत्वस्यात्तृत्वरूपत्वात् ।

''अद्यतेऽत्ति च भूतानि''

स सर्गकाले च करोति सर्वं संहारकाले तु तदत्ति भूयः ।

''स्रष्टा पाता तथैवात्ता'' इत्यादौ संहारेऽदधातुप्रयोगाच्च । अत एव टीकायां ''संहर्तृत्वापरपर्यायवाच्यमत्तृत्वम्'' इत्युक्तम् ।

''नैवेह किञ्चनाग्र आसीत्'' इत्यादिनाऽस्य प्रकरणस्य वैष्णवत्वेऽपि, दर्शपौर्णमासप्रकरणात्, ''पूषा प्रपिष्टभागः'' इत्युक्तं पौष्णं पेषणमिव,

विष्णुप्रकरणात् ''तददितेरदितित्वं'' इत्यादिकमुत्कृष्यतां, प्रकरणाच्छ्रुतिर्लिङ्गयो-र्बलीयस्त्वात् ।

अथवा – यथा ''अभिक्रामं जुहोति'' इति दर्शपौर्णमासप्रकरणे श्रुतस्य अभिक्रमणस्य तदङ्गप्रयाजान्वयार्थं प्रयाजानामवान्तरप्रकरणं, तथा विष्णुप्रकरणेऽदि-तेरवान्तरप्रकरणमस्तु ।

यद्वा – अदितिश्रुतिबलात् ''नैवेह'' इत्यादिमहाप्रकरणमप्यदितेरेवेति ।।

ಅನುವಾದ - ಶ್ರುತಿಯಲ್ಲಿರುವ ಸರ್ವಶಬ್ದದಿಂದ ಅದಿತಿಯು ತಿನ್ನಲು ಯೋಗ್ಯವಾದ ಸಕಲ ಪದಾರ್ಥಗಳನ್ನಷ್ಟೇ ವಿವಕ್ಷಿಸಬೇಕು. ಹೀಗೆ ಸರ್ವಶಬ್ದಕ್ಕೆ ಸಂಕೋಚ ಮಾಡಿ ಅರ್ಥೈಸುವುದು ಸಿದ್ಧಾಂತಿಗಳೂ ಸಹ ಒಪ್ಪಿದ್ದಾರೆ. ಇದೇ ಪ್ರಕರಣದಲ್ಲಿ ''ಸರ್ವಸ್ಯೈತಸ್ಯಾತ್ತಾ ಭವತಿ, ಸರ್ವಮಸ್ಯಾನ್ನಂ ಭವತಿ, ಯ ಏವಮೇತದದಿತೇರದಿತಿತ್ವಂ ವೇದ'' ಎಂಬುದು ಮುಂದಿನ ವಾಕ್ಯ. ಈ ವಾಕ್ಯದಲ್ಲಿ ಯಾರು ಸರ್ವಾತ್ತೃತ್ವ ಗುಣವನ್ನು ಉಪಾಸಿಸುತ್ತಾರೋ ಅವರೂ ಸಹ ಸಕಲವನ್ನು ಭೋಗಿಸುತ್ತಾರೆಂದು ಹೇಳಲಾಗಿದೆ. ಇಲ್ಲಿರುವ ಸರ್ವಶಬ್ದಕ್ಕೆ ಆಯಾ ಜೀವರಿಂದ ತಿನ್ನಲು ಯೋಗ್ಯವಾದ ಪದಾರ್ಥಗಳಲ್ಲಿ ಸರ್ವಶಬ್ದಕ್ಕೆ ಸಂಕೋಚ ಮಾಡಿ ಅರ್ಥವನ್ನು ಹೇಳುತ್ತಾರೆ.

ಅಥವಾ ಅದಿತಿಶ್ರುತಿಯ ಬಲದಿಂದ ಅದಿತಿದೇವಿಯಲ್ಲಿಯೇ ಅಸಂಕುಚಿತವಾದ ಸಕಲಪದಾರ್ಥಗಳ ಅತ್ಯತ್ತೃತ್ವವನ್ನು ಹೇಳಬಹುದು.

ಇವೆರಡರಲ್ಲಿ ಅದಿತಿಯೂ ಸಹ ತನಗೆ ಯೋಗ್ಯವಾದ ಅನ್ನಪಾನಾದಿಗಳ ಭೋಕ್ತೃವಾಗಿದ್ದಾಳೆ. ಎಂಬ ಮೊದಲನೇ ಪಕ್ಷವು ಶ್ರುತಿಯಲ್ಲಿ ಹೇಳಲ್ಪಟ್ಟದೆ. ಎರಡನೇ ಪಕ್ಷವು ಟೀಕೆಯಲ್ಲಿ ಹೇಳಲ್ಪಟ್ಟದೆ.

ಪ್ರಶ್ನೆ - ಮೊದಲನೇ ಪಕ್ಷವನ್ನು ಸ್ವೀಕರಿಸಿದಾಗ ಭಾಷ್ಯದಲ್ಲಿ ಜನ್ಮಾದಿಸೂತ್ರದಲ್ಲಿ ನಿರ್ಧರಿಸಿದ ಅಸಂಕುಚಿತವಾದ ಸರ್ವಸಂಹರ್ತೃತ್ವವೆಂಬ ವಿಷ್ಣುವಿನ ಲಕ್ಷಣಕ್ಕೆ ಅದಿತಿದೇವಿಯಲ್ಲಿ ಅತಿವ್ಯಾಪ್ತಿದೋಷವನ್ನು ಹೇಳಲಾಗಿದೆ. ಇದು ತಪ್ಪು. ಏಕೆಂದರೆ ವಿಷ್ಣುವಿನ ಸರ್ವಸಂಹರ್ತೃತ್ವಗುಣವು ವಿಷ್ಣುವಿನಲ್ಲಿ ಬಾರದೆ ಅದಿತಿದೇವಿಯಲ್ಲಿ ಬರುತ್ತದೆಂದು ಆಕ್ಷೇಪಿಸುತ್ತಿರುವುದರಿಂದ ಅಸಂಭವದೋಷವನ್ನು ಹೇಳಬೇಕಲ್ಲವೇ?

ಉತ್ತರ - ಅದಿತಿದೇವಿಯು ಸ್ವತಂತ್ರವಾಗಿ ಕೆಲವು ಪದಾರ್ಥಗಳ ಸಂಹಾರಕಳಾದ್ದರಿಂದ ಬ್ರಹ್ಮನಿಗೆ ಸರ್ವಸಂಹರ್ತೃತ್ವವೆಂಬ ಗುಣವು ಕೂಡುವುದಿಲ್ಲ. ಆದ್ದರಿಂದ ಕತಿಪಯಸಂಹರ್ತೃತ್ವವನ್ನೇ

ವಿಷ್ಣುಲಿಂಗ ಹಾಗೂ ವಿಷ್ಣುಪ್ರಕರಣಗಳು ಸಾವಕಾಶವಾಗಿವೆ

तात्पर्यचन्द्रिका

श्रुतौ सर्वशब्दस्त्वदित्यदनयोग्यसर्वपरः । स्वीकृतश्च सिद्धान्तिनाऽप्यत्रैव प्रकरणे ''सर्वस्यैतस्यात्ता भवति, सर्वमस्यान्नं भवति, य एवमेतददितेरदितित्वं वेद'' इत्युत्तरवाक्यस्थसर्वशब्दस्य सङ्कोचः ।

यद्वा – श्रुतिबलादददितेरेव असङ्कुचितसर्वात्तृत्वमस्तु । अत्र चाद्यः पक्षः ''अदितिरपि स्वभोग्यस्यान्नपानादेर्भोक्त्री'' इति सुधोक्तः । द्वितीयस्तु अत्र टीकायाम्,

नचाऽऽद्यपक्षे भाष्यस्थजन्मादिसूत्रोक्तासङ्कुचितसर्वसंहर्तृत्वस्य अतिव्याप्युक्तिरयुक्तेति वाच्यम्,

अदितेः स्वातन्त्र्येण कतिपयसंहर्तृत्वे ब्रह्मणस्सर्वसंहर्तृत्वायोगेन कतिपयसंहर्तृत्वस्य लक्षणत्वेनातिव्याप्तिसम्भवात् ।

न चादेर्भक्षणार्थत्वेन अदितेरत्तृत्वेऽपि पक्षद्वयेऽपि संहर्तृत्वस्य नातिव्याप्तिरिति शङ्क्यम्, ''मृत्युनैवेदम्'' इत्युपक्रमे मृत्युशब्दात्, ''यद्यदेवासृजत तत्तदत्तुमध्रियत'' इति च सृष्टिप्रतियोगित्वाद्भक्षणस्यापि संहारविशेषत्वात् ऊर्णनाभ्यादिवच्च भगवतः संहर्तृत्वस्यात्तृत्वरूपत्वात् ।

''अद्यतेऽत्ति च भूतानि''

स सर्गकाले च करोति सर्वं संहारकाले तु तदत्ति भूयः ।

''स्रष्टा पाता तथैवात्ता'' इत्यादौ संहारेऽदधातुप्रयोगाच्च । अत एव टीकायां ''संहर्तृत्वापरपर्यायवाच्यमत्तृत्वम्'' इत्युक्तम् ।

''नैवेह किञ्चनाग्र आसीत्'' इत्यादिनाऽस्य प्रकरणस्य वैष्णवत्वेऽपि, दर्शपौर्णमासप्रकरणात्, ''पूषा प्रपिष्टभागः'' इत्युक्तं पौष्णं पेषणमिव,

विष्णुप्रकरणात् ''तददितेरदितित्वं'' इत्यादिकमुत्कृष्यतां, प्रकरणाच्छ्रुतिर्लिङ्गयो-र्बलीयस्त्वात् ।

अथवा – यथा ''अभिक्रामं जुहोति'' इति दर्शपौर्णमासप्रकरणे श्रुतस्य अभिक्रमणस्य तदङ्गप्रयाजान्वयार्थं प्रयाजानामवान्तरप्रकरणं, तथा विष्णुप्रकरणेऽदि-तेरवान्तरप्रकरणमस्तु ।

यद्वा – अदितिश्रुतिबलात् ''नैवेह'' इत्यादिमहाप्रकरणमप्यदितेरेवेति ।।

ಅನುವಾದ - ಶ್ರುತಿಯಲ್ಲಿರುವ ಸರ್ವಶಬ್ದದಿಂದ ಅದಿತಿಯು ತಿನ್ನಲು ಯೋಗ್ಯವಾದ ಸಕಲ ಪದಾರ್ಥಗಳನ್ನಷ್ಟೇ ವಿವಕ್ಷಿಸಬೇಕು. ಹೀಗೆ ಸರ್ವಶಬ್ದಕ್ಕೆ ಸಂಕೋಚ ಮಾಡಿ ಅರ್ಥೈಸುವುದು ಸಿದ್ಧಾಂತಿಗಳೂ ಸಹ ಒಪ್ಪಿದ್ದಾರೆ. ಇದೇ ಪ್ರಕರಣದಲ್ಲಿ ''ಸರ್ವಸ್ಯೈತಸ್ಯಾತ್ತಾ ಭವತಿ, ಸರ್ವಮಸ್ಯಾನ್ನಂ ಭವತಿ, ಯ ಏವಮೇತದದಿತೇರದಿತಿತ್ವಂ ವೇದ'' ಎಂಬುದು ಮುಂದಿನ ವಾಕ್ಯ. ಈ ವಾಕ್ಯದಲ್ಲಿ ಯಾರು ಸರ್ವಾತ್ಮತ್ವ ಗುಣವನ್ನು ಉಪಾಸಿಸುತ್ತಾರೋ ಅವರೂ ಸಹ ಸಕಲವನ್ನು ಭೋಗಿಸುತ್ತಾರೆಂದು ಹೇಳಲಾಗಿದೆ. ಇಲ್ಲಿರುವ ಸರ್ವಶಬ್ದಕ್ಕೆ ಆಯಾ ಜೀವರಿಂದ ತಿನ್ನಲು ಯೋಗ್ಯವಾದ ಪದಾರ್ಥಗಳಲ್ಲಿ ಸರ್ವಶಬ್ದಕ್ಕೆ ಸಂಕೋಚ ಮಾಡಿ ಅರ್ಥವನ್ನು ಹೇಳುತ್ತಾರೆ.

ಅಥವಾ ಅದಿತಿಶ್ರುತಿಯ ಬಲದಿಂದ ಅದಿತಿದೇವಿಯಲ್ಲಿಯೇ ಅಸಂಕುಚಿತವಾದ ಸಕಲಪದಾರ್ಥಗಳ ಆತ್ಮತ್ವವನ್ನು ಹೇಳಬಹುದು.

ಇವೆರಡರಲ್ಲಿ ಅದಿತಿಯೂ ಸಹ ತನಗೆ ಯೋಗ್ಯವಾದ ಅನ್ನಪಾನಾದಿಗಳ ಭೋಕ್ತೃವಾಗಿದ್ದಾಳೆ. ಎಂಬ ಮೊದಲನೇ ಪಕ್ಷವು ಶ್ರುತಿಯಲ್ಲಿ ಹೇಳಲ್ಪಟ್ಟಿದೆ. ಎರಡನೇ ಪಕ್ಷವು ಟೀಕೆಯಲ್ಲಿ ಹೇಳಲ್ಪಟ್ಟಿದೆ.

ಪ್ರಶ್ನೆ - ಮೊದಲನೇ ಪಕ್ಷವನ್ನು ಸ್ವೀಕರಿಸಿದಾಗ ಭಾಷ್ಯದಲ್ಲಿ ಜನ್ಮಾದಿಸೂತ್ರದಲ್ಲಿ ನಿರ್ಧರಿಸಿದ ಅಸಂಕುಚಿತವಾದ ಸರ್ವಸಂಹರ್ತೃತ್ವವೆಂಬ ವಿಷ್ಣುವಿನ ಲಕ್ಷಣಕ್ಕೆ ಅದಿತಿದೇವಿಯಲ್ಲಿ ಅತಿವ್ಯಾಪ್ತಿದೋಷವನ್ನು ಹೇಳಲಾಗಿದೆ. ಇದು ತಪ್ಪು. ಏಕೆಂದರೆ ವಿಷ್ಣುವಿನ ಸರ್ವಸಂಹರ್ತೃತ್ವಗುಣವು ವಿಷ್ಣುವಿನಲ್ಲಿ ಬಾರದೆ ಅದಿತಿದೇವಿಯಲ್ಲಿ ಬರುತ್ತದೆಂದು ಆಕ್ಷೇಪಿಸುತ್ತಿರುವುದರಿಂದ ಅಸಂಭವದೋಷವನ್ನು ಹೇಳಬೇಕಲ್ಲವೇ?

ಉತ್ತರ - ಅದಿತಿದೇವಿಯು ಸ್ವತಂತ್ರವಾಗಿ ಕೆಲವು ಪದಾರ್ಥಗಳ ಸಂಹಾರಕಳಾದ್ದರಿಂದ ಬ್ರಹ್ಮನಿಗೆ ಸರ್ವಸಂಹರ್ತೃತ್ವವೆಂಬ ಗುಣವು ಕೂಡುವುದಿಲ್ಲ. ಆದ್ದರಿಂದ ಕತಿಪಯಸಂಹರ್ತೃತ್ವವನ್ನೇ

ಬ್ರಹ್ಮನ ಲಕ್ಷಣವೆಂದು ಹೇಳಬೇಕು. ಆವಾಗ ಈ ಲಕ್ಷಣವು ಅದಿತಿದೇವಿಯಲ್ಲಿಯೂ ಬರುವುದರಿಂದ ಅತಿವ್ಯಾಪ್ತಿದೋಷವನ್ನು ಹೇಳಬಹುದು.

ಆಕ್ಷೇಪ - 'ಆದ' ಎಂಬ ಧಾತುವಿಗೆ ಭಕ್ಷಣವೆಂಬರ್ಥವು ಪ್ರಸಿದ್ಧವಾಗಿದೆ. ಆದ್ದರಿಂದ ಅದಿತಿಗೆ ಎರಡು ಪಕ್ಷಗಳಲ್ಲಿ ಅತ್ಯತ್ವವನ್ನು ಹೇಳಬಹುದೇ ಹೊರತು ಸಂಹರ್ತೃತ್ವವನ್ನು ಹೇಳಲಾಗದು. ಆದ್ದರಿಂದ ಭಗವಂತನ ಸಂಹರ್ತೃತ್ವಗುಣಕ್ಕೆ ಅತಿವ್ಯಾಪ್ತಿದೋಷವನ್ನು ಶಂಕಿಸಲು ಸಾಧ್ಯವಿಲ್ಲವಲ್ಲವೇ?

ಸಮಾಧಾನ - ಉಪಕ್ರಮದಲ್ಲಿ 'ಮೃತ್ಯುನ್ವೇದಂ' ಎಂದಿರುವುದರಿಂದ ಸಂಹರ್ತೃತ್ವಗುಣವೇ ತಿಳಿಯುತ್ತದೆ. ಏಕೆಂದರೆ 'ಮೃತ್ಯು' ಶಬ್ದಕ್ಕೆ ಸಂಹಾರವೆಂಬರ್ಥವು ಪ್ರಸಿದ್ಧವಾಗಿದೆ. ಮತ್ತು ''ಯದ್ಯದೇವಾಸೃಜತ ತತ್ತದತ್ತಮ್'' ಎಂಬುದಾಗಿ ಸಂಹಾರಕ್ಕೆ ಸೃಷ್ಟಿಪ್ರತಿಯೋಗಿತ್ವವನ್ನು ಹೇಳಿದ್ದಾರೆ. ಇದರಿಂದಲೂ ಸಂಹರ್ತೃತ್ವವನ್ನೇ ವಿವಕ್ಷಿಸಬೇಕೆಂದು ತಿಳಿಯುತ್ತದೆ. ಮತ್ತು ಭಕ್ಷಣವು ಸಂಹಾರದ ವಿಶೇಷರೂಪವಾಗಿದೆ. ಭಕ್ಷಣ ಮಾಡುತ್ತಾನೆಂದರೆ ಆ ಪದಾರ್ಥವನ್ನು ಸಂಹಾರ ಮಾಡುತ್ತಾನೆಂದೇ ಅರ್ಥ. ಈ ಎಲ್ಲ ಕಾರಣಗಳಿಂದ ಭಗವಂತನು ತಿನ್ನುತ್ತಾನೆಂದರೆ ಊರ್ಣನಾಭಿಯಂತೆ ಸಂಹಾರ ಮಾಡುತ್ತಾನೆಂದರ್ಥ.

ವಿಚಾರ ಮಾಡಿದರೆ ಅದ ಧಾತುವು ಸಂಹಾರವೆಂಬರ್ಥದಲ್ಲಿಯೂ ಪ್ರಸಿದ್ಧವಾಗಿದೆ. ''ಅದ್ಯತೇऽತ್ತಿ ಚ ಭೂತಾನಿ'' 'ಸ ಸರ್ಗಕಾಲೇ ಚ ಕರೋತಿ ಸರ್ವಂ ಸಂಹಾರಕಾಲೇ ತು ತದತ್ತಿ ಭೂಯಃ' । ''ಸ್ರಷ್ಟಾ ಪಾತಾ ತಥೈವಾತ್ತಾ'' ಇತ್ಯಾದಿ ಸ್ಥಳಗಳಲ್ಲಿ ಸಂಹಾರವೆಂಬರ್ಥದಲ್ಲಿ ಅದ ಧಾತುವನ್ನು ಪ್ರಯೋಗಿಸಲಾಗಿದೆ. ಆದ್ದರಿಂದ ಟೀಕೆಯಲ್ಲಿ 'ಸಂಹರ್ತೃತ್ವಾಪರಪರ್ಯಾಯವಾಚ್ಯ-ಮತ್ಯತ್ವಂ ' ಅತ್ಯತ್ವವು ಸಂಹರ್ತೃತ್ವದ ಮತ್ತೊಂದು ಪರ್ಯಾಯ ಶಬ್ದವೆಂದು ಹೇಳಿದ್ದಾರೆ.

''ನೈವೇಹ ಕಿಂಚನಾಗ್ರ ಆಸೀತ್'' ಇತ್ಯಾದಿ ವಾಕ್ಯಗಳ ಆಧಾರದಿಂದ ಈ ಪ್ರಕರಣವು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂದು ತಿಳಿಯುತ್ತದೆ. ಹೀಗಿರುವಾಗ ಮಧ್ಯದಲ್ಲಿರುವ ಅದಿತಿ ಶಬ್ದವನ್ನು ಮಾತ್ರ ಅದಿತಿಯಲ್ಲಿ ಹೇಗೆ ಸಮನ್ವಯ ಮಾಡುತ್ತೀರಿ ? ಎಂದು ಪ್ರಶ್ನಿಸಬಾರದು. ಪೂರ್ವಮೀಮಾಂಸೆಯಲ್ಲಿ ದರ್ಶಪೂರ್ಣಮಾಸ ಪ್ರಕರಣವಾಗಿದ್ದರೂ ''ಪೂಷಾ ಪ್ರಪಿಷ್ಟಭಾಗಃ'' ಎಂಬಲ್ಲಿ ಹೇಳಲ್ಪಟ್ಟ ಪೇಷಣವು ಪೂಷಾ ದೇವತೆಗೆ ಸಂಬಂಧಪಟ್ಟದೆಯೆಂದು ನಿರ್ಣಯಿಸಿದ್ದಾರೆ. ಅದರಂತೆ ಇದು ವಿಷ್ಣು ಪ್ರಕರಣವಾಗಿದ್ದರೂ 'ತದದಿತೇರದಿತಿತ್ವಂ' ಎಂಬುದನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡದೆ ಎಳೆದು ಅದಿತಿದೇವಿಯಲ್ಲಿ ಸಮನ್ವಯ ಮಾಡುವುದು ತಪ್ಪಲ್ಲ. ಏಕೆಂದರೆ ಪ್ರಕರಣಕ್ಕಿಂತ ಶ್ರುತಿಲಿಂಗಗಳೇ ಬಲಿಷ್ಠವಾಗಿವೆ.

ಅಥವಾ ಯಾವರೀತಿಯಾಗಿ ಪೂರ್ವಮೀಮಾಂಸೆಯಲ್ಲಿ ''ಅಭಿಕ್ರಾಮಾನ್ ಜುಹೋತಿ'' ಎಂಬುದು ದರ್ಶಪೂರ್ಣಮಾಸ ಪ್ರಕರಣದಲ್ಲಿ ಪ್ರಸಕ್ತವಾಗಿದ್ದರೂ ದರ್ಶಪೂರ್ಣಮಾಸಯಾಗಕ್ಕೆ

ಅಂಗಯಾಗವೆನಿಸಿದ 'ಪ್ರಯಾಜ' ಎಂಬ ಅವಾಂತರ ಪ್ರಕರಣಕ್ಕೆ ಅಭಿಕ್ರಮಣವು ಸಂಬಂಧಪಟ್ಟದೆಯೆಂದು ನಿರ್ಣಯಿಸಲಾಗಿದೆ. ದರ್ಶಪೂರ್ಣಮಾಸವೆಂಬ ಮಹಾಪ್ರಕರಣವೇ ಬೇರೆ, ಪ್ರಯಾಜವೆಂಬ ಅವಾಂತರ ಪ್ರಕರಣವೇ ಬೇರೆ. ಅಭಿಕ್ರಮಣವು ಅವಾಂತರ ಪ್ರಕರಣಕ್ಕೆ ಸಂಬಂಧ ಪಡುತ್ತದೆ ಹೊರತು, ಮಹಾಪ್ರಕರಣಕ್ಕೆ ಸಂಬಂಧ ಪಡುವುದಿಲ್ಲ. ಆದರಂತೆ ಪ್ರಕೃತದಲ್ಲಿ ವಿಷ್ಣು ಪ್ರಕರಣವಾಗಿದ್ದರೂ ಅದಿತಿಯು ಅವಾಂತರ ಪ್ರಕರಣವಾಗಬಹುದು.

ಅಥವಾ ಅದಿತಿಶ್ರುತಿಯ ಆಧಾರದಿಂದ ''ನೈವೇಹ ಕಿಂಚನ'' ಇತ್ಯಾದಿ ಮಹಾಪ್ರಕರಣವೂ ಸಹ ಅದಿತಿ ಪರವೇ ಆಗಬಹುದು. ಆದ್ದರಿಂದ ಅತ್ಯತ್ವವೆಂಬ ಗುಣವು ಅದಿತಿದೇವಿಯಲ್ಲಿ ಬರುತ್ತದೆ ಹೊರತು ವಿಷ್ಣುವಿನಲ್ಲಿ ಬರುವುದಿಲ್ಲ.

ಪ್ರಕಾಶಃ –

ನನ್ವತ್ರ ಸರ್ವಾತ್ಮತ್ವರೂಪಂ ವಿಷ್ಣುಲಿಙ್ಗಂ, ''ನೈವೇಹ ಕಿಞ್ಚನ'' ಇತಿ ವಿಷ್ಣುಪ್ರಕರಣಂ ಚ । ಅತೋ ಲಿಙ್ಗಪ್ರಕರಣಾಭ್ಯಾಂ ಶ್ರುತ್ಯಾದಿಬಾಧೇನ ವಿಷ್ಣುರೇವಾತ್ತಾ ಸ್ಯಾದಿತ್ಯತೋ ಲಿಙ್ಗಸ್ಯ ಸಾವಕಾಶತ್ವಂ ತಾವದಾಹ – ಶ್ರುತಾವಿತಿ । ಅದಿತಿಶ್ರುತ್ಯದಿತಿತ್ವಲಿಙ್ಗರೂಪಬಾಧಕಾತ್ಸಙ್ಕೋಚೋ ನ್ಯಾಯ್ಯ ಇತಿ ಭಾವಃ । ಬಾಧಕಾತ್ಸಙ್ಕೋಚಸ್ತವಾಪಿ ಸಮ್ಮತ ಇತ್ಯಾಹ – ಸ್ವೀಕೃತಶ್ಚೇತಿ । ವೇದಿತುರಧಿಕಾರಿಣೋ ಬ್ರಹ್ಮಣ ಇವಾಸಙ್ಕುಚಿತಸರ್ವಾದನಸ್ಯ ಬಾಧಾದಿತಿ ಭಾವಃ ।

ಪ್ರಶ್ನೆ - ಸರ್ವಾತ್ಮತ್ವವೆಂಬ ವಿಷ್ಣು ಲಿಂಗದಿಂದ ಹಾಗೂ 'ನೈವೇಹ ಕಿಂಚನ' ಎಂಬ ವಿಷ್ಣು ಪ್ರಕರಣದಿಂದ ಅದಿತಿಶ್ರುತಿಯನ್ನು ಬಾಧಿಸಬಹುದು. ಆದ್ದರಿಂದ ವಿಷ್ಣುವೇ ಅತ್ಯತ್ವಧರ್ಮವುಳ್ಳವನಾಗಿದ್ದಾನಲ್ಲವೇ?

ಉತ್ತರ - ಸರ್ವಾತ್ಮತ್ವವೆಂಬ ವಿಷ್ಣುಲಿಂಗವು ಸಾವಕಾಶವಾಗಿದೆ. ಹಾಗೂ ಪ್ರಕರಣವೂ ಸಹ ಅದಿತಿಯ ಪ್ರಕರಣವೇ ಆಗಿದೆ. ಮೊದಲು ಸರ್ವಾತ್ಮತ್ವವೆಂಬ ಲಿಂಗಕ್ಕೆ ಸಾವಕಾಶತ್ವವನ್ನು 'ಶ್ರುತೌ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಅದಿತಿ ಶ್ರುತಿ ಹಾಗೂ ಅದಿತಿತ್ವವೆಂಬ ಲಿಂಗಗಳು ಬಾಧಕವಾಗಿವೆ. ಆದ್ದರಿಂದ ಸರ್ವಪದಕ್ಕೆ ಸಂಕೋಚ ಮಾಡುವುದೇ ನ್ಯಾಯವೆಂದು ತಿಳಿಯಬೇಕು. ಇದೇ ಬಾಧಕವು ವಿಷ್ಣುಪರತತ್ವವನ್ನು ಸಮರ್ಥಿಸುವವರಿಗೂ ಬರುತ್ತದೆ. ಆದ್ದರಿಂದ ಅವರೂ ಸಹ ಸರ್ವಪದಕ್ಕೆ ಸಂಕೋಚವನ್ನು ಮಾಡಿದ್ದಾರೆಂದು 'ಸ್ವೀಕೃತಶ್ಚ' ಇತ್ಯಾದಿವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ತಿಳಿಯುವಂತಹ ಅಧಿಕಾರಿಗೆ ಬ್ರಹ್ಮನಂತೆ ಅಸಂಕುಚಿತವಾದ ಸರ್ವಾತ್ಮತ್ವವನ್ನು ಹೇಳಲು ಸಾಧ್ಯವಿಲ್ಲವೆಂದು ಅಭಿಪ್ರಾಯ.

ಪ್ರಕಾಶಃ – ಅತ್ರ ಟೀಕಾಯಾಮಿತಿ । ಅತ್ತೃತ್ವಂ ವಿಷ್ಣೋರನ್ಯಸ್ಯ ವೇತಿ ಸಂಶಯಂ ಪ್ರದರ್ಶ್ಯ ಅನ್ಯಸ್ಯೇತ್ಯುಪಪಾದನಾತ್, ಅನ್ಯಥಾऽನ್ಯಸ್ಯಾಪಿ ವೇತ್ಯುಕ್ತಿಪ್ರಸಙ್ಗಾತ್,

अन्ते 'लक्षणं न युक्तं' इति सामान्यत उपसंहारश्च एतदवसीयते । अतिव्याप्तीति । टीका त्वन्यनिष्ठत्वप्रसङ्गादिति व्याख्येयेति भावः ।

ಗ್ರಂಥದಲ್ಲಿ 'अत्र टीकायाम्' ಎಂದು ಹೇಳಿದ್ದಾರೆ. ಅತ್ಯತ್ವವೆಂಬ ಧರ್ಮವು ವಿಷ್ಣುವಿನಲ್ಲಿ ಬರುತ್ತದೋ ಅಥವಾ ಬೇರೆಯವರಲ್ಲಿ ಬರುತ್ತದೋ? ಎಂದು ಸಂಶಯವನ್ನು ತೋರಿಸಿ 'अन्यस्य' ಎಂದು ಉಪಪಾದಿಸಿದ್ದಾರೆ. ಅದಿತಿಗೆ ಅಸಂಕುಚಿತವಾದ ಸರ್ವಾತ್ಕೃತ್ವವನ್ನು ಹೇಳುವ ವಿವಕ್ಷೆಯು ಟೀಕಾಕಾರರಿಗೆ ಇಲ್ಲದಿದ್ದಲ್ಲಿ 'अन्यस्यापि वा' ಎಂದು ಹೇಳಬೇಕಿತ್ತು.

ಮತ್ತು ಕೊನೆಯಲ್ಲಿ 'लक्षणं न युक्तं' ಎಂದು ಸಾಮಾನ್ಯವಾಗಿ ಉಪಸಂಹಾರ ಮಾಡಿದ್ದಾರೆ. ಇದರಿಂದಲೂ ಟೀಕಾಕಾರರಿಗೆ ವಿಷ್ಣುವಿನ ಲಕ್ಷಣಕ್ಕೆ ಅಸಂಭವದೋಷವು ಅಭಿಮತವೆಂದು ತಿಳಿಯುತ್ತದೆ. ಹಾಗಾದರೆ ಅತಿವ್ಯಾಪ್ತಿಯನ್ನು ಹೇಳುವ ಟೀಕೆಗೆ ಏನು ಅರ್ಥ? ಎಂದು ಸಹಜವಾಗಿ ಪ್ರಶ್ನೆ ಬರುತ್ತದೆ. ಬೇರೆಯವರಲ್ಲಿ ವಿಷ್ಣುವಿನ ಅತ್ಯತ್ವ ಲಕ್ಷಣವು ಬರುತ್ತದೆಂಬ ಅಭಿಪ್ರಾಯದಿಂದಷ್ಟೇ ಅತಿವ್ಯಾಪ್ತಿಯನ್ನು ಕೂಡಿಸಬೇಕು ಹೊರತು, ಲಕ್ಷ್ಯನಾದ ವಿಷ್ಣುವಿನಲ್ಲಿ ಲಕ್ಷಣವಿರುವುದರ ಜೊತೆಗೆ ಅಲಕ್ಷ್ಯಭೂತರಾದ ಅದಿತಿದೇವಿಯಲ್ಲಿಯೂ ಲಕ್ಷಣ ಬರುತ್ತದೆಂಬ ಅಭಿಪ್ರಾಯದಿಂದಲ್ಲ. ವಿಷ್ಣುವಿನ ಲಕ್ಷಣಕ್ಕೆ ಅಸಂಭವ ದೋಷ ಹೇಳುವುದೇ ಟೀಕಾಕಾರರಿಗೆ ಸಮ್ಮತವಾಗಿದೆ; ಅತಿವ್ಯಾಪ್ತಿದೋಷವು ಸಮ್ಮತವಾಗಿಲ್ಲವೆಂದು ಸ್ಪಷ್ಟವಾಗಿ ತಿಳಿಯಬೇಕು.

प्रकाशः – टीकायां ''संहर्तृत्वापरपर्यायवाच्यमत्तृत्वम्'' इत्युक्तेर्न्यावर्त्यशङ्कां दर्शयन् संहर्तृत्वरूपत्वं साधयति – न चेत्यादिना ।

मृत्युनेति । मृत्युपदस्य मारकपर्यायत्वादिति भावः । संहारेऽदधातोश्शक्तिं चाह – भक्षणस्येति । रूढिं चाह – अद्यत इत्यादिना । स्मार्तप्रयोगं चाह – स सर्गेति । ''अत्ता निखिलस्यैक एव तु'' इति निखिलपदप्रयोगात्स्रष्टृत्वप्रतियोगित्वात्संहर्तेति गम्यत इति भावः ।

ಟೀಕೆಯಲ್ಲಿ ''संहर्तृत्वापरपर्यायवाच्यमत्तृत्वं'' ಎಂದು ಅತ್ತೃತ್ವವನ್ನು ಸಂಹರ್ತೃತ್ವದ ಮತ್ತೊಂದು ಪರ್ಯಾಯ ಶಬ್ದವೆಂದು ಹೇಳಿದ್ದಾರೆ. ಈ ಮಾತಿನಿಂದ ವ್ಯಾವರ್ತ್ಯವಾದ ಶಂಕೆಯನ್ನು ತೋರಿಸುತ್ತಾ ಅತ್ಯತ್ವವು ಸಂಹರ್ತೃತ್ವ ರೂಪವಾಗಿದೆಯೆಂದು 'नच' ಇತ್ಯಾದಿ ವಾಕ್ಯದಿಂದ ಸಾಧಿಸುತ್ತಿದ್ದಾರೆ.

'मृत्यु' ಪದವು ಮಾರಕ ಪದದ ಪರ್ಯಾಯ ರೂಪವಾಗಿದೆ. ಸಂಹಾರವೆಂಬರ್ಥದಲ್ಲಿ ಅದ ಧಾತುವಿಗೆ ಶಕ್ತಿಯೂ ಸಹ ಇದೆಯೆಂದು 'भक्षणस्य' ಎಂಬುದರಿಂದ ಸಮರ್ಥಿಸುತ್ತಿದ್ದಾರೆ. 'अद्यते' ಎಂಬುದರಿಂದ ರೂಢಿಯನ್ನು ಸಮರ್ಥಿಸುತ್ತಿದ್ದಾರೆ. ಶ್ರುತಿ ಪ್ರಯೋಗವನ್ನೂ ಸಹ 'स सर्गकाले' ಎಂಬುದರಿಂದ ಹೇಳುತ್ತಿದ್ದಾರೆ. ''अत्ता निखिलस्यैक एव तु'' ಎಂಬಲ್ಲಿ ನಿಖಿಲಪದವನ್ನು ಪ್ರಯೋಗಿಸಿದ್ದರಿಂದ ಸೃಷ್ಟಿಗೆ ಪ್ರತಿಯೋಗಿಯಾಗಿದ್ದರಿಂದಲೂ 'संहर्ता' ಎಂಬರ್ಥವು ತಿಳಿಯುತ್ತದೆ.

प्रकाशः – एवं लिङ्गस्य सावकाशत्वमुक्त्वा प्रकरणस्यापि तदग्रे विवक्षुर्निरवकाशत्वं तावदुपेत्योपपत्तिमाह – **नैवेहेति** । ''नैवेह किञ्चनाग्र आसीत् मृत्युनैवेदमावृतमासीत् अशनाया हि मृत्युः । तन्मनोऽकुरुत आत्मन्वी स्यामिति । सोऽर्चन्नचरत्तस्यार्चत आपोऽजायन्त । तद्यदपाऽशर आसीत् तत्समहन्यत । सा पृथिव्यभवत् । तस्यामश्राम्यत् । सोऽकामयत द्वितीयो म आत्मा जायेतेति । स मनसा वाचा मिथुनं समभवत् । अशनाया हि मृत्युः । तद्यद्रेत आसीत् स संवत्सरोऽभवत् । तं जातमभिव्याददात् । स भाणमकरोत् । सैव वागभवत् । स ऐक्षत यदि ह वा इममभिमंस्ये कनीयोऽन्नं करिष्ये इति । स तया वाचा तेनात्मनेदꣳ सर्वमसृजत'' इति मृत्यमात्रावशेषाप्संवत्सरसृष्टिसंवत्सरादनोद्यमादिश्रवणेन प्रकरणस्य वैष्णवत्वेऽपीत्यर्थः ।

ಹೀಗೆ ಅತ್ಯತ್ವಲಿಂಗಕ್ಕೆ ಸಾವಕಾಶತ್ವವನ್ನು ಸಮರ್ಥಿಸಿ ವಿಷ್ಣು ಪ್ರಕರಣಕ್ಕೂ ಸಹ ಸಾವಕಾಶತ್ವವನ್ನು ಮುಂದೆ ಸಮರ್ಥಿಸುತ್ತಾರೆ. ಈಗ ವಿಷ್ಣು ಪ್ರಕರಣಕ್ಕೆ ನಿರವಕಾಶತ್ವವನ್ನು ಅಂಗೀಕರಿಸಿ ''ನೈವೇಹ'' ಇತ್ಯಾದಿ ವಾಕ್ಯದಿಂದ ಉತ್ತರವನ್ನು ನೀಡುತ್ತಿದ್ದಾರೆ.

''ನೈವೇಹ ಕಿಂಚನಾಗ್ರ ಆಸೀತ್ ಮೃತ್ಯುನೈವೇದಮಾವೃತಮಾಸೀತ್ ಅಶನಾಯಾ ಹಿ ಮೃತ್ಯುಃ । ತನ್ಮನೋಽಕುರುತ ಆತ್ಮನ್ವೀ ಸ್ಯಾಮಿತಿ । ಸೋಽರ್ಚನ್ನಚರತ್ತಸ್ಯಾರ್ಚತ ಆಪೋಽಜಾಯಂತ । ತದ್ಯದಪಾಂಶರ ಆಸೀತ್ ತತ್ಸಮಹನ್ಯತ । ಸಾ ಪೃಥಿವ್ಯಭವತ್ । ತಸ್ಯಾಮಶ್ರಾಮ್ಯತ್ । ಸೋಽಕಾಮಯತ ದ್ವಿತೀಯೋ ಮ ಆತ್ಮಾ ಜಾಯೇತೇತಿ । ಸ ಮನಸಾ ವಾಚಾ ಮಿಥುನಂ ಸಮಭವತ್ । ಅಶನಾಯಾ ಹಿ ಮೃತ್ಯುಃ । ತದ್ಯದ್ರೇತ ಆಸೀತ್ ಸ ಸಂವತ್ಸರೋಽಭವತ್ । ತಂ ಜಾತಮಭಿವ್ಯಾದದಾತ್ । ಸ ಭಾಣಮಕರೋತ್ । ಸೈವ ವಾಗಭವತ್ । ಸ ಐಕ್ಷತ ಯದಿ ಹ ವಾ ಇಮಮಭಿಮಂಸ್ಯೇ ಕನೀಯೋಽನ್ನಂ ಕರಿಷ್ಯೇ ಇತಿ । ಸ ತಯಾ ವಾಚಾ ತೇನಾತ್ಮನೇದಂ ಸರ್ವಮಸೃಜತ'' ಹೀಗೆ ಶ್ರುತಿಯಲ್ಲಿ ಪ್ರಳಯಕಾಲದಲ್ಲಿ ಮೃತ್ಯುವಿಗೆ ಮಾತ್ರ ಸ್ಥಿತಿಯನ್ನು ಹೇಳಲಾಗಿದೆ. ಮತ್ತು ನೀರನ್ನು ಹಾಗೂ ಚತುರ್ಮುಖ ಬ್ರಹ್ಮದೇವನನ್ನು ಸೃಷ್ಟಿಸಿದನೆಂದು ಹೇಳಲಾಗಿದೆ. ಇದರ ಜೊತೆಗೆ ಸಂವತ್ಸರನೆನಿಸಿದ ಚತುರ್ಮುಖ ಬ್ರಹ್ಮನನ್ನು ತಿನ್ನಲು ತೊಡಗುತ್ತಾನೆಂದೂ ಸಹ ಹೇಳಲಾಗಿದೆ. ಇವೆಲ್ಲವೂ ಸಹ ವಿಷ್ಣುವಿನ ಧರ್ಮಗಳೇ ಆಗಿರುವುದರಿಂದ ಸಂಪೂರ್ಣ ಪ್ರಕರಣವು ವಿಷ್ಣುಪರವೆಂದು ತಿಳಿಯುತ್ತದೆ.

प्रकाशः – दर्शपौर्णमासेति । तृतीयस्य तृतीये पादे अष्टादशेऽधिकरणे ''पौष्णं पेषणं विकृतौ प्रतीयेताचोदनात्प्रकृतौ'' इति सूत्रे दर्शपूर्णमासप्रकरणे ''पूषा प्रपिष्टभागः'' इति श्रुतं पूषदेवताकं पेषणम् । तत्र प्रकरणे पूषाभावात्, यत्र पूषा

तत्र वाक्यमुत्कृष्यत इत्युक्तम् । तद्वदिदमपि अत उत्कृष्य, यत्रादितिप्रकरणमस्ति, तत्र निवेश्यतामित्यर्थः ।

ಪೌಷ್ಣಂ ಪೇಷಣಂ ವಿಕೃತೌ ಪ್ರತೀಯೇತಾಚೋದನಾತ್ಪ್ರಕೃತೌ[1] (೩-೩-೧೮)

ದರ್ಶಪೂರ್ಣಮಾಸ ಪ್ರಕರಣದಲ್ಲಿ 'ಪೂಷಾ ಪ್ರಪಿಷ್ಟಭಾಗಃ' ಎಂದು ಕೇಳಿಸುತ್ತಿದೆ. ಇದರಲ್ಲಿ ಪೂಷದೇವತಾಕವಾದ ಪೇಷಣವು ಕೇಳಿಸುತ್ತಿದೆ. ವಸ್ತುತಃ ಈ ಪ್ರಕರಣದಲ್ಲಿ ಪೂಷಾ ದೇವತೆಯು ಪ್ರತಿಪಾದ್ಯವಾಗಿಲ್ಲ. ಆದರೆ ಯಾವ ವಾಕ್ಯದಲ್ಲಿ ಪೂಷಾ ದೇವತೆಯನ್ನು ಪ್ರತಿಪಾದಿಸಲಾಗಿದೆಯೋ ಆ ವಾಕ್ಯದಲ್ಲಿ ಈ ಪೇಷಣವನ್ನು ಉತ್ಕರ್ಷ ಮಾಡಬೇಕೆಂದು ನಿರ್ಣಯಿಸಿದ್ದಾರೆ. ಆದರಂತೆ ಇಲ್ಲಿಯೂ ಸಹ ಸಂವತ್ಸರಸ್ರಷ್ಟೃತ್ವ ಮೊದಲಾದವುಗಳೆಲ್ಲವೂ ವಿಷ್ಣುವನ್ನೇ ಪ್ರತಿಪಾದಿಸಲಿ. ಆದರೆ 'ತತ್ತದತ್ತುಮಧ್ರಿಯತ' ಎಂಬ ವಾಕ್ಯವು ಮಾತ್ರ ಅದಿತಿದೇವಿಯನ್ನು ಪ್ರತಿಪಾದಿಸಲಿ ಪ್ರಬಲವಾದ ಶ್ರುತಿಲಿಂಗಗಳ ಆಧಾರದಿಂದ ಈ ವಾಕ್ಯವನ್ನು ಮತ್ತೊಂದು ಪ್ರಕರಣಕ್ಕೆ ತೆಗೆದುಕೊಂಡು ಅರ್ಥೈಸಬೇಕು ಎಂದರ್ಥ.

प्रकाशः – अभिक्राममिति । तत्रैव आद्यपादे ''कर्तृगुणे तु कर्मासमवायाद्वाक्यभेदस्स्यात्'' इति नवमेऽधिकरणे दर्शपौर्णमासप्रकरणे प्रयाजसमीपे ''अभिक्रमामं

(१) भाट्टसङ्ग्रहः –

अथाष्टादशं पौष्णपेषणस्य विकृतौ विनियोगाधिकरणम् ॥

पौष्णं पेषणं विकृतौ प्रतीयेताऽचोदनात्प्रकृतौ ॥ ३४ ॥

अत्रापि पूर्ववैषम्येण शङ्कनात्सङ्गतिः । दर्शपूर्णमासौ प्रकृत्य 'पूषा प्रपिष्टभागोऽदन्तको हि' इति श्रुतम् । तत्र पूषभागसम्बन्धि पेषणं पूषेतिवाक्योक्तं प्रकरणे निविशते, अथ दर्शपूर्णमासविकृतावुत्कृष्यत इति सन्देहे, पूर्वत्र विरोधेन वाक्यात्प्रकरणबाधो युक्तः । अत्र तु न तथा । प्रकृते दर्शपूर्णमासयागे पूषदेवताया अभावेऽपि अग्न्यादेरेव यजमानपोषकत्वेन पूषशब्दार्थत्वोपपत्त्या वाक्यप्रकरणयोरविरोधात्प्रकृतावेव निवेशान्नोत्कर्ष इति प्राप्ते, रूढ्या पूषशब्दमुख्यार्थस्य पूष्णोऽलाभे हि कथञ्चिदमुख्यार्थाश्रयणादग्न्याद्यर्थत्वं कल्प्यम् । अस्ति तु विकृतौ मुख्यः पूषेति वाक्यात्प्रकरणबाधेन पूषदैवत्यायां विकृतावुत्कर्षः पौष्णपेषणस्येति सिद्धान्तः । तदाह सूत्रकारः, पौष्णं पेषणं विकृतौ पूषदैवत्यायां प्रतीयेत । कुतः? प्रकृतौ दर्शपूर्णमासयागे पूष्णोऽचोदनादविधानादिति । एवमधिकरणशरीरं भाष्येऽभिधाय पूर्वन्यायेनैव अत्राप्युत्कर्षसिद्ध्या गतार्थत्वमाशङ्क्योत्तरविवक्षया पौष्णं पेषणमिति सूत्रं प्रस्तावितमित्युक्तम् । पूषदैवत्यस्य विकृतौ विनिवेश इत्यस्यासिद्धौ पूषदैवत्यविकृतिमात्रे वा चरुद्रव्यकपूषदैवत्यमात्रे वा इति विशेषचिन्ताया अनवसरादिति ॥

इत्यष्टादशं पौष्णपेषणस्य विकृतौ विनियोगाधिकरणम् ।

जुहोति'' इति होमानुवादेन विधीयमानमभिक्रमणं प्राकरणिकसर्वहोमाङ्गमुत प्रयाजहोमाङ्गमिति संशये,

फलाभावेनेत्थंभावतिरोधानेनाङ्गानामित्थंभावाकाङ्क्षानुत्थानात्, उत्थाने वा तेषामन्यवस्थायाऽन्योन्याङ्गाङ्गिभावापत्तेः, प्रयाजानामवान्तरप्रकरणाभावात्, सन्निधेश्च दौर्बल्यात्, प्रकरणेन दर्शपौर्णमासभावनासम्बन्धात्तदीयसर्वहोमाङ्गमिति प्राप्ते,

ವಿವರಣೆ - ಮಾಯಾವಾದಿಗಳು ರಚಿಸಿದ ಅತ್ಯತ್ಯಾಧಿಕರಣವನ್ನು ಅನುವಾದ ಮಾಡುತ್ತಿದ್ದಾರೆ. ವಿಷಯವಾಕ್ಯದಲ್ಲಿ 'ಅತ್ತಾ' ಎಂಬ ಪದವು ಕೇಳಿಸುತ್ತಿಲ್ಲ. ಆದ್ದರಿಂದ ಅತ್ಯತ್ವವು ಹೇಗೆ ತಿಳಿಯುತ್ತದೆಂಬುದನ್ನು 'ಓದನ ಉಪಸೇಚನಪದಾಭ್ಯಾಂ' ಎಂಬುದರಿಂದ ಸ್ಪಷ್ಟಪಡಿಸಿದ್ದಾರೆ. 'ಉಪಸೇಚನ' ಎಂದರೆ ಅದ್ಯತೇತಿ ಅದನಸಾಧನಂ = ತಿನ್ನಲು ಯೋಗ್ಯವಾಗಿದ್ದು ತಿನ್ನುವ ಪದಾರ್ಥಗಳಿಗೆ ಸಾಧನವನ್ನಾಗಿ ಉಪಯೋಗಿಸುವ ಪದಾರ್ಥ. ಉಪ್ಪಿನಕಾಯಿ ಎಂದರ್ಥ. ಓದನ ಹಾಗೂ ಉಪಸೇಚನಗಳು ತಿನ್ನುವ ವಸ್ತುಗಳನ್ನು ಹೇಳುವುದರಿಂದ ಇವುಗಳಿಗೆ ಕೃತಿಸಂಬಂಧಿಯಾಗಿ ಇವುಗಳಿಗೆ ತಿನ್ನುವವನು ಬೇಕಾದ್ದರಿಂದ 'ಅತ್ತಾ' ಎಂಬುದು ಲಾಭವಾಗುತ್ತದೆ. 'ಪ್ರಸಿದ್ಧೋದನ ಸಂಬಂಧೇನ' ಎಂಬ ಪದಕ್ಕೆ ಭೋಜ್ಯವೆಂದು ಪ್ರಸಿದ್ಧವಾದ ಯಾವ ಓದನ ಪದವಿದೆಯೋ ಅದರ ಸಂಬಂಧದಿಂದ ಎಂದರ್ಥ.

ಗ್ರಂಥದಲ್ಲಿ ಬ್ರಹ್ಮನನ್ನು 'ಅಭೋಕ್ತೃ' ಎನ್ನಲಾಗಿದೆ. ಏಕೆಂದರೆ ಹಿಂದಿನ ಅಧಿಕರಣದ 'ಸಂಭೋಗ' ಸೂತ್ರದಲ್ಲಿ ಬ್ರಹ್ಮನಿಗೆ ಅಭೋಕ್ತೃತ್ವವು ಹೇಳಲ್ಪಟ್ಟಿದೆ. ಮತ್ತು ''ಅನಶ್ನನ್'' ಎಂಬ ಶ್ರುತಿಯು ಸ್ಪಷ್ಟವಾಗಿ ಬ್ರಹ್ಮನಿಗೆ ಅಭೋಕ್ತೃತ್ವವನ್ನು ಪ್ರತಿಪಾದಿಸುತ್ತಿದೆಯೆಂದು ತಿಳಿಯಬೇಕು. ಗ್ರಂಥದಲ್ಲಿ 'ಮಾಯೋಪಾಧಿಕೇ'

ಎಂದಿದೆ. ಕಲ್ಪತರುವಿನಲ್ಲಿ 'ಮಾಯೋಪಾಧೇಃ ಪರಸ್ಯಾಸ್ತಿ ಸಂಹರ್ತೃತ್ವಂ' ಮಾಯಾವಿಶಿಷ್ಟನಾದ ಬ್ರಹ್ಮನಿಗೆ ಸಂಹರ್ತೃತ್ವವನ್ನು ಹೇಳಬಹುದು ಎಂದು ಹೇಳಲಾಗಿದೆ. ಅದನ್ನು ವಿವಕ್ಷಿಸಿ ಗ್ರಂಥಕಾರರು ಮಾಯೋಪಾಧಿಕೇ' ಎಂದಿದ್ದಾರೆ.

ಬ್ರಹ್ಮನಲ್ಲಿ ಸಂಹರ್ತೃತ್ವಧರ್ಮವು ಹೇಗೆ ಬರುತ್ತದೆಂಬುದನ್ನು 'ಭಕ್ತವಾಚಿನಃ' ಎಂಬ ವಾಕ್ಯದಿಂದ ನಿರೂಪಿಸುತ್ತಿದ್ದಾರೆ. 'ಭಕ್ತವಾಚಿನಃ' ಎಂದರೆ ಅನ್ನವಾಚಿಯಾದ ಎಂದರ್ಥ. ಸಂಹರ್ತೃತ್ವವನ್ನು ವಿವಕ್ಷಿಸಿದ್ದರಿಂದ ಯಾವ ವಿಶೇಷವನ್ನು ಹೇಳಿದಂತಾಯಿತು ? ಎಂಬ ಪ್ರಶ್ನೆಗೆ 'ಏವಂಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಬ್ರಹ್ಮ, ಕ್ಷತ್ರಾದಿ ಪದಗಳಿಗೆ ಮುಖ್ಯಾರ್ಥವನ್ನು ಬಿಟ್ಟಂತಾಗುತ್ತದೆಂಬುದನ್ನು 'ನಹಿ' ಇತ್ಯಾದಿ ವಾಕ್ಯದಿಂದ ಉಪಪಾದನೆ ಮಾಡುತ್ತಿದ್ದಾರೆ. ಬ್ರಹ್ಮನಿಗಾದರೂ ಸರ್ವಸಂಹರ್ತೃತ್ವಧರ್ಮವು ಯುಕ್ತವಾಗುತ್ತದೆಂದು ಅಭಿಪ್ರಾಯ.

ಸಾರ

ಶಾಂಕರಭಾಷ್ಯದಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾರೆ -

ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ।
ಮೃತ್ಯುರ್ಯಸ್ಯೋಪಸೇಚನಂ ಖ ಇತ್ಥಾ ವೇದ ಯತ್ರ ಸಃ ..... ॥

ಎಂಬ ಕಾಠಕದಲ್ಲಿರುವ ವಾಕ್ಯವೇ ಈ ಅಧಿಕರಣದ ವಿಷಯ. ಈ ವಾಕ್ಯದಲ್ಲಿ ಬ್ರಾಹ್ಮಣ ಹಾಗೂ ಕ್ಷತ್ರಿಯರನ್ನು ಅನ್ನವೆಂದು ಯಮನನ್ನು ಉಪಸೇಚನವೆಂದು ಹೇಳಿ ಯಾರು ಇವರನ್ನು ತಿನ್ನುತ್ತಾರೋ ಅಂತಹ ವ್ಯಕ್ತಿಯನ್ನು ತಿಳಿದವರು ಯಾರೆಂಬುದನ್ನೂ ಹೇಳಲಾಗಿದೆ.

ಪೂರ್ವಪಕ್ಷ - ಕಾಠಕೋಪನಿಷತ್ತು ಯಮ ಹಾಗೂ ನಚಿಕೇತರ ಸಂವಾದ ರೂಪವಾಗಿದೆ. ಅಗ್ನಿ, ಜೀವ, ಬ್ರಹ್ಮ ಮೂವರ ಪ್ರಸ್ತಾಪ ಇದರಲ್ಲಿದೆ. 'ಅನಶ್ನನ್' ಎಂಬ ಶ್ರುತಿ ಪ್ರಮಾಣದಿಂದ ಬ್ರಹ್ಮನಿಗೆ ಭೋಗ ಇರುವುದಿಲ್ಲ. ಆದ್ದರಿಂದ ಉಳಿದ ಜೀವನಿಗೆ ಅಥವಾ ಅಗ್ನಿಗೆ ಭೋಕ್ತೃತ್ವವನ್ನು ಹೇಳಬೇಕು. ಸೂತ್ರದಲ್ಲಿರುವ 'ಅತ್ತಾ' ಎಂಬ ಪದವು ತಿನ್ನುತ್ತಾನೆಂಬರ್ಥವನ್ನು ಹೇಳುತ್ತದೆ ಹೊರತು ಸಂಹಾರ ಎಂಬ ಅರ್ಥವನ್ನು ಹೇಳುವುದಿಲ್ಲ. ತಿನ್ನುವಿಕೆಯು ಜೀವನಲ್ಲೇ ಬರುತ್ತದೆ.

ಸಿದ್ಧಾಂತ - ಜೀವನಾಗಲಿ ಅಗ್ನಿಯಾಗಲಿ ಬ್ರಾಹ್ಮಣ ಅಥವಾ ಕ್ಷತ್ರಿಯರೆ ಅನ್ನವನ್ನು ತಿನ್ನಲು ಸಾಧ್ಯವಿಲ್ಲ. ಅಂತಹ ಸಾಮರ್ಥ್ಯ ಜೀವನಲ್ಲಿ ಅಸಂಭಾವಿತ. ಆದ್ದರಿಂದ ಸೂತ್ರದಲ್ಲಿ 'ಅತ್ತಾ' ಎಂಬ ಪದಕ್ಕೆ ಸಂಹಾರ ಮಾಡುತ್ತಾನೆಂಬ ಅರ್ಥವನ್ನೇ ಹೇಳಬೇಕು. ತಿನ್ನುತ್ತಾನೆಂಬ ಅರ್ಥವನ್ನು ಹೇಳಬಾರದು. ಬ್ರಹ್ಮನು ಸಮಸ್ತ ಜಗತ್ತನ್ನು ಸಂಹಾರ ಮಾಡುತ್ತಾನಾದ್ದರಿಂದ ಈ ವಾಕ್ಯದಿಂದ ಪ್ರತಿಪಾದ್ಯನಾದವನು ಬ್ರಹ್ಮನೇ ಆಗಿದ್ದಾನೆ.

तात्पर्यचन्द्रिका

अत्र ब्रूमः –

भोक्तृताऽपि विशिष्टेऽस्तु यथा संहर्तृता तव ।
अभोक्तृत्वं निविशतां शुद्धे कौटस्थ्यवत्सुखम् ।।

अभोक्तृत्वश्रुतेर्निर्विकारत्वश्रुतिवच्छुद्धविषयत्वसम्भवेन मायोपाधिके संहर्तृतेव भोक्तृताऽप्यस्तु । एवञ्च ब्रह्मक्षत्रादिशब्दानां न मुख्यार्थः त्यागः, तद्भोक्तृत्वस्य ब्रह्मणि सम्भवात्,

ओदनादिपदोपस्थापितस्यान्तरङ्गस्य भोग्यत्वस्यापि न त्यागः । नहि 'अग्निर्माणवकः' इत्यत्राग्निशब्दः पैङ्गल्यादिकमिव द्रव्यत्वायुपस्थापयति, न वा ''प्रोद्गातॄणां'' इत्यत्रोद्गातृशब्दोऽन्तरङ्गभूतान् प्रस्तोत्रादीनिव षोडशर्त्विजो लक्षयति, येनात्राप्योदनशब्दः संहार्यत्वमुपस्थापयेत् ।

अपिच ''सर्वं वा अत्ति'' इति मदीयविषयवाक्य इव त्वदीये वाक्ये सूत्रे प्रतिज्ञातोक्ता हेतूकृतं चराचरग्रहणं च न साक्षादस्ति ।।

यच्चोक्तं परैः – ''प्रकरणात्'' इति सूत्रस्य ''न जायते म्रियते वा विपश्चित्'' इति परमात्मन एव प्रकृतत्वाच्च स एवात्तेत्यर्थ इति, तन्न, ''न जायते'' इत्यस्मादुत्तरवाक्ये ''न हन्यते हन्यमानेऽपि देहे'' इति देहसम्बन्धस्य,

हन्ता चेन्मन्यते हन्तुं हतश्चेन्मन्यते हतम् ।
उभौ तौ न विजानीतः ..... ।।

इति हन्तृत्वादिभ्रान्तेश्च जीवलिङ्गस्य दर्शनेन ''न जायते'' इत्यादेर्जीवविषयत्वात् ।

अत्रापि परमतेऽप्यत्तुर्जीवत्वं निषिद्ध्य ब्रह्मत्वोक्तेस्तदैक्यप्रतिकूलता व्यक्तैव ।।

ಅನುವಾದ - ಅದ್ವೈತಿಗಳ ಈ ಅಧಿಕರಣಶರೀರವು ಅಸಾಧುವಾಗಿದೆ. ಸಂಹರ್ತೃತ್ವವನ್ನು ಮಾಯಾವಿಶಿಷ್ಟಬ್ರಹ್ಮನಲ್ಲಿ ಹೇಗೆ ಹೇಳುತ್ತೀರೋ ಅದರಂತೆ ಭೋಕ್ತೃತ್ವವನ್ನೂ ಸಹ ಅವನಲ್ಲೇ ಹೇಳಬಹುದು. ಭೋಕ್ತನಲ್ಲವೆನ್ನುತ್ತಿದೆಯಲ್ಲವೆ ಎಂದರೆ ನಿರ್ವಿಕಾರನಾದ ಶುದ್ಧಬ್ರಹ್ಮನಲ್ಲಿ ಅಭೋಕ್ತೃತ್ವವನ್ನು ಹೇಳಬಹುದು.

ಭೋಕ್ತೃತಾऽಪಿ ವಿಶಿಷ್ಟೇऽಸ್ತು ಯಥಾ ಸಂಹರ್ತೃತಾ ತವ।
ಅಭೋಕ್ತೃತ್ವಂ ನಿವಿಶತಾಂ ಶುದ್ಧೇ ಕೌಟಸ್ಥ್ಯವತ್ಸುಖಮ್ ॥

ಅಭೋಕ್ತೃತ್ವ ಶ್ರುತಿಗೆ ನಿರ್ವಿಕಾರತ್ವ ಶ್ರುತಿಯಂತೆ ಶುದ್ಧಬ್ರಹ್ಮವಿಷಯತ್ವವನ್ನು ಹೇಳಬಹುದು. ಆದ್ದರಿಂದ ಮಾಯಾವಿಶಿಷ್ಟನಾದ ಬ್ರಹ್ಮನಲ್ಲಿ ಸಂಹರ್ತೃತ್ವವನ್ನು ಹೇಳಿದಂತೆ ಭೋಕ್ತೃತ್ವವನ್ನೂ ಸಹ ಹೇಳಬಹುದು. ಹೀಗೆ ಹೇಳಿದಾಗ ಬ್ರಹ್ಮ, ಕ್ಷತ್ರ ಮೊದಲಾದ ಶಬ್ದಗಳಿಗೆ ಮುಖ್ಯಾರ್ಥವನ್ನು ಬಿಟ್ಟಂತಾಗುವುದಿಲ್ಲ. ಏಕೆಂದರೆ ಚತುರ್ಮುಖ ಬ್ರಹ್ಮ, ವಾಯುದೇವರು ಮೊದಲಾದವರ ಭಕ್ಷಣವನ್ನು ಬ್ರಹ್ಮನಲ್ಲಿ ಹೇಳಬಹುದು.

ಓದನಾದಿ ಪದಗಳಿಗೆ ಅಂತರಂಗವಾದದ್ದು ಭೋಜ್ಯತ್ವವೇ ಹೊರತು ಸಂಹರ್ತೃತ್ವವಲ್ಲ. ಸಂಹಾರ್ಯವಾದದ್ದನ್ನೆಲ್ಲಾ ಓದನವೆನ್ನುವುದಿಲ್ಲ. ಆದರೆ ಭೋಜ್ಯವಾದದ್ದನ್ನೆಲ್ಲ ಓದನವೆನ್ನುತ್ತಾರೆ. ಹೀಗೆ ಅಸಾಧಾರಣಧರ್ಮವಾದ್ದರಿಂದ ಅಂತರಂಗವೆನಿಸಿದ ಓದನ ಪದದಿಂದ ಉಪಸ್ಥಾಪಿತವಾದ ಭೋಜ್ಯತ್ವವನ್ನು ಬಿಡಬಾರದು. 'ಅಗ್ನಿರ್ಮಾಣವಕಃ' ಎಂದು ಹೇಳಿದಾಗ ಅಗ್ನಿಶಬ್ದವು ಪಿಂಗಲವರ್ಣವನ್ನು ಉಪಸ್ಥಾಪನೆ ಮಾಡುವಂತೆ ದ್ರವ್ಯತ್ವಾದಿಗಳನ್ನು ಉಪಸ್ಥಾಪನೆ ಮಾಡುವುದಿಲ್ಲವಷ್ಟೇ. ಅಥವಾ ''ಪ್ರೋದ್ಗಾತೃಣಾಂ'' ಎಂಬಲ್ಲಿ 'ಉದ್ಗಾತೃ' ಶಬ್ದದಲ್ಲಿ ಅಂತರಂಗವಾದ ಪ್ರಸ್ತೋತ್ರಾದಿಗಳನ್ನು ವಿವಕ್ಷಿಸುವಂತೆ ಹದಿನಾರು ಮಂದಿ ಋತ್ವಿಜರನ್ನು ಲಕ್ಷಣಯಾ ವಿವಕ್ಷಿಸುವುದಿಲ್ಲ. ಹಾಗೇ ಅಂತರಂಗವನ್ನು ಬಿಡುವುದಾದಲ್ಲಿ ಇಲ್ಲಿಯೂ ಸಹ ಓದನ ಶಬ್ದವು ಸಂಹಾರ್ಯತ್ವವನ್ನು ಉಪಸ್ಥಾಪನೆ ಮಾಡುತ್ತಿತ್ತು.

ಮತ್ತು ''ಸರ್ವಂ ವಾ ಅತ್ತಿ'' ಎಂಬುದು ನಮ್ಮ ಮತದ ವಿಷಯವಾಕ್ಯ. ನಿಮ್ಮ ಮತದಲ್ಲಿ ''ಯಸ್ಯ ಬ್ರಹ್ಮ ಚ'' ಎಂಬುದು ವಿಷಯವಾಕ್ಯ. ನಾವು ಹೇಳುವ ವಿಷಯವಾಕ್ಯದಲ್ಲಿ ಸೂತ್ರದಲ್ಲಿ ಪ್ರತಿಜ್ಞೆ ಮಾಡಲ್ಪಟ್ಟ ಅತ್ತೃತ್ವವು ಮತ್ತು ಹೇತುವನ್ನಾಗಿ ಮಾಡಲ್ಪಟ್ಟ ಚರಾಚರ ಗ್ರಹಣವು ನೇರವಾಗಿ ತಿಳಿಯುತ್ತದೆ. ಆದರೆ ನೀವು ಉಲ್ಲೇಖಿಸುತ್ತಿರುವ ವಿಷಯವಾಕ್ಯದಲ್ಲಿ ಸೂತ್ರದಲ್ಲಿ ಪ್ರತಿಜ್ಞೆ ಮಾಡಲ್ಪಟ್ಟ ಅತ್ತೃತ್ವವಾಗಲೀ ಹೇತುವಾಗಿರುವ ಚರಾಚರಗ್ರಹಣವಾಗಲಿ ನೇರವಾಗಿ ತಿಳಿಯಲು ಸಾಧ್ಯವಿಲ್ಲ.

ಅದ್ವೈತಿಗಳು 'ಪ್ರಕರಣಾತ್' ಎಂಬ ಎರಡನೇ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - 'ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್' ಎಂಬುದಾಗಿ ಹಿಂದೆ ಪರಮಾತ್ಮನೇ ಪ್ರಕೃತನಾದ್ದರಿಂದ ಅವನೇ 'ಅತ್ತಾ' ಎನಿಸುತ್ತಾನೆಂದು. ಈ ವ್ಯಾಖ್ಯಾನವೂ ಸಹ ತಪ್ಪು. ಏಕೆಂದರೆ 'ನ ಜಾಯತೇ' ಎಂಬ ಮುಂದಿನ

ವಾಕ್ಯದಲ್ಲಿ ''ನ ಹನ್ಯತೇ ಹನ್ಯಮಾನೇऽಪಿ ದೇಹೇ'' ಎಂಬುದಾಗಿ ದೇಹ ಸಂಬಂಧವು ಕೇಳಿಸುತ್ತಿದೆ. ಮತ್ತು ''ಹಂತಾ ಚೇನ್ಮನ್ಯತೇ ಹಂತುಂ ಹತಶ್ಚೇನ್ಮನ್ಯತೇ ಹತಮ್ । ಉಭೌ ತೌ ನ ವಿಜಾನೀತಃ ..... ॥ ಎಂಬುದಾಗಿ ಹಂತೃತ್ವಾದಿಗಳ ಭ್ರಾಂತಿಯನ್ನು ನಿರಾಕರಿಸಲಾಗಿದೆ. ಇವೆಲ್ಲವೂ ಜೀವನ ಲಿಂಗಗಳಾಗಿರುವುದರಿಂದ 'ನ ಜಾಯತೇ' ಎಂಬ ವಾಕ್ಯದಿಂದ ಪ್ರತಿಪಾದ್ಯನಾದವನು ಜೀವನೇ ಆಗುತ್ತಾನೆ.

ಹಿಂದಿನ ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ ಅದ್ವೈತಿಗಳು ಜೀವನಲ್ಲಿ ಅತೃತ್ವವಿಲ್ಲವೆಂದು ನಿಷೇಧ ಮಾಡಿ ಬ್ರಹ್ಮನಲ್ಲಿದೆಯೆಂದು ಹೇಳಿರುವುದರಿಂದ ಜೀವೈಕ್ಯ ಸಾಧನೆಗೆ ಈ ಅಧಿಕರಣವೂ ಸಹ ಪ್ರತಿಕೂಲವೇ ಆಗುತ್ತದೆ.

ಪ್ರಕಾಶಃ –

यदुक्तममुख्यत्वाविशेषाद्ब्रह्मक्षत्रादिशब्दमुख्यत्वायौदनादिपदस्य संहार्यत्वमेवार्थोऽस्त्विति, तत्रामुख्यत्वाविशेषेऽप्यन्तरङ्गत्वाद्भोक्तृत्वप्रतिसम्बन्धि भोज्यत्वमेव लक्ष्यताम्, ब्रह्मक्षत्रादिशब्दस्य मुख्यत्वं च शक्यसम्पादमिति भावेन तदीयसिद्धान्तरचनां निरस्यति – भोक्तृतेति ।

ವಿವರಣೆ - ಅದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ. ಅದ್ವೈತಿಗಳು ಸಿದ್ಧಾಂತವನ್ನು ಮಾಡುವಾಗ ಅತೃತ್ವವೆಂದರೆ ಭೋಜ್ಯತ್ವವಲ್ಲ, ಸಂಹರ್ತೃತ್ವವೆಂದು ನಿರ್ಣಯಿಸಿದರು. ಹೀಗೆ ನಿರ್ಣಯಿಸಿದ್ದರಿಂದ ಬ್ರಹ್ಮಕ್ಷತ್ರಾದಿ ಪದಗಳಿಗೆ ಮುಖ್ಯಾರ್ಥವನ್ನು ಬಿಟ್ಟಂತಾಗುವುದಿಲ್ಲ. ಮತ್ತು ಭೋಜ್ಯತ್ವದಲ್ಲಿ ಅಮುಖ್ಯಾರ್ಥವನ್ನು ಮಾಡುವಂತೆ ಸಂಹಾರ್ಯತ್ವದಲ್ಲಿ ಅಮುಖ್ಯಾರ್ಥವನ್ನು ಮಾಡಬಹುದು. ಆದ್ದರಿಂದ ಓದನಾದಿ ಪದಗಳಿಗೆ ಸಂಹಾರ್ಯತ್ವವೆಂದೇ ಅರ್ಥ ಹೊರತು ಭೋಜ್ಯತ್ವವೆಂದಲ್ಲ ಎಂದು ಹೇಳಿದರು. ಇದು ತಪ್ಪು. ಅದ್ವೈತಿಗಳು ಹೇಳಿದ ನ್ಯಾಯದಂತೆ ಎರಡೂ ಪಕ್ಷಗಳಲ್ಲಿ ಅಮುಖ್ಯತ್ವವು ಸಮಾನವಾದ್ದರಿಂದ ಓದನಾದಿ ಪದಗಳಿಗೆ ಭೋಜ್ಯತ್ವವೆಂಬರ್ಥವನ್ನೇ ಹೇಳಬಹುದು. ಹೀಗೆ ಹೇಳಿದಾಗ ಓದನ ಪದಕ್ಕೆ ಭೋಜ್ಯತ್ವವೆಂಬ ಅಂತರಂಗಪ್ರಮಾಣವನ್ನು ಆಶ್ರಯಿಸಿದಂತಾಗುತ್ತದೆ. ಆದ್ದರಿಂದ ಲಕ್ಷಣಾ ಮಾಡುವುದೇ ನಿಶ್ಚಿತವಾದಲ್ಲಿ ಭೋಜ್ಯತ್ವದಲ್ಲಿ ಲಕ್ಷಣಾ ಮಾಡುವುದೇ ಒಳ್ಳೆಯದು. ಇನ್ನು ಬ್ರಹ್ಮ, ಕ್ಷತ್ರಾದಿ ಶಬ್ದಗಳಂತೂ ಮುಖ್ಯಾರ್ಥವನ್ನು ಸಂಪಾದಿಸಲು ಅದ್ವೈತಿಗಳಿಗೆ ಸಾಧ್ಯವೇ ಇಲ್ಲ. ಈ ಎಲ್ಲ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅದ್ವೈತಿಗಳ ಸಿದ್ಧಾಂತ ರಚನೆಯ ಕ್ರಮವನ್ನು 'ಭೋಕ್ತೃತಾಪಿ' ಎಂಬ ಶ್ಲೋಕದಿಂದ ನಿರಾಕರಿಸುತ್ತಿದ್ದಾರೆ.

ಪ್ರಕಾಶಃ – ಅನಶನಾಶ್ರುತೇರ್ಗತಿಮಾಹ – ಅಭೋಕ್ತೃತ್ವಮಿತಿ । ನಿವಿಶತಾಮಿತಿ ''ನೇರ್ವಿಶಃ'' ಇತ್ಯಾತ್ಮನೇಪದಮ್ । ಉತ್ತರಾರ್ಧವ್ಯಕ್ತಿಪೂರ್ವೆ ಪೂರ್ವಾರ್ಧೆ ವ್ಯನಕ್ತಿ – ಅಭೋಕ್ತೃತ್ವೇತಿ । ಕೋ ವಿಶೇಷ ಇತ್ಯತोऽन्तरङ್ಗತ್ವಾದಿತ್ಯಾಹ – ಓದನೇತಿ ।

'ಅನಶ್ನನ್' ಎಂಬ ಶ್ರುತಿಗೆ 'ಅಭೋಕ್ತೃತ್ವಂ' ಎಂಬ ವಾಕ್ಯದಿಂದ ಗತಿಯನ್ನು ಹೇಳುತ್ತಿದ್ದಾರೆ. ಶ್ಲೋಕದಲ್ಲಿ ಗ್ರಂಥಕಾರರು 'ನಿವಿಶತಾಂ' ಎಂದು ಪ್ರಯೋಗಿಸಿದ್ದಾರೆ. ವಾಸ್ತವಿಕವಾಗಿ 'ವಿಶ್' ಧಾತುವು ಪರಸ್ಮೈಪದದಲ್ಲಿರುವುದರಿಂದ 'ನಿವಿಶತು' ಎಂದಾಗಬೇಕಿತ್ತು. ಆದರೆ ''ನೇರ್ವಿಶಃ'' ಎಂಬ ಸೂತ್ರದಲ್ಲಿ 'ನಿ' ಉಪಸರ್ಗ ಸೇರಿದಾಗ ವಿಶ್ ಧಾತುವಿಗೆ ಆತ್ಮನೇ ಪದವನ್ನೂ ಸಹ ಹೇಳಿದ್ದಾರೆ. ಆದ್ದರಿಂದ 'ನಿವಿಶತಾಂ' ಎಂಬ ಪ್ರಯೋಗವು ಅಸಾಧುವಲ್ಲ. ಶ್ಲೋಕದ ಉತ್ತರಾರ್ಧವನ್ನು ವ್ಯಾಖ್ಯಾನಿಸುವ ಮೂಲಕವಾಗಿ ಪೂರ್ವಾರ್ಧವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಅಭೋಕ್ತೃತ್ವ' ಇತ್ಯಾದಿಯಾಗಿ.

ಭೋಜ್ಯತ್ವವನ್ನು ಬಿಟ್ಟು, ಸಂಹಾರ್ಯತ್ವವನ್ನು ಸ್ವೀಕರಿಸಲು ಏನು ಕಾರಣ ? ಎಂಬುದಕ್ಕೆ ಅಂತರಂಗವಾಗಿರುವಿಕೆಯೇ ಕಾರಣವೆಂದು 'ಓದನಾದಿ' ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

प्रकाशः – ननु अमुख्यत्वेऽन्तरङ्गत्वं बहिरङ्गत्वं वा अप्रयोजकमित्यत, उपस्थितिवैशेष्यादन्तरङ्गमेवादर्तव्यं, न बहिरङ्गमित्येतदुपपादयति – **नहीति** । इदं गौणवृत्तेरन्तरङ्गस्योपस्थित्युपपादनम् । लक्षणायामाह – **नवेति** । यद्वा – लौकिकवैदिकोदाहरणप्रदर्शनार्थं द्वयम् ।

ಎರಡೂ ಪಕ್ಷಗಳಲ್ಲಿ ಅಮುಖ್ಯಾರ್ಥವನ್ನೇ ಸ್ವೀಕರಿಸಬೇಕು. ಹೀಗಿರುವಾಗ ಅಂತರಂಗ ಬಹಿರಂಗಗಳೆಂಬ ಕಾರಣವು ಅಪ್ರಯೋಜಕಗಳಲ್ಲವೇ? ಎಂಬ ಪ್ರಶ್ನೆಗೆ ಪ್ರತೀತಿಯಲ್ಲಿ ವೈಶಿಷ್ಟ್ಯವಿರುವುದರಿಂದ ಅಂತರಂಗವನ್ನೇ ಉದಾಹರಿಸಬೇಕು ಹೊರತು ಬಹಿರಂಗವನ್ನಲ್ಲ ಎಂಬುದಾಗಿ 'ನಹಿ' ಇತ್ಯಾದಿ ವಾಕ್ಯದಿಂದ ಉಪಪಾದಿಸುತ್ತಿದ್ದಾರೆ. ಇದರಿಂದ ಗೌಣೀವೃತ್ತಿಯ ಅಂತರಂಗಕ್ಕೆ ಉಪಸ್ಥಿತಿಯನ್ನು ಹೇಳಿದಂತಾಯಿತು. ಲಕ್ಷಣಾವೃತ್ತಿಯ ಅಂತರಂಗ ಉಪಸ್ಥಿತಿಯ ಉಪಪಾದನೆಯನ್ನು 'ನ ವಾ' ಇತ್ಯಾದಿಯಾಗಿ ಉಪಪಾದಿಸುತ್ತಿದ್ದಾರೆ. ಅಥವಾ ಎರಡು ದೃಷ್ಟಾಂತಗಳಲ್ಲಿ ಮೊದಲನೆಯದ್ದು ಲೌಕಿಕ ದೃಷ್ಟಾಂತವೆಂದು ಎರಡನೆಯದ್ದು ವೈದಿಕ ದೃಷ್ಟಾಂತವೆಂದು ತಿಳಿಯಬೇಕು.

प्रकाशः – उक्तमधिकरणशारीरं ''जन्माद्यस्य'' इति सूत्रे । एकस्तोत्रवचनसम्बन्धादिभिरन्तरङ्गभूतान् प्रस्तोत्रादीनिव बहिरङ्गभूतान् षोडशर्त्विजो यथोद्गातृशब्दो न लक्षयति, तथौदनशब्दोऽपीत्यर्थः ।

ಪ್ರೋದ್ಗಾತೃಧಿಕರಣವನ್ನು ಜನ್ಮಾದ್ಯಧಿಕರಣದಲ್ಲಿ ವಿವರಿಸಿದ್ದಾಗಿದೆ. 'ಪ್ರೈತುಹೋತುಶ್ಚಮಸಃ' ಎಂಬ ಸೂತ್ರದಲ್ಲಿ 'ಪ್ರೋದ್ಗಾತೃ' ಎಂಬ ವಾಕ್ಯವು ಪ್ರಸಕ್ತವಾಗಿದೆ. ಉದ್ಗಾತೃವು ಒಬ್ಬನೇ ಇರುವುದರಿಂದ ಬಹುವಚನ ಪ್ರಯೋಗ ಹೇಗೆ ? ಎಂದರೆ ಬಹುವಚನ ಇರುವುದರಿಂದ ಬೇರೆ ಋತ್ವಿಜರನ್ನು ತೆಗೆದುಕೊಳ್ಳಬೇಕು. ಬೇರೆಯವರೆಂದರೆ ಹದಿನಾರು ಮಂದಿ ಋತ್ವಿಜರನ್ನು ತೆಗೆದುಕೊಳ್ಳಬೇಕೋ? ಅಥವಾ ಪ್ರಸ್ತೋತೃ, ಉದಾತೃ, ಪ್ರತಿಹರ್ತೃ, ಸುಬ್ರಹ್ಮಣ್ಯ ಈ ನಾಲ್ಕು ಮಂದಿಯನ್ನು ತೆಗೆದುಕೊಳ್ಳಬೇಕೋ? ಎಂದು ಸಂಶಯ. ಹದಿನಾರು ಮಂದಿ ಋತ್ವಿಜರು ಸಾಮಗಾನವನ್ನು ಮಾಡುವುದಿಲ್ಲ. ಆದ್ದರಿಂದ ಪ್ರಸ್ತೋತ್ರಾದಿಗಳನ್ನೇ ಬಹುವಚನದಿಂದ ತೆಗೆದುಕೊಳ್ಳಬೇಕು. ಪ್ರಸ್ತೋತ್ರಾದಿಗಳು ಅಂತರಂಗ, ಹದಿನಾರು ಮಂದಿ ಋತ್ವಿಜರು

ಬಹಿರಂಗ. ಬಹಿರಂಗಕ್ಕಿಂತ ಅಂತರಂಗವೇ ಶ್ರೇಷ್ಠವೆಂದು ಈ ಅಧಿಕರಣದಲ್ಲಿ ನಿರ್ಣಯಿಸಲಾಗಿದೆ. ಆದರಂತೆ ಪ್ರಕೃತದಲ್ಲಿಯೂ 'ಓದನ' ಪದದಿಂದ ಅಂತರಂಗ ಎನಿಸಿದ ಭೋಜ್ಯತ್ವವನ್ನೇ ಸ್ವೀಕರಿಸಬೇಕು.

ಪ್ರಕಾಶಃ – ಸುಧೋಕ್ತಮುದಾಹರಣಾನೌಚಿತ್ಯಂ ಚಾऽऽಹ – ಅಪಿಚೇತಿ । ಓದನೋಪಸೇಚನಪದಾಭ್ಯಾಮತ್ತೇತ್ಯಸ್ಯೋಪಲಕ್ಷಣಣೀಯತ್ವೇನೋಕ್ತತ್ವಾನ್ನ ಸಾಕ್ಷಾದತ್ತೇತಿ ಶ್ರುತಮ್, ಬ್ರಹ್ಮಕ್ಷತ್ರಾದಿಪದೇನ ಲಕ್ಷಣಯಾ ಚರಾಚರಗ್ರಹಣಸ್ಯೋಕ್ತತ್ವಾತ್ ತದಪಿ ನ ಸಾಕ್ಷಾಚ್ಛ್ರುತಮ್ । ಅತೋऽಸ್ಮದುದಾಹರಣಮೇವ ಸೂತ್ರಾನುಗುಣ್ಯಾದ್ಯುಕ್ತಮಿತ್ಯರ್ಥಃ ।

ಸುಧೆಯಲ್ಲಿ ಹೇಳಿದ ಆದ್ವೈತಿಗಳ ವಿಷಯವಾಕ್ಯದಲ್ಲಿರುವ ಅನೌಚಿತ್ಯವನ್ನು 'ಅಪಿಚ' ಎಂಬ ಗ್ರಂಥದಿಂದ ನಿರೂಪಿಸುತ್ತಿದ್ದಾರೆ. 'ಓದನ' ಮತ್ತು 'ಉಪಸೇಚನ' ಪದಗಳಿಂದ 'ಅತ್ತಾ' ಎಂಬುದು ಉಪಲಕ್ಷಣಯಾ ತಿಳಿದಿದೆ ಹೊರತು ನೇರವಾಗಿ ತಿಳಿದಿಲ್ಲ. ಬ್ರಹ್ಮ ಹಾಗೂ ಕ್ಷತ್ರಪದಗಳಿಂದ ಚರಾಚರ ಗ್ರಹಣವು ಲಕ್ಷಣಾವೃತ್ತಿಯಿಂದ ತಿಳಿಯುತ್ತಿದೆ ಹೊರತು ನೇರವಾಗಿ ತಿಳಿಯುವುದಿಲ್ಲ. ಆದ್ದರಿಂದ ನಾವು ಹೇಳಿದ ಉದಾಹರಣ ವಾಕ್ಯವೇ ಸೂತ್ರಕ್ಕೆ ಅನುಗುಣವಾಗಿದೆ ಎಂದರ್ಥ.

ಪ್ರಕಾಶಃ – ನನು ತ್ವದ್ವಾಕ್ಯೇऽಪಿ ಸರ್ವಪದಸ್ಯೈವ ಶ್ರವಣಾಚ್ಚರಾಚರಪದಾಶ್ರವಣಾನ್ನ ಸೂತ್ರಾನುಗುಣ್ಯಮಿತಿ ಚೇನ್ನ, ತಸ್ಯ ಸಙ್ಕೋಚನಿವೃತ್ತ್ಯರ್ಥಂ ಸರ್ವಶಬ್ದವ್ಯಾಖ್ಯಾನಾಯ ಚರಾಚರೇತ್ಯುಕ್ತತ್ವಾದಿತಿ ಪ್ರಾಗೇವೋಕ್ತತ್ವಾದಿತಿ ಭಾವಃ । ದ್ವಿತೀಯಸೂತ್ರಾರ್ಥಮಪ್ಯನೂದ್ಯ ನಿರಾಹ – ಯಚ್ಚೇತಿ । ಉತ್ತರವಾಕ್ಯ ಇತಿ ।

ಅಜೋ ನಿತ್ಯಃ ಶಾಶ್ವತೋऽಯಂ ಪುರಾಣೋ ನ ಹನ್ಯತೇ ಹನ್ಯಮಾನೇऽಪಿ ದೇಹೇ । ಇತ್ಯನ್ಯವಹಿತೋತ್ತರವಾಕ್ಯೇ ।

ನೀವು ಹೇಳುವ ವಿಷಯವಾಕ್ಯದಲ್ಲಿ ಸರ್ವಶಬ್ದವೇ ಕೇಳಿಸುತ್ತಿದೆ ಹೊರತು ಚರಾಚರಶಬ್ದವು ಕೇಳಿಸುತ್ತಿಲ್ಲ. ಆದ್ದರಿಂದ ಸೂತ್ರದ ಅನಾನುಗುಣ್ಯದೋಷವು ನಮ್ಮಂತೆ ನಿಮಗೂ ತಪ್ಪಿದ್ದಲ್ಲವೆಂಬ ಆಕ್ಷೇಪಕ್ಕೆ ಅವಕಾಶವಿಲ್ಲ. ಏಕೆಂದರೆ ಶ್ರುತಿಯಲ್ಲಿರುವ ಸರ್ವಶಬ್ದಕ್ಕೆ ಸಂಕೋಚ ಮಾಡಿ ಅರ್ಥವನ್ನು ಹೇಳಬಾರದೆಂಬ ಕಾರಣದಿಂದಲೇ ಸರ್ವಶಬ್ದಕ್ಕೆ ವ್ಯಾಖ್ಯಾನರೂಪವಾಗಿ ಸೂತ್ರದಲ್ಲಿ ಚರಾಚರ ಪದವನ್ನು ಪ್ರಯೋಗಿಸಿದ್ದಾರೆ. ಈ ವಿಷಯವನ್ನು ಈ ಹಿಂದೆಯೇ ಹೇಳಿದ್ದೇವೆ.

ಆದ್ವೈತಿಗಳ ಎರಡನೆ ಸೂತ್ರವ್ಯಾಖ್ಯಾನವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ. 'ಯಚ್ಚ' ಇತ್ಯಾದಿ ವಾಕ್ಯದಿಂದ. 'ಉತ್ತರವಾಕ್ಯೇ' ಎಂದರೆ 'ಅಜೋ ನಿತ್ಯಃ ಶಾಶ್ವತೋऽಯಂ ಪುರಾಣೋ ನ ಹನ್ಯತೇ ಹನ್ಯಮಾನೇऽಪಿ ದೇಹೇ'' ಎಂಬ ಅವ್ಯವಹಿತವಾದ ಉತ್ತರವಾಕ್ಯದಲ್ಲಿ ಎಂದರ್ಥ.

ಪ್ರಕಾಶಃ – ಉಪಲಕ್ಷಣಮೇತತ್, ಪೂರ್ವತ್ರಾಪಿ,

एतदालम्बनं ज्ञात्वा ब्रह्मलोके महीयते ।

इति जीवस्यैव प्रथमान्ततया प्रकृतस्यान्वयाच्च, विपश्चित्त्वविशेषणेन प्रागुक्तज्ञानिन एवान्वयप्रतीतेश्च,

भावाभावौ न विदुषो यस्माज्जीवो न कश्चन ।

''न जायते म्रियते वाऽपि'' इत्यादिस्मृतिविरोधाच्चेत्यपि ध्येयम् ।

ಉಪಲಕ್ಷಣಯಾ ಇನ್ನೂ ಕೆಲವು ದೋಷಗಳನ್ನು ತಿಳಿಯಬೇಕು. ನೀವು ಹೇಳಿದ ವಿಷಯವಾಕ್ಯದ ಹಿಂದೆ 'ಏತದಾಲಂಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ ।' ಬ್ರಹ್ಮನೇ ಜೀವನಿಗೆ ಆಶ್ರಯನಾಗಿದ್ದಾನೆಂದು ತಿಳಿದರೆ ಅಂತಹ ಜೀವನು ಬ್ರಹ್ಮಲೋಕದಲ್ಲಿ ಪೂಜ್ಯನಾಗುತ್ತಾನೆಂದು ಪ್ರಸಕ್ತವಾಗಿದೆ. ಹೀಗೆ 'ಏತತ್' ಎಂಬುದಾಗಿ ಜೀವನು ಪ್ರಥಮಾಂತಪದದಿಂದ ಪ್ರಕೃತನಾಗಿದ್ದಾನೆ. ಅವನ ಜೊತೆಗೆ ಅನ್ವಯ ಮಾಡುವುದೇ ಸಾಧುವಾಗಿದೆ. ಆದ್ದರಿಂದ ಆತ್ಮತ್ವಗುಣವುಳ್ಳವನು ಜೀವನೆಂದೇ ನೀವು ಹೇಳಬೇಕು. ಮತ್ತು 'ವಿಪಶ್ಚಿತ್' ಎಂಬುದಾಗಿ ವಿಶೇಷಣವನ್ನು ಹೇಳಿದ್ದರಿಂದ ಹಿಂದೆ ಪ್ರಕೃತನಾದ ಜ್ಞಾನಿಯ ಅನ್ವಯವೇ ಪ್ರತೀತವಾಗುತ್ತದೆ. ಅಷ್ಟೇ ಅಲ್ಲದೆ ಬ್ರಹ್ಮನನ್ನು ವಿವಕ್ಷಿಸಿದಾಗ ''ಭಾವಾಭಾವೌ ನ ವಿದುಷೋ ಯಸ್ಮಾಜ್ಜೀವೋ ನ ಕಶ್ಚನ । ''ನ ಜಾಯತೇ ಮ್ರಿಯತೇ ವಾऽಪಿ'' ಇತ್ಯಾದಿ ಶ್ರುತಿಯ ವಿರೋಧವೂ ಸಹ ಬರುತ್ತಿದೆ ಎಂದು ತಿಳಿಯಬೇಕು.

प्रकाशः – परस्येदं नारभ्यमेवेति भावेनाह – अत्रापीति । न केवलं पूर्वत्रेत्यपेरर्थः ।

एतैनैतदेव वाक्यमुदाहृत्य शिवनिष्ठं संहर्तृत्वमिति वदतः कस्यचिन्मतं प्रत्युक्तं बोध्यं, विषयवाक्यानानुगुण्यादेरुक्तत्वादिति ।

ಅದ್ವೈತಿಗೆ ಈ ಅಧಿಕರಣವು ಅನಾರಂಭಣೀಯವಾಗಿದೆಯೆಂಬ ಅಭಿಪ್ರಾಯದಿಂದ 'ಅತ್ರಾಪಿ' ಇತ್ಯಾದಿ ವಾಕ್ಯವು ಹೊರಟಿದೆ. ಹಿಂದಿನ ಅಧಿಕರಣಗಳಷ್ಟೇ ಅಲ್ಲ ಎಂದಭಿಪ್ರಾಯ.

ಹೀಗೆ ಅದ್ವೈತಿಗಳನ್ನು ನಿರಾಕರಿಸಿದ್ದರಿಂದ ಶೈವರ ಮತವನ್ನೂ ಸಹ ನಿರಾಕರಿಸಿದಂತಾಯಿತು. ಅದ್ವೈತಿಗಳಂತೆ ಶೈವರೂ ಸಹ 'ಬ್ರಹ್ಮ ಕ್ಷತ್ರ ಚ' ಎಂಬುದನ್ನೇ ವಿಷಯವಾಕ್ಯವೆನ್ನುತ್ತಾರೆ. ಮತ್ತು ಸಂಹರ್ತೃತ್ವವು ಜೀವನಲ್ಲಿ ಬರುವುದಿಲ್ಲ. ಬ್ರಹ್ಮನಲ್ಲಿ ಬರುತ್ತದೆಂದು ಸಿದ್ಧಾಂತ ಮಾಡಿದ್ದಾರೆ. ಹೀಗೆ ಹೇಳುವ ಶೈವರಿಗೆ ವಿಷಯವಾಕ್ಯಕ್ಕೆ ಸೂತ್ರದಿಂದ ಅನಾನುಗುಣ್ಯವೇ ಮೊದಲಾದ ಅನೇಕ ದೋಷಗಳು ಬರುತ್ತವೆ. ಅದ್ವೈತಿಗಳಿಗಿಂತ ಹೆಚ್ಚಿನ ವಿಚಾರವನ್ನು ಹೇಳದ ಇವರನ್ನು ನಿರಾಕರಿಸಲು ಹೆಚ್ಚು ಮಾತುಗಳು ಬೇಕಾಗಿಲ್ಲ.

ಸಾರ

ಶಾಂಕರಭಾಷ್ಯದಲ್ಲಿ ಅತೃತ್ವವು ಭೋಕ್ತೃತ್ವರೂಪವಾಗಿದೆ. ಬ್ರಹ್ಮನು ಭೋಕ್ತೃವಲ್ಲದ ಕಾರಣ ಅತೃವಲ್ಲ ಎಂದು ಪೂರ್ವಪಕ್ಷ ಮಾಡಿ ಸಂಹಾರಕತ್ವವನ್ನೇ ಅತೃತ್ವವೆನ್ನಬೇಕು. ಸಂಹಾರಕತ್ವವು ಬ್ರಹ್ಮನ ಧರ್ಮವೆಂದು ಸಿದ್ಧಾಂತ ಮಾಡಲಾಗಿದೆ. ಇದು ತಪ್ಪು. ವಿಚಾರ ಮಾಡಿದರೆ ಸಂಹಾರಕರ್ತೃತ್ವವನ್ನೇ ಶುದ್ಧ ಬ್ರಹ್ಮನಲ್ಲಿ ಹೇಳಲು ಸಾಧ್ಯವಿಲ್ಲ. ಮಾಯಾವಿಶಿಷ್ಟಬ್ರಹ್ಮನಲ್ಲಿ ಸಂಹಾರಕರ್ತೃತ್ವವನ್ನು ಹೇಳಬೇಕು. ಅವನಲ್ಲಿ ಭೋಕ್ತೃತ್ವವೂ ಸಹ ಇದ್ದೇ ಇದೆ. ''ಅನಶ್ನನ್'' ಎಂಬ ಶ್ರುತಿಯು ಶುದ್ಧಬ್ರಹ್ಮನಲ್ಲಿ ಭೋಕ್ತೃತ್ವವನ್ನು ನಿಷೇಧ ಮಾಡುತ್ತಿದೆ. ಹೀಗೆ ಹೇಳಲು ಬರುವುದರಿಂದ ಅತೃತ್ವವು ಭೋಕ್ತೃತ್ವರೂಪವಲ್ಲ. ಸಂಹಾರ ಕರ್ತೃತ್ವವೆಂದು ಸಿದ್ಧಾಂತ ಮಾಡುವುದು ಹೇಗೆ ಸರಿ?

ಮತ್ತು ಸೂತ್ರದಲ್ಲಿ ಹೇಳಲ್ಪಟ್ಟ ಪ್ರತಿಜ್ಞಾವಾಕ್ಯದಿಂದ ಅಥವಾ ಹೇತುವಾಕ್ಯದಿಂದ ಸೂತ್ರಕ್ಕೆ ಅನುಗುಣ್ಯವೂ ಬರುವುದಿಲ್ಲ. ಆದರೆ ನಾವು ಉಲ್ಲೇಖಿಸಿದ 'ಸರ್ವಂ ವಾ ಅತ್ತಿ' ಎಂಬ ವಿಷಯವಾಕ್ಯದಲ್ಲಿ 'ಅತ್ತಾ' ಎಂಬ ಪದವಿದೆ. ಮತ್ತು 'ಸರ್ವಂ' ಎಂಬ ಪದವಿದೆ. ಇವುಗಳಿಂದ ಸೂತ್ರದಲ್ಲಿರುವ ಪ್ರತಿಜ್ಞಾಭಾಗ ಹಾಗೂ ಹೇತು ವಾಕ್ಯಗಳಿಗೆ ನೇರವಾಗಿ ಅನುಗುಣ್ಯವನ್ನು ಹೇಳಬಹುದು.

ಆದ್ವೈತಿಗಳು 'ಪ್ರಕರಣಾಚ್ಚ' ಎಂಬ ಎರಡನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - ಈ ಮಂತ್ರಕ್ಕಿಂತ ಕೆಲವು ಮಂತ್ರಗಳ ಹಿಂದೆ 'ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್' ಎಂದು ಬ್ರಹ್ಮನ ಪ್ರಸ್ತಾಪವಿರುವುದರಿಂದ ಈ ಪ್ರಕರಣದಿಂದ ಬ್ರಹ್ಮನೇ 'ಅತ್ತಾ' ಎಂದು ನಿರ್ಧಾರವಾಗುತ್ತದೆ.

''ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್'' ಎಂಬ ವಾಕ್ಯದ ನಂತರ ''ನ ಹನ್ಯತೇ ಹನ್ಯಮಾನೇ೨ಪಿ'' ಎಂಬುದಾಗಿ ಜೀವನೂ ಸಹ ಪ್ರಸ್ತುತನಾಗಿದ್ದಾನೆ. ಆದ್ದರಿಂದ ಬ್ರಹ್ಮನೇ ಈ ಪ್ರಕರಣ ಪ್ರತಿಪಾದ್ಯನೆಂದು ಹೇಗೆ ನಿರ್ಣಯಿಸುತ್ತೀರಿ ?

ರಾಮಾನುಜರು ಈ ಎರಡು ಸೂತ್ರಗಳನ್ನು ಪ್ರತ್ಯೇಕ ಅಧಿಕರಣವೆಂದು ಪರಿಗಣಿಸಿಲ್ಲ. ಗುಹಾಧಿಕರಣದಲ್ಲೇ ಸೇರಿಸುತ್ತಾರೆ. ಆದ್ದರಿಂದ ಗ್ರಂಥಕಾರರು ರಾಮಾನುಜ ಮತವನ್ನು ಮುಂದೆಯೇ ನಿರಾಕರಿಸುತ್ತಾರೆ.

ಟೀಕೆಯ ಕಠಿಣಪದಾರ್ಥ

तात्पर्यचन्द्रिका

टीकाक्षरार्थस्तु – इति योजनायामस्ति चोद्यावकाश इति । यद्यपि ''स यद्यदेव'' इत्यत्र 'सः' इत्यस्य संवत्सराख्यचतुर्मुखपरत्वमेव बृहदारण्यकभाष्ये उक्तम्,

यद्यद्ब्रह्मासृजत्पूर्वं तत्तदत्ति जनार्दनः ।

इति स्मृतेः । उत्तरत्र ''सोऽकामयत भूयसा यज्ञेन भूयो यजेय'' इत्यादौ चतुर्मुखपरत्वदर्शनाच्च । पूर्वत्रापि ''स तया वाचा तेनात्मना'' इति प्रथमान्तोक्तमृत्युतोऽपि तृतीयान्तोक्तसंवत्सरस्याव्यवधानेन प्रकृतत्वाच्च । संवत्सरसृष्टमत्तुमेव मृत्योस्संवत्सरादनान्निवृत्ततया संवत्सरस्यैव स्रष्टृत्वस्योचितत्वाच्च ।

कर्तुरपि संवत्सरस्य भगवत्स्वातन्त्र्यविवक्षया 'तेन' इतिकरणत्वेन निर्दिष्टस्यापि 'सः' इति कर्तृत्वेन निर्देशोपपत्तेश्च ।

तथाऽपि समानविभक्तिकत्वं परामर्शे तन्त्रमिति भ्रमेण 'सः' इत्यनेन आदित्याख्यमृत्योरेव परामर्श इति पूर्वपक्षे पुल्लिङ्गानुपपत्तिचोद्यावकाशोऽस्त्येव ।

ननु तथाऽपि न चोद्यावकाशः, ''स ऐक्षत'' इत्यादौ पुल्लिङ्गेनैव तच्छब्देन 'मृत्युना' इति मृत्युशब्देन च प्रस्तुततया 'गुरोर्दारास्समागताः, ते पूज्याः' इत्यादाविव पुल्लिङ्गोपपत्तेः ।

नच ''अशनाया हि मृत्युः'' इति स्त्रीलिङ्गेन अशनायाशब्देन प्रस्तुतत्वात् 'सः' इति पुल्लिङ्गानुपपत्तिरिति वाच्यम्, तथात्वे सिद्धान्तेऽपि तदनुपपत्तेरिति चेत्,

उच्यते – दारखट्वादिशब्देषु पुल्लिङ्गस्त्रीलिङ्गादेशशब्दसाधुतैव, न त्वर्थसाधुता । न चार्थसाधुत्वे सम्भवति शब्दसाधुत्वमात्रं युक्तम् । एवं चादितौ पुल्लिङ्गो

मृत्युशब्दोऽप्ययुक्तः । परमपुरुषे तु स्त्रीलिङ्गोऽप्यदितिशब्दः प्रकृत्यधिकरणन्यायेन युक्तः । तथा चस्ति चोद्यवकाश इति भावः ।

अदितिशब्दवाच्यमिति । अदितिशब्दप्रवृत्तिनिमित्तमित्यर्थः ।।

।। इति श्रीब्रह्मण्यतीर्थपूज्यश्रीपादशिष्यव्यासतीर्थविरचिता तात्पर्यचन्द्रिकायां अत्तृत्वाधिकरणं सम्पूर्णम् ।।

ಅನುವಾದ - ಟೀಕೆಯಲ್ಲಿ 'इति योजनायामस्ति चोद्यावकाशः' ಎಂದು ಹೇಳಿದ್ದಾರೆ. ಅಂದರೆ ಸ್ತ್ರೀಯಾಗಿರುವ ಅದಿತಿದೇವಿಯಲ್ಲಿ 'सः' ಎಂಬ ಪುಲ್ಲಿಂಗ ಪ್ರಯೋಗವು ಸಾಧುವೇ ? ಎಂದು ಪ್ರಶ್ನಿಸಿಕೊಂಡು ಭಾಷ್ಯಕಾರರೇ ಉತ್ತರಿಸಿದ್ದಾರೆ. ಭಾಷ್ಯದಲ್ಲಿ ಈ ಪ್ರಶ್ನೆ ಹುಟ್ಟಲು ಸಾಧ್ಯವೇ? ಎಂದು ಪ್ರಶ್ನಿಸಿಕೊಂಡು ಟೀಕೆಯಲ್ಲಿ 'अस्ति चोद्यावकाशः ಎಂದು ಉತ್ತರಿಸಿದ್ದಾರೆ. ಈ ಮಾತಿನ ಆಂತರ್ಯವನ್ನು ಹೀಗೆ ತಿಳಿಯಬೇಕು -

ಆಕ್ಷೇಪ - ವಸ್ತುತಃ ''सः यद्यदेव'' ಎಂಬುದಾಗಿ 'संवत्सर' ಎಂಬ ಚತುರ್ಮುಖಬ್ರಹ್ಮನನ್ನು ಪರಾಮರ್ಶಿಸಬೇಕೆಂದು ಬೃಹದಾರಣ್ಯಕಭಾಷ್ಯದಲ್ಲಿ ಹೇಳಿದ್ದಾರೆ. ಮತ್ತು ''यद्यद् ब्रह्माऽसृजत् पूर्वं० तत्तदत्ति जनार्दनः'' ಎಂಬ ಸ್ಮೃತಿಯಿಂದಲೂ ಸಹ 'सः' ಎಂದರೆ ಚತುರ್ಮುಖನೇ ಹೇಳಲ್ಪಟ್ಟಿದ್ದಾನೆ. ಮತ್ತು ಮುಂದೆ ''सोऽकामयत भूयसा यज्ञेन भूयो यजेय'' ಎಂಬುದಾಗಿ ಚತುರ್ಮುಖನೇ ಪ್ರತಿಪಾದ್ಯನಾಗಿದ್ದಾನೆ. ಹಿಂದೆಯೂ ಸಹ ''स तया वाचा तेनात्मना'' ಎಂಬುದಾಗಿ ಪ್ರಥಮಾಂತವಾಗಿ ಪ್ರತಿಪಾದ್ಯವಾದ ಮೃತ್ಯುವಿಗಿಂತ ತೃತೀಯಾಂತವಾಗಿ ಹೇಳಲ್ಪಟ್ಟ ಸಂವತ್ಸರನೇ ಅವ್ಯವಹಿತನಾಗಿ ಪ್ರಕೃತನಾಗಿದ್ದಾನೆ. ಮತ್ತು ಸಂವತ್ಸರನಾದ ಚತುರ್ಮುಖನಿಂದ ಹುಟ್ಟುವ ಜಗತ್ತನ್ನು ತಿನ್ನುವುದಕ್ಕೋಸ್ಕರವೇ ಮೃತ್ಯುವಾದ ಪರಮಾತ್ಮನು ಸಂವತ್ಸರನನ್ನು ತಿನ್ನದೆ ಬಿಡುತ್ತಾನೆ. ಇದರಿಂದಲೂ ಸಂವತ್ಸರನ ಸ್ರಷ್ಟೃತ್ವವನ್ನೇ ಹೇಳುವುದು ಉಚಿತವಾಗಿದೆ.

ವಸ್ತುತಃ 'सः' ಎಂಬ ಪದದಿಂದ ಕರ್ತೃವನ್ನೇ ಪರಾಮರ್ಶಿಸಬೇಕು. ಆದರೆ 'तेन' ಎಂಬ ಪದದಿಂದ ಇತಿಕರಣತ್ವೇನ ಪ್ರಸಕ್ತನಾದ ಸಂವತ್ಸರನನ್ನು ಪರಾಮರ್ಶಿಸಬಾರದು. ಆದರೂ ಸಹ ಭಗವಂತನ ಸ್ವಾತಂತ್ರ್ಯವನ್ನು ತಿಳಿಸುವ ಉದ್ದೇಶದಿಂದ ಇತಿಕರ್ತೃತ್ವೇನ ನಿರ್ದಿಷ್ಟನಾದ ಚತುರ್ಮುಖನನ್ನು 'सः' ಎಂದು ಪರಾಮರ್ಶಿಸಲಾಗಿದೆ. ಆದ್ದರಿಂದ ಚತುರ್ಮುಖನನ್ನು

ಪರಾಮರ್ಶಿಸಲು ಬರುವಾಗ ಪುಲ್ಲಿಂಗ ಪ್ರಯೋಗವು ಹೇಗೆ ಸರಿಯಾಗುತ್ತದೆ ? ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ಆದ್ದರಿಂದ ಭಾಷ್ಯಕಾರರು ಪ್ರಶ್ನಿಸಿದ್ದು ತಪ್ಪಲ್ಲವೇ?

ಸಮಾಧಾನ - ಪರಾಮರ್ಶ ಮಾಡಲು ಸಮಾನವಿಭಕ್ತಿಯೇ ತಂತ್ರವಾಗಿದೆಯೆಂಬ ಭ್ರಮೆಯು ಯಾರಿಗೆ ಇರುತ್ತದೋ ಅಂತಹವನಿಗೆ 'ಸಃ' ಎಂಬ ಪದದಿಂದ ಆದಿತಿಯನಿಸಿದ ಮೃತ್ಯುವನ್ನೇ ಪರಾಮರ್ಶ ಮಾಡಬೇಕು. ಹೀಗೆ ಪರಾಮರ್ಶಿಸಿದಾಗ ಪುಲ್ಲಿಂಗದಿಂದ ಆದಿತಿಯನ್ನು ಹೇಗೆ ಪರಾಮರ್ಶಿಸಲು ಸಾಧ್ಯ ? ಎಂಬ ಪ್ರಶ್ನೆಗೆ ಅವಕಾಶವಿದ್ದೇ ಇರುತ್ತದೆ.

ಆಕ್ಷೇಪ - ಪ್ರಶ್ನೆಗೆ ಅವಕಾಶವಿಲ್ಲ. ಏಕೆಂದರೆ ''ಸ ಐಕ್ಷತ'' ಇತ್ಯಾದಿ ಸ್ಥಳಗಳಲ್ಲಿ ಪುಲ್ಲಿಂಗವಾದ 'ತತ್' ಶಬ್ದದಿಂದ ಪ್ರಸ್ತುತವಾದ್ದರಿಂದ ಮತ್ತು 'ಮೃತ್ಯುನಾ' ಎಂಬುದಾಗಿ ಮೃತ್ಯುಶಬ್ದದಿಂದಲೂ ಪ್ರಸ್ತುತವಾದ್ದರಿಂದ ಪುಲ್ಲಿಂಗಪ್ರಯೋಗವು ತಪ್ಪಾಗುವುದಿಲ್ಲ. ''ಗುರೋರ್ದಾರಾಸ್ಸಮಾಗತಾಃ, ತೇ ಪೂಜ್ಯಾಃ'' ಎಂದು ಪ್ರಯೋಗಿಸುತ್ತಾರೆ. ವಸ್ತುತಃ 'ದಾರಾಃ' ಶಬ್ದವು ಸ್ತ್ರೀಯರನ್ನು ಹೇಳುವುದಾದರೂ ಪುಲ್ಲಿಂಗಶಬ್ದವಾದ್ದರಿಂದ 'ತೇ' ಎಂಬ ಪುಲ್ಲಿಂಗ ಶಬ್ದದಿಂದಲೇ ಅವರನ್ನು ಪರಾಮರ್ಶಿಸಲಾಗುತ್ತದೆ. ಅದರಂತೆ ಅದಿತಿದೇವಿಯು ಸ್ತ್ರೀ ಆಗಿದ್ದರೂ ಅವಳನ್ನು ಪ್ರತಿಪಾದಿಸುವ 'ತತ್' ಶಬ್ದ ಹಾಗೂ ಮೃತ್ಯು ಶಬ್ದಗಳು ಪುಲ್ಲಿಂಗದಲ್ಲಿರುವುದರಿಂದ 'ಸಃ' ಎಂಬುದಾಗಿ ಪುಲ್ಲಿಂಗನಿರ್ದೇಶವು ಯುಕ್ತವಾಗುತ್ತದೆ.

''ಅಶನಾಯಾ ಹಿ ಮೃತ್ಯುಃ' ಎಂಬಲ್ಲಿ ಸ್ತ್ರೀಲಿಂಗವಾದ ಅಶನಾಯ ಶಬ್ದದಿಂದ ಪ್ರಸ್ತುತಳಾದ್ದರಿಂದ 'ಸಃ' ಎಂಬ ಪುಲ್ಲಿಂಗ ಪ್ರಯೋಗವು ಹೇಗೆ ಸರಿಯಾಗುತ್ತದೆಂದು ಪ್ರಶ್ನಿಸಬಾರದು. ಈ ಅನುಪಪತ್ತಿಯು ಸಿದ್ಧಾಂತದಲ್ಲಿಯೂ ತಪ್ಪಿದ್ದಲ್ಲ. ಆದ್ದರಿಂದ ಭಾಷ್ಯಕಾರರು ಪ್ರಶ್ನೆ ಮಾಡಿರುವುದು ತಪ್ಪಲ್ಲವೆ?

ಸಮಾಧಾನ - ಈ ಆಕ್ಷೇಪವು ಸರಿಯಲ್ಲ. ದಾರಾ, ಖಟ್ವಾ ಮೊದಲಾದ ಶಬ್ದಗಳಲ್ಲಿ ಪುಲ್ಲಿಂಗ ಸ್ತ್ರೀಲಿಂಗಗಳ ನಿರ್ದೇಶವು ಶಬ್ದಸಾಧುತ್ವಕ್ಕೋಸ್ಕರ ಮಾತ್ರ ಹೊರತು ಅರ್ಥಸಾಧುತ್ವಕ್ಕೋಸ್ಕರವಲ್ಲ. ಅರ್ಥಸಾಧುತ್ವವನ್ನು ಹೇಳಲು ಬರುವಾಗ ಶಬ್ದಸಾಧುತ್ವವನ್ನು ಹೇಳುವುದು ಅಯುಕ್ತವಾಗಿದೆ. ಆದ್ದರಿಂದ ಅದಿತಿಯಲ್ಲಿ ಪುಲ್ಲಿಂಗ ಶಬ್ದವಾದ ಮೃತ್ಯುಶಬ್ದದ ಪ್ರಯೋಗವೂ ಸಹ ಅಯುಕ್ತವೇ ಆಗಿದೆ. ಆದರೆ ಪರಮ ಪುರುಷನಾದ ಭಗವಂತನಲ್ಲಿ ಸ್ತ್ರೀಲಿಂಗದಲ್ಲಿರುವ ಅದಿತಿಶಬ್ದವು ಅಯುಕ್ತವಲ್ಲ. ಪ್ರಕೃತ್ಯಧಿಕರಣನ್ಯಾಯದಿಂದ ಸಕಲ ಸ್ತ್ರೀವಾಚಕ ಶಬ್ದಗಳು ಭಗವಂತನನ್ನು ಪ್ರತಿಪಾದಿಸುತ್ತವೆಂದು ತಿಳಿಯಬೇಕು. ಆದ್ದರಿಂದ ಭಾಷ್ಯಕಾರರು ಮಾಡಿಕೊಂಡ ಪ್ರಶ್ನೆಯು ಸಾಧುವೇ ಆಗಿದೆ.

'ಅದಿತಿಶಬ್ದವಾಚ್ಯಂ' ಎಂಬ ಶಬ್ದಕ್ಕೆ ಅದಿತಿಶಬ್ದದ ಪ್ರವೃತ್ತಿನಿಮಿತ್ತವೆಂದರ್ಥ.

ಇಲ್ಲಿಗೆ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ
ಆತ್ಮತ್ವಾಧಿಕರಣವು ಸಂಪೂರ್ಣವಾಯಿತು.

प्रकाशः –

अत्र टीकायां पूर्वपक्षग्रन्थे ''स यद्यदेव'' इत्यत्र पुल्लिङ्गानुपपत्तिचोद्यं भाष्यकारीयमाक्षिप्य समाहितम् । तत्राक्षेपबीजप्रदर्शनपूर्वं तद्वाक्यं व्यनक्ति – **यद्यपीति ।**

ಶ್ರೀಮದಾಚಾರ್ಯರು ಭಾಷ್ಯದಲ್ಲಿ ಸ್ತ್ರೀಯಾದ ಅದಿತಿದೇವಿಯಲ್ಲಿ 'ಸಃ' ಎಂಬ ಪುಲ್ಲಿಂಗ ಪದದ ಪ್ರಯೋಗವು ಹೇಗೆ ಕೂಡುತ್ತದೆಂದು ಪ್ರಶ್ನಿಸಿಕೊಂಡು ಪುರುಷಶಕ್ತಿ ಇರುವುದರಿಂದ ಪುಲ್ಲಿಂಗ ಪ್ರಯೋಗವು ಸಾಧುವಾಗಿದೆಯೆಂದು ಉತ್ತರಿಸಿದ್ದಾರೆ.

ಆಚಾರ್ಯರ ಈ ಮಾತನ್ನು ಟೀಕೆಯಲ್ಲಿ ವಿಚಾರ ಮಾಡಿ 'ಅಸ್ತಿ ಚೋದ್ಯಾವಕಾಶಃ' ಎಂದು ಹೇಳಿದ್ದಾರೆ. ಆಂದರೆ ಪ್ರಶ್ನೆಗೆ ಅವಕಾಶವೇ ಇರುವುದಿಲ್ಲ. ಪ್ರಾರಂಭದಿಂದ ಮೃತ್ಯು ಹಾಗೂ ಸಂವತ್ಸರ ಇಬ್ಬರೂ ಸಹ ಪ್ರಸಕ್ತರಾಗಿದ್ದಾರೆ. ಆದರೆ ಸಂವತ್ಸರನೇ ಇಲ್ಲಿ ವಿವಕ್ಷಿತ. ಆದ್ದರಿಂದ ಸಂವತ್ಸರ ಶಬ್ದವು ಪುಲ್ಲಿಂಗದಲ್ಲಿರುವುದರಿಂದ ಶ್ರುತಿಯಲ್ಲಿ 'ಸಃ' ಎಂಬ ಪುಲ್ಲಿಂಗ ಪದದಿಂದ ಅವರನ್ನು ಪರಾಮರ್ಶಿಸಬಹುದು. ಹೀಗಿರುವಾಗ ಪ್ರಶ್ನೆಗೆ ಅವಕಾಶವೇ ಇಲ್ಲ. ಆದ್ದರಿಂದ ಆಚಾರ್ಯರು ಪ್ರಶ್ನೆಯನ್ನು ಮಾಡಿಕೊಂಡು ಸಮಾಧಾನ ನೀಡಿದ್ದು ತಪ್ಪಲ್ಲವೇ? ಎಂದು ಆಕ್ಷೇಪಿಸಿ ಸಮಾಧಾನವನ್ನು ನೀಡುವ ಗೀತಾ ವಾಕ್ಯವನ್ನುವ್ಯಾಖ್ಯಾನಿಸಲು ಹೊರಟಿದ್ದಾರೆ 'ಯದ್ಯಪಿ' ಇತ್ಯಾದಿ ಗ್ರಂಥದಿಂದ.

प्रकाशः – तद्भाष्योक्तस्मृतिमाह – यद्यदिति । उत्तरत्रेति । 'सः' इत्यस्येत्यनुषज्यते । तच्छब्दस्य सन्निहितपरत्वात् चतुर्मुखस्य सन्निहितत्वात्तत्परत्वं युक्तमित्याह – पूर्वत्रापीति ।

ಚತುರ್ಮುಖ ಬ್ರಹ್ಮನೇ ಪೂರ್ವಪ್ರಸಕ್ತನಾಗಿದ್ದಾನೆಂದು ಅವರ ಭಾಷ್ಯದಲ್ಲೇ ಹೇಳಿದ ಸ್ಮೃತಿಯನ್ನು ಉಲ್ಲೇಖಿಸುತ್ತಿದ್ದಾರೆ. 'ಯದ್ಯದಿ' ಇತ್ಯಾದಿಯಾಗಿ. 'ಉತ್ತರತ್ರ' ಎಂಬ ಪದದ ಅನಂತರ 'ಸಃ' ಇತ್ಯಸ್ಯ ಎಂಬುದನ್ನು ಸೇರಿಸಿಕೊಳ್ಳಬೇಕು. 'ತತ್' ಶಬ್ದವು ಹಿಂದೆ ಹತ್ತಿರದಲ್ಲಿರುವುದನ್ನೇ ಪರಾಮರ್ಶಿಸುತ್ತದೆ. ಆದ್ದರಿಂದ ಮೃತ್ಯುವಿಗಿಂತ ಸಂವತ್ಸರನೇ ಅವ್ಯವಹಿತನಾಗಿ ಪೂರ್ವಪ್ರಸಕ್ತನಾಗಿದ್ದಾನೆ. ಆದ್ದರಿಂದ ಸಂವತ್ಸರನ ಪರಾಮರ್ಶವೇ ಯುಕ್ತವಾಗಿದೆಯೆಂದು 'ಪೂರ್ವತ್ರಾಪಿ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

प्रकाशः – संवत्सरसृष्टमिति । पूर्वत्र ''स ऐक्षत यदि ह वा इममभिमंस्ये कनीयोऽन्नं करिष्य इति । स तया वाचा तेनाऽऽत्मनेदꣳसर्वमसृजत'' इत्यनेन यदि इमं संवत्सरशब्दितं भक्षयामि तर्ह्यल्पमन्नं मे भविष्यति । अत एनमभक्षयित्वा तन्मुखेन सर्वसृष्टिङ्कारयित्वा तत्सृष्टमेव सर्वं भक्षयामीति बुद्ध्या तन्मुखेन

सर्वसर्जनात् भक्षणान्निवृत्तिरवश्यमवगम्यत इति तदन्यथानुपपत्या च चतुर्मुखपरत्वमित्यर्थः ।

ಗ್ರಂಥದಲ್ಲಿ 'ಸಂವತ್ಸರ ಸೃಷ್ಟಂ' ಎಂದಿದೆ. ಅಂದರೆ ಹಿಂದೆ ''स ऐक्षत यदि ह वा इममभिमंस्ये. कनीयोऽन्नं करिष्य इति । स तया वाचा तेनेमेऽऽत्मनेंद्रंसर्वमसृजत'' ಎಂಬ ವಾಕ್ಯ ಪ್ರಸಕ್ತವಾಗಿದೆ. ಈ ವಾಕ್ಯದಲ್ಲಿ ಒಂದು ವೇಳೆ ಸಂವತ್ಸರನೆನಿಸಿದ ಚತುರ್ಮುಖನನ್ನು ನಾನು ತಿಂದು ಬಿಟ್ಟರೆ ಸ್ವಲ್ಪ ಮಾತ್ರ ಅನ್ನವನ್ನು ತಿಂದಂತಾಗುತ್ತದೆ. ಆದ್ದರಿಂದ ಚತುರ್ಮುಖನನ್ನು ನಾನು ತಿನ್ನಲಾರೆ. ಇವರ ಮುಖಾಂತರ ಸಮಸ್ತ ಜಗತ್ತನ್ನು ಸೃಷ್ಟಿ ಮಾಡಿಸಿ ಅವನು ಸೃಷ್ಟಿಸಿದ ಸಮಸ್ತ ಜಗತ್ತೆಲ್ಲವನ್ನು ತಿನ್ನುತ್ತೇನೆಂದು ಭಗವಂತನು ಇಚ್ಛಿಸಿದನು. ಹೀಗೆ ಚತುರ್ಮುಖನನ್ನು ತಿನ್ನಲು ಭಗವಂತನು ನಿವೃತ್ತನಾದನೆಂದು ಹಿಂದಿನ ವಾಕ್ಯದಿಂದ ತಿಳಿಯುತ್ತದೆ. ಇದನ್ನು ಕೂಡಿಸಬೇಕೆಂದರೆ 'ಸಃ' ಎಂಬ ಪದದಿಂದ ಚತುರ್ಮುಖನನ್ನೇ ಪರಾಮರ್ಶಿಸಬೇಕು.

प्रकाशः – ननु पूर्वं तस्य सन्निहितत्वेऽपि तृतीयया करणत्वेनैव निर्देशान्न कर्तृवाचिना परामर्शो युक्त इत्यत आह – **कर्तुरिति** । टीकोक्तं स्पष्टीकृत्य तदुपलक्षणमिति भावेन भाष्यं प्रकारान्तरेण स्वयमाक्षिप्य समाधत्ते – **ननु तथाऽपीति** ।

ಸಂವತ್ಸರನೆನಿಸಿದ ಚತುರ್ಮುಖನು ಸನ್ನಿಹಿತನಾಗಿರಬಹುದು. ಆದರೆ ಕರಣಾರ್ಥದಲ್ಲಿರುವ 'ತೇನ' ಎಂಬ ತೃತೀಯಾವಿಭಕ್ತಿಯಿಂದಷ್ಟೇ ಅವನನ್ನು ನಿರ್ದೇಶಿಸಲಾಗಿದೆ. ಆದ್ದರಿಂದ ಕರ್ತೃವಾಚಯಾದ 'सः' ಎಂಬ ಪದದಿಂದ ಸಂವತ್ಸರನನ್ನು ಪರಾಮರ್ಶಿಸಲು ಸಾಧ್ಯವಿಲ್ಲವೆಂಬ ಪ್ರಶ್ನೆಗೆ 'कर्तुः' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಹೀಗೆ ಟೀಕೆಯ ಮಾತನ್ನು ಸ್ಪಷ್ಟಪಡಿಸಿ ಅದನ್ನು ಉಪಲಕ್ಷಣವೆಂದು ತಿಳಿದು ಭಾಷ್ಯಕಾರರ ಮಾತನ್ನು ಮತ್ತೊಂದು ಪ್ರಕಾರದಿಂದ ಸ್ವತಃ ಗ್ರಂಥಕಾರರೇ ಆಕ್ಷೇಪಿಸಿ ಸಮಾಧಾನವನ್ನು ಹೇಳುತ್ತಿದ್ದಾರೆ. 'ननु तथाऽपि' ಇತ್ಯಾದಿಯಾಗಿ

प्रकाशः – कथं तर्हि विष्णावदितिशब्दप्रयोग इत्यत आह – **परमेति** । पुरुषेति हेतुगर्भम् । अदितेरित्यनेनैव तद्वाच्यत्वलाभाददितित्वमिति व्यर्थमित्यत आह – **अदितिशब्देति** । शिष्टं सुगममिति भावः ।।

इति श्रीमत्सर्वतन्त्रस्वतन्त्रसुधीन्द्रतीर्थगुरुपादशिष्यराघवेन्द्रयतिकृते चन्द्रिकाप्रकाशे अत्तृत्वाधिकरणं सम्पूर्णम् ॥१॥

ವಿವರಣೆ - ವಿಷ್ಣುವಿನಲ್ಲಿ ಅದಿತಿ ಶಬ್ದ ಪ್ರಯೋಗವು ಹೇಗೆ ಕೂಡುತ್ತದೆ ? ಎಂಬ ಪ್ರಶ್ನೆಗೆ 'ಪರಮಪುರುಷೇ' ಎಂಬುದರಿಂದ ಉತ್ತರಿಸಿದ್ದಾರೆ. 'ಪುರುಷ' ಎಂಬ ಪದವು ಹೇತುಗರ್ಭಿತವಾಗಿದೆ. 'ಅದಿತೇಃ' ಎಂಬುದರಿಂದಲೇ ಅದಿತಿಶಬ್ದವಾಚ್ಯತ್ವವು ತಿಳಿಯುವಾಗ ಪುನಃ 'ಅದಿತಿತ್ವಂ' ಎಂದೇಕೆ ಭಾಷ್ಯದಲ್ಲಿ ಹೇಳಿದರು? ಎಂಬ ಪ್ರಶ್ನೆಗೆ 'ಅದಿತಿಶಬ್ದಪ್ರವೃತ್ತಿನಿಮಿತ್ತಂ' ಎಂದು ಉತ್ತರಿಸಿದ್ದಾರೆ. ಉಳಿದ ಟೀಕೆಯ ಕಠಿಣಪದಾರ್ಥಗಳು ಸುಲಭವಾದ್ದರಿಂದ ಶಿಷ್ಯರೇ ಸ್ವತಃ ತಿಳಿದುಕೊಳ್ಳಬೇಕು.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ ಪ್ರಕಾಶಟಿಪ್ಪಣಿಯ ಕನ್ನಡಾನುವಾದದಲ್ಲಿ ಅತೃತ್ಪಾದ್ಧಿಕರಣವು ಮುಕ್ತಾಯವಾಯಿತು.

* * * * * * *

ಶ್ರೀಕೃಷ್ಣಾರ್ಪಣಮಸ್ತು.

ಸಾರ

'ಸಃ ಯದ್ಯದೇವಾಸೃಜತ' ಎಂಬ ಬೃಹದಾರಣ್ಯಕ ವಾಕ್ಯವು ಈ ಅಧಿಕರಣಕ್ಕೆ ವಿಷಯಕವಾಗಿದೆ. ಈ ವಾಕ್ಯದಿಂದ ಅದಿತಿದೇವಿಯು ಪ್ರತಿಪಾದ್ಯಳಾದರೆ 'ಸಃ' ಎಂಬ ಪುಲ್ಲಿಂಗ ಪ್ರಯೋಗವು ಹೇಗೆ ಕೂಡುತ್ತದೆ. 'ಸಾ' ಎಂದು ಪ್ರಯೋಗಿಸಬೇಕಲ್ಲವೇ? ಎಂದರೆ ಹೌದು. ಆದರೆ ಪುರುಷ ಸಾಮರ್ಥ್ಯವನ್ನು ಸ್ತ್ರೀಯಾದ ಅದಿತಿದೇವಿಯು ಪಡೆದಿರುವುದರಿಂದ ಆವಳಲ್ಲಿ ಪುಲ್ಲಿಂಗ ಪ್ರಯೋಗವು ಕೂಡುತ್ತದೆ. ಗೀತೆಯಲ್ಲಿಯೂ ಸಹ ಲಕ್ಷ್ಮಿಯಲ್ಲಿ ಕೂಟಸ್ಥಃ ಎಂಬ ಪುಲ್ಲಿಂಗ ಪ್ರಯೋಗವು ಕಾಣಿಸುತ್ತದೆ. ಆದ್ದರಿಂದ ಅದಿತಿಗೂ 'ಸಃ' ಎಂದು ಹೇಳಿದ್ದು ತಪ್ಪಲ್ಲ. ಹೀಗೆ ಶ್ರೀಮದಾಚಾರ್ಯರು ಭಾಷ್ಯದಲ್ಲಿ ಪ್ರಶ್ನಿಸಿಕೊಂಡು ಉತ್ತರಿಸಿದ್ದಾರೆ.

ತತ್ತ್ವಪ್ರಕಾಶಿಕೆ ಹಾಗೂ ಚಂದ್ರಿಕೆಯಲ್ಲಿ ಭಾಷ್ಯದಲ್ಲಿ ಮಾಡಿಕೊಂಡ ಪ್ರಶ್ನೆಯು ಸಮಂಜಸವೋ? ಅಲ್ಲವೋ ? ಎಂದು ವಿಮರ್ಶಿಸಿ ಆಚಾರ್ಯರ ಪ್ರಶ್ನೆಯನ್ನು ಸಮರ್ಥಿಸಿದ್ದಾರೆ. 'ಸಃ ಯದ್ಯದೇವ' ಎಂಬ ವಾಕ್ಯದ ಹಿಂದೆ ಸಂವತ್ಸರನೆನೆಸಿದ ಚತುರ್ಮುಖನು ಪ್ರಸುತ್ತನಾಗಿದ್ದಾನೆ. ಆವನ ಪರಾಮರ್ಶವನ್ನೇ 'ಸಃ ' ಎಂಬುದರಿಂದ ಮಾಡಬೇಕು. ಹೀಗಿರುವಾಗ ಪುಲ್ಲಿಂಗಪ್ರಯೋಗ ಹೇಗೆ ? ಎಂಬ ಪ್ರಶ್ನೆ ಉದ್ಭವಿಸುವುದಿಲ್ಲವೆಂಬ ಶಂಕೆ ಬರುತ್ತದೆ. ಆದರೆ ಮೃತ್ಯುವೆನಿಸಿದ ಅದಿತಿದೇವಿಯೇ ಹಿಂದೆ ಪ್ರಸಕ್ತಳಾಗಿದ್ದಾಳೆ. ಆವಳ ಪರಾಮರ್ಶವನ್ನೇ ಇಲ್ಲಿ 'ಸಃ' ಎಂಬ ಪದದಿಂದ ಮಾಡಬೇಕು. ಆದ್ದರಿಂದ ಆಚಾರ್ಯರು ಮಾಡಿಕೊಂಡ ಪ್ರಶ್ನೆ ಸಮಂಜಸವೇ ಆಗಿದೆ.

೦೨- ಅತ್ಯತ್ವಾಧಿಕರಣ

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಪಂಚಿಕಾ,
ಅಣುಭಾಷ್ಯ, ತತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿಃ,
ಸೂತ್ರಾರ್ಥರತ್ನಾವಳಿಃ

॥ ಶ್ರೀಗುರುಭ್ಯೋ ನಮಃ ॥

ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತಮ್

ನ್ಯಾಯವಿವರಣಮ್

ಶ್ರೀ ಜಯತೀರ್ಥವಿರಚಿತಾ

ನ್ಯಾಯವಿವರಣಪಞ್ಜಿಕಾ

ಅತ್ತೃತ್ವಾಧಿಕರಣಮ್ - ೨

ॐ ಅತ್ತಾ ಚರಾಚರಗ್ರಹಣಾತ್ ॐ ॥ ೧-೨-೯ ॥

ॐ ಪ್ರಕರಣಾತ್ ॐ ॥ ೧-೨-೧೦ ॥

ಸನ್ದಿಗ್ಧಶ್ರುತಿಲಿಙ್ಗಾಭ್ಯಾಂ ನಿಶ್ಚಿತಲಿಙ್ಗಪ್ರಕರಣಯೋರೇವ ಬಲವತ್ತ್ವಮ್ ।

ಸನ್ದಿಗ್ಧಾ ಶ್ರುತಿರ್ಲಿಙ್ಗಂ ಚಾದಿತಿಶಬ್ದೋऽದಿತಿತ್ವಂ ಚ ॥

ನ್ಯಾಯವಿವರಣೆ

ದೇವಮಾತೆಯಾದ ಅದಿತಿಯೇ ಅದಿತಿಶ್ರುತಿಯ ಬಲದಿಂದ 'ಅತ್ತಾ' ಎನಿಸುತ್ತಾಳೆ. ವಿಷ್ಣುವಿನಲ್ಲಿ ಅಸಂಭಾವಿತವಾದ ಲಿಂಗಗಳನ್ನೂ ಸಹ ಈ ಶ್ರುತಿಯಲ್ಲಿ ಹೇಳುವುದರಿಂದ ಅದಿತಿಯೇ 'ಅತ್ತಾ' ಎನಿಸುತ್ತಾಳೆಂದು ಪೂರ್ವಪಕ್ಷ.

ಇದು ತಪ್ಪು. ಚರಾಚರಾತ್ಮತ್ವಲಿಂಗದಿಂದ ಹಾಗೂ ಪ್ರಕರಣದಿಂದ ವಿಷ್ಣುವೇ 'ಅತ್ತಾ' ಎನಿಸುತ್ತಾನೆಂದು ಸಿದ್ಧಾಂತ.

ಶ್ರುತಿಲಿಂಗಗಳಿಗಿಂತ ಲಿಂಗ ಪ್ರಕರಣಗಳು ದುರ್ಬಲವಾಗಿವೆಯೆಂದು ಸಿದ್ಧಾಂತದ ಮೇಲೆ ಬರುವ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ 'ಸಂದಿಗ್ಧಶ್ರುತಿಲಿಂಗಾಭ್ಯಾಂ' ಇತ್ಯಾದಿ ವಾಕ್ಯಗಳು ಹೊರಟಿವೆ. ಸಾವಕಾಶಗಳಾದ್ದರಿಂದ ಶ್ರುತಿಲಿಂಗಗಳು ಸಂದಿಗ್ಧವಾಗಿವೆ. ನಿರವಕಾಶಗಳಾದ್ದರಿಂದ ಲಿಂಗಪ್ರಕರಣಗಳು ನಿಶ್ಚಿತವಾಗಿವೆ. ಸಂದಿಗ್ಧವಾದ ಶ್ರುತಿಲಿಂಗಗಳಿಗಿಂತ ನಿಶ್ಚಿತವಾದ ಲಿಂಗಪ್ರಕರಣಗಳೇ ಬಲಿಷ್ಠ. ಸಂದಿಗ್ಧವಾದ ಶ್ರುತಿ ಎಂದರೆ ಅದಿತಿಶಬ್ದ. ಸಂದಿಗ್ಧವಾದ ಲಿಂಗವೆಂದರೆ ಅದಿತಿತ್ವವೆಂದು ತಿಳಿಯಬೇಕು.

ಪರಿಪೂರ್ಣಚಂದ್ರಿಕಾ

देवमातैवात्र प्रतिपाद्या, तच्छ्रुतेः । नच श्रुतिरिन्द्रादिश्रुतिवद् विष्णौ सावकाशेति वाच्यम् । तत्राऽसम्भावितलिङ्गस्याऽपि सत्त्वादिति प्राप्ते, चराऽचराऽत्तृत्वलिङ्गात् प्रकरणाच्च, विष्णुरेवेति सिद्धान्तितम् ।

तदयुक्तम्, श्रुतिलिङ्गाभ्यां लिङ्गप्रकरणयोर्दुर्बलत्वादित्यत आह – **सन्दिग्धेति ।। श्रुतिलिङ्गे हि सन्दिग्धे, सावकाशत्वात् लिङ्गप्रकरणे तु निश्चिते, निरवकाशत्वात् । सन्दिग्धाच्च निश्चितं बलवत् । तत्कुतो निर्णयाभावः? के ते सन्दिग्धश्रुतिलिङ्गे इत्यत आह – सन्दिग्धा श्रुतिरिति ।।**

ದೇವಮಾತೆಯಾದ ಅದಿತಿದೇವಿಯೇ ಇಲ್ಲಿ ಪ್ರತಿಪಾದ್ಯಳು. ಏಕೆಂದರೆ ಅದಿತಿಯನ್ನು ಪ್ರತಿಪಾದಿಸುವ ಶ್ರುತಿಯಿರುವುದರಿಂದ. ಅದಿತಿಶ್ರುತಿಯನ್ನು ಇಂದ್ರಾದಿಶ್ರುತಿಗಳಂತೆ ವಿಷ್ಣುವಿನಲ್ಲಿ ಸಾವಕಾಶವೆನ್ನಬಾರದು. ವಿಷ್ಣುವಿನಲ್ಲಿ ಅಸಂಭಾವಿತವಾದ ಲಿಂಗಗಳನ್ನು ಅದಿತಿ ಶ್ರುತಿಗಳಲ್ಲಿ ಹೇಳಲಾಗಿದೆ. ಇಷ್ಟು ಪೂರ್ವಪಕ್ಷ. ಚರಾಚರಾತ್ತೃತ್ವವೆಂಬ ಲಿಂಗ ಹಾಗೂ ಪ್ರಕರಣಗಳ ಬಲದಿಂದ ವಿಷ್ಣುವೇ ಅದಿತಿಶ್ರುತಿಪ್ರತಿಪಾದ್ಯನೆಂದು ಸಿದ್ಧಾಂತ.

ಇದು ತಪ್ಪು. ಶ್ರುತಿ ಲಿಂಗಗಳಿಗಿಂತ ಲಿಂಗಪ್ರಕರಣಗಳು ದುರ್ಬಲವಾಗಿವೆ. ದುರ್ಬಲವಾದ ಪ್ರಮಾಣಗಳಿಂದ ವಿಷ್ಣುವೇ ಪ್ರತಿಪಾದ್ಯನೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ 'ಸಂದಿಗ್ಧ' ಇತ್ಯಾದಿ ವಾಕ್ಯದಿಂದ ಆಚಾರ್ಯರು ಉತ್ತರಿಸುತ್ತಿದ್ದಾರೆ. ಶ್ರುತಿ ಹಾಗೂ ಲಿಂಗಗಳು ಸಾವಕಾಶಗಳಾದರಿಂದ ಸಂದಿಗ್ಧವಾಗಿವೆ. ಲಿಂಗ ಮತ್ತು ಪ್ರಕರಣಗಳು ನಿರವಕಾಶಗಳಾದ್ದರಿಂದ ನಿಶ್ಚಿತವಾಗಿದೆ. ಸಾವಕಾಶಕ್ಕಿಂತ ನಿರವಕಾಶವೇ ಬಲಿಷ್ಠವಾಗಿರುವಾಗ ನಿರ್ಣಯಿಸಲು ಬರುವುದಿಲ್ಲವೆಂದು ಹೇಗೆ ಹೇಳುತ್ತಿರಿ? ಸಂದಿಗ್ಧವಾದ ಶ್ರುತಿಗಳು ಯಾವುದೆಂಬುದನ್ನು 'ಸಂದಿಗ್ಧಾ ಶ್ರುತಿಃ' ಎಂಬುದರಿಂದ ಹೇಳುತ್ತಿದ್ದಾರೆ.

• लिङ्गं च सन्दिग्धमिति ग्राह्यम् । यथासङ्ख्यं सम्बन्धः । भवत्वदितिशब्दो देवमातुः श्रुतिः, 'अदितिर्देवतामयी' इत्यादौ प्रयोगाद्, विष्णौ सावकाशाच्च । अदितित्वं तु कथं लिङ्गम्? कथं च सावकाशम्? इति चेदुच्यते । अदितेरदितिन्वगिति हि श्रूयते । 'त्व'प्रत्ययश्च जातेर्वाचकः, यथा – पृथिवीत्वं, गोत्वमित्यादौ । तदसम्भवे स्वरूपस्यैव । यथा आकाशत्वं, चन्द्रत्वमित्यादौ । नाचादितित्वं नाम जातिः सम्भवति, व्यक्तेरभेदात् । ततोऽदितित्वमदितेः स्वरूपमेव । नच

ಅದಿತಿಸ್ವರೂಪಮೀಶ್ವರಸ್ಯ ಸಮ್ಭವತಿ, ಅತ್ಯನ್ತಭಿನ್ನತ್ವಾತ್ । ನಚ ಅದಿತಿಶಬ್ದೋ ಭಗವತ್ಪರ ಇತ್ಯನುಪಪತ್ತ್ಯಭಾವಃ, ಅದಿತಿತ್ವೇನಾऽದಿತಿಶಬ್ದಸ್ಯ ತತ್ರ ವಿಧಿತ್ಸಿತತ್ವೇನಾನುವಾದಾನುಪಪತ್ತೇಃ । ಅನ್ಯಥಾ ಅನ್ಯೋನ್ಯಾಶ್ರಯಪ್ರಸಙ್ಗಾದಿತಿ ಪೂರ್ವಪಕ್ಷೀ ಮನ್ಯತೇ । ಸಿದ್ಧಾನ್ತಿನಸ್ತ್ವಯಮಾಶಯಃ, ಭಾವೇ ಹಿ 'ತ್ವ'ಪ್ರತ್ಯಯಃ ಸ್ಮರ್ಯತೇ । ತದ್ಧಿತಭಾವಶ್ಚ ಶಬ್ದಪ್ರವೃತ್ತಿನಿಮಿತ್ತಮ್ । ತಚ್ಚ ಕ್ವಚಿಜ್ಜಾತಿಃ, ಕ್ವಚಿತ್ ಕ್ರಿಯಾ, ಕ್ವಚಿದ್ ಗುಣಃ, ಕ್ವಚಿದ್ ದ್ರವ್ಯಮ್, ಕ್ವಚಿತ್ ಸ್ವರೂಪಮ್ । ತತ್ರ ಯತ್ ಸರ್ವಾತ್ಮತ್ವಮುಕ್ತಮ್, ತದದಿತಿತ್ವಂ ಅದಿತಿಶಬ್ದಪ್ರವೃತ್ತಿನಿಮಿತ್ತಮಿತಿ ಕ್ರಿಯಾಶಬ್ದತ್ವಮಸ್ಯೋಚ್ಯತೇ । ಅದಿತೇರಿತಿ ಚ ಭಾವಿನೀ ಸಂಜ್ಞಾ ವಿಜ್ಞಾಯತೇ । ಯಥಾ 'ಅಸ್ಯ ಸೂತ್ರಸ್ಯ ಶಾಟಕಂ ವಯಾ' ಇತಿ । ಅನ್ಯಥಾ ಪರಸ್ಯಾಪಿ ದುರ್ಘಟಮೇತತ್ । ಅವಿವಕ್ಷಿತನಿಮಿತ್ತಾಂ ಪ್ರಸಿದ್ಧಿಮಾಶ್ರಿತ್ಯ ಮಮಾನುವಾದ ಇತಿ ಚೇನ್ಮಮಾಪಿ ತತ್ಸಮಮ್ । ಇಯಾಂಸ್ತು ವಿಶೇಷಃ । ಪರಸ್ಯ ಲೌಕಿಕೀ ಪ್ರಸಿದ್ಧಿಃ, ಮಮ ತು ವೈದಿಕೀತಿ ।।

'ಲಿಂಗಂಚ ಸಂದಿಗ್ಧಃ' ಎಂಬುದನ್ನು ಇಟ್ಟುಕೊಳ್ಳಬೇಕು. ಯಥಾಸಂಖ್ಯವಾಗಿ ಸಂಬಂಧವನ್ನು ತಿಳಿಯಬೇಕು. ಅದಿತಿಶಬ್ದವು ದೇವಮಾತೆಯಾದ ಅದಿತಿಯನ್ನು ಪ್ರತಿಪಾದಿಸಲಿ 'ಅದಿತಿರ್ದೇವತಾಮಯೀ' ಎಂಬ ಪ್ರಯೋಗವಿರುವುದರಿಂದ. ವಿಷ್ಣುವಿನಲ್ಲಿ ಸಾವಕಾಶವೂ ಆಗಲಿ; ಆದರೆ ಅದಿತಿತ್ವ ಎಂಬುದು ಹೇಗೆ ಲಿಂಗವಾಗುತ್ತದೆ. ಹೇಗೆ ತಾನೆ ಸಾವಕಾಶವಾಗುತ್ತದೆ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು, 'ಅದಿತೇರದಿತಿತ್ವಂ' ಎಂದು ಶ್ರುತಿಯಲ್ಲೇ ಹೇಳಲಾಗಿದೆ. 'ತ್ವ' ಪ್ರತ್ಯಯವು ಜಾತಿವಾಚಕವಾಗಿದೆಯೆಂದು ಪೃಥಿವೀತ್ವಂ, ಗೋತ್ವಂ ಇತ್ಯಾದಿ ಸ್ಥಳಗಳಲ್ಲಿ ಕಂಡಿದೆ. ಜಾತಿವಾಚಕವಲ್ಲವೆಂದು ಹೇಳಿದರೆ ಸ್ವರೂಪಪರವಾಗುತ್ತದೆ. ಆಕಾಶತ್ವಂ, ಚಂದ್ರತ್ವಂ ಇತ್ಯಾದಿ ಸ್ಥಳಗಳಲ್ಲಿರುವ 'ತ್ವ' ಪ್ರತ್ಯಯವು ವ್ಯಕ್ತಿಯು ಒಂದೇ ಆಗಿರುವುದರಿಂದ ಸ್ವರೂಪವೆಂಬರ್ಥವನ್ನು ಹೇಳುತ್ತದೆ. ಆದರಂತೆ ಅದಿತಿತ್ವ ಎಂಬಲ್ಲಿರುವ 'ತ್ವ' ಪ್ರತ್ಯಯವೂ ಸಹ ಜಾತಿಯನ್ನು ಹೇಳುವುದಿಲ್ಲ. ಅದಿತಿ ಒಬ್ಬಳೇ ಆಗಿರುವುದರಿಂದ ಅದಿತಿತ್ವ ಎಂದರೆ ಅದಿತಿಸ್ವರೂಪ ಎಂದೇ ಹೇಳಬೇಕು. ಈ ಅದಿತಿಸ್ವರೂಪವನ್ನು ವಿಷ್ಣುವಿನಲ್ಲಿ ಹೇಳಲಾಗದು. ಅದಿತಿದೇವಿಗೂ ಹಾಗೂ ವಿಷ್ಣುವಿಗೂ ಅತ್ಯಂತ ಭೇದವೇ ಇರುವುದರಿಂದ.

ಇನ್ನು ಅದಿತಿ ಶಬ್ದವು ಭಗತ್ಪರವೆಂದು ಹೇಳಿದಾಗ ಅನುಪಪತ್ತಿ ಇಲ್ಲವೆಂದು ಹೇಳಬಾರದು. ಅದಿತಿತ್ವವುಳ್ಳ ಅದಿತಿಯನ್ನೇ ವಿಧಿಸಲು ಇಚ್ಛೆ ಇರುವುದರಿಂದ ಅನುವಾದವೆನ್ನಲಾಗದು. ಹೀಗೊಪ್ಪದಿದ್ದರೆ ಅನ್ಯೋನ್ಯಾಶ್ರಯದೋಷ ಬರುತ್ತದೆ. ಹೀಗೆ ಪೂರ್ವಪಕ್ಷಿಯು ಭಾವಿಸುತ್ತಾನೆ. ಆದರೆ ಸಿದ್ಧಾಂತಿಯ ಅಭಿಪ್ರಾಯ ಹೀಗಿದೆ - ಭಾವಾರ್ಥದಲ್ಲಿ 'ತ್ವ' ಪ್ರತ್ಯಯವು ವ್ಯಾಕರಣದಿಂದ ಸಿದ್ಧವಾಗಿದೆ.

ತದ್ಧಿತಭಾವವೇ ಶಬ್ದಪ್ರವೃತ್ತಿಗೆ ನಿಮಿತ್ತವಾಗಿದೆ. ಆದು ಕೆಲವೆಡೆ ಜಾತಿರೂಪವಾಗಿರುತ್ತದೆ. ಕೆಲವೆಡೆ ಕ್ರಿಯಾರೂಪವಾಗಿ, ಕೆಲವೆಡೆ ಗುಣರೂಪವಾಗಿ, ಕೆಲವೆಡೆ ದ್ರವ್ಯರೂಪವಾಗಿ, ಇನ್ನೂ ಕೆಲವೆಡೆ ಸ್ವರೂಪಪರವಾಗಿ ಇರುತ್ತದೆ. ಪ್ರಕೃತ ಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವಾತ್ಮತ್ವವೇ ಅದಿತಿತ್ವ ಎನಿಸುತ್ತದೆ. ಅದಿತಿಶಬ್ದದ ಪ್ರವೃತ್ತಿನಿಮಿತ್ತವೂ ಸಹ ಇದೇ ಆಗಿದೆ. ಸರ್ವಾತ್ಮತ್ವವು ಕ್ರಿಯಾರೂಪವಾದ ಪ್ರವೃತ್ತಿನಿಮಿತ್ತವೆಂದು ತಿಳಿಯಬೇಕು. ಅದಿತೇಯ ಎಂಬುದು ಸಂಜ್ಞಾರೂಪವಾಗಿದೆ. 'ಅಸ್ಯ ಸೂತ್ರಸ್ಯ ಶಾಟಕಂ ವಯಾ' ಎಂಬಂತೆ ಹೀಗೊಪ್ಪದಿದ್ದರೆ ಪರನೂ ಸಹ ಹೀಗೆಯೇ ಒಪ್ಪಬೇಕು. ಪ್ರವೃತ್ತಿನಿಮಿತ್ತವನ್ನು ವಿವಕ್ಷಿಸದೇ ಕೇವಲ ಲೋಕಪ್ರಸಿದ್ಧಿಯನ್ನಷ್ಟೇ ಅನುಸರಿಸಿ ಅನುವಾದವೆಂದು ಪರನು ಉತ್ತರಿಸುವುದಾದರೆ ನಮಗೂ ಇದು ಸಮಾನವಾಗಿದೆ. ಇಷ್ಟು ಮಾತ್ರ ವ್ಯತ್ಯಾಸ. ಪರನಿಗೂ ಲೌಕಿಕಪ್ರಸಿದ್ಧಿಯನ್ನು ಹೇಳುತ್ತಾನೆ. ನಾವು ವೈದಿಕಪ್ರಸಿದ್ಧಿಯನ್ನು ಹೇಳುತ್ತೇವೆ.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣೆಯ ಟೀಕೆಯ
ಕನ್ನಡಾನುವಾದದಲ್ಲಿ ಆತೃತ್ವಾಧಿಕರಣವು ಸಮಾಪ್ತವಾಯಿತು.

***

श्रीमदानन्दतीर्थभगवत्पादाचार्यविरचितम्

अणुभाष्यम्

अत्तृत्वाधिकरणम् - २

अत्ता

ಅಣುಭಾಷ್ಯ - ಭಗವಂತನೇ ಸಕಲ ಸಂಹಾರಕನು.

श्री राघवेन्द्रतीर्थविरचिता

तत्वमञ्जरी

अत्तृत्वाधिकरणम् -२

नन्वथापि यदुक्तं 'सर्वकर्ता विष्णुरेव' इत्यत्र सर्वसम्बन्धिजन्मस्थितिलयकर्तृत्वं विष्णोः, तदयुक्तम् । 'सर्वं वा अत्तीति तददितेरदितित्वम्' इति काण्वश्रुतौ अदितेरेव सर्वात्तृरूपसंहर्तृत्वोक्तेरित्यतः प्राप्तम् – अत्तेत्यादिसूत्रद्वयम् ।।

ಜನ್ಮಾಧಿಕರಣದಲ್ಲಿ 'ವಿಷ್ಣುವೇ ಸರ್ವಕರ್ತಾ' ಎಂದು ಮತ್ತು ಸಕಲ ವಸ್ತುಗಳ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ 'ಕರ್ತಾ' ಎಂದು ನಿಶ್ಚಯಿಸಲಾಯಿತು. ಇದು ತಪ್ಪು. 'ಸರ್ವಂ ವಾ ಅತ್ತೀತಿ, ತದದಿತೇರದಿತಿತ್ವಮ್' ಎಂಬ ಕಾಣ್ವಶ್ರುತಿಯಲ್ಲಿ ಸರ್ವಾತ್ತೃತ್ವರೂಪವಾದ ಸಂಹಾರಕರ್ತೃತ್ವವನ್ನು ಅದಿತಿಗೆ ಹೇಳಿದೆಯಲ್ಲವೆ ? ಎಂಬ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ 'ಅತ್ತಾ ಚರಾಚರಗ್ರಹಣಾತ್' 'ಪ್ರಕರಣಾಚ್ಚ' ಎಂಬೆರಡು ಸೂತ್ರಗಳು ಹೊರಟಿವೆ.

तदर्थः– अत्तेति ।। 'एको विष्णुरेव' इति, 'लिङ्गैः सर्वैर्युतः स हि' इति च अन्वेति । 'सर्वमत्ति' इत्यत्रोक्तः सः प्राक् 'सर्वकर्ता' इत्यत्र संहर्तृत्वेनोक्तो विष्णुरेव, न त्वदितिः । कुतः? लिङ्गैः सर्वैर्युतो हीति ।।

ಈ ಎರಡು ಸೂತ್ರಗಳ ಅರ್ಥವನ್ನೇ ಅಣುಭಾಷ್ಯದಲ್ಲಿ 'ಅತ್ತಾ' ಎಂಬುದಾಗಿ ಸಂಗ್ರಹಿಸಿದ್ದಾರೆ. 'ಏಕೋ ವಿಷ್ಣುರೇವ' ಎಂಬುದನ್ನು ಮತ್ತು 'ಲಿಂಗೈಃ ಸರ್ವೈರ್ಯುತಃ ಸ ಹಿ' ಎಂಬುದನ್ನು ಇಲ್ಲಿಯೂ ಸಹ ಅನ್ವಯಿಸಿಕೊಳ್ಳಬೇಕು. 'ಸರ್ವಮತ್ತಿ' ಇತ್ಯಾದಿಯಾಗಿ ಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವಸಂಹಾರಕನು ವಿಷ್ಣುವೇ ಆಗಿದ್ದಾನೆ. 'ಸರ್ವಕರ್ತಾ' ಎಂಬಲ್ಲಿ ಹೇಳಲ್ಪಟ್ಟವನೂ ಸಹ ವಿಷ್ಣುವೇ ಆಗಿದ್ದಾನೆ ಹೊರತು ಅದಿತಿಯಲ್ಲ. ಏಕೆ ? ಎಂಬ ಪ್ರಶ್ನೆಗೆ 'ಲಿಂಗೈಃ ಸರ್ವೈರ್ಯುತೋ ಹಿ' ಎಂಬುದಾಗಿ ಉತ್ತರಿಸಿದ್ದಾರೆ.

हिहेतौ । सर्वमत्तीत्युक्तासङ्कुचितसर्वात्तृत्व 'नैवेह किञ्चनाग्र आसीन्मृत्युनैवेदमावृतमासीद्' इत्यादिवाक्योक्तलयवर्तित्व-अप्संवत्सरसृष्टृत्व-एतैर्लिङ्गैर्युतोऽत्ता विष्णुरेव । तेषां भाष्योक्तदिशा वैष्णवत्वप्रसिद्धेरिति वा । अत्र एक इत्युक्तिः

किञ्चिदत्त्री अदितिः किञ्चिदत्ता हरिरिति न शक्यम्, सर्वस्यात्ता हरिरेक एवेति वक्तुम् ।

'ಹಿ' ಶಬ್ದವು ಹೇತು ಎಂಬರ್ಥದಲ್ಲಿದೆ. 'ಸರ್ವಮತ್ತಿ' ಎಂದು ಹೇಳಿದಾಗ ಅಸಂಕುಚಿತವಾದ ಸರ್ವಂಸಂಹಾರಕರ್ತೃತ್ವವು ವಿಷ್ಣುವಿನಲ್ಲೇ ಇರುತ್ತದೆ. 'ನೈವೇಹ ಕಿಂಚಾನಾಗ್ರೇ ಆಸೀನ್ಮೃತ್ಯುನೈವೇದ-ಮಾವೃತಮಾಸೀದ್'' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಲಯವರ್ತಿತ್ವ-ಆಪ್ ಸೃಷ್ಟ್ಯತ್ವ ಮತ್ತು ಸಂವತ್ಸರಸೃಷ್ಟ್ಯತ್ವ ಮೊದಲಾದ ಲಿಂಗಗಳಿಂದೆಲ್ಲಾ ಯುಕ್ತವಾದವನು ವಿಷ್ಣುವೇ ಆಗಿದ್ದಾನೆ. ಭಾಷ್ಯದಲ್ಲಿ ಹೇಳಿದ ಪ್ರಕಾರ ಇಲ್ಲಿ ಹೇಳಿದ ಎಲ್ಲಾ ಲಿಂಗಗಳು ವಿಷ್ಣುವಿನಲ್ಲೇ ಇರುತ್ತವೆಂದು ನಿರ್ಣಯವಾಗಿದೆ. 'ಏಕ' ಎಂದು ಹೇಳಿದ್ದರಿಂದ ಕೆಲವನ್ನು ಅದಿತಿಯು ಇನ್ನು ಕೆಲವನ್ನು ವಿಷ್ಣುವು ಸಂಹಾರ ಮಾಡುತ್ತಾನೆಂದು ಶಂಕಿಸಬಾರದು. ಸರ್ವಸಂಹಾರಕನು ವಿಷ್ಣುವೊಬ್ಬನೇ ಆಗಿದ್ದಾನೆ.

अत्रापि विष्णुरिति वर्तमाने स इत्युक्तिः प्रागुक्तैक्यद्योतनाय वा, 'स तया वाचा तेन आत्मना' इत्यादौ प्रथमान्ततच्छब्दोक्तः प्रकृतमृत्युरेवात्ता निर्णेयश्रुतौ उच्यत इति द्योतनाय वेति ।।

ಇಲ್ಲಿಯೂ ಸಹ 'ವಿಷ್ಣುಃ' ಎಂಬ ಪದವು ಅನುವೃತ್ತಿಯಿಂದಲೇ ದೊರೆಯಬೇಕಾದರೆ 'ಸಃ' ಎಂದು ಹೇಳಿದ್ದರ ಪ್ರಯೋಜನವೇನು? ಎಂದರೆ ಹಿಂದೆ 'ಸರ್ವಕರ್ತಾ' ಎಂಬಲ್ಲಿ ಹೇಳಲ್ಪಟ್ಟ ಸರ್ವಕರ್ತನು 'ಸರ್ವಂ ವಾ ಅತ್ತಿ' ಎಂಬಲ್ಲಿ ಹೇಳಲ್ಪಟ್ಟ ಸಂಹಾರಕರ್ತನು ಒಬ್ಬನೇ ಆಗಿದ್ದಾನೆಂದು ತೋರಿಸಬೇಕಾಗಿದೆ. 'ಸ ತಯಾ ವಾಚಾ' ಇತ್ಯಾದಿ ವಾಕ್ಯಗಳಲ್ಲಿ 'ತತ್' ಶಬ್ದದಿಂದ ಪ್ರತಿಪಾದ್ಯನಾದವನು 'ಸರ್ವಮತ್ತಿ' ಎಂಬ ಶ್ರುತಿಯಿಂದ ಪ್ರತಿಪಾದ್ಯನಾದವನು ಒಬ್ಬನೇ ಆಗಿದ್ದಾನೆಂದು ತಿಳಿಸಲು 'ಸಃ' ಎಂದು ಹೇಳಲಾಗಿದೆ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ವಿರಚಿತವಾದ
ತತ್ತ್ವಮಂಜರಿಯ ಕನ್ನಡಾನುವಾದದಲ್ಲಿ ಅತ್ಯತ್ತ್ಯಾಧಿಕರಣವು ಮುಗಿಯಿತು.

* * * * *

तन्त्रदीपिका

अत्तृत्वाधिकरणम् - २

ॐ अत्ता चराचरग्रहणात् ॐ ।। १-२-९ ।।

अत्र नये संहाररूपक्रियात्मकलिङ्गसमन्वय उच्यते । 'सर्वं वा अत्ति' इत्युक्तात्ता तत्तु ब्रह्मैव, न त्वदितिः । सर्वमिति चराचरस्याद्यतया ग्रहणादित्यर्थः ।

तदित्यनुवृत्तेरत्त्रिति वाच्ये पुंनिर्देशः 'स तया वाचा तेनाऽत्मना' इत्यादौ स इति पुल्लिङ्गतच्छब्देन प्रकृतमृत्युरेव निर्णेयश्रुतावुच्यत इति तदनुरोधेन । श्रुत्यनुगमात् सर्वेति वाच्ये चराचरेति तद्व्याख्यानेनोक्तिः सङ्कोचशङ्कानिरासाय ।।

ಈ ಅಧಿಕರಣದಲ್ಲಿ ಸಂಹಾರರೂಪವಾದ ಕ್ರಿಯಾತ್ಮಕಲಿಂಗದ ಸಮನ್ವಯವನ್ನು ಮಾಡುತ್ತಿದ್ದಾರೆ. ಬೃಹದಾರಣ್ಯಕದಲ್ಲಿ ಬರುವ 'ಸರ್ವಂ ವಾ ಅತ್ತಿ,' ಎಂಬ ವಾಕ್ಯದಲ್ಲಿ ಪ್ರತಿಪಾದ್ಯನಾದ ಸಂಹಾರಕನು ತತ್ತು = ಬ್ರಹ್ಮನೇ ಆಗಿದ್ದಾನೆ. ಹೊರತು ಅದಿತಿಯಲ್ಲ. ಏಕೆಂದರೆ ಚರಾಚರ ಜಗತ್ತನ್ನು ಸಂಹಾರ್ಯವೆಂದು 'ಸರ್ವಂ' ಎಂಬ ಪದದಿಂದ ಗ್ರಹಣ ಮಾಡಿರುವುದರಿಂದ ಎಂದರ್ಥ.

ಸೂತ್ರದಲ್ಲಿ 'ತತ್' ಎಂಬ ಪದವನ್ನು ಅನುವೃತ್ತಿ ಮಾಡಿದ್ದರಿಂದ 'ಅತ್ತ್ರ' ಎಂದು ಹೇಳಬೇಕಾಗಿತ್ತು. 'ಸ ತಯಾ ವಾಚಾ ತೇನಾऽತ್ಮನಾ' ಎಂಬಲ್ಲಿ ಪುಲ್ಲಿಂಗವಾದ 'ಸಃ' ಎಂಬ ಪದವನ್ನು ಪ್ರಯೋಗಿಸಲಾಗಿದೆ. ಪುಲ್ಲಿಂಗದಲ್ಲಿರುವ ಈ 'ತತ್' ಶಬ್ದದಿಂದ ಪ್ರಕೃತವಾದ 'ಮೃತ್ಯುವೇ ಸರ್ವಂ ವಾ ಅತ್ತಿ' ಎಂಬ ಶ್ರುತಿಯಲ್ಲಿಯೂ ಪ್ರತಿಪಾದ್ಯವಾಗಿದೆ. ಅದನ್ನು ಅನುಸರಿಸಿ ಸೂತ್ರದಲ್ಲಿ 'ಅತ್ತಾ' ಎಂಬ ಪುಲ್ಲಿಂಗ ಪ್ರಯೋಗವು ಯುಕ್ತವಾಗಿದೆ. ಶ್ರುತಿಯ ಅನುಗುಣ್ಯಕ್ಕೋಸ್ಕರ ಸೂತ್ರದಲ್ಲಿ ಸರ್ವಪದವನ್ನೇ ಪ್ರಯೋಗಿಸಬೇಕಾಗಿತ್ತು. ಆದರೂ ಸಹ ಸರ್ವ ಪದವನ್ನು 'ಚರಾಚರ' ಎಂಬುದಾಗಿ ವ್ಯಾಖ್ಯಾನಿಸಿದ್ದರಿಂದ ಸರ್ವಶಬ್ದಕ್ಕೆ ಸಂಕೋಚ ಮಾಡಬೇಕೆಂಬ ಶಂಕೆಯನ್ನು ನಿರಾಕರಿಸಿದಂತಾಯಿತು.

ಇತಶ್ಚೈವಮಿತ್ಯಾಹ –

ॐ प्रकरणाच्च ॐ ।। १-२-१० ।।

'नैवेह किञ्चन' इत्यादिब्रह्मप्रकरणाच्चात्ता ब्रह्मैवेत्यर्थः ।।

ಮತ್ತೊಂದು ಕಾರಣದಿಂದಲೂ ಸರ್ವಾತ್ಮವು ವಿಷ್ಣುವೇ ಆಗಿದ್ದಾನೆಂದು ಸಮರ್ಥಿಸುವುದಕ್ಕಾಗಿ 'ಪ್ರಕರಣಾತ್' ಎಂಬ ಸೂತ್ರವನ್ನು ಹೇಳುತ್ತಿದ್ದಾರೆ.

'ನೈವೇಹ ಕಿಂಚನ' ಮೊದಲಾದ ಬ್ರಹ್ಮಪ್ರಕರಣವಿರುವುದರಿಂದಲೂ ವಿಷ್ಣುವೇ 'ಅತ್ತಾ' ಎನಿಸಿದ್ದಾನೆಂದರ್ಥ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ
ತಂತ್ರದೀಪಿಕಾದ ಕನ್ನಡಾನುವಾದದಲ್ಲಿ ಅತ್ತೃತ್ವಾಧಿಕರಣವು ಸಮಾಪ್ತವಾಯಿತು.

श्री राघवेन्द्रतीर्थविरचिता

श्रीन्यायमुक्तावलिः

अत्तृत्वाधिकरणम् - २

ॐ अत्ता चराचरग्रहणात् ॐ ।। १-२-९ ।।

ॐ प्रकरणाच्च ॐ ।। १-२-१० ।।

अत्र पूर्ववैषम्येण पूर्वपक्षोत्थानात् प्रत्युदाहरणरूपा सङ्गतिः । वाजसनेये तृतीयेऽध्याये 'स यद्यदेवासृजत तत्तदत्तुमभ्रियत सर्वं वा अत्तीति तददितेरदितित्वम्' इति (बृ-३-१-४) श्रुतम् । तत्र सर्वं वा अत्तीत्यनेन लब्धोऽत्ता किमदितिर्देवमाता अथ विष्णुरिति सन्देहः (पूर्वपक्षः)। अदितिरेवेति प्राप्तं तददितेरित्यादिश्रुतेः अदितित्वलिङ्गाच्च । आदित्यशब्दपर्यायसवितृश्रुतेरन्तर्नयविषयवाक्ये श्रुतायाः वैष्णवत्वसिद्ध्या आदित्यश्रुतेः पूर्वत्र विष्णुपरत्वेऽप्यत्र तदसिद्ध्या श्रुतेर्निरवकाशत्वात् । लिङ्गस्याप्यत्तृत्वरूपतया 'अनश्नन्' इति श्रुत्या अनत्तुर्विष्णोरयोगादिति द्वयोर्निरवकाशत्वाद्वा श्रुतेरन्तर्नयन्यायेन सावकाशत्वेऽपि निरवकाशलिङ्गानुगृहीतत्वाद्वेति ।

सिद्धान्तस्तु 'सर्वं वा अत्ति' इत्युक्तसर्वात्तृत्वरूपसंहर्तृत्वस्य 'यमप्येति भुवनं साम्पराये' 'स्रष्टा पाता तथैवात्ता' इत्यादिश्रुतिस्मृतिभिः विष्णवेकनिष्ठत्वात् तस्यैवा

दितिपदप्रवृत्तिनिमित्ततयाऽदितित्वलिङ्गस्य अदितिश्रुतेश्च विष्णौ सावकाशत्वात् 'नैवेह किञ्चनाग्रे आसीन्मृत्युनैवेदमावृतमासीद्' इत्यनवकाशब्रह्मप्रकरणाच्च विष्णुरेवात्तेति । अनशनश्रुतिगतिस्तु वक्ष्यते ।

फलं तु श्रुतिर्लिङ्गबलाददितेः सङ्कुचितसर्वात्तृत्वे विष्णोस्तदन्यकतिपयात्तृत्वस्यैव सिद्धान्तिना लक्षणत्वेन वाच्यत्वादतिव्याप्तिरिति वा अदितेरेवासङ्कुचितसर्वात्तृत्वमिति वा जन्मादिसूत्राक्षेपस्तत्समाधिश्चेति ।।

ಈ ಅಧಿಕರಣದಲ್ಲಿ ಹಿಂದಿನ ಅಧಿಕರಣಕ್ಕಿಂತ ವಿಭಿನ್ನವಾದ ಪೂರ್ವಪಕ್ಷವನ್ನು ಮಾಡುತ್ತಿದ್ದಾರೆ. ಆದ್ದರಿಂದ ಪ್ರತ್ಯುದಾಹರಣವೆಂಬ ಸಂಗತಿಯನ್ನು ತಿಳಿಯಬೇಕು. ಬೃಹದಾರಣ್ಯಕದ ಮೂರನೇ ಅಧ್ಯಾಯದಲ್ಲಿ "ಸ ಯದ್ಯದೇವಾಸೃಜತ ತತ್ತದತ್ತುಮದ್ಧಿಯತ ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಮ್' ಎಂದು ಕೇಳಿಸುತ್ತಿದೆ. ಇಲ್ಲಿ 'ಸರ್ವಂ ವಾ ಅತ್ತಿ' ಎಂಬುದರಿಂದ ತಿಳಿಯುತ್ತಿರುವ ಅತ್ತೃತ್ವವು ಅದಿತಿಯಲ್ಲಿದೆಯೋ ಅಥವಾ ವಿಷ್ಣುವಿನಲ್ಲೋ ? ಎಂದು ಸಂದೇಹ. ಅದಿತಿಯಲ್ಲೆಂದು ಪೂರ್ವಪಕ್ಷ. ಏಕೆಂದರೆ 'ತದಿತಿರೇವ' ಎಂಬ ಶ್ರುತಿಯು ಮತ್ತು ಅದಿತಿತ್ವ ಎಂಬ ಲಿಂಗವು ಇರುವುದರಿಂದ. ಅದಿತಿ ಶಬ್ದವು ಅಂತರಧಿಕರಣದ ನ್ಯಾಯದಿಂದ ವಿಷ್ಣುವಿನಲ್ಲಿ ಸಿದ್ಧವಾಗಿಲ್ಲ. ಯಾವರೀತಿಯಾಗಿ ಅದಿತ್ಯಶಬ್ದಕ್ಕೆ ಪರ್ಯಾಯಶಬ್ದವೆನಿಸಿದ ಸವಿತೃಶಬ್ದವು ಅಂತರಧಿಕರಣದ ನ್ಯಾಯಕ್ಕೆ ವಿಷಯವಾದ್ದರಿಂದ ವಿಷ್ಣುಪರವೆಂದು ಸಿದ್ಧವಾಗುತ್ತದೆ; ಆದ್ದರಿಂದಲೇ ಆದಿತ್ಯಶ್ರುತಿಯೂ ಸಹ ವಿಷ್ಣುಪರವೆಂದು ನಿರ್ಣಯಿಸಬಹುದೋ ಆದರಂತೆ ಪ್ರಕೃತದಲ್ಲಿ ಅದಿತಿಶಬ್ದವನ್ನಾಗಲಿ ಅದಿತಿಶಬ್ದದ ಪರ್ಯಾಯಪದವನ್ನಾಗಲಿ ಅಂತರಧಿಕರಣದಲ್ಲಿ ಸಾಧಿಸಿರುವುದಿಲ್ಲ. ಆದ್ದರಿಂದ ಅದಿತಿಶ್ರುತಿಯು ಅದಿತಿದೇವಿಯಲ್ಲಿ ನಿರವಕಾಶವಾಗಿದೆ.

ಇದರಂತೆ ಅದಿತಿತ್ವವೆಂಬ ಲಿಂಗವೂ ಸಹ ನಿರವಕಾಶವಾಗಿದೆ. ಏಕೆಂದರೆ 'ಅನಶ್ನನ್' ಎಂಬ ಶ್ರುತಿಯಿಂದ ಅತ್ತೃತ್ವವನ್ನು ವಿಷ್ಣುವಿನಲ್ಲಿ ಹೇಳಲು ಸಾಧ್ಯವಿಲ್ಲ. ಅದಿತಿಯಲ್ಲಿಯೇ ಹೇಳಬೇಕಾಗುತ್ತದೆ ಆದ್ದರಿಂದ ಅದಿತಿಶ್ರುತಿಯಂತೆ ಅದಿತಿತ್ವಲಿಂಗವೂ ಸಹ ನಿರವಕಾಶವಾಯಿತು.

ಅಂತರಧಿಕರಣದ ನ್ಯಾಯದಂತೆ ಅದಿತಿಶ್ರುತಿಯು ಸಾವಕಾಶವಾದರೂ ಸಹ ನಿರವಕಾಶವಾದ ಲಿಂಗದಿಂದ ಅನುಗ್ರಹವಿರುವ ಕಾರಣ ಶ್ರುತಿಯು ಬಲಿಷ್ಠವಾಗುತ್ತದೆ. ಹೀಗೆ ಅದಿತಿದೇವಿಯೇ ಅತ್ತಾ ಎನಿಸುತ್ತಾಳೆಂದು ಪೂರ್ವಪಕ್ಷ.

ಸಿದ್ಧಾಂತ ಹೀಗಿದೆ - 'ಸರ್ವಂ ವಾ ಅತ್ತಿ' ಎಂಬಲ್ಲಿ ಸರ್ವಾತ್ತೃತ್ವರೂಪವಾದ ಸಂಹರ್ತೃತ್ವವು ವಿಷ್ಣುವಿನಲ್ಲೇ ಬರುತ್ತದೆ. 'ಯಮಪ್ಯೇತಿ ಭುವನಂ ಸಾಂಪರಾಯೇ' 'ಸ್ರಷ್ಟಾ ಪಾತಾ ತಥೈವಾತ್ತಾ' ಇವೇ

ಮೊದಲಾದ ಶ್ರುತಿಗಳಿರುವುದರಿಂದ. ಇಂತಹ ಸಂಹರ್ತೃತ್ವವೇ ಅದಿತಿಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಆದ್ದರಿಂದ ಅದಿತಿತ್ವವೆಂಬ ಲಿಂಗವಾಗಲಿ ಅದಿತಿಶ್ರುತಿಯಾಗಲಿ ವಿಷ್ಣುವಿನಲ್ಲಿ ಸಾವಕಾಶವಾಗಿವೆ. ಮತ್ತು 'ನೈವೇಹ ಕಿಂಚನಾಗ್ರೇ ಆಸೀತ್ ಮೃತ್ಯುನೈವೇದಮಾವೃತಮಾಸೀತ್' ಇವೇ ಮೊದಲಾದ ಬ್ರಹ್ಮಪ್ರಕರಣಗಳ ಬಲದಿಂದಲೂ ವಿಷ್ಣುವೇ 'ಅತ್ತಾ' ಎನಿಸುತ್ತಾನೆ. 'ಅನಶ್ನನ್' ಎಂಬ ಶ್ರುತಿಗೆ ಗತಿಯನ್ನು ಮುಂದಿನ ಅಧಿಕರಣದಲ್ಲಿ ಹೇಳುತ್ತಾರೆ.

ಶ್ರುತಿಲಿಂಗಗಳ ಬಲದಿಂದ ಅದಿತಿದೇವಿಯು ಕೆಲವು ಪದಾರ್ಥಗಳ ಸಂಹಾರಕಳಾಗಿದ್ದಾಳೆಂದು ನಿರ್ಣಯವಾಗುತ್ತದೆ. ಆದ್ದರಿಂದ ವಿಷ್ಣುವಿಗೂ ಸಹ ಆ ಪದಾರ್ಥಗಳನ್ನು ಬಿಟ್ಟು ಉಳಿದ ಕೆಲವು ಪದಾರ್ಥಗಳ ಸಂಹಾರಕತ್ವವನ್ನಷ್ಟೇ ಸಿದ್ಧಾಂತಿಯು ಒಪ್ಪಬೇಕು. ಇದನ್ನು ಲಕ್ಷಣವನ್ನಾಗಿಯೇ ಹೇಳಬೇಕು. ಹೀಗೆ ಕತಿಪಯಸಂಹಾರಕತ್ವವನ್ನು ವಿಷ್ಣುವಿನ ಲಕ್ಷಣವೆಂದು ಹೇಳಿದಾಗ ಅದಿತಿದೇವಿಯಲ್ಲಿ ಅತಿವ್ಯಾಪ್ತಿಯು ಬರುತ್ತದೆ. ಅಥವಾ ಅದಿತಿದೇವಿಯೇ ಅಸಂಕುಚಿತವಾದ ಸಕಲಪದಾರ್ಥಗಳ ಸಂಹಾರಕಳೆಂದು ನಿರ್ಣಯವಾಗುತ್ತದೆ. ಎರಡೂ ಪಕ್ಷಗಳಲ್ಲಿ ಜನ್ಮಾದಿಸೂತ್ರದಲ್ಲಿ ನಿರ್ಣಯಿಸಲ್ಪಟ್ಟ ಜಗಜ್ಜನ್ಮಾದಿಕಾರಣತ್ವವು ವಿಷ್ಣುವಿನಲ್ಲಿ ನಿರ್ಣಯವಾಗುವುದಿಲ್ಲ. ಇದು ಪೂರ್ವಪಕ್ಷದ ಫಲ. ಈ ಎಲ್ಲಾ ವಿಚಾರಗಳ ನಿರಾಕರಣೆಯೇ ಸಿದ್ಧಾಂತದ ಫಲ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ

ನ್ಯಾಯಮುಕ್ತಾವಳಿಯ ಕನ್ನಡಾನುವಾದದಲ್ಲಿ ಅತ್ತೃತ್ವಾಧಿಕರಣವು ಸಮಾಪ್ತವಾಯಿತು.

सूत्रार्थरत्नावलिः

अत्र लोकतोऽन्यत्रप्रसिद्धादिति शब्देन सहोक्तात्तत्वलिङ्गस्य हरौ समन्वयः क्रियते ।

ॐ ।। अत्ता चराचरग्रहणात् ।। ॐ (१-२-९)

ननु जन्मादिसूत्रोक्तसंहर्तृत्वापरपर्यायात्तृत्वं 'स यद्यदेव' इति (बृ.३।२।५) वाक्येनादितेरेवास्तु । अदितिश्रुतेः (कठ ४।७) अदितित्वमिति निरवकाशलिङ्गाच्च ।

न च योगबलाददितिर्विष्णुविषया । अदितित्वलिङ्गस्य निरवकाशत्वात् । न च स इति पुल्लिङ्गानुपपत्तिः । पुंशक्तियुक्तत्वेन कूटस्थोऽक्षर उच्यते (भ.गी.१५।१६) इत्यादिवत् पुल्लिङ्गोपपत्तेश्चेति प्राप्ते सूत्रं पठति –

ॐ ।। अत्ता चराचरग्रहणादिति ।। अस्यार्थः – अत्ता सर्वं वाऽत्तीत्युक्त सर्वात्ता विष्णुरेव । नत्वदितिः । कुतः? चराचरग्रहणात् - चराचरस्य चेतनाचेतनात्मकप्रपञ्चस्य सर्वमिति श्रुतावद्यतयोक्तत्वादित्यर्थः ।

एवंचाद्यत्वेन चराचरस्य ग्रहणात् । न चादितिश्रुतिविरोधः । अदितिश्रुतेः 'यो देवानां नामधा' इति (ऋ.१०।८२।३) श्रुतिबलेन विष्णुपरत्वस्य वक्तुं शक्यत्वात् । न चादितित्वरूपाखण्डधर्मविरोधः । विष्णोरपि विद्वद्रूढिविषयत्वेनादितित्वरूपाखण्डधर्मस्यापि तत्रावर्जनीयत्वात् । अतो विष्णोरेवैतद्वाक्यप्रतिपाद्यत्वेनात्तृत्वान्न पूर्वोक्तलक्षणस्यातिव्याप्तिरिति सिद्धम् ।।

ॐ ।। प्रकरणाच्च ॐ ।। (१-२-१०)

यदा निरवकाशसर्वात्तृत्वलिङ्गमात्रात् सावकाशादितिश्रुत्यादित्वलिङ्गयोर्बाधेनात्ता विष्णुरेवेति सिद्धम् । तदा किमुवाच्यं निरवकाशप्रकरणसमुचितलिङ्गादित्यर्थे प्रतिपादयत् सूत्रं पठति –

ॐ ।। प्रकरणाच्चेति ।। अस्यार्थः – 'नैवेह किञ्चन' इति विष्णुप्रकरणबलाच्च विष्णुरेवात्ता इत्यर्थः ।

एवं च 'नेहासीत् किञ्चन' (ब्रह्मवैवर्ते) इत्यप्संवत्सरसृष्ट्यादिना निरवकाशविष्णुप्रकरणबलादत्ता विष्णुरेवेति सिद्धम् ।।

।। इति सूत्रार्थरत्नावळ्यां अत्तृत्वाधिकरणम् ।।

॥ ಪರಿಪೂರ್ಣಚಂದ್ರಿಕೆಯಲ್ಲಿ ಅತ್ತೃತ್ವಾಧಿಕರಣವು ಮುಗಿಯಿತು ॥

॥ ಶ್ರೀಮದ್ವೇಶಾರ್ಪಣಮಸ್ತು ॥

೦೩-ಗುಹಾಧಿಕರಣ

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ, ಭಾಷ್ಯದೀಪಿಕಾ,
ಸತ್ತರ್ಕದೀಪಾವಳಿ, ತತ್ವಪ್ರಕಾಶಿಕಾ,
ಭಾವದೀಪ, ವಾಕ್ಯಾರ್ಥಮಂಜರೀ

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಬ್ರಹ್ಮಾಂಡನಾಯಕ, ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

ಬ್ರಹ್ಮಮೀಮಾಂಸಾಶಾಸ್ತ್ರ

ಗುಹಾಧಿಕರಣ

ಪರಮಾತ್ಮನ ಎರಡು ರೂಪಗಳೇ ಹೃದಯಗುಹೆಯಲ್ಲಿವೆ

ಸೂ- ॥ ॐ ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್ ॐ ॥೧-೨-೧೧॥

''ಋತಂ ಪಿಬಂತೌ'' ಎಂಬ ಕಾಠಕೋಪನಿಷತ್ತಿನಲ್ಲಿ ಆತ್ಮ - ಅಂತರಾತ್ಮ ಎಂಬ ಪರಮಾತ್ಮನ ಎರಡು ರೂಪವಿಶೇಷಗಳು ಪ್ರತಿಪಾದ್ಯವಾಗಿವೆ. ಏಕೆಂದರೆ ಈ ಎರಡು ರೂಪಗಳು ಹೃದಯಾಕಾಶದಲ್ಲಿ ಹೇಳಲ್ಪಟ್ಟಿದ್ದರಿಂದ. ಹೃದಯಾಕಾಶದಲ್ಲಿ ಇರುವನು ಪರಬ್ರಹ್ಮನೆಂದು ತೈತ್ತಿರೀಯೋಪನಿಷತ್ತಿನಲ್ಲಿ ''ಯೋ ವೇದ ನಿಹಿತಂ ಗುಹಾಯಾಂ'' ಎಂಬ ಮಂತ್ರದಲ್ಲಿ ನಿರ್ಣಯವಾಗಿದೆ. ಪರಮಾತ್ಮನ ಎರಡು ರೂಪಗಳು ಹೃದಯಾಕಾಶದಲ್ಲಿವೆ ಎನ್ನಲು ''ಘರ್ಮಾ ಸಮಂತಾತ್'' ಇತ್ಯಾದಿ ಶ್ರುತಿಗಳೇ ಪ್ರಮಾಣಗಳಾಗಿವೆ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರಾದೀಪಿಕಾ – ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್ ॐ ।। ತತ್ತು ಇತಿ ವಚನವಿಪರಿಣಾಮೇನಾನುವರ್ತತೇ । ಆತ್ಮಾನೌ ಆದೇಯಂ ಮಾತೀತಿ ವ್ಯುತ್ಪತ್ತ್ಯಾ ''ಋತಂ ಪಿಬಂತೌ'' (ಕಠ: ೧-೩-೧) ಇತಿ ಶ್ರುತಿಸ್ಥ ಪಿಬಚ್ಛಬ್ದೋದಿತಶುಭಕರ್ಮಫಲಭೋಕ್ತಾರೌ ಆತ್ಮಾಂತರಾತ್ಮಾಖ್ಯವಿಷ್ಣುರೂಪೇ ಏವ ನತು ಜೀವೇಶ್ವರೌ । ಕುತಃ? ಹಿ ಯಸ್ಮಾತ್ತೌ ಗುಹಾಂ ಪ್ರವಿಷ್ಟೌ ಹೃದಯಗುಹಾಂ ಪ್ರವಿಷ್ಟೌ ತಸ್ಮಾದಿತ್ಯರ್ಥಃ । ಹಿ ಶಬ್ದೇನ ಹೃದಯಗುಹಾಸ್ಥಿತತ್ವಲಿಙ್ಗಸ್ಯ ''ಯೋ ವೇದ'' (ತೈ.ಉ. ೨-೧) ಇತಿ ಶ್ರುತಿಪ್ರಸಿದ್ಧಂ ಸೂಚಯತಿ । ದ್ವಿರೂಪತಯಾ ಶರೀರಹೃದಯಗುಹಾಸ್ಥಿತತ್ವೇ – **ಪ್ರಮಾಣಮಾಹ** । ತದ್ದರ್ಶನಾದಿತಿ । ತಸ್ಯ ಹರೇ: ದ್ವಿರೂಪತಯಾ ಶರೀರಹೃದಯಗುಹಾಸ್ಥಿತತ್ವಸ್ಯ ತಸ್ಯ ''ಘರ್ಮಾಸಮನ್ತಾ'' (ಋ. ೧೦-೧೧೪-೧) ಇತಿ ಶ್ರುತೌ ಉಕ್ತತ್ವಾತ್ ಇತ್ಯರ್ಥಃ । ।।೧।।

ಪರಿಪೂರ್ಣಚಂದ್ರಿಕಾ

'ತತ್ತು' ಎಂಬುದನ್ನು ವಚನವ್ಯತ್ಯಾಸ ಮಾಡಿಕೊಳ್ಳಬೇಕು. 'ಆತ್ಮನೌ' = ಆದೇಯಂ ಮಾತಿ (ಶುಭವಾದದನ್ನು ಅನುಭವಿಸುತ್ತಾನೆ) ಎಂಬ ವ್ಯುತ್ಪತ್ತಿಯಿಂದ ''ಋತಂ ಪಿಬಂತೌ'' ಎಂಬ ಕಠೋಪನಿಷತ್ತಿನಲ್ಲಿರುವ 'ಪಿಬತ್' ಪ್ರಾತಿಪದಿಕದಿಂದ ಪ್ರತಿಪಾದ್ಯವಾದದ್ದು ಶುಭಕರ್ಮಫಲವನ್ನು ಭೋಗ ಮಾಡುವ ಪರಮಾತ್ಮನ ಎರಡು ರೂಪಗಳಾದ ಆತ್ಮ ಮತ್ತು ಅಂತರಾತ್ಮವೇ ಹೊರತು ಜೀವೇಶ್ವರರಲ್ಲ. ಏಕೆಂದರೆ ಗುಹಾಂ ಪ್ರವಿಷ್ಟೌ = ಹೃದಯ ಗುಹೆಯಲ್ಲಿ ಪ್ರವೇಶಿಸಿದ್ದರಿಂದ (ಇದು ಹೇತುಗರ್ಭ ವಿಶೇಷಣವಾಗಿದೆ). ಹೃದಯಗುಹಾಪ್ರವಿಷ್ಟತ್ವವೆಂಬ ಲಿಂಗವು ಪರಮಾತ್ಮನಲ್ಲಿಯೇ ಪ್ರಸಿದ್ಧವಾಗಿದೆಯೆಂದು ''ಯೋ ವೇದ'' ಎಂಬ ತೈತ್ತಿರೀಯೋಪನಿಷತ್ತು ಹೇಳುತ್ತಿದೆ. ಪರಮಾತ್ಮನು ಎರಡು ರೂಪಗಳಿಂದ ಹೃದಯಾಕಾಶದಲ್ಲಿದ್ದಾನೆಂದು ಸಮರ್ಥಿಸಲು ಪ್ರಮಾಣವನ್ನು ಹೇಳುತ್ತಿದ್ದಾರೆ. ತದ್ದರ್ಶನಾತ್ = ''ಘರ್ಮಾ ಸಮಂತಾ'' ಎಂಬ ಋಗ್ವೇದದಲ್ಲಿ ಹೇಳಿರುವುದರಿಂದ.

ಸೂತ್ರಭಾಷ್ಯಮ್

ಭಾಷ್ಯಮ್ - ಸರ್ವಾತ್ತೈಕಃ ಪರ ಉಕ್ತಃ । 'ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ । ಛಾಯಾತಪೌ ಬ್ರಹ್ಮವಿದೋ ವದಂತಿ ಪಂಚಾಗ್ನಯೋ ಯೇ ಚ ತ್ರಿನಾಚಿಕೇತಾಃ' (ಕಠ. ೧-೩-೧.)

ಇತಿ ಪಿಬಂತೌ ಪ್ರತೀಯೇತೇ ತೌ ಕಾವಿತಿ ॥

ಅನುವಾದ - ಹಿಂದಿನ ಅಧಿಕರಣದಲ್ಲಿ ಸಕಲಸಂಹಾರಕನು ಬ್ರಹ್ಮನೇ ಎಂದು ಪ್ರತಿಪಾದಿಸಿದ್ದಾಯಿತು. ಆದರೆ ಕಾಠಕೋಪನಿಷತ್ತಿನಲ್ಲಿ ಪುಣ್ಯನಿರ್ಮಿತವಾದ ಈ ಶರೀರದಲ್ಲಿಸಕಲಜೀವರಿಗಿಂತಉತ್ತಮನಾದಪೂರ್ಣನಾದವಾಯುದೇವನಲ್ಲಿನೆಲೆಸಿರುವ ಭಗವಂತನು ಹೃದಯಾಕಾಶವನ್ನು ಪ್ರವೇಶಮಾಡಿ ಪುಣ್ಯಫಲವನ್ನು ಭೋಗಮಾಡುವ ಇಬ್ಬರನ್ನು ಮೂರು ಬಾರಿ ನಾಚಿಕೇತಾಗ್ನಿಯನ್ನು ಆರಾಧಿಸಿರುವ, ದೇವ, ಪಿತೃ, ಭೂತ, ಮನುಷ್ಯ, ಬ್ರಹ್ಮ ಪಂಚಮಹಾಯಜ್ಞಗಳನ್ನು ಅನುಷ್ಠಾನ ಮಾಡಿರುವ ಬ್ರಹ್ಮಜ್ಞಾನಿಗಳು ನೆರಳು ಬೆಳಕಿನಂತೆ ಸುಖ-ದುಃಖಪ್ರದರನ್ನಾಗಿ ಹೇಳುತ್ತಾರೆ. ಈ ಶ್ರುತಿಯಲ್ಲಿ ಹೇಳಲ್ಪಟ್ಟ ಪುಣ್ಯಫಲ ಭೋಕ್ತೃಗಳು ಯಾರೆಂಬುದನ್ನು ಸೂತ್ರಕಾರರು ತಿಳಿಸುತ್ತಾರೆ.

ಪ್ರತಿಪದಾರ್ಥ - ಈ ಅಧಿಕರಣದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ಕರ್ಮಫಲ ಭೋಕ್ತೃತ್ವವೆಂಬ ಲಿಂಗವನ್ನು ಸಮನ್ವಯ ಮಾಡಲಾಗಿದೆ. ಸರ್ವಾತ್ತಾ = ಸಕಲವನ್ನು ಸಂಹಾರ ಮಾಡುವವನು, ಏಕಃ = ಒಬ್ಬನೇ ಆದ, ಪರಃ = ಪರಮಾತ್ಮನು ಎಂಬುದಾಗಿ, ಉಕ್ತಃ = ಹಿಂದಿನ ಅಧಿಕರದಲ್ಲಿ ಹೇಳಲಟ್ಟಿದೆ.

ಆದರೆ ಕಾಠಕೋಪನಿಷತ್ತಿನಲ್ಲಿ ಹೀಗೆ ಹೇಳಿದೆ - ಋತಂ = ಶುಭಕರ್ಮಫಲವನ್ನು, ಪಿಬಂತೌ = ಪಾನಮಾಡುವ ಇಬ್ಬರು, ಲೋಕೇ = ಭೂಮಿಯ ಮೇಲೆ, ಸುಕೃತಸ್ಯ = ಒಳ್ಳೆಯ ಕರ್ಮದಿಂದ ನಿರ್ಮಿತವಾದ ಶರೀರದಲ್ಲಿ, ಗುಹಾಂ = ಹೃದಯ ಗುಹೆಯಲ್ಲಿ, ಪ್ರವಿಷ್ಟೌ = ಪ್ರವೇಶ ಮಾಡಿರುವ ಇಬ್ಬರು, ಪರಮೇ = ಜೀವೋತ್ತಮರಾದ, ಪರಾರ್ಧೇ = ವಾಯುದೇವರಲ್ಲಿ, ಬ್ರಹ್ಮವಿದಃ = ಬ್ರಹ್ಮಜ್ಞಾನಿಗಳು,

ಪಂಚಾಗ್ನಯಃ = ಪಂಚ ಮಾಹಾಯಜ್ಞವನ್ನು ಮಾಡಿದವರು, ಯೇ = ಯಾರು, ತ್ರಿನಾಚಿಕೇತಾಃ = ಮೂರುಬಾರಿ ನಾಚಿಕೇತಾಗ್ನಿಯನ್ನು ಆರಾಧಿಸಿದವರು, ಛಾಯಾತಪೌ = ನೆರಳು ಬಿಸಿಲುಗಳಂತೆ, ಕರ್ಮಫಲ ಅನುಭವ ಮಾಡುವವರು ಇಬ್ಬರೆಂದು, ವದಂತಿ = ಹೇಳುತ್ತಾರೆ. ಇತಿ = ಹೀಗೆ, ಪಿಬಂತೌ = ಕರ್ಮ ಫಲಭೋಕ್ತೃಗಳು, ಪ್ರತೀಯೇತೇ = ಪ್ರತಿಯಮಾನರಾಗುತ್ತಾರೆ. ತೌ = ಅವರು, ಕೌ = ಯಾರು, ಇತಿ = ಹೀಗೆ ಪ್ರಶ್ನೆ ಬಂದರೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ. (೧)

---

(೧) **ಭಾಷ್ಯದೀಪಿಕಾ** – ಅತ್ರಾಧಿಕರಣೇ ಲೋಕತೋऽನ್ಯತ್ರಪ್ರಸಿದ್ಧಕರ್ಮಫಲಭೋಕ್ತೃತ್ವಲಿಙ್ಗಸ್ಯ ವಿಷ್ಣೌ ಸಮನ್ವಯಃ ಪ್ರತಿಪಾದ್ಯತೇ । ಪೂರ್ವಾಧಿಕರಣಶ್ರುತಿಸಙ್ಗತಿಂ ವಿಷಯವಾಕ್ಯೋದಾಹರಣಪೂರ್ವಕಂ ವಿಷಯಂ ಸೂಚಯತಿ – **ಸರ್ವೇತಿ** ।। ಯಸ್ಮಾತ್ 'ಪರಃ' ಪರಮಾತ್ಮಾ 'ಏಕಃ' ಏಕತ್ವಸಙ್ಖ್ಯಾಯುಕ್ತಃ 'ಸರ್ವಾತ್ತಾ' ಸರ್ವಸಂಹರ್ತಾ ಚ, ತಸ್ಮಾತ್ ಪ್ರಕೃತಿಪ್ರತ್ಯಯಾರ್ಥಯೋಸ್ತತ್ರ ಯೋಗಾತ್ ಸರ್ವಾತ್ತೇತ್ಯಾದಿಕ್ರಿಯಾಲಿಙ್ಗಬೋಧಕಶಬ್ದೈಃ ವಾಚ್ಯತ್ವೇನೋಕ್ತ ಇತ್ಯರ್ಥಃ । ಸರ್ವಾತ್ತೇತ್ಯುಕ್ತ್ಯೈವ ಅರ್ಥಾತ್ ಪಾತೇತ್ಯಪ್ಯುಕ್ತ ಇತಿ ಭಾವಃ । ತತಃ ಕಿಮಿತ್ಯತ ಆಹ – ಋತಮಿತಿ ।। ತತ್ರೇತ್ಯಾದೌ ಸಂಯೋಜ್ಯಮ್ ।

ತಥಾ ಚ 'ತತ್ರ' ಸರ್ವಾತ್ತೃತ್ವಮಧ್ಯೇ ಪ್ರವಿಷ್ಟಂ ತದ್ವಿಶೇಷಭೂತಂ ಪಾತೃತ್ವಂ ಯತ್ರೋಕ್ತಂ ತತ್ರ ಕಾಠಕೇ 'ಋತಂ ಪಿಬನ್ತೌ' ಇತ್ಯತ್ರ 'ಪಿಬನ್ತೌ' ಕರ್ಮಫಲಸಾರಭೋಕ್ತಾರೌ ದ್ವೌ ಪ್ರತೀಯೇತೇ ಇತಿ ಯೋಜನಾ । ದ್ವಿವಚನೇನ ದ್ವಿತ್ವಬೋಧಾದಿತಿ ಭಾವಃ । ಅನೇನ ಯುಕ್ತಮತ್ತೃತ್ವಂ ಭಗವತಸ್ತತ್ರ ಪ್ರಕೃತಿಪ್ರತ್ಯಯಾರ್ಥಯೋರುಪಪತ್ತೇಃ । ಇಹ ತು ಕರ್ಮಬನ್ಧವಿಧುರೇ ಪರಮಾತ್ಮನಿ ಪ್ರಕೃತ್ಯರ್ಥಸ್ಯ ನಿರ್ಭೇದೇ ಪ್ರತ್ಯಯಾರ್ಥಸ್ಯ ಚಾಯೋಗಾತ್ತ ತಸ್ಯ ದ್ವಿವಚನಾನ್ತಪಿ ಬಚ್ಛಬ್ದವಾಚ್ಯತೇತಿ ಪೂರ್ವವೈಷಮ್ಯೇಣ ಪ್ರತ್ಯವಸ್ಥಾನಾದ್ವಾ ಪೂರ್ವಮರ್ಥಾದುಕ್ತಸ್ಯ ಪಾತೃತ್ವಸ್ಯಾನ್ಯಮಾತ್ರನಿಷ್ಠತ್ವೇऽಸಮ್ಭವಸ್ಯಾನ್ಯಸ್ಮಿನ್ನಪಿ ಸತ್ತ್ವೇऽತಿವ್ಯಾಪ್ತೇರ್ವಾ, ಆಕ್ಷೇಪಾದ್ವಾ ಪೂರ್ವಾಧಿಕರಣೇನಾಸ್ಯ ಸಙ್ಗತಿಃ, ಪಾತೃತ್ವಾಖ್ಯವಿಷಯಶ್ಚ ಸೂಚಿತೋ ಭವತಿ ।।

ವಿಷಯವಾಕ್ಯೇ ಜನ್ಯಜನಕಭಾವಃ ಷಷ್ಠ್ಯರ್ಥಃ । ತಥಾ ಚ 'ಸುಕೃತಸ್ಯ ಲೋಕೇ' ಸುಕೃತನಿರ್ಮಿತೇ ಶರೀರೇ ತತ್ತ್ವಪ್ರದೀಪರೀತ್ಯಾ ಸುಕೃತನಿಮಿತ್ತೇ ಶರೀರೇ ಹೃದಯಗುಹಾಂ ಪ್ರವಿಷ್ಟೌ ಗುಹಾಯಾಮಪಿ 'ಪರಮೇ' ಸರ್ವಜೀವೋತ್ತಮೇ, ಆ ಋದ್ಧ ಆರ್ಧಃ । ಪರೇಭ್ಯೋ ರುದ್ರಾದಿಭ್ಯ ಆರ್ಧಃ ಪರಾರ್ಧಃ । ತಸ್ಮಿನ್ನತಿಪೂರ್ಣೇ ವಾಯಾವಿತಿ ಶೇಷಃ । ತಥಾ ಚ ತತ್ರ ಪ್ರವಿಷ್ಟೌ ಹೃದಯಗುಹಾಶ್ರಿತವಾಙ್ಮನಧಿಷ್ಠಾನಾವಿತಿ ಯಾವತ್ । 'ಸ ಹಾऽऽಯಸ್ತಃ ಪಿತುರರ್ಧಮೇಯಾಯ' (ಛಾಂ. ೫-೩-೪.) ಇತಿ ತತ್ತ್ವಪ್ರದೀಪೋದಾಹೃತಶ್ರುತೇಃ ಪರಬ್ರಹ್ಮಾವಾಸತ್ವಾತ್ ತದನ್ಯಜೀವಾಭಿಮನ್ಯಮಾನತ್ವಾತ್ ಪರಾರ್ಧೆ ಶರೀರಮಿತಿ ವಾ ।

'ಋತಂ ಸತ್ಯಂ ತಥಾ ಧರ್ಮಃ ಸುಕೃತಂ ಚಾಭಿಧೀಯತೇ ।
ಋತಂ ತು ಮಾನಸೋ ಧರ್ಮಃ . . . . . ।।'

ಇತಿ ಗೀತಾಭಾಷ್ಯೋದಾಹೃತಸ್ಮೃತೇಃ ಶಾಸ್ತ್ರವಿಹಿತಕರ್ಮಭಿರಾಗತಂ ಫಲಮುಪಲಕ್ಷಣಯಾ ಋತಮಿತ್ಯುಚ್ಯತೇ । ತಥಾ ಚ 'ಋತಂ ಪಿಬನ್ತೌ' ಭುಞ್ಜಾನೌ ಯಾವಾನ್ತರಾತ್ಮಾಖ್ಯ-ಭಗವದ್ರೂಪವಿಶೇಷೌ ವರ್ತೇತೇ ತೌ 'ಬ್ರಹ್ಮವಿದಃ' ಬ್ರಹ್ಮಜ್ಞಾನಿನಃ 'ಪಞ್ಚಾಗ್ನಯಃ' ದೇವಪಿತೃಭೂತಮನುಷ್ಯ-ಬ್ರಹ್ಮಯಜ್ಞಾಖ್ಯಪಞ್ಚಮಹಾಯಜ್ಞವನ್ತಃ । 'ಸ ಏಷ ಯಜ್ಞಃ ಪಞ್ಚವಿಧೋऽಗ್ನಿಹೋತ್ರಂ ದರ್ಶಪೂರ್ಣಮಾಸೌ ಚಾತುರ್ಮಾಸ್ಯಾನಿ ಪಶುಃ ಸೋಮಃ' ಇತ್ಯೈತರೇಯೋಕ್ತಪಞ್ಚಮಹಾಯಜ್ಞಾ ವಾ ।

ಭಾಷ್ಯಮ್ – ಉಚ್ಯತೇ

ಸೂ – ॐ ॥ ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್ ॥ ॐ ॥೧೧॥

ಗುಹಾಂ ಪ್ರವಿಷ್ಟೌ ಪಿಬನ್ತೌ ವಿಷ್ಣುರೂಪೇ ಏವ ।

ಅನುವಾದ - ಹೃದಯ ಗುಹೆಯನ್ನು ಪ್ರವೇಶಿಸಿರುವ ಸುಕೃತಫಲವನ್ನು ಅನುಭವಿಸುತ್ತಿರುವ ಇಬ್ಬರೂ ಸಹ ವಿಷ್ಣುವಿನ ಎರಡು ರೂಪಗಳೇ ಆಗಿವೆ.

ಪ್ರತಿಪದಾರ್ಥ - ಸಿದ್ಧಾಂತವನ್ನು ಮಾಡುವಂತಹ ಸೂತ್ರವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ಗುಹಾಂ = ಹೃದಯ ಗುಹೆಯನ್ನು, ಪ್ರವಿಷ್ಟೌ = ಪ್ರವೇಶ ಮಾಡಿರುವ, ಪಿಬಂತೌ = ಶುಭ ಫಲವನ್ನು ಅನುಭವಿಸುವ, ವಿಷ್ಣುರೂಪೇ ಏವ = ಎರಡೂ ಸಹ ಭಗವಂತನ ರೂಪಗಳೇ ಆಗಿವೆ.(೧)

द्युपर्जन्यधरापुंस्त्या-ख्यपञ्चाग्निविद्यानिष्ठा वा । नचिकेता नाम ऋषिः, नचिकेतस इदं नाचिकेतमग्नि-चयनविशेषः । त्रिनाचिकेताख्विारमनुष्ठितनाचिकेतेष्टकाचयनवन्तो ये वर्तन्ते ते विदुषां पापिनां च क्रमेण 'छायातपौ' सुखदुःखकारणीभूतौ द्वौ वदन्तीत्यर्थः । सुखदुःखहेतुत्वरूपं गौणं छायातपत्वं च प्रतियोगिभेदादविरुद्धम् । यथोक्तं तत्त्वप्रदीपे – अमराणामाह्लादकावसुराणां तापकावित्यर्थ इति । प्रश्नरूपकार्यद्वारा तन्मूलसन्देहप्रकारं दर्शयति – 'तौ' श्रुत्युक्तपिबन्ताविति । इति वाक्ये पिबन्तौ यौ प्रतीयेते तौ कावित्यन्वयः । अनेन पिबन्तौ किं जीवपरौ उत पररूपे एवेति संशयः सूचितो भवति । इतीत्यनन्तरम् इति संशये जीवसहित ईश्वरः पातेति पूर्वपक्षे च सतीति वाक्यशेषः ।।

(೧) **ಭಾಷ್ಯದೀಪಿಕಾ** - अथ सिद्धान्तयत्सूत्रमवतार्य व्याचष्टे – उच्यत इति ।। सूत्रात् परत इतिशब्दोऽध्याहार्यः । गुहां प्रविष्टाविति हेतुगर्भं विशेषणम् । पिबन्ताविति्यात्मपदव्याख्यानम् । ऋतमित्यादावध्याहार्यम् । विष्णुरूपे इत्यात्मानाविति्यस्य व्याख्यानान्तरम् ।। तथा च – यावात्मानौ ऋतं पिबन्तौ तावात्मानौ विष्णुरूपे एव । कुतः ? यतो गुहां प्रविष्टाविति योजना । एवेत्यनेनानुवृत्ततुशब्दार्थ उक्तः । विष्णू इति वक्तव्ये विष्णुरूपे एवेत्युक्तिः द्विवचनस्य रूपद्वयविवक्षया सावकाशतोक्त्यर्था ।।

ಭಾಷ್ಯಮ್ – 'ಧರ್ಮಾ ಸಮನ್ತಾ ತ್ರಿವೃತಂ ವ್ಯಾಪತುಸ್ತಯೋರ್ಜುಷ್ಟಿಂ ಮಾತರಿಶ್ವಾ ಜಗಾಮ' (ಋ. ೧೦-೧೧೪-೧) ಇತ್ಯಾದಿನಾ ತದ್ದರ್ಶನಾತ್ ॥

ಅನುವಾದ - ಋಗ್ವೇದ ಸಂಹಿತೆ ಹೀಗೆ ಹೇಳಿದೆ - ಪ್ರಕಾಶಮಾನವಾದ, ವ್ಯಾಪ್ತವಾದ, ಆತ್ಮ, ಅಂತರಾತ್ಮ ಎಂಬ ಭಗವಂತನ ಎರಡು ರೂಪಗಳು ತೇಜಸ್ಸು, ನೀರು, ಪೃಥಿವೀ ಮೊದಲಾದ ತತ್ತ್ವಗಳಿಂದ ನಿರ್ಮಿಸಲ್ಪಟ್ಟ ದೇಹವನ್ನು ವಿಶೇಷವಾಗಿ ಪ್ರವೇಶ ಮಾಡಿದವು. ಆ ಎರಡು ರೂಪಗಳನ್ನು ಸೇವಿಸಲು ವಾಯುದೇವರು ದೇಹವನ್ನು ಪ್ರವೇಶಿಸಿದರು ಎಂಬ ಪ್ರಮಾಣದಿಂದ ಪರಮಾತ್ಮನ ಎರಡು ರೂಪಗಳು ಹೃದಯ ಗುಹೆಯಲ್ಲಿರುತ್ತವೆಂದು ತಿಳಿಯುತ್ತದೆ.

ಪ್ರತಿಪದಾರ್ಥ - ಧರ್ಮಾ = ಪ್ರಕಾಶಮಾನವಾದ ಎರಡು ರೂಪಗಳು, ಸಮಂತೌ = ಎಲ್ಲೆಡೆ, ಜಾಜ್ವಲ್ಯಮಾನವಾದ ವ್ಯಾಪ್ತವಾದ ಭಗವಂತನ ರೂಪಗಳೇ ಆಗಿವೆ. ತ್ರಿವೃತಂ = ಮೂರುವಿಧವಾದ ಅಪ್, ತೇಜಸ್ಸು, ನೀರು ತತ್ತ್ವಗಳಿಂದ ನಿರ್ಮಿತವಾದ ಶರೀರವನ್ನು, ವಿ = ವಿಶೇಷವಾದ ಸನ್ನಿಧಾನದಿಂದ, ವ್ಯಾಪತುಃ = ವ್ಯಾಪಿಸಿದೆ, ತಯೋಃ = ಆ ಎರಡು ಭಗವದ್ರೂಪಗಳ, ಜುಷ್ಟಿಂ = ಸೇವೆಗೋಸ್ಕರ, ಮಾತರಿಶ್ವಾ = ವಾಯುದೇವರು, ಜಗಾಮ = ದೇಹವನ್ನು ಪ್ರವೇಶ ಮಾಡಿದರು. ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ತದ್ದರ್ಶನಾತ್ = ಭಗವಂತನು ಎರಡು ರೂಪದಿಂದ ಹೃದಯ ಗುಹೆಯಲ್ಲಿ ಇರುತ್ತಾನೆಂದು ತಿಳಿಯುತ್ತದೆ.(೧)

---

(೧) **ಭಾಷ್ಯದೀಪಿಕಾ** – ननु विष्णोः सर्वशरीरेष्वेकैकरूपेणैव प्रवेशात् कथं रूपद्वयाभिप्रायेणापि द्विवचनोपपत्तिरित्यतः तद्दर्शनादिति सूत्रांशसूचितश्रुतिमुदाहरति – **धर्मेति** ।। भगवन्ताविति, कर्तुमिति च शेषः । त्रिवृतमित्यावर्तते । तथा च 'धर्मा' धर्मौ दीप्तौ धर्षकौ सङ्कोचकाविति वा । 'धर्षणात् सर्वलोकस्य नृसिंहो धर्म उच्यते' इत्यैतरेयभाष्योक्तेः, धृष्टत्वेन धर्षकत्वेन च मिताविति तत्त्वप्रदीपोक्तेश्च । 'समन्ता' समन्तौ व्याप्तौ प्रकृतिपुरुषकालव्यापिनौ । देशतः कालतः शक्तितश्च सम्पूर्णौ यौ भगवन्तौ त्रिवृतं तेजोबन्नात्मकं शरीरं 'व्यापतुः' विशेषेणाऽपतुः देह-हृदयगुहास्थानं प्राप्तौ । तयोः 'जुष्टिं' सेवां कर्तुं 'मातरिश्वा' मुख्यवायुरपि त्रिवृतं जगाम । 'दिवो' देव्या वायुपद्म्याः स्तन्यं 'पयः' 'दिधिषाणाः' पिपासन्तो देवाः द्विरूपं तमेकम् 'अवेषन्' अन्वैच्छन् । तम् 'अर्कम्' अरम् अलं कं रूपं सुखरूपं 'सहसामानं' सहवायुं विदुरिति श्रुत्यर्थः ।।

गुर्वर्थदीपिकायां तु, समन्तादिति पदच्छेदं कृत्वा विद्यमानाविति चाध्याहृत्य समन्ताद् विद्यमानौ व्याप्ताविति व्याख्यातम् । तच्चिन्त्यम् ।

इत्यादिनेति ।। वाक्येनेति शेषः । आदिपदेन 'दिवस्पयः' इत्युत्तरार्धं, तथा-

भाष्यम् – 'आत्माऽन्तरात्मेति हरिरेक एव द्विधा स्थितः ।
निविष्टो हृदये नित्यं रसं पिबति कर्मजम् ॥' इति च
बृहत्संहितायाम् ।

ಅನುವಾದ – ಬೃಹತ್‌ಸಂಹಿತೆಯು ಹೀಗೆ ಹೇಳಿದೆ – ಒಬ್ಬನೇ ಭಗವಂತನು ಆತ್ಮ ಅಂತರಾತ್ಮ ಎಂಬೆರಡು ರೂಪಗಳಿಂದ ಶರೀರವನ್ನು ಪ್ರವೇಶಿಸಿದ್ದಾನೆ. ಅವನು ಹೃದಯದಲ್ಲಿದ್ದು ಪುಣ್ಯದ ಫಲವನ್ನು ಸ್ವತಃ ಭೋಗಿಸುತ್ತಾನೆ.

ಪ್ರತಿಪದಾರ್ಥ – ಭಗವಂತನ ಎರಡು ರೂಪಗಳನ್ನು ವಿವಕ್ಷಿಸಿ 'ಪಿಬಂತೌ' ಎಂಬಲ್ಲಿರುವ ದ್ವಿವಚನಪ್ರತ್ಯಯವನ್ನು ಉಪಪಾದಿಸಬಹುದು. ಆದರೆ ಪ್ರಾತಿಪದಿಕಾರ್ಥದಲ್ಲಿರುವ ಹೇಗೆ ಕೂಡುತ್ತದೆ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಹರಿಃ = ಹರಿಯು, ಏಕ ಏವ = ಒಬ್ಬನೇ, ಆತ್ಮಾಂತರಾತ್ಮೇತಿ = ಆತ್ಮ ಹಾಗೂ ಪರಮಾತ್ಮವೆಂಬ, ದ್ವಿಧಾ = ಎರಡು ರೂಪಗಳನ್ನು ಧಾರಣೆ ಮಾಡಿ, ಸ್ಥಿತಃ = ಒಳಗೆ ಇರುವವನಾಗಿ, ಹೃದಯೇ = ಹೃದಯದಲ್ಲಿ, ನಿವಿಷ್ಟಃ = ಪ್ರವೇಶಿಸಿದವನಾಗಿ, ನಿತ್ಯಂ = ನಿರಂತರವಾಗಿ, ಕರ್ಮಜಮ್ = ಕರ್ಮಫಲದಿಂದ ಹುಟ್ಟುವ, ರಸಂ =

'एकः सुपर्णः स समुद्रमाविवेश स इदं विश्वं भुवनं विचष्टे ।
तं पाकेन मनसाऽपश्यमन्तितस्तं माता रेळ्हि स उ रेळ्हि मातरम् ॥
सुपर्णं विप्राः कवयो वचोभिरेकं सन्तं बहुधा कल्पयन्ति ।'
(ऋ. १०-११४-४., ५.)

इत्यादिकं च गृह्यते । सः 'एकः सुपर्णः' सुष्ठु परमानन्दरूपो भगवान् समुद्रमाविवेश । स इदं सर्वं जगत् 'विचष्टे' पश्यति । 'तं' परमात्मानं पकेन मनसा अहमपश्यम् । 'तं माता' व्यञ्जकत्वाद् वाक् सरस्वती 'रेळ्हि' लिह्यत इव । स परमात्मा मातरं रेळ्हि । तावन्योन्यं सम्बद्धौ भवतः ॥ तथा च – भगवद्व्यञ्जकवाचोऽपि तद्व्यङ्ग्यत्वमिति भावः ॥ तमेव सुपर्णमेकं सन्तं 'विप्राः' विशेषेण प्रकृष्टाः कवयो ज्ञानिनः 'वचोभिः' शब्दैः 'बहुधा' केशवादिद्वादशधा स्थितं कल्पयन्ति चिन्तयन्तीत्यर्थः । तद्दर्शनादिति ॥ तस्य विष्णोः द्विरूपतया सर्वशरीरप्रवेशस्योक्तत्वादित्यर्थः । तथा च – एकस्मिन्नपि विष्णौ युक्तं रूपद्वयाभिप्रायेण द्विवचनमिति भावः । एवं तद्दर्शनाद् इत्येतत् तत्त्वप्रदीपरीत्या उक्तविशेषणे निर्णीते विष्णौ द्विवचनदर्शनात् 'एकः सुपर्णः' इत्यादिना तच्छब्देनैकवचनेन परामर्शदर्शनात् तस्यैव समुद्रनिवेशिनो निखिलभुवनदर्शिनः 'अपश्यमन्तितः' इति गुहाप्रविष्टत्वदर्शनादेकस्यैव बहुनाम-रूपदर्शनाद् इत्यपि व्याख्येयम् ॥

ಭಾಷ್ಯಮ್ – 'ಧರ್ಮಾ ಸಮನ್ತಾ ತ್ರಿವೃತಂ ವ್ಯಾಪತುಸ್ತಯೋರ್ಜುಷ್ಟಿಂ ಮಾತರಿಶ್ವಾ ಜಗಾಮ' (ಋ. ೧೦-೧೧೪-೧) ಇತ್ಯಾದಿನಾ ತದ್ದರ್ಶನಾತ್ ।।

ಪ್ರತಿಪದಾರ್ಥ - ಈ ವಿಷಯದಲ್ಲಿ ಪುರಾಣವಾಕ್ಯದ ಪ್ರಮಾಣವನ್ನು ಹೇಳುತ್ತಿದ್ದಾರೆ-

ಯಥಾ = ಯಾವ ರೀತಿಯಾಗಿ, ಈಶ್ವರಸ್ಯ = ಪರಮಾತ್ಮನಿಗೆ, ಜೀವಸ್ಯ = ಜೀವನಿಗೆ, ಇರುವ ಭೇದಃ = ಪರಸ್ಪರ ಭೇದವು, ವಿನಿಶ್ಚಯಾತ್ = ವಿವಿಧ ಪ್ರಮಾಣಗಳಿಂದ ನಿಶ್ಚಯವಾಗಿದೆಯೋ, ಆದ್ದರಿಂದ ಸತ್ಯಃ = ಸತ್ಯವಾಗಿದೆ, ಏವಂ = ಈರೀತಿಯಾಗಿ, ಮೇ = ನನ್ನ, ವಾಚಂ = ಮಾತುಗಳನ್ನು, ಸತ್ಯಾಂ = ಸತ್ಯವನ್ನಾಗಿ, ಕರ್ತುಂ = ಮಾಡುವುದಕ್ಕಾಗಿ, ಇಹ = ಈ ಜಗತ್ತಿನಲ್ಲಿ, ಅರ್ಹಸಿ = ಯೋಗ್ಯನಾಗಿದ್ದಿ, ಇತಿ = ಪದ್ಮಪುರಾಣದಲ್ಲಿ ಹೇಳಲಾಗಿದೆ.

ಹೀಗೆ ಈಶ್ವರಶ್ಚ = ಸರ್ವಸಮರ್ಥನಾದ ಪರಮಾತ್ಮನು, ಜೀವಶ್ಚ = ಅಲ್ಪನಾದ ಜೀವನು, ಯಥಾ = ಯಾವ ರೀತಿಯಾಗಿ, ಪರಸ್ಪರಮ್ = ಪರಸ್ಪರವಾಗಿ, ಸತ್ಯಭೇದೌ = ಸತ್ಯವಾದ ಭೇದವುಳ್ಳವರಾಗಿದ್ದಾರೋ, ತೇನ ಸತ್ಯೇನ = ಅಂತಹ ಸತ್ಯತ್ವದಿಂದಲೇ, ಸಹಕೇಶವಾಃ = ಕೇಶವನಿಂದ ಕೂಡಿರುವ, ದೇವಾಃ = ದೇವತೆಗಳು, ಮಾಂ = ನನ್ನನ್ನು, ತ್ರಾಯಂತು = ರಕ್ಷಿಸಲಿ. ಹೀಗೆ ಸ್ಕಾಂಧ ಪುರಾಣವು ಹೇಳಿದೆ.

ಇತ್ಯಾದೇಃ = ಇವೇ ಮೊದಲಾದ ಆನೇಕ ಪ್ರಮಾಣಗಳಿಂದ, ಭೇದಃ = ಜೀವಬ್ರಹ್ಮರ ಭೇದವು, ನಾऽಸತ್ಯಃ = ಸುಳ್ಳಲ್ಲವೆಂದು ಸಿದ್ಧವಾಗುತ್ತದೆ.

ಆದ್ದರಿಂದ ಸಕಲ ಜೀವಿಗಳ ಹೃದಯ ಗುಹೆಯಲ್ಲಿ ನೆಲಸಿರುವವನು ವಿಷ್ಣುವೇ ಎಂದು ನಿರ್ಣಯವಾಯಿತು.(೧)

---

(೧) **ಭಾಷ್ಯದೀಪಿಕಾ – ಅತ್ರೈವಾರ್ಥೇ ಪುರಾಣವಾಕ್ಯೇ ಪಠತಿ – ಯಥೇತಿ ।।** ಅತ್ರ ಷಷ್ಠ್ಯಂತಂ ವಾಕ್ಯಂ ಪಾದ್ಮಸ್ಥಂ, ಪ್ರಥಮಾಂತಂ ಸ್ಕಾಂದಗತಮಿತಿ ತತ್ತ್ವಪ್ರದೀಪೋಕ್ತೇಃ । 'ಮೇ ಮಾಮ್' ಇತ್ಯಾಭ್ಯಾಂ ತತ್ಪ್ರಕೃತೌ ಗ್ರಾಹ್ಯಃ । 'ವಿನಿಶ್ಚಯಾತ್' ಏವಾರ್ಥೋऽಯಂ ಶಬ್ದಃ ।।

ಸತ್ಯಭೇದಾವಿತಿ ಬಹುವ್ರೀಹಿಃ । ಯಥಾ ಸತ್ಯಭೇದೌ ತಥೈವ ವಿದ್ಯಮಾನಾನತಿಕ್ರಮೇಣ ಜ್ಞಾತೇನ 'ಸತ್ಯೇನ' ಸತ್ಯಭೇದೇನ ಭೇದಸತ್ಯತ್ವಜ್ಞಾನಾಖ್ಯಕಾರಣೇನೇತಿ ಯಾವತ್ । 'ಸಹಕೇಶವಾಃ' ಇತ್ಯೇಕಂ ಪದಂ, ಕೇಶವಸಹಿತಾ ದೇವಾಃ 'ತ್ರಾಯಂತು' ಅಸ್ಮಾನ್ ರಕ್ಷಂತ್ವಿತ್ಯರ್ಥಃ । ಇತ್ಯಾದೇರ್ವಾಕ್ಯಾನ್ನಾಸತ್ಯೋ ಭೇದಃ, ಕಿಂತು – ಸತ್ಯ ಏವೇತಿ ಜ್ಞಾಯತ ಇತ್ಯರ್ಥಃ ।।

ಅತ್ರ ಪೂರ್ವವಾಕ್ಯೇ ಜೀವೇಶಭೇದಸ್ಯ ದೃಷ್ಟಾಂತತ್ವೇನೋಪಾದಾನಾತ್ ಪ್ರಾಮಾಣಿಕತ್ವಂ ಜ್ಞಾಯತೇ, ತಾದೃಶಸ್ಯೈವ ದೃಷ್ಟಾಂತತ್ವಾತ್ । ದ್ವಿತೀಯೇ ತು ವಿಷಯಾನತಿಕ್ರಮೇಣ ಭೇದಸತ್ಯತ್ವಜ್ಞಾನಸ್ಯ ತ್ರಾಣಕಾರಣತ್ವೋಕ್ತ್ಯಾ ಭೇದಸತ್ಯತ್ವಮಪಿ ಜ್ಞಾಯತ ಇತಿ ಪ್ರಕೃತಸಙ್ಗತಿಃ ।।

ಆದಿಪದೇನ ಗ್ರಾಹ್ಯವಚನಾನಿ ತತ್ತ್ವಪ್ರದೀಪೇ ಉದಾಹೃತಾನಿ । ತಥಾಹಿ -

श्रीपद्मनाभतीर्थविरचितसत्तर्कदीपावळिः

ॐ विशेषणाच्च ॐ ।। १-२-१२ ।।

'अक्षरं ब्रह्म यत्परम्' इति ब्रह्मशब्देन विशेषितत्वादपि ऋतपातृत्वं द्विरूप-

'द्वौ भूतसर्गौ लोकेऽस्मिन् दैव आसुर एव च ।
दैवो विस्तरशः प्रोक्त आसुरं पार्थ मे शृणु ।।
असत्यमप्रतिष्ठं ते जगदाहुरनीश्वरम् ।। इत्यारभ्य –
'तानहं द्विषतः क्रूरान् संसारेषु नराधमान् ।
क्षिपाम्यजस्रमशुभानासुरीष्वेव योनिषु ।।' इति भगवद्वचनम् । (भ.गी. १६-६, १९.)
'असत्यमप्रतिष्ठं ते जगदाहुरनीश्वरम् ।
त आसुराः स्वयं नष्टाः जगतः क्षयकारिणः ।।' इति व्यासस्मृतिः ।
'इन्द्रासोमा तपतं रक्ष उज्जतं न्यर्पयतं वृषणा तमोवृधः ।
पराशृणीतमचितो न्योषतं हतं नुदेथां निशितीतमत्रिणः ।।'(ऋ. ७-१०४-१.)
'इन्द्रासोमा वर्तयतं दिवस्पर्यग्नितप्तेभिर्युवमश्महन्मभिः ।
तपुर्वधेभिरजरेभिरत्रिणः' (ऋ. ७-१०४-५.) इत्यादिका श्रुतिः ।
'येषां भिज्जगदीश्वरजीवानां नास्ति तेऽत्रिणः ।
स्वाज्ञानकल्पितजगत्परमेश्वरस्य
जीवस्य भेदकलुषीकृतभूमभावे ।' (इति हि मायिनो वदन्ति ।)
'आच्छाद्य विक्षिपति संस्फुरदात्मतत्त्वम् ।
जीवेश्वरस्य जगदाकृति तन्मृषैव ।।' इत्यादि च ।
'त्रिर्यातुधानः प्रसितिं तयेत्वृतं यो अग्ने अनृतेन हन्ति ।।' (ऋ. १०-८७-११.)
'वाचा स्तेनं शरव ऋच्छन्तु मर्मन् विश्वस्यैतु प्रसितिं यातुधानः ।' (ऋ.१०-८७-१५.)
'अथ ज्ञानोपसर्गाः' इत्यारभ्य 'ये चान्ये मिथ्यातर्कैर्दृष्टान्तैः कुहकेन्द्रजालैर्वैदिकेषु
परिस्थातुमिच्छन्ति तैः सह न संवसेत् । प्रकाश्या ह्येते तस्करा अस्वर्ग्याः' (मैत्री. ७-८)
इत्यादिश्रुतिशतैरन्धं तम एव मायिनां गतिरिति निश्चीयते । तथा च स्कान्दे -
'सर्वब्रह्मत्ववेत्तारो जीवब्रह्मत्ववेदिनः ।
अन्यसाम्यविदो विष्णोः विष्णुद्वेष्टार एव च ।
सर्वे यान्ति तमो घोरं न तेषामुत्थितिः क्वचित् ।।' इति ।।
।। इति गुहाधिकरणम् ।। ३ ।।

ವಿಷ್ಣೋರಿತ್ಯೇತತ್ಪ್ರತಿಪಾದಯತ್ಸೂತ್ರಮುಪನ್ಯಸ್ಯ ವ್ಯಾಚಷ್ಟೇ – ವಿಶೇಷಣಾದಿತ್ಯಾದಿನಾ ।। ಬ್ರಹ್ಮಶಬ್ದಸ್ಯ ವಿಷ್ಣ್ವೇಕಪರತ್ವಂ ಪುರಾಣವಚನೇನ ಪ್ರತಿಪಾದಯತಿ – ಪೃಥಗಿತಿ ।। ಗುಹಾಂ ಪ್ರವಿಷ್ಟಾವಿತಿ ಜೀವಪರಮಾತ್ಮಾನಾವಭಿಧೀಯೇತೇ ಇತಿ ವದನ್ತಂ ಪ್ರತ್ಯಾಹ – ನ ಜೀವೇ ಸಮನ್ವಯ ಇತಿ ।। ನನು ಜೀವಸ್ಯ ಪರಮಾತ್ಮಾಭಿನ್ನತ್ವೇನ ಪರಮಾತ್ಮವಜ್ಜೀವೇಽಪಿ ಶ್ರುತಿಸಮನ್ವಯಪ್ರತಿಪಾದನಂ ನ ಪೂರ್ವಾಸಙ್ಗತಮಿತ್ಯಾಶಙ್ಕ್ಯ ಶ್ರುತಿಪುರಾಣವಚನೈಃ ಪರಿಹರತಿ – ಸತ್ಯ ಇತ್ಯಾದಿನಾ ।। ಅರುರ್ವ್ರಣಾಪರಪರ್ಯಾಯಃ । ಸ್ವದೋಷದರ್ಶಿಭಿಃ ಆರ್ಯೈಃ ವನ್ಯೋ ವನನೀಯೋ ಭಜನೀಯೋ ನೈವ ಭವತಿ । ವಿಷ್ಣೋರ್ನಿರವದ್ಯಸ್ಯ ಸ್ವದೋಷಜ್ಞಾನಿಷು ಪ್ರೀತ್ಯಭಾವಾತ್ । ಅತೋ ದೋಷಿಭ್ಯೋ ಜೀವೇಭ್ಯೋ ಅತ್ಯನ್ತಭಿನ್ನತಯಾ ಜಾನದ್ಭಿರೇವ ವಿಷ್ಣುರ್ಭಜನೀಯೋ ನಾನ್ಯಥೇತ್ಯರ್ಥಃ ।।

।। ಇತಿ ಸತ್ತರ್ಕದೀಪಾವಳ್ಯಾಮ್ ಗುಹಾಧಿಕರಣಮ್ ।।

'ಅಕ್ಷರಂ ಬ್ರಹ್ಮ ಯತ್ ಪರಮ್' ಎಂಬ ಶ್ರುತಿಯಲ್ಲಿ ಬ್ರಹ್ಮಶಬ್ದವನ್ನು ವಿಶೇಷಣವನ್ನಾಗಿ ಹೇಳಿದ್ದರಿಂದ ವಿಷ್ಣುವಿನ ಎರಡು ರೂಪಗಳೇ ಋತಪಾತೃತ್ವ ಧರ್ಮವನ್ನು ಹೊಂದಿವೆಯೆಂಬ ವಿಷಯವನ್ನು ಪ್ರತಿಪಾದಿಸುತ್ತಾ ಸೂತ್ರವನ್ನು ಉಪನ್ಯಾಸಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ವಿಶೇಷಣಾತ್'' ಇತ್ಯಾದಿಯಾಗಿ. ಬ್ರಹ್ಮ ಶಬ್ದವು ಕೇವಲ ವಿಷ್ಣುವನ್ನು ಪ್ರತಿಪಾದಿಸುತ್ತದೆನ್ನಲು ಪ್ರಮಾಣವಚನವನ್ನು ಆಧಾರವನ್ನಾಗಿ ಹೇಳುತ್ತಿದ್ದಾರೆ ''ಪೃಥಕ್'' ಇತ್ಯಾದಿಯಾಗಿ. ಗುಹಾಪ್ರವಿಷ್ಟರಾದವರು ಜೀವ ಹಾಗೂ ಪರಮಾತ್ಮರೆಂದು ಯಾರು ಹೇಳುತ್ತಾರೋ ಅವರನ್ನು ಕುರಿತು ''ನ ಜೀವೇ '' ಎಂದು ಉತ್ತರಿಸುತ್ತಿದ್ದಾರೆ.

ಜೀವನು ಪರಮಾತ್ಮನಿಗಿಂತ ಅಭಿನ್ನನಾಗಿದ್ದಾನೆ. ಆದ್ದರಿಂದ ಪರಮಾತ್ಮನಿಗಿಂತ ಜೀವನಲ್ಲಿ ಮಾಡುವ ಶ್ರುತಿ ಸಮನ್ವಯವು ಅಸಂಗತವಾಗುವುದಿಲ್ಲವೆಂದು ಆಶಂಕಿಸಿ ಶ್ರುತಿ ಹಾಗೂ ಪುರಾಣಗಳ ಮಾತಿನಿಂದ ಪರಿಹರಿಸುತ್ತಿದ್ದಾರೆ ''ಸತ್ಯ'' ಇತ್ಯಾದಿಯಾಗಿ. ''ಆರುವರ್ಣ್ಯ'' ಶಬ್ದಕ್ಕೆ ಏನು ಅರ್ಥ ? ವಿಷ್ಣುವಿನಲ್ಲಿರುವ ದೋಷಗಳನ್ನು ಕಾಣುವವರು 'ಆರು' ಎನಿಸುತ್ತಾರೆ. ಅವರಿಂದ ಭಜಿಸಲ್ಪಡುವವನು 'ವರ್ಣ್ಯ' ಎನಿಸುತ್ತಾನೆಂಬ ಅರ್ಥವು ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ ಇದು ತಪ್ಪು. ವಿಷ್ಣುವಿನಲ್ಲಿರುವ ದೋಷಗಳನ್ನು ಕಾಣುವವರಲ್ಲಿ ನಿರವದ್ಯವಾದ ವಿಷ್ಣುವಿಗೆ ಪ್ರೀತಿ ಹುಟ್ಟಲು ಸಾಧ್ಯವಿಲ್ಲ. ಆದ್ದರಿಂದ ದೋಷಿಗಳಾದ ಜೀವರುಗಳಿಂದ ಅತ್ಯಂತ ಭಿನ್ನನಾಗಿ ವಿಷ್ಣುವನ್ನು ಯಾರು ಭಜಿಸುತ್ತಾರೋ ಅಂತಹವರಿಂದ ಮಾತ್ರ ವಿಷ್ಣು ಭಜನೀಯನಾಗಿದ್ದಾನೆ. ಹೀಗೆಯೇ ಆರುವರ್ಣ್ಯ ಶಬ್ದಕ್ಕೆ ಅರ್ಥವನ್ನು ಹೇಳಬೇಕು.

ಇಲ್ಲಿಗೆ ಸತರ್ಕದೀಪಾವಳಿಯ ಕನ್ನಡಾನುವಾದದಲ್ಲಿ ಗುಹಾಧಿಕರಣವು ಸಮಾಪ್ತವಾಯಿತು.

ಶ್ರೀಕೃಷ್ಣಾರ್ಪಣಮಸ್ತು

ಪರಿಪೂರ್ಣಚಂದ್ರಿಕಾ

तत्वप्रकाशिका –

ॐ विशेषणाच्च ॐ ।। १-२-१२ ।।

एवं निरवकाशलिङ्गस्य सावकाशश्रुतितोऽपि प्राबल्याद् विष्णोर्भोक्तृत्वसम्भवाच्च स एव पातेति सिद्ध्यति किमु निरवकाशश्रुत्यापीत्यर्थं प्रतिपादयत् सूत्रं पठित्वा तदभिप्रेतश्रुतिमेवोदाहरति – विशेषणाच्चेति ।। 'यः सेतुः' इति पिबतोरेकवचनेन विशेषणात् । एक एव पाता । स च ब्रह्मत्वविशेषणाच्च विष्णुरेवेति भावः ।

ಗುಹಾಪ್ರವಿಷ್ಟತ್ವವೆಂಬ ನಿರವಕಾಶಲಿಂಗವು ಸಾವಕಾಶವಾದ "ಪಿಬಂತೌ" ಎಂಬ ಶ್ರುತಿಗಿಂತ ಪ್ರಬಲವಾಗಿರುವುದರಿಂದ ವಿಷ್ಣುವಿಗೆ ಶುಭಕರ್ಮಫಲಭೋಕ್ತೃತ್ವ ಕೂಡುತ್ತದೆ. ಆದ್ದರಿಂದ ವಿಷ್ಣುವೇ ಭೋಕ್ತೃ ಎಂದು ಹಿಂದಿನ ಸೂತ್ರದಿಂದ ಸಿದ್ಧವಾಯಿತು. ವಿಷ್ಣುವಿಗೆ ಭೋಕ್ತೃತ್ವವನ್ನು ದೃಢೀಕರಿಸಲು ನಿರವಕಾಶವಾದ ಶ್ರುತಿಯನ್ನೂ ಸಹ ಪ್ರಮಾಣವಾಗಿ ಪ್ರತಿಪಾದನೆ ಮಾಡಲು ಸೂತ್ರವನ್ನು ಹೇಳಿ, ಸೂತ್ರಕಾರರಿಗೆ ಅಭಿಪ್ರೇತವಾದ ಶ್ರುತಿಯನ್ನು ಉದಾಹರಿಸುತ್ತಿದ್ದಾರೆ "ವಿಶೇಷಣಾಚ್ಚ" ಎಂಬುದರಿಂದ.

"ಋತಂ ಪಿಬಂತೌ" ಎಂಬ ಕಾಠಕದ ಮುಂದಿನ ಮಂತ್ರವು " ಯಃ ಸೇತುಃ" ಎಂದು ಇದೆ. "ಪಿಬಂತೌ" ಎಂದು ಹಿಂದೆ ಪ್ರಸಕ್ತರಾದ ಭೋಕ್ತೃಗಳನ್ನು ಇಲ್ಲಿ "ಯಃ ಸೇತುಃ" ಎಂದು ಏಕವಚನದಿಂದ ವಿವೇಚನೆ ಮಾಡಿದ್ದಾರೆ. ಆದ್ದರಿಂದ ಕರ್ಮಫಲ ಭೋಕ್ತೃ ಒಬ್ಬನೇ ಎಂದು ಶ್ರುತಿಯ ಅಭಿಪ್ರಾಯ. ಅಲ್ಲದೆ ಮುಂದೆ ಆ ಭೋಕ್ತೃವಿಗೆ 'ಬ್ರಹ್ಮ' ಎಂಬ ವಿಶೇಷಣವು ಇದೆ. ಆದ್ದರಿಂದ ಭೋಕ್ತೃನಾದವನು ವಿಷ್ಣುವೇ ಎಂದು ನಿಶ್ಚಯವಾಗುತ್ತದೆ.

तत्वप्रकाशिका – ब्रह्मशब्दस्य भगवदेकवाचित्वं स्मारयति – पृथगिति ।। तस्य गुणा अमितत्वतो विविच्य यतो वक्तुं न शक्यन्तेऽतस्तस्मिन् ब्रह्मशब्दः प्रयुज्यते । यतो ब्रह्मशब्देन सर्वगुणानां ग्रहणं भवेत् ।

एवं सर्वगुणवाची यतो ब्रह्मशब्द एतस्माद् विष्णोरेव वाचको नान्येषां तस्यैवाऽमितगुणत्वात् । तं विनाऽन्येषां तदभावादित्यर्थः ।

ಬ್ರಹ್ಮಶಬ್ದವು ಕೇವಲ ಪರಮಾತ್ಮವಾಚಕವೆಂಬುದನ್ನು "ಪೃಥಕ್" ಎಂಬ ಬ್ರಹ್ಮಪುರಾಣದ ಮಾತಿನಿಂದ ನೆನಪಿಸುತ್ತಿದ್ದಾರೆ. ಪರಮಾತ್ಮನ ಗುಣಗಳು ಅನಂತವಾಗಿರುವುದರಿಂದ ಪ್ರತ್ಯೇಕವಾಗಿ ಹೇಳಲು ಸಾಧ್ಯವಿಲ್ಲದ ಕಾರಣ ಆ ಗುಣಗಳನ್ನು ಬ್ರಹ್ಮಶಬ್ದದಿಂದ ಪ್ರಯೋಗಿಸುತ್ತಾರೆ. ಆದ್ದರಿಂದ ಬ್ರಹ್ಮಶಬ್ದದ ಬಲದಿಂದ ಆ ಎಲ್ಲಾ ಗುಣಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಈ ರೀತಿಯಾಗಿ

ಅನಂತಗುಣಗಳನ್ನು ಹೇಳುವ ಬ್ರಹ್ಮಶಬ್ದವಿರುವುದರಿಂದ ವಿಷ್ಣುವೇ ಕರ್ಮಫಲ ಭೋಕ್ತೃವೆಂದು ಶ್ರುತಿಯಲ್ಲಿ ಹೇಳಲ್ಪಟ್ಟಿದ್ದಾನೆ ಹೊರತು ಅನ್ಯರಲ್ಲ. ಏಕೆಂದರೆ ವಿಷ್ಣು ಅನಂತಗುಣಗಳಿಂದ ಯುಕ್ತನಾಗಿದ್ದಾನೆ. ವಿಷ್ಣುವನ್ನು ಹೊರತು ಅನ್ಯರು ಅನಂತ ಗುಣಗಳನ್ನು ಹೊಂದಿರುವುದಿಲ್ಲ.

तत्वप्रकाशिका – एवं सूत्रद्वयं व्याख्याय परकृतापव्याख्यां निराकरोति – नचेति ।। अत्र प्रतीतौ पिबन्तौ किं बुद्धिजीवौ जीवेश्वरौ वेति सन्देहे बुद्धिजीवाविति प्राप्ते सिद्धान्तितम् । जीवेश्वरावेतौ भवतोऽन्यतरस्य पातृत्वेन जीवत्वे सिद्धे द्वितीयस्य चेतनतयैव भाव्यत्वात् । 'अस्य गोर्द्वितीयोऽन्वेष्टव्यः' इत्यादौ सजातीयग्रहणस्यैव लोके दर्शनादिति व्याख्यानमयुक्तम्, समन्वयासङ्गतत्वात् । न ह्यस्मिन्नध्याये जीवे समन्वयोऽभिधीयते । येन जीवेश्वरावेताविति साधनं सङ्गतं स्यादतो नासौ व्याख्या युक्तेति भावः।

ಈ ರೀತಿಯಾಗಿ ಎರಡು ಸೂತ್ರಗಳಿಗೆ ವ್ಯಾಖ್ಯಾನ ಮಾಡಿ, ಇತರರು (ಶಂಕರಾಚಾರ್ಯರು) ಮಾಡಿರುವ ಅಪವ್ಯಾಖ್ಯಾನವನ್ನು ''ನಚ'' ಇತ್ಯಾದಿ ಮಾತುಗಳಿಂದ ನಿರಾಕರಣೆ ಮಾಡುತ್ತಿದ್ದಾರೆ.

ಶಾಂಕರ ಭಾಷ್ಯದಲ್ಲಿ ''ಪಿಬಂತೌ'' ಶಬ್ದಕ್ಕೆ ಅರ್ಥವನ್ನು ಹೇಳಬೇಕಾದರೆ ಸಂದೇಹವನ್ನು ಈ ರೀತಿಯಾಗಿ ಹೇಳುತ್ತಾರೆ - ''ಪಿಬಂತೌ'' ಶಬ್ದದಿಂದ ವಾಚ್ಯರಾದವರು ಬುದ್ಧಿಜೀವರೊ? ಅಥವಾ ಜೀವೇಶ್ವರರೋ? ಎಂದು. ಬುದ್ಧಿಜೀವರೆಂದು ಪೂರ್ವಪಕ್ಷ ಮಾಡಿಕೊಂಡು ಈ ರೀತಿಯಾಗಿ ಸಿದ್ಧಾಂತ ಮಾಡುತ್ತಾರೆ - ಇಲ್ಲಿ ಜೀವೇಶ್ವರರನ್ನೇ ತೆಗೆದುಕೊಳ್ಳಬೇಕು. ಏಕೆಂದರೆ, 'ಪಿಬಂತೌ' ಎಂಬುದರಿಂದ ಪ್ರತೀತವಾಗುವ ಇಬ್ಬರ ಮಧ್ಯದಲ್ಲಿ ಒಬ್ಬನಿಗೆ ಕರ್ಮಫಲ ಭೋಗವನ್ನು ಹೇಳಬಹುದು. ಅವನು ಜೀವನೇ ಆಗಿದ್ದಾನೆ. ಅಂತಹ 'ಪಿಬಂತೌ' ಶಬ್ದದಿಂದ ಇನ್ನೊಬ್ಬನನ್ನು ಗ್ರಹಣ ಮಾಡಲು ಯೋಗ್ಯನಾದವನು ಚೇತನನೇ ಆಗಬೇಕು. ಏಕೆಂದರೆ ಯಾವ ರೀತಿಯಾಗಿ ಲೋಕದಲ್ಲಿಯೂ ಸಹ ಒಂದು ಹಸುವನ್ನು ತೋರಿಸಿ ಇದಕ್ಕೆ ಸಮಾನವಾದ ಮತ್ತೊಂದನ್ನು ಹುಡುಕಿರಿ ಎಂದರೆ ಯಾವ ರೀತಿಯಾಗಿ ಹಸುವಿಗೆ ಸಮಾನವಾದ ಮತ್ತೊಂದು ಹಸುವನ್ನೇ ತರುವುದು ಕಂಡಿದೆಯೋ, ಅದರಂತೆ ಇಲ್ಲಿಯೂ ಸಹ ಜೀವನಿಗೆ ಸಮಾನವಾದ ಮತ್ತೊಬ್ಬ ಚೇತನನನ್ನೇ ಹೇಳಬೇಕು. ಆದ್ದರಿಂದ ನಾವು ಜೀವೇಶ್ವರರೆಂದು ಸಿದ್ಧಾಂತ ಮಾಡಿದ್ದು ಸಮರ್ಪಕವಾಗಿದೆಯೆಂದು ಅವರ ವಾದ.

ಆದರೆ ಈ ರೀತಿಯಾಗಿ ವ್ಯಾಖ್ಯಾನ ಮಾಡುವುದು ಯುಕ್ತವಲ್ಲ. ಏಕೆಂದರೆ ಈ ಅಧ್ಯಾಯದ ಉದ್ದೇಶ ಸಕಲ ಶಬ್ದಗಳನ್ನು ಪರಮಾತ್ಮನಲ್ಲಿ ಸಮನ್ವಯ ಮಾಡುವುದೇ ಹೊರತು ಜೀವನಲ್ಲಿ ಅಲ್ಲ. ಆದ್ದರಿಂದ ನೀವು 'ಪಿಬಂತೌ' ಶಬ್ದದಿಂದ ವಾಚ್ಯರಾದವರು ಜೀವೇಶ್ವರರು ಎಂದು ವ್ಯಾಖ್ಯಾನ ಮಾಡಿದ್ದು ಅಸಂಗತವಾಗುತ್ತದೆ.

तत्वप्रकाशिका – नच छायातपत्वविशेषणादेतत् कल्प्यम् । विद्वदविदुषोः सुखदुःखकारणत्वेन तदुपपत्तेः । नहि छायातपशब्दौ विद्याविद्यावद्वाचकौ । किञ्च पिबतोर्बुद्धिजीवत्वे किं छिन्नं किं वा जीवेश्वरत्वे लब्धम् । परेणापि जीवे तदभ्युपगमात् । ईश्वरे समन्वयसिद्धिरिति चेन्न । ईश्वरे लिङ्गस्यौपचारिकत्वाभ्युपगमात् । एवं च जीव एव समन्वयः साधितः स्यात् ततश्च किं पूर्वपक्षिणाऽपराद्धम् । तेनापि पातृत्वस्य बुद्धौ लाक्षणिकत्वाभ्युपगमात् । नात्र जीवे समन्वयकथनमसङ्गतं जीवेशभेदस्यासत्यत्वादित्यत आह – सत्य इति ।। सत्यं सत्या । आरुवण्यो दोषिभिर्भजनीयः । यथा सत्यभेदौ, तथैव ज्ञातेन तेन सत्येन कारणेन । अतो हरिरेव सुकृतफलभोक्तेति न तस्य सर्वात्तृत्वलक्षणायोग इति सिद्धम् ।। १२ ।।

।। इति श्रीमज्जयतीर्थभिक्षुविरचितायां तत्वप्रकाशिकायाम्
गुहाधिकरणम् ।।

''ಛಾಯಾತಪೌ'' ಎಂಬುದನ್ನು ''ಪಿಬಂತೌ'' ಎಂಬುದಕ್ಕೆ ವಿಶೇಷಣವನ್ನಾಗಿ ಹೇಳುತ್ತೇವೆ. ಆದ್ದರಿಂದ ಭೋಗ ಮಾಡುವವರು ಜೀವೇಶ್ವರರೆಂದು ಸಿದ್ಧವಾಗುತ್ತದೆಂದು ಹೇಳಿದರೆ, ಇದು ಸರಿಯಲ್ಲ. ಏಕೆಂದರೆ ಛಾಯತಪತ್ವ ವಿಶೇಷಣವು, ವಿದ್ವಾಂಸರಿಗೆ ಮತ್ತು ಅವಿದ್ವಾಂಸರಿಗೆ ಸುಖದುಃಖ ಕೊಡುವವನೆಂಬರ್ಥದಲ್ಲೇ ಶ್ರುತಿಯು ಹೇಳಿದೆ.

ಆಲ್ಲದೆ - ಭೋಗವನ್ನು ಮಾಡುವವರು ಬುದ್ಧಿಜೀವರು ಎಂದರೆ ಏನು ಹಾನಿ ? ಜೀವೇಶ್ವರರು ಎಂದರೆ ಏನು ಲಾಭ ? ಏಕೆಂದರೆ ಪರಕೀಯರೂ ಸಹ ಪಾನ ಮಾಡುವನನ್ನು ಜೀವನೇ ಎಂದು ಅಂಗೀಕಾರ ಮಾಡಿದ್ದಾರಲ್ಲವೆ? ನೀನು 'ಪಿಬಂತೌ' ಶಬ್ದವನ್ನು ಈಶ್ವರನಲ್ಲಿ ಸಮನ್ವಯ ಮಾಡಲು ಜೀವೇಶ್ವರೌ ಎಂದು ಹೇಳಿದ್ದೆಂದು ಉತ್ತರವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಈಶ್ವರನಲ್ಲಿ ಲಿಂಗವನ್ನು ಔಪಚಾರಿಕವೆಂದು ಒಪ್ಪಿಕೊಂಡಿರುವುದರಿಂದ ಜೀವನಲ್ಲಿಯೇ ಸಮನ್ವಯ ಮಾಡಿದಂತಾಗುತ್ತದೆ. ಹೀಗಿದ್ದ ಮೇಲೆ ಪೂರ್ವಪಕ್ಷಕಾರನು ಏನು ಅಪರಾಧ ಮಾಡಿದಂತಾಯಿತು ? ಏಕೆಂದರೆ ನಿಮ್ಮ ಪೂರ್ವಪಕ್ಷದವನೂ ಸಹ ಕರ್ಮಫಲಭೋಕ್ತೃವು ಬುದ್ಧಿಯಲ್ಲಿ ಔಪಚಾರಿಕವೆಂದು ಸ್ವೀಕಾರ ಮಾಡಿಯೇ ಇದ್ದಾನೆ.

ಪ್ರಶ್ನೆ - 'ಪಿಬಂತೌ' ಶಬ್ದವನ್ನು ಜೀವನಲ್ಲಿ ಸಮನ್ವಯ ಮಾಡುವುದು ಅಸಂಗತವಲ್ಲ. ಏಕೆಂದರೆ ಜೀವೇಶ್ವರಭೇದವು ಸುಳ್ಳಾಗಿದೆ. ಆದ್ದರಿಂದ ಜೀವನಲ್ಲಿ ಸಮನ್ವಯ ಮಾಡಿದರೆ ಈಶ್ವರನಲ್ಲಿಯೇ ಸಮನ್ವಯ ಮಾಡಿದಂತಾಗುತ್ತದಲ್ಲವೆ ?

ಉತ್ತರ - ಈ ಪ್ರಶ್ನೆಗೆ ಉತ್ತರರೂಪವಾಗಿ ಆಚಾರ್ಯರು ಜೀವೇಶ್ವರರ ಭೇದದ ಸತ್ಯತ್ವವನ್ನು 'ಸತ್ಯ ಆತ್ಮಾ' ಎಂಬ ಪೈಂಗೀಶ್ರುತಿಯ ಪ್ರಮಾಣದಿಂದ ಸ್ಥಾಪನೆ ಮಾಡುತ್ತಿದ್ದಾರೆ. ಶ್ರುತಿಯಲ್ಲಿರುವ 'ಸತ್ಯಂ' ಎಂಬುದು 'ಸತ್ಯಾ' ಎಂಬ ಸ್ತ್ರೀಲಿಂಗದ ರೂಪವಾಗಿದೆ. 'ಆರುವಣ್ಯಃ' ಎಂದರೇ ''ದೋಷವುಳ್ಳ ಪುರುಷರಿಂದ ಸೇವ್ಯ'' ಎಂದರ್ಥ.

ಆದ್ದರಿಂದ ಈ ಶ್ರುತಿಯ ಪ್ರಮಾಣದಿಂದ ಪರಸ್ಪರವಾದ ಜೀವೇಶ್ವರರ ಭೇದವು ಸತ್ಯವೆಂದು ಸಿದ್ಧವಾಗುತ್ತದೆ. ಮತ್ತು ಜೀವೇಶ್ವರ ಭೇದಜ್ಞಾನವು ಸತ್ಯವೇ ಆಗಿದೆ. ಆದ್ದರಿಂದ ಜೀವೇಶ್ವರರ ಭೇದವು ಸುಳ್ಳು ಎಂದು ಕಲ್ಪನೆ ಮಾಡಿದ್ದು ಸರಿಯಲ್ಲ.

ಆದ್ದರಿಂದ ಶ್ರೀಹರಿಯೇ ಸತ್ಕರ್ಮಫಲವನ್ನು ಭೋಗ ಮಾಡುವವನೆಂದು ಸಿದ್ಧವಾಗುತ್ತದೆ. ಆದ್ದರಿಂದ ಹಿಂದಿನ ಅಧಿಕರಣದಲ್ಲಿ ಹೇಳಿದ ಸರ್ವಾತ್ಮತ್ವಲಕ್ಷಣವು ಯುಕ್ತವೇ ಎಂದು ಸಿದ್ಧವಾಯಿತು.

॥ ತತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ಗುಹಾಧಿಕರಣವು ಸಮಾಪ್ತವಾಯಿತು ॥

ॐ विशेषणाच्च ॐ ॥ १-२-१२ ॥

भावदीपः – उक्तसमुच्चये सौत्रचशब्द इति व्यञ्जयन्नवतारयति – एवमिति ॥ स एवेति ॥ नतु जीवसहित इत्येवार्थः । द्विवचनान्तं रूपपदं त्यक्त्वा पातेत्युक्तैकवचनान्तस्य तात्पर्यलब्धस्यानुवादस्तु एकवचनेन विशेषणादिति हेत्वन्वयायेति भावः ।

ಸೂತ್ರದಲ್ಲಿರುವ ''ಚ'' ಶಬ್ದವು ಹಿಂದೆ ಹೇಳಿದ ನಿರವಕಾಶವಾದ ಗುಹಾಪ್ರವಿಷ್ಟತ್ವಲಿಂಗವನ್ನು ಮತ್ತು ವಿಷ್ಣುವಿಗೆ ಕರ್ಮಫಲಭೋಕ್ತೃತ್ವವನ್ನು ಸಮುಚ್ಚಯ ಮಾಡುತ್ತದೆಂದು ತಿಳಿಸಲು ಅವತಾರಿಕೆಯನ್ನು ''ಏವಂ'' ಇತ್ಯಾದಿ ವಾಕ್ಯಗಳಿಂದ ಹೇಳುತ್ತಿದ್ದಾರೆ. ಟೀಕೆಯಲ್ಲಿರುವ ''ಸ ಏವ'' ಎಂಬಲ್ಲಿರುವ ಏವಕಾರವು ವಿಷ್ಣುವೇ ಭೋಕ್ತೃವಾಗಿದ್ದಾನೆ ಹೊರತು ಜೀವಸಹಿತನಾಗಿ ಅಲ್ಲವೆಂದು ಸೂಚಿಸುತ್ತದೆ. ಟೀಕೆಯಲ್ಲಿ ದ್ವಿವಚನಾಂತವಾದ ರೂಪಪದವನ್ನು ಹೇಳದೆ, (''ಯಃ ಸೇತುಃ'' ಎಂಬುದರ ತಾತ್ಪರ್ಯದಿಂದ ಲಬ್ಧವಾದ ಏಕವಚನಾಂತವಾದ ''ಪಾತ'' ಎಂದು ಏಕೆ ಹೇಳಿದ್ದಾರೆ ? ಎಂದರೆ ಮುಂದೆ ''ಏಕವಚನೇನ ವಿಶೇಷಣಾತ್'' ಎಂದು ವಿಷ್ಣುವೇ ಭೋಕ್ತೃವೆನ್ನುವ ಕಾರಣಕ್ಕೆ ಅನ್ವಯವನ್ನು ಸೂಚಿಸಲು ಎಂದು ಅಭಿಪ್ರಾಯ.)

ಭಾವದೀಪಃ – ಭಾಷ್ಯಸ್ಯ ಸೂತ್ರೇಣಾನ್ವಯಂ ಮತ್ವಾ 'यः सेतुः' इति चैकत्ववचनेन विशेषणादित्यनुभाष्यदिशाऽऽर्थमाह – **यः सेतुरिति ।।** 'पृथग्' इत्यादिस्मृत्यनुरोधाद् 'ब्रह्म तत्परम्' इत्यन्तवाक्योदाहरणाच्चार्थान्तरं चाऽऽह – **ब्रह्मत्वेति ।।** ब्रह्मशब्दस्यान्यथासिद्धिशङ्कया बीजनिरासेनानुदयादत्र भाष्ये केवलब्रह्मशब्दस्यैव स्मृत्या निरवकाशताप्रदर्शनाच्च ब्रह्मशब्दस्य परत्वविशेषणाच्चेत्यपि व्याख्यानं न कृतम् । अत एव स्मारयतीत्युक्तिः, नतु साधयतीति । यद्वोक्तदिशा तदपि व्याख्यानं सुज्ञानमिति भावः ।

ಭಾಷ್ಯಕ್ಕೆ ಸೂತ್ರದಿಂದ ಅನ್ವಯವನ್ನು ತಿಳಿದು "यः सेतुः इति एकत्ववचनेन विशेषणात्" ಎಂಬ ಅನುವ್ಯಾಖ್ಯಾನದ ಪ್ರಕಾರ "यः सेतुः" ಇತ್ಯಾದಿ ವಾಕ್ಯಗಳಿಂದ ಸೂತ್ರಕ್ಕೆ ಅರ್ಥವನ್ನು ಹೇಳುತ್ತಿದ್ದಾರೆ. "पृथक्" ಇತ್ಯಾದಿ ಸ್ಮೃತಿಯನ್ನು ಅನುಸರಿಸಿ "ಬ್ರಹ್ಮ ತತ್ಪರಂ"ಎಂಬಲ್ಲಿಯ ತನಕ ವಾಕ್ಯವನ್ನು ಉದಾಹರಿಸಿ ಮತ್ತೊಂದು ಅರ್ಥವನ್ನು "ಬ್ರಹ್ಮತ್ವ" ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಬ್ರಹ್ಮಶಬ್ದವು ಅನ್ಯಥಾಸಿದ್ಧವಾಗುತ್ತದೆಂಬ ಶಂಕೆಯ ಬುಡವನ್ನೇ ತುಂಡರಿಸಿದ್ದರಿಂದ ಬ್ರಹ್ಮಶಬ್ದವು ಬೇರೆಯವರನ್ನು ಪ್ರತಿಪಾದಿಸುತ್ತದೆಂಬ ಶಂಕೆಯು ಹುಟ್ಟುವುದಿಲ್ಲ. ಮತ್ತು ಭಾಷ್ಯದಲ್ಲಿ ಕೇವಲ ಬ್ರಹ್ಮಶಬ್ದಕ್ಕೆ ಸ್ಮೃತಿಯ ಆಧಾರದಿಂದ ನಿರವಕಾಶತ್ವವನ್ನು ತೋರಿಸಿದ್ದರಿಂದ ಬ್ರಹ್ಮ ಶಬ್ದಕ್ಕೆ ಪರತ್ವವನ್ನು ವಿಶೇಷಣವನ್ನಾಗಿ ಹೇಳಿದ್ದರಿಂದಲೂ ಬ್ರಹ್ಮಶಬ್ದವನ್ನು ವ್ಯಾಖ್ಯಾನಿಸುತ್ತಿಲ್ಲ. ಅನ್ಯರೀತಿಯಾಗಿ ಅರ್ಥಮಾಡಲು ಬರುತ್ತದೆಂಬ ಶಂಕೆಗೂ ಅವಕಾಶವಿಲ್ಲ. ಆದ್ದರಿಂದ ಭಾಷ್ಯದಲ್ಲಿ ಬ್ರಹ್ಮಶಬ್ದವು ವಿಷ್ಣುವನ್ನೇ ಹೇಳುತ್ತಿದೆಂಬುದನ್ನು ನಿರವಕಾಶವಾದ ಸ್ಮೃತಿಪ್ರಮಾಣದಿಂದ ತೋರಿಸುತ್ತಿದ್ದಾರೆ. ಬ್ರಹ್ಮಶಬ್ದವು ಅನ್ಯರಿಗೆ ವಿಶೇಷಣವನ್ನಾಗಿಯೂ ಸಹ ಹೇಳಲು ಬರುವುದಿಲ್ಲ. ಆದ್ದರಿಂದ ಟೀಕೆಯಲ್ಲಿ "स्मारयति" "ಬ್ರಹ್ಮಶಬ್ದವು ವಿಷ್ಣುವಾಚಿಯಾಗಿದೆಯೆಂದು ನೆನಪಿಸುತ್ತಿದ್ದಾರೆ" ಎಂದು ಹೇಳಿದ್ದಾರೆ ಹೊರತು ಸಾಧಿಸುತ್ತಿದ್ದಾರೆಂದು ಹೇಳಿಲ್ಲ. ಅಥವಾ

ಭಾವದೀಪಃ – स्मारयति, स्मृत्या दर्शयतीत्यर्थः । स्मृतौ यतो वक्तुं न शक्यन्ते, अतः सर्वेषां ब्रह्मशब्देन ग्रहणं भवेदित्यस्य साक्षादनन्वयादेतस्मादित्यनेन परामृश्यमानहेतोरप्रतीतेश्च अत इत्यस्य साध्यमध्याहृत्य योजयति – **तस्येति ।।** पृथक् विविच्य । यत इत्यस्याऽऽवृत्तिं मत्वाऽऽह – **यतो ब्रह्मशब्देनेति ।।** तस्य पर्यवसितार्थमाह – **एवमिति ।।** पृथगित्यादिनोक्तप्रकारेण । एतेन पूर्वार्धमेतस्मादिति हेतूपपादकत्वेन उत्तरार्धैकदेशस्तु एतस्मादित्यस्य विषयं दर्शयितुं प्रवृत्तमिति दर्शितम् ।

ಸ್ಮೃತಿಯಲ್ಲಿ ''ಯತೋ ವಕ್ತುಂ ನ ಶಕ್ಯಂತೇ ಅತಃ ಸರ್ವೇಷಾಂ ಬ್ರಹ್ಮಶಬ್ದೇನ ಗ್ರಹಣಂ ಭವೇತ್'' ಎಂಬಲ್ಲಿಯ ತನಕ ಸಾಕ್ಷಾತ್ತಾಗಿ ಅನ್ವಯವು ತಿಳಿಯುವುದಿಲ್ಲವಾದ್ದರಿಂದ, ಮತ್ತು ''ಏತಸ್ಮಾತ್'' ಎಂಬುದರಿಂದ ಪರಾಮರ್ಶ ಮಾಡುವ ಕಾರಣವೂ ತಿಳಿಯುವುದಿಲ್ಲ. ಆದ್ದರಿಂದ ''ಅತಃ'' ಎಂದು ಸಾಧ್ಯವನ್ನು ಅಧ್ಯಾಹಾರ ಮಾಡಿಕೊಂಡು ''ತಸ್ಯ'' ಇತ್ಯಾದಿ ವಾಕ್ಯಗಳಿಂದ ಯೋಜನೆ ಮಾಡುತ್ತಿದ್ದಾರೆ. ಸ್ಮೃತಿಯಲ್ಲಿ ''ಯತಃ'' ಶಬ್ದದ ಅಭಿಪ್ರಾಯವನ್ನು ''ಯತೋ ಬ್ರಹ್ಮಶಬ್ದೇನ'' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಸ್ಮೃತಿಗೆ ಅಭಿಪ್ರೇತವಾದ ಅರ್ಥವನ್ನು '' ಏವಂ'' ಇತ್ಯಾದಿ ವಾಕ್ಯಗಳಿಂದ ಹೇಳುತ್ತಿದ್ದಾರೆ. ''ಏವಂ'' ಎಂದರೆ ''ಪೃಥಕ್'' ಇತ್ಯಾದಿಯಾಗಿ ಹೇಳಿದ ಸ್ಮೃತಿಯ ಪ್ರಕಾರವಾಗಿ ಎಂದರ್ಥ. ಈ ಪ್ರಕಾರವಾಗಿ ಶ್ರುತಿಯ ಪೂರ್ವಾರ್ಧವು ''ಏತಸ್ಮಾತ್'' ಎಂದು ಹೇತುವನ್ನು ಉಪಪಾದನೆ ಮಾಡಿದರೆ, ಉತ್ತರಾರ್ಧದ ಏಕದೇಶವು ''ಏತಸ್ಮಾತ್'' ಎಂಬುದರ ವಿಷಯವನ್ನು ತೋರಿಸಲು ಪ್ರವೃತ್ತವಾಗಿದೆಯೆಂದು ತೋರಿಸುತ್ತಿದ್ದಾರೆ.

ಭಾವದೀಪಃ – ಏತಸ್ಮಾದಿತ್ಯರ್ಧೋಪಪಾದಕತ್ವೇನ ತದುತ್ತರಾರ್ಧಮಿತಿ ಭಾಷ್ಯಸೂಚಿತಯೋಗ್ಯಸಾಧ್ಯ ಹೇತ್ ಅಭಿಧಾಯ ತದುಪಪಾದಕತಯಾ ನಚೇತ್ಯಾದಿಭಾಷ್ಯಂ ಯೋಜಯಿತುಮಾಹ – **ಅತ್ರೇತಿ ।। ನಚ ಚ್ಛಾಯೇತಿ ।। ಅವಿದ್ಯಾಶ್ರಯತ್ವಪ್ರಕಾಶವತ್ತ್ವರೂಪಚ್ಛಾಯಾತಪತ್ವೇತ್ಯರ್ಥಃ ।। ವಿಚ್ಛದಿತಿ ।। 'ಛಾಯೇವ ವಿದುಷಾಂ ಪ್ರಭುಃ । ಆತಪಃ ಪಾಪಿನಾಮ್' ಇತಿ ಕಾಠಕಭಾಷ್ಯೋಕ್ತಸ್ಮೃತೇರಿತಿ ಭಾವಃ ।। ವಿದ್ಯಾವಿದ್ಯೇತಿ ।। ಯಥಾಯೋಗಮನ್ವಯಃ । ಯದ್ಯಪ್ಯಷ್ಟಮಸ್ಕಂಧತಾತ್ಪರ್ಯನಿರ್ಣಯೇ ಪಞ್ಚಮೇऽಧ್ಯಾಯೇ 'ಛಾಯಾ ತ್ವವಿದ್ಯಾ ಸಂಪ್ರೋಕ್ತಾ ಜನ್ಯವಿದ್ಯಾऽऽತಪಃ ಸ್ಮೃತಃ' ಇತ್ಯುಕ್ತಮ್, ತಥಾಪಿ ತದ್ಗತ್ಯರ್ಥಕತ್ವಂ ತ್ವಪ್ರಾಮಾಣಿಕಮಿತಿ ಭಾವಃ ।**

ಟೀಕೆಯಲ್ಲಿ ''ನ ಚೇತ್ ಛಾಯಾ'' ಎಂದಿದೆ. ಛಾಯಾತಪ ಎಂದರೆ, ''ಛಾಯ = ಅವಿದ್ಯಾಯುಕ್ತ ಸಂಸಾರಿಜೀವ, ಆತಪಃ = ಪ್ರಕಾಶ ರೂಪನಾದ ಪರಮಾತ್ಮ ಎಂದರ್ಥ. ಟೀಕೆಯಲ್ಲಿರುವ ''ವಿದ್ವತ್'' ಎಂದರೆ ''ಛಾಯೇವ ವಿದುಷಾಂ ಪ್ರಭುಃ। ಆತಪಃ ಪಾಪಿನಾಂ'' ಎಂದು ಕಾಠಕ ಭಾಷ್ಯದಲ್ಲಿ ಉದಾಹರಿಸಿರುವ ಸ್ಮೃತ್ಯನುಸಾರಿಯಾಗಿ ಎಂದು ಅಭಿಪ್ರಾಯ. ಟೀಕೆಯಲ್ಲಿರುವ ''ವಿದ್ಯಾವಿದ್ಯ'' ಶಬ್ದಗಳಿಗೆ ಛಾಯಾತಪಗಳಲ್ಲಿ ಯಥಾಯೋಗ್ಯವಾಗಿ ಅನ್ವಯವನ್ನು ಮಾಡಿಕೊಳ್ಳಬೇಕು. (ಛಾಯಾ = ವಿದ್ಯಾ, ಆತಪಃ = ಅವಿದ್ಯಾ). ಆದರೆ ಭಾಗವತದ ಅಷ್ಟಮಸ್ಕಂಧದ ಐದನೆಯ ಅಧ್ಯಾಯದ ತಾತ್ಪರ್ಯದಲ್ಲಿ ''ಛಾಯಾ ತು ಅವಿದ್ಯಾ ಸಂಪ್ರೋಕ್ತಾ ಜನ್ಯವಿದ್ಯಾऽತಪಃ ಸ್ಮೃತಃ'' ಎಂದು ಹೇಳಿದ್ದಾರೆ.

ಭಾವದೀಪಃ – ಭಾಷ್ಯೇ ನಚ ಜೀವೇಶ್ವರಯೋರಿತಿ ವಾಚ್ಯೇ ಜೀವ ಇತ್ಯೇಕವಚನೋಕ್ತ್ಯಾ ಸೂಚಿತಂ ದೋಷಮಾಹ – **ಕಿಞ್ಚೇತಿ ।। ನನು ಭೇದಸ್ಯ ಸತ್ತ್ವೇ ಕುತೋ ನ ಜಾನನ್ತಿ ಕೇಚಿದಿತ್ಯತೋ ಭಾಷ್ಯೇ ಮೈವಾರುತ್ಯ ಇತ್ಯುಕ್ತಮ್ । ತದರ್ಥಮಾಹ – ದೋಷೀತಿ ।। ಅರಾ ದೋಷಾಃ ತದ್ವನ್ತಃ ಆರವಃ 'ವನ ಸಮ್ಭಕ್ತೌ' ಇತಿ ಧಾತುಃ । ಶಪಥತ್ವೇನ ತ್ರಿರುಕ್ತಿರಿತಿ ಭಾವಃ । ತೇನ ಸತ್ಯೇನ ಇತ್ಯತ್ರ**

तच्छब्दपरामृष्टं दर्शयंस्तस्य तत्र हेतुत्वं घटयति – यथेति ।। सत्येन भेदेनेति योज्यम् । सत्येन भेदज्ञानेन कारणेनेत्यर्थः ।

ಒಂದು ವೇಳೆ ಜೀವೇಶ್ವರರ ಭೇದವು ಸತ್ಯವಾಗಿದ್ದ ಪಕ್ಷದಲ್ಲಿ ಕೆಲವರಿಗೆ ಏಕೆ ಅದು ತಿಳಿಯುವುದಿಲ್ಲ ? ಎಂದು ಪ್ರಶ್ನೆ ಬಂದರೆ ಅದಕ್ಕೆ ಉತ್ತರರೂಪವಾಗಿ ಭಾಷ್ಯದಲ್ಲಿ ''ಮೈವಾರುವಣ್ಯಃ'' ಎಂದು ಹೇಳಿದ್ದಾರೆ. ''ಮೈವಾರುವಣ್ಯ'' ಎಂದರೆ ದೋಷವುಳ್ಳವನೆಂದರ್ಥ. ಆರಾಃ = ದೋಷಗಳು, ಆರವಃ = ದೋಷಗಳುವುಳ್ಳವನು, ''ವನಸಂಭಕ್ತೌ'' ಎಂಬ ಧಾತುವಿಗೆ ಅನುಸಾರಿಯಾಗಿ ಈ ಅರ್ಥ ತಿಳಿಯುತ್ತದೆ. ''ಮೈವಾರುವಣ್ಯಃ'' ಎಂದು ಮೂರು ಬಾರಿ ಶ್ರುತಿಯು ಹೇಳುತ್ತಿರುವ ಉದ್ದೇಶ ಪರಮಾತ್ಮನು ದೋಷಿಗಳಿಂದ ಯಾವಕಾಲಕ್ಕೂ ಸೇವ್ಯನಲ್ಲವೆಂಬುದನ್ನು ಶಪಥ ಮಾಡುತ್ತಿದೆ.

भावदीपः – 'ऋतं पिबन्तौ' इत्यत्र विवक्षितऋतशब्दार्थं वदन्नुपसंहरति – अत इति ।। अतो निरवकाशश्रुतिलिङ्गभावादनशनश्रुतिद्विवचनश्रुत्यविरोधाच्चेत्यर्थः । ऋतशब्दः सुकृतमात्रपरो नतु सुकृतदुष्कृतसाधारणकर्ममात्रपरः । 'सुकृतस्य लोके' इति सान्निध्यात् । 'ऋतं सत्यं तथा धर्मः सुकृतं चाभिधीयते' इति स्मृतेश्चेति भावेनोक्तम् – सुकृतफलभोक्तेति ।। इतिशब्दो हेत्वर्थः ।

''ಋತಂ ಪಿಬಂತೌ'' ಎಂಬಲ್ಲಿರುವ ಋತಶಬ್ದಕ್ಕೆ ವಿವಕ್ಷಿತವಾದ ಅರ್ಥವನ್ನು ಹೇಳಿ ''ಅತಃ'' ಇತ್ಯಾದಿ ವಾಕ್ಯಗಳಿಂದ ಉಪಸಂಹಾರ ಮಾಡುತ್ತಿದ್ದಾರೆ. ನಿರವಕಾಶವಾದ ಶ್ರುತಿ ಮತ್ತು ಲಿಂಗಗಳ ಬಲದಿಂದ ''ಅನಶನ'' ಮತ್ತು ''ಪಿಬಂತೌ'' ಎಂಬ ದ್ವಿವಚನಶ್ರುತಿಗಳಿಗೆ ಯಾವ ವಿರೋಧವನ್ನೂ ಹೇಳಲು ಬರುವುದಿಲ್ಲ. ಋತಶಬ್ದವು ಸುಕೃತಮಾತ್ರ ಪರವಾಗಿದೆ ಹೊರತು ಸುಕೃತ ದುಷ್ಕೃತ ಸಾಧಾರಣವಾದ ಕರ್ಮಮಾತ್ರ ಪರವಾಗಿಲ್ಲ. ಏಕೆಂದರೆ ''ಸುಕೃತಸ್ಯ ಲೋಕೇ'' ಎಂದು ಶ್ರುತಿಯಲ್ಲಿಯೇ ಇರುವುದರಿಂದ. ಅಲ್ಲದೆ ''ಋತಂ ಸತ್ಯಂ ತಥಾ ಧರ್ಮಃ ಸುಕೃತಂ ಚಾಭಿಧೀಯತೇ'' (ಋತಂ ಶಬ್ದಕ್ಕೆ ಸತ್ಯ, ಧರ್ಮ ಸುಕೃತ ಎಂದು ಅರ್ಥವಿದೆ) ಎಂದು ಸ್ಮೃತಿಯು ಇದೆ. ಆದ್ದರಿಂದಲೇ ''ಸುಕೃತ ಫಲ ಭೋಕ್ತಾ'' ಎಂದು ಟೀಕೆಯಲ್ಲಿ ಹೇಳಿದ್ದಾರೆ. ''ಇತಿ'' ಶಬ್ದವು ಕಾರಣಪರವಾಗಿದೆ.

भावदीपः – शेषेण फलोक्तिः । यदत्र केनचिदत्तेत्यादिविशेषणाच्चेत्यन्त-सूत्राणामैकाधिकरण्यमुपेत्याधिकरणभेदे दोषोद्भावनं तच्चन्द्रिकायां निरस्तम् । यदपि सूत्राक्षरास्वारस्यवर्णनं तदपि तन्त्रदीपिकायां प्रतिपदं स्वारस्यवर्णनान्निरस्तं ध्येयम् ।। १२ ।।

।। इति राघवेन्द्रयतिकृते भावदीपे गुहाधिकरणम् ।।

ಗುಹಾಧಿಕರಣ (೧-೨-೩)

ಕೊನೆಯಲ್ಲಿ ಒಟ್ಟು ಅಧಿಕರಣದ ಫಲವನ್ನು ಹೇಳಿದ್ದಾರೆ - ಕೆಲವರು ''ಅತ್ತಾ ಚರಾಚರಗ್ರಹಣಾತ್'' ಎಂಬ ಸೂತ್ರದಿಂದ ಆರಂಭಿಸಿ ''ವಿಶೇಷಣಾಚ್ಚ'' ಎಂಬ ಸೂತ್ರದ ತನಕ ಒಂದೇ ಅಧಿಕರಣವೆಂದು ಹೇಳಿದ್ದಾರೆ. ಅಲ್ಲದೆ ಎರಡು ಪ್ರತ್ಯೇಕ ಅಧಿಕರಣವೆಂದು ಪರಿಗಣಿಸಿದ ಬಗ್ಗೆ ದೋಷಗಳನ್ನೂ ಹೇಳಿದ್ದಾರೆ. ಆ ಎಲ್ಲಾ ದೋಷಗಳನ್ನು ಚಂದ್ರಿಕೆಯಲ್ಲಿ ನಿರಾಕರಣೆ ಮಾಡಿದ್ದಾರೆ. ಕೆಲವರು ಸೂತ್ರಗಳ ಅಕ್ಷರಗಳಿಗೆ ಅಸ್ವಾರಸ್ಯವನ್ನು ವರ್ಣನೆ ಮಾಡಿದ್ದಾರೆ. ಅವುಗಳನ್ನೂ ಸಹ ತಂತ್ರದೀಪಿಕೆಯಲ್ಲಿ ಪ್ರತಿಪದಗಳಿಗೆ ಸ್ವಾರಸ್ಯ ವರ್ಣನೆ ಮಾಡುವ ಮೂಲಕ ನಿರಾಕರಣೆ ಮಾಡಲಾಗಿದೆ. ಅವುಗಳನ್ನು ಅಲ್ಲಿಯೇ ತಿಳಿಯಬೇಕು.

॥ ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ಗುಹಾಧಿಕರಣವು ಸಮಾಪ್ತವಾಯಿತು ॥

वाक्यार्थमञ्जरी - ।। ॐ **विशेषणाच्च** ॐ ।। एकवचनसेतुत्वब्रह्मत्वादिना पिबतोर्विशेषितत्वाच्च तावात्मानावेव न जीवेशावित्यर्थः । स्मारयति स्मृत्या दर्शयति । अत इत्यनन्तरमपेक्षितं पूरयति । तस्मिन् ब्रह्मशब्दः प्रयुज्यत इति ।। **यत इति** ।। अनेन यतः शब्दावृत्तिर्दर्शिता । अत्र काठके ।। **समन्वयसङ्गत्वादिति** ।। समन्वयाभिधायकैतदध्यायासङ्गतत्वादित्यर्थः ।। **छायातपत्वविशेषणादिति** ।। तयोः क्रमेण विद्याविद्यावद्वाचकत्वेन तादृशयोश्च जीवेशान्यत्वायोगादिति भावः । विनिगमनाविरहादुक्तमेवास्त्वित्यत आह – **नहीति** ।। अनुशासनाभावाद् अस्मत्पक्षे तु छायेव विदुषां प्रभुः आतपः पापिनामिति विनिगमकमस्त्येवेति भावः । न केवलमेतदसङ्गतं किन्तु व्यर्थं चेत्याह – **किञ्चेति** ।। समन्वयसिद्धिरित्यनन्तरं लब्धेति लिङ्गव्यत्ययेनानुवर्तते । एवम् एवं सति । मयेश्वरे लिङ्गस्यौपचारिकत्वाङ्गीकारेण जीवमात्रे समन्वयसिद्धावपि तन्मते कथमित्यत आह – **तेनापीति** ।। शङ्कते – **नात्रेति** ।। तथाच जीवे समन्वयईश्वर एव सिद्ध्यतीति भावः । अराः दोषाः तद्वन्तः अरवः । स्वरूपसतः कारणत्वायोगादाह – **तयैव ज्ञातेनैवेति** ।।

।। इति श्रीशर्कराश्रीनिवासविचचिता वाक्यार्थमञ्जर्याम् गुहाधिकरणम् ।।

***

ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ, ಗುರುರಾಜೀಯ,
ಭಾಟ್ಟಸಂಗ್ರಹ, ಶಂಕರಭಾಷ್ಯ, ಭಾಮತೀ,ಶ್ರೀಭಾಷ್ಯ, ಶ್ರುತಪ್ರಕಾಶ
ಇವುಗಳ ಆಯ್ದ ಭಾಗಗಳು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥
॥ ಶ್ರೀಮಧ್ವರಾಜೋ ವಿಜಯತೇತರಾಮ್ ॥
॥ ಶ್ರೀಗುರುಭ್ಯೋ ನಮಃ ॥

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯವ್ಯಾಸತೀರ್ಥವಿರಚಿತಾ

ತಾತ್ಪರ್ಯಚಂದ್ರಿಕಾ

अथ गुहाधिकरणम्

ಅವಾಂತರ ಸಂಗತಿ ನಿರೂಪಣೆ

॥ ॐ गुहां प्रविशात्मानौ हि तद्दर्शनात् ॐ ॥

पूर्वत्रादितिप्रातिपदिकश्रुतिबलादन्यत्रप्रसिद्धक्रियालिङ्गसमन्वय उक्तः, अत्र तु 'पिबन्तौ' इति प्रत्ययश्रुतिबलादन्यत्रप्रसिद्धक्रियालिङ्गसमन्वय उच्यत इत्यवान्तरसङ्गतिः ।

ಅನುವಾದ - ಹಿಂದಿನ ಅಧಿಕರಣದಲ್ಲಿ ಅದಿತಿಪ್ರಾದಿಪದಿಕವೆಂಬ ಶ್ರುತಿಯ ಬಲದಿಂದ ಅನ್ಯತ್ರಪ್ರಸಿದ್ಧವೆನಿಸಿದ ಕ್ರಿಯಾರೂಪವಾದ ಲಿಂಗವನ್ನು ಸಮನ್ವಯ ಮಾಡಿದ್ದಾಯಿತು. ಈ ಅಧಿಕರಣದಲ್ಲಿ 'ಪಿಬಂತೌ' ಎಂಬ ಶ್ರುತಿಯಲ್ಲಿ ದ್ವಿವಚನವು ಕೇಳಿಸುತ್ತಿದೆ. ದ್ವಿವಚನಪ್ರತ್ಯಯ ಶ್ರುತಿಯ ಬಲದಿಂದ ಅನ್ಯತ್ರಪ್ರಸಿದ್ಧವಾದ ಕರ್ಮಫಲಾತೃತ್ವವೆಂಬ ಕ್ರಿಯಾರೂಪವಾದ ಲಿಂಗವನ್ನು ಸಮನ್ವಯ ಮಾಡುತ್ತಿದ್ದಾರೆ. ಹೀಗೆ ಅವಾಂತರ ಸಂಗತಿಯನ್ನು ತಿಳಿಯಬೇಕು.

ಶ್ರೀರಾಘವೇಂದ್ರತೀರ್ಥವಿರಚಿತ

ಪ್ರಕಾಶ

प्रकाशः – ॐ गुहां प्रविशात्मानौ हि तद्दर्शनात् ॐ ॥ पूर्वसङ्गतिमाह – **पूर्वत्रेति । क्रियेति ।** अदनरूपक्रियेत्यर्थः । **प्रत्ययेति ।** द्विवचनरूपेत्यर्थः । **क्रियेति । कर्मफलभोक्तृत्वरूपेत्यर्थः ।**

प्रकृतिप्रत्यययोः पौर्वापर्यात्तन्मूलपूर्वपक्षनिरासकयोरप्यधिकरणयोः पौर्वापर्यमित्युक्तं भवति ।

ವಿವರಣೆ - ಗುಹಾದಿಕರಣವು ಪ್ರಾರಂಭವಾಗುತ್ತಿದೆ. ಪ್ರಾರಂಭದಲ್ಲಿ ಹಿಂದಿನ ಅಧಿಕರಣದಿಂದ ಅವಾಂತರಸಂಗತಿಯನ್ನು 'ಪೂರ್ವತ್ರ' ಇತ್ಯಾದಿ ವಾಕ್ಯದಿಂದ ನಿರೂಪಿಸುತ್ತಿದ್ದಾರೆ. ಹಿಂದಿನ ಅಧಿಕರಣದಲ್ಲಿ ಕ್ರಿಯಾಲಿಂಗಸಮನ್ವಯವನ್ನು ಮಾಡಿದ್ದಾರೆಂಬುದಕ್ಕೆ ಅದನರೂಪವಾದ ಕ್ರಿಯಾಲಿಂಗವನ್ನು ಸಮನ್ವಯ ಮಾಡಿದ್ದಾರೆಂದರ್ಥ. ಈ ಅಧಿಕರಣದಲ್ಲಿ ಪ್ರತ್ಯಯಶ್ರುತಿ ಸಮನ್ವಯ ಎಂದರೆ 'ಪಿಂಬತೌ' ಎಂಬಲ್ಲಿ ಕೇಳಿಸುತ್ತಿರುವ ದ್ವಿವಚನರೂಪವಾದ ಪ್ರತ್ಯಯ ಎಂದರ್ಥ. ಮತ್ತು ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಕ್ರಿಯೆಯೆಂದರೆ ಕರ್ಮಫಲಭೋಕ್ತೃತ್ವರೂಪವಾದ ಕ್ರಿಯೆಯೆಂದರ್ಥ.

ಹಿಂದಿನ ಅಧಿಕರಣದಲ್ಲಿ ಅದಿತಿಯೆಂಬ ಪ್ರಕೃತಿಶ್ರುತಿಯ ಸಾಮರ್ಥ್ಯದಿಂದ ತಿಳಿಯುವ ಲಿಂಗವನ್ನು ಸಮನ್ವಯ ಮಾಡಲಾಯಿತು. ಈ ಅಧಿಕರಣದಲ್ಲಿ ಪ್ರತ್ಯಯ ಶ್ರುತಿಯಿಂದ ತಿಳಿಯುವ ಲಿಂಗವನ್ನು ಸಮನ್ವಯ ಮಾಡುತ್ತಿದ್ದಾರೆ. ಪ್ರಕೃತಿ ಮತ್ತು ಪ್ರತ್ಯಯಗಳಲ್ಲಿ ಪ್ರಕೃತಿಯು ಮೊದಲು ಉಪಸ್ಥಿತವಾಗಿ ಅನಂತರ ಪ್ರತ್ಯಯದ ಉಪಸ್ಥಿತಿ ಬರುವುದರಿಂದ ಈ ಕ್ರಮದ ಅನುಪೂರ್ವಿಯು ಯುಕ್ತವೇ ಆಗಿದೆ. ಅಂದರೆ ಪ್ರಕೃತಿ ಹಾಗೂ ಪ್ರತ್ಯಯದಿಂದ ನಿರಾಸವಾಗುವ ಪೂರ್ವಪಕ್ಷವನ್ನು ನಿರಾಕರಿಸಿದ್ದಾರೆಂದರ್ಥ.

प्रकाशः – ननु कर्मफलभोक्तृत्वं लोकत एवान्यत्रप्रसिद्धं, न द्विवचनश्रुतिसाहित्यमपेक्षते । उक्तञ्च टीकायां – ''लोकतोऽन्यत्रप्रसिद्धस्य कर्मफलभोक्तृत्वलिङ्गस्य'' इति । तत्कथं ''प्रत्ययश्रुतिबलादन्यत्रप्रसिद्ध'' इत्युक्तिरिति, चेत्,

ಆಕ್ಷೇಪ - ಕರ್ಮಫಲಭೋಕ್ತೃತ್ವವು ಲೋಕದಿಂದಲೇ ಅನ್ಯತ್ರಪ್ರಸಿದ್ಧವಾಗಿದೆ ಹೊರತು ದ್ವಿವಚನ ಶ್ರುತಿಯ ಸಾಹಿತ್ಯವನ್ನು ಅದು ಅಪೇಕ್ಷಿಸುವುದಿಲ್ಲ. ಇದನ್ನು ಟೀಕೆಯಲ್ಲಿಯೂ ಸಹ ''ಲೋಕತೋऽನ್ಯತ್ರಪ್ರಸಿದ್ಧಸ್ಯ ಕರ್ಮಫಲಭೋಕ್ತೃತ್ವಲಿಂಗಸ್ಯ' ಎಂದು ಹೇಳಿದ್ದಾರೆ. ಹೀಗಿರುವಾಗ ಪ್ರತ್ಯಯ ಶ್ರುತಿಯ ಬಲದಿಂದ ಅನ್ಯತ್ರಪ್ರಸಿದ್ಧವೆಂದು ನೀವು ಹೇಗೆ ಹೇಳುತ್ತಿದ್ದೀರಿ?

प्रकाशः – उच्यते – अस्मिन् पादे पूर्वत्रोत्तरत्र चान्यसाहित्येनैवान्यत्र-प्रसिद्धेरुक्तत्वादत्रापि तथा भाव्यमिति भावेन वा, पूर्वं सर्वात्तृत्वस्य विष्णावुक्तौ तन्मध्यपतितकर्मफलात्तृत्वस्याऽपि सामन्यत उक्तत्वादन्यत्रप्रसिद्धयर्थमन्य-साहित्यमावश्यकम् ।

ಸಮಾಧಾನ - ಹಿಂದಿನ ಮುಂದಿನ ಅಧಿಕರಣಗಳಲ್ಲಿ ಶ್ರುತಿಯ ಅಥವಾ ಲಿಂಗಗಳ ಸಾಹಿತ್ಯದಿಂದಲೇ ಅನ್ಯತ್ರಪ್ರಸಿದ್ಧಿಯನ್ನು ಸಮರ್ಥಿಸಲಾಗಿದೆ. ಆದರಂತೆ ಪ್ರಕೃತ ಈ ಅಧಿಕರಣದಲ್ಲಿಯೂ ಪ್ರತ್ಯಯಶ್ರುತಿಯ ಬಲದಿಂದ ಅನ್ಯತ್ರಪ್ರಸಿದ್ಧಿಯನ್ನು ಹೇಳುತ್ತಿದ್ದೇವೆ.

ಅಥವಾ ಹಿಂದಿನ ಅಧಿಕರಣದಲ್ಲಿ ಸಕಲವನ್ನು ಭಗವಂತನು ತಿನ್ನುತ್ತಾನೆಂದು ಹೇಳಿದಾಗ, ಸಕಲ ಪದಾರ್ಥಗಳ ಮಧ್ಯದಲ್ಲಿ ಕರ್ಮಫಲಾತೃತ್ವವೂ ಸಹ ಸೇರುತ್ತದೆ. ಆದ್ದರಿಂದ ಈ ಅಧಿಕರಣದಲ್ಲಿ ಸಮನ್ವಯ ಮಾಡಬೇಕಾಗಿರುವ ಕರ್ಮಫಲಾತೃತ್ವವು ಹಿಂದಿನ ಅಧಿಕರಣದಿಂದಲೇ ಸಾಮಾನ್ಯವಾಗಿ ಭಗವಂತನಲ್ಲಿ ಹೇಳಿದಂತಾಗಿದೆ. ಆದ್ದರಿಂದ ಸಾಮಾನ್ಯವಾಗಿ ಸಿದ್ಧವಾಗಿರುವ ಕರ್ಮಫಲಾತೃತ್ವವನ್ನು ವಿಷ್ಣುವಿನಲ್ಲಿ ಅಲ್ಲಗಳೆಯುವ ಮೂಲಕ ಪೂರ್ವಪಕ್ಷವನ್ನು ದೃಢಪಡಿಸುವುದಕ್ಕಾಗಿ ಲೋಕಪ್ರಸಿದ್ಧಿಯ ಜೊತೆಗೆ ಪ್ರತ್ಯಯ ಶ್ರುತಿಯನ್ನೂ ಸಹ ಅಪೇಕ್ಷಿಸಲಾಗಿದೆ.

प्रकाशः – अत एव टीकायां ''नच सर्वात्तृत्वेन बाधः, श्रुतेर्निरवकाशत्वात्'' इति द्विवचनश्रुत्यैव बाधः शङ्कितः ।

''लोकतः'' इति टीका तु प्राग्विशिष्यानुक्तत्वाशयेति भावेन वा, लोकतोऽन्यत्र-प्रसिद्धत्वेऽन्यसाहित्येनाप्यन्यत्रप्रसिद्धेस्सत्त्वात्तदभिप्रायेण वैतदुक्तिरिति ।

ಆದ್ದರಿಂದಲೇ ಟೀಕೆಯಲ್ಲಿ ''ನಚ ಸರ್ವಾತ್ಮತ್ವೇನ ಬಾಧಃ, ಶ್ರುತೇರ್ನಿರವಕಾಶತ್ವಾತ್'' ಸರ್ವಾತ್ಮತ್ವದ ಲಿಂಗದ ಸಮನ್ವಯದಿಂದಲೇ ಕರ್ಮಫಲಾತೃತ್ವವೂ ಸಹ ವಿಷ್ಣುವಿನಲ್ಲಿ ಸಮನ್ವಯವಾಯಿತು. ಪುನಃ ಇಲ್ಲಿ ಅದರ ಸಮನ್ವಯವು ವ್ಯರ್ಥವೆಂದು ಶಂಕಿಸಬಾರದು. ಪ್ರತ್ಯಯಶ್ರುತಿಯು ನಿರವಕಾಶವಾಗಿದೆ ಎಂದು ಟೀಕೆಯ ಈ ಮಾತಿನಲ್ಲಿ ದ್ವಿವಚನಶ್ರುತಿಯ ಬಲದಿಂದಲೇ ಬಾಧವನ್ನು ಶಂಕಿಸಿದ್ದಾರೆ. ಆದ್ದರಿಂದ ದ್ವಿವಚನ ಶ್ರುತಿಯನ್ನು ಅಪೇಕ್ಷಿಸಿದ್ದು ತಪ್ಪಲ್ಲ.

'ಲೋಕತಃ ಅನ್ಯತ್ರಪ್ರಸಿದ್ಧಸ್ಯ' ಎಂಬ ಟೀಕೆಗೆ ಏನರ್ಥ? ಎಂದರೆ ಎರಡು ಬಗೆಯಲ್ಲಿ ಉತ್ತರಿಸಬಹುದು. ಹಿಂದಿನ ಅಧಿಕರಣದಲ್ಲಿ ಕರ್ಮಫಲಭೋಕ್ತೃತ್ವವನ್ನು ಸಾಮಾನ್ಯವಾಗಿ ಸಮರ್ಥಿಸಿದ್ದಾರೆ ಹೊರತು ವಿಶೇಷವಾಗಿ ವಿಷ್ಣುವಿನಲ್ಲಿ ಸಮರ್ಥಿಸಿಲ್ಲ. ಈ ಕಾರಣದಿಂದ ಲೋಕತಃ ಅನ್ಯತ್ರಪ್ರಸಿದ್ಧವಾಗಿದೆಯೆಂದು ಟೀಕೆಯ ಅಭಿಪ್ರಾಯ. ಅಥವಾ ಲೋಕತಃ ಅನ್ಯತ್ರಪ್ರಸಿದ್ಧವಾಗಿದ್ದರೂ ಪ್ರತ್ಯಯಶ್ರುತಿಸಾಹಿತ್ಯದಿಂದಲೂ ಅನ್ಯತ್ರಪ್ರಸಿದ್ಧಿಯನ್ನು ಹೇಳಿದಾಗ ಪೂರ್ವಪಕ್ಷವು ಮತ್ತಷ್ಟು ದೃಢವಾಗುತ್ತದೆ. ಈ ಅಭಿಪ್ರಾಯದಿಂದಲೂ ಸಹ ಟೀಕೆಯಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವೆಂದು ಹೇಳಿದ್ದಾರೆ.

प्रकाशः – यद्यपि पूर्वत्र प्रातिपदिकार्थप्रत्ययार्थयोर्विष्णौ सम्भवेऽपीह तयोरसम्भवादिति पूर्ववैषम्येण पूर्वपक्षप्रवृत्तेः प्रत्युदाहरणरूपाऽपि वक्तुं शक्या । तथाऽपि सा वक्ष्यमाणादिशा सुज्ञानेति नोक्ता ।

ಪ್ರಶ್ನೆ - ವಸ್ತುತಃ ಈ ಅಧಿಕರಣಕ್ಕೆ ಅವಾಂತರ ಸಂಗತಿಯನ್ನು ಹೇಳುವುದಕ್ಕಿಂತ 'ಪ್ರತ್ಯುದಾಹರಣ' ಎಂಬ ಸಂಗತಿಯನ್ನೇ ಹೇಳಬಹುದಿತ್ತು. ಏಕೆಂದರೆ ಹಿಂದಿನ ಅಧಿಕರಣದಲ್ಲಿ 'ಅದಿತಿಪ್ರಾತಿಪದಿಕ' ಮತ್ತು 'ಏಕವಚನ' ಎಂಬ ಪ್ರತ್ಯಯ ಇವೆರಡರ ಅರ್ಥವು ವಿಷ್ಣುವೇ ಆಗಿದ್ದಾನೆಂದು ಹೇಳಲಾಗಿದೆ. ಆದರೆ 'ಏಬಂತೌ' ಎಂಬಲ್ಲಿ 'ಏಬತ್' ಎಂಬ ಪ್ರಾತಿಪದಿಕದ ಅರ್ಥವಾಗಲೀ, 'ಔ' ಎಂಬ ದ್ವಿವಚನ ಪ್ರತ್ಯಯವಾಗಲೀ ವಿಷ್ಣುವಿನಲ್ಲಿ ಕೂಡುವುದಿಲ್ಲ. ಹೀಗೆ ಹಿಂದಿನ ಅಧಿಕರಣದಿಂದ ವೈಲಕ್ಷಣ್ಯವನ್ನು ತೋರಿಸುವ ಮೂಲಕ ಪೂರ್ವಪಕ್ಷವನ್ನು ಮಾಡಬಹುದು. ಇದರಿಂದ ಪ್ರತ್ಯುದಾಹರಣವೆಂಬ ಸಂಗತಿಯನ್ನು ತೋರಿಸಿದಂತಾಗುತ್ತದಲ್ಲವೇ?

ಉತ್ತರ - ಹೌದು, ಅವಾಂತರ ಸಂಗತಿಯಂತೆ ಪ್ರತ್ಯುದಾಹರಣವೆಂಬ ಸಂಗತಿಯನ್ನೂ ಸಹ ಹೇಳಬಹುದಿತ್ತು. ಆದರೆ ಮುಂದಿನ ವಿಚಾರಗಳನ್ನು ತಿಳಿದಾಗ ಪ್ರತ್ಯುದಾಹರಣ ಸಂಗತಿಯು ಸುಲಭವಾಗಿ ತಿಳಿಯುತ್ತದೆಂಬ ಅಭಿಪ್ರಾಯದಿಂದ ಗ್ರಂಥಕಾರರು ಅದನ್ನು ಉಲ್ಲೇಖಿಸಿಲ್ಲ.

ಪ್ರಕಾಶಃ – ननु तथाऽपि ''सर्वात्तैकः पर उक्तः'' इति भाष्ये, ''तद्यदा विष्णोरन्यस्यैव स्यात्तदा न तस्य सर्वात्तृत्वं'' इति टीकायां च पूर्वाक्षेपस्य दर्शितत्वात्तद्विरोधः । नच तत्प्रयोजनमात्रपरं, इहोभयपरत्वेऽपि तस्य बाधकाभावादिति चेत्

ಆಕ್ಷೇಪ - ವ್ಯವಹಿತವಾದ ಅಧಿಕರಣದಿಂದ ಭಾಷ್ಯಕಾರರಾಗಲೀ, ಟೀಕಾಕಾರರಾಗಲೀ ಸಂಗತಿಯನ್ನು ತೋರಿಸಿದರೆ ಆವಾಗ ಗ್ರಂಥಕಾರರು ಅದನ್ನು ಪ್ರಯೋಜನ ಪರವೆಂದು ಎಲ್ಲಿಡೆ ಹೊಂದಿಸುತ್ತಾರೆ. ಆದರೆ ಈ ಅಧಿಕರಣದ ಭಾಷ್ಯದಲ್ಲಿ 'ಸರ್ವಾತ್ತೈಕಃ ಪರ ಉಕ್ತಃ' ಎಂಬುದಾಗಿ ಹಿಂದಿನ ಅಧಿಕರಣದಿಂದಲೇ ಸಂಗತಿಯನ್ನು ತೋರಿಸಿದ್ದಾರೆ. ಮತ್ತು ಟೀಕೆಯಲ್ಲಿಯೂ ಸಹ - 'ತದ್ಯದಾ ವಿಷ್ಣೋರನ್ಯಸ್ಯೈವ ಸ್ಯಾತ್ತದಾ ನ ತಸ್ಯ ಸರ್ವಾತ್ತೃತ್ವಂ' ಒಂದು ವೇಳೆ ಸರ್ವಾತ್ತೃತ್ವವು ವಿಷ್ಣುವನ್ನು ಬಿಟ್ಟು ಬೇರೆಯವರಿಗೆ ಬರುವುದಾದರೆ ಆವಾಗ ವಿಷ್ಣುವಿನಲ್ಲಿ ಸರ್ವಾತ್ತೃತ್ವವು ಸಿದ್ಧವಾಗುವುದಿಲ್ಲ ಎಂದು ಹೇಳಿದ್ದಾರೆ. ಹೀಗೆ ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸಿ ಸಂಗತಿಯನ್ನು ಹೇಳಬಹುದಿತ್ತು. ಗ್ರಂಥಕಾರರು ಹಾಗೆ ಹೇಳದೆ ಅವಾಂತರ ಸಂಗತಿಯನ್ನು ಹೇಳಿದ್ದರಿಂದ ಭಾಷ್ಯ ಹಾಗೂ ಟೀಕೆಗಳ ವಿರೋಧವು ಬರುತ್ತದೆ. ಇನ್ನು ಭಾಷ್ಯ ಹಾಗೂ ಟೀಕಾ ಮಾತುಗಳು ಕೇವಲ ಪ್ರಯೋಜನವನ್ನು ಹೇಳುತ್ತಿವೆ ಎಂದು ಉತ್ತರಿಸಬಾರದು. ಪ್ರಯೋಜನ ಪರವಾಗುವಂತೆ ಸಂಗತಿ ಪರವೂ ಆಗುತ್ತದೆಂದು ಹೇಳಿದರೆ ಬಾಧಕವಿಲ್ಲ. ಏಕೆಂದರೆ ಅವ್ಯವಹಿತವಾದ ಹಿಂದಿನ ಅಧಿಕರಣದಿಂದಲೇ ಸಂಗತಿಯನ್ನು ಹೇಳಿರುವುದರಿಂದ ವ್ಯವಹಿತವಾಗಿದೆಯೆಂಬ ಆಕ್ಷೇಪಕ್ಕೆ ಅವಕಾಶವಿಲ್ಲ.

ಪ್ರಕಾಶಃ – सत्यं, तस्य वक्ष्यमाणादिशोपपादनसापेक्षत्वे झडिति सुज्ञानत्वाभावेन तदपरित्यागेनैव सङ्गत्यन्तरकथनमेतदित्यदोषः ।

ಆಕ್ಷೇಪೀಕೀ ಸಂಗತಿಯನ್ನೇ ಹೇಳಬಹುದಿತ್ತು. ಹಾಗೇ ಹೇಳಿದಾಗ ಭಾಷ್ಯ ಹಾಗೂ ಟೀಕಾ ಮಾತುಗಳಿಗೆ ಪ್ರಯೋಜನಪರತ್ವವನ್ನು ಮತ್ತು ಸಂಗತಿಪರತ್ವವನ್ನು ಹೇಳಿದಂತೆಯೂ ಆಗುತ್ತಿತ್ತು. ಆದರೆ ಮುಂದೆ ಉಪಪಾದಿಸುವ ಪ್ರಕಾರ ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸುವುದು ಕ್ಲೇಶಕರವಾಗಿದೆ. ಸುಲಭವಾಗಿ ಆಕ್ಷೇಪೀಕೀಸಂಗತಿಯನ್ನು ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಅದನ್ನು ಆನಂತರ ತಿಳಿಯಬಹುದೆಂಬ ಅಭಿಪ್ರಾಯದಿಂದ ಪ್ರಾರಂಭದಲ್ಲಿ ಅವಾಂತರಸಂಗತಿಯನ್ನು ಹೇಳಿದ್ದಾರೆ. ಇದರಿಂದ ಭಾಷ್ಯ ಹಾಗೂ ಟೀಕೆಗಳ ವಿರೋಧಕ್ಕೂ ಅವಕಾಶವಿಲ್ಲವೆಂದು ಹೇಳಿದಂತಾಯಿತು.

ಪ್ರಕಾಶಃ – ನನು ನ ಪ್ರತ್ಯಯಶ್ರುತಿಬಲಾದನ್ಯತ್ರಪ್ರಸಿದ್ಧತಾ, ಪ್ರತ್ಯಯಾಜ್ಜೀವ ಏವೇತ್ಯಪ್ರತೀತೇಃ, ತಸ್ಯ ದ್ವಿತ್ವಬೋಧಕತ್ವೇನ ಜೀವೇಶ್ವರೋಭಯಪ್ರಾಪಕತ್ವಾದಿತಿ ಚೇನ್ನ, ಸಿದ್ಧಾನ್ತಕೋಟಿತೋऽನ್ಯತ್ರ-ಪ್ರಸಿದ್ಧೇರೇವಾನ್ಯತ್ರಪ್ರಸಿದ್ಧಶಬ್ದಾರ್ಥತ್ವಾತ್ । ಅತ್ರ ವಿಷ್ಣೋರೇವ ಸಿದ್ಧಾನ್ತಕೋಟಿತ್ವೇನ ಜೀವಸಹಿತಸ್ಯ ತತೋऽನ್ಯತ್ವಾತ್ ।

ಆಕ್ಷೇಪ - ದ್ವಿವಚನ ಪ್ರತ್ಯಯ ಶ್ರುತಿಯ ಬಲದಿಂದ ಅನ್ಯತ್ರಪ್ರಸಿದ್ಧತ್ವವನ್ನು ಸಮರ್ಥಿಸಲಾಗದು. ಏಕೆಂದರೆ ಪ್ರತ್ಯಯದ ಬಲದಿಂದ ಜೀವನೇ ಕರ್ಮಫಲಭೋಕ್ತೃವೆಂದು ನಿರ್ಣಯಿಸಲಾಗದು. ಪ್ರತ್ಯಯವು ದ್ವಿತ್ವವನ್ನು ತಿಳಿಸುತ್ತಿರುವುದರಿಂದ ಜೀವ ಮತ್ತು ಈಶ್ವರ ಇಬ್ಬರನ್ನು ವಿವಕ್ಷಿಸಬೇಕು ಹೊರತು ಕೇವಲ ಜೀವನನ್ನು ವಿವಕ್ಷಿಸಲು ಸಾಧ್ಯವಿಲ್ಲವಲ್ಲವೇ?

ಸಮಾಧಾನ - ವಿಷ್ಣುವೇ ಕರ್ಮಫಲಭೋಕ್ತೃವಾಗಿದ್ದಾನೆಂಬುದು ಸಿದ್ಧಾಂತ. ಇದಕ್ಕಿಂತ ಭಿನ್ನವಿಚಾರವೆನಿಸಿದ ಅನ್ಯತ್ರಪ್ರಸಿದ್ಧವಾಗಿರುವಿಕೆಯು ಅನ್ಯತ್ರಪ್ರಸಿದ್ಧವೆನಿಸುತ್ತದೆ. ಅಂದರೆ ವಿಷ್ಣುವೇ ಕರ್ಮಫಲಭೋಕ್ತೃ ಎಂದು ಹೇಳಿದಾಗ ಜೀವಸಹಿತನಾದ ವಿಷ್ಣುವು ಕರ್ಮಫಲಭೋಕ್ತೃ ಎಂಬ ವಿಚಾರವು ಭಿನ್ನವೇ ಆಗಿದೆ. ಆದ್ದರಿಂದ ಜೀವ ಹಾಗೂ ಈಶ್ವರ ಇಬ್ಬರನ್ನು ಕರ್ಮಫಲಭೋಕ್ತೃವೆಂದು ಹೇಳುವನ ಪಕ್ಷವು ಅನ್ಯತ್ರಪ್ರಸಿದ್ಧಪಕ್ಷದಲ್ಲಿಯೇ ಸೇರುತ್ತದೆ.

ಪ್ರಕಾಶಃ – ಅತ ಏವ ದ್ವಿವಚನಶ್ರುತ್ಯಾ ಕರ್ಮಫಲಾತ್ತೃತ್ವಮುಭಯತ್ರಪ್ರಸಿದ್ಧಮಿತ್ಯಪಿ ಚೋದ್ಯಂ ಪರಾಸ್ತಮ್ । ವಿಷ್ಣೋರೇವೇತಿ ಸಿದ್ಧಾನ್ತಕೋಟೌ ಕರ್ಮಫಲಾತ್ತೃತ್ವಸ್ಯ ದ್ವಿವಚನಶ್ರುತ್ಯಾ ಪ್ರಾಪ್ತೇಃ, ತಥಾ ದ್ವಯೋಃ ಪ್ರಾಪ್ತಾವಪಿ ಜೀವೇಶ್ವರಾವಿತ್ಯಸ್ಯ ನ್ಯಾಯೇನೈವ ವ್ಯುತ್ಪಾದ್ಯತ್ವಾದಿತಿ ।

ಇದರಿಂದ ಮತ್ತೊಂದು ಶಂಕೆಯು ನಿರಸ್ತವಾಯಿತು. ದ್ವಿವಚನ ಶ್ರುತಿಯ ಬಲದಿಂದ ಕರ್ಮಫಲಾತ್ಮತ್ವವು ಜೀವ ಹಾಗೂ ಈಶ್ವರ ಇಬ್ಬರಲ್ಲಿಯೂ ಬರುವ ಕಾರಣ ಉಭಯತ್ರಪ್ರಸಿದ್ಧವಾಯಿತಲ್ಲವೇ? ಎಂಬ ಶಂಕೆಗೆ ಈಗ ಅವಕಾಶವಿಲ್ಲ. ಏಕೆಂದರೆ ಕರ್ಮಫಲಾತ್ಮತ್ವವು ವಿಷ್ಣುವಿನಲ್ಲಿ ಮಾತ್ರವಿದೆಯೆಂಬ ಸಿದ್ಧಾಂತಕೋಟಿಯು ದ್ವಿವಚನಶ್ರುತಿಯಿಂದ ಪ್ರಾಪ್ತವೇ ಆಗಿಲ್ಲ, ಹೊರತಾಗಿ ಜೀವ ಹಾಗೂ ಈಶ್ವರ ಎಂಬ ಎರಡುವಿಧ ಪಕ್ಷಗಳು 'ಜೀವೇಶ್ವರೌ' ಎಂಬ ಪ್ರತ್ಯಯ ಶ್ರುತಿಯ ನ್ಯಾಯದಿಂದಲೇ ಪ್ರಾಪ್ತವಾಗಿದೆ.

ಸಾರ

ಗುಹಾಧಿಕರಣದಲ್ಲಿ ಕರ್ಮಫಲಭೋಕ್ತೃತ್ವವೆಂಬ ಲಿಂಗವನ್ನು ಸಮನ್ವಯ ಮಾಡುತ್ತಿದ್ದಾರೆ. ಆತ್ಮತ್ವದಂತೆ ಇದೂ ಸಹ ಕ್ರಿಯಾರೂಪವೇ ಆಗಿದೆ. ಅಷ್ಟೇ ಅಲ್ಲದೆ ಆತ್ಮತ್ವದ ವಿಶೇಷಧರ್ಮವೂ ಆಗಿದೆ. ಆದರೆ ಹಿಂದಿನ ಅಧಿಕರಣದಿಂದ ಈ ಲಿಂಗವು ನಿರ್ಣಯವಾಗುವುದಿಲ್ಲ. ಏಕೆಂದರೆ 'ಋತಂ ಪಿಬಂತೌ' ಎಂಬ ಶ್ರುತಿಯಲ್ಲಿ ದ್ವಿವಚನವು ಕೇಳಿಸುತ್ತಿದೆ. ಇಬ್ಬರು ವ್ಯಕ್ತಿಗಳು ಭೋಕ್ತೃಗಳಾದರೆ ಮಾತ್ರ ಈ ದ್ವಿವಚನವು ಉಪಪನ್ನವಾಗಲು ಸಾಧ್ಯವೆಂಬ ಆಕ್ಷೇಪ ಬರುತ್ತದೆ. ಇದರ ಪರಿಹಾರಕ್ಕಾಗಿ ಈ ಅಧಿಕರಣ ಹೊರಟಿದೆ.

ಹಿಂದಿನ ಅಧಿಕರಣದಲ್ಲಿ ಅದಿತಿಯೆಂಬ ಪ್ರಕೃತಿಶ್ರುತಿಯ ಬಲದಿಂದ ಪೂರ್ವಪಕ್ಷವು ಪ್ರಾಪ್ತವಾಗಿತ್ತು. ಈ ಅಧಿಕರಣದಲ್ಲಿ ದ್ವಿವಚನವೆಂಬ ಪ್ರತ್ಯಯಶ್ರುತಿಯ ಬಲದಿಂದ ಪೂರ್ವಪಕ್ಷವು ಪ್ರಾಪ್ತವಾಗುತ್ತಿದೆ. ಪ್ರಕೃತಿ ವಿಚಾರದ ಅನಂತರ ಪ್ರತ್ಯಯದ ವಿಚಾರವೂ ಸಂಗತವಾಗಿದೆಯೆಂದು ಅವಾಂತರಸಂಗತಿಯನ್ನು ಈ ಅಧಿಕರಣಕ್ಕೆ ತಿಳಿಯಬೇಕು. ಪ್ರತ್ಯುದಾಹರಣ ರೂಪಸಂಗತಿ ಹಾಗೂ ಆಕ್ಷೇಪಿಕೀಸಂಗತಿಗಳು ಮುಂದಿನ ವಿಷಯಭಾಗದಿಂದ ಸ್ವತಃ ಸ್ಪಷ್ಟವಾಗುತ್ತದೆ.

ಸಂಶಯ ಪರಂಪರೆ

ತಾತ್ಪರ್ಯಚಂದ್ರಿಕಾ

अत्र पिबन्तौ किं जीवेश्वरौ किं वेश्वररूपविशेषौ इति चिन्ता ? तदर्थं गुहावेशब्रह्मशब्दादिकं किममुख्यम् किं वा मुख्यमिति ? तदर्थं पिबत्प्रतिपदिकार्थभूतं भोक्तृत्वं किं ब्रह्मणि न युक्तमुत युक्तमिति ? तदर्थमभोक्तृत्वश्रुतिः ब्रह्मणि भोक्तृत्वमात्रनिषेधपरा उताशुभभोक्तृत्वनिषेधपरा वा इति ? तथा द्विवचनं किं ब्रह्मणि न युक्तमुत युक्तम् इति ।।

ಅನುವಾದ - ಈ ಅಧಿಕರಣದ ಸಂಶಯ ಪರಂಪರೆ ಹೀಗಿದೆ -

'ಪಿಬಂತೌ' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಇಬ್ಬರು ವ್ಯಕ್ತಿಗಳು ಜೀವ ಮತ್ತು ಈಶ್ವರರೋ? ಅಥವಾ ಈಶ್ವರನ ಎರಡು ವಿಶೇಷರೂಪವೋ? ಎಂದು ಸಂಶಯ. ಇದಕ್ಕಾಗಿ ಗುಹಾವೇಶ ಮತ್ತು ಬ್ರಹ್ಮ ಮೊದಲಾದ ಶಬ್ದಗಳು ಅಮುಖ್ಯವಾಗಿವೆಯೋ? ಅಥವಾ ಮುಖ್ಯವಾಗಿವೆಯೋ? ಎಂದು ಸಂಶಯ. ಇದಕ್ಕಾಗಿ 'ಪಿಬತ್' ಎಂಬ ಪ್ರಾತಿಪದಿಕದ ಅರ್ಥವೆನಿಸಿರುವ ಭೋಕ್ತೃತ್ವವು ಬ್ರಹ್ಮನಲ್ಲಿ ಕೂಡುವುದಿಲ್ಲವೋ? ಅಥವಾ ಕೂಡುತ್ತದೋ? ಎಂದು ಸಂಶಯ. ಇದಕ್ಕಾಗಿ ಅಭೋಕ್ತೃತ್ವಶ್ರುತಿಯು

ಬ್ರಹ್ಮನಲ್ಲಿ ಸಕಲವಿಧವಾದ ಭೋಕ್ತೃತ್ವವನ್ನು ನಿಷೇಧಿಸುತ್ತಿದೆಯೋ? ಅಥವಾ ಅಶುಭವಾದ ಭೋಕ್ತೃತ್ವವನ್ನು ನಿಷೇಧಿಸುತ್ತಿದೆಯೋ? ಎಂದು ಸಂಶಯ. ಇದರಂತೆ ದ್ವಿವಚನವು ಬ್ರಹ್ಮನಲ್ಲಿ ಅಯುಕ್ತವಾಗಿದೆಯೋ? ಯುಕ್ತವಾಗಿದೆಯೋ ? ಎಂದು ಸಂಶಯ ಪರಂಪರೆ.

प्रकाशः –

विषयसंशयटीकां व्यनक्ति – अत्रेत्यादिना ।

ऋतं पिबन्तौ सुकृतस्य लोके गुहां प्रविष्टौ परमे परार्धे ।
छायातपौ ब्रह्मविदो वदन्ति पञ्चाग्नयो ये च त्रिनाचिकेताः ।।

इत्यत्र काठके ऋतपानकर्तृत्वेनोक्तो विषय इत्यर्थः टीकायां स्पष्टः ।

ಈ ಅಧಿಕರಣದ ವಿಷಯ ಹಾಗೂ ಸಂಶಯಗಳನ್ನು ನಿರೂಪಿಸುವ ಟೀಕೆಯನ್ನು ವ್ಯಾಖ್ಯಾನಿಸುತ್ತಿದ್ದಾರೆ. 'ಅತ್ರ' ಇತ್ಯಾದಿ ಗ್ರಂಥದಿಂದ.

ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ।
ಛಾಯಾತಪೌ ಬ್ರಹ್ಮವಿದೋ ವದಂತಿ ಪಂಚಾಗ್ನಯೋ ಯೇ ಚ ತ್ರಿನಾಚಿಕೇತಾಃ॥

'ಋತಂ ಪಿಬಂತೌ' ಎಂಬ ಕಾಠಕದ ವಚನವು ಈ ಅಧಿಕರಣದ ವಿಷಯವಾಕ್ಯವಾಗಿದೆ. ಈ ವಾಕ್ಯದಲ್ಲಿ ಋತಪಾನಕರ್ತೃತ್ವವನ್ನು ಹೇಳಲಾಗಿದೆ. ಶ್ರುತಿಯ ಅರ್ಥವು ಟೀಕೆಯಲ್ಲಿ ಸ್ಪಷ್ಟವಾಗಿರುವುದರಿಂದ ಇಲ್ಲಿ ವಿವರಿಸಿಲ್ಲ.

प्रकाशः – ननु 'गुहां प्रविष्टौ' इत्येतदेव धर्मीकृत्य सन्दिह्यताम् । तथा च सौत्रनिर्देशोऽपि साक्षात्सङ्गतस्स्यात् । अन्यथा 'पिबन्तौ' इत्येव ब्रूयात् ।

नच तस्य ब्रह्मलिङ्गत्वेन संशयायोगः, गुहाप्रविष्टत्वस्य ''हृदि ह्येष आत्मा'' इति जीवेऽपि सम्भवात् । द्विवचनश्रुतिबलेन गुहाप्रविष्टत्वं जीवेश्वरयोरिति पूर्वपक्षसम्भवाच्चेति चेत् ,

ಆಕ್ಷೇಪ - ಸಂದೇಹವನ್ನು ತೋರಿಸುವಾಗ ಕರ್ಮಫಲಭೋಕ್ತೃತ್ವವನ್ನು ವಿಷಯೀಕರಿಸಿದ್ದಾರೆ. ಆದರೆ 'ಗುಹಾಂ ಪ್ರವಿಷ್ಟೌ' (ಹೃದಯ ಗುಹೆಯಲ್ಲಿ ಇಬ್ಬರು ಇದ್ದಾರೆ) ಎಂಬುದನ್ನೇ ಧರ್ಮಿಯನ್ನಾಗಿ ಪರಿಗಣಿಸಿ ಸಂದೇಹವನ್ನು ತೋರಿಸಬಹುದಿತ್ತು. ಹೀಗೆ ಸಂದೇಹವನ್ನು ತೋರಿಸುವುದರಿಂದ ಸೂತ್ರದಲ್ಲಿರುವ ಪದಗಳಿಂದ ಸಂದೇಹವು ನೇರವಾಗಿ ಸಂಗತವಾಗುತ್ತದೆ. ಈ ರೀತಿಯಾದ ಸಂದೇಹವೇ ಸೂತ್ರಕಾರರಿಗೂ ಸಹ ಸಮ್ಮತವಾಗಿದೆ. ಆದ್ದರಿಂದಲೇ ಸೂತ್ರದಲ್ಲಿ 'ಗುಹಾಂ ಪ್ರವಿಷ್ಟೌ' ಎಂಬ ಪದಗಳನ್ನು ಉಲ್ಲೇಖಿಸಿದ್ದಾರೆ. ಇಲ್ಲದಿದ್ದರೆ 'ಪಿಬಂತೌ' ಎಂದೇ ಹೇಳುತ್ತಿದ್ದರು.

ಹೃದಯಗುಹೆಯಲ್ಲಿರುವಿಕೆಯು ಬ್ರಹ್ಮನ ಲಿಂಗವೆಂದು ಹಿಂದಿನ ಅಧಿಕರಣದಿಂದ ಸಿದ್ಧವಾಗಿದೆ. ಆದ್ದರಿಂದ ಸಂಶಯವೇ ಹುಟ್ಟುವುದಿಲ್ಲವಲ್ಲ? ಎಂದು ಪ್ರಶ್ನಿಸಬಾರದು. "ಹೃದಿ ಹ್ಯೇಷ ಆತ್ಮಾ" ಎಂಬ ಶ್ರುತಿಯಂತೆ ಗುಹಾಪ್ರವಿಷ್ಟತ್ವವನ್ನು ಜೀವನಲ್ಲಿಯೂ ಹೇಳಬಹುದು. ಪ್ರಕೃತ ದ್ವಿವಚನವು ಶ್ರುತಿಯಲ್ಲಿ ಕೇಳಿಸುತ್ತಿರುವುದರಿಂದ ಜೀವ ಹಾಗೂ ಈಶ್ವರ ಇಬ್ಬರಲ್ಲಿಯೂ ಗುಹಾಪ್ರವಿಷ್ಟತ್ವಧರ್ಮವು ಇದೆಯೆಂಬುದಾಗಿ ಪೂರ್ವಪಕ್ಷವನ್ನು ಸುಲಭವಾಗಿ ಮಾಡಬಹುದು. ಹೀಗಿರುವಾಗ 'ಪಿಬಂತೌ' ಎಂಬುದನ್ನು ಧರ್ಮಿಯನ್ನಾಗಿ ವಿವಕ್ಷಿಸಿ ಸಂಶಯವನ್ನು ತೋರಿಸಿದ್ದು ತಪ್ಪಲ್ಲವೇ?

ಪ್ರಕಾಶಃ – ಮೈವಂ, ಗುಹಾಪ್ರವಿಷ್ಟತ್ವಸ್ಯ ''ಸರ್ವತ್ರ ಪ್ರಸಿದ್ಧೋಪದೇಶಾತ್'' ಇತಿ ನಯೇ ವಿಷ್ಣೌ ಸಿದ್ಧತ್ವಾತ್ತತ್ಸಮನ್ವಯೇऽಪೂರ್ವಗುಣಾಲಾಭಾತ್, ಪಾತೃತ್ವಸಮನ್ವಯೇ ತು ಕರ್ಮಫಲಭೋಕ್ತೃತ್ವಸ್ಯಾಪೂರ್ವಗುಣಸ್ಯ ಲಾಭಾತ್ । ಪ್ರಾಗುಕ್ತಲಕ್ಷಣಸ್ಯ ಸಾಕ್ಷಾದಾಕ್ಷೇಪಸಂಭವಾಚ್ಚ ।

ತತ್ರ ಪ್ರಾತಿಪದಿಕಾರ್ಥಸ್ಯ ಪ್ರತ್ಯಯಾರ್ಥಸ್ಯ ಚ ದ್ವಯೋರಪ್ಯನುಪಪತ್ತ್ಯಾ ಪೂರ್ವಪಕ್ಷೇ ವಿಶೇಷಹೇತ್ವಸತ್ತ್ವಾಚ್ಚ । ಅತ ಏವ ಸೂತ್ರೇ ಆತ್ಮಪದೇನಾऽऽದೇಯಂ ಮಾತೀತಿ ವ್ಯುತ್ಪತ್ತ್ಯಾ-ಪಾತೃತ್ವಮುಚ್ಯತೇ । ವಕ್ಷ್ಯಮಾಣದಿಶಾ ಗುಹಾಪ್ರವಿಷ್ಟತ್ವಸ್ಯ ವಿಷ್ಣಾವೇವ ಪ್ರಸಿದ್ಧ್ಯಾ ಸಂಶಯಾಯೋಗಾಚ್ಚ । ಸೌತ್ರನಿರ್ದೇಶಸ್ಯ ತು ಗತಿರ್ವಕ್ಷ್ಯತೇ ।

ಗುಹಾಪ್ರವಿಷ್ಟತ್ವವನ್ನು ಧರ್ಮಿಯನ್ನಾಗಿ ಸ್ವೀಕರಿಸದಿರಲು ಅನೇಕ ಕಾರಣಗಳಿವೆ. ಹಿಂದಿನ ಅಧಿಕರಣದಲ್ಲಿಯೇ ಸರ್ವಗತತ್ವಧರ್ಮದಿಂದ ಗುಹಾಪ್ರವಿಷ್ಟತ್ವ ಧರ್ಮವು ವಸ್ತುವಿನಲ್ಲಿ ಸಿದ್ಧವಾಗಿದೆ. ಪುನಃ ಆ ಧರ್ಮವನ್ನೇ ಈ ಅಧಿಕರಣದಲ್ಲಿ ಸಮನ್ವಯ ಮಾಡಿದರೆ ಅಪೂರ್ವಗುಣವನ್ನು ಸಮನ್ವಯ ಮಾಡಿದಂತಾಗುವುದಿಲ್ಲ. ಕರ್ಮಫಲಪಾತೃತ್ವವೆಂಬ ಧರ್ಮವನ್ನು ಸಮನ್ವಯ ಮಾಡಿದಾಗ ಅಪೂರ್ವಗುಣವನ್ನು ಸಮನ್ವಯ ಮಾಡಿದಂತಾಗುತ್ತದೆ. ಮತ್ತು ಹಿಂದಿನ ಅಧಿಕರಣದ ಆತ್ಮತ್ವವನ್ನು ವಿಷ್ಣುವಿನಲ್ಲಿ ನೇರವಾಗಿ ಆಕ್ಷೇಪಿಸಿದಂತಾಗುತ್ತದೆ.

ಮತ್ತು 'ಪಿಬತ್' ಎಂಬ ಪ್ರಾತಿಪದಿಕಾರ್ಥ ಹಾಗೂ 'ಔ' ಎಂಬ ಪ್ರತ್ಯಯದ ಅರ್ಥ ಎರಡೂ ಸಹ ವಿಷ್ಣುವಿನಲ್ಲಿ ಅನುಪಪನ್ನವಾದ್ದರಿಂದ ದೃಢವಾದ ಪೂರ್ವಪಕ್ಷವನ್ನು ಮಾಡಿದಂತಾಗುತ್ತದೆ. ಈ ಪೂರ್ವಪಕ್ಷದ ದಾರ್ಢ್ಯಕ್ಕಾಗಿಯೇ ಸೂತ್ರದಲ್ಲಿ ಆತ್ಮಪದವನ್ನು ಪ್ರಯೋಗಿಸಿದ್ದಾರೆ. ಈ ಪದದಿಂದ 'ಆದೇಯಂ ಮಾತಿ' (ಶುಭಫಲವನ್ನು ತಿನ್ನುತ್ತಾನೆ) ಎಂಬ ವ್ಯುತ್ಪತ್ತಿಯನ್ನು ಅನುಸರಿಸಿ ಪಾತೃತ್ವಧರ್ಮವನ್ನು ಹೇಳಿದ್ದಾರೆ. ಅಷ್ಟೇ ಅಲ್ಲದೆ ಮುಂದೆ ನಿರೂಪಿಸುವ ಪ್ರಕಾರ ಗುಹಾಪ್ರವಿಷ್ಟತ್ವವು ವಿಷ್ಣುವಿನಲ್ಲೇ ಪ್ರಸಿದ್ಧವಾಗಿರುವುದರಿಂದ ಸಂಶಯವೂ ಸಹ ಕೂಡುವುದಿಲ್ಲ. ಹಾಗಾದರೆ ಸೂತ್ರದಲ್ಲಿ 'ಪಿಬಂತೌ' ಎಂದೇಕೆ ನಿರ್ದೇಶಿಸಿಲ್ಲ? ಎಂಬ ಪ್ರಶ್ನೆಗೆ ಮುಂದೆ ಉತ್ತರಿಸುತ್ತೇವೆ.

ಪ್ರಕಾಶಃ – ಜೀವೇಶ್ವರಾವಿತಿ । ಏತೇನ ''ವಿಷ್ಣೋರನ್ಯಸ್ಯ'' ಇತಿ ಟೀಕಾ ವಿಷ್ಣೋರೇವಾನ್ಯಸ್ಯಾಪಿ ವೇತಿ ವ್ಯಾಖ್ಯೇಯೇತ್ಯುಕ್ತಂ ಭವತಿ ।

ननु बुद्धिजीवौ प्राणजीवौ बुद्धिप्राणौ वा सम्भवतः, कथं जीवेश्वराविति विशिष्योक्तिः ।

ಗ್ರಂಥದಲ್ಲಿ 'ಜೀವೇಶ್ವರೌ' ಎಂದು ಹೇಳಿದ್ದರಿಂದ ''ವಿಷ್ಣೋರನ್ಯಸ್ಯ ವಾ'' ಎಂಬ ಟೀಕೆಯನ್ನು 'ವಿಷ್ಣೋರೇವ ವಾ ಅನ್ಯಸ್ಯಾಪಿ ವಾ' ವಿಷ್ಣುವಿಗೆ ಮಾತ್ರ ಬರುತ್ತದೋ ಅಥವಾ ಬೇರೆಯವರಿಗೂ ಬರುತ್ತದೋ ? ಎಂದು ಆಕ್ಷೇಪಿಸಿದಂತಾಯಿತು.

ಆಕ್ಷೇಪ - ದ್ವಿವಚನದಿಂದ ಜೀವೇಶ್ವರರಿಬ್ಬರನ್ನೇ ವಿವಕ್ಷಿಸಬೇಕೆನ್ನಲು ವಿನಿಗಮಕವಿಲ್ಲ. ಬುದ್ಧಿ ಮತ್ತು ಜೀವರನ್ನು ಅಥವಾ ಪ್ರಾಣ ಮತ್ತು ಜೀವರನ್ನು ಅಥವಾ ಬುದ್ಧಿ ಮತ್ತು ಪ್ರಾಣರನ್ನೂ ಸಹ ವಿವಕ್ಷಿಸಬಹುದು. ಹೀಗಿರುವಾಗ 'ಜೀವೇಶ್ವರೌ' ಎಂದು ಗ್ರಂಥಕಾರರು ಇವರಿಬ್ಬರನ್ನೇ ಹೇಗೆ ನಿರ್ದೇಶಿಸಿದರು?

प्रकाशः – मैवं, पातृत्वेनैकस्य जीवत्वावश्यम्भावेन 'अस्य गोर्द्वितीयेन भाव्यं' इत्यादौ सजातीयस्येवात्रापि सजातीयस्यैव द्वितीयस्येश्वरस्य ग्राह्यत्वात् । नच जीवान्तरमेव ग्राह्यमिति युक्तं, एकस्मिन् देहे भोक्तृजीवद्वयायोगात् ।

नच चैद्यादौ जीवद्वयं दृष्टमिति वाच्यं, तस्य प्रबलनिमित्तादिना काचित्कत्वेन प्रतिशरीरं जीवद्वयायोगात्, ब्रह्मप्रकरणाच्च तस्यैव द्वितीयत्वस्योचितत्वादिति भावः ।

ಸಮಾಧಾನ - ಪಾತೃತ್ವಧರ್ಮವಿರುವ ಒಬ್ಬ ಜೀವನನ್ನಂತು ತೆಗೆದುಕೊಳ್ಳಲೇಬೇಕು. ಇಂತಹ ಜೀವನಿಗೆ ಸಜಾತೀಯನಾದ ಮತ್ತೊಬ್ಬನೆಂದರೆ ಈಶ್ವರನೇ ಆಗುತ್ತಾನೆ. ಹಸುವಿಗೆ ಮತ್ತೊಂದು ಸಜಾತೀಯ ವಸ್ತುವೆಂದರೆ ಹಸುವೇ ಹೇಗಾಗುತ್ತದೋ ಅದರಂತೆ ಜೀವನಿಗೆ ಸಜಾತೀಯನಾದ ಮತ್ತೊಬ್ಬ ವ್ಯಕ್ತಿಯೆಂದರೆ ಈಶ್ವರನೇ ಆಗುತ್ತಾನೆ. ಜೀವನಿಗೆ ಮತ್ತೊಬ್ಬ ಜೀವನೇ ಸಜಾತೀಯನಾಗಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಒಂದೇ ದೇಹದಲ್ಲಿ ಭೋಕ್ತೃಗಳಾದ ಇಬ್ಬರು ಜೀವರು ಇರಲು ಸಾಧ್ಯವಿಲ್ಲ. ಶಿಶುಪಾಲಾದಿಗಳಲ್ಲಿ ಇಬ್ಬರು ಜೀವರು ಭೋಕ್ತೃಗಳಾಗಿರುವುದು ಕಂಡಿದೆಯಲ್ಲವೇ? ಎಂದರೆ ಪ್ರಬಲವಾದ ಕಾರಣವಿದ್ದಾಗ ಮಾತ್ರ ಕೆಲವು ಶರೀರಗಳಲ್ಲಿ ಹಾಗೆ ಜೀವದ್ವಯಗಳನ್ನು ಒಪ್ಪಬಹುದು ಹೊರತು ಎಲ್ಲ ಶರೀರಗಳಲ್ಲಿಯೂ ಜೀವದ್ವಯವನ್ನು ಒಪ್ಪಲಾಗದು. ಅಷ್ಟೇ ಅಲ್ಲದೆ ಇದು ಬ್ರಹ್ಮನ ಪ್ರಕರಣವಾದ್ದರಿಂದ ಬ್ರಹ್ಮನನ್ನೇ ಮತ್ತೊಬ್ಬನೆಂದು ಭಾವಿಸುವುದು ಉಚಿತವಾಗಿದೆ.

प्रकाशः – रूपविशेषाविति । ईश्वरद्वयाभावेनेश्वराविति्यनुक्त्वा ''रूपविशेषौ'' इत्युक्तम् ।

ब्रह्मशब्दादिकमिति ।

यस्सेतुरीजानानामक्षरं ब्रह्म तत्परम् ।

इत्युक्तसेतुत्वादिरादिशब्दार्थः । मुख्यमितिचिन्तानन्तरं, मुख्यत्वे बाधकमस्त्युत नेति चिन्ता स्फुटत्वान्नोक्ता ।

ಈಶ್ವರನು ಒಬ್ಬನೇ ಆದ್ದರಿಂದ 'ಈಶ್ವರೌ' ಎಂದು ಪ್ರಯೋಗಿಸದೆ 'ರೂಪವಿಶೇಷೌ' ಎಂದು ಪ್ರಯೋಗಿಸಿದ್ದಾರೆ. ಈಶ್ವರನು ಒಬ್ಬನೇ ಆದರೂ ಅನೇಕ ರೂಪಗಳಿರುವುದರಿಂದ ಎರಡು ರೂಪವೆಂದು ಹೇಳಬಹುದು.

'ಬ್ರಹ್ಮಶಬ್ದಾದಿಕಮ್' ಎಂಬಲ್ಲಿರುವ ಆದಿ ಪದದಿಂದ 'ಯಸ್ಸೇತುರೀಜಾನಾನಾಮಕ್ಷರಂ ಬ್ರಹ್ಮ ತತ್ತರಮ್ ।' ಎಂಬುದಾಗಿ ಹೇತುತ್ವಾದಿಗಳನ್ನು ವಿವಕ್ಷಿಸಬೇಕು. 'ಮುಖ್ಯಂ' ಎಂಬ ಸಂಶಯದ ಅನಂತರ ಮುಖ್ಯತ್ವದಲ್ಲಿ ಬಾಧಕವಿದೆಯೋ ? ಇಲ್ಲವೋ ? ಎಂಬ ಸಂಶಯವನ್ನು ತಿಳಿಯಬೇಕು. ಇದು ಸ್ಪಷ್ಟವಾಗಿರುವುದರಿಂದ ಗ್ರಂಥಕಾರರು ಹೇಳಿರುವುದಿಲ್ಲ.

प्रकाशः – श्रुतिरिति । ''अनश्नन्'' इत्यादिश्रुतिर्यदि भोक्तृत्वसामान्य-निषेधपरा, तर्हि प्रातिपदिकार्थभोक्तृत्वाद्योगात्पिबत्प्रातिपदिकार्थरूपबाधकसत्त्वेन ब्रह्मशब्दादेर्मुख्यत्वयोगेन जीवेश्वराविति पूर्वपक्षे फलम् ।

यदि विशेषनिषेधपरा, तदा ब्रह्मणि भोक्तृत्वयोगे बाधकाभावाद्ब्रह्मशब्दादे-र्मुख्यत्वादीश्वररूपविशेषाविति सिद्धान्ते फलमिति स्फुटत्वान्नोक्तम् ।

ಗ್ರಂಥದಲ್ಲಿ 'ಶ್ರುತಿಃ' ಎಂದಿದೆ. ಇದರಿಂದ ಪೂರ್ವಪಕ್ಷ ಸಿದ್ಧಾಂತಫಲಗಳನ್ನು ತಿಳಿಯಬೇಕು. ಒಂದು ವೇಳೆ 'ಅನಶ್ನನ್' ಇತ್ಯಾದಿ ಶ್ರುತಿಯು ಭೋಕ್ತೃತ್ವಸಾಮಾನ್ಯವನ್ನು ವಿಷ್ಣುವಿನಲ್ಲಿ ನಿಷೇಧಿಸುವುದಾದರೆ, ಪ್ರಾತಿಪದಿಕಾರ್ಥಭೋಕ್ತೃತ್ವ ಕೂಡುವುದಿಲ್ಲ. ಆದ್ದರಿಂದ 'ಪಿಬತ್' ಎಂಬ ಪ್ರಾತಿಪದಿಕಾರ್ಥರೂಪವಾದ ಬಾಧಕವಿರುವುದರಿಂದ ಬ್ರಹ್ಮಶಬ್ದಾದಿಗಳಿಗೆ ಮುಖ್ಯಾರ್ಥವನ್ನು ಹೇಳಲಾಗದು. ಆದ್ದರಿಂದ ಜೀವೇಶ್ವರರೇ ಕರ್ಮಫಲಭೋಕ್ತೃಗಳಾಗಿದ್ದಾರೆಂಬುದು ಪೂರ್ವಪಕ್ಷದ ಫಲ.

ಒಂದು ವೇಳೆ 'ಅನಶ್ನನ್' ಇತ್ಯಾದಿ ಶ್ರುತಿಯು ಭೋಕ್ತೃತ್ವವಿಶೇಷವನ್ನು ನಿಷೇಧಿಸುವುದಾದರೆ ಆವಾಗ ಬ್ರಹ್ಮನಲ್ಲಿ ಶುಭಫಲಭೋಕ್ತೃತ್ವವು ಯುಕ್ತವಾಗುತ್ತದೆ. ಯಾವುದೇ ಬಾಧಕವಿಲ್ಲದ ಕಾರಣ ಬ್ರಹ್ಮಶಬ್ದಾದಿಗಳಿಗೆ ಮುಖ್ಯಾರ್ಥವನ್ನು ಹೇಳಬಹುದು. ಆದ್ದರಿಂದ 'ಪಿಬಂತೌ' ಎಂಬ ಶ್ರುತಿಯಿಂದ ಭಗವಂತನ ಎರಡು ರೂಪವಿಶೇಷಗಳೇ ಪ್ರತಿಪಾದ್ಯಗಳಾದ್ದರಿಂದ ಭಗವಂತನೇ ಕರ್ಮಫಲಭೋಕ್ತೃವಾಗುತ್ತಾನೆಂಬುದು ಸಿದ್ಧಾಂತದ ಫಲ. ಈ ಪೂರ್ವಪಕ್ಷಸಿದ್ಧಾಂತ ಫಲಗಳು ಸ್ಪಷ್ಟವಾಗಿರುವುದರಿಂದ ಗ್ರಂಥಕಾರರು ಪ್ರತ್ಯೇಕವಾಗಿ ಹೇಳಿರುವುದಿಲ್ಲ.

प्रकाशः – अत्र द्वौ पूर्वपक्षौ, प्रातिपदिकार्थमुपजीव्य प्रवृत्तः प्रत्ययार्थमुपजीव्य प्रवृत्तश्चेति ।

'आत्मानौ'' इति प्रातिपदिकप्रत्ययाभ्यां द्वयोर्गतेर्वक्ष्यमाणत्वात् । तत्राद्योपयुक्तचिन्तापरम्परेयम् । द्वितीयोपयुक्तामाह – तथेति ।

ಇಲ್ಲಿಯ ತನಕ ಮಾಡಿದ ವಿಚಾರದಿಂದ ಒಟ್ಟು ಎರಡು ಬಗೆಯ ಪೂರ್ವಪಕ್ಷವನ್ನು ತಿಳಿಯಬೇಕು -

೧. ಪ್ರಾತಿಪದಿಕಾರ್ಥವನ್ನು ಉಪಜೀವಿಸಿ ಪ್ರವೃತ್ತವಾಗುವ ಪೂರ್ವಪಕ್ಷ.

೨. ಪ್ರತ್ಯಯಾರ್ಥವನ್ನು ಉಪಜೀವಿಸಿ ಪ್ರವೃತ್ತವಾಗುವ ಪೂರ್ವಪಕ್ಷ ಎಂದು.

'ಆತ್ಮಾನೌ' ಎಂಬಲ್ಲಿ ಪ್ರಾತಿಪದಿಕ ಹಾಗೂ ಪ್ರತ್ಯಯಗಳಿಂದ ಎರಡೂ ಬಗೆಯ ಪೂರ್ವಪಕ್ಷಗಳಿಗೆ ಗತಿಯನ್ನು ಮುಂದೆ ಹೇಳುತ್ತಾರೆ. ಆದಕ್ಕೆ ಉಪಯುಕ್ತವಾದ ಚಿಂತಾಪರಂಪರೆಯನ್ನು ಇಲ್ಲಿ ಹೇಳಿದ್ದಾರೆ. ಎರಡನೆಯ ಪೂರ್ವಪಕ್ಷಕ್ಕೆ ಉಪಯುಕ್ತವಾಗುವ ಸಂಶಯವನ್ನು 'ತಥಾ' ಎಂಬ ವಾಕ್ಯದಿಂದ ಹೇಳಿದ್ದಾರೆ.

प्रकाशः – किं वा मुख्यमिति चिन्तानन्तरमियं चिन्ता ध्येया । यदि द्विवचनं न युक्तं, तदा बाधकसत्त्वेन ब्रह्मशब्दादेरमुख्यत्वेन जीवेश्वराविति फलिष्यति । यदि तु युक्तं, तदा बाधकाभावाद्ब्रह्मशब्दादेर्मुख्यत्वेनेश्वररूपविशेषाविशेषाविति फलिष्यतीति भावः ।

'ಕಂ ವಾ ಮುಖ್ಯಂ' ಎಂಬ ಸಂಶಯದ ನಂತರ 'ತಥಾ' ಎಂಬ ಚಿಂತನೆಯನ್ನು ತಿಳಿಯಬೇಕು. ಒಂದು ವೇಳೆ ದ್ವಿವಚನವು ಅಯುಕ್ತವಾದರೆ ಆವಾಗ ಬಾಧಕವಿರುವುದರಿಂದ ಬ್ರಹ್ಮಶಬ್ದಾದಿಗಳಿಗೆ ಮುಖ್ಯಾರ್ಥವನ್ನು ಸ್ವೀಕರಿಸಲಾಗದು. ಆವಾಗ ಜೀವೇಶ್ವರರೇ ಕರ್ಮಫಲಭೋಕ್ತೃಗಳೆಂದು ಸಿದ್ಧವಾಗುತ್ತದೆ. ಒಂದು ವೇಳೆ ವಿಷ್ಣುವಿನಲ್ಲಿ ದ್ವಿವಚನವು ಯುಕ್ತವಾಗುವುದಾದರೆ ಆವಾಗ ಬಾಧಕವಿಲ್ಲದ ಕಾರಣ ಬ್ರಹ್ಮ ಶಬ್ದಾದಿಗಳಿಗೆ ಮುಖ್ಯಾರ್ಥವನ್ನು ಹೇಳಬಹುದು. ಆದ್ದರಿಂದ ಭಗವಂತನ ರೂಪವಿಶೇಷವೇ ಕರ್ಮಫಲಭೋಕ್ತೃಗಳೆಂದು ಫಲತಃ ಸಿದ್ಧವಾಗುತ್ತದೆಂದು ತಿಳಿಯಬೇಕು.

प्रकाशः – नन्वियं चिन्ता प्रातिपदिकार्थभूतं भोक्तृत्वं द्विवचनं च न युक्तमुत युक्तमिति पूर्वत्रैव निवेक्ष्यतामिति चेन्न, तदर्थमभोक्तृत्वश्रुतिरिति वक्ष्यमाणचिन्तायाऽनन्वयापत्तेः तस्याः प्रातिपदिकार्थमात्रविषयत्वादिति ।।

ಮೇಲೆ ಹೇಳಿದ ಸಂಶಯ ಪ್ರಕಾರವನ್ನು 'ಪ್ರಾತಿಪಾದಿಕಾರ್ಥಭೂತಂ ಭೋಕ್ತೃತ್ವಂ ದ್ವಿವಚನಂ ಚ ನ ಯುಕ್ತಮುತ ಯುಕ್ತಮ್' ಪ್ರಾತಿಪದಿಕಾರ್ಥಭೂತವಾದ ಭೋಕ್ತೃತ್ವವು ಮತ್ತು ದ್ವಿವಚನವು ಅಯುಕ್ತವೋ?

ಅಥವಾ ಯುಕ್ತವೋ ? ಎಂಬುದಾಗಿ ಹಿಂದೆಯೆ? ತೋರಿಸಬೇಕಿತ್ತಲ್ಲವೇ? ಇದು ತಪ್ಪು. ಹಾಗಾದಲ್ಲಿ 'ತದರ್ಥಮಭೋಕ್ತೃತ್ವಶ್ರುತಿಃ' ಎಂಬ ಮುಂದೆ ತೋರಿಸುವ ಸಂಶಯದ ಜೊತೆಗೆ ಅನ್ವಯವು ತೋರುವುದಿಲ್ಲ. ಏಕೆಂದರೆ ಆ ಸಂಶಯವು ಪ್ರಾತಿಪದಿಕಾರ್ಥವನ್ನು ಮಾತ್ರ ವಿಷಯೀಕರಿಸಿದೆ.

ಪಾಂಡುರಂಗಿಕೇಶವಾಚಾರ್ಯವಿರಚಿತ

ಗುರುರಾಜೀಯಮ್ (ಭಾವದೀಪ)

ಗುರುರಾಜೀಯಮ್ – ತೈ॰ ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್ ತೈ॰ ॥ ಪ್ರಾತಿಪದಿಕಾರ್ಥಸ್ಯ ಕರ್ಮಫಲಭೋಕ್ತೃತ್ವಸ್ಯ ಬ್ರಹ್ಮಣ್ಯಸಮ್ಭವೇ ಹೇತುಃ ಕರ್ಮಬನ್ಧರಹಿತ ಇತಿ ।

ಸಾರ

ಒಂದು ವೇಳೆ 'ಅನಶ್ನನ್' ಇತ್ಯಾದಿ ಶ್ರುತಿಯು ಭೋಕ್ತೃತ್ವಸಾಮಾನ್ಯವನ್ನು ವಿಷ್ಣುವಿನಲ್ಲಿ ನಿಷೇಧಿಸುವುದಾದರೆ, ಪ್ರಾತಿಪದಿಕಾರ್ಥಭೋಕ್ತೃತ್ವ ಕೂಡುವುದಿಲ್ಲ. ಆದ್ದರಿಂದ 'ಪಿಬತ್' ಎಂಬ ಪ್ರಾತಿಪದಿಕಾರ್ಥ ರೂಪವಾದ ಬಾಧಕವಿರುವುದರಿಂದ ಬ್ರಹ್ಮಶಬ್ದಾದಿಗಳಿಗೆ ಮುಖ್ಯಾರ್ಥವನ್ನು ಹೇಳಲಾಗದು. ಆದ್ದರಿಂದ ಜೀವೇಶ್ವರರೇ ಕರ್ಮಫಲಭೋಕ್ತೃಗಳಾಗಿದ್ದಾರೆಂಬುದು ಪೂರ್ವಪಕ್ಷದ ಫಲ.

ಒಂದು ವೇಳೆ 'ಅನಶ್ನನ್' ಇತ್ಯಾದಿ ಶ್ರುತಿಯು ಭೋಕ್ತೃತ್ವ ವಿಶೇಷವನ್ನು ನಿಷೇಧಿಸುವುದಾದರೆ ಆವಾಗ ಬ್ರಹ್ಮನಲ್ಲಿ ಶುಭಫಲಭೋಕ್ತೃತ್ವವು ಯುಕ್ತವಾಗುತ್ತದೆ. ಯಾವುದೇ ಬಾಧಕವಿಲ್ಲದ ಕಾರಣ ಬ್ರಹ್ಮಶಬ್ದಾದಿಗಳಿಗೆ ಮುಖ್ಯಾರ್ಥವನ್ನು ಹೇಳಬಹುದು. ಆದ್ದರಿಂದ 'ಪಿಬಂತೌ' ಎಂಬ ಶ್ರುತಿಯಿಂದ ಭಗವಂತನ ಎರಡು ರೂಪವಿಶೇಷಗಳೇ ಪ್ರತಿಪಾದ್ಯಗಳಾದ್ದರಿಂದ ಭಗವಂತನೇ ಕರ್ಮಫಲಭೋಕ್ತೃವಾಗುತ್ತಾನೆಂಬುದು ಸಿದ್ಧಾಂತದ ಫಲ.

ಪ್ರಬಲವಾದ ಪೂರ್ವಪಕ್ಷ

तात्पर्यचन्द्रिका

पूर्वपक्षस्तु – युक्तं पूर्वोक्तमत्तृत्वं ब्रह्मणि, प्रातिपदिकार्थस्य संहर्तृत्वस्य प्रत्ययार्थस्यैकत्वस्य च सम्भवात् ।

इह तु प्रातिपदिकार्थः कर्मफलभोक्तृत्वं प्रत्ययार्थो द्वित्वं च कर्मबन्धरहिते निर्भेदे च ब्रह्मणि न युक्तम् । अन्यथा ''सप्तदश प्राजापत्यान् पशूनालभते'' इत्यादौ सङ्ख्यया कर्मभेदो न स्यात् ।

अन्नमयादीनां तु ''स वा एष पुरुषोऽन्नरसमयः'' इत्यादौ यत्र ब्रह्मतोक्ता, तत्रानेकत्वं न श्रुतम् । यत्र च ''अन्नमयप्राणमयमनोमयविज्ञामयानन्दमया मे शुद्ध्यन्ताम्'' इत्यत्रानेकत्वं श्रुतम्, तत्र न ब्रह्मतोक्ता, किन्तु संज्ञाधिकरणन्यायेन अन्नमयप्राणमयेत्यादिसंज्ञाभेदेन अन्नमयादीनां भेदे शङ्किते, दाक्षायणयज्ञादिशब्दवत् प्राणमयादिशब्दाः प्रकृते ब्रह्मणि गुणविधायका नतु संज्ञामात्रम्, ततो न भेदका इत्यादिपरिहारस्तत्राभिप्रेतः ।

तथाचान्नमयादीनां ब्रह्मत्वं स्वीकृत्यैव अत्र पूर्वपक्षः ।

ಅನುವಾದ - ಪೂರ್ವಪಕ್ಷ ಹೀಗಿದೆ - ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ಅತ್ತೃತ್ವವನ್ನು ಬ್ರಹ್ಮನ ಧರ್ಮವೆಂದು ಒಪ್ಪೋಣ. ಏಕೆಂದರೆ ಪ್ರಾತಿಪದಿಕಾರ್ಥವೆನಿಸಿದ ಸಂಹರ್ತೃತ್ವವಾಗಲಿ ಪ್ರತ್ಯಯಾರ್ಥವೆನಿಸಿದ ಏಕತ್ವವಾಗಲಿ ಬ್ರಹ್ಮನಲ್ಲಿ ಯುಕ್ತವಾಗುತ್ತದೆ. ಆದರೆ ಈ ಅಧಿಕರಣದಲ್ಲಿ ಹೇಳುತ್ತಿರುವ ಪ್ರಾತಿಪದಿಕಾರ್ಥವೆನಿಸಿದ ಕರ್ಮಫಲಭೋಕ್ತೃತ್ವವಾಗಲಿ, ಪ್ರತ್ಯಯಾರ್ಥವೆನಿಸಿದ ದ್ವಿತ್ವವಾಗಲಿ ಬ್ರಹ್ಮನಲ್ಲಿ ಕೂಡುವುದಿಲ್ಲ. ಸಕಲಕರ್ಮಬಂಧಗಳಿಂದ ರಹಿತನಾಗಿರುವ ಬ್ರಹ್ಮನಲ್ಲಿ ಸುಖದುಃಖಿಗಳೆಂಬ ಕರ್ಮಫಲಗಳ ಭೋಗವನ್ನು ಹೇಳಲು ಸಾಧ್ಯವಿಲ್ಲ. ಮತ್ತು ಬ್ರಹ್ಮನು ಒಬ್ಬನೇ ಆಗಿರುವುದರಿಂದ ದ್ವಿತ್ವವನ್ನೂ ಸಹ ಹೇಳಲು ಸಾಧ್ಯವಿಲ್ಲ. ಹೀಗೊಪ್ಪದಿದ್ದರೆ ''ಸಪ್ತದಶ ಪ್ರಾಜಾಪತ್ಯಾನ್ ಪಶೂನಾಲಭತೇ'' ಎಂಬುದಾಗಿ ಪೂರ್ವಮೀಮಾಂಸೆಯಲ್ಲಿ ಸಂಖ್ಯಾಭೇದದಿಂದ ಕರ್ಮಭೇದವನ್ನು ಒಪ್ಪಿದ್ದು ತಪ್ಪಾಗಬೇಕಾದೀತು.

ಆನಂದಮಯಾಧಿಕರಣದಲ್ಲಿ ಒಬ್ಬನೇ ಬ್ರಹ್ಮನಲ್ಲಿ ಪಂಚತ್ವಸಂಖ್ಯೆಯನ್ನು ಹೇಳಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಅನ್ನಮಯಾದಿರೂಪಗಳಿಗೆ ''ಸ ವಾ ಏಷ ಪುರುಷೋಽನ್ನರಸಮಯಃ''

ಇತ್ಯಾದಿಯಾಗಿ ಎಲ್ಲಿ ಬ್ರಹ್ಮತ್ವವನ್ನು ಹೇಳಿದ್ದಾರೋ ಅಲ್ಲಿ ಆನೇಕತ್ವವು ಕೇಳಿಸುತ್ತಲೇ ಇಲ್ಲ. ಇನ್ನು ''ಅನ್ನಮಯಪ್ರಾಣಮಯಮನೋಮಯವಿಜ್ಞಾನಮಯಾನಂದಮಯಾ ಮೇ ಶುದ್ಧ್ಯಂತಾಮ್'' ಎಂಬಲ್ಲಿ ಆನೇಕತ್ವವೇನೋ ಕೇಳಿಸುತ್ತಿದೆ. ಆದರೆ ಬ್ರಹ್ಮತ್ವವು ಕೇಳಿಸುತ್ತಿಲ್ಲ.

ಆದ್ದರಿಂದ ಪೂರ್ವಮೀಮಾಂಸೆಯ ಸಂಜ್ಞಾಧಿಕರಣದ ನ್ಯಾಯದಂತೆ ಅನ್ನಮಯ, ಪ್ರಾಣಮಯ ಮೊದಲಾದ ಸಂಜ್ಞಾಭೇದದಿಂದ ಅನ್ನಮಯಾದಿರೂಪಗಳಿಗೂ ಸಹ ಭೇದವಿರಬೇಕು ಎಂಬ ಶಂಕೆಯು ಪ್ರಾಪ್ತವಾಗುತ್ತದೆ. ಇದನ್ನು ಪರಿಹರಿಸುವುದಕ್ಕಾಗಿ ದಾಕ್ಷಾಯಣಯಜ್ಞ ಮೊದಲಾದ ಶಬ್ದಗಳಂತೆ ಪ್ರಾಣಮಯಾದಿಶಬ್ದಗಳೂ ಸಹ ಬ್ರಹ್ಮನಲ್ಲಿ ಗುಣವಿಧಾಯಕವಾಗಿವೆ. ಹೊರತು ಕೇವಲ ಸಂಜ್ಞಾರೂಪವಾಗಿಲ್ಲ. ಆದ್ದರಿಂದ ಅನ್ನಮಯಾದಿ ರೂಪಗಳು ವಿಷ್ಣುವಿನಲ್ಲಿ ಭೇದವನ್ನುಂಟು ಮಾಡುವುದಿಲ್ಲ. ಈ ಅಭಿಪ್ರಾಯವನ್ನು ಆನಂದಮಯಾಧಿಕರಣದಲ್ಲಿ ವಿವಕ್ಷಿಸಲಾಗಿದೆ. ಆದ್ದರಿಂದ ಅನ್ನಮಯಾದಿಗಳಿಗೆ ಬ್ರಹ್ಮತ್ವವನ್ನು ಸ್ವೀಕರಿಸಿ ಇಲ್ಲಿ ಪೂರ್ವಪಕ್ಷ ಮಾಡಲಾಗಿದೆ.

ಪ್ರಕಾಶಃ –

'आत्मनौ' इति सौत्रद्विवचनान्तात्मपदेन 'पिबन्तौ' इति श्रुतप्रकृतिप्रत्ययोर्द्वयोरपि गत्युक्त्या तदनुरोधेन टीकायामुक्तं द्वाभ्यां पूर्वपक्षं टीका-सूचितपूर्ववैषम्योक्तिपूर्वकं व्यनक्ति – **युक्तमिति ।**

ಸೂತ್ರದಲ್ಲಿ 'ಆತ್ಮನೌ' ಎಂಬುದಾಗಿ ದ್ವಿವಚನಾಂತವಾದ ಆತ್ಮಪದವಿದೆ. ಇದರಿಂದ 'ಪಿಬಂತೌ' ಎಂಬ ಶ್ರುತಿಯ ಪ್ರಕೃತಿ ಹಾಗೂ ಪ್ರತ್ಯಯಗಳೆರಡಕ್ಕೂ ಗತಿಯನ್ನು ಹೇಳಲಾಗಿದೆ. ಇದಕ್ಕೆ ಅನುಸರಿಸಿ ಟೀಕೆಯಲ್ಲಿ ಎರಡು ಬಗೆಯ ಪೂರ್ವಪಕ್ಷವನ್ನು ಮಾಡಲಾಗಿದೆ. ಪ್ರಕೃತ ಗ್ರಂಥಕಾರರು ಹಿಂದಿನ ಅಧಿಕರಣದ ಪೂರ್ವಪಕ್ಷಕ್ಕಿಂತ ವೈಲಕ್ಷಣ್ಯವನ್ನು ತೋರಿಸುವ ಮೂಲಕ ಟೀಕೆಯ ಎರಡು ಬಗೆಯ ಪೂರ್ವಪಕ್ಷವನ್ನು 'ಯುಕ್ತಂ' ಇತ್ಯಾದಿ ವ್ಯಾಖ್ಯಾನದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಪ್ರಕಾಶಃ – 'अत्ति' इत्यत्र धातुरूपप्रकृत्यर्थस्य तिङ्प्रत्ययार्थस्येति वा, 'अदितेः' इत्यत्रादितिप्रातिपदिकार्थकस्य सुप्रत्ययार्थस्येति वाऽर्थः ।

इह तु प्रातिपदिकार्थ इति । ऋतपिबत्प्रातिपदिकयोरर्थ इत्यर्थः । 'प्रत्ययार्थः' औप्रत्ययार्थः ।

ननु भेदाभावेऽपि ब्रह्मणि द्वित्वं युज्यतां, को दोष इत्यत आह – **अन्ययेति ।**

ಗ್ರಂಥದಲ್ಲಿ 'प्रातिपदिकार्थस्य' ಎಂದಿದೆ. ಇದಕ್ಕೆ 'अत्रि' ಎಂಬಲ್ಲಿ ಧಾತುರೂಪವಾದ ಪ್ರಕೃತ್ಯರ್ಥವನ್ನು ತಿಙಪ್ರತ್ಯಯಾರ್ಥವನ್ನು ಭಗವಂತನಲ್ಲಿ ಹೇಳಿದ್ದಾರೆ ಎಂದರ್ಥ. ಅಥವಾ 'अदितेः' ಎಂಬ ಶ್ರುತಿಯಲ್ಲಿರುವ ಅದಿತಿ ಪ್ರಾತಿಪದಿಕಾರ್ಥವನ್ನು ಮತ್ತು ಸುಪ್ರತ್ಯಯಾರ್ಥವನ್ನು ಹೇಳಿದ್ದಾರೆಂದೂ ಸಹ ತಿಳಿಯಬಹುದು.

ಈ ಅಧಿಕರಣದಲ್ಲಿ ಪ್ರಾತಿಪದಿಕಾರ್ಥವೆಂದರೆ 'ಋತಂ ಪಿಬಂತೌ ಎಂಬ ಶ್ರುತಿಯಲ್ಲಿರುವ ಋತ ಹಾಗೂ ಪ್ರಾತಿಪದಿಕಗಳ ಅರ್ಥ ಎಂದರ್ಥ.

ಬ್ರಹ್ಮನಲ್ಲಿ ಭೇದವಿಲ್ಲದಿದ್ದರೂ ಸಹ ದ್ವಿತ್ವವನ್ನು ಹೇಳಿದರೆ ಏನು ದೋಷ ? ಎಂಬ ಪ್ರಶ್ನೆಗೆ 'अन्यथा' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

प्रकाशः – द्वितीये ''पृथक्त्वनिवेशात्सङ्ख्यया कर्मभेदस्स्यात्'' इति द्वितीयपादीयसप्तमाधिकरणे ''सप्तदश प्राजापत्यान्पशूनालभते'' इति वाक्ये किं सप्तदशपशुद्रव्यक एको यागः उतैकपशुद्रव्यक अनेके सप्तदश यागा इति संशये,

प्राजापत्यशब्देन देवतासम्बन्धोपसर्जनकद्रव्यमेवोच्यते । यच्च प्रधानं तस्यैवार्थान्तरेण बहुत्वेनान्वयो नोपसर्जनदेवतासम्बन्धस्य । तथा च बहुभिः पशुभिः व्यासज्यैका देवता सम्बध्यते । द्रव्यदेवतासम्बन्धैक्यादेको याग इति प्राप्ते, प्रथममेव प्रकृतिप्रत्ययोरन्वयादेवताविशिष्टमेव द्रयं प्राजापत्यशब्देनाभिहितं पश्वादिविशिष्टेनैव रूपेण सङ्ख्ययाऽन्वेति । तथा च भिन्नैः द्रव्यदेवतासम्बन्धैर्भिन्ना एव यागाः कल्प्यन्ते । एवञ्च सति चोदकावगतमेकपशुनिष्पन्नैकादशावदानद्रव्यकत्वं यागस्यानुगृहीतं भवति नान्यथेति सिद्धान्तितम् । यदि 'पिबन्तौ' इत्यत्र द्वित्वसङ्ख्यया भेदो न स्यात्तदा तत्रापि सङ्ख्यया कर्मभेदो न स्यादित्यर्थः ।

पृथक्त्वनिवेशात्सङ्ख्या कर्मभेदः स्यात्[1] (७-१-८)

---

(१) भाट्टसङ्ग्रहः –

अथ सप्तमं सङ्ख्याकृतकर्मभेदाधिकरणम्

पृथक्त्वनिवेशात् सङ्ख्यया कर्मभेदः स्यात् ॥ २१ ॥

अत्र पूर्वन्यायेन शङ्कनात् **सङ्कतिः** । 'तिस्र आहुतीर्जुहोति' इत्यत्र एको होमो विधीयते, बहवो वेति सन्देहे 'समिधो यजति' इत्यादाविव 'जुहोति' इत्याख्यातस्य अभ्यासाभावेन सकृदेव श्रवणात् तदैक्यात् तद्वाच्यभावनारूपकर्माप्येकमेव । त्रित्वसङ्ख्या तु 'एकादश प्रयाजान् यजति' इति श्रुतसङ्ख्यायाः पञ्चप्रयाजेष्वावृत्त्या निवेशवत् पूर्वत्र सोमयागैक्यैप्यभ्यासात् क्रमसमुच्चयोपपत्तिवदत्रापि कर्मैक्येप्यभ्यासादुपपद्यत इति प्राप्ते

'ಸಪ್ತದಶ ಪ್ರಾಜಾಪತ್ಯಾನ್‌ಪಶೂನಾಲಭತೇ' ಎಂಬ ವಾಕ್ಯವನ್ನು ಇಲ್ಲಿ ವಿಚಾರ ಮಾಡಿದ್ದಾರೆ. ಹದಿನೇಳು ಪಶುಗಳೇ ದ್ರವ್ಯವಾಗಿವುಳ್ಳ ಒಂದು ಯಾಗವನ್ನು ವಿಧಿಸುತ್ತಿದೆಯೋ? ಅಥವಾ ಒಂದೊಂದು ಪಶುವೇ ದ್ರವ್ಯವಾಗಿವುಳ್ಳ ಹದಿನೇಳು ಯಾಗಗಳನ್ನು ದ್ರವ್ಯವಾಗಿ ವಿಧಿಸುತ್ತಿದೆಯೋ? ಎಂದು ಸಂಶಯ ಬರುತ್ತಿದೆ.

ಪೂರ್ವಪಕ್ಷ - 'ಪ್ರಾಜಾಪತ್ಯ' ಶಬ್ದವು ಪ್ರಜಾಪತಿ ಸಂಬಂಧವನ್ನು ಹೇಳುತ್ತಿದೆ. 'ಪಶು' ಶಬ್ದವು

पदान्तरनिरपेक्षस्य प्रमित्यजनकत्वात् पादान्तरेण 'तिस्रः' इत्यनेन विशेषितेनाऽख्यातेनावगम्यमानं बहुत्वं नाभ्यासेन नेतव्यम् । प्रयाजेषु तु 'पञ्च प्रयाजाः' इति निर्णीतसङ्ख्यावत्त्वेन अभ्यासेन विनैकादशत्वायोगादावृत्त्या तन्नीयते । तथा सोमयागेप्येवं पूर्वोक्तं ध्येयमिति सिद्धान्त इति । तथा च **सूत्रम्, सङ्ख्यया कर्मभेदः स्यात्** । कुतः? तस्याः **पृथक्त्वेन** कर्मभेदेन सहैव **निवेशात्** । न ह्येकत्रानेसङ्ख्या निवेष्टुमलम् । विरोधादिति ।

(द्रव्यदेवतासम्बन्धसंङ्ख्याभेदस्य कर्मभेदसाधकत्वसमर्थनम्)

अत्र **वृतिकारोक्ते** 'तिस्रः' इति वाक्ये कर्मण्येव सङ्ख्याश्रवणात् पूर्वपक्षाशङ्क मन्देति मत्वा **भाष्यकारो** वाजपेयगतं 'सप्तदश प्राजापत्यान्' इति द्रव्यगतसङ्ख्यायुक्तं वाक्यमुदाहृत्य व्यचारयत् । किं सप्तदशपशुद्रव्यक एको यागो विधीयते उत एकैकपशुद्रव्यकाः सप्तदशयागा इति **सन्देहः** । तत्र 'प्रजापतिर्देवता येषां' इति विगृह्य तद्धितोत्पादने तावतां पशूनां देवतासम्बन्धस्यैक्यात्तावत्पशुद्रव्यक एक एव यागः । पशूनां प्राधान्येन बहुत्वयुक्तानामेव तेषां पश्चादुपसर्जनभूतदेवतासम्बन्धस्तद्धितेनोच्यत इति वाच्यत्वादिति प्राप्ते देवतान्वित-द्रव्यवाचिनस्तद्धितान्तप्राजापत्यप्रातिपदिकात् परत्र श्रुतबहुवचनात् देवतासम्बन्ध-विशिष्टानामेव पशूनां बहुत्वप्रतीत्या 'बहवः प्राजापत्याः सप्तदश' इत्युक्त्या विशेषणीभूत-देवतासम्बन्धानां सप्तदशत्वप्रतीत्या देवतासम्बन्धानेकत्वादनेके यागाः ।

द्रव्यदेवतासम्बन्धैक्यस्य कर्मैक्यसाधकत्वानङ्गीकारे बाधकोक्तिः

किञ्च द्रव्यदेवतासम्बन्धैक्येन कर्मैक्येऽङ्गीकृते सति 'प्रकृतिवद्विकृतिः कार्या' इति चोदकमप्येकमेव सत् एकमेवावदानगणं प्रापयेत् । स चैकस्मिन् पशौ कृतार्थः सन् पश्चन्तरे न प्राप्नोतीति सर्वपशूनां प्राजापत्यत्वमसम्पादितं स्यात् । यागबहुत्वे तु प्रतिकर्मावसायिभिश्चोदकैस्तावन्त एवावदानगणाः प्राप्यन्त इति चोदकबलात् कर्मभेदसिद्धिरिति **सिद्धान्तः** । तदुक्तं वार्तिके

एककर्मत्वपक्षे स्यादेक एव तु चोदकः ।
ततश्चैकगणप्राप्त्या न सर्वपशुसङ्गहः ॥ इति

सूत्रांशार्थस्तु, पृथक्त्वेन द्रव्यदेवतासम्बन्धभेदेनेत्यर्थः । शिष्टं प्राग्वत् । **फलन्तु** एकस्मिन् पशौ नष्टे पशुगणावृत्तिः **पूर्वपक्षे** । **सिद्धान्ते तु** एक एव पशुरावर्तत इति ।

इति सप्तमं सङ्ख्याकृतकर्मभेदाधिकरणम्

ದ್ರವ್ಯವನ್ನು ಹೇಳುತ್ತಿದೆ. ಇದರಿಂದ ಪ್ರಜಾಪತಿ ಸಂಬಂಧಿಯಾದ ಪಶುಗಳೇ ಯಜ್ಞದಲ್ಲಿ ದ್ರವ್ಯವಾಗಿವೆ ಎಂದು ಹೇಳಿದಂತಾಗುತ್ತದೆ. ಆದ್ದರಿಂದ ದ್ರವ್ಯದೇವತಾಸಂಬಂಧವನ್ನು ಈ ವಾಕ್ಯವು ಹೇಳುತ್ತಿದೆ. ದ್ರವ್ಯದಲ್ಲಿ ದೇವತಾಸಂಬಂಧವನ್ನು ಹೇಳಿದ್ದರಿಂದ ದ್ರವ್ಯವು ಪ್ರಧಾನವಾಯಿತು. ದೇವತಾಸಂಬಂಧವು ಅಪ್ರಧಾನವಾಯಿತು. 'ಪ್ರಾಜಾಪತ್ಯಾನ್' ಎಂಬಲ್ಲಿರುವ ಬಹುವಚನದಲ್ಲಿ ತಿಳಿಯುವ ಬಹುತ್ವವನ್ನು ಪ್ರಧಾನವಾದ ದ್ರವ್ಯದಲ್ಲಿ ಸಂಬಂಧ ಮಾಡಬೇಕೇ ಹೊರತು ಅಪ್ರಧಾನವಾದ ದ್ರವ್ಯದೇವತಾ ಸಂಬಂಧದಲ್ಲಿ ಅನ್ವಯವನ್ನು ಮಾಡಬಾರದು. ಇದರಿಂದ ಅನೇಕ ಪಶುಗಳೇ ದ್ರವ್ಯವಾಗಿವುಳ್ಳ ಒಂದೇ ಯಾಗದಲ್ಲಿ ದೇವತಾ ಸಂಬಂಧವನ್ನು ಹೇಳಿದಂತಾಗುತ್ತದೆ. ಅನೇಕ ಪಶುಗಳೇ ದ್ರವ್ಯವಾಗಿವುಳ್ಳ ಯಾಗದಲ್ಲಿ ಒಂದೇ ದೇವತಾ ಸಂಬಂಧವನ್ನು ಹೇಳಲು ಹೇಗೆ ಸಾಧ್ಯ ? ಎಂದು ಪ್ರಶ್ನಿಸಬಾರದು. ಒಂದೇ ದೇವತೆಯು ವ್ಯಾಸಜ್ಯ ವೃತ್ತಿಸಂಬಂಧದಿಂದ ಎಲ್ಲೆಡೆ ಸಂಬಂಧವನ್ನು ಹೊಂದುತ್ತದೆ. ಯಾವರೀತಿಯಾಗಿ ಒಂದೇ ದ್ವಿತ್ವವು ಎರಡು ಪದಾರ್ಥದಲ್ಲಿರುತ್ತದೋ ಅಥವಾ ಒಬ್ಬನೇ ವ್ಯಕ್ತಿಯು ಎರಡು ಕಲ್ಲುಗಳ ಮೇಲೆ ಹೇಗೆ ನಿಲ್ಲುತ್ತಾನೋ ಅದರಂತೆ ಒಂದೇ ದೇವತೆಯು ಅನೇಕ ಪಶುಗಳಲ್ಲಿ ಸಂಬಂಧವನ್ನು ಹೊಂದುತ್ತದೆ. ಹೀಗೆ ದ್ರವ್ಯ ಹಾಗೂ ದೇವತೆಗಳ ಸಂಬಂಧವು ಒಂದೇ ಆಗಿರುವುದರಿಂದ ಯಾಗವೂ ಸಹ ಒಂದೇ ಆಗಿದೆ.

ಸಿದ್ಧಾಂತ - 'ಪ್ರಾಜಾಪತ್ಯಾನ್' ಎಂಬಲ್ಲಿ ಪ್ರಕೃತಿ ಪ್ರತ್ಯಯ ಬಹುವಚನಗಳು ಇವೆ. ಮೊದಲು ಪ್ರಕೃತಿ ಪ್ರತ್ಯಯಗಳು ಉಪಸ್ಥಿತವಾಗಿ ಅನಂತರ ಬಹುತ್ವವು ಉಪಸ್ಥಿತವಾಗುತ್ತದೆ. ಅಂದರೆ ಪ್ರಜಾಪತಿಯೆಂಬ ಪ್ರಾತಿಪದಿಕವು ಹಾಗೂ ಅದರ ಮುಂದಿರುವ 'ತದ್ಧಿತ' ಪ್ರತ್ಯಯವು ಮೊದಲು ಪಶುಗಳಲ್ಲಿ ಸಂಬಂಧವನ್ನು ಹೊಂದಿ ಅನಂತರ ಬಹುವಚನದಿಂದ ತಿಳಿಯುವ ಬಹುತ್ವವು ಸಂಬಂಧವನ್ನು ಹೊಂದುತ್ತದೆ. ಏಕೆಂದರೆ ಪ್ರಕೃತಿ ಪ್ರತ್ಯಯಗಳು ಅಂತರಂಗವಾಗಿವೆ. ಬಹುವಚನವು ಬಹಿರಂಗವಾಗಿದೆ. ಬಹಿರಂಗಕ್ಕಿಂತ ಅಂತರಂಗವೇ ಶ್ರೇಷ್ಠವಾದ್ದರಿಂದ ಪ್ರಕೃತಿಪ್ರತ್ಯಯಗಳ ಅರ್ಥವೇ ಮೊದಲು ಅನ್ವಯ ಹೊಂದುತ್ತದೆ ಹೊರತು ಬಹಿರಂಗವೆನಿಸಿದ ಬಹುತ್ವವು ಅನ್ವಯ ಹೊಂದುವುದಿಲ್ಲ. ಆದ್ದರಿಂದ ದೇವತಾಸಂಬಂಧದಿಂದ ವಿಶಿಷ್ಟವಾದ ಪಶುಗಳ ಜ್ಞಾನವೇ ಮೊದಲು ಬರುತ್ತದೆ. ಅನಂತರ ಬಹುತ್ವದಿಂದ ವಿಶಿಷ್ಟವಾದ ಪಶುಗಳ ಜ್ಞಾನವು ಬರುತ್ತದೆ. ಆದ್ದರಿಂದ ಬೇರೆ ಬೇರೆ ದ್ರವ್ಯಗಳಿಂದ ವಿಶಿಷ್ಟವಾದ ದೇವತಾಸಂಬಂಧವು ಭಿನ್ನಭಿನ್ನವಾದ್ದರಿಂದ ಯಾಗಗಳೂ ಸಹ ಭಿನ್ನಭಿನ್ನವೆಂದು ಸಿದ್ಧವಾಗುತ್ತದೆ.

ಒಂದು ವೇಳೆ ಹದಿನೇಳು ಪಶುಗಳುಳ್ಳ ಒಂದೇ ಯಾಗವೆಂದು ಹೇಳುವುದಾದರೆ ಮತ್ತೊಂದು ಅನುಪಪತ್ತಿ ಬರುತ್ತದೆ - ಈ ವಾಕ್ಯದಲ್ಲಿ ಹೇಳುತ್ತಿರುವ ಯಾಗವು ವಿಕೃತಿಯಾಗವಾಗಿದೆ. 'ಪ್ರಕೃತಿವದ್ವಿಕೃತಿಃ ಕರ್ತವ್ಯಾ' ಎಂಬ ಚೋದಕ ಪ್ರಮಾಣದಂತೆ ಈ ಯಾಗವನ್ನು ಅನುಷ್ಠಾನ ಮಾಡಬೇಕು. ಪ್ರಕೃತಿಯಾಗದಲ್ಲಿ ಯಾಗದ್ರವ್ಯವಾದ ಪಶುವನ್ನು ಹನ್ನೊಂದು ಬಾರಿ ಅವಧಾನ ಮಾಡಬೇಕೆಂದು ಹೇಳಿದ್ದಾರೆ. ಅದರಂತೆ ಇಲ್ಲಿಯೂ ಸಹ ಹನ್ನೊಂದು ಬಾರಿ ಪಶುವನ್ನು ಅವಧಾನ ಮಾಡಬೇಕಾಗುತ್ತದೆ. ಆದರೆ ನೀವು ಹೇಳುವಂತೆ ಯಾಗವು ಒಂದೇ ಆದರೆ 'ಪ್ರಕೃತಿವದ್ ವಿಕೃತಿಃ ಕರ್ತವ್ಯಾ' ಎಂಬ ಚೋದಕವೂ ಸಹ ಒಂದೇ ಆಗುತ್ತದೆ. ಚೋದಕವು ಒಂದೇ ಆದ್ದರಿಂದ ಅವಧಾನವೂ ಸಹ ಒಂದೇ ಆಗುತ್ತದೆ ಹೊರತು ಅನೇಕವಾಗುವುದಿಲ್ಲ. ಹದಿನೇಳು ಪಶುಗಳಲ್ಲಿ ಹನ್ನೊಂದು ಬಾರಿ ನಡೆಸುವ ಅವಧಾನ ಗುಣವನ್ನು ಯಾವ ಪ್ರಕಾರದಿಂದಲೂ ಕೂಡಿಸಲು ಸಾಧ್ಯವಿಲ್ಲ. ಒಂದು ಪಶುವಿನಲ್ಲಿ ಹನ್ನೊಂದು ಬಾರಿ ಮಾಡುವ ಅವಧಾನವನ್ನು ಉಪಪಾದಿಸಿದರೆ

ಉಳಿದ ಹದಿನಾರು ಪಶುಗಳಲ್ಲಿ ಪ್ರಜಾಪತಿಯ ಸಂಬಂಧವನ್ನು ಹೇಳಿದಂತಾಗುವುದಿಲ್ಲ. ಈ ಅನುಪಪತ್ತಿಯ ಪರಿಹಾರಕ್ಕಾಗಿ ಅನೇಕ ಯಾಗವೆಂದೇ ಹೇಳಬೇಕು. ಆಗ ಚೋದಕ ಪ್ರಮಾಣವೂ ಸಹ ಅನೇಕವಾಗುತ್ತದೆ. ಆದ್ದರಿಂದಲೇ ಪ್ರತಿಯೊಂದು ಪಶುಗಳಲ್ಲಿಯೂ ಪ್ರಕೃತಿಯಾಗದಂತೆ ಹನ್ನೊಂದು ಬಗೆಯ ಅವಧಾನವನ್ನು ಮಾಡಬಹುದು. ಪ್ರಜಾಪತಿಯ ಸಂಬಂಧವನ್ನೂ ಸಹ ಎಲ್ಲ ದ್ರವ್ಯಗಳಿಗೂ ಹೇಳಿದಂತಾಗುತ್ತದೆ.

ಹೀಗೆ ಈ ಪೂರ್ವಮೀಮಾಂಸಾಧಿಕರಣದಲ್ಲಿ ಹದಿನೇಳು ಪಶುಗಳೆಂಬ ಸಂಖ್ಯಾಭೇದದಿಂದ ಹದಿನೇಳು ಯಾಗಗಳನ್ನು ಮಾಡಬೇಕೆಂದು ನಿರ್ಣಯಿಸಿದ್ದಾರೆ. ಪ್ರಕೃತ 'ಪಿಬಂತೌ' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ದ್ವಿತ್ವ ಸಂಖ್ಯೆಯಿಂದ ಭೋಕ್ತೃಗಳಾದ ವ್ಯಕ್ತಿಯಲ್ಲಿ ಭೇದವನ್ನು ಒಪ್ಪದಿದ್ದರೆ ಈ ಪೂರ್ವಮೀಮಾಂಸಾಧಿಕರಣದಲ್ಲಿ ಸಂಖ್ಯಾಭೇದದಿಂದ ಕರ್ಮಭೇದವನ್ನು ಒಪ್ಪಿದ್ದು ತಪ್ಪಾಗಬೇಕಾದೀತು? ಎಂಬುದಾಗಿ ದೃಷ್ಟಾಂತದಾರ್ಷ್ಟಾಂತಿಕಭಾವವನ್ನು ತಿಳಿಯಬೇಕು.

ಪ್ರಕಾಶಃ – ಆದಿಪದೇನ ''ದ್ವಾ ಸುಪರ್ಣಾ'' ''ದ್ವೇ ಬ್ರಹ್ಮಣೀ ವೇದಿತವ್ಯೇ'' ಇತ್ಯಾದೌ ಚೇತನಭೇದೋ ನ ಸ್ಯಾದಿತಿ ಗೃಹ್ಯತೇ ।

ನನ್ವಿದಮಾನನ್ದಮಯಾಧಿಕರಣೇನೈವ ಪರಿಹೃತಂ, ''ಬಹ್ವರೂಪತ್ವಾಚ್ಚ'' ಇತಿ,

ಅನನ್ಯೋऽಪ್ಯನ್ಯಶಬ್ದೇನ ತಥೈಕೋ ಬಹ್ವರೂಪವಾನ್ ।
ಪ್ರೋಚ್ಯತೇ ..... ॥

ಇತಿ ಭಾಷ್ಯೋಕ್ತೇರಿತ್ಯತಃ, 'ನಹಿ ತತ್ರ ದ್ವಿವಚನಂ ಬಹುವಚನಂ ವಾ ಶಙ್ಕಿತಂ, ತದಭಾವಾತ್, ಕಿನ್ನಾಮ ಶಬ್ದಭೇದಾದಿನಾ ಭೇದಃ'' ಇತಿ ನ್ಯಾಯವಿವರಣಟೀಕಾನುರೋಧೇನ ತಾಂ ವಿಶದಯನ್ನೇವ ಪರಿಹಾರಮಾಹ – **ಅನ್ನಮಯಾದೀನಾಮಿತಿ** । 'ಯತ್ರ' ಬ್ರಹ್ಮಬಲ್ಲವಾಂ ।

ಗ್ರಂಥದಲ್ಲಿ 'ಇತ್ಯಾದೌ' ಎಂಬುದಾಗಿ ಪೂರ್ವಮೀಮಾಂಸೆಯ ಉದಾಹರಣೆಯ ಜೊತೆಗೆ ಆದಿಪದವನ್ನು ಹೇಳಿದ್ದಾರೆ. ಇದರಿಂದ 'ದ್ವಾ ಸುಪರ್ಣಾ' 'ದ್ವೇ ಬ್ರಹ್ಮಣೀ ವೇದಿತವ್ಯೇ'' ಇತ್ಯಾದಿ ಸ್ಥಳಗಳಲ್ಲಿ ಸಂಖ್ಯಾಭೇದದಿಂದ ಚೇತನಭೇದವನ್ನು ಸಿದ್ಧಾಂತದಲ್ಲಿಯೂ ಒಪ್ಪಲಾಗಿದೆ. ಇದೂ ಸಹ ಭಗ್ನವಾದೀತೆಂದು ತಿಳಿಯಬೇಕು.

ಒಬ್ಬನೇ ಭಗವಂತನಲ್ಲಿ ಅನೇಕತ್ವವು ಕೂಡುವುದಿಲ್ಲವೆಂಬ ಶಂಕೆಯನ್ನು ಆನಂದಮಯಾಧಿಕರಣದಲ್ಲಿಯೇ ಪರಿಹರಿಸಲಾಗಿದೆ - ಏಕೆಂದರೆ 'ಬಹುರೂಪತ್ವಾಚ್ಚ' ಎಂಬ ಭಾಷ್ಯದಲ್ಲಿ ಮತ್ತು 'ಅನನ್ಯೋऽಪ್ಯನ್ಯಶಬ್ದೇನ ತಥೈಕೋ ಬಹುರೂಪವಾನ್ । ಪ್ರೋಚ್ಯತೇ ..... ॥'' ಎಂಬ ಭಾಷ್ಯದಲ್ಲಿ ಒಬ್ಬನೇ ಭಗವಂತನಿಗೆ ಅನೇಕ ರೂಪಗಳಿರುವುದರಿಂದ ಅನೇಕತ್ವ ಸಂಖ್ಯೆಯನ್ನು ಕೂಡಿಸಬಹುದೆಂದು ಹೇಳಿದ್ದಾರಲ್ಲವೇ? ಎಂದು ಪ್ರಶ್ನಿಸಬಾರದು.

'ನಹಿ ತತ್ರ ದ್ವಿವಚನಂ, ಬಹುವಚನಂ ವಾ ಶಂಕಿತಂ, ತದಭಾವಾತ್, ಕಿನ್ನಾಮ ಶಬ್ದಭೇದಾದಿನಾ ಭೇದಃ' ಭಗವಂತನಲ್ಲಿ ದ್ವಿವಚನವನ್ನಾಗಲಿ, ಬಹುವಚನವನ್ನಾಗಲಿ ಶಂಕಿಸಲಾಗದು. ಏಕೆಂದರೆ ಅವನಲ್ಲಿ ದ್ವಿತ್ವಾದಿಗಳೇ

ಇರುವುದಿಲ್ಲ ಹೊರತಾಗಿ ಶಬ್ದಭೇದದಿಂದಷ್ಟೇ ಭೇದವನ್ನು ತಿಳಿಯಬೇಕು ಎಂಬ ನ್ಯಾಯವಿವರಣೆಯ ಟೀಕೆಯನ್ನು ಅನುಸರಿಸಿ ಪರಿಹಾರವನ್ನು ಹೇಳುತ್ತಿದ್ದಾರೆ 'ಅನ್ನಮಯಾದೀನಾಂ' ಇತ್ಯಾದಿಯಾಗಿ.

प्रकाशः – यत्र चेति । नारायणोपनिषदि । संज्ञाधिकरणं जिज्ञासासूत्रे, दाक्षायणयज्ञाधिकरणं आनन्दमयनय एव विवृतम् । न्यायद्वयस्य शङ्कापरिहारोपयोगः तत्रैव दर्शितः ।

'ಯತ್ರ' ಎಂಬ ಶಬ್ದಕ್ಕೆ ಬ್ರಹ್ಮನಲ್ಲಿ ಎಂದರ್ಥ. 'ಯತ್ರಚ' ಎಂಬ ಶಬ್ದಕ್ಕೆ ನಾರಾಯಣನಲ್ಲಿ ಎಂದರ್ಥ. ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟ ಸಂಜ್ಞಾಧಿಕರಣವು ಪೂರ್ವಮೀಮಾಂಸೆಯಲ್ಲಿದೆ. ಇದನ್ನು ಜಿಜ್ಞಾಸಾಧಿಕರಣದಲ್ಲಿ ವಿವರಿಸಿದ್ದಾಗಿದೆ. ಪೂರ್ವಮೀಮಾಂಸೆಯಲ್ಲಿ ಬರುವ ದಾಕ್ಷಾಯಣಯಜ್ಞಾಧಿಕರಣವನ್ನು ಆನಂದಮಯಾಧಿಕರಣದಲ್ಲಿಯೇ ವಿವರಿಸಿದ್ದಾಗಿದೆ. ಮತ್ತು ಈ ಎರಡು ಅಧಿಕರಣದಿಂದ ತಿಳಿಯುವ ನ್ಯಾಯವು ಪ್ರಕೃತ ಶಂಕಾಪರಿಹಾರಕ್ಕೆ ಹೇಗೆ ಉಪಯೋಗವಾಗುತ್ತದೆಂಬುದನ್ನೂ ಸಹ ಅಲ್ಲಿಯೇ ತೋರಿಸಲಾಗಿದೆ.

गुरुराजीयम् – प्रत्ययार्थभूतद्वित्वस्य ब्रह्मण्यसम्भवे हेतुमाह – निर्भेदेति ।। ननु च द्वित्वरूप सङ्ख्यानिर्भेद ब्रह्मण्यपि किं न स्यादित्यत आह – अन्यथेति ।। द्वित्वादि सङ्ख्यायाभेद साधकत्वमनङ्गीकृत्य निर्भेदेपि ब्रह्मणि सङ्ख्याभ्युपगम इत्यर्थः । नन्वन्नमयादावनेकत्व श्रवणेऽप्यानन्दमयाधिकरणे तस्य ब्रह्मत्वसमर्थनेन तन्न्यायेन द्वित्वश्रवणेऽपि प्रकृते ब्रह्मत्वं किं न स्यादित्यत आह – अन्नमयादीनां त्विति ।। संज्ञाधिकरणन्यायेति ।। संज्ञाचोत्पत्तिसंयोगादिति संज्ञाधिकरणन्यायेनेत्यर्थः । गुणविधायकाः सर्वोपजीव्यत्वमहाप्राणत्वरूपगुणविधायका इत्यर्थः ।

सार

ಈ ಅಧಿಕರಣದ ಪೂರ್ವಪಕ್ಷ ಹೀಗಿದೆ - ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ಅತೃತ್ವವನ್ನು ಬ್ರಹ್ಮನ ಧರ್ಮವೆಂದು ಒಪ್ಪೋಣ. ಏಕೆಂದರೆ ಪ್ರಾತಿಪದಿಕಾರ್ಥವೆನಿಸಿದ ಸಂಹರ್ತೃತ್ವವಾಗಲಿ ಪ್ರತ್ಯಯಾರ್ಥವೆನಿಸಿದ ಏಕತ್ವವಾಗಲಿ ಬ್ರಹ್ಮನಲ್ಲಿ ಯುಕ್ತವಾಗುತ್ತದೆ. ಆದರೆ ಈ ಅಧಿಕರಣದಲ್ಲಿ ಪ್ರಾತಿಪದಿಕಾರ್ಥವೆನಿಸಿದ ಕರ್ಮಫಲಭೋಕ್ತೃತ್ವವಾಗಲಿ, ಪ್ರತ್ಯಯಾರ್ಥವೆನಿಸಿದ ದ್ವಿತ್ವವಾಗಲಿ ಬ್ರಹ್ಮನಲ್ಲಿ ಕೂಡುವುದಿಲ್ಲ. ವಸ್ತುತಃ ಭಗವಂತನಲ್ಲಿ 'ದ್ವಿತ್ವ' 'ಅನೇಕತ್ವ' ಮೊದಲಾದ ಸಂಖ್ಯೆಗಳು

ಅನುಪಪನ್ನವಾಗುವುದಿಲ್ಲ ಎಂಬ ವಿಚಾರವನ್ನು ಆನಂದಮಯಾಧಿಕರಣದಲ್ಲಿಯೇ ಹೇಳಿದ್ದಾಗಿದೆ. ಆದರೆ ನ್ಯಾಯವಿವರಣದಲ್ಲಿ 'ದ್ವಿತ್ವಾದಿ ಸಂಖ್ಯೆಗಳನ್ನು ಆನಂದಮಯಾಧಿಕರಣದಲ್ಲಿ ಸಮರ್ಥನೆ ಮಾಡದ ಕಾರಣ ಈ ಅಧಿಕರಣವು ಹೊರಟಿದೆ' ಎಂದು ಹೇಳಿದ್ದಾರೆ. ಆನಂದಮಯಾಧಿಕರಣದಲ್ಲಿ ಕೇವಲ ಅನ್ನಮಯಾದಿಶಬ್ದಗಳು ಭಿನ್ನಭಿನ್ನವಾದ್ದರಿಂದ ಬ್ರಹ್ಮನೂ ಸಹ ಭಿನ್ನನಾಗಬೇಕಲ್ಲವೇ ? ಎಂಬ ಪೂರ್ವಪಕ್ಷವನ್ನಷ್ಟೇ ನಿರಾಕರಿಸಲಾಗಿದೆ ಹೊರತು ಸಂಖ್ಯಾಭೇದದಿಂದ ಬ್ರಹ್ಮನ ಭೇದವನ್ನು ಆಶಂಕಿಸಿಲ್ಲ. ಪ್ರಕೃತ ಈ ಅಧಿಕರಣದಲ್ಲಿ ಸಂಖ್ಯಾಭೇದದಿಂದ ಬ್ರಹ್ಮನ ಭೇದವು ಆಕ್ಷಿಪ್ತವಾಗುತ್ತಿದೆ ಎಂದು ಪೂರ್ವಪಕ್ಷ ಮಾಡಿದ್ದು ಯುಕ್ತವಾಗಿದೆ.

ದ್ವಿವಚನಶ್ರುತಿ ನಿರವಕಾಶವೆಂದು ಪೂರ್ವಪಕ್ಷ

तात्पर्यचन्द्रिका

अथवा – ब्रह्मावयत्वेऽपि ब्रह्मत्वमिति तत्र व्युत्पाद्यम्, अत्र त्वनेकत्वेऽपि ब्रह्मत्वमिति । तथा चान्नमयादीनामनेकत्वादब्रह्मत्वमिति शङ्कया अप्यत्रत्यसिद्धान्तेनैव परिहार्यत्वादत्रत्यपूर्वपक्षेऽन्नमयादीनामपि ब्रह्मत्वाक्षेपः । अत एव न्यायविवरणे ''न चावयवत्वविरोधः'' इति तत्रोक्तं, अत्र 'द्विवचनश्रुतेरपि निरवकाशत्वं नास्ति' इति ।

नच 'दाराः' इत्यादौ बहुवचनमिव अत्र द्विवचनं शब्दसाधुत्वेनैव प्रसिद्धम् । नच बाधकं विना 'पिबन्तौ प्रविष्टौ छायातपौ' इति बहूनि द्विवचनानि वचनव्यत्ययेन एकस्मिन्नपि युक्तानि । नच ''ग्रहं सम्मार्ष्टि'' इत्यादाविवोद्देश्य-विशेषणत्वात् सङ्ख्या न विवक्षितेति युक्तम्, ब्रह्मणि ऋतपानस्य अप्राप्तत्वात् ।

''ऋतं पिबन्तौ'' इत्यस्योद्देशकत्वेऽपि 'छायातपौ' इत्यादेः विधायकत्वावश्यम्भावाच्च । ग्रहैकत्वस्य वाक्यभेदापत्त्या विध्यसंस्पर्शेऽपि प्रत्येकं ग्रहेष्वेकत्वस्य स्वरूपतः सत्त्वेन अनुवादत्ववत् प्रकृते ब्रह्मणि द्वित्वस्य स्वरूपत एवाभावेन अनुवादत्वासम्भवाच्च ।

नच 'पिबन्तौ' इत्यादिकमन्यत्र द्वित्वबाच्येव सदिहातिदेशतः प्राप्तम्, येन ''अग्नये जुष्टं निर्वपामि'' इति मन्त्रस्य सौर्येऽतिदेशतः प्राप्तस्य सूर्यायेत्यूहवत्

द्विवचनान्तस्यैकवचनान्ततयोहस्स्यात् । न चैकस्मिन्नेव यागे ''समिधो यजति'' इत्यादौ बहुवचनान्तसमित्पदमिवैकस्मिन्नैव ब्रह्मणि द्विवचनान्तं पिबत्पदमस्त्विति वाच्यम्, रूढस्य समिच्छब्दस्य बहुवचनप्रतिरूपकनामधेयत्ववत्, यौगिकस्य 'पिबन्तौ' इत्यादेस्तदयोगात् ।

छायात्वं च ब्रह्मणो न युक्तम्, जीववदविद्याश्रयत्वासम्भवात् । तस्मादत्र पिबन्तौ जीवेश्वरावेव, ईश्वरस्याभोक्तृत्वेऽपि च्छत्रिन्यायेन पातृत्वव्यपदेशः, गुहाप्रविष्टत्वब्रह्मशब्दौ तु जीवेऽपि युक्ताविति ।।

ಅನುವಾದ - ಅಥವಾ ಆನಂದಮಯಾಧಿಕರಣದಲ್ಲಿ ಅನ್ನಮಯಾದಿಗಳು ಬ್ರಹ್ಮನ ಅವಯವಗಳಾಗಿದ್ದರೂ ಬ್ರಹ್ಮಸ್ವರೂಪವೇ ಆಗಿವೆಯೆಂಬುದಾಗಿ ಸಮರ್ಥಿಸಲಾಗಿದೆ. ಈ ಅಧಿಕರಣದಲ್ಲಿ ಅನ್ನಮಯಾದಿಗಳು ಅನೇಕವಾಗಿದ್ದರೂ ಬ್ರಹ್ಮಸ್ವರೂಪವಾಗುತ್ತವೆಂದು ಪ್ರತಿಪಾದಿಸಲಾಗಿದೆ. ಆದ್ದರಿಂದ ಅನ್ನಮಯಾದಿಗಳು ಅನೇಕವಾದ್ದರಿಂದ ಒಬ್ಬನೇ ಬ್ರಹ್ಮಸ್ವರೂಪವೆಂದು ಹೇಳಲು ಸಾಧ್ಯವಿಲ್ಲವೆಂಬ ಶಂಕೆಯನ್ನೂ ಸಹ ಈ ಅಧಿಕರಣದ ಸಿದ್ಧಾಂತ ನ್ಯಾಯದಿಂದಲೇ ಪರಿಹರಿಸಬೇಕು. ಆದ್ದರಿಂದ ಈ ಅಧಿಕರಣದ ಪೂರ್ವಪಕ್ಷದಲ್ಲಿ ಅನ್ನಮಯಾದಿಗಳು ಅನೇಕವಾದ್ದರಿಂದ ಒಬ್ಬನೇ ಬ್ರಹ್ಮಸ್ವರೂಪವಾಗಲು ಹೇಗೆ ಸಾಧ್ಯವೆಂಬ ಆಕ್ಷೇಪವನ್ನು ಮಾಡಿಕೊಳ್ಳಬೇಕು. ಆದ್ದರಿಂದ ನ್ಯಾಯವಿವರಣೆಯಲ್ಲಿ 'ನ ಚಾವಯವತ್ವವಿರೋಧಃ' ಎಂಬುದಾಗಿ ಆನಂದಮಯಾಧಿಕರಣದಲ್ಲಿ ಹೇಳಿದ್ದಾರೆ. ಈ ಅಧಿಕರಣದಲ್ಲಿ 'ದ್ವಿವಚನಶ್ರುತೇರಪಿ ನಿರವಕಾಶತ್ವಂ ನಾಸ್ತಿ' ಎಂದು ಹೇಳಿದ್ದಾರೆ.

ಪ್ರಶ್ನೆ - 'ದಾರಾಃ' ಇತ್ಯಾದಿ ಶಬ್ದಗಳಲ್ಲಿ ಶಬ್ದಸಾಧುತ್ವಕ್ಕೋಸ್ಕರ ಬಹುವಚನವನ್ನು ಪ್ರಯೋಗಿಸಲಾಗುತ್ತದೆ. ಅದರಂತೆ 'ಪಿಬಂತೌ' ಎಂಬಲ್ಲಿಯೂ ಶಬ್ದಸಾಧುತ್ವಕ್ಕೋಸ್ಕರ ದ್ವಿವಚನವು ಪ್ರಯುಕ್ತವಾಗಿದೆಯಲ್ಲವೇ?

ಉತ್ತರ - 'ದಾರಾಃ' ಇತ್ಯಾದಿ ಶಬ್ದಗಳಲ್ಲಿ ಬಾಧಕವಿರುವುದರಿಂದ ಬಹುವಚನವು ಶಬ್ದಸಾಧುತ್ವಕ್ಕೋಸ್ಕರವೆಂದು ಹೇಳಬಹುದು. ಆದರೆ ಪ್ರಕೃತ ಅಂತಹ ಬಾಧಕಗಳು ಇರುವುದಿಲ್ಲ. ಮತ್ತು 'ಪಿಬಂತೌ, ಪ್ರವಿಷ್ಟೌ, ಛಾಯಾತಪೌ' ಇತ್ಯಾದಿಯಾಗಿ ಅನೇಕ ಕಡೆ ಇರುವ ದ್ವಿವಚನಗಳಿಗೆ ವಚನ ವ್ಯತ್ಯಾಸದಿಂದ ಒಂದೇ ಪದಾರ್ಥವನ್ನು ಪ್ರತಿಪಾದ್ಯವೆಂದು ಹೇಳುವುದು ತಪ್ಪಾಗುತ್ತದೆ.

ಪ್ರಶ್ನೆ - 'ಗ್ರಹಂ ಸಮ್ಮೃಶ್ಯ' ಎಂಬಲ್ಲಿ ಉದ್ದೇಶದಲ್ಲಿ ವಿಶೇಷಣವಾದ್ದರಿಂದ ಏಕತ್ವ ಸಂಖ್ಯೆಯು ಅವಿವಕ್ಷಿತವಾಗಿದೆ. ಅದರಂತೆ 'ಪಿಬಂತೌ' ಎಂಬಲ್ಲಿಯೂ ದ್ವಿತ್ವಸಂಖ್ಯೆಯು ಉದ್ದೇಶ ವಿಶೇಷಣವಾದ್ದರಿಂದ ಅವಿವಕ್ಷಿತವಾಗಬೇಕಲ್ಲವೇ?

ಉತ್ತರ - ಇದೂ ಸಹ ತಪ್ಪು. ಬ್ರಹ್ಮನಲ್ಲಿ ಋತಪಾನವು ಪ್ರಾಪ್ತವಾದ್ದರಿಂದ 'ಋತಂ ಪಿಬಂತೌ' ಎಂಬುದನ್ನು ಉದ್ದೇಶವೆಂದು ಒಪ್ಪಬಹುದು. ಆಲ್ಲಿರುವ ದ್ವಿತ್ವವು ಉದ್ದೇಶವಿಶೇಷಣವಾಗಬಹುದು. ಆದರೆ 'ಛಾಯಾತಪೌ' ಎಂಬುದು ಮೊದಲು ಪ್ರಾಪ್ತವಾಗದ ಕಾರಣ ಉದ್ದೇಶವೆಂದು ಹೇಳಲಾಗದು. ಹೊರತಾಗಿ ವಿಧೇಯವೆಂದೇ ಅವಶ್ಯವಾಗಿ ಹೇಳಬೇಕು. ಆದ್ದರಿಂದ 'ಛಾಯಾತಪೌ' ಎಂಬಲ್ಲಿರುವ ದ್ವಿತ್ವವು ಉದ್ದೇಶದಲ್ಲಿವಿಶೇಷಣವಾಗದ ಕಾರಣ ಅವಿವಕ್ಷಿತವೆಂದು ಹೇಳಲಾಗದು.

ಮತ್ತು 'ಗ್ರಹಂ ಸಮ್ಮೃಶ್ಯ' ಎಂಬಲ್ಲಿ ವಾಕ್ಯಭೇದದೋಷ ಬರುವ ಕಾರಣ ಏಕತ್ವವನ್ನು ವಿಧೇಯದಲ್ಲಿ ವಿಶೇಷಣವೆಂದು ಹೇಳಲಾಗದು. ಆದರೂ ಸಹ ಪ್ರತ್ಯೇಕವಾಗಿ ಪ್ರತಿಯೊಂದು ಗ್ರಹಗಳಲ್ಲಿ ಏಕತ್ವವು ಸ್ವಾಭಾವಿಕವಾಗಿ ಇರುತ್ತದೆ. ಆದ್ದರಿಂದ ಗ್ರಹಣವು ಮೊದಲೇ ಪ್ರಾಪ್ತವಾದ್ದರಿಂದ ಉದ್ದೇಶವೆನ್ನಬಹುದು. ಆದರೆ ಪ್ರಕೃತದಲ್ಲಿ ದ್ವಿತ್ವವು ಮೊದಲು ಪ್ರಾಪ್ತವೇ ಆಗಿಲ್ಲ. ಏಕೆಂದರೆ ಅದ್ವಿತೀಯನಾದ ಬ್ರಹ್ಮನಲ್ಲಿ ದ್ವಿತ್ವವು ಸ್ವಾಭಾವಿಕವಾಗಿ ಇರಲು ಸಾಧ್ಯವೇ ಇಲ್ಲ. ಹೀಗಿರುವಾಗ ಅನುವಾದಕವೆಂದು ಹೇಳಲಾಗದು. ಆದ್ದರಿಂದಲೇ ಉದ್ದೇಶವೆಂದೂ ಸಹ ಹೇಳಲು ಸಾಧ್ಯವಿಲ್ಲ.

ಪ್ರಶ್ನೆ - 'ಪಿಬಂತೌ' ಎಂಬಲ್ಲಿರುವ ದ್ವಿವಚನ ಪ್ರತ್ಯಯವು ವಿಭಕ್ತಿಪ್ರತಿರೂಪಕವಾದ ಅವ್ಯಯವಾಗಿದೆ. ಆದ್ದರಿಂದ ಬೇರೆಡೆ ದ್ವಿತ್ವವನ್ನು ಪ್ರತಿಪಾದಿಸಿದರೂ ಇಲ್ಲಿ ಅತಿದೇಶದಿಂದ ಪ್ರಾಪ್ತವಾಗಿರುವ ಕಾರಣ ಏಕವಚನವನ್ನು ಊಹಿಸಬಹುದಲ್ಲವೇ?

ಉತ್ತರ - ''ಅಗ್ನಯೇ ಜುಷ್ಟಂ'' ಎಂಬ ಮಂತ್ರದಲ್ಲಿ ಅತಿದೇಶತಃ ಪ್ರಾಪ್ತವಾದ್ದರಿಂದ 'ಸೂರ್ಯಾಯ' ಎಂದು ಊಹಿಸಿಕೊಳ್ಳುವುದು ಕಂಡಿದೆ. ಆದರಂತೆ 'ಪಿಬಂತೌ' ಎಂಬಲ್ಲಿ ಅತಿದೇಶದಿಂದ ಪ್ರಾಪ್ತವಾಗಿದ್ದರೆ ಏಕತ್ವವನ್ನು ಊಹಿಸಬಹುದಿತ್ತು. ಆದರೆ ಇದೇ ಪ್ರಥಮ ಬಾರಿಯಾಗಿ 'ಪಿಬಂತೌ' ಎಂಬುದಾಗಿ ಪ್ರಸಕ್ತವಾಗುತ್ತಿರುವುದರಿಂದ 'ಅತಿದೇಶತಃ ಪ್ರಾಪ್ತಿ,' ಎಂದೂ ಹೇಳಲಾಗದು.

ಪ್ರಶ್ನೆ - ಒಂದೇ ಯಾಗದಲ್ಲಿ 'ಸಮಿಧೋ ಯಜತಿ' ಎಂಬುದಾಗಿ ಬಹುವಚನಾಂತವಾದ 'ಸಮಿತ್' ಪದವನ್ನು ಹೇಗೆ ಪ್ರಯೋಗಿಸುತ್ತೇವೋ, ಆದರಂತೆ ಒಬ್ಬನೇ ಬ್ರಹ್ಮನಲ್ಲಿ ದ್ವಿವಚನಾಂತವಾದ 'ಪಿಬತ್' ಪದವನ್ನು ಪ್ರಯೋಗಿಸಬಹುದಲ್ಲವೇ?

ಉತ್ತರ - 'ಸಮಿತ್' ಶಬ್ದವು ಯಾಗದಲ್ಲಿ ರೂಢವಾಗಿರುವುದರಿಂದ ಬಹುವಚನ ಪ್ರತಿರೂಪಕವಾದ ನಾಮಧೇಯವೆಂದು ಹೇಳಬಹುದು. ಆದರೆ 'ಪಿಬಂತೌ' ಎಂಬ ಪದವು ಯೌಗಿಕವಾದ್ದರಿಂದ ದ್ವಿತ್ವಪ್ರತಿರೂಪಕವಾದ ನಾಮಧೇಯವೆಂದು ಹೇಳಲಾಗದು. ಆದ್ದರಿಂದ ಯಾವುದೇ ಕಾರಣದಿಂದಲೂ 'ಪಿಬಂತೌ' ಎಂಬ ದ್ವಿವಚನಶ್ರುತಿಯನ್ನು ಸಾವಕಾಶವೆಂದು ಹೇಳಲು ಸಾಧ್ಯವಿಲ್ಲ.

'ಛಾಯಾತಪೌ' ಎಂಬಲ್ಲಿರುವ ಆತಪತ್ವವನ್ನು ಬ್ರಹ್ಮನಲ್ಲಿ ಹೇಳಬಹುದಾದರೂ ಛಾಯತ್ವವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಬ್ರಹ್ಮನು ಜೀವನಂತೆ ಅಜ್ಞಾನಕ್ಕೆ ಆಶ್ರಯನಾಗಿರುವುದಿಲ್ಲ. ಆದ್ದರಿಂದ

'ಪಿಬಂತೌ' ಎಂಬ ದ್ವಿವಚನ ಶ್ರುತಿಯಂತೆ ಜೀವ ಹಾಗೂ ಈಶ್ವರ ಇಬ್ಬರೂ ಸಹ ಪ್ರತಿಪಾದ್ಯರಾಗಿದ್ದಾರೆಂದು ಹೇಳಬೇಕು. ಈಶ್ವರನು ವಸ್ತುತಃ ಭೋಕ್ತೃನಾಗದಿರಬಹುದು ಆದರೆ ಛತ್ರಿನ್ಯಾಯದಿಂದ ಅವನಲ್ಲಿ ಪಾತೃತ್ವವನ್ನು ಶ್ರುತಿಯು ಹೇಳುತ್ತಿದೆ. ಗುಹಾಪ್ರವಿಷ್ಟತ್ವ ಹಾಗೂ ಬ್ರಹ್ಮಶಬ್ದಗಳು ಜೀವನಲ್ಲಿಯೂ ಕೂಡುವುದರಿಂದ ಬಾಧಕಗಳಾಗುವುದಿಲ್ಲ. ಆದ್ದರಿಂದ 'ಋತಂ ಪಿಬಂತೌ' ಎಂಬ ಶ್ರುತಿಯಿಂದ ಜೀವೇಶ್ವರರೇ ಕರ್ಮಫಲಭೋಕ್ತೃಗಳೆಂದು ಪೂರ್ವಪಕ್ಷದ ಅಭಿಪ್ರಾಯವು ದೃಢವಾಯಿತು.

ಪ್ರಕಾಶಃ –

ನನು ತತ್ರ ಬಹುತ್ವಾಶ್ರವಣೇನ ''ಬಹೂರೂಪತ್ವಾಚ್ಚ'' ಇತಿ ಭಾಷ್ಯೇ, ''ಅತ ಏಕಸ್ಯ ಪಞ್ಚಧಾ'' ಇತ್ಯನುವ್ಯಾಖ್ಯಾನೇ ಚ ಕಥಂ ತತ್ಸಮಾಧಾನೋಕ್ತಿಃ । ''ನ ಚಾನನ್ದಮಯಾಧಿಕರಣನ್ಯಾಯೇನ ಪರಿಹಾರಃ ಬಾಧಕಾಭಾವಾತ್'' ಇತಿ ಅತ್ರತ್ಯಸುಧಾವಾಕ್ಯಂ ಚ ಕಥಮಿತ್ಯತೋऽಭ್ಯುಪೇತ್ಯವಾದೇನೇತಿ ಭಾವೇನ ಪರಿಹಾರಾನ್ತರಮಾಹ – ಅಥವೇತಿ ।

ವಿವರಣೆ - ಆನಂದಮಯಾಧಿಕರಣದಲ್ಲಿ ಅನೇಕತ್ವಸಂಖ್ಯೆಯಿಂದ ಬ್ರಹ್ಮನ ರೂಪಗಳಿಗೆ ಭೇದವು ಪ್ರಸಕ್ತವೇ ಆಗಿಲ್ಲ. ಕೇವಲ ಶಬ್ದಗಳ ಭೇದದಿಂದಷ್ಟೇ ರೂಪಗಳ ಭೇದವು ಪ್ರಸಕ್ತವಾಗಿದೆಯೆಂದು ಈ ಹಿಂದೆ ಪ್ರತಿಪಾದಿಸಲಾಯಿತು.

ಆಕ್ಷೇಪ - ಹಾಗಾದರೆ ಆನಂದಮಯಾಧಿಕರಣದ ಭಾಷ್ಯದಲ್ಲಿ ಬಹುತ್ವವು ಪ್ರಸಕ್ತವಾಗದಿದ್ದಾಗ ''ಬಹುರೂಪತ್ವಾಚ್ಚ'' ಎಂಬ ವಾಕ್ಯವು ಏಕೆ ಹೊರಟಿತು? ಮತ್ತು ''ಅತ ಏಕಸ್ಯ ಪಂಚಧಾ'' ಎಂಬುದಾಗಿ ಅನುವ್ಯಾಖ್ಯಾನದಲ್ಲಿಯೂ ಸಹ ಅನೇಕತ್ವಸಂಖ್ಯೆಯಿಂದ ಭೇದವು ಪ್ರಸಕ್ತವಾಗುವುದಿಲ್ಲವೆಂಬ ಸಮಾಧಾನವನ್ನಾದರೂ ಏಕೆ ಹೇಳಿದರು? ಅಷ್ಟೇ ಅಲ್ಲದೆ ಗುಹಾಧಿಕರಣದ ಸುಧೆಯಲ್ಲಿಯೂ ಸಹ ''ನಚ ಆನಂದಮಯಾಧಿಕರಣನ್ಯಾಯೇನ ಪರಿಹಾರಃ ಬಾಧಕಾಭಾವತ'' ಆನಂದಮಯಾಧಿಕರಣದ ನ್ಯಾಯದಿಂದ ಇದು ಗತಾರ್ಥವಾಗುವುದಿಲ್ಲವೆಂದು ಹೇಳಿದ್ದಾರೆ. ಇದರಿಂದಲೂ ಅನೇಕತ್ವಸಂಖ್ಯೆಯಿಂದ ಭಗವಂತನ ರೂಪಗಳಿಗೆ ಭೇದವು ಆನಂದಮಯಾಧಿಕರಣದಲ್ಲಿ ಪ್ರಸಕ್ತವಾಗಿದೆಯೆಂದು ತಿಳಿಯುತ್ತದಲ್ಲವೇ?

ಸಮಾಧಾನ - ವಾಕ್ಯದಲ್ಲಿ ಬಹುತ್ವಸಂಖ್ಯೆಯು ತೋರದಿದ್ದರೂ ಸಹ ಒಬ್ಬನೇ ಪರಮಾತ್ಮನಿಗೆ ಶಬ್ದಭೇದದಿಂದ ಬಹುತ್ವವು ಬರಬೇಕಾದೀತೆಂದು ಅಭಿಪ್ರಾಯ ಪಡುತ್ತೇವೆ. ಸಿದ್ಧಾಂತಿಗೆ ಅಭಿಪ್ರೇತವಾದ ಇದನ್ನು ಆಕ್ಷೇಪ ಮಾಡಿದರೆ 'ಬಹುರೂಪತ್ವಾಚ್ಚ' ಎಂಬುದಾಗಿ ಭಾಷ್ಯದಲ್ಲಿ ಸಮಾಧಾನ ಹೇಳಿದ್ದಾರೆ. ಹೀಗೆ ಅಭ್ಯುಗಮವಾದದಿಂದ ಭಾಷ್ಯ ಅನುವ್ಯಾಖ್ಯಾನಾದಿಗಳ ಮಾತನ್ನು ಕೂಡಿಸಬೇಕು. ಈ ಅಭಿಪ್ರಾಯದಿಂದ ಪ್ರಕೃತ ಗ್ರಂಥಕಾರರು 'ಅಥವಾ'' ಇತ್ಯಾದಿ ವಾಕ್ಯದಿಂದ ಮತ್ತೊಂದು ಪರಿಹಾರವನ್ನು ಹೇಳುತ್ತಿದ್ದಾರೆ.

प्रकाशः – तत्रानेकत्वसङ्ख्यासमाधानं चात्रत्यसिद्धान्तन्यायेनैवेति भावः । द्विवचनेति । निरवकाशाततया प्रतीयमानाया अपीत्यर्थः । एतेन ''पिबन्ताविति द्विवचनश्रुतेः'' इति टीका विवृता ।

ಆನಂದಮಯಾಧಿಕರಣದಲ್ಲಿ ಅನೇಕತ್ವ ಸಂಖ್ಯೆಯಿಂದ ಭಗವಂತನಲ್ಲಿ ಮಾಡಲ್ಪಟ್ಟ ಭೇದದ ಆಕ್ಷೇಪವನ್ನು ಈ ಅಧಿಕರಣದ ಸಿದ್ಧಾಂತ ನ್ಯಾಯದಿಂದಲೇ ಸಮಾಧಾನ ಮಾಡಲಾಗಿದೆ. 'ದ್ವಿವಚನಶ್ರುತೇರಪಿ' ಎಂಬ ನ್ಯಾಯವಿವರಣದಲ್ಲಿರುವ 'ಅಪಿ' ಶಬ್ದದಿಂದ ನಿರವಕಾಶವಾಗಿ ತೋರಿದರೂ ಸಹ ಎಂದರ್ಥ. ಆಂದರೆ ವಸ್ತುತಃ ನಿರವಕಾಶವಲ್ಲವೆಂದು ತಿಳಿಯಬೇಕು. ಇದರಿಂದ ''ಪಿಂಬಂತಾವಿತಿ ದ್ವಿವಚನಶ್ರುತೇಃ'' ಎಂದು ವ್ಯಾಖ್ಯಾನಿಸಿದಂತಾಯಿತು.

प्रकाशः – ननु न द्विवचनं निरवकाशं, तस्य शब्दसाधुत्वमात्रार्थत्वेन वा, एकवचनान्तस्यैव च्छान्दसद्विवचनान्तत्वेन वा, द्वित्वबोधनेऽपि तस्योद्देश्यविशेषणत्वेनाविवक्षिततया वा, द्विवचनस्य पूर्वोत्तरवाक्यानुरोधेनैकवचनान्ततयोहेनैकत्वप्रापकत्वेन वा, द्विवचनप्रतिरूपकत्वेन वा द्वित्वप्रापकत्वेनैकस्मिन्नप्युपपत्तेरिति चोद्यानि क्रमेण निरस्यन्नाद्यं निराह – नच दारा इति ।

ದ್ವಿವಚನವು ನಿರವಕಾಶವೆಂದು ಹೇಳಿದಿರಿ ಇದು ತಪ್ಪು. ಅನೇಕ ಕಾರಣಗಳಿಂದ ಸಾವಕಾಶವೇ ಆಗಿದೆ -

೧. 'ಪಿಬಂತೌ' ಎಂಬಲ್ಲಿರುವ ದ್ವಿವಚನವು ಶಬ್ದಸಾಧುತ್ವ ಮಾತ್ರದಿಂದ ಸೇರಿಸಲಾಗಿದೆಯೆಂದು ಹೇಳಬೇಕು.

೨. ವಸ್ತುತಃ ಏಕವಚನಾಂತ ಶಬ್ದವಾಗಿದ್ದರೂ ಸಹ ಛಾಂದಸವಾದ್ದರಿಂದ ದ್ವಿವಚನವಾಗಿದೆ.

೩. ದ್ವಿತ್ವವನ್ನು ಬೋಧಿಸಿದರೂ ಸಹ ಉದ್ದೇಶದಲ್ಲಿ ವಿಶೇಷಣವಾಗಿದ್ದರಿಂದ ದ್ವಿತ್ವವನ್ನು ವಿವಕ್ಷಿಸಬೇಕಾಗಿಲ್ಲ.

೪. ಹಿಂದಿನ ಮುಂದಿನ ವಾಕ್ಯಗಳಲ್ಲಿ ಏಕವಚನಾಂತವಾದ ಪದಗಳೇ ಪ್ರಸಕ್ತವಾಗಿದ್ದರಿಂದ ಅವುಗಳಿಂದ ಸಂದಷ್ಟವಾದ 'ಪಿಂಬತೌ' ಎಂಬುದೂ ಸಹ ಏಕತ್ವವನ್ನೇ ತಿಳಿಸುತ್ತದೆ. ಹೊರತು ದ್ವಿವಚನವಿರುವುದರಿಂದ ದ್ವಿತ್ವವನ್ನು ತಿಳಿಸುವುದಿಲ್ಲ.

೫. ದ್ವಿವಚನಕ್ಕೆ ಪ್ರತಿರೂಪಕವಾದ ಅವ್ಯವಾಗಿದೆ. ಆಂದರೆ ದ್ವಿವಚನದಂತೆ ಕಾಣಿಸುತ್ತದೆ ಹೊರತು ದ್ವಿವಚನ ಪ್ರತ್ಯಯವಲ್ಲ.

ಹೀಗೆ ಐದು ಕಾರಣಗಳಿಂದ ದ್ವಿವಚನ ಪ್ರತ್ಯಯವು ಸಾವಕಾಶವೆನ್ನಬಹುದು. ಆಂದರೆ ದ್ವಿವಚನ ಪ್ರತ್ಯಯವಿದ್ದರೂ ದ್ವಿತ್ವವನ್ನು ಬೋಧಿಸುವುದಿಲ್ಲ. ಹೀಗಿರುವಾಗ ಇದರ ಪರಿಹಾರಕ್ಕಾಗಿ ನಿಮ್ಮ ಶ್ರಮವು ವ್ಯರ್ಥವಲ್ಲವೇ? ಎಂಬ ಈ ಐದು ಬಗೆಯ ಪ್ರಶ್ನೆಗಳಿಗೆ ಕ್ರಮವಾಗಿ ಉತ್ತರಿಸುತ್ತಿದ್ದಾರೆ. ಮೊದಲನೆಯ ಪ್ರಶ್ನೆಯನ್ನು 'ನಚ ದಾರಾಃ' ಇತ್ಯಾದಿಯಾಗಿ ನಿರಾಕರಿಸುತ್ತಿದ್ದಾರೆ.

प्रकाशः – प्रसिद्धमिति । ''दाराः पुंसि च भूम्न्येवे'' इत्यादिवत्नैघण्टुक-प्रसिद्धेरभावात् तथा कल्पनमयुक्तमित्यर्थः ।

'ದಾರಾಃ' ಮೊದಲಾದ ಶಬ್ದಗಳು ನಿತ್ಯವಾಗಿ ಬಹುವಚನದಲ್ಲಿವೆಯೆಂಬುದು ಪ್ರಸಿದ್ಧವಾಗಿದೆಯೆಂದು ಗ್ರಂಥಕಾರರು ಹೇಳಿದರು. ಅಂದರೆ 'ದಾರಿಃ ಪುಂಸಿ ಚ ಭೂಮ್ನ್ಯೇವೇ' ಇತ್ಯಾದಿಯಾಗಿ ನಿಘಂಟುವಿನಲ್ಲಿ ದಾರಾಶಬ್ದವು ಪುಲ್ಲಿಂಗದಲ್ಲಿ ಮತ್ತು ಬಹುವಚನದಲ್ಲಿರುತ್ತದೆಂದು ಹೇಳಲಾಗಿದೆ. ಆದ್ದರಿಂದ ಒಬ್ಬಳೇ ಹೆಂಡತಿಯಲ್ಲಿಯೂ ಸಹ ಬಹುವಚನಾಂತವಾದ 'ದಾರಾಃ' ಎಂಬ ಶಬ್ದವನ್ನು ಪ್ರಯೋಗಿಸಬಹುದು. ಕೇವಲ ಶಬ್ದಸಾಧುತ್ವಕ್ಕೋಸ್ಕರ ಇಲ್ಲಿ ಬಹುವಚನವಿರುತ್ತದೆ. ಆದರೆ ಪ್ರಕೃತ 'ಪಿಬಂತೌ' ಎಂಬಲ್ಲಿ ಕೇವಲ ಶಬ್ದಸಾಧುತ್ವಕ್ಕೋಸ್ಕರ ದ್ವಿವಚನಪ್ರತ್ಯಯ ಬಂದಿದೆಯೆಂದು ಹೇಳಲಾಗದು. ಹಾಗೆ ಹೇಳಲು ಯಾವುದೇ ನಿಘಂಟುವಿನ ಆಧಾರವಿರುವುದಿಲ್ಲ ಆದ್ದರಿಂದ ಶಬ್ದಸಾಧುತ್ವಕೋಸ್ಕರ ದ್ವಿವಚನಪ್ರತ್ಯಯವೆಂಬ ನಿಮ್ಮ ಕಲ್ಪನೆಯು ಅಯುಕ್ತವಾಗಿದೆ.

प्रकाशः – द्वितीयं निराह – नच बाधकमिति । ''व्यत्ययो बहुलम्'' इति ''सुपां सुलुक्'' इत्यादिशास्त्रेणैकवचनस्य द्विवचनमिति वचनव्यत्ययकल्पनं ''अहल्यायै जारा'' इत्यादौ विभक्तिव्यत्यय इव सति बाधके । न हीह जीवेश्वर-विषयत्वेनोपपत्तौ किञ्चिद्बाधकमस्तीत्यर्थः । गुहाप्रविष्टत्वादिबाधकं तु निरसिष्यत इति भावः ।

ಎರಡನೇ ಪಕ್ಷವನ್ನು 'ನಚ ಬಾಧಕಂ' ಎಂಬುದರಿಂದ ನಿರಾಕರಿಸುತ್ತಿದ್ದಾರೆ. ಏಕವಚನಶಬ್ದ ಛಾಂದಸವಾದ್ದರಿಂದ ದ್ವಿವಚನಾಂತವೆಂದು ಹೇಳುತ್ತಿದ್ದೀರಿ. ಆದರೆ ಬಾಧಕವಿದ್ದಾಗ ಮಾತ್ರ ಈ ರೀತಿಯಾಗಿ ಛಾಂದಸವೆಂದು ಹೇಳಬೇಕು. ''ವ್ಯತ್ಯಯೋ ಬಹುಲಮ್'' ಮತ್ತು ''ಸುಪಾಂ ಸುಲುಕ್'' ಇತ್ಯಾದಿ ಸೂತ್ರಗಳಿಂದ ಏಕವಚನಶಬ್ದಕ್ಕೆ ದ್ವಿವಚನವನ್ನು ಕಲ್ಪಿಸಬಹುದಿತ್ತು. ಆದರೆ ಯಾವುದೇ ಬಾಧಕವು ಇಲ್ಲಿ ಇರುವುದಿಲ್ಲ.''ಅಹಲ್ಯಾಯೈ ಜಾರಾ'' ಎಂಬಲ್ಲಿ ಛಾಂದಸವಾದ್ದರಿಂದ ಚತುರ್ಥಿವಿಭಕ್ತ್ಯಂತವಾದ 'ಅಹಲ್ಯಾಯೈ' ಎಂಬ ಪದವನ್ನು 'ಅಹಲ್ಯಾಯಾಃ' ಎಂಬುದಾಗಿ ಷಷ್ಠ್ಯಂತವಾಗಿ ವಿಭಕ್ತಿ ವ್ಯತ್ಯಾಸ ಮಾಡುವುದು ಕಂಡಿದೆ. ಏಕೆಂದರೆ ಚತುರ್ಥೀವಿಭಕ್ತ್ಯರ್ಥವಾದ ಸಂಪ್ರದಾನತ್ವವು ಅಹಲ್ಯೆಯಲ್ಲಿ ಬಾಧಿತವಾಗಿದೆ. ಅದಕ್ಕಾಗಿ ಸಂಬಂಧಸಾಮಾನ್ಯದಲ್ಲಿರುವ ಷಷ್ಠೀವಿಭಕ್ತಿಯನ್ನು ಛಾಂದಸವಾದ್ದರಿಂದ ಕಲ್ಪಿಸುತ್ತೇವೆ. ಅದರಂತೆ 'ಪಿಬಂತೌ' ಎಂಬಲ್ಲಿ ದ್ವಿವಚನಕ್ಕೆ ಜೀವೇಶ್ವರರು ವಿಷಯವೆಂದು ಹೇಳಲು ಬರುವುದರಿಂದ ಯಾವುದೇ ಬಾಧಕವು ಕಾಣಿಸುವುದಿಲ್ಲ. ಬಾಧಕವಿಲ್ಲದಿದ್ದಾಗ ವಿಭಕ್ತಿವ್ಯತ್ಯಾಸವನ್ನಾಗಲೀ ವಚನವ್ಯತ್ಯಾಸವನ್ನಾಗಲೀ ಮಾಡುವುದು ತಪ್ಪಾಗುತ್ತದೆ. ಗುಹಾಪ್ರವಿಷ್ಟತ್ವಾದಿ ಬಾಧಕಗಳಿವೆಯಲ್ಲವೇ? ಎಂದು ಪ್ರಶ್ನಿಸಬಾರದು. ಇದನ್ನು ಈ ಮುಂದೆಯೇ ನಿರಾಕರಿಸುವವರಿದ್ದೇವೆ.

प्रकाशः – तृतीयमाशङ्क्य निराह – नच ग्रहमिति । छन्दोधिकरणे ग्रहाधिकरणं विवृतम् । ''ऐन्द्रवायवं गृह्णाति मैत्रावरुणं गृह्णाति'' इत्यादिनोत्पन्नानां

''ग्रहैर्यजेत'' इति होमसाधनत्वेन प्राप्तानां सम्मार्जरूपसंस्कारविधानार्थं 'ग्रहं' इति ग्रहशब्दस्योद्देश्यत्वात्तद्गता सङ्ख्या न विवक्षितेति वक्तुं युक्तम् । इह तु ऋतपानस्य ब्रह्मण्यप्राप्ततया विधेयत्वान्न तया सम्भवति, किन्तु ''पशुना यजेत'' इत्यादाविव विधेयगतत्वेन विवक्षितैवेत्यर्थः ।

ಉದ್ದೇಶ ವಿಶೇಷಣವಾದ್ದರಿಂದ ದ್ವಿತ್ವವು ಅವಿಕ್ಷಿತವಾಗಿರುವುದರಿಂದ ಮೂರನೆಯ ಪಕ್ಷವನ್ನು ನಿರಾಕರಿಸುತ್ತಿದ್ದಾರೆ 'नच ग्रहम्' ಇತ್ಯಾದಿಯಾಗಿ. ಗ್ರಹಾಧಿಕರಣವನ್ನು ಗಾಯತ್ರ್ಯಧಿಕರಣದಲ್ಲಿಯೇ ವಿವರಿಸಿದ್ದಾಗಿದೆ. ''ऐन्द्रवायवं गृह्णाति मैत्रावरुणं गृह्णाति'' ಇತ್ಯಾದಿಯಾಗಿ ಪ್ರಥಮತಃ ಗ್ರಹವು ಪ್ರಾಪ್ತವಾಗಿದೆ. ಅದನ್ನೇ ''ग्रहैर्यजेत'' ಎಂಬುದರಿಂದ ಹೋಮಸಾಧನವೆಂದು ವಿಧಿಸಲಾಗಿದೆ. ಅಂತಹ ಗ್ರಹಗಳಿಗೆ ಸಮ್ಮಾರ್ಜನವೆಂಬ ಸಂಸ್ಕಾರವನ್ನು ವಿಧಿಸಲಾಗಿದೆ. ಅದಕ್ಕಾಗಿ 'ग्रहं' ಎಂದು ಗ್ರಹವನ್ನು ಉದ್ದೇಶ ಮಾಡಲಾಗಿದೆ. ಆದ್ದರಿಂದ ಅದರಲ್ಲಿರುವ ಸಂಖ್ಯೆಯು ಅವಿವಕ್ಷಿತವಾಗಿದೆಯೆಂದು ಹೇಳಬಹುದು. ಆದರಂತೆ ಪ್ರಕೃತದಲ್ಲಿಯು ಋತಪಾನವು ಮೊದಲೇ ಪ್ರಾಪ್ತವಾಗಿರಬೇಕು. ಆದರೆ ಮೊದಲು ಪ್ರಾಪ್ತವಾಗದ ಕಾರಣ ವಿಧೇಯವೇ ಆಗುತ್ತದೆ ಹೊರತು ಉದ್ದೇಶವಾಗುವುದಿಲ್ಲ. ಯಾವರೀತಿಯಾಗಿ ''पशुना यजेत'' ಎಂಬಲ್ಲಿ ವಿಧೇಯವಾದ ಪಶುವಿನಲ್ಲಿ ಏಕತ್ವವು ವಿವಕ್ಷಿತವಾಗಿದೆಯೋ ಆದರಂತೆ ''ऋतं पिबन्तौ'' ಎಂಬುದು ವಿಧೇಯವಾಗಿರುವುದರಿಂದ ಆದರಲ್ಲಿ ವಿಶೇಷಣವಾಗಿರುವ ದ್ವಿತ್ವವು ವಿವಕ್ಷಿತವಾಗುತ್ತದೇ ಹೊರತು ಅವಿವಕ್ಷಿತವಾಗುವುದಿಲ್ಲ.

प्रकाशः – ननु टीकायां यौ सुकृतनिर्मितशरीरे हृदयगुहां प्रविष्टौ तत्रापि सर्वजीवोत्तमे अतिपूर्णे वायौ प्रविष्टौ सुकृतफलं भुञ्जानौ तौ ब्रह्मविदः पञ्चमहायज्ञवन्तः द्युपर्जन्यादिपञ्चाग्निनिष्ठा वा, त्रिवारकृतनाचिकेताः छायातपौ वदन्तीति पिबन्तावनूद्य छायातपत्वविधेरुक्तत्वात् कथमेवमित्यत आह – ऋतमिति ।

ಟೀಕೆಯಲ್ಲಿ ''ऋतं पिबन्तौ'' ಎಂಬುದನ್ನು ಉದ್ದೇಶವನ್ನಾಗಿ ವಿವಕ್ಷಿಸಿ ಛಾಯಾತಪತ್ವವನ್ನು ವಿಧಾನ ಮಾಡಿದ್ದಾರೆ. ಶ್ರುತ್ಯರ್ಥ ಹೀಗಿದೆ - 'सुकृतस्य' ಎಂಬಲ್ಲಿರುವ ಷಷ್ಠಿವಿಭಕ್ತಿಯು ಸಂಬಂಧಾರ್ಥದಲ್ಲಿದೆ. ಆದ್ದರಿಂದ ಸುಕೃತಸ್ಯ = ಸುಕೃತದಿಂದ ನಿರ್ಮಿತವಾದ ಶರೀರದಲ್ಲಿ, ಗುಹಾಂಪ್ರವಿಷ್ಟೌ = ಹೃದಯಗುಹೆಯಲ್ಲಿ ಪ್ರವೇಶಿಸಿದ ಇಬ್ಬರು ಚೇತನರಲ್ಲಿ, ಪರಮೇ = ಸರ್ವೋತ್ತಮನಾದ, ಪರಾರ್ಧೇ = ಆತ್ಯಂತ ಪೂರ್ಣರಾದ ವಾಯುದೇವರಲ್ಲಿ, ಪ್ರವಿಷ್ಟೌ = ಪ್ರವೇಶಿಸಿದ, ಋತಂ = ಪುಣ್ಯದ ಫಲವನ್ನು, ಪಿಬಂತೌ = ತಿನ್ನುವ, ತೌ = ಆವರಿಬ್ಬರನ್ನು, ಬ್ರಹ್ಮವಿದಃ = ದೇವಯಜ್ಞ,ಋಷಿಯಜ್ಞ ಮೊದಲಾದ ಐದು ಮಹಾಯಜ್ಞಗಳನ್ನು ಅನುಷ್ಠಾನ ಮಾಡುವವರು. ಅಥವಾ ದ್ಯು, ಪರ್ಜನ್ಯಾ, ಭೂಮಿ, ಪಿತಾ, ಮಾತಾ ಎಂದು ಪಂಚಾಗ್ನಿಗಳ ವಿದ್ಯೆಯನ್ನು ಅರಿತವರು, ತ್ರಿನಾಚಿಕೇತಾಃ = ನಾಚಿಕೇತಾಗ್ನಿಯನ್ನು ಮೂರುಬಾರಿ ಅನುಷ್ಠಾನ ಮಾಡಿದವರು. ಇಂತಹ ಜ್ಞಾನಿಗಳೆಲ್ಲರೂ ಆತ್ಮ ಅಂತರಾತ್ಮ ಎಂಬ ಭಗವಂತನ ಎರಡು ರೂಪಗಳನ್ನು, ಛಾಯಾತಪೌ = ಸಜ್ಜನರಿಗೆ

ಸುಖಕರವೆಂದು ದುರ್ಜನರಿಗೆ ದುಃಖಕರವೆಂದು, ವದಂತಿ = ಹೇಳುತ್ತಾರೆ. ಹೀಗೆ ಶ್ರುತ್ಯರ್ಥವನ್ನು ಗಮನಿಸಿದಾಗ 'ಪಿಬಂತೌ' ಎಂಬುದನ್ನು ಉದ್ದೇಶ ಮಾಡಿ ಛಾಯಾತಪತ್ವವನ್ನು ವಿಧಾನ ಮಾಡಿದ್ದು ಕಾಣುತ್ತದೆ. ಆದರೆ ನೀವು 'ಪಿಬಂತೌ' ಎಂಬುದನ್ನು ಉದ್ದೇಶವೇ ಆಲ್ಲವೆಂದು ಹೇಳುತ್ತಿದ್ದೀರಿ. ಇದು ಹೇಗೆ ಸರಿ ? ಎಂಬ ಪ್ರಶ್ನೆಗೆ ಗ್ರಂಥಕಾರರು 'ಋತಂ' ಇತ್ಯಾದಿಯಾಗಿ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಗುಹಾಪ್ರವಿಷ್ಟತ್ವಾದಿರಾದಿಪದಾರ್ಥಃ । ಏಕಸ್ಯೈವೋದ್ದೇಶ್ಯತ್ವಾದಿತಿ ಭಾವಃ । ತಥಾಚ 'ಛಾಯಾತಪೌ' ಇತ್ಯತ್ರ ದ್ವಿವಚನಂ ನಿರವಕಾಶಮಿತ್ಯರ್ಥಃ ।

'ಪಿಬನ್ತೌ' ಇತಿ ದ್ವಿವಚನಶ್ರುತೇರಿತ್ಯುಕ್ತ್ವಾ ಟೀಕಾಯಾಂ ''ಶ್ರುತೇರ್ನಿರವಕಾಶತ್ವಾತ್'' ಇತ್ಯುಕ್ತಂ, ತತ್ಸ್ವಾರಸ್ಯಮನುರುಧ್ಯ 'ಪಿಬನ್ತೌ' ಇತ್ಯಸ್ಯಾನುವಾದತ್ವೇऽಪಿ ಗ್ರಹವೈಲಕ್ಷಣ್ಯೇನ ತತ್ರತ್ಯ-ದ್ವಿವಚನಸ್ಯೇಶ್ವರेऽನುಪಪನ್ನತಾಮಾಹ – ಗ್ರಹೇತಿ ।

'ಋತಂ ಪಿಬಂತೌ' ಎಂಬುದು ಉದ್ದೇಶವಾದರೂ ಸಹ 'ಛಾಯಾತಪೌ' ಇತ್ಯಾದಿಗಳನ್ನು ವಿಧೇಯವೆಂದು ಅವಶ್ಯ ಒಪ್ಪಬೇಕೆಂದು ಗ್ರಂಥದಲ್ಲಿ ಹೇಳಿದ್ದಾರೆ. 'ಆದಿ' ಪದದಿಂದ ಗುಹಾಪ್ರವಿಷ್ಟತ್ವಾದಿಗಳನ್ನೂ ಸಹ ಆದಿಪದದಿಂದ ಸ್ವೀಕರಿಸಬೇಕು. ಏಕೆಂದರೆ ಯಾವತ್ತೂ ಸಹ ಉದ್ದೇಶ ಒಂದೇ ಆಗಿರುತ್ತದೆ. ಉಳಿದವುಗಳೆನ್ನೆಲ್ಲಾ ವಿಧೇಯವೆಂದೇ ಹೇಳಬೇಕು. ಆದ್ದರಿಂದ 'ಪಿಬಂತೌ' ಎಂಬಲ್ಲಿರುವ ದ್ವಿವಚನವನ್ನು ಸಾವಕಾಶವೆಂದು ಹೇಳಬಹುದಾದರೂ 'ಛಾಯಾತಪೌ'' ಎಂಬಲ್ಲಿರುವ ದ್ವಿವಚನವನ್ನು ಸಾವಕಾಶವೆಂದು ಹೇಳಲಾಗದು ಹೊರತು ನಿರವಕಾಶವೆಂದು ಹೇಳಬೇಕು.

'ಪಿಬಂತೌ ಇತಿ ದ್ವಿವಚನಶ್ರುತೇಃ' ಎಂಬುದಾಗಿ ಹೇಳಿ 'ಶ್ರುತೇರ್ನಿರವಕಾಶತ್ವಾತ್' ಎಂದು ಹೇಳಿದ್ದಾರೆ. ಇದರಿಂದ 'ಪಿಬಂತೌ' ಎಂಬಲ್ಲಿರುವ ದ್ವಿವಚನಶ್ರುತಿಯನ್ನೇ ನಿರವಕಾಶವೆಂದು ಹೇಳಿದಂತಾಯಿತು. ಟೀಕಾಮಾತಿನ ಸ್ವಾರಸ್ಯವನ್ನನುಸರಿಸಿ 'ಪಿಬಂತೌ' ಎಂಬಲ್ಲಿರುವ ದ್ವಿವಚನವನ್ನು ಅನುವಾದ್ಯವೆಂದು ಒಪ್ಪಿದರೂ ಸಹ 'ಗ್ರಹಂ ಸಮ್ಮಾರ್ಷ್ಟಿ' ಎಂಬಲ್ಲಿ ವೈಲಕ್ಷಣ್ಯವಿರುವುದರಿಂದ 'ಪಿಬಂತೌ' ಎಂಬಲ್ಲಿರುವ ದ್ವಿವಚನವು ಈಶ್ವರನಲ್ಲಿ ಅನುಪಪನ್ನವಾಗಿದೆಯೆಂದು 'ಗ್ರಹೈಕತ್ವಸ್ಯ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಕಾಶಃ – ಏಕತ್ವಸ್ಯ ವಿಧೇಯಾನ್ವಯಾಯೋದ್ದೇಶ್ಯಕೋಟಿಪ್ರವೇಶೇ ಗ್ರಹಸ್ಯಾಪ್ಯುದ್ದೇಶ್ಯತ್ವೇನ ಪ್ರತ್ಯುದ್ದೇಶ್ಯ ವಾಕ್ಯಪರಿಸಮಾಪ್ತ್ಯಾ, ಗ್ರಹಂ ಸಮ್ಮೃಜ್ಯಾದೇಕಂ ಸಮ್ಮೃಜ್ಯಾದಿತಿ ವಾಕ್ಯಭೇದಃ । ವಿಧೇಯಕೋಟಿಪ್ರವೇಶೇ ಸಮ್ಮಾರ್ಗಸ್ಯಾಪಿ ವಿಧೇಯತ್ವೇನ ವಿಧೇಯಭೇದಾತ್, ಗ್ರಹಂ ಸಮ್ಮೃಜ್ಯಾತ್ ಸ ಚ ಸಮ್ಮಾರ್ಗ ಏಕ ಇತಿ ವಾಕ್ಯಭೇದಾಪತ್ತ್ಯೇತ್ಯರ್ಥಃ ।

'ಗ್ರಹಂ ಸಮ್ಮಾರ್ಷ್ಟಿ' ಎಂಬಲ್ಲಿ ಏಕತ್ವವೂ ಅವಿವಕ್ಷಿತವಾಗಿದೆ. ಅವಿವಕ್ಷಿತವಲ್ಲದಿದ್ದರೆ ಉದ್ದೇಶದಲ್ಲಿ ಅನ್ವಯ ಹೊಂದುತ್ತದೋ? ಅಥವಾ ವಿಧೇಯದಲ್ಲಿ ಅನ್ವಯ ಹೊಂದುತ್ತದೋ? ಎಂಬ ಪ್ರಶ್ನೆ ಬರುತ್ತದೆ. ಉದ್ದೇಶದಲ್ಲಿ ಅನ್ವಯ ಹೊಂದುವುದಾದರೆ ಗ್ರಹಣವೇ ಮೊದಲು ಉದ್ದೇಶವಾಗಿರುವುದರಿಂದ, ಪ್ರತಿಯೊಂದು ಉದ್ದೇಶಕ್ಕೂ ವಾಕ್ಯವು ಪರಿಸಮಾಪ್ತಿಯಾಗಬೇಕಾದ್ದರಿಂದ 'ಗ್ರಹಂ ಸಮ್ಮೃಜ್ಯಾತ್' ಎಂಬ

ವಾಕ್ಯಭೇದ ದೋಷ ಬರುತ್ತದೆ. ಒಂದು ವೇಳೆ ವಿಧೇಯಕೋಟಿಯಲ್ಲಿ ಅನ್ವಯ ಹೊಂದುವುದಾದರೆ 'ಸಮ್ಮಾರ್ಜನವು' ಮೊದಲೇ ವಿಧೇಯವಾಗಿರುವುದರಿಂದ ಎರಡು ವಿಧೇಯವನ್ನು ಹೇಳಿದಂತಾಯಿತು. ಆವಾಗ 'ಗ್ರಹಂ ಸಂಮ್ಮೃಜ್ಯಾತ್ ಸ ಚ ಸಮ್ಮಾರ್ಗ ಏಕಃ' ಎಂಬುದಾಗಿ ಪುನಃ ವಾಕ್ಯಭೇದ ದೋಷವು ಬರುತ್ತದೆ. ಆದ್ದರಿಂದ ಏಕತ್ವವನ್ನು ಅವಿವಕ್ಷಿತವೆಂದೇ ಹೇಳಬೇಕು.

ಪ್ರಕಾಶಃ – ಚತುರ್ಥಮಾಶಙ್ಕ್ಯ ನಿರಾಹ – ನಚ ಪಿಬನ್ತಾವಿತ್ಯಾದಿಕಮಿತಿ । ಮನ್ತ್ರೋಹಾಧಿಕರಣಮುಕ್ತಂ ಜಿಜ್ಞಾಸಾऽಧಿಕರಣೇ । ''ಅಗ್ನಯೇ ಜುಷ್ಟಂ ನಿರ್ವಪಾಮಿ'' ಇತಿ ದರ್ಶಪೌರ್ಣಮಾಸಿಕಾಗ್ನೇಯಹವಿರ್ನಿರ್ವಾಪಮನ್ತ್ರಸ್ಯ ''ಸೌರ್ಯೆ ಚರುಂ ನಿರ್ವಪೇದ್ಬ್ರಹ್ಮವರ್ಚಸಕಾಮಃ'' ಇತಿ ವಿಹಿತೇ ಸೌರ್ಯಯಾಗೇ ''ಆಗ್ನೇಯವತ್ಸೌರ್ಯಃ ಕರ್ತವ್ಯಃ'' ಇತ್ಯತಿದೇಶತಃ ಪ್ರಾಪ್ತಸ್ಯ ಯಥಾ 'ಸೂರ್ಯಾಯ' ಇತಿ ಪ್ರಾತಿಪದಿಕಮಾತ್ರೇ ಊಹಸ್ತಥಾ 'ಪಿಬನ್ತೌ' ಇತಿ ದ್ವಿವಚನಾನ್ತಸ್ಯ ಪಿಬನ್ತಮಿತ್ಯೇಕವಚನರೂಪ-ಪ್ರತ್ಯಯಮಾತ್ರೋಹಃ ಸ್ಯಾತ್ । ನ ಚಾತ್ರ ತಥಾऽತಿದೇಶತಃ ಪ್ರಾಪ್ತಂ, ಇಹೈವಾಸ್ಯಾऽऽಮ್ನಾನಾದಿತ್ಯರ್ಥಃ ।

ದ್ವಿವಚನಾಂತವಾದ ಶಬ್ದವನ್ನು ಏಕವಚನಾಂತವಾಗಿ ಊಹಿಸಬೇಕೆಂಬ ನಾಲ್ಕನೇ ಪಕ್ಷವನ್ನು 'ನಚ ಪಿಬಂತೌ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ಮಂತ್ರೋಹಾಧಿಕರಣವನ್ನು ಜಿಜ್ಞಾಸಾಧಿಕರಣದಲ್ಲಿ ವಿವರಿಸಿದ್ದಾಗಿದೆ. ''ಆಗ್ನೇಯೇ ಜುಷ್ಟಂ ನಿರ್ವಪಾಮಿ'' ಎಂಬುದು ದರ್ಶಪೂರ್ಣಮಾಸದ ಆಗ್ನೇಯ ಹವಿಸ್ಸನ್ನು ನಿರ್ವಾಪ ಮಾಡುವ ಮಂತ್ರವಾಗಿದೆ. ''ಸೌರ್ಯಂ ಚರುಂ ನಿರ್ವಪೇದ್ಬ್ರಹ್ಮವರ್ಚಸಕಾಮಃ'' ಎಂಬುದಾಗಿ ವಿಹಿತವಾದ ಸೌರ್ಯ ಯಾಗದಲ್ಲಿ ಈ ಮಂತ್ರವು ಪ್ರಾಪ್ತವಾಗಿದೆ. ಅಂದರೆ ಆಗ್ನೇಯಯಾಗವೆಂಬುದು ಪ್ರಕೃತಿಯಾಗಿದೆ. ಸೌರ್ಯಯಾಗವೆಂಬುದು ವಿಕೃತಿಯಾಗವಾಗಿದೆ. ಪ್ರಕೃತಿವದ್‌ವಿಕೃತಿಃ ಕರ್ತವ್ಯಾ ಎಂಬ ಚೋದಕದಂತೆ 'ಆಗ್ನೇಯವತ್ ಸೌರ್ಯಃ ಕರ್ತವ್ಯಃ' ಎಂದು ಹೇಳಿದಂತಾಯಿತು. ಆವಾಗ ಆಗ್ನೇಯ ಯಾಗದಲ್ಲಿ ಪ್ರಕೃತವಾದ ಮಂತ್ರವು ಸೌರ್ಯಯಾಗದಲ್ಲಿ ಅತಿದೇಶದಿಂದ ಪ್ರಾಪ್ತವಾಗುತ್ತದೆ. ಆದ್ದರಿಂದ 'ಸೂರ್ಯಾಯ' ಎಂದಷ್ಟೇ ಪ್ರಾತಿಪದಿಕವನ್ನು ಊಹಿಸಬೇಕು. ಅದರಂತೆ ಪ್ರಕೃತದಲ್ಲಿ 'ಪಿಬಂತೌ' ಎಂಬಲ್ಲಿ ದ್ವಿವಚನಾಂತವಾಗಿದ್ದರೂ 'ಪಿಬಂತಂ' ಎಂಬುದಾಗಿ ಏಕವಚನ ಪ್ರತ್ಯಯವನ್ನಷ್ಟೇ ಊಹಿಸಬಹುದಿತ್ತು. ಒಂದು ವೇಳೆ ಅತಿದೇಶದಿಂದ ಪ್ರಾಪ್ತವಾಗಿದ್ದರೆ ಊಹಿಸಬಹುದಿತ್ತು. ಆದರೆ ಕಾಠಕದಲ್ಲಿ ಇದೇ ಮೊದಲು ಪ್ರಾಪ್ತವಾಗುತ್ತಿರುವುದರಿಂದ ಇದಕ್ಕಿಂತ ಮೊದಲು ಪ್ರಸಕ್ತವೇ ಆಗಿರುವುದಿಲ್ಲ.

ಪ್ರಕಾಶಃ – ಪಞ್ಚಮಮಾಶಙ್ಕ್ಯಾಹ – ನ ಚೈಕಸ್ಮಿನ್ನಿತಿ । ಸಮನ್ವಯಾಧಿಕರಣೇऽಭ್ಯಾಸಾಧಿಕರಣಂ ವಿವೃತಮ್ । ತತ್ರ ಹಿ ಸಮಿದಾದೀನಾಂ ಯಾಗಾನಾಮತ್ವಮುಕ್ತಮ್ । ಏಕಸಮಿದಾಖ್ಯ-ಪ್ರಯಾಜವಾಚಿನೋऽಪಿ ಸಮಿಚ್ಛಬ್ದಸ್ಯ ರೂಢತ್ವೇನ 'ತಚ್ಚೈರ್ವೃಕ್ಷಃ' ಇತ್ಯಾದಾವಿವ ಬಹ್ವರ್ಥವಚನಪ್ರತಿ-ರೂಪಕತ್ವೇನೋಪಪತ್ತಾವಪೀಹ ಯೌಗಿಕತ್ವಾತ್ ತಥಾ ನ ವಕ್ತುಂ ಯುಜ್ಯತ ಇತ್ಯರ್ಥಃ ।

ಐದನೇ ಪಕ್ಷವನ್ನು ಆಶಂಕಿಸಿ 'ನ ಚೈಕಸ್ಮಿನ್' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಪೂರ್ವಮೀಮಾಂಸೆಯ ಅಭ್ಯಾಸಾಧಿಕರಣವನ್ನು ಹಿಂದೆ ಸಮನ್ವಯಾಧಿಕರಣದಲ್ಲಿಯೇ ವಿವರಿಸಿದ್ದಾಗಿದೆ. ಈ ಅಭ್ಯಾಸಾಧಿಕರಣದಲ್ಲಿ

ಸಮಿದಾದಿಗಳನ್ನು ಯಾಗದ ಹೆಸರೆಂದು ಹೇಳಿದ್ದಾರೆ. ''ಉಚ್ಚೈರ್ವರ್ಕೃಃ ಎಂದು ಹೇಳಿದಾಗ ಬಹುವಚನವು ಯಾವರೀತಿಯಾಗಿ ವಿಭಕ್ತಿಪ್ರತಿರೂಪಕವಾದ ಅವ್ಯಯವವಾಗಿದೆಯೋ ಅದರಂತೆ 'ಸಮಿದಃ' ಎಂಬಲ್ಲಿರುವ ಬಹುವಚನವೂ ಸಹ ವಿಭಕ್ತಿಪ್ರತಿರೂಪಕವಾದ ಅವ್ಯಯವೇ ಆಗಿದೆ. ಆದ್ದರಿಂದ ಸಮಿದಾಖ್ಯಪ್ರಯಾಜವಾಚಿಯಾದ ಸಮಿಚ್ಛಬ್ದವು ಒಂದೇ ಯಾಗವನ್ನು ಹೇಳುತ್ತಿದೆ. ಏಕೆಂದರೆ 'ಉಚ್ಚೈಃ' ಎಂಬ ಪದವು ಹೇಗೆ ರೂಢವಾಗಿದೆಯೋ ಅದರಂತೆ 'ಸಮಿತ್' ಶಬ್ದವೂ ಸಹ ರೂಢವಾಗಿದೆ. ಆದ್ದರಿಂದ 'ಸಮಿತ್' ಶಬ್ದದ ಮುಂದಿರುವ ಬಹುವಚನವನ್ನು ವಿಭಕ್ತಿಪ್ರತಿರೂಪಕವಾದ ಅವ್ಯಯವೆಂದು ಹೇಳಬಹುದು. ಆದರೆ 'ಪಿಬಂತೌ' ಇತ್ಯಾದಿ ಪದಗಳು ಯೌಗಿಕವಾದ್ದರಿಂದ ದ್ವಿವಚನ ಪ್ರತ್ಯಯವನ್ನು ವಿಭಕ್ತಿಪ್ರತಿರೂಪಕವಾದ ಅವ್ಯಯವೆಂದು ಹೇಳಲು ಸಾಧ್ಯವಿಲ್ಲ ಎಂದರ್ಥ.

प्रकाशः – ननु नवमे द्वितीयपादान्तिमाधिकरणे '''प्रयाजेऽपीति चेत्'' इत्यत्र ''समिधो यजति'' इत्यादौ समिदादिकं देवतात्वेनोद्दिश्य तत्संस्कारत्वेन यागा विधीयन्ते अथारादुपकारकतया यागा इति विशये,

सामवायिकत्वलाभात्संस्कारविधिरिति प्राप्ते,

तथात्वे देवतालिङ्गस्य ''यदग्ने सायं जुहोति'' इत्यादाविव चतुर्थ्या निर्देशस्याभावेन चतुर्थ्यर्थे द्वितीयाया उपचारापत्तेः आरादुपकारकत्वेन यागविधिः, समिदादिशब्दास्तु मन्त्रवर्णप्राप्तदेवतां निमित्तीकृत्य नामधेयानि देवता एव वाऽनुवदन्ति,

न चानुवादे उपचारो दोष इति सिद्धान्तितत्वात् श्येनशब्दस्य पक्षिविशेषे रूढस्य तत्सादृश्याद्गौण्या वृत्त्या यागनामत्वमिव, देवतागणविशेषे निरूढस्य समिच्छब्दस्य तत्प्रकाशमन्त्रसम्बन्धापादितदेवतासम्बन्धे यागे लाक्षणिकत्वात् न रूढत्वमस्ति । उक्तं च शाबरभाष्ये ''समिदादिमन्त्रकत्वाद्यजीनां समदादिशब्दा वाचकाः'' इति ।

लक्षणायां लिङ्गव्यत्यय इव वचनव्यत्ययोऽपि न दोष इति चेन्न, पौर्णमास्यधिकरणपूर्वपक्षे फलवाक्यस्य 'दर्शपूर्णमासाभ्यां' इति पदस्य द्विवचनप्रतिरूपकाव्ययत्वमाश्रित्य प्राकरणिकसर्वयागनामधेयत्वमुक्तं, तद्वत्प्रकृतेऽपि वक्तुं शक्यमित्यभिप्रायेणैवमुक्तमित्यविरोधः । देवतायां निरूढत्वाभिप्रायेण वा एवमुक्तिः ।

ಆಕ್ಷೇಪ - ಗ್ರಂಥಕಾರರು 'ಸಮಿತ್' ಶಬ್ದವನ್ನು ರೂಢವೆಂದು ಹೇಳಿದ್ದಾರೆ. ಆದರೆ ಮೀಮಾಂಸಕರು 'ಸಮಿತ್' ಶಬ್ದವನ್ನು ಲಾಕ್ಷಣಿಕವೆಂದು ಹೇಳಿದ್ದಾರೆ -

ಪ್ರಯಾಜೇಽಪೀತಿ ಚೇತ್ [1](೯-೨-೨೦)

ಈ ಸೂತ್ರದಲ್ಲಿ 'ಸಮಿಧೋ ಯಜತಿ' ಇತ್ಯಾದಿ ವಾಕ್ಯಗಳ ಅರ್ಥವನ್ನು ವಿಮರ್ಶಿಸಲಾಗಿದೆ. ಸಮಿದಾದಿ ಪದಗಳಿಂದ ದೇವತೆಗಳು ಪ್ರತಿಪಾದ್ಯರಾಗಿದ್ದಾರೆ. 'ಸಮಿತ್' 'ಇಡಾ' ಮೊದಲಾದ ದೇವತೆಗಳನ್ನು ಅನುವಾದ ಮಾಡಿ ಆ ದೇವತೆಗಳ ಸಂಸ್ಕಾರಕ್ಕಾಗಿ ಯಾಗಗಳನ್ನು ವಿಧಿಸುತ್ತಿದ್ದಾರೋ? ಅಥವಾ ದರ್ಶಪೂರ್ಣಮಾಸ ಯಾಗವೆಂಬ ಪ್ರಧಾನಯಾಗಕ್ಕೆ ಫಲೋಪಕಾರಕವಾಗಿ ಆರಾದುಪಕಾರಕವೆಂದು ಯಾಗವನ್ನು

---

(೧) ಭಾಟ್ಟಸಙ್ಗ್ರಹಃ –

अथ विंशं समिदादीनां यागनामधेयताधिकरणम् सूत्रे (५९-४०)

प्रयाजेऽपीति चेत् ॥ ५९ ॥

(नाचोदितत्वात् ॥ ६० ॥)

पूर्वन्यायेन **शङ्कनात्सङ्गतिः** । दर्शपूर्णमासप्रकरणे ''समिधो यजति'' इत्यादिना प्रयाजपञ्चकमाम्नातम् । तत्र किं दर्शपूर्णमासमम्बन्धिनः समित्तनूनपादादीन् देवतात्वेनोद्दिश्य तत्संस्कारार्थतया पञ्च यागा विधीयन्ते, उताऽरादुपकारकाः प्रयाजा इति **सन्देहे**, ''विष्णुं यजति'' ''वरुणं यजति'' इत्यादौ द्वितीयानिर्दिष्टस्यापि देवतात्वदर्शनेनेहापि द्वितीयानिर्दिष्टानामपि समिदादीनां देवतात्वसम्भवेन तत्संस्कारकतया सन्निपातित्वे सम्भवति तद्विधित्वायोगात्पार्वणहोमवदेवतोद्देशेन तत्संस्कारविधय इति **प्राप्तम्** । तथा च **सूत्रम्**, पार्वणवत् **प्रयाजेऽपि** देवतासंस्कारकत्वेन समावायिकेतेति । **सिद्धान्तस्तु**, देवतात्वलिङ्गस्य ''आग्नेयोऽष्टाकपालः'' इत्यादाविव तद्धितेन निर्देशस्य ''यदग्नये सायं जुहोति'' इत्यादाविव चतुर्थ्या वा निर्देशस्याभावेन न समिदादेरत्र देवतात्वम् । ''विष्णुं यजति'' इत्यादौ तु मन्त्रवर्णप्राप्तं विष्णोर्देवतात्वमनूद्यते । अनुवादश्च यथाप्राप्ति । उद्देश्यक्रियाकर्मताया एव प्राप्ततया सैव हविस्त्यागरूपे यागे उपचारादनूद्यते । अनुवादे चोपचारस्यादोषत्वात् । प्रकृते तु समिदादिदेवताविधिपरत्वे विधावुपचारायोगात्केवलं यागविधिरेवाश्रयणीय इति ''समिधोऽग्न आज्यस्य वियन्तु'' इत्यादिमन्त्रवर्णप्राप्तसमिदादि-देवता निमित्तीकृत्य तत्प्रख्यन्यायेन नामधेयानीति तत्तन्नामकाः पञ्च यागाः प्रकरणबलेन दर्शपूर्णमासयोरारादुपकारकतया विधयीयन्त इति । द्वितीया तूद्देश्यक्रियाकर्मत्वबादिनीति । तदाह **सूत्रे, नाचोदितत्वादिति** । समिदादेर्देवतात्वेन दर्शपूर्णमासयोश्चरुचोदितत्वात्पूर्वपक्षो न युक्त इत्यर्थः **फलन्तु** विकृतावपि प्रवृत्तिः ।

इति विंशं समिदादीनां यागनामधेयताधिकरणम् (सूत्रे ५९-६०)

ವಿಧಿಸುತ್ತಿದ್ದಾರೋ? ಎಂದು ಸಂಶಯ. (ಮೀಮಾಂಸಕ ಮತದಲ್ಲಿ ಶಬ್ದವನ್ನೇ ದೇವತೆಯೆನ್ನುತ್ತಾರೆ. ದ್ರವ್ಯಕ್ಕೆ ಸಂಸ್ಕಾರ ಮಾಡಿದಂತೆ ಈ ದೇವತೆಗೂ ಸಂಸ್ಕಾರ ಮಾಡಬೇಕೆಂದು ಅವರ ಅಭಿಪ್ರಾಯ.)

ಪೂರ್ವಪಕ್ಷ - ಅಂಗಗಳು ಎರಡುವಿಧವಾಗಿವೆ. 'ಆರಾದುಪಕಾರಕ' ಮತ್ತು 'ಸನ್ನಿಪತ್ಯೋಪಕಾರಕ' ಎಂಬುದಾಗಿ. ಯಾಗಸ್ವರೂಪಕ್ಕೆ ಉಪಯೋಗವಾಗುವಂತಹ ಅಂಗಗಳು ಸನ್ನಿಪತ್ಯೋಪಕಾರಕಾಂಗಗಳೆನಿಸುತ್ತವೆ. ಯಾಗಜನ್ಯವಾದ ಫಲಕ್ಕೆ ಉಪಯೋಗವಾಗುವಂತಹ ಅಂಗಗಳನ್ನು ಆರಾದುಪಕಾರಕ ಅಥವಾ ಫಲೋಪಕಾರಕ ಅಂಗಗಳೆನ್ನುತ್ತಾರೆ. ಆರಾದುಪಕಾರಕ್ಕಿಂತ ಸನ್ನಿಪತ್ಯೋಪಕಾರಕಾಂಗಗಳು ಬಲಿಷ್ಠವಾಗಿರುತ್ತವೆ. ಏಕೆಂದರೆ ಯಾಗಸ್ವರೂಪದಲ್ಲಿಯೇ ಸನ್ನಿಪತ್ಯೋಪಕಾರಾಂಗಕ್ಕೆ ಪ್ರಯೋಜನವಿರುತ್ತದೆ. ಆದ್ದರಿಂದ ಪ್ರಕೃತ 'ಸಮಿಧೋ ಯಜತಿ' 'ಇಡೋ ಯಜತಿ' ಇತ್ಯಾದಿಗಳನ್ನು ಸನ್ನಿಪತ್ಯೋಪಕಾರಕಾಂಗಗಳೆಂದೇ ಹೇಳಬೇಕು. ಸಮಿದಾದಿಗಳು ಯಾಗದಲ್ಲಿ ನೇರವಾಗಿ ಸಂಬಂಧವನ್ನು ಹೊಂದಿರುವುದರಿಂದ ಸಾಮವಾಯಿಕತ್ವವು ಲಾಭವಾಗುತ್ತದೆ. ಅಂದರೆ ಯಾಗದಲ್ಲಿ ಸಮವೇತವಾಗಿ ಸಂಬಂಧವನ್ನು ಹೊಂದುತ್ತವೆ ಎಂದರ್ಥ. ಹೀಗೆ ಯಾಗಸ್ವರೂಪದಲ್ಲಿ ಅಂತರ್ಭೂತವಾದ್ದರಿಂದ ಇವುಗಳನ್ನು ಸಂಸ್ಕಾರವಿಧಿಯೆಂದೇ ಹೇಳಬೇಕು. ಅಂದರೆ ದರ್ಶಪೂರ್ಣಮಾಸಯಾಗದಲ್ಲಿ ಉಪಯೋಗವಾಗುವ ದೇವತೆಗಳಿಗೆ ಸಂಸ್ಕಾರ ರೂಪವಾಗಿ ಬೇರೆ ಯಾಗಗಳನ್ನು ವಿಧಿಸುತ್ತಿದ್ದಾರೆ. ಹೀಗೆ ಸಂಸ್ಕೃತರಾದ ದೇವತೆಗಳು 'ದರ್ಶಪೂರ್ಣಮಾಸ' ಎಂಬ ಪ್ರಧಾನ ಯಾಗದಲ್ಲಿ ಅಂಗಗಳಾಗುತ್ತಾರೆಂದು ಪೂರ್ವಪಕ್ಷ.

ಸಿದ್ಧಾಂತ - 'ಆರಾದುಪಕಾರಕ' ಎಂದೇ ಹೇಳಬೇಕು. ಏಕೆಂದರೆ 'ಸಮಿದಾದಿ' ಶಬ್ದಗಳು ದೇವತಾವಾಚಕಗಳೇ ಅಲ್ಲ. ಹೊರತಾಗಿ ಯಾಗವಾಚಕಗಳಾಗಿವೆ. ಏಕೆಂದರೆ ಚತುರ್ಥೀವಿಭಕ್ತಿಯಿಂದ ನಿರ್ದೇಶ ಮಾಡಿದರೆ ಮಾತ್ರ ಆ ಶಬ್ದವು ದೇವತಾವಾಚಕವಾಗುತ್ತದೆ. ಉದಾಹರಣೆ ''ಯದಗ್ನೇ ಸಾಯಂ ಜುಹೋತಿ'' ಎಂಬಲ್ಲಿ ಚತುರ್ಥ್ಯಂತವಾದ 'ಅಗ್ನಯೇ' ಎಂಬ ಪದವು ದೇವತಾವಾಚಕವಾಗಿದೆ. ಆದರಂತೆ 'ಸಮಿಧೋ ಯಜತಿ' ಇತ್ಯಾದಿ ಸ್ಥಳಗಳಲ್ಲಿ ಚತುರ್ಥ್ಯಂತವಾದ ಪದಗಳು ಕಾಣಿಸುತ್ತಿಲ್ಲ. ಇನ್ನು ದ್ವಿತಿಯಾಂತವಾದ 'ಸಮಿದಃ' ಇತ್ಯಾದಿ ಪದಗಳನ್ನು ಚತುರ್ಥ್ಯರ್ಥದಲ್ಲಿ ಔಪಚಾರಿಕವಾಗಿ ಪ್ರಯೋಗಿಸಬೇಕಾಗುತ್ತದೆ. ಆದರೆ ಮುಖ್ಯಾರ್ಥದಿಂದಲೇ ವ್ಯಾಖ್ಯಾನಿಸಲು ಬರುವಾಗ ಗೌಣಾರ್ಥವನ್ನು ಸ್ವೀಕರಿಸಬಾರದು. ಆದ್ದರಿಂದ ದರ್ಶಪೂರ್ಣಮಾಸವೆಂಬ ಪ್ರಧಾನ ಯಾಗಕ್ಕೆ. ಈ ಸಮಿದಾದಿಗಳನ್ನು ಫಲೋಪಕಾರಕಾಂಗವೆಂದೇ ಹೇಳಬೇಕು. 'ಸಮಿದಾದಿ' ಶಬ್ದಗಳಾದರೂ ಸಹ ಮಂತ್ರವರ್ಣದಿಂದ ಪ್ರಾಪ್ತರಾದ ದೇವತೆಗಳನ್ನು ನಿಮಿತ್ತೀಕರಿಸಿ ಯಾಗದ ನಾಮಧೇಯವನ್ನು ಹೇಳುತ್ತಿದೆ. ಮತ್ತು ದೇವತೆಗಳನ್ನು ಅನುವಾದ ಮಾಡುತ್ತಿವೆ. ಉದಾಹರಣೆ - ಅಗ್ನಿದೇವತಾಕ ಯಾಗವಾದ್ದರಿಂದ ಆಗ್ನೇಯಯಾಗವೆಂದು ಹೇಳುತ್ತಾರೆ. ಇಲ್ಲಿ 'ಅಗ್ನಯೇ' ಎಂಬ ಶಬ್ದವು ದೇವತಾಸಂಬಂಧವನ್ನು ನಿಮಿತ್ತವನ್ನಾಗಿಟ್ಟುಕೊಂಡೇ ಯಾಗವನ್ನು ಹೇಳುತ್ತಿದೆ. ಆದರಂತೆ ಪ್ರಕೃತದಲ್ಲಿಯೂ ಸಮಿದಾದಿ ದೇವತೆಗಳನ್ನು ಉದ್ದೇಶಿಸಿ ನಡೆಸುವ ಯಾಗಕ್ಕೆ 'ಸಮಿತ್‌ಯಾಗ' ಎಂದೇ ಕರೆಯಬೇಕು. 'ಸಮಿದಃ' ಎಂಬ ಪದವು ದೇವತೆಯನ್ನು ಉದ್ದೇಶಿಸಿಯೇ ಯಾಗದ ಹೆಸರನ್ನು ಹೇಳುತ್ತದೆ.

ಪ್ರಶ್ನೆ - ಸಮಿದಾದಿ ಪದಗಳು ಯಾಗದ ನಾಮಧೇಯವಾಗಿದ್ದರೂ ಸಹ ದೇವತೆಗಳನ್ನು ಅನುವಾದ ಮಾಡುತ್ತಿವೆಯೆಂದು ಹೇಳಿದಿರಿ. ಹಾಗೆ ಅನುವಾದ ಮಾಡುವುದಾದರೂ ಚತುರ್ಥೀವಿಭಕ್ತಿಯನ್ನು ಔಪಚಾರಿಕವಾಗಿ ವಿವಕ್ಷಿಸಲೇಬೇಕು. ಆವಾಗ ಗೌಣಾರ್ಥವನ್ನು ಸ್ವೀಕರಿಸಬೇಕೆಂಬ ದೋಷವು ಸಿದ್ಧಾಂತಿಗಳಿಗೂ ಬರುತ್ತದಲ್ಲವೇ?

ಉತ್ತರ - ಹೀಗೆ ಪ್ರಶ್ನಿಸಬಾರದು. ಏಕೆಂದರೆ ಅನುವಾದ ಮಾಡಿದಾಗ ಚತುರ್ಥ್ಯರ್ಥ ಎಂಬ ಔಪಚಾರಿಕ ಪ್ರಯೋಗವು ತಪ್ಪಾಗುವುದಿಲ್ಲ.

ಹೀಗೆ ಪೂರ್ವಮೀಮಾಂಸಾಧಿಕರಣದಲ್ಲಿ ನಿರ್ಣಯಿಸಿರುವುದರಿಂದ 'ಶ್ಯೇನ' ಶಬ್ದವು ಪಕ್ಷಿವಿಶೇಷದಲ್ಲಿ ರೂಢವಾಗಿದ್ದರೂ ಸಹ ಪಕ್ಷಿಸಾದೃಶ್ಯವು ಯಾಗದಲ್ಲಿರುವುದರಿಂದ ಯಾಗವನ್ನೂ ಸಹ 'ಶ್ಯೇನ' ಎಂದೇ ಹೇಳಲಾಗುತ್ತದೆ. ಅಂದರೆ 'ಶ್ಯೇನ' ಶಬ್ದವನ್ನು ಪಕ್ಷಿಯಲ್ಲಿ ಮುಖ್ಯವಾಗಿ ಪ್ರಯೋಗಿಸಿದರೂ ಯಾಗದಲ್ಲಿ ಗೌಣವಾಗಿ ಪ್ರಯೋಗಿಸಲಾಗುತ್ತದೆ. ಆದರಂತೆ ಸಮಿದಾದಿಶಬ್ದಗಳು ದೇವತೆಗಳನ್ನೇ ಮುಖ್ಯವಾಗಿ ಹೇಳಿದರು ಗೌಣವಾಗಿ ಯಾಗದಲ್ಲಿ ಪ್ರಯೋಗಿಸಲಾಗುತ್ತದೆ. ಅಂದರೆ ಸಮಿಚ್ಛಬ್ದಗಳಿಂದ ಪ್ರತಿಪಾದ್ಯರಾದವರು ದೇವತೆಗಳು. ಈ ದೇವತೆಗಳಿಗೆ ಪ್ರಕಾಶಕವಾದದ್ದು ಮಂತ್ರಗಳು ಆ ಮಂತ್ರಗಳ ಸಂಬಂಧವು ಈ ಯಾಗದಲ್ಲಿರುತ್ತದೆ. ಹೀಗೆ ಸಮಿದಾದಿ ಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯರಾದ ದೇವತೆಗಳ ಸಂಬಂಧವು ಯಾಗದಲ್ಲಿರುವುದರಿಂದ ಲಾಕ್ಷಣಿಕ ಪ್ರಯೋಗವೆಂದು ತಿಳಿಯಬೇಕು. ಆದರೆ ಗ್ರಂಥಕಾರರು ಸಮಿದಾದಿಶಬ್ದಗಳನ್ನು ಯಾಗದಲ್ಲಿ ರೂಢವೆಂದು ಹೇಳಿದ್ದಾರೆ. ಇದು ಹೇಗೆ ಸರಿ? ಶಾಬರ ಭಾಷ್ಯದಲ್ಲಿಯೂ ಸಹ ''ಸಮಿದಾದಿಮಂತ್ರಕರ್ತೃದೃಜೀನಾಂ ಸಮಿದಾದಿಶಬ್ದಾಃ ವಾಚಕಾಃ'' ಸಮಿದಾದಿ ಮಂತ್ರಗಳ ಸಂಬಂಧವಿರುವುದರಿಂದ ಯಾಗಗಳು ಸಮಿದಾದಿ ಶಬ್ದಗಳಿಂದ ವಾಚ್ಯವಾಗಿವೆ ಎಂದು ಹೇಳಲಾಗಿದೆ.

ಲಕ್ಷಣಾ ಮಾಡುವಾಗ ಲಿಂಗ ವ್ಯತ್ಯಾಸವಾಗುವುದು ಕಂಡಿದೆ. 'ಗಂಗಾಯಾಂ ಘೋಷಃ' ಎಂದು ಹೇಳಿದಾಗ 'ಗಂಗಾ' ಶಬ್ದಕ್ಕೆ ತೀರದಲ್ಲಿ ಲಕ್ಷಣಾ ಮಾಡುತ್ತೇವೆ. ಆವಾಗ ಸ್ತ್ರೀಲಿಂಗವು ವ್ಯರ್ಥವೆಂದು ಲಿಂಗವ್ಯತ್ಯಾಸವನ್ನು ಮಾಡಿಕೊಳ್ಳುತ್ತೇವೆ. ಆದರಂತೆ ಸಮಿದಾದಿ ಶಬ್ದಗಳಿಂದ ದೇವತೆಗಳು ಪ್ರತಿಪಾದ್ಯರಾದಾಗ ಬಹುವಚನವು ಕೂಡುತ್ತದೆ. ಆದರೆ ಯಾಗವನ್ನು ಹೇಳಿದಾಗ ಬಹುವಚನವು ತಪ್ಪಾಗುತ್ತದೆಂದು ಏಕವಚನಾಂತವಾಗಿ ವ್ಯತ್ಯಾಸ ಮಾಡಿಕೊಳ್ಳಬೇಕಲ್ಲವೇ? ಇದು ತಪ್ಪು.

ಸಮಾಧಾನ - ಪೂರ್ವಮೀಮಾಂಸಕರೇ ಪೌರ್ಣಮಾಸ್ಯಾಧಿಕರಣದ ಪೂರ್ವಪಕ್ಷದಲ್ಲಿ ಹೀಗೆ ಹೇಳಿದ್ದಾರೆ - 'ದರ್ಶಪೂರ್ಣಮಾಸಾಭ್ಯಾಂ ಯಜೇತ' ಎಂಬ ಫಲವಾಕ್ಯವು ಆರು ಯಾಗಗಳನ್ನು ವಿಧಿಸುತ್ತಿದೆ. ಆದರೆ ಆರು ಯಾಗಗಳನ್ನು ಹೇಳುವ ಬಹುವಚನ ಪ್ರಯೋಗವು ಇಲ್ಲಿ ಕಾಣಸುತ್ತಿಲ್ಲ ಹೊರತಾಗಿ ದ್ವಿವಚನ ಪ್ರಯೋಗವಿದೆ. ಇಲ್ಲಿರುವ ದ್ವಿವಚನವನ್ನು ಮೀಮಾಂಸಕರು ಬಹುತ್ವಾರ್ಥದಲ್ಲಿರುವ ವಿಭಕ್ತಿಪ್ರತಿರೂಪಕವಾದ ಅವ್ಯಯವೆಂದು ಹೇಳುತ್ತಾರೆ. ಆದರಂತೆ ಪ್ರಕೃತ ಗ್ರಂಥಕಾರರೂ ಸಹ ಸಮಿದಾದಿ ಶಬ್ದಗಳು ಲಾಕ್ಷಣಿಕವಾಗಿದ್ದರೂ ರೂಢವೆಂದು ಮತ್ತು ಬಹುವಚನ ಪ್ರತಿರೂಪಕವಾದ ಅವ್ಯಯವೆಂದು ಹೇಳಿದ್ದಾರೆ. ಆದ್ದರಿಂದ ವಿರೋಧವಿಲ್ಲವೆಂದು ತಿಳಿಯಬೇಕು. ಅಥವಾ ಸಮಿದಾದಿ ದೇವತೆಗಳಲ್ಲಿ ನಿರೂಢವಾದ್ದರಿಂದ ಗ್ರಂಥಕಾರರ ಮಾತು ತಪ್ಪಾಗುವುದಿಲ್ಲ.

ಪ್ರಕಾಶಃ – ದ್ವಿವಚನಸ್ಯ ಸಮ್ಭಾವಿತಾವಕಾಶನಿರಾಸೇನ ''ಶ್ರುತೇರ್ನಿರವಕಾಶತ್ವಾತ್'' ಇತಿ ಟೀಕಾಂ ಸಮರ್ಥ್ಯ ತದುಪಲಕ್ಷಣಮಿತಿ ಭಾವೇನ ಲಿಙ್ಗಾನ್ತರಸ್ಯಾಪಿ ತದಾಹ – ಛಾಯಾತ್ವಚೇತಿ । ಆತಪತ್ವಸ್ಯ ವಿದ್ಯಾವತ್ತ್ವೇನೋಪಪತ್ತಾವಪಿ ಇದಮಯುಕ್ತಮ್ । ಯದ್ಯಪಿ

ಛಾಯಾ ತ್ವವಿದ್ಯಾ ಸಮ್ಪ್ರೋಕ್ತಾ ಜನ್ಯವಿದ್ಯಾऽऽತಪಸ್ಸ್ಮೃತಃ ।
ಜೀವಗೃಧ್ರಸ್ಯ ತೌ ಪಕ್ಷಾವಧಊರ್ಧ್ವಪಥೋಃ ಪೃಥಕ್ ।।
ತೌ ವಿಷ್ಣೋಸ್ತು ನ ವಿದ್ಯೇತೇ ನಿತ್ಯಂ ವಿದ್ಯಾಸ್ವರೂಪಿಣಃ ।

ಇತ್ಯಷ್ಟಮಸ್ಕನ್ಧಪಞ್ಚಮಾಧ್ಯಾಯತಾತ್ಪರ್ಯೋಕ್ತಚಾ ದ್ವಯಮಪೀಶೇ ನ ಯುಕ್ತಂ, ತಥಾऽಪಿ ಪರರೀತ್ಯೈವಮುಕ್ತಮಿತಿ ಧ್ಯೇಯಮ್ । ಯಥೋಕ್ತಂ ನ್ಯಾಯವಿವರಣಟೀಕಾಯಾಂ – ''ಛಾಯಾತಪತ್ವಂ ಚಾವಿದ್ಯಾವತ್ತ್ವೇನ ಜೀವೇಶ್ವರಯೋರುಪಪದ್ಯತೇ'' ಇತಿ ।

ಇಲ್ಲಿಯ ತನಕ 'ಪಿಬಂತೌ' ಎಂಬಲ್ಲಿರುವ ದ್ವಿವಚನ ಶ್ರುತಿಗೆ ಸಾವಕಾಶತ್ವವನ್ನು ನಿರಾಕರಿಸಿ ''ಶ್ರುತೇರ್ನಿರವಕಾಶತ್ವಾತ್'' ಎಂಬ ಟೀಕೆಯನ್ನು ಸಮರ್ಥಿಸಿದರು. ಪ್ರಕೃತ ಈ ಟೀಕಾ ವಾಕ್ಯವು ಉಪಲಕ್ಷಣವಾಗಿದೆಯೆಂದು ತಿಳಿದು ಮತ್ತೊಂದು ಲಿಂಗಕ್ಕೂ ಸಹ ನಿರವಕಾಶತ್ವವನ್ನು ಸಮರ್ಥಿಸುವುದಕ್ಕಾಗಿ 'ಛಾಯಾತ್ವಂಚ' ಇತ್ಯಾದಿ ವಾಕ್ಯವು ಹೊರಟಿದೆ.

'ಛಾಯಾತಪೌ' ಎಂಬಲ್ಲಿರುವ 'ಆತಪ' ಶಬ್ದಕ್ಕೆ ಜ್ಞಾನವುಳ್ಳವನು ಎಂದರ್ಥ. ಇಂತಹ ಆತಪತ್ವವನ್ನು ಪರಮಾತ್ಮನಲ್ಲಿ ಹೇಳಬಹುದು. ಆದರೆ ಛಾಯತ್ವವು ಕೂಡುವುದಿಲ್ಲವೆಂದು ತಿಳಿಯಬೇಕು.

ವಸ್ತುತಃ ಪರಮಾತ್ಮನಲ್ಲಿ ಆತಪತ್ವವೂ ಸಹ ಕೂಡುವುದಿಲ್ಲ.

ಛಾಯಾ ತ್ವವಿದ್ಯಾ ಸಂಪ್ರೋಕ್ತಾ ಜನ್ಯವಿದ್ಯಾऽऽತಪಃಸ್ಮೃತಃ।
ಜೀವಗೃಧ್ರಸ್ಯ ತೌ ಪಕ್ಷಾವಧಊರ್ಧ್ವಪಥೋಃ ಪೃಥಕ್ ।।
ತೌ ವಿಷ್ಣೋಸ್ತು ನ ವಿದ್ಯೇತೇ ನಿತ್ಯಂ ವಿದ್ಯಾಸ್ವರೂಪಿಣಃ।

'ಛಾಯಾ' ಎಂದರೆ 'ಅವಿದ್ಯಾ' ಎಂದರ್ಥ. 'ಆತಪ' ಎಂದರೆ 'ಜನ್ಯವಾದ ಜ್ಞಾನ' ಎಂದರ್ಥ. ಜೀವನೆಂಬ ಗೃಧ್ರಪಕ್ಷಿಯು ಇಂತಹ ಛಾಯಾತಪಗಳನ್ನು ರೆಕ್ಕೆಯನ್ನಾಗಿ ಮಾಡಿಕೊಂಡು ಮೇಲಿನ ಹಾಗೂ ಕೆಳಗಿನ ಲೋಕಗಳಿಗೆ ಹಾರಿ ಹೋಗುತ್ತಾನೆ. ಆದರೆ ವಿಷ್ಣುವಿನಲ್ಲಿ ಇಂತಹ ಛಾಯಾತಪಗಳು ಇರುವುದಿಲ್ಲ. ಏಕೆಂದರೆ ನಿತ್ಯಜ್ಞಾನಸ್ವರೂಪನಾದ್ದರಿಂದ.

ಹೀಗೆ ಅಷ್ಟಮಸ್ಕಂಧದ ಪಂಚಮಾಧ್ಯಾಯದ ಭಾಗವತ ತಾತ್ಪರ್ಯದಲ್ಲಿ ಛಾಯಾತಪಗಳೆರಡನ್ನೂ ವಿಷ್ಣುವಿನಲ್ಲಿ ಅಲ್ಲಗಳೆದಿದ್ದಾರೆ. ಆದರೂ ಸಹ ಗ್ರಂಥಕಾರರು ಪರರು ಹೇಳುವ 'ಆತಪ' ಶಬ್ದಾರ್ಥವನ್ನು ಸ್ವೀಕರಿಸಿ ವಿಷ್ಣುವಿನಲ್ಲಿ ಆತಪತ್ವವನ್ನು ಇದೆ ಎಂದಿದ್ದಾರೆ ಹೊರತು ನಮ್ಮ ಸಿದ್ಧಾಂತದ ಪ್ರಕಾರ ಹೇಳಿರುವುದಲ್ಲ. ಇದನ್ನು ನ್ಯಾಯವಿವರಣೆಯ ಟೀಕಾದಲ್ಲಿ ''ಛಾಯಾತಪತ್ವಂ ಚಾವಿದ್ಯಾವತ್ತ್ವೇನ

ಜೀವೇಶ್ವರಯೋರುಪಪದ್ಯತೇ'' ಧ್ಯಾತಪತ್ವಗಳು ಅಜ್ಞಾನ ಹಾಗೂ ಜ್ಞಾನವಿರುವ ಜೀವೇಶ್ವರರಲ್ಲಿ ಕ್ರಮವಾಗಿ ಉಪಪನ್ನವಾಗುತ್ತವೆಂದು ಹೇಳಿರುತ್ತಾರೆ.

ಪ್ರಕಾಶಃ – ತಸ್ಮಾದಿತಿ । ಪ್ರಾತಿಪದಿಕಾರ್ಥಪ್ರತ್ಯಯಾರ್ಥಯೋರ್ವಿಷ್ಣುಮಾತ್ರೇऽನವಕಾಶತ್ವಾದಿತ್ಯರ್ಥಃ । ''ನಚೈವಂ ಜೀವೇಶಗ್ರಹಣೇऽಪ್ಯನುಪಪತ್ತಿಃ'' ಇತ್ಯಾದಿಟೀಕಾಂ ವ್ಯನಕ್ತಿ – **ಈಶ್ವರಸ್ಯೇತಿ।**

ಏಕಸ್ಯ ಚ್ಛತ್ರಿತ್ವೇऽಪಿ ತತ್ಸಾಹಿತ್ಯಾದನ್ಯೇಷ್ವಪಿ 'ಛತ್ರಿಣೋ ಗಚ್ಛನ್ತಿ' ಇತಿ ಯಥಾ ವ್ಯಪದೇಶಸ್ತಥಾ ಭೋಕ್ತೃಜೀವಸನ್ನಿಧಾನಾದೀಶ್ವರೋऽಪಿ ತಥೋಪಚರ್ಯತ ಇತ್ಯರ್ಥಃ । ನಿರವಕಾಶವಿಷ್ಣುಲಿಙ್ಗಾದಿಬಾಧ ಇತ್ಯತ ಆಹ – ಗುಹೇತಿ ।

ಜೀವಸ್ಯಾಪಿ ''ಹೃದಿ ಹ್ಯೇಷ ಆತ್ಮಾ'' ಇತಿ ಗುಹಾಸ್ಥತ್ವಾತ್ ಬ್ರಹ್ಮಶಬ್ದಸ್ಯ ''ಬೃಹ ಜಾತಿಜೀವಕಮಲಾಸನ'' ಇತಿ ಜೀವೇऽಪಿ ಪ್ರಯೋಗಾದಿತಿ ಭಾವಃ ।।

'ತಸ್ಮಾತ್' ಎಂಬ ಪದಕ್ಕೆ ಪ್ರಾತಿಪದಿಕಾರ್ಥ ಹಾಗೂ ಪ್ರತ್ಯಯಾರ್ಥಗಳಿಗೆ ವಿಷ್ಣುವಿನಲ್ಲಿ ಅವಕಾಶವಿಲ್ಲದ್ದರಿಂದ ಎಂದರ್ಥ. ''ನಚೈವಂ ಜೀವೇಶಗ್ರಹಣೇऽಪ್ಯನುಪಪತ್ತಿಃ'' ಇತ್ಯಾದಿ ಟೀಕೆಯನ್ನು 'ಈಶ್ವರಸ್ಯ' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಒಬ್ಬನು ಛತ್ರಿಯನ್ನು ಹಿಡಿದು ಹೊರಟಾಗ ಅವನ ಜೊತೆಗಿರುವ ಉಳಿದವರು ಛತ್ರಿಯನ್ನು ಧಾರಣೆ ಮಾಡದಿದ್ದರೂ 'ಛತ್ರಿಣೋ ಗಚ್ಛಂತಿ' ಎಂಬ ಪ್ರಯೋಗವು ಲೋಕದಲ್ಲಿ ಕಾಣಸುತ್ತಿದೆ. ಅದರಂತೆ ಭೋಕ್ತೃವಾದ ಜೀವನ ಜೊತೆಗಿರುವ ಈಶ್ವರನು ಅಭೋಕ್ತೃವಾಗಿದ್ದರೂ ಸಹ ಗೌಣವಾಗಿ 'ಭೋಕ್ತಾರೌ' ಎಂದು ಪ್ರಯೋಗಿಸಬಹುದು. ನಿರವಕಾಶವಾದ ವಿಷ್ಣುಲಿಂಗಾದಿಗಳಿಂದ ಶ್ರುತಿಯು ಬಾಧಿತವಾಗುತ್ತದಲ್ಲವೇ? ಎಂಬ ಪ್ರಶ್ನೆಗೆ 'ಗುಹಾಪ್ರವಿಷ್ಟತ್ವಾತ್' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಜೀವನೂ ಸಹ ಹೃದಯಗುಹಾನಿಹಿತನಾಗಿದ್ದಾನೆಂದು 'ಹೃದಿ ಹ್ಯೇಷ ಆತ್ಮಾ' ಎಂಬ ಶ್ರುತಿಯಿಂದ ಸಿದ್ಧವಾಗಿದೆ. ಮತ್ತು 'ಬೃಹಜ್ಜಾತಿಜೀವ' ಇತ್ಯಾದಿ ಕೋಶದಿಂದ ಬ್ರಹ್ಮಶಬ್ದವು ಜೀವನಲ್ಲಿಯೂ ಪ್ರಸಿದ್ಧವಾಗಿದೆ. ಆದ್ದರಿಂದ ವಿಷ್ಣುವಿನ ಲಿಂಗಗಳು ಜೀವಪಕ್ಷಕ್ಕೆ ಬಾಧಕಗಳಾಗಲಾರವು.

ಗುರುರಾಜೀಯಮ್ – ನನು ತಥಾಪಿ ಅನನ್ಯೋऽಪ್ಯನ್ಯಶಬ್ದೇನ ತಥೈಕೋ ಬಹುರೂಪವಾನ್ । ಬಹುರೂಪತ್ವಾಚ್ಚ ನ ವಿಕಾರಿತ್ವಮವಿರೋಧಶ್ಚೇತಿ ಭಾಷ್ಯೇ ತಚ್ಚ ವಾಧೂಲಶಾಖಾಯಾಮಶ್ವರೂಪಮುದಾಹೃತಮಿತ್ಯಾದಿನಾऽನುವ್ಯಾಖ್ಯಾನೇ ಚ ತತ್ಪ್ರಕರಣೇ ಸಾಕ್ಷಾದಶ್ರುತಾಯಾ ಅಪ್ಯಾರ್ಥಿಕಾನೇಕತ್ವಸಙ್ಖ್ಯಾಯಾ ರೂಪಬಾಹುಲ್ಯಾಭಿಪ್ರಾಯೇಣ ಗತಿಕಥನಾತ್ । ಅತ್ರಾನ್ನಮಯಾದೀನಾಂ ಪೂರ್ವಪಕ್ಷಿಣಾ ಬ್ರಹ್ಮತ್ವಾಙ್ಗೀಕಾರ ಇದಂ ವ್ಯರ್ಥಮೇವ ಸ್ಯಾತ್ । ನ ಚಾನಶ್ನನ್ನಿತ್ಯಾದೇಃ ಕರ್ಮಫಲಾತ್ತೃತ್ವಂ ಸ್ವತ ಏವಾನ್ಯತ್ರಪ್ರಸಿದ್ಧಮಿತಿ। ತರ್ಹಿ ದ್ವಿವಚನಶ್ರುತಿಸಾಹಿತ್ಯೋಕ್ತಿವೈಯರ್ಥ್ಯಾತ್ । ಪೂರ್ವಾಧಿಕರಣೇऽತ್ತೃತ್ವಸ್ಯಾಪಿ ಪ್ರತಿಪಾದನೇನಾನಶ್ನೋಕ್ತೇರ್ಗತೇರಪಿ ಪೂರ್ವಾಧಿಕರಣಸಿದ್ಧಾನ್ತಾಙ್ಗೀಕಾರೇಣೈವ ಪೂರ್ವಪಕ್ಷಿಣಂ ಪ್ರತಿ ಸಿದ್ಧತ್ವಾತ್ ।

अद्यतेऽत्तिच भूतानीति श्रुतेः महाभोक्ता महाभोग्य इत्यर्थोऽन्नमये भवेदित्यनुव्याख्यानाच्चात्रान्नमयशब्देनापि ब्रह्मत्वाङ्गीकारे तदनुपपत्तिशङ्कया अनुदयाच्च । अत एव टीकायां पिबन्ताविति्येतदुद्देश्यकोटौ निवेशितमित्याद्यरुच्याह – **अथ वेति ।। तथाचेति ।।** अन्नमये भोक्तृत्वमप्युपलक्षणीयम् ।

ननु गुरोर्दारा आगता इत्यत्र दारा इति बहुवचनवत् ऋतं पिबन्ताविति्यत्र द्विवचनमपि शब्दसाधुत्वेनैव किं न स्यादित्याशङ्क्य दारादिशब्देषु बहुवचनादेश्शब्दसाधुतैव नत्वर्थसाधुता । न चार्थसाधुत्वे सम्भवति शब्दसाधुत्वमात्रं युक्तम् । प्रकृते चास्माद्रीत्या जीवेश्वरपरत्वेऽर्थसाधुत्वमपि सम्भवतीति भावेनाह – **नच दारा इत्यादाविति ।।** देवदत्तः पिबन्ताविति्यप्रयोगादिति भावः ।

ननु द्विवचनस्य वचनव्यत्ययेन ब्रह्मणि सम्भवात्कथं द्वित्वस्य ब्रह्मपक्षे बाधकतेत्यत आह – **नचेति ।।** बहूनि द्विवचनानि अभ्यसाद्वित्वे निश्चिततात्पर्यकाणीत्यर्थः । अनेकेषामपि द्विवचानां वचनव्यत्ययः सति बाधके सम्भवत्येवेत्यतो बाधकं विनेत्युक्तम् । नच ग्रहं सम्मार्ष्टीत्यत्रोद्देश्यविशेषणभूतस्यैकत्वस्य विवक्षायां सोमगतद्वादश ग्रहणामपि सम्मार्जनाभावापत्त्याऽविवक्षितत्ववत्प्रकृतेऽपि द्वित्वस्यादेश्यविशेषणत्वेन विवक्षा किं नस्यादित्यतो वैषम्येण परिहरति – **नचेति ।। ब्रह्मणीति ।।** तथाच विधेयविशेषणत्वेनोद्देश्य विशेषणत्वमेव नास्तीत्यविवक्षानुपपत्तिरिति ।

ननु सर्वात्तृत्वेन ऋतपानस्यापि प्राप्तत्वेन विधेयत्वानुपपत्त्योद्देश्य-विशेषणत्वमेव वक्तव्यमित्यरुचेराह – **ऋतं पिबन्ताविति्ति ।।**

किञ्च ग्रहं सम्मार्ष्टीत्यत्र ग्रहं सम्मृज्यात् तच्चैकं कुर्यादित्युभयविधाने वाक्यभेदापत्त्या ग्रहगतैकत्वस्य विधिसंस्पर्शाभावेऽपि ग्रहेष्वेकत्वस्य सत्त्वेनोद्देश्यत्वसम्भवेऽपि प्रकृते ब्रह्मणि द्वित्वस्य स्वरूपत एवाभावान्नोद्देश्यत्वमित्य भिप्रेत्य दोषान्तरमाह – **ग्रहैकत्वस्येति ।।**

ननु सूर्यदेवताकयागे अग्नय इत्यादेस्सूर्यायेत्यादिरूपेणोहवत्प्रकृतेऽपि पिबन्ताविति द्विवचनान्तस्याप्येकवचनान्ततयोहः किं न स्यादित्यतो वैषम्येण परिहरति – **नचेति ।।**

ತ್ರಿನ್ಯಾಯೇನೇತಿ ।। ತಸ್ಯೇರ್ತ್ರಿಸಮುದಾಯೇ ತ್ರಿಣ ಇತಿ ವ್ಯಪದೇಶ-ವತ್ಪಿಬದಪಿಬತ್ಸಮುದಾಯೇ ಪಾತೃತ್ವವ್ಯಪದೇಶೋ ಯುಕ್ತ ಇತ್ಯರ್ಥಃ । ಸಾಧಕಮುಕ್ತ್ವಾ ಬಾಧಕಂ ಪರಿಹರತಿ – ಗುಹಾಪ್ರವಿಷ್ಟತ್ವೇತಿ ।।

ಸಾರ

ಆನಂದಮಯಾಧಿಕರಣದಿಂದ ಗುಹಾಧಿಕರಣವು ಗತಾರ್ಥವಾಗುವುದಿಲ್ಲವೆಂದು ಮತ್ತೊಂದು ಬಗೆಯಲ್ಲಿಯೂ ತಿಳಿಯಬಹುದು - ಅನ್ನಮಯಾದಿ ಶಬ್ದಗಳೆಲ್ಲವು ಬ್ರಹ್ಮನ ಅವಯವಗಳನ್ನು ಪ್ರತಿಪಾದಿಸುತ್ತಿವೆ. ಆದ್ದರಿಂದ ಬ್ರಹ್ಮನನ್ನು ಅನ್ನಮಯಾದಿ ಶಬ್ದಗಳಿಂದ ಕರೆಯಲಾಗದೆಂಬ ಪೂರ್ವಪಕ್ಷವನ್ನು ಆನಂದಮಯಾಧಿಕರಣದಲ್ಲಿ ಪರಿಹರಿಸಲಾಗಿದೆ. ಆದರೆ ಈ ಅಧಿಕರಣದಲ್ಲಿ ಅನೇಕತ್ವ ಸಂಖ್ಯೆಯಿಂದ ಒಬ್ಬನೇ ಬ್ರಹ್ಮನು ಅನ್ನಮಯಾದಿಶಬ್ದಗಳಿಂದ ಪ್ರತಿಪಾದ್ಯನಾಗಲಾರನೆಂಬ ಆಕ್ಷೇಪವನ್ನು ಪರಿಹರಿಸಲಾಗಿದೆ. ಆದ್ದರಿಂದ ಈ ಅಧಿಕರಣದಲ್ಲಿ ದ್ವಿತ್ವ ಆನೇಕತ್ವ ಮೊದಲಾದ ಸಂಖ್ಯೆಗಳಿಂದ ಬ್ರಹ್ಮನು ಶ್ರುತಿಪ್ರತಿಪಾದ್ಯನಲ್ಲ ಎಂಬ ಪೂರ್ವಪಕ್ಷವು ನಿರವಕಾಶವಾಗಿದೆಯೆಂದು ಸಿದ್ಧವಾಯಿತು.

೧. 'ಪಿಬಂತೌ' ಎಂಬಲ್ಲಿರುವ ದ್ವಿವಚನವು ಶಬ್ದಸಾಧುತ್ವ ಮಾತ್ರದಿಂದ ನಿವಿಷ್ಟವಾಗಿದೆಯೆಂದು ಹೇಳಬೇಕು.

೨. ವಸ್ತುತಃ ಏಕವಚನಾಂತ ಶಬ್ದವಾಗಿದ್ದರೂ ಸಹ ಛಾಂದಸವಾದ್ದರಿಂದ ದ್ವಿವಚನವಾಗಿದೆ.

೩. ದ್ವಿತ್ವವನ್ನು ಬೋಧಿಸಿದರೂ ಸಹ ಉದ್ದೇಶದಲ್ಲಿ ವಿಶೇಷಣವಾಗಿದ್ದರಿಂದ ದ್ವಿತ್ವವನ್ನು ವಿವಕ್ಷಿಸಬೇಕಾಗಿಲ್ಲ.

೪. ಹಿಂದಿನ ಮುಂದಿನ ವಾಕ್ಯಗಳಲ್ಲಿ ಏಕವಚನಾಂತವಾದ ಪದಗಳೇ ಪ್ರಸಕ್ತವಾಗದ್ದರಿಂದ ಅವುಗಳಿಂದ ಸಂದಷ್ಟವಾದ 'ಪಿಂಬತೌ' ಎಂಬುದೂ ಸಹ ಏಕತ್ವವನ್ನೇ ತಿಳಿಸುತ್ತದೆ. ಹೊರತು ದ್ವಿವಚನವಿರುವುದರಿಂದ ದ್ವಿತ್ವವನ್ನು ತಿಳಿಸುವುದಿಲ್ಲ.

೫. ದ್ವಿವಚನಕ್ಕೆ ಪ್ರತಿರೂಪಕವಾದ ಅವ್ಯವಾಗಿದೆ. ಅಂದರೆ ದ್ವಿವಚನದಂತೆ ಕಾಣಿಸುತ್ತದೆ ಹೊರತು ದ್ವಿವಚನ ಪ್ರತ್ಯಯವಲ್ಲ.

ಈ ಐದು ಕಾರಣಗಳಿಂದ ದ್ವಿವಚನಶ್ರುತಿಯನ್ನು ಸಾವಕಾಶವೆನ್ನಬಹುದು. ಆದರೆ ಬಾಧಕವಿಲ್ಲದ ಕಾರಣ ಶಬ್ದಸಾಧುತ್ವಕ್ಕೋಸ್ಕರ ದ್ವಿವಚನ ಪ್ರತ್ಯಯವೆಂಬ ಮೊದಲನೆಯ ಪಕ್ಷವು ನಿರಾಕರಣವಾಗುತ್ತದೆ. ಮತ್ತು ಬಾಧಕವಿಲ್ಲದೇ ವಿಭಕ್ತಿವ್ಯತ್ಯಾಸವನ್ನು ಮಾಡಬಾರದು. ಆದ್ದರಿಂದ ಎರಡನೇ ಪಕ್ಷವು ನಿರಾಕೃತವಾಗುತ್ತದೆ. 'ಪಿಬಂತೌ' ಎಂಬುದನ್ನು ಉದ್ದೇಶವೆಂದೇ ಹೇಳಲಾಗದ ಕಾರಣ ಉದ್ದೇಶವಿಶೇಷಣವಾದ್ದರಿಂದ ದ್ವಿತ್ವವು ಅವಿವಕ್ಷಿತವೆಂಬ ಮೂರನೇ ಪಕ್ಷವು ನಿರಾಕೃತವಾಗುತ್ತದೆ. ಅತಿದೇಶದಿಂದ ಪ್ರಾಪ್ತವಾಗಿದ್ದರೆ ಮಾತ್ರ ಏಕತ್ವ ಸಂಖ್ಯೆಯನ್ನು ಊಹಿಸಬಹುದಿತ್ತು. ಆದರೆ ಇದೇ ಮೊದಲು

ಶ್ರುತಿಯಲ್ಲಿ 'ಪಿಬಂತೌ' ಎಂದು ಪ್ರಸಕ್ತವಾಗುತ್ತಿರುವುದರಿಂದ ನಾಲ್ಕನೇ ಪಕ್ಷವು ನಿರಾಕೃತವಾಗುತ್ತದೆ. 'ಪಿಬಂತೌ' ಎಂಬ ಪದವು ಯೌಗಿಕವಾದ್ದರಿಂದ ದ್ವಿವಚನ ಪ್ರತಿರೂಪಕವಾದ ಅವ್ಯಯವೆಂದು ಹೇಳಲಾಗದ ಕಾರಣ ಐದನೇ ಪಕ್ಷವು ನಿರಾಕೃತವಾಗುತ್ತದೆ. ಆದ್ದರಿಂದ 'ಋತಂ ಪಿಬಂತೌ' ಎಂಬ ಶ್ರುತಿಯು ಜೀವೇಶ್ವರರನ್ನೇ ಪ್ರತಿಪಾದಿಸುತ್ತದೆ. ಗುಹಾಪ್ರವಿಷ್ಟತ್ವ ಬ್ರಹ್ಮಶಬ್ದಾದಿಗಳು ಜೀವವಿಷಯದಲ್ಲಿ ಬಾಧಕವಾಗಿರುವುದಿಲ್ಲ.

• • • • •

ಸಂದಂಶ ನ್ಯಾಯದಿಂದ ವಿಷ್ಣುವೇ ದ್ವಿವಚನಶ್ರುತಿ ಪ್ರತಿಪಾದ್ಯನೆಂದು ಸಿದ್ಧಾಂತ

तात्पर्यचन्द्रिका

सिद्धान्तस्तु –

गुहावेशाद्ब्रह्मशब्दात् सेतुत्वादक्षरत्वतः ।
पारत्वादभयत्वाच्च ब्रह्मैवात्र निगद्यते ।।

गुहानिहितत्वं यद्यपि जीवेऽप्यस्ति तथाऽपि ''यो वेद निहितं गुहायाम्'' ''गुहाहितं गह्वरेष्ठं पुराणं'' ''गुहां प्रविश्य तिष्ठन्तं'' इत्यादिश्रुतिषु ब्रह्मण्येव तस्य प्रसिद्धत्वात्, तेन ब्रह्मत्वसिद्धिः । नहि 'मैथिलः' इत्युक्ते यः कश्चिन्मिथिलाभवो भासते, किन्तु यस्तत्र प्रसिद्धस्तदधीश्वरः ।

यस्सेतुरीजानानामक्षरं ब्रह्म तत्परम् ।
अभयं तितीर्षतां पारं ..... ।।

इत्युत्तरवाक्ये च परत्वेन विशेषणात् परब्रह्मण्येव ब्रह्मशब्दः । सेतुत्वादिकं तु ''एष सेतुः'' इत्यादिश्रुतिभिः ब्रह्मलिङ्गत्वेन निश्चितम् । न चोत्तरत्र ''यस्सेतुः'' इत्यादिभिः पूर्वत्र च ''यस्य ब्रह्म च क्षत्रं च'' इत्यादिभिः ब्रह्ममात्रविषयैर्वाक्यैः सन्दृष्टं ''ऋतं पिबन्तौ'' इत्यादिकं बाधकाभावेऽप्यब्रह्मविषयमिति युक्तम् ।

ಅನುವಾದ -

ಗುಹಾವೇಶಾದ್ಬ್ರಹ್ಮಶಬ್ದಾತ್ ಸೇತುತ್ವಾದಕ್ಷರತ್ವತಃ ।
ಪಾರತ್ವಾದಭಯತ್ವಾಚ್ಚ ಬ್ರಹ್ಮೈವಾತ್ರ ನಿಗದ್ಯತೇ ।।

ಪರಿಪೂರ್ಣಚಂದ್ರಿಕಾ

ಹೃದಯದಲ್ಲಿ ಗುಹಾಪ್ರವಿಷ್ಟನಾದ್ದರಿಂದ ಬ್ರಹ್ಮಶಬ್ದಪ್ರತಿಪಾದ್ಯನಾದ್ದರಿಂದ ಸಕಲರಿಗೂ ಆಶ್ರಯನಾದ್ದರಿಂದ ನಾಶರಹಿತನಾದ್ದರಿಂದ ಸರ್ವೋತ್ತಮನಾದ್ದರಿಂದ ಭಯರಹಿತನಾದ್ದರಿಂದ ಬ್ರಹ್ಮನೇ ದ್ವಿವಚನಶ್ರುತಿಯಿಂದ ಪ್ರತಿಪಾದ್ಯನಾಗಿದ್ದಾನೆ.

ವಸ್ತುತಃ ಗುಹಾನಿಹಿತತ್ವವು ಜೀವಧರ್ಮವಾಗಿದೆ. ಆದರೆ ''ಯೋ ವೇದ ನಿಹಿತಂ ಗುಹಾಯಾಮ್'' ''ಗುಹಾನಿಹಿತಂ ಗುಹ್ವರೇಷ್ಠಂ ಪುರಾಣಂ'' ''ಗುಹಾಂ ಪ್ರವಿಶ್ಯ ತಿಷ್ಠಂತೀ'' ಇತ್ಯಾದಿ ಶ್ರುತಿಯಲ್ಲಿ ಬ್ರಹ್ಮನಲ್ಲಿಯೇ ಹೃದಯಗುಹಾನಿಹಿತತ್ವವು ಮುಖ್ಯವಾಗಿ ಪ್ರಸಿದ್ಧವಾಗಿದೆ. ಆದ್ದರಿಂದ ಬ್ರಹ್ಮನೇ ಗುಹಾನಿಹಿತನೆಂದು ಸಿದ್ಧವಾಗುತ್ತದೆ. 'ಮೈಥಿಲಃ' ಎಂಬ ಶಬ್ದಕ್ಕೆ ಮಿಥಿಲಾನಗರದಲ್ಲಿ ಹುಟ್ಟಿದವನೆಂದು ಅರ್ಥ. ಆದರೆ ಮಿಥಿಲಾನಗರದಲ್ಲಿ ಹುಟ್ಟಿದ ಎಲ್ಲರಲ್ಲಿಯೂ 'ಮೈಥಿಲಃ' ಎಂಬ ಶಬ್ದವನ್ನು ಪ್ರಯೋಗಿಸುವುದಿಲ್ಲ ಹೊರತಾಗಿ ಮಿಥಿಲಾನಗರದಲ್ಲಿ ಪ್ರಸಿದ್ಧನಾದ ರಾಜನಲ್ಲಿ ಮಾತ್ರ ಆವನನ್ನೇ 'ಮೈಥಿಲಃ' ಎಂದು ಪ್ರಯೋಗಿಸಲಾಗುತ್ತದೆ. ಆದರಂತೆ ಜೀವ ಹಾಗೂ ಈಶ್ವರರಿಬ್ಬರೂ ಹೃದಯಗುಹಾನಿಹಿತರಾಗಿದ್ದರೂ ಶ್ರುತಿಪ್ರಸಿದ್ಧನಾದ ಈಶ್ವರನೇ ಗುಹಾನಿಹಿತನೆಂದು ಪರಿಗಣಿಸಬೇಕು.

ಯಸ್ಸೇತುರೀಜಾನಾನಾಮಕ್ಷರಂ ಬ್ರಹ್ಮ ತತ್ಪರಮ್ ।
ಅಭಯಂ ತಿತೀರ್ಷತಾಂ ಪಾರಂ ..... ॥

ಎಂಬುದಾಗಿ ಮುಂದಿನ ಶ್ರುತಿಯಲ್ಲಿ ಬ್ರಹ್ಮನಲ್ಲಿ ಪರತ್ವವು ವಿಶೇಷಣವಾಗಿರುವುದರಿಂದ ಪರಬ್ರಹ್ಮನನ್ನೇ ಬ್ರಹ್ಮಶಬ್ದದಿಂದ ವಿವಕ್ಷಿಸಬೇಕು. ಹೇತುತ್ವಾದಿಗಳೂ ಸಹ ''ಏಷ ಸೇತುಃ'' ಇತ್ಯಾದಿಗಳ ಬಲಗಳಿಂದ ಬ್ರಹ್ಮನ ಲಿಂಗಗಳೆಂದೇ ನಿಶ್ಚಯವಾಗಿದೆ. 'ಯಸ್ಸೇತುಃ' ಇತ್ಯಾದಿಯಾದ ಮುಂದಿನ ವಾಕ್ಯಗಳಿಂದ ''ಯಸ್ಯ ಬ್ರಹ್ಮ ಚ ಕ್ಷತ್ರಂ ಚ'' ಎಂಬ ಹಿಂದಿನ ವಾಕ್ಯಗಳಿಂದ ಬ್ರಹ್ಮನೊಬ್ಬನೇ ಪ್ರತಿಪಾದ್ಯನಾಗುತ್ತಿರುವಾಗ ಇವುಗಳಿಂದ ಸಂದಷ್ಟಾದ ''ಋತಂ ಪಿಬಂತೌ'' ಎಂಬ ಮಧ್ಯದಲ್ಲಿರುವ ದ್ವಿವಚನ ಶ್ರುತಿಯು ಬ್ರಹ್ಮನನ್ನೇ ಪ್ರತಿಪಾದಿಸಬೇಕು. ಯಾವುದೇ ಬಾಧಕವಿಲ್ಲದಿದ್ದರೂ ಬ್ರಹ್ಮನನ್ನು ಪ್ರತಿಪಾದಿಸುವುದಿಲ್ಲವೆಂದು ಹೇಳುವುದು ಅಯುಕ್ತವಾಗುತ್ತದೆ.

प्रकाशः –

निरवकाशभगवल्लिङ्गैः प्रकृतिप्रत्ययार्थौ कथञ्चिन्नेयाविति भावेन सूत्रोक्तान् सिद्धान्तहेतून् सङ्गृह्णाति – **गुहावेशादिति** ।

आद्यसूत्रोक्तोऽयं हेतुः । द्वितीयसूत्रोक्तानाह – **ब्रह्मेति** । टीकोपलक्षणं भाष्ये ''परं'' इत्यन्तोक्तेः तत्त्वप्रदीपे ''अक्षरशब्देन विशेषणाच्च'' इत्युक्तेरिति भावः ।

ವಿವರಣೆ - 'ಋತಂ ಪಿಬಂತೌ' ಎಂಬ ಶ್ರುತಿಯಿಂದ ಪ್ರತಿಪಾದ್ಯನಾದವನು ಭಗವಂತನೇ ಆಗಿದ್ದಾನೆಂದು ಸಿದ್ಧಾಂತ ಮಾಡುತ್ತಿದ್ದಾರೆ. ನಿರವಕಾಶವಾಗಿರುವ ಅನೇಕ ಲಿಂಗಗಳು ವಿಷ್ಣುವಿನಲ್ಲಿ ಕೇಳಿಸುತ್ತಿವೆ. ಆದ್ದರಿಂದ 'ಪಿಬಂತೌ' ಎಂಬಲ್ಲಿರುವ ಪ್ರಕೃತಿಪ್ರತ್ಯಯಾರ್ಥಗಳನ್ನು ವಿಷ್ಣುವಿನಲ್ಲಿ ಹೇಗಾದರೂ ಸಮನ್ವಯ ಮಾಡಬಹುದೆಂಬ ಅಭಿಪ್ರಾಯದಿಂದ ಸೂತ್ರದಲ್ಲೇ ಹೇಳಿದ ಸಿದ್ಧಾಂತ ಹೇತುಗಳನ್ನು 'ಗುಹಾವೇಶಾತ್' ಇತ್ಯಾದಿ ವಾಕ್ಯದಿಂದ ಸಂಗ್ರಹಿಸುತ್ತಿದ್ದಾರೆ.

ಮೊದಲನೆಯ ಸೂತ್ರದಲ್ಲಿ ಹೇಳಲ್ಪಟ್ಟ ಹೇತುವನ್ನು 'ಗುಹಾವೇಶಾತ್' ಎಂಬುದರಿಂದ ಹೇಳಿದ್ದಾರೆ. ಎರಡನೆಯ ಸೂತ್ರದಲ್ಲಿ ಹೇಳಲ್ಪಟ್ಟ ಅನೇಕ ಹೇತುಗಳನ್ನು 'ಬ್ರಹ್ಮಶಬ್ದಾತ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಟೀಕೆಯಲ್ಲಿಯೂ ಸಹ ಉಪಲಕ್ಷಣಯಾ ಎಲ್ಲ ಹೇತುಗಳನ್ನು ವಿವಕ್ಷಿಸಬೇಕು. ಏಕೆಂದರೆ ಭಾಷ್ಯದಲ್ಲಿ 'ಪರಂ' ಎಂಬಲ್ಲಿಯ ತನಕ ಶ್ರುತಿಯನ್ನು ಉಲ್ಲೇಖಿಸಿದ್ದಾರೆ. ತತ್ಪ್ರದೀಪದಲ್ಲಿಯೂ ''ಅಕ್ಷರ ಶಬ್ದೇನ ವಿಶೇಷಾಣಾಚ್ಚ'' ಅಕ್ಷರ ಶಬ್ದವು ಬ್ರಹ್ಮನಲ್ಲಿ ವಿಶೇಷಣವಾದ್ದರಿಂದ ಎಂದು ಹೇಳಿದ್ದಾರೆ. ಆದ್ದರಿಂದ ಗ್ರಂಥಕಾರರು ಇಲ್ಲಿ ಹೇಳಿರುವ ಹೇತುಗಳೆಲ್ಲವು ಭಾಷ್ಯಕಾರರಿಗೆ ಸಮ್ಮತವಾದ್ದರಿಂದ ಟೀಕೆಯಲ್ಲಿಯೂ ಉಪಲಕ್ಷಣಯಾ ಇಟ್ಟುಕೊಳ್ಳಬೇಕು.

ಪ್ರಕಾಶಃ – 'ಅತ್ರ' ಪಿಬನ್ತಾವಿತ್ಯತ್ರ । ನನೂಕ್ತಂ ಗುಹಾಪ್ರವಿಷ್ಟತ್ವಂ ಜೀವೇऽಪಿ ಯುಕ್ತಮಿತ್ಯತಃ ಪ್ರಸಿದ್ಧವಾಚಕಸೌತ್ರಹಿಶಬ್ದಸೂಚಿತಂ ತನ್ನಿರವಕಾಶತ್ವಂ ನ್ಯಾಯವಿವರಣಟೀಕೋಕ್ತರೀತ್ಯಾ ಸಾಧಯತಿ – ಗುಹೇತಿ । ಯೋ ವೇದೇತಿ । ''ಬ್ರಹ್ಮವಿದಾಪ್ನೋತಿ ಪರಂ'' ಇತಿ ಪೂರ್ವತ್ರ ಬ್ರಹ್ಮಣ ಏವ ತತ್ರ ಪ್ರಸ್ತುತತ್ವಾದಿತಿ ಭಾವಃ ।

'ಅತ್ರ' ಎಂಬ ಪದಕ್ಕೆ 'ಪಿಬಂತೌ ಎಂಬಲ್ಲಿ' ಎಂದರ್ಥ.

ಶಂಕೆ - ಗುಹಾಪ್ರವಿಷ್ಟತ್ವವನ್ನು ಜೀವನಲ್ಲಿಯೂ ಸಹ ಪೂರ್ವಪಕ್ಷದ ಸಂದರ್ಭದಲ್ಲಿ ನಾವು ಸಮರ್ಥಿಸಿದ್ದೇವಲ್ಲವೇ?

ಸಮಾಧಾನ - ಜೀವ ಹಾಗೂ ಪರಮಾತ್ಮ ಇಬ್ಬರು ಗುಹಾವಿಷ್ಟರಾಗಿದ್ದರೂ ಪರಮಾತ್ಮನಲ್ಲೇ ಗುಹಾವಿಷ್ಟತ್ವವು ಶ್ರುತಿಪ್ರಸಿದ್ಧವಾಗಿದೆ. ಪ್ರಸಿದ್ಧವಾದ ಅರ್ಥವನ್ನೇ ಸ್ವೀಕರಿಸಬೇಕಾದ್ದರಿಂದ ಗುಹಾವಿಷ್ಟತ್ವವು ವಿಷ್ಣುವಿನ ನಿರವಕಾಶಲಿಂಗವೇ ಆಗಿದೆ. ಈ ವಿಷಯವನ್ನು ಸೂತ್ರದಲ್ಲಿ 'ಹಿ' ಶಬ್ದವು ಸೂಚಿಸುತ್ತದೆ. ಮತ್ತು ನ್ಯಾಯವಿವರಣಟೀಕೆಯಲ್ಲಿಯೂ ಇದನ್ನೇ ಸಾಧಿಸಿದ್ದಾರೆ. ಅದನ್ನೇ ಪ್ರಕೃತ ಗ್ರಂಥಕಾರರು 'ಗುಹಾನಿಹಿತತ್ವಂ' ಇತ್ಯಾದಿ ವಾಕ್ಯಗಳಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಯೋ ವೇದ ನಿಹಿತಂ' ಎಂಬ ಶ್ರುತಿಯಿಂದ ಪ್ರಸಿದ್ಧನಾದವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ''ಬ್ರಹ್ಮವಿದಾಪ್ನೋತಿ ಪರಂ'' ಎಂಬುದಾಗಿ ಹಿಂದೆ ಪರಬ್ರಹ್ಮನೇ ಪ್ರಸಕ್ತನಾಗಿದ್ದಾನೆ.

ಪ್ರಕಾಶಃ – ನನು 'ಬ್ರಹ್ಮಶಬ್ದಾತ್' ಇತ್ಯಯುಕ್ತಂ, ತಸ್ಯಾಪಿ ಪ್ರಾಕ್ ಸಾವಕಾಶತ್ವಾದಿತ್ಯತೋ ''ವಿಶೇಷಣಾಚ್ಚ'' ಇತ್ಯಸ್ಯಾರ್ಥಾನ್ತರಮುಪೇತ್ಯ ತಸ್ಯ ನಿರವಕಾಶತ್ವಮಾಹ – ಯಸ್ಸೇತುರಿತಿ ।

यद्यपि ''ब्रह्म यत्परं'' इत्येतावदेवोपयुक्तं, तथाऽपि सेतुत्वादिस्फोरणाय कृत्स्नवाक्योक्तिः ।

ಪ್ರಶ್ನೆ - ಬ್ರಹ್ಮಶಬ್ದವನ್ನು ವಿಷ್ಣುವಿನ ನಿರವಕಾಶಲಿಂಗವೆಂದು ಹೇಳಿದ್ದೂ ಸಹ ತಪ್ಪು. ಪೂರ್ವಪಕ್ಷ ಮಾಡುವಾಗ ಇದನ್ನು ಜೀವನಲ್ಲಿ ಸಾವಕಾಶವೆಂದು ಹೇಳಲಾಗಿದೆಯಲ್ಲವೇ?

ಉತ್ತರ - ಬ್ರಹ್ಮಶಬ್ದವು ವಿಷ್ಣುವಿನ ನಿರವಕಾಶಲಿಂಗವೇ ಆಗಿದೆಯೆಂಬುದನ್ನು 'ಯಸ್ಸೇತುಃ' ಇತ್ಯಾದಿ ವಾಕ್ಯಗಳಿಂದ ಸಮರ್ಥಿಸುತ್ತಿದ್ದಾರೆ. ''ವಿಶೇಷಣಾಚ್ಚ'' ಎಂಬ ಎರಡನೆಯ ಸೂತ್ರಕ್ಕೆ ಬ್ರಹ್ಮನಲ್ಲಿ ಪರತ್ವವನ್ನು ವಿಶೇಷಣವನ್ನಾಗಿ ಹೇಳಿದ್ದರಿಂದ ಎಂಬುದಾಗಿ ಮತ್ತೊಂದು ಅರ್ಥವನ್ನು ಅಂಗೀಕರಿಸಿ ವ್ಯಾಖ್ಯಾನಿಸುತ್ತಿದ್ದಾರೆ. ವಸ್ತುತಃ ಗ್ರಂಥದದಲ್ಲಿ ''ಬ್ರಹ್ಮ ಯತ್ಪರಂ'' ಎಂದಷ್ಟೇ ಶ್ರುತಿಯಲ್ಲಿ ಉಲ್ಲೇಖಿಸಿದ್ದರೆ ಸಾಕಾಗುತ್ತಿತ್ತು. ಆದರೂ ಸಹ ಹೇತುತ್ವವೇ ಮೊದಲಾದ ಲಿಂಗಗಳು ಬ್ರಹ್ಮನಲ್ಲಿವೆ ಎಂದು ತೋರಿಸುವುದಕ್ಕಾಗಿ ಸಂಪೂರ್ಣ ಶ್ರುತಿಯನ್ನು ಉಲ್ಲೇಖಿಸಿದ್ದಾರೆ.

प्रकाशः – यद्यपि भाष्यादौ केवलब्रह्मशब्द एव निरवकाश इत्युक्तं, तथाऽपि तदपरित्यागेन

ब्रह्मवित्परमाप्नोतीति यत्प्रथमसूचितम् ।

इत्यानन्दमयनयानुभाष्यसुधयोरुक्तरीत्योपायान्तरप्रदर्शनमेतदित्यदोषः ।

ವಸ್ತುತಃ ಭಾಷ್ಯಾದಿಗಳಲ್ಲಿ ಕೇವಲ ಬ್ರಹ್ಮಶಬ್ದವನ್ನೇ ನಿರವಕಾಶವೆಂದು ಹೇಳಿದಂತೆ ಕಾಣಿಸುತ್ತದೆ. ಆದರೂ ಸಹ ಇದನ್ನು ಬಿಡದೆ ''ಬ್ರಹ್ಮವಿತ್ತರಮಾಪ್ನೋತೀತಿ ಯತ್ಪ್ರಥಮಸೂಚಿತಮ್'' ಎಂಬ ಆನಂದಮಯಾಧಿಕರಣದ ಅನುವ್ಯಾಖ್ಯಾನ ಹಾಗೂ ಸುಧೆಗಳಲ್ಲಿ ಹೇಳಿದ ಪ್ರಕಾರ ಇವುಗಳನ್ನು ಬೇರೆ ಕಾರಣಗಳೆಂದು ತಿಳಿಯಬೇಕು. ಆದ್ದರಿಂದ ಟೀಕಾಕಾರರಿಗೆ ಮತ್ತು ಭಾಷ್ಯಕಾರರಿಗೆ ಈ ಹೇತುಗಳು ಸಮ್ಮತವೇ ಆಗಿವೆ.

प्रकाशः – सेतुत्वादेर्निरवकाशत्वं व्यनक्ति – सेतुत्वेति । ''धृतेश्च'' इति दहरनयगुणसूत्रे ''एष सेतुर्विधृतिरेषां लोकानां असम्भेदाय'' इति सर्वाश्रयत्वरूपसेतुत्वस्य, उत्तराधिकरणे ''एतदमृतमभयमेतद्ब्रह्म'' इत्यभयत्वस्य, अदृश्यत्वाद्यधिकरणे ''यया तदक्षरमधिगम्यते इत्यक्षरत्वस्य विष्णौ सेत्स्यमानत्वाद्विष्णोरन्यत्रानवकाशमित्यर्थः ।

अक्षयाद्व्रतिरूपत्वादक्षेषु रमणादपि ।
अक्षरं भगवान् विष्णुरोमित्युच्चत्वहेतुतः ।।

इति स्मृतेश्चेति ।

ವಿವರಣೆ - 'ಋತಂ ಪಿಬಂತೌ' ಎಂಬ ಶ್ರುತಿಯಿಂದ ಪ್ರತಿಪಾದ್ಯನಾದವನು ಭಗವಂತನೇ ಆಗಿದ್ದಾನೆಂದು ಸಿದ್ಧಾಂತ ಮಾಡುತ್ತಿದ್ದಾರೆ. ನಿರವಕಾಶವಾಗಿರುವ ಅನೇಕ ಲಿಂಗಗಳು ವಿಷ್ಣುವಿನಲ್ಲಿ ಕೇಳಿಸುತ್ತಿವೆ. ಆದ್ದರಿಂದ 'ಪಿಬಂತೌ' ಎಂಬಲ್ಲಿರುವ ಪ್ರಕೃತಿಪ್ರತ್ಯಯಾರ್ಥಗಳನ್ನು ವಿಷ್ಣುವಿನಲ್ಲಿ ಹೇಗಾದರೂ ಸಮನ್ವಯ ಮಾಡಬಹುದೆಂಬ ಅಭಿಪ್ರಾಯದಿಂದ ಸೂತ್ರದಲ್ಲೇ ಹೇಳಿದ ಸಿದ್ಧಾಂತ ಹೇತುಗಳನ್ನು 'ಗುಹಾವೇಶಾತ್' ಇತ್ಯಾದಿ ವಾಕ್ಯದಿಂದ ಸಂಗ್ರಹಿಸುತ್ತಿದ್ದಾರೆ.

ಮೊದಲನೆಯ ಸೂತ್ರದಲ್ಲಿ ಹೇಳಲ್ಪಟ್ಟ ಹೇತುವನ್ನು 'ಗುಹಾವೇಶಾತ್' ಎಂಬುದರಿಂದ ಹೇಳಿದ್ದಾರೆ. ಎರಡನೆಯ ಸೂತ್ರದಲ್ಲಿ ಹೇಳಲ್ಪಟ್ಟ ಅನೇಕ ಹೇತುಗಳನ್ನು 'ಬ್ರಹ್ಮಶಬ್ದಾತ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಟೀಕೆಯಲ್ಲಿಯೂ ಸಹ ಉಪಲಕ್ಷಣಯಾ ಎಲ್ಲ ಹೇತುಗಳನ್ನು ವಿವಕ್ಷಿಸಬೇಕು. ಏಕೆಂದರೆ ಭಾಷ್ಯದಲ್ಲಿ 'ಪರಂ' ಎಂಬಲ್ಲಿಯ ತನಕ ಶ್ರುತಿಯನ್ನು ಉಲ್ಲೇಖಿಸಿದ್ದಾರೆ. ತತ್ತ್ವಪ್ರದೀಪದಲ್ಲಿಯೂ ''ಅಕ್ಷರ ಶಬ್ದೇನ ವಿಶೇಷಾಣಾಚ್ಚ'' ಅಕ್ಷರ ಶಬ್ದವು ಬ್ರಹ್ಮನಲ್ಲಿ ವಿಶೇಷಣವಾದ್ದರಿಂದ ಎಂದು ಹೇಳಿದ್ದಾರೆ. ಆದ್ದರಿಂದ ಗ್ರಂಥಕಾರರು ಇಲ್ಲಿ ಹೇಳಿರುವ ಹೇತುಗಳೆಲ್ಲವು ಭಾಷ್ಯಕಾರರಿಗೆ ಸಮ್ಮತವಾದ್ದರಿಂದ ಟೀಕೆಯಲ್ಲಿಯೂ ಉಪಲಕ್ಷಣಯಾ ಇಟ್ಟುಕೊಳ್ಳಬೇಕು.

ಪ್ರಕಾಶಃ – 'अत्र' पिबन्तावित्यत्र । ननूक्तं गुहाप्रविष्टत्वं जीवेऽपि युक्तमित्यतः प्रसिद्धवाचकसौत्रहिशब्दसूचितं तन्निरवकाशत्वं न्यायविवरणटीकोक्तरीत्या साधयति – गुहेति । यो वेदेति । ''ब्रह्मविदाप्नोति परं'' इति पूर्वत्र ब्रह्मण एव तत्र प्रस्तुतत्वादिति भावः ।

'ಅತ್ರ' ಎಂಬ ಪದಕ್ಕೆ 'ಪಿಬಂತೌ ಎಂಬಲ್ಲಿ' ಎಂದರ್ಥ.

ಶಂಕೆ - ಗುಹಾಪ್ರವಿಷ್ಟತ್ವವನ್ನು ಜೀವನಲ್ಲಿಯೂ ಸಹ ಪೂರ್ವಪಕ್ಷದ ಸಂದರ್ಭದಲ್ಲಿ ನಾವು ಸಮರ್ಥಿಸಿದ್ದೇವಲ್ಲವೇ?

ಸಮಾಧಾನ - ಜೀವ ಹಾಗೂ ಪರಮಾತ್ಮ ಇಬ್ಬರು ಗುಹಾವಿಷ್ಟರಾಗಿದ್ದರೂ ಪರಮಾತ್ಮನಲ್ಲೇ ಗುಹಾವಿಷ್ಟತ್ವವು ಶ್ರುತಿಪ್ರಸಿದ್ಧವಾಗಿದೆ. ಪ್ರಸಿದ್ಧವಾದ ಅರ್ಥವನ್ನೇ ಸ್ವೀಕರಿಸಬೇಕಾದ್ದರಿಂದ ಗುಹಾವಿಷ್ಟತ್ವವು ವಿಷ್ಣುವಿನ ನಿರವಕಾಶಲಿಂಗವೇ ಆಗಿದೆ. ಈ ವಿಷಯವನ್ನು ಸೂತ್ರದಲ್ಲಿ 'ಹಿ' ಶಬ್ದವು ಸೂಚಿಸುತ್ತದೆ. ಮತ್ತು ನ್ಯಾಯವಿವರಣಟೀಕೆಯಲ್ಲಿಯೂ ಇದನ್ನೇ ಸಾಧಿಸಿದ್ದಾರೆ. ಅದನ್ನೇ ಪ್ರಕೃತ ಗ್ರಂಥಕಾರರು 'ಗುಹಾನಿಹಿತತ್ವಂ' ಇತ್ಯಾದಿ ವಾಕ್ಯಗಳಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಯೋ ವೇದ ನಿಹಿತಂ' ಎಂಬ ಶ್ರುತಿಯಿಂದ ಪ್ರಸಿದ್ಧನಾದವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ''ಬ್ರಹ್ಮವಿದಾಪ್ನೋತಿ ಪರಂ'' ಎಂಬುದಾಗಿ ಹಿಂದೆ ಪರಬ್ರಹ್ಮನೇ ಪ್ರಸಕ್ತನಾಗಿದ್ದಾನೆ.

ಪ್ರಕಾಶಃ – ननु 'ब्रह्मशब्दात्' इत्युक्तं, तस्यापि प्राक् सावकाशत्वादित्यतो ''विशेषणाच्च'' इत्यस्यार्थान्तरमुपेत्य तस्य निरवकाशत्वमाह – यस्सेतुरिति ।

यद्यपि ''ब्रह्म यत्परं'' इत्येतावदेवोपयुक्तं, तथाऽपि सेतुत्वादिस्फोरणाय कृत्स्नवाक्योक्तिः ।

ಪ್ರಶ್ನೆ - ಬ್ರಹ್ಮಶಬ್ದವನ್ನು ವಿಷ್ಣುವಿನ ನಿರವಕಾಶಲಿಂಗವೆಂದು ಹೇಳಿದ್ದೂ ಸಹ ತಪ್ಪು. ಪೂರ್ವಪಕ್ಷ ಮಾಡುವಾಗ ಇದನ್ನು ಜೀವನಲ್ಲಿ ಸಾವಕಾಶವೆಂದು ಹೇಳಲಾಗಿದೆಯಲ್ಲವೇ?

ಉತ್ತರ - ಬ್ರಹ್ಮಶಬ್ದವು ವಿಷ್ಣುವಿನ ನಿರವಕಾಶಲಿಂಗವೇ ಆಗಿದೆಯೆಂಬುದನ್ನು 'ಯಸ್ಸೇತುಃ' ಇತ್ಯಾದಿ ವಾಕ್ಯಗಳಿಂದ ಸಮರ್ಥಿಸುತ್ತಿದ್ದಾರೆ. ''ವಿಶೇಷಣಾಚ್ಚ'' ಎಂಬ ಎರಡನೆಯ ಸೂತ್ರಕ್ಕೆ ಬ್ರಹ್ಮನಲ್ಲಿ ಪರತ್ವವನ್ನು ವಿಶೇಷಣವನ್ನಾಗಿ ಹೇಳಿದ್ದರಿಂದ ಎಂಬುದಾಗಿ ಮತ್ತೊಂದು ಅರ್ಥವನ್ನು ಅಂಗೀಕರಿಸಿ ವ್ಯಾಖ್ಯಾನಿಸುತ್ತಿದ್ದಾರೆ. ವಸ್ತುತಃ ಗ್ರಂಥದದಲ್ಲಿ ''ಬ್ರಹ್ಮ ಯತ್ಪರಂ'' ಎಂದಷ್ಟೇ ಶ್ರುತಿಯಲ್ಲಿ ಉಲ್ಲೇಖಿಸಿದ್ದರೆ ಸಾಕಾಗುತ್ತಿತ್ತು. ಆದರೂ ಸಹ ಹೇತುತ್ವವೇ ಮೊದಲಾದ ಲಿಂಗಗಳು ಬ್ರಹ್ಮನಲ್ಲಿವೆ ಎಂದು ತೋರಿಸುವುದಕ್ಕಾಗಿ ಸಂಪೂರ್ಣ ಶ್ರುತಿಯನ್ನು ಉಲ್ಲೇಖಿಸಿದ್ದಾರೆ.

प्रकाशः – यद्यपि भाष्यादौ केवलब्रह्मशब्द एव निरवकाश इत्युक्तं, तथाऽपि तदपरित्यागेन

ब्रह्मवित्परमाप्नोतीति यत्प्रथमसूचितम् ।

इत्यानन्दमयनयानुभाष्यसुधयोरुक्तरीत्योपायान्तरप्रदर्शनमेतदित्यदोषः ।

ವಸ್ತುತಃ ಭಾಷ್ಯಾದಿಗಳಲ್ಲಿ ಕೇವಲ ಬ್ರಹ್ಮಶಬ್ದವನ್ನೇ ನಿರವಕಾಶವೆಂದು ಹೇಳಿದಂತೆ ಕಾಣಿಸುತ್ತದೆ. ಆದರೂ ಸಹ ಇದನ್ನು ಬಿಡದೆ ''ಬ್ರಹ್ಮವಿತ್ತರಮಾಪ್ನೋತೀತಿ ಯತ್ತತ್ಪ್ರಥಮಸೂಚಿತಮ್'' ಎಂಬ ಆನಂದಮಯಾಧಿಕರಣದ ಅನುವ್ಯಾಖ್ಯಾನ ಹಾಗೂ ಸುಧೆಗಳಲ್ಲಿ ಹೇಳಿದ ಪ್ರಕಾರ ಇವುಗಳನ್ನು ಬೇರೆ ಕಾರಣಗಳೆಂದು ತಿಳಿಯಬೇಕು. ಆದ್ದರಿಂದ ಟೀಕಾಕಾರರಿಗೆ ಮತ್ತು ಭಾಷ್ಯಕಾರರಿಗೆ ಈ ಹೇತುಗಳು ಸಮ್ಮತವೇ ಆಗಿವೆ.

प्रकाशः – सेतुत्वादेर्निरवकाशत्वं व्यनक्ति – **सेतुत्वेति** । ''धृतेश्च'' इति दहरनयगुणसूत्रे ''एष सेतुर्विधृतिरेषां लोकानां असम्भेदाय'' इति सर्वाश्रयत्वरूपसेतुत्वस्य, उत्तराधिकरणे ''एतदमृतमभयमेतद्ब्रह्म'' इत्यभयत्वस्य, अदृश्यत्वाद्यधिकरणे ''यया तदक्षरमधिगम्यते इत्यक्षरत्वस्य विष्णौ सेत्स्यमानत्वाद्विष्णोरन्यत्रानवकाशमित्यर्थः ।

अक्षयाद्गतिरूपत्वादक्षेषु रमणादपि ।
अक्षरं भगवान् विष्णुरोमित्युच्चत्वहेतुतः ।।

इति स्मृतेश्चेति ।

ಸೇತುತ್ವಾದಿ ಲಿಂಗಗಳಿಗೆ ನಿರವಕಾಶತ್ವವನ್ನು 'ಸೇತುತ್ವಾದಿಕಂ ತು' ಎಂದು ದಹರಾಧಿಕರಣದ 'ಧೃತೇಶ್ಚ' ಎಂಬ ಗುಣಸೂತ್ರದಲ್ಲಿ ''ಏಷ ಸೇತುರ್ವಿಧೃತಿರೇಷಾಂ ಲೋಕಾನಾಂ ಅಸಂಭೇದಾಯ'' ಎಂಬುದಾಗಿ ಸರ್ವಾಶ್ರಯತ್ವರೂಪವಾದ ಸೇತುತ್ವವನ್ನು ಪರಮಾತ್ಮನಲ್ಲಿ ಸಮರ್ಥಿಸುವವರಿದ್ದಾರೆ. ಮುಂದಿನ ಅಧಿಕರಣದಲ್ಲಿ ''ಏತದಮೃತಮಭಯಮೇತದ್ಬ್ರಹ್ಮ'' ಎಂಬುದಾಗಿ ಅಭಯತ್ವವನ್ನು ಆದೃಶ್ಯತ್ವಾಧಿಕರಣದಲ್ಲಿ ''ಯಯಾ ತದಕ್ಷರಮಧಿಗಮ್ಯತೇ'' ಎಂಬುದಾಗಿ ಅಕ್ಷರತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸುವವರಿದ್ದಾರೆ ಆದ್ದರಿಂದ ಇವೆಲ್ಲವು ವಿಷ್ಣುವಿನ ನಿರವಕಾಶಲಿಂಗಗಳೇ ಆಗಿವೆ.

ಅಕ್ಷಯಾದ್ರತಿರೂಪತ್ವಾದಕ್ಷೇಷು ರಮಣಾದಪಿ।
ಅಕ್ಷರಂ ಭಗವಾನ್ ವಿಷ್ಣುರೋಮಿತ್ಯುಚ್ಚತ್ವಹೇತುತಃ॥

ನಾಶರಹಿತನಾದ್ದರಿಂದ ರತಿರೂಪನಾದ್ದರಿಂದ ಇಂದ್ರಿಯಗಳಲ್ಲಿ ರಮಿಸುವವನಾದ್ದರಿಂದಲೂ ಭಗವಂತನು ಅಕ್ಷರ ಎನಿಸುತ್ತಾನೆ. ಅತ್ಯಂತ ಶ್ರೇಷ್ಠನಾದ್ದರಿಂದ ಇವನೇ 'ಓಂ' ಎನಿಸುತ್ತಾನೆ. ಎಂಬ ಶ್ರುತಿಯಿಂದಲೂ ಅಕ್ಷರತ್ವವು ವಿಷ್ಣುವಿನ ಲಿಂಗವೆಂದು ತಿಳಿಯುತ್ತದೆ.

ಪ್ರಕಾಶಃ – ನನ್ವಸ್ತು ''ಯಸ್ಸೇತುಃ'' ಇತ್ಯಾದಿವಾಕ್ಯಂ ಬ್ರಹ್ಮಮಾತ್ರಪರಂ, ''ಋತಂ'' ಇತಿ ವಾಕ್ಯಂ ತ್ವುಭಯಪರಮಸ್ತು, ಕರ್ಮಫಲಾತ್ಯತ್ವದ್ವಿವಚನಶ್ರುತ್ಯೋರ್ಭಾವಾದಿತ್ಯತ ಆಹ – ನಚೇತಿ । 'ಅಬ್ರಹ್ಮವಿಷಯಮಪೀತಿ ಯುಕ್ತಂ' ಇತ್ಯನ್ವಯಃ ।

ಪ್ರಶ್ನೆ - 'ಯಸ್ಸೇತುಃ' ಇತ್ಯಾದಿ ವಾಕ್ಯಗಳು ವಿಷ್ಣುವಿನ ನಿರವಕಾಶಲಿಂಗವೆಂದು ಒಪ್ಪೋಣ. ಆದರೆ 'ಋತಂ ಪಿಬಂತೌ' ಎಂಬ ದ್ವಿವಚನ ಶ್ರುತಿಯು ಜೀವೇಶ್ವರರಿಬ್ಬರನ್ನೂ ಪ್ರತಿಪಾದಿಸಬಹುದು. ಏಕೆಂದರೆ 'ಕರ್ಮಫಲಾತ್ಯತ್ವ' ಹಾಗೂ ದ್ವಿವಚನಶ್ರುತಿಗಳೆಂಬ ಆಧಾರಗಳಿರುವುದರಿಂದ.

ಉತ್ತರ - ಈ ಪ್ರಶ್ನೆಗೆ 'ನಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಹಿಂದಿನ ಮುಂದಿನ ವಾಕ್ಯಗಳಂತು ಕೇವಲ ವಿಷ್ಣುಪರವಾಗಿದೆಯೆಂದು ನಿರ್ಣಯವಾಗಿವೆ. ಇವುಗಳಿಂದ ಸಂದಷ್ಟವಾದ ಮಧ್ಯದಲ್ಲಿರುವ 'ಋತಂ ಪಿಬಂತೌ' ಎಂಬ ವಾಕ್ಯವೂ ಸಹ ವಿಷ್ಣುವನ್ನೇ ಪ್ರತಿಪಾದಿಸಬೇಕು. ಅಬ್ರಹ್ಮವಿಷಯವೆಂದು ಹೇಳಬಾರದು.

ಸಾರ

ಸಿದ್ಧಾಂತವನ್ನು ಮಾಡುತ್ತಿದ್ದಾರೆ. ಹೃದಯಗುಹಾವಿಷ್ಟತ್ವ, ಬ್ರಹ್ಮಶಬ್ದ, ಸೇತುತ್ವ, ಅಕ್ಷರತ್ವ, ಪರತ್ವ, ಅಭಯತ್ವ ಮೊದಲಾದ ಅನೇಕ ಲಿಂಗಗಳು ವಿಷ್ಣುವಿನಲ್ಲಿ ನಿರವಕಾಶವಾಗಿರುವುದರಿಂದ ವಿಷ್ಣುವೇ ದ್ವಿವಚನಶ್ರುತಿಯಿಂದ ಪ್ರತಿಪಾದ್ಯನಾಗುತ್ತಾನೆ.

ಜೀವ ಹಾಗೂ ಈಶ್ವರ ಇಬ್ಬರಲ್ಲಿಯೂ ಹೃದಯಗುಹಾನಿಹಿತತ್ವವನ್ನು ಹೇಳಬಹುದು. ಆದರೆ ಮಿಥಿಲಾ ಪಟ್ಟಣದಲ್ಲಿ ಹುಟ್ಟಿದ ರಾಜನಲ್ಲಿ ಮಾತ್ರ 'ಮೈಥಿಲಃ' ಎಂಬ ಪ್ರಯೋಗವಿರುತ್ತದೆ ಹೊರತು ಉಳಿದ ಸಾಮಾನ್ಯ

ಪ್ರಜೆಗಳನ್ನು 'ಮೈಥಿಲಃ' ಎಂದು ಯಾರೂ ಸಹ ಹೇಳುವುದಿಲ್ಲ. ಅದರಂತೆ ಜೀವೇಶ್ವರರಿಬ್ಬರು ಹೃದಯದಲ್ಲಿದ್ದರೂ ಈಶ್ವರನನ್ನೇ ಹೃದಯಗುಹಾನಿಹಿತನೆಂದು ಹೇಳಬೇಕು.

ಮತ್ತು ಮುಂದಿನ ವಾಕ್ಯದಲ್ಲಿ ಬ್ರಹ್ಮನಲ್ಲಿ ಪರತ್ವವನ್ನು ವಿಶೇಷಣವನ್ನಾಗಿ ಹೇಳಲಾಗಿದೆ. 'ಏಷ ಸೇತುಃ' ಇತ್ಯಾದಿ ಶ್ರುತಿಗಳು ಸೇತುತ್ವವೇ ಮೊದಲಾದ ವಿಷ್ಣುವಿನ ಲಿಂಗಗಳನ್ನೇ ಹೇಳುತ್ತಿವೆ. ಆದ್ದರಿಂದ ವಿಷ್ಣುವೇ ದ್ವಿವಚನಶ್ರುತಿ ಪ್ರತಿಪಾದ್ಯನೆನ್ನಬೇಕು.

ಮತ್ತೊಂದು ಪ್ರಬಲ ಕಾರಣ - 'ಋತಂ ಪಿಬಂತೌ' ಎಂಬ ಶ್ರುತಿಯು ಯಾವ ಪ್ರಕರಣದಲ್ಲಿದೆಯೋ ಅದರ ಹಿಂದಿನ ಮುಂದಿನ ವಾಕ್ಯಗಳಲ್ಲಿ 'ಯಃ ಸೇತುಃ' 'ಯಸ್ಯ ಬ್ರಹ್ಮ ಕ್ಷತ್ರಂಚ' ಕೇವಲ ವಿಷ್ಣುವೊಬ್ಬನೇ ಪ್ರತಿಪಾದ್ಯನಾಗಿದ್ದಾನೆ. 'ಸಂದಂಶ' ನ್ಯಾಯದಿಂದ ಮಧ್ಯದಲ್ಲಿರುವ ಈ ದ್ವಿವಚನಶ್ರುತಿಯಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂದು ಸುಲಭವಾಗಿ ತಿಳಿಯುವ ವಿಚಾರ.

• • • • •

ಭೋಕ್ತೃ ಶ್ರೀಹರಿಯೇ ಹೊರತು ಜೀವನಲ್ಲ

ತಾತ್ಪರ್ಯಚನ್ದ್ರಿಕಾ

ನ ಚೇಶ್ವರಸ್ಯ ಅಭೋಕ್ತೃತ್ವಮೇವ ಬಾಧಕಮ್, ''ಏತತ್ಸರ್ವಂ ಪರೇ ಆತ್ಮನಿ ಸಮ್ಪ್ರತಿಷ್ಠತೇ'' ಇತಿ ಪ್ರಸ್ತುತ್ಯ ''ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ'' ಇತ್ಯಾದಿ ಶ್ರುತೇಃ ।

ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।
ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ।।

ಇತ್ಯಾದಿಸ್ಮೃತೇಶ್ಚ ।

ನಚ ''ಶ್ರೋತ್ರಂ'' ಇತ್ಯಾದಿಕಂ ಜೀವವಿಷಯಂ, ಪೂರ್ವತ್ರ ''ಯಚ್ಚಾಪ್ಯುತ್ಕ್ರಾಮತೀಶ್ವರಃ'' ಇತ್ಯಾದೇಃ, ಉತ್ತರತ್ರ ''ಪಶ್ಯನ್ತಿ ಜ್ಞಾನಚಕ್ಷುಷಃ'' ಇತ್ಯಾದೇರ- ಯೋಗಾತ್ । ''ಅನಶ್ನನ್ನನ್ಯಃ'' ಇತ್ಯಾದಿಕಂ ತು ''ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ'' ಇತೀಶ್ವರಸ್ಯ ಸ್ವಾದುಭೋಕ್ತೃತ್ವೋಕ್ತೇಃ,

ತಥಾ 'ಪ್ರವಿವಿಕ್ತಾಹಾರತರ ಇವೈವ ಭವತ್ಯಸ್ಮಾಚ್ಛಾರೀರಾದಾತ್ಮನಃ'' ಇತಿ ಶ್ರುತ್ಯನ್ತರೇ ಭಗವದಾಹಾರಸ್ಯ ಜೀವಾಹಾರಾದ್ವಿವಿಕ್ತತ್ವೋಕ್ತೇಃ, ತಥಾ ''ಶುಭಂ ಪಿಬತ್ಯಸೌ'' ಇತ್ಯಾದಿಭಾಷ್ಯೋಕ್ತ-ಸ್ಮೃತಿಭಿರಶುಭಭೋಗಸ್ಯೈವ ನಿಷೇಧಾತ್,

ತಥಾ –

ಅನ್ಯೂನಾನಧಿಕತ್ವಾಚ್ಚ ಪೂರ್ಣಸ್ವಾನನ್ದಭೋಜನಾತ್ ।
ವಿರಾಗಾಚ್ಚ ಪರಸ್ಯಾಸ್ಯ ಭೋಕ್ತೃತ್ವಪ್ರತಿಷೇಧನಮ್ ।।

ಇತ್ಯಾದಿಸ್ಮೃತಿಭಿರಭೋಕ್ತೃತ್ವಶ್ರುತೇರ್ಗತಿಕಥನಾತ್, ''ಕ್ರೀಡಾ ಭೋಗೋ ನ ಚಾನ್ಯಥಾ'' ಇತ್ಯಾದಿಸ್ಮೃತ್ಯಾ ಕ್ರೀಡಾರೂಪಭೋಗಸಮ್ಭವಸ್ಯೋಕ್ತತ್ವಾಚ್ಚ ಅಶುಭಭೋಗಾಭಾವವಿಷಯಮ್ । ಪ್ರತ್ಯುತ ಜೀವಪಕ್ಷ ಏವ ''ಋತಂ ಸತ್ಯಂ ತಥಾ ಧರ್ಮಃ'' ಇತಿ ಸ್ಮೃತೇರ್ಬ್ರಹ್ಮಫಲವಾಚಿ ಋತಪದಂ ನ ಯುಕ್ತಮ್, ತಸ್ಯಾಧರ್ಮಫಲಂ ಪ್ರತ್ಯಪಿ ಭೋಕ್ತೃತ್ವಾತ್ । ಈಶಪಕ್ಷೇ ತು ತದ್ಯುಕ್ತಮ್, ''ಪುಣ್ಯಮೇವಾಮುಂ ಗಚ್ಛತಿ'' ಇತಿ ಶ್ರುತೇಃ ।

ಅನುವಾದ - ಈಶ್ವರನಲ್ಲಿ ಭೋಕ್ತೃತ್ವವೇ ಇರುವುದಿಲ್ಲವೆಂಬ ಬಾಧಕವಿರುವುದರಿಂದ 'ಪಿಬಂತೌ' ಎಂಬ ಶ್ರುತಿಯಿಂದ ಈಶ್ವರನನ್ನು ವಿವಕ್ಷಿಸಲು ಸಾಧ್ಯವಿಲ್ಲವೆಂದು ಹೇಳಬಾರದು. ಏಕೆಂದರೆ ''ಏತತ್ಸರ್ವಂ ಪರೇ ಆತ್ಮನಿ ಸಂಪ್ರತಿಷ್ಠತೇ'' ಸಮಸ್ತವು ಪರಬ್ರಹ್ಮನಲ್ಲಿಯೇ ನೆಲೆಗೊಂಡಿವೆ ಎಂಬುದಾಗಿ ಪರಬ್ರಹ್ಮನೇ ಪ್ರಸ್ತುತನಾಗಿದ್ದಾನೆ. ಮತ್ತು 'ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ, ಘ್ರಾತಾ, ರಸಯಿತಾ' ಎಂಬ ಶ್ರುತಿಯಿಂದ ಪರಮಾತ್ಮನು ಸಕಲ ಇಂದ್ರಿಯಗಳಿಂದಲೂ ಭೋಗ ಮಾಡುತ್ತಾನೆಂದು ತಿಳಿಯುತ್ತದೆ. ಗೀತೆಯಲ್ಲಿಯೂ ಸಹ 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' ನಾನೇ ಸಕಲ ಯಜ್ಞಗಳ ಭೋಕ್ತೃವಾಗಿದ್ದೇನೆಂದು ಪರಮಾತ್ಮನೇ ಹೇಳಿಕೊಂಡಿದ್ದಾನೆ. ಮತ್ತು

'ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ॥

ಎಂಬ ಮತ್ತೊಂದು ಗೀತಾಮಾತೂ ಸಹ ಭಗವಂತನಿಗೆ ಸಕಲ ಇಂದ್ರಿಯಗಳಿಂದ ಭೋಗವನ್ನು ಹೇಳುತ್ತಿದೆ.

ಗೀತಾ ವಾಕ್ಯದಲ್ಲಿರುವ 'ಶ್ರೋತ್ರಂ ಚಕ್ಷುಃ' ಎಂಬ ಮಾತು ಜೀವವಿಷಯಕವಾಗಿದೆ ಹೊರತು ಪರಬ್ರಹ್ಮವಿಷಯಕವಲ್ಲವೆಂದು ಹೇಳಬಾರದು. ಏಕೆಂದರೆ ''ಶ್ರೋತ್ರಂ ಚಕ್ಷುಃ'' ಎಂಬ ಶ್ಲೋಕದ ಹಿಂದೆ ''ಯಚ್ಚಾಪ್ನುತ್ಯಾಮತಿ'' ಎಂಬುದಾಗಿ ಈಶ್ವರನು ಪ್ರಸಿದ್ಧನಾಗಿದ್ದಾನೆ. ಮುಂದೆಯೂ ಸಹ ''ಪಶ್ಯಂತಿ ಜ್ಞಾನಚಕ್ಷುಷಃ'' ಎಂಬುದಾಗಿ ಜ್ಞಾನಿಗಳಿಂದ ಗೋಚರನಾಗುತ್ತಾನೆಂದು ಹೇಳಿದ್ದರಿಂದ ಪರಮಾತ್ಮನೇ ಪ್ರಸಕ್ತನಾಗಿದ್ದಾನೆ.

''ಅನಶ್ನನ್ನನ್ಯಃ'' ಎಂಬ ಶ್ರುತಿಯೇ ಬಾಧಕವೆಂದು ಹೇಳಬಹುದಲ್ಲವೇ? ಎಂದೂ ಸಹ ಶಂಕಿಸಲಾಗದು. ಏಕೆಂದರೆ ''ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ'' ಎಂಬುದಾಗಿ ಈಶ್ವರನು ಸ್ವಾದು

ಪದಾರ್ಥದ ಭೋಕ್ತೃವಾಗಿದ್ದಾನೆಂದು ಹೇಳಲಾಗಿದೆ. ಆದರಂತೆ 'ಪ್ರವಿವಿಕ್ತಾಹಾರತರ ಇವೈವ ಭವತ್ಯಸ್ಯಾಚ್ಛರೀರಾದಾತ್ಮನಃ'' ಜೀವನು ಉಪಭೋಗಿಸುವ ಆಹಾರಕ್ಕಿಂತ ವಿಲಕ್ಷಣವಾದ ಆಹಾರವನ್ನು ಪರಮಾತ್ಮನು ಉಪಭೋಗಿಸುತ್ತಾನೆಂದು ಶ್ರುತ್ಯಂತರದಲ್ಲಿ ಹೇಳಲಾಗಿದೆ. ಆದ್ದರಿಂದ ''ಶುಭಂ ಪಿಬತ್ಯಸೌ'' ಎಂಬ ಭಾಷ್ಯದಲ್ಲಿ ಹೇಳಲ್ಪಟ್ಟ ಶ್ರುತಿಗಳ ಆಧಾರದಿಂದ 'ಅನಶ್ನನ್ನನ್ಯಃ' ಎಂಬ ಶ್ರುತಿಯು ಅಶುಭಭೋಗವನ್ನಷ್ಟೇ ನಿಷೇಧಿಸುತ್ತಿದೆ.

''ಅನಶ್ನನ್ನನ್ಯಃ'' ಎಂಬ ಶ್ರುತಿಗೆ ಅಶುಭಭೋಗವಿಲ್ಲವೆಂದು ವ್ಯಾಖ್ಯಾನಿಸಬೇಕೆಂದು ಮತ್ತೊಂದು ಪ್ರಕಾರದಲ್ಲಿ ತಿಳಿಯಬೇಕು.

ಅನ್ಯೋನಾನಾಧಿಕತ್ವಾಚ್ಚ ಪೂರ್ಣಾನಂದಭೋಜನಾತ್ ।
ವಿರಾಗಾಚ್ಚ ಪರಸ್ಯಾಸ್ಯ ಭೋಕ್ತೃತ್ವಪ್ರತಿಷೇಧನಮ್ ॥

ಭಗವಂತನು ಭೋಗಿಸುವುದರಿಂದ ಕಮ್ಮಿಯೂ ಆಗಲಾರ ಜಾಸ್ತಿಯೂ ಆಗಲಾರ. ಏಕೆಂದರೆ ಪೂರ್ಣವಾದ ಆನಂದಸ್ವರೂಪನಾದ್ದರಿಂದ. ಆದ್ದರಿಂದಲೇ ವಿರಕ್ತನಾದ ಇವನಿಗೆ ಶ್ರುತಿಯು ಭೋಕ್ತೃತ್ವವನ್ನು ನಿಷೇಧಿಸುತ್ತಿದೆ. ಇವೇ ಮೊದಲಾದ ಶ್ರುತಿಗಳಿಂದ ''ಅನಶ್ನನ್ನನ್ಯಃ' ಎಂಬ ಶ್ರುತಿಗೆ ವ್ಯಾಖ್ಯಾನಿಸಬೇಕು. ಮತ್ತು ''ಕ್ರೀಡಾ ಭೊಗೋ ನಾ ಚಾನ್ಯಥಾ'' ಭಗವಂತನಿಗೆ ಕ್ರೀಡೆಯೇ ಭೋಗ ಹೊರತು ಬೇರೆಯದ್ದಲ್ಲವೆಂದು ಹೇಳಿದ್ದರಿಂದ ಅಶುಭಭೋಗವು ಇಲ್ಲವೆಂದೇ ಶ್ರುತಿಗೆ ಅರ್ಥೈಸಬೇಕು.

ಅಷ್ಟೇ ಅಲ್ಲದೆ ಜೀವಪಕ್ಷದಲ್ಲಿ 'ಋತಂ ಸತ್ಯಂ ತಥಾ ಧರ್ಮಃ' ಎಂಬ ಶ್ರುತಿಯ ಆಧಾರದಿಂದ ಧರ್ಮಫಲವನ್ನು ಹೇಳುವ 'ಋತ' ಪದವು ಅಹಿತವಾಗುತ್ತದೆ. ಏಕೆಂದರೆ ಜೀವನು ಅಧರ್ಮಫಲಭೋಕ್ತೃವೂ ಆಗಿದ್ದಾನೆ. ಆದರೆ ಈಶ್ವರ ಪಕ್ಷದಲ್ಲಿ ಈ ಸಮಸ್ಯೆ ಬರುವುದಿಲ್ಲ. ''ಪುಣ್ಯಮೇವಾಮುಂ ಗಚ್ಛತಿ'' ಎಂಬ ಶ್ರುತಿಯಂತೆ ಭಗವಂತನು ಪುಣ್ಯಫಲವನ್ನಷ್ಟೇ ತಿನ್ನುತ್ತಾನೆ.

प्रकाशः –

ननु हरेरभोक्तृत्वं वा द्विवचनोक्तद्वित्वं वा छायात्वं वा बाधकमित्यतः ''तस्य कर्मफलभोगाभावान्नैतद्वाक्यप्रतिपाद्यत्वं'' इत्यादिटीकां विवृण्वन्, अभोक्तृत्वं तावन्निराह – **न चेत्यादिना पुण्यमेवामुं गच्छतीत्यन्तेन ।**

'ಋತಂ ಪಿಬಂತೌ' ಎಂಬ ಶ್ರುತಿಯಿಂದ ಬ್ರಹ್ಮನೇ ಪ್ರತಿಪಾದ್ಯನೆನ್ನಲು ಯಾವುದೇ ಬಾಧಕವಿಲ್ಲವೆಂದು ಈ ಹಿಂದೆಯೇ ಹೇಳಲಾಯಿತು. ಆದರೆ ಹಿಂದೆ ಪೂರ್ವಪಕ್ಷಿಯು ಅಭೋಕ್ತೃತ್ವ, ದ್ವಿವಚನೋಕ್ತದ್ವಿತ್ವ ಛಾಯಾತ್ವಗಳನ್ನು ಬಾಧಕಗಳನ್ನಾಗಿ ಹೇಳಿದ್ದನು. ಆ ಬಾಧಕಗಳನ್ನು ನಿರಾಕರಿಸುವುದಕ್ಕಾಗಿ ಮತ್ತು 'ತಸ್ಯ

ಕರ್ಮಫಲಭೋಗಾಭಾವನ್ನೈತದ್ವಾಕ್ಯಪ್ರತಿಪಾದ್ಯತ್ವಂ' ಇತ್ಯಾದಿ ಟೀಕೆಯನ್ನು ವಿವರಿಸುವುದಕ್ಕಾಗಿ 'ನಚ' ಎಂಬಲ್ಲಿಂದ ಪ್ರಾರಂಭಿಸಿ ''ಪುಣ್ಯಮೇವಾಮುಂ ಗಚ್ಛಂತಿ'' ಎಂಬಲ್ಲಿಯ ತನಕದ ಗ್ರಂಥವು ಹೊರಟಿದೆ. ಮೊದಲು ಅಭೋಕ್ತೃತ್ವ ಪಕ್ಷವನ್ನು ನಿರಾಕರಿಸಿದ್ದಾರೆ.

ಪ್ರಕಾಶಃ – ಏತದಿತಿ । ಷಟ್ಪ್ರಶ್ನೋಪನಿಷದಿ ಚತುರ್ಥಪ್ರಶ್ನೇ ''ಪರೇ ಆತ್ಮನಿ'' ಇತಿ ಪರತ್ವವಿಶೇಷಣೇನ ಪರಮಾತ್ಮಾನಮೇವ ಪರಾಮೃಶ್ಯ ದ್ರಷ್ಟೃತ್ವಾದೇರುಕ್ತೇರಿತ್ಯರ್ಥಃ । ''ಅಹಂ ಹಿ'' ಇತಿ ವಾಕ್ಯೇ ಅಹಮಿತಿ ಕೃಷ್ಣೇನ ಪ್ರಯುಕ್ತತ್ವಾತ್ ಬ್ರಹ್ಮವಿಷಯತ್ವಂ ಸಿದ್ಧಮಿತಿ ಟೀಕೋಕ್ತದ್ವಿತೀಯಸ್ಮೃತೇಸ್ತತ್ಸಾಧಯತಿ – ನಚೇತಿ । ಉಭಯತ್ರಾऽऽದಿಪದೇನ,

ಗೃಹೀತ್ವೈತಾನಿ ಸಂಯಾತಿ ವಾಯುರ್ಗನ್ಧಾನಿವಾऽऽಶಯಾತ್ ।

ಇತಿ ''ಯತನ್ತೋऽಪ್ಯಕೃತಾತ್ಮನೋ ನೈನಂ ಪಶ್ಯನ್ತಿ'' ಇತ್ಯಾದೇರ್ಗ್ರಹಃ ।

'ಏತತ್' ಎಂದರೆ ಷಟ್‌ಪ್ರಶ್ನೋಪನಿಷತ್ತಿನ ಚತುರ್ಥ ಪ್ರಶ್ನೆಯಲ್ಲಿ 'ಪರೇ ಆತ್ಮನಿ' ಎಂಬುದಾಗಿ ಆತ್ಮನನ್ನು ಪರತ್ವವನ್ನು ವಿಶೇಷಣತ್ವವನ್ನು ಹೇಳಿದ್ದರಿಂದ ಪರಮಾತ್ಮನನ್ನೇ ವಿವಕ್ಷಿಸಬೇಕು. ಇಂತಹ ಪರಮಾತ್ಮನನ್ನೇ ಪರಾಮರ್ಶಿಸಿ ಶ್ರುತಿಯು ದ್ರಷ್ಟೃತ್ವ, ಸ್ರಷ್ಟೃತ್ವ ಮೊದಲಾದವುಗಳನ್ನು ಹೇಳುತ್ತಿದೆ. 'ಅಹಂ ಹಿ ಸರ್ವಯಜ್ಞಾನಾಂ' ಎಂಬುದಾಗಿ ಶ್ರೀಕೃಷ್ಣಪರಮಾತ್ಮನೇ ಹೇಳಿದ್ದರಿಂದ ಈ ವಾಕ್ಯವು ಬ್ರಹ್ಮವಿಷಯಕವೆಂದು ಸಿದ್ಧವಾಗುತ್ತದೆ. ಆದ್ದರಿಂದಲೇ 'ಶ್ರೋತ್ರಂ ಚಕ್ಷುಃ' ಎಂಬ ಮತ್ತೊಂದು ಗೀತಾ ವಾಕ್ಯವೂ ಸಹ ಪರಬ್ರಹ್ಮವಿಷಯಕವಾಗಿದೆ ಎಂದು ವಿವಕ್ಷಿಸಿ 'ನಚ ಶ್ರೋತ್ರಂ' ಇತ್ಯಾದಿ ವಾಕ್ಯವು ಹೊರಟಿದೆ. ಎರಡೂ ಕಡೆ ಇರುವ ಆದಿಪದದಿಂದ 'ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾऽऽಶಯಾತ್' ಎಂಬುದನ್ನು ಮತ್ತು ''ಯತಂತೋऽಪ್ಯಕೃತಾತ್ಮನೋ ನೈನಂ ಪಶ್ಯಂತಿ'' ಎಂಬುದನ್ನೂ ಸಹ ಸ್ವೀಕರಿಸಬೇಕು.

ಪ್ರಕಾಶಃ – ಏತದ್ವಾಕ್ಯೋಕ್ತಿಸ್ತು ಭೋಗಸ್ಯೇನ್ದ್ರಿಯಸಾಧ್ಯತ್ವಾತ್ಕಥಮೀಶ್ವರಸ್ಯ ಭೋಗ ಇತಿ ಶಙ್ಕಾವ್ಯುದಾಸಾಯೇತಿ ಬೋಧ್ಯಮ್ । ಉಕ್ತಞ್ಚ ಚಾನ್ದೋಗ್ಯಭಾಷ್ಯೇऽಷ್ಟಮಾಧ್ಯಾಯಾನ್ತೇ –

''ಭೂತೈರ್ಮಹದ್ಭಿರ್ಯ ಇಮಾಃ ಪುರೋ ವಿಭುರ್ನಿರ್ಮಾಯ ಶೇತೇ ಯದಮೂಷು ಪೂರುಷಃ ।
ಭುಙ್ಕ್ತೇ ಗುಣಾನ್ ಷೋಡಶ ಷೋಡಶಾತ್ಮಕಸ್ಸोऽಲಙ್ಕಷೀಷ್ಟ ಭಗವಾನ್ವಚಾಂಸಿ ಮೇ ।।

ಇತ್ಯಾದೌ ಭಗವತ ಏವೇನ್ದ್ರಿಯೈರ್ಭೋಗೋಕ್ತೇಶ್ಚ ।

ಋತಂ ಪಿಬನ್ತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ।।

ಇತಿ ಚ'' ಇತ್ಯಾದಿ ।

ಭೂತೈರ್ಮಹದ್ಭಿರ್ಯ ಇಮಾಃ ಪುರೋ ವಿಭುರ್ನಿರ್ಮಾಯ ಶೇತೇ ಯದಮೂಷು ಪೂರುಷಃ।
'ಭುಂಕ್ತೇ ಗುಣಾನ್ ಷೋಡಶ ಷೋಡಶಾತ್ಮಕಸ್ತೋಽಲಂಕೃಷೀಷ್ಟ ಭಗವಾನ್ವಚಾಂಸಿ ಮೇ॥

ಸರ್ವಸಮರ್ಥನಾದ ಪರಮಾತ್ಮನು ಪಂಚ ಮಹಾಭೂತಗಳಿಂದ ಸಕಲಜೀವರ ಶರೀರಗಳನ್ನು ಸೃಷ್ಟಿ ಮಾಡಿದನು. ಆನಂತರ ಅವರ ಶರೀರದಲ್ಲಿ ಸುಖವಾಗಿ ವಾಸ ಮಾಡುವುದರಿಂದ 'ಪುರುಷಃ' ಎಂದು ಪ್ರಸಿದ್ಧನಾದನು. ಇಂತಹ ಪರಮಾತ್ಮನು ಹತ್ತು ಬಾಹ್ಯೇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಚೇತನಗಳೆಂಬ ಐದು ಅಂತಃಕರಣಗಳು ಹಾಗೂ ಸಾಕ್ಷಿ ಹೀಗೆ ಒಟ್ಟು ಹದಿನಾರು ಇಂದ್ರಿಯಗಳನ್ನು ವ್ಯಾಪಿಸಿ ಅವುಗಳಿಂದ ಗ್ರಾಹ್ಯವಾದ ಹದಿನಾರು ವಿಧವಾದ ವಿಷಯಗಳನ್ನು ಉಪಭೋಗಿಸುತ್ತಾನೆ. ಈ ಪರಮಾತ್ಮನು ನನ್ನ ಮಾತುಗಳನ್ನು ಆಕರ್ಷಕವನ್ನಾಗಲಿ ಮಾಡಲಿ.

ಈ ಭಾಗವತದಲ್ಲಿ ಶುಕಮುನಿಗಳು ಹೇಳುವ ಮಾತಿನಲ್ಲಿ ಪರಮಾತ್ಮನಿಗೂ ಸಹ ಇಂದ್ರಿಯಗಳ ಮೂಲಕ ವಿಷಯಭೋಗವಿದೆಯೆಂದು ತಿಳಿಯುತ್ತದೆ. ಆದ್ದರಿಂದ ಪರಮಾತ್ಮನಿಗೆ ವಿಷಯಭೋಕ್ತೃತ್ವವನ್ನು ಹೇಳಲು ಬಾಧಕವಿರುವುದಿಲ್ಲ.

ಮತ್ತು 'ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ಇತಿ ಚ' ಪುಣ್ಯದಿಂದ ನಿರ್ಮಾಣಗೊಂಡ ಜೀವನ ಶರೀರದ ಹೃದಯಗುಹೆಯಲ್ಲಿ 'ಆತ್ಮ' ಹಾಗೂ 'ಅಂತರಾತ್ಮ' ಎಂಬ ಎರಡು ಪರಮಾತ್ಮನ ರೂಪಗಳು ನೆಲೆಸಿವೆ. ಈ ರೂಪಗಳು ಜೀವೋತ್ತಮರಾದ ಪ್ರಾಣದೇವರಲ್ಲಿದ್ದು ಪುಣ್ಯದ ಫಲವನ್ನು ಉಪಭೋಗಿಸುತ್ತಿವೆಯೆಂದು ಶ್ರುತಿಯು ಸಾರುತ್ತಿದೆ. ಈ ಕಾರಣದಿಂದಲೂ ಭಗವಂತನಿಗೆ ವಿಷಯಭೋಗವಿದೆಯೆಂದು ಸಿದ್ಧವಾಗುತ್ತದೆ.

ಪ್ರಕಾಶಃ – ಈಶ್ವರಸ್ಯ ಭೋಕ್ತೃತ್ವೋಕ್ತಾವನಶನಶ್ರುತಿವಿರೋಧ ಇತ್ಯತ ಆಹ – **ಅನಶ್ನನ್ನಿತಿ** । 'ಅಶುಭಭೋಗಾಭಾವವಿಷಯಂ'' ಇತ್ಯನ್ವಯಃ । ಕುತಃ ಸಙ್ಕೋಚ ? ಇತ್ಯತಃ ''ಅಸದ್ವ್ಯಪದೇಶಾನ್ನೇತಿ ಚೇನ್ನ ಧರ್ಮಾನ್ತರೇಣ ವಾಕ್ಯಶೇಷಾತ್'' ಇತಿ ನ್ಯಾಯೇನ ಟೀಕೋಕ್ತವಾಕ್ಯಶೇಷಬಲಾದಿತಿ ಭಾವೇನ ತಮಾಹ – **ತಸ್ಯೇತಿ** ।

ಈ ಎಲ್ಲಾ ಪ್ರಮಾಣಗಳ ಆಧಾರದಿಂದ ಈಶ್ವರನಿಗೆ ಭೋಕ್ತೃತ್ವವನ್ನು ಹೇಳಿದರೆ 'ಅನಶ್ನನ್ನನ್ಯಃ' ಎಂಬ ಶ್ರುತಿವಿರೋಧವು ಬರುತ್ತದೆ ಅಲ್ಲವೇ? ಎಂಬ ಪ್ರಶ್ನೆಗೆ 'ಅನಶ್ನನ್ನನ್ಯಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಅನಶ್ನನ್ನನ್ಯಃ' ಎಂಬುದಕ್ಕೆ 'ಅಶುಭಭೋಗಾಭಾವವಿಷಯಂ' ಎಂಬಲ್ಲಿ ಅನ್ವಯ. ಹೀಗೆ ಶ್ರುತಿಗೆ ಸಂಕೋಚ ಮಾಡಲು ಏನು ಕಾರಣ ? ಎಂಬ ಪ್ರಶ್ನೆಗೆ ''ಅಸದ್ವ್ಯಪದೇಶಾನ್ನೇತಿ ಚೇನ್ನ ಧರ್ಮಾಂತರೇಣ ವಾಕ್ಯಶೇಷಾತ್'' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಮತ್ತು ಟೀಕೆಯಲ್ಲಿ ಉಕ್ತವಾದ ವಾಕ್ಯಶೇಷದ ಬಲದಿಂದ ಸಂಕೋಚ ಮಾಡಬೇಕೆಂದು 'ತಸ್ಯ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – ಆಥರ್ವಣೇऽಸ್ಯಾಶ್ರವಣೇऽಪಿ ಋಕ್ಷಾಖಾಯಾಮಸ್ತಿ ಶ್ರವಣಾಮಿತಿ ಭಾವಃ ।

ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ ತನ್ನೋ ನಶದ್ಯಃ ಪಿತರಂ ನ ವೇದ ।
ಗುಹಾಧಿಕರಣ (೧-೨-೩)

ಕರ್ಮಫಲಭೋಗಾಭಾವನ್ನೈತದ್ವಾಕ್ಯಪ್ರತಿಪಾದ್ಯತ್ವಂ' ಇತ್ಯಾದಿ ಟೀಕೆಯನ್ನು ವಿವರಿಸುವುದಕ್ಕಾಗಿ 'ನಚ' ಎಂಬಲ್ಲಿಂದ ಪ್ರಾರಂಭಿಸಿ ''ಪುಣ್ಯಮೇವಾಮುಂ ಗಚ್ಛತಿ'' ಎಂಬಲ್ಲಿಯ ತನಕದ ಗ್ರಂಥವು ಹೊರಟಿದೆ. ಮೊದಲು ಅಭೋಕ್ತೃತ್ವ ಪಕ್ಷವನ್ನು ನಿರಾಕರಿಸಿದ್ದಾರೆ.

ಪ್ರಕಾಶಃ – ಏತದಿತಿ । ಷಟ್ಪ್ರಶ್ನೋಪನಿಷದಿ ಚತುರ್ಥಪ್ರಶ್ನೇ ''ಪರೇ ಆತ್ಮನಿ'' ಇತಿ ಪರತ್ವವಿಶೇಷಣೇನ ಪರಮಾತ್ಮಾನಮೇವ ಪರಾಮೃಶ್ಯ ದ್ರಷ್ಟೃತ್ವಾದೇರುಕ್ತೇರಿತ್ಯರ್ಥಃ । ''ಅಹಂ ಹಿ'' ಇತಿ ವಾಕ್ಯೇ ಅಹಮಿತಿ ಕೃಷ್ಣೇನ ಪ್ರಯುಕ್ತತ್ವಾತ್ ಬ್ರಹ್ಮವಿಷಯತ್ವಂ ಸಿದ್ಧಮಿತಿ ಟೀಕೋಕ್ತದ್ವಿತೀಯಸ್ಮೃತೇಸ್ತತ್ಸಾಧಯತಿ – **ನಚೇತಿ ।** ಉಭಯತ್ರಾऽऽದಿಪದೇನ,

ಗೃಹೀತ್ವೈತಾನಿ ಸಂಯಾತಿ ವಾಯುರ್ಗನ್ಧಾನಿವಾऽऽಶಯಾತ್ ।

ಇತಿ ''ಯತನ್ತೋऽಪ್ಯಕೃತಾತ್ಮನೋ ನೈನಂ ಪಶ್ಯನ್ತಿ'' ಇತ್ಯಾದೇರ್ಗ್ರಹಃ ।

'ಏತತ್' ಎಂದರೆ ಷಟ್ಪ್ರಶ್ನೋಪನಿಷತ್ತಿನ ಚತುರ್ಥ ಪ್ರಶ್ನೆಯಲ್ಲಿ 'ಪರೇ ಆತ್ಮನಿ' ಎಂಬುದಾಗಿ ಆತ್ಮನನ್ನು ಪರತ್ವವನ್ನು ವಿಶೇಷಣತ್ವವನ್ನು ಹೇಳಿದ್ದರಿಂದ ಪರಮಾತ್ಮನನ್ನೇ ವಿವಕ್ಷಿಸಬೇಕು. ಇಂತಹ ಪರಮಾತ್ಮನನ್ನೇ ಪರಾಮರ್ಶಿಸಿ ಶ್ರುತಿಯು ದ್ರಷ್ಟೃತ್ವ, ಸ್ರಷ್ಟೃತ್ವ ಮೊದಲಾದವುಗಳನ್ನು ಹೇಳುತ್ತಿದೆ. 'ಅಹಂ ಹಿ ಸರ್ವಯಜ್ಞಾನಾಂ' ಎಂಬುದಾಗಿ ಶ್ರೀಕೃಷ್ಣಪರಮಾತ್ಮನೇ ಹೇಳಿದ್ದರಿಂದ ಈ ವಾಕ್ಯವು ಬ್ರಹ್ಮವಿಷಯಕವೆಂದು ಸಿದ್ಧವಾಗುತ್ತದೆ. ಆದ್ದರಿಂದಲೇ 'ಶ್ರೋತ್ರಂ ಚಕ್ಷುಃ' ಎಂಬ ಮತ್ತೊಂದು ಗೀತಾ ವಾಕ್ಯವೂ ಸಹ ಪರಬ್ರಹ್ಮವಿಷಯಕವಾಗಿದೆ ಎಂದು ವಿವಕ್ಷಿಸಿ 'ನಚ ಶ್ರೋತ್ರಂ' ಇತ್ಯಾದಿ ವಾಕ್ಯವು ಹೊರಟಿದೆ. ಎರಡೂ ಕಡೆ ಇರುವ ಆದಿಪದದಿಂದ 'ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾऽऽಶಯಾತ್' ಎಂಬುದನ್ನು ಮತ್ತು ''ಯತಂತೋऽಪ್ಯಕೃತಾತ್ಮನೋ ನೈನಂ ಪಶ್ಯಂತಿ'' ಎಂಬುದನ್ನೂ ಸಹ ಸ್ವೀಕರಿಸಬೇಕು.

ಪ್ರಕಾಶಃ – ಏತದ್ವಾಕ್ಯೋಕ್ತಿಸ್ತು ಭೋಗಸ್ಯೇನ್ದ್ರಿಯಸಾಧ್ಯತ್ವಾತ್ಕಥಮೀಶ್ವರಸ್ಯ ಭೋಗ ಇತಿ ಶಙ್ಕಾನ್ಯುದಾಸಾಯೇತಿ ಬೋಧ್ಯಮ್ । ಉಕ್ತಞ್ಚ ಚ್ಛಾನ್ದೋಗ್ಯಭಾಷ್ಯೇऽಷ್ಟಮಾಧ್ಯಾಯಾನ್ತೇ –

''ಭೂತೈರ್ಮಹದ್ಭಿರ್ಯ ಇಮಾಃ ಪುರೋ ವಿಭುರ್ನಿರ್ಮಾಯ ಶೇತೇ ಯದಮೂಷು ಪೂರುಷಃ ।
ಭುಙ್ಕ್ತೇ ಗುಣಾನ್ ಷೋಡಶ ಷೋಡಶಾತ್ಮಕಸ್ಸೋऽಲಙ್ಕಷೀಷ್ಟ ಭಗವಾನ್ವಚಾಂಸಿ ಮೇ ।।

ಇತ್ಯಾದೌ ಭಗವತ ಏವೇನ್ದ್ರಿಯೈರ್ಭೋಗೋಕ್ತೇಶ್ಚ ।

ಋತಂ ಪಿಬನ್ತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ।।

ಇತಿ ಚ'' ಇತ್ಯಾದಿ ।

ಭೂತೈರ್ಮಹದ್ಭಿರ್ಯ ಇಮಾಃ ಪುರೋ ವಿಭುರ್ನಿರ್ಮಾಯ ಶೇತೇ ಯದಮೂಷು ಪೂರುಷಃ।
'ಭುಂಕ್ತೇ ಗುಣಾನ್ ಷೋಡಶ ಷೋಡಶಾತ್ಮಕಸ್ತೋಽಲಂಕೃಷೀಷ್ಟ ಭಗವಾನ್ವಚಾಂಸಿ ಮೇ॥

ಸರ್ವಸಮರ್ಥನಾದ ಪರಮಾತ್ಮನು ಪಂಚ ಮಹಾಭೂತಗಳಿಂದ ಸಕಲಜೀವರ ಶರೀರಗಳನ್ನು ಸೃಷ್ಟಿ ಮಾಡಿದನು. ಅನಂತರ ಅವರ ಶರೀರದಲ್ಲಿ ಸುಖವಾಗಿ ವಾಸ ಮಾಡುವುದರಿಂದ 'ಪುರುಷಃ' ಎಂದು ಪ್ರಸಿದ್ಧನಾದನು. ಇಂತಹ ಪರಮಾತ್ಮನು ಹತ್ತು ಬಾಹ್ಯೇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಚೇತನಗಳೆಂಬ ಐದು ಅಂತಃಕರಣಗಳು ಹಾಗೂ ಸಾಕ್ಷಿ ಹೀಗೆ ಒಟ್ಟು ಹದಿನಾರು ಇಂದ್ರಿಯಗಳನ್ನು ವ್ಯಾಪಿಸಿ ಅವುಗಳಿಂದ ಗ್ರಾಹ್ಯವಾದ ಹದಿನಾರು ವಿಧವಾದ ವಿಷಯಗಳನ್ನು ಉಪಭೋಗಿಸುತ್ತಾನೆ. ಈ ಪರಮಾತ್ಮನು ನನ್ನ ಮಾತುಗಳನ್ನು ಆಕರ್ಷಕವನ್ನಾಗಲಿ ಮಾಡಲಿ.

ಈ ಭಾಗವತದಲ್ಲಿ ಶುಕಮುನಿಗಳು ಹೇಳುವ ಮಾತಿನಲ್ಲಿ ಪರಮಾತ್ಮನಿಗೂ ಸಹ ಇಂದ್ರಿಯಗಳ ಮೂಲಕ ವಿಷಯಭೋಗವಿದೆಯೆಂದು ತಿಳಿಯುತ್ತದೆ. ಆದ್ದರಿಂದ ಪರಮಾತ್ಮನಿಗೆ ವಿಷಯಭೋಕ್ತೃತ್ವವನ್ನು ಹೇಳಲು ಬಾಧಕವಿರುವುದಿಲ್ಲ.

ಮತ್ತು 'ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ಇತಿ ಚ' ಪುಣ್ಯದಿಂದ ನಿರ್ಮಾಣಗೊಂಡ ಜೀವನ ಶರೀರದ ಹೃದಯಗುಹೆಯಲ್ಲಿ 'ಆತ್ಮ' ಹಾಗೂ 'ಅಂತರಾತ್ಮ' ಎಂಬ ಎರಡು ಪರಮಾತ್ಮನ ರೂಪಗಳು ನೆಲೆಸಿವೆ. ಈ ರೂಪಗಳು ಜೀವೋತ್ತಮರಾದ ಪ್ರಾಣದೇವರಲ್ಲಿದ್ದು ಪುಣ್ಯದ ಫಲವನ್ನು ಉಪಭೋಗಿಸುತ್ತಿವೆಯೆಂದು ಶ್ರುತಿಯು ಸಾರುತ್ತಿದೆ. ಈ ಕಾರಣದಿಂದಲೂ ಭಗವಂತನಿಗೆ ವಿಷಯಭೋಗವಿದೆಯೆಂದು ಸಿದ್ಧವಾಗುತ್ತದೆ.

ಪ್ರಕಾಶಃ – ಈಶ್ವರಸ್ಯ ಭೋಕ್ತೃತ್ವೋಕ್ತಾವನಶನಶ್ರುತಿವಿರೋಧ ಇತ್ಯತ ಆಹ – ಅನಶ್ನನ್ನಿತಿ । 'ಅಶುಭಭೋಗಾಭಾವವಿಷಯೆ'' ಇತ್ಯನ್ವಯಃ । ಕುತಃ ಸಙ್ಕೋಚ ? ಇತ್ಯತಃ ''ಅಸದ್ವ್ಯಪದೇಶಾನ್ನೇತಿ ಚೇನ್ನ ಧರ್ಮಾನ್ತರೇಣ ವಾಕ್ಯಶೇಷಾತ್'' ಇತಿ ನ್ಯಾಯೇನ ಟೀಕೋಕ್ತವಾಕ್ಯಶೇಷಬಲಾದಿತಿ ಭಾವೇನ ತಮಾಹ – ತಸ್ಯೇತಿ ।

ಈ ಎಲ್ಲಾ ಪ್ರಮಾಣಗಳ ಆಧಾರದಿಂದ ಈಶ್ವರನಿಗೆ ಭೋಕ್ಷೃತ್ವವನ್ನು ಹೇಳಿದರೆ 'ಅನಶ್ನನ್ನನ್ಯಃ' ಎಂಬ ಶ್ರುತಿವಿರೋಧವು ಬರುತ್ತದೆ ಅಲ್ಲವೇ? ಎಂಬ ಪ್ರಶ್ನೆಗೆ 'ಅನಶ್ನನ್ನನ್ಯಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಅನಶ್ನನ್ನನ್ಯಃ' ಎಂಬುದಕ್ಕೆ 'ಅಶುಭಭೋಗಾಭಾವವಿಷಯಂ' ಎಂಬಲ್ಲಿ ಅನ್ವಯ. ಹೀಗೆ ಶ್ರುತಿಗೆ ಸಂಕೋಚ ಮಾಡಲು ಏನು ಕಾರಣ ? ಎಂಬ ಪ್ರಶ್ನೆಗೆ ''ಅಸದ್ವ್ಯಪದೇಶಾನ್ನೇತಿ ಚೇನ್ನ ಧರ್ಮಾಂತರೇಣ ವಾಕ್ಯಶೇಷಾತ್'' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಮತ್ತು ಟೀಕೆಯಲ್ಲಿ ಉಕ್ತವಾದ ವಾಕ್ಯಶೇಷದ ಬಲದಿಂದ ಸಂಕೋಚ ಮಾಡಬೇಕೆಂದು 'ತಸ್ಯ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – ಆಥರ್ವಣೇಽಸ್ಯಾಶ್ರವಣೇಽಪಿ ಋಕ್ಶಾಖಾಯಾಮಸ್ತಿ ಶ್ರವಣಾಮಿತಿ ಭಾವಃ ।

ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ ತನ್ನೋ ನಶದ್ಯಃ ಪಿತರಂ ನ ವೇದ ।
ಗುಹಾಧಿಕರಣ (೧-೨-೩)

ಇತಿ ವಾಕ್ಯಶೇಷೆ, ಯಃ 'ಅಗ್ರೆ' ಅಗ್ರಚಃ ಶ್ರೇಷ್ಠಃ ತಸ್ಯೈವ ಸ್ವಾದು 'ಪಿಪ್ಪಲಂ' ಕರ್ಮಫಲಮಾಹ್ಯಃ, ಯಃ ಪಿತರಂ ನ ವೇದ, ಅತ ಏವ 'ನಶತ್' ನಾಶವಾನ್ ತಸ್ಯ ಸ್ವಾದು ಪಿಪ್ಪಲಂ ನೇತಿ ಹರೇರೆವ ಸುಖಭೋಕ್ತೃತ್ವೋಕ್ತೇರಿತ್ಯರ್ಥಃ ।

ಆಥರ್ವಣದಲ್ಲಿಯೂ ಸಹ ಋಕ್‌ಶಾಖೆಯಲ್ಲಿ ಭೋಕ್ತೃತ್ವ ಕೇಳಿಸುತ್ತಿದೆ ಎಂದು ಹೇಳಲಾಗಿದೆ.

ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ ತನ್ನೋ ನಶದ್ಯಃ ಪಿತರಂ ನ ವೇದ।

ಸರ್ವೋತ್ತಮನಾದ ಪರಮಾತ್ಮನೇ ಜೀವನು ಮಾಡುವ ಸತ್ಕರ್ಮಗಳ ಸಾರಕ್ಕೆ ಭೋಕ್ತೃವಾಗಿದ್ದಾನೆ. ''ತಂದೆಯಾದ ಪರಮಾತ್ಮನನ್ನು ತಿಳಿಯದೆ ಜೀವನು ನಾಶ ಹೊಂದುತ್ತಿದ್ದಾನೆ'' ಎಂಬ ವಾಕ್ಯಶೇಷದಲ್ಲಿ ಯಾರು ಶ್ರೇಷ್ಠನಾಗಿದ್ದಾನೋ ಅವನಿಗೆ ಶುಭಕರ್ಮಫಲಭೋಗವನ್ನು ಹೇಳಲಾಗಿದೆ. ಮತ್ತು ಯಾರು ತಂದೆಯನ್ನು ತಿಳಿಯಲಾರನೋ ಅಂತಹ ಜೀವನು ನಾಶಹೊಂದುತ್ತಾನೆಂದು ಹೇಳಿದ್ದರಿಂದ ಭಗವಂತನಿಗೆ ಮಾತ್ರ ಸುಖಭೋಕ್ತೃತ್ವವನ್ನು ಹೇಳಿದಂತಾಗುತ್ತದೆ.

ಪ್ರಕಾಶಃ – ನನು ಶ್ರುತಿತ್ವಾವಿಶೇಷಾದ್ಭೋಕ್ತೃತ್ವಶ್ರುತೇರೆವಾರ್ಥಾನ್ತರಮಸ್ತಿತ್ವತ್ಯತೊ ಗೀತಾಭಾಷ್ಯೋಕ್ತಮಾಹ – **ತಥೇತಿ** । 'ಶ್ರುತ್ಯನ್ತರೇ' ವಾಜಸನೇಯೆ ಷಷ್ಠಾಧ್ಯಾಯೆ ದ್ವಿತೀಯಬ್ರಾಹ್ಮಣೆ ''ಇನ್ಧೋ ಹ ವೈ ನಾಮೈಷ ಯೋऽಯಂ ದಕ್ಷಿಣೇऽಕ್ಷನ್ ಪುರುಷಃ'' ಇತಿ ಪ್ರಕೃತಸ್ಯ ಪರಮಾತ್ಮನಃ ''ತಸ್ಮಾದೇಷ ಪ್ರವಿವಿಕ್ತಾಹಾರತರ ಇವೈ ಭವತ್ಯಸ್ಮಾಚ್ಚಾರೀರಾದಾತ್ಮನಃ'' ಇತಿ ಶಾರೀರಶಬ್ದಿತ-ಜೀವಾಹಾರಾದ್ವಿಭಕ್ತಾಹಾರವತ್ತ್ವೋಕ್ತೇರಿತ್ಯರ್ಥಃ ।

ಅವತಾರೇಷು ಸ್ಥೂಲಮಪಿ ಭುಙ್ಕ ಇತೀವಶಬ್ದಃ ।

'ಅನಶ್ನನ್ನನ್ಯಃ' ಎಂಬುದು ಮತ್ತು ಭೋಕ್ತೃತ್ವ ಎಂಬುದು ಎರಡೂ ಶ್ರುತಿಯೇ ಆಗಿರುವುದರಿಂದ ಭೋಕ್ತೃತ್ವ ಶ್ರುತಿಗೆ ಸಂಕೋಚಾರ್ಥವನ್ನು ಮಾಡಿ 'ಅನಶ್ನನ್' ಎಂಬ ಶ್ರುತಿಗೆ ನೇರವಾದ ಅರ್ಥವನ್ನು ಹೇಳಬಹುದಲ್ಲವೆ ? ಎಂಬ ಪ್ರಶ್ನೆಗೆ ಗೀತಾಭಾಷ್ಯದಲ್ಲಿ ಹೇಳಿದ ವಿಚಾರವನ್ನು ಉತ್ತರವನ್ನಾಗಿ 'ತಥಾ' ಇತ್ಯಾದಿ ವಾಕ್ಯದಿಂದ ನಿರೂಪಿಸುತ್ತಿದ್ದಾರೆ. 'ಶ್ರುತ್ಯಂತರೇ' ಎಂದರೆ ಬೃಹದಾರಣ್ಯೋಕೋಪನಿಷತ್ತಿನಲ್ಲಿ ಎಂದರ್ಥ. ಬೃಹದಾರಣ್ಯಕದ ಆರನೇ ಅಧ್ಯಾಯದ ಎರಡನೇ ಬ್ರಾಹ್ಮಣದಲ್ಲಿ ''ಇಂಧೋ ಹ ವೈ ನಾಮೈಷ ಯೋऽಯಂ ದಕ್ಷಿಣೇऽಕ್ಷನ್ ಪುರುಷಃ'' ಎಂದು ಪ್ರಕೃತನಾದ ಪರಮಾತ್ಮನಿಗೆ ''ತಸ್ಮಾದೇಷ ಪ್ರವಿವಿಕ್ತಾಹಾರತರ'' ಎಂದು ಶಾರೀರಶಬ್ದದಿಂದ ಪ್ರಕೃತನಾದ ಜೀವನ ಆಹಾರಕ್ಕಿಂತ ವಿಲಕ್ಷಣವಾದ ಆಹಾರವನ್ನು ಭಗವಂತನಿಗೆ ಹೇಳಲಾಗಿದೆ. ಅವತಾರ ರೂಪಗಳಲ್ಲಿ ಸ್ಥೂಲಪದಾರ್ಥಗಳನ್ನೂ ಸಹ ಭೋಗಿಸುವಂತೆ ನಟಿಸುತ್ತಾನೆಂದು ತಿಳಿಸಲು ಇವ ಶಬ್ದವನ್ನು ಪ್ರಯೋಗಿಸಲಾಗಿದೆ.

ಪ್ರಕಾಶಃ – ನಚ ಪ್ರವಿವಿಕ್ತಾಹಾರೊ ಜೀವ ಏವೇತಿ ವಾಚ್ಯಂ, ತಸ್ಯ 'ಶಾರೀರಾತ್' ಇತಿ ಜೀವಾಭೇದೋಕ್ತೇಃ । ನಚ ಶಾರೀರಾಜಾಗರಾವಸ್ಥಾಜೀವಾತ್ಸ್ವಪ್ನಸುಷುಪ್ತ್ಯವಸ್ಥಸ್ಯ ಏವ

प्रविविक्ताहार इत्यवस्था भेदोपाधिकं जीवस्य भेदमङ्गीकृत्य व्याख्यायतामिति वाच्यं, स्वप्नसुषुप्त्यवस्थितस्यापि शारीरत्वेन शारीरशब्देनैव गृहीततया ततो भेदायोगात् ।

शारीरस्य त्रिधा भिन्नो जाग्रदादिष्ववस्थितेः ।

इति गारुडोक्तेः ।

ಪ್ರಶ್ನೆ - ಜೀವನ ಆಹಾರಕ್ಕಿಂತ ವಿಲಕ್ಷಣವಾದ ಆಹಾರವನ್ನು ಪರಮಾತ್ಮನು ತಿನ್ನುತ್ತಾನೆಂದು ಹೇಳುವುದಕ್ಕಿಂತ ಪರಮಾತ್ಮನ ಆಹಾರಕ್ಕಿಂತ ವಿಲಕ್ಷಣವಾದ ಆಹಾರವನ್ನು ಜೀವನೇ ತಿನ್ನುತ್ತಾನೆಂದು ಏಕೆ ಹೇಳಬಾರದು?

ಉತ್ತರ - ಹೀಗೆ ಪ್ರಶ್ನಿಸಬಾರದು. ಶ್ರುತಿಯಲ್ಲಿ 'ಶಾರೀರಾತ್' ಎಂಬ ಪದವನ್ನು ಹೇಳುವ ಮೂಲಕ ಜೀವನಿಗಿಂತ ಭೇದವು ತಿಳಿಯುತ್ತದೆ. ಆದ್ದರಿಂದ ಪರಮಾತ್ಮನಲ್ಲಿಯೇ ವಿಲಕ್ಷಣ ಆಹಾರವನ್ನು ಹೇಳಬೇಕು.

ಪ್ರಶ್ನೆ - 'ಶಾರೀರಾತ್' ಎಂಬ ಪದಕ್ಕೆ ಜಾಗ್ರದವಸ್ಥೆಯಲ್ಲಿರುವ ಜೀವನೆಂದರ್ಥ. ಆದ್ದರಿಂದ ಜಾಗ್ರದವಸ್ಥೆಯಲ್ಲಿರುವ ಜೀವನು ಉಪಭೋಗಿಸುವ ಆಹಾರಕ್ಕಿಂತ ವಿಲಕ್ಷಣವಾದ ಆಹಾರವನ್ನು ಸ್ವಪ್ನಾವಸ್ಥೆಯಲ್ಲಿರುವ ಜೀವನು ಉಪಭೋಗಿಸುತ್ತಾನೆಂದು ಅರ್ಥೈಸಬಹುದಲ್ಲವೇ?

ಉತ್ತರ - ಇದೂ ಸಹ ತಪ್ಪು. ಸ್ವಪ್ನಾವಸ್ಥೆಯಲ್ಲಿರುವ ಜೀವನೂ ಸಹ ಶಾರೀರನೇ ಆಗಿದ್ದಾನೆ. ಆದ್ದರಿಂದ ಶಾರೀರ ಶಬ್ದದಿಂದ ಜಾಗ್ರತಾವಸ್ಥೆಯಲ್ಲಿರುವ ಜೀವನು ವಿವಕ್ಷಿತನಾದಂತೆ ಸ್ವಪ್ನಾವಸ್ಥೆಯಲ್ಲಿರುವ ಜೀವನೂ ಸಹ ವಿವಕ್ಷಿತನಾಗುತ್ತಾನೆ. ಇಂತಹ ಜೀವನಲ್ಲಿ ತನ್ನಿಂದ ಭೇದವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ 'ಶಾರೀರಸ್ಯ ತ್ರಿಧಾ ಭಿನ್ನೋ ಜಾಗ್ರದಾದಿಷ್ವವಸ್ಥಿತೇಃ ।' ಎಂಬುದಾಗಿ ಜಾಗ್ರದಾದಿವಸ್ಥೆಯಲ್ಲಿರುವ ಜೀವನು ಒಬ್ಬನೇ ಆಗಿದ್ದಾನೆಂದು ಗರುಡಪುರಾಣದ ಮಾತಿನಿಂದ ತಿಳಿಯುತ್ತದೆ.

प्रकाशः – नन्ववस्थात्रयवतः शारीरत्वेऽपि 'अस्मात्' इति विशेषणादत्र जागरावस्थो गृह्यते । तस्माच्च भेदः स्वप्नावस्थस्योक्तविधया सम्भवति । अन्यथा 'अस्मात्' इति व्यर्थमिति चेन्न,

शारीरौ तावुभौ ज्ञेयौ जीवेशेश्वरसंज्ञितौ ।

इत्यादिस्मृत्येश्वरस्यापि शारीरत्वेन तद्व्यावृत्त्यर्थत्या 'अस्मात्' इत्यस्य सार्थक्यादिति । व्यक्तमेतद्गीताभाष्ये सप्तमेऽध्याये – ''न चात्र जीव उच्यते'' इत्यादिनेति भावः ।

ಗರುಡಪುರಾಣದ ಮಾತಿನಂತೆ ಮೂರು ಅವಸ್ಥೆಯಲ್ಲಿರುವ ಜೀವನನ್ನು ಶಾರೀರನೆಂದು ಹೇಳಿದರೆ 'ಅಸ್ಮಾತ್' ಎಂಬ ವಿಶೇಷಣವು ವ್ಯರ್ಥವಾಗುತ್ತದೆ. ಆದ್ದರಿಂದ ಜಾಗ್ರದವಸ್ಥೆಯಲ್ಲಿರುವ ಜೀವನನ್ನೇ 'ಅಸ್ಮಾತ್'

ಎಂಬ ವಿಶೇಷಣದಿಂದ ಸ್ವೀಕರಿಸಬೇಕು. ಆದ್ದರಿಂದ ಸ್ವಪ್ನಾವಸ್ಥೆಯಲ್ಲಿರುವ ಜೀವನು ಜಾಗ್ರದವಸ್ಥಾದಲ್ಲಿರುವ ಜೀವನಿಗಿಂತ ವಿಲಕ್ಷಣವಾದ ಆಹಾರವನ್ನು ಸೇವಿಸುತ್ತಾನೆಂದು ಹೇಳಬಹುದು. ಇಲ್ಲದಿದ್ದರೆ 'ಅಸ್ಮಾತ್' ಎಂಬ ವಿಶೇಷಣವೇ ವ್ಯರ್ಥವಾಗುದತ್ತಲ್ಲವೆ?

ಉತ್ತರ - 'ಅಸ್ಮಾತ್' ಎಂಬ ವಿಶೇಷಣವನ್ನು ಉಲ್ಲೇಖಿಸಲು ಬೇರೆ ಕಾರಣವಿದೆ. ''ಶಾರೀರೌ ತಾವುಭೌ ಜ್ಞೇಯೌ ಜೀವಶ್ಚೇಶ್ವರಸಂಜ್ಞೌ'' ಎಂಬ ಸ್ಮೃತಿಯಿಂದ ಈಶ್ವರನೂ ಸಹ ಶಾರೀರನೆಂದು ಹೇಳಲ್ಪಟ್ಟಿದ್ದಾನೆ. ಇಂತಹ ಈಶ್ವರನನ್ನು ವ್ಯಾವೃತ್ತಿ ಮಾಡುವುದಕ್ಕಾಗಿ 'ಅಸ್ಮಾತ್' ಎಂಬ ವಿಶೇಷಣವು ಸಾರ್ಥಕವಾಗಿದೆ. ಗೀತಾ ಭಾಷ್ಯದ ಸಪ್ತಮಾಧ್ಯಾಯದಲ್ಲಿ ''ನ ಚಾತ್ರ ಜೀವ ಉಚ್ಯತೇ'' ಜೀವನು ಇಲ್ಲಿ ಪ್ರತಿಪಾದ್ಯನಾಗಿಲ್ಲ ಎಂಬುದಾಗಿ ಈ ವಿಷಯವು ಸ್ಪಷ್ಟವಾಗಿದೆ.

प्रकाशः – नन्वानन्दमयनयाद्युक्तदिशा पूर्णानन्दस्य हरेः किं कर्मफलभोगेनेत्यतः, श्रुत्यर्थसङ्कोचबीजस्मृतीराह – तथेति ।

शुभं पिबत्यसौ नित्यं नाशुभं स हरिः पिबेत् ।
पूर्णानन्दमयस्यास्य चेष्टा न ज्ञायते क्वचित् ।
आत्माऽन्तरात्मेति हरिः एक एव द्विधा स्थितः ।
निविष्टो हृदये नित्यं रसं पिबति कर्मजम् ।।
शुभान् पिबति भोगान् स च्छायेव विदुषां प्रभुः ।

इत्यादिस्मृतिभिरित्यर्थः ।

ಪ್ರಶ್ನೆ - ಆನಂದಮಯಾಧಿಕರಣದಲ್ಲಿ ಹೇಳಿದ ಪ್ರಕಾರ ಪೂರ್ಣಾನಂದಸ್ವರೂಪಿಯಾದ ಶ್ರೀಹರಿಗೆ ಕರ್ಮಫಲಭೋಗದಿಂದ ಆಗಬೇಕಾದದ್ದು ಏನೂ ಇಲ್ಲ. ಆದ್ದರಿಂದ ಪ್ರಕೃತ ಕರ್ಮಫಲಭೋಗವನ್ನು ಹೇಳುವುದರಿಂದ ಏನು ಪ್ರಯೋಜನ ?

ಉತ್ತರ - ಪೂರ್ಣಾನಂದ ಸ್ವರೂಪಿಯಾದರೂ ಸಹ ಕರ್ಮಫಲಭೋಗವನ್ನು ಅವನಿಗೆ ಹೇಳಿ 'ಅನಶ್ನನ್' ಎಂಬ ಶ್ರುತ್ಯರ್ಥವನ್ನು ಸಂಕೋಚ ಮಾಡಬೇಕು. ಈ ವಿಷಯದಲ್ಲಿ ಇದಕ್ಕೆ ಪೂರಕವಾದ ಸ್ಮೃತಿಗಳನ್ನು 'ತಥಾ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಶುಭಂ ಪಿಬತ್ಯಸೌ ನಿತ್ಯಂ ನಾಶುಭಂ ಸ ಹರಿಃ ಪಿಬೇತ್ ।
ಪೂರ್ಣಾನಂದಮಯಸ್ಯಾಸ್ಯ ಚೇಷ್ಟಾ ನ ಜ್ಞಾಯತೇ ಕ್ವಚಿತ್ ।
ಆತ್ಮಾಂತರಾತ್ಮೇತಿ ಹರಿಃ ಏಕ ಏವ ದ್ವಿಧಾ ಸ್ಥಿತಃ।
ನಿವಿಷ್ಟೋ ಹೃದಯೇ ನಿತ್ಯಂ ರಸಂ ಪಿಬತಿ ಕರ್ಮಜಮ್ ॥
ಶುಭಾನ್ ಪಿಬತಿ ಭೋಗಾನ್ ಸ ಚ್ಛಾಯೇವ ವಿದುಷಾಂ ಪ್ರಭುಃ।

ಪರಿಪೂರ್ಣಚಂದ್ರಿಕಾ

ಶ್ರೀಹರಿಯು ಶುಭಕರ್ಮಫಲವನ್ನಷ್ಟೇ ತಿನ್ನುತ್ತಾನೆ. ಅಶುಭಫಲವನ್ನು ಎಂದೂ ತಿನ್ನಲಾರ. ಪೂರ್ಣಾನಂದ ಸ್ವರೂಪಿಯಾದವನ ಚೇಷ್ಟೆಯನ್ನು ತಿಳಿಯಲು ಯಾರಿಗೂ ಸಾಧ್ಯವಿಲ್ಲ. ಇಂತಹ ಪರಮಾತ್ಮನು 'ಆತ್ಮಾ' ಹಾಗೂ 'ಅಂತರಾತ್ಮ' ಎಂಬ ಎರಡು ರೂಪಗಳನ್ನು ಧರಿಸಿ ಪ್ರತಿಯೊಬ್ಬ ಜೀವರ ಶರೀರದಲ್ಲಿ ಪ್ರವೇಶಿಸಿದ್ದಾನೆ. ಮತ್ತು ಜೀವರು ಮಾಡುವ ಸತ್ಕರ್ಮಗಳ ಫಲವನ್ನು ಸ್ವತಃ ತಾನೇ ಉಣ್ಣುತ್ತಾನೆ. ಇವೇ ಮೊದಲಾದ ಸ್ಮೃತಿಗಳಿಂದ ಎಂದರ್ಥ.

ಪ್ರಕಾಶಃ – ಶ್ರುತೇಃ ಪ್ರಥಮಸ್ಕನ್ಧತಾತ್ಪರ್ಯೋಕ್ತವಿಷಯಾನ್ತರಂ ಚಾಹ – **ಅನ್ಯೂನೇತಿ** । ಭೋಗೇऽಭೋಗೇ ಚೇತ್ಯರ್ಥಃ । **ಇತ್ಯಾದಿಸ್ಮೃತಿಭಿರಿತಿ** ।।

ಪ್ರವಿವಿಕ್ತಭುಗ್ಯತೋ ಹ್ಯಸ್ಮಾಚ್ಚಾರೀರಾತ್ಪುರುಷೋತ್ತಮಃ ।
ಅತೋऽಭೋಕ್ತಾ ಚ ಭೋಕ್ತಾ ಚ ಸ್ಥೂಲಭೋಗಾತ್ಸ ಏವ ತು ।।

ಇತ್ಯಾದಿಸ್ಮೃತಿರಾದಿಪದಾರ್ಥಃ । **ಅಶುಭೇತಿ** । ಜೀವವದ್ರಾಗಪೂರ್ವಕೋಪಜೀವನಾರ್ಥೆ ಭೋಗಾಭಾವವಿಷಯಂ ಚೇತ್ಯಪಿ ಬೋಧ್ಯಮ್ ।

'ಅನಶ್ನನ್' ಎಂಬ ಶ್ರುತಿಗೆ ಸಂಕೋಚಮಾಡಿ ಅರ್ಥೈಸಲು ಮತ್ತೊಂದು ಕಾರಣವಿದೆಯೆಂದು ಪ್ರಥಮಸ್ಕಂಧ ತಾತ್ಪರ್ಯದಲ್ಲಿ ಹೇಳಲ್ಪಟ್ಟ ವಿಷಯಾಂತರವನ್ನು 'ಅನ್ಯೂನ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. ಭಗವಂತನು ಭೋಗ ಮಾಡುವುದುದರಿಂದ ಅವನಲ್ಲಿ ಆಧಿಕ್ಯವು ಬರುವುದಿಲ್ಲ. ಭೋಗ ಮಾಡದಿರುವುದರಿಂದ ನ್ಯೂನತೆಯೂ ಬರುವುದಿಲ್ಲವೆಂದು ತಿಳಿಯಬೇಕು. 'ಇತ್ಯಾದಿಸ್ಮೃತಿಭಿಃ' ಎಂಬಲ್ಲಿರುವ ಆದಿಪದದಿಂದ

ಪ್ರವಿವಿಕ್ತಭುಗ್ಯತೋ ಹ್ಯಸ್ಮಾಚ್ಚಾರೀರಾತ್ಪುರುಷೋತ್ತಮಃ।
ಅತೋऽಭೋಕ್ತಾ ಚ ಭೋಕ್ತಾ ಚ ಸ್ಥೂಲಾಭೋಗಾತ್ಸ ಏವ ತು॥

ಜೀವನಿಗಿಂತ ವಿಲಕ್ಷಣವಾದ ಆಹಾರವನ್ನು ಭೋಗಿಸುವುದರಿಂದ 'ಭೋಕ್ತಾ' ಎನಿಸಿದ್ದಾನೆ. ಸ್ಥೂಲವಾದ ಆಹಾರವನ್ನು ಭೋಗಮಾಡದೇ ಇರುವುದರಿಂದ 'ಅಭೋಕ್ತೆ' ಎನಿಸಿದ್ದಾನೆ ಎಂಬ ಸ್ಮೃತಿಯನ್ನು ವಿವಕ್ಷಿಸಬೇಕು, 'ಅಶುಭಭೋಗಸ್ಸ್ಯೈವ ನಿಷೇಧಾತ್' ಎಂಬ ಗ್ರಂಥಕ್ಕೆ ಜೀವನಂತೆ ಭಗವಂತನು ರಾಗಪೂರ್ವಕವಾಗಿ ಉಪಜೀವನಕ್ಕೋಸ್ಕರ ಭೋಗವನ್ನು ಹೊಂದಲಾರ ಎಂದೂ ಸಹ ತಿಳಿಯಬೇಕು.

ಪ್ರಕಾಶಃ – **ಋತಮಿತಿ** ।

ಋತಂ ಸತ್ಯಂ ತಥಾ ಧರ್ಮಃ ಸುಕೃತಂ ಚಾಭಿಧೀಯತೇ ।

ಇತಿ ಸಪ್ತಮಗೀತಾಭಾಷ್ಯೋಕ್ತಸ್ಮೃತೇರಿತ್ಯರ್ಥಃ । **ಪುಣ್ಯಮಿತಿ** । ''ಪುಣ್ಯಮೇವಾಮುಂ ಗಚ್ಛತಿ । ನ ಹ ವೈ ದೇವಾನ್ಪಾಪಂ ಗಚ್ಛತಿ'' ಇತಿ ಬೃಹದಾರಣ್ಯಕಶ್ರುತೌ ಪುಣ್ಯಫಲಭೋಗಸ್ಯೈವೋಕ್ತೇರಿತ್ಯರ್ಥಃ ।

ಗ್ರಂಥದಲ್ಲಿ 'ಋತಂ ಸತ್ಯಂ' ಎಂಬ ಶ್ರುತಿಯನ್ನು ಉಲ್ಲೇಖಿಸಿದ್ದಾರೆ. 'ಋತಂ ಸತ್ಯಂ ತಥಾ ಧರ್ಮಃ ಸುಕೃತಂ ಚಾಭಿಧೀಯತೇ' ಎಂಬ ಗೀತಾಭಾಷ್ಯದಲ್ಲಿ ಹೇಳಲ್ಪಟ್ಟ ಸಂಪೂರ್ಣ ಸ್ಮೃತಿಯನ್ನು ವಿವಕ್ಷಿಸಬೇಕು. ಈ ಸ್ಮೃತಿವಾಕ್ಯದಲ್ಲಿ 'ಋತ' ಶಬ್ದಕ್ಕೆ ಪುಣ್ಯಫಲವೆಂಬ ಅರ್ಥವನ್ನು ಹೇಳಲಾಗಿದೆ. ಇದು ಜೀವನಲ್ಲಿ ಕೂಡುವುದಿಲ್ಲವೆಂದು ತಿಳಿಯಬೇಕು. ಮತ್ತು 'ಪುಣ್ಯಮೇವಾಮುಂ ಗಚ್ಛತಿ । ನ ಹ ವೈ ದೇವಾನ್‌ಪಾಪಂ ಗಚ್ಛತಿ' ಎಂಬುದಾಗಿ ಬೃಹದಾರಣ್ಯಕದ ಶ್ರುತಿಯಲ್ಲಿ ಈಶ್ವರನಿಗೆ ಪುಣ್ಯಫಲ ಭೋಗವು ಹೇಳಲ್ಪಟ್ಟಿದೆ ಎಂದು ತಿಳಿಯಬೇಕು.

ಪ್ರಕಾಶಃ – ಯದ್ಯಪ್ಯಮುಂ ಸಪ್ತಾನ್ನವಿದ್ಯಾವೇದಿತಾರಂ ಪುಣ್ಯಮೇವಾಪ್ನೋತಿ ನ ಪಾಪಮಿತ್ಯೇವಾರ್ಥಃ । ಉಕ್ತಞ್ಚ –

ಸಪ್ತಾನ್ನೋಪಾಸನೇ ಯೋಗ್ಯಾ ದೇವಾ ಏವ ತತೋ ಹಿ ಯತ್ ।
ದೇವಾಂಶ್ಚ ಪಾಪಂ ನಾಪ್ನೋತಿ ತಸ್ಮಾತ್ಪಾಪಂ ನ ತಸ್ಯ ತು ।।

ಇತಿ । ತಥಾ ಜ್ಞಾನಪಾದೇ –

ಪುಣ್ಯಮೇವಾಮುಮಾಪ್ನೋತಿ ನ ದೇವಾನ್‌ಪಾಪಮಾಪ್ನುಯಾತ್ ।।

ಇತ್ಯನುವ್ಯಾಖ್ಯಾನಸುಧಾಯಾಂ – **''ಅಮುಂ ಸಪ್ತಾನ್ನವಿದ್ಯೋಪಾಸನೇನ ಪ್ರೇರಕತಯಾ ಪರಪುರಪ್ರವೇಶಿನಂ ಪರಕೃತಂ ಪುಣ್ಯಮೇವಾಪ್ನೋತಿ, ನ ಪಾಪಂ, ಕುತಃ, ದೇವೋ ಹ್ಯಸೌ ಜಾತಃ । ನಹಿ ದೇವಾನ್ ಪಾಪಂ ಪ್ರಾಪ್ನೋತೀತ್ಯರ್ಥಃ''** ಇತ್ಯುಕ್ತಮ್ ।

ಪ್ರಶ್ನೆ - ಗ್ರಂಥಕಾರರು 'ಪುಣ್ಯಮೇವಾಮುಂ' ಎಂಬ ಶ್ರುತಿಯನ್ನು ಪರಮಾತ್ಮನ ಪರವಾಗಿ ಉದಾಹರಿಸಿದ್ದಾರೆ. ಆದರೆ ಸಪ್ತಾನ್ನವಿದ್ಯೆಯನ್ನು ಉಪಾಸನೆ ಮಾಡುವ ಬಗ್ಗೆ ಈ ಶ್ರುತಿಯು ಹೊರಟಿದೆ. ಯಾರು ಸಪ್ತಾನ್ನವಿದ್ಯೆಯನ್ನು ಉಪಾಸನೆ ಮಾಡುತ್ತಾರೋ ಅವರು ಪುಣ್ಯವನ್ನೇ ಹೊಂದುತ್ತಾರೆ ಹೊರತು ಪಾಪವನ್ನು ಹೊಂದಲಾರರೆಂದು ಈ ಶ್ರುತಿಯು ಹೇಳುತ್ತಿದೆ.

ಸಪ್ತಾನ್ನೋಪಾಸನೇ ಯೋಗ್ಯಾ ದೇವಾ ಏವ ತತೋ ಹಿ ಯತ್ ।।

ಸಪ್ತಾನ್ನವಿದ್ಯೆಯನ್ನು ಉಪಾಸನೆ ಮಾಡುವ ಅಧಿಕಾರ, ದೇವತೆಗಳಿಗೆ ಮಾತ್ರವಿರುತ್ತದೆ. ದೇವತೆಗಳಿಗೆ ಎಂದೂ ಸಹ ಪಾಪವು ಬರುವುದಿಲ್ಲ. ಆದ್ದರಿಂದ ಶರೀರದ ಒಳಗಡೆ ಪ್ರವೇಶಿಸಿದ ದೇವತೆಗಳಿಗೆ ಪಾಪಲೇಪವಿಲ್ಲವೆಂದು ಶ್ರುತಿಯು ಹೇಳುತ್ತಿದೆ.

ಮತ್ತು ಜ್ಞಾನ ಪಾದದ ಅನುವ್ಯಾಖ್ಯಾನದಲ್ಲಿ ''ಪುಣ್ಯಮೇವಾಮುಮಾಪ್ನೋತಿ ನ ದೇವಾನ್ ಪಾಪಮಾಪ್ನುಯಾತ್'' ಅಂತರ್ಗತರಾದ ದೇವತೆಗಳು ಪುಣ್ಯವನ್ನಷ್ಟೇ ಹೊಂದುತ್ತಾರೆ ಹೊರತು ಪಾಪವನ್ನು ಹೊಂದಲಾರರೆಂದು ಹೇಳಿದ್ದಾರೆ. ನ್ಯಾಯಸುಧೆಯಲ್ಲಿಯೂ ಸಹ ''ಅಮುಂ ಸಪ್ತಾನ್ನವಿದ್ಯೋಪಾಸನೇನ ಪ್ರೇರಕತಯಾ ಪರಪುರಪ್ರವೇಶಿನಂ ಪರಕೃತಂ ಪುಣ್ಯಮೇವಾಪ್ನೋತಿ, ನ ಪಾಪಂ, ಕುತಃ, ದೇವೋ ಹ್ಯಸೌ

ಜಾತಃ । ನಹಿ ದೇವಾನ್ ಪಾಪಂ ಪ್ರಾಪ್ನೋತೀತ್ಯರ್ಥಂ०'' ಸಪ್ತಾನ್ನ ವಿದ್ಯೆಯನ್ನು ಉಪಾಸನೆ ಮಾಡಿದ್ದರಿಂದ ದೇವತೆಗಳು ಮತ್ತೊಬ್ಬರ ದೇಹದಲ್ಲಿ ಪ್ರೇರಕರಾಗಿ ಪ್ರವೇಶಿಸುತ್ತಾರೆ. ಆದರೆ ಜೀವರು ನಡೆಸುವ ಪುಣ್ಯಪಾಪಗಳಿಗೆಲ್ಲಾ ದೇವತೆಗಳೇ ಹೊಣೆಯಾಗಲಾರರು. ಹೊರತಾಗಿ ಪುಣ್ಯವನ್ನಷ್ಟೇ ಹೊಂದಿ ಪಾಪದಿಂದ ದೂರರಾಗಿಯೇ ಇರುತ್ತಾರೆ. ಏಕೆಂದರೆ ಇವರು ದೇವತೆಗಳ ವರ್ಗದಲ್ಲಿ ಹುಟ್ಟಿದ್ದರಿಂದ ದೇವತೆಗಳನ್ನು ಪಾಪವು ಎಂದೂ ಸಹ ಮುಟ್ಟುವುದಿಲ್ಲ ಎಂದು ಹೇಳಿದ್ದಾರೆ. ಹೀಗಿರುವಾಗ ಗ್ರಂಥಕಾರರು 'ಪುಣ್ಯಮೇವ' ಎಂಬ ಶ್ರುತಿಯನ್ನು ಭಗತ್ಪರವೆಂದು ಹೇಳಿದ್ದು ತಪ್ಪಲ್ಲವೇ?

ಪ್ರಕಾಶಃ – ತಥಾऽಪ್ಯಮುಂ ಸಪ್ತಾನ್ನೋಪಾಸಕಂ ದೇವಮಿತ್ಯರ್ಥಕತ್ವೇನ ದೇವತ್ವಸ್ಯ ಹೇತುತ್ವೋಕ್ತೇರ್ದೇವೋತ್ತಮಂ ಹರಿಂ ಪುಣ್ಯಂ ಗಚ್ಛತಿ, ಪಾಪಂ ತು ನೇತಿ ಕಿಮು ವಾಚ್ಯಮಿತ್ಯಾಶಯೇನೈತದುಕ್ತಿಃ । ಅತ ಏವ ಗೀತಾಭಾಷ್ಯೇ ಸಪ್ತಮೇ – ''ಪುಣ್ಯೋ ಗನ್ಧಃ ಇತಿ ಭೋಗಾಪೇಕ್ಷಯಾ । ತಥಾ ಚ ಶ್ರುತಿಃ ಪುಣ್ಯಮೇವಾಮುಮ್'' ಇತ್ಯಾದಿನಾ ಬ್ರಹ್ಮಪರತಯೇಯಂ ಶ್ರುತಿರುದಾಹೃತಾ, ವ್ಯಾಖ್ಯಾತಾ ಚ ಪ್ರಮೇಯದೀಪಿಕಾಯಾಂ – ''ಅಮುಂ ಉಪಾಸಕಮ್ । ಕುತಃ । ತಸ್ಯ ದೇವತ್ವಾತ್ । ತಥಾऽಪಿ ಕುತಃ । ನ ಹ ವೈ ದೇವಮಾತ್ರಸ್ಯ ಪುಣ್ಯಭೋಗನಿಯಮೇ ದೇವೋತ್ತಮಸ್ಯ ಸುತರಾಂ ತತ್ಸಿದ್ಧಿಃ'' ಇತಿ ।

ಉತ್ತರ - ಸಪ್ತಾನ್ನವಿದ್ಯೆಯನ್ನು ಉಪಾಸನೆ ಮಾಡುವವನನ್ನೇ ಈ ಶ್ರುತಿ ಪ್ರತಿಪಾದಿಸುತ್ತಿದೆ ಎಂದು ಹೇಳಿದ್ದು ತಪ್ಪು. ಸಪ್ತಾನ್ನವಿದ್ಯೆಯನ್ನು ಯಾರು ಉಪಾಸನೆ ಮಾಡುತ್ತಾನೋ ಅವನು ದೇವತೆಯೇ ಆಗಿರುತ್ತಾನೆಂಬುದಾಗಿ ದೇವತ್ವಕ್ಕೆ ಹೇತುರೂಪವಾಗಿ ಈ ವಾಕ್ಯವು ಹೊರಟಿದೆ - ದೇವತೆಯನ್ನೇ ಪಾಪಗಳು ಮುಟ್ಟದಿರುವಾಗ ದೇವೋತ್ತಮನಾದ ಶ್ರೀಹರಿಯನ್ನು ಪುಣ್ಯವು ಮುಟ್ಟುತ್ತದೆ ಹೊರತು ಪಾಪವು ಮುಟ್ಟುವುದಿಲ್ಲವೆಂದು ಪ್ರತ್ಯೇಕ ಹೇಳಬೇಕೇನು ! ಎಂಬ ಅಭಿಪ್ರಾಯದಿಂದ ಈ ಮಾತು ಹೊರಟಿದೆ. ಆದ್ದರಿಂದಲೇ ಗೀತಾಭಾಷ್ಯದ ಏಳನೇ ಅಧ್ಯಾಯದಲ್ಲಿರುವ 'ಪುಣ್ಯೋ ಗಂಧಃ' ಎಂಬ ಶ್ಲೋಕವನ್ನು ವ್ಯಾಖ್ಯಾನಿಸುವಾಗ ಶ್ರೀಮದಾಚಾರ್ಯರು 'ಭೋಗಾಪೇಕ್ಷಯಾ' ಎಂದು ಹೇಳಿದ್ದಾರೆ. ಆ ಸಂದರ್ಭದಲ್ಲಿ 'ಪುಣ್ಯಮೇವಾಮುಮ್' ಎಂಬ ಶ್ರುತಿಯನ್ನೇ ಬ್ರಹ್ಮಪರವಾಗಿ ಉದಾಹರಿಸಿದ್ದಾರೆ. ಅಷ್ಟೇ ಅಲ್ಲದೆ ಪ್ರಮೇಯದೀಪಿಕೆಯಲ್ಲಿಯೂ ಸಹ ಟೀಕಾಕಾರರು ಹೀಗೆ ವ್ಯಾಖ್ಯಾನಿಸಿದ್ದಾರೆ - ''ಅಮುಂ ಉಪಾಸಕಮ್ । ಕುತಃ । ತಸ್ಯ ದೇವತ್ವಾತ್ । ತಥಾऽಪಿ ಕುತಃ । ನ ಹ ವೈ ದೇವಮಾತ್ರಸ್ಯ ಪುಣ್ಯಭೋಗನಿಯಮೇ ದೇವೋತ್ತಮಸ್ಯ ಸುತರಾಂ ತತ್ಸಿದ್ಧಿಃ'' ಈ ಉಪಾಸಕನನ್ನು ಪಾಪವು ಏಕೆ ಸಂಪರ್ಕ ಮಾಡುವುದಿಲ್ಲವೆಂದರೆ ದೇವತೆಯಾದ್ದರಿಂದ. ಆದರೂ ಸಹ ಏಕೆ? ಎಂಬ ಪ್ರಶ್ನೆಗೆ ದೇವತೆಯಾದ ಮಾತ್ರದಿಂದಲೇ ಪುಣ್ಯವನ್ನು ಮಾತ್ರ ಭೋಗಿಸುವ ಅಧಿಕಾರವಿರುವಾಗ ದೇವೋತ್ತಮನಾದ ಶ್ರೀಹರಿಗೆ ಪುಣ್ಯಭೋಗನಿಯಮವು ಖಂಡಿತವಾಗಿಯೂ ಸಿದ್ಧವಾಗುತ್ತದೆ.

ಗುರುರಾಜೀಯಮ್ – ಅನಶ್ನನ್ನ ಇತ್ಯಾದಿಕಂ ತ್ವಶುಭಭೋಗಾಭಾವವಿಷಯಮಿತಿ ಸಮ್ಬನ್ಧಃ । ಏವಂ ಪ್ರಕೃತ್ಯರ್ಥಕರ್ಮಫಲಭೋಕ್ತೃತ್ವಸ್ಯ ಬ್ರಹ್ಮಣಿ ಸಾವಕಾಶತ್ವಮುಪಪಾದ್ಯ

प्रत्ययार्थस्यापि सावकाशत्वमुपपादयितुं शङ्कते – नचेति ।। कथञ्चिन्नेयत्वादिति ।। अवयवभेदादिनेत्यर्थः ।।

ಪೂರ್ವಪಕ್ಷವನ್ನು ಮಾಡುವಾಗ ಶ್ರೀಹರಿಯಲ್ಲಿ ಭೋಕ್ತೃತ್ವ ಇಲ್ಲವೆಂದು ಸಮರ್ಥಿಸಿದ್ದರು. ಆದರೆ ಅನೇಕ ಸ್ಮೃತಿ ಶ್ರುತಿಗಳು ಭಗವಂತನನ್ನು ಭೋಕ್ತೃವೆಂದೇ ಪ್ರತಿಪಾದಿಸುತ್ತಿವೆ. ಅಷ್ಟೇ ಅಲ್ಲದೆ ಕಣ್ಣು, ಕಿವಿ ಮೊದಲಾದ ಎಲ್ಲ ಇಂದ್ರಿಯಗಳಿಂದಲೂ ಭಗವಂತನು ಸುಖವನ್ನು ಅನುಭವಿಸುತ್ತಾನೆಂದು ಶ್ರುತಿಗಳು ಪ್ರತಿಪಾದಿಸುತ್ತಿವೆ. ಸಾಕ್ಷಾತ್ ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ 'ಶ್ರೋತ್ರಂ ಚಕ್ಷುಃ ಸ್ಪರ್ಶನಂಚ' ಎಂಬ ಶ್ಲೋಕದಲ್ಲಿ ಎಲ್ಲಾ ಇಂದ್ರಿಯಗಳಿಂದ ತಾನು ಸುಖವನ್ನು ಅನುಭವಿಸುತ್ತೇನೆಂದು ಹೇಳಿಕೊಂಡಿದ್ದಾನೆ.

ಹಾಗಾದರೆ 'ಅನ್ನಶ್ನನ್ನನ್ಯಃ' ಎಂಬ ಶ್ರುತಿಯು ಭಗವಂತನು ಏನನ್ನೂ ತಿನ್ನಲಾರನೆಂದು ಹೇಳುತ್ತಿದೆಯಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಅನೇಕ ಶ್ರುತಿಸ್ಮೃತಿಗಳು ಸ್ಪಷ್ಟವಾಗಿ ಭೋಕ್ತೃತ್ವವನ್ನು ಪರಮಾತ್ಮನಲ್ಲಿ ಪ್ರತಿಪಾದಿಸುತ್ತಿರುವುದರಿಂದ 'ಅನಶ್ನನ್ನನ್ಯಃ' ಎಂಬ ಒಂದು ಶ್ರುತಿಗೆ ಗೌಣಾರ್ಥವನ್ನು ಮಾಡಬೇಕಾಗುತ್ತದೆ. ಅಂದರೆ ಶುಭಫಲಗಳನ್ನಷ್ಟೇ ಭಗವಂತನು ತಿನ್ನುತ್ತಾನೆ ಹೊರತು, ಅಶುಭ ಕರ್ಮಗಳನ್ನು ಎಂದೂ ಸಹ ತಿನ್ನಲಾರನು. ಅಶುಭಫಲವನ್ನು ತಿನ್ನದ ಕಾರಣ ಶ್ರುತಿಯು 'ಅನಶ್ನನ್' ಎಂದು ಹೇಳುತ್ತಿದೆ.

ಅಥವಾ ಪೂರ್ಣಾನಂದಸ್ವರೂಪಿಯಾದ ಭಗವಂತನು ಆಹಾರದಿಂದ ಉಪಜೀವನ ಮಾಡಲಾರ. ಆಹಾರವನ್ನು ತಿನ್ನುವುದರಿಂದ ಅವನಲ್ಲಿ ಅಧಿಕ್ಯವಾಗಲಿ ತಿನ್ನದಿರುವುದರಿಂದ ನ್ಯೂನತೆಯಾಗಲಿ ಉಂಟಾಗುವುದಿಲ್ಲ. ಹೀಗೆ ವಿಷಯಪದಾರ್ಥಗಳ ಭೋಗದಲ್ಲಿ ರಾಗವಿಲ್ಲದ್ದರಿಂದ ಶ್ರುತಿಯು 'ಅನಶ್ನನ್' ಎಂದು ಹೇಳುತ್ತಿದೆ. ವಿಚಾರ ಮಾಡಿದರೆ 'ಋತಂ ಪಿಬಂತೌ' ಎಂಬ ಶ್ರುತಿಯು ಜೀವನ ಭೋಕ್ತೃತ್ವಕ್ಕೆ ಮಾರಕವಾಗಿದೆ. ಏಕೆಂದರೆ 'ಋತ' ಶಬ್ದಕ್ಕೆ ಪುಣ್ಯಫಲವೆಂದರ್ಥ. ಜೀವನು ಪಾಪದ ಫಲವನ್ನೂ ಸಹ ಉಣ್ಣುವುದರಿಂದ ಕೇವಲ ಪುಣ್ಯದ ಫಲವನ್ನು ತಿನ್ನಲು ಅವನಿಗೆ ಸಾಮರ್ಥ್ಯವಿಲ್ಲ. ಇಂತಹ ಜೀವನನ್ನು 'ಋತಂ ಪಿಬಂತೌ' ಎಂಬ ಶ್ರುತಿಯು ಪ್ರತಿಪಾದಿಸಲು ಹೇಗೆ ಸಾಧ್ಯ ? ಈ ಎಲ್ಲ ಕಾರಣಗಳಿಂದ 'ಋತಂ ಪಿಬಂತೌ' ಎಂಬ ಶ್ರುತಿಯಿಂದ ಪರಮಾತ್ಮನೇ ಪ್ರತಿಪಾದ್ಯನೆಂಬ ವಿಚಾರವು ಮನದಟ್ಟಾಗುತ್ತದೆ.

ದ್ವಿವಚನವೂ ಸಹ ಬಾಧಕವಲ್ಲ

तात्पर्यचन्द्रिका

नापीशपक्षे द्विवचनानुपपत्तिः,

यतः –

यथैकस्मिन्नेव पाशेऽदितिः पाशानिति श्रुतिः ।
तथैकस्मिन्नीश्वरेऽस्तु पिबन्ताविति वागपि ।।

यथा नवमे द्विबहुपत्नीकेष्वपि प्रयोगेषु "पत्नीं सन्नह्य" इत्येकवचनान्तो मन्त्रः, यथा वाऽग्नीषोमीयपशुसम्बन्धिन्येकस्मिन्नेव पाशे "अदितिः पाशान्" इत्यग्नीषोमीयपशुप्रकरणस्थमन्त्रगतं बहुवचनम् । अन्यथा हि बहुपाशयुक्तेषु पशुगणेषु पाशमन्त्रस्योत्कर्षः स्यात् । स च नेष्टः, गुणभूतप्रत्ययार्थबहुत्वस्यानुसरणाय तदाश्रयत्वेन प्रधानभूतप्रातिपदिकार्थोत्कर्षायोगेन एकस्मिन्नपि बहुवचनस्य कथञ्चिन्नेयत्वात् । तथेहापि एकस्मिन्नपि ब्रह्मणि द्विवचनमन्येन सह द्वित्वादस्तु, अस्यापि ब्रह्मप्रकरणस्थत्वात् ।

ಅನುವಾದ - ಈಶ್ವರಪಕ್ಷದಲ್ಲಿ ದ್ವಿವಚನದ ಅನುಪಪತ್ತಿದೋಷವು ಬರುವುದಿಲ್ಲ

ಯಥೈಕಸ್ಮಿನ್ನೇವ ಪಾಶೇऽದಿತಿಃ ಪಾಶಾನಿತಿ ಶ್ರುತಿಃ ।
ತಥೈಕಸ್ಮಿನ್ನೀಶ್ವರೇऽಸ್ತು ಪಿಬಂತಾವಿತಿ ವಾಗಪಿ ।।

ಯಾವ ರೀತಿಯಾಗಿ ಒಂದೇ ಹಗ್ಗದಲ್ಲಿ 'ಅದಿತಿಃ ಪಾಶಾನ್' ಎಂಬುದಾಗಿ ಬಹುವಚನ ಪ್ರಯೋಗವಿದೆಯೋ ಅದೇ ರೀತಿಯಾಗಿ ಒಬ್ಬನೇ ಈಶ್ವರನಲ್ಲಿ 'ಪಿಬಂತೌ' ಎಂಬುದಾಗಿ ದ್ವಿವಚನ ಪ್ರಯೋಗವು ತಪ್ಪಾಗುವುದಿಲ್ಲ.

ಪೂರ್ವಮೀಮಾಂಸೆಯ ನವಮಾಧ್ಯಾಯದಲ್ಲಿ ಇಬ್ಬರು ಅಥವಾ ಅನೇಕ ಮಂದಿ ಪತ್ನಿಯರಿದ್ದಾಗಲೂ 'ಪತ್ನೀಂ ಸನ್ನಹ್ಯ' ಎಂಬ ಏಕವಚನಾಂತವಾದ ಪ್ರಯೋಗವು ಮಂತ್ರದಲ್ಲಿ ಕಾಣಿಸುತ್ತಿದೆ.

ಮತ್ತೊಂದು ಪೂರ್ವಮೀಮಾಂಸಾಧಿಕರಣದಲ್ಲಿಯೂ ಅಗ್ನಿಷೋಮೀಯಪಶುವಿಗೆ ಸಂಬಂಧಿಸಿದ ಒಂದೇ ಹಗ್ಗದಲ್ಲಿ 'ಅದಿತಿಃ ಪಾಶಾನ್' ಎಂಬುದಾಗಿ ಅಗ್ನಿಷೋಮೀಯ ಪಶುಪ್ರಕರಣದಲ್ಲಿರುವ

ಮಂತ್ರವು ಬಹುವಚನವನ್ನು ಪ್ರಯೋಗಿಸಿದೆ. ಒಂದು ವೇಳೆ ಒಂದು ಹಗ್ಗದಲ್ಲಿ ಬಹುವಚನ ಪ್ರಯೋಗವನ್ನು ಒಪ್ಪಿಕೊಳ್ಳದಿದ್ದರೆ ಅನೇಕ ಹಗ್ಗಗಳಿಂದ ಕೂಡಿರುವ ಪಶುಗಣ ಎಂಬ ಇಷ್ಟಿ ಪ್ರಕರಣದಲ್ಲಿ ಅನೇಕ ಹಗ್ಗಗಳಿರುವುದರಿಂದ 'ಪಾಶ' ಮಂತ್ರವನ್ನು ಅಲ್ಲಿ ಎಳೆದು ಮಾಡಬೇಕಾಗುವ ಪ್ರಸಂಗ ಬರುತ್ತದೆ. ಆದರೆ ಇದು ಪೂರ್ವಮೀಮಾಂಸಕರಿಗೆ ಇಷ್ಟವಿಲ್ಲ. ಏಕೆಂದರೆ ಪ್ರಕೃತಿ ಪ್ರತ್ಯಯಗಳಲ್ಲಿ ಪ್ರತ್ಯಯಾರ್ಥವು ಗೌಣವಾಗಿರುತ್ತದೆ. ಗೌಣವಾಗಿರುವ ಬಹುತ್ವವೆಂಬ ಅರ್ಥವನ್ನು ಅನುಸರಿಸುವುದಕ್ಕಾಗಿ ಅದಕ್ಕೆ ಆಶ್ರಯವಾಗಿ ಪ್ರಧಾನವಾಗಿರುವ ಪ್ರಾತಿಪದಿಕಾರ್ಥವನ್ನು ಗೌಣವಾಗಿ ಅರ್ಥೈಸುವುದು ತಪ್ಪಾಗುತ್ತದೆ. ಆದ್ದರಿಂದ ಒಂದೇ ಹಗ್ಗವಾಗಿದ್ದರೂ ಬಹುವಚನವನ್ನು ಹೇಗಾದರೂ ಹೊಂದಿಸಬೇಕು.

ಈ ಪೂರ್ವಮೀಮಾಂಸಾದೃಷ್ಟಾಂತದಂತೆ ಪ್ರಕೃತದಲ್ಲಿಯೂ ಒಬ್ಬನೇ ಬ್ರಹ್ಮನಲ್ಲಿ ದ್ವಿವಚನ ಪ್ರಯೋಗವನ್ನು ಕೂಡಿಸಬೇಕು. ವಸ್ತುತಃ ಬ್ರಹ್ಮನು ಒಬ್ಬನೇ ಆಗಿದ್ದರೂ ಜೀವನನ್ನು ಸೇರಿಸಿಕೊಂಡಾಗ ದ್ವಿತ್ವವನ್ನು ಅವನಲ್ಲಿ ಹೇಳಬಹುದೆಂದರ್ಥ. ಏಕೆಂದರೆ ಇದೂ ಸಹ ಬ್ರಹ್ಮಪ್ರಕರಣವೇ ಆಗಿರುವುದರಿಂದ

ಪ್ರಕಾಶಃ –

ಏವಮಭೋಕ್ತೃತ್ವಂ ಬಾಧಕಂ ನೇತ್ಯುಪಪಾದನೇನ ''ತಸ್ಯ ಕರ್ಮಫಲಭೋಗಾಭಾವಾತ್'' ಇತ್ಯಾದಿಟೀಕಾ ವಿವೃತಾ । ಅಧುನಾ ದ್ವಿವಚನಮಪಿ ನ ಬಾಧಕಮಿತ್ಯಾಹ – ನಾಪೀತ್ಯಾದಿನಾ ವಿಷ್ಣೋರೇವ ದ್ವಿರೂಪತ್ವಾದಿತ್ಯನ್ತೇನ ।

ವಿವರಣೆ - 'ಋತಂ ಪಿಬಂತೌ' ಎಂಬ ಶ್ರುತಿಯಿಂದ ವಿಷ್ಣುವು ಪ್ರತಿಪಾದ್ಯನಲ್ಲವೆನ್ನಲು ಯಾವುದೇ ಬಾಧಕವಿಲ್ಲವೆಂದು ಹೇಳಿದಾಗ ಪೂರ್ವಪಕ್ಷಿಯು ಅಭೋಕ್ತೃತ್ವವನ್ನು ಬಾಧಕವನ್ನಾಗಿ ಹೇಳಲು ಪ್ರಯತ್ನಿಸಿದನು. ಅದನ್ನು ಇಲ್ಲಿಯತನಕ ನಿರಾಕರಿಸಿದ್ದಾಯಿತು. ಮತ್ತು 'ಕರ್ಮಫಲಭೋಗಾಭಾವಾತ್' ಎಂಬ ಟೀಕೆಯನ್ನೂ ಸಹ ವ್ಯಾಖ್ಯಾನಿಸಿದ್ದಾಯಿತು. ಪ್ರಕೃತ ದ್ವಿವಚನವನ್ನು ಬಾಧಕವನ್ನಾಗಿ ಪೂರ್ವಪಕ್ಷಿಯು ಹೇಳಲು ಪ್ರಯತ್ನಿಸಿದರೆ ಅದನ್ನೂ ಸಹ ನಿರಾಕರಿಸುತ್ತಿದ್ದಾರೆ. 'ನಾಪಿ' ಇತ್ಯಾದಿ ಗ್ರಂಥದಿಂದ 'ವಿಷ್ಣೋರೇವ ದ್ವಿರೂಪತ್ವಾತ್' ಎಂಬಲ್ಲಿಯ ತನಕ ಇದರ ಸಮರ್ಥನೆಯನ್ನು ಮಾಡುತ್ತಿದ್ದಾರೆ.

ಪ್ರಕಾಶಃ – ದ್ವಿವಚನಾನುಪಪತ್ತೇಶ್ಚತುರ್ಧಾ ಪರಿಹಾರಂ ವಿವರಿಷ್ಯನ್, ದ್ವಿವಚನಮನುಪಮನ್ಯಮಿತಿ ವದತೋ ಯದಭಿಪ್ರೇತಂ ದ್ವಿವಚನಬೋಧ್ಯಸ್ಯ ದ್ವಿತ್ವಸ್ಯೈಕಸ್ಮಿನ್ ಬ್ರಹ್ಮಣ್ಯಯೋಗಾತ್ತದನುರೋಧೇನ ಪಿಬತ್ಪ್ರಾತಿಪದಿಕಂ ಕ್ಷತ್ರಿನ್ಯಾಯೇನ ಭೋಕ್ತೃಭೋಕ್ತೃಸಮುದಾಯೇ ಲಕ್ಷಣಯಾ ವರ್ತತ ಇತಿ, ತತ್ತಾವದಯುಕ್ತಂ, ಗುಣಭೂತಪ್ರತ್ಯಯಾರ್ಥಾನುರೋಧೇನ ಪ್ರಧಾನಭೂತಪ್ರಾತಿಪದಿಕೇ ಲಕ್ಷಣಾಯಾ ಅನ್ಯಾಯ್ಯತ್ವಾತ್ । ಕಿನ್ತು ಪ್ರಾತಿಪದಿಕಸ್ಯ ಮುಖ್ಯಾರ್ಥಂ ಭೋಕ್ತಾರಮುಪೇತ್ಯೈವ ತದನುರೋಧೇನ ಪ್ರತ್ಯಯಾರ್ಥದ್ವಿತ್ವಮೇವ

कथञ्चिन्नेयमित्येकं परिहारं ''अभेदैकत्ववत्येव घटे द्रव्यान्तरसहिते द्वित्वदर्शनात्'' इति सुधावाक्यानुसारेण सदृष्टान्तमाह – यत इत्यादिना किञ्चेत्यन्तेन ।

ವಿಷ್ಣುವಿನಲ್ಲಿ ದ್ವಿವಚನವು ಅನುಪಪನ್ನವಾಗಿದೆಯೆಂಬ ಆಕ್ಷೇಪಕ್ಕೆ ನಾಲ್ಕು ಬಗೆಯಲ್ಲಿ ಪರಿಹಾರವನ್ನು ಹೇಳುತ್ತಿದ್ದಾರೆ. ಮೊದಲು ಯಾವ ಪೂರ್ವಪಕ್ಷಿಯು ದ್ವಿವಚನವು ಅನುಪಪನ್ನವಾಗಿದೆಯೆಂದು ಹೇಳುತ್ತಿದ್ದಾನೋ ಅವನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಯಬೇಕು. ದ್ವಿವಚನದಿಂದ 'ದ್ವಿತ್ವವು' ಬೋಧಿತವಾಗುತ್ತದೆ. ಇಂತಹ ದ್ವಿತ್ವವು ಒಬ್ಬನೇ ಬ್ರಹ್ಮನಲ್ಲಿ ಬರಲು ಸಾಧ್ಯವಿಲ್ಲ. ಆದ್ದರಿಂದ 'ಪಿಬತ್' ಎಂಬ ಪ್ರಾತಿಪದಿಕಕ್ಕೆ ಭಕ್ತಿನ್ಯಾಯದಿಂದ ಭೋಕ್ತೃ ಹಾಗೂ ಅಭೋಕ್ತೃಗಳ ಸಮುದಾಯದಲ್ಲಿ ಲಕ್ಷಣಾವನ್ನು ಮಾಡಬೇಕೆಂಬುದು ಪೂರ್ವಪಕ್ಷಿಯ ಅಭಿಪ್ರಾಯ.

ಇದು ತಪ್ಪು. ಏಕೆಂದರೆ ಪ್ರಕೃತಿ ಪ್ರತ್ಯಯಾರ್ಥಗಳಲ್ಲಿ ಪ್ರಕೃತ್ಯರ್ಥವು ಪ್ರಧಾನವಾಗಿರುತ್ತದೆ. ಪ್ರತ್ಯಯಾರ್ಥವು ಗೌಣವಾಗಿರುತ್ತದೆ. ಪೂರ್ವಪಕ್ಷಿಗಳು ಗೌಣವಾದ ಪ್ರತ್ಯಯಾರ್ಥಕ್ಕೆ ಅನುಸಾರಿಯಾಗಿ ಪ್ರಕೃತ್ಯರ್ಥಕ್ಕೆ ಲಕ್ಷಣಾ ಮಾಡಬೇಕೆಂದು ಹೇಳುತ್ತಿದ್ದಾರೆ ಇದು ಅನ್ಯಾಯ. ಹೊರತಾಗಿ ಪ್ರಕೃತಿಗೆ ಮುಖ್ಯಾರ್ಥವಾದ ಭೋಕ್ಯವನ್ನು ಅಂಗೀಕರಿಸಿ ಈ ಭೋಕ್ತೃವಿಗೆ ಅನುಸಾರಿಯಾಗಿ ಗೌಣವಾದ ಪ್ರತ್ಯಯಾರ್ಥವೆನಿಸಿದ ದ್ವಿತ್ವವನ್ನು ಹೇಗಾದರೂ ಹೊಂದಿಸಬೇಕಾಗುತ್ತದೆ. ಇದು ಮೊದಲನೆಯ ಪರಿಹಾರ. ಈ ವಿಷಯದಲ್ಲಿ 'ಅಭೇದೈಕತ್ವವತ್ಯೇವ ಘಟೇ ದ್ರವ್ಯಾಂತರಸಹಿತೇ ದ್ವಿತ್ವಾದರ್ಶನಾತ್' ಘಟವು ಒಂದೇ ಆಗಿದ್ದರೂ ಸಹ ಮತ್ತೊಂದು ಪದಾರ್ಥವು ಅದರ ಜೊತೆಗೆ ಸೇರಿದಾಗ ಏಕತ್ವವಿರುವ ಘಟದಲ್ಲಿ ದ್ವಿತ್ವವು ಬರುವುದು ಕಂಡಿದೆ ಎಂಬ ಸುಧಾವಾಕ್ಯದ ಸಮ್ಮತಿಯೂ ಇದೆ. ಇದಕ್ಕೆ ಅನುಸಾರಿಯಾಗಿ ಉದಾಹರಣೆಯ ಮೂಲಕ ಪ್ರಥಮ ಪಕ್ಷವನ್ನು 'ಯತಃ' ಎಂಬಲ್ಲಿಂದ ಪ್ರಾರಂಭಿಸಿ 'ಕಿಂಚ' ಎಂಬಲ್ಲಿಯ ತನಕ ಸಮರ್ಥಿಸುತ್ತಿದ್ದಾರೆ.

प्रकाशः – 'यतः' इत्यस्य श्लोकेनान्वयः, यस्मात्, 'पाशान्' इति बहुवचनमिवैकस्मिन्नपि द्विवचनं युज्यते, तस्मान्न द्विवचनानुपपत्तिरिति । 'पाशान्' इति श्रुतिरित्येतदुपलक्षणमिति भावेन पूर्वार्धं व्यनक्ति – **यथा नवम इति ।**

तृतीये पादे ''अपूर्वे त्वविकारोऽप्रदेशात्प्रतीयते'' इति पञ्चमेऽधिकरणे दर्शपूर्णमासप्रकरणे ''पत्नी सन्नह्य'' इति मन्त्रः किमेकद्विबहुपत्नीकेष्वविकारेण प्रयोक्तव्य उत द्विबहु-पत्नीकप्रयोगयोर्द्विबहुवचनाभ्यां ऊहितव्य इति विशये, एकपत्नीके समवेताभिधायित्व-सम्भवान्नैकवचनमन्याय्यनिगदम् । अतो द्विवचनबहुवचनयोरूहितव्य इति प्राप्ते, स्यादेवं, यद्येकपत्नीकाभिप्रायकमिदमाम्नानं स्यात्, न चैवं, सर्वप्रयोगाणां समान-विधानत्वात्सर्वाभिप्रायेणेदमाम्नानम् । तस्मात्सर्वेष्वविकारेणैकवचनान्त एव प्रयोज्य इति सिद्धान्तितम् । तत्र

यथैकत्वाभावेऽप्येकवचनान्तो मन्त्रो निविशते, तथेहापि ब्रह्मणि द्वित्वाभावेऽपि द्विवचनान्तवागस्त्वित्यर्थः ।

'यतः' ಎಂಬ ಪದಕ್ಕೆ ಶ್ಲೋಕದ ಜೊತೆಗೆ ಅನ್ವಯ ಮಾಡಬೇಕು. ಯಾವ ಕಾರಣದಿಂದ 'प्राशान्' ಎಂಬಲ್ಲಿ ಬಹುವಚನವನ್ನು ಗೌಣವನ್ನಾಗಿ ಕೂಡಿಸಬೇಕೋ ಅದರಂತೆ ಒಬ್ಬನೇ ವಿಷ್ಣುವಿನಲ್ಲಿ ದ್ವಿವಚನವನ್ನು ಗೌಣವಾಗಿ ಕೂಡಿಸಬೇಕು. ಆದ್ದರಿಂದ ದ್ವಿವಚನದ ಅನುಪಪತ್ತಿಯು ಬರುವುದಿಲ್ಲವೆಂದು ಅನ್ವಯ. 'प्राशान्' ಎಂಬ ಶ್ರುತಿಯು ಉಪಲಕ್ಷಣವಾಗಿದೆ ಎಂಬ ಅಭಿಪ್ರಾಯದಿಂದ ಶ್ಲೋಕದ ಪೂರ್ವಾರ್ಧವನ್ನು 'यथा नवमे' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

'अपूर्वे त्वविकारोऽप्रदेशात्प्रतीयते'[1] (೯-೩-೫)

ದರ್ಶಪೂರ್ಣಮಾಸಪ್ರಕರಣದಲ್ಲಿ 'पत्नीं सन्नह्य' ಎಂಬ ಮಂತ್ರವು ಕೇಳಿಸುತ್ತಿದೆ. ಈ ಮಂತ್ರವನ್ನು ಕೇಳಿದಾಗ ಹೀಗೆ ಸಂಶಯ ಬರುತ್ತದೆ. ಒಬ್ಬಳು ಹೆಂಡತಿ ಇದ್ದಾಗ ಅಥವಾ ಇಬ್ಬರು ಅಥವಾ ಮೂವರು ಹೆಂಡಂದಿರಿದ್ದಾಗ ಮಂತ್ರವನ್ನು ವ್ಯತ್ಯಾಸ ಮಾಡದೆ 'पत्नीं सन्नह्य' ಎಂದೇ ಹೇಳಬೇಕು. ಅಥವಾ ಇಬ್ಬರು ಅಥವಾ ಅನೇಕ ಹೆಂಡಂದಿರಿದ್ದಾಗ ದ್ವಿವಚನವನ್ನು ಅಥವಾ ಬಹುವಚನವನ್ನು ಊಹಿಸಿಕೊಂಡು (पत्न्यौ, पत्नीः) ಎಂದು ಮಂತ್ರವನ್ನು ಹೇಳಬೇಕೋ ? ಎಂದು ಸಂಶಯ.

(೧) ಭಾಟ್ಟಸಙ್ಗಃ –

अथ षष्ठं दर्शपूर्णमासयोर्द्विपत्नीके प्रयोगे ''पत्नीं सन्नह्य'' इति मन्त्रस्यानूहाधिकरणम्

अपूर्वे त्वविकारोऽप्रदेशात्प्रतीयेत ॥ २० ॥

पूर्ववैष्म्येणात्र शङ्कनात्सङ्गतिः । दर्शपूर्णमासयोः ''पत्नीं सन्नह्य'' इति श्रुतो मन्त्रः किं द्विबहुपत्नीकर्तृककप्रयोगेष्वनूहेन प्रयोज्यः, उतोहेनेति **सन्देहे**, पूर्वत्र पाशानिति बहुवचनस्यागत्यौपचारिकत्वेपीहैकवचनस्यैकपत्नीकयजमानकर्तृकप्रयोगे समवेतार्थत्व-सम्भवाद्द्विबहुपत्नीकयजमानकर्तृकप्रयोगेपि दृष्टार्थत्वलाभायोहित्व्यो मन्त्र इति **प्राप्ते सिद्धान्तः** । स्यादेवं यद्येकपत्नीकप्रयोगाभिप्राय एतन्मन्त्रपाठः । न चैवम् । किन्तु सर्वप्रयोगसाधारण्येनैवाऽम्नातः । सर्वत्रोपदेशत एव मन्त्रस्य प्राप्तेः । अदृष्टार्थमेकवचनं सत्सर्वप्रयोगेष्वविकारेणैव प्रयोगं सम्पादयतीत्यनूहो मन्त्रस्येति । तदाह **सूत्रे, अपूर्वे** प्रकृतिभूते द्विबहुपत्नीकप्रयोगे ''पत्नीम्'' इति मन्त्रस्याविकारोऽनूहः **प्रतीयते** । कुतः ? **अप्रदेशादनतिदेशात्** । सर्वप्रयोगाणां प्रकृतिविकृतिभावाभावेन समप्रधानत्वादित्यर्थः । **फलन्तु** अनूहेन सर्वत्र प्रयोगः ।

इति षष्ठं दर्शपूर्णमासयोर्द्विबहुपत्नीके प्रयोगे ''पत्नीं सन्नह्य'' इति मन्त्रस्यानूहाधिकरणम्

(सूत्रम् २०)

ಪೂರ್ವಪಕ್ಷ - ಇಬ್ಬರು ಅಥವಾ ಮೂವರು ಹೆಂಡಂದಿರಿದ್ದಾಗ ದ್ವಿವಚನ, ಬಹುವಚನಗಳನ್ನು ಊಹಿಸಿಕೊಳ್ಳಬೇಕು. ಏಕೆಂದರೆ ಒಬ್ಬಳು ಹೆಂಡತಿ ಇದ್ದಾಗ ಮಾತ್ರ ಪ್ರತ್ಯಯಾರ್ಥವೆನಿಸಿದ ಏಕತ್ವವು ಆವಳಲ್ಲಿ ಸಂಭಾವಿತವಾಗುತ್ತದೆ. ಆದರೆ ಅನೇಕ ಪತ್ನಿಯರಲ್ಲಿ ಏಕತ್ವವು ಬಾಧಿತವಾದ್ದರಿಂದ ಏಕವಚನ ಪ್ರಯೋಗವು ತಪ್ಪಾಗುತ್ತದೆ.

ಸಿದ್ಧಾಂತ - ಅನೇಕ ಪತ್ನಿಯರಿದ್ದರೂ ಸಹ ಏಕವಚನವನ್ನೇ ಪ್ರಯೋಗಿಸಬೇಕು. ಒಂದು ವೇಳೆ ಒಬ್ಬಳೇ ಹೆಂಡತಿ ಎಂಬ ವಿವಕ್ಷೆಯು ಶ್ರುತಿಗೆ ಇರುವುದಾದರೆ ನೀವು ಹೇಳಿದ್ದನ್ನು ಒಪ್ಪಬಹುದಿತ್ತು. ಆದರೆ ಅನೇಕಮಂದಿ ಹೆಂಡಂದಿರಿದ್ದರೂ ಸಹ 'ಪತ್ನೀಂ ಸನ್ನಹ್ಯ' ಎಂದೇ ಪ್ರಯೋಗಿಸಬೇಕೆಂದು ಶ್ರುತಿಯ ಅಭಿಪ್ರಾಯ. ಆದ್ದರಿಂದ ಒಬ್ಬಳೇ ಪತ್ನಿಯರಲಿ ಅನೇಕ ಪತ್ನಿಯಂದಿರಿರಲಿ ವ್ಯತ್ಯಾಸ ಮಾಡದೆ ಒಂದೇ ಕ್ರಮದಲ್ಲಿ 'ಪತ್ನೀಂ ಸನ್ನಹ್ಯ' ಎಂದು ಪ್ರಯೋಗಿಸಬೇಕು.

ಈ ಪೂರ್ವಮೀಮಾಂಸಾಧಿಕರಣದಲ್ಲಿ ಅನೇಕ ಪತ್ನಿಯರಿದ್ದಾಗ ಏಕತ್ವವು ಬಾಧಿತವಾಗಿದ್ದರೂ ಏಕವಚನಾಂತವಾದ ಪ್ರಯೋಗವನ್ನೇ ಮಾಡಬೇಕೆಂದು ಸಿದ್ಧಾಂತ ಮಾಡಲಾಗಿದೆ. ಆದರಂತೆ ಪ್ರಕೃತ ಬ್ರಹ್ಮನಲ್ಲಿ ದ್ವಿತ್ವವು ಬಾಧಿತವಾಗಿದ್ದರೂ ದ್ವಿವಚನಾಂತ ಪ್ರಯೋಗವನ್ನು ಮಾಡಬಹುದು.

ಪ್ರಕಾಶಃ – यथा वेति । तत्रैव ''विप्रतिपत्तौ विकल्पः स्याद्गुणे त्वन्याय्य-कल्पनैकदेशत्वात्'' इति चतुर्थेऽधिकरणेऽग्नीषोमीयपशौ ''अदितिः पाशान् प्रमुमोक्तु देवः'' इति बहुवचनान्तपाशमन्त्रः श्रुतः । स किं प्रकृतावेव निविशतेऽथ बहुपाशकेषु ''आग्नेयं कृष्णग्रीवमालभेत'' इत्यादिना विहितेषु पशुगणेषूत्कृष्यत इति संशये, एकस्मिन् बहुवचनस्यायोगादुत्कर्ष इति प्राप्ते, पाशप्रातिपादिकार्थान्वितं विभक्त्यभिहितं कर्मकारकं प्रकृतावपि पाशकर्मकमोचानभिधानेन सम्भवन्निवेशं नोत्कर्षं सहते, सङ्ख्यामात्रं त्वसम्भवदपि गुणात्त्वान्न प्रातिपदिकं प्रधानभूतं कारकं वाऽलमुत्कृष्टम्, अतो न सङ्ख्यावशेन मन्त्रस्योत्कर्षः, बहुवचनस्य त्वेकस्मिन्नपि पाशे योगोऽवयवबहुत्वाभिप्रायेण च्छान्दस इति सिद्धान्तितम् ।

तथेहाप्येकस्मिन्नेव ब्रह्मण्यन्येन सह द्वित्वादस्तु द्विवचनमित्यर्थः । एकवचनस्यायं बहुवचनस्य द्वितीयमिति विवेकः ।

विप्रतिपत्तौ विकल्पः स्याद्गुणे त्वन्याय्य कल्पनैकदेशत्वात्[1] (९-३-९)

(१) भाट्टसङ्ग्रहः –

अथ पञ्चममग्नीषोमीयपशौ पाशैक वपाशबहुत्वाभिधायिमन्त्रयोर्विकल्पाधिकरणम् (सूत्राणि (१५-१९)

विप्रतिपत्तौ विकल्पः स्यात्समत्वाद्गुणे त्वन्याय्यकल्पनैकदेशत्वात् ॥ १५ ॥

गुहाधिकरण (०-२-३)

ಅಗ್ನಿಷೋಮೀಯಪಶುವನ್ನು ವಿಧಿಸುವಾಗ "ಅದಿತಿಃ ಪಾಶಾನ್ ಪ್ರಮುಮೋಕ್ತುದೇವಃ" ಎಂಬ ಬಹುವಚನಾಂತವಾದ ಪಾಶಮಂತ್ರವು ಕೇಳಿಸುತ್ತಿದೆ. ಈ ಮಂತ್ರವು ಒಂದೇ ಹಗ್ಗವಿರುವ ಪ್ರಕೃತ ಯಾಗದಲ್ಲಿ ಉಪಯುಕ್ತವಾಗುತ್ತದೋ ಅಥವಾ ಅನೇಕ ಹಗ್ಗಗಳಿರುವ "ಆಗ್ನೇಯಂ ಕೃಷ್ಣಗ್ರೀವಮಾಲಭೇತ' ಇತ್ಯಾದಿ ವಾಕ್ಯದಿಂದ ವಿಧಿಸಲ್ಪಟ್ಟ ಪಶುಗಣ ಎಂಬ ಇಷ್ಟಿಯಲ್ಲಿ ಎಳೆದು ಅನ್ವಯಿಸುವುದರಿಂದ ಆಲ್ಲಿ ಉಪಯುಕ್ತವಾಗುತ್ತದೋ? ಎಂದು ಸಂಶಯ.

ಪೂರ್ವಪಕ್ಷ - ಒಂದೇ ಹಗ್ಗದಲ್ಲಿ ಬಹುವಚನವು ಬಾಧಿತವಾದ್ದರಿಂದ ಈ ಮಂತ್ರವು ಪ್ರಕೃತವಾದ ಯಾಗದಲ್ಲಿ ಉಪಯುಕ್ತವಾಗುವುದಿಲ್ಲ ಹೊರತಾಗಿ ಪಶುಗಣವೆಂಬ ಮತ್ತೊಂದು ಇಷ್ಟಿಯಲ್ಲಿ ಉಪಯುಕ್ತವಾಗುತ್ತದೆಂದು ತಿಳಿಯಬೇಕು.

ಸಿದ್ಧಾಂತ - ಪ್ರಕೃತವಾದ ಯಾಗದಲ್ಲಿಯೇ ಈ ಮಂತ್ರವು ಉಪಯುಕ್ತವಾಗುತ್ತದೆ. ಒಂದೇ ಹಗ್ಗವುಳ್ಳ ಈ ಯಾಗದಲ್ಲಿ ಬಹುವಚನಾಂತವಾದ 'ಪಾಶಾನ್' ಎಂಬ ಮಂತ್ರವನ್ನು ಹೇಳಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ ಅವಕಾಶವಿಲ್ಲ. 'ಪಾಶ' ಎಂಬ ಪ್ರಾತಿಪದಿಕಾರ್ಥದಲ್ಲಿ ವಿಭಕ್ತ್ಯರ್ಥವಾದ ಕರ್ಮಕಾರಕವು ಅನ್ವಯವನ್ನು ಹೊಂದಿದೆ. ಆದ್ದರಿಂದ ಪ್ರಕೃತಿ ಯಾಗದಲ್ಲಿ ಪಾಶಕರ್ಮಕವಾದ ಮೋಚವನ್ನು ಹೇಳಿರುವುದರಿಂದ ವಿಕೃತಿಯಾಗದಲ್ಲಿಯೂ ಅದನ್ನೇ ಹೇಳಬೇಕು. ಹೊರತಾಗಿ ಬೇರೆ ಯಾಗದಲ್ಲಿ ಇದರ ಉಪಯೋಗವನ್ನು ಹೇಳಿದರೆ ಚೋದಕ ಪ್ರಮಾಣದ ವಿರೋಧವು ಬರುತ್ತದೆ. ವಸ್ತುತಃ ಬಹುತ್ವ ಎಂಬ ಸಂಖ್ಯೆಯು ಪಾಶದಲ್ಲಿ ಅಸಂಭಾವಿತವಾಗಿದೆ. ಆದರೆ ಪ್ರಾತಿಪದಿಕಾರ್ಥ ಹಾಗೂ ಕಾರಕಗಳಿಗಿಂತ ಬಹುತ್ವಸಂಖ್ಯೆಯು ಗೌಣವಾಗಿದೆ.

(ಪ್ರಕರಣವಿಶೇಷಾಚ ॥ ೧೬ ॥ ಅರ್ಥಾಭಾವಾತ್ತು ನೈವಂ ಸ್ಯಾದ್ಗುಣಮಾತ್ರಮಿತರತ್ ॥ ೧೪ ॥ ಚಾವೋಸ್ತಯೇತಿ ಚೇತ್ ॥ ೧೮ ॥ ನೋತ್ಪತ್ತಿಶಾಬ್ದತ್ವಾತ್ ॥ ೧೯ ॥)

ಪೂರ್ವಾಕ್ಷೇಪೇಣಾತ್ರ ಶಙ್ಕಾತ್ಸಙ್ಗತಿಃ । ಅಗ್ನೀಷೋಮೀಯಪಶೌ ದ್ವೌ ಪಾಶಮನ್ತ್ರಾವಿತ್ಯುಕ್ತಮ್ । ತತ್ರ ಬಹುವಚನಾನನ್ತೋ ಮನ್ತ್ರಃ ಕಿಂ ಪ್ರಕರಣೇ ನಿವಿಶತೇ, ಕಿಂ ವಾ ಬಹುಪಾಶಕೇ ಪಶುಗಣೇ ಉತ್ಕೃಷ್ಯತ ಇತಿ **ಸನ್ದೇಹೇ, ಬಹುವಚನಸ್ಯೈಕಸ್ಮಿನ್ನಯೋಗಾದ್ಬಹುವಚನೋಕ್ತಬಹುತ್ವಲಿಙ್ಗೇನ** ಪ್ರಕರಣಂ ಬಾಧಿತ್ವೋತ್ಕೃಷ್ಯತ ಇತಿ ಪ್ರಕೃತಾವನಿವೇಶೇ ವಿಕೃತೌ ಚೋದಕೇನಾಪ್ರಾಪ್ತೇಃ ಪ್ರಾಕ್ತನಚಿನ್ತಾ ನ ಯುಕ್ತೇತಿ **ಪ್ರಾಪ್ತೇ ಸಿದ್ಧಾನ್ತಃ,** ಪ್ರಧಾನಭೂತ-ಪ್ರಾಪದಿಕಾರ್ಥಸ್ಯ ಪಾಶಸ್ಯ ವಿಭಕ್ತ್ಯರ್ಥಸ್ಯ ಚ ಕರ್ಮತ್ವಸ್ಯ ಪ್ರಕರಣೇ ನಿವೇಶಸಮ್ಭವೇನ ಗುಣಭೂತ-ವಚನೋಕ್ತಬಹುತ್ವಾನುರೋಧೇನೋತ್ಕರ್ಷಸ್ಯಾಯುಕ್ತತ್ವಾದವಯವಬಹುತ್ವಾಭಿಪ್ರಾಯೇಣ ಬಹುವಚನಮಪಿ ಪ್ರಕರಣ ಏವ ಕಥಞ್ಚಿನ್ನಿವೇಶೀಯಮಿತಿ ನೋತ್ಕೃಷ್ಟವ್ಯೋ ಮನ್ತ್ರಃ । ಏವಞ್ಚೈಕವಚನಾನ್ತಬಹುವಚನಾನ್ತಯೋರ್ದ್ವಯೋರಪಿ ಪ್ರಕರಣ ಏವ ನಿವೇಶಾದ್ವಿಕಲ್ಪ ಇತಿ । ತದಾಹ **ಸೂತ್ರೇ, ವಿಪ್ರತಿಪತ್ತೌ** ಪಾಶಮನ್ತ್ರಯೋಃ ಪ್ರಕೃತೌ ಕಃ ಪ್ರಯೋಜ್ಯ ಇತಿ ವಿಶಯೇ **ವಿಕಲ್ಪಃ ಸ್ಯಾತ್ ।** ಕುತಃ? ಪಾಶಪ್ರಕಾಶನಸಾಮರ್ಥ್ಯರೂಪಲಿಙ್ಗಸ್ಯ ಪ್ರಕರಣಸ್ಯ ಚ **ಸಮತ್ವಾತ್ । ಗುಣೇ ತು** ಬಹುವಚನೇ ತು **ಅನ್ಯಾಥ್ಯ**ನಿಗದತ್ವಕಲ್ಪನಾತ್ತಸ್ಯೈಕದೇಶತ್ವಾದಪ್ರಧಾನತ್ವಾದಿತಿ । **ಫಲನ್ತು** ವಿಕೃತೌ ಪ್ರವೃತ್ತಿರ್ಮನ್ತ್ರಸ್ಯ ।

ಇತಿ ಪಞ್ಚಮಮಗ್ನೀಷೋಮೀಯಪಶೌ ಪಾಶೈಕತ್ವಪಾಶಬಹುತ್ವಭಿಧಾಯಿಮನ್ತ್ರಯೋರ್ವಿಕಲ್ಪಾಧಿಕರಣಮ್

ಪ್ರಧಾನವಾದ ಪ್ರಾತಿಪದಿಕ ಹಾಗೂ ಕಾರಕಗಳನ್ನೇ ಸ್ವೀಕರಿಸಿ ಅಪ್ರಧಾನವಾದ ಶಂಕೆಯನ್ನು ಹೇಗಾದರು ಅರ್ಥೈಸಬೇಕು. ಅಂದರೆ ಒಂದೇ ಪಾಶದಲ್ಲಿ ಅದರ ಅವಯವಗಳು ಬಹಳವಿರುವುದರಿಂದ ಬಹುತ್ವಸಂಖ್ಯೆಯು ಉಪಪನ್ನವಾಗುತ್ತದೆಂದು ಕೂಡಿಸಬೇಕು. ಛಾಂದಸ ಪ್ರಯೋಗವಾದ್ದರಿಂದ ಈ ತರಹದ ಪ್ರಯೋಗವು ತಪ್ಪಾಗುವುದಿಲ್ಲ.

ಪೂರ್ವಮೀಮಾಂಸೆಯ ಈ ದೃಷ್ಟಾಂತದಿಂದ ಬ್ರಹ್ಮನು ಒಬ್ಬನೇ ಆಗಿದ್ದರು ಜೀವನಿಂದ ಕೂಡಿಸಿದಾಗ ದ್ವಿತ್ವವನ್ನು ಹೇಳಬಹುದು. ಆವಾಗ ದ್ವಿವಚನ ಪ್ರಯೋಗವೂ ಸಹ ತಪ್ಪಾಗುವುದಿಲ್ಲ. ಮೊದಲನೆಯ ದೃಷ್ಟಾಂತವು ಏಕವಚನವನ್ನು ಸಮರ್ಥಿಸುತ್ತಿದೆ. ಎರಡನೆಯ ದೃಷ್ಟಾಂತವು ಬಹುವಚನವನ್ನು ಸಮರ್ಥಿಸುತ್ತಿದೆಯೆಂಬ ಭೇದವನ್ನು ತಿಳಿಯಬೇಕು.

ಪ್ರಕಾಶಃ – ''ಅನ್ಯಥಾ'' ಇತಿ । ತದಧಿಕರಣಪೂರ್ವಪಕ್ಷಾಪಾದನಮ್ । ಅಸ್ತ್ವೇತ್ಯತ ಆಹ – ಸ ಚೇತಿ । ಉಕ್ತಞ್ಚ ಶಾಬರಭಾಷ್ಯೇ – 'ಗುಣೇ ತ್ವನ್ಯಾಪ್ಯಕಲ್ಪನಾ ಸ್ಯಾನ್ನ ಪ್ರಧಾನೇ, ಗುಣಶ್ಚ ವಿಭಕ್ತ್ಯರ್ಥಃ, ಪ್ರಧಾನಂ ಪ್ರಾತಿಪದಿಕಾರ್ಥಃ'' ಇತ್ಯಾದಿ ।

ನನ್ವಸ್ಯಾಗ್ನೀಷೋಮೀಯಪ್ರಕರಣಸ್ಥತ್ವಾತ್ತತ್ಪ್ರಕರಣಾನುಗ್ರಹಾಯ ತತ್ರ ಕಥಞ್ಚಿನ್ನಿವೇಶ ಉಕ್ತಃ । ಅತ ಏವ ತತ್ರ ''ಪ್ರಕರಣವಿಶೇಷಾಚ್ಚ'' ಇತಿ ಗುಣಸೂತ್ರಮಿತ್ಯತ ಆಹ – ಅಸ್ಯಾಪೀತಿ ।

ಬಹುಪಾಶಯುಕ್ತಿಯಲ್ಲಿ ಈ ಮಂತ್ರವನ್ನು ಉತ್ಕರ್ಷ ಮಾಡುವುದು ನಮಗೆ ಇಷ್ಟಾಪತ್ತಿ ಎಂಬ ಪ್ರಶ್ನೆಗೆ 'ಸ ಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಪ್ರಧಾನವಾದ ವಿಭಕ್ತ್ಯರ್ಥವನ್ನು ಮುಖ್ಯವಾಗಿ ಸ್ವೀಕರಿಸಿ ಪ್ರಾತಿಪದಿಕಾರ್ಥವನ್ನು ಅಮುಖ್ಯವಾಗಿ ಸ್ವೀಕರಿಸುವುದು ತಪ್ಪಾಗುತ್ತದೆಂದು ಅಭಿಪ್ರಾಯ. ಇದನ್ನು ಶಾಬರ ಭಾಷ್ಯದಲ್ಲಿಯೂ ಸಹ ಸಮ್ಮತಿಸಿದೆ - ''ಗುಣೇ ತ್ವನ್ಯಾಯ್ಯಕಲ್ಪನಾ ಸ್ಯಾನ್ನ ಪ್ರಧಾನೇ ಗುಣಶ್ಚ ವಿಭಕ್ತ್ಯರ್ಥಃ, ಪ್ರಧಾನಂ ಪ್ರಾತಿಪದಿಕಾರ್ಥಃ'' ವಿಭಕ್ತ್ಯರ್ಥವು ಗೌಣವಾಗಿರುತ್ತದೆ. ಪ್ರಾತಿಪದಿಕಾರ್ಥವು ಪ್ರಧಾನವಾಗಿರುತ್ತದೆ. ಗೌಣವಾದ ವಿಭಕ್ತ್ಯರ್ಥವನ್ನು ಪ್ರಧಾನವಾಗಿ ಸ್ವೀಕರಿಸುವುದು ಅನ್ಯಾಯವೆಂದು ಹೇಳಲಾಗಿದೆ.

'ಅದಿತಿ ಪಾಶಾಂ' ಎಂಬ ವಾಕ್ಯವು ಅಗ್ನಿಷೋಮಿಯ ಪ್ರಕರಣದಲ್ಲಿರುವುದರಿಂದ ಪ್ರಕರಣದ ಅನುಗ್ರಹಕ್ಕಾಗಿ ಬೇರೆ ಕಡೆ ಉತ್ಕರ್ಷ ಮಾಡುವುದು ಅನಿವಾರ್ಯವಾಗಿದೆ. ಆದ್ದರಿಂದಲೇ 'ಪ್ರಕರಣ-ವಿಶೇಷಾಚ್ಚ' ಎಂಬ ಗುಣಸೂತ್ರವು ಆ ಅಧಿಕರಣದಲ್ಲಿ ಪ್ರಾಪ್ತವಾಗಿದೆ. ಆದರೆ ಪ್ರಕೃತದಲ್ಲಿ ಬ್ರಹ್ಮ ಪ್ರಕರಣವು ಇರುವುದಿಲ್ಲವೇ? ಎಂಬ ಪ್ರಶ್ನೆಗೆ 'ಅಸ್ಯಾಪಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಉತ್ತರತ್ರ ''ಯಸ್ಸೇತುಃ'' ಇತ್ಯಾದಿಭಿಃ, ಪೂರ್ವತ್ರ ''ಯಸ್ಯ ಬ್ರಹ್ಮ ಚ ಕ್ಷತ್ರಂ ಚ'' ಇತ್ಯಾದಿಭಿರ್ಬ್ರಹ್ಮವಿಷಯೈರ್ವಾಕ್ಯೈಃ ಸನ್ದಿಷ್ಟತ್ವೇನ ಗೃಹಾವಿಷ್ಟತ್ವಾದಿನಾ ಲಿಙ್ಗೇನ ಚ ಬ್ರಹ್ಮಪ್ರಕರಣಸ್ಥತ್ವಾವಗಮಾತ್ । ಏವಞ್ಚಾನ್ಯೇನ ಸಹ ದ್ವಿತ್ವಾದೇವ ದ್ವಿವಚನೋಪಪತ್ತೌ ನ ತದನುರೋಧೇನ ಲಕ್ಷಣಯಾ ಪ್ರಕೃತ್ಯರ್ಥೌ ಬಾಧನೀಯ ಇತಿ ।

'ऋतं पिबन्तौ' ಎಂಬ ಮುಂದಿನ ಭಾಗದಲ್ಲಿ 'यस्येतुः' ಇತ್ಯಾದಿಯಾದ ಬ್ರಹ್ಮಪರವಾಕ್ಯಗಳೇ ಇರುತ್ತವೆ. ಹಿಂದೆಯೂ ಸಹ ''यस्य ब्रह्मच क्त्रं च'' ಇತ್ಯಾದಿಯಾಗಿ ಬ್ರಹ್ಮಪರವಾಕ್ಯಗಳೇ ಇರುತ್ತವೆ. ಹೀಗೆ ಬ್ರಹ್ಮಪರವಾದ ಹಿಂದಿನ ಮುಂದಿನ ವಾಕ್ಯಗಳಿಂದ 'ऋतं पिबन्तौ' ಎಂಬ ಶ್ರುತಿಯು ಸಂದಷ್ಟವಾಗಿದೆ. ಅಷ್ಟೇ ಅಲ್ಲದೇ 'गुहाविष्टौ' ಬ್ರಹ್ಮನ ಅಸಾಧಾರಣ ಲಿಂಗಗಳಿಂದ ಯುಕ್ತವಾಗಿದೆ. ಆದ್ದರಿಂದ ಇದನ್ನು ಬ್ರಹ್ಮಪ್ರಕರಣವೆಂದು ನಿರ್ಧರಿಸಬಹುದು. ಬ್ರಹ್ಮಪ್ರಕರಣವಾದ್ದರಿಂದಲೇ ಇಲ್ಲಿರುವ ಪ್ರಕೃತ್ಯರ್ಥವನ್ನು ಲಕ್ಷಣಾವೃತ್ತಿಯಿಂದ ಸ್ವೀಕರಿಸಿ ಗೌಣಾರ್ಥ ಮಾಡಬಾರದು, ಹೊರತಾಗಿ ಪ್ರಕೃತ್ಯರ್ಥವನ್ನು ಅನುಸರಿಸಿ ದ್ವಿವಚನ' ಲಿಂಗ ತಿಳಿಯುವ ದ್ವಿತ್ವವನ್ನು ಅನ್ಯಪದಾರ್ಥದ ಜೊತೆಗೆ ಸ್ವೀಕರಿಸಿ ಹೇಗಾದರು ಕೂಡಿಸಬೇಕು.

प्रकाशः – ननु विषमोऽयमुपन्यासः, तत्र प्रकृत्यर्थस्योत्कर्षभिया प्रत्ययार्थस्य बाध उक्तः, इह तूक्तरीत्या ईश्वरस्य भोक्तृत्वाज्जीवस्य च भोक्तृत्वस्य प्रत्यक्षादिसिद्धत्वात्, पिबत्प्रातिपदिकेन जीवेश्वरयोर्ग्रहणे प्रातिपदिकार्थस्य भोक्तृत्वस्य प्रत्ययार्थस्य द्वित्वस्य च मुख्यस्यैव सम्भवादिति चेत् ।

ಆಕ್ಷೇಪ - ಪೂರ್ವಮೀಮಾಂಸೆಯ ದೃಷ್ಟಾಂತವೇ ವಿಷಮವಾಗಿದೆ. ಏಕೆಂದರೆ 'अदितेःपाशान्' ಎಂಬಲ್ಲಿ ಅನೇಕ ಪಾಶಗಳಾಗಬಾರದೆಂಬ ಉದ್ದೇಶದಿಂದ 'स च' ಎಂಬ ಪ್ರತ್ಯಯದ ಅರ್ಥವನ್ನು ಗೌಣವಾಗಿ ಸ್ವೀಕರಿಸುವುದು ಅನಿವಾರ್ಯ. ಆದರೆ ಪ್ರಕೃತ 'पिबन्तौ' ಎಂಬಲ್ಲಿ ಪ್ರಕೃತ್ಯರ್ಥವು ಬಾಧಿತವಾಗಿಲ್ಲ. ಏಕೆಂದರೆ ಈಶ್ವರನು ಭೋಕ್ತೃವಾಗಿದ್ದಾನೆಂದು ಅನೇಕ ಶ್ರುತಿ ಸ್ಮೃತಿಗಳಿಂದ ಸಾಧಿಸಿದ್ದೀರಿ. ಜೀವನೂ ಸಹ ಭೋಕ್ತೃವಾಗಿದ್ದಾನೆಂಬುದು ಪ್ರತ್ಯಕ್ಷದಿಂದಲೇ ಸಿದ್ಧವಾಗಿದೆ. ಆದ್ದರಿಂದ 'पिबत्' ಪ್ರಾತಿಪದಿಕವು ಜೀವೇಶ್ವರರನ್ನು ಪ್ರತಿಪಾದಿಸಿದರೆ ಪ್ರಾತಿಪದಿಕಾರ್ಥವು ಬಾಧಿತವಾಗುವುದಿಲ್ಲ. ಹೀಗೆ ಪ್ರಾತಿಪದಿಕಾರ್ಥವೆನಿಸಿದ ಭೋಕ್ತೃತ್ವವನ್ನು ಪ್ರತ್ಯಯಾರ್ಥವೆನಿಸಿದ ದ್ವಿತ್ವವನ್ನು ಮುಖ್ಯವಾಗಿ ಸ್ವೀಕರಿಸಬಹುದಲ್ಲವೇ?

प्रकाशः – मैवं, ऋतशब्दितधर्मफलभोक्तृत्वस्य च जीवेऽनुपपत्त्या तस्य लक्षणीयत्वात् । अत एव टीकादौ पूर्वं द्विवचनस्येश्वरे सावकाशत्वोक्तावप्यत्र पूर्वमृतपानकर्तृत्वस्येश्वरैकनिष्ठत्वमुक्तम् ।

ಸಮಾಧಾನ - ಇದು ತಪ್ಪು. 'पिबत्' ಪ್ರಾತಿಪದಿಕಕ್ಕೆ ಕೇವಲ 'ಭೋಕ್ತೃತ್ವ' ಎಂಬ ಅರ್ಥವನ್ನು ಸ್ವೀಕರಿಸಬಾರದು. 'ऋत' ಶಬ್ದಕ್ಕೆ ಧರ್ಮಫಲ ಎಂದರ್ಥವಿರುವುದರಿಂದ 'पिबत्' ಪ್ರಾತಿಪದಿಕವು ಧರ್ಮಫಲಭೋಕ್ತೃತ್ವವನ್ನೇ ಹೇಳುತ್ತದೆ. ಆದರೆ ಜೀವನಲ್ಲಿ ಅಧರ್ಮಫಲಭೋಕ್ತೃತ್ವವೂ ಸಹ ಇರುವುದರಿಂದ ಕೇವಲ ಧರ್ಮಫಲ ಭೋಕ್ತೃತ್ವವು ಬಾಧಿತವಾಗಿವೆ. ಆದ್ದರಿಂದ 'पिबत्' ಪ್ರಾತಿಪದಿಕಕ್ಕೆ ಜೀವೇಶ್ವರರೆಂಬ ಅರ್ಥವನ್ನು ವಿವಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಟೀಕೆಯಲ್ಲಿ ದ್ವಿವಚನಕ್ಕೆ ಈಶ್ವರನಲ್ಲಿ ಸಾವಕಾಶವನ್ನಷ್ಟೇ ಮಾಡಿದ್ದರೂ, ಈ ಹಿಂದೆ ಗ್ರಂಥಕಾರರು ಋತಪಾನಕರ್ತೃತ್ವವನ್ನು ಕೇವಲ ಈಶ್ವರನಲ್ಲಿ ಮಾತ್ರವಿದೆಯೆಂದು ಸಾಧಿಸಿದ್ದಾರೆ.

गुरुराजीयम् – अन्येन सह द्वित्वादस्त्विति ।। पाशानन्वयेऽपि द्वित्वस्योपपत्त्यर्थमेवान्यसाहित्यस्योपयोगाद्विज्ञानं छान्दसमस्मिन्पक्ष इति भावः ।

ननु च दृष्टान्तदार्ष्टान्तिकयोर्वैषम्यम् । दृष्टान्ते अदितिः पाशानिति बहुवचनस्याग्नीषोमीय प्रकरणस्थमन्त्रगतत्वेन बहुपाशयुक्तेष्वुत्कर्षा सम्भवेन तत्र गुणभूतप्रत्ययार्थबाहुल्यस्यानुसरणाय प्रधानभूतप्रातिपदिकार्थोत्कर्षायोगेनैकस्मिन्नपि बहुवचनस्यास्यारस्यसम्भवेऽपि प्रकृते पिबन्तावित्यादि द्विवचनस्य ब्रह्मप्रकरणस्य-त्वाभावेनान्यत्रोत्कर्षसम्भवेन प्रकृत्यर्थस्वारस्यानुसारेण प्रत्ययास्वारस्य कल्पनस्यासम्भवादित्यत आह – **अस्यापीति ।।**

ಸಾರ

ಭೋಕ್ತೃತ್ವವು ಈಶ್ವರನಲ್ಲಿರುವುದರಿಂದ ಅಭೋಕ್ತೃತ್ವವು ಬಾಧಕವಾಗುವುದಿಲ್ಲವೆಂದು ಸಮರ್ಥಿಸಿದ್ದಾಯಿತು. ಆದರಂತೆ ದ್ವಿವಚನವೂ ಸಹ ಬಾಧಕವಾಗುವುದಿಲ್ಲ. ಏಕೆಂದರೆ ಪೂರ್ವಮೀಮಾಂಸೆಯಲ್ಲಿ ಅನೇಕ ಹೆಂಡಂದಿರಿರುವ ಯಾಗದಲ್ಲಿಯೂ 'पत्नीं सन्यह्य'' ಎಂಬುದಾಗಿ ಏಕವಚನದಲ್ಲಿಯೇ ಪ್ರಯೋಗಿಸಿರುವುದು ಕಂಡಿದೆ. ಮತ್ತು 'अदितिः पाशान्' ಎಂಬುದಾಗಿ ಒಂದೇ ಹಗ್ಗವಿರುವ ಯಾಗದಲ್ಲಿ ಬಹುವಚನ ಪ್ರಯೋಗ ಮಾಡುವುದು ಕಂಡಿದೆ. ಆದರಂತೆ ಒಬ್ಬನೇ ಈಶ್ವರನಲ್ಲಿ 'ಏಬಂತೌ' ಎಂಬುದಾಗಿ ದ್ವಿವಚನ ಪ್ರಯೋಗವನ್ನು ಮಾಡಬಹುದು.

• • • • •

ಪ್ರಾತಿಪದಿಕಾರ್ಥವಾದ ಸಂಖ್ಯೆಗೆ ಅನ್ವಯ ಮಾಡಬಹುದು

तात्पर्यचन्द्रिका

''युवं हि स्थः स्वर्पती इति द्वयोर्यजमानयोः प्रतिपदं कुर्यात्'' इति श्रुतं यजमानद्वित्वादि तु द्वयादिप्रातिपदिकार्थत्वात् सङ्ख्यानभिधानेऽपि कारकाभिधानेन प्रत्ययस्य सार्थक्यवत् प्रातिपदिकस्य सार्थक्याभावात्, रामकृष्णावित्यादाविव च प्रकृते रूपविशेषेणेव यजमाने रूपविशेषेण द्वित्वसम्भवाच्च एकयजमानकदर्शपूर्ण-मासपकरणादुत्कृष्टम् । ''यस्मिन् पञ्च पञ्च जनाः'' इत्यत्र तु बहुत्वस्य प्रातिपदिकार्थत्वेऽपि ब्रह्मणो बहुरूपत्वाददोषः ।

ಅನುವಾದ - 'ಯುವಂ ಹಿ ಸ್ಥಃ ಸ್ವರ್ಪತೀ ಇತಿ ದ್ವಯೋರ್ಯಜಮಾನಯೋಃ ಪ್ರತಿಪದಂ ಕುರ್ಯಾತ್'' ಎಂಬ ಸೂತ್ರದಲ್ಲಿ 'ದ್ವಿತ್ವ' ಸಂಖ್ಯೆಯ ಅನ್ವಯವು ಯಜಮಾನನಲ್ಲಿ ಕೇಳಿಸುತ್ತಿದೆ. ಈ 'ದ್ವಿತ್ವ' ಸಂಖ್ಯೆಯು 'ದ್ವಿ' ಎಂಬ ಪ್ರಾತಿಪದಿಕದ ಅರ್ಥವಾಗಿದೆ. ಹೊರತು 'ಯಜಮಾನಯೋಃ' ಎಂಬಲ್ಲಿರುವ ಪ್ರತ್ಯಯದ ಅರ್ಥವಾಗಿಲ್ಲ. ಹಾಗಾದರೆ ಪ್ರತ್ಯಯವು ನಿರರ್ಥಕವಾಯಿತಲ್ಲವೇ? ಎಂದು ಶಂಕಿಸಬಾರದು. ಸಂಖ್ಯೆಯನ್ನು ಹೇಳದಿದ್ದರೂ ಕರ್ಮಕಾರಕವನ್ನು ಹೇಳುವ ಪ್ರಯುಕ್ತ ಸಾರ್ಥಕವಾಗುತ್ತದೆ. ಆದರೆ 'ದ್ವಯೋಃ' ಎಂಬಲ್ಲಿರುವ 'ದ್ವಿ' ಎಂಬ ಪ್ರಾತಿಪದಿಕಕ್ಕೆ ದ್ವಿತ್ವವೆಂಬ ಸಂಖ್ಯೆಯನ್ನು ಅರ್ಥವನ್ನಾಗಿ ಹೇಳದಿದ್ದರೆ ಬೇರೆ ಅರ್ಥವಿಲ್ಲದ ಕಾರಣ ನಿರರ್ಥಕವಾಗುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ದ್ವಿತ್ವವನ್ನು ಪ್ರಾತಿಪಾದಿಕಾರ್ಥವೆಂದೇ ಹೇಳಬೇಕು ಹೊರತು ಪ್ರತ್ಯಯಾರ್ಥವೆಂದು ಹೇಳಬಾರದು. ಪ್ರತ್ಯಯಾರ್ಥವಾಗದ ಕಾರಣ ಇಬ್ಬರು ಯಜಮಾನರಿರುವ ಯಾಗದಲ್ಲಿ ಉತ್ಕರ್ಷ ಮಾಡುವುದು ತಪ್ಪಾಗುವುದಿಲ್ಲ. 'ರಾಮಕೃಷ್ಣೌ' ಎಂಬಲ್ಲಿ ದ್ವಿತ್ವವು ಕೇಳಿಸುತ್ತಿದೆ. ಒಬ್ಬನೇ ಭಗವಂತನಲ್ಲಿ ದ್ವಿತ್ವವು ಅಸಂಭಾವಿತವಾದ್ದರಿಂದ ಭಗವಂತನ ಎರಡು ರೂಪಗಳಿವೆಯೆಂಬ ಅಭಿಪ್ರಾಯದಿಂದ ದ್ವಿತ್ವವನ್ನು ಕೂಡಿಸುವಂತೆ ಪ್ರಕೃತ ಯಜಮಾನನಿಗೆ ಎರಡು ರೂಪಗಳಿಲ್ಲದ ಕಾರಣ ದ್ವಿತ್ವದ ಅನ್ವಯವು ಅಸಂಭಾವಿತವಾಗುತ್ತದೆ. ಆದ್ದರಿಂದ ಒಬ್ಬನೇ ಯಜಮಾನನಿರುವ ಜ್ಯೋತಿಷ್ಟೋಮ ಪ್ರಕರಣದಿಂದ ಇದನ್ನು ಎಳೆದು ಮತ್ತೊಂದೆಡೆ ಯಾಗದಲ್ಲಿ ಅನ್ವಯ ಮಾಡಬೇಕು.

'ಯಸ್ಮಿನ್ ಪಂಚ ಪಂಚಜನಾಃ' ಎಂಬಲ್ಲಿಯೂ ಸಹ ಪಂಚತ್ವ ಸಂಖ್ಯೆಯು ಪ್ರಾತಿಪದಿಕಾರ್ಥವಾದ್ದರಿಂದ ಮತ್ತೊಂದು ಪ್ರಕರಣದಲ್ಲಿ ಅನ್ವಯ ಮಾಡಿರಿ? ಎಂದು ಪ್ರಶ್ನಿಸಬಾರದು. ಬ್ರಹ್ಮನಿಗೆ ಅನೇಕ ರೂಪಗಳಿರುವುದರಿಂದ ಪಂಚತ್ವ ಸಂಖ್ಯೆಯ ಅನ್ವಯವು ಬಾಧಿತವಾಗುವುದಿಲ್ಲ. ಆದರೆ 'ದ್ವಯೋಃ ಯಜಮಾನಯೋಃ' ಎಂಬಲ್ಲಿ ಪ್ರಾತಿಪದಿಕಾರ್ಥವಾದ ದ್ವಿತ್ವಕ್ಕೆ ಯಜಮಾನನಲ್ಲಿ ಅನ್ವಯ ಮಾಡಿದರೆ ಬಾಧಿತವಾಗುತ್ತದೆ.

ಪ್ರಕಾಶಃ –

ನನು ಕಥಂ ತರ್ಹಿ ತೃತೀಯಾಧ್ಯಾಯತೃತೀಯಪಾದೇ ''ದ್ವಿತ್ವಬಹುತ್ವಯುಕ್ತಂ ವಾ ಚೋದನಾತ್ತಸ್ಯ'' ಇತಿ ಚತುರ್ದಶೇऽಧಿಕರಣೇ ''ಯುವಂ ಹಿ ಸ್ಥಃ ಸ್ವರ್ಪತೀ ಇತಿ ದ್ವಯೋರ್ಯಜಮಾನಯೋಃ ಪ್ರತಿಪದಂ ಕುರ್ಯಾತ್'' ''ಏತೇ ಅಸೃಗ್ರಮಿನ್ದವಃ ಇತಿ ಬಹುಭ್ಯೋ ಯಜಮಾನೇಭ್ಯಃ'' ಇತ್ಯತ್ರ ಪ್ರತ್ಯಯಾರ್ಥಸಙ್ಖ್ಯಾನುರೋಧೇನ ಪ್ರಾತಿಪಾದಿಕಮುತ್ಕೃಷ್ಯತ ಇತ್ಯತಸ್ತದ್ವೈಷಮ್ಯಮಾಹ – ಯುವಂ ಹಿ ಸ್ಥ ಇತಿ । ಸ್ತೋತ್ರಸ್ಯಾದೌ ಪಠನೀಯಾ ಋಕ್ ಪ್ರತಿಪದಿತ್ಯುಚ್ಯತೇ ।। ಏತಾಮೃಚಂ ಪ್ರತಿಪದಂ ಪ್ರಥಮಾಂ ಕುರ್ಯಾದಿತ್ಯರ್ಥಃ ।

ಆಕ್ಷೇಪ - ಪೂರ್ವಮೀಮಾಂಸೆಯಲ್ಲಿಯೂ ಸಹ ವಿಭಕ್ತ್ಯರ್ಥವನ್ನು ಪ್ರಧಾನವಾಗಿ ಸ್ವೀಕರಿಸಿ ಪ್ರಕೃತ್ಯರ್ಥವನ್ನು ಗೌಣವಾಗಿ ಅರ್ಥೈಸಿದ್ದು ಕಾಣಿಸುತ್ತದೆ.

"ದ್ವಿತ್ವಬಹುತ್ವಯುಕ್ತಂ ವಾ ಚೋದನಾತ್ತಸ್ಯ" [1](೩-೩-೧೪)

" 'ಯುವಂ ಹಿ ಸ್ಥಃ ಸ್ವರ್ಪತೀ' ಇತಿ ದ್ವಯೋರ್ಯಜಮಾನಯೋಃ ಪ್ರತಿಪದಂ ಕುರ್ಯಾತ್ । ಏತೇ ಅಸೃಗ್ರಮಿಂದವಃ ಇತಿ ಬಹುಭ್ಯೋ ಯಜಮಾನೇಭ್ಯಃ" ಎಂಬುದು ಬ್ರಾಹ್ಮಣವಾಕ್ಯವಾಗಿದೆ. 'ಯುವಂ ಹಿ ಸ್ಥಃ ಸ್ವರ್ಪತೀ' ಎಂಬ ಮಂತ್ರವನ್ನು ಇಬ್ಬರು ಯಜಮಾನರು ಇದ್ದರೆ ಮೊದಲು ಉಚ್ಚರಿಸಬೇಕೆಂದು ಇದರಿಂದ ತಿಳಿಯುತ್ತದೆ. ಆದರೆ ದರ್ಶಪೂರ್ಣಮಾಸಯಾಗದಲ್ಲಿ ಒಬ್ಬನೇ ಯಜಮಾನನಿರುವುದರಿಂದ ಈ ಮಂತ್ರಕ್ಕೆ ಪ್ರಸಕ್ತಿಯೇ ಇರುವುದಿಲ್ಲ. ಆದ್ದರಿಂದ ಪ್ರತ್ಯಯಾರ್ಥವಾದ ದ್ವಿತ್ವಸಂಖ್ಯೆಯನ್ನು ಅನುಸರಿಸಿ

(೧) ಭಾಟ್ಟಸಙ್ಗ್ರಹಃ –

अथ चतुर्दशं कुलायादौ प्रतिपदोरुत्कर्षाधिकरणम् (सूत्राणि १७-१९)

द्वित्वबहुत्वयुक्तं वाऽचोदनात्तस्य ॥ १७ ॥

(पक्षेणार्थकृतस्येति चेत् ॥ १८ ॥ न प्रकृतेरेकसंयोगात् ॥ १९ ॥)

अत्र पूर्ववैषम्येण शङ्कनात्सङ्गतिः । ज्योतिष्टोमे श्रुतं 'युवं हि स्थः स्वर्पती इति द्वयोर्यजमानयोः प्रतिपदं कुर्यात्, एते असृग्रमिन्द्रव इति बहुभ्यो यजमानेभ्यः' इति । 'युवं हि' इत्यादिकामृचं द्विकर्तृके यागे प्रतिपदं शस्त्रप्रथमां कुर्यात्, 'एते' इति मन्त्रं बहुयजमानके यागे शस्त्रस्यादिभूतां कुर्यादिति तदर्थः । तत्र सन्देहः, किमेतन्मन्त्रद्वयस्य प्राथम्यं ज्योतिष्टोमप्रयोगे कार्यं, उत द्विबहुयजमानकेषु कुलायाहीनादिषूत्क्रष्टव्यमिति । पूर्वपक्षस्तु, पूर्वत्राहीनस्येति श्रुत्या प्रकरणबाधेनोत्कर्षेपीह द्वयोरित्यादिद्विबहुश्रुतिभ्यां न प्रकरणस्य बाधेन प्रतिपत्त्वस्य कुलायादिषूत्कर्षो युक्तः । 'सर्वशक्तौ प्रवृत्तिः स्यात्' इति षष्ठतृतीयपादीयाधनये नित्ये कर्मणि अशक्तिकृताङ्गत्यागस्य वक्ष्यमाणत्वात् ज्योतिष्टोमस्य च 'वसन्ते वसन्ते ज्योतिषा यजेत' इति वीप्सया नित्यत्वेन द्वादशशतदक्षिणादानादाव-सामर्थ्येनैको यदि न शक्नुयात्तदा अङ्गान्तरवदेकत्वं विहाय द्वौ बहवो वा यजेरन्निति, तदाश्रयणेन प्रतिपद्विधानस्य ज्योतिष्टोम एव युक्तत्वादिति । सिद्धान्तस्तु, अशक्याङ्गत्यागेप्युपादेयस्य त्यागो नानुपादेयस्य देशकालादेरिति षष्ठ एव वक्ष्यमाणत्वेनैकत्वस्याप्यनुपादेयतया त्यागायोगाद्यजमानद्वित्वादेर्ज्योतिष्टोमे अभावेन द्विबहुश्रुतिभ्यां प्रकरणबाधेन कुलायादिषु प्रतिपत्त्वस्योत्कर्षः । श्रूयते च 'एतेन राजपुरोहितौ सायुज्यकामौ यजेयाताम्' इति 'एको द्वौ बहवो वा अहीनेन यजेरन्' इति कुलायाहीनयोः द्विबहुकर्तृकत्वम् । तथा 'एतेनैव द्वौ याजयेत्, त्रीन् याजयेत्' इति यागान्तरे द्व्यादिकर्तृकत्वमिति । तथा च सूत्रम्, द्वित्वबहुत्वयुक्तं प्रतिपद्विधानमुत्कृष्यते । तस्य द्वित्वस्य बहुत्वस्य च प्रकृतावाचोदनादिति । फलन्तु, कुलायादौ मन्त्रप्राथम्यस्य निवेशो न ज्योतिष्टोम इति ।

इति चतुर्दशं कुलायादौ प्रतिपदोरुत्कर्षाधिकरणम् (सूत्राणि १७-१९)

ಗುಹಾಧಿಕರಣ (೧-೨-೫)

ಪ್ರಾತಿಪದಿಕಾರ್ಥವಾದ ಯಜಮಾನನ್ನು ಮತ್ತೊಂದು ಯಾಗದಲ್ಲಿ ಉತ್ಕರ್ಷ ಮಾಡುವುದು ಕಂಡಿದೆಯಲ್ಲವೇ?

ಸಮಾಧಾನ - ಈ ದೃಷ್ಟಾಂತವು ವಿಷಮವಾಗಿದೆ. ದ್ವಿತ್ವವು ಇಲ್ಲಿ ಪ್ರತ್ಯಯಾರ್ಥವೇ ಆಗಿರುವುದಿಲ್ಲ. ಹೊರತಾಗಿ 'ದ್ವಯೋಃ' ಎಂಬಲ್ಲಿರುವ 'ದ್ವಿ' ಎಂಬ ಪ್ರಾತಿಪದಿಕದಿಂದಲೇ ದ್ವಿತ್ವವು ತಿಳಿಯುತ್ತಿದೆ. ಆದರೆ 'ಪಿಬಂತೌ' ಎಂಬಲ್ಲಿ ದ್ವಿತ್ವವು ಪ್ರಾತಿಪದಿಕದಿಂದ ತಿಳಿಯುತ್ತಿಲ್ಲ ಎಂಬ ವ್ಯತ್ಯಾಸವನ್ನು ಗಮನಿಸಬೇಕು.

ಸ್ತೋತ್ರದ ಮೊದಲು ಪಠಿಸುವ 'ಋಚ್' ಮಂತ್ರವನ್ನು 'ಪ್ರತಿಪತ್' ಎನ್ನುತ್ತಾರೆ. ಅಂದರೆ ಈ 'ಋಚ್' ಮಂತ್ರವನ್ನು ಮೊದಲು ಹೇಳಬೇಕೆಂದರ್ಥ.

ಪ್ರಕಾಶಃ – ನನ್ವಿದಂ ಸೂತ್ರಕೃದೇವ ಪರ್ಯಹಾರ್ಷೀತ್, ಯದಾಹ – ''ಅರ್ಥಾಭಾವಾತ್ತು ನೈವಂ ಸ್ಯಾದ್ಗುಣಮಾತ್ರಮಿತರತ್'' ಇತಿ, ಸತ್ಯಂ, ತಸ್ಯ ಪ್ರತ್ಯಯಾರ್ಥಾಧೀನೋತ್ಕರ್ಷಭ್ರಮನಿರಾಸಾಯ ಸ್ಪಷ್ಟೀಕರಣಮೇತತ್ ।

ಈ ಶಂಕೆಯನ್ನು ಸೂತ್ರಕಾರರೇ 'ಅರ್ಥಾಭಾವಾತ್ತು ನೈವಂ ಸ್ಯಾದ್ಗುಣಮಾತ್ರಮಿತರತ್' ಎಂಬಲ್ಲಿ ಪರಿಹರಿಸಿದ್ದಾರಲ್ಲವೇ? ಆದರೆ ಸೂತ್ರವನ್ನು ನೋಡಿದಾಗ ಪ್ರತ್ಯಯಾರ್ಥಾಧೀನವಾಗಿ ಪ್ರಾತಿಪದಿಕದ ಉತ್ಕರ್ಷವು ಪ್ರಾಪ್ತವಾಗುತ್ತದೆಂಬ ಭ್ರಾಂತಿ ಬರುತ್ತದೆ. ಅದನ್ನು ಪರಿಹರಿಸುವುದಕ್ಕಾಗಿ ಇಲ್ಲಿ ಗ್ರಂಥಕಾರರು 'ಅರ್ಥಾಭಾವಾತ್' ಎಂಬ ಸೂತ್ರವನ್ನೇ ಸ್ಪಷ್ಟಪಡಿಸಿದ್ದಾರೆ.

ಪ್ರಕಾಶಃ – ತತ್ರ ಕಿಂ ಪ್ರತಿಪದಾವೇಕಯಜಮಾನಕಜ್ಯೋತಿಷ್ಟೋಮೇऽಥ ದ್ವಿಬಹ್ವಯಜಮಾನಕೇಷು ಕುಲಾಯಾಹೀನಾದಿಷ್ವುತ್ಕರ್ಷೋ ಇತಿ ಸಂಶಯೇ, ನಿತ್ಯೇ ಕರ್ಮಣ್ಯಶಕ್ತಿಕೃತಾಙ್ಗತ್ಯಾಗಾಙ್ಗೀಕಾರಾದ್ಯದೈಕೋ ಯಜಮಾನೋ ಜ್ಯೋತಿಷ್ಟೋಮಮನುಷ್ಠಾತುಂ ನ ಶಕ್ನುಯಾತ್ತದಾ ''ವಸನ್ತೇ ವಸನ್ತೇ ಜ್ಯೋತಿಷಾ ಯಜೇತ'' ಇತ್ಯಾಖ್ಯಾತೋಪಾತಗುಣಭೂತೋಪಾದೇಯಕರ್ತೃಗತಮೇಕತ್ವಂ ಕ್ರತ್ವಙ್ಗಮಪಿ ತ್ಯಕ್ತ್ವಾ ದ್ವೌ ಬಹವೋ ವಾ ಯಜೇರನ್ನಿತಿ ಜ್ಯೋತಿಷ್ಟೋಮ ಏವ ಪ್ರತಿಪನ್ನಿವೇಶಸಮ್ಭವಾನ್ನೋತ್ಕರ್ಷ ಇತಿ ಪ್ರಾಪ್ತೇ, ಅಶಕ್ತಿನ್ಯಾಯಸ್ಯೋಪಾದೇಯಾಙ್ಗವಿಷಯತ್ವಾದ್ಯಜಮಾನಗತೈಕತ್ವಸ್ಯ ಕಾಲಾದಿವದನುಪಾದೇಯತ್ವಾತ್ತ-ತ್ಯಾಗಾಯೋಗೇನ ಪ್ರಕೃತೌ ನಿವೇಶಾಸಮ್ಭವಾತ್ಕುಲಾಯಾದಿಷ್ವುತ್ಕರ್ಷ ಇತಿ ಸಿದ್ಧಾನ್ತಿತಮ್ ।

'ಅರ್ಥಾಭಾವಾತ್ ನೈವಂ ಸ್ಯಾದ್ಗುಣಮಾತ್ರಮಿತರತ್'

ಒಬ್ಬನೇ ಯಜಮಾನನಿರುವ ಜ್ಯೋತಿಷ್ಟೋಮಯಾಗದಲ್ಲಿ ಈ ಮಂತ್ರವನ್ನು ಮೊದಲು ಹೇಳಬೇಕೋ? ಅಥವಾ ಇಬ್ಬರು ಅಥವಾ ಅನೇಕ ಯಜಮಾನರುಗಳಿರುವ 'ಕುಲಾಯಾಹೀನ' ಮೊದಲಾದ ಯಾಗಗಳಲ್ಲಿ ಈ ಮಂತ್ರವನ್ನು ಉತ್ಕರ್ಷಮಾಡಿ ಮೊದಲು ಪಠಿಸಬೇಕೋ? ಎಂದು ಸಂಶಯ.

ಪೂರ್ವಪಕ್ಷ - ಜ್ಯೋತಿಷ್ಟೋಮಯಾಗದಲ್ಲಿಯೂ ಇಬ್ಬರು ಯಜಮಾನರಿರಲು ಪ್ರಸಕ್ತಿಯಿದೆ. ನಿತ್ಯಕರ್ಮದಲ್ಲಿ ಹೇಗೆಂದರೆ ಯಾವ ಯಜಮಾನನು ಜ್ಯೋತಿಷ್ಟೋಮಯಾಗವನ್ನು ಪ್ರಾರಂಭಿಸಿರುತ್ತಾನೋ

ಅವನಿಗೆ ದೌರ್ಬಲ್ಯದಿಂದ ಸಂಪೂರ್ಣವಾಗಿ ಮುಗಿಸಲು ಸಾಮರ್ಥ್ಯವಿಲ್ಲದಿದ್ದಾಗ ಯಾಗವನ್ನು ಮಾಡದೇ ಇರಬಾರದು. ಹೊರತಾಗಿ ಮತ್ತೊಬ್ಬ ಯಜಮಾನನ್ನು ಅನುಷ್ಠಾನ ಮಾಡಲು ಯೋಜನೆ ಮಾಡಬೇಕು. ಆದ್ದರಿಂದ ''ವಸಂತೇ ವಸಂತೇ ಜ್ಯೋತಿಷಾ ಯಜೇತ'' ಎಂಬಲ್ಲಿ ಆಖ್ಯಾತಪ್ರತ್ಯಯದಿಂದ ಗುಣಭೂತವಾದ ಮತ್ತು ಉಪಾದೇಯವಾದ ಕರ್ತೃಗತ ಏಕತ್ವವು ಕೇಳಿಸುತ್ತಿದೆ. ಈ ಏಕತ್ವವು ಯಜಮಾನನಿಗೆ ಸಾಮರ್ಥ್ಯವಿಲ್ಲದ ಪಕ್ಷದಲ್ಲಿ ಗೌಣವಾಗುತ್ತದೆ. ಆಂದರೆ ಬೇರೆ ಯಜಮಾನನನ್ನು ನಿಯೋಜಿಸಬೇಕಾದ್ದರಿಂದ ದ್ವಿತ್ವ ಬಹುತ್ವಾದಿಗಳನ್ನೇ ವಿವಕ್ಷಿಸಿ ಏಕತ್ವವನ್ನು ಬಿಡಬೇಕು. ಆದ್ದರಿಂದ ಯಾವ ಜ್ಯೋತಿಷ್ಟೋಮಯಾಗದಲ್ಲಿ ಈ ರೀತಿಯಾಗಿ ಅನೇಕ ಮಂದಿ ಯಜಮಾನರು ಸೇರುತ್ತಾರೋ ಅಂತಹ ಯಾಗದಲ್ಲಿ 'ಯುವಂ ಹಿ ಸ್ಥಃ' ಎಂಬ ಮಂತ್ರವನ್ನು ಪ್ರಾರಂಭದಲ್ಲಿ ಪಠಿಸಬೇಕು.

ಸಿದ್ಧಾಂತ - ಉಪಾದೇಯವಾದ ಅಂಗವನ್ನು ತ್ಯಾಗಮಾಡಬಹುದೇ ಹೊರತು ಅನುಪಾದೇಯವಾದ ಅಂಗವನ್ನು ತ್ಯಾಗ ಮಾಡಲು ಬರುವುದಿಲ್ಲ. ವಸಂತಕಾಲವು ಅನುಪಾದೇಯವಾದ ಅಂಗವಾಗಿದೆ. ನಾವು ಮಾಡಬಹುದಾದ ಕಾರ್ಯಗಳು ಅನುಷ್ಠೇಯವಾದ್ದರಿಂದ ಉಪಾದೇಯಾಂಗಗಳಾಗಿವೆ. ಪ್ರಕೃತ ''ವಸಂತೇ ವಸಂತೇ ಜ್ಯೋತಿಷಾ ಯಜೇತ'' ಎಂಬಲ್ಲಿ ಆಖ್ಯಾತ ಪ್ರತ್ಯಯದಿಂದ ಯಾವ ಏಕತ್ವವು ಕೇಳಿಸುತ್ತಿದೆಯೋ ಆ ಏಕತ್ವವು ಅನುಪಾದೇಯವಾಗಿರುವುದರಿಂದ ಬಿಡಲು ಸಾಧ್ಯವಿಲ್ಲ. ಯಜಮಾನನ ಏಕತ್ವವು ಯಾಗದ ಅಂಗವೇ ಆಗಿದೆ. ಯಾವರೀತಿಯಾಗಿ ವಸಂತ ಕಾಲವು ಅನುಪಾದೇಯವಾದ ಅಂಗವಾಗಿದೆಯೋ ಅದರಂತೆ ಯಜಮಾನನ ಏಕತ್ವವೂ ಸಹ ಅನುಪಾದೇಯವಾದ ಅಂಗವೇ ಆಗಿದೆ. ಆಂದರೆ ಯಾವ ಯಜಮಾನನು ಯಾಗವನ್ನು ಪ್ರಾರಂಭಿಸಿರುತ್ತಾನೋ ಅವನೇ ಸಂಪೂರ್ಣವಾದ ಜ್ಯೋತಿಷ್ಟೋಮಯಾಗವನ್ನು ಆಚರಿಸಬೇಕು. ಇನ್ನೊಬ್ಬ ಯಜಮಾನನಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಈ ಯಾಗದಲ್ಲಿ ಇಬ್ಬರು ಯಜಮಾನರಿಗೆ ಅವಕಾಶವಿರಲು ಸಾಧ್ಯವಿಲ್ಲದ ಕಾರಣ 'ಯುವಂ ಹಿ ಸ್ಥಃ ಸ್ವರ್ಪತೀ' ಎಂಬ ಮಂತ್ರವನ್ನು ಇಬ್ಬರು ಯಜಮಾನರು ಇರುವ 'ಕುಲಾಯ' ಎಂಬ ಅಥವಾ ಅನೇಕ ಯಜಮಾನರಿರುವ 'ಆಹೀನ' ಎಂಬ ಯಾಗದಲ್ಲಿಯಾಗಲೀ ಉತ್ಕರ್ಷ ಮಾಡಬೇಕು.

प्रकाशः – तत्र प्रकृतौ यजमानद्वित्वाभावादुत्कर्ष इति सत्यं, तथाऽपि प्रत्ययार्थाभावान्नोत्कर्षः, तस्य कारकाभिधानेनापि चारितार्थ्यात्, किन्तु प्रातिपदिकार्थाभावेनैवेति, प्रातिपदिकार्थस्य प्रकृतेऽनवकाशं द्वेधाऽऽह – सङ्ख्येति ।

'द्वयोः यजमानोः' ಎಂಬ ವಾಕ್ಯದಲ್ಲಿ ದ್ವಿತ್ವವನ್ನು 'ಯಜಮಾನಯೋಃ' ಎಂಬಲ್ಲಿರುವ ಪ್ರತ್ಯಯಾರ್ಥವೆಂದೂ ಸಹ ಹೇಳಬಹುದು. 'ದ್ವಯೋಃ' ಎಂಬಲ್ಲಿರುವ 'ದ್ವಿ' ಎಂಬ ಪ್ರಾತಿಪದಿಕದ ಅರ್ಥವೆಂದೂ ಸಹ ಹೇಳಬಹುದು. ಆದರೆ ಮತ್ತೊಂದೆಡೆ ಉತ್ಕರ್ಷ ಮಾಡಲು ಪ್ರತ್ಯಯಾರ್ಥವಾಗಿಲ್ಲವೆಂಬುದು ಕಾರಣವಲ್ಲ ಹೊರತಾಗಿ ಪ್ರಾತಿಪದಿಕಾರ್ಥವಾದ ದ್ವಿತ್ವವು ಕೂಡದ ಕಾರಣ ಉತ್ಕರ್ಷ ಮಾಡುತ್ತಿದ್ದೇವೆಂದು ತಿಳಿಯಬೇಕು. ದ್ವಿತ್ವವು ಪ್ರತ್ಯಯಾರ್ಥವೆಂದು ಹೇಳಿದ್ದಲ್ಲಿ ಅದನ್ನು

ಗೌಣ ಮಾಡಬಹುದಿತ್ತು. ಆದರೆ ಪ್ರಾತಿಪದಿಕಾರ್ಥವಾಗಿರುವುದರಿಂದ ಮತ್ತೊಂದೆಡೆ ಉತ್ಕರ್ಷ ಮಾಡಬೇಕು.

ಪ್ರಾತಿಪದಿಕಾರ್ಥಕ್ಕೆ ಪ್ರಕೃತ ಅವಕಾಶವಿಲ್ಲವೆಂಬುದನ್ನು ಗ್ರಂಥಕಾರರು 'ಸಂಖ್ಯಾನಭಿಧಾನೇಪಿ' ಎಂಬ ವಾಕ್ಯದಿಂದ ಎರಡು ಬಗೆಯಲ್ಲಿ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – 'ದರ್ಶಪೂರ್ಣಮಾಸಪ್ರಕರಣಾತ್' ಇತಿ ಲೇಖಕದೋಷಮೂಲಃ ಪಾಠೋऽಯಂ, ಜ್ಯೋತಿಷ್ಟೋಮ-ಪ್ರಕರಣಸ್ಥತ್ವಾತ್ ಸ್ತೋತ್ರಪ್ರತಿಪದ್ವಿಧಾನಸ್ಯೇತ್ಯಾಹುಃ ।

ನನು ಪ್ರಾತಿಪದಿಕಾರ್ಥಸಙ್ಖ್ಯಾಯಾಃ ಪ್ರಕೃತಾವಸಮ್ಭವೇನ ಯದ್ಯುತ್ಕರ್ಷಸ್ತರ್ಹಿ ''ನ ಸಙ್ಖ್ಯೋಪಸಙ್ಗ್ರಹಾತ್'' ಇತಿ ನಯೇ ''ಯಸ್ಮಿನ್ ಪಞ್ಚ ಪಞ್ಚ ಜನಾಃ'' ಇತಿ ಪ್ರಾತಿಪದಿಕಾರ್ಥಸ್ಯ ಬಹುತ್ವಸ್ಯೈಕಸ್ಮಿನ್ನಸಮ್ಭವೇऽಪಿ ಕಥಂ ತತ್ರೈವ ನಿವೇಶೋऽಭ್ಯುಪಗತ ಇತ್ಯತ ಆಹ – ಯಸ್ಮಿನ್ನಿತಿ । ನಚ ಯಜಮಾನೇ ತಥಾ ಸಮ್ಭವತೀತ್ಯುಕ್ತಮಿತಿ ಭಾವಃ ।

'ದರ್ಶಪೂರ್ಣಮಾಸಪ್ರಕರಣಾತ್' ಎಂಬುದು ಲೇಖಕದೋಷವಾಗಿದೆ. ಏಕೆಂದರೆ ಇದು ಜ್ಯೋತಿಷ್ಟೋಮ ಪ್ರಕರಣದಲ್ಲಿದೆಯೆಂದು ಸೂತ್ರದಲ್ಲಿ 'ಪ್ರತಿಪದ್' ವಿಧಾನವನ್ನು ಮಾಡಿದ್ದಾರೆ.

ಪ್ರಾತಿಪದಿಕಾರ್ಥವಾದ ಸಂಖ್ಯೆಯು 'ಯಜಮಾನಯೋಃ' ಎಂಬಲ್ಲಿ ಅಸಂಭಾವಿತವಾದ್ದರಿಂದ ಮತ್ತೊಂದೆಡೆ ಉತ್ಕರ್ಷ ಮಾಡಬೇಕೆಂದು ಹೇಳಿದಿರಿ. ಹಾಗಾದರೆ ''ನ ಸಂಖ್ಯೋಪಸಂಗ್ರಹಾತ್'' ಎಂಬ ಅಧಿಕರಣದಲ್ಲಿ ''ಯಸ್ಮಿನ್ ಪಂಚ ಪಂಚಜನಾಃ'' ಎಂಬ ವಾಕ್ಯವು ಪ್ರಸಕ್ತವಾಗಿದೆ. ಇಲ್ಲಿರುವ ಬಹುತ್ವವು ಪ್ರಾತಿಪದಿಕವಾದ ಪಂಚಶಬ್ದದಿಂದಲೇ ತಿಳಿಯುತ್ತಿದೆ. ಆದರೆ ಒಬ್ಬನೇ ಬ್ರಹ್ಮನಲ್ಲಿ ಈ ಪಂಚತ್ವ ಸಂಖ್ಯೆಯು ಅಸಂಭಾವಿತವಾಗಿದೆ. ಆದರೂ ಸಹ ಮತ್ತೊಂದೆಡೆ ಉತ್ಕರ್ಷವನ್ನು ಮಾಡದೆ ಅಲ್ಲಿಯೇ ವಾಕ್ಯಕ್ಕೆ ಸಾರ್ಥಕ್ಯವನ್ನು ಹೇಳುತ್ತೀರಿ ಇದು ಹೇಗೆ ಸರಿ ? ಎಂಬ ಪ್ರಶ್ನೆಗೆ ಗ್ರಂಥಕಾರರು 'ಯಸ್ಮಿನ್' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಬ್ರಹ್ಮನಿಗೆ ಅನೇಕ ರೂಪಗಳಿರುವುದರಿಂದ ಪಂಚತ್ವ ಸಂಖ್ಯೆಗೆ ಬ್ರಹ್ಮನಲ್ಲಿ ಅನ್ವಯವನ್ನು ಹೇಳಬಹುದು. ಆದರೆ ಯಜಮಾನನು ಒಬ್ಬನೇ ಆಗಿರುವುದರಿಂದ ದ್ವಿತ್ವ ಸಂಖ್ಯೆಗೆ ಅನ್ವಯವನ್ನು ಹೇಳಲಾಗದು.

ಗುರುರಾಜೀಯಮ್ – ನನ್ವದಿತಿಃ ಪಾಶಾನಿತ್ಯತ್ರ ಪ್ರಕೃತ್ಯರ್ಥಸ್ವಾರಸ್ಯಾನುಸಾರೇಣ ಪ್ರತ್ಯಯಾರ್ಥಸ್ವಾರಸ್ಯಾದರ್ಶನಾತ್ । ಯದಿ ತು ಋತಂ ಪಿಬನ್ತಾವಿತ್ಯತ್ರ ಪ್ರಕೃತ್ಯರ್ಥಸ್ವಾರಸ್ಯಾನುಸಾರೇಣ ಪ್ರತ್ಯಯಾರ್ಥಸ್ವಾರಸ್ಯಂ ಚೇತ್ಕಲ್ಪ್ಯತೇ ತರ್ಹಿ ದರ್ಶಪೂರ್ಣಮಾಸಪ್ರಕರಣಸ್ಥಸ್ಯ ಯುವಂ ಹಿ ಸ್ಥಃ ಸ್ವರ್ಪತೀತಿ ದ್ವಯೋರ್ಯಜಮಾನಯೋಃ ಪ್ರತಿಪದಂ ಕುರ್ಯಾದಿತಿ ಶ್ರುತಸ್ಯ ಯಜಮಾನಾದಿದ್ವಿತ್ವಸ್ಯ ಪ್ರಕರಣಾನ್ತರ ಉತ್ಕರ್ಷಸ್ಯ ದರ್ಶನಾತ್ಪ್ರಕೃತೇऽಪಿ ಋತಂ ಪಿಬನ್ತಾವಿತ್ಯಸ್ಯ ಪ್ರಕರಣಾನ್ತರ ಉತ್ಕರ್ಷೋऽಪಿ ಕಿಂ ನ ಸ್ಯಾದಿತ್ಯತಸ್ತದ್ವೈಷಮ್ಯಮುಪಪಾದಯತಿ – ಯುವಂ ಹೀತಿ ।। ಶ್ರುತಂ ಯಜಮಾನದ್ವಿತ್ವಾದಿತ್ತು ಕಯಜಮಾನ ಕದರ್ಶಪೂರ್ಣಮಾಸಪ್ರಕರಣಾದುತ್ಕೃಷ್ಟಮಿತ್ಯರ್ಥಃ ।

तत्र हेतुमाह – **द्वयादीति** ।। तथाच तत्र प्रकरणादुत्कर्षाभावे प्रकृत्यर्थस्यैवास्वारस्यापत्त्या प्रकरणादुत्कर्षः । ननु प्रत्ययार्थास्वारस्यवत्प्रकृत्यर्थस्या-स्वारस्यं भवत्वित्याशङ्क्य प्रत्ययार्थो द्विविधः । सङ्ख्यारूपः कारकरूपश्चेति । तत्र सङ्ख्यारूपार्थानभिधानेऽपि कारकरूपप्रत्ययार्थस्याभिधानेन प्रत्ययस्य सार्थक्यं सम्भवतीत्याह – **सङ्ख्येति** ।। **रामकृष्णावित्यादाविति** ।। रामकृष्णयोर्द्विरूपत्वेन सर्वत्र प्रसिद्धत्वादृतपानकर्तृद्वित्वस्योपपादयिष्यमाणत्वादद्याप्यसिद्धत्वेऽपि रामकृष्णादिवत् सम्भावनामात्रस्य कर्तुं शक्यत्वाद्यजमानद्वित्वस्य रूपभेदेनाप्यसम्भा वितत्वात्तस्योत्कर्षेऽपि न प्रकृत उत्कर्ष इति भावः ।

ननु श्रुतस्य यजमानद्वित्वस्येव यस्मिन्पञ्चपञ्चजना इत्यत्र बहुत्वस्यापि प्रकृत्यर्थत्वात्तस्य चैकस्मिन्ब्रह्मण्यसम्भवात्तस्मात्प्रकरणादन्यत्रोत्कर्षः स्यादित्यत आह – **यस्मिन्निति** ।। दृष्टान्तदार्ष्टान्तिकयोर्वैषम्यमात्रप्रदर्शनार्थं पूर्वं द्वयोर्यजमानयोरित्यत्र द्वित्वस्य प्रातिपादिकार्थतोक्तिः । अत एव तत्र रामकृष्णावित्यादिना रूपनिर्देशेषेणैवेत्यादिना वस्तुस्थितिरुक्तेति हृदयम् ।।

ಸಾರ

'द्वयोः यजमानयोः प्रतिपदम् कुर्यात्' ಎಂಬುದು ಕರ್ಮಮೀಮಾಂಸೆಯ ಸೂತ್ರ. ಯಾವ ಜ್ಯೋತಿಷ್ಟೋಮಯಾಗದಲ್ಲಿ 'युवं हि स्थः स्वर्पती' ಎಂಬ ಮಂತ್ರವನ್ನು ಮೊದಲು ಉಚ್ಚರಿಸಬೇಕೆಂದು ಹೇಳುತ್ತಿದ್ದಾರೋ ಆ ಜ್ಯೋತಿಷ್ಟೋಮಯಾಗದಲ್ಲಿ ಇಬ್ಬರು ಯಜಮಾನರಿಗೆ ಅವಕಾಶವೇ ಇರುವುದಿಲ್ಲ. ಆದರೆ 'द्वयोः यजमानयोः' ಎಂಬ ಇಬ್ಬರು ಯಜಮಾನರನ್ನು ಕರ್ತೃವನ್ನಾಗಿ ಸೂತ್ರವು ಹೇಳುತ್ತಿದೆ. ಆದ್ದರಿಂದ ಅನಿವಾರ್ಯವಾಗಿ ಮತ್ತೊಂದು ಯಾಗದಲ್ಲಿ ಇದರ ಸಾರ್ಥಕ್ಯವನ್ನು ಸಂಪಾದಿಸಬೇಕು. ಆದರೆ 'ऋतं पिबन्तौ' ಎಂಬಲ್ಲಿ ಮತ್ತೊಂದಡೆ ದ್ವಿತ್ವದ ಅನ್ವಯ ಮಾಡುವ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಇಬ್ಬರು ಯಜಮಾನರು ಜ್ಯೋತಿಷ್ಟೋಮ ಯಾಗದಲ್ಲಿ ಇರಲು ಸಾಧ್ಯವಿಲ್ಲ. ಆದ್ದರಿಂದ 'ದ್ವಿತ್ವ' ಸಂಖ್ಯೆಗೆ ಅನ್ವಯ ಮಾಡಲು ಅಲ್ಲಿ ಅವಕಾಶವಿಲ್ಲ. ಆದರೆ 'ऋतं पिबन्तौ' ಎಂಬಲ್ಲಿ ಬ್ರಹ್ಮನ ಎರಡು ರೂಪಗಳಲ್ಲಿ ಅನ್ವಯ ಮಾಡಬಹುದಾದ್ದರಿಂದ ದೋಷವಿಲ್ಲ.

निर्ज्ञात विरुद्धविशेषणत्वदे अविवक्षेगे प्रयोजक

तात्पर्यचन्द्रिका

ननु ''प्रोद्गातॄणां'' इत्यत्रेव विभक्तयर्थानेकत्वानुग्रहाय प्रकृतेऽपि च्छत्रिवत्प्रातिपदिकलक्षणैव युक्तेति चेत्,

न, तत्रैव प्रकरणे उद्गातृशब्दलक्षणीयानां प्रस्तोत्रादिनां छन्दोगानामिवात्र ब्रह्मप्रकरणे लक्षणीयस्यान्यस्याभावात् । अत एव 'पाशान्' इत्यत्र बहुत्वाय प्रातिपदिकलक्षणानाश्रिता । उद्गातृपदेन च्छन्दोगानामिव पाशशब्देन बन्धकद्रव्यलक्षणायां प्रकरणे बन्धकबहुत्वस्याभावात्, यागसाधनद्रव्यमात्रलक्षणायां च पाशमन्त्रस्थस्य 'प्रमुमोक्तुः' इत्यस्यानन्वयात् ।

किञ्च – यद्यपि टीकायां 'यौ गुहां प्रविष्टौ तौ छायातपौ वदन्ति' इत्युक्तत्वेन 'छायातपौ' इत्यनेनोक्तं द्वित्वं विधेयविशेषणम्; तथापि ''अग्नीनादधीत'' इत्यादौ बहुत्वस्य उद्देश्यविशेषणत्वेऽपि विविक्षादर्शनेन ''सत्रादुदवसाय पृष्ठशमनीयेन यजेरन्'' इत्यत्र च बहुत्वस्य विधेयविशेषणत्वेऽपि अविवक्षादर्शनेन निर्ज्ञात-विशेषणत्वमेवाविवक्षायां तन्त्रमिति ग्रहैकत्वनये स्थितत्वादिह च ''यस्य ब्रह्म च क्षत्रं च'' इत्यादिपूर्ववाक्ये 'यस्य' इत्येकवचनेनैकत्वसङ्ख्याया निर्ज्ञातत्वात् द्वित्वस्य अविवक्षास्तु । ''सप्तदश प्राजापत्यान्'' ''द्वा सुपर्णा'' इत्यादौ तु प्रागेकत्वस्यानवधृतत्वात् ''अनश्नन्नन्यः'' इत्यादिवाक्यशेषाद्यनुसाराच्च भेद आश्रितः । न चैत्सर्गिकस्य क्वचिदपवादेनान्याथात्वे सर्वत्रापि तथात्वं युक्तम् ।

उक्तं ननुव्याख्याने -

उत्सर्गतोऽपि यत्प्राप्तमपवादविवर्जितम् ।
व्यभिचार्यपवादेन मानमेव भविष्यति ।
इति ।

ಅನುವಾದ - ಆಕ್ಷೇಪ - ಪೂರ್ವಮೀಮಾಂಸೆಯಲ್ಲಿ 'ಪ್ರೋದ್ಗಾರ್ತ್ವಿಕಾಂ' ಎಂಬುದಾಗಿ ಬಹುವಚನ ಪ್ರಯೋಗವಿದೆ. ಬಹುವಚನಕ್ಕೆ ಅನೇಕತ್ವವೆಂಬ ಅರ್ಥವನ್ನು ಸ್ವೀಕರಿಸುವುದಕ್ಕಾಗಿ ಉದ್ಗಾತೃ

ಪ್ರಾತಿಪದಿಕಕ್ಕೆ ಹೋತೃ ಮೊದಲಾದವರಲ್ಲಿ ಭತ್ತಿನ್ಯಾಯದಿಂದ ಲಕ್ಷಣಾ ಮಾಡುವುದು ಕಂಡಿದೆ. ಆದರಂತೆ 'ಋತಂ ಪಿಬಂತೌ' ಎಂಬಲ್ಲಿಯೂ ದ್ವಿವಚನಪ್ರಯೋಗವನ್ನು ಕೂಡಿಸುವುದಕ್ಕಾಗಿ 'ಪಿಬತ್' ಪ್ರಾತಿಪದಿಕಕ್ಕೆ ಭತ್ತಿನ್ಯಾಯದಂತೆ ಜೀವೇಶ್ವರರಲ್ಲಿ ಜಹದಜಹಲ್ಲಕ್ಷಣವನ್ನೇಕೆ ಮಾಡಬಾರದು ?

ಸಮಾಧಾನ - ದೃಷ್ಟಾಂತದಲ್ಲಿ ವೈಷಮ್ಯವಿದೆ. ಯಾವಪ್ರಕರಣದಲ್ಲಿ 'ಪ್ರೋದ್ಗಾತ್ರಣಾಂ' ಎಂಬ ಶ್ರುತಿಯಿದೆಯೋ ಅದೇ ಪ್ರಕರಣದಲ್ಲಿ 'ಉದ್ಗಾತೃ' ಶಬ್ದಕ್ಕೆ ಲಕ್ಷಣೀಯರಾದ ಯಾವ ಪ್ರಸ್ತೋತ್ರಾದಿಗಳು ಪ್ರಸಕ್ತರಾಗಿದ್ದಾರೆ. ಮತ್ತು ಅಂತಹ ಪ್ರಸ್ತೋತ್ರಾದಿಗಳು ಸಾಮವೇದವನ್ನು ಅಧ್ಯಯನ ಮಾಡಿ ಛಂದೋಗರೆಂದು ಪ್ರಸಿದ್ಧರಾಗಿದ್ದಾರೆ. ಆದ್ದರಿಂದ 'ಉದ್ಗಾತೃ' ಶಬ್ದಕ್ಕೆ ಹೋತೃ ಪ್ರಸ್ತೋತೃಗಳಲ್ಲಿ ಜಹದಜಹಲ್ಲಕ್ಷಣಾವನ್ನು ಮಾಡಬಹುದು. ಆದರೆ 'ಋತಂ ಪಿಬಂತೌ' ಎಂಬ ಶ್ರುತಿಯು ಬ್ರಹ್ಮಪ್ರಕರಣದಲ್ಲಿದೆ. ಈ ಪ್ರಕರಣದಲ್ಲಿ ಯಾರಲ್ಲಿ ಲಕ್ಷಣಾ ಮಾಡಬೇಕೋ ಅಂತಹ ಜೀವಾದಿಗಳು ಪ್ರಸಕ್ತರೇ ಆಗಿರುವುದಿಲ್ಲ. ಮತ್ತು ಆ ಜೀವನಲ್ಲಿ ಋತಪಾತೃತ್ವವೂ ಸಹ ಇರುವುದಿಲ್ಲ. ಹೀಗಿರುವಾಗ 'ಪ್ರೋದ್ಗಾತ್ರಣಾಂ' ಎಂಬ ದೃಷ್ಟಾಂತದಂತೆ ಇಲ್ಲಿ ಜಹದಜಹಲ್ಲಕ್ಷಣಾವನ್ನು ಮಾಡಲು ಸಾಧ್ಯವಿಲ್ಲ.

ಲಕ್ಷಣಾ ಮಾಡಲು ಉಪಯೋಗಿಯಾದ ಧರ್ಮವು ಇಲ್ಲದ ಕಾರಣದಿಂದಲೇ 'ಅದಿತಿಃ ಪಾಶಾನ್' ಎಂಬಲ್ಲಿ ಬಹುವಚನವನ್ನು ಕೂಡಿಸುವುದಕ್ಕಾಗಿ ಪ್ರಾತಿಪದಿಕಕ್ಕೆ ಲಕ್ಷಣಾವನ್ನು ಮಾಡಿರುವುದಿಲ್ಲ. ಲಕ್ಷಣೀಯವಾದ ವಸ್ತು ಅದೇ ಪ್ರಕರಣದಲ್ಲಿರಬೇಕಾದ್ದರಿಂದ. ಆದರೆ 'ಪ್ರೋದ್ಗಾತ್ರಣಾಂ' ಎಂಬಲ್ಲಿ ಉದ್ಗಾತೃ ಪದದಿಂದ ಪ್ರಸ್ತೋತ್ರಾದಿಗಳನ್ನು ಲಕ್ಷಣಯಾ ಸ್ವೀಕರಿಸಲು ಉಪಯೋಗಿಯಾದ ಛಂದೋಗತ್ವವು ಸಾಧಾರಣವಾಗಿರುತ್ತದೆ. ಪಾಶಶಬ್ದಕ್ಕೆ ಲಕ್ಷಣಾ ಮಾಡಲು ಉಪಯೋಗಿಯಾದ ಇಂತಹ ಯಾವುದೇ ಬಂಧಕದ್ರವ್ಯಗಳು ಸಮಗ್ರ ಪ್ರಕರಣದಲ್ಲಿ ಕಾಣಿಸದ ಕಾರಣ, ಬಂಧಕಬಹುತ್ವವನ್ನು ಹೇಳಲು ಸಾಧ್ಯವಿಲ್ಲ.

ಇನ್ನು ಯಾಗಸಾಧನದ್ರವ್ಯತ್ವವನ್ನು ಲಕ್ಷಣಕ್ಕೆ ಉಪಯೋಗಿಯಾದ ಧರ್ಮವೆನ್ನಬೇಕು. ಹಾಗೇ ಉಳಿದ ಯಾಗಸಾಧನ ದ್ರವ್ಯಗಳಲ್ಲಿ ಲಕ್ಷಣಾ ಮಾಡುವುದಾದರೆ ಪಾಶ ಮಂತ್ರದಲ್ಲಿರುವ 'ಪ್ರಮುಮೋಕ್ತು' (ಬಂಧನದಿಂದ ಬಿಡಿಸಲಿ) ಎಂಬ ಕ್ರಿಯಾಪದಕ್ಕೆ ಅನ್ವಯವೇ ಇಲ್ಲದಂತಾಗುತ್ತದೆ.

ವಸ್ತುತಃ ಟೀಕೆಯಲ್ಲಿ 'ಯೌ ಗುಹಾಂ ಪ್ರವಿಷ್ಟೌ ತೌ ಛಾಯಾತಪೌ ವದಂತಿ' ಎಂದು ಹೇಳಿರುವುದರಿಂದ ಗುಹಾಪ್ರವಿಷ್ಟತ್ವಾದಿಗಳೆಲ್ಲವು ಉದ್ದೇಶ್ಯವಾಗಬಹುದು. ಆದರೆ ಛಾಯಾತಪತ್ವವನ್ನು ವಿಧಾನ ಮಾಡುತ್ತಿರುವುದರಿಂದ 'ಛಾಯಾತಪೌ' ಎಂಬಲ್ಲಿರುವ ದ್ವಿತ್ವವು ವಿಧೇಯವಿಶೇಷಣವಾಗುತ್ತದೆ. ಉದ್ದೇಶವಿಶೇಷಣವನ್ನು ಅವಿವಕ್ಷಿತವೆಂದು ಹೇಳಬಹುದಾದರೂ ವಿಧೇಯವಿಶೇಷಣವನ್ನು ಅವಿವಕ್ಷಿತವೆನ್ನಲು ಸಾಧ್ಯವಿಲ್ಲವೆಂದು ಪೂರ್ವಪಕ್ಷಕಾರರು ಹೇಳಬಹುದು.

ಆದರೆ ಯಾವುದು ಉದ್ದೇಶವಿಶೇಷಣವೋ? ಅದೆಲ್ಲವೂ ಅವಿವಕ್ಷಿತವಾಗಿರುತ್ತದೆ. ವಿಧೇಯವಿಶೇಷಣವಾದದ್ದೆಲ್ಲ ಅವಿವಕ್ಷಿತವಾಗಿರುತ್ತದೆಂಬ ವ್ಯಾಪ್ತಿಯು ವ್ಯಭಿಚರಿತವಾಗಿದೆ. 'ಅಗ್ನೀನಾದಧೀತ' ಎಂಬ ಸ್ಥಳದಲ್ಲಿ ಬಹುತ್ವವು ಉದ್ದೇಶವಿಶೇಷಣವಾಗಿದ್ದರೂ ವಿವಕ್ಷಿತವಾಗಿದೆಯೆಂದೇ ಪೂರ್ವಮೀಮಾಂಸಕರು ಒಪ್ಪಿದ್ದಾರೆ. ಆದ್ದರಿಂದ ಉದ್ದೇಶವಿಶೇಷಣವಾದದ್ದು ಅವಿವಕ್ಷಿತವಾಗಿರುತ್ತದೆಂಬ ವ್ಯಾಪ್ತಿಯು ವ್ಯಭಿಚರಿತವಾಯಿತು. ''ಸತ್ರಾದುದವಸಾಯ ಪೃಷ್ಠಶಮನೀಯೇನ ಯಜೇರನ್'' ಎಂಬಲ್ಲಿ ಬಹುತ್ವವು ವಿಧೇಯವಿಶೇಷಣವಾಗಿದ್ದರೂ ಸಹ ಅವಿವಕ್ಷಿತವಾಗಿದೆಯೆಂದು ಮೀಮಾಂಸಕರು ಒಪ್ಪಿದ್ದಾರೆ. ಆದ್ದರಿಂದ ವಿಧೇಯವಿಶೇಷಣವಾದದ್ದು ವಿವಕ್ಷಿತವಾಗಿರುತ್ತದೆಂಬ ವ್ಯಾಪ್ತಿಯು ವ್ಯಭಿಚರಿತವಾಗಿದೆ.

ಅಥವಾ ಒಬ್ಬನೇ ಬ್ರಹ್ಮನಲ್ಲಿ ಅನೇಕತ್ವ ಸಂಖ್ಯೆಯ ಸಮರ್ಥನೆಯನ್ನು ''ನ ಸಂಖ್ಯೋಪಸಂಗ್ರಾಹಾತ್'' ಎಂಬ ಅಧಿಕರಣದ ಸಿದ್ಧಾಂತದಲ್ಲಿ ಸಮರ್ಥಿಸುತ್ತಾರೆಂದು ಹೇಳಬಹುದು. ಆದ್ದರಿಂದಲೇ ಆ ಅಧಿಕರಣದ ನ್ಯಾಯವಿವರಣದಲ್ಲಿ ''ಬಹುರೂಪತ್ವಾದಧಿಕರಣಾಧೇಯತ್ವಾದಿಕಂ ತಸ್ಯೈವ ಯುಜ್ಯತೇ'' ಬಹುರೂಪವಾದ್ದರಿಂದ ಅಧಿಕರಣತ್ವ ಆಧೇಯತ್ವಗಳು ಬ್ರಹ್ಮನಲ್ಲಿ ಯುಕ್ತವಾಗುತ್ತವೆಂಬುದಾಗಿ ಅನೇಕತ್ವಸಂಖ್ಯೆಯನ್ನು ಸಂಗ್ರಹಿಸುವುದಕ್ಕಾಗಿಯೇ ಆದಿಪದವನ್ನು ಹೇಳಿದ್ದಾರೆ. ಈ ಅಧಿಕರಣದಲ್ಲಾದರೂ ಬ್ರಹ್ಮನು ಕರ್ಮಬಂಧರಹಿತನಾದರೂ ಸಹ ಭೋಕ್ತೃವಾಗಿದ್ದಾನೆಂದಷ್ಟೇ ಸಮರ್ಥಿಸಲಾಗಿದೆ. ಹೀಗೆ ಎರಡು ಅಧಿಕರಣಗಳ ವೈಲಕ್ಷಣ್ಯವನ್ನು ತಿಳಿಯಬೇಕು.

ಹೀಗೆ ಎರಡು ಪಕ್ಷಗಳಲ್ಲಿ ಮೊದಲನೆಯ ಪಕ್ಷದ ಪ್ರಕಾರ ''ನ ಸಂಖ್ಯೋಪಸಂಗ್ರಹಾತ್'' ಎಂಬ ಸೂತ್ರದಲ್ಲಿ 'ಸಂಖ್ಯೋಪಸಂಗ್ರಹ' ಶಬ್ದದಿಂದ ಹೇಳಲ್ಪಟ್ಟ ಒಂದರಲ್ಲಿ ಅನೇಕತ್ವವು ಬರುವುದಿಲ್ಲವೆಂಬ ಅನುಪಪತ್ತಿಯು ಪೂರ್ವಪಕ್ಷದ ಅಭ್ಯುಚ್ಚಯಯುಕ್ತಿಯಾಗಿದೆ. 'ಅಪಿ' ಶಬ್ದದಿಂದ ಹೇಳಲ್ಪಟ್ಟ ಆಧಾರಾಧೇಯಭಾವದ ಅನುಪಪತ್ತಿಯು ಪ್ರಧಾನವಾದ ಮೂಲಯುಕ್ತಿಯಾಗಿದೆ. ಎರಡನೆಯ ಪಕ್ಷದಲ್ಲಿ 'ಗುಹಾಂ ಪ್ರವಿಷ್ಟೌ' ಎಂಬ ಸೂತ್ರದಲ್ಲಿ ''ಆತ್ಮಾನೌ ಹಿ'' ದ್ವಿವಚನದಿಂದ ಆತ್ಮಅಂತರಾತ್ಮವೆಂಬ ಎರಡು ಪರಮಾತ್ಮನ ರೂಪಗಳ ವಚನವು ಸಿದ್ಧಾಂತದ ಅಭ್ಯುಚ್ಚಯಯುಕ್ತಿಯಾಗಿದೆ. ''ಆಧೇಯಂ ಮಾತೀತಿ'' ಎಂಬ ವ್ಯುತ್ಪತ್ತಿಯಿಂದ ಆತ್ಮಶಬ್ದದಿಂದ ಹೇಳಲ್ಪಟ್ಟ ಶುಭಭೋಕ್ತೃತ್ವವು ಪ್ರಧಾನಯುಕ್ತಿಯಾಗಿದೆ.

प्रकाशः –

नन्वत्रैव द्वित्वस्य भगवति व्युत्पाद्यत्वेऽत्रैव चतुर्थपादे ''न सङ्ख्योपसङ्ग्रहादपि नानाभावादतिरेकाच्च'' इति तृतीयेऽधिकरणे ।

यस्मिन् पञ्च पञ्च जना आकाशश्च प्रतिष्ठितः ।
तमेव मन्य आत्मानं विद्वान् ब्रह्मामृतोऽमृतम् ।।

इति वाक्ये 'पञ्च पञ्च' इति वीप्सया प्रतिशरीरं पञ्चत्वसङ्ख्या विशिष्टतया जनशब्देनोक्तः किं विष्णुरन्यो वेति संशये, पञ्चजनशब्दस्य बहुत्वसङ्ख्याविशिष्टवस्तु-वाचित्वाद्बहुत्वस्येश्वरे विरुद्धत्वादन्य इति प्राप्ते, स्वगतभेदशून्यस्यापि नानारूपत्वेन बहुत्वसङ्ख्योपसङ्ग्रहाविरोधाद्विष्णुरेवेति सिद्धान्तितत्वेन तेन गतार्थमिदमित्यत आह – न सङ्ख्येति ।

ವಿವರಣೆ – ಈ ಅಧಿಕರಣದಲ್ಲಿ ಏಕತ್ವಕ್ಕೆ ಆಶ್ರಯನಾದ ಬ್ರಹ್ಮನಲ್ಲಿ ದ್ವಿತ್ವ ಬಹುತ್ವಾದಿ ಸಂಖ್ಯೆಗಳನ್ನು ಸಮರ್ಥಿಸುತ್ತಿದ್ದಾರೆಂದು ಹೇಳಿದಿರಿ. ಹಾಗಾದರೆ ಇದೇ ಅಧ್ಯಾಯದ ನಾಲ್ಕನೇ ಪಾದದಲ್ಲಿ ಬರುವ ''ನ ಸಂಖ್ಯೋಪಸಂಗ್ರಹಣಾಧಿಕರಣ''ದಲ್ಲಿಯೂ ಇದೇ ವಿಚಾರವು ಬರುತ್ತಿರುವುದರಿಂದ ಪುನರುಕ್ತಿ ಬರುತ್ತದೆ-

ನ ಸಂಖ್ಯೋಪಸಂಗ್ರಹಾದಪಿ ನಾನಾಭಾವಾದತಿರೇಕಾಚ್ಚ (೧-೪-೩)

ಯಸ್ಮಿನ್ ಪಂಚ ಪಂಚಜನಾ ಆಕಾಶಶ್ಚ ಪ್ರತಿಷ್ಠಿತಃ।
ತಮೇವ ಮನ್ಯ ಆತ್ಮಾನಂ ವಿದ್ವಾನ್ ಬ್ರಹ್ಮಾಮೃತೋಽಮೃತಮ್ ॥

ಎಂಬ ಶ್ರುತಿಯು ಈ ಅಧಿಕರಣದ ವಿಷಯವಾಕ್ಯವಾಗಿದೆ. ಇದರಲ್ಲಿ 'ಪಂಚ ಪಂಚ' ಎಂಬುದಾಗಿ ಎರಡು ಬಾರಿ 'ಪಂಚ' ಶಬ್ದವನ್ನು ಹೇಳಿದ್ದರಿಂದ ಪ್ರತಿಯೊಬ್ಬರ ಶರೀರದಲ್ಲಿಯೂ ಪಂಚತ್ವಸಂಖ್ಯೆಯಿಂದ ವಿಶಿಷ್ಟನಾದ ಜನಶಬ್ದದಿಂದ ಪ್ರತಿಪಾದ್ಯನಾದವನು ಶ್ರುತನಾಗಿದ್ದಾನೆ. ಇವನು ವಿಷ್ಣುವೋ? ಅಥವಾ ಬೇರೆಯವನೋ? ಎಂದು ಸಂದೇಹ.

ಪೂರ್ವಪಕ್ಷ - 'ಪಂಚಜನ' ಶಬ್ದವು ಬಹುತ್ವಸಂಖ್ಯೆಯಿಂದ ವಿಶಿಷ್ಟವಾದ ವಸ್ತುವನ್ನು ಪ್ರತಿಪಾದಿಸುತ್ತಿದೆ. ಆದರೆ ಒಬ್ಬನೇ ಈಶ್ವರನಲ್ಲಿ ಬಹುತ್ವ ಸಂಖ್ಯೆಯು ವಿರುದ್ಧವಾಗಿರುವುದರಿಂದ ಬೇರೆಯವನೇ 'ಪಂಚಜನ' ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

ಸಿದ್ಧಾಂತ - ಒಬ್ಬನೇ ಭಗವಂತನಲ್ಲಿ ಪಂಚತ್ವ ಸಂಖ್ಯೆಯನ್ನೂ ಸಹ ಹೇಳಬಹುದು. ವಸ್ತುತಃ ಭಗವಂತನು ಸ್ವಗತಭೇದ ಶೂನ್ಯನಾಗಿದ್ದಾನೆ. ಆದರೂ ಸಹ ಅನೇಕ ರೂಪಗಳನ್ನು ತಾಳಿರುವುದರಿಂದ ಬಹುತ್ವ ಸಂಖ್ಯೆಯು ಅವನಲ್ಲಿ ಉಪಪನ್ನವಾಗುತ್ತದೆ. ಈ ಕಾರಣದಿಂದ 'ಪಂಚಜನ' ಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

ಹೀಗೆ ಸಿದ್ಧಾಂತ ಮಾಡಿದ್ದರಿಂದ 'ನ ಸಂಖ್ಯೋಪಸಂಗ್ರಹಾಧಿಕರಣ'ದಲ್ಲಿಯೂ ಬಹುತ್ವ ಸಂಖ್ಯೆಗೆ ಭಗವಂತನನ್ನು ಆಶ್ರಯನೆಂದು ಪ್ರತಿಪಾದಿಸಿದಂತಾಯಿತು. ಈ ಅಧಿಕರಣದಲ್ಲಿಯೂ ಅದೇ ವಿಚಾರವನ್ನು ಪ್ರತಿಪಾದಿಸಿದರೆ ಪುನರುಕ್ತಿ ದೋಷವು ಬರುತ್ತದಲ್ಲವೇ? ಈ ಪ್ರಶ್ನೆಗೆ 'ನ ಸಂಖ್ಯೋಪಸಂಗ್ರಹಾತ್' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – तत्र न बहुत्वानुपपत्तिः पूर्वपक्षयुक्तिः, किन्तु 'यस्मिन्' इति सप्तम्या निर्दिष्टस्य ''तमेव'' इति वाक्यशेषबलेन विष्णुत्वात्तदाधेयतयोक्तानां पञ्चजनाकाशशब्दोक्तानां न विष्णुत्वमेकस्यैवाधाराधेयभावायोगादिति प्राप्ते, अत्र सिद्धेनानेकत्वेन तत्समाधानं तत्र करिष्यते । अत एव तत्र टीका ''न ह्येकस्यैवाधाराधेयभावो युज्यते'' इत्यादि । न त्वनेकत्वं व्युत्पाद्यते येन पौनरुक्त्यमित्यर्थः ।

एतेन न्यायविवरणटीकायां आनन्दमयनयेन गतार्थत्वशङ्का स्यादिति तु दिक्प्रदर्शनपरमिति भावः ।

'न संख्योपसंग्रहाधिकरण'दल्लि बहुत्ववु अनुपपन्नवागुत्तदेंदु पूर्वपक्षद अभिप्रायवल्ल, हॊरतागि 'यस्मिन्' एंब सप्तमिविभक्तियिंद अधिकरणत्ववु तिळियुत्तद. ''तमेव'' एंब वाक्यद बलदिंद सप्तम्यंतपददिंद निर्दिष्टनादवनु विष्णुवेंदु निर्णयवागुत्तदे. इंतह विष्णुविनल्लि अधेयवागि हेळल्पट्ट पंचजनवागलि आकाशवागलि विष्णुवागलु साध्यविल्ल. एकेंदरे तन्नल्लियें अधाराधेयभावववु कूडुवुदिल्लवेंदु पूर्वपक्ष माडि ई अधिकरणद सिद्धांतन्यायवन्नु अनुसरिसि अनेक रूपगळिरुव ऒब्बनें विष्णुविनल्लि अधाराधेयभाववन्नु हेळबहुदेंदु निर्णयिसिद्दारे. आद्दरिंदलें ई अधिकरणद टीकेयल्लि ''न ह्येकस्यैवाधाराधेयभावो युज्यते'' ऒब्बनें विष्णुविनल्लि अधाराधेयभाववु युक्तवागुवुदिल्ल. इत्यादियागि हेळिद्दारे, हॊरतु अनेकत्ववन्नु ई अधिकरणदल्लि समर्थिसिरुवंते 'न संख्योपसंग्रहाधिकरण'दल्लि समर्थिसल्ल. हागें समर्थिसिद्दल्लि पुनरुक्ति दोषवन्नु हेळबहुदित्तु.

ईगे हेळिद्दरिंद न्यायविवरणद टीकेयल्लि हेळल्पट्ट आनंदमयाधिकरणदिंद माडल्पट्ट गतार्थत्व शंकेयु दिक्प्रदर्शनवेंदु तिळियुत्तद.

प्रकाशः – ननु तत्र टीकायां न्यायविवरणे च 'आधाराधेयत्वादि' इत्यादिपदास्वारस्यं,

टीकायां बहुत्वानुपपत्त्या पूर्वपक्षकरणं चास्वरसमित्यतः, सर्वस्वारस्याचाह – यद्वेति । कथं तर्ह्यपौनरुक्त्यमित्यत आह – अत्र त्विति । पक्षद्वयेऽप्युभयत्रानेकत्वोक्तेरपौनरुक्त्यं स्पष्टयति – तत्राच इति ।

अथवा मत्तॊंदु बगेयल्लि पुनरुक्तियन्नु परिहरिसबहुदु - हिंदे हेळिद प्रकार अनेकत्व संख्येयन्नु 'न संख्योपासंग्रहाधिकरणवु' समर्थिसिदल्लि 'न संख्योपासंग्रहाधिकरणद' टीकेयल्लि मत्तु न्यायविवरणेयल्लि 'अधाराधेयत्वादि' एंब पदवु अस्वरसवागुत्तदे.

मत्तु टीकेयल्लि बहुत्वद अनुपपत्तियिंद पूर्वपक्ष माडिद्दू सह अस्वरसवागुत्तदल्लवे? एंब प्रश्नेगे एल्लवन्नु स्वारस्यगॊळिसलु 'यद्वा' इत्यादियागि

ಮತ್ತೊಂದು ಪಕ್ಷವನ್ನು ಹೇಳುತ್ತಿದ್ದಾರೆ. ಹಾಗಾದರೆ ಪುನರುಕ್ತಿಯು ಹೇಗೆ ಪರಿಹಾರವಾಯಿತು? ಎಂಬ ಪ್ರಶ್ನೆಗೆ 'ಅತ್ಯತ್ವ' ಎಂಬ ವಾಕ್ಯವನ್ನು ಉತ್ತರಿಸಿದ್ದಾರೆ. ಎರಡು ಪಕ್ಷಗಳಲ್ಲಿಯೂ ಎರಡೂ ಕಡೆ ಅನೇಕತ್ವ ಸಂಖ್ಯೆಯನ್ನು ಹೇಳುತ್ತಿರುವುದರಿಂದ ಪುನರುಕ್ತಿಯು ಹೇಗೆ ಬರುವುದಿಲ್ಲವೆಂಬುದನ್ನು 'ತತ್ರಾದ್ಯೇ' ಇತ್ಯಾದಿ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ.

ಪ್ರಕಾಶಃ – ಸಙ್ಖ್ಯೋಪಸङ्ग्रहादपि ನ ವಿರೋಧ ಇತ್ಯುಕ್ತಯಾ ಪೂರ್ವಪಕ್ಷೇ ಸಙ್ಖ್ಯಾನುಪಪತ್ತಿರ್ಯಾ-ದುಕ್ತೇತ್ಯರ್ಥಃ । ಅಭ್ಯುಚ್ಚಯೇತಿ । ಯಥಾ ಪರಮತೇ ಈಕ್ಷತಿನಯೇ ಪ್ರಾಯಪಾಠೇ ನಿರಸ್ತೇऽಪ್ಯಭ್ಯುಚ್ಚಯತ್ವೇನ ''ಅತ ಏವ ಪ್ರಾಣಃ'' ಇತ್ಯತ್ರ ತದುಕ್ತಿಃ, ಯಥಾ ವಾ ''ಸರ್ವತ್ರ'' ಇತಿ ನಯೇ ಸ್ವಮತೇ ಹೇತ್ವನ್ತರೇಣ ಪೂರ್ವಪಕ್ಷೇ ಚಕ್ಷುರ್ಮಯತ್ವಾದೇರಭ್ಯುಚ್ಚಯತ್ವೇನೋಕ್ತಿಃ, ತಥೈವ ಸುಧಾಯಾಮುಕ್ತೇಃ ತಥೇಹಾಪೀತ್ಯರ್ಥಃ ।

ಸಂಖ್ಯೋಪಸಂಗ್ರಹದಿಂದಲೂ ವಿರೋಧ ಬರುವುದಿಲ್ಲವೆಂದು ಹೇಳಿದ್ದರಿಂದ ಪೂರ್ವಪಕ್ಷದಲ್ಲಿ ಸಂಖ್ಯಾನುಪಪತ್ತಿಯು ಅರ್ಥಾತ್ ಹೇಳಿದಂತಾಯಿತು. 'ಅಭ್ಯುಚ್ಚಯಯುಕ್ತಿ' ಎಂಬುದರ ಅಭಿಪ್ರಾಯ ಹೀಗಿದೆ - ಯಾವರೀತಿಯಾಗಿ ಅದ್ವೈತಿಗಳು ಈಕ್ಷತ್ಯಧಿಕರಣದಲ್ಲಿ ಪ್ರಾಯಪಾಠವನ್ನು ನಿರಾಸ ಮಾಡಿದ್ದರೂ ಸಹ ಪುನಃ ಅಭ್ಯುಚ್ಚಯಯುಕ್ತಿಯಿಂದ 'ಅತ ಏತ ಪ್ರಾಣಃ' ಎಂಬಲ್ಲಿ ಆಶಂಕಿಸಿದ್ದಾರೊ; ಅಥವಾ ನಮ್ಮ ಮತದಲ್ಲಿ ಸರ್ವಗತತ್ವಾಧಿಕರಣದಲ್ಲಿ 'ಸರ್ವಪುರುಷಾಭಿಮುಖ್ಯ' 'ಆದಿತ್ಯೇ ಅನುಕ್ತತ್ವ' ಮೊದಲಾದ ಲಿಂಗಗಳಿಂದಲೇ ಪೂರ್ವಪಕ್ಷವು ದೃಢವಾಗುತ್ತಿದ್ದರೂ ಸಹ ಪುನಃ ಚಕ್ಷುರ್ಮಯತ್ವಲಿಂಗವನ್ನು ಅಭ್ಯುಚ್ಚಯ ಯುಕ್ತಿಯನ್ನಾಗಿ ಉಪಯೋಗಿಸಿದ್ದು ಕಾಣಿಸುತ್ತಿದೆ. ಸುಧೆಯಲ್ಲಿ ಹಾಗೆ ಹೇಳಿದ್ದಾರೆ - ಆದರಂತೆ ಪ್ರಕೃತದಲ್ಲಿಯೂ ಅನೇಕತ್ವಾನುಪಪತ್ತಿಯನ್ನು ಗುಹಾಧಿಕರಣದಲ್ಲಿ ನಿರಾಸ ಮಾಡಿದ್ದರೂ ಪುನಃ 'ನ ಸಂಖ್ಯೋಪಾಸಂಗ್ರಹಾಧಿಕರಣದಲ್ಲಿ' ಅಭ್ಯುಚ್ಚಯಯುಕ್ತಿಯನ್ನಾಗಿ ಉಪಯೋಗಿಸಿಕೊಳ್ಳುವುದು ತಪ್ಪಾಗುವುದಿಲ್ಲ.

ಗುರುರಾಜೀಯಮ್ – ನನು ನ ಸಙ್ಖ್ಯೋಪಸङ्ग्रहादपीत्यधಿಕರಣೇ ಏಕಸ್ಯಾನೇಕತ್ವಾನುಪಪತ್ತಿ-ಶಙ್ಕಾಯಾ ರೂಪಬಹುತ್ವಾಭಿಪ್ರಾಯೇಣಾಪರಿಹೃತತ್ವಾತದತ್ರಾಪಿ ತತ್ಪ್ರತಿಪಾದನೇ ಪೌನರುಕ್ತ್ಯಮಿತ್ಯತ ಆಹ – ನೇತಿ ।।

ನನ್ವೇತದಯುಕ್ತಮ್ । ತಥಾ ಸತಿ ನ ಸಙ್ಖ್ಯೋಪಸङ्ग्रहादಪೀತಿ ಸೂತ್ರೋಕ್ತಾಯಾ ಏಕಸ್ಯಾನೇಕತ್ವಾನುಪಪತ್ತಿರೂಪಯುಕ್ತೇರುಕ್ತಿಸ್ತತ್ರ ನ ಸ್ಯಾತ್ । ಕಿಞ್ಚ ಬಹುರೂಪತ್ವಾದಧಿಕರಣಾಧೇಯ-ತ್ವಾದಿಕಮಿತಿ ನ್ಯಾಯವಿವರಣೇऽನೇಕತ್ವಸಙ್ಖ್ಯೋಕ್ತ್ಯರ್ಥಾದಿಶಬ್ದಾನುಪಪತ್ತಿಶ್ಚ ಸ್ಯಾದಿತ್ಯಸ್ವರಸಾದಾಹ – ಯದ್ವೇತಿ ।।

ಸಾರ

ಈ ಅಧಿಕರಣದಲ್ಲಿ ಭಗವಂತನಲ್ಲಿ ಅನೇಕತ್ವಸಂಖ್ಯೆಯು ಅನುಪಪನ್ನವಾಗುತ್ತದೆಂಬ ಆಕ್ಷೇಪವನ್ನು ಪರಿಹರಿಸಲಾಗಿದೆ. ಆದರೆ ಚತುರ್ಥಪಾದದಲ್ಲಿರುವ 'ನ ಸಂಖ್ಯೋಪಸಂಗ್ರಹಾಧಿಕರಣ'ದಲ್ಲಿಯೂ ಸಹ ಅನೇಕತ್ವವು ಬರುವುದಿಲ್ಲವೆಂಬ ಅನುಪಪತ್ತಿಯನ್ನೇ ಪರಿಹರಿಸಲಾಗಿದೆ. ಆದ್ದರಿಂದ ಒಂದೇ ವಿಚಾರವನ್ನು ಎರಡು ಅಧಿಕರಣದಲ್ಲಿ ಹೇಳಿದಂತಾಗುವುದರಿಂದ ಪುನರುಕ್ತಿ ಬರುತ್ತದಲ್ಲವೆ ? ಎಂಬ ಪ್ರಶ್ನೆಯು ಸಹಜವಾಗಿ ಬರುತ್ತದೆ. ಆದರೆ ಈ ಪ್ರಶ್ನೆಗೆ ಗ್ರಂಥಕಾರರು ಅನೇಕ ಬಗೆಯಲ್ಲಿ ಸಮಾಧಾನವನ್ನು ನೀಡಿದ್ದಾರೆ. 'ನ ಸಂಖ್ಯೋಪಸಂಗ್ರಹಾಧಿಕರಣ'ದಲ್ಲಿ ಆಧಾರಾಧೇಯಭಾವವು ಒಬ್ಬನೇ ಭಗವಂತನಲ್ಲಿ ಬರಲಾರದೆಂದು ಪೂರ್ವಪಕ್ಷ ಮಾಡಿದ್ದಾರೆ ಹೊರತು, ಅನೇಕತ್ವ ಸಂಖ್ಯೆಯು ಬರುವುದಿಲ್ಲವೆಂದು ಪೂರ್ವಪಕ್ಷ ಮಾಡಿರುವುದಿಲ್ಲ. ಆದ್ದರಿಂದ ಪುನರುಕ್ತಿಗೆ ಅವಕಾಶವಿಲ್ಲವೆಂಬುದು ಮೊದಲನೆಯ ಸಮಾಧಾನ.

ಅಥವಾ ಅನೇಕತ್ವಸಂಖ್ಯೆಯ ಅನುಪಪತ್ತಿಯನ್ನೇ 'ನ ಸಂಖ್ಯೋಪಸಂಗ್ರಹಾಧಿಕರಣ'ದಲ್ಲಿ ಪರಿಹರಿಸಿಕೊಳ್ಳುತ್ತಾರೆಂದು ಇಟ್ಟುಕೊಳ್ಳೋಣ, ಆವಾಗ ಈ ಗುಹಾಧಿಕರಣದಲ್ಲಿ ಕರ್ಮಬಂಧರಹಿತನಾದ ಭಗವಂತನಿಗೆ ಭೋಕ್ತೃತ್ವವನ್ನಷ್ಟೇ ಸಮರ್ಥಿಸಲಾಗಿದೆ ಎಂದು ವಿವಕ್ಷಿಸಬೇಕು. ಈ ಕಾರಣದಿಂದಲೂ ಪುನರುಕ್ತಿ ಬರುವುದಿಲ್ಲವೆಂಬುದು ಮತ್ತೊಂದು ಬಗೆಯ ಸಮಾಧಾನ.

• • • • •

ವಿಷ್ಣುಪರವೆನ್ನಲು ಛಾಯಾತಪ ಶಬ್ದವೆನ್ನಲು ಬಾಧಕವಲ್ಲ

ತಾತ್ಪರ್ಯಚನ್ದ್ರಿಕಾ

यद्वा – अत्र भोक्तृत्ववदनेकत्वे व्युत्पादितेऽपि न तत्र केवलं आधाराधेय-भावानुपपत्तिशङ्का, किन्तु द्वित्वयुक्तस्यास्तु ब्रह्मत्वं, गुहाप्रविष्टत्वादिलिङ्गात्, पञ्चत्वयुक्ते तु न ब्रह्मलिङ्गाद्यस्ति, इत्येकस्यानेकत्वानुपपत्तिरूपसामान्यन्यायस्य अनपवाद इति शङ्का, ''प्राणस्य प्राणम्'' इत्यादि ब्रह्मलिङ्गानि सन्तीत्यादि समाधानं चेत्याद्यूह्यम् ।

''नाणुरतच्छ्रुतेः'' इत्यत्र तु ''व्यापा ह्यात्मानश्चेतनाः'' इति वाक्ये ब्रह्मलिङ्गाभावादानपोदितेन बहुत्वेन जीवस्य प्राप्तत्वात् व्याप्यणुत्वश्रुत्योर्विरोधे

शङ्किते, ''स आत्मेदं सृजति'' इत्यादिपूर्ववाक्ये ब्रह्मलिङ्गसद्भावात्'' तदयं प्राणोऽधितिष्ठति'' इत्यत्रैकवचनेन निर्दिष्टे ''आ तेन यातं'' इति द्विवचनवदत्रापि ''स आत्मा'' इत्येकवचननिर्दिष्टे ''व्यासा स्वात्मानः'' इति बहुवचनं, ततो न विरोध इति वक्ष्यत इति न तेनापि गतार्थता । सुखदुःखहेतुत्वरूपं गौणं छायाऽऽतपत्वं च प्रतियोगिभेदेन अविरुद्धम् ।

अत्र च सूत्रे यद्यपि समन्वेतव्यं ऋतपातृत्वं ''ऋतं पिबन्तौ'' इति साक्षादेव वक्तव्यम्, तथाऽपि गुहाप्रविष्टत्वरूपहेतुमपि वक्तुं ऋतपातृत्वसमानाधिकरण-गुहाप्रविष्टत्वोक्तिद्वारा तदुक्तिः ।

यद्यपि चात्र ''तत्तु समन्वयात्'' इत्यतोऽनुषक्तस्य तच्छब्दस्य पूर्वत्राऽऽनन्दमयस्तद्ब्रह्मेत्यादिरूपेण अन्वयवत् उत्तरत्राप्यन्तरस्तद्ब्रह्मेत्यादिरूपेण अन्वयवच्च अत्राप्यन्वयसिद्धः, तथाऽपि सूत्रे श्रौतद्विवचनस्य गतिं वक्तुं आत्मान्त-रात्माख्यरूपद्वयवाचिद्विवचनान्तात्मशब्दप्रयोगः ।

अत्र च विषयवाक्यक्रमात्सूत्रक्रमः ।।

ಅನುವಾದ - ಅಥವಾ ಈ ಗುಹಾಧಿಕರಣದಲ್ಲಿ ಭೋಕ್ತೃತ್ವವನ್ನು ಪರಮಾತ್ಮನಲ್ಲಿ ಸಮರ್ಥಿಸುವಂತೆ ಅನೇಕತ್ವ ಸಂಖ್ಯೆಯನ್ನು ಸಮರ್ಥಿಸುತ್ತಿದ್ದಾರೆಂದೇ ಹೇಳೋಣ. ಆದರೂ ಸಹ ಮುಂದಿನ ನ ಸಂಖ್ಯೋಪಸಂಗ್ರಹಾಧಿಕರಣದಲ್ಲಿ ಕೇವಲ ಆಧಾರಾಧೇಯಭಾವದ ಅನುಪಪತ್ತಿಯನ್ನಷ್ಟೇ ಮಾಡುತ್ತಿಲ್ಲ ಹೊರತಾಗಿ ಗುಹಾಪ್ರವಿಷ್ಟತ್ವಾದಿಲಿಂಗಗಳಿಂದ ದ್ವಿತ್ವಸಂಖ್ಯೆಯಿಂದ ವಿಶಿಷ್ಟನಾದವನು ಬ್ರಹ್ಮನೆಂದು ನಿರ್ಣಯಿಸಲಾಗಿದೆ. ಆದರೆ 'ನ ಸಂಖ್ಯೋಪಸಂಗ್ರಹಾತ್' ಎಂಬ ಅಧಿಕರಣದಲ್ಲಿ ಪಂಚತ್ವಸಂಖ್ಯೆಯಿಂದ ವಿಶಿಷ್ಟನಾದವನು ಬ್ರಹ್ಮನೆಂದು ನಿರ್ಣಯಿಸಲಾಗದು. ಏಕೆಂದರೆ ಇಲ್ಲಿಯಂತೆ ಅಲ್ಲಿ ಬ್ರಹ್ಮನ ಲಿಂಗಗಳು ಕೇಳಿಸುತ್ತಿಲ್ಲ. ಆದ್ದರಿಂದ ಒಬ್ಬನೇ ಬ್ರಹ್ಮನಲ್ಲಿ ಅನೇಕತ್ವ ಶಂಕೆಯು ಅನುಪಪನ್ನವಾಗುತ್ತದೆಂಬ ಸಾಮಾನ್ಯನ್ಯಾಯಕ್ಕೆ ಅಪವಾದವೆನಿಸಿದ ಬ್ರಹ್ಮನ ಲಿಂಗಗಳು ಇಲ್ಲದ ಕಾರಣ ಬ್ರಹ್ಮನಲ್ಲಿ ಪಂಚತ್ವ ಸಂಖ್ಯೆಯು ಕೂಡುವುದಿಲ್ಲವೆಂಬ ಶಂಕೆಯು ಪ್ರಾಪ್ತವಾಗುತ್ತದೆ. ಈ ಶಂಕೆಯನ್ನು 'ಪ್ರಾಣಸ್ಯ ಪ್ರಾಣಮ್' ಇವೇ ಮೊದಲಾದ ಬ್ರಹ್ಮನ ಲಿಂಗಗಳಿರುವುದರಿಂದ ಅನೇಕತ್ವ ಸಂಖ್ಯೆಯು ಯುಕ್ತವಾಗುತ್ತದೆಂದು ನಿರಾಕರಿಸಿದ್ದಾರೆ. ಹೀಗೆ ಎರಡೂ ಅಧಿಕರಣಗಳಲ್ಲಿ ಅನೇಕತ್ವ ಸಂಖ್ಯೆಯನ್ನೇ ಪರಿಹರಿಸಿದ್ದಾರೆಂದು ಹೇಳಬಹುದು. ಇದರಂತೆ ಇನ್ನೂ ಅನೇಕ ಬಗೆಯ ಪರಿಹಾರಗಳನ್ನು ಸ್ವತಃ ಊಹಿಸಿಕೊಳ್ಳಬೇಕು.

'ನಾಣುರತತ್ ಶ್ರುತೇಃ' ಎಂಬ ಸೂತ್ರದಲ್ಲಿ ಪ್ರಸಕ್ತವಾಗಿ ''ವ್ಯಾಪ್ತಾ ಹ್ಯಾತ್ಮಾನಶ್ಚೇತನಾಃ' ಎಂಬ ವಾಕ್ಯದಲ್ಲಿ ಯಾವುದೇ ಬ್ರಹ್ಮನ ಲಿಂಗಗಳು ಕೇಳಸುತ್ತಿಲ್ಲ. ಆದ್ದರಿಂದ ಅಪವಾದವಿಲ್ಲದ ಅನೇಕ ಜೀವಲಿಂಗಗಳಿಂದ ಜೀವನೇ ಪ್ರಾಪ್ತನಾಗುತ್ತಾನೆ. ಆದ್ದರಿಂದ ವ್ಯಾಪ್ತತ್ವವನ್ನು ಹಾಗೂ ಅಣುತ್ವವನ್ನು ಹೇಳುವ ಎರಡು ಶ್ರುತಿಗಳಿಗೆ ಪರಸ್ಪರ ವಿರೋಧ ಬರುತ್ತದೆ ಎಂದು ಆಶಂಕಿಸಿ 'ಸ ಆತ್ಮೇದಂ ಸೃಜತಿ' ಹಿಂದಿನ ವಾಕ್ಯದಲ್ಲಿ ಬ್ರಹ್ಮಲಿಂಗಗಳಿರುವುದರಿಂದ 'ತದೇಯಂ ಪ್ರಾಣೋऽಧಿತಿಷ್ಠತಿ'' ಎಂಬಲ್ಲಿ ಏಕವಚನದಿಂದ ನಿರ್ದಿಷ್ಟನಾದವನಲ್ಲೇ 'ಆ ತೇನ ಯಾತಂ' ಎಂಬಲ್ಲಿ ದ್ವಿವಚನ ಪ್ರಯೋಗವನ್ನು ಹೇಗೆ ಮಾಡಲಾಗಿದೆಯೋ? ಅದರಂತೆ ಇಲ್ಲಿಯೂ ಸಹ 'ಸ ಆತ್ಮಾ' ಎಂಬಲ್ಲಿರುವ ಏಕವಚನದಿಂದ ನಿರ್ದೇಶಿಸಲ್ಪಟ್ಟಿರುವವನಲ್ಲಿ 'ವ್ಯಾಪ್ತಾ ಹ್ಯಾತ್ಮಾನಃ' ಎಂಬುದಾಗಿ ಬಹುವಚನವನ್ನು ಪ್ರಯೋಗಿಸಲಾಗಿದೆ. ಇದೇನೂ ತಪ್ಪಾಗುವುದಿಲ್ಲ.

ಆದ್ದರಿಂದ ವಿರೋಧವು ಬರುವುದಿಲ್ಲವೆಂದು ಮುಂದೆ ಹೇಳುವಂತೆ ಗತಾರ್ಥತ್ವ ಶಂಕೆಯನ್ನು ಪರಿಹರಿಸಬೇಕು. 'ಛಾಯಾ ಮತ್ತು ಆತಪ' ಶಬ್ದಗಳಿಗೆ 'ಸುಖಹೇತು' ಮತ್ತು 'ದುಃಖ ಹೇತು' ಎಂಬರ್ಥವನ್ನು ಅಂಗೀಕರಿಸುವುದು ಪ್ರತಿಯೋಗಿ ಭೇದದಿಂದ ವಿರುದ್ಧವಾಗುವುದಿಲ್ಲ.

ವಸ್ತುತಃ ಈ ಅಧಿಕರಣದ ಸೂತ್ರದಲ್ಲಿ ಸಮನ್ವಯ ಮಾಡಬೇಕಾದ ಋತಪಾತೃತ್ವವನ್ನು 'ಋತಂ ಪಿಬಂತೌ' ಎಂಬುದರಿಂದ ನೇರವಾಗಿ ಸೂತ್ರದಲ್ಲಿ ಹೇಳಬೇಕಿತ್ತು. ಆದರೂ ಸಹ 'ಗುಹಾಪ್ರವಿಷ್ಟತ್ವ,' ಎಂಬ ಮತ್ತೊಂದು ಹೇತುವನ್ನು ಹೇಳುವುದಕ್ಕಾಗಿ ಋತಪಾತೃತ್ವಕ್ಕೆ ಸಮಾನಾಧಿಕರಣವಾದ ಗುಹಾಪ್ರವಿಷ್ಟತ್ವವನ್ನು ಹೇಳುವ ಮೂಲಕ ಸಾರ್ಥಕವಾಗಿದೆ.

ವಸ್ತುತಃ ಈ ಅಧಿಕರಣದಲ್ಲಿ 'ತತ್ತು ಸಮನ್ವಯಾತ್ ಎಂಬ ಸೂತ್ರದಿಂದ 'ತತ್' ಶಬ್ದವು ಹಿಂದೆ 'ಆನಂದಮಯಃ ತದ್ಬ್ರಹ್ಮಃ' ಎಂಬಲ್ಲಿ ಅನ್ವಯವಾದಂತೆ ಅಥವಾ ಮುಂದೆ 'ಅಂತರಃ ತದ್ಬ್ರಹ್ಮಃ' ಎಂಬಲ್ಲಿ ಅನ್ವಯವಾಗುವಂತೆ ಇಲ್ಲಿಯೂ ಸಹ ಅನ್ವಯವನ್ನೂ ಹೊಂದುತ್ತದೆ. ಆದರೂ ಸಹ ಸೂತ್ರದಲ್ಲಿ ಶ್ರುತಿಯಲ್ಲಿರುವ ದ್ವಿವಚನಕ್ಕೆ ಗತಿಯನ್ನು ಹೇಳುವುದಕ್ಕಾಗಿ, ಆತ್ಮ ಅಂತರಾತ್ಮ ಎಂಬ ಭಗವಂತನ ಎರಡು ರೂಪಗಳನ್ನು ಹೇಳುವ ದ್ವಿವಚನಾಂತವಾದ ಆತ್ಮಶಬ್ದವನ್ನು ಪ್ರಯೋಗಿಸಲಾಗಿದೆ.

ಈ ಅಧಿಕರಣದಲ್ಲಿಯೂ ವಿಷಯವಾಕ್ಯದ ಕ್ರಮದಂತೆ ಸೂತ್ರದ ಜೋಡಣೆಯನ್ನು ಗಮನಿಸಬೇಕು.

ಪ್ರಕಾಶಃ –

''प्राणादयो वाक्यशेषात्'' इति तत्रत्यगुणसूत्रव्यावर्त्यपूर्वपक्षानुरोधेन पक्षान्तरमाह – **यद्वात्र भोक्तृत्ववदिति । 'किन्तु' इत्यस्य 'अनपवादः' इत्यन्वयः ।** अत एव तत्र टीकायां ''ऋतं पिबन्तावित्यादाविव स्वगतभेदशून्यस्यापि परमात्मनो

बहुरूपत्वेन बहुत्वोक्तिः किन्त्वस्तीति चेन्न, प्रतिशरीरमात्माऽन्तरात्मेतिवद् बहुत्वे मानाभावात्'' इत्युक्तमिति भावः । ब्रह्मलिङ्गानीति । प्राणादीनां प्राणत्वादि-प्रदत्वलिङ्गानीत्यर्थः ।

ವಿವರಣೆ - ನ ಸಂಖ್ಯೋಪಸಂಗ್ರಹಾಧಿಕರಣದಲ್ಲಿ ''ಪ್ರಾಣಾದಯೋ ವಾಕ್ಯಶೇಷಾತ್'' ಎಂಬುದು ಗುಣಸೂತ್ರವಾಗಿದೆ. ಆ ಗುಣಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ಅನುಸರಿಸಿ ಮತ್ತೊಂದು ಪಕ್ಷವನ್ನು 'ಯದ್ವಾ' ಇತ್ಯಾದಿ ವಾಕ್ಯದಿಂದ ನಿರೂಪಿಸುತ್ತಿದ್ದಾರೆ. ಈ ಗುಹಾಧಿಕರಣದಲ್ಲಿ ಅನೇಕತ್ವ ಸಂಖ್ಯೆಯ ಅನುಪಪತ್ತಿಯನ್ನು ಪರಿಹರಿಸಿದಂತೆ ಮುಂದಿನ 'ನ ಸಂಖ್ಯೋಪಸಂಗ್ರಹಾಧಿಕರಣ'ದಲ್ಲಿಯೂ ಅನೇಕತ್ವಸಂಖ್ಯೆಯ ಅನುಪಪತ್ತಿಯನ್ನೇ ಪರಿಹರಿಸುತ್ತಿದ್ದಾರೆಂದು ಹೇಳಬಹುದು. ಎರಡು ಅಧಿಕರಣಗಳಲ್ಲಿಯೂ ಒಂದೇ ವಿಷಯವನ್ನು ಹೇಳಿದಂತೆ ಕಾಣಿಸಿದರೂ ಪುನರುಕ್ತಿ ದೋಷವು ಬರುವುದಿಲ್ಲ. ಏಕೆಂದರೆ ಈ ಅಧಿಕರಣದಲ್ಲಿ ಬ್ರಹ್ಮನ ಲಿಂಗವು ಸ್ಪಷ್ಟವಾಗಿ ಕಾಣಿಸುತ್ತಿರುವುದರಿಂದ ಅನೇಕತ್ವಸಂಖ್ಯೆ ಬ್ರಹ್ಮನಲ್ಲಿ ಉಪಪನ್ನವಾದರೂ 'ಯಸ್ಮಿನ್ ಪಂಚ ಪಂಚಜನಾಃ' ಎಂಬ ಶ್ರುತಿಯಲ್ಲಿ ಬ್ರಹ್ಮನ ಲಿಂಗವು ಕೇಳಿಸದ ಕಾರಣ ಅನೇಕತ್ವ ಸಂಖ್ಯೆಯು ಅನುಪನ್ನವಾಗುತ್ತದೆಂಬ ಆಶಂಕೆಯು ಪುನಃ ಪ್ರಾಪ್ತವಾಗುತ್ತದೆ. ಆದರ ಪರಿಹಾರಕ್ಕಾಗಿ 'ನ ಸಂಖ್ಯೋಪಸಂಗ್ರಹಣಾಧಿಕರಣ' ಹೊರಟಿದೆ.

ಗ್ರಂಥದಲ್ಲಿರುವ 'ಕಿಂತು' ಎಂಬ ಪದಕ್ಕೆ 'ಅನಪವಾದಃ' ಎನ್ನುವಲ್ಲಿ ಅನ್ವಯ ಮಾಡಬೇಕು. ಆದ್ದರಿಂದಲೇ ಟೀಕೆಯಲ್ಲಿ ''ಋತಂ ಮಾನಾಭಾವಾತ್'' 'ಋತಂ ಪಿಬಂತೌ' ಎಂಬಲ್ಲಿ ಸ್ವಗತಭೇದವಿವರ್ಜಿತನಾದ ಪರಮಾತ್ಮನಿಗೆ ಅನೇಕ ರೂಪಗಳಿರುವುದರಿಂದಲೇ ಬಹುತ್ವವನ್ನು ಹೇಳಲಾಗಿದೆ. ಆದರಂತೆ 'ನ ಸಂಖ್ಯೋಪಸಂಗ್ರಹಾತ್' ಎಂಬಲ್ಲಿ ಸ್ವಗತಭೇದವಿವರ್ಜಿತನಾದ ಪರಮಾತ್ಮನಲ್ಲಿ ಅನೇಕತ್ವ ಸಂಖ್ಯೆಯನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಭಗವಂತನು ಪ್ರತಿಯೊಂದು ಶರೀರಗಳಲ್ಲಿಯೂ 'ಆತ್ಮ ಅಂತರಾಂತ್ಮ' ಎಂಬೆರಡು ರೂಪಗಳಿಂದ ನೆಲೆಸಿರುತ್ತಾನಾದ್ದರಿಂದ ಬಹುತ್ವವನ್ನು ಹೇಳಲು ಪ್ರಮಾಣವಿದೆ. ಆದರೆ 'ಯಸ್ಮಿನ್ ಪಂಚ ಪಂಚಜನಾಃ' ಎಂಬ ಶ್ರುತಿಯಲ್ಲಿ ಅಂತಹ ಲಿಂಗಗಳು ಕಾಣಿಸದ ಕಾರಣ ಪರಮಾತ್ಮನಲ್ಲಿ ಬಹುತ್ವವು ಸಿದ್ಧವಾಗುವುದಿಲ್ಲವೆಂದು ಹೇಳಿದ್ದಾರೆ. 'ಬ್ರಹ್ಮಲಿಂಗಾನಿ' ಎಂಬ ಪದಕ್ಕೆ ಪ್ರಾಣಾದಿಗಳಿಗೆ ಪ್ರಾಣತ್ವಾದಿಗಳನ್ನು ನೀಡುವ ಲಿಂಗಗಳೆಂದರ್ಥ.

प्रकाशः – इत्यादीत्यादिपदेनाधाराधेयभावोऽपि रूपभेदाद्युज्यत इति समाधानं गृह्यते । इत्याद्यूह्यमिति । अत्रैकस्यानेकत्वे आत्मान्तरात्मेतिवत्तत्र प्रतिशरीरं बहुत्वे मानं नेति शङ्कायां शरीरान्तर्गताकाशप्राणादिपञ्चजननियामकत्वेन तेषु नानाभावस्य न्यायप्राप्तत्वाद्बहुत्वं सिद्धमिति समाधानमूह्यमित्यर्थः ।

'ಇತ್ಯಾದಿ' ಎಂಬಲ್ಲಿರುವ 'ಆದಿ' ಪದದಿಂದ ಆಧಾರಾಧೇಯಭಾವವೂ ಸಹ ರೂಪಭೇದದಿಂದ ಯುಕ್ತವಾಗುತ್ತದೆಂಬ ಸಮಾಧಾನವನ್ನು ತಿಳಿಯಬೇಕು. 'ಇತ್ಯಾದ್ಯೂಹ್ಯಂ' ಎಂಬುದಾಗಿ ಗ್ರಂಥಕಾರರು ದಿಕ್ಪ್ರದರ್ಶನ ಮಾಡಿದ್ದಾರೆ - ಒಬ್ಬನೇ ಪರಮಾತ್ಮನಲ್ಲಿ ಅನೇಕತ್ವ ಸಂಖ್ಯೆಯಿರಲು 'ಆತ್ಮಾಂತರಾತ್ಮೇತಿ'

ಎಂಬ ಪ್ರಮಾಣವಿದ್ದಂತೆ 'ಯಸ್ಮಿನ್ ಪಂಚ ಪಂಚಜನಾಃ' ಎಂಬಲ್ಲಿ ಪ್ರತಿ ಶರೀರದಲ್ಲಿಯೂ ಭಗವಂತನು ಬಹುರೂಪದಿಂದ ಇದ್ದಾನೆನ್ನಲು ಪ್ರಮಾಣವು ಕೇಳಿಸುತ್ತಿಲ್ಲವಲ್ಲ? ಎಂಬ ಶಂಕೆಗೆ ಶರೀರಾಂತರ್ಗತವಾದ ಆಕಾಶ ಪ್ರಾಣ ಮೊದಲಾದ ಪಂಚಜನ ನಿಯಾಮಕನಾಗಿ ಭಗವಂತನಲ್ಲಿ ಅನೇಕ ರೂಪಗಳು ಯುಕ್ತವಾಗುತ್ತವೆಂಬ ಯುಕ್ತಿಯಿಂದ ಪರಮಾತ್ಮನಲ್ಲಿ ಬಹುತ್ವವು ಸಿದ್ಧವಾಗುತ್ತದೆಂಬ ಸಮಾಧಾನವನ್ನು ಊಹಿಸಿಕೊಳ್ಳಬೇಕು.

ಪ್ರಕಾಶಃ – ನನು ದ್ವಿತೀಯಸ್ಯ ತೃತೀಯಪಾದೇ ''ಉತ್ಕ್ರಾನ್ತಿಗತ್ಯಾಗತೀನಾಂ'' ಇತಿ ನಯೇ ಜೀವಃ ಕಿಂ ವ್ಯಾಪ್ತೋऽಥಾಣುರಿತಿ ಸಂಶಯೇ ''ವ್ಯಾಪ್ತಾ ಹ್ಯಾತ್ಮಾನಶ್ಚೇತನಾ ನಿರ್ಗುಣಾಶ್ಚ'' ಇತಿ ಶ್ರುತೇರ್ಬಹ್ವವಚನಾವರುದ್ಧಾಯಾ ಈಶ್ವರವಿಷಯತ್ವಾಯೋಗೇನ ಜೀವವಿಷಯತ್ವಾವಶ್ಯಮ್ಭಾವೇನ ಶ್ರುತಿಬಲಾದ್ವ್ಯಾಪ್ತಾ ಇತ್ಯಾಶಙ್ಕ್ಯ ತನ್ನಿರಾಸಯೋಃ ''ನಾಣುರತಚ್ಛ್ರುತೇರಿತಿ ಚೇನ್ನೇತರಾಧಿಕಾರಾತ್'' ಇತಿ ಗುಣಸೂತ್ರೇಣ ಕೃತತ್ವಾತ್ತೇನ ಪೌನರುಕ್ತ್ಯಮಿತ್ಯತ ಆಹ – ನಾಣುರಿತಿ ।

ಆಕ್ಷೇಪ - ಎರಡನೇ ಅಧ್ಯಾಯದ ಮೂರನೇ ಪಾದದಲ್ಲಿರುವ ''ಉತ್ಕ್ರಾಂತಿಗತ್ಯಾಗತೀನಾಂ' ಎಂಬ ಅಧಿಕರಣದಲ್ಲಿ ಹೀಗೆ ವಿಚಾರ ಮಾಡಿದ್ದಾರೆ - ಜೀವನು ವ್ಯಾಪ್ತನಾಗಿದ್ದಾನೋ ಅಥವಾ ಅಣುವಾಗಿದ್ದಾನೋ ? ಎಂದು ಸಂಶಯ ಬಂದರೆ ''ವ್ಯಾಪ್ತಾ ಹ್ಯಾತ್ಮಾನಶ್ಚೇತನಾ ನಿರ್ಗುಣಾಶ್ಚ'' ಎಂಬ ಶ್ರುತಿಯಲ್ಲಿ ಬಹುವಚನವು ಕೇಳಿಸುತ್ತಿದೆ. ಆದ್ದರಿಂದ ಒಬ್ಬನೇ ಈಶ್ವರನನ್ನು ಈ ಶ್ರುತಿಯು ವಿಷಯೀಕರಿಸಲು ಸಾಧ್ಯವಿಲ್ಲ. ಅನೇಕ ಜೀವರನ್ನೇ ವಿಷಯೀಕರಿಸುತ್ತದೆಂದು ಒಪ್ಪಬೇಕು. ಆದ್ದರಿಂದ ಜೀವನು ವ್ಯಾಪ್ತನಾಗಿದ್ದಾನೆಂದು ಶ್ರುತಿಪ್ರಮಾಣದಿಂದ ಸಿದ್ಧವಾಗುತ್ತದೆಂಬ ಆಶಂಕೆಯನ್ನು 'ನಾಣುರತಚ್ಛ್ರುತೇರಿತಿ ಚೇನ್ನೇತರಾಧಿಕಾರಾತ್' ಎಂಬ ಗುಣಸೂತ್ರದಿಂದ ಪರಿಹರಿಸಿದ್ದಾರೆ. ಜೀವನು ಅಣುವಾಗಿರುವುದರಿಂದ ವ್ಯಾಪ್ತನಾಗಲು ಸಾಧ್ಯವಿಲ್ಲವೆಂದು ತೀರ್ಮಾನಿಸಿದ್ದಾರೆ. ಆದ್ದರಿಂದ ಈ ಸೂತ್ರದಿಂದ ಪುನರುಕ್ತಿ ಬರುತ್ತದಲ್ಲವೇ?

ಪ್ರಕಾಶಃ – ಅನಪೋದಿತೇನೇತಿ । ಅತ ಏವ ತತ್ರ ಟೀಕಾ ''ನ ಚೇಶ್ವರರೂಪಬಾಹುಲ್ಯಾರ್ಥಾಃ, ಬಾಧಕಂ ವಿನಾ ಶ್ರುತೇರ್ಬಾಧಾಯೋಗಾತ್'' ಇತೀತಿ ಭಾವಃ ।

ಆದ್ದರಿಂದಲೇ ಆ ಅಧಿಕರಣದ ಟೀಕೆಯಲ್ಲಿ ''ನ ಚೇಶ್ವರರೂಪಬಾಹುಲ್ಯಾರ್ಥಾಃ, ಬಾಧಕಂ ವಿನಾ ಶ್ರುತೇರ್ಬಾಧಾಯೋಗಾತ್' ಈಶ್ವರನೆಂಬ ಬಾಹುಲ್ಯಾರ್ಥವನ್ನು ಹೇಳಲಾಗದು. ಬಾಧಕವಿಲ್ಲದೆ ಶ್ರುತಿಯು ಬಾಧಿತವಾಗುವುದಿಲ್ಲವೆಂದು 'ಅನಪೋದಿತೇನ' ಎಂಬ ಗ್ರಂಥದಿಂದ ಹೇಳಿದ್ದಾರೆ.

''ಅಣುರ್ಹ್ಯೇಷ ಆತ್ಮಾ ಯಂ ವಾ ಏತೇ ಸಿನೀತಃ ಪುಣ್ಯಂ ಚಾಪುಣ್ಯಂ'' ಇತ್ಯಣುತ್ವಶ್ರುತಿರ್ಜ್ಞೇಯಾ । ಐತರೇಯಕೇ ''ಅಥ ದೇವರಥಃ'' ಇತ್ಯುಪಕ್ರಮ್ಯ ''ತದಯಂ ಪ್ರಾಣೋऽಧಿತಿಷ್ಠತಿ'' ಇತ್ಯುಕ್ತ್ವಾ ''ತದುಕ್ತಮೃಷಿಣಾ – ಆ ತೇನ ಯಾತಂ ಮನಸೋ ಜವೀಯಸಾ'' ಇತಿ ದ್ವಿವಚನಾನ್ತೋ ಮನ್ತ್ರ ಉದಾಹೃತಃ । ಸ ಯಥಾ ತದ್ವಿಷಯಸ್ತದ್ವದಿತ್ಯರ್ಥಃ ।

''ಅಣುರ್ಹ್ಯೇಷ ಆತ್ಮಾ ಯಂ ವಾ ಏತೇ ಸಿನೀತಃ ಪುಣ್ಯಂ ಚಾಪುಣ್ಯಂ'' ಎಂಬುದನ್ನು ಅಣುತ್ವ ಪ್ರತಿಪಾದಕಶ್ರುತಿಯೆಂದು ತಿಳಿಯಬೇಕು. ಏತರೇಯೋಪನಿಷತ್ತಿನಲ್ಲಿ ''ಅಥ ದೇವರಥಃ'' ಎಂದು ಪ್ರಾರಂಭಿಸಿ ''ತದಯಂ ಪ್ರಾಣೋऽಧಿಷ್ಠಿತಃ'' ಎಂದು ಪ್ರಾರಂಭವಾಗಿ ''ತದುಕ್ತಮೃಷಿಣಾ - ಆ ತೇನ ಯಾತಂ ಮನಸೋ ಜವೀಯಸಾ'' ಎಂದು ದ್ವಿವಚನಾಂತವಾದ ಮಂತ್ರವನ್ನು ಉದಾಹರಿಸಲಾಗಿದೆ. ಈ ಮಂತ್ರವು ಹೇಗೆ ವಿಷ್ಣುವಿಷಯಕವಾಗಿದೆಯೋ ಅದರಂತೆ ತಿಳಿಯಬೇಕು.

ಏವಂ ದ್ವಿವಚನಂ ನ ಬಾಧಕಮಿತ್ಯುಕ್ತಂ, ತತ್ಪ್ರಸಕ್ತಪ್ರಾಸಪೌನರುಕ್ತ್ಯಂ ಚ ವ್ಯುದಸ್ತಮ್ । ಅಧುನಾ ಪ್ರಾಗುಕ್ತಚ್ಛಾಯಾತ್ವಮಪಿ ನ ಬಾಧಕಂ, ತಸ್ಯಾವಿದ್ಯಾಶ್ರಯತ್ವರೂಪತ್ವಾಭಾವಾತ್, ಕಿನ್ತು ಯಥಾ ಛಾಯಾ ಪ್ರಾಣಿನಾಂ ಸುಖಹೇತುಸ್ತಥಾ ವಿದುಷಾಂ ಸುಖಹೇತುತ್ವಾದಾತಪವದಜ್ಞಾನಾಂ ದುಃಖಹೇತುತ್ವಾಚ್ಛಾಯಾತಪಾವಿತ್ಯುಚ್ಯೇತೇ ರೂಪವಿಶೇಷಾವಿತ್ಯಾಶಯೇನ ಟೀಕೋಕ್ತಮೇವಾಹ – ಸುಖೇತಿ ।

ಇದುವರೆಗೂ ದ್ವಿವಚನವು ಬಾಧಕವಾಗುವುದಿಲ್ಲವೆಂದು ಹೇಳಿದ್ದಾಯಿತು. ಮತ್ತು ಪ್ರಸಂಗತಃ ಪ್ರಾಪ್ತವಾದ ಪುನರುಕ್ತಿಯನ್ನೂ ಸಹ ಪರಿಹರಿಸಿದಂತಾಯಿತು. ಈಗ ಹಿಂದೆ ಹೇಳಲ್ಪಟ್ಟ ಛಾಯಾತ್ವವೂ ಸಹ ಬಾಧಕವಾಗುವುದಿಲ್ಲವೆಂದು ಸಮರ್ಥಿಸುತ್ತಿದ್ದಾರೆ. ಏಕೆಂದರೆ ಛಾಯತ್ವವು ಅವಿದ್ಯಾಶ್ರಯರೂಪವೆಂದು ನಾವು ಹೇಳುವುದಿಲ್ಲ ಹೊರತಾಗಿ ಯಾವರೀತಿಯಾಗಿ ನೆರಳು ಪ್ರಾಣಿಗಳಿಗೆ ಸುಖಹೇತುವಾಗಿದೆಯೋ? ಅದರಂತೆ ಪರಮಾತ್ಮನು ಜ್ಞಾನಿಜನರಿಗೆ ಸುಖಹೇತು ಆಗಿದ್ದಾನೆ. ಬಿಸಿಲು ಪ್ರಾಣಿಗಳ ದುಃಖಕ್ಕೆ ಕಾರಣವಾದಂತೆ ಪರಮಾತ್ಮನು ಅಜ್ಞಾನಿಗಳಿಗೆ ದುಃಖಪ್ರದನಾಗಿದ್ದಾನೆ. ಹೀಗೆ ಸುಖದುಃಖಕಾರಣನಾದ ಪರಮಾತ್ಮನು ಛಾಯಾ ಮತ್ತು ಆತಪ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ. ಇಂತಹ ಪರಮಾತ್ಮನ ಎರಡು ರೂಪವಿಶೇಷಗಳನ್ನು 'ಛಾಯಾತಪೌ' ಎಂಬ ಶ್ರುತಿಯು ಪ್ರತಿಪಾದಿಸುತ್ತಿದೆ. ಈ ಅಭಿಪ್ರಾಯದಿಂದ ಟೀಕೆಯಲ್ಲಿ ಹೇಳಿದ್ದನ್ನೇ 'ಸುಖ' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

''ಸಚ್ಛಾಯೈವ ವಿದುಷಾಂ ಪ್ರಭುಃ । ಆತಪಃ ಪಾಪಿನಾಂ'' ಇತಿ ತಸ್ಮಾಚ್ಯೋಕ್ತಸ್ಮೃತೇಃ, ಪರಪಕ್ಷೇऽಪಿ ಚ್ಛಾಯಾತಪಾವಿತಿ ಶಬ್ದಯೋರವಿದ್ಯಾವಿದ್ಯಾವದ್ಬಾಚಕತ್ವಾದಿತಿ ಭಾವಃ ।

''ಸಃ ಛಾಯೇವ ವಿದುಷಾಂ ಪ್ರಭುಃ । ಆತಪಃ ಪಾಪಿನಾಂ'' ''ಪರಮಾತ್ಮನು ಜ್ಞಾನಿಗಳಿಗೆ ಛಾಯಾ ಎನಿಸಿದ್ದಾನೆ, ಪಾಪಿಗಳಿಗೆ ಆತಪನೆನಿಸಿದ್ದಾನೆ'' ಎಂಬುದಾಗಿ ಆ ಶ್ರುತಿಯ ಭಾಷ್ಯದಲ್ಲಿ ವ್ಯಾಖ್ಯಾನಿಸಿದ್ದಾರೆ. ಅದ್ವೈತಮತದಲ್ಲಿಯೂ ಸಹ ಛಾಯತಪ ಶಬ್ದಗಳು ಅವಿದ್ಯಾ ಹಾಗೂ ವಿದ್ಯಾವಾಚಕಗಳಾಗಿವೆ.

ತದುಕ್ತಂ ತತ್ತ್ವಪ್ರದೀಪೇ – ''ಅಮರಾಸುರಾಣಾಂ ಛಾಯಾऽऽತಪರೂಪಾವಿತಿ ಯೋಜನಾಯೋಗಾದ-ಮರಾಣಾಮಾಹ್ಲಾದಕಾವಸುರಾಣಾಂ ತಾಪಕಾವಿತ್ಯರ್ಥಃ'' ಇತಿ ।

ಇದನ್ನೇ ತತ್ತ್ವಪ್ರದೀಪದಲ್ಲಿ ''ಅಮರಾಸುರಾಣಾಂ ಛಾಯಾऽऽತಪರೂಪಾವಿತಿ ಯೋಜನಾಯೋಗಾದ ಮರಣಾಮಾಹ್ಲಾದಕಾವಸುರಾಣಾಂ ತಾಪಕಾವಿತ್ಯರ್ಥಃ'' ದೇವತೆಗಳಿಗೆ ಮತ್ತು ಅಸುರರಿಗೆ ಭಗವಂತನು ಛಾಯಾ ಆತಪಗಳಾಗಿದ್ದಾನೆ ಎಂಬರ್ಥವು ಸ್ವರಸವಾಗುವುದಿಲ್ಲ. ಆದ್ದರಿಂದ ದೇವತೆಗಳಿಗೆ ಸುಖಪ್ರದನಾಗಿದ್ದಾನೆ. ಅಸುರರಿಗೆ ದುಃಖಪ್ರದನಾಗಿದ್ದಾನೆಂದು ವ್ಯಾಖ್ಯಾನಿಸಬೇಕು ಎಂದು ಹೇಳಿದ್ದಾರೆ.

ಏತೇನ ''ಚ್ಛಾಯಾऽऽತಪತ್ವಂ ಚಾನ್ಯತ್ರ ವ್ಯಾಖ್ಯಾತಮ್'' ಇತಿ ನ್ಯಾಯವಿವರಣಟೀಕಾ ವಿವೃತಾ । ಅತೋ ಬಾಧಕಾಭಾವಾದ್ಗುಹಾವಿಷ್ಟತ್ವಾದಿಸಾಧಕಭಾವಾತ್ ಪಿಬನ್ತಾವೀಶ್ವರರೂಪ-ವಿಶೇಷಾವೇವೇತಿ ಸ್ಥಿತಮ್ ।

ಹೀಗೆ ಹೇಳಿದ್ದರಿಂದ ''ಛಾಯಾತಪತ್ವಂ ಚಾನ್ಯತ್ರ ವ್ಯಾಖ್ಯಾತಮ್'' 'ಛಾಯಾ ಮತ್ತು ಆತಪ' ಶಬ್ದಗಳ ಅರ್ಥವನ್ನು ಬೇರೆ ಕಡೆ ವ್ಯಾಖ್ಯಾನಿಸಲಾಗಿದೆ ಎಂಬ ನ್ಯಾಯವಿವರಣಾ ಟೀಕೆಯನ್ನು ವಿವರಿಸಿದಂತಾಯಿತು. ಆದ್ದರಿಂದ ಬಾಧಕವಿಲ್ಲದ ಕಾರಣ ಮತ್ತು ಗುಹಾವಿಷ್ಟತ್ವಾದಿ ಸಾಧಕವಿರುವ ಕಾರಣ 'ಪಿಬಂತೌ' ಎಂಬ ಶ್ರುತಿಯು ಈಶ್ವರನ ಎರಡು ರೂಪವಿಶೇಷಗಳನ್ನೇ ಪ್ರತಿಪಾದಿಸುತ್ತಿದೆಯೆಂದು ಹೇಳಬೇಕು.

ಸೂತ್ರಾಕ್ಷರಸಾಮಾಜಸ್ಯಾಮಾಶಙ್ಕ್ಯಾಹ – ಅತ್ರೇತಿ । 'ಋತಂ ಪಿಬನ್ತೌ' ಇತ್ಯೇವೋಕ್ತೌ ನ ಲಿಙ್ಗೋಕ್ತಿಸ್ಸ್ಯಾದಿತಿ ಭಾವಃ ।

ಸೂತ್ರಾಕ್ಷರದ ಅರ್ಥದಲ್ಲಿ ಅಸಾಮಂಜಸ್ಯವಿದೆಯೆಂದು ಆಶಂಕಿಸಿ 'ಅತ್ರ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಋತಂ ಪಿಬಂತೌ' ಎಂದಷ್ಟೇ ಹೇಳಿದ್ದಲ್ಲಿ ಲಿಂಗವನ್ನು ಹೇಳಿದಂತಾಗುತ್ತಿರಲಿಲ್ಲವೆಂದು ತಿಳಿಯಬೇಕು.

ಯದ್ಯಪಿ 'ಋತಂ ಪಿಬನ್ತೌ' ಇತ್ಯುಕ್ತಾವೃತಪಾತೃತ್ವದ್ವಿತ್ವರೂಪಪೂರ್ವಪಕ್ಷಯುಕ್ತಯೋಸ್ಸೂಚನಮಸ್ತಿ, ತಥಾऽಪಿ ಪೂರ್ವಪಕ್ಷಯುಕ್ತಿತೋऽಪಿ ಸಿದ್ಧಾನ್ತಯುಕ್ತಿಸ್ಸೂಚನಸ್ಯ ಜ್ಯಾಯಸ್ತ್ವಾದಿತಿ ಭಾವಃ ।

ವಸ್ತುತಃ 'ಋತಂ ಪಿಬಂತೌ' ಎಂಬಲ್ಲಿ ಋತಪಾತೃತ್ವ, 'ದ್ವಿತ್ವ' ಎಂಬ ಪೂರ್ವಪಕ್ಷ ಯುಕ್ತಿಗಳನ್ನು ಸೂಚಿಸಿದಂತಾಗುತ್ತಿತ್ತು. ಆದರೆ ಪೂರ್ವಪಕ್ಷಯುಕ್ತಿಗಿಂತಲೂ ಸಿದ್ಧಾಂತಯುಕ್ತಿ ಶ್ರೇಷ್ಠವಾದ್ದರಿಂದ 'ಋತಂ ಪಿಬಂತೌ' ಎಂದಷ್ಟೇ ಉಲ್ಲೇಖಿಸದೇ ಮುಂದಿನ ಭಾಗವನ್ನೂ ಸಹ ಉಲ್ಲೇಖಿಸಿದ್ದಾರೆ.

ಧರ್ಮಿನಿರ್ದೇಶೇ ಪ್ರಯೋಜನಮುಕ್ತ್ವಾ ಸಾಧ್ಯನಿರ್ದೇಶಸ್ಯಾಪಿ ತದಾಹ – ಯದ್ಯಪೀತಿ । ವಿಚ್ಛೇದಶಙ್ಕಾನಿವೃತ್ಯರ್ಥಮುಕ್ತಂ – ಪೂರ್ವತ್ರೋತ್ತರಾಪೀತಿ ।

ಧರ್ಮಿಯನ್ನು ನಿರ್ದೇಶಿಸಲು ಪ್ರಯೋಜನವನ್ನು ಹೇಳಿದ್ದಾಯಿತು. ಈಗ ಸಾಧ್ಯನಿರ್ದೇಶನದ ಪ್ರಯೋಜನವನ್ನು 'ಯದ್ಯಪಿ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. ಪ್ರಾಪ್ತವಾದ ಶಂಕೆಯನ್ನು ಪರಿಹಾರ ಮಾಡುವುದಕ್ಕೋಸ್ಕರ 'ಪೂರ್ವತ್ರೋತ್ತರಾಪೀತಿ' ಎಂದು ಹೇಳುತ್ತಿದ್ದಾರೆ.

''ದ್ವಿವಚನಸ್ಯ ಗತಿಂ ವಕ್ತು'' ಇತ್ಯುಪಲಕ್ಷಣಮ್ । 'ಆದೇಯಮುಪಾದೇಯಂ ಸುಖಂ ಮಾತ್ಯನುಭವತಿ' ಇತ್ಯುತ್ತರನಯಸುಧೋಕ್ತನಿರ್ವಚನೇನ 'ಋತಂ ಪಿಬನ್ತೌ' ಇತಿ ಪ್ರಾತಿಪದಿಕಾರ್ಥೋಕ್ತಿದ್ವಾರಾऽನಶನ-ಶ್ರುತೇರ್ಗತಿಂ ವಕ್ತುಂ ಚೇತ್ಯಪಿ ಬೋಧ್ಯಮ್ ।

'ದ್ವಿವಚನಸ್ಯ ಗತಿಂ ವಕ್ತು' ಎಂಬುದು ಉಪಲಕ್ಷಣವಾಗಿದೆ. 'ಆದೇಯಮುಪಾದೇಯಂ ಸುಖಂ ಮಾತ್ಮನುಭವತಿ' ಎಂಬ ಮುಂದಿನ ಅಧಿಕರಣದ ಸುಧೆಯಲ್ಲಿ ಆತ್ಮ ಎಂಬ ಶಬ್ದವನ್ನು ನಿರ್ವಚನ ಮಾಡಿದ್ದಾರೆ. ಅದನ್ನು ಉಲ್ಲೇಖಿಸುತ್ತಾ 'ಋತಂ ಪಿಬಂತೌ' ಎಂಬಲ್ಲಿರುವ ಪ್ರಾತಿಪದಿಕದ ಅರ್ಥವನ್ನು ಹೇಳುವ ಮೂಲಕ ಅನಶನ ಶ್ರುತಿಗೆ ಗತಿಯನ್ನು ಹೇಳುವುದಕ್ಕಾಗಿಯೂ ಆತ್ಮ ಶಬ್ದವನ್ನು ಪ್ರಯೋಗಿಸಿದ್ದಾರೆಂದು ತಿಳಿಯಬೇಕು.

अत्रेति । पूर्वं ''ऋतं पिबन्तौ'' इति वाक्यं, उत्तरं तु ''यस्सेतुः'' इति वाक्यमिति तत्क्रमात्क्रमः । यद्यपि श्रुतिरूपसाधकोक्तिपरत्वाद् द्वितीयस्य प्राथम्यमुचितम्, तथाऽपि तस्योत्तरवाक्यगत्वेन विषयवाक्यगतत्वाभावात्क्रम इति भावः ।

'अत्र' ಎಂಬ ವಾಕ್ಯದಿಂದ ಸೂತ್ರ ಜೋಡಣೆಯ ಕ್ರಮವನ್ನು ಹೇಳುತ್ತಿದ್ದಾರೆ. ಮೊದಲು 'ಋತಂ ಪಿಬಂತೌ' ಎಂಬ ವಾಕ್ಯವಿರುವುದರಿಂದ ಅದನ್ನು ವ್ಯಾಖ್ಯಾನಿಸುವ 'ಗುಹಾಂ ಪ್ರವಿಷ್ಟೌ' ಎಂಬ ಸೂತ್ರವನ್ನು ಮೊದಲು ಹೇಳಿದ್ದಾರೆ. 'ಯಸ್ಸೇತುಃ' ಎಂಬ ಶ್ರುತಿಯು ಅನಂತರ ಇರುವುದರಿಂದ 'ವಿಶೇಷಣಾಚ್ಚ' ಎಂಬ ಸೂತ್ರವನ್ನು ಅನಂತರ ಹೇಳಿದ್ದಾರೆ. ವಸ್ತುತಃ ಶ್ರುತಿಯೆಂಬ ಸಾಧಕ ಪ್ರಮಾಣವನ್ನು ಹೇಳುವ ಕಾರಣ 'ವಿಶೇಷಣಾಚ್ಚ' ಎಂಬ ಸೂತ್ರವು ಮೊದಲು ಬರಬೇಕು. ಆದರೆ ಆ ಸಾಧಕವು ವಿಷಯವಾಕ್ಯದಲ್ಲಿಲ್ಲದ ಕಾರಣ ವಿಷಯವಾಕ್ಯಕ್ಕೆ ಅನುಗುಣವಾಗಿಯೇ ಮಾಡಿದ ಸೂತ್ರದ ಕ್ರಮವು ಸ್ವರಸವಾಗಿದೆ.

गुरुराजीयम् – ननु प्रथमपक्षे न सङ्गच्योपसङ्गहादित्यस्यास्वारस्यमुक्तरीत्या द्वितीये तु गुहां प्रविष्टावित्यस्येत्यत उभयानुसाराय पक्षान्तरमाह – यद्वेति ।।

ಸಾರ

ಹಿಂದೆ 'ಋತಂ ಪಿಬಂತೌ' ಎಂಬ ಶ್ರುತಿಯು ಪರಮಾತ್ಮಪರವೆನ್ನಲು ದ್ವಿವಚನಶ್ರುತಿಯು ಬಾಧಕವಾಗುವುದಿಲ್ಲವೆಂದು ಹೇಳಿದ್ದರು. ಈಗ ಛಾಯಾತಪಶಬ್ದಗಳೂ ಸಹ ಬಾಧಕವಲ್ಲವೆಂದು ಹೇಳುತ್ತಿದ್ದಾರೆ. ಹೃದಯಗುಹೆಯಲ್ಲಿ ನೆಲೆಸಿರುವ ಪರಮಾತ್ಮನು ಜ್ಞಾನಿಗಳಿಗೆ ಸುಖಪ್ರದನಾದ್ದರಿಂದ 'ಛಾಯಾ' ಎನಿಸಿದ್ದಾನೆ. ಅಜ್ಞಾನಿಗಳಿಗೆ ದುಃಖಪ್ರದನಾದ್ದರಿಂದ ಆತಪನೆನಿಸಿದ್ದಾನೆ.

ಸೂತ್ರದಲ್ಲಿ 'ಋತಂ ಪಿಬಂತೌ' ಎಂದು ಹೇಳಬಹುದಿತ್ತಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಗುಹಾಪ್ರವಿಷ್ಟತ್ವವೆಂಬ ಲಿಂಗವನ್ನು ಹೇಳುವುದಕ್ಕಾಗಿ 'ಗುಹಾಂ ಪ್ರವಿಷ್ಟೌ' ಎಂದೇ ಹೇಳಿದ್ದಾರೆ.

ಮೊದಲು 'ಋತಂ ಪಿಬಂತೌ' ಎಂಬ ವಾಕ್ಯವಿರುವುದರಿಂದ ಅದನ್ನು ವ್ಯಾಖ್ಯಾನಿಸುವ 'ಗುಹಾಂ ಪ್ರವಿಷ್ಟೌ' ಎಂಬ ಸೂತ್ರವನ್ನು ಮೊದಲು ಹೇಳಿದ್ದಾರೆ. 'ಯಸ್ಸೇತುಃ' ಎಂಬ ಶ್ರುತಿಯು ಅನಂತರ ಇರುವುದರಿಂದ

'ವಿಶೇಷಣಾಚ್ಚ' ಎಂಬ ಸೂತ್ರವನ್ನು ಅನಂತರ ಹೇಳಿದ್ದಾರೆ. ವಸ್ತುತಃ ಶ್ರುತಿಯೆಂಬ ಸಾಧಕಪ್ರಮಾಣವನ್ನು ಹೇಳುವ ಕಾರಣ 'ವಿಶೇಷಣಾಚ್ಚ' ಎಂಬ ಸೂತ್ರವು ಮೊದಲು ಬರಬೇಕು. ಆದರೆ ಆ ಸಾಧಕವು ವಿಷಯವಾಕ್ಯದಲ್ಲಿಲ್ಲದ ಕಾರಣ ವಿಷಯವಾಕ್ಯಕ್ಕೆ ಅನುಗುಣವಾಗಿಯೇ ಮಾಡಿದ ಸೂತ್ರದ ಕ್ರಮವು ಸ್ವರಸವಾಗಿದೆ.

• • • • •

ಶಂಕರಭಾಷ್ಯದಲ್ಲಿ ಗುಹಾಧಿಕರಣ

ತಾತ್ಪರ್ಯಚಂದ್ರಿಕಾ

ಅನ್ಯೇ – ಋತಂ ಪಿಬನ್ತೌ ಬುದ್ಧಿಜೀವೌ, ಗುಹಾಪ್ರವಿಷ್ಟತ್ವಾದೇಸ್ತತ್ರ ಸಮ್ಭವಾತ್ಸರ್ವಗತೇ ಬ್ರಹ್ಮಣ್ಯಸಮ್ಭವಾದ್ಬುದ್ಧೇರಪಾತೃತ್ವೇऽಪಿ ಛತ್ರಿನ್ಯಾಯೇನ ಪಿಬಚ್ಛಬ್ದ ಇತಿ ಪ್ರಾಪ್ತೇ,

ಋತಾಖ್ಯಕರ್ಮಫಲಪಾನಲಿಙ್ಗೇನ ಏಕಸ್ಯ ಜೀವತ್ವೇ ನಿಶ್ಚಿತೇ ದ್ವಿತೀಯಸ್ತಜ್ಜಾತೀಯಶ್ಚೇತನಃ ಪರಮಾತ್ಮೈವ, ನ ತ್ವಚೇತನಾ ಬುದ್ಧಿಃ, 'ಅಸ್ಯ ಗೌರ್ದ್ವಿತೀಯೇನ ಭಾವ್ಯಮ್' ಇತ್ಯುಕ್ತೇ ಗವಾನ್ತರೇಣೈವ ಅಶ್ವಾದಿನಾ ಸದ್ವಿತೀಯತ್ವಾಪ್ರತೀತೇಃ । ಏವಂ ಚ ಪ್ರಥಮಾವಗತಋತಪಾನೇನ ಪಿಬತೋರ್ಜೀವಾತ್ಮ-ಪರಮಾತ್ಮತ್ವೇ ನಿಶ್ಚಿತೇ ಚರಮಂ ಗುಹಾಪ್ರವಿಷ್ಟತ್ವಾದಿಕಂ ಕಥಞ್ಚಿನ್ನೇಯಮ್ । ಬ್ರಹ್ಮಣೋऽಪಾತೃತ್ವೇऽಪಿ ಚ್ಛತ್ರಿನ್ಯಾಯೇನ ಪಿಬಚ್ಛಬ್ದ ಇತಿ ಸಿದ್ಧಾನ್ತ ಇತ್ಯಾಹುಃ ।

ಅನುವಾದ - ಅದ್ವೈತಿಗಳ ಅಧಿಕರಣ ರಚನೆ ಹೀಗಿದೆ - 'ಋತಂ ಪಿಬಂತೌ' ಎಂಬ ಶ್ರುತಿಯಲ್ಲಿ ಬುದ್ಧಿಜೀವರನ್ನು ಹೃದಯಗುಹಾಪ್ರವಿಷ್ಟರೆಂದು ಹೇಳಲಾಗಿದೆ. ಬ್ರಹ್ಮನು ಸರ್ವಗತನಾದ್ದರಿಂದ ಕೇವಲ ಹೃದಯಗುಹೆಯಲ್ಲಿರುವಿಕೆಯು ಅಸಂಭಾವಿತವಾಗಿದೆ. ಆದ್ದರಿಂದ ಬುದ್ಧಿಜೀವರೇ ವಿಷಯವಾಕ್ಯದಿಂದ ಪ್ರತಿಪಾದ್ಯರೆನ್ನಬೇಕು. ವಸ್ತುತಃ 'ಪಿಬತ್' ಶಬ್ದದಿಂದ ಪ್ರತಿಪಾದ್ಯವಾದ ಪಾತೃತ್ವಧರ್ಮವು ಜೀವನಲ್ಲಷ್ಟೇ ಇದೆ ಹೊರತು ಬುದ್ಧಿಯಲ್ಲಿಲ್ಲ. ಆದರೂ ಸಹ ಛತ್ರಿನ್ಯಾಯದಿಂದ ಪಿಬತ್ ಪ್ರಾತಿಪದಿಕಕ್ಕೆ ಬುದ್ಧಿ ಹಾಗೂ ಜೀವರಲ್ಲಿ ಜಹದಜಹಲ್ಲಕ್ಷಣವನ್ನು ಮಾಡಬೇಕೆಂದು ಪೂರ್ವಪಕ್ಷ.

'ಋತ' ಶಬ್ದವು ವಿಶೇಷಣವಾಗಿರುವುದರಿಂದ ಕರ್ಮಫಲಪಾತೃತ್ವವನ್ನೇ ಪಿಬತ್ ಪ್ರಾತಿಪದಿಕವು ಪ್ರತಿಪಾದಿಸುತ್ತದೆ. ಈ ಕರ್ಮಫಲ ಪಾತೃತ್ವವೆಂಬ ಲಿಂಗದಿಂದ ಒಬ್ಬರು ಜೀವರೆಂದು ನಿಶ್ಚಯವಾಗುತ್ತದೆ. ಇವನಿಗೆ ಸಜಾತೀಯನಾದ ಮತ್ತೊಬ್ಬನೆಂದರೆ ಚೇತನನಾದ ಪರಮಾತ್ಮನೇ ಆಗಬೇಕು ಹೊರತು ಅಚೇತನವಾದ ಬುದ್ಧಿಯಾಗಲು ಸಾಧ್ಯವಿಲ್ಲ. ಏಕೆಂದರೆ ಎತ್ತಿಗೆ ಸರಿಯಾದ ಜೋಡಿಯನ್ನು ಹುಡುಕಬೇಕು ಎಂದು ಹೇಳಿದಾಗ, ಮತ್ತೊಂದು ಎತ್ತನ್ನು ಹುಡಕಬೇಕೆಂದೇ ತಿಳಿಯುತ್ತಾರೆ ಹೊರತು ಕುದುರೆ ಮೊದಲಾದವುಗಳನ್ನು ತಿಳಿಯುವುದಿಲ್ಲ. ಇದರಂತೆ ಮೊದಲು ತಿಳಿಯುತ್ತಿರುವ ಋತಪಾತೃತ್ವದಿಂದ ಪಿಬತ್ ಪ್ರಾತಿಪದಿಕವು ಜೀವ ಹಾಗೂ ಪರಮಾತ್ಮನ ಪರವೆಂದು ನಿಶ್ಚಯವಾಗುತ್ತದೆ.

ಇದಕ್ಕನುಸಾರಿಯಾಗಿ ಗುಹಾಪ್ರವಿಷ್ಟತ್ವಾದಿಗಳನ್ನು ಜೀವ ಪರಮಾತ್ಮಪರವಾಗಿಯೇ ಹೊಂದಿಸಿ ಅರ್ಥೈಸಬೇಕು. ವಸ್ತುತಸ್ತು ಬ್ರಹ್ಮನು ಕರ್ಮಫಲಭೋಕ್ತೃವಾಗಿಲ್ಲ. ಆದರೂ ಸಹ ಛತ್ರಿನ್ಯಾಯದಿಂದ ಜೀವನ ಜೊತೆಗೆ ಬ್ರಹ್ಮನನ್ನು ವಿವಕ್ಷಿಸಬೇಕೆಂದು ಸಿದ್ಧಾಂತ. ಇಷ್ಟು ಅದ್ವೈತಿಗಳ ಅಧಿಕರಣಶರೀರ.

प्रकाशः –

अन्ये त्विति । ऋतं पिबन्तौ बुद्धिजीवौ जीवेश्वरौ वेति संशये, बुद्धिजीवावेव, गुहाविष्टत्वलिङ्गात्, नियतहृदयगुहाविष्टत्वस्य परिच्छिन्नयोर्बुद्धि-जीवयोरेव युक्तत्वात्, सर्वगते ब्रह्मणि तदयोगात्,

''सुकृतस्य लोके'' इति सुकृतलोकावस्थानेन कर्मगोचरानतिक्रमस्य जीवस्य भोक्तृतया बुद्धेस्तुर्भोगसाधनतया तयोरेवोपपत्तेः । छायात्वरूपतमस्त्वस्य जडतया बुद्धौ, प्रकाशत्वरूपातपत्वस्य जीवे च सम्भवाच्च बुद्धेरपातृत्वेऽपि पातृजीव-साहचर्याच्छत्रिवदुपपत्तेः तावेव पिबन्ताविति प्राप्त इत्यर्थः । तदुक्तं भामत्यां –

नियताधारता बुद्धिजीवसंवेशिनी नहि ।
क्लेशात्कल्पयितुं युक्ता सर्वगे परमात्मनि ।।

इति ।

ऋतपानेन जीवात्मा निश्चितोऽस्य द्वितीयता ।
ब्रह्मणैव सरूपेण नतु बुद्ध्या विरूपया ।।
प्रथमं सद्वितीयत्वे प्रमाणावसिते सति ।
गुहाश्रयत्वं चरमं व्याख्येयमविरोधतः ।।

इति भामतीं हृदि कृत्वा सिद्धान्तमनुवदति – **ऋताख्येति । कथञ्चिदिति ।**

प्रकाशः – 'सालिग्रामे हरिः' इतिवदुपलब्ध्यर्थो देशविशेषोपदेशः ।

सुकृतलोकवृत्तित्वमपीश्वरे छत्रिन्यायेन नेयम्, छायातपत्वं च जीवस्याविद्याश्रयतया ब्रह्मणस्तदनाश्रयतया नेयमित्यर्थः ।

ವಿವರಣೆ - ಇಲ್ಲಿಯ ತನಕ ಸ್ವಮತದಲ್ಲಿ ಗುಹಾಧಿಕರಣವನ್ನು ಸಮರ್ಥಿಸಿದ್ದಾಯಿತು. ಪ್ರಕೃತ ಅದ್ವೈತಿಗಳ ಅಧಿಕರಣಶರೀರವನ್ನು ಅನುವಾದ ಮಾಡಿ ವಿಮರ್ಶಿಸುತ್ತಿದ್ದಾರೆ. ಶಾಂಕರಭಾಷ್ಯದಲ್ಲಿ

'ಋತಂ ಪಿಬಂತೌ' ಎಂಬ ಶ್ರುತಿಯಿಂದ ಪ್ರತಿಪಾದ್ಯರಾದವರು ಬುದ್ಧಿಜೀವರೋ? ಅಥವಾ ಜೀವೇಶ್ವರರೋ? ಎಂದು ಸಂಶಯ. ಬುದ್ಧಿಜೀವರೆಂದು ಪೂರ್ವಪಕ್ಷ. ಗುಹಾಪ್ರವಿಷ್ಟತ್ವವೇ ಪೂರ್ವಪಕ್ಷದ ಲಿಂಗ. ನಿಯತವಾದ ಹೃದಯಗುಹಾಪ್ರವೇಶವು ಪರಿಚ್ಛಿನ್ನಪ್ರಮಾಣವುಳ್ಳ ಬುದ್ಧಿಜೀವರಲ್ಲಷ್ಟೇ ಯುಕ್ತವಾಗುತ್ತದೆ. ಬ್ರಹ್ಮನು ಸರ್ವಗತನಾದ್ದರಿಂದ ಅಪರಿಚ್ಛಿನ್ನನಾಗಿದ್ದಾನೆ. ಅವನಲ್ಲಿ ವಿಹಿತವಾದ ಹೃದಯಗುಹಾಪ್ರವೇಶವನ್ನು ಹೇಳಲು ಸಾಧ್ಯವಿಲ್ಲ. ಆದರೆ ಬುದ್ಧಿಜೀವರಲ್ಲಿ ಇದನ್ನು ಸುಲಭವಾಗಿ ಹೇಳಬಹುದು. ಏಕೆಂದರೆ ''ಸುಕೃತಸ್ಯ ಲೋಕೇ'' ಎಂಬುದಾಗಿ ಜೀವನು ಶುಭವಾದ ಕರ್ಮಗಳನ್ನು ಮಾಡುವುದರಿಂದ ಪುಣ್ಯಲೋಕವನ್ನು ಹೊಂದುತ್ತಾನೆಂದು ಸಿದ್ಧವಾಗಿದೆ. ಆದ್ದರಿಂದ ಜೀವನು ಭೋಕ್ತೃವಾಗಿದ್ದಾನೆ. ಬುದ್ಧಿಯಾದರೂ ಸಹ ಭೋಗಕ್ಕೆ ಸಾಧನವಾಗಿದೆ. ಮತ್ತು 'ಛಾಯಾ' ಪದಕ್ಕೆ ತಮಸ್ಸೆಂದು 'ಆತಪ' ಶಬ್ದಕ್ಕೆ ಪ್ರಕಾಶವೆಂದು ಅರ್ಥ. ಬುದ್ಧಿ ಜಡವಾದ್ದರಿಂದ ತಮಸ್ತ್ವವು ಕೂಡುತ್ತದೆ. ಜೀವನು ಚೇತನನಾದ್ದರಿಂದ ಪ್ರಕಾಶತ್ವವು ಕೂಡುತ್ತದೆ. ವಸ್ತುತಃ ಜೀವನು ಭೋಕ್ತೃವಾಗಿದ್ದಾನೆ ಹೊರತು ಬುದ್ಧಿಯು ಭೋಕ್ತೃವಲ್ಲ. ಆದರೂ ಸಹ ಭೋಕ್ತೃವಾದ ಜೀವನ ಜೊತೆಗೆ ಸಾಹಚರ್ಯವನ್ನು ಹೊಂದಿದ ಕಾರಣ ಛತ್ರಿನ್ಯಾಯದಿಂದ ಭೋಕ್ತೃವೆನಿಸುತ್ತಾನೆ. ಹೀಗೆ ಬುದ್ಧಿ ಹಾಗೂ ಜೀವರಿಬ್ಬರೇ 'ಋತಂ ಪಿಬಂತೌ' ಎಂಬ ಶ್ರುತಿಯಿಂದ ಪ್ರತಿಪಾದ್ಯರಾಗುತ್ತಿದ್ದಾರೆ. ಈ ವಿಷಯವನ್ನೇ ಭಾಮತಿಯಲ್ಲಿಯೂ ಹೇಳಲಾಗಿದೆ.

ನಿಯತಾಧಾರತಾ ಬುದ್ಧಿಜೀವಸಂವೇಶಿನೀ ನಹಿ।
ಕ್ಲೇಶಾತ್ಕಲ್ಪಯಿತುಂ ಯುಕ್ತಾಸ್ಸರ್ವಗೇ ಪರಮಾತ್ಮನಿ॥

ಇತಿ।

ಋತಪಾನೇನ ಜೀವಾತ್ಮಾ ನಿಶ್ಚಿತೋಽಸ್ಯ ದ್ವಿತೀಯತಾ।
ಬ್ರಹ್ಮಣೈವ ಸರೂಪೇಣ ನತು ಬುದ್ಧ್ಯಾ ವಿರೂಪಯಾ॥
ಪ್ರಥಮಂ ಸದ್ವಿತೀಯತ್ವೇ ಪ್ರಮಾಣಾವಸಿತೇ ಸತಿ।
ಗುಹಾಶ್ರಯತ್ವಂ ಚರಮಂ ವ್ಯಾಖ್ಯೇಯಮವಿರೋಧತಃ॥

ನಿಯತವಾದ ಹೃದಯಗುಹೆಯಲ್ಲಿರುವಿಕೆಯು ಬುದ್ಧಿಜೀವರಲ್ಲಿ ಸುಲಭವಾಗಿ ಕೂಡುತ್ತದೆ. ಹೀಗಿರುವಾಗ ಸರ್ವತ್ರ ವ್ಯಾಪ್ತನಾದ ಪರಮಾತ್ಮನಲ್ಲಿ ಕಷ್ಟದಿಂದ ಹೃದಯಗುಹಾನಿಹಿತತ್ವವನ್ನು ಹೇಳುವುದು ಅಯುಕ್ತವಾಗಿದೆ ಎಂದು ಪೂರ್ವಪಕ್ಷ. ಋತಪಾತೃತ್ವದಿಂದ ಜೀವಾತ್ಮನು ನಿಶ್ಚಿತನಾಗಿದ್ದಾನೆ. ಇವನಿಗೆ ಸದ್ವಿತೀಯನಾದವನು ಚೇತನತ್ವದಿಂದ ಸಾಮ್ಯವಿರುವ ಬ್ರಹ್ಮನೇ ಆಗುತ್ತಾನೆ ಹೊರತು, ವಿರೂಪವಾದ ಬುದ್ಧಿ ಸದ್ವಿತೀಯವಾಗುವುದಿಲ್ಲ. ಹೀಗೆ ಮೊದಲೇ ಸದ್ವಿತೀಯನೆಂದು ನಿರ್ಣಯವಾದ ಮೇಲೆ ಕೊನೆಯಲ್ಲಿ ಕೇಳಿಸುತ್ತಿರುವ ಗುಹಾಶ್ರಯತ್ವವನ್ನು ವಿರೋಧವಿಲ್ಲದಂತೆ ವ್ಯಾಖ್ಯಾನಿಸಬೇಕು. ಭಾಮತಿಯ ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು 'ಋತಾಖ್ಯ' ಇತ್ಯಾದಿ ಗ್ರಂಥದಿಂದ ಸಿದ್ಧಾಂತ ಮಾಡುತ್ತಿದ್ದಾರೆ.

'ಕಥಂಚಿತ್' ಎಂಬುದಕ್ಕೆ ಹೀಗರ್ಥ - ಭಗವಂತನು ಎಲ್ಲೆಡೆ ವ್ಯಾಪ್ತನಾಗಿದ್ದರೂ 'ಸಾಲಗ್ರಾಮೇ ಹರಿಃ' ಸಾಲಗ್ರಾಮದಲ್ಲಿದ್ದಾನೆಂದೇ ಎಲ್ಲರೂ ಪ್ರಯೋಗಿಸುತ್ತಾರೆ. ಏಕೆಂದರೆ ಎಲ್ಲೆಡೆ ಅವನಿದ್ದರೂ ಸಾಲಗ್ರಾಮದಲ್ಲಿ ಸಾನ್ನಿಧ್ಯವಿಶೇಷದಿಂದ ಗೋಚರಿಸುವ ಕಾರಣ 'ಸಾಲಗ್ರಾಮ' ಎಂಬ ದೇಶವಿಶೇಷದಲ್ಲಿ ಅವನ ಇರುವಿಕೆಯನ್ನು ಹೇಳಲಾಗುತ್ತದೆ. ಆದರಂತೆ ಪರಬ್ರಹ್ಮನು ಎಲ್ಲೆಡೆ ವ್ಯಾಪ್ತನಾಗಿದ್ದರೂ ಹೃದಯಗುಹೆಯಲ್ಲಿ ಗೋಚರಿಸುವ ಕಾರಣ ಶ್ರುತಿಯು ಗುಹಾನಿಹಿತನೆಂದು ಹೇಳುತ್ತಿದೆ. ಆದ್ದರಿಂದ ಸರ್ವಗತನಾದ ಪರಬ್ರಹ್ಮನಲ್ಲಿ ಗುಹಾನಿಹಿತತ್ವ ಧರ್ಮವು ವಿರುದ್ಧವಾಗುವುದಿಲ್ಲ.

'ಸುಕೃತಸ್ಯ ಲೋಕೇ' ಎಂಬಲ್ಲಿ ಹೇಳಲ್ಪಟ್ಟ ಪುಣ್ಯಲೋಕದ ಪ್ರಾಪ್ತಿಯನ್ನೂ ಸಹ ಈಶ್ವರನಲ್ಲಿ ಹೇಳಬಹುದು. ವಸ್ತುತಃ ಈ ಜೀವನೇ ಪುಣ್ಯಲೋಕವನ್ನು ಹೊಂದುತ್ತಾನೆ. ಆದರೆ ನಿರಂತರವಾಗಿ ಜೀವನ ಜೊತೆಗಿರುವ ಕಾರಣ ಪರಬ್ರಹ್ಮನನ್ನೂ ಸಹ ಛತ್ರಿನ್ಯಾಯದಿಂದ ಪುಣ್ಯಲೋಕದಲ್ಲಿದ್ದಾನೆಂದು ಹೇಳಿದ್ದಾನೆ. ಛಾಯಾತಪತ್ವವನ್ನೂ ಸಹ ಹೀಗೆಯೇ ಕೂಡಿಸಬೇಕು. ಜೀವನು ಅವಿದ್ಯೆಗೆ ಆಶ್ರಯನಾದ್ದರಿಂದ 'ಛಾಯಾ' ಎನಿಸಿದ್ದಾನೆ. ಬ್ರಹ್ಮನು ಅವಿದ್ಯೆಗೆ ಆಶ್ರಯನಾಗದ ಕಾರಣ ಆತಪನೆನಿಸಿದ್ದಾನೆಂದು. ಹೀಗೆ ಜೀವಬ್ರಹ್ಮರೇ 'ಋತಂ ಪಿಬಂತೌ' ಎಂಬ ಶ್ರುತಿಯಿಂದ ಪ್ರತಿಪಾದ್ಯರಾಗಿದ್ದಾರೆನ್ನಲು ಯಾವುದೇ ಆತಂಕವಿಲ್ಲವೆಂದು ತಿಳಿಯಬೇಕು.

ಸಾರ

ಆದ್ವೈತಿಗಳು ಗುಹಾಧಿಕರಣವನ್ನು ಹೀಗೆ ರಚಿಸಿದ್ದಾರೆ -

ಪೂರ್ವಪಕ್ಷ - ಕಾಠಕೋಪನಿಷತ್ತಿನಲ್ಲಿ 'ಋತಂ ಪಿಬಂತೌ' ಎಂಬ ಶ್ರುತಿಯು ಕೇಳಿಸುತ್ತಿದೆ. ಈ ಶ್ರುತಿಯು ಜೀವ ಹಾಗೂ ಬುದ್ಧಿತತ್ವವನ್ನು ಪ್ರತಿಪಾದಿಸುತ್ತಿದೆಯೋ? ಅಥವಾ ಜೀವಬ್ರಹ್ಮರನ್ನು ಪ್ರತಿಪಾದಿಸುತ್ತಿದೆಯೋ ? ಎಂದು ಸಂಶಯ.

ಜೀವ ಹಾಗೂ ಬುದ್ಧಿತತ್ವಗಳೇ ಪ್ರತಿಪಾದ್ಯರೆಂದು ಪೂರ್ವಪಕ್ಷ. ಏಕೆಂದರೆ ಭೋಗವು ಜೀವನಿಗೆ ಮಾತ್ರವಿದ್ದರೂ ಸಹ ಛತ್ರಿನ್ಯಾಯದಿಂದ ಬುದ್ಧಿಯಲ್ಲೂ ಸಹ ಕರ್ತೃತ್ವವು ಪ್ರಾಪ್ತವಾಗುತ್ತದೆ. ವ್ಯಾಪ್ತನಾದ ಬ್ರಹ್ಮನನ್ನು ಸಂಕುಚಿತವಾದ ಹೃದಯಪ್ರದೇಶದಲ್ಲಿ ಇರಲು ಸಾಧ್ಯವಿರದ ಕಾರಣ 'ಗುಹಾಪ್ರವಿಷ್ಟೌ' ಎಂಬಲ್ಲಿರುವ ವಿಶೇಷಣವು ಬ್ರಹ್ಮನಲ್ಲಿ ಬರುವುದಿಲ್ಲ. ಮತ್ತು 'ಛಾಯಾತಪೌ' ಎಂಬಲ್ಲಿ ಹೇಳಲ್ಪಟ್ಟ ನೆರಳು ಹಾಗೂ ಬೆಳಕುಗಳು ಬುದ್ಧಿಜೀವರಲ್ಲಿ ಬರುತ್ತದೇ ಹೊರತು ಜೀವೇಶ್ವರರಲ್ಲಿ ಬರುವುದಿಲ್ಲ. ಆದ್ದರಿಂದ ಈ ಶ್ರುತಿಯಿಂದ ಪ್ರತಿಪಾದ್ಯರಾದವರು ಬುದ್ಧಿತತ್ವ ಹಾಗೂ ಜೀವರೆಂದೇ ಹೇಳಬೇಕು.

ಸಿದ್ಧಾಂತ - ಈ ಎತ್ತಿಗೆ ಸರಿಯಾದ ಜೊತೆಯನ್ನು ಹುಡುಕಬೇಕು ಎಂದು ಹೇಳಿದಾಗ, ಮತ್ತೊಂದು ಎತ್ತನ್ನು ಹುಡುಕಬೇಕೆಂದೇ ತಿಳಿಯುತ್ತಾರೆಯೇ ಹೊರತು ಕುದುರೆಯನ್ನು ಹುಡುಕಬೇಕೆಂದು ಯಾರೂ

ತಿಳಿಯುವುದಿಲ್ಲ. ಆದರಂತೆ 'ಪಿಬಂತೌ' ಎಂಬಲ್ಲಿ ಒಬ್ಬನಂತೂ ಚೇತನನೆಂದು ನಿಶ್ಚಿತನಾಗಿದ್ದಾನೆ. ಅವನಿಗೆ ಸರಿಯಾದ ಮತ್ತೊಬ್ಬನೆಂದರೆ ಚೇತನನೇ ಆಗಬೇಕು. ಆದ್ದರಿಂದಲೇ ಸೂತ್ರಕಾರರು 'ಆತ್ಮಾನೌ' ಎಂದಿದ್ದಾರೆ. ಆತ್ಮನನ್ನು ಬಿಟ್ಟು ಅನಾತ್ಮವಾದ ಬುದ್ಧಿಯನ್ನು ವಿವಕ್ಷಿಸುವುದು ತಪ್ಪಾಗುತ್ತದೆ. ಇದರಂತೆ ವ್ಯಾಪ್ತನಾದ ಪರಮಾತ್ಮನು ಸರ್ವಗತನಾಗಿದ್ದರೂ ಸಹ ಹೃದಯಗುಹಾದಲ್ಲಿಯೂ ಇರುತ್ತಾನೆಂದು ಪ್ರಮಾಣಸಿದ್ಧವಾಗಿದೆ. ಆದರಂತೆ ಜೀವನು ಸಂಸಾರಿಯಾಗಿ ಪರಬ್ರಹ್ಮನು ಸಂಸಾರಿಯಾಗದ ಕಾರಣ ವಿರುದ್ಧಸ್ವಭಾವವನ್ನು ಹೊಂದಿದ್ದಾನೆ. ಆದ್ದರಿಂದಲೇ ಶ್ರುತಿಯು ಜೀವಬ್ರಹ್ಮರನ್ನು ಛಾಯಾತಪರೆಂದು ಕರೆದಿದೆ. ವಾಸ್ತವಿಕವಾಗಿ ಬ್ರಹ್ಮನು ಭೋಕ್ತೃವಾಗದಿದ್ದರೂ ಛತ್ರಿನ್ಯಾಯದಿಂದ ಜೀವನ ಜೊತೆಗೆ 'ಪಿಬಂತೌ' ಎಂಬ ವಿಶೇಷಣವನ್ನು ಹೊಂದಿಸಬೇಕು.



ಅದ್ವೈತಿಗಳಿಗೆ ಮುಳ್ಳಾದ ದ್ವಿವಚನ

ತಾತ್ಪರ್ಯಚನ್ದ್ರಿಕಾ

ಅತ್ರ ಬ್ರೂಮಃ –

ಬುದ್ಧಿಸ್ಥತ್ವಾಪ್ಯೋಕ್ತಾದೇಃ ಪಿಬನ್ ಸ್ಯಾಚ್ಚೇತನಃ ಕಥಮ್ ।
ಚಿತ್ತ್ವೇऽಪಿ ದ್ವಿತ್ವಪೂರ್ವಸ್ಯಾಬಾಧಾರ್ಥಂ ಸದ್ವಿತೀಯತಾ ।।
ವಿರೂಪಯಾऽಪಿ ಬುದ್ಧ್ವಾऽಸ್ತು ಕಿಞ್ಚ ಬುದ್ಧೇಸ್ಸರೂಪತಾ ।
ವರ್ತತೇ ಸಹ ಜೀವೇನ ಪಾರತನ್ತ್ರ್ಯಾದಿರೂಪತಃ ।।

ತ್ವನ್ಮತೇ ಜಪಾಕುಸುಮಗತಸ್ಯ ಲೌಹಿತ್ಯಸ್ಯ ಸ್ಫಟಿಕ ಇವ ಬುದ್ಧಿಗತಸ್ಯ ಕರ್ತೃತ್ವಭೋಕ್ತೃತ್ವಾದೇಃ ಜೀವेऽಧ್ಯಾಸಾತ್, ಕಥಂ ಪಾತೃತ್ವಲಿಙ್ಗೇನೈಕಸ್ಯಾಪಿ ಚೇತನತ್ವಮ್, ಯೇನ ತತ್ಸಾಜಾತ್ಯೇನ ದ್ವಿತೀಯोऽಪಿ ಚೇತನಃ ಸ್ಯಾತ್ । ನಹಿ ಲೋಕೇ ದೇಹೇ ಆತ್ಮತ್ವಮಧ್ಯಸ್ತಮಿತಿ ''ಆತ್ಮಾ ದ್ರಷ್ಟವ್ಯಃ'' ಇತ್ಯಾದಿ ಶ್ರುತಾವಾತ್ಮಶಬ್ದೋ ದೇಹಪರಃ ।

ಭೋಕ್ತೃತ್ವಾದೇಶ್ಚಿದಚಿತ್ಸಂವಲನಧರ್ಮತ್ವೇ ಅನ್ಯೋನ್ಯಧರ್ಮಾಧ್ಯಾಸೋಕ್ತಿರಯುಕ್ತಃ ಸ್ಯಾತ್ । ಏವञ್ಚ ಪರಮತೇ ಬುದ್ಧೇರೇವ ಪಾತೃತ್ವೇನ ಪ್ರಕೃತ್ಯರ್ಥಸಮ್ಭವಾತ್, ಜ್ಞಾನಕ್ರಿಯಾಶಕ್ತಿಭೇದೇನ ಪ್ರತ್ಯಯಾರ್ಥಸ್ಯ ದ್ವಿತ್ವಸ್ಯಾಪಿ ಕಥಞ್ಚಿತ್ಸಮ್ಭವಾತ್, ಪ್ರಾಣಸಹಿತಾ ಬುದ್ಧಿರೇವ 'ಪಿಬನ್ತೌ' ಇತ್ಯುಚ್ಯತಾಮ್ ।

ಅಥ ದ್ವಿತ್ವೇ ಸ್ವಾರಸ್ಯಮಪೇಕ್ಷಸೇ, ತರ್ಹಿ ಆರೋಪಿತೇನ ಪಾತೃತ್ವೇನ ಯುಕ್ತೋ ಜೀವೋ ಬುದ್ಧೇರ್ದ್ವಿತೀಯಃ ಸ್ಯಾತ್, ನತು ತೇನಾಪಿ ರಹಿತಂ ಬ್ರಹ್ಮ ।

अथ श्रुतेरारोपितविषयत्वं न सहसे, तर्हि च्छत्रिन्यायेन पातृत्वरहितं सजातीयं जडान्तरमेव बुद्धेर्द्वितीयमस्तु, चेतनस्य परमात्मनस्तु न कथञ्चिदनुप्रवेशः । अस्तु वा जीवस्यापि पातृत्वम्, तथाऽपि ''गोर्द्वितीयेन'' इत्यत्र द्वित्वस्य मुख्यस्य लाभात् सजातीयग्रहणम् ।

इह तु ब्रह्मग्रहणे जीवस्य ब्रह्माभेदात् न तात्त्विकं द्वित्वम् ।

तथा च यथा 'चन्द्रस्सद्वितीयः' इति प्रमाणवाक्याद्विजातीयस्याप्यकल्पितभेदस्य नक्षत्रादेरेव धी, ननु सजातीयस्यापि कल्पितभेदस्य चन्द्रान्तरस्य, तथाऽत्रापि चेतनत्वेन जीवस्य सजातीयत्वेऽपि कल्पितभेदस्य ब्रह्मणो न धीः, किन्तु विजातीयत्वेऽपि धर्मिसमसत्ताकभेदाया बुद्धेरेव । नहि द्वित्ववत् साजात्यं शाब्दम्, येन तदनुरोधेन द्वित्वं बाध्येत ।

ಅನುವಾದ - ಶ್ಲೋಕವನ್ನು ಸ್ವತಃ ಗ್ರಂಥಕಾರರೇ ವ್ಯಾಖ್ಯಾನಿಸುತ್ತಿದ್ದಾರೆ -

ಅದ್ವೈತಮತದಲ್ಲಿ ಜಡವಾದ ಬುದ್ಧಿಯಲ್ಲಿರುವ ಕರ್ತೃತ್ವ ಭೋಕ್ತೃತ್ವಗಳನ್ನು ಚೇತನನಾದ ಜೀವನಲ್ಲಿ ಆರೋಪಿಸಲಾಗುತ್ತದೆ. ಸ್ಫಟಿಕದ ಸಮೀಪದಲ್ಲಿ ಕೆಂಪಾದ ದಾಸವಾಳ ಹೂವಿದ್ದರೆ ಅದರ ಕೆಂಪು ಬಣ್ಣವು ಬಿಳಿಯಾದ ಸ್ಫಟಿಕದಲ್ಲಿ ಆರೋಪಿಸಲಾಗುತ್ತದೆ. ಅದರಂತೆ ಬುದ್ಧಿಯಲ್ಲಿರುವ ಭೋಕ್ತೃತ್ವಾದಿಗಳು ಹತ್ತಿರದಲ್ಲಿರುವ ಜೀವನಲ್ಲಿ ಆರೋಪಿಸಲಾಗುತ್ತದೆ. ಇಂತಹ ಭೋಕ್ತೃತ್ವವನ್ನು ಜೀವನ ಧರ್ಮವೆಂದು ಪರಿಗಣಿಸಿ ಒಬ್ಬನನ್ನು ಚೇತನನೆಂದು ನಿರ್ಣಯಿಸುತ್ತೇವೆಂದು ಹೇಗೆ ಹೇಳುತ್ತೀರಿ? ಹಾಗೆ ನಿರ್ಣಯಿಸಿದಲ್ಲಿ ಒಬ್ಬ ಜೀವನ ಸಾರೂಪ್ಯದಿಂದ ಮತ್ತೊಬ್ಬನನ್ನೂ ಸಹ ಚೇತನನೆಂದು ನಿರ್ಣಯಿಸಬಹುದಿತ್ತು. ಆದರೆ ಆರೋಪಿತವಾದ ಭೋಕ್ತೃತ್ವ ಇದ್ದ ಮಾತ್ರದಿಂದ ಅವನನ್ನು 'ಪಿಬಂತೌ' ಎಂದು ಹೇಳಬಹುದಾದರೆ ದೇಹದಲ್ಲಿಯೂ ಸಹ ಆರೋಪಿತವಾದ ಆತ್ಮತ್ವವಿರುವುದರಿಂದ 'ಆತ್ಮಾ ದ್ರಷ್ಟವ್ಯಃ' ಎಂಬಲ್ಲಿಯೂ ಆತ್ಮ ಪದಕ್ಕೆ ದೇಹವೆಂಬರ್ಥವನ್ನು ಹೇಳಬೇಕಾದೀತು. ಆದರೆ ಯಾರೂ ಸಹ ದೇಹದಲ್ಲಿ ಆತ್ಮತ್ವ ಆರೋಪಿತವಾಗಿದೆಯೆಂದು ದೇಹವನ್ನೇ ಆತ್ಮವೆಂದು ಹೇಳಲಾರರು.

ಮತ್ತು ಭೋಕ್ತೃತ್ವಾದಿಗಳು ಚಿದಚಿತ್‌ಸಂವಲನಧರ್ಮವಾದ್ದರಿಂದ ಬುದ್ಧಿ ಹಾಗೂ ಜೀವರಲ್ಲಿ ಸಮಾನವಾಗಿದೆಯೆಂದು ನೀವು ಹೇಳಬೇಕು. ಈ ಪಕ್ಷದಲ್ಲಿ ಬುದ್ಧಿಜೀವರಲ್ಲಿರುವ ಧರ್ಮಗಳನ್ನು ಪರಸ್ಪರವಾಗಿ ಆರೋಪಿಸುವುದು ಅಯುಕ್ತವಾಗುತ್ತದೆ. ಆದ್ದರಿಂದ ಭೋಕ್ತೃತ್ವವನ್ನು ಜೀವನಲ್ಲಿ ಹೇಳಲು ಸಾಧ್ಯವಿಲ್ಲ. ಬುದ್ಧಿಯಲ್ಲಿ ಮಾತ್ರ ಹೇಳಬೇಕು. ಬುದ್ಧಿಯೇ ಪ್ರಕೃತ್ಯರ್ಥವಾಗುತ್ತದೆ. ಆವಾಗ

'ಪಿಬಂತೌ' ಎಂಬಲ್ಲಿರುವ ದ್ವಿವಚನದಿಂದ ಬುದ್ಧಿಯ ಜೊತೆಗಿರುವ ಮತ್ತೊಂದು ವಸ್ತುವನ್ನು ಯಾವುದೆಂದು ನಿಶ್ಚಯಿಸಬೇಕು. ಎರಡನೆಯ ವಸ್ತು ಜೀವನಾಗದಿದ್ದಾಗ ಬ್ರಹ್ಮನೂ ಸಹ ಆಗುವುದಿಲ್ಲ. ಆದ್ದರಿಂದ ಬುದ್ಧಿಯಲ್ಲಿ ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿಗಳು ಇರುವುದರಿಂದ ಇವೆರಡನ್ನೂ ವಿವಕ್ಷಿಸಿ ಪ್ರತ್ಯಯಾರ್ಥವೆನಿಸಿದ ದ್ವಿತ್ವವನ್ನು ಹೇಗಾದರೂ ಕೂಡಿಸಬೇಕು. ಆದ್ದರಿಂದ ಪ್ರಾಣಸಹಿತವಾದ ಬುದ್ಧಿಯೇ 'ಪಿಬಂತೌ' ಎಂಬ ಶ್ರುತಿಯಿಂದ ಪ್ರತಿಪಾದ್ಯವಾಗಿದೆಯೆಂದು ಸಿದ್ಧಾಂತ ಮಾಡುವುದೇ ಉಚಿತವಾಗಿದೆ.

ಒಂದೇ ಬುದ್ಧಿಯು ಪ್ರಾತಿಪದಿಕದಿಂದ ಪ್ರತಿಪಾದ್ಯವಾದಲ್ಲಿ ಪ್ರತ್ಯಯಾರ್ಥವಾದ ದ್ವಿತ್ವವು ಅಸ್ವರಸವಾಗುತ್ತದೆ. ಆದ್ದರಿಂದ ಪ್ರತ್ಯಯಾರ್ಥದ ಸ್ವಾರಸ್ಯವನ್ನು ನೀನು ಅಪೇಕ್ಷಿಸುವಿಯಾದರೆ ಹೀಗೂ ಸಿದ್ಧಾಂತ ಮಾಡಬಹುದು. ಆರೋಪಿತವಾದ ಭೋಕ್ತೃತ್ವದಿಂದ ಜೀವನು ಯುಕ್ತನಾಗಿದ್ದಾನೆ. ಇಂತಹ ಜೀವನಿಗೆ ಭೋಕ್ತೃತ್ವವಿರುವ ಬುದ್ಧಿಯು ಎರಡನೆಯ ಪದಾರ್ಥವಾಗಿದೆ. ಹೊರತು ಆರೋಪಿತವಾದ ಭೋಕ್ತೃತ್ವವಿಲ್ಲದ ಬ್ರಹ್ಮನು ಎರಡನೆಯ ಪದಾರ್ಥವಾಗಲಾರನು.

ಇನ್ನು ಶ್ರುತಿಗೆ ಆರೋಪಿತವಿಷಯತ್ವವನ್ನು ಸಹಿಸಲಾಗದಿದ್ದರೆ ಭೋಕ್ತೃತ್ವವಿರುವ ಬುದ್ಧಿಯನ್ನು ಪ್ರಾತಿಪದಿಕಾರ್ಥವೆಂದು ಹೇಳಿ ಭೋಕ್ತೃತ್ವವಿಲ್ಲದೆ ಜಡತ್ವೇನ ಸಾಮ್ಯವನ್ನು ಹೊಂದಿರುವ ಮತ್ತೊಂದು ಜಡ ಪದಾರ್ಥವನ್ನು ದ್ವಿತೀಯ ಪದಾರ್ಥವೆಂದು ಸ್ವೀಕರಿಸಿ ಸಿದ್ಧಾಂತ ಮಾಡಬಹುದು. ಹೀಗೆ ಈ ಎಲ್ಲಾ ಪಕ್ಷಗಳಲ್ಲಿಯೂ ಪರಬ್ರಹ್ಮನನ್ನು ಭೋಕ್ತೃವನ್ನಾಗಿ ಸ್ವೀಕರಿಸಲು ಸರ್ವಥಾ ಸಾಧ್ಯವಿಲ್ಲ.

ಅಥವಾ ಜೀವನಲ್ಲಿ ಭೋಕ್ತೃತ್ವವನ್ನು ಒಪ್ಪೋಣ, ಆದರೂ ಸಹ ಈ ಎತ್ತಿಗೆ ಜೊತೆ ಹುಡುಕಬೇಕು ಎಂಬಲ್ಲಿ ಎರಡು ಎತ್ತುಗಳಿಗೆ ಮುಖ್ಯವಾದ ಭೇದವೇ ಇರುತ್ತದೆ. ಆದ್ದರಿಂದ ಸಜಾತೀಯ ಎತ್ತನ್ನು ಹುಡುಕಬೇಕೆಂಬುದು ಅರ್ಥಪೂರ್ಣವಾಗಿದೆ. ಆದರೆ 'ಪಿಬಂತೌ' ಎಂಬಲ್ಲಿ ಬ್ರಹ್ಮನನ್ನು ದ್ವಿತೀಯ ಪದಾರ್ಥವೆಂದು ಸ್ವೀಕರಿಸಿದರೆ ಜೀವನಿಗೆ ಬ್ರಹ್ಮನಿಂದ ತಾತ್ತ್ವಿಕವಾದ ಭೇದವೇ ಇರುವುದಿಲ್ಲ. ಹೊರತಾಗಿ ಅಭೇದವೇ ಇರುತ್ತದೆ. ಹಾಗಾಗಿ 'ಚಂದ್ರಃ ಸದ್ವಿತೀಯಃ' ಎಂದು ಹೇಳಿದಾಗ ಯಾವರೀತಿಯಾಗಿ ವಿಜಾತೀಯವಾಗಿದ್ದರೂ ತಾತ್ವಿಕ ಭೇದವುಳ್ಳ ನಕ್ಷತ್ರಾದಿಗಳ ಜ್ಞಾನವೇ ನಮಗೆ ಬರುತ್ತದೆ ಹೊರತು ಸಜಾತೀಯವಾಗಿದ್ದರೂ ಸಹ ಕಲ್ಪಿತಭೇದವುಳ್ಳ ಮತ್ತೊಬ್ಬ ಚಂದ್ರನ ಜ್ಞಾನವು ಬರುವುದಿಲ್ಲ. ಅದರಂತೆ ಇಲ್ಲಿಯೂ ಸಹ ಜೀವನಿಗೆ ಬ್ರಹ್ಮನು ಚೇತನತ್ವ ಧರ್ಮದಿಂದ ಸಜಾತೀಯನಾಗಿರಬಹುದು. ಆದರೂ ಕಲ್ಪಿತಭೇದವುಳ್ಳವನಾದ್ದರಿಂದ ಬ್ರಹ್ಮನ ಜ್ಞಾನವು ಬರುವುದಿಲ್ಲ. ಧರ್ಮಿಸಮಸತ್ತಾಕಭೇದವುಳ್ಳ ಬುದ್ಧಿಯು ಜೀವನಿಗೆ ವಿಜಾತೀಯವಾಗಿದ್ದರೂ ಇದರ ಉಪಸ್ಥಿತಿ ಬರುತ್ತದೆ. ಏಕೆಂದರೆ ಶ್ರುತಿಯಲ್ಲಿ ದ್ವಿತ್ವವು ಶಬ್ದದಿಂದ ತಿಳಿಯುತ್ತಿರುವಂತೆ ಸಾಜಾತ್ಯವು ಶಬ್ದದಿಂದ ತಿಳಿಯುತ್ತಿಲ್ಲ. ಹಾಗೇನಾದರೂ ಸಾಜಾತ್ಯವು ಶಬ್ದದಿಂದ ತಿಳಿದಿದ್ದಲ್ಲಿ ಅದನ್ನೇ ಮುಖ್ಯವಾಗಿ ಪರಿಗಣಿಸಿ ಅದಕ್ಕನುಸಾರಿಯಾಗಿ ದ್ವಿತ್ವವನ್ನು ಗೌಣವನ್ನಾಗಿ ಕೂಡಿಸಬಹುದಿತ್ತು.

ಪ್ರಕಾಶಃ –

ಪಿಬತಶ್ಚೇತನತ್ವೇऽವಗತೇ ತದನುರೋಧಾತ್ಸಜಾತೀಯಸ್ಯ ಗ್ರಹಣಂ ಚರಮಸ್ಯ ಬಾಧ ಇತ್ಯಾದಿ ಸ್ಯಾತ್, ತದೇವ ನ ಸಿದ್ಧಮಿತ್ಯಾಹ – ಬುದ್ಧಿಸ್ಥತ್ವಾದಿತಿ । ಟೀಕಾರೀತ್ಯाऽभ್ಯುಪೇತ್ಯಾಹ – ಚಿತ್ತ್ವೇऽಪೀತಿ ।

ಅದ್ವೈತಿಗಳ ಸಿದ್ಧಾಂತವೇ ತಪ್ಪು. 'ಪಿಬಂತೌ' ಎಂಬಲ್ಲಿರುವ 'ಪಿಬತ್' ಪ್ರಾತಿಪದಿಕದಿಂದ ಭೋಕ್ತೃತ್ವವುಳ್ಳವನು ಚೇತನನಾಗಿದ್ದಾನೆಂದು ತಿಳಿಯುವುದಿಲ್ಲ. ಹಾಗೆ ತಿಳಿದಿದ್ದರೆ ಅದಕ್ಕನುಸಾರಿಯಾಗಿ ಸಾಜಾತ್ಯವನ್ನೇ ಮುಖ್ಯವಾಗಿ ವಿವಕ್ಷಿಸಿ ಅನಂತರ ಕೇಳಿಸುತ್ತಿರುವ ದ್ವಿತ್ವವನ್ನು ಬಾಧಿಸಬಹುದಿತ್ತು. ಆದರೆ ಪಿಬತ್‌ಪ್ರಾತಿಪದಿಕದಿಂದ ಚೇತನನು ಪ್ರತಿಪಾದ್ಯನಾಗಿದ್ದಾನೆಂಬ ಜ್ಞಾನವೇ ಬರುವುದಿಲ್ಲವೆಂದು 'ಬುದ್ಧಿಸ್ಥತ್ವಾತ್' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

ಒಂದು ವೇಳೆ ತತ್ವಪ್ರಕಾಶಿಕೆಯಲ್ಲಿ ಹೇಳುವ ಪ್ರಕಾರ ಚೇತನನು 'ಪಿಬತ್' ಪ್ರಾತಿಪದಿಕದಿಂದ ಪ್ರತಿಪಾದ್ಯನೆಂದು ಅಂಗೀಕರಿಸಿದರೂ ಸಹ ಪರಬ್ರಹ್ಮನನ್ನು ಸ್ವೀಕರಿಸಲಾಗದೆಂದು 'ಚಿತ್ತ್ವೇऽಪಿ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ಸ್ವಮತೇऽಭಾವಾದ್ಧೇತೋರಸಿದ್ಧಿಮಾಶಙ್ಕ್ಯ ಪೂರ್ವಾರ್ಧಂ ವ್ಯಾಚಷ್ಟೇ – ತ್ವನ್ಮತ ಇತಿ । ''ಏತತ್ಸರ್ವಂ ಮನಃ'' ಇತ್ಯಾದಿಶ್ರುತೇರಿತಿ ಭಾವಃ । ನನ್ವಾರೋಪಿತಪಾತೃತ್ವೇನಾಪಿ ಜೀವ ಏವ ಪಿಬಚ್ಛಬ್ದೇನ ಬೋಧ್ಯತ ಇತ್ಯತ ಆಹ – ನ ಹೀತಿ ।

ಸ್ವಮತದಲ್ಲಿ ಬುದ್ಧಿಯಲ್ಲಿರುವ ಭೋಕ್ತೃತ್ವವು ಜೀವನಲ್ಲಿ ಬರುವುದಿಲ್ಲವೆಂದು ಸಮರ್ಥಿಸುತ್ತಾ ಶ್ಲೋಕದ ಪೂರ್ವಾರ್ಧವನ್ನು ಸ್ವತಃ ತಾವೇ ವ್ಯಾಖ್ಯಾನಿಸುತ್ತಿದ್ದಾರೆ 'ತ್ವನ್ಮತೇ' ಇತ್ಯಾದಿ ವಾಕ್ಯದಿಂದ. ''ಏತತ್ಸರ್ವಂ ಮನಃ'' ಇತ್ಯಾದಿಯಾದ ಶ್ರುತಿಯಿಂದ ಭೋಕ್ತೃತ್ವಾದಿಗಳು ಜೀವನಲ್ಲೇ ಇರುತ್ತವೆಂದು ನೀವು ಒಪ್ಪಿದ್ದೀರಿ.

ಜೀವನಲ್ಲಿ ಭೋಕ್ತೃತ್ವವು ಪಾರಮಾರ್ಥಿಕವಾಗಿ ಇಲ್ಲದಿದ್ದರೂ ಆರೋಪಿತವಾಗಿ ಇರುತ್ತದೆ. 'ಪಿಬತ್' ಪ್ರಾತಿಪದಿಕದಿಂದ ಜೀವನು ಪ್ರತಿಪಾದ್ಯನಾಗುತ್ತಾನಲ್ಲವೇ? ಎಂಬ ಪ್ರಶ್ನೆಗೆ 'ನಹಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ತನ್ಮತೇऽಪಿ ಕೇವಲಬುದ್ಧಿತ್ವಮಸಿದ್ಧಂ ಇತ್ಯತ ಆಹ – ಭೋಕ್ತೃತ್ವಾದೇರಿತಿ । ಅನ್ಯೋನ್ಯಧರ್ಮೇತಿ । ''ಅನ್ಯೋನ್ಯಸ್ಮಿನ್ನನ್ಯೋನ್ಯಾತ್ಮಕತಾಮನ್ಯೋನ್ಯಧರ್ಮಾಂಶ್ಚಾಧ್ಯಸ್ಯ'' ಇತಿ ಭಾಷ್ಯೋಕ್ತಿರಯುಕ್ತಾ ಸ್ಯಾದಿತ್ಯರ್ಥಃ । ಶಕ್ತಿಭೇದेऽಪಿ ನ ವ್ಯಕ್ತಿಭೇದ ಇತಿ ಗುಹಾವಿಷ್ಟತ್ವಮಿವ ದ್ವಿತ್ವಂ ನ ಸ್ವರಸಮಿತ್ಯಾಶಙ್ಕ್ಯಾಹ – ಅಥೇತಿ । 'ತೇನಾಪಿ' ಆರೋಪಿತಪಾತೃತ್ವೇನಾಪಿ ।

ಆದ್ವೈತಿಗಳ ಮತದಲ್ಲಿಯೂ ಸಹ ಭೋಕ್ತೃತ್ವವು ಕೇವಲ ಬುದ್ಧಿಯಲ್ಲಿದೆ ಎಂದು ಸಮರ್ಥಿಸಲು ಸಾಧ್ಯವಿಲ್ಲ. ಈ ವಿಚಾರವನ್ನು 'ಭೋಕ್ತೃತ್ವಾದೇಃ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. 'ಅನ್ಯೋನ್ಯಧರ್ಮ' ಎಂಬ ವಾಕ್ಯದ ಅಭಿಪ್ರಾಯ ಹೀಗಿದೆ - ''ಅನ್ಯೋನ್ಯಸ್ಮಿನ್ನನ್ಯೋನ್ಯಾತ್ಮಕತಾಮನ್ಯೋನ್ಯ- ಧರ್ಮಾಂಶ್ಚಾಧ್ಯಸ್ಯ'' ಎಂದು ಭಾಷ್ಯದಲ್ಲಿ ಹೇಳಲ್ಪಟ್ಟ ಮಾತು ಅಯುಕ್ತವಾದೀತು ಎಂದು. ಪದದ ಶಕ್ತಿಯು ಬೇರೆ ಬೇರೆಯಾಗಿದ್ದರೂ ವ್ಯಕ್ತಿಯು ಒಂದೇ ಆಗಿರುವುದರಿಂದ ಗುಹಾಪ್ರವೇಶವು ಹೇಗೆ ಅಯುಕ್ತವಾಗಿದೆಯೋ ಅದರಂತೆ ದ್ವಿತ್ವವೂ ಸಹ ಅಸ್ವರಸವಾಗಿದೆ ಎಂದು ಆಶಂಕಿಸುತ್ತಿದ್ದಾರೆ 'ಅರ್ಥ' ಇತ್ಯಾದಿ ವಾಕ್ಯದಿಂದ. 'ತೇನಾಪಿ' ಎಂಬ ಪದಕ್ಕೆ ಆರೋಪಿತವಾದ ಪಾತೃತ್ವದಿಂದಲೂ ಸಹ ಎಂದರ್ಥ.

ಪ್ರಕಾಶಃ – ನ ಕಥಞ್ಚಿದಿತಿ । ಪಾತೃತ್ವೇನ ವಾ ಸಜಾತೀಯತ್ವೇನ ವೇತ್ಯರ್ಥಃ । ''ಚಿತ್ತೇಪಿ'' ಇತಿ ಪಾದತ್ರಯಂ ವ್ಯಾಚಷ್ಟೇ – ಅಸ್ತು ವೇತಿ । ಕಲ್ಪಿತಭೇದಸ್ಯ ಸತ್ತ್ವಾದ್ ದ್ವಿತ್ವಂ ಸ್ಯಾದಿತ್ಯತ ಉಕ್ತಂ – ನ ತಾತ್ತ್ವಿಕಂ ದ್ವಿತ್ವಮಿತಿ । ಅತ್ರಾಪ್ಯತಾತ್ತ್ವಿಕಮೇವ ದ್ವಿತ್ವಂ ಬೋಧ್ಯತಾಂ ಇತ್ಯತ ಆಹ – ತಥಾ ಚೇತಿ ।

ಪಾತೃತ್ವದಿಂದಾಗಲೀ ಅಥವಾ ಸಾಜಾತ್ಯದಿಂದಾಗಲೀ ಬುದ್ಧಿಯ ಜೊತೆಗೆ ಪರಮಾತ್ಮನನ್ನು ಸ್ವೀಕರಿಸಲಾಗದೆಂದು 'ನ ಕಥಂಚಿತ್' ಎಂಬುದರಿಂದ ಹೇಳಿದ್ದಾರೆ.

'ಚಿತ್ತ್ವೇಪಿ' ಎಂಬ ಮೂರು ಪಾದಗಳನ್ನು 'ಅಸ್ತುವಾ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಜೀವಬ್ರಹ್ಮರಿಗೆ ಕಲ್ಪಿತವಾದ ಭೇದವಿರುವುದರಿಂದ ದ್ವಿತ್ವವನ್ನು ಹೇಳಬಹುದಲ್ಲವೇ ? ಎಂಬ ಪ್ರಶ್ನೆಗೆ 'ನ ತಾತ್ತ್ವಿಕಂ ದ್ವಿತ್ವಂ' ಎಂದು ಉತ್ತರಿಸಿದ್ದಾರೆ. 'ಪಿಬಂತೌ' ಎಂಬಲ್ಲಿಯೂ ಸಹ ಅತಾತ್ತ್ವಿಕವಾದ ದ್ವಿತ್ವವೇ ಪ್ರತಿಪಾದ್ಯವಾಗಿದೆಯೆಂದು ಹೇಳಬಹುದಲ್ಲವೇ ? ಎಂಬ ಪ್ರಶ್ನೆಗೆ 'ತಥಾಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಏತೇನ, ''ದ್ವಿವಚನಮಿತಿ ಚೇತ್, ತರ್ಹಿ ಜೀವೇಶ್ವರಾಙ್ಗೀಕಾರೋऽಪಿ ನ ಸ್ಯಾತ್ ತಯೋರೈಕ್ಯಾಙ್ಗೀಕಾರಾತ್ । ಕಾಲ್ಪನಿಕೋऽಸ್ತಿ ತಯೋರ್ಭೇದ ಇತಿ ಚೇತ್, ತರ್ಹಿ ಈಶ್ವರಸ್ಯೈವಾದ್ಭುತಾಚಿನ್ತ್ಯೈಶ್ವರ್ಯವಶಾದ್ ದ್ವಿರೂಪತ್ವೇನ ದ್ವಿತ್ವಮುಪಪಾದ್ಯತಾಮ್'' ಇತಿ ಸುಧಾವಾಕ್ಯೇ ಈಶ್ವರಸ್ಯೈವಾಸ್ತ್ವಿತ್ಯಾಪಾದೇನ ಬೀಜಮುಕ್ತಂ ಭವತಿ ।

ಹೀಗೆ ಹೇಳಿದ್ದರಿಂದ ''ದ್ವಿವಚನಮಿತಿ ಚೇತ್, ತರ್ಹಿ ಜೀವೇಶ್ವರಾಂಗೀಕಾರೋऽಪಿ ನ ಸ್ಯಾತ್ ತಯೋರೈಕ್ಯಾಂಗಿಕಾರಾತ್ । ಕಾಲ್ಪನಿಕೋऽಸ್ತಿ ತಯೋರ್ಭೇದ ಇತಿ ಚೇತ್, ತರ್ಹಿ ಈಶ್ವರಸ್ಯೈವಾದ್ಭುತಾಚಿಂತ್ಯೈಶ್ವರ್ಯವಶಾದ್ವಿರೂಪತ್ವೇನ ದ್ವಿತ್ವಮುಪಪಾದ್ಯತಾಮ್'' ದ್ವಿವಚನವಿರುವಾದರೆ ಜೀವೇಶ್ವರರನ್ನು ಅಂಗೀಕರಿಸಲು ಸಾಧ್ಯವಿಲ್ಲ. ಏಕೆಂದರೆ ಜೀವೇಶ್ವರರಿಗೆ ಐಕ್ಯವನ್ನು ಒಪ್ಪಿದ್ದರಿಂದ. ಕಲ್ಪಿತವಾದ ಭೇದವಿದೆಯೆಂದು ದ್ವಿವಚನವನ್ನು ಕೂಡಿಸುವುದಾದರೆ ಈಶ್ವರನಲ್ಲಿಯೇ ಅದ್ಭುತವಾದ ಅಚಿಂತ್ಯವಾದ

ಐಶ್ವರ್ಯವಿರುವ ಕಾರಣ ಎರಡು ರೂಪಗಳನ್ನು ಒಪ್ಪಿ ದ್ವಿತ್ವವನ್ನು ಕೂಡಿಸಬಹುದಲ್ಲವೇ? ಎಂಬ ಸುಧಾವಾಕ್ಯದಲ್ಲಿರುವ 'ಈಶ್ವರಸ್ಸ್ವ ಅಸ್ತು' ಎಂಬ ಆಪಾದನೆಗೆ ಕಾರಣವನ್ನು ಹೇಳಿದಂತಾಯಿತು.

ಪ್ರಕಾಶಃ – ನನು ಬುದ್ಧಾವಪಿ ಕಲ್ಪಿತಭೇದವತ್ತ್ವಮವಿಶಿಷ್ಟಮಿತ್ಯತ ಆಹ – ಧರ್ಮಿಸಮೇತಿ । ನನು ಪ್ರಥಮಾವಗತಂ ಸಾಜಾತ್ಯಂ ಮುಖ್ಯಮುಪೇತ್ಯ ಚರಮಾವಗತಂ ದ್ವಿತ್ವಮೇವ ಗುಹಾವಿಷ್ಟತ್ವಮಿವಾತ್ತ್ವಿಕಂ ಗೃಹ್ಯತಾಮಿತ್ಯತೋऽಸ್ಯ ಶಾಬ್ದತ್ವಾತ್ಸಾಜಾತ್ಯಸ್ಯ ತದಭಾವಾದಿತ್ಯಾಹ – ನ ಹೀತಿ । ಕಿಂ ತ್ವಾಕ್ಷಿಪ್ತಮಿತ್ಯರ್ಥಃ ।

ಬುದ್ಧಿಯಲ್ಲೂ ಸಹ ಕಲ್ಪಿತಭೇದವಿದೆಯಲ್ಲವೇ? ಎಂಬ ಪ್ರಶ್ನೆಗೆ 'ಧರ್ಮಿಸಮಸತ್ತಾ' ಎಂದು ಉತ್ತರಿಸುತ್ತಿದ್ದಾರೆ.

ಮೊದಲು ತಿಳಿಯಲ್ಪಟ್ಟ ಸಾಜಾತ್ಯವನ್ನೇ ಮುಖ್ಯವಾಗಿ ವಿವಕ್ಷಿಸಿ ಅನಂತರ ತಿಳಿಯಲ್ಪಟ್ಟ ದ್ವಿತ್ವವನ್ನು ಗುಹಾವಿಷ್ಟತ್ವದಂತೆ ಆತಾತ್ತ್ವಿಕವಾಗಿ ವ್ಯಾಖ್ಯಾನಿಸಬೇಕಲ್ಲವೇ? ಎಂಬ ಪ್ರಶ್ನೆಗೆ ದ್ವಿತ್ವವು ಶಬ್ದಪ್ರತಿಪಾದ್ಯವಾಗಿದೆ. ಆದರೆ ಸಾಜಾತ್ಯವು ಶಬ್ದಪ್ರತಿಪಾದ್ಯವಾಗಿಲ್ಲವೆಂದು 'ನಹಿ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ ಹೊರತಾಗಿ ಸಾಜಾತ್ಯವು ಅರ್ಥಾತ್ ಸಿದ್ಧವಾಗಿದೆಯೆಂದು ತಿಳಿಯಬೇಕು.

ಗುರುರಾಜೀಯಮ್ – ಛಾಯಾತ್ವಂ ಬ್ರಹ್ಮಣೋ ನ ಯುಕ್ತಂ ಜೀವವದವಿದ್ಯಾಶ್ರಯತ್ವಾಭಾವಾದಿತಿ ಪೂರ್ವಪಕ್ಷೋಕ್ತಂ ಬಾಧಕಂ ಪರಿಹರತಿ – ಸುಖೇತಿ ।। ಪ್ರತಿಯೋಗೇಭಿದೇನ ವಿಚ್ಛದವಿಚ್ಛದ್ರೂಪಪ್ರತಿಯೋಗಿ-ಭೇದೇನೇತ್ಯರ್ಥಃ ।

ನನು ಭೋಕ್ತೃತ್ವಾದಿಕಮಹಙ್ಕಾರಧರ್ಮಃ । ಅಹಙ್ಕಾರಶ್ಚ ಚಿದಚಿತ್ಸಂವಲನಾತ್ಮಕ ಇತಿ ತತ್ರ ಚಿಚ್ಛಾಗಸ್ಯಾಪಿ ಪ್ರವಿಷ್ಟತ್ವೇನ ಭೋಕ್ತೃತ್ವಾದೇಶ್ಚಿದ್ರೂಪಜೀವಧರ್ಮತಾ ಸಮ್ಭವತ್ಯೇವೇತ್ಯತ ಆಹ – ಭೋಕ್ತೃತ್ವಾದೇರಿತಿ ।। ತಥಾ ಸತಿ ವಸ್ತುಗತ್ಯಾ ಭೋಕ್ತೃತಾದೇಸ್ತದ್ಧರ್ಮತಾಪತ್ತ್ಯಾऽನ್ಯೋನ್ಯ-ಧರ್ಮಾಧ್ಯಾಸೋಕ್ತೇರಯೋಗೇನ ತತ್ಪ್ರತಿಪಾದಕ ಯುಷ್ಮದಸ್ಮತ್ಪ್ರತ್ಯಯಗೋಚರಯೋರಿತ್ಯಾದಿಭಾಷ್ಯಾನಾರಮ್ಭ-ಸ್ಯಾದಿತಿ । ವಿತ್ತೇऽಪಿ ದ್ವಿತ್ವಪೂರ್ವಸ್ಯಾಬಾಧಾರ್ಥಂ ಸದ್ವಿತೀಯತಾ ।

ಸಾರ

ಅದ್ವೈತಮತದಲ್ಲಿ ಜಡವಾದ ಬುದ್ಧಿಯಲ್ಲಿರುವ ಕರ್ತೃತ್ವ ಭೋಕ್ತೃತ್ವಗಳನ್ನು ಚೇತನನಾದ ಜೀವನಲ್ಲಿ ಆರೋಪಿಸಲಾಗುತ್ತದೆ. ಸ್ಫಟಿಕದ ಸಮೀಪದಲ್ಲಿ ಕೆಂಪಾದ ದಾಸವಾಳ ಹೂವಿದ್ದರೆ ಅದರ ಕೆಂಪು ಬಣ್ಣವು ಬಿಳಿಯಾದ ಸ್ಫಟಿಕದಲ್ಲಿ ಆರೋಪಿಸಲಾಗುತ್ತದೆ. ಅದರಂತೆ ಬುದ್ಧಿಯಲ್ಲಿರುವ ಭೋಕ್ತೃತ್ವಾದಿಗಳು ಹತ್ತಿರದಲ್ಲಿರುವ ಜೀವನಲ್ಲಿ ಆರೋಪಿಸಲಾಗುತ್ತದೆ. ಇಂತಹ ಭೋಕ್ತೃತ್ವವನ್ನು ಜೀವನ ಧರ್ಮವೆಂದು ಪರಿಗಣಿಸಿ ಚೇತನನೆಂದು ಒಬ್ಬನನ್ನು

ನಿರ್ಣಯಿಸುತ್ತೇವೆಂದು ಹೇಗೆ ಹೇಳುತ್ತೀರಿ? ಹಾಗೆ ನಿರ್ಣಯಿಸಿದ್ದಲ್ಲಿ ಒಬ್ಬ ಜೀವನ ಸಾರೂಪ್ಯದಿಂದ ಮತ್ತೊಬ್ಬನನ್ನೂ ಸಹ ಚೇತನನೆಂದು ನಿರ್ಣಯಿಸಬಹುದಿತ್ತು. ಆದರೆ ಆರೋಪಿತವಾದ ಭೋಕ್ತೃತ್ವವು ಇದ್ದ ಮಾತ್ರದಿಂದ ಅವನನ್ನು 'ಪಿಬಂತೌ' ಎಂದು ಹೇಳಬಹುದಾದರೆ ದೇಹದಲ್ಲಿಯೂ ಸಹ ಆರೋಪಿತವಾದ ಆತ್ಮತ್ವವಿರುವುದರಿಂದ 'ಆತ್ಮಾ ದ್ರಷ್ಟವ್ಯಃ' ಎಂಬಲ್ಲಿಯೂ ಆತ್ಮಪದಕ್ಕೆ ದೇಹವೆಂಬರ್ಥವನ್ನು ಹೇಳಬೇಕಾದೀತು. ಆದರೆ ಯಾರೂ ಸಹ ಲೋಕದಲ್ಲಿ ದೇಹದಲ್ಲಿ ಆತ್ಮತ್ವವು ಆರೋಪಿತವಾಗಿದೆಯೆಂದು ದೇಹವನ್ನೇ ಆತ್ಮವೆಂದು ಹೇಳಲಾರರು.

ಮತ್ತು ಭೋಕ್ತೃತ್ವಾದಿಗಳು ಚಿದಚಿತ್‌ಸಂವಲನಧರ್ಮವಾದ್ದರಿಂದ ಬುದ್ಧಿ ಹಾಗೂ ಜೀವರಲ್ಲಿ ಸಮಾನವಾಗಿದೆಯೆಂದು ನೀವು ಹೇಳಬೇಕು. ಈ ಪಕ್ಷದಲ್ಲಿ ಬುದ್ಧಿಜೀವರಲ್ಲಿರುವ ಧರ್ಮಗಳನ್ನು ಪರಸ್ಪರವಾಗಿ ಆರೋಪಿಸುವುದು ಅಯುಕ್ತವಾಗುತ್ತದೆ. ಆದ್ದರಿಂದ ಭೋಕ್ತೃತ್ವವನ್ನು ಜೀವನಲ್ಲಿ ಹೇಳಲು ಸಾಧ್ಯವಿಲ್ಲ. ಬುದ್ಧಿಯಲ್ಲಿ ಮಾತ್ರ ಹೇಳಬೇಕು. ಬುದ್ಧಿಯೇ ಪ್ರಕೃತ್ಯರ್ಥವಾಗುತ್ತದೆ. ಆಗ 'ಪಿಬಂತೌ' ಎಂಬಲ್ಲಿರುವ ದ್ವಿವಚನದಿಂದ ಬುದ್ಧಿಯ ಜೊತೆಗಿರುವ ಮತ್ತೊಂದು ವಸ್ತುವನ್ನು ಯಾವುದೆಂದು ನಿಶ್ಚಯಿಸಬೇಕು. ಎರಡನೆಯ ವಸ್ತು ಜೀವನಾಗದಿದ್ದಾಗ ಬ್ರಹ್ಮನೂ ಸಹ ಆಗುವುದಿಲ್ಲ. ಆದ್ದರಿಂದ ಬುದ್ಧಿಯಲ್ಲಿ ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿಗಳು ಇರುವುದರಿಂದ ಇವೆರಡನ್ನೂ ವಿವಕ್ಷಿಸಿ ಪ್ರತ್ಯಯಾರ್ಥವೆನಿಸಿದ ದ್ವಿತ್ವವನ್ನು ಹೇಗಾದರೂ ಕೂಡಿಸಬೇಕು. ಆದ್ದರಿಂದ ಪ್ರಾಣಸಹತವಾದ ಬುದ್ಧಿಯೇ 'ಪಿಬಂತೌ' ಎಂಬ ಶ್ರುತಿಯಿಂದ ಪ್ರತಿಪಾದ್ಯವಾಗಿದೆಯೆಂದು ಸಿದ್ಧಾಂತ ಮಾಡುವುದೇ ಉಚಿತವಾಗಿದೆ.

ಒಂದೇ ಬುದ್ಧಿಯು ಪ್ರಾತಿಪದಿಕದಿಂದ ಪ್ರತಿಪಾದ್ಯವಾದಲ್ಲಿ ಪ್ರತ್ಯಯಾರ್ಥವಾದ ದ್ವಿತ್ವವು ಅಸ್ವರಸವಾಗುತ್ತದೆ. ಆದ್ದರಿಂದ ಪ್ರತ್ಯಯಾರ್ಥದ ಸ್ವಾರಸ್ಯವನ್ನು ನೀನು ಅಪೇಕ್ಷಿಸುವಿಯಾದರೆ ಹೀಗೂ ಸಿದ್ಧಾಂತ ಮಾಡಬಹುದು - ಆರೋಪಿತವಾದ ಭೋಕ್ತೃತ್ವದಿಂದ ಜೀವನು ಯುಕ್ತನಾಗಿದ್ದಾನೆ. ಇಂತಹ ಜೀವನಿಗೆ ಭೋಕ್ತೃತ್ವವಿರುವ ಬುದ್ಧಿಯು ಎರಡನೆಯ ಪದಾರ್ಥವಾಗಿದೆ. ಹೊರತು ಆರೋಪಿತವಾದ ಭೋಕ್ತೃತ್ವವು ಇಲ್ಲದ ಬ್ರಹ್ಮನು ಎರಡನೆಯ ಪದಾರ್ಥವಾಗಲಾರನು ಎಂದು.

'ಪಿಬಂತೌ' ಎಂಬ ಶ್ರುತಿಯಲ್ಲಿ ದ್ವಿತ್ವವು ಶಬ್ದದಿಂದ ಕೇಳಿಸುತ್ತಿದೆ. ಆದ್ದರಿಂದ ದ್ವಿತ್ವಕ್ಕೆ ಮುಖ್ಯಾರ್ಥವನ್ನೇ ಸ್ವೀಕರಿಸಬೇಕೆಂದರೆ ತಾತ್ವಿಕವಾದ ಭೇದವುಳ್ಳ ಎರಡೂ ವಸ್ತುಗಳನ್ನೇ ಸ್ವೀಕರಿಸಬೇಕು ಹೊರತು ಅತಾತ್ವಿಕವಾದ ಭೇದವುಳ್ಳ ಜೀವಬ್ರಹ್ಮರನ್ನು ಸ್ವೀಕರಿಸಲು ಸಾಧ್ಯವಿಲ್ಲ.

• • • • •

ಆದ್ವೈತಿಗಳ ಸಿದ್ಧಾಂತ ಕೇವಲ ಶಬ್ದದ ಕಲಹ

ತಾತ್ಪರ್ಯಚಂದ್ರಿಕಾ

अपि च 'अस्य जरठस्य गोर्द्वितीयेन बलवता भाव्यम्' इत्युक्ते चरमस्यापि शाब्दस्य बलवत्त्वस्याबाधार्थं प्रथमेन जरठत्वेन तदाक्षिप्तदुर्बलत्वेन वा साजात्यस्येव प्रकृतेऽपि चरमस्यापि शाब्दस्य गुहाप्रविष्टत्वस्य अबाधार्थं प्रथमपातृत्वाक्षिप्तेन चेतनत्वेन साजात्यस्यैव बाधोऽस्तु । नहि 'यो वेद निहितं गुहायाम्''

ಗುಹಾಧಿಕರಣ (೧-೨-೫)

इत्यादिश्रुतिसिद्धमपि ब्रह्मणो गुहानिहितत्वं सर्वगतस्य ब्रह्मणोऽर्भकौकस्त्वं न पारमार्थिकमिति वदतस्तव मते तात्त्विकम् ।

अस्तु वा जीवस्य ब्रह्मणा सद्वितीयत्वेऽपि द्वित्वादेरबाधः, तथाऽपि कर्मफलभोक्तृत्वेन चेतनत्ववत्पारतन्त्र्यस्यापि आक्षेपात् परतन्त्रा बुद्धिः जीवस्य द्वितीया स्यात्, चेतनस्य भोक्तृत्वनियमाभावेऽपि भोक्तुश्चेतनत्वनियमवत् परतन्त्रस्य भोक्तृत्वनियमाभावेऽपि कर्मफलभोक्तुः पारतन्त्र्यनियमात् । सम्भवति च बुद्धेर्भोगकरणत्वात् 'काष्ठानि पचन्ति' इत्यादाविव कर्तृत्वोपचारः ।

'गोर्द्वितीयेन' इत्यत्र तु गोत्वस्य शाब्दत्वात्तेनैव साजात्यं वाच्यमिति नातिप्रसङ्गः ।

छायातपत्वमपि चेतनाचेतनत्वादिना बुद्धिजीवादौ युक्तम् ।

किञ्च पूर्वपक्षे सिद्धान्ते च बुद्धौ ब्रह्मणि च च्छत्रिवल्लक्षणैव, पाता तु जीव एवेति प्रमेये विशेषाभावेन व्यर्था चिन्ता ।

मात्रयाऽपि प्रमेयस्य भेदाभावे हि वादिनोः ।
शब्दमात्राय कलहो न युक्तो मूर्खयोरिव ।।

ಅನುವಾದ - ಅಷ್ಟೇ ಅಲ್ಲದೆ 'ಮುದಿಯಾದ ಎತ್ತಿಗೆ ಸರಿಯಾದ ಮತ್ತೊಂದು ಬಲಿಷ್ಠವನ್ನು ಹುಡುಕಬೇಕು' ಎಂದು ಹೇಳಿದಾಗ 'ಬಲವತ್' ಎಂಬ ಪದದಿಂದ ತಿಳಿಯುವ ಬಲವತ್ತ್ವವು ಕೊನೆಯಲ್ಲಿ ಕೇಳಿಸುತ್ತಿದೆ. ಆದರೂ ಸಹ ಶಬ್ದವೇದ್ಯವಾದ್ದರಿಂದ ಬಿಡಲು ಯೋಗ್ಯವಲ್ಲ. ಹಾಗಾಗಿ ಜರಠತ್ವವು ಮೊದಲು ಕೇಳಿಸುತ್ತಿದ್ದರೂ ಸಾರೂಪ್ಯದಿಂದ ಮುದಿಯಾದ ಎತ್ತನ್ನೇ ದ್ವಿತೀಯಪದಾರ್ಥವೆಂದು ಭಾವಿಸಬಾರದು. ಅಥವಾ ಜರಠತ್ವದಿಂದ ಆಕ್ಷಿಪ್ತವಾದ ದುರ್ಬಲತ್ವವನ್ನು ವಿವಕ್ಷಿಸಿ ಮುದಿಯಾದ ಎತ್ತನ್ನು ಸ್ವೀಕರಿಸಬಾರದು.

ಅದರಂತೆ ಪ್ರಕೃತದಲ್ಲಿಯೂ ಗುಹಾಪ್ರವಿಷ್ಟತ್ವವು ಶಬ್ದವೇದ್ಯವಾದ್ದರಿಂದ ಕೊನೆಯಲ್ಲಿ ಕೇಳಿಸುತ್ತಿದ್ದರೂ ಬಿಡಲು ಯೋಗ್ಯವಲ್ಲ. ಆದ್ದರಿಂದ ಮೊದಲು ಕೇಳಿಸುತ್ತಿರುವ ಪಾತೃತ್ವದಿಂದ ಆಕ್ಷಿಪ್ತವಾದ ಚೇತನತ್ವದಿಂದ ಸಾರೂಪ್ಯವನ್ನು ವಿವಕ್ಷಿಸಬಾರದು.

ಅಥವಾ ಚೇತನತ್ವವೆಂಬ ಸಾಜಾತ್ಯದಿಂದಲೂ ಗುಹಾಪ್ರವಿಷ್ಟತ್ವಕ್ಕೆ ಬಾಧವನ್ನು ಹೇಳಬಾರದು; ಹೊರತಾಗಿ ಸಾಜಾತ್ಯಕ್ಕೆ ಬಾಧವನ್ನು ಹೇಳಬೇಕು. ಏಕೆಂದರೆ 'ಯೋ ವೇದ ನಿಹಿತಂ ಗುಹಾಯಮ್' ಇತ್ಯಾದಿ ಶ್ರುತಿಗಳಿಂದ ಬ್ರಹ್ಮನು ಗುಹಾನಿಹಿತನೆಂದು ನಿರ್ಣೀತನಾಗಿದ್ದಾನೆ. ಇಂತಹ ಗುಹಾನಿಹಿತತ್ವವನ್ನು 'ಸರ್ವಗತಸ್ಯ ಬ್ರಹ್ಮಣೋऽರ್ಭಕೌಕಸ್ತ್ವಂ ನ ಪಾರಮಾರ್ಥಿಕತ್ವಮ್' ಸರ್ವಗತನಾದ ಬ್ರಹ್ಮನಿಗೆ ಅರ್ಭಕೌಕಸ್ತ್ವವು ಪಾರಮಾರ್ಥಿಕವಾಗಿರುವುದಿಲ್ಲ ಎಂಬುದಾಗಿ ಹೇಳುವ ನಿಮ್ಮ ಮತದಲ್ಲಿ ಪಾರಮಾರ್ಥಿಕವೆಂದು ಹೇಳಲಾಗದು.

ಅಥವಾ ಜೀವನಿಗೆ ಬ್ರಹ್ಮನೇ ದ್ವಿತೀಯಪದಾರ್ಥನೆಂದು ಒಪ್ಪೋಣ. ಆದರೂ ಸಹ ದ್ವಿತ್ವಾದಿಗಳಿಗೆ ಬಾಧವು ಬರುವುದಿಲ್ಲವೆಂದು ನೀವು ಹೇಳಬಹುದು. ಆದರೆ ಕರ್ಮಫಲಭೋಕ್ತೃತ್ವದಿಂದ ಚೇತನತ್ವವು ಆಕ್ಷೇಪ ಬಲದಿಂದ ಸಿದ್ಧವಾಗುತ್ತದೆಂದು ಹೇಗೆ ಹೇಳುತ್ತಿರೋ, ಅದರಂತೆ ಪಾರತಂತ್ರ್ಯವೂ ಸಹ ಕರ್ಮಫಲಭೋಕ್ತೃತ್ವದಿಂದಲೇ ಆಕ್ಷೇಪಬಲದಿಂದ ಸಿದ್ಧವಾಗುತ್ತದೆ. ಆದ್ದರಿಂದ ಜೀವನಿಗೆ ದ್ವಿತೀಯವಾದ ಪದಾರ್ಥವೆಂದರೆ ಪರತಂತ್ರವಾದ ಬುದ್ಧಿಯೇ ಆಗುತ್ತದೆ. ಚೇತನವಾದ ಪದಾರ್ಥವೆಲ್ಲವೂ ಭೋಕ್ತೃವೇ ಆಗಿರಬೇಕೆಂಬ ನಿಯಮವು ಇಲ್ಲದಿದ್ದರೂ ಭೋಕ್ತೃವಾದ ಪದಾರ್ಥವೆಲ್ಲವೂ ಚೇತನವೇ ಆಗಿರುತ್ತದೆಂಬ ನಿಯಮವನ್ನು ನೀವು ಒಪ್ಪಿದ್ದೀರಿ. ಆದರಂತೆ ಪರತಂತ್ರವಾದ ವಸ್ತುಗಳೆಲ್ಲವು ಭೋಕ್ತೃವೇ ಆಗಿರಬೇಕೆಂಬ ನಿಯಮ ಇಲ್ಲದಿದ್ದರೂ ಕರ್ಮಫಲಭೋಕ್ತೃವಾದ ವಸ್ತುಗಳೆಲ್ಲವು ಪರತಂತ್ರವೇ ಆಗಿರುತ್ತವೆಂಬ ನಿಯಮವನ್ನು ಒಪ್ಪಬಹುದು.

ವಿಚಾರ ಮಾಡಿದರೆ ಭೋಕ್ತೃತ್ವವನ್ನು ಬುದ್ಧಿಯಲ್ಲೇ ಹೇಳಬಹುದು. ಏಕೆಂದರೆ 'ಕಾಷ್ಠಾನಿ ಪಚಂತಿ' ಎಂಬಲ್ಲಿ ಗೌಣವಾದ ಕರ್ತೃತ್ವವನ್ನು ಅವಲಂಬಿಸಿ ಕರಣದಲ್ಲಿ ಕರ್ತೃತ್ವವನ್ನು ಔಪಚಾರಿಕವಾಗಿ ಪ್ರಯೋಗಿಸುವಂತೆ ಬುದ್ಧಿಯಲ್ಲಿಯೂ ಸಹ ಔಪಚಾರಿಕವಾದ ಕರ್ತೃತ್ವವನ್ನು ವಿವಕ್ಷಿಸಿ ಕರಣವಾಗಿದ್ದರೂ ಭೋಕ್ತೃತ್ವವನ್ನು ಹೇಳಬಹುದು.

'ಗೋರ್ದ್ವಿತೀಯೇನ ಭಾವ್ಯಂ' ಎಂಬಲ್ಲಾದರೂ ಗೋತ್ವವು ಶಬ್ದವೇದ್ಯವಾದ್ದರಿಂದ ಗೋತ್ವದಿಂದಲೇ ಸಾಜಾತ್ಯವನ್ನು ಹೇಳಬೇಕು. ಹೊರತು ಉಳಿದ ಧರ್ಮಗಳಿಂದ ಹೇಳಬಾರದ ಕಾರಣ ಅತಿಪ್ರಸಂಗವು ಬರುವುದಿಲ್ಲ.

ಬುದ್ಧಿಯು ಅಚೇತನವಾದ್ದರಿಂದ 'ಛಾಯಾ' ಎನಿಸಿದೆ. ಜೀವನು ಚೇತನನಾದ್ದರಿಂದ ಆತಪನೆನಿಸಿದ್ದಾನೆ. ಆದ್ದರಿಂದ ಛಾಯಾತಪತ್ವದ ವಿರೋಧವೂ ಬರುವುದಿಲ್ಲ.

ವಿಚಾರ ಮಾಡಿದರೆ ಅದ್ವೈತಿಗಳ ಪೂರ್ವಪಕ್ಷ ಹಾಗೂ ಸಿದ್ಧಾಂತಪಕ್ಷಗಳಲ್ಲಿ ಭೋಕ್ತೃನಾದವನು ಜೀವನೇ ಆಗಿದ್ದಾನೆ. ಬುದ್ಧಿ ಹಾಗೂ ಬ್ರಹ್ಮರಲ್ಲಿ ಛತ್ರಿನ್ಯಾಯದಿಂದ ಗೌಣವಾದ ಕರ್ತೃತ್ವವನ್ನು ಹೇಳಲಾಗಿದೆ. ಭೋಕ್ತೃತ್ವವು ಜಡವಾದ ಬುದ್ಧಿಗೂ ಇಲ್ಲ ಬ್ರಹ್ಮನಿಗೂ ಇಲ್ಲ. ಹೀಗೆ ಪ್ರಮೇಯದಲ್ಲಿ ಏನೂ ವ್ಯತ್ಯಾಸವಿಲ್ಲದಿದ್ದಾಗ ಇದರ ಬಗ್ಗೆ ಪೂರ್ವಪಕ್ಷ ಸಿದ್ಧಾಂತಗಳೆಂಬ ಚರ್ಚೆಯೇ ವ್ಯರ್ಥವಾಗಿದೆ.

ಮಾತ್ರಯಾऽಪಿ ಪ್ರಮೇಯಸ್ಯ ಭೇದಾಭಾವೇ ಹಿ ವಾದಿನೋಃ।
ಶಬ್ದಮಾತ್ರಯ ಕಲಹೋ ನ ಯುಕ್ತೋ ಮೂರ್ಖಯೋರಿವ ॥

ಪೂರ್ವಪಕ್ಷ ಸಿದ್ಧಾಂತಗಳ ಪ್ರಮೇಯದಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲದಿದ್ದಾಗ ಕೇವಲ ಶಬ್ದಗಳ ಬಗ್ಗೆ ಜಗಳ ಮಾಡುವುದು ವ್ಯರ್ಥ. ಅದು ಮೂರ್ಖರ ಮಾತಾಗುತ್ತದೆ.

ಪ್ರಕಾಶಃ –

ಯದಪಿ ಪ್ರಥಮೇನ ಚರಮಸ್ಯ ಗುಹಾಪ್ರವಿಷ್ಟತ್ವಸ್ಯ ಬಾಧ ಇತಿ, ತದಪ್ಯ-ಯುಕ್ತಮಿತ್ಯಾಶಯೇನ, 'ದ್ವಿತ್ವಪೂರ್ವಸ್ಯ' ಇತ್ಯತ್ರ ಪೂರ್ವಪದಾರ್ಥವಿಕೃಷ್ಯನ್ನಾಹ – ಅಪಿ ಚೇತಿ । 'ಜರಠಸ್ಯ' ವೃದ್ಧಸ್ಯ ಪ್ರಥಮೇನ 'ಶ್ರುತೇನ' ಇತಿ ಶೇಷಃ ।

ವಿವರಣೆ - ಅದ್ವೈತಿಗಳು ಸಿದ್ಧಾಂತ ಮಾಡುವಾಗ ಮೊದಲು ಕೇಳಿಸುತ್ತಿರುವ ಭೋಕ್ತೃತ್ವವನ್ನು ಕೂಡಿಸುವುದಕ್ಕಾಗಿ ಅನಂತರ ಕೇಳಿಸುತ್ತಿರುವ ಗುಹಾಪ್ರವಿಷ್ಟತ್ವವನ್ನು ಬಾಧಿಸಬೇಕೆಂದು ಹೇಳಿದ್ದರು. ಆದರೆ ಇದೂ ಸಹ ಅಯುಕ್ತವಾಗಿದೆಯೆಂದು ಮತ್ತು ಶ್ಲೋಕದಲ್ಲಿ 'ದ್ವಿತ್ವಪೂರ್ವಸ್ಯ' ಎಂಬ ಪೂರ್ವಪದದ ಅರ್ಥವನ್ನು 'ಅಪಿಚ' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ. 'ಜರಠ' ಶಬ್ದಕ್ಕೆ ವೃದ್ಧವಾದ ಎಂದರ್ಥ. 'ಪ್ರಥಮೇನ' ಎಂಬ ಪದದ ಅನಂತರ 'ಶ್ರುತೇನ' ಎಂಬ ಪದವನ್ನು ಇಟ್ಟುಕೊಳ್ಳಬೇಕು.

ಪ್ರಕಾಶಃ – ಜರಠಸ್ಯ ದ್ವಿತೀಯೋ ಬಲವಾನಜರಠ ಏವೋಪಾದೀಯತೇ, ತದ್ವದಿಹ ಗುಹಾಪ್ರವಿಷ್ಟತ್ವಸ್ಯ ತ್ವನ್ಮತೇ ಪರಿಚ್ಛಿನ್ನಯೋರ್ಬುದ್ಧಿಜೀವಯೋರೇವ ಮುಖ್ಯತ್ವೇನ ಸರ್ವಗತೇ ಬ್ರಹ್ಮಣ್ಯಮುಖ್ಯತ್ವೇನ ಬ್ರಹ್ಮಗ್ರಹಣೇ ತದ್ಬಾಧಸ್ಯಾತ್ । ಸ ಚ ನ ಯುಕ್ತ, ಆಕ್ಷಿಪ್ತೇನ ಶಾಬ್ದಬಾಧಸ್ಯಾನ್ಯಾಯ್ಯತ್ವಾತ್ । ಅತಸ್ತದಬಾಧಾಯ ದ್ವಿತೀಯಾ ವಿರೂಪಾऽಪಿ ಬುದ್ಧಿರೇವ ಗ್ರಾಹ್ಯೇತ್ಯರ್ಥಃ ।

ಬ್ರಹ್ಮಪಕ್ಷೇ ಗುಹಾವಿಷ್ಟತ್ವಮಮುಖ್ಯಂ ತಾತ್ತ್ವಿಕಂ ನೇತ್ಯೇತದುಪಪಾದಯತಿ – ನ ಹೀತಿ । ''ಬ್ರಹ್ಮಣೋऽಭ್ರಕೌಕಸ್ತ್ವಂ ನ ಪಾರಮಾರ್ಥಿಕಂ'' ಇತಿ ಅಭ್ರಕೌಕಸ್ತ್ವಸೂತ್ರಗತತದೀಯ-ಭಾಷ್ಯಾನುವಾದಃ । ''ಕಿಞ್ಚ ಬುದ್ಧೇಃ'' ಇತ್ಯಾದಿ ಪಾದತ್ರಯಂ ವ್ಯಾಚಷ್ಟೇ – ಅಸ್ತು ವೇತಿ ।

ಮುದಿಯಾದ ಎತ್ತಿಗೆ ಬಲಿಷ್ಠವಾದ ಮತ್ತೊಂದು ಜೊತೆಯನ್ನು ಹುಡುಕಬೇಕು ಎಂದು ಹೇಳಿದಾಗ ಎರಡನೆಯ ಎತ್ತು ಬಲಿಷ್ಠವಾಗಿರಬೇಕು. ಮತ್ತು ಮುದಿಯಾಗಿರಬಾರದೆಂದೇ ಎಲ್ಲರೂ ತಿಳಿಯುತ್ತಾರೆ. ಹೊರತಾಗಿ ಜರಠತ್ವ ಧರ್ಮದಿಂದ ಸಾಜಾತ್ಯವನ್ನು ತಿಳಿದು ಮತ್ತೊಂದು ಮುದಿಯಾದ ಎತ್ತನ್ನು ಎರಡನೆಯದ್ದನ್ನಾಗಿ ಯಾರೂ ಸಹ ತಿಳಿಯುವುದಿಲ್ಲ. ಅದರಂತೆ ಇಲ್ಲಿಯೂ ಸಹ ಗುಹಾಪ್ರವಿಷ್ಟತ್ವವು ನಿಮ್ಮ

ಮತದಲ್ಲಿ ಬುದ್ಧಿತತ್ವ ಹಾಗೂ ಜೀವಿಗಳಲ್ಲಿ ಪರಿಚ್ಛಿನ್ನವಾದ್ದರಿಂದ ಮುಖ್ಯವಾಗಿ ಹೇಳಲ್ಪಟ್ಟಿದೆ. ಆದರೆ ಬ್ರಹ್ಮನು ಸರ್ವಗತನಾದ್ದರಿಂದ ಗುಹಾಪ್ರವಿಷ್ಟತ್ವವನ್ನು ಅಮುಖ್ಯವಾಗಿ ಹೇಳಲಾಗಿದೆ. ಆದ್ದರಿಂದ ಬ್ರಹ್ಮನೆಂಬ ಅರ್ಥವನ್ನು ಸ್ವೀಕರಿಸಿದರೆ ಗುಹಾಪ್ರವಿಷ್ಟತ್ವವನ್ನು ಬಿಟ್ಟಂತಾಗುತ್ತದೆ. ಆದರೆ ಇದು ಯುಕ್ತವಲ್ಲ. ಆರ್ಥಾತ್ ಸಿದ್ಧವಾಗುವ ವಿಚಾರವನ್ನು ಬಾಧಿಸುವುದಕ್ಕಿಂತ ಶಬ್ದದಿಂದ ತಿಳಿಯುವ ವಿಚಾರವನ್ನು ಬಾಧಿಸುವುದು ಅನ್ಯಾಯವಾಗಿದೆ. ಶಬ್ದದಿಂದ ತಿಳಿಯುವ ವಿಚಾರವನ್ನು ಬಾಧಿಸಬಾರದೆಂದರೆ ಎರಡನೆಯದ್ದನ್ನು ವಿರೂಪವಾಗಿದ್ದರೂ ಸಹ ಬುದ್ಧಿಯೆಂದೇ ಸ್ವೀಕರಿಸಬೇಕೆಂಬುದು 'ಅಪಿಚ' ಇತ್ಯಾದಿ ವಾಕ್ಯಗಳ ಅಭಿಪ್ರಾಯವಾಗಿದೆ.

ಬ್ರಹ್ಮಪಕ್ಷದಲ್ಲಿ ಗುಹಾವಿಷ್ಟತ್ವವು ಅಮುಖ್ಯವಾಗಿರುವುದರಿಂದ ಸಾತ್ವಿಕವಾಗಿಲ್ಲವೆಂಬುದನ್ನು 'ನಹಿ' ಇತ್ಯಾದಿ ವಾಕ್ಯದಿಂದ ಉಪಪಾದಿಸುತ್ತಿದ್ದಾರೆ. ಬ್ರಹ್ಮನಿಗೆ ಅರ್ಭಕೌಕಸ್ತ್ವವು ಪರಮಾರ್ಥಿಕವಾಗಿಲ್ಲವೆಂಬುದು ಅರ್ಭಕೌಕಸ್ತ್ವ ಸೂತ್ರಭಾಷ್ಯದ ಅನುವಾದ ರೂಪವಾಗಿದೆ. ಶ್ಲೋಕದಲ್ಲಿರುವ 'ಕಿಂಚ ಬುದ್ಧೇಃ' ಇತ್ಯಾದಿ ಮೂರುಪಾದಗಳನ್ನು 'ಅಸ್ತುವಾ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ.

प्रकाशः – ननु चेतनस्यैव भोक्तृत्वे तेन व्यापकस्य चेतनत्वास्याऽऽक्षेपेऽपि कथं पारतन्त्र्यस्याक्षेप इत्यतोऽस्यापि तद्व्यापकत्वात्समव्याप्तेस्तूभयत्राप्यभावादिति भावेनाह – चेतनस्येति । कूटस्थचेतने तदभावादिति भावः । कर्मेति । कर्मवशत्वादिति भावः ।

ಚೇತನವೇ ಭೋಕ್ತೃವಾಗಿರುವುದರಿಂದ ಭೋಕ್ತೃತ್ವದಿಂದ ವ್ಯಾಪಕವಾದ ಚೇತನತ್ವವು ಆಕ್ಷೇಪದಿಂದ ಸಿದ್ಧವಾಗಬಹುದು. ಆದರೆ ಪಾರತಂತ್ರ್ಯವು ವ್ಯಾಪಕವಲ್ಲದ ಕಾರಣ ಆಕ್ಷೇಪದಿಂದ ಹೇಗೆ ತಾನೇ ಸಿದ್ಧವಾಗುತ್ತದೆ? ಎಂಬ ಪ್ರಶ್ನೆಗೆ ಚೇತನತ್ವದಂತೆ ಪಾರತಂತ್ರ್ಯವೂ ಸಹ ವ್ಯಾಪಕವಾಗಿದೆ. ಸಮಾನವಾದ ವ್ಯಾಪ್ತಿಯಂತೂ ಎರಡೂ ಕಡೆ ಇರುವುದಿಲ್ಲವೆಂದು 'ಚೇತನಸ್ಯ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. ಕೂಟಸ್ಥಚೇತನದಲ್ಲಿ ಭೋಕ್ತೃತ್ವದ ನಿಯಮವಿಲ್ಲ (ಲಕ್ಷ್ಮೀ ಮೊದಲಾದವರಲ್ಲಿ). ಕರ್ಮಫಲವನ್ನು ತಿನ್ನುವವನು ಅಸ್ವತಂತ್ರನೇ ಆಗಿರುತ್ತಾನೆ. ಏಕೆಂದರೆ ಕರ್ಮದ ಅಧೀನವಾದ್ದರಿಂದ ಎಂದು ತಿಳಿಯಬೇಕು.

प्रकाशः – ननु बुद्धेः पारतन्त्र्येण साजात्येऽपि करणभूतायाः कथं भोक्तृत्वेन ''पिबन्ती'' इति कर्तृकोटिनिवेश इत्यत आह – सम्भवतीति । तर्हि गवादावप्येवं सुवचत्वेन सजातीयस्य तत्र धीर्न स्यादित्यत आह – गोरिति ।

ಬುದ್ಧಿಯು ಅಸ್ವಾತಂತ್ರ್ಯವೆಂಬ ಧರ್ಮದಿಂದ ಸಜಾತೀಯವಾಗಿದ್ದರೂ, ಕರಣವಾಗಿದೆ ಹೊರತು ಕರ್ತೃವಾಗಿಲ್ಲ. ಹೀಗಿರುವಾಗ 'ಪಿಬಂತೌ' ಎಂಬ ಶ್ರುತಿಯನ್ನು 'ಭೋಗಕರ್ತಾ' ಎಂಬ ವಿವಕ್ಷೆಯಿಂದ ಕರ್ತೃಕೋಟಿಯಲ್ಲಿ ನಿವೇಶಿಸಲು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ 'ಸಂಭವತಿ ಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಹಾಗಾದರೆ 'ಗೋದ್ವಿತೀಯೇನ ಭಾವ್ಯಂ' ಎಂಬಲ್ಲಿಯೂ ಸಹ ಔಪಚಾರಿಕ ಪ್ರಯೋಗದಿಂದಲೇ ಕೂಡಿಸಬಹುದಾದ್ದರಿಂದ ಗೋತ್ವೇನ ಸಾಜಾತ್ಯವನ್ನು ಏಕೆ ವಿವಕ್ಷಿಸಬೇಕು ? ಎಂಬ ಪ್ರಶ್ನೆಗೆ 'ಗೋದ್ವಿತೀಯೇನ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

प्रकाशः – ननु च्छायाऽऽतपत्वविशेषणाज्जीवेश्वरावित्युच्यत इत्यत आह – **छायेति** । 'बुद्धिजीवादौ चेतनत्वाचेतनत्वादिना' इति यथायोगमन्वयः । आदिपदेन बुद्धिप्राणयोर्ग्रहणम् । छायातपत्वं च तमस्त्वप्रकाशत्वादिना कथञ्चिदुपेयमिति ।

'ಛಾಯಾತಪತ್ವ'ಗಳನ್ನು ವಿಶೇಷಣವಾಗಿ ಹೇಳಿದ್ದರಿಂದ ಜೀವೇಶ್ವರರು ಶ್ರುತಿಪ್ರತಿಪಾದ್ಯರಾಗಿದ್ದಾರಲ್ಲವೇ ? ಎಂಬ ಪ್ರಶ್ನೆಗೆ 'ಛಾಯಾತಪತ್ವಮಪಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಬುದ್ಧಿಜೀವಾದೌ ಚೇತನತ್ವಾಚೇತನತ್ವಾದಿನಾ' ಎಂಬಲ್ಲಿ ಬುದ್ಧಿಯಲ್ಲಿ ಅಚೇತನತ್ವದಿಂದ ಜೀವನಲ್ಲಿ ಚೇತನತ್ವದಿಂದ ಯಥಾಯೋಗ್ಯವಾಗಿ ಅನ್ವಯವನ್ನು ತಿಳಿಯಬೇಕು. ಆದಿಪದದಿಂದ ಬುದ್ಧಿ ಹಾಗೂ ಪ್ರಾಣರನ್ನು ವಿವಕ್ಷಿಸಬೇಕು. ಛಾಯಾತ್ವವನ್ನು ತಮಸ್ಸಿನಸ್ವರೂಪವೆಂದು ಆತಪತ್ವವನ್ನು ಪ್ರಕಾಶತ್ವರೂಪವೆಂದು ಹೇಳಿ ಹೇಗಾದರೂ ಅರ್ಥೈಸಬೇಕು.

गुरुराजीयम् – विरूपयापि बुद्ध्याऽस्तु इत्येतत्सङ्गहांशं व्याचष्टे – **अस्तु वेति** ।। ननु यथा ब्रह्मग्रहणे जीवस्य ब्रह्माभेदान्न तात्त्विकं द्वित्वं तथा बुद्धिग्रहणेऽपि बुद्धेरपि जीवाभिन्नत्वान्न तात्त्विकं द्वित्वमिति कथं बुद्धिरपि द्वितीयतया गृह्येतेत्यत आह – **धर्मीति** ।।

जीवबुद्ध्योरभेदेन भेदस्य कल्पितत्वेऽपि बुद्धिजीवरूपधर्मिव्यावहारिकसत्ता-समानसत्ताकस्य भेदस्य सत्त्ववत् जीवब्रह्मभेदस्य जीवब्रह्मरूपधर्मिसमसत्ताकस्याभावेन द्वितीयतया ब्रह्मग्रहणासम्भवेऽपि बुद्धेर्द्वितीयतया ग्रहणं भवतीति भावः ।

ननु कल्पितभेदस्य ब्रह्मणोऽद्वितीयतया ग्रहणे द्वित्वबाधापत्त्या द्वित्वानुरोधेन साजात्यबाधकल्पने विजातीयग्रहणेन साजात्यबाधापत्त्या साजात्यानुसारेण द्वित्वस्यैव बाधः किं न स्यादित्यतः स्यादेतदेवं यदि द्वित्ववत्साजात्यमपि शाब्दं स्यान्न ह्येतदस्तीत्याह – **न हीति** ।।

नन्वस्मत्पक्षेऽपि चरमश्रुतस्य गुहाप्रविष्टत्वस्य यो वेद निहितं गुहायां गुहाहितं गह्वरेष्ठं पुराणं गुहां प्रविश्य तिष्ठन्तीमित्यादिश्रुतिभिर्ब्रह्मलिङ्गत्वनिश्चायात्पूर्वपक्षिणा च तस्य ब्रह्मलिङ्गत्वाज्ञानेन ब्रह्मपक्षे बाधकत्वेन शङ्कितत्वमित्यत आह – **नहि यो वेदेत्यादि** ।। तात्त्विकत्वाभावे हेतुः सर्वगतस्येति । तथा च

तद्बाधस्तदवस्य एवेत्यर्थः । किञ्च बुद्धेस्सरूपता । वर्तते सहजीवेन पारतन्त्र्यादिरूपत इति सङ्गहांशं व्याचष्टे – **अस्तु चेति** ।।

ननु कर्मफलभोक्तृत्वेन पारतन्त्र्याक्षेपोऽनुपपन्नः । परतन्त्रस्य भोक्तृत्वनियमाभावादिति चेत्तर्हि कर्मफलभोक्तृत्वेन चेतनत्वाक्षेपोऽपि न स्यात् । चेतनस्यापि
भोक्तृत्वनियमाभावात् । नच चेतनस्य भोक्तृत्वनियमाभावेऽपि भोक्तृश्चेतनत्व-नियमाद्भोक्तृत्वेन चेतनत्वाक्षेप इति वाच्यम् । तर्हि परतन्त्रस्य भोक्तृत्वनियमाभावेऽपि भोक्तुः पारतन्त्र्याक्षेपोऽपि सम्भवतीत्याशयवानाह – **चेतनस्येति** ।।

न चाचेतनाया बुद्धेर्न भोक्तृत्वम् । भोगकर्तृत्वम् । भोगकर्तृत्वमेव हि भोक्तृत्वमिति वाच्यम् । ईशपक्षेऽपि साम्यात् । किञ्च बुद्धेरेव भोक्तृत्वव्यपदेश उपचारेणोपपद्यत । करणे कर्तृत्वोपचारात् । न चोपचारे प्रयोजनाभावः । रूढोपचारत्वादित्याह – **सम्भवति चेति** ।। रूढोपचारत्व-प्रदर्शनार्थमेव काष्ठानि प चन्तीत्यादिदृष्टान्तप्रदर्शनमिति ।।

नन्वेवमस्य गोर्द्वितीयेन भाव्यमित्यत्रापि विजातीयाश्वादिनापि सद्वितीयत्वापत्त्या सजातीयगवान्तरेण सद्वितीयत्वं न स्यादित्यत आह – **गोर्द्वितीयेनेत्यत्र त्विति** ।।

ಸಾರ

ಮತ್ತು ಸಿದ್ಧಾಂತದಲ್ಲಿ 'ಋತಂ ಪಿಬಂತೌ' ಎಂಬುದು ಬ್ರಹ್ಮಪ್ರಕರಣವಾಗಿದ್ದರೂ ಸಹ ಬ್ರಹ್ಮನಿಗೆ ಅಂಗಭೂತವಾಗಿ ಜೀವನನ್ನು ಹೇಳಿದಂತೆ "ಬುದ್ಧಿಂ ತು ಸಾರಥಿಂ ವಿದ್ಧಿ" ಎಂಬುದಾಗಿ ಬುದ್ಧಿಯನ್ನು ಶೇಷವಾಗಿ ಹೇಳಿದಂತೆಯೂ ಪೂರ್ವಪಕ್ಷದಲ್ಲಿಯೂ 'ಯಸ್ಯ ಬ್ರಹ್ಮ ಚ' ಎಂಬ ಬ್ರಹ್ಮ ಪ್ರಕರಣದಲ್ಲಿ ಬ್ರಹ್ಮನಿಗೆ ಶೇಷವಾಗಿ ಬುದ್ಧಿ ಹಾಗೂ ಜೀವರನ್ನು ಹೇಳಬಹುದು. ಆದ್ದರಿಂದ 'ಋತಂ ಪಿಬಂತೌ' ಎಂಬ ಶ್ರುತಿಯು ಬ್ರಹ್ಮನನ್ನು ಪ್ರತಿಪಾದಿಸಿದರೆ ಮಾತ್ರ 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯವು ಬ್ರಹ್ಮನನ್ನು ಪ್ರತಿಪಾದಿಸಲು ಸಾಧ್ಯವೆಂಬ ಉಪಜೀವ್ಯ ಉಪಜೀವಕಭಾವವನ್ನು ಹೇಳಲು ಸಾಧ್ಯವಿಲ್ಲ.

प्रकाशः –

बृहदारण्यकगतेति । तस्यैव सूत्रानुगुणत्वेनोदाहरणतौचित्यात् नास्ममतेऽयं दोषः, किन्तु मायिनां मत एव, पादान्त्यप्राणनये – ''सर्वत्र'' इति नययोस्तादृशवाक्यविषयत्वेऽपि भिन्नपादस्थत्वादिति भावः ।

ವಿವರಣೆ - ರಾಮಾನುಜರ ಮತವನ್ನು 'ತನ್ನ' ಇತ್ಯಾದಿ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ. 'ಅತ್ತಾ ಚರಾಚರ' ಎಂಬೆರಡು ಸೂತ್ರಗಳಿಗೆ ಕಾಶಕದಲ್ಲಿರುವ 'ಯಸ್ಯ ಬ್ರಹ್ಮ ಚ' ಎಂಬುದನ್ನು ವಿಷಯವಾಕ್ಯವನ್ನಾಗಿ ಯಾರು ಹೇಳುತ್ತಾರೋ, ಅಂತಹ ಮಾಯಾವಾದಿಗಳಗಷ್ಟೇ ರಾಮಾನುಜರು ಹೇಳುವ ದೋಷ ಬರುತ್ತದೆ. ಆದರೆ ನಮ್ಮ ಮತದಲ್ಲಿ ಬೃಹದಾರಣ್ಯಕದಲ್ಲಿರುವ 'ಸಃ ಯದ್ಯದೇವಾಸೃಜತ' ಎಂಬುದನ್ನು ವಿಷಯವಾಕ್ಯವನ್ನಾಗಿ ಹೇಳಿದ್ದರಿಂದ ರಾಮಾನುಜರಿಗೆ ಹೇಳಿದ ದೋಷವು ನಮಗೆ ಬರುವುದಿಲ್ಲ. ಬೃಹದಾರಣ್ಯಕದ ಮಾತೇ 'ಅತ್ತಾ ಚರಾಚರ' ಎಂಬ ಸೂತ್ರಕ್ಕೆ ಅನುಗುಣವಾಗಿದೆಯೆಂದು ಈ ಹಿಂದೆ ಸಮರ್ಥಿಸಿದ್ದೇವೆ.

ವಸ್ತುತಃ ಅಂತಿಮಪ್ರಾಣಾಧಿಕರಣದ ವಿಷಯವಾಕ್ಯ ಹಾಗೂ ಸರ್ವಗತತ್ವಾಧಿಕರಣದ ವಿಷಯವಾಕ್ಯ ಒಂದೇ ಪ್ರಕರಣದಲ್ಲಿರುವುದರಿಂದ ಒಂದೇ ಅಧಿಕರಣವಾಗಲಿ ಎಂದು ಆಕ್ಷೇಪಿಸಬಹುದು. ಆದರೆ

ರಾಮಾನುಜರೇ ಹೇಳುವಂತೆ ಎರಡೂ ಅಧಿಕರಣಗಳು ಬೇರೆ ಬೇರೆ ಪಾದದಲ್ಲಿರುವ ಕಾರಣ ಒಂದೇ ಅಧಿಕರಣವಾಗಬೇಕಾಗಿಲ್ಲ.

ಪ್ರಕಾಶಃ – ಯದಪ್ಯುಪಜೀವ್ಯೋಪಜೀವಕಭಾವೇನೈಕಾಧಿಕರಣ್ಯಸಮರ್ಥನಂ, ತದಪ್ಯಯುಕ್ತಮಿತಿ ವಕ್ತುಂ, ಯತ್ತಾವದುಕ್ತಂ ''ಋತಂ ಇತ್ಯಾದಿಕಂ ''ಯಸ್ಯ'' ಇತ್ಯಸ್ಯ ''ಮಹಾನ್ತಂ'' ಇತ್ಯಾದಿಬ್ರಹ್ಮಪ್ರಕರಣ ವಿಚ್ಛೇದಕಮಿತಿ' ತತ್ತಾವನ್ನ ಯುಕ್ತಂ ತಸ್ಯ ತನ್ಮಧ್ಯಪತಿತ್ವಾಭಾವಾದಿತ್ಯಾಹ – ಕಿಞ್ಚೇತಿ । ಇತ್ಯುಕ್ತೇತಿ । ಇತಿ ವಾರ್ತಿಕೋಕ್ತನ್ಯಾಯೇನೇತ್ಯರ್ಥಃ ।

ರಾಮಾನುಜರು 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯಕ್ಕೂ 'ಋತಂ ಪಿಬಂತೌ' ಎಂಬ ವಾಕ್ಯಕ್ಕೂ ಪರಸ್ಪರ ಉಪಜೀವ್ಯಉಪಜೀವಕಭಾವವನ್ನು ಸಮರ್ಥಿಸಿ ಒಂದೇ ಅಧಿಕರಣವೆನ್ನಬೇಕೆಂದು ಹೇಳಿದರು. ಇದೂ ಸಹ ತಪ್ಪು. ಏಕೆಂದರೆ 'ಋತಂ ಪಿಬಂತೌ' ಎಂಬುದು 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯದ ಅನಂತರವಿರುವುದರಿಂದ 'ಮಹಾಂತಂ ವಿಭುಂ' ಎಂಬ ಬ್ರಹ್ಮಪ್ರಕರಣಕ್ಕೆ ವಿಚ್ಛೇದಕವೇ ಆಗಿರುವುದಿಲ್ಲ. ಏಕೆಂದರೆ 'ಮಹಾಂತಂ ವಿಭುಂ' ಎಂಬ ವಾಕ್ಯದ ಮತ್ತು 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯದ ಮಧ್ಯದಲ್ಲಿ 'ಋತಂ ಪಿಬಂತೌ' ಎಂಬ ವಾಕ್ಯವು ಇರುವುದಿಲ್ಲವೆಂದು 'ಕಿಂಚ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. 'ಇತ್ಯುಕ್ತನ್ಯಾಯೇನ' ಎಂಬ ಪದಕ್ಕೆ ವಾರ್ತಿಕದಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಎಂದರ್ಥ.

ಪ್ರಕಾಶಃ – ತೃತೀಯಸ್ಯಾಂ ಪಾದೇ ''ಸನ್ದಿಗ್ಧೇ ತು ವ್ಯವಾಯಾದ್ವಾಕ್ಯಭೇದಸ್ಸ್ಯಾತ್'' ಇತಿ ದಶಮೇऽಧಿಕರಣೇ ದರ್ಶಪೂರ್ಣಮಾಸಪ್ರಕರಣೇ ''ಉಪಯ್ಯತೇ'' ಇತಿ ಶ್ರುತಂ ಉಪವೀತಂ ಕಿಂ ಸಾಮಿಧೇನ್ಯಙ್ಗಮುತ ದರ್ಶಪೂರ್ಣಮಾಸಾಙ್ಗಮಿತಿ ಸಂಶಯೇ

ಪುರಸ್ತಾದುಪರಿಷ್ಟಾಚ್ಚ ಸಾಮಿಧೇನೀಕೀರ್ತನಾದವಾನ್ತರಪ್ರಕರಣೇನ ಸಾಮಿಧೇನ್ಯಙ್ಗಮಿತಿ ಪ್ರಾಪ್ತೇ,

''ದೇವೇದ್ಧೋಮನ್ವಿದ್ಧಃ'' ಇತ್ಯಾದಿಭಿರ್ನಿವಿದ್ಧಿರ್ವ್ಯವಧಾನಾತ್ ಸಾಮಿಧೇನೀಪ್ರಕರಣಸ್ಯ ವಿಚ್ಛೇದಾನ್ನ ತದಙ್ಗಮ್ । ನಚ ''ಏಕವಿಂಶತಿಮನುಬ್ರೂಯಾತ್ ಪ್ರತಿಷ್ಠಾಕಾಮಸ್ಯ'' ಇತ್ಯಾದಿಕಾಮ್ಯಸಾಮಿಧೇನೀನಾಂ ಪ್ರಕರಣಾನುವೃತ್ತಿಃ ಶಙ್ಕ್ಯಾ ತಾಸಾಂ ಕಾಮ್ಯಸಾಮಿಧೇನೀನಾಂ ಸ್ವಾತನ್ತ್ರ್ಯೇಣ ಪ್ರಕೃತ್ವಾಭಾವಾತ್, ಅತೋ ಮಹಾಪ್ರಕರಣೇನ ದರ್ಶಪೂರ್ಣಮಾಸಾಙ್ಗಮಿತಿ ಸಿದ್ಧಾನ್ತಿತಮ್ ।

ಸಂದಿಗ್ಧೇ ತು ವ್ಯವಾಯಾದ್ವಾಕ್ಯಭೇದಸ್ಯ [೧](೩-೧-೧೦)

(೧) ಭಾಟ್ಟಸಙ್ಗ್ರಹಃ –

ಅಥೈಕಾದಶಮುಪವೀತಸ್ಯ ಪ್ರಾಕರಣಿಕಾಙ್ಗತಾಧಿಕರಣಮ್

ಸನ್ದಿಗ್ಧೇ ತು ವ್ಯವಾಯಾದ್ವಾಕ್ಯಭೇದಃ ಸ್ಯಾತ್ ॥ ೨೧ ॥

ಅತ್ರ ಪೂರ್ವಸಿದ್ಧಾನ್ತನ್ಯಾಯೇನ ಶಙ್ಕನಾತ್ಸಙ್ಗತಿಃ । ದರ್ಶಪೂರ್ಣಮಾಸಪ್ರಕರಣೇ 'ವಿಶ್ವರೂಪೋ ವೈ ತ್ವಾಷ್ಟ್ರಃ' ಇತ್ಯಸ್ಮಿನ್ ಪ್ರಪಾಠಕೇ ಸಪ್ತಮೇऽನುವಾಕೇ 'ಪ್ರ ವೋ ವಾಜಾ ಇತ್ಯನ್ವಾಹ' ಇತ್ಯದಿಸಾಮಿಧೇನೀರ್ವಿಧಾಯ, 'ತ್ರಿಃ

ದರ್ಶಪೂರ್ಣಮಾಸ ಪ್ರಕರಣದಲ್ಲಿ 'ಉಪವ್ಯಯತೇ' ಎಂಬ ವಾಕ್ಯವು ಶ್ರುತವಾಗಿದೆ. ಈ ವಾಕ್ಯದಲ್ಲಿ ವಸ್ತ್ರವನ್ನು ಉಪವೀತಾಕಾರದಲ್ಲಿ ಧರಿಸಬೇಕೆಂದು ಕೇಳಲಾಗಿದೆ. ಈ ರೀತಿಯಾದ ವಸ್ತ್ರದ ಧಾರಣೆಯನ್ನು 'ಸಾಮಿಧೇನೀ' ಎಂಬ 'ಋಜ್' ಮಂತ್ರಗಳನ್ನು ಪಠಿಸುವಾಗ ಮಾಡಬೇಕೋ ಅಥವಾ ಸಂಪೂರ್ಣ ದರ್ಶಪೂರ್ಣಮಾಸಯಾಗದಲ್ಲಿ ಧರಿಸಬೇಕೋ? ಎಂದು ಸಂಶಯ.

ಪೂರ್ವಪಕ್ಷ - 'ತ್ರಿಪ್ರಥಮಮನ್ವಾಹ' ಎಂಬುದಾಗಿ ಹಿಂದಿನ ವಾಕ್ಯದಲ್ಲಿ ಹಾಗೂ ಉಚ್ಚಸ್ವರದಲ್ಲಿ ಹೇಳಬೇಕೆಂಬ ಮುಂದಿನ ವಾಕ್ಯದಲ್ಲಿ 'ಸಾಮಿಧೇನಿ' ಮಂತ್ರದ ಗುಣಗಳೇ ಕೇಳಿಸುತ್ತಿವೆ. ಆದ್ದರಿಂದ ದರ್ಶಪೂರ್ಣಮಾಸಯಾಗವೆಂಬುದು ಮಹಾಪ್ರಕರಣದಲ್ಲಿರುವುದಾದರೂ ಸಾಮಿಧೇನೀ ಋಜ್ ಮಂತ್ರಗಳನ್ನು ಪಠಿಸಬೇಕೆಂದು ಹೇಳುವ ಭಾಗವು ಅವಾಂತರಪ್ರಕರಣವಾಗಿದೆ. 'ಉಪವ್ಯಯತೇ' ಎಂಬ

प्रथमामन्वाह, 'त्रिरुत्तमाम्' इति त्रिरनुवचनरूपतद्गुणान् अष्टमे चानुवाके आर्षेयवरणादिगुणांश्च विधाय, नवमे निविन्नामकान् ''अग्ने महाँ असि' 'ब्रह्मण' 'भरत' 'देवेद्धो' 'मन्विद्धः' इत्यादिकान् मन्त्रान् विधाय, दशमे 'एकविंशतिमनुब्रूयात् प्रतिष्ठाकामकस्य' इत्यादिना काम्यसामिधेनीविकल्पान् विधाय, एकादेशेऽनुवाके 'निवीतं मनुष्याणां, प्राचीनावीतं पितृणां, उपवीतं देवानां, उपव्ययते देवलक्ष्यमेव तत्कुरुते' इत्युपवीतं विधाय, पुनश्च 'अन्तराऽनूच्यँ सदेवत्वाय' इति क्रौञ्चमन्द्रस्वरयोः अन्तरास्वरेणानुवचनं कार्यमित्यादयः सामिधेनीगुणाः श्रूयन्ते । अग्निसमन्धिकत्वात् **सामिधेनीति** ऋङ्नाम् । 'यन्निविद्भिर्न्यवेदयत् तन्निविदां निवित्त्वम्' इति निर्वचनादिध्म-प्रक्षेपसमिद्बाध्रिसम्बोधनरूपमन्त्रा **निविद** इत्युच्यन्ते । **उपवीतं** नाम शीतवातातपपीडा-निवृत्त्यर्थत्वेन दृष्टार्थं वासोविन्यासविशेषरूपम् । तत्रोपवीतं किं सामिधेनीनामङ्गमुत दर्शपूर्णमासाङ्गमिति **सन्देहः** । 'त्रि प्रथमाम्' इत्यादिना पूर्वत्र 'अन्तराऽनूच्यँ' इत्यादिनोत्तरत्र च सामिधेनीगुणश्रवणेन पूर्ववेत्र सन्दंशेन सामिधेनीनामवान्तरप्रकरण-कल्पनात्तेन सामिधेन्यङ्गमुपवीतमिति **प्राप्ते, सिद्धान्तः** निविन्नामकमन्त्रविनियोजकेन 'अग्ने महाँ असीत्याह' इत्यादिवाक्येन सामिधेनीप्रकरणस्य विच्छेदान्न तदङ्गत्वं युक्तम् । नच निविदामपि सामिधेन्यङ्गतया न व्यवधायकत्वमिति शङ्क्यम् । निविदां लिङ्गेनाग्र्यङ्गत्वावगमात् । न चैवं निविदङ्गमस्त्विति शङ्क्यम् । उपवीतस्याभितो निविद्धर्माश्रवणेन, तासामवान्तरप्रकरणाभावात् । नच सन्निधानात् काम्यसामिधेनीनामङ्गता शङ्क्या । सन्निधितो दर्शपूर्णमासप्रकरणस्य बलवत्त्वात् । तस्मादिह पूर्वन्यायाभावान्महा-प्रकरणेन दर्शपूर्णमासाङ्गम् । तथा च **सूत्रम्** निदिद्भिः **व्यवायात्** व्यवधानात्' सामिधेनी-प्रकरणानुवर्तने **सन्दिग्धे, वाक्यभेद, स्यात्** । 'उपव्ययत' इत्यस्य सामिधेनीवाक्यैकवाक्यता न स्यादिति । **फलन्तु** सामिधेन्यङ्गत्वदर्शपूर्णमासाङ्गत्वे **पूर्वोत्तरपक्षयोरिति** व्यक्तम् ।

इत्येकादशमुपवीतस्य प्राकरणिकाङ्गताधिकरणम्

ಗುಹಾಧಿಕರಣ (೧-೨-೩)

ಶ್ರುತಿಯು ಅವಾಂತರ ಪ್ರಕರಣದಲ್ಲೇ ಪ್ರಾಪ್ತವಾಗಿದೆ. ಆದ್ದರಿಂದ 'ಸಾಮಿಧೇನೀಷ್ಯಜ್' ಮಂತ್ರವನ್ನು ವಶಿಸುವಾಗ ವಸ್ತ್ರವನ್ನು ಉಪವೀತಾಕಾರವಾಗಿ ಧರಿಸಬೇಕು.

ಸಿದ್ಧಾಂತ - ದರ್ಶಪೂರ್ಣಮಾಸಯಾಗವನ್ನು ಆಚರಿಸುವಾಗ ಉಪವೀತಾಕಾರವಾಗಿ ವಸ್ತ್ರವನ್ನು ಧರಿಸಬೇಕಾದ್ದರಿಂದ ಸಾಮಿಧೇನೀಮಂತ್ರಕ್ಕೆ ಇದು ಅಂಗವಾಗುವುದಿಲ್ಲ. ಏಕೆಂದರೆ 'ದೇವೇದ್ಧೋಮನ್ವಿದ್ಧಃ' ಎಂಬುದಾಗಿ 'ನಿವಿನ್ನಾಮಕ' ಮಂತ್ರಗಳು ಮಧ್ಯದಲ್ಲಿ ಪ್ರಾಪ್ತವಾಗಿವೆ. ಅಂದರೆ ಮೊದಲು 'ಸಾಮಿಧೇನೀ' ಮಂತ್ರಗಳ ಬಗ್ಗೆ ಉಲ್ಲೇಖವಿದೆ. ಮಧ್ಯದಲ್ಲಿ 'ನಿವಿನ್ನಾಮಕ' ಮಂತ್ರಗಳ ಬಗ್ಗೆ ಹೇಳುತ್ತಾರೆ. ಕೊನೆಯಲ್ಲಿ 'ಉಪವ್ಯಯತೇ' ಎಂಬ ಮಂತ್ರವು ಪ್ರಾಪ್ತವಾಗಿದೆ. ಮಧ್ಯದಲ್ಲಿರುವ 'ನಿವಿನ್ನಾಮಕ' ಮಂತ್ರದಿಂದ ಮೊದಲು ಪ್ರಾಪ್ತವಾದ 'ಸಾಮಿಧೇನೀ' ಪ್ರಕರಣವು ವಿಚ್ಛೇದವಾಗುತ್ತದೆ. ಆದ್ದರಿಂದ 'ಉಪವ್ಯಯತೇ' ಎಂಬ ಮಂತ್ರವು 'ಸಾಮಿಧೇನೀಗೆ' ಅಂಗವಾಗಲು ಸಾಧ್ಯವಿಲ್ಲ.

'ನಿವಿನ್ನಾಮಕ' ಮಂತ್ರಗಳ ಆನಂತರ ಪುನಃ 'ಏಕವಿಶಂತಿಮನುಭ್ರೂಯಾತ್ ಪ್ರತಿಷ್ಠಾಕಾಮಸ್ಯ'' ಎಂಬುದಾಗಿ 'ಕಾಮ್ಯಸಾಮಿಧೇನೀ' ಮಂತ್ರಗಳ ಬಗ್ಗೆ ಉಲ್ಲೇಖವಿದೆ. ಆದ್ದರಿಂದ ಮಧ್ಯದಲ್ಲಿ 'ನಿವಿನ್ನಾಮಕ' ಮಂತ್ರಗಳು ಪ್ರಾಪ್ತವಾಗಿದ್ದರೂ ಪುನಃ ಸಾಮಿಧೇನೀಪ್ರಕರಣವು ಅನಿಶ್ಚಿತವಾಗಬಹುದಲ್ಲವೇ?

ಹೀಗೆ ಶಂಕಿಸಬಾರದು. ಏಕೆಂದರೆ 'ಕಾಮ್ಯ ಸಾಮಿಧೇನೀ' ಮಂತ್ರಗಳು ಸ್ವತಂತ್ರವಾಗಿ ಪ್ರವೃತ್ತವಾಗದ ಕಾರಣ ಅದರ ಜೊತೆಗೆ 'ಉಪವ್ಯಯತೇ' ಎಂಬ ಮಂತ್ರವು ಸಂಧಾನವಾಗುವುದಿಲ್ಲ. ಹೊರತಾಗಿ ಮಹಾಪ್ರಕರಣವೆನಿಸಿದ ದರ್ಶಪೂರ್ಣಮಾಸಯಾಗಕ್ಕೆ ಮಾತ್ರ ಅಂಗವಾಗುತ್ತದೆ.

ಪ್ರಕಾಶಃ – तत्र सिद्धान्तवार्तिकमेतत् । 'यतः' यस्मात् 'निविद्भिः' निविन्नामकैः ''देवेद्धोमन्विद्धः'' इत्यादिमन्त्रैर्विच्छिन्नं सामिधेनीनां अग्निसमिन्धनार्थतया सामिधेनीनामिकानामृचां प्रकरणं, तस्मात् प्रकरणं काम्यैस्सामिधेनीकल्पैर्न सामिधेनीकल्पैः पुनस्सन्धानतुं संयोजयितुं शक्यमित्यर्थः ।

ಗ್ರಂಥದಲ್ಲಿರುವ 'ವಿಚ್ಛಿನ್ನಸಾಮಿಧೇನೀನಾಂ' ಎಂಬ ಶ್ಲೋಕವು ಈ ಅಧಿಕರಣದ ಸಿದ್ಧಾಂತ ಭಾಗದ ವಾರ್ತಿಕದಲ್ಲಿದೆ. ಶ್ಲೋಕಕ್ಕೆ ಹೀಗರ್ಥ -

ಯತಃ = ಯಾವ ಕಾರಣದಿಂದ ನಿವಿದ್ಭಿಃ = ನಿವಿನ್ನಾಮಕವಾದ, 'ದೇವೇದ್ಧೋಮನ್ವಿದ್ಧಃ' ಇತ್ಯಾದಿ ಮಂತ್ರಗಳಿಂದ, ಸಾಮಿಧೇನೀನಾಂ = ಅಗ್ನಿಸಮಿಂಧನಕ್ಕೋಸ್ಕರ ಉಪಯೋಗಿಸುವ ಸಾಮಿಧೇನೀ ಎಂಬ 'ಋಜ್' ಮಂತ್ರಗಳ ಪ್ರಕರಣವು, ವಿಚ್ಛಿನ್ನ = ವಿಚ್ಛಿನ್ನವಾಗಿದೆ, ತಸ್ಮಾತ್ = ಆ ಕಾರಣದಿಂದ, ಪ್ರಕರಣವು ಕಾಮ್ಯೈಃ ಕಲ್ಪೈಃ = ಕಾಮ್ಯವಾದ ಸಾಮಿಧೇನೀಮಂತ್ರಗಳಿಂದ, ಪುನಃ = ಮತ್ತೆ, ಸಂಧಾತುಃ = ಸಂಧಾನ ಹೊಂದಲು, ನಹಿ ಶಕ್ಯತೇ = ಸಮರ್ಥವಾಗುವುದಿಲ್ಲ ಎಂದು.

ಪೂರ್ವಮೀಮಾಂಸೆಯ ಈ ಅಧಿಕರಣದಿಂದ ಮೊದಲು ಪ್ರಾಪ್ತವಾದ 'ಸಾಮಿಧೇನೀ' ಪ್ರಕರಣವು ಒಮ್ಮೆ ವಿಚ್ಛೇದವಾದ ಮೇಲೆ ಪುನಃ ಅದು ಪ್ರಸಕ್ತವಾಗುವುದಿಲ್ಲವೆಂದು ನಿರ್ಣಯವಾಗಿದೆ. ಆದರಂತೆ 'ಮಹಾಂತಂ ವಿಭುಂ' ಎಂಬುದಾಗಿ ಬೃಹತ್ಪ್ರಕರಣವು ಪ್ರಾಪ್ತವಾಗಿರುವುದರಿಂದ 'ಋತಂ ಪಿಬಂತೌ'

ಎಂಬುದರಿಂದ ವಿಚ್ಛೇದವಾಗುವುದಿಲ್ಲ. ಏಕೆಂದರೆ 'ಸಾಮಿಧೇನೀ' ಪ್ರಕರಣಕ್ಕೆ ವಿಚ್ಛೇದಕವಾಗಿ 'ನಿವಿನ್ನಾಮಕ' ಮಂತ್ರಗಳು ಪ್ರಾಪ್ತವಾದಂತೆ ಪ್ರಕೃತದಲ್ಲಿ ಬ್ರಹ್ಮಪ್ರಕರಣಕ್ಕೆ ವಿಚ್ಛೇದಕವಾದ ಯಾವುದೇ ಶ್ರುತಿಗಳಿರುವುದಿಲ್ಲ. ಹೀಗೆ ದೃಷ್ಟಾಂತದಾರ್ಷ್ಟಾಂತಿಕಭಾವವನ್ನು ತಿಳಿಯಬೇಕು.

ಪ್ರಕಾಶಃ – ನನ್ವತ್ರ ''ಯಸ್ಯ'' ಇತ್ಯೇತತ್ ವ್ಯವಹಿತೇನ ''ಮಹಾನ್ತಂ'' ಇತ್ಯನೇನ ವಿಚ್ಛಿನ್ನಂ ಸನ್ನಿಹಿತೇನ ''ಋತಂ'' ಇತ್ಯನೈಕವಾಕ್ಯತಾಮಾಪದ್ಯತ ಇತಿ, ತನ್ನ, ಪ್ರಕರಣಾತ್ ಸನ್ನಿಧೇರ್ದುರ್ಬಲತ್ವಾದಿತಿ ಭಾವೇನ ತದಾಶಙ್ಕ್ಯ ನಿರಾಹ – ನ ಚೇತ್ಯಾದಿನಾ ।

ಕ್ರಮೇಣೇತಿ । ಸ್ಥಾನರೂಪಪ್ರಮಾಣೇನೇತ್ಯರ್ಥಃ । ಲಿಙ್ಗಾದಿತಿ ।

ಆಕ್ಷೇಪ - 'ಯಸ್ಯ ಬ್ರಹ್ಮ ಚ' ಎಂಬ ಮಂತ್ರವು 'ಋತಂ ಪಿಬಂತೌ' ಎಂಬ ಮಂತ್ರಕ್ಕಿಂತ ಅನಂತರ ಇಲ್ಲದಿರಬಹುದು. ಆದರೂ ಸಹ ಅದರ ಸಾನ್ನಿಧ್ಯವನ್ನು ಹೊಂದಿದ ಕಾರಣ 'ಮಹಾಂತಂ ವಿಭುಂ' ಎಂಬ ಬ್ರಹ್ಮಪ್ರಕರಣಕ್ಕೆ ವಿಚ್ಛೇದಕವಾಗಬಹುದಲ್ಲವೇ?

ಸಮಾಧಾನ - ಪ್ರಕರಣಪ್ರಮಾಣಕ್ಕಿಂತ ಸನ್ನಿಧಿಪ್ರಮಾಣವು ದುರ್ಬಲವಾಗಿದೆ. ಆದ್ದರಿಂದ ನೀವು ಹೇಳಿದ್ದು ತಪ್ಪೆಂಬ ಅಭಿಪ್ರಾಯದಿಂದ 'ನಚ' ಇತ್ಯಾದಿ ವಾಕ್ಯಗಳು ಹೊರಟಿವೆ.

'ಕ್ರಮೇಣ' ಎಂಬ ಪದಕ್ಕೆ ಸ್ಥಾನರೂಪ ಪ್ರಮಾಣದಿಂದ ಎಂದರ್ಥ.

ಪ್ರಕಾಶಃ – ತೃತೀಯಸ್ಯ ತೃತೀಯೇ ''ಶ್ರುತಿಲಿಙ್ಗವಾಕ್ಯಪ್ರಕರಣಸ್ಥಾನ'' ಇತಿ ಬಲಾಬಲಪ್ರಕರಣೇ ದಶಮೇऽಧಿಕರಣೇ ರಾಜಸೂಯೇ ಪಶ್ವಿಷ್ಟಿಸೋಮಯಾಗಾಃ ಸಮಪ್ರಧಾನತಯಾ ಶ್ರುತಾಃ । ತತ್ರಾಭಿಷೇಚನೀಯಸ್ಯ ಸೋಮಯಾಗಸ್ಯ ಸನ್ನಿಧೌ ವಿದೇವನಾದಯಃ ಕೇಚನ ಪದಾರ್ಥಾಃ ಶ್ರುತಾಃ । ತೇ ಕಿಮಭಿಷೇಚನೀಯಸ್ಯಾಙ್ಗಮುತ ಸರ್ವಸ್ಯ ರಾಜಸೂಯಸ್ಯೇತಿ ಸಂಶಯೇ,

ಸನ್ನಿಧಿವಿಶೇಷಾದಭಿಷೇಚನೀಯಮಾತ್ರಾಙ್ಗಮಿತಿ ಪ್ರಾಪ್ತೇ,
ಪ್ರಕರಣಾವಿಶೇಷಾತ್ಸರ್ವರಾಜಸೂಯಾಙ್ಗಮಿತಿ ಸಿದ್ಧಾನ್ತಿತಮ್ ।

ಶ್ರುತಿಲಿಂಗವಾಕ್ಯಪ್ರಕರಣಸ್ಥಾನಸಮಾಖ್ಯಾನಾಂ ಸಮವಾಯೇ ಪರದೌರ್ಬಲ್ಯಮರ್ಥವಿಪ್ರಕರ್ಷಾತ್
(೩-೩-೧೦)

ಈ ಅಧಿಕರಣವು ಶ್ರುತಿ, ಲಿಂಗ, ವಾಕ್ಯ, ಪ್ರಕರಣ, ಸ್ಥಾನ ಇವುಗಳಲ್ಲಿ ಯಾವುದು ಪ್ರಬಲ ಯಾವುದು ದುರ್ಬಲವೆಂದು ವಿಚಾರ ಮಾಡುತ್ತಿದೆ. ರಾಜಸೂಯಯಾಗದಲ್ಲಿ 'ಪಶ್ವಿಷ್ಟಿಸೋಮ' ಮೊದಲಾದ ಯಾಗಗಳು ಸಮಾನವಾಗಿ ಕೇಳಿಸುತ್ತಿವೆ. ಇವುಗಳಲ್ಲಿ ಅಭಿಷೇಚನೀಯವೆಂಬ ಸೋಮಯಾಗದ ಸಮೀಪದಲ್ಲಿ 'ವಿದೇವನ' 'ಪಗಡೆಯಾಟ' ಮೊದಲಾದವುಗಳನ್ನು ಹೇಳಲಾಗಿದೆ. ಈ ವಿದೇವನಾದಿ ಕ್ರೀಡೆಗಳು 'ಅಭಿಷೇಚನೀಯ' ಎಂಬ ಯಾಗಕ್ಕೆ ಅಂಗವೋ? ಅಥವಾ ಪ್ರಧಾನವಾದ ರಾಜಸೂಯಯಾಗಕ್ಕೆ ಅಂಗವೋ? ಎಂದು ಸಂಶಯ.

ಪೂರ್ವಪಕ್ಷ - 'ಅಭಿಷೇಚನೀಯ' ಯಾಗದ ಸಮೀಪದಲ್ಲೇ ವಿದೇವನಾದಿಗಳನ್ನು ಹೇಳಿರುವುದರಿಂದ ಕೇವಲ 'ಅಭಿಷೇಚನೀಯ' ಯಾಗಕ್ಕೆ ಅಂಗವಾಗುತ್ತದೆ.

ಸಿದ್ಧಾಂತ - ಪ್ರಕರಣದ ಬಲದಿಂದ 'ವಿದೇವನಾದಿ ಕ್ರೀಡೆಗಳು' ರಾಜಸೂಯಯಾಗದ ಅಂಗವೆಂದೇ ತಿಳಿಯಬೇಕು.

प्रकाशः – तथा च ''विंशतिलक्षण्येकं शास्त्रं'' इति वदतस्तव मते तत्रैव प्रकरणात्पाठसन्निधिरूपस्य स्थानस्य दौर्बल्यं सिद्धमिति नात्र तत्प्राबल्यशङ्कोपपद्यत इत्यर्थः ।

''ವಿಂಶತಿಲಕ್ಷಣ್ಯೇಕಂ ಶಾಸ್ತ್ರಂ'' ಎಂದು ಹೇಳುವ ನೀವು ಬ್ರಹ್ಮಮೀಮಾಂಸಾಶಾಸ್ತ್ರದ ಮತ್ತೊಂದು ಅಂಗವನ್ನಾಗಿ ಪೂರ್ವಮೀಮಾಂಸಾಶಾಸ್ತ್ರವನ್ನು ಹೇಳುತ್ತೀರಿ. ಅಂತಹ ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಪ್ರಕರಣಪ್ರಮಾಣಕ್ಕಿಂತ ಸನ್ನಿಧಿಯೆಂಬ ಸ್ಥಾನ ಪ್ರಮಾಣಕ್ಕೆ ದೌರ್ಬಲ್ಯವನ್ನು ಸಾಧಿಸಲಾಗಿದೆ. ಆದ್ದರಿಂದ ಪ್ರಕೃತ ಪ್ರಕರಣಕ್ಕಿಂತ ಸನ್ನಿಧಿಯನ್ನು ಬಲಿಷ್ಠವೆಂದು ನೀವು ಹೇಳಬಾರದು.

प्रकाशः – एवं ''यस्य'' इत्यस्य ''ऋतम्'' इत्यनेन नैकवाक्यता युक्तेत्युक्तम् । इदानीमस्त्वेकवाक्यत्वम् ,

एवमपि न ब्रह्मप्रकरणविच्छेदशङ्का युक्तेत्याह - सिद्धान्त इति । तच्छेषतयेति । ब्रह्मणः प्राधान्येन प्रतिपादनं जीवस्य ब्रह्मगुणशेषभूततयेत्यर्थः ।

ಆದ್ದರಿಂದ 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯವು 'ಋತಂ ಪಿಬಂತೌ' ಎಂಬ ವಾಕ್ಯದ ಜೊತೆಗೆ ಏಕವಾಕ್ಯತ್ವವನ್ನು ಹೊಂದಲು ಸಾಧ್ಯವಿಲ್ಲವೆಂದು ಇಲ್ಲಿಯ ತನಕ ಸಮರ್ಥಿಸಿದ್ದಾಯಿತು. ಪ್ರಕೃತ ಏಕವಾಕ್ಯತ್ವವನ್ನು ಒಪ್ಪೋಣ ಆದರೂ ಸಹ ಬ್ರಹ್ಮಪ್ರಕರಣವು ವಿಚ್ಛೇದವಾಗುತ್ತಿದೆ ಎಂಬ ಶಂಕೆಯು ಅಯುಕ್ತವಾಗಿದೆಯೆಂದು 'ಸಿದ್ಧಾಂತಃ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

'ತತ್‌ಶೇಷತಯಾ' ಎಂಬ ಪದಕ್ಕೆ ಬ್ರಹ್ಮನು ಪ್ರಧಾನವಾಗಿ ಪ್ರತಿಪಾದ್ಯನಾಗಿದ್ದಾನೆ. ಜೀವನು ಬ್ರಹ್ಮನಿಗೆ ಅಂಗಭೂತವಾಗಿ ಪ್ರತಿಪಾದ್ಯನಾಗಿದ್ದಾನೆಂದು ಅರ್ಥ.

प्रकाशः – द्युभ्वादिनये त्वदुक्तरीत्यैवेति भावः । प्राधान्येनान्यप्रतिपादन एव प्रकरणविच्छेदः । एवं च प्रकरणविच्छेदशङ्काया अयोगेन तत्समाधानार्थं ''गुहां'' इत्यादिकमयुक्तमित्याशयः ।

ದ್ಯುಭ್ವಾದ್ಯಧಿಕರಣದಲ್ಲಿ ಜೀವನು ಬ್ರಹ್ಮನಿಗೆ ಅಂಗವಾಗಿದ್ದಾನೆಂದು ರಾಮಾನುಜರೇ ಒಪ್ಪಿದ್ದಾರೆಂದು ತಿಳಿಯಬೇಕು. ಪ್ರಧಾನವಾಗಿ ಬೇರೆ ಪದಾರ್ಥವು ಪ್ರತಿಪಾದ್ಯವಾದರೆ ಮಾತ್ರ ಪ್ರಕರಣವು ವಿಚ್ಛೇದವಾಗುತ್ತದೆ. ಆದರೆ ಬ್ರಹ್ಮನಿಗೆ ಅಂಗಭೂತನಾಗಿ ಜೀವನು ಪ್ರತಿಪಾದ್ಯನಾದಾಗ ಬ್ರಹ್ಮಪ್ರಕರಣಕ್ಕೆ ವಿಚ್ಛೇದ ಬರುವುದಿಲ್ಲ.

ಪ್ರಕರಣವು ವಿಚ್ಛೇದವಾಗುತ್ತದೆಂಬ ಶಂಕೆಯೇ ತಪ್ಪಾಗುತ್ತದೆ. ಹೀಗಿರುವಾಗ ಈ ಶಂಕೆಯ ಸಮಾಧಾನಕ್ಕಾಗಿ 'ಗುಹಾಂ ಪ್ರವಿಷ್ಟೌ' ಇತ್ಯಾದಿ ಎರಡು ಸೂತ್ರಗಳು ಉಪಜೀವ್ಯರೂಪವಾಗಿ ಹೊರಟಿವೆ ಎಂಬ ಸಮಾಧಾನವು ಅಯುಕ್ತವಾಗಿದೆಯೆಂದು ತಿಳಿಯಬೇಕು.

ಗುರುರಾಜೀಯಮ್ – ಅಸ್ಮನ್ಮತ ಇತಿ ವದತಾ ಏಕಪ್ರಕರಣಸ್ಯೈವ ವಿಷಯವಾಕ್ಯಂ ವದತಾಂ ಪರೇಷಾಮರ್ಥದೋಷ ಇತಿ ಧ್ವನಿತಮ್ । ನನು ಯಸ್ಯ ಬ್ರಹ್ಮ ಚ ಕ್ಷತ್ರಂ ಚೇತ್ಯಸ್ಯ ವಾಕ್ಯಸ್ಯಾನನ್ತರ್ಯರೂಪೇಣ ಕ್ರಮೇಣ ಋತಮಿತಿ ವಾಕ್ಯೇನೈಕವಾಕ್ಯತೇತಿ ಶಙ್ಕಾ ಕಿಂ ನ ಸ್ಯಾದಿತ್ಯತ ಆಹ – ನ ಚೇತಿ ।। ನನು ಲಿಙ್ಗೇನ ಯಸ್ಯ ಬ್ರಹ್ಮೇತ್ಯಾದೇರ್ಬ್ರಹ್ಮಪ್ರಕರಣತ್ವನಿಶ್ಚಯೇऽಪ್ಯಾನನ್ತರ್ಯರೂಪಕ್ರಮಸ್ಯ ದುರ್ಬಲತ್ವಾ-ನಿಶ್ಚಯೇನ ಕ್ರಮಪ್ರಾಬಲ್ಯಶಙ್ಕಯಾ ಕ್ರಮೇಣ ಋತಮಿತಿ ವಾಕ್ಯೈಕವಾಕ್ಯತಾ ಶಙ್ಕಾ ಸ್ಯಾದೇವೇತ್ಯತ ಆಹ – ಲಿಙ್ಗಾದಿತಿ ।। ವಿಂಶಲ್ಲಕ್ಷಣಮೇಕಂ ಶಾಸ್ತ್ರಮಿತಿ ತ್ವತ್ಸಿದ್ಧಾನ್ತಾದಿತಿ ಭಾವಃ ।

ಸಾರ

ರಾಮಾನುಜರು ಆದ್ವೈತಿಗಳಂತೆ ಕಠೋಪನಿಷತ್ತಿನಲ್ಲಿರುವ ವಾಕ್ಯಗಳನ್ನೇ ನಾಲ್ಕೂ ಸೂತ್ರಗಳ ವಿಷಯವಾಕ್ಯವೆನ್ನುತ್ತಾರೆ. ಒಂದೇ ಪ್ರಕರಣದಲ್ಲಿರುವ ವಿಷಯವಾಕ್ಯದ ಸಮನ್ವಯಕ್ಕಾಗಿ ಎರಡು ಅಧಿಕರಣವು ಅನಾವಶ್ಯಕವೆಂಬ ದೋಷವು ಆದ್ವೈತಿಗಳಿಗೆ ಬರುತ್ತದೆ ಹೊರತು ನಮಗೆ ಬರುವುದಿಲ್ಲ. ಏಕೆಂದರೆ ಹಿಂದಿನ ಅಧಿಕರಣಕ್ಕೆ ಬೃಹದಾರಣ್ಯಕವು ವಿಷಯವಾಗಿದೆ. ಈ ಅಧಿಕರಣಕ್ಕೆ 'ಋತಂ ಪಿಬಂತೌ' ಎಂಬುದು ಕಾಠಕದ ವಿಷಯವಾಗಿದೆ ಎಂಬುದು ನಮ್ಮ ಸಿದ್ಧಾಂತ.

ಈ ಅಧಿಕರಣದಲ್ಲಿ ವಿಚಾರ ಮಾಡುವ 'ಋತಂ ಪಿಬಂತೌ' ಎಂಬ ವಾಕ್ಯವನ್ನು ಉಪಜೀವಿಸಿಕೊಂಡು ಹಿಂದಿನ ಅಧಿಕರಣದ 'ಯಸ್ಯ ಬ್ರಹ್ಮ ಚ ಕ್ಷತ್ರಂ ಚ' ಎಂಬ ವಾಕ್ಯವು ಬ್ರಹ್ಮಪರವಾಗುತ್ತದೆಂಬುದು ರಾಮಾನುಜರ ವಾದ. ಆದರೆ 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯವು 'ಋತಂ ಪಿಬಂತೌ' ಎಂಬ ವಾಕ್ಯಕ್ಕಿಂತ ಮೊದಲೇ ಪ್ರಸಕ್ತವಾಗಿರುವುದರಿಂದ 'ಮಹಾಂತಂ ವಿಭುಂ' ಇತ್ಯಾದಿ ಹಿಂದಿನ ವಾಕ್ಯದ ಬಲದಿಂದ ಬ್ರಹ್ಮಪರವೆಂದು ಮೊದಲೇ ನಿರ್ಣಯವಾಗಿದೆ. ಹೀಗಿರುವಾಗ ಮುಂದಿರುವ 'ಋತಂ ಪಿಬಂತೌ' ಎಂಬ ವಾಕ್ಯದ ಬಲದಿಂದ ಬ್ರಹ್ಮಪ್ರಕರಣವಾಗುವುದಿಲ್ಲವೆಂಬ ಶಂಕೆಯೇ ತಪ್ಪಾಗುತ್ತದೆ. ಸಾನ್ನಿಧ್ಯ ಪ್ರಮಾಣದಿಂದ 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯವು ಬ್ರಹ್ಮಪ್ರಕರಣಕ್ಕೆ ವಿಚ್ಛೇದವಾಗಬಹುದಲ್ಲವೇ ಎಂಬುದು ಅವರ ಆಕ್ಷೇಪ.

ಆದರೆ ಪರಮಪ್ರಮಾಣವೆಂದು ಅವರೇ ಒಪ್ಪಿಕೊಂಡಿರುವ ಪೂರ್ವಮೀಮಾಂಸೆಯಲ್ಲಿ ಸಾನ್ನಿಧ್ಯ ಪ್ರಮಾಣಕ್ಕಿಂತ ಪ್ರಕರಣ ಪ್ರಮಾಣವು ಬಲಿಷ್ಠವೆಂದು ನಿರ್ಣಯಿಸಲಾಗಿದೆ.

ಯಾವ ಕಾರಣದಿಂದ 'ಸಾಮಿಧೇನೀ' ಪ್ರಕರಣವು 'ನಿವಿನ್ಮಾಮಕ' ಮಂತ್ರಗಳಿಂದ ವಿಚ್ಛೇದವಾಗುತ್ತದೋ? ಆ ಕಾರಣದಿಂದಲೇ ಪುನಃ 'ಕಾಮ್ಯಸಾಮಿಧೇನೀ' ಮಂತ್ರಗಳಿಂದ.

'ಉಪವೀಯತೇ' ಎಂಬ ಮಂತ್ರವು ಸಂಧಾನ ಹೊಂದಲು ಸಮರ್ಥವಾಗುವುದಿಲ್ಲ. ಹೀಗೆ ಪೂರ್ವಮೀಮಾಂಸೆಯಲ್ಲಿ ನಿರ್ಣಯಿಸಿದಂತೆ ಮೊದಲೇ ಪ್ರಾಪ್ತವಾದ ಬ್ರಹ್ಮಪ್ರಕರಣಕ್ಕೆ 'ಋತಂ ಪಿಬಂತೌ' ಎಂಬ ವಾಕ್ಯವು ವಿಚ್ಛೇದಕವಾಗುವುದಿಲ್ಲ. ಆದ್ದರಿಂದ 'ಋತಂ ಪಿಬಂತೌ' ಎಂಬ ಶ್ರುತಿಯು 'ಯಸ್ಯ ಬ್ರಹ್ಮ ಚ' ಎಂಬ ಶ್ರುತಿಗೆ ಉಪಜೀವ್ಯವಾಗಿದೆಯೆಂದು ಯಾವುದೇ ಕಾರಣದಿಂದಲೂ ಹೇಳಲಾಗದು.

● ● ● ● ●

ಒಂದೇ ಪ್ರಕರಣದಲ್ಲಿರುವಿಕೆಯು ಐಕಾಧಿಕರಣ್ಯಕ್ಕೆ ತಂತ್ರವಲ್ಲ

ತಾತ್ಪರ್ಯಚಂದ್ರಿಕಾ

ಕಿಞ್ಚ – ಯಥಾऽದೃಶ್ಯತ್ವಾದ್ಯಧಿಕರಣದ್ಯುಭ್ವಾದ್ಯಧಿಕರಣಯೋರೇಕಪ್ರಕರಣಸ್ಥವಾಕ್ಯವಿಷಯತ್ವೇ ಉಪಜೀವ್ಯೋಪಜೀವಕಭಾವೇ ಚ ಸತ್ಯಪಿ ಭೇದಃ, ತಥಾऽತ್ರ ಕಿಂ ನ ಸ್ಯಾತ್ । ಅಸ್ತಿ ಹಿ ತತ್ರಾಪ್ಯುಪಜೀವ್ಯೋಪಜೀವಕಭಾವಃ, ''ಯಸ್ಮಿನ್ ದ್ಯೌಃ'' ಇತ್ಯಾದಿಕಸ್ಯೋತ್ತರವಾಕ್ಯಸ್ಯ ಪರಮಾತ್ಮಪರತ್ವಾಭಾವೇ ಪೂರ್ವಸ್ಯ ''ಯತ್ತದದ್ರೇಶ್ಯಮಗ್ರಾಹ್ಯಮ್'' ಇತ್ಯಾದ್ಯದೃಶ್ಯತ್ವಾದಿವಾಕ್ಯಸ್ಯ ತತ್ಪರತ್ವಾಸಿದ್ಧೇಃ ।

ಅಥ ಅದೃಶ್ಯತ್ವಾದ್ಯಧಿಕರಣದ್ಯುಭ್ವಾದ್ಯಧಿಕರಣಯೋರ್ವೈಶ್ವಾನರಾಧಿಕರಣ- ವ್ಯವಹಿತತ್ವಾತ್ ಭಿನ್ನಪಾದನಿವೇಶಾಚ್ಚ ನೈಕಾಧಿಕರಣತೇತಿ ಚೇತ್, ನ, ಐಕಾಧಿಕರಣ್ಯಯೋಗ್ಯಯೋ-ರ್ವ್ಯವಧಾನಾದೇರೇವ ಅಯುಕ್ತತ್ವಾತ್ ।

ನನ್ವಸ್ಪಷ್ಟಜೀವಾದಿಲಿಙ್ಗಕತ್ವಾದದೃಶ್ಯತ್ವಾದ್ಯಧಿಕರಣಂ ದ್ವಿತೀಯೇ ಸ್ಪಷ್ಟಜೀವಾದಿಲಿಙ್ಗಕತ್ವಾತ್ ದ್ಯುಭ್ವಾದ್ಯಧಿಕರಣಂ ತೃತೀಯೇ ನಿವೇಶಿತಮಿತಿ ಚೇತ್, ನ,

ಅತ್ರಾಪ್ಯತೃತ್ವಸ್ಯ ದ್ವಿತೀಯಸ್ಥತ್ವಾತ್ ಅಸ್ಪಷ್ಟಜೀವಲಿಙ್ಗತ್ವೇನ, ಋತಶಬ್ದವಾಚ್ಯಕರ್ಮಫಲ-ಭೋಕ್ತೃತ್ವಸ್ಯ ಸ್ಪಷ್ಟಜೀವಲಿಙ್ಗತ್ವೇನ ಭಿನ್ನಪಾದನಿವೇಶಾಪಾತಾತ್ ।

ಅನುವಾದ - ಮತ್ತು ಇದೇ ಪಾದದಲ್ಲಿರುವ ಅದೃಶ್ಯತ್ವಾಧಿಕರಣದ ವಿಷಯವಾಕ್ಯವು ಮುಂದಿನ ಪಾದದಲ್ಲಿರುವ 'ದ್ಯುಭ್ವಾದ್ಯಧಿಕರಣದ' ವಿಷಯವಾಕ್ಯವು 'ಮಾಂಡೋಕ್ಯೋಪನಿಷತ್ತು' ಎಂಬ ಒಂದೇ ಪ್ರಕರಣದಲ್ಲಿದೆ. ಮತ್ತು ಆ ಎರಡು ವಿಷಯವಾಕ್ಯಗಳಿಗೆ ಪರಸ್ಪರ ಉಪಜೀವ್ಯೋಪ-ಜೀವಕಭಾವವೂ ಸಹ ಇದೆ. ಆದರೂ ಸಹ ಸೂತ್ರಕಾರರು ಬೇರೆ ಬೇರೆ ಅಧಿಕರಣಗಳನ್ನಾಗಿ ಪರಿಗಣಿಸಿದ್ದಾರೆ. ರಾಮಾನುಜರ ಪ್ರಕಾರ ಇದು ತಪ್ಪಾಗಬೇಕಾದೀತು. ಆ ಎರಡು ವಿಷಯವಾಕ್ಯಗಳಿಗೆ

ಉಪಜೀವ್ಯೋಪ- ಜೀವಕಭಾವವು ಸ್ಪಷ್ಟವಾಗಿ ಕಾಣಿಸುತ್ತಿದೆ. ಏಕೆಂದರೆ ''ಯಸ್ಮಿನ್ ದ್ಯೌಃ'' ಎಂಬ ಮುಂದಿನ ವಾಕ್ಯವು ಪರಮಾತ್ಮ ಪರವಾಗದಿದ್ದರೆ 'ಋತದದ್ರೇಶ್ಮಂ' ಎಂಬ ವಾಕ್ಯವೂ ಸಹ ಪರಮಾತ್ಮ ಪರವಾಗುವುದಿಲ್ಲ.

ಶಂಕೆ - ಅದೃಶ್ಯತ್ವಾಧಿಕರಣ ಹಾಗೂ ದ್ಯುಭ್ವಾದ್ಯಧಿಕರಣಗಳ ಮಧ್ಯದಲ್ಲಿ ವೈಶ್ವಾನರಾಧಿಕರಣದ ವ್ಯವಧಾನವಿದೆ. ಮತ್ತು ದ್ಯುಭ್ವಾದ್ಯಧಿಕರಣವು ಬೇರೆ ಪಾದದಲ್ಲಿರುವುದರಿಂದ ಪಾದದ ವ್ಯವಧಾನವೂ ಇದೆ. ಹಾಗಾಗಿ ಈ ಎರಡು ಅಧಿಕರಣಗಳಿಗೆ ಐಕ್ಯವನ್ನು ಹೇಗೆ ಆಪಾದಿಸುತ್ತೀರಿ?

ಸಮಾಧಾನ - ಹೀಗೆ ಶಂಕಿಸಬಾರದು. ಎರಡೂ ಸಹ ಒಂದೇ ಅಧಿಕರಣಗಳಾದರೂ ಯೋಗ್ಯವಾಗಿರುವಾಗ ಅಧಿಕರಣದ ಹಾಗೂ ಪಾದದ ವ್ಯವಧಾನವೇ ತಪ್ಪೆಂದು ನಮ್ಮ ಆಕ್ಷೇಪದ ಅಭಿಪ್ರಾಯ.

ಶಂಕೆ - ಅದೃಶ್ಯತ್ವಾಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಲಿಂಗಗಳು ಜೀವನಲ್ಲಿ ಅಸ್ಪಷ್ಟವಾಗಿವೆ. ಆದರೆ ಮೂರನೇ ಪಾದದ ದ್ಯುಭ್ವಾದ್ಯಧಿಕರಣದಲ್ಲಿ ಸ್ಪಷ್ಟವಾದ ಜೀವಲಿಂಗಗಳನ್ನು ಸಮನ್ವಯ ಮಾಡಲಾಗಿದೆ. ಸ್ಪಷ್ಟವಾದ ಜೀವಲಿಂಗಗಳನ್ನು ಮೂರನೆಯ ಪಾದದಲ್ಲಿಯೇ ಸಮನ್ವಯ ಮಾಡಬೇಕಾದ್ದರಿಂದ ಏಕಾಧಿಕರಣ್ಯವನ್ನು ಹೇಗೆ ಆಪಾದಿಸುತ್ತೀರಿ ?

ಸಮಾಧಾನ - ಹಾಗಾದರೆ ಆತ್ಮತ್ವವನ್ನು ಎರಡನೆಯ ಪಾದದಲ್ಲಿ ಸಮನ್ವಯ ಮಾಡುತ್ತಿರುವುದರಿಂದ ಅಸ್ಪಷ್ಟವಾದ ಜೀವಲಿಂಗವೇ ಆಗಿದೆ. 'ಗುಹಾಂ ಪ್ರವಿಷ್ಟೌ' ಎಂಬ ಸೂತ್ರದಲ್ಲಿ ಸಮನ್ವಯ ಮಾಡುತ್ತಿರುವ 'ಋತ' ಶಬ್ದ ವಾಚ್ಯವಾದ ಕರ್ಮಫಲ ಭೋಕ್ತೃತ್ವವು ಸ್ಪಷ್ಟವಾದ ಜೀವಲಿಂಗವಾಗಿದೆ. ಆದ್ದರಿಂದ ಈ ಎರಡು ಸೂತ್ರಗಳನ್ನು ಮೂರನೇ ಪಾದದಲ್ಲಿಯೇ ನಿವೇಶ ಮಾಡ ಬೇಕಾದೀತು.

प्रकाशः —

यत्त्वेकप्रकरणस्थवाक्यविशेषविषयत्वादैकाधिकरण्यमिति, तदपि नेत्याह — किञ्चेति ।

ವಿವರಣೆ - ಹಿಂದೆ ರಾಮಾನುಜರು ಒಂದೇ ಪ್ರಕರಣದಲ್ಲಿರುವ ಬೇರೆ ಬೇರೆ ವಾಕ್ಯಗಳನ್ನು ಸಮನ್ವಯ ಮಾಡುತ್ತಿರುವುದರಿಂದ ನಾಲ್ಕೂ ಸೂತ್ರಗಳಿಗೂ ಏಕಾಧಿಕರಣ್ಯವನ್ನು ಹೇಳಬೇಕೆಂದು ಉಪಪಾದಿಸಿದ್ದರು. ಆದನ್ನು ಪ್ರಕೃತ 'ಕಿಂಚ' ಇತ್ಯಾದಿ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ.

ಪ್ರಕಾಶಃ – ನನು ಕಥಂ ಉಪಜೀವ್ಯೋಪಜೀವಕಭಾವಃ । ''ನಹಿ ಯಸ್ಮಿನ್ ದ್ಯೌಃ ಪೃಥಿವೀ ಇತ್ಯಾದಿವಾಕ್ಯಸ್ಯ ಪರಮಾತ್ಮಪರತ್ವಮದೃಶ್ಯತ್ವಾದಿಗುಣಕಸ್ಯಾಕ್ಷರಾತ್ಪರತಃ ಪರಸ್ಯ ಪರಮಾತ್ಮತ್ವೋಪಪಾದಕಮ್ । ಪರಪ್ರಕರಣೇऽಪಿ ತಚ್ಛೇಷತ್ವೇನ ಪ್ರಧಾನಾದಿಪ್ರತಿಪಾದನೋಪಪತ್ತೇ'' ರಿತ್ಯುಪಜೀವ್ಯೋಪಜೀವಕಭಾವಾಭಾವಸ್ಯ ಶ್ರುತಪ್ರಕಾಶ ಏವೋಕ್ತೇರಿತ್ಯತೋऽತ್ರೈವ ತತ್ರಾಪಿ ಪೂರ್ವಪಕ್ಷೇ ತದ್ಭಾವಮಾಹ – ಯಸ್ಮಿನ್ನಿತಿ ।

ಆಕ್ಷೇಪ - 'ಯಸ್ಮಿನ್ ದ್ಯೌಃ ಯತ್ತದದ್ರೇಶ್ಯಂ' ಎಂಬ ವಾಕ್ಯಕ್ಕೂ ಪರಸ್ಪರ ಉಪಜೀವ್ಯೋಪಜೀವಕಭಾವವು ಇರುತ್ತದೆಂದು ಹೇಗೆ ಹೇಳಿದಿರಿ? ಏಕೆಂದರೆ 'ಯಸ್ಮಿನ್ ದ್ಯೌಃ ಪೃಥಿವೀ' ಪೃಥಿವ್ಯಾದಿಗಳನ್ನು ಪ್ರತಿಪಾದಿಸುವ 'ಯಸ್ಮಿನ್' ಎಂಬ ವಾಕ್ಯವು ಪರಮಾತ್ಮಪರವಾಗಿದೆ. ಅದೃಶ್ಯತ್ವಾದಿ ಗುಣವುಳ್ಳ ಅಕ್ಷರತತ್ತ್ವಕ್ಕಿಂತ ಶ್ರೇಷ್ಠನಾದ ಪರಮಾತ್ಮನೇ ಆ ಪ್ರಕರಣದಲ್ಲಿ ಪ್ರತಿಪಾದ್ಯನಾಗಿದ್ದಾನೆ. ಹೀಗೆ ಪರಮಾತ್ಮ ಪ್ರಕರಣದಲ್ಲಿ ಪ್ರಸಕ್ತವಾಗಿರುವ ಪ್ರಧಾನಾದಿಗಳನ್ನು ಪ್ರತಿಪಾದಿಸುವ ವಾಕ್ಯಕ್ಕೆ ಪ್ರಧಾನವು ಪರಮಾತ್ಮನಿಗೆ ಅಂಗಭೂತವಾಗಿದೆಯೆಂದು ವ್ಯಾಖ್ಯಾನಿಸಬೇಕು. ಹೀಗಿರುವಾಗ ಪರಸ್ಪರವಾಗಿ ಉಪಜೀವ್ಯೋಪಜೀವಕಭಾವವನ್ನು ಹೇಳಲು ಸಾಧ್ಯವಿಲ್ಲವೆಂದು ಶ್ರುತಪ್ರಕಾಶದಲ್ಲಿ ಹೇಳಿದೆಯಲ್ಲವೇ?

ಸಮಾಧಾನ - ಪ್ರಕೃತ ಗುಹಾಧಿಕರಣದಲ್ಲಿ ಹೇಳುತ್ತಿರುವಂತೆ ಅಲ್ಲಿಯೂ ಸಹ ನಿಮ್ಮ ಪ್ರಕಾರ ಉಪಜೀವ್ಯಉಪಜೀವಕಭಾವವನ್ನು ಹೇಳಬಹುದು. ಈ ಅಭಿಪ್ರಾಯದಿಂದ 'ಯಸ್ಮಿನ್ ದ್ಯೌಃ' ಎಂಬ ವಾಕ್ಯವು ಹೊರಟಿದೆ.

ಪ್ರಕಾಶಃ – ಅತ್ರ ಯಥಾ ''ಋತಂ'' ಇತ್ಯಸ್ಯಾಬ್ರಹ್ಮಪರತ್ವೇ ತತ್ಪೂರ್ವಸ್ಯ ''ಯಸ್ಯ'' ಇತ್ಯಸ್ಯಾಪಿ ತಥಾತ್ವಂ, ತದ್ವತ್ತತ್ರಾಪಿ ಸಮ್ಭವಾದವಿಶೇಷಾತ್ ।

ನನ್ವದೃಶ್ಯತ್ವಾದಿಕಂ ನಾನ್ಯಸ್ಯ ಶಙ್ಕಾರ್ಹಮಿತಿ ಚೇನ್ನ ।

ಈ ಅಧಿಕರಣದಲ್ಲಿ ಯಾವರೀತಿಯಾಗಿ 'ಋತಂ ಪಿಬಂತೌ' ಎಂಬ ವಾಕ್ಯವು ಬ್ರಹ್ಮಪರವಾಗದಿದ್ದರೆ ಅದರ ಹಿಂದಿರುವ 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯವೂ ಸಹ ಬ್ರಹ್ಮಪರವಾಗಲು ಸಾಧ್ಯವಿಲ್ಲವೋ? ಅದರಂತೆ ದ್ಯುಭ್ವಾದ್ಯಧಿಕರಣದ ವಿಷಯವಾಕ್ಯವೆನಿಸಿದ 'ಯಸ್ಮಿನ್ ದ್ಯೌಃ' ಎಂಬ ವಾಕ್ಯವು ಬ್ರಹ್ಮಪರವಾಗದಿದ್ದರೆ ಅದೃಶ್ಯತ್ವಾಧಿಕರಣದ ವಿಷಯವಾಕ್ಯವೆನಿಸಿದ 'ಯತ್ತದದ್ರೇಶ್ಯಂ' ಎಂಬ ವಾಕ್ಯವೂ ಸಹ ಬ್ರಹ್ಮಪರವಾಗುವುದಿಲ್ಲ. ಎಂದು ಹೇಳಬಹುದು. ಇಲ್ಲಿ ಹೇಳುತ್ತಿರುವ ವಾಕ್ಯಗಳಿಗೂ ಅಲ್ಲಿರುವ ವಿಷಯವಾಕ್ಯಗಳಿಗೂ ಏನೂ ವ್ಯತ್ಯಾಸವಿಲ್ಲ.

ಆಕ್ಷೇಪ - ಅದೃಶ್ಯತ್ವಾದಿಗಳು ಕೇವಲ ಬ್ರಹ್ಮನ ಧರ್ಮಗಳಾಗಿವೆ. ಜೀವನಲ್ಲಿ ಇವುಗಳನ್ನು ಶಂಕಿಸಲೂ ಸಹ ಸಾಧ್ಯವಿಲ್ಲ. ಆದ್ದರಿಂದ 'ಯಸ್ಮಿನ್ ದ್ಯೌಃ' ಎಂಬ ವಾಕ್ಯವು ಜೀವಪರವಾದರೆ 'ಯತ್ತದದ್ರೇಶ್ಯಂ' ಎಂಬುದೂ ಸಹ ಜೀವಪರವಾಗುತ್ತದೆಂದು ಹೇಗೆ ಶಂಕಿಸುತ್ತೀರಿ?

ಪ್ರಕಾಶಃ – ಶ್ರುತ್ವಾದ್ಯಾಯತನತ್ವಂ ಜೀವಸ್ಯ ಶಙ್ಕಮಾನೇನಾದೃಶ್ಯತ್ವಾದೇರಪಿ ಶಙ್ಕಿತುಂ ಶಕ್ಯತ್ವಾತ್ । ''ಸರ್ವತ್ರ ಪ್ರಸಿದ್ಧ'' ಇತ್ಯಸ್ಯೈಕವಾಕ್ಯತ್ವಸಿದ್ಧಯೇ ''ಮನೋಮಯಃ'' ಇತ್ಯಾದೇ-ರುತ್ತರವಾಕ್ಯಸ್ಯ ಜೀವವಿಷಯತ್ವೇ ''ಸರ್ವಂ ಖಲ್ವಿದಂ ಬ್ರಹ್ಮ'' ಇತ್ಯಾದಿಪೂರ್ವವಾಕ್ಯಮಪಿ ಜೀವವಿಷಯಮಿತಿ ತ್ವಯೈವೋಕ್ತತ್ವಾತ್ ।

ಪೂರ್ವಸ್ಯ ಪರಮಾತ್ಮಪರತ್ವಾಸಿದ್ಧಿಪ್ರಕಾರಸ್ಯ ತತ್ರೈವಾಸ್ಮದೀಯಪೂರ್ವಪಕ್ಷೇ ಸ್ಪಷ್ಟಯಿಷ್ಯಮಾಣತ್ವಾಚ್ಚೇತಿ ಭಾವಃ ।

ಸಮಾಧಾನ - ಯಾವ ವ್ಯಕ್ತಿಯು ಜೀವನಲ್ಲಿ ದ್ಯುಭ್ವಾದ್ಯಾಯನತ್ವವನ್ನು ಶಂಕಿಸುತ್ತಾನೋ ಅಂತಹವನು ಅದೃಶ್ಯತ್ವಾದಿಗಳನ್ನು ಶಂಕಿಸುವುದರಲ್ಲಿ ತಪ್ಪಿಲ್ಲ. ಏಕೆಂದರೆ ಅದೃಶ್ಯತ್ವಧರ್ಮವು ಹೇಗೆ ಬೇರೆಯವರಲ್ಲಿ ಅಸಂಭಾವಿತವೋ, ಅದರಂತೆ ಪೃಥ್ವೀ ಮೊದಲಾದ ಪದಾರ್ಥಗಳಿಗೆ ಆಶ್ರಯವಾಗಿರುವಿಕೆಯೂ ಸಹ ಬೇರೆಯವಲ್ಲಿ ಅಸಂಭಾವಿತವಾಗಿದೆ.

'ಸರ್ವತ್ರ ಪ್ರಸಿದ್ಧೋಪದೇಶಾತ್' ಎಂಬ ಸೂತ್ರದಲ್ಲಿ ಏಕವಾಕ್ಯತ್ವದ ಸಿದ್ಧಿಗೋಸ್ಕರ 'ಮನೋಮಯಃ' ಎಂಬ ಮುಂದಿನ ವಾಕ್ಯವು ಜೀವವಿಷಯಕವಾದರೆ ಸರ್ವಾತ್ಮಕತ್ವವನ್ನು ಹೇಳುವ 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ವಾಕ್ಯವೂ ಸಹ ಜೀವವಿಷಯಕವೇ ಆಗುತ್ತದೆಂದು ನೀವೇ ಪೂರ್ವಪಕ್ಷದಲ್ಲಿ ಹೇಳಿದ್ದೀರಿ. ಹೀಗೆ ಸರ್ವಾತ್ಮಕತ್ವವನ್ನು ಜೀವನಲ್ಲಿ ಆಕ್ಷೇಪಿಸುವ ನಿಮಗೆ ಅದೃಶ್ಯತ್ವಾದಿಗಳನ್ನು ಆಕ್ಷೇಪಿಸುವುದು ಕಷ್ಟವೇ ಅಲ್ಲ.

'ಯತ್ತದದ್ರೇಶ್ಯಂ' ಎಂಬ ವಾಕ್ಯವು ನಮ್ಮ ಸಿದ್ಧಾಂತದ ಪ್ರಕಾರ ಪರಮಾತ್ಮಪರವಾಗುವುದಿಲ್ಲ. ಪ್ರಧಾನಾದಿಗಳನ್ನು ಪ್ರತಿಪಾದಿಸುತ್ತದೆಂದು ಪೂರ್ವಪಕ್ಷ ಮಾಡುತ್ತೇವೆ. ಇದು ಪ್ರಧಾನದಲ್ಲಿ ಶಂಕಿಸಲು ಹೇಗೆ ಯೋಗ್ಯವಾಗಿದೆಯೆಂಬ ವಿಚಾರವನ್ನು ಆ ಅಧಿಕರಣದ ಪೂರ್ವಪಕ್ಷದಲ್ಲಿಯೇ ಸ್ಪಷ್ಟಪಡಿಸುತ್ತೇವೆ.

ಪ್ರಕಾಶಃ – ತದುಕ್ತಮೇವಾಧಿಕರಣಭೇದನಿಯಾಮಕಮಾಶಙ್ಕ್ಯ ನಿರಾಹ – **ಅಥೇತಿ । ವ್ಯವಧಾನಾದೇರಿತಿ । ಭಿನ್ನಪಾದನಿವೇಶ ಆದಿಪದಾರ್ಥಃ ।**

ನನ್ವೇವಂ ಸಿದ್ಧಾನ್ತೇऽಪಿ ''ಪಾದಾನ್ತ್ಯಪ್ರಾಣನಯ'' ''ಸರ್ವತ್ರ'' ಇತಿ ನಯಯೋರ್ಭಿನ್ನಪಾದ-ನಿವೇಶಾಯೋಗ ಇತಿ ಚೇನ್ನ, ಪರರೀತ್ಯಾ ಪರಸ್ಯಾಪಾದನಾತ್ । ನ ಹ್ಯೇತತ್ಪರೋಕ್ತಮುಪಜೀವ್ಯತ್ವಾದಿಕಂ ಅಧಿಕರಣೈಕ್ಯೇ ಬೀಜಮಿತಿ ಸಮ್ಪ್ರತಿಪನ್ನಂ, ಕಿನ್ತ್ವಪ್ರಯೋಜಕಮಿತ್ಯತ್ರೈವ ತಾತ್ಪರ್ಯಾತ್ । ಸ್ಪಷ್ಟಮೇತದಗ್ರೇ ।

ರಾಮಾನುಜರೇ ಹೇಳಿರುವ ಅಧಿಕರಣ ಭೇದಕ್ಕೆ ನಿಯಾಮಕವನ್ನು ಆಶಂಕಿಸಿ ನಿರಾಕರಿಸುತ್ತಿದ್ದಾರೆ 'ಅಥ' ಇತ್ಯಾದಿ ವಾಕ್ಯದಿಂದ. 'ವ್ಯವಧಾನಾದೇಃ' ಎಂಬ ಆದಿಪದದಿಂದ ಬೇರೆ ಪಾದದಲ್ಲಿ ನಿವೇಶ ಮಾಡುವುದನ್ನು ವಿವಕ್ಷಿಸಬೇಕು.

प्रकाशः – ननु कथं उपजीव्योपजीवकभावः । ''नहि यस्मिन् द्यौः पृथिवी इत्यादिवाक्यस्य परमात्मपरत्वमदृश्यत्वादिगुणकस्याक्षरात्परतः परस्य परमात्मत्वोपपादकम् । परप्रकरणेऽपि तच्छेषत्वेन प्रधानादिप्रतिपादनोपपत्ते'' रित्युपजीव्योपजीवकभावाभावस्य श्रुतप्रकाश एवोक्तेरित्यतोऽत्रैव तत्रापि पूर्वपक्षे तद्भावमाह – यस्मिन्निति ।

ಆಕ್ಷೇಪ - 'यस्मिन् द्यौः यत्तदद्रेश्यं' ಎಂಬ ವಾಕ್ಯಕ್ಕೂ ಪರಸ್ಪರ ಉಪಜೀವ್ಯೋಪಜೀವಕಭಾವವು ಇರುತ್ತದೆಂದು ಹೇಗೆ ಹೇಳಿದಿರಿ? ಏಕೆಂದರೆ 'यस्मिन् द्यौः पृथिवी' ಪೃಥಿವ್ಯಾದಿಗಳನ್ನು ಪ್ರತಿಪಾದಿಸುವ 'यस्मिन्' ಎಂಬ ವಾಕ್ಯವು ಪರಮಾತ್ಮಪರವಾಗಿದೆ. ಅದೃಶ್ಯತ್ವಾದಿ ಗುಣವುಳ್ಳ ಅಕ್ಷರತತ್ತ್ವಕ್ಕಿಂತ ಶ್ರೇಷ್ಠನಾದ ಪರಮಾತ್ಮನೇ ಆ ಪ್ರಕರಣದಲ್ಲಿ ಪ್ರತಿಪಾದ್ಯನಾಗಿದ್ದಾನೆ. ಹೀಗೆ ಪರಮಾತ್ಮ ಪ್ರಕರಣದಲ್ಲಿ ಪ್ರಸಕ್ತವಾಗಿರುವ ಪ್ರಧಾನಾದಿಗಳನ್ನು ಪ್ರತಿಪಾದಿಸುವ ವಾಕ್ಯಕ್ಕೆ ಪ್ರಧಾನವು ಪರಮಾತ್ಮನಿಗೆ ಅಂಗಭೂತವಾಗಿದೆಯೆಂದು ವ್ಯಾಖ್ಯಾನಿಸಬೇಕು. ಹೀಗಿರುವಾಗ ಪರಸ್ಪರವಾಗಿ ಉಪಜೀವ್ಯೋಪಜೀವಕಭಾವವನ್ನು ಹೇಳಲು ಸಾಧ್ಯವಿಲ್ಲವೆಂದು ಶ್ರುತಪ್ರಕಾಶದಲ್ಲಿ ಹೇಳಿದೆಯಲ್ಲವೇ?

ಸಮಾಧಾನ - ಪ್ರಕೃತ ಗುಹಾಧಿಕರಣದಲ್ಲಿ ಹೇಳುತ್ತಿರುವಂತೆ ಆಲ್ಲಿಯೂ ಸಹ ನಿಮ್ಮ ಪ್ರಕಾರ ಉಪಜೀವ್ಯಉಪಜೀವಕಭಾವವನ್ನು ಹೇಳಬಹುದು. ಈ ಅಭಿಪ್ರಾಯದಿಂದ 'यस्मिन् द्यौः' ಎಂಬ ವಾಕ್ಯವು ಹೊರಟಿದೆ.

प्रकाशः – अत्र यथा ''ऋतं'' इत्यस्याब्रह्मपरत्वे तत्पूर्वस्य ''यस्य'' इत्यस्यापि तथात्वं, तद्वत्तत्रापि सम्भवादविशेषात् ।

नन्वदृश्यत्वादिकं नान्यस्य शङ्कार्हमिति चेन्न ।

ಈ ಅಧಿಕರಣದಲ್ಲಿ ಯಾವರೀತಿಯಾಗಿ 'ऋतं पिबन्तौ' ಎಂಬ ವಾಕ್ಯವು ಬ್ರಹ್ಮಪರವಾಗದಿದ್ದರೆ ಅದರ ಹಿಂದಿರುವ 'यस्य ब्रह्म च' ಎಂಬ ವಾಕ್ಯವೂ ಸಹ ಬ್ರಹ್ಮಪರವಾಗಲು ಸಾಧ್ಯವಿಲ್ಲವೋ? ಅದರಂತೆ ದ್ಯುಭ್ವಾದ್ಯಧಿಕರಣದ ವಿಷಯವಾಕ್ಯವೆನಿಸಿದ 'यस्मिन् द्यौः' ಎಂಬ ವಾಕ್ಯವು ಬ್ರಹ್ಮಪರವಾಗದಿದ್ದರೆ ಅದೃಶ್ಯತ್ವಾಧಿಕರಣದ ವಿಷಯವಾಕ್ಯವೆನಿಸಿದ 'यत्तत् तदद्रेश्यं' ಎಂಬ ವಾಕ್ಯವೂ ಸಹ ಬ್ರಹ್ಮಪರವಾಗುವುದಿಲ್ಲ. ಎಂದು ಹೇಳಬಹುದು. ಇಲ್ಲಿ ಹೇಳುತ್ತಿರುವ ವಾಕ್ಯಗಳಿಗೂ ಆಲ್ಲಿರುವ ವಿಷಯವಾಕ್ಯಗಳಿಗೂ ಏನೂ ವ್ಯತ್ಯಾಸವಿಲ್ಲ.

ಆಕ್ಷೇಪ - ಅದೃಶ್ಯತ್ವಾದಿಗಳು ಕೇವಲ ಬ್ರಹ್ಮನ ಧರ್ಮಗಳಾಗಿವೆ. ಜೀವನಲ್ಲಿ ಇವುಗಳನ್ನು ಶಂಕಿಸಲೂ ಸಹ ಸಾಧ್ಯವಿಲ್ಲ. ಆದ್ದರಿಂದ 'यस्मिन् द्यौः' ಎಂಬ ವಾಕ್ಯವು ಜೀವಪರವಾದರೆ 'यत्तदद्रेश्यं' ಎಂಬುದೂ ಸಹ ಜೀವಪರವಾಗುತ್ತದೆಂದು ಹೇಗೆ ಶಂಕಿಸುತ್ತೀರಿ?

ಪ್ರಕಾಶಃ – ದ್ಯುಭ್ವಾದ್ಯಾಯತನತ್ವಂ ಜೀವಸ್ಯ ಶಙ್ಕ್ಯಮಾನೇನಾದೃಶ್ಯತ್ವಾದೇರಪಿ ಶಙ್ಕಿತುಂ ಶಕ್ಯತ್ವಾತ್ । ''ಸರ್ವತ್ರ ಪ್ರಸಿದ್ಧ'' ಇತ್ಯತ್ರೈಕವಾಕ್ಯತ್ವಸಿದ್ಧಯೇ ''ಮನೋಮಯಃ'' ಇತ್ಯಾದೇ-ರುತ್ತರವಾಕ್ಯಸ್ಯ ಜೀವವಿಷಯತ್ವೇ ''ಸರ್ವಂ ಖಲ್ವಿದಂ ಬ್ರಹ್ಮ'' ಇತ್ಯಾದಿಪೂರ್ವವಾಕ್ಯಮಪಿ ಜೀವವಿಷಯಮಿತಿ ತ್ವಯೈವೋಕ್ತತ್ವಾತ್ ।

ಪೂರ್ವಸ್ಯ ಪರಮಾತ್ಮಪರತ್ವಾಸಿದ್ಧಿಪ್ರಕಾರಸ್ಯ ತತ್ರೈವಾಸ್ಮದೀಯಪೂರ್ವಪಕ್ಷೇ ಸ್ಪಷ್ಟಯಿಷ್ಯಮಾಣತ್ವಾಚ್ಚೇತಿ ಭಾವಃ ।

ಸಮಾಧಾನ - ಯಾವ ವ್ಯಕ್ತಿಯು ಜೀವನಲ್ಲಿ ದ್ಯುಭ್ವಾದ್ಯಾಯನತ್ವವನ್ನು ಶಂಕಿಸುತ್ತಾನೋ ಅಂತಹವನು ಅದೃಶ್ಯತ್ವಾದಿಗಳನ್ನು ಶಂಕಿಸುವುದರಲ್ಲಿ ತಪ್ಪಿಲ್ಲ. ಏಕೆಂದರೆ ಅದೃಶ್ಯತ್ವಧರ್ಮವು ಹೇಗೆ ಬೇರೆಯವರಲ್ಲಿ ಆಸಂಭಾವಿತವೋ, ಅದರಂತೆ ಪೃಥ್ವೀ ಮೊದಲಾದ ಪದಾರ್ಥಗಳಿಗೆ ಆಶ್ರಯವಾಗಿರುವಿಕೆಯೂ ಸಹ ಬೇರೆಯವಲ್ಲಿ ಅಸಂಭಾವಿತವಾಗಿದೆ.

'ಸರ್ವತ್ರ ಪ್ರಸಿದ್ಧೋಪದೇಶಾತ್' ಎಂಬ ಸೂತ್ರದಲ್ಲಿ ಏಕವಾಕ್ಯತ್ವದ ಸಿದ್ಧಿಗೋಸ್ಕರ 'ಮನೋಮಯಃ' ಎಂಬ ಮುಂದಿನ ವಾಕ್ಯವು ಜೀವವಿಷಯಕವಾದರೆ ಸರ್ವಾತ್ಮಕತ್ವವನ್ನು ಹೇಳುವ 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ವಾಕ್ಯವೂ ಸಹ ಜೀವವಿಷಯಕವೇ ಆಗುತ್ತದೆಂದು ನೀವೇ ಪೂರ್ವಪಕ್ಷದಲ್ಲಿ ಹೇಳಿದ್ದೀರಿ. ಹೀಗೆ ಸರ್ವಾತ್ಮಕತ್ವವನ್ನು ಜೀವನಲ್ಲಿ ಆಕ್ಷೇಪಿಸುವ ನಿಮಗೆ ಅದೃಶ್ಯತ್ವಾದಿಗಳನ್ನು ಆಕ್ಷೇಪಿಸುವುದು ಕಷ್ಟವೇ ಅಲ್ಲ.

'ಯತ್ತದದ್ರೇಶ್ಯಂ' ಎಂಬ ವಾಕ್ಯವು ನಮ್ಮ ಸಿದ್ಧಾಂತದ ಪ್ರಕಾರ ಪರಮಾತ್ಮಪರವಾಗುವುದಿಲ್ಲ. ಪ್ರಧಾನಾದಿಗಳನ್ನು ಪ್ರತಿಪಾದಿಸುತ್ತದೆಂದು ಪೂರ್ವಪಕ್ಷ ಮಾಡುತ್ತೇವೆ. ಇದು ಪ್ರಧಾನದಲ್ಲಿ ಶಂಕಿಸಲು ಹೇಗೆ ಯೋಗ್ಯವಾಗಿದೆಯೆಂಬ ವಿಚಾರವನ್ನು ಆ ಅಧಿಕರಣದ ಪೂರ್ವಪಕ್ಷದಲ್ಲಿಯೇ ಸ್ಪಷ್ಟಪಡಿಸುತ್ತೇವೆ.

ಪ್ರಕಾಶಃ – ತದುಕ್ತಮೇವಾಧಿಕರಣಭೇದನಿಯಾಮಕಮಾಶಙ್ಕ್ಯ ನಿರಾಹ – ಅಥೇತಿ । ವ್ಯವಧಾನಾದೇರಿತಿ । ಭಿನ್ನಪಾದನಿವೇಶ ಆದಿಪದಾರ್ಥಃ ।

ನನ್ವೇವಂ ಸಿದ್ಧಾನ್ತೇऽಪಿ ''ಪಾದಾನ್ತ್ಯಪ್ರಾಣನಯ'' ''ಸರ್ವತ್ರ'' ಇತಿ ನಯಯೋರ್ಭಿನ್ನಪಾದ-ನಿವೇಶಾಯೋಗ ಇತಿ ಚೇನ್ನ, ಪರರೀತ್ಯಾ ಪರಸ್ಯಾಪಾದನಾತ್ । ನ ಹ್ಯೇತತ್ಪರೋಕ್ತಮುಪಜೀವ್ಯತ್ವಾದಿಕಂ ಅಧಿಕರಣೈಕ್ಯೇ ಬೀಜಮಿತಿ ಸಮ್ಪ್ರತಿಪನ್ನಂ, ಕಿನ್ತ್ವಪ್ರಯೋಜಕಮಿತ್ಯತ್ರೈವ ತಾತ್ಪರ್ಯಾತ್ । ಸ್ಪಷ್ಟಮೇತದಗ್ರೇ ।

ರಾಮಾನುಜರೇ ಹೇಳಿರುವ ಅಧಿಕರಣ ಭೇದಕ್ಕೆ ನಿಯಾಮಕವನ್ನು ಆಶಂಕಿಸಿ ನಿರಾಕರಿಸುತ್ತಿದ್ದಾರೆ 'ಅಥ' ಇತ್ಯಾದಿ ವಾಕ್ಯದಿಂದ. 'ವ್ಯವಧಾನಾದೇಃ' ಎಂಬ ಆದಿಪದದಿಂದ ಬೇರೆ ಪಾದದಲ್ಲಿ ನಿವೇಶ ಮಾಡುವುದನ್ನು ವಿವಕ್ಷಿಸಬೇಕು.

ಪ್ರಶ್ನೆ - ನಿಮ್ಮ ಸಿದ್ಧಾಂತದಲ್ಲಿಯೂ ಪಾದಾಂತ್ಯ ಪ್ರಾಣಾಧಿಕರಣದ ಹಾಗೂ ಸರ್ವಗತತ್ವಾಧಿಕರಣದ ವಿಷಯವಾಕ್ಯಗಳು ಒಂದೇ ಪ್ರಕರಣದಲ್ಲಿರುವುದರಿಂದ ಬೇರೆ ಪಾದದಲ್ಲಿ ನಿವೇಶಿಸಿದ್ದು ತಪ್ಪಲ್ಲವೇ?

ಉತ್ತರ - ರಾಮಾನುಜರ ಸಿದ್ಧಾಂತವನ್ನು ಅವಲಂಬಿಸಿ ರಾಮಾನುಜರನ್ನು ಆಕ್ಷೇಪಿಸುತ್ತಿದ್ದೇವೆಯೇ ಹೊರತು ನಮ್ಮ ಸಿದ್ಧಾಂತವನ್ನು ಅನುಸರಿಸಿ ರಾಮಾನುಜರನ್ನು ಆಕ್ಷೇಪಿಸುತ್ತಿಲ್ಲ. ಏಕೆಂದರೆ ರಾಮಾನುಜರು ಹೇಳುವಂತೆ ಪರಸ್ಪರ ಉಪಜೀವ್ಯಉಪಜೀವಕಭಾವ ಮೊದಲಾದವುಗಳು ಐಕಾಧಿಕರಣ್ಯಕ್ಕೆ ಪ್ರಯೋಜಕವೆಂದು ನಾವು ಹೇಳುವುದಿಲ್ಲ. ಹೊರತಾಗಿ ಅವರು ಹೇಳುವ ಕಾರಣಗಳು ಅಪ್ರಯೋಜಕಗಳೆಂದು ಸಮರ್ಥಿಸುವುದರಲ್ಲೇ ನಮ್ಮ ತಾತ್ಪರ್ಯ. ಈ ವಿಷಯವು ಮುಂದೆ ಸ್ಪಷ್ಟವಾಗುತ್ತದೆ.

ಪ್ರಕಾಶಃ – ''ಕಿಞ್ಚ'' ಇತ್ಯಾದಿನಾ । ಸ್ಪಷ್ಟಾಸ್ಪಷ್ಟಲಿಙ್ಗಕವಾಕ್ಯವಿಷಯತ್ವೇನೈಕಸ್ಮಿನ್ ಪಾದೇ ಸಙ್ಗತ್ಯನುಪಪತ್ತೇರಿತಿ ಶ್ರುತಪ್ರಕಾಶೋಕ್ತಮೇವಾಶಙ್ಕತೇ – ನನ್ವಿತಿ ।

ಸ್ಪಷ್ಟಲಿಂಗಕವಾದ ಮತ್ತು ಅಸ್ಪಷ್ಟಲಿಂಗಕವಾದ ವಾಕ್ಯಗಳಿಗೆ ಒಂದೇ ಪಾದದಲ್ಲಿ ಸಂಗತಿಯು ಅನುಪಪನ್ನವಾಗುತ್ತದೆಂದು ಶ್ರುತಪ್ರಕಾಶದಲ್ಲಿ ಹೇಳಲಾಗಿದೆ. ಅದನ್ನೇ ಪ್ರಕೃತ 'ನನು' ಇತ್ಯಾದಿ ವಾಕ್ಯದಿಂದ ಆಶಂಕಿಸುತ್ತಿದ್ದಾರೆ.

ಸಾರ

ಇದೇ ಪಾದದಲ್ಲಿರುವ ಆದೃಶ್ಯತ್ವಾಧಿಕರಣದ ವಿಷಯವಾಕ್ಯವು ಮುಂದಿನ ಪಾದದಲ್ಲಿರುವ ದ್ಯುಭ್ವಾದ್ಯಧಿಕರಣದ ವಿಷಯವಾಕ್ಯವು 'ಮಾಂಡೋಕ್ಯೋಪನಿಷತ್' ಎಂಬ ಒಂದೇ ಪ್ರಕರಣದಲ್ಲಿದೆ. ಮತ್ತು ಆ ಎರಡು ವಿಷಯವಾಕ್ಯಗಳಿಗೆ ಪರಸ್ಪರ ಉಪಜೀವ್ಯಜೀವಕಭಾವವೂ ಸಹ ಇದೆ. ಆದರೂ ಸಹ ಸೂತ್ರಕಾರರು ಬೇರೆ ಬೇರೆ ಅಧಿಕರಣಗಳನ್ನಾಗಿ ಪರಿಗಣಿಸಿದ್ದಾರೆ. ಆದರಂತೆ ಪ್ರಕೃತದಲ್ಲಿಯೂ ವಿಷಯವಾಕ್ಯಗಳು ಒಂದೇ ಪ್ರಕರಣದಲ್ಲಿದ್ದರೂ ವಿಭಿನ್ನವಾಗಿರುವುದರಿಂದ ಅಧಿಕರಣಗಳೂ ಸಹ ಪ್ರತ್ಯೇಕವೇ ಆಗುತ್ತವೆ.

• • • • •

ಒಂದು ವಾಕ್ಯವೇ ಅನೇಕ ಅಧಿಕರಣಗಳಿಗೆ ವಿಷಯವಾಗಬಹುದು

ತಾತ್ಪರ್ಯಚನ್ದ್ರಿಕಾ

ಕಿಞ್ಚ – ಔದುಮ್ಬರಾಧಿಕರಣೇऽಪಿ ''ಯಸ್ಯ ಪರ್ಣಮಯೀ ಜುಹೂರ್ಭವತಿ ನ ಸ ಪಾಪಂ ಶ್ಲೋಕಂ ಶೃಣೋತಿ'' ಇತಿ ವಾಕ್ಯಮುದಾಹರಣಮ್ । ಪರ್ಣಮಧ್ಯಧಿಕರಣೇऽಪಿ ''ಔದುಮ್ಬರೋ ಯೂಪೋ ಭವತಿ ಊರ್ವಾ ಉದುಮ್ಬರಃ ಊರ್ಕ್ ಪಶವಃ ಊರ್ಜೈವಾಸ್ಮಾ ಊರ್ಜಂ ಪಶೂನಾಪ್ನೋತಿ'' ಇತಿ ವಾಕ್ಯಮುದಾಹರಣಮ್ ।

नच पौनरुक्त्यम्, औदुम्बराधिकरणे वाक्यद्वयगतः साधनप्रतिपादकः पूर्वभाग उदाहरणम्, पर्णमय्यधिकरणे तु साध्यप्रतिपादकः उत्तराभागः उदाहरणमिति वार्तिक एवोक्तम् ।

एवञ्च यथा तयोः पूर्वोत्तरभागविषयत्वे उपजीव्योपजीवकभावे च सत्यपि भेदः, तथाऽत्र किं न स्यात् ।

नहि पर्णमय्यधिकरणोक्तेन ''न स पापꣳ श्लोकꣳ शृणोति'' इत्यादेः कामपदोपबन्धरहितत्वात् न साध्यसमर्पकत्वमित्यनेन विना औदुम्बराधिकरणोक्तस्य ''पर्णमयी जुहूर्भवति'' इत्यादेः विधिविभक्तिरहितत्वात् । न साधनसमर्पकत्व-मित्येतत्सिध्यति, साध्यस्य साधनं विनाऽयोगेन अपापश्लोकश्रवणादेः साध्यत्वे पर्णमयीत्वादेः बलात् साधनत्वापातात् ।

एवञ्च अस्माकं मतेऽपि ''प्राणस्तथा'' इत्यस्य, ''सर्वत्र'' इत्यस्य च एकप्रकरणस्थवाक्यविषयत्वं उपजीव्योपजीवकभावे च सत्यपि भिन्नाधिकरणता सिद्धा । ''तद्धेतुव्यपदेशाच्च'' इत्यादौ समन्वेतव्यान्तराभावादिनैकाधिकरणतेति दिक् ।।

ಅನುವಾದ - ಪೂರ್ವಮೀಮಾಂಸೆಯಲ್ಲಿ ಒಂದೇ ವಾಕ್ಯವನ್ನು ಎರಡು ಅಧಿಕರಣದಲ್ಲಿ ವಿಚಾರ ಮಾಡಲಾಗಿದೆ - ಔದುಂಬರಾಧಿಕರಣದಲ್ಲಿ ''ಔದುಂಬರೋ ಯೂಪೋ ಭವತಿ'' ಎಂಬುದು ವಿಷಯವಾಕ್ಯ. ಆದರೂ ಸಹ ''ಯಸ್ಯ ಪರ್ಣಮಯೀ ಜುಹೂರ್ಭವತಿ ನ ಸ ಪಾಪಂ ಶ್ಲೋಕಂ ಶೃಣೋತಿ'' ಎಂಬ ವಾಕ್ಯವನ್ನೂ ಸಹ ವಿಚಾರ ಮಾಡಲಾಗಿದೆ. ಇದರಂತೆ ಪರ್ಣಮಯ್ಯಧಿಕರಣದಲ್ಲಿ 'ಯಸ್ಯ ಪರ್ಣಮಯೀ ಜುಹೂರ್ಭವತಿ' ಎಂಬುದು ವಿಷಯವಾಕ್ಯ. ಆದರೂ ಸಹ ''ಔದುಂಬರೋ ಯೂಪೋ ಭವತಿ ಊರ್ಗ್ವಾ ಉದುಂಬರಃ ಊರ್ಕ್ ಪಶವಃ ಊರ್ಜ್ಯೈವಾಸ್ಮಾ ಊರ್ಜಂ ಪಶೂನಾ ಪ್ನೋತಿ'' ಎಂಬ ವಾಕ್ಯವನ್ನೂ ಸಹ ವಿಚಾರ ಮಾಡಲಾಗಿದೆ.

ಒಂದೇ ವಾಕ್ಯವನ್ನು ಎರಡು ಅಧಿಕರಣಗಳಲ್ಲಿ ವಿಚಾರ ಮಾಡಿದಾಗ ಪುನರುಕ್ತಿ ಬರುತ್ತದಲ್ಲವೇ? ಎಂದು ಶಂಕಿಸಬಾರದು. ಔದುಂಬರಾಧಿಕರಣದಲ್ಲಿ ಎರಡು ವಿಷಯವಾಕ್ಯಗಳಲ್ಲಿರುವ ಸಾಧನ-ಪ್ರತಿಪಾದಕವಾದ ಪೂರ್ವಭಾಗವನ್ನಷ್ಟೇ ಉದಾಹರಿಸಲಾಗಿದೆ. 'ಯಸ್ಯ ಪರ್ಣಮಯೀ ಜುಹೂರ್ಭವತಿ' ಎಂಬ ಭಾಗವನ್ನು ಮತ್ತು 'ಔದುಂಬರೋ ಯೂಪೋ ಭವತಿ' ಎಂಬ ಭಾಗವನ್ನಷ್ಟೇ

ವಿಚಾರ ಮಾಡಲಾಗಿದೆ. ಪರ್ಣಮಯ್ಯಧಿಕರಣದಲ್ಲಾದರೂ ಸಾಧ್ಯಪ್ರತಿಪಾದಕವಾದ ಉತ್ತರಭಾಗವನ್ನು ಉದಾಹರಿಸಲಾಗಿದೆ. ಅಂದರೆ ''ನ ಸ ಪಾಪಂ ಶ್ಲೋಕಂ ಶೃಣೋತಿ'' 'ಊರ್ಜ್ಯೆವಾಸ್ಮಾ ಊರ್ಜಂ ಪಶೂನಾಪ್ನೋತಿ' ಎಂಬ ಫಲಪ್ರತಿಪಾದಕವಾದ ವಾಕ್ಯವನ್ನು ವಿಚಾರ ಮಾಡಲಾಗಿದೆ. ಈ ವಿಚಾರವನ್ನೆಲ್ಲಾ ವಾರ್ತಿಕ ಗ್ರಂಥದಲ್ಲಿ ನಿರೂಪಿಸಲಾಗಿದೆ. ಆದ್ದರಿಂದ ಒಂದೇ ವಾಕ್ಯದಲ್ಲಿರುವ ಹಿಂದಿನ ಮುಂದಿನ ಭಾಗಗಳು ವಿಷಯವಾಗಿದ್ದು ಪರಸ್ಪರ ಉಪಜೀವ್ಯೋಪಜೀವಕಭಾವವಿದ್ದರೂ ಸಹ ಅಧಿಕರಣಭೇದವನ್ನು ಪೂರ್ವಮೀಮಾಂಸಕರು ಹೇಗೆ ಒಪ್ಪಿದ್ದಾರೋ ಅದರಂತೆ ಕಾಠಕೋಪನಿಷತ್ತಿನ ಮಂತ್ರಗಳನ್ನು ಎರಡು ಅಧಿಕರಣಗಳಲ್ಲಿ ಏಕೆ ವಿಚಾರ ಮಾಡಬಾರದು?

ಪೂರ್ವಮೀಮಾಂಸೆಯ ಎರಡು ಅಧಿಕರಣಗಳಿಗೆ ಉಪಜೀವ್ಯೋಪಜೀವಕಭಾವವಿಲ್ಲವೆಂದು ತಿಳಿಯಬಾರದು. ಏಕೆಂದರೆ ಪರ್ಣಮಯ್ಯಧಿಕರಣದಲ್ಲಿ ವಿಚಾರ ಮಾಡುತ್ತಿರುವ 'ನ ಸ ಪಾಪಂ ಶ್ಲೋಕಂ ಶೃಣೋತಿ' ಎಂಬಲ್ಲಿ ಕಾಮಪದದ ಉಲ್ಲೇಖವಿಲ್ಲದ ಕಾರಣ ಸಾಧ್ಯಸಮರ್ಪಕವಾಗುವುದಿಲ್ಲ. ಈ ವಾಕ್ಯವು ಸಾಧ್ಯಸಮರ್ಪಕವಾಗದಿದ್ದರೆ ಔದುಂಬರಾಧಿಕರಣದಲ್ಲಿ ವಿಚಾರ ಮಾಡಲ್ಪಟ್ಟ 'ಯಸ್ಯ ಪರ್ಣಮಯೀ ಜುಹೂರ್ಭವತಿ' ಎಂಬಲ್ಲಿ ವಿಧಿಪ್ರತ್ಯಯವೆನಿಸಿದ ಲಿಂಜಾದಿಗಳಿಲ್ಲದ ಕಾರಣ ಸಾಧನ ಸಮರ್ಪಕವಾಗುವುದಿಲ್ಲ. ಆದ್ದರಿಂದಲೇ ಇದು ಸಾಧನವೆನಿಸುವುದಿಲ್ಲ. ಹೀಗೆ ಸಾಧ್ಯವು ಸಾಧನವನ್ನು ಬಿಟ್ಟು ಇರಲಾರದು. ಅಪಾಪಶ್ಲೋಕತ್ರವಣಾದಿಗಳು ಸಾಧ್ಯವೆಂದು ನಿರ್ಣಯವಾದರೆ ಮಾತ್ರ ಪರ್ಣಮಯತ್ವಾದಿಗಳು ಸಾಧನವೆನಿಸುತ್ತವೆ. ಹೀಗೆ ಪರಸ್ಪರ ಉಪಜೀವ್ಯೋಪಜೀವಕಭಾವವಿದ್ದರೂ ಸಹ ಅಧಿಕರಣಗಳಿಗೆ ಭೇದವನ್ನು ಮೀಮಾಂಸಕರು ಒಪ್ಪಿದ್ದಾರೆ.

ಇದರಂತೆ ನಮ್ಮ ಮತದಲ್ಲಿಯೂ ಸಹ ಅಂತಿಮಪ್ರಾಣಾಧಿಕರಣದ ವಿಷಯವಾಕ್ಯ ಹಾಗೂ ಸರ್ವಗತತ್ವಾಧಿಕರಣದ ವಿಷಯವಾಕ್ಯ ಒಂದೇ ಪ್ರಕರಣದಲ್ಲಿದ್ದರೂ ಮತ್ತು ಅವುಗಳಿಗೆ ಪರಸ್ಪರ ಉಪಜೀವ್ಯೋಪಜೀವಕಭಾವವಿದ್ದರೂ ಸಹ ಬೇರೆ ಬೇರೆ ಅಧಿಕರಣಗಳೆಂದು ಒಪ್ಪಬಹುದು. ಆನಂದಮಯಾಧಿಕರಣದಲ್ಲಿರುವ 'ತದ್ಧೇತುವ್ಯಪದೇಶಾಚ್ಚ' ಎಂಬ ಸೂತ್ರವು ಹೊಸದಾಗಿ ಏನನ್ನೂ ಸಮನ್ವಯ ಮಾಡದ ಕಾರಣ ಈ ಎಲ್ಲಾ ವಿಚಾರಗಳು ಕೇವಲ ದಿಕ್‌ಪ್ರದರ್ಶನ.

ಪ್ರಕಾಶಃ –

ನನು ''ಪ್ರಾಣಸ್ತಥಾ'' ಇತ್ಯಾದಾವಪಿ ಭೇದೋ ನ ಸ್ಯಾದಿತ್ಯತೋ ನೈಕಪ್ರಕರಣಗತ-ವಾಕ್ಯತ್ವಮಧಿಕರಣೈಕ್ಯಪ್ರಯೋಜಕಂ ಯಥೈಕವಾಕ್ಯವಿಷಯತ್ವೇऽಪಿ ಪೂರ್ವೋತ್ತರಭಾಗವಿಷಯತ್ವೇನ ಭೇದಸ್ತಥೈಹೈಕಪ್ರಕರಣೇऽಪಿ ಪೂರ್ವೋತ್ತರವಾಕ್ಯವಿಶೇಷವಿಷಯತ್ವೇನ ಭೇದಸ್ಯಾದಿತ್ಯಾಹ – ಕಿಞ್ಚೇತಿ ।

ವಿವರಣೆ - ಆಕ್ಷೇಪ - ಅಂತಿಮಪ್ರಾಣಾಧಿಕರಣಕ್ಕೂ ಸರ್ವಗತತ್ವಾಧಿಕರಣಕ್ಕೂ ಭೇದವನ್ನು ದ್ವೈತಿಗಳು ಹೇಳುತ್ತಾರೆ. ಆದರೆ ಎರಡು ವಿಷಯವಾಕ್ಯಗಳು ಒಂದೇ ಪ್ರಕರಣದಲ್ಲಿರುವುದರಿಂದ ಆ ಎರಡು ಅಧಿಕರಣಗಳಿಗೆ ಭೇದವು ಇರಬಾರದಲ್ಲವೇ?

ಸಮಾಧಾನ - ಇದು ತಪ್ಪು. ಏಕಾಧಿಕರಣ್ಯಕ್ಕೆ ಒಂದೇ ಪ್ರಕರಣದಲ್ಲಿರುವ ವಾಕ್ಯವನ್ನು ವಿಚಾರ ಮಾಡುವಿಕೆಯು ಪ್ರಯೋಜಕವಲ್ಲ. ಏಕೆಂದರೆ ಪೂರ್ವಮೀಮಾಂಸೆಯಲ್ಲಿ ಒಂದೇ ವಾಕ್ಯವು ವಿಷಯವಾಗಿದ್ದರೂ ಆ ವಾಕ್ಯದ ಹಿಂದಿನ ಮುಂದಿನ ಭಾಗಗಳನ್ನು ವಿಚಾರ ಮಾಡುವ ಪ್ರಯುಕ್ತ ಅಧಿಕರಣಭೇದವನ್ನು ಒಪ್ಪಲಾಗಿದೆ. ಅದರಂತೆ ಪ್ರಕೃತದಲ್ಲಿಯೂ ಒಂದೇ ಪ್ರಕರಣದಲ್ಲಿರುವ ಬೇರೆ ಬೇರೆ ವಾಕ್ಯಗಳನ್ನು ವಿಚಾರ ಮಾಡಲು ಹೊರಟಿರುವುದರಿಂದ ಆತ್ಮತ್ವಾಧಿಕರಣಕ್ಕೂ ಗುಹಾಧಿಕರಣಕ್ಕೂ ಭೇದವು ಬರಬೇಕಾದೀತೆಂದು 'ಕಂಚ' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – द्वे अप्यधिकरणे प्राक् पादान्त्यप्राणाधिकरणे प्रपञ्चिते ।

ननु ''विधिर्वा स्यादपूर्वत्वाद्वादमात्रं ह्यनर्थकं'' इत्याद्याध्यायस्यस्थद्वितीयपादीय औदुम्बराधिकरणे ''औदुम्बरो यूपो भवति'' इत्यादिवाक्यमुदाहृतम् शाबरभाष्ये । ''द्रव्यसंस्कारकर्मसु परार्थत्वात्फलश्रुतिरर्थवादः'' इति चतुर्थपादीयपर्णमय्यधिकरणे ''यस्य पर्णमयी जुहूः'' इति । तथा चैकवाक्यविषयत्वं नेत्यतः, इदं तत्र तच्चात्रेत्युभयमुभयत्रोदाहरणमिति तन्त्रवार्तिकोक्तमेवाह – **औदुम्बराधिकरणेऽपीति ।**

ಔದುಂಬರಾಧಿಕರಣವನ್ನು ಮತ್ತು ಪರ್ಣಮಯ್ಯಧಿಕರಣವನ್ನು ಹಿಂದೆ ಅಂತಿಮಪ್ರಾಣಾಧಿಕರಣದಲ್ಲಿ ವಿವರಿಸಿದ್ದಾಗಿದೆ.

ಆಕ್ಷೇಪ - ಗ್ರಂಥಕಾರರು ಹೇಳಿದ್ದು ಸರಿಯಲ್ಲ ''ವಿಧಿರ್ವಾ ಸ್ಯಾದಪೂರ್ವತ್ವಾದ್ವಾದಮಾತ್ರಂ ಹ್ಯನರ್ಥಕಂ'' ಎಂಬ ಮೊದಲನೇ ಅಧ್ಯಾಯದಲ್ಲಿ ಎರಡನೇ ಪಾದಕ್ಕೆ ಬರುವ ಔದುಂಬರಾಧಿಕರಣದಲ್ಲಿ ''ಔದುಂಬರೋ ಯೂಪೋ ಭವತಿ'' ಎಂಬ ವಾಕ್ಯವನ್ನು ಉದಾಹರಿಸಲಾಗಿದೆ. ಮತ್ತು ಶಾಬರ ಭಾಷ್ಯದಲ್ಲಿ ''ದ್ರವ್ಯಸಂಸ್ಕಾರಕರ್ಮಸು ಪರಾರ್ಥತ್ವಾತ್ಫಲಶ್ರುತಿರರ್ಥವಾದಃ'' ಎಂಬ ನಾಲ್ಕನೆಯ ಅಧ್ಯಾಯದ ಮೂರನೇ ಪಾದದ ಪರ್ಣಮಯ್ಯಧಿಕರಣದಲ್ಲಿ ''ಯಸ್ಯ ಪರ್ಣಮಯೀ ಜುಹೂಃ'' ಎಂಬುದನ್ನು ವಿಷಯವಾಕ್ಯವೆಂದು ಹೇಳಲಾಗಿದೆ. ಹೀಗಿರುವಾಗ ಎರಡೂ ಅಧಿಕರಣಗಳಿಗೆ ಎರಡೂ ವಾಕ್ಯಗಳು ವಿಷಯವಾಗಿವೆಯೆಂದು ಹೇಗೆ ಹೇಳುತ್ತೀರಿ?

ಸಮಾಧಾನ - ತಂತ್ರವಾರ್ತಿಕದಲ್ಲಿ ''ಇದಂ ತತ್ರ ತಚ್ಚಾತ್ರೇತ್ಯುಭಯಮುಭಯೋತ್ಪೋದಾಹರಣಂ'' ಎಂಬುದಾಗಿ ಎರಡೂ ಅಧಿಕರಣಗಳಿಗೆ ಎರಡನ್ನೂ ವಿಷಯವಾಕ್ಯವೆಂದು ಸ್ಪಷ್ಟವಾಗಿ ಹೇಳಲಾಗಿದೆ. ಅದನ್ನೇ 'ಔದುಂಬರಾಧಿಕರಣೇಪಿ' ಎಂದು ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – न केवलं पर्णमय्यधिकरण इत्यपेरर्थः । एवमग्रेऽपि ।

ಸಾಧನೇತಿ । ''औदुम्बरो यूपो भवति'' ''पर्णमयी जुहूर्भवति'' इत्यंशः । 'वार्तिके' औदुम्बराधिकरणवार्तिके । ''एकस्यैव न्यायस्य क्वचित्कश्चिदंशः परिशोध्यत इति पुनरारम्भः'' इत्यादिनेत्यर्थः ।

'ಔದುಂಬರಾಧಿಕರಣೇಪಿ' ಎಂಬಲ್ಲಿರುವ 'ಅಪಿ' ಶಬ್ದಕ್ಕೆ 'ಕೇವಲ ಪರ್ಣಮಯ್ಯಧಿಕರಣದಲ್ಲಷ್ಟೇ ಅಲ್ಲ' ಎಂಬರ್ಥವನ್ನು ತಿಳಿಯಬೇಕು. ಇದರಂತೆ 'ಪರ್ಣಮಯ್ಯಧಿಕರಣೇಪಿ' ಎಂಬಲ್ಲಿರುವ 'ಅಪಿ' ಶಬ್ದದಿಂದ ಔದುಂಬರಾಧಿಕರಣದಲ್ಲಷ್ಟೇ ಅಲ್ಲ ಎಂದು ತಿಳಿಯಬೇಕು.

'ಸಾಧನಪ್ರತಿಪಾದಕಃ' ಎಂದರೆ ''ಔದುಂಬರೋ ಯೂಪೋ ಭವತಿ'' ''ಪರ್ಣಮಯೀ ಜುಹೂರ್ಭವತಿ'' ಎಂಬ ಯಜ್ಞಸಾಧನವನ್ನು ಪ್ರತಿಪಾದಿಸುವ ಆಂಶವು ಎಂದರ್ಥ. 'ವಾರ್ತಿಕೇ' ಎಂಬ ಪದಕ್ಕೆ ಔದುಂಬರಾಧಿಕರಣದ 'ವಾರ್ತಿಕ' ಗ್ರಂಥದಲ್ಲಿ ಎಂದರ್ಥ. ''ಏಕಸ್ಯೈವ ನ್ಯಾಯಸ್ಯ ಕ್ವಚಿತ್ಕಶ್ಚಿದ್ದಂಶಃ'' ಒಂದೇ ನ್ಯಾಯವಾಗಿದ್ದರೂ ಒಂದು ಭಾಗದ ಪರಿಶೋಧನೆಯನ್ನಷ್ಟೇ ಮಾಡಿದ್ದರಿಂದ ಮತ್ತೊಂದು ಅಧಿಕರಣವು ಹೊರಟಿದೆ. ಇತ್ಯಾದಿಯಾಗಿ ವಾರ್ತಿಕದಲ್ಲಿ ಹೇಳಲಾಗಿದೆ.

प्रकाशः – अस्तु ततः किमित्यत आह – एवञ्चेति । नात्रोपजीव्यत्वाद्यस्ति, साधनपरत्वबोधकविधिप्रत्ययस्येवेह विधेरभावादेव पूर्वभागस्य साधनपरत्वाभाव-बोधनासम्भवेन तद्बोधायोत्तरभागस्य साध्यपरत्वाभावस्यानुपजीव्यत्वादित्यतः, ।

ಒಂದೇ ವಿಷಯವಾಕ್ಯವನ್ನು ಪೂರ್ವಮೀಮಾಂಸೆಯಲ್ಲಿ ಎರಡು ಅಧಿಕರಣಗಳಿಂದ ವಿಚಾರ ಮಾಡಿದ್ದಾರೆಂದು ತಿಳಿದಿದ್ದಾಯಿತು. ಮುಂದೇನು ? ಎಂಬ ಪ್ರಶ್ನೆಗೆ 'ಏವಂಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಆಕ್ಷೇಪ - ನೀವು ಉದಾಹರಿಸಿದ ಪೂರ್ವಮೀಮಾಂಸಾಧಿಕರಣದ ವಿಷಯವಾಕ್ಯಗಳಿಗೆ ಉಪಜೀವ್ಯೋಪಜೀವಕಭಾವವೇ ಇರುವುದಿಲ್ಲ. ಏಕೆಂದರೆ ಸಾಧನ ಪರತ್ವವನ್ನು ತಿಳಿಸುವ ವಿಧಿಪ್ರತ್ಯಯವು 'ಜುಹೂರ್ಭವತಿ' ಎಂಬಲ್ಲಿ ಕಾಣಿಸುತ್ತಿಲ್ಲ. ಆದ್ದರಿಂದ ಪೂರ್ವವಾಕ್ಯವನ್ನು ಸಾಧನಪರವೆಂದು ಹೇಳಲಾಗದು. ಹೀಗೆಯೇ ಸಾಧನಪರತ್ವಾಭಾವವನ್ನು ತಿಳಿಯಲು ಬರುವಾಗ 'ನ ಸ ಪಾಪಂ ಶ್ಲೋಕಂ ಶೃಣೋತಿ' ಎಂಬ ಮುಂದಿನ ಭಾಗವು ಸಾಧ್ಯಪರವಾಗಿರುವುದಿಲ್ಲ ಎಂಬುದಾಗಿ ತಿಳಿಯುವ ಅವಶ್ಯಕತೆ ಇಲ್ಲ. ಅಂದರೆ ಮುಂದಿನ ವಾಕ್ಯವು ಸಾಧ್ಯಪರವಲ್ಲದ ಕಾರಣ ಹಿಂದಿನ ವಾಕ್ಯವು ಸಾಧನಪರವಲ್ಲ ಎಂದು ಹೇಳಿದ್ದಲ್ಲಿ ಉಪಜೀವ್ಯೋಪಜೀವಕಭಾವವನ್ನು ತಿಳಿಯಬಹುದಿತ್ತು. ಆದರೆ ವಿಧಿಪ್ರತ್ಯಯವಿಲ್ಲದ ಕಾರಣದಿಂದಲೇ ಹಿಂದಿನ ವಾಕ್ಯವು ಸಾಧನಪರವಲ್ಲವೆಂದು ತಿಳಿಯುತ್ತಿದೆ.

प्रकाशः – तदुपपादयति – नहीति । पूर्वभागस्य साधनपरत्वं न विधिप्रत्ययबलात्कल्प्यते, तदभावात्, किन्तूत्तरभागस्य साध्यपरत्वमुपजीव्येव, साध्यस्य साधनापेक्षत्वात् । एवञ्च तस्य ''पशुकामः'' इत्यादाविव कामपदरहितत्वादिना पर्णमय्यधिकरणन्यायेन साध्यपरत्वाभावसिद्धेः पूर्वभागस्यापि साधनपरत्वाभावः सिध्यतीति सिद्धान्ते उपजीव्योपजीवकभाव इत्यर्थः ।

ಸಮಾಧಾನ - ಈ ಆಕ್ಷೇಪಕ್ಕೆ 'ನಹಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಹಿಂದಿನ ಭಾಗವು ಸಾಧನಪರವಾಗಿದೆಯೆಂದು ವಿಧಿಪ್ರತ್ಯಯದ ಬಲದಿಂದ ನಾವು ಕಲ್ಪಿಸುತ್ತಿಲ್ಲ. ಏಕೆಂದರೆ ಇಲ್ಲಿ ವಿಧಿಪ್ರತ್ಯಯವೇ ಕಾಣಿಸುತ್ತಿಲ್ಲ. ಹೊರತಾಗಿ ಮುಂದಿನ ಭಾಗವು ಸಾಧ್ಯಸಮರ್ಪಕವಾಗಿದೆ. ಅದನ್ನು ಉಪಜೀವಿಸಿ ಹಿಂದಿನ ವಾಕ್ಯವು ಸಾಧನಸಮರ್ಪಕವಾಗಿದೆಯೆಂದು ಹೇಳುತ್ತಿದ್ದೇವೆ. ಏಕೆಂದರೆ ಸಾಧ್ಯಕ್ಕೆ ಸಾಧನವು ಅಪೇಕ್ಷಿತವಾಗಿರುವುದರಿಂದ. ಆದ್ದರಿಂದ ''ಪಶುಕಾಮಃ'' ಎಂಬಲ್ಲಿ ಕಾಮಪದವಿದ್ದಂತೆ ಪ್ರಕೃತ ವಿಷಯವಾಕ್ಯದಲ್ಲಿ ಕಾಮಪದವು ಕೇಳಿಸುತ್ತಿಲ್ಲ. ಆದ್ದರಿಂದ ಪರ್ಣಮಯ್ಯಧಿಕರಣದ ನ್ಯಾಯದಿಂದ 'ನ ಸ ಪಾಪಂ ಶ್ಲೋಕಂ ಶೃಣೋತಿ' ಎಂಬುದು ಸಾಧ್ಯಪರವಾಗುವುದಿಲ್ಲವೆಂದು ಸಿದ್ಧವಾಗುತ್ತದೆ. ಇದರಿಂದಲೇ ಪೂರ್ವಭಾಗವೂ ಸಹ ಸಾಧನಪರವಲ್ಲವೆಂದು ಸಿದ್ಧವಾಗುತ್ತದೆ. ಹೀಗೆ ಸಿದ್ಧಾಂತದಲ್ಲಿ ಉಪಜೀವ್ಯೋಪಜೀವಕಭಾವವನ್ನು ಮೀಮಾಂಸಕರು ಹೇಳಿದ್ದಾರೆ.

ಪ್ರಕಾಶಃ – ಬಲಾದಿತಿ । ವಿಧಿಪ್ರತ್ಯಯಾಭಾವेऽಪೀತ್ಯರ್ಥಃ । ಚತುಸ್ಸೂತ್ರ್ಯಾ ಭಿನ್ನಾಧಿಕರಣ-ತ್ವಸಾಧನೇನಾನ್ಯದಪಿ ಫಲಮಾಹ – ಏವಞ್ಚೇತಿ ।

ನನು ತರ್ಹಿ ''ತದ್ಧೇತ್ವಪದೇಶಾತ್'' ''ಮಾನ್ತ್ರವರ್ಣಿಕಮೇವ ಚ ಗೀಯತೇ'' ಇತ್ಯಾದೇರಪಿ ಭಿನ್ನಾಧಿಕರಣತಾ ಚ ಸ್ಯಾದಿತ್ಯುಕ್ತಮಿತ್ಯತ ಆಹ – ತದ್ಧೇತ್ವಿತಿ । ಅಧಿಕಾಶಙ್ಕಾಪ್ರಾಪಕಹೇತು-ವಿಶೇಷಾಭಾವಾದಿರಾದಿಪದಾರ್ಥಃ ।

'ಬಲಾತ್' ಎಂಬ ಪದಕ್ಕೆ ವಿಧಿಪ್ರತ್ಯಯವಿಲ್ಲದಿದ್ದರೂ ಸಹ ಎಂದರ್ಥ. ಹೀಗೆ ನಾಲ್ಕು ಸೂತ್ರಗಳಿಗೆ ಭಿನ್ನಾಧಿಕರಣತ್ವವನ್ನು ಸಾಧನೆ ಮಾಡಿದ್ದರಿಂದ. ಈಗ ಮತ್ತೊಂದು ಬಗೆಯ ಪ್ರಯೋಜನವನ್ನು 'ಏವಂಚ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಹಾಗಾದರೆ ಆನಂದಮಯಾಧಿರಕಣದಲ್ಲಿ ''ತದ್ಧೇತುವ್ಯಪದೇಶಾತ್'' ''ಮಾಂತ್ರವರ್ಣಿಕಮೇವ ಚ ಗೀಯತೇ'' ಇತ್ಯಾದಿ ಸೂತ್ರಗಳಿಗೂ ಸಹ ಭಿನ್ನಾಧಿಕರಣತ್ವವು ಏಕೆ ಬರುವುದಿಲ್ಲ ? ಎಂಬ ಪ್ರಶ್ನೆಗೆ 'ತದ್ಧೇತು' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ. ಆದಿಪದದಿಂದ ಅಧಿಕಾಶಂಕಾಪ್ರಾಪಕವಾದ ಹೇತುವಿಶೇಷವು ಇಲ್ಲದ್ದರಿಂದಲೂ ಎಂಬರ್ಥವನ್ನು ತಿಳಿಯಬೇಕು.

ಪ್ರಕಾಶಃ – ಯಚ್ಚೋಕ್ತಂ ''ಅತ್ತಾ'' ಇತಿ ಸೂತ್ರಿತೇ ''ಯಸ್ಯ ಬ್ರಹ್ಮ ಚ'' ಇತ್ಯಾದಿವಾಕ್ಯಂ ವಿಷಯ ಇತಿ, ತನ್ನ, ''ಸರ್ವಂ ವಾ ಅತ್ತಿ'' ಇತಿ ಮದೀಯವಿಷಯವಾಕ್ಯೇ ಸೂತ್ರೇ ಪ್ರತಿಜ್ಞಾತಸ್ಯಾತ್ತುಃ ಹೇತ್ಕೃತಸ್ಯ ಚರಾಚರಗ್ರಹಣಸ್ಯ ಚ ಸಾಕ್ಷಾದುಪಾದಾನೇನ ''ಯಸ್ಯ'' ಇತಿ ವಾಕ್ಯೇ ತದಭಾವೇನೈತಸ್ಯ ಸೂತ್ರಾನಾನುಗುಣ್ಯಾತ್ ।

ಸನ್ನಿಧಿಮಾತ್ರೇಣ ಪ್ರಕರಣವಿಚ್ಛೇದಾಶಙ್ಕಾಯೋಗಸ್ಯೋಕ್ತತ್ವೇನ ''ಪ್ರಕರಣಾಚ್ಚ'' ಇತ್ಯುಕ್ತ-ಪ್ರಕರಣವಿಚ್ಛೇದಾಶಙ್ಕಾಸಮಾಧಾನಾಯ ''ಗುಹಾಂ'' ಇತ್ಯಾದೇರನಾರಭ್ಯತ್ವಾಚ್ಚ ।

ಇನ್ನು ರಾಮಾನುಜರು 'ಅತ್ತಾ ಚರಾಚರ' ಎಂಬೆರಡು ಸೂತ್ರಗಳಿಗೆ 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯವನ್ನು ವಿಷಯವನ್ನಾಗಿ ಹೇಳಿದ್ದೂ ಸಹ ತಪ್ಪು. ಏಕೆಂದರೆ ನಾವು ಹೇಳುವಂತೆ ''ಸರ್ವಂ ವಾ ಅತ್ತಿ'' ಎಂಬುದನ್ನು ವಿಷಯವಾಕ್ಯವೆಂದಾಗ ಸೂತ್ರದಲ್ಲಿರುವ 'ಅತ್ತಾ' ಎಂಬ ಪ್ರತಿಜ್ಞೆಗೆ ಮತ್ತು ಚರಾಚರವೆಂಬ ಹೇತುವಿಗೆ ವಿಷಯವಾಕ್ಯದಿಂದ ನೇರವಾಗಿ ಸಂಗತಿಯು ದೊರೆಯುತ್ತದೆ. ಆದರೆ 'ಯಸ್ಯ ಬ್ರಹ್ಮ ಚ' ಎಂಬ ವಾಕ್ಯದಲ್ಲಿ ಅತ್ತೃತ್ವವಾಗಲಿ ಚರಾಚರಸಕಲಪದಾರ್ಥಗಳಾಗಲೀ ನೇರವಾಗಿ ತಿಳಿಯದ ಕಾರಣ ವಿಷಯವಾಕ್ಯಕ್ಕೆ ಸೂತ್ರದಿಂದ ಅನಾನುಗುಣ್ಯದೋಷ ಬರುತ್ತದೆ.

ಇನ್ನು ಸಾನ್ನಿಧ್ಯ ಪ್ರಮಾಣದಿಂದ ಬ್ರಹ್ಮಪ್ರಕರಣಕ್ಕೆ ವಿಚ್ಛೇದವನ್ನು ಆಶಂಕಿಸಿ ಪ್ರಕರಣಪ್ರಮಾಣದಿಂದ ಸಮಾಧಾನ ಹೇಳುವುದಕ್ಕಾಗಿ 'ಪ್ರಕರಣಾಚ್ಚ' ಎಂಬ ಸೂತ್ರವು ಹೊರಟಿದೆ ಎಂಬ ಎರಡನೆಯ ಸೂತ್ರವ್ಯಾಖ್ಯಾನವೂ ತಪ್ಪು. ಏಕೆಂದರೆ ಕೇವಲ ಸಾನ್ನಿಧ್ಯಪ್ರಮಾಣದಿಂದ ಬಲಿಷ್ಠವಾದ ಬ್ರಹ್ಮಪ್ರಕರಣಕ್ಕೆ ವಿಚ್ಛೇದವನ್ನು ಹೇಳಲು ಸಾಧ್ಯವಿಲ್ಲವೆಂದು ಈಗಾಗಲೇ ಸಮರ್ಥಿಸಿದ್ದರಿಂದ ಪ್ರಕರಣ ವಿಚ್ಛೇದಕ ಶಂಕೆಯನ್ನು ಪರಿಹರಿಸುವುದಕ್ಕಾಗಿ 'ಗುಹಾಂ ಪ್ರವಿಷ್ಟೌ' ಇತ್ಯಾದಿ ಸೂತ್ರಗಳು ಹೊರಟಿದ್ದೇ ವ್ಯರ್ಥವಾಗುತ್ತವೆ.

प्रकाशः – यदपि सिद्धान्ते गुहाविष्टत्वादिलिङ्गाज्जीवपरावुच्येते इति, तन्न, गुहाविष्टत्वस्य विष्ण्वेकप्रापकतायाः प्राक्समर्थितत्वेन तेन जीवप्राप्तेरयोगात् ।

या प्राणेन संविशत्यदितिर्देवतामयी ।
गुहां प्रविश्य तिष्ठन्ती या भूतेभिर्व्यजायते ।।

इत्यत्र ''महान्तं'' इति ब्रह्मप्रकरणेन ''व्यजायते'' इत्यादेर्मर्त्यादिरूपेण स्वात्मजननपरत्वोपपत्त्या प्रकरणविच्छेदकाभावेन च देवतामयत्वायोगेन चास्यापि ब्रह्मपरत्वेन जीवपरत्वायोगाच्च ।

ಮತ್ತು ರಾಮಾನುಜರು ಸಿದ್ಧಾಂತ ಮಾಡುವಾಗ ಗುಹಾಪ್ರವಿಷ್ಟತ್ವಾದಿ ಲಿಂಗಗಳಿಂದ ಜೀವಪರಮಾತ್ಮರು ಪ್ರತಿಪಾದ್ಯರೆಂದು ನಿರ್ಣಯವಾಗುತ್ತದೆಂದು ಹೇಳಿದ್ದರು. ಇದೂ ಸಹ ತಪ್ಪು. ಗುಹಾಪ್ರವಿಷ್ಟತ್ವವು ಕೇವಲ ವಿಷ್ಣುವಿನಲ್ಲೇ ಬರುತ್ತದೆ ಹೊರತು, ಜೀವನಲ್ಲಿ ಬರುವುದಿಲ್ಲವೆಂದು ಈ ಹಿಂದೆ ಸಮರ್ಥಿಸಿದ್ದರಿಂದ ಗುಹಾಪ್ರವಿಷ್ಟತ್ವ ಲಿಂಗವು ಬ್ರಹ್ಮಪ್ರಾಪಕವಾಗುತ್ತದೆ ಹೊರತು ಜೀವಪ್ರಾಪಕವಾಗುವುದಿಲ್ಲ.

ಯಾ ಪ್ರಾಣೇನ ಸಂವಿಶತ್ಯದಿತಿರ್ದೇವತಾಮಯೀ।
ಗುಹಾಂ ಪ್ರವಿಶ್ಯ ತಿಷ್ಠಂತೀ ಯಾ ಭೂತೇಭಿರ್ವ್ಯಜಾಯತೇ ॥

ಎಂಬ ವಾಕ್ಯವೂ ಸಹ ಜೀವಪ್ರಾಪಕವಾಗುವುದಿಲ್ಲ. ಏಕೆಂದರೆ ಈ ವಾಕ್ಯವು ''ಮಹಾಂತಂ ವಿಭುಂ'' ಎಂಬ ಬ್ರಹ್ಮ ಪ್ರಕರಣದಲ್ಲಿ ಪ್ರಾಪ್ತವಾಗಿದೆ. ಆದ್ದರಿಂದ ''ವ್ಯಜಾಯತ'' ಎಂಬ ಪದವು ಮತ್ಸ್ಯಾದಿರೂಪದಿಂದ ಪರಮಾತ್ಮನ ರೂಪಗಳ ಪ್ರಾದುರ್ಭಾವವನ್ನೇ ಹೇಳುತ್ತಿದೆ. ಆದ್ದರಿಂದ ಈ ಪದವು ಪ್ರಕರಣ ವಿಚ್ಛೇದಕವಾಗುವುದಿಲ್ಲ. ಮತ್ತು ಇದು ಜೀವಪ್ರಾಪಕವಾದರೆ ದೇವತಾಮಯಿ ಎಂಬ ಪದವು ಅಯುಕ್ತವಾಗುತ್ತದೆ. ಆದ್ದರಿಂದ ಈ ವಾಕ್ಯವನ್ನು ಬ್ರಹ್ಮಪರವೆಂದೇ ಹೇಳಬೇಕು.

प्रकाशः – उक्तरीत्या विष्णोरेव मुख्यभोक्तृत्वेन जीवे तदभावेन च्छत्रिन्यायेन लक्षणोत्त्ययोगाच्चेत्यादि ध्येयमिति भावेनाह – **दिगिति ।**

यद्वा – ''अनुकृतेः'' इत्यधिकरणस्य ''शब्दादेव'' इत्यधिकरणस्य चैकत्रत्य-वाक्यद्वयविषयकत्वेऽपि वक्ष्यमाणदिशोपजीव्यात्वादौ सत्यप्यव्यवहितत्वेऽपि भिन्नाधिकरणतोक्तेति भावेनाह – **दिगिति ।**

ಹಿಂದೆ ಹೇಳಿದ ಪ್ರಕಾರ ವಿಷ್ಣುವೇ ಮುಖ್ಯಭೋಕ್ತೃವಾಗುತ್ತಾನೆ ಹೊರತು ಜೀವನು ಆಗುವುದಿಲ್ಲ. ಆದ್ದರಿಂದ ಛತ್ರಿನ್ಯಾಯವನ್ನು ವಿವಕ್ಷಿಸಿ ಲಕ್ಷಣಾವನ್ನೂ ಸಹ ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಯಬೇಕು. ಈ ಅಭಿಪ್ರಾಯದಿಂದಲೇ ಗ್ರಂಥಕಾರರು 'दिक्' ಎಂಬ ಪದದಿಂದ दिक्प्रदर्शन ಮಾಡಿದ್ದಾರೆ.

ಅಥವಾ ''अनुकृतेः'' ಎಂಬ ಅಧಿಕರಣವು ಮತ್ತು 'शब्दादेव' ಎಂಬ ಅಧಿಕರಣವು ಒಂದೇ ಪ್ರಕರಣದಲ್ಲಿರುವ ವಾಕ್ಯವನ್ನು ವಿಚಾರ ಮಾಡುತ್ತಿದ್ದರೂ ಮತ್ತು ಪರಸ್ಪರ ಉಪಜೀವ್ಯೋಪಜೀವಕ ಭಾವವಿದ್ದು ಎರಡೂ ಅಧಿಕರಣಗಳು ಜೊತೆಗೆ ಇದ್ದರೂ ಸಹ ಬೇರೆ ಬೇರೆ ಅಧಿಕರಣಗಳೆಂದೇ ಪರಿಗಣಿಸಬೇಕು. ಇಲ್ಲಿಯ ತನಕ ಉಪಪಾದಿಸಿದ ಕಾರಣವನ್ನೆಲ್ಲಾ ಅಲ್ಲಿಯೂ ಅನುಸಂಧಾನ ಮಾಡಿಕೊಳ್ಳಬೇಕೆಂಬ ಅಭಿಪ್ರಾಯದಿಂದ ಗ್ರಂಥಕಾರರು 'दिक्' ಎಂಬಪದದಿಂದ 'दिक्प्रदर्शन' ಮಾಡಿದ್ದಾರೆ.

गुरुराजीयम् – किञ्चैकप्रकरणस्थवाक्यविषयत्वे उपजीव्योपजीवकभावे चाधिकरणभेद इति किमस्मिंस्तन्त्रे तथादृष्टत्वादित्युच्यते किं पूर्वतन्त्रे । नाद्य इत्याह – **किञ्चेति** ।। न द्वितीय इत्याह – **किञ्चौदुम्बराधिकरणेऽपीति** ।। पूर्वभागः ''औदुम्बरो यूपो भवति'' ''यस्य पर्णमयी जुहूर्भवति'' इत्येवंरूप इत्यर्थः । साध्यभागः ऊर्ग्वा उदुम्बर इत्यादिरूपः । न पापं श्लोकं शृणोतीत्येवंरूप इत्यर्थः । उपजीव्योपजीवकभावमुपपादयति – **नहीति** ।।

नन्वेकप्रकरणस्थवाक्यविषयत्वे उपजीव्योपजीवकभावे च सति यद्यधिकरणभेदस्तर्ह्यानन्दमयाधिकरणे तद्धेतुव्यपदेशादित्यस्याप्यधिकरणान्तरत्वं स्यादित्यत आह – **तद्धेत्विति** ।। **समन्वेतव्यान्तराभावादिनेति** ।। विकारशब्दब्रह्मशब्दादिपूर्वोत्तर-पक्षीययुक्तीनां साधारण्येन चेत्यादिशब्दार्थः ।

ಸಾರ

ಒಂದೇ ಪ್ರಕರಣದಲ್ಲಿರುವ ವಿಷಯವಾಕ್ಯವನ್ನು ವಿಚಾರ ಮಾಡಿದರೆ ಅಥವಾ ಪರಸ್ಪರ ಆಯಾ ಎರಡು ವಾಕ್ಯಗಳಿಗೆ ಪರಸ್ಪರ ಉಪಜೀವ್ಯೋಪಜೀವಕಭಾವವಿದ್ದರೆ ಪಾದ ಅಥವಾ ಅಧಿಕರಣಗಳಿಂದ ತಡೆಯಿಲ್ಲದಿದ್ದರೆ ಅಧಿಕರಣ ಭೇದವನ್ನು ಮಾಡಬಾರದೆಂಬುದು ರಾಮಾನುಜರ ಸಮರ್ಥನೆ. ಇಲ್ಲಿಯ ತನಕ ಒಂದೇ ಪ್ರಕರಣದಲ್ಲಿರುವಿಕೆಯು ಅಧಿಕರಣ ಭೇದಕ್ಕೆ ವಿರೋಧವಲ್ಲವೆಂದು ಸಮರ್ಥಿಸಿದೆವು. ಈಗ ಪೂರ್ವಮೀಮಾಂಸೆಯ ದೃಷ್ಟಾಂತದಿಂದ ಒಂದೇ ವಾಕ್ಯವನ್ನು ಅನೇಕ ಅಧಿಕರಣದಲ್ಲಿ ವಿಚಾರ ಮಾಡುವುದೂ ಸಹ ತಪ್ಪಲ್ಲವೆಂದು ಸಮರ್ಥಿಸುತ್ತಿದ್ದಾರೆ.

ಔದುಂಬರಾಧಿಕರಣದಲ್ಲಿ 'ಔದುಂಬರೋ ಯೂಪೋ ಭವತಿ' ಎಂಬ ವಾಕ್ಯವನ್ನು ವಿಚಾರ ಮಾಡಿದಂತೆ 'ಯಸ್ಯ ಪರ್ಣಮಯಿ ಜೂಹೂರ್ಭವತಿ' ಎಂಬ ವಾಕ್ಯವನ್ನೂ ಸಹ ವಿಚಾರ ಮಾಡಿದ್ದಾರೆ. ಈ ಎರಡು ವಾಕ್ಯಗಳನ್ನೇ ಪುನಃ ಪರ್ಣಮಯ್ಯಧಿಕರಣದಲ್ಲಿಯೂ ವಿಚಾರ ಮಾಡುತ್ತಾರೆ. ಈ ವಾಕ್ಯಗಳಿಗೆ ಪರಸ್ಪರ ಉಪಜೀವ್ಯೋಪಜೀವಕಭಾವವಿದೆ. ಆದರೂ ಒಂದೇ ವಾಕ್ಯಗಳನ್ನು ವಿಚಾರ ಮಾಡಲು ಎರಡು ಅಧಿಕರಣಗಳು ಅನಿವಾರ್ಯವೆಂದು ಮೀಮಾಂಸಕರು ಒಪ್ಪಿದ್ದಾರೆ. ಹೀಗಿರುವಾಗ ಒಂದು ಪ್ರಕರಣದಲ್ಲಿರುವ ಬೇರೆ ಬೇರೆ ವಾಕ್ಯಗಳನ್ನು ವಿಚಾರ ಮಾಡಲು ಎರಡು ಅಧಿಕರಣಗಳು ಹೊರಡುವುದರಲ್ಲಿ ಏನೂ ತಪ್ಪಿಲ್ಲ.

ಆದ್ದರಿಂದಲೇ ನಮ್ಮ ಸಿದ್ಧಾಂತದಲ್ಲಿ ಅಂತಿಮಪ್ರಾಣಾಧಿಕರಣ ಹಾಗೂ ಸರ್ವಗತತ್ವಾಧಿಕರಣವು ಒಂದೆ ಪ್ರಕರಣದಲ್ಲಿರುವ ಎರಡು ವಾಕ್ಯವನ್ನು ವಿಚಾರ ಮಾಡುತ್ತಿದ್ದರೂ ಅವುಗಳಿಗೆ ಪರಸ್ಪರ ಉಪಜೀವ್ಯೋಪಜೀವಕಭಾವವಿದ್ದರೂ ಅಧಿಕರಣದ ಭೇದವು ತಪ್ಪಾಗುವುದಿಲ್ಲ. ಮುಂದೆಯೂ ಸಹ 'ಆನುಕೃತೇಃ' ಎಂಬ ಅಧಿಕರಣದಲ್ಲಿ ಮತ್ತು 'ಶಬ್ದಾದೇವ' ಎಂಬ ಅಧಿಕರಣದಲ್ಲಿ ಒಂದೇ ಪ್ರಕರಣದಲ್ಲಿರುವ ವಾಕ್ಯವನ್ನೇ ವಿಚಾರ ಮಾಡುವವರಿದ್ದೇವೆ.

• • • • •

ಪೂರ್ವಮೀಮಾಂಸಾಶಾಸ್ತ್ರದಿಂದ ಪುನರುಕ್ತಿ

तात्पर्यचन्द्रिका

यच्चोक्तम् – ''अत्ता'' इत्यत्र साधारणाकारं विहाय असाधारणाकारेण गौणार्थो वर्णनीय इति न्यायो व्युत्पादित इति,

तन्न, · ''प्रोद्गातृणाम्'' इत्यत्र षोडशर्त्विक्साधारणाकारं विहाय असाधारणाकारेण भाष्यकारमते उद्गातृप्रस्तोतृप्रतिहर्तृसुब्रह्मण्यानां चतुर्णामेव, वार्तिककारमते अपसुब्रह्मण्यानां त्रयाणामेव लक्षणायाम्तृतीये उक्तत्वात् ।

''मासमग्निहोत्रं जुहोति'' इत्यत्राग्निहोत्रशब्दस्य होमत्वादिसाधारणाकारं हित्वा सूर्यदेवताकत्वादिनित्याग्निहोत्रासाधारणाकारेणैव मासाग्निहोत्रे गौणातायाश्च सप्तमे उक्तत्वेन पुनरिह तस्यावक्तव्यत्वादिति ।।

ಅನುವಾದ - ಇನ್ನು ''अत्ता चराचरग्रहणात्'' ಎಂಬ ಸೂತ್ರದಲ್ಲಿ ಸಾಧಾರಣಾಕಾರವಾದ ಗೌಣಾರ್ಥವನ್ನು ಹೇಳದೆ ಅಸಾಧಾರಣಾಕಾರವಾದ ಗೌಣಾರ್ಥವನ್ನು ವರ್ಣಿಸಬೇಕೆಂಬ ನ್ಯಾಯವನ್ನು ಸಮರ್ಥಿಸಲಾಗಿದೆ ಎಂಬ ವಿಚಾರವೂ ಸಹ ತಪ್ಪು. ಏಕೆಂದರೆ ಪೂರ್ವಮೀಮಾಂಸೆಯ ''प्रोद्गात्रधिकरण''ದಲ್ಲಿ ಈ ವಿಚಾರವನ್ನು ನಿರಾಕರಿಸಿದ್ದಾರೆ -

''प्रोद्गात्रणाम्'' ಎಂಬಲ್ಲಿ ಬಹುವಚನವು ಕೇಳಿಸುತ್ತಿದೆ. ವಸ್ತುತಃ ಹಿಂದೆ ಹದಿನಾರು ಮಂದಿ ಋತ್ವಿಜರು ಪ್ರಸಕ್ತರಾಗಿದ್ದಾರೆ. ಅವರನ್ನು ಇಲ್ಲಿ ಬಹುವಚನದಿಂದ ಋತ್ವಿಕ್ತ್ವ ಎಂಬ ಸಾಧಾರಣ ಧರ್ಮದಿಂದ ಸ್ವೀಕರಿಸುತ್ತಿಲ್ಲ ಹೊರತಾಗಿ ಭಾಷ್ಯಕಾರ ಮತದಂತೆ ಧಂದೋಗತ್ವವೆಂಬ ಅಸಾಧಾರಣ ಧರ್ಮವನ್ನು ವಿವಕ್ಷಿಸಲಾಗಿದೆ. ಆದ್ದರಿಂದ ಹದಿನಾರು ಮಂದಿ ಋತ್ವಿಜರನ್ನು ವಿವಕ್ಷಿಸದೆ ಸಾಮಗಾನ ಮಾಡುವ ಉದ್ಗಾತೃ, ಪ್ರಸ್ತೋತೃ, ಪ್ರತಿಹರ್ತೃ ಮತ್ತು ಸುಬ್ರಹ್ಮಣ್ಯ ನಾಲ್ಕು ಮಂದಿಯನ್ನಷ್ಟೇ ಬಹುವಚನದಿಂದ ವಿವಕ್ಷಿಸಬೇಕು. ಹೀಗೆ ಮೂರನೆಯ ಅಧ್ಯಾಯದಲ್ಲಿ ನಿರ್ಣಯಿಸಿದ್ದಾರೆ.

''मासं अग्निहोत्रं जुहोति'' ಎಂಬ ವಾಕ್ಯವು ನಿತ್ಯಾಗ್ನಿಹೋತ್ರದ ವಿಕೃತಿಯಾಗವನ್ನು ವಿಧಿಸುತ್ತಿದೆ. ಇಲ್ಲಿರುವ ಅಗ್ನಿಹೋತ್ರ ಶಬ್ದದಿಂದ ಯಾವುದೇ ಅಗ್ನಿಹೋತ್ರವನ್ನೂ ಸಹ ಸಾಧಾರಣಾಕಾರವಾಗಿ ಸ್ವೀಕರಿಸಬಹುದು. ಆದರೆ ಇದನ್ನು ಬಿಟ್ಟು ಸೂರ್ಯದೇವತಾಕತ್ವ ರೂಪದಿಂದ ನಿತ್ಯಾಗ್ನಿಹೋತ್ರದ ಅಸಾಧಾರಣಾಕಾರದಿಂದಲೇ ಮಾಸಾಗ್ನಿ ಹೋತ್ರದಲ್ಲಿ ಗೌಣಾರ್ಥವನ್ನು ಸ್ವೀಕರಿಸಬೇಕು. ಅಂದರೆ ಬೇರೆ ಅಗ್ನಿಹೋತ್ರಗಳನ್ನು ಮಾಡಬಾರದು. ಪ್ರಕೃತಿಯಾಗದಲ್ಲಿ ಪ್ರಸಕ್ತವಾದ ಸೂರ್ಯದೇವತಾಕವಾದ ಅಗ್ನಿಹೋತ್ರವನ್ನೇ ಮಾಡಬೇಕೆಂದರ್ಥ. ಹೀಗೆ ಪೂರ್ವಮೀಮಾಂಸೆಯ ಏಳನೆಯ ಅಧ್ಯಾಯದಲ್ಲಿ ಸಾಧಿಸಿದ್ದಾರೆ.

ಪೂರ್ವಮೀಮಾಂಸಾಶಾಸ್ತ್ರವು ಬ್ರಹ್ಮಮೀಮಾಂಸಾಶಾಸ್ತ್ರದ ಪೂರ್ವಭಾಗವೆಂದು ರಾಮಾನುಜರು ಒಪ್ಪಿದ್ದಾರೆ. ಹೀಗಿರುವಾಗ ಸಾಧಾರಣಾಕಾರವಾದ ಗೌಣಾರ್ಥವನ್ನು ಬಿಟ್ಟು ಅಸಾಧಾರಣಾಕಾರವೆಂಬ ಗೌಣಾರ್ಥವನ್ನು ಸ್ವೀಕರಿಸಬೇಕೆಂಬ ವಿಚಾರವು ಮೊದಲು ಪೂರ್ವಮೀಮಾಂಸೆಯಲ್ಲೇ ನಿರ್ಣಯವಾಗಿದೆ. ಪುನಃ ಇಲ್ಲಿಯೂ ಅದನ್ನೇ ಸಮರ್ಥಿಸಿದರೆ ಪುನರುಕ್ತಿ ಬರುತ್ತದೆಂದು ಅಭಿಪ್ರಾಯ.

प्रकाशः –

यत्रेति । ''अत्ता'' इति सूत्रे ब्रह्मक्षत्रोपलक्षितचराचरस्य मृत्यूपसेचनत्व-विशेषणेनादनीयत्वलाभात्तत्सूचितस्य कृत्स्नात्तृत्वस्य संहर्तृत्वरूपत्वात्, अत्ता विष्णुरित्युक्ते मृत्यूपसेचनत्वस्य मृत्युवशत्वाभावाभिप्रायेणोपपत्तेर्न तद्विशेषणेन

ಬ್ರಹ್ಮಕ್ಷತ್ರಾದೇರದನೀಯತ್ವಸಿದ್ಧಿರಿತ್ಯಾಶಙ್ಕ್ಯೋಪಸೇಚನಶಬ್ದಸ್ಯ ಗೌಣತ್ವೇऽಪಿ ತದ್ಧಶ್ಯತ್ವಾಭಾವರೂಪ-ಸಾಧಾರಣಾಕಾರೋಪಚಾರಂ ವಿನಾ ಸ್ವಯಮಘಮಾನತ್ವೇ ಸತಿ ಅನ್ಯಸ್ಯಾದನಹೇತುತ್ವ-ರೂಪವಿಶೇಷಾಕಾರೇಣೋಪಚಾರ ಇತಿ ಅದನೀಯತ್ವಸಿದ್ಧಿರಿತ್ಯುಕ್ತ್ವಾ ''ಸಾಧಾರಣಾಕಾರಂ ವಿಹಾಯ'' ಇತ್ಯಾದಿನಾ ಸೂತ್ರಸ್ಯ ತಾತ್ಪರ್ಯಾರ್ಥ ಉಕ್ತಃ, ಸೋऽಪ್ಯಯುಕ್ತಃ, ಪೌನರುಕ್ತ್ಯಾದಿತ್ಯರ್ಥಃ ।

ವಿವರಣೆ - ರಾಮಾನುಜರ ಮತ್ತೊಂದು ವಿಚಾರ ಹೀಗಿದೆ - ''ಅತ್ತಾ ಚರಾಚರಗ್ರಹಣಾತ್'' ಎಂಬ ಸೂತ್ರದಲ್ಲಿ ಬ್ರಹ್ಮ ಹಾಗೂ ಕ್ಷತ್ರ ಪದಗಳಿಂದ ಉಪಲಕ್ಷಣಯಾ ಸಕಲ ಚರಾಚರ ಪ್ರಪಂಚವು ತಿಳಿಯುತ್ತದೆ. ಮೃತ್ಯು ಮತ್ತು ಉಪಸೇಚನ ಪದಗಳಿಂದ ಚರಾಚರ ಪ್ರಪಂಚವು ಆದನೀಯವೆಂದು ಸೂಚಿತವಾಗುತ್ತದೆ. ಆದ್ದರಿಂದ ಸಕಲ ಚರಾಚರ ಪ್ರಪಂಚವನ್ನು ತಿನ್ನುತ್ತಾನೆಂದರೆ ಸಂಹಾರ ಮಾಡುತ್ತಾನೆಂದರ್ಥ. ಆದ್ದರಿಂದ ವಿಷ್ಣು ತಿನ್ನುತ್ತಾನೆಂದರೆ ಮೃತ್ಯುವು ಉಪಸೇಚನವಾಗಿರುವುದರಿಂದ ಮೃತ್ಯುವಿನ ಅಧೀನವಲ್ಲವೆಂದು ತಿಳಿಯುತ್ತದೆ. ಆದ್ದರಿಂದ ಮೃತ್ಯು ಹಾಗೂ ಉಪಸೇಚನಗಳೆಂಬ ವಿಶೇಷಣಗಳಿಂದ ಬ್ರಹ್ಮಕ್ಷತ್ರಾದಿಗಳಿಗೆ ಅದನೀಯತ್ವವು ಹೇಗೆ ಸಿದ್ಧಿಸುತ್ತದೆ ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸುತ್ತಾರೆ. 'ಉಪಸೇಚನ' ಶಬ್ದವು ಗೌಣಾರ್ಥವನ್ನು ಹೇಳುವುದಾದರೂ ಮೃತ್ಯುವಿನ ಅಧೀನವಾಗುವುದಿಲ್ಲವೆಂಬ ಸಾಧಾರಣಾಕಾರವಾದ ಗೌಣಾರ್ಥವನ್ನು ಹೇಳದೆ ಸ್ವತಃ ತಿನ್ನಲು ಯೋಗ್ಯವಾಗಿದ್ದು ಮತ್ತೊಂದನ್ನು ತಿನ್ನಲು ಹೇತುವಾಗಿರುವಿಕೆ ಎಂಬ ಅದನೀಯತ್ವ ಸಿದ್ಧಿಃ ವಿಶೇಷಾಕಾರದಿಂದ ಗೌಣಾರ್ಥವನ್ನು ಮಾಡಬೇಕು. ಹೀಗೆ ಅದನೀಯತ್ವವು ಸಿದ್ಧವಾಗುತ್ತದೆಂದು ಹೇಳಿ 'ಸಾಧಾರಣಾಕಾರಂ ವಿಹಾಯ' ಸೂತ್ರದ ತಾತ್ಪರ್ಯವನ್ನು ಹೇಳಿದ್ದಾರೆ.

ಇದೂ ಸಹ ತಪ್ಪು. ಹೀಗೆ ಹೇಳಿದರೆ ಪೂರ್ವಮೀಮಾಂಸೆಯಿಂದ ಪುನರುಕ್ತಿ ಬರುತ್ತದೆ.

ಪ್ರಕಾಶಃ – ತಾರ್ತೀಯಂ ಪ್ರೋದ್ಗಾತ್ರಧಿಕರಣಂ ಜನ್ಮಾಧಿಕರಣೇ, ಸಾಸ್ಮಿಕಂ ಮಾಸಾಗ್ನಿಹೋತ್ರಾಧಿಕರಣಂ ಚ ಪಾದಾನ್ತ್ಯಪ್ರಾಣನಯೇ ಪ್ರಪಞ್ಚಿತಮ್ । ಭಾಷ್ಯಕೃನ್ಮತೇ ಪ್ರೋದ್ಗಾತೃಶಬ್ದಸ್ಯ ಷೋಡಶರ್ತ್ವಿಕ್-ಸಾಧಾರಣಾಕಾರಂ ಪ್ರಕರಣಗತತ್ವಂ ವಿಹಾಯ ಚ್ಛಾನ್ದೋಗತ್ವರೂಪೇಣಾಸಾಧಾರಣಾಕಾರೇಣೋದ್ಗಾತ್ರಾದೀನಾಂ ಚತುರ್ಣಾಂ ಲಕ್ಷಣಾಯಾ ಉಕ್ತತ್ವಾತ್, ವಾರ್ತಿಕಮತೇ ತು ಸ್ತೋತ್ರಕಾರಿತ್ವಸದಸ್ಸನ್ನಿಹಿತತ್ವಾದಿನಾ ತತೋऽಪ್ಯಸಾಧಾರಣಾಕಾರೇಣಾಪಸುಬ್ರಹ್ಮಣ್ಯಾನಾಂ ತ್ರಯಾಣಾಮೇವ ಲಕ್ಷಣಾಯಾ ಉಕ್ತತ್ವಾತ್,

ತಥೈವ ಮಾಸಾಗ್ನಿಹೋತ್ರೇऽಗ್ನಿಹೋತ್ರಶಬ್ದಸ್ಯ ಸಾಧಾರಣಾಕಾರೇಣ ಗೌಣತಾಯಾ ಉಕ್ತತ್ವಾದಿತ್ಯರ್ಥಃ ।

ಪೂರ್ವಮೀಮಾಂಸೆಯ ಮೂರನೆಯ ಅಧ್ಯಾಯದಲ್ಲಿರುವ ಪ್ರೋದ್ಗಾತ್ರಧಿಕರಣವನ್ನು ಹಿಂದೆ ಜನ್ಮಾಧಿಕರಣದಲ್ಲೇ ವಿವರಿಸಿದ್ದಾಗಿದೆ. ಏಳನೇ ಅಧ್ಯಾಯದಲ್ಲಿ ಬರುವ ಮಾಸಾಗ್ನಿಹೋತ್ರಾಧಿಕರಣವನ್ನು ಅಂತಿಮಪ್ರಾಣಾಧಿಕರಣದಲ್ಲಿ ವಿವರಿಸಿದ್ದಾಗಿದೆ.

ಭಾಷ್ಯಕಾರರ ಪ್ರಕಾರ 'ಪ್ರೋದ್ಗಾತೃ' ಶಬ್ದಕ್ಕೆ ಹದಿನಾರು ಮಂದಿ ಋತ್ವಿಜರಲ್ಲಿ ಸಾಧಾರಣಾಕಾರವಾದ ಪ್ರಕರಣದ ತತ್ವವನ್ನು ಹೇಳದೆ ಛಾಂದೋಗತ್ವವೆಂಬ ಅಸಾಧಾರಣಾಕಾರದಿಂದ 'ಉದ್ಗಾತೃವೇ' ಮೊದಲಾದ ನಾಲ್ವರಲ್ಲಿ ಲಕ್ಷಣಾ ಮಾಡಲಾಗಿದೆ. ಆದರೆ ವಾರ್ತಿಕಕಾರರ ಮತದಲ್ಲಿ ಸ್ತೋತ್ರಕಾರಿತ್ವವೆಂಬ ಅಸಾಧಾರಣ

ಧರ್ಮವನ್ನು ವಿವಕ್ಷಿಸಿ ಸುಬ್ರಹ್ಮಣ್ಯನನ್ನು ಬಿಟ್ಟು ಉಳಿದ ಮೂವರನ್ನು ಮಾತ್ರ ಬಹುವಚನಾರ್ಥವೆಂದು ಅಂಗೀಕರಿಸಲಾಗಿದೆ.

ಇದರಂತೆ ಮಾಸಾಗ್ನಿಹೋತ್ರದಲ್ಲಿ ಅಗ್ನಿಹೋತ್ರ ಶಬ್ದಕ್ಕೆ ಅಸಾಧಾರಣಾಕಾರದಿಂದ ಗೌಣಾರ್ಥ ಮಾಡಲಾಗಿದೆ. ಹೀಗೆ ಪೂರ್ವಮೀಮಾಂಸೆಯಲ್ಲಿ ಹೇಳಿದ ವಿಚಾರವನ್ನೇ ಬ್ರಹ್ಮಮೀಮಾಂಸೆಯಲ್ಲಿಯೂ ನೀವು ಹೇಳುತ್ತಿರುವುದರಿಂದ ಪುನರುಕ್ತಿದೋಷ ಬರುತ್ತದೆ.

प्रकाशः – एतेन रामानुजरीतिं प्रायेणानुसरतः कस्यचिन्मतमपि निरस्तं ध्येयम् ।

आत्माऽन्तरात्मेति हरिः एक एव द्विधा स्थितः ।

इत्यादिवचनविरोधेन शिव इति सिद्धान्तस्यायुक्तत्वाच्चेति ।

ಶೈವರೂ ಸಹ ರಾಮಾನುಜರ ಪದ್ಧತಿಯನ್ನೇ ಅನುಸರಿಸಿ ಅಧಿಕರಣವನ್ನು ರಚಿಸುತ್ತಾರೆ. ರಾಮಾನುಜಮತನಿರಾಸದಿಂದಲೇ ಇವರ ಮತವು ನಿರಾಕೃತವಾಯಿತೆಂದು ತಿಳಿಯಬೇಕು. ಅಷ್ಟೇ ಅಲ್ಲದೆ "ಆತ್ಮಾಂತರಾತ್ಮೇತಿ ಹರಿಃ ಏಕ ಏವ ದ್ವಿಧಾ ಸ್ಥಿತಃ" ಇತ್ಯಾದಿಯಾದ ಹರಿಪರವಾದ ಪ್ರಮಾಣಗಳ ವಿರೋಧವೂ ಸಹ ಶೈವರಿಗೆ ಬರುತ್ತದೆಂದು ತಿಳಿಯಬೇಕು. ಆದ್ದರಿಂದ ಶಿವನೇ 'ಗುಹಾನಿವಿಷ್ಟ' ಎಂಬ ಸಿದ್ಧಾಂತವು ಸಿದ್ಧವಾಗಿದೆ.

ಸಾರ

"ಅತ್ತಾ ಚರಾಚರಗ್ರಹಣಾತ್" ಎಂಬ ಸೂತ್ರಕ್ಕೆ ಸಾಧಾರಣಾಕಾರವಾದ ಗೌಣಾರ್ಥವನ್ನು ಬಿಟ್ಟು ಅಸಾಧಾರಣಾಕಾರವಾದ ಗೌಣಾರ್ಥವನ್ನು ಮಾಡಬೇಕೆನ್ನುತ್ತಾರೆ. ಈ ವಿಚಾರವನ್ನು ಪೂರ್ವಮೀಮಾಂಸಾಶಾಸ್ತ್ರದಲ್ಲಿ ನಿರ್ಣಯ ಮಾಡಿದ್ದರಿಂದ ಇಲ್ಲಿ ನಿರ್ಣಯಿಸಬೇಕಾಗಿಲ್ಲ. 'ಪ್ರೋದ್ಗಾತ್ಮಣಾಂ' ಎಂಬಲ್ಲಿ ಮತ್ತು 'ಮಾಸಮಗ್ನಿಹೋತ್ರಂ' ಎಂಬಲ್ಲಿ ಅಸಾಧಾರಣಾಕಾರವಾದ ಲಕ್ಷಣಾವನ್ನು ಮಾಡದೆ ಸಾಧಾರಣಾಕಾರವಾದ ಲಕ್ಷಣಾವನ್ನೇ ಮಾಡಬೇಕೆಂದು ಪ್ರೋದ್ಗಾತ್ರಧಿಕರಣದಲ್ಲಿ ಮತ್ತು ಮಾಸಾಗ್ನಿಹೋತ್ರಾಧಿಕರಣದಲ್ಲಿ ನಿರ್ಣಯಿಸಿದ್ದಾಗಿದೆ. ಪುನಃ ಇಲ್ಲಿ ಅದನ್ನೇ ಸಾಧಿಸಿದರೆ ಪುನರುಕ್ತಿ ಬರುತ್ತದೆ. ಪೂರ್ವಮೀಮಾಂಸಾಶಾಸ್ತ್ರವೂ ಸೇರಿ ಇಪ್ಪತ್ತು ಅಧ್ಯಾಯವು ಒಂದೇ ಶಾಸ್ತ್ರವೆಂದು ಹೇಳುವ ರಾಮಾನುಜರಿಗೆ ಮಾತ್ರ ಈ ದೋಷ.

ಟೀಕೆಯ ಕಠಿಣಪದಾರ್ಥ

तात्पर्यचन्द्रिका

टीकाक्षरार्थस्तु – तद्यदा विष्णोरन्यस्यैव स्यादिति । पूर्वत्र सम्भवत्सर्वात्तृत्वं लक्षणत्वेनोक्तम् । ब्रह्मणि च अशुभभोक्तृत्वासम्भवेऽपि ऋतपातृत्वरूपं शुभभोक्तृत्वं सिद्धान्तरीत्या सम्भवति । तत्र च पिबतोर्जीवेश्वरत्वमुपेत्य जीवे पातृत्वं मुख्यम् ईश्वरे त्वमुख्यमिति स्वीकारेऽसम्भवः, उभयोरपि मुख्यमिति स्वीकारे तु जीवस्यापि शुभभोक्तृत्वेन ईश्वरवत्सर्वात्तृत्वस्यापि प्रसङ्गात् अतिव्याप्तिरित्यर्थः । तथा च द्वयोरपि पातृत्वं मुख्यमिति पूर्वपक्षोऽप्यत्राभिप्रेत इति द्रष्टव्यम् ।

यद्वा – गुहाप्रविष्टत्वादिब्रह्मलिङ्गसहितस्यापि ऋतपातृत्वस्यासम्भवोऽतिव्याप्तिर्वा यदा, तदा तत्सहचरितस्य पूर्वोक्तात्तृत्वस्यापि असम्भवोऽतिव्याप्तिर्वा स्यादित्यर्थः । तथा च लक्षणमयुक्तमिति ।

यद्यपि सर्वसंहर्तृत्वरूपलक्षणं ब्रह्मण्येवेति पूर्वपक्षिणाऽपि स्वीकृतम् । अत एव टीका ''कर्मफलभोगं विनाऽपि संहर्तृत्वमात्रेण तदुपपत्तेः'' इति । तथाऽपि सिद्धान्त्यभिप्रेतं संहर्तृत्वविशेषात्मकं भक्षयितृत्वरूपं लक्षणमयुक्तमिति भावः ।

यस्सेतुः'' इति पिबतोरेकवचनेन विशेषणात् इत्यादि । ''विशेषणाच्च'' इति सूत्रं ''यस्सेतुः'' इत्यादिभाष्येण एकवचनेन विशेषणात् ब्रह्मशब्देन विशेषणाच्चेति द्विधा व्याख्यातमिति भावः । उपलक्षणं चैतत्, सेतुत्वाक्षरत्वादिना विशेषणात् ब्रह्मणश्च परत्वेन विशेषणादित्यपि व्याख्येयमिति ।।

।। इति श्रीब्रह्मण्यतीर्थपूज्यश्रीपादशिष्यव्यासतीर्थविरचिता
तात्पर्यचन्द्रिकायां गुहाधिकरणं सम्पूर्णम् ।।

ಅನುವಾದ - ಟೀಕೆಯಲ್ಲಿ 'तद्यदा विष्णोरन्यस्यैव स्यात्' ಇತ್ಯಾದಿ ವಾಕ್ಯಗಳು ಹೊರಟಿವೆ. ಈ ವಾಕ್ಯದಲ್ಲಿ ಅಸಂಭವ ಹಾಗೂ ಅತಿವ್ಯಾಪ್ತಿ ದೋಷಗಳನ್ನು ಹೇಳಿದ್ದಾರೆ. ಅದನ್ನು ಹೀಗೆ ತಿಳಿಯಬೇಕು - ಹಿಂದಿನ ಅಧಿಕರಣದಲ್ಲಿ ಸಂಭವತ್ಸರ್ವಾತೃತ್ವವನ್ನು ಬ್ರಹ್ಮನ ಲಕ್ಷಣವೆಂದು

ಸಾಧಿಸಲಾಯಿತು. ಏಕೆಂದರೆ ಬ್ರಹ್ಮನಲ್ಲಿ ಅಶುಭಭೋಕ್ತೃತ್ವವು ಅಸಂಭಾವಿತವಾದರೂ ಋತಪಾತೃತ್ವವೆಂಬ ಸುಖಫಲಭೋಕ್ತೃತ್ವ ಪೂರ್ವಪಕ್ಷದ ಪ್ರಕಾರ ಕೂಡದಿದ್ದರೂ ಸಿದ್ಧಾಂತದ ಪ್ರಕಾರ ಸಮಂಜಸವಾಗುತ್ತದೆ. ಹೀಗಿರುವಾಗ ''ಪಿಬತೋಃ'' ಎಂಬ ವಿಶೇಷಣವಾಚಕಪದದಿಂದ ಜೀವೇಶ್ವರರಿಬ್ಬರನ್ನು ವಾಚಕರೆಂದು ಒಪ್ಪಿ, ಜೀವರಲ್ಲಿ ಮುಖ್ಯವಾದ ಪಾತೃತ್ವವನ್ನು ಹೇಳಿ ಈಶ್ವರನಲ್ಲಿ ಅಮುಖ್ಯವಾದ ಪಾತೃತ್ವವನ್ನು ಹೇಳಿದರೆ ಅಸಂಭವ ದೋಷ ಬರುತ್ತದೆಂದು ಅಭಿಪ್ರಾಯ.

ಇನ್ನು ಜೀವೇಶ್ವರರಿಬ್ಬರೂ ಮುಖ್ಯಪಾತೃತ್ವವುಳ್ಳವರೆಂದೇ ಒಪ್ಪಿದರೆ ಜೀವನಲ್ಲಿಯೂ ಶುಭಭೋಕ್ತೃತ್ವವನ್ನು ಹೇಳಿದಂತಾಯಿತು. ಆವಾಗ ಈಶ್ವರನಂತೆ ಜೀವನಲ್ಲಿಯೂ ಸಹ ಸರ್ವಾತೃತ್ವ ಲಕ್ಷಣವು ಬರುವ ಕಾರಣ ಅತಿವ್ಯಾಪ್ತಿ ಬರುತ್ತದೆಂದು ಅಭಿಪ್ರಾಯ. ಆದ್ದರಿಂದ ಜೀವೇಶ್ವರರಿಬ್ಬರಲ್ಲಿಯೂ ಮುಖ್ಯವಾದ ಪಾತೃತ್ವವನ್ನು ಪೂರ್ವಪಕ್ಷಿಯು ಒಪ್ಪಿದ್ದಾನೆಂದು ತಿಳಿಯಬೇಕು.

ಅಥವಾ ಗುಹಾಪ್ರವಿಷ್ಟತ್ವವೇ ಮೊದಲಾದ ಬ್ರಹ್ಮನ ಲಿಂಗಗಳಿದ್ದರೂ ಋತಪಾತೃತ್ವವೆಂಬ ಬ್ರಹ್ಮನ ಲಕ್ಷಣಕ್ಕೆ ಅಸಂಭವ ಅಥವಾ ಅತಿವ್ಯಾಪ್ತಿ ದೋಷವು ಬರುವುದಾದರೆ ಬ್ರಹ್ಮನ ಲಿಂಗಗಳಿಂದಲೇ ಸಹಚರಿತವಾದ ಹಿಂದಿನ ಅಧಿಕರಣದಲ್ಲಿ ಸಮರ್ಥಿಸಲ್ಪಟ್ಟ ಅತೃತ್ವ ಲಕ್ಷಣಕ್ಕೂ ಸಹ ಅತಿವ್ಯಾಪ್ತಿ ಅಥವಾ ಅಸಂಭವ ದೋಷಗಳೇಕೆ ಬರಬಾರದೆಂದು ಅಭಿಪ್ರಾಯ. ಆದ್ದರಿಂದ ಲಕ್ಷಣ ಅಯುಕ್ತವಾಗಿದೆಯೆಂದು ಪೂರ್ವಪಕ್ಷಿಯು ಹೇಳುತ್ತಾನೆ.

ವಸ್ತುತಸ್ತು ಸರ್ವಸಂಹರ್ತೃತ್ವವೆಂಬ ಲಕ್ಷಣವನ್ನು ಬ್ರಹ್ಮನಲ್ಲಿಯೇ ಪೂರ್ವಪಕ್ಷಿಯೂ ಸಹ ಅಂಗೀಕರಿಸಿದ್ದಾನೆ. ಆದ್ದರಿಂದಲೇ ಟೀಕೆಯಲ್ಲಿ ''ಕರ್ಮಫಲಭೋಗಂ ವಿನಾಪಿ ಸಂಹರ್ತೃತ್ವ-ಮಾತ್ರೇಣ ತದುಪಪತ್ತೇಃ'' ಕರ್ಮಭೋಗವಿಲ್ಲದಿದ್ದರೂ ಕೇವಲ ಸಂಹರ್ತೃತ್ವದಿಂದ ಬ್ರಹ್ಮನಲ್ಲಿ ಯುಕ್ತವಾಗುತ್ತದೆಂದು ಹೇಳಿದ್ದಾರೆ. ಆದರೂ ಸಹ ಸಿದ್ಧಾಂತಿಗಳಿಗೆ ಅಭಿಪ್ರೇತವಾದ ಸಂಹರ್ತೃತ್ವದ ವಿಶೇಷರೂಪವಾದ 'ಭಕ್ಷಯಿತೃತ್ವ' ಎಂಬ ಲಕ್ಷಣವನ್ನು ಪೂರ್ವಪಕ್ಷಿಯು ಅಂಗೀಕರಿಸುವುದಿಲ್ಲ. ಈ ಲಕ್ಷಣವು ಅಯುಕ್ತವಾಗಿದೆಯೆಂದು ಪೂರ್ವಪಕ್ಷಿಯು ಆಕ್ಷೇಪಿಸುತ್ತಿದ್ದಾನೆಂದು ತಿಳಿಯಬೇಕು.

ಎರಡನೆಯ ಸೂತ್ರವನ್ನು ವ್ಯಾಖ್ಯಾನಿಸುವಾಗ ಟೀಕೆಯಲ್ಲಿ ''ಯಸ್ಮೇತುಃ ಇತಿ ಪಿಬತೋರೇಕವಚನೇನ ವಿಶೇಷಣಾತ್'' 'ಯಸ್ಮೇತುಃ' ಇತ್ಯಾದಿ ಭಾಷ್ಯವು ಏಕವಚನದಿಂದ ವಿಶೇಷಣವಾಗಿರುವುದರಿಂದ ಮತ್ತು ಬ್ರಹ್ಮಶಬ್ದದಿಂದ ವಿಶೇಷಣವಾಗಿರುವುದರಿಂದ 'ವಿಶೇಷಣಾಚ್ಚ' ಎಂಬ ಸೂತ್ರವನ್ನು ಎರಡು ಬಗೆಯಲ್ಲಿ ವ್ಯಾಖ್ಯಾನಿಸಿದೆ ಎಂದು ಅಭಿಪ್ರಾಯ. 'ಉಪಲಕ್ಷಣಯಾ' 'ಹೇತುತ್ವ' ಹಾಗೂ ಅಕ್ಷರತ್ವಾದಿಗಳಿಂದ ವಿಶೇಷಣವಾಗಿದೆ. ಬ್ರಹ್ಮನು ಪರತ್ವದಿಂದ ವಿಶೇಷಣನಾಗಿರುವುದರಿಂದ ಎಂದೂ ಸಹ ವ್ಯಾಖ್ಯಾನಿಸಬೇಕು.

ಇಲ್ಲಿಗೆ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ
ಗುಹಾಧಿಕರಣವು ಸಂಪೂರ್ಣವಾಯಿತು.
ಗುಹಾಧಿಕರಣ (೧-೨-೩)

ಪ್ರಕಾಶಃ –

ಅತ್ರ ಟೀಕಾಯಾಂ ''तदृतपानकर्तृत्वं यदि विष्णोरन्यस्यैव स्यात्तदा न तस्य सर्वात्तृत्वं, यदि चान्यस्यापि सम्भवेत्तदा लक्षणस्यातिव्याप्तिः'' ಇತ್ಯುಕ್ತಮ್ ।

ವಿವರಣೆ - ಈ ಅಧಿಕರಣದ ಟೀಕೆಯಲ್ಲಿ ''तदृतपानकर्तृत्वं यदि विष्णोरन्यस्यैव स्यात्तदा न तस्य सर्वात्तृत्वं, यदि चान्यस्यापि संभवेत्तदा लक्षणस्यातिव्याप्तिः'' ಒಂದು ವೇಳೆ ಋತಪಾನ ಕರ್ತೃತ್ವವು ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ ಬರುವುದಾದರೆ ಆವಾಗ ವಿಷ್ಣುವಿಗೆ ಸರ್ವಾತ್ಮತ್ವವನ್ನು ಹೇಳಲಾಗದ ಕಾರಣ ಅಸಂಭವ ಬರುತ್ತದೆ. ಒಂದು ವೇಳೆ ಬೇರೆಯವರಲ್ಲೂ ಸರ್ವಾತ್ಮತ್ವ ಬರುವುದಾದರೆ ಆವಾಗ ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿ ಬರುತ್ತದೆಂದು ಹೇಳಲಾಗಿದೆ.

ಪ್ರಕಾಶಃ – तत्रानुपपत्तयः – ಪೂರ್ವೆ ಸರ್ವಾತ್ತೃತ್ವಸ್ಯ ಲಕ್ಷಣತ್ವೇನಾಭಿಮತತ್ವಾದೇಕ-ದೇಶಸ್ಯಾನ್ಯಮಾತ್ರಗತತ್ವೇऽಪಿ ನಾಸಮ್ಭವಃ । न चैकदेशाभावादेव सर्वात्तृत्वमपि नेत्युच्यत इति वाच्यं, सिद्धन्तेऽप्यशुभभोक्तृत्वाभावेन तद्दोषतादवस्थ्यापातादित्येका ।

ಈ ಟೀಕಾಮಾತನ್ನು ನೋಡಿದಾಗ ಅನೇಕ ಅನುಪಪತ್ತಿಗಳು ಕಾಣಿಸುತ್ತವೆ. ಹಿಂದೆ ಸರ್ವಾತ್ಮತ್ವವನ್ನು ವಿಷ್ಣುವಿನ ಲಕ್ಷಣವೆಂದು ಸಾಧಿಸಲಾಯಿತು. ಆದ್ದರಿಂದ ಕೆಲವು ಪದಾರ್ಥಗಳ ಅತ್ಯತ್ವವು ಬೇರೆಯವರಲ್ಲಿ ಮಾತ್ರ ಬರುವುದರಿಂದ ಅಸಂಭವವನ್ನು ಹೇಳಲು ಸಾಧ್ಯವಿಲ್ಲ.

ಪ್ರಶ್ನೆ - ಏಕದೇಶ ಪದಾರ್ಥದ ಅತ್ಯತ್ವವು ಬೇರೆಯವರಲ್ಲಿ ಮಾತ್ರ ಬರುವುದಾದರೆ ವಿಷ್ಣುವಿನಲ್ಲಿ ಏಕದೇಶ ಪದಾರ್ಥದ ಅತ್ಯತ್ವವನ್ನು ಹೇಳಿದಂತಾಗಲಿಲ್ಲ. ಆವಾಗ ಸರ್ವಾತ್ಮತ್ವ ಲಕ್ಷಣಕ್ಕೆ ಅಸಂಭವ ದೋಷವನ್ನು ಹೇಳಿದಂತಾಗುತ್ತದಲ್ಲವೇ?

ಉತ್ತರ - ಸಿದ್ಧಾಂತದಲ್ಲಿಯೂ ಸಹ ಅಶುಭಫಲಭೋಕ್ಯತ್ವವನ್ನು ವಿಷ್ಣುವಿನಲ್ಲಿ ಅಂಗೀಕರಿಸಿಲ್ಲ. ಆದ್ದರಿಂದ ಏಕದೇಶ ಪದಾರ್ಥದ ಅತ್ಯತ್ವವು ಬೇರೆಯವರಲ್ಲಿ ಬರುವ ಮಾತ್ರದಿಂದ ಹಿಂದಿನ ಅಧಿಕರಣದಲ್ಲಿ ಸಮರ್ಥಿಸಲ್ಪಟ್ಟ ಸರ್ವಾತ್ಮತ್ವ ಲಕ್ಷಣಕ್ಕೆ ಅಸಂಭವ ದೋಷವನ್ನು ಹೇಳಲಾಗದು. ಇದು ಮೊದಲನೆಯ ಅನುಪಪತ್ತಿ.

ಪ್ರಕಾಶಃ – ಪೂರ್ವಪಕ್ಷೇ ಋತಪಾತೃತ್ವಸ್ಯ ಜೀವೇಶ್ವರೋಭಯಗತತ್ವೋಪಗಮೇನಾನ್ಯಸ್ಯೈವೇತ್ಯ ಯುಕ್ತಮಿತ್ಯನ್ಯಾ ।

''यदि च'' ಇತ್ಯತ್ರಾಪಿ ಭಗವತಿ ಪಾತೃತ್ವಸ್ಯೈವ ಪೂರ್ವಪಕ್ಷೇऽನಙ್ಗೀಕೃತತ್ವೇನ ಅನ್ಯಸ್ಯಾಪೀತ್ಯಪಿಪದಾಸ್ವಾರಸ್ಯಮಿತ್ಯೇಕಾ ।

ಏಕದೇಶಸ್ಯಾನ್ಯಮಾತ್ರಗತತ್ವೇऽಪಿ ಕೃತ್ಸ್ನಾತ್ತೃತ್ವಸ್ಯಾತಿವ್ಯಾಪ್ತ್ಯಪ್ರಸರಾದಿತ್ಯಪರಾ ।

ಅಥವಾ ಪೂರ್ವಪಕ್ಷದಲ್ಲಿ ಋತಪಾತೃತ್ವವನ್ನು ಜೀವ ಹಾಗೂ ಈಶ್ವರರಿಬ್ಬರಲ್ಲಿಯೂ ಅಂಗೀಕರಿಸಿರುವುದರಿಂದ ಟೀಕೆಯಲ್ಲಿ 'ಅನ್ಯಸ್ಮೈ' ಎಂಬ ಮಾತು ತಪ್ಪಾಗುತ್ತದೆ. ಇದು ಎರಡನೆಯ ಅನುಪಪತ್ತಿ.

''ಯದಿ ಚ'' ಎಂಬ ಟೀಕಾವಾಕ್ಯದಲ್ಲಿಯೂ ಸಹ ಭಗವಂತನಲ್ಲಿ ಋತೃತ್ವವನ್ನಷ್ಟೇ ಪೂರ್ವಪಕ್ಷಕಾರರು ಒಪ್ಪದ ಕಾರಣ 'ಅನ್ಯಸ್ಯಾಪಿ' ಎಂಬಲ್ಲಿರುವ 'ಅಪಿ' ಪದವು ಅಸ್ವರಸವಾಗುತ್ತದೆ.

ಏಕದೇಶವು ಬೇರೆಯವರಲ್ಲಿ ಬಂದ ಮಾತ್ರದಿಂದ ಸಕಲಜಗತ್ತಿನ ಅತೃತ್ವ ಲಕ್ಷಣಕ್ಕೆ ಅತಿವ್ಯಾಪ್ತಿಯನ್ನು ಹೇಳಲು ಸಾಧ್ಯವಾಗುವುದಿಲ್ಲವೆಂಬುದು ''ಯದಿ ಚ'' ಎಂಬ ವಾಕ್ಯದಲ್ಲಿರುವ ಎರಡನೆಯ ಅನುಪಪತ್ತಿ.

प्रकाशः – ता एताः निरसितुमाह – सम्भवदिति । ''असम्भवः'' इत्यन्तेनाद्ययोर्निरासः । ''मुख्यं'' इत्युक्त्वा द्वितीयायाः, शेषेणाद्याया इति विवेकः ।

''उभयोरपि मुख्यं'' इत्यनेन तृतीयायाः, सर्वातृत्वस्यापि प्रसङ्गात्सम्भवत् सर्वात्तृत्वरूपस्य ''सर्वशुभात्तृत्वस्यापि प्रसङ्गात्'' इत्यनेन अन्त्या निरस्तेति ध्येयम् ।

ಈ ಎಲ್ಲಾ ಅನುಪಪತ್ತಿಗಳನ್ನು ನಿರಾಸ ಮಾಡುವುದಕ್ಕಾಗಿ ''ಸಂಭವತಿ'' ಎಂಬ ವಾಕ್ಯವು ಹೊರಟಿದೆ. ''ಅಸಂಭವಃ'' ಎಂಬಲ್ಲಿಯ ತನಕ ಮೊದಲಿನ ಎರಡು ಅನುಪಪತ್ತಿಗಳನ್ನು ಪರಿಹರಿಸಲಾಗಿದೆ. ಅಂದರೆ 'ಮುಖ್ಯಮ್' ಎಂಬ ಮಾತಿನಿಂದ ಎರಡನೆಯ ಅನುಪಪತ್ತಿಯು ಉಳಿದ ಮಾತುಗಳಿಂದ ಮೊದಲನೆಯ ಅನುಪಪತ್ತಿಯು ಪರಿಹಾರವಾಗಿದೆಯೆಂದು ತಿಳಿಯಬೇಕು.

'ಉಭಯೋರಪಿ ಮುಖ್ಯಂ'' ಎಂಬ ವಾಕ್ಯದಿಂದ ಮೂರನೆಯ ಅನುಪಪತ್ತಿಯು ''ಸರ್ವಾಶುಭಾತೃತ್ವಸ್ಯಾಪಿ ಪ್ರಸಂಗಾತ್'' ಎಂಬುದರಿಂದ ಕೊನೆಯ ಅನುಪಪತ್ತಿಯು ನಿರಾಕೃತವಾಯಿತೆಂದು ತಿಳಿಯಬೇಕು.

प्रकाशः – नन्वत्रच्छत्रिन्यायस्य टीकायामुक्तेः कथमुभयमुख्यत्वोक्तिरित्यत आह – तथा चेति । च्छत्रिन्यायोऽसम्भवपक्ष एवेति भावः ।

पूर्वं सर्वात्तृत्वं सङ्कुचितमुपेत्य असम्भवतिन्यायी उपपादिते, अधुनाऽसङ्कुचितमेव तदादाय तदुपपादयति – यद्वेति ।

ಟೀಕೆಯಲ್ಲಿ ಛತ್ರಿನ್ಯಾಯವನ್ನು ಹೇಳಿರುವಾಗ ಇಬ್ಬರಲ್ಲಿಯೂ ಮುಖ್ಯಾರ್ಥವನ್ನು ಹೇಳಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ 'ತಥಾಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಛತ್ರಿನ್ಯಾಯವು ಅಸಂಭವಪಕ್ಷದಲ್ಲಷ್ಟೇ ವಿವಕ್ಷಿತವೆಂದು ತಿಳಿಯಬೇಕು.

ಭಾವದೀಪಃ – ।। ಏತದಿತಿ ।। ಏತದ್ವಿದ್ಯೋಪಾಸನಾಫಲತ್ವೇನೇತ್ಯರ್ಥಃ ।। ಅನ್ಯಥೇತಿ ।। ಏತದ್ವಿದ್ಯಾಪ್ರಸ್ತಾವೇ ಯತ್ಕಿಞ್ಚಿತ್ಫಲರೂಪಗತ್ಯುಕ್ತೇರಸಙ್ಗತೇರಿತಿ ಭಾವಃ । ಹಿಶಬ್ದಸೂಚಿತಮಾಹ – ದೇವಾನಿತಿ ।। ಇತ್ಯಾದೇಃ ಗೀತಾಯಾಮಿತ್ಯರ್ಥಃ । 'ಜ್ಞಾತ್ವಾ ಪರತ್ವಂ ವಿಷ್ಣೋಸ್ತು ಪೃಥಗ್ ದೇವಾನ್ ಯಜನ್ನರಃ । ಯಾತಿ ದೇವಾನ್ತದಜ್ಞಾತ್ವಾ ತಮ ಏವ ಪ್ರಪದ್ಯತೇ ।।' ಇತಿ ತಾತ್ಪರ್ಯಂ ಜ್ಞೇಯಮ್ । ತೇನ 'ಯೇऽಪ್ಯನ್ಯದೇವತಾಭಕ್ತಾಃ' ಇತ್ಯಾದಿವಿರೋಧಿನೇತಿ ಧ್ಯೇಯಮ್

ಟೀಕೆಯಲ್ಲಿರುವ 'ಏತದ್‌ವಿದ್ಯಾಫಲತ್ವೇನ' ಎಂಬ ಶಬ್ದಕ್ಕೆ ಏತದ್‌ವಿದ್ಯೋಪಾಸನೆಯ ಫಲದಿಂದ ಎಂದರ್ಥ. 'ಅನ್ಯಥಾ' ಎಂದರೆ ಏತದ್‌ವಿದ್ಯೆಯ ಪ್ರಸ್ತಾಪದಲ್ಲಿ ಯತ್‌ಕಿಂಚಿತ್ ಫಲವೆಂಬ ಗತಿಯನ್ನು ಹೇಳಿದ್ದು ಅಸಂಗತವಾಗುತ್ತದೆಂದು ತಿಳಿಯಬೇಕು. ಹಿ ಶಬ್ದದಿಂದ ಸೂಚಿತವಾದದ್ದನ್ನು 'ದೇವಾನ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. 'ಇತ್ಯಾದೇಃ' ಎಂದರೆ ಗೀತೆಯಲ್ಲಿ ಎಂದರ್ಥ. ಗೀತಾತಾತ್ಪರ್ಯದಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾರೆ - ''ಜ್ಞಾತ್ವಾ ಪರತ್ವಂ ವಿಷ್ಣೋಸ್ತು ಪೃಥಗ್ ದೇವಾನ್ ಯಜನ್ನರಃ । ಯಾತಿ ದೇವಾಂಸ್ತದಜ್ಞಾತ್ವಾ ತಮ ಏವ ಪ್ರಪದ್ಯತೇ ।।'' ಎಂದು.

'ತೇನ' ಶಬ್ದಕ್ಕೆ 'ಯೇऽಪ್ಯನ್ಯದೇವತಾಃ ಭಕ್ತಾಃ' ಇತ್ಯಾದಿ ವಿರೋಧಪ್ರಮಾಣವಿರುವುದರಿಂದ ಎಂದರ್ಥ.

ಶ್ರುತಿಯಲ್ಲಿ ಸಾನ್ನಿಧ್ಯವನ್ನು ಅನುಸರಿಸಿ ವಿಪರೀತವಾಗಿ ಹೇಳಿದ್ದರೂ ಗ್ರಂಥಕಾರರು ಯಥಾರೀತಿಯಾಗಿ ಅನ್ವಯ ಮಾಡಿ ಹೇಳುತ್ತಿದ್ದಾರೆ 'ಆದ್ಯವಿದ್ಯಾಯಾಃ' ಇತ್ಯಾದಿಯಾಗಿ 'ಕಂ ಬ್ರಹ್ಮ' ಇತ್ಯಾದಿಯಾಗಿ ಹೇಳಲ್ಪಟ್ಟ ವಿದ್ಯೆಯೇ ಆದ್ಯವಿದ್ಯೆ ಎನಿಸುತ್ತದೆ. ಹೀಗೆ ಹೇಳಿದ್ದರಿಂದ ಆಕ್ಷಿಸ್ಥನಾದವನು ವಿಷ್ಣುವಾಗಿದ್ದಾನೆಂಬ ವಿಷಯದಲ್ಲಿ ಹೇಗೆ ಆಕ್ಷೇಪಿಸಿದಂತಾಯಿತು ? ಎಂಬ ಪ್ರಶ್ನೆಗೆ 'ಆಕ್ಷಿಸ್ಥ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಭಾವದೀಪಃ – 'ಹ್ವಯಾಮ್ಯಗ್ನಿಮ್ ಪ್ರಥಮಂ ಸ್ವಸ್ತಯೇ' ಇತ್ಯತ್ರಾಗ್ನೇರುಪಕ್ರಮೇऽಪಿ 'ಸವಿತಾರಮೂರ್ತಯೇ' 'ಹಿರಣ್ಮಯೇನ ಸವಿತಾ ರಥೇನ' ಇತ್ಯಾದಿಸವಿತೃಶ್ರುತಿಲಿಙ್ಗಾದಿನಾ ತತ್ಪ್ರಕರಣಂ ಸಾವಿತ್ರಂ ಹ್ವಯಾಮ್ಯೇಕಾದಶಸಾವಿತ್ರಮಿತ್ಯನುಕ್ರಮಣಿಕೋಕ್ತೇಃ । ತಥಾऽತ್ರಾಪ್ಯಸ್ಮದ್ವಿದ್ಯೇತ್ಯಗ್ನಿಭಿರುಕ್ತತ್ವಾದಗ್ನಿ-ಪ್ರಕರಣಮಿತ್ಯರ್ಥಃ । ಏತೇನ ಪ್ರಾಣಸ್ಯ ನ ಪ್ರಕರಣಿತ್ವಮಿತ್ಯೇತದಪ್ಯುಪಪಾದಿತಂ ಬೋಧ್ಯಮ್

'ಹ್ವಯಾಮ್ಯಗ್ನಿಂ ಪ್ರಥಮಂ ಸ್ವಸ್ತಯೇ' ಎಂಬಲ್ಲಿ ಅಗ್ನಿಯು ಉಪಕ್ರಮದಲ್ಲಿ ಪ್ರಸಕ್ತನಾಗಿದ್ದರೂ 'ಸವಿತಾರಮೂರ್ತಯೇ ಹಿರಣ್ಮಯೇನ ಸವಿತಾ ರಥೇನ' ಇತ್ಯಾದಿಯಾಗಿ ಸವಿತೃಶ್ರುತಿ ಹಾಗೂ ಸವಿತೃಲಿಂಗಗಳ ಬಲದಿಂದ ಆ ಪ್ರಕರಣವು ಸಾವಿತ್ರಪ್ರಕರಣವೆಂದು ತಿಳಿಯುತ್ತದೆ. 'ಹ್ವಯಾಮ್ಯೇಕಾದಶಸಾವಿತ್ರಮ್' ಎಂದು ಅನುಕ್ರಮಣಿಕೆಯಲ್ಲಿ ಹೇಳಿದ್ದರಿಂದ ಆದರಂತೆ ಇಲ್ಲಿಯೂ 'ಅಸ್ಮದ್‌ವಿದ್ಯಾ' ಇತ್ಯಾದಿಯಾಗಿ ಅಗ್ನಿಗಳ ಉಪದೇಶವಿರುವುದರಿಂದ ಅಗ್ನಿಪ್ರಕರಣವೆಂದು ನಿಶ್ಚಯಿಸಬಹುದು. ಹೀಗೆ ಹೇಳಿದ್ದರಿಂದ ಪ್ರಾಣನು ಪ್ರಕರಣಪ್ರತಿಪಾದ್ಯನಲ್ಲವೆಂದು ತಿಳಿಯುತ್ತದೆ.

ಭಾವದೀಪಃ – ಇತಿ ಪೃಥಗುಕ್ತೀತಿ ।। ಏತೇನ ನ್ಯಾಯವಿವರಣೇ 'ಸೋऽಹಮಸ್ಮಿ ಸ ಏವಾಹಮಸ್ಮಿ' ಇತ್ಯಾದ್ಯಭ್ಯಾಸೇತ್ಯತ್ರಾಸ್ಮದ್ವಿದ್ಯಾ ಆತ್ಮವಿದ್ಯೇತಿ ವಿದ್ಯಾಶಬ್ದಾಭ್ಯಾಸೋऽಪ್ಯಾದಿಪದೇನ ಗೃಹೀತ ಇತಿ ದರ್ಶಿತ ಇತ್ಯಾಹುಃ ।

ಇದರಿಂದ 'ಸೋऽಹಮಸ್ಮಿ ಸ ಏವಾಹಮಸ್ಮಿ ಇತ್ಯಾದ್ಯಭ್ಯಾಸ' ಎಂಬ ನ್ಯಾಯವಿವರಣವಾಕ್ಯದಲ್ಲಿರುವ ಆದಿಪದದಿಂದ 'ಅಸ್ಮದ್‌ವಿದ್ಯಾ ಆತ್ಮವಿದ್ಯಾ' ಎಂಬ ವಿದ್ಯಾಶಬ್ದದ ಅಭ್ಯಾಸವನ್ನೂ ಸ್ವೀಕರಿಸಬೇಕು. ಅದಕ್ಕಾಗಿ 'ದರ್ಶಿತಃ' ಎಂಬ ಪದವನ್ನು ಬಳಸಿದ್ದಾರೆಂದು ಕೆಲವರು ಹೇಳುತ್ತಾರೆ.

ಭಾವದೀಪಃ – ಭಾಷ್ಯಸ್ಯ ಸೂತ್ರೇಣಾನ್ವಯಂ ದರ್ಶಯನ್ 'ಸ ಏನಾನ್' ಇತಿ ಪದದ್ವಯಪರಾಮೃಷ್ಟಂ ವಕ್ತುಂ ಕೃತ್ಸ್ನವಾಕ್ಯಮುಪಾದದಾನಃ ಸೂತ್ರಾರ್ಥಮಾಹ – ನೈತದಿತಿ ।। ಅನ್ತರೋ ವಿಷ್ಣುರೇವೇತ್ಯನುವೃತ್ತಸ್ಯ ತಾತ್ಪರ್ಯೋಕ್ತಿರಿಯಮ್ । ಶ್ರವಣಮಾತ್ರಸ್ಯ ಬ್ರಹ್ಮಪ್ರಾಪ್ತಿಹೇತುತ್ವಾದ್ 'ಯ ಏವಂ ವೇದ' ಇತ್ಯಪರೋಕ್ಷಸ್ಯಾಪ್ಯುಕ್ತೇರಿತಿ ಭಾವೇನಾಹ – ಉಪಲಕ್ಷಕಮಿತಿ ।।

ಭಾಷ್ಯದಲ್ಲಿರುವ ಮಾತುಗಳಿಗೆ ಸೂತ್ರದ ಜೊತೆ ಅನ್ವಯ ತೋರಿಸುತ್ತಾ 'ಸಃ' ಏನಾನ್, ಎಂಬೆರಡು ಪದಗಳಿಂದ ಪರಾಮರ್ಶಿಸಿದ್ದನ್ನು ಹೇಳುವುದಕ್ಕಾಗಿ ಸಂಪೂರ್ಣ ವಾಕ್ಯವನ್ನು ಉಲ್ಲೇಖಿಸುತ್ತಾ

ಸೂತ್ರಾರ್ಥವನ್ನು ಹೇಳುತ್ತಿದ್ದಾರೆ 'ನೈತತ್' ಇತ್ಯಾದಿಯಾಗಿ. 'ಅಂತರಃ ವಿಷ್ಣುರೇವ' ಎಂದು ಅನುವೃತ್ತವಾಗಿದೆ. ಇದರ ತಾತ್ಪರ್ಯವನ್ನೇ ಟೀಕೆಯಲ್ಲಿ 'ನೈತತ್' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. ಕೇವಲ ಬ್ರಹ್ಮನ ಬಗ್ಗೆ ಶ್ರವಣ ಮಾಡುವುದರಿಂದ ಬ್ರಹ್ಮಪ್ರಾಪ್ತಿಯು ಉಂಟಾಗುವುದಿಲ್ಲ. ಆದ್ದರಿಂದ 'ಯ ಏವಂ ವೇದ' ಎಂಬುದಾಗಿ ಆಪರೋಕ್ಷ್ಯವನ್ನೂ ಹೇಳಿದ್ದಾರೆಂಬ ಅಭಿಪ್ರಾಯದಿಂದ 'ಉಪಲಕ್ಷಕಮ್' ಎಂದು ಟೀಕೆಯಲ್ಲಿ ಹೇಳಿದ್ದಾರೆ.

ಭಾವದೀಪಃ – ।। ಇತಿ ವೇತಿ ।। 'ಪ್ರಾಣೋ ಬ್ರಹ್ಮ' ಇತಿ ತಸ್ಯಾಪಿ ಪ್ರಕೃತತ್ವಾದಿತಿ ಭಾವಃ । ಪೂರ್ವಮೇನಾನಿತ್ಯುಕ್ತಬಹುವಚನಾನ್ತಪರತ್ವೇನಾರ್ಥ ಉಕ್ತಃ । ಅಧುನಾ 'ಆಚಾರ್ಯಸ್ತು ತೇ ಗತಿಂ ವಕ್ತಾ' ಇತಿ 'ಅಹಂ ತು ತೇ ತದ್ ವಕ್ಷ್ಯಾಮಿ' ಇತಿ ಯುಷ್ಮಚ್ಛಬ್ದೇನ ಪ್ರಕೃತಶ್ರೋತೃಪರತ್ವೇನಾರ್ಥಮಾಹ – ಅಥವೇತಿ ।। ತದಾ ನೋಪಲಕ್ಷಣಮಿತಿ ಭಾವಃ

'ಪ್ರಾಣೋ ಬ್ರಹ್ಮ' ಎಂಬುದೂ ಸಹ ಪ್ರಕೃತವಾಗಿದೆಯೆಂದು ತಿಳಿಯಬೇಕು. ಹಿಂದೆ ಏನಾನ್ ಎಂಬ ಬಹುವಚನಾಂತವಾದ ಶ್ರುತಿಗೆ ಅನುಗುಣವಾಗಿ ಸೂತ್ರವನ್ನು ವ್ಯಾಖ್ಯಾನಿಸಿದ್ದರು. ಈಗ 'ಆಚಾರ್ಯಸ್ತು ತೇ ಗತಿಂ ವಕ್ತಾ' 'ಅಹಂ ತು ತೇ ತದ್‌ವಕ್ಷ್ಯಾಮಿ' ಎಂಬುದಾಗಿ 'ಯುಷ್ಮತ್' ಶಬ್ದದಿಂದ ಪ್ರಕೃತವಾದದ್ದನ್ನು ಶ್ರೋತೃಪರವಾಗಿ ವ್ಯಾಖ್ಯಾನಿಸುತ್ತಿದ್ದಾರೆ ಅಥವಾ ಇತ್ಯಾದಿಯಾಗಿ. ಈ ಪಕ್ಷದಲ್ಲಿ ಉಪಲಕ್ಷಣವಾಗಿ ಯಾವುದನ್ನೂ ಇಟ್ಟುಕೊಳ್ಳಬೇಕಾಗಿಲ್ಲವೆಂದು ತಿಳಿಯಬೇಕು.

ಭಾವದೀಪಃ – ।। ಏತದಿತಿ ।। ಏತದ್ವಿದ್ಯೋಪಾಸನಾಫಲತ್ವೇನೇತ್ಯರ್ಥಃ ।। ಅನ್ಯಥೇತಿ ।। ಏತದ್ವಿದ್ಯಾಪ್ರಸ್ತಾವೇ ಯತ್ಕಿಞ್ಚಿತ್ಫಲರೂಪಗತ್ಯುಕ್ತೇರಸಙ್ಗತೇರಿತಿ ಭಾವಃ । ಹಿಶಬ್ದಸೂಚಿತಮಾಹ – ದೇವಾನಿತಿ ।। ಇತ್ಯಾದೇಃ ಗೀತಾಯಾಮಿತ್ಯರ್ಥಃ । 'ಜ್ಞಾತ್ವಾ ಪರತ್ವಂ ವಿಷ್ಣೋಸ್ತು ಪೃಥಗ್ ದೇವಾನ್ ಯಜನ್ನರಃ । ಯಾತಿ ದೇವಾನ್ ತದಜ್ಞಾತ್ವಾ ತಮ ಏವ ಪ್ರಪದ್ಯತೇ ।।' ಇತಿ ತಾತ್ಪರ್ಯಂ ಜ್ಞೇಯಮ್ । ತೇನ 'ಯೇऽಪ್ಯನ್ಯದೇವತಾಭಕ್ತಾಃ' ಇತ್ಯಾದಿವಿರೋಧಿನೇತಿ ಧ್ಯೇಯಮ್

ಟೀಕೆಯಲ್ಲಿರುವ 'ಏತದ್‌ವಿದ್ಯಾಫಲತ್ವೇನ' ಎಂಬ ಶಬ್ದಕ್ಕೆ ಏತದ್‌ವಿದ್ಯೋಪಾಸನೆಯ ಫಲದಿಂದ ಎಂದರ್ಥ. 'ಅನ್ಯಥಾ' ಎಂದರೆ ಏತದ್‌ವಿದ್ಯೆಯ ಪ್ರಸ್ತಾಪದಲ್ಲಿ ಯತ್‌ಕಿಂಚಿತ್ ಫಲವೆಂಬ ಗತಿಯನ್ನು ಹೇಳಿದ್ದು ಅಸಂಗತವಾಗುತ್ತದೆಂದು ತಿಳಿಯಬೇಕು. ಹಿ ಶಬ್ದದಿಂದ ಸೂಚಿತವಾದದ್ದನ್ನು 'ದೇವಾನ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. 'ಇತ್ಯಾದೇಃ' ಎಂದರೆ ಗೀತೆಯಲ್ಲಿ ಎಂದರ್ಥ. ಗೀತಾತಾತ್ಪರ್ಯದಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾರೆ - ''ಜ್ಞಾತ್ವಾ ಪರತ್ವಂ ವಿಷ್ಣೋಸ್ತು ಪೃಥಗ್ ದೇವಾನ್ ಯಜನ್ನರಃ । ಯಾತಿ ದೇವಾಂಸ್ತದಜ್ಞಾತ್ವಾ ತಮ ಏವ ಪ್ರಪದ್ಯತೇ ।।'' ಎಂದು.

'ತೇನ' ಶಬ್ದಕ್ಕೆ 'ಯೇऽಪ್ಯನ್ಯದೇವತಾಃ ಭಕ್ತಾಃ' ಇತ್ಯಾದಿ ವಿರೋಧಪ್ರಮಾಣವಿರುವುದರಿಂದ ಎಂದರ್ಥ.

ಭಾವದೀಪಃ – ।। अत इति ।। अन्यविद्यया अन्यगतेरयुक्तत्वादित्यर्थः । 'अस्मच्छब्दोदितोऽन्तस्थः आत्मा व्यापो जनार्दनः । अग्नयो द्विविधं विष्णुमब्रुवन् उपकोसलम् ।।' इति छान्दोग्यभाष्यदिशा 'सोऽहमस्मि' इत्यादि त्वन्तर्याम्यपेक्षयेति भाष्यस्यादिपदेनास्मद्विद्येत्युक्तिरपि ग्राह्येति भावेनोत्तरमाह – तस्या इति ।।

ಅನ್ಯವಿದ್ಯೆಯಿಂದ ಅನ್ಯಗತಿಯು ಅಯುಕ್ತವಾದ್ದರಿಂದ ಎಂದು "ಅತಃ" ಶಬ್ದಕ್ಕೆ ಅರ್ಥ. "ಅಸ್ಮಚ್ಛಬ್ದೋದಿತೋಽಂತಸ್ಥ ಆತ್ಮಾ ವ್ಯಾಪ್ತೋ ಜನಾರ್ದನಃ । ಅಗ್ನಯೋ ದ್ವಿವಿಧಂ ವಿಷ್ಣುಮಬ್ರುವನ್ ಉಪಕೋಸಲಂ" ಎಂದು ಛಾಂದೋಗ್ಯಭಾಷ್ಯದಲ್ಲಿ ಹೇಳಿದ ಪ್ರಕಾರ 'ಸೋಽಹಮಸ್ಮಿ' ಇತ್ಯಾದಿ ವಾಕ್ಯವನ್ನು ಅಂತರ್ಯಾಮಿಯಲ್ಲಿಯೇ ಕೂಡಿಸಬೇಕು. ಭಾಷ್ಯದಲ್ಲಿರುವ ಆದಿಪದದಿಂದ 'ಅಸ್ಮದ್‌ವಿದ್ಯಾ' ಎಂಬ ಮಾತನ್ನು ಸ್ವೀಕರಿಸಬೇಕೆಂಬ ಅಭಿಪ್ರಾಯದಿಂದ ಉತ್ತರಿಸುತ್ತಿದ್ದಾರೆ 'ತಸ್ಯಾಃ' ಇತ್ಯಾದಿಯಾಗಿ.

ಭಾವದೀಪಃ – उपपत्तेरित्युक्त्या सौत्रोपपत्तेरित्यस्य न केवलं श्रुतिलिङ्गोपपत्तेरित्यर्थः । किन्तु सोऽहमस्मीत्याद्युक्ताहंशब्दार्थवादानाम् अस्मद्विद्येत्युक्तेश्चान्तर्याम्यपेक्षयोप पत्तेरिति वृत्त्यन्तरं भाष्ये चोपपद्यत इति शेष इति सूचितमित्याहुः ।

'ಉಪಪತ್ತೇಃ' ಎಂದು ಹೇಳಿದ್ದರಿಂದ ಸೂತ್ರದಲ್ಲಿರುವ 'ಉಪಪತ್ತೇಃ' ಎಂಬ ಶಬ್ದಕ್ಕೆ ಕೇವಲ ಶ್ರುತಿಲಿಂಗಗಳೆಂಬ ಉಪಪತ್ತಿ ಇರುವುದರಿಂದ ಎಂದಷ್ಟೇ ಅರ್ಥವಲ್ಲ. ಹೊರತಾಗಿ 'ಸೋಽಹಮಸ್ಮಿ' ಇತ್ಯಾದಿಯಾಗಿ ಹೇಳಲ್ಪಟ್ಟ "ಅಹಂ" ಶಬ್ದ ಹಾಗೂ ಅರ್ಥವಾದಗಳ ಬಲದಿಂದ 'ಅಸ್ಮದ್‌ವಿದ್ಯಾ' ಎಂಬ ಶ್ರುತಿಯನ್ನು ಅಂತರ್ಯಾಮ್ಯಪೇಕ್ಷೆಯಿಂದ ಕೂಡಿಸಬೇಕಾದ್ದರಿಂದ ಎಂಬ ಮತ್ತೊಂದರ್ಥವನ್ನು ವಿವಕ್ಷಿಸಬೇಕು. ಇದನ್ನು 'ಭಾಷ್ಯೇ ಚ ಉಪಪದ್ಯತೇ ಇತಿ ಶೇಷಃ' ಎಂಬುದರಿಂದ ಸೂಚಿಸಿದ್ದಾರೆಂದು ಕೆಲವರ ವ್ಯಾಖ್ಯಾನ.

ಭಾವದೀಪಃ – ननु वक्तरि स्वरसस्यास्मच्छब्दस्य कुतोऽन्यपरत्वम् इत्यतो निरवकाशोपपत्तेरेव प्राबल्यमिति न्यायविवरणोक्तहेतुमाह – श्रुतेरपीति ।। अस्मदिति श्रुतेरपीत्यर्थः ।। निरवकाशेति ।। प्रागुक्तदिशाऽनेकेत्यपि ग्राह्यम् ।। उपपत्तेरिति ।। अमृतत्वाभयत्वरूपलिङ्गस्येत्यर्थः । पुरुषात्मब्रह्मशब्दानामुपलक्षणमेतत् । यद्वा निरवकाशश्रुतिलिङ्गोपपत्तेरित्यर्थः ।।

ಯಾರು ಉಪದೇಶ ಮಾಡುತ್ತಿದ್ದರೋ, ಅಂತಹ ಆಗ್ನಿಯಲ್ಲಿಯೇ 'ಅಸ್ಮತ್' ಶಬ್ದವನ್ನು ಕೂಡಿಸಲು ಬರುವಾಗ ಅನ್ಯಪರತ್ವವನ್ನು ಏಕೆ ಒಪ್ಪಬೇಕು ? ಎಂಬ ಪ್ರಶ್ನೆಗೆ 'ನಿರವಕಾಶೋಪಪತ್ತೇರೇವ ಪ್ರಾಬಲ್ಯಮ್' ಎಂಬ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ಹೇತುವನ್ನು 'ಶ್ರುತೇರಪಿ' ಎಂಬುದರಿಂದ ಹೇಳುತ್ತಿದ್ದಾರೆ.

'ಅಸ್ಮದ್' ಎಂಬ ವಾಕ್ಯಕ್ಕೆ ಶ್ರುತಿಗೂ ಸಹ ಎಂಬರ್ಥವನ್ನು ವಿವಕ್ಷಿಸಬೇಕು. 'ನಿರವಕಾಶ' ಎಂದರೆ ಹಿಂದೆ ಹೇಳಿದ ಪ್ರಕಾರ ಅನೇಕ ನಿರವಕಾಶ ಉಪಪತ್ತಿಗಳಿರುವುದರಿಂದ ಎಂದರ್ಥ. 'ಉಪಪತ್ತೇಃ' ಎಂದರೆ ಅಮೃತತ್ವ ಅಭಯತ್ವ ಮೊದಲಾದ ಉಪಪತ್ತಿಗಳಿಂದ ಎಂದರ್ಥ. ಪುರುಷಶಬ್ದ ಆತ್ಮಶಬ್ದ ಇವುಗಳನ್ನೂ ಸಹ ಉಪಲಕ್ಷಣಾ ವಿವಕ್ಷಿಸಬೇಕು. ಅಥವಾ ನಿರವಕಾಶವಾದ ಶ್ರುತಿ ಹಾಗೂ ಲಿಂಗಗಳೆಂಬ ಉಪಪತ್ತಿಗಳಿಂದ ಎಂದೂ ಸಹ ವ್ಯಾಖ್ಯಾನಿಸಬಹುದು.

ಭಾವದೀಪಃ – ಸರ್ವಗತಾತ್ಮೇತಿ ।। ತತ್ರೈವ ಭಾಷ್ಯೇ 'ಅಸ್ಮಚ್ಛಬ್ದೋದಿತೋऽನ್ತಸ್ಥಃ ಆತ್ಮಾ ವ್ಯಾಪ್ತೋ ಜನಾರ್ದನಃ' ಇತ್ಯುಕ್ತೇರಿತಿ ಭಾವಃ । ನನು ಶ್ರುತೌ 'ಕ ಆತ್ಮಾ' ಇತ್ಯಶ್ರವಣಾದ್ ಬ್ರಹ್ಮೇತ್ಯೇವ ಶ್ರವಣಾದಸ್ಮದ್ವಿದ್ಯಾ ಬ್ರಹ್ಮವಿದ್ಯಾ ಚೇತ್ಯೇವ ವಾಚ್ಯಮಿತ್ಯತ ಆಹ – **ತಸ್ಯೈವೇತಿ ।।** ಸರ್ವಗತಾತ್ಮನ ಏವೇತ್ಯರ್ಥಃ ।

ಸರ್ವಗತವಾದ ಆತ್ಮವಿದ್ಯೆ ಎಂದರೆ ಆದೇ ಶ್ರುತಿಯ ಭಾಷ್ಯದಲ್ಲಿ 'ಅಸ್ಮಚ್ಛಬ್ದೋऽದಿತೋಂತಸ್ಥಃ ಆತ್ಮಾ ವ್ಯಾಪ್ತೋ ಜನಾರ್ದನಃ' ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ. ಶ್ರುತಿಯಲ್ಲಿ 'ಕ ಆತ್ಮಾ' ಎಂದು ಕೇಳಿಸುತ್ತಿಲ್ಲ. ಕೇವಲ ಬ್ರಹ್ಮ ಎಂದಷ್ಟೇ ಕೇಳಿಸುತ್ತದೆ. ಹೀಗಿರುವಾಗ 'ಅಸ್ಮದ್‌ವಿದ್ಯಾ ಬ್ರಹ್ಮವಿದ್ಯಾ' ಎಂದೇ ಹೇಳಬೇಕಲ್ಲವೆ ? ಎಂಬ ಪ್ರಶ್ನೆಗೆ "ತಸ್ಯೈವ" ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ತಸ್ಯೈವ' ಎಂದರೆ ಸರ್ವಗತನಾದ ಆತ್ಮನೇ, ಎಂದರ್ಥ.

ಭಾವದೀಪಃ – ಬ್ರಹ್ಮಾತ್ಮಶಬ್ದಯೋಃ ಪರ್ಯಾಯತ್ವಾದಿತಿ ಭಾವಃ । ಕಮಾನನ್ದರೂಪಂ ಬ್ರಹ್ಮ ಪರಂ ಬ್ರಹ್ಮೇತಿ ತಚ್ಛಾಙ್ಕರಭಾಷ್ಯೋಕ್ತಾರ್ಥಮುಪೇತ್ಯೇಯಮುಕ್ತಿಃ । 'ಬ್ರಹ್ಮತ್ವಂ ಚ ವಿಶಿಷ್ಟತೇ' ಇತ್ಯನುಭಾಷ್ಯೋಕ್ತದಿಶಾ ಸುಖಾದಿಸ್ಥಪೂರ್ಣತ್ವವಾಚಿತ್ವೇನ ಕಮಿತ್ಯಾದೇರ್ವಿಶೇಷಣತ್ವೇ ತಸ್ಯೈವ ಬ್ರಹ್ಮತ್ವಾದಿತ್ಯುಕ್ತ್ಯಯೋಗಾತ್ ।।೧೬।।

ಬ್ರಹ್ಮಶಬ್ದ ಹಾಗೂ ಆತ್ಮಶಬ್ದಗಳು ಪರ್ಯಾಯ ಪದಗಳಾದ್ದರಿಂದ ಎಂದು ತಿಳಿಯಬೇಕು. ಕಮ್ = ಆನಂದ ರೂಪನಾದ, ಬ್ರಹ್ಮ = ಪರಬ್ರಹ್ಮನು ಎಂದು ಉಪನಿಷದ್‌ಭಾಷ್ಯದ ಅರ್ಥವನ್ನು ಅಂಗೀಕರಿಸಿ ಈ ಅರ್ಥವನ್ನು ಹೇಳಿದ್ದಾರೆ. 'ಬ್ರಹತ್ವಂಚ ವಿಶಿಷ್ಟತಾ' ಎಂಬ ಅನುವ್ಯಾಖ್ಯಾನದ ಮಾತಿನಂತೆ ಸುಖಾದ್ಯರ್ಥದಲ್ಲಿರುವ "ಕಮ್" ಪದವು ಬ್ರಹ್ಮನಲ್ಲಿ ವಿಶೇಷಣವಾದ ಮೇಲೆ ಆದನ್ನು ಬ್ರಹ್ಮನೆಂದು ಹೇಳಲು ಸಾಧ್ಯವಿಲ್ಲ.

ವಾಕ್ಯಾರ್ಥಮಞ್ಜರೀ

ಶಙ್ಕತೇ – ನೈವಮಿತಿ ।। ಉಪಕೋಸಲೇತಿ ।। ಹೇ ಸೌಮ್ಯೋಪಕೋಸಲ ತೇ ತುಭ್ಯಮ್ ಏಷाऽस्माद्विद्यान्तर्यामिविद्या आत्मविद्या सर्वगतात्मविद्या चोपदिष्टेत्यर्थः ।

नन्वग्निभिरात्मविद्यात्वेनोक्तविद्याया आदित्यस्थविद्यात्वादक्षिस्थविद्यायाः कथमग्निविषयत्वमित्यत आह – **अक्षिस्थविद्यायाश्चेति** ।। उक्तरीत्याक्ष्यादित्ययोरेकविधत्वादिति भावः ।। **ह्रयाम्यग्निमित्यादाविवेति** ।। यथा ह्रयाम्यग्निप्रथमं स्वस्तय इत्यत्राग्नेरुपक्रमेऽपि सवितारमूतये हिरण्मयेन सविता रथेनेत्यादि सवितृपरं श्रुतिलिङ्गादिना तत्प्रकरणं सूर्यमत्यवोक्तमनुक्रमिकायाम् ।। ह्रयाम्येकादशसावित्रमिति । तथात्रापि ब्रह्मण उपक्रमेऽप्यस्मद्विधेत्यग्नेरुक्तत्वादग्निप्रकरणमेवेति भावः ।। **तथा सतीति** ।। **अन्तर्यामिण एवात्मत्वादिति भावः** ।। **ॐ श्रुतोपनिषत्कगत्यभिधानाच्च ॐ** ।। श्रुतोपनिषदाम् अधीतैतद्विद्यानां पुंसां केन वायुना कस्य ब्रह्मणो गतेः प्राप्तेः 'स एनान् ब्रह्म गमयति' इत्यभिधानाच्च चक्षुरन्तरो विष्णुरेवेत्यर्थः ।। **अथेति** ।। अथेत्यर्थान्तरे । यदुच यद्यप्यस्मिन् ज्ञानिनि मृते शव्यं शवसम्बन्धि कर्म कुर्वन्त्येव तदीयाः यदुच नैव कुर्वन्ति तथापि ते ज्ञानिनः सर्वथा स्वज्ञानप्रसन्नभगवत्सामर्थ्याद्धृदयाग्रप्रज्वलनप्रकाशितद्वारेण ब्रह्मनाड्या देहादुत्क्रान्ता अर्चिषमर्चिर्नामकमूर्ध्वलोकं संविशन्त्येव प्राप्नुवन्त्येव । तत्र कञ्चन कालं स्थित्वा ततोऽर्चिष अर्चिर्लोकादतिवाहिकाख्यवायुलोकद्वारा अहरहरभिमानिदेवतालोकं प्राप्नुवन्ति । अह्नः अहर्लोकादापूर्यमाणपक्षं शुक्लपक्षाभिमानिदेवतालोकम् आपूर्यमाणपक्षादुद्गच्छन् यान् षण्मासानुदडेत्यादित्यस्तान् मासानुत्तरायणाभिमानिदेवतालोकं मासेभ्यस्तेभ्यः संवत्सरं संवत्सराभिमानिदेवतालोकं संवत्सरात्तडिद्वारेण प्रजापतिप्राप्तिद्वारादित्यमादित्या चन्द्रमसं चन्द्रमसो वैश्वानरेन्द्रध्रुवद्वारा विद्युतं विद्युन्नाम्नीं भारतीं प्राप्नुवन्ति ततस्तस्याः पुरुषो भर्ता मानवो मननान्मनुर्भगवांस्तस्यायं प्रियभृत्यो मानवो मुख्यवायुस्तं गच्छन्ति । स वायुरेनान् स्वप्राप्तान् प्रतीकालम्बनान् कार्यं ब्रह्म, अप्रतीकालम्बनाद् ब्रह्म गमयतीत्यर्थः ।। मनननिदिध्यासनोपलक्षणमिति ।। श्रवणमात्रस्य ब्रह्मप्राप्तिहेतुत्वासम्भवादिति भावः । वायुः क इति शब्दित इति सम्बन्धः ।। **अथवेति** ।। तथाच नोपलक्षणमिति भावः ।। **सामीप्यादिति** ।। श्रुतै तद्विद्याफलाभिधायकैतद्वाक्यानन्तरमेव यदुचैवेत्यादिश्रवणादिति भावः । अन्यथागतिकथनस्यैतद्विद्याफलकथनरूपत्वाभावे यजः याजकाः, कृष्णवाक्यमिदम् । 'अस्मच्छब्दोदितोऽन्तःस्थ आत्मा व्यासो जनार्दनः ।

ಅಗ್ನಯೋ ದ್ವಿವಿಧಂ ವಿಷ್ಣುಮವೋಚನ್ನುಪಕೋಸಲಮ್ ।।' ಇತಿ ಪ್ರಮಾಣಾನುಸಾರೇಣಾಹ – **ತಸ್ಯಾನ್ತರ್ಯಾಮೀತ್ಯಾದಿ ।।** ಶ್ರುತೇರಸ್ಮಾದಿತ್ಯಸ್ಯಾಃ ಸಕಾಶಾತ್ ಉಪಪತ್ತೇಃ ಏತದ್ವಿದ್ಯಾಫಲತ್ವೇನ ಕಗತ್ಯಭಿಧಾನರೂಪಾಯಾಃ । ನನು ಕಂ ಬ್ರಹ್ಮ ಖಂ ಬ್ರಹ್ಮೇತ್ಯುಕ್ತವಿದ್ಯಾಯಾಃ ಬ್ರಹ್ಮಶಬ್ದೋಪೇತತ್ವೇನ ಬ್ರಹ್ಮವಿದ್ಯಾತ್ವಾತ್ ಕಥಮಾತ್ಮವಿದ್ಯೇತ್ಯುಕ್ತ-ಸರ್ವಗತವಿದ್ಯಾತ್ವಮಿತ್ಯತ ಆಹ – **ತಸ್ಯೈವೇತಿ ।। ಸರ್ವಗತಸ್ಯೈವೇತ್ಯರ್ಥಃ ।।**

ಬ್ರಹ್ಮಮೀಮಾಂಸಾಶಾಸ್ತ್ರ

ಅಗ್ನಿಯು ಅಂತರನಾದಲ್ಲಿ ಬಾಧಕವಿದೆ

ಸೂ – ॐ ।। ಅನವಸ್ಥಿತೇರಸಮ್ಭವಾಚ್ಚ ನೇತರಃ ।। ॐ ।। ೧-೨-೧೭ ।।

ಅನುವಾದ – ಅಗ್ನಿಯೂ ಸಹ ಒಬ್ಬ ಜೀವನಾಗಿರುವುದರಿಂದ ಚಕ್ಷುರಿಂದ್ರಿಯದಲ್ಲಿ ಇದ್ದು ಅವನು ಪ್ರೇರಕನಾದರೆ, ಅವನಿಗೂ ಸಹ ಮತ್ತೊಬ್ಬ ಪ್ರೇರಕನು ಬೇಕಾಗುತ್ತದೆ. ಹೀಗೆ ಅನವಸ್ಥಾದೋಷ ಬರುವುದರಿಂದ ಮತ್ತು ಜೀವಸ್ವರೂಪನಾದ ಅಗ್ನಿಗೆ ಪ್ರೇರಕತ್ವವು ಅಸಂಭಾವಿತವಾಗಿರುವುದರಿಂದಲೂ ಬ್ರಹ್ಮನನ್ನು ಬಿಟ್ಟು ಅಗ್ನಿ ಮೊದಲಾದ ಜೀವರು ಚಕ್ಷುರಿಂದ್ರಿಯದಲ್ಲಿ ಅಂತರ್ಗತರಾಗಲು ಸಾಧ್ಯವಿಲ್ಲ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ – ಇತರಃ ಅಗ್ನಿಃ । ಚಕ್ಷುರನ್ತರೋ ನ ಕಿಂತು ವಿಷ್ಣುರೇವ । ಕುತಃ ಅನವಸ್ಥಿತೇಃ ಜೀವಸ್ಯ ಅಗ್ನೇಃ ಜೀವಾನ್ತರ ನಿಯಮಕತ್ವೇ ತಸ್ಯಾಪಿ ಜೀವತ್ವಾವಿಶೇಷಾತ್ ತಸ್ಯಾಪಿ ನಿಯಾ'ಕಾನ್ತರ ಅಭ್ಯುಪಗ' ತಸ್ಯಾಪ್ಯೇವಿ'ತಿ ಅನವಸ್ಥಾನಾತ್ । ಅಗ್ನಾದಿ ಜೀವಸ್ಯ ಜೀವಾನ್ತರನಿಯಾ'ಕತ್ವಾಸಂಭವಾತ್ ಚ ಇತ್ಯರ್ಥಃ ।।

ಇತರಃ = ಅಗ್ನಿಯು, ನ = ಚಕ್ಷುರಂತರ್ಗತನಲ್ಲ ಹೊರತಾಗಿ ವಿಷ್ಣುವೇ ಆಗಿದ್ದಾನೆ. ಏಕೆಂದರೆ ಅನವಸ್ಥಿತೇಃ = ಜೀವಸ್ವರೂಪನಾದ ಅಗ್ನಿಯೂ ಮತ್ತೊಬ್ಬ ಜೀವನಿಗೆ ಪ್ರೇರಣ ಮಾಡುವುದಾದರೆ, ಅಗ್ನಿಯೂ ಸಹ ಜೀವನೇ ಆಗಿರುವುದರಿಂದ ಅವನಿಗೆ ಮತ್ತೊಬ್ಬನ ನಿಯಾಮಕತೆಯ ಅನಿವಾರ್ಯತೆ ಇದೆ. ಹೀಗೆ ಅನವಸ್ಥಾದೋಷ ಬರುವುದರಿಂದ, ಚ = ಮತ್ತು, ಅಸಂಭವಾತ್ = ಅಗ್ನ್ಯಾದಿ ಜೀವರುಗಳಿಗೆ ಜೀವಾಂತರನಿಯಾಮಕತ್ವವು ಅಸಂಭಾವಿತವಾಗಿರುವುದಿಂದಲೂ ವಿಷ್ಣುವೇ ಆಕ್ಷಿಸ್ಥನಾಗಿದ್ದಾನೆ

ಭಾಷ್ಯಮ್ - ಜೀವಸ್ಯ ಜೀವಾನ್ತರನಿಯಾಮಕತ್ವೇऽನವಸ್ಥಿತೇः, ಸಾಮ್ಯಾದಸಮ್ಭವಾಚ್ಚ ನ ಜೀವः ನಿಯಮಪ್ರಮಾಣಾಭಾವಾತ್ । ಅನೀಶ್ವರಾಪೇಕ್ಷತ್ವಾಚ್ಚ ॥ ೧೭ ॥

॥ ಇತಿ ಅನ್ತರಾಧಿಕರಣಮ್ ॥ ೪ ॥

ಅನುವಾದ - ಅಗ್ನಿಯು ಜೀವನಾದ್ದರಿಂದ ಅವನಿಗೆ ಮತ್ತೊಬ್ಬ ನಿಯಮಾಕನು ಬೇಕಾಗುತ್ತದೆ. ಹೀಗೆ ಅನವಸ್ಥಾದೋಷ ಬರುತ್ತದೆ. ಮತ್ತು ಇತರ ಜೀವರಂತೆ ನಿಯಮ್ಯನಾದ್ದರಿಂದ ನಿಯಾಮಕತ್ವವು ಅವನಿಗೆ ಅಸಂಭಾವಿತವಾಗಿದೆ. ಜೀವನಾದ ಅಗ್ನಿಯು ನಿಯಮ್ಯನಲ್ಲ ಎಂಬ ವಿಷಯದಲ್ಲಿ ಯಾವುದೇ ಪ್ರಮಾಣವಿಲ್ಲ. ಮತ್ತು ಈಶ್ವರನನ್ನು ಅಪೇಕ್ಷೆ ಪಡದ ಅಗ್ನಿಗೆ ಅಕ್ಷಿನಿಯಾಮಕತ್ವವನ್ನೂ ಸಹ ಹೇಳಲಾಗುವುದಿಲ್ಲ.

ಪ್ರತಿಪದಾರ್ಥ - ಜೀವಸ್ಯ = ಜೀವನೇ ಆಗಿರುವ ಅಗ್ನಿಗೆ, ಜೀವಾಂತರ ನಿಯಾಮಕತ್ವೇ = ಉಳಿದ ಜೀವರುಗಳ ನಿಯಾಮಕತ್ವವನ್ನು ಹೇಳಿದರೆ, ಅನವಸ್ಥಿತೇः = ಅನವಸ್ಥಾ ದೋಷವು ಬರುತ್ತದೆ. ಮತ್ತು ಸಾಮ್ಯಾತ್ = ಉಳಿದ ಜೀವರಂತೆ ನಿಯಮ್ಯತ್ವವು ಸಮಾನವಾಗಿರುವುದರಿಂದ, ಅಸಂಭವಾಚ್ಚ = ನಿಯಾಮಕತ್ವವು ಕೂಡುವುದಿಲ್ಲ. ಆದ್ದರಿಂದ ನ ಜೀವः = ಜೀವನಾಗಿರುವ ಅಗ್ನಿಯು ನಿಯಾಮಕನಾಗುವುದಿಲ್ಲ. ನಿಯಮೇ = ನಿಯಮ್ಯನಲ್ಲವೆಂಬ ವಿಷಯದಲ್ಲಿ, ಪ್ರಮಾಣಾಭಾವಾತ್ = ಯಾವುದೇ ಪ್ರಮಾಣಗಳು ಇರುವುದಿಲ್ಲ, ಚ = ಮತ್ತು, ಅನೀಶ್ವರಾಪೇಕ್ಷತ್ವಾತ್ = ಈಶ್ವರನ ಅಪೇಕ್ಷೆ ಇಲ್ಲದಿರುವುದರಿಂದಲೂ, ಅಗ್ನಿಗೆ ಚಕ್ಷುರಂತಸ್ಥವು ಯುಕ್ತವಾಗುವುದಿಲ್ಲ.(೧)

---

(೧) **ಭಾಷ್ಯದೀಪಿಕಾ –** ಏವಮುಪಪತ್ಯಾದಿಭಿರ್ವಿಷ್ಣೋರಕ್ಷಿಸ್ಥತ್ವಂ ಪ್ರತಿಪಾದ್ಯ ವಿಪಕ್ಷೇ ಬಾಧಕೇನಾಪಿ ತತ್ಸಮರ್ಥಯತ್ಸೂತ್ರಂ ಪಠತಿ – ಅನವಸ್ಥಿತೇರಿತಿ ।। ಅತ್ರಾऽನ್ತರಸ್ತತ್ತಜ್ಜೀವಪ್ರೇರಕತಯಾ ತತ್ತಚ್ಚಕ್ಷುಸ್ಥಿತಃ 'ಇತರः' ಪೂರ್ವಪ್ರಕೃತಾತ್ ಕಶಬ್ದೋದಿತಾದ್ ಬ್ರಹ್ಮಣोऽನ್ योऽಗ್ನಿರ್ಜೀವो ನ । ಕುತः ? ಯತः ಸ ಇತರो ಜೀವ ಇತಿ ಹೇತುಸಾಧ್ಯಯೋಜನಾಮಭಿಪ್ರೇತ್ಯಾತ್ರ ವಿಪಕ್ಷೇऽನಿಷ್ಟಪ್ರಸಙ್ಗಾಭಿಧಾಯಕತಯाऽನವಸ್ಥಿತೇರಿತ್ಯಂಶಂ ಯೋಜಯತಿ – ಜೀವಸ್ಯೇತಿ ।।'ಸಾಮ್ಯಾತ್' ಇತಿ ಸೂತ್ರेऽಧ್ಯಾಹೃತಂ ಪದಂ ತತ್ತ್ವಪ್ರದೀಪರೀತ್ಯಾ ದೇಹಲೀದೀಪನ್ಯಾಯೇನೋಭಯತ್ರ ಸಮ್ಬಧ್ಯತೇ । ಜೀವಸ್ಯ ಜೀವಾನ್ತರನಿಯಾಮಕತ್ವೇ ಇತ್ಯೇತದ್ವಿಪರಿಣತಮಸಮ್ಭವಾದಿತ್ಯನೇನಾಪಿ ಸಮ್ಬಧ್ಯತೇ । ಚो ಹೇತುಸಮುಚ್ಚಯೇ । ಇತರ ಇತ್ಯಸ್ಯಾಗ್ನಿರಿತ್ಯರ್ಥೇ ವಾಚ್ಯೇ ಜೀವ ಇತಿ ಸಾಮಾನ್ಯೇನोಕ್ತಿः ಸಾಧ್ಯಹೇತ್ವोस्तन्त्रेणಾಭಿಧಾನಾರ್ಥಮ್ । ನ ಜೀವ ಇತ್ಯಸ್ಯ ಆನ್ತರ ಇತ್ಯುದ್ದೇಶ್ಯಸಮರ್ಪಕಾನುವೃತ್ತ-ಪದೇನಾನ್ವಯः । ಅನೇನ ತತ್ತಜ್ಜೀವಪ್ರೇರಕತಯಾ ತತ್ತಚ್ಚಕ್ಷುರನ್ತರो ನೇತರः ನಾಗ್ನಿः । ಕುತः ? ಯತः ಸ ಇತರो ಜೀವः ಜೀವತ್ವಾದಿತಿ ಯಾವತ್ । ನ ಚ ವಿಪಕ್ಷೇ ಬಾಧಕಾಭಾವः, ಜೀವಸ್ಯ ಜೀವಾನ್ತರನಿಯಾಮಕತ್ವೇ

श्रीपद्मनाभतीर्थविरचितसत्तर्कदीपावळिः

ॐ अनवस्थितेरसम्भवाच्च नेतरः ॐ ।। १-२-१७ ।।

युक्त्यन्तरबलादप्यादित्येऽक्षिणि च नियामकत्वेन स्थितो यः चक्षुषि तिष्ठन्नादिश्रुत्यन्तरे सिद्धो नाग्निरित्येतत्प्रतिपादयत्सूत्रमुपन्यस्य व्याचष्टे – अनवस्थितेरित्यादिना ।। अस्यार्थः । यथा जनपदनियोजितस्य तत्प्रजानां च नियम्यनियामकभावः क्षितिपत्यधीनः । एवमग्न्यादित्यानां जीवानां परस्परनियामकभावश्चेदसौ सर्वेशाज्ञाधीन एव भवेत् । अन्यथैकस्य जीवस्यान्येन जीवेन नियम्यत्वे तस्याप्यन्येन जीवेन नियम्यत्वं तस्याप्यन्येनेत्यनवस्था

प्रेरकत्वे आन्तरजीवस्यापि जीवत्वसाम्यात् तस्यापि नियामकं जीवान्तरं वाच्यमित्यनवस्थितेरसिद्धपरम्पराकल्पनरूपानवस्थाख्यानिष्टापत्तेः । अभ्युपगम्य चेदमुदितम् । वस्तुतस्तु – **जीवस्य जीवान्तरनियामकत्वासम्भवाच्च नेतरोऽग्निरन्तरः । कुतोऽसम्भवः ? अग्नेर्जीवस्य प्रेर्यजीवान्तरेण सह परतन्त्रत्वरूपजीवत्वसाम्यादिति सूत्रवृत्तिर्दर्शिता भवति ।।**

भाष्यदीपिका – ननु जीवप्रेरकाग्नेः स्वातन्त्र्याभ्युपगमान्नानवस्था । न चैवं जीवान्तरस्यापि स्वातन्त्र्यं स्याद् जीवत्वसाम्यादित्युक्तमिति वाच्यम् । जीवत्वसाम्येऽप्यग्नेरेव स्वातन्त्र्यं नान्येषामिति नियमाभ्युपगमादित्यत आह – **नियमेति ।।** जीवत्वसाम्येऽप्यग्नेरेव स्वातन्त्र्यं नान्येषामिति नियमे प्रमाणाभावादित्यर्थः । अतोऽग्नेः स्वातन्त्र्यायोगात् सुस्थैवानवस्थितिरिति भावः । नन्वस्त्वग्नेरस्वातन्त्र्यं, तथाऽपि तत्प्रेरकस्येश्वरस्य स्वातन्त्र्यसम्भवान्नानवस्थेत्यत आह – **अनीश्वरेति ।।** ईश्वरं जगत्प्रेरकत्वेन योऽपेक्षतेऽभ्युपैति स ईश्वरापेक्षः, स न भवतीत्यनीश्वरापेक्षः, तस्य भावस्तत्त्वं तस्मादित्यर्थः । पूर्ववादिन इति शेषः । हेतुसमुच्चये चशब्दः । एवं वा – ननु परतन्त्रत्वसाम्येऽपि जीवानां जीवान्तरनियामकत्वात् कथं तदसम्भव इत्यत आह – **अनीश्वरेति ।।** व्याख्यानं पूर्ववत् । तथा च – यथाऽस्मत्पक्षे सति राज्ञि मण्डलेशे प्रजानां राजशक्त्या नियम्यनियामकभाववद् ईश्वरशक्त्या जीवानां जीवान्तरनियामकत्वसम्भवः, न तथा परपक्षे सम्भवति, परेण ईश्वरानभ्युपगमादिति भावः । इदं च वाक्यद्वयस्य योजनाद्वयम् । टीकायां तत्त्वप्रदीपोक्तमेवोक्तम् । उक्तं हि तत्त्वप्रदीपे – नियमप्रमाणाभावोऽनीश्वरापेक्षत्वं चेत्युभौ उभयत्र हेतुरिति । 'उभयत्र' अनवस्थित्यसम्भवयोरित्यर्थः ।

।। इत्यन्तराधिकरणम् ।। ४ ।।

ಅಂತರಾಧಿಕರಣ (೧-೨-೨)

स्यात् । जीवत्वाविशेषान्नियम्यनियामकभावासम्भवश्च स्यात् तेषाम् । नचेश्वराज्ञानिरपेक्षत्वेन कस्यचित् जीवस्य नियम्यत्वं कस्यचित् नियामकत्वमित्यत्र प्रमाणमस्ति । अत उक्तहेतुभ्यां मुख्यनियामकस्य पुरुषोत्तमान्यस्यासम्भवात् । असावेव दिव्यदृष्टिगोचरोऽक्ष्यन्तरपुरुष इति सिद्धम् ।।

।। इति सत्तर्कदीपावळ्याम् अन्तराधिकरणम् ।।

ಮತ್ತೊಂದು ಯುಕ್ತಿಯ ಬಲದಿಂದಲೂ ಅದಿತ್ಯನಲ್ಲಿ ಮತ್ತು ಚಕ್ಷುರಿಂದ್ರಿಯದಲ್ಲಿ ನಿಯಾಮಕನಾಗಿರುವವನು 'यःश्चक्षुषि' ಎಂಬ ಮತ್ತೊಂದು ಶ್ರುತಿಯಿಂದ ಸಿದ್ಧನಾದ ಅಗ್ನಿಯು ಪ್ರತಿಪಾದ್ಯನಾಗುವುದಿಲ್ಲ. ಈ ವಿಷಯವನ್ನು ನಿರೂಪಿಸುವ ಸೂತ್ರವನ್ನು ಉಪನ್ಯಾಸಮಾಡಿ ವ್ಯಾಖ್ಯಾನಿಸುತ್ತಿದ್ದಾರೆ 'अनवस्थितेः' ಇತ್ಯಾದಿಯಾಗಿ.

ಸೂತ್ರಾರ್ಥ ಹೀಗಿದೆ - ಯಾವರೀತಿಯಾಗಿ ಒಂದು ಗ್ರಾಮದ ನಿಯಾಮಕನಿಗೆ ಮತ್ತು ಪ್ರಜೆಗಳಿಗೆ ಇರುವ ನಿಯಮ್ಯನಿಯಾಮಕಭಾವವು ರಾಜನ ಅಧೀನವಾಗಿರುತ್ತದೋ ಅದರಂತೆ ಅಗ್ನಿ ಮೊದಲಾದ ಜೀವರುಗಳಿಗೆ ಇರುವ ಪರಸ್ಪರ ನಿಯಮ್ಯನಿಯಾಮಕಭಾವವು ಸರ್ವಾಧಿಪತಿಯಾದ ಭಗವಂತನ ಅಧೀನವಾಗಿದೆ. ಹೀಗೊಪ್ಪದಿದ್ದರೆ ಒಬ್ಬ ಜೀವನಿಗೆ ಮತ್ತೊಬ್ಬ ನಿಯಾಮಕನು ಅವನಿಗೆ ಮಗದೊಬ್ಬ ನಿಯಾಮಕನೆಂದು ಅನವಸ್ಥಾದೋಷ ಬರುತ್ತದೆ. ಎಲ್ಲರೂ ಜೀವರೇ ಆಗಿರುವುದರಿಂದ ಯಾರೊಬ್ಬನನ್ನೂ ನಿಯಮ್ಯನಲ್ಲವೆಂದು ಹೇಳಲು ಸಾಧ್ಯವಿಲ್ಲ. ಮತ್ತು ಭಗವಂತನ ಅಪೇಕ್ಷೆ ಇಲ್ಲದೆ ಯಾರೊಬ್ಬ ಜೀವನಲ್ಲಿಯೂ ನಿಯಮ್ಯತ್ವವಾಗಲೀ, ನಿಯಾಮಕತ್ವವಾಗಲೀ ಇರುತ್ತದೆನ್ನಲು ಪ್ರಮಾಣವಿಲ್ಲ.

ಹೀಗೆ ಮೇಲೆ ಹೇಳಿದ ಎರಡು ಹೇತುಗಳಿಂದ ಪುರುಷೋತ್ತಮನನ್ನು ಬಿಟ್ಟು ಮತ್ತೊಬ್ಬನು ಮುಖ್ಯ ನಿಯಾಮಕನಾಗಲು ಸಾಧ್ಯವೇ ಇಲ್ಲ. ಆದ್ದರಿಂದ ಭಗವಂತನೇ ದಿವ್ಯದೃಷ್ಟಿಗೆ ಗೋಚರನಾದ ಅಕ್ಷಿಸ್ಥಪುರುಷನಾಗಿದ್ದಾನೆಂದು ನಿರ್ಣಯವಾಯಿತು.

ಇಲ್ಲಿಗೆ ಸತರ್ಕದೀಪಾವಳಿಯ ಕನ್ನಡಾನುವಾದದಲ್ಲಿ ಅಂತರಾಧಿಕರಣವು ಸಮಾಪ್ತವಾಯಿತು.

ಶ್ರೀಕೃಷ್ಣಾರ್ಪಣಮಸ್ತು

ಪರಿಪೂರ್ಣಚಂದ್ರಿಕಾ

तत्वप्रकाशिका –

ॐ अनवस्थितेरसम्भवाच्च नेतरः ॐ ।। १-२-१७ ।।

एवमुपपत्त्यादियुक्तिभिर्विष्णोरक्षिस्थत्वं प्रतिपाद्य विपक्षे बाधकेनापि समर्थयत्सूत्रमुपन्यस्य व्याचष्टे – अनवस्थितेरिति ।। नायं चक्षुरन्तःस्थोऽग्निर्भवेत् । अस्य तत्तत्प्रेरकत्वेन तत्तच्चक्षुःस्थितेरभिप्रेतत्वात् । नचाग्नेरन्यप्रेरकत्वं युक्तम्, जीवत्वात् । जीवस्य तस्य जीवान्तरनियामकत्वे तस्यापि जीवान्तर नियामकमित्यनवस्थानात् । पूर्वपूर्वचेष्टासिद्धावुत्तरोत्तरचेष्टा-सिद्धिरिति मूलक्षतेः । अभ्युपगम्य चेदमुदितम् । अग्नेरपि प्रेर्येण सह जीवत्वसाम्यात् प्रेरणासम्भवाच्चेत्यर्थः ।

ಇದುವರೆಗೂ ಉಪಪತ್ತಿಯೇ ಮೊದಲಾದ ಯುಕ್ತಿಗಳಿಂದ (ಅಮೃತತ್ವ, ಸ್ಥಾನಶಕ್ತಿ, ಸುಖಪೂರ್ಣತಾ ಮುಂತಾದವುಗಳು) ವಿಷ್ಣುವೇ ಕಣ್ಣಿನಲ್ಲಿ ನಿಯಾಮಕನೆಂದು ಪ್ರತಿಪಾದನೆ ಮಾಡಿದ್ದಾಯಿತು. ಇನ್ನು ಮುಂದೆ ಅಕ್ಷಿಸ್ಥನು ಅಗ್ನಿಯೇ ಎಂದು ಒಪ್ಪಿದರೆ ಯಾವರೀತಿ ಬಾಧ ಬರುತ್ತದೆಂದು ಹೇಳಿ ಆದಕ್ಕೆ ವಿಷ್ಣುತ್ವ ಸಮರ್ಥನೆ ಮಾಡುವ ಸೂತ್ರವನ್ನು ಹೇಳಿ, ಸೂತ್ರದ ವ್ಯಾಖ್ಯಾನವನ್ನು ''ಅನವಸ್ಥಿತೇಃ'' ಎಂಬ ವಾಕ್ಯದಿಂದ ಮಾಡುತ್ತಿದ್ದಾರೆ.

ಚಕ್ಷುರಂತಃಸ್ಥನು ಅಗ್ನಿಯು ಆಗುವುದಿಲ್ಲ. ಏಕೆಂದರೆ ಚಕ್ಷುರಂತಃಸ್ಥನಿಗೆ ''ಸಂಯದ್ವಾಮ'' ''ವಾಮನಿ'' ''ಭಾಮನಿ'' ಇತ್ಯಾದಿ ಶಬ್ದಗಳಿಂದ ಆಯಾ ಜೀವರಗಳಿಗೆ ಪ್ರೇರಕನೆಂದು ಹೇಳಬೇಕು. ಆದರೆ ಅಗ್ನಿಗೆ ಈ ರೀತಿಯಾದ ಪ್ರೇರಕತ್ವವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಅಗ್ನಿಯೂ ಸಹ ಜೀವನೇ ಆಗಿರುವುದರಿಂದ, ಅವನು ಮತ್ತೊಬ್ಬ ಜೀವನಿಗೆ ನಿಯಾಮಕನೆಂದು ಒಪ್ಪಿಕೊಂಡರೆ, ಆ ಅಗ್ನಿಗೆ ಮತ್ತೊಬ್ಬ ಜೀವನು ನಿಯಾಮಕನೆಂದು ಹೇಳಬೇಕು. ಈ ರೀತಿಯಾಗಿ ಹೇಳುತ್ತಾ ಹೋದರೆ ಅನವಸ್ಥಾ ಎಂಬ ದೋಷ ಬರುತ್ತದೆ. ಹಿಂದಿನವರ ಚೇಷ್ಟೆಯು ಅಸಿದ್ಧವಾದರೆ ಮುಂದಿನವರ ಚೇಷ್ಟೆಯೂ ಅಸಿದ್ಧವಾಗುತ್ತದೆ. ಈ ರೀತಿಯಾಗಿ ಅಗ್ನಿಯ ಪ್ರೇರಕತ್ವವು ಅಸಿದ್ಧವಾಗಿ ಅನವಸ್ಥಾದೋಷದಿಂದ ಮೂಲ ಕ್ಷತಿಯಾಗುತ್ತದೆ. ಅಗ್ನಿಯು ಪ್ರೇರಕನೆಂದು ಒಪ್ಪಿಕೊಂಡು ಅನವಸ್ಥಾದೋಷವನ್ನು ಹೇಳಿದ್ದಾರೆ. ಆದರೆ ಪ್ರೇರಕನಾದ ಅಗ್ನಿಗೂ ಪ್ರೇರ್ಯನಾದ ಜೀವನಿಗೂ ಜೀವತ್ವವೆಂಬ ಧರ್ಮವು ಸಾಮ್ಯವಿರುವುದರಿಂದ ಅಗ್ನಿಗೆ ಪ್ರೇರಣತ್ವವು ಯಾವ ಕಾಲಕ್ಕೂ ಕೂಡುವುದಿಲ್ಲವೆಂದು ಅರ್ಥ.

ತತ್ವಪ್ರಕಾಶಿಕಾ – ಜೀವಪ್ರೇರಕಾಗ್ನೇಃ ಸ್ವಾತನ್ತ್ರ್ಯಾಭ್ಯುಪಗಮಾನ್ನಾನವಸ್ಥೇತ್ಯತ ಆಹ – ನಿಯಮೇತಿ ।। ಅಗ್ನೇಃ ಸ್ವತನ್ತ್ರತ್ವೇ ಜೀವಾನ್ತರಸ್ಯಾಪಿ ತತ್ ಸ್ಯಾತ್ । ಅನ್ಯಥಾऽಗ್ನೇರಪಿ ತನ್ನ ಸ್ಯಾತ್ । ಜೀವತ್ವಸಾಮ್ಯೇऽಪ್ಯಗ್ನೇರೇವ ಸ್ವಾತನ್ತ್ರ್ಯಂ ನಾನ್ಯೇಷಾಮಿತಿ ನಿಯಮೇ ಪ್ರಮಾಣಾಭಾವಾತ್ । ಅತೋऽಗ್ನೇಃ ಸ್ವಾತನ್ತ್ರ್ಯಾಯೋಗಾತ್ ಸುಸ್ಥೈವಾನವಸ್ಥೇತಿ ಭಾವಃ ।

ಜೀವರಿಗೆ ಪ್ರೇರಕನಾದ ಅಗ್ನಿಯು ಸ್ವತಂತ್ರನಾಗಿದ್ದಾನೆಂದು ಒಪ್ಪಿ ಅನವಸ್ಥಾದೋಷವನ್ನು ಪರಿಹಾರ ಮಾಡಿಕೊಳ್ಳಬಹುದಲ್ಲವೇ? ಎಂದು ಪ್ರಶ್ನೆ ಮಾಡಿದರೆ ಆಚಾರ್ಯರು ಭಾಷ್ಯದಲ್ಲಿ ''ನಿಯಮ'' ಎಂಬ ವಾಕ್ಯದಿಂದ ಉತ್ತರವನ್ನು ಹೇಳುತ್ತಿದ್ದಾರೆ. ಒಂದು ವೇಳೆ ಅಗ್ನಿಯು ಸ್ವತಂತ್ರನಾಗಿದ್ದ ಪಕ್ಷದಲ್ಲಿ ಅನ್ಯಜೀವರೂ ಸಹ ಸ್ವತಂತ್ರರಾಗಲಿ. ಇಲ್ಲದ್ದಿದ್ದರೆ ಅಗ್ನಿಯೂ ಸಹ ಸ್ವತಂತ್ರನಾಗಲಾರ. ಜೀವತ್ವಸಾಮ್ಯವಿದ್ದರೂ ಅಗ್ನಿಮಾತ್ರ ಸ್ವತಂತ್ರ, ಅನ್ಯ ಜೀವರು ಅಸ್ವತಂತ್ರರು ಎಂದು ಹೇಳಲು ಯಾವ ಪ್ರಮಾಣಗಳ ಆಧಾರವೂ ಇಲ್ಲ. ಆದ್ದರಿಂದ ಅಗ್ನಿಗೆ ಸ್ವಾತಂತ್ರ್ಯವು ಸಿದ್ಧವಾಗದ್ದರಿಂದ ಅನವಸ್ಥಾ ದೋಷವೂ ಸಹ ಪರಿಹಾರವಾಗುವುದಿಲ್ಲ.

ತತ್ವಪ್ರಕಾಶಿಕಾ – ಅಸ್ತು ಅಗ್ನೇಃ ಅಸ್ವಾತನ್ತ್ರ್ಯಂ ತಥಾಪಿ ತತ್ಪ್ರೇರಕಸ್ಯೇಶ್ವರಸ್ಯ ಸ್ವಾತನ್ತ್ರ್ಯಸಮ್ಭವಾನ್ನಾನವಸ್ಥೇತ್ಯತ ಆಹ – ಅನೀಶ್ವರೇತಿ ।। ತ್ವಯೇಶ್ವರಾನಭ್ಯುಪಗಮಾನ್ನೈವಮನವಸ್ಥಾ-ಪರಿಹಾರ ಇತ್ಯರ್ಥಃ । ಈಶ್ವರಾಭ್ಯುಪಗಮೇ ಸ ಏವ ಅಕ್ಷಿಸ್ಥತಯಾ ಯುಕ್ತ್ಯಾದಿಪ್ರಾಪ್ತಃ ಕಿಮಪೋದ್ಯತೇ ।

ಅಗ್ನಿಯು ಅಸ್ವತಂತ್ರನಾಗಲಿ ಅದರೂ ಸಹ ಅವನಿಗೆ ಪ್ರೇರಕನಾದ ಈಶ್ವರನು ಸ್ವತಂತ್ರನಾಗಿರುವುದರಿಂದ ಅನವಸ್ಥಾದೋಷ ಪರಿಹಾರವಾಗುತ್ತದಲ್ಲವೆ? ಎಂಬ ಪ್ರಶ್ನೆಗೆ ಉತ್ತರವನ್ನು ''ಅನೀಶ್ವರ'' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ನೀನು ಈಶ್ವರನನ್ನೇ ಅಂಗೀಕಾರ ಮಾಡಿಲ್ಲವಾದ್ದರಿಂದ ಅನವಸ್ಥಾದೋಷವು ಪರಿಹಾರವಾಗುವುದಿಲ್ಲ ಎಂದು ಅರ್ಥ. ಒಂದು ವೇಳೆ ಈಶ್ವರನನ್ನು ಅಂಗೀಕಾರ ಮಾಡುತ್ತೇನೆಂದರೆ, ಈಶ್ವರನೇ ಅಕ್ಷಿಸ್ಥನಾಗಿದ್ದಾನೆ ಎಂಬುದಕ್ಕೆ ಅನೇಕ ಯುಕ್ತಿಗಳು ಇರಬೇಕಾದರೆ ಯಾವಕಾರಣದಿಂದ ಅದನ್ನು ವಿರೋಧಿಸುತ್ತೀರಿ?

ತತ್ವಪ್ರಕಾಶಿಕಾ – ನನು ಜೀವತ್ವಸಾಮ್ಯेऽಪಿ ನೀಚೋच्ಯಭಾವವನ್ನಿಯಮ್ಯನಿಯಾಮಕ-ಭಾವಸಮ್ಭವಃ ಕಿನ್ನ ಸ್ಯಾದಿತ್ಯತ ಆಹ – ನಿಯಮೇತಿ ।। ನಿಯಾಮಕವಿಶೇಷೇ ಪ್ರಮಾಣಾಭಾವಾತ್ ನ ದೃಷ್ಟಾನ್ತಮಾತ್ರೇಣ ನಿಯಮ್ಯನಿಯಾಮಕಭಾವಸಮ್ಭವ ಇತಿ ಭಾವಃ । ನನು ಭವತಾप್ಯಗ್ನ್ಯಾದಿಜೀವಾನಾಂ ಜೀವಾನ್ತರನಿಯಾಮಕತ್ವಾಭ್ಯುಪಗಮಾತ್ ಕಥಂ ತದಸಮ್ಭವ ಇತ್ಯತೋ ವಾऽऽಹ – ಅನೀಶ್ವರೇತಿ ।। ಯಥಾ ಸತಿ ರಾಜ್ಞಿ ಮण್ಡಲೇಶೇ ಪ್ರಜಾನಾಂ ತच್ಛಕ್ತ್ಯಾ ನಿಯಮ್ಯನಿಯಾಮಕಭಾವಃ

सम्भवति, नत्वराजके लोके तथाऽस्मत्पक्षे जीवानामीश्वरशक्त्या जीवान्तरनियामकत्वमुप-पद्यते न परपक्षे । परमेश्वरानङ्गीकारादिति भावः । तस्माद् विष्णुरेव अक्ष्यादित्यस्थो दिव्यदृष्टिगोचरोऽतः स एवानन्दमयस्तज्ज्ञानादेव मोक्ष इति सिद्धम् ।। १७ ।।

।। इति श्रीमज्जयतीर्थभिक्षुविरचितायां तत्वप्रकाशिकायाम्
अन्तराधिकरणम् ।।

ಪ್ರಶ್ನೆ - ಅಗ್ನಿ ಮತ್ತು ಜೀವ ಇಬ್ಬರಲ್ಲೂ ಜೀವತ್ವವೆಂಬ ಧರ್ಮದ ಸಾಮ್ಯವಿದ್ದರೂ ಸಹ 'ನೀಚ' ಮತ್ತು 'ಉಚ್ಚ' ಭಾವವಿರುವುದರಿಂದ 'ನಿಯಮ್ಯನಿಯಾಮಕಭಾವ' ಏಕಿರಬಾರದು?

ಉತ್ತರ - ಈ ಪ್ರಶ್ನೆಗೆ ಉತ್ತರವನ್ನು ''ನಿಯಮ'' ಎಂಬ ವಾಕ್ಯದಿಂದ ಹೇಳಿದ್ದಾರೆ. ಅಂದರೆ ಅಗ್ನಿಯು ಇತರ ಜೀವರ ನಿಯಾಮಕನೆಂಬ ವಿಷಯದಲ್ಲಿ ಪ್ರಮಾಣವಿಲ್ಲದ್ದರಿಂದ ಕೇವಲ ಉಚ್ಚನೀಚದೃಷ್ಟಾಂತದಿಂದಲೇ ನಿಯಮ್ಯನಿಯಾಮಕಭಾವವನ್ನು ಹೇಳಲು ಬರುವುದಿಲ್ಲ ಎಂದು ಅಭಿಪ್ರಾಯ.

ಪ್ರಶ್ನೆ - ಸಿದ್ಧಾಂತಿಗಳೂ ಸಹ ಅಗ್ನಿಯೇ ಮೊದಲಾದ ಜೀವರಿಗೆ ಜೀವಾಂತರನಿಯಾಮಕತ್ವವನ್ನು ಒಪ್ಪಿರುವಾಗ, ಹೇಗೆ ನಿಯಮ್ಯನಿಯಾಮಕಭಾವವನ್ನು ಅಸಂಭವವೆಂದು ಹೇಳುತ್ತೀರಿ?

ಉತ್ತರ - ಈ ಪ್ರಶ್ನೆಗೂ ಸಹ ಉತ್ತರವನ್ನು 'ಅನೀಶ್ವರ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಇದರ ಅಭಿಪ್ರಾಯ - ಒಬ್ಬ ಚಕ್ರವರ್ತಿಯ ಆಧಿಪತ್ಯದಲ್ಲಿ ಅವನ ಆಜ್ಞೆ ಮತ್ತು ಸಾಮರ್ಥ್ಯದಿಂದ ಅವನ ಆಧೀನರಾದ ಬೇರೆ ಗ್ರಾಮದ ಮುಖ್ಯಸ್ಥರಿಗೆ ನಿಯಮ್ಯನಿಯಾಮಕಭಾವವು ಕೂಡುತ್ತದೆ. ಆದರೆ ಯಾವ ರಾಜ್ಯದಲ್ಲಿ ರಾಜನೇ ಇರುವುದಿಲ್ಲವೋ ಅಲ್ಲಿ ನಿಯಮ್ಯನಿಯಾಮಕಗಳನ್ನು ಹೇಳಲು ಬರುವುದೇ ಇಲ್ಲ. ಆದರಂತೆ ನಮ್ಮ ಪಕ್ಷದಲ್ಲಿ ಈಶ್ವರನ ಶಕ್ತಿಯಿಂದ ಜೀವರಲ್ಲಿ ನಿಯಮ್ಯನಿಯಾಮಕಭಾವವು ಕೊಡುತ್ತದೆ. ಆದರೆ ಪರಪಕ್ಷದವರು ಈಶ್ವರನನ್ನೇ ಅಂಗೀಕರಿಸಿಲ್ಲವಾದ್ದರಿಂದ ಈ ನಿಯಮ್ಯನಿಯಾಮಕ ಭಾವವನ್ನು ಹೇಳಲು ಬರುವುದಿಲ್ಲ.

ಆದ್ದರಿಂದ ಅಕ್ಷಿ ಹಾಗೂ ಆದಿತ್ಯರಲ್ಲಿ ವಿಷ್ಣುವೇ ಅಂತಸ್ಥನಾಗಿದ್ದಾನೆ. ಅವನು ದಿವ್ಯದೃಷ್ಟಿಗೆ ಗೋಚರನಾಗಿದ್ದಾನೆ. ಅವನೇ ಆನಂದಮಯನಾಗಿದ್ದಾನೆ ಮತ್ತು ಅವನ ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಸಿದ್ಧವಾಯಿತು.

॥ ತತ್ತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ಅಂತರಾಧಿಕರಣವು ಸಮಾಪ್ತವಾಯಿತು ॥

ಭಾವದೀಪಃ – ಉಪಪತ್ಯಾದೀತ್ಯಾದಿಪದೇನ ಸ್ಥಾನಾದಿಶಕ್ತಿಸುಖವಿಶಿಷ್ಟಾಭಿಧಾನಾದಿಗ್ರಹಃ । ನ ಜೀವ ಇತ್ಯಸ್ಯಾರ್ಥಃ – ನಾಯಮಿತಿ ।। ಅನ್ತರ ಇತ್ಯನುವರ್ತತ ಇತಿ ಭಾವಃ । ಭಾಷ್ಯೋಕ್ತಾಪಾದ ಕಸ್ಯಾಸಿದ್ಧಿನಿರಾಸಾಯ ಪರಿಷ್ಕರೋತಿ – ಅಸ್ಯ ತತ್ತತ್ಪ್ರೇರಕತ್ವೇನೇತಿ ।। ವಾಮನಿಭಾಮನಿಶಬ್ದಾಭ್ಯಾಂ ಸರ್ವಸ್ತ್ರೀಪುಂಸನೇತೃತ್ವಸ್ಯಾಕ್ಷಿಸ್ಥೇ ಶ್ರುತೌ ಪ್ರತೀತೇರಿತಿ ಭಾವಃ ।

ಟೀಕೆಯಲ್ಲಿರುವ ''ಉಪಪತ್ಯಾದಿ'' ಎಂಬಲ್ಲಿರುವ ''ಆದಿ'' ಪದದಿಂದ 'ಸ್ಥಾನಾದಿಶಕ್ತಿ', 'ಸುಖವಿಶಿಷ್ಟಾಭಿಧಾನಾತ್' ಮೊದಲಾದ ಹೇತುಗಳನ್ನು ಸ್ವೀಕರಿಸಬೇಕು. ಭಾಷ್ಯದಲ್ಲಿರುವ ''ನ ಜೀವಃ'' ಎಂಬ ಪದದ ಅರ್ಥವನ್ನು ''ನಾಯಂ'' ಎಂದು ಹೇಳಿದ್ದಾರೆ. ಅಂತರ ಎಂಬುದನ್ನು ಅನುವೃತ್ತಿ ಮಾಡಿಕೊಂಡು 'ನ ಜೀವಃ ಅಂತರಃ' ಎಂದು ವಿವಕ್ಷಿಸಬೇಕು.

ಭಾಷ್ಯದಲ್ಲಿ ಆಪಾದನೆ ಮಾಡಿರುವ ಅನವಸ್ಥಾದೋಷಕ್ಕೆ ಅಸಿದ್ಧಿಯನ್ನು ಪರಿಹರಿಸಲು, ''ಅಸ್ಯ ತತ್ತತ್ಪ್ರೇರಕತ್ವೇನ'' ಎಂದು ಪರಿಷ್ಕರಿಸುತ್ತಿದ್ದಾರೆ. ವಾಮನಿ ಭಾಮನಿ ಶಬ್ದಗಳಿಂದ ಸಕಲ ಸ್ತ್ರೀ ಮತ್ತು ಪುರುಷರುಗಳ ಪ್ರೇರಕನೆಂದು ಹೇಳಲಾಗಿದೆ. ಪರಮಾತ್ಮನ ಇಂತಹ ಎರಡು ರೂಪಗಳನ್ನು ಶ್ರುತಿ ಹೇಳುತ್ತಿದೆಯೆಂದು ತಿಳಿಯಬೇಕು.

ಭಾವದೀಪಃ – ಭಾಷ್ಯೇ ನಾಗ್ನಿರಿತಿ ವಾಚ್ಯೇ ಜೀವಪದೋಕ್ತ್ಯಾ ಸೂಚಿತಾಂ ಯುಕ್ತಿಮಾಹ – ಜೀವತ್ವಾದಿತಿ ।। ಜೀವಸ್ಯೇತ್ಯಾದೇರರ್ಥಃ – ಜೀವಸ್ಯೇತಿ ।। ಅಸಮ್ಭವಾದಿತ್ಯಸ್ಯ ಪೂರ್ವೋಕ್ತೇನ ವ್ಯಾಘಾತನಿರಾಸಾಯಾಹ – ಅಭ್ಯುಪಗಮ್ಯೇತಿ ।। ಪ್ರೇರಕತ್ವಮಿತ್ಯರ್ಥಃ । ಇದಮ್ ಅನವಸ್ಥಾನಮ್ । ಅನವಸ್ಥಾನಿರಾಸಾಯಾಗ್ನೇಃ ಸ್ವಾತನ್ತ್ರ್ಯಶಙ್ಕಾದಪ್ರೇರೇವೇತಿ ನಿಯಮದೂಷಣಮಸಙ್ಗತಮಿತ್ಯತೋ ವ್ಯಾಚಷ್ಟೇ – ಅಗ್ನೇರಿತಿ ।। ತ್ವಯಾ ಪೂರ್ವಪಕ್ಷಿಣಾ ।। ನೈವಮಿತಿ ।। ತೇನ ಪ್ರಾಣಾಭಾವಾದಿತ್ಯನೇನ ಸಮುಚ್ಚಯಾರ್ಥಶ್ಚಶಬ್ದ ಇತಿ ಭಾವಃ ।। ನೀಚೋಚೇತಿ ।। 'ವೃದ್ಧಿಹ್ರಾಸಭಾಕ್ತ್ವಮನ್ತರ್ಭಾವಾದ್' 'ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಮ್' 'ಇಯದಾಮನನಾತ್' 'ನಾವಿಶೇಷಾದ್'

इत्यादिसूत्रैरानन्दस्य मीमांसा भवति । वाग्वाव नाम्नो भूयसि इत्यादिभिश्चाङ्गीकृततरतमभाववदित्यर्थः । नियमशब्दार्थः – नियामकेति ।।

ಭಾಷ್ಯದಲ್ಲಿ 'ನ ಅಗ್ನಿಃ' ಎಂದು ಹೇಳಬೇಕಿತ್ತು. ಆದರೆ 'ನ ಜೀವಃ' ಎಂದು ಹೇಳಿದ್ದಾರೆ. ಹೀಗೆ ಜೀವನೆಂದು ಹೇಳಿದ್ದರ ಪ್ರಯೋಜನವನ್ನು 'ಜೀವತ್ವಾತ್' ಎಂದು ಟೀಕೆಯಲ್ಲಿ ಹೇಳಿದ್ದಾರೆ. 'ಜೀವತ್ವ' ಎಂಬ ಯುಕ್ತಿಯನ್ನು ತೋರಿಸಿದಂತಾಯಿತು. ಭಾಷ್ಯದಲ್ಲಿರುವ 'ಜೀವಸ್ಯ' ಇತ್ಯಾದಿ ವಾಕ್ಯದ ಅರ್ಥವನ್ನೇ ಟೀಕೆಯಲ್ಲಿ 'ಜೀವಸ್ಯ ತಸ್ಯ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ.

'ಅಸಂಭವಾತ್' ಎಂದು ಭಾಷ್ಯದಲ್ಲಿ ಹೇಳಿದ್ದಕ್ಕೆ ವ್ಯಾಘಾತ ಬರುತ್ತದೆ. ಆದರ ಪರಿಹಾರಕ್ಕಾಗಿ 'ಅಭ್ಯುಪಗಮ್ಯ' ಎಂದಿದ್ದಾರೆ. ಪ್ರೇರಕತ್ವವನ್ನು ಅಗ್ನಿಯಲ್ಲಿ ಅಂಗೀಕರಿಸಿ ಹೇಳಿದ್ದಾರೆಂದರ್ಥ. 'ಇದಂ' ಶಬ್ದಕ್ಕೆ ಆನವಸ್ಥಾನ ಎಂದರ್ಥ. ಅನವಸ್ಥಾನಿರಾಸ ಮಾಡುವುದಕ್ಕಾಗಿ ಅಗ್ನಿಗೆ ಸ್ವಾತಂತ್ರ್ಯವಿಲ್ಲವೆನ್ನಬೇಕು. ಆದ್ದರಿಂದ ಅಗ್ನಿಯೇ ನಿಯಾಮಕನೆಂದು ಹೇಳಿದರೆ ಆನವಸ್ಥಾ ಬರುತ್ತದೆಂದು ಹೇಳಿದ್ದು ಅಸಂಗತವಾಗುತ್ತದಲ್ಲವೆ ? ಎಂಬ ಪ್ರಶ್ನೆಗೆ 'ಅಗ್ನೇಃ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

'ತ್ವಯಾ' ಎಂದರೆ ಪೂರ್ವಪಕ್ಷಿಯಿಂದ ಎಂದರ್ಥ. 'ನೈವಂ' ಎಂದು ಹೇಳಿದ್ದರಿಂದ 'ಪ್ರಮಾಣಾಭಾವಾತ್' ಎಂಬುದರಿಂದ ಸಮುಚ್ಚಯಾರ್ಥದಲ್ಲಿ ಚ ಶಬ್ದವಿದೆಯೆಂದು ತಿಳಿಯುತ್ತದೆ. 'ನೇಚ್ಚೋಚ್ಚ ' ಇತ್ಯಾದಿ ವಾಕ್ಯದ ಅಭಿಪ್ರಾಯ ಹೀಗಿದೆ - 'ವೃದ್ಧಿಹ್ರಾಸಭಾಕ್ತ್ವಮಂತರ್ಭಾವಾತ್' ಎಂಬ ಸೂತ್ರದಲ್ಲಿ ಮತ್ತು 'ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಮ್', 'ಇಯದಾಮನನಾತ್', ಸೂತ್ರಗಳಿಂದ ಆನಂದದ ಮೀಮಾಂಸೆ ಮಾಡಲಾಗಿದೆ. ಅವರವರ ಯೋಗ್ಯತೆಗೆ ತಕ್ಕಂತೆ ಆನಂದವನ್ನು ವಿಭಾಗ ಮಾಡಿದ್ದಾರೆ. 'ವಾಗ್ವಾವ ನಾಮ್ನೋ ಭೂಯಸಿ' ಎಂಬಲ್ಲಿ ಎಲ್ಲಾ ಜೀವರ ತಾರತಮ್ಯವನ್ನು ಒಪ್ಪಿದ್ದಾರೆ. ಆದ್ದರಿಂದ ಎಲ್ಲರೂ ಜೀವರೇ ಆಗಿದ್ದರೂ ನಿಚ್ಚೋಚ್ಚಭಾವವಿರುತ್ತದೆಂದು ತಿಳಿಯಬೇಕು. ನಿಯಮಶಬ್ದಕ್ಕೆ ನಿಯಾಮಕ ಎಂದರ್ಥ.

भावदीपः – यद्यपि इन्द्रो वै देवानामोजिष्ठो रुद्रो वाव लोकाधारः वायुना वै गोतमसूत्रेणायं च लोक इत्यादिश्रुतिः । 'रुद्रं समाश्रिता देवाः रुद्रो ब्रह्माणमाश्रितः' इत्यादिस्मृतिश्चास्ति । तथापि 'न ऋते त्वत् क्रियते किञ्चनारे' इत्यादौ तेषामपि स्वतन्त्रेश्वराधीनतावगतेरिति भावः ।। भवतापीति ।। 'कत्येव देवाः प्रजा विधारयन्तः' इत्यादिप्रमाणैः 'स्वामिनः फलश्रुतेः' इत्यादिसूत्रैश्च सिद्धान्तिना तथोपगमादिति भावः ।

ವಸ್ತುತಃ 'ಇಂದ್ರೋ ವೈ ದೇವಾನಾಮೋಜಿಷ್ಠಃ','ರುದ್ರೋ ವಾ ವ ಲೋಕಾಧಾರಃ', ' ವಾಯುನಾ ವೈ ಗೌತಮಃ' ಇವೇ ಮೊದಲಾದ ಶ್ರುತಿಗಳಿಂದ 'ರುದ್ರಂ ಸಮಾಶ್ರಿತಾ ದೇವಾಃ ರುದ್ರೋ ಬ್ರಹ್ಮಾಣಮಾಶ್ರಿತಃ' ಮೊದಲಾದ ಸ್ಮೃತಿಗಳಿಂದ ರುದ್ರಾದಿ ದೇವತೆಗಳು ನಿಯಾಮಕರಾಗಿದ್ದಾರೆಂದು ತಿಳಿಯುತ್ತದೆ.

ಆದರೆ 'ನ ಋತೇ ತ್ವತ್‌ಕ್ರಿಯತೇ ಕಿಂಚನಾರೇ' ಎಂಬ ಶ್ರುತಿಯಿಂದ ರುದ್ರಾದಿಗಳ ನಿಯಾಮಕತ್ವವು ಭಗವಂತನ ಅಧೀನವೇ ಆಗಿದೆಯೆಂದು ತಿಳಿಯುತ್ತದೆ.

'ಭವತಾಪಿ' ಇತ್ಯಾದಿ ಟೀಕೆಯ ಅಭಿಪ್ರಾಯ ಹೀಗಿದೆ - 'ಕತ್ಯೇವ ದೇವಾಃ ಪ್ರಜಾ ವಿಧಾರಯಂತಃ' ಮೊದಲಾದ ಪ್ರಮಾಣಗಳಿಂದ 'ಸ್ವಾಮಿನಃ ಫಲಶ್ರುತೇಃ' ಮೊದಲಾದ ಸೂತ್ರಗಳಿಂದ ಸಿದ್ಧಾಂತಿಗಳು ಅಗ್ನಿಗೆ ನಿಯಾಮಕತ್ವವನ್ನು ಒಪ್ಪಿದ್ದಾರೆಂದು ತಿಳಿಯಬೇಕು.

ಭಾವದೀಪಃ – ಪ್ರತೀತಾನುಪಪತ್ತಿನಿರಾಸೇನ ಫಲೋಕ್ತ್ಯಾऽಧಿಕರಣಾರ್ಥಮುಪಸಂಹರತಿ – ತಸ್ಮಾದಿತಿ ।। ಉಪಪತ್ತಿಸ್ಥಾನಾದಿಶಕ್ತಿಪೂರ್ಣಸುಖಾದ್ಯಭಿಧಾನಶ್ರುತೋಪನಿಷದ್ಬ್ರಹ್ಮಗತ್ಯಭಿಧಾನ ರೂಪ ಸಾಧಕಾನವಸ್ಥಾರೂಪವಿಪಕ್ಷಬಾಧಕಹೇತೂನಾಂ ಸದ್ಭಾವಾದಿತ್ಯರ್ಥಃ ।। ಅನ್ತರಸ್ತತ್ತ್ವಿತ್ಯಸ್ಯಾರ್ಥಃ – ವಿಷ್ಣುರೇವೇತ್ಯಾದಿ

ಆಪಾತತಃ ತೋರುವ ಅಗ್ನಿಯೇ ನಿಯಾಮಕನೆಂಬ ಅನುಪಪತ್ತಿಯನ್ನು ನಿರಾಸ ಮಾಡಿದ್ದಾಯಿತು. ಆದ್ದರಿಂದ ಅಧಿಕರಣದ ಪ್ರಯೋಜನವನ್ನು ಹೇಳುತ್ತಾ ಉಪಸಂಹಾರ ಮಾಡುತ್ತಿದ್ದಾರೆ 'ತಸ್ಮಾತ್' ಇತ್ಯಾದಿ ವಾಕ್ಯದಿಂದ. ಇಲ್ಲಿಯತನಕ ಹೇಳಿದ ಉಪಪತ್ತಿಗಳೆಂದರೆ ಸ್ಥಾನಾದಿಶಕ್ತಿ, ಪೂರ್ಣಸುಖಾದ್ಯಭಿಧಾನ, ಶ್ರುತೋಪನಿಷತ್‌ಬ್ರಹ್ಮಗತ್ಯಭಿಧಾನ ಮೊದಲಾದವು. ಇವುಗಳು ಸಾಧಕಪ್ರಮಾಣಗಳಾಗಿವೆ. ಅನವಸ್ಥಾ, ಅಸಂಭವ ಮೊದಲಾದವು ವಿಪಕ್ಷದಲ್ಲಿ ಬಾಧಕಪ್ರಮಾಣಗಳಾಗಿವೆ. ಇವುಗಳ ಆಧಾರದಿಂದ ಸಿದ್ಧಾಂತ-ಸ್ಥಾಪನೆಯಾಗುತ್ತದೆ. 'ಅಂತರಃ' 'ತತ್ತು' ಎಂಬ ಪ್ರತಿಜ್ಞೆಯ ಅರ್ಥವನ್ನೇ ಟೀಕೆಯಲ್ಲಿ 'ವಿಷ್ಣುರೇವ' ಎಂದು ಹೇಳಿದ್ದಾರೆ.

ಭಾವದೀಪಃ – ।। ಆದಿತ್ಯೇತಿ ।। ಅತ್ರ ಪೂರ್ವತ್ರ ಚ ವಿದ್ಯಮಾನಾದಿತ್ಯಸ್ಥ ಇತ್ಯಾರ್ಥಿಕೋऽರ್ಥಃ । ಆದಿತ್ಯಾದಿಸ್ಥ ಇತ್ಯಾದಿಪದೇನಾಗ್ನಿಗ್ರಹಃ । ನನ್ವೇವಂ ಕಥಂ ತರ್ಹಿ ಅಕ್ಷಣಿ ಪುರುಷೋ ದೃಶ್ಯತ ಇತ್ಯುಕ್ತಿಃ । 'ತದವ್ಯಕ್ತಮಾಹ ಹಿ' ಇತಿ ತಸ್ಯಾವ್ಯಕ್ತೈಕಸ್ವಭಾವತ್ವಾದಿತ್ಯತ ಆಹ – ದಿವ್ಯೇತಿ ।। 'ದೃಶ್ಯತೇ ಜ್ಞಾನದೃಶ್ಚಾ ಯಃ ಸೂರ್ಯೇ ಚಕ್ಷುಷಿ ಚೈಕರಾಟ್' ಇತಿ ಪ್ರಥಮಾಧ್ಯಾಯ ಛಾನ್ದೋಗ್ಯಭಾಷ್ಯೋಕ್ತೇರಿತಿ ಭಾವಃ ।

ಆಕ್ಷಿಸ್ಥನೆಂದು ಶ್ರುತಿಯಿಂದಲೇ ತಿಳಿಯುತ್ತದೆ. ಆದಿತ್ಯಸ್ಥನೆಂಬುದು ಆರ್ಥಿಕಾರ್ಥ. 'ಆದಿತ್ಯಾದಿಸ್ಥಃ' ಎಂದು ಹೇಳಿದಾಗ ಆದಿ ಪದದಿಂದ ಅಗ್ನಿಸ್ಥನೆಂಬುದನ್ನು ಇಟ್ಟುಕೊಳ್ಳಬೇಕು.

ಹಾಗಾದರೆ 'ಆಕ್ಷಿಣಿ ಪುರುಷೋ ದೃಶ್ಯತೇ' ಎಂದು ಹೇಗೆ ಹೇಳಿದರು ? ಏಕೆಂದರೆ ಅವ್ಯಕ್ತನಾಗಿ ಗೋಚರಿಸುತ್ತಾನೆಂದು 'ಹಿ' ಶಬ್ದ ತಿಳಿಸುತ್ತಿದೆ. ಏಕೆಂದರೆ ವಿಷ್ಣು ಅವ್ಯಕ್ತೈಕಸ್ವಭಾವವುಳ್ಳವನಾಗಿದ್ದಾನೆ. ಆದ್ದರಿಂದ 'ದೃಶ್ಯತೇ' ಎಂಬ ಪ್ರಯೋಗವು ತಪ್ಪಾಗುತ್ತದಲ್ಲವೆ ? ಎಂಬ ಪ್ರಶ್ನೆಗೆ 'ದಿವ್ಯದೃಷ್ಟಿಗೋಚರಃ' ಎಂದು ಉತ್ತರಿಸುತ್ತಿದ್ದಾರೆ.

'ದೃಶ್ಯತೇ ಜ್ಞಾನದೃಷ್ಟ್ಯಾ ಯಃ ಸೂರ್ಯೇ ಚಕ್ಷುಷಿ ಚೈಕರಾಟ್' ಆದಿತ್ಯನಲ್ಲಿರುವವನೇ ಚಕ್ಷುರಿಂದ್ರಿಯದಲ್ಲಿ ಜ್ಞಾನದೃಷ್ಟಿಯಿಂದ ಗೋಚರಿಸುತ್ತಾನೆ' ಎಂದು ಛಾಂದೋಗ್ಯ ಭಾಷ್ಯದ ಪ್ರಥಮಾಧ್ಯಾಯದಲ್ಲಿ ಹೇಳಿದ್ದಾರೆ.

ಭಾವದೀಪಃ – अतो विष्णोरेवादित्यस्थत्वादित्यर्थः ।। मोक्ष इति ।। 'तद् यथा पुष्करपलाश' इत्यादिनोक्त इत्यर्थः । यत्त्वत्र केनचित् सूत्राणां भाष्यटीकार्थेऽस्वरसादि-दूषणमुद्भावितम्, तत्तु भाष्यटीकारीत्या सूत्रार्थाभिमर्शिनां न चमत्कारावहमिति नात्र तदुद्धारः प्रपञ्चितोऽस्माभिः ।। १७ ।।

।। इति राघवेन्द्रयतिकृते भावदीपे अन्तराधिकरणम् ।।

ಟೀಕೆಯಲ್ಲಿರುವ 'अतः' ಎಂಬ ಪದಕ್ಕೆ ಆದಿತ್ಯನಲ್ಲಿರುವವನಾದ್ದರಿಂದ ಎಂದರ್ಥ. 'ಮೋಕ್ಷ' ಎಂದು ಟೀಕೆಯಲ್ಲಿದೆ. ತದ್ಯಥಾ ಪುಷ್ಕರಪಲಾಶಃ ಎಂಬಲ್ಲಿ ಚಕ್ಷುರಂತಸ್ಥನಾದ ವಿಷ್ಣುವಿನ ಜ್ಞಾನದಿಂದಲೇ ಮೋಕ್ಷವೆಂದು ಹೇಳಿದ್ದಾರೆ.

ಕೆಲವರು ಸೂತ್ರಗಳಿಗೆ ಭಾಷ್ಯ ಹಾಗೂ ಟೀಕೆಗಳಿಂದ ಅಸ್ವಾರಸ್ಯ ತೋರಿಸಿದ್ದಾರೆ. ಇದು ಭಾಷ್ಯ ಹಾಗೂ ಟೀಕೆಗಳ ಪ್ರಕಾರ ಸೂತ್ರಾರ್ಥವನ್ನು ತಿಳಿದುಕೊಳ್ಳಬೇಕಾದ ನಮ್ಮಂತಹವರು ಮಾಡುವ ವಿಮರ್ಶೆ ಅಲ್ಲ. ಹಾಗೆ ಹೇಳುವುದರಿಂದ ಚಮತ್ಕಾರವನ್ನು ತೋರಿಸಿಕೊಂಡಂತೇನು ಆಗುವುದಿಲ್ಲ. ಆದ್ದರಿಂದ ಅವರ ಪಕ್ಷವನ್ನು ಇಲ್ಲಿ ತೋರಿಸಿಯೂ ಇಲ್ಲ.

।। ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ಅಂತರಾಧಿಕರಣವು ಸಮಾಪ್ತವಾಯಿತು ।।

वाक्यार्थमञ्जारी

।। ॐ अनवस्थितेरसम्भवाच्च नेतरः ॐ ।।

चक्षुरन्तस्थ इतरोऽग्निर्न अनवस्थितेः । जीवस्याग्नेर्जीवान्तरप्रेरकत्वे तस्यापि प्रेरकान्तरेण भाव्यम् । एवं तस्यापीत्यनवस्थानाद् अग्नेरपि प्रेर्येण जीवत्वसाम्येन प्रेरणासम्भवाच्चेत्यर्थः ।। **तत्तत्प्रेरकत्वेनेति** ।। 'यश्चक्षुरन्तरो यमयति' इति श्रुत्यन्तरसमाख्यानादिति भावः । नेयमनवस्थाबीजाङ्कुरपरम्परानवस्थावन्मन्तव्येत्यत आह – **पूर्वपूर्वेति** ।। अत्राग्नेर्जीवप्रेरकत्वं मूलं तदर्थमेवोत्तरोत्तरानुसरणात् । तथाच प्रयोजकत्वेन कल्पितानां व्युत्क्रमेण पूर्वपूर्वप्रेरकानामसिद्धौ प्रयोज्यानामुत्तरोत्तरप्रेरकत्वानामप्यसिद्धिरित्यग्नेरपि प्रेरकत्वसिद्धेरित्यर्थः । अभ्युपेत्य प्रेरकत्वम् इदमनवस्थानम् ।। **स्वातन्त्र्येति** ।। तथाच न तत्प्रेरकोऽपेक्षित इति भावः ।। **दिव्यदृष्टिगोचर इति** ।। ततश्च श्रुतौ 'य एषोऽन्तरक्षिणि पुरुषो दृश्यते' इति दृश्यत्वोक्तिर्युक्तेति भावः ।।

।। इति श्रीशर्कराश्रीनिवासविचचिता वाक्यार्थमञ्जर्याम् अन्तराधिकरणम् ।।

*****

ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ, ಗುರುರಾಜೀಯ,
ಭಾಟ್ಟಸಂಗ್ರಹ, ಶಂಕರಭಾಷ್ಯ, ಭಾಮತೀ,
ಶ್ರೀಭಾಷ್ಯ, ಶ್ರುತಪ್ರಕಾಶ ಇವುಗಳ ಆಯ್ದ ಭಾಗಗಳು

॥ श्रीलक्ष्मीहयग्रीवो विजयतेतमाम् ॥
॥ श्रीमद्वरदराजो विजयतेतरां ॥
॥ श्रीगुरुभ्यो नमः ॥

श्रीब्रह्मण्यतीर्थश्रीपादशिष्यव्यासतीर्थविरचिता

तात्पर्यचंद्रिका

अथ अन्तराधिकरणम्

अक्षिवाक्यवे विषय. अग्नियो, विष्णुवो ? एंदु संशय

।। ॐ अन्तर उपपत्तेः ॐ ।।

अत्र ''य एषोऽन्तरक्षिणि पुरुषो दृश्यते एष आत्मेति होवाच एतदमृतमभयमेतद् ब्रह्म'' इत्युक्तस्य चक्षुरन्तस्थस्याभयस्याग्नित्वात् ''अभयं तितीर्षतां पारं'' इति पूर्वोक्ताभयोऽप्यग्निर्न तु विष्णुरिति पूर्वपक्षोत्थानादनन्तरसङ्गतिः ।

अत्र चक्षुरन्तस्थोऽग्निः विष्णुर्वेति चिन्ता । तदर्थं अन्तस्थे श्रुतममृतत्वादिकं किं गौणं किं वा मुख्यमिति ।

तदर्थं ''य एष आदित्ये पुरुषः सोऽहमस्मि'' इति अक्ष्यभिन्नादित्यस्थपुरुषे प्रयुक्तोऽहंशब्दः किमग्निपरः किं वा ब्रह्मपर इति ।

तदर्थं ब्रह्मपरत्वे ''अस्मद्विद्या आत्मविद्या च'' इत्युक्तो विद्याभेदो घघते उत न घटत ? इति ।

ಅನುವಾದ - ಈ ಅಧಿಕರಣದಲ್ಲಿ ''ಯ ಏಷೋऽಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚ ಏತದಮೃತಮಭಯಮೇತದ್ ಬ್ರಹ್ಮ'' ಎಂಬುದು ವಿಷಯವಾಕ್ಯ. ಇದರಲ್ಲಿ ಚಕ್ಷುರಂತಸ್ಥನಾದವನನ್ನು ಅಭಯಸ್ವರೂಪನಾದ ಅಗ್ನಿಯನ್ನು ಪ್ರತಿಪಾದಿಸಿರುವುದರಿಂದ ''ಅಭಯಂ ತಿತೀರ್ಷತಾಂ ಪಾರಂ'' ಎಂಬ ಹಿಂದಿನ 'ವಿಶೇಷಣಾಚ್ಚ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ

ಅಭಯಸ್ವರೂಪನಾದ ಅಗ್ನಿಯೇ ಆಗಿದ್ದಾನೆ ಹೊರತು ವಿಷ್ಣುವಲ್ಲ. ಹೀಗೆ ಪೂರ್ವಪಕ್ಷ ಹುಟ್ಟುವುದರಿಂದ ಅನಂತರ ಸಂಗತಿಯನ್ನು ತಿಳಿಯಬೇಕು.

ಆದ್ದರಿಂದ ಚಕ್ಷುರಂತಸ್ಥನಾದವನು ಅಗ್ನಿಯೋ? ಅಥವಾ ವಿಷ್ಣುವೋ? ಎಂದು ಸಂಶಯ. ಅದಕ್ಕಾಗಿ ಅಂತಸ್ಥನಲ್ಲಿ ಕೇಳಿಸುತ್ತಿರುವ ಅಮೃತತ್ವಾದಿಗಳು ಗೌಣವೋ ಅಥವಾ ಮುಖ್ಯವೋ? ಎಂದು ಸಂಶಯ. ಅದಕ್ಕಾಗಿ ''ಯ ಏಷ ಆದಿತ್ಯೇ ಪುರುಷಃ ಸೋऽಹಮಸ್ಮಿ'' ಎಂಬಲ್ಲಿ ''ಅಕ್ಷಿಯಿಂದ ಅಭಿನ್ನವಾದ ಆದಿತ್ಯನಲ್ಲಿರುವ ಪುರುಷನಲ್ಲಿ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅಗ್ನಿಪರವೋ? ಅಥವಾ ಬ್ರಹ್ಮಪರವೋ? ಎಂದು ಸಂಶಯ. ಅದಕ್ಕೋಸ್ಕರ ಬ್ರಹ್ಮಪರವಾದರೆ ''ಅಸದ್ವಿದ್ಯಾ ಆತ್ಮವಿದ್ಯಾ ಚ'' ಎಂಬಲ್ಲಿ ಹೇಳಲ್ಪಟ್ಟ ವಿದ್ಯಾಶಬ್ದವು ಕೂಡುವುದಿಲ್ಲವೋ ಅಥವಾ ಕೂಡುತ್ತದೋ ? ಎಂಬ ಸಂಶಯವು ಪರಿಹಾರವಾಗಬೇಕು.

ಶ್ರೀರಾಘವೇಂದ್ರತೀರ್ಥ ವಿರಚಿತ
ಪ್ರಕಾಶ

ಪ್ರಕಾಶಃ – ।। ॐ अन्तर उपपत्तेः ॐ ।। ಭಾಷ್ಯದಿಶಾऽऽನನ್ದಮಯನಯೇನ ಸಙ್ಗತಿಪ್ರತೀತೇಃ ಪೂರ್ವೇಣ ತಾಮಾಹ – ಅತ್ರೇತಿ ।

ಪೂರ್ವೋಕ್ತೇತಿ । ''ವಿಶೇಷಣಾಚ್ಚ'' ಇತಿ ಸೂತ್ರೋಕ್ತೇತ್ಯರ್ಥಃ । 'ಸಙ್ಗತಿಃ' ಆಕ್ಷೇಪಿಕೀ । ಭಾಷ್ಯಂ ತು ಫಲಪರಂ ವಾ, ಯೇನ ಕೇನಚಿತ್ಪೂರ್ವೇಣ ಸಙ್ಗತಿರ್ವಾಚ್ಯಾ ನ ತ್ವವ್ಯವಹಿತೇನೇತಿ ನಿರ್ಬನ್ಧ ಇತ್ಯಾಶಯಂ ವಾ, ಆದಿತ್ಯಾನ್ತಸ್ಥತ್ವಲಿಙ್ಗಸ್ಯಾಪಿ ಸಮನ್ವಯಾಶಯಂ ವಾ ನೇಯಮಿತಿ ಭಾವಃ ।

ವಿವರಣೆ - ಅಂತರಾಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣಕ್ಕೆ ಆನಂದಮಯಾಧಿಕರಣದಿಂದ ಸಂಗತಿಯಿರುತ್ತದೆಂದು ಭಾಷ್ಯಕಾರರು ಹೇಳಿದಂತೆ ತೋರುತ್ತದೆ. ಅದಕ್ಕೋಸ್ಕರ ಅವ್ಯವಹಿತವಾದ ಹಿಂದಿನ ಅಧಿಕರಣದಿಂದಲೇ ಗ್ರಂಥಕಾರರು ಸಂಗತಿಯನ್ನು ತೋರಿಸುವುದಕ್ಕಾಗಿ 'ಅತ್ರ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

'ಪೂರ್ವೋಕ್ತ' ಎಂದರೆ ''ವಿಶೇಷಣಾಚ್ಚ'' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ಎಂದು ಅರ್ಥ. 'ಸಂಗತಿಃ' ಎಂದರೆ ಆಕ್ಷೇಪಿಕೀ ಸಂಗತಿಯೆಂದು ತಿಳಿಯಬೇಕು. ಹಾಗಾದರೆ ಭಾಷ್ಯದ ಮಾತಿಗೆ ಏನು ಅರ್ಥ? ಎಂದರೆ ಆನಂದಮಯಾಧಿಕರಣದಿಂದ ಈ ಅಧಿಕರಣಕ್ಕೆ ಫಲವನ್ನು ತೋರಿಸುತ್ತಿದ್ದಾರೆಂದು ಅಥವಾ ಅವ್ಯವಹಿತವಾದ ಹಿಂದಿನ ಅಧಿಕರಣದಿಂದಲೇ ಸಂಗತಿಯನ್ನು ತೋರಿಸಬೇಕೆಂಬ ನಿರ್ಬಂಧವಿಲ್ಲವೆಂದು ಅಥವಾ ಆದಿತ್ಯಾಂತಸ್ಸ್ಥತ್ವವೆಂಬ ಲಿಂಗವನ್ನೂ ಸಹ ಸಮನ್ವಯ ಮಾಡುವ ಉದ್ದೇಶದಿಂದಲೂ ಭಾಷ್ಯದ ಮಾತನ್ನು ಅರ್ಥೈಸಿಕೊಳ್ಳಬೇಕು.

प्रकाशः – नन्वस्याभयस्याग्नित्वे प्राक्तनस्यापि कुतस्तत्त्वं, अभ्यासार्थवाद-सहिताग्निश्रुतिबाहुल्यरूपविशेषहेतोरत्रैव तत्राभावात् । नहि ''इन्द्रस्यात्मा'' इत्यत्रेन्द्रस्यान्यत्वे ''इन्द्रो राजा जगतः'' इत्यत्राप्यन्यत्वम् । प्रत्युत तत्रोक्तलिङ्गैस्तस्य विष्णुधर्मत्वाध्यवसायेनात्रापि तेन विष्णुत्वस्यैव निर्णयोपपत्तेरिति चेत् ।

ಆಕ್ಷೇಪ - ಈ ಶ್ರುತಿಯಲ್ಲಿ ಪ್ರತಿಪಾದ್ಯನಾದ ಅಭಯನು ಅಗ್ನಿಯೆಂದಾದರೆ ಹಿಂದಿನ ಸೂತ್ರದಲ್ಲಿ ಪ್ರತಿಪಾದಿಸಲ್ಪಟ್ಟವನೂ ಸಹ ಅಗ್ನಿಯೇ ಆಗುತ್ತಾನೆಂದು ಹೇಳಿದಿರಿ. ಇದು ಹೇಗೆ ಸರಿ? ಏಕೆಂದರೆ 'ಯ ಏಷಃ' ಎಂಬ ಶ್ರುತಿಯಲ್ಲಿ ಅಭ್ಯಾಸ ಅರ್ಥವಾದ ಸಹಿತವಾದ ಅಗ್ನಿಶ್ರುತಿ ಮೊದಲಾದ ವಿಶೇಷ ಹೇತುಗಳು ಇರುವುದರಿಂದ ಈ ಶ್ರುತಿಯಿಂದಷ್ಟೇ ಅಗ್ನಿಯು ಪ್ರತಿಪಾದ್ಯನಾಗಲಿ. ಆದರೆ 'ಅಭಯಂ ತಿತೀರ್ಷತಾಂ' ಎಂಬ ಶ್ರುತಿಯಲ್ಲಿ ಇಂತಹ ಲಿಂಗಗಳು ಇರುವುದಿಲ್ಲ. ಏಕೆಂದರೆ 'ಇಂದ್ರಸ್ಯಾತ್ಮಾ,' ಎಂಬಲ್ಲಿ ಪ್ರತಿಪಾದ್ಯನಾದ ಇಂದ್ರನು ಬೇರೆಯವನಾದರೆ 'ಇಂದ್ರೋ ರಾಜಾ' ಎಂಬಲ್ಲಿಯೂ ಸಹ ಬೇರೆಯವನೇ ಆಗುತ್ತಾನೆಂದು ಹೇಳಬಾರದು. 'ಇಂದ್ರೋ ರಾಜಾ' ಎಂಬಲ್ಲಿ ಹೇಳಲ್ಪಟ್ಟ ಲಿಂಗಗಳು ವಿಷ್ಣುಧರ್ಮಗಳಾದ್ದರಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ. ಇದರ ಬಲದಿಂದ 'ಇಂದ್ರಸ್ಯಾತ್ಮಾ,' ಎಂಬ ವಾಕ್ಯದ ಬಲದಿಂದಲೂ ವಿಷ್ಣುವೇ ಪ್ರತಿಪಾದ್ಯನೆಂದು ನಿರ್ಣಯಿಸಬಹುದಲ್ಲವೇ?

प्रकाशः – मैवं, अभयत्वमन्यतो भयशून्यत्वं, तच्च स्वतन्त्रस्यैव, न त्वन्यनियतस्य । तथा चात्राभयत्वमग्नेरावश्यकमिति, स्वतन्त्रवस्तुद्वयायोगात् प्राक्तनानामप्यभयत्वं तस्यैवेति तद्बलेनेतरदपि कथञ्चित्तस्मिन्नेयं, एकेनापि निरवकाशेन बहूनां बाधसम्भवात्, गुहाविष्टत्वस्याग्नावप्युपपत्तेः,

ಸಮಾಧಾನ - ಇದು ತಪ್ಪು. ಅಭಯ ಶಬ್ದಕ್ಕೆ ಬೇರೆ ಪದಾರ್ಥದಿಂದ ಭಯವಿಲ್ಲದಿರುವಿಕೆ ಎಂದರ್ಥ. ಸ್ವತಂತ್ರನಾದವನಿಗಷ್ಟೇ ಈ ಅಭಯತ್ವವನ್ನು ಹೇಳಲು ಸಾಧ್ಯ, ಹೊರತು ಬೇರೆಯವನಿಂದ ನಿಯಮ್ಯನಾದವನಲ್ಲಿ ಹೇಳಲಾಗದು. ಆದ್ದರಿಂದ ಅಗ್ನಿಯನ್ನೇ ಅಭಯಸ್ವರೂಪನೆನ್ನಬೇಕು. ಇಬ್ಬರು ಸ್ವತಂತ್ರರಾಗಲು ಸಾಧ್ಯವಿಲ್ಲದ ಕಾರಣ. ಹಿಂದಿನ ಸೂತ್ರವಾಕ್ಯದಲ್ಲಿ ಪ್ರತಿಪಾದ್ಯನಾದ ಅಭಯಸ್ವರೂಪನೂ ಸಹ ಅಗ್ನಿಯೇ ಆಗುತ್ತಾನೆ. ಈ ಕಾರಣದಿಂದ ಉಳಿದ ವಿಷ್ಣು ಹಾಗೂ ಲಿಂಗಗಳ ಶ್ರುತಿಗಳನ್ನೂ ಸಹ ಅಗ್ನಿಯಲ್ಲಿಯೇ ಹೇಗಾದರೂ ಸಮನ್ವಯಗೊಳಿಸಬೇಕು. ಏಕೆಂದರೆ ನಿರವಕಾಶವಾದ ಒಂದೇ ಲಿಂಗದಿಂದ ಸಾವಕಾಶವಾದ ಅನೇಕ ಶ್ರುತಿಲಿಂಗಗಳಿಗೆ ಬಾಧವನ್ನು ಹೇಳಬಹುದಾದ್ದರಿಂದ ಗುಹಾವಿಷ್ಟತ್ವವು ಅಗ್ನಿಯಲ್ಲೇ ಬರುತ್ತದೆ.

प्रकाशः – ब्रह्मत्वस्यात्रैव तत्रापि नेतुं शक्यत्वात्, अमृतत्वं तस्मिन् शङ्कमानेनाक्षरत्वादरेपि तत्रैव शङ्कितुं शक्यत्वादस्याभयत्वस्याक्षेपेण तेन

विष्णुत्वशङ्कानवकाशादिति तात्पर्यात् । एवं फलपरभाष्यसमर्थनमपि ध्येयम् । विषयसंशयटीकां व्यनक्ति – अत्रेति ।

ಬ್ರಹ್ಮತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸುವಂತೆ ಅಗ್ನಿಯಲ್ಲೂ ಸಹ ಸಮರ್ಥಿಸಬಹುದು. ಅಗ್ನಿಯಲ್ಲಿ ಅಮೃತತ್ವವನ್ನು ಆಶಂಕಿಸುತ್ತಿರುವುದರಿಂದ ಅಕ್ಷರತ್ವಾದಿಗಳನ್ನೂ ಸಹ ಅಗ್ನಿಯಲ್ಲೇ ಆಶಂಕಿಸಲು ಬರುತ್ತದೆ. ಹೀಗೆ ಅಕ್ಷರತ್ವ ಅಭಯತ್ವ ಮೊದಲಾದ ಧರ್ಮಗಳಿಂದ ವಿಷ್ಣುವನ್ನು ಶ್ರುತಿಪ್ರತಿಪಾದ್ಯನೆಂದು ಶಂಕಿಸಲು ಸಾಧ್ಯವಿಲ್ಲ. ಹೀಗೆ ಭಾಷ್ಯವು ಫಲಪರವಾಗುತ್ತದೆಂದೂ ಸಹ ತಿಳಿಯಬೇಕು. ವಿಷಯವನ್ನು ಪ್ರತಿಪಾದನೆ ಮಾಡುವ ಟೀಕೆಯನ್ನು 'अत्र' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

प्रकाशः – छान्दोग्ये चतुर्थाध्याये ''उपकोसलो ह वै कामलायनः सत्यकामे जाबाले ब्रह्मचर्यमुवास । तस्य ह द्वादशवर्षाण्यग्नीन् परिचचार । स ह स्मान्यानन्ते वासिनस्समावर्तयन् तं ह स्मैव न समावर्तयति । तं जायोवाच तप्तो ब्रह्मचारी कुशलमग्नीन् परिचारीत् । मावाऽग्नयः परिप्रावोचत् । प्रब्रूह्यस्मा इति । तस्मै होप्रोच्यैव प्रवासां चक्रे ।

ಉಪಕೋಸಲೋ ಹ ವೈ ಕಾಮಲಾಯನಃ ಸತ್ಯಕಾಮೇ ಜಾಬಾಲೇ ಬ್ರಹ್ಮಚರ್ಯಂ ಉವಾಸ । ತಸ್ಯ ಹ ದ್ವಾದಶವರ್ಷಾಣಿ ಅಗ್ನೀನ್ ಪರಿಚಚಾರ । ಸ ಹ ಸ್ಮ ಅನ್ಯಾನ್ ಅಂತೇವಾಸಿನಃ ಸಮಾವರ್ತಯನ್ ತಂ ಹ ಸ್ಮ ಏವ ನ ಸಮಾವರ್ತಯತಿ । ತಂ ಜಾಯಾ ಉವಾಚ 'ತಪ್ತೋ ಬ್ರಹ್ಮಚಾರೀ । ಕುಶಲಮಗ್ನೀನ್ ಪರಿ ಚ ಚಾರೀತ್ । ಮಾ ತ್ವಾ ಅಗ್ನಯಃ ಪರಿಪ್ರಾವೋಚನ್ । ಪ್ರಬ್ರೂಹಿ ಅಸ್ಮೈ' ಇತಿ । ತಸ್ಮೈ ಹ ಅಪ್ರೋಚ್ಯೈವ ಪ್ರವಾಸಾಂಚಕ್ರೇ ।

ಕಾಮಲಾಯನನ ಮಗನಾದ ಉಪಕೋಸಲನು ವೇದಾಧ್ಯಯನಕ್ಕೋಸ್ಕರ ಸತ್ಯಕಾಮನಾದ ಜಾಬಾಲನಲ್ಲಿ ಗುರುಕುಲವಾಸ ಮಾಡಿದ. ಆಚಾರ್ಯರ ಗಾರ್ಹಪತ್ಯ, ಆಹವನೀಯ, ಅನ್ವಾಹಾರ್ಯಪಚನ ಎಂಬ ಮೂರು ಅಗ್ನಿಗಳನ್ನು ಹನ್ನೆರಡು ವರ್ಷ ಪರ್ಯಂತ ಸೇವಿಸಿದ. ಸತ್ಯಕಾಮನಾದರೂ ತನ್ನ ಬೇರೆ ಶಿಷ್ಯರಿಗೆ ವೇದಾಧ್ಯಯನ ಮಾಡಿಸಿ ತಮ್ಮ ಮನೆಗೆ ಹೋಗಲು ಅನುಮತಿ ನೀಡಿದ. ಆದರೆ ಉಪಕೋಸಲನಿಗೆ ಮಾತ್ರ ಉಪದೇಶ ಸಮಾವರ್ತನಗಳನ್ನು ಮಾಡಿಸಲಿಲ್ಲ. ಆಶ್ಚರ್ಯ ! ಸತ್ಯಕಾಮನಿಗೆ ಆತನ ಮಡದಿ ಹೇಳಿದಳು. 'ಬ್ರಹ್ಮಚಾರಿ ಉಪಕೋಸಲನು ತಪಸ್ಸು ಮಾಡಿದ್ದಾನೆ. ನಮ್ಮ ಅಗ್ನಿಗಳನ್ನು ಚೆನ್ನಾಗಿ ಸೇವಿಸಿದ್ದಾನೆ. ಆದರೂ ನೀವಾಗಲಿ, ಅಗ್ನಿಗಳಾಗಲೀ, ಅವನಿಗೆ ಉಪದೇಶ ಮಾಡಿಲ್ಲ. ಇನ್ನಾದರೂ ನೀವು ಅವನಿಗೆ ಉಪದೇಶ ಮಾಡಿರಿ'. ಹೀಗೆ ಪತ್ನಿಯು ಹೇಳಿದರೂ ಉಪದೇಶಿಸದೆ ಸತ್ಯಕಾಮನು ಪ್ರವಾಸಕ್ಕೆ ಹೊರಟ.

प्रकाशः – स ह व्याधिनाऽनशितुं दध्रे । तमाचार्यजायोवाच ब्रह्मचारिन्नशान, किन्तु नाश्नासीति । स होवाच, बहव इमेऽस्मिन्पुरुषे कामा नानात्यया व्याधिभिः प्रतिपूर्णोऽस्मि नाशिष्यामीति ।

अथ हाग्रयः समूदिरे, तसो ब्रह्मचारी कुशलं नः परिचचारीद्धान्तस्मै प्रब्रवामेति । तस्मै होचुः, प्राणो ब्रह्म कं ब्रह्म खं ब्रह्म'' इत्याद्युपक्रमस्य सम्मूयोपदेशानन्तरं,

ಸ ಹ ವ್ಯಾಧಿನಾ ಅನಶಿತುಂ ದಧ್ಯೇ । ತಂ ಆಚಾರ್ಯಜಾಯಾ ಉವಾಚ - 'ಬ್ರಹ್ಮಚಾರಿನ್ ಆಶಾನ । ಕಿಂ ನು ನ ಅಶ್ನಾಸಿ' ಇತಿ । ಸ ಹ ಉವಾಚ - 'ಬಹವಃ ಹಿ ಅಸ್ಮಿನ್ ಪುರುಷೇ ಕಾಮಾಃ ನಾನಾತ್ಯಯಾಃ । ವ್ಯಾಧಿಭಃ ಪ್ರತಿಪೂರ್ಣೋ೨ಸ್ಮಿ । ನ ಅಶಿಷ್ಯಾಮಿ' ಇತಿ ।

ಅಥ ಹ ಅಗ್ನಯಃ ಸಮೂದಿರೇ - 'ತಪ್ತೋ ಬ್ರಹ್ಮಚಾರೀ । ಕುಶಲಂ ನಃ ಪರಿ ಚ ಚಾರೀತ್ ।
ಹಂತ ಅಸ್ಮೈ ಪ್ರಬ್ರವಾಮ' ಇತಿ । ತಸ್ಮೈ ಹ ಊಚುಃ - 'ಪ್ರಾಣೋ ಬ್ರಹ್ಮ । ಕಂ ಬ್ರಹ್ಮ ।
ಖಂ ಬ್ರಹ್ಮ' ಇತಿ । ಸ ಹ ಉವಾಚ 'ವಿಜಾನಾಮಿ ಅಹಂ ಯತ್ ಪ್ರಾಣೋ ಬ್ರಹ್ಮ ।
ಕಂ ಚ ತು ಖಂ ನ ವಿಜಾನಾಮಿ' ಇತಿ । ತೇ ಹ ಊಚುಃ 'ಯದ್ವಾವ ಕಂ ತದೇವ ಖಂ ।
ಯದೇವ ಖಂ ತದೇವ ಕಂ' ಇತಿ । ಪ್ರಾಣಂ ಚ ಹ ಅಸ್ಮೈ ತದಾಕಾಶಂ ಚ ಊಚುಃ ।

ಉಪಕೋಸಲನು ಮಾನಸಿಕ ದುಃಖದಿಂದ ಉಪವಾಸವಿರಲು ಸಂಕಲ್ಪಿಸಿದ. ಆಚಾರ್ಯರ ಪತ್ನಿಯು 'ಬ್ರಹ್ಮಚಾರಿಯೇ ! ಊಟ ಮಾಡು. ಏತಕ್ಕಾಗಿ ಉಪವಾಸವಿರುತ್ತಿ ? ಎಂದು ಕೇಳಿದಳು. ಉಪಕೋಸಲನು 'ನನ್ನಲ್ಲಿ ನಾನಾರೀತಿಯಾದ ಅನೇಕ ಕಾಮನೆಗಳಿವೆ. ಅವು ಪೂರೈಸದಿದ್ದ ಪ್ರಯುಕ್ತ ಮಾನಸಿಕ ಚಿಂತೆಯಿಂದ ಪೂರ್ಣನಾಗಿದ್ದೇನೆ. ಆದಕ್ಕಾಗಿ ಊಟ ಮಾಡುವುದಿಲ್ಲ' ಎಂದು ಹೇಳಿದ.

ಆಗ ಗಾರ್ಹಪತ್ಯಾದಿ ಅಗ್ನಿಗಳು ಪರಸ್ಪರ ಹೇಳಿಕೊಂಡರು. 'ಈ ಬ್ರಹ್ಮಚಾರಿಯು ತಪಸ್ಸು ಮಾಡಿದ್ದಾನೆ. ನಮ್ಮನ್ನು ಚೆನ್ನಾಗಿ ಸೇವಿಸಿದ್ದಾನೆ. ಪಾಪ ! ಅವನಿಗೆ ನಾವು ಉಪದೇಶಿಸೋಣ' ಹೀಗೆ ಹೇಳಿ ಅವನಿಗೆ ಉಪದೇಶಿಸಿದರು.

'ಬಲದೇವತೆಯಾದ ಮುಖ್ಯಪ್ರಾಣನು ಅಪರಬ್ರಹ್ಮ. 'ಕ' ಅಂದರೆ ಅಪರಾಧೀನವಾದ ಬಲಾನಂದಸ್ವರೂಪನಾದವನು ಪರಬ್ರಹ್ಮ, ಮತ್ತು 'ಖ' ಅಂದರೆ ಅಪರಾಧೀನವಾದ ಬಲಜ್ಞಾನಸ್ವರೂಪನಾದವನು ಪರಬ್ರಹ್ಮ ಎಂದು.

ಉಪಕೋಸಲನು ಹೇಳಿದನು - 'ಬಲದೇವತೆಯಾದ ಮುಖ್ಯಪ್ರಾಣನು ಅಪರಬ್ರಹ್ಮನೆಂದು ತಿಳಿಯಿತು. ಆದರೆ ಆನಂದಸ್ವರೂಪನಾದ ಮತ್ತು ಜ್ಞಾನಸ್ವರೂಪನಾದ ಪರಬ್ರಹ್ಮನನ್ನು ಮಾತ್ರ ವಿಶೇಷವಾಗಿ ಅಂದರೆ, 'ಕ' ಮತ್ತು 'ಖ' ಒಬ್ಬರೇ? ಅಥವಾ ಬೇರೆಯೇ ? ಎಂದು ತಿಳಿಯಲಿಲ್ಲ' ಎಂದು. ಆದಕ್ಕೆ ಅಗ್ನಿಗಳು 'ಯಾವ ಪರಬ್ರಹ್ಮನು 'ಕ' ಎನಿಸಿರುವನೋ ಅವನೇ 'ಖ'. ಯಾವ ಪರಬ್ರಹ್ಮನು 'ಖ' ಎನಿಸಿರುವನೋ ಅವನೇ 'ಕ' ಎಂದು. 'ಕ' ಮತ್ತು 'ಖ' ಎನಿಸಿದ ಪರಬ್ರಹ್ಮ ಒಬ್ಬನೇ ಎಂದು ಉಪದೇಶಿಸಿದರು. ಈ ಪ್ರಕಾರವಾಗಿ ಅಗ್ನಿಗಳು ಮುಖ್ಯಪ್ರಾಣನನ್ನೂ ಮತ್ತು ಆಕಾಶನಾಮಕನಾದ ವಿಷ್ಣುವನ್ನೂ ಉಪಕೋಸಲನಿಗೆ ಉಪದೇಶಿಸಿದರು.

प्रकाशः – ''अथ हैनं गार्हपत्योऽनुशशास, पृथिव्यग्निरन्नमादित्य इति । य एष आदित्ये पुरुषो दृश्यते, सोऽहमस्मि स एवाहमस्मीति ।

स य एतमेवं विद्वानुपास्तेऽपहतं पापकृत्यां, लोकी भवति, सर्वमायुरेति, ज्योग्जीवति, नास्यापरपुरुषाः क्षीयन्ते, उपवयन्तं भुञ्जामोस्मिंश्च लोकेऽमुष्मिंश्च य एतमेवं विद्वानुपास्ते''

ಇತ್ಯಾದಿನಾ ಗಾರ್ಹಪತ್ಯಾನ್ವಾಹಾರ್ಯಪಚನಾಹವನೀಯರೂಪತ್ರೇತಾಗ್ನೀನಾಮಾದಿತ್ಯಚಂದ್ರವಿದ್ಯುದ್ಗತಸ್ಯ ಸ್ವಾತ್ಮತಯೋಪದೇಶಮುಕ್ತ್ವಾ ''ತೇ ಹೋಚುರುಪಕೋಸಲೈಷಾ ಸೋಮ್ಯ ತೇऽಸ್ಮದ್ವಿದ್ಯಾ ಚೋಕ್ತಾ'' ಇತ್ಯುಪಸಂಹೃತ್ಯಾಪ್ನಾಯತೇ ''ಯ ಏಷೋನ್ತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚೈತದಮೃತಮಭಯಮೇತದ್ ಬ್ರಹ್ಮೈತಸ್ಮಿನ್ನ ಕಿಞ್ಚನ ಶ್ಲಿಷ್ಯತಿ, ತದ್ಯದಸ್ಮಿನ್ ಸರ್ಪಿರ್ವೋದಕಂ ವಾ ಸಿಞ್ಚತಿ ವರ್ತ್ಮನೀ ಏವ ಗಚ್ಛತಿ, ಏತಂ ಸಂಯದ್ವಾಮಮಿತ್ಯಾಚಕ್ಷತೇ, ಏತಂ ಸರ್ವಾಣಿ ವಾಮಾನ್ಯಭಿಸಂಯನ್ತಿ ಯ ಏವಂ ವೇದ ಏಷ ಉ ಏವ ವಾಮನಿರೇಷ ಹಿ ಸರ್ವಾಣಿ ವಾಮಾನಿ ನಯತಿ ಯ ಏವಂ ವೇದ ಏಷ ಉ ಏವ ಭಾಮನಿರೇಷ ಹಿ ಸರ್ವೇಷು ಲೋಕೇಷು ಭಾತಿ ಯ ಏವಂ ವೇದ ಏಷ ಉ ಯದು ಚೈವಾಸ್ಮಿಂಶ್ಚಲ್ಯಂ ಕರ್ಮ ಕುರ್ವನ್ತಿ, ಯದು ಚ ನಾರ್ಚಿಷಮೇವಾಭಿಸಮ್ಭವನ್ತಿ, ಅರ್ಚಿಷೋऽಹರ್ನ್ಹ ಆಪೂರ್ಯಮಾಣಪಕ್ಷಮಾಪೂರ್ಯಮಾಣಪಕ್ಷಾದ್ಯಾನ್ ಷಡುದಙ್ಹೈತಿ ಮಾಸಾಂಸ್ತಾನ್ಮಾಸೇಭ್ಯಸ್ಸಂವತ್ಸರಂ ಸಂವತ್ಸರಾದಾದಿತ್ಯಂ ಆದಿತ್ಯಾಚ್ಚನ್ದ್ರಮಸಂ ಚನ್ದ್ರಮಸೋ ವಿದ್ಯುತಂ ತತ್ಪುರುಷೋ ಮಾನವಸ್ಸ ಏನಾನ್ ಬ್ರಹ್ಮ ಗಮಯತಿ'' ಇತ್ಯಾದಿ ।

ಅಥ ಹ ಏನಂ ಗಾರ್ಹಪತ್ಯೋऽನುಶಶಾಸ - 'ಪೃಥಿವೀ। ಅಗ್ನಿಃ। ಅನ್ನಂ। ಆದಿತ್ಯಃ।' ಇತಿ। 'ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋऽಹಮಸ್ಮಿ ಸ ಏವಾಮಹಮಸ್ಮಿ' ಇತಿ।

ಸ ಯ ಏತಮೇವಂ ವಿದ್ವಾನ್ ಉಪಾಸ್ತೇ ಅಪಹತೇ ಪಾಪಕೃತ್ಯಾಂ। ಲೋಕೀ ಭವತಿ। ಸರ್ವಮಾಯುರೇತಿ। ಜ್ಯೋಕ್ ಜೀವತಿ। ನ ಅಸ್ಯ ಅಪರಪುರುಷಾಃ ಕ್ಷೀಯಂತೇ। 'ಉಪ ವಯಂ ತಂ ಭುಂಜಾಮಃ ಅಸ್ಮಿಂಶ್ಚ ಲೋಕೇ ಅಮುಷ್ಮಿಂಶ್ಚ ಯ ಏತಮೇವಂ ವಿದ್ವಾನುಪಾಸ್ತೇ।'

ಆನಂತರ ಉಪಕೋಸಲನಿಗೆ ಗಾರ್ಹಪತ್ಯ ಅಗ್ನಿಯು ಪ್ರತ್ಯೇಕವಾಗಿ ಉಪದೇಶ ಮಾಡಿದನು. 'ಪರಬ್ರಹ್ಮನು ಪೃಥು ಎಂದರೆ ವ್ಯಾಪ್ತನಾದ್ದರಿಂದ ಪೃಥಿವೀ ನಾಮಕನಾಗಿ ಪೃಥಿವಿಯಲ್ಲಿದ್ದಾನೆ. ಅಂಗನೇತಾರ ಎಂದರೆ ಜಗನ್ನಿಯಾಮಕನಾದ್ದರಿಂದ ಅಗ್ನಿನಾಮಕನಾಗಿ ಅಗ್ನಿಯಲ್ಲಿದ್ದಾನೆ. ಅತ್ತೃತ್ವದಿಂದ ಎಂದರೆ, ಸಂಹರಿಸುವುದರಿಂದ ಅನ್ನನಾಮಕನಾಗಿ ಅನ್ನದಲ್ಲಿದ್ದಾನೆ. ಜಗತ್ತಿಗೆ ಆದಿಕಾರಣನಾದ್ದರಿಂದ ಆದಿತ್ಯನಾಮಕನಾಗಿ ಆದಿತ್ಯನಲ್ಲಿದ್ದಾನೆ. ಇದು ವ್ಯಾಪ್ತನಾದ ಪರಮಾತ್ಮನ ವಿದ್ಯೆ. ಇನ್ನು ಅಂತರ್ಯಾಮಿಯಾದ ಪರಮಾತ್ಮನ ವಿದ್ಯೆ-ಆದಿತ್ಯನಲ್ಲಿ ಪೂರ್ಣಷಡ್ಗುಣನಾದ ಯಾವ ಭಗವಂತನು ದಿವ್ಯದೃಷ್ಟಿಗೆ ಗೋಚರನಾಗಿರುವನೋ ಅವನೇ, ಅಹೇಯನಾದ್ದರಿಂದ 'ಅಹಂ' ಶಬ್ದದಿಂದ ವಾಚ್ಯನಾಗಿದ್ದು ನನ್ನಲ್ಲಿ ಅಂತರ್ಯಾಮಿಯಾಗಿದ್ದಾನೆ. ಆದಿತ್ಯನಲ್ಲಿರುವ ಅವನ ರೂಪಕ್ಕೂ, ನನ್ನಲ್ಲಿ ಅಂತರ್ಯಾಮಿಯಾಗಿರುವ ರೂಪಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಯಾವ ವ್ಯತ್ಯಾಸವೂ ಇಲ್ಲದೆ ಅವನೇ ನನ್ನ ಅಂತರ್ಯಾಮಿಯಾಗಿದ್ದಾನೆ' ಎಂದು.

''ಯಾರು ವ್ಯಾಪ್ತನೂ ಅಂತರ್ಯಾಮಿಯೂ ಆದ ಈ ವಿಷ್ಣುವನ್ನು ತಿಳಿದು ಉಪಾಸನೆ ಮಾಡುವನೋ ಅವನು ಪಾಪವನ್ನು ಪರಿಹರಿಸಿಕೊಂಡು ವೈಕುಂಠಾದಿ ಲೋಕಗಳನ್ನು ಹೊಂದಿ ಪೂರ್ಣ ಆಯುಸ್ಸನ್ನು ಪಡೆಯುತ್ತಾನೆ. ಯೋಗ್ಯತಾನುಸಾರ ಸರ್ವಜ್ಞನಾಗುತ್ತಾನೆ. ಅವನಿಗೆ ಭೃತ್ಯರ ಕೊರತೆಯಾಗುವುದಿಲ್ಲ. 'ಇಂತಹ ವಿಷ್ಣೂಪಾಸಕನನ್ನು ನಾವು ಇಹ ಮತ್ತು ಪರಗಳೆರಡರಲ್ಲಿಯೂ ಆಶ್ರಯಿಸುತ್ತೇವೆ' ಎಂದೇ ಭೃತ್ಯರು ಹೇಳುತ್ತಾರೆ'' ಎಂದು ಗಾರ್ಹಪತ್ಯಾಗ್ನಿಯು ಉಪದೇಶಿಸಿದನು.

ಅಥ ಹ ಏನಂ ಅನ್ವಾಹಾರ್ಯಪಚನಃ ಅನುಶಶಾಸ - 'ಆಪಃ। ದಿಶಃ। ನಕ್ಷತ್ರಾಣಿ। ಚಂದ್ರಮಾಃ।'
ಇತಿ। 'ಯ ಏಷ ಚಂದ್ರಮಸಿ ಪುರುಷೋ ದೃಶ್ಯತೇ ಸೋऽಹಮಸ್ಮಿ ಸ ಏವಾಹಮಸ್ಮಿ' ಇತಿ।
ಸ ಯ ಏತಮೇವಂ ವಿದ್ವಾನುಪಾಸ್ತೇ ಅಪಹತೇ ಪಾಪಕೃತ್ಯಾಂ। ಲೋಕೀ ಭವತಿ।
ಸರ್ವಮಾಯುರೇತಿ। ಜ್ಯೋಕ್ ಜೀವತಿ। ನ ಅಸ್ಯ ಅಪರಪುರುಷಾಃ ಕ್ಷೀಯಂತೇ। 'ಉಪ ವಯಂ
ತಂ ಭುಂಜಾಮಃ ಅಸ್ಮಿಂಶ್ಚ ಲೋಕೇ ಅಮುಷ್ಮಿಂಶ್ಚ ಯ ಏತಮೇವಂ ವಿದ್ವಾನುಪಾಸ್ತೇ'।

ಅನಂತರ ಆನ್ವಾಹಾರ್ಯಪಚನ ಎಂಬ ಅಗ್ನಿಯು ಉಪಕೋಸಲನಿಗೆ ಉಪದೇಶಿಸಿದನು. 'ವಿಷ್ಣುವು ಚೆನ್ನಾಗಿ ಪಾಲಕನಾದ್ದರಿಂದ 'ಆಪಃ' ಎನಿಸಿ ನೀರಿನಲ್ಲಿದ್ದಾನೆ. ಅಭೀಷ್ಟಗಳನ್ನು ಕೊಡುವುದರಿಂದ ದಿಕ್ ನಾಮಕನಾಗಿ ದಿಕ್ಕುಗಳಲ್ಲಿದ್ದಾನೆ. ಯಾರಿಗೂ ಅಧೀನನಾಗದಿರುವುದರಿಂದ ನಕ್ಷತ್ರನಾಮಕನಾಗಿ ನಕ್ಷತ್ರದಲ್ಲಿದ್ದಾನೆ. ಆನಂದರೂಪನಾದ್ದರಿಂದ ಚಂದ್ರನಾಮಕನಾಗಿ ಚಂದ್ರನಲ್ಲಿದ್ದಾನೆ. ಇದು ವ್ಯಾಪ್ತನಾದ ಪರಮಾತ್ಮನ ಉಪದೇಶ. ಇದು ಅಂತರ್ಯಾಮಿಯಾದ ಪರಮಾತ್ಮನ ಉಪದೇಶ - ಪೂರ್ಣಷಡ್ಗುಣನಾದ ಯಾವ ಭಗವಂತನು ಚಂದ್ರನಲ್ಲಿದ್ದು ದಿವ್ಯದೃಷ್ಟಿಗೋಚರನಾಗಿರುವನೋ ಅವನೇ, ಅಹೇಯನಾದ್ದರಿಂದ ಅಹಂಶಬ್ದವಾಚ್ಯನಾಗಿದ್ದು, ನನ್ನಲ್ಲಿ ಅಂತರ್ಯಾಮಿಯಾಗಿದ್ದಾನೆ. ವ್ಯಾಪ್ತರೂಪಕ್ಕಿಂತ ಯಾವ ವಿಶೇಷವೂ ಇಲ್ಲದೆ ಅಂತರ್ಯಾಮಿಯಾಗಿಯೂ ಇದ್ದಾನೆ.

''ಯಾರು ಇದನ್ನು ತಿಳಿದು ಉಪಾಸನೆ ಮಾಡುತ್ತಾನೋ ಅವನು ಪಾಪಗಳನ್ನು ಪರಿಹರಿಸಿಕೊಂಡು ವೈಕುಂಠಾದಿ ಲೋಕಗಳನ್ನು ಹೊಂದಿ, ಪೂರ್ಣ ಆಯುಸ್ಸನ್ನು ಪಡೆಯುತ್ತಾನೆ. ಯೋಗ್ಯತೆಗನುಗುಣವಾಗಿ ಸರ್ವಜ್ಞನಾಗುತ್ತಾನೆ. ಅವನಿಗೆ ಭೃತ್ಯರ ಕೊರತೆಯಾಗುವುದಿಲ್ಲ. 'ಇಂತಹ ವಿಷ್ಣೂಪಾಸಕನನ್ನು ನಾವು ಇಹ ಪರಗಳೆರಡರಲ್ಲಿಯೂ ಬಿಡದೆ ಆಶ್ರಯಿಸುತ್ತೇವೆ' ಎಂದೇ ಭೃತ್ಯರು ಹೇಳುತ್ತಾರೆ'' ಎಂದು ಆನ್ವಾಹಾರ್ಯಪಚನನು ಹೇಳಿದನು.

ಅಥ ಹ ಏವಮಾಹವನೀಯಃ ಅನುಶಶಾಸ - 'ಪ್ರಾಣಃ। ಆಕಾಶಃ। ದ್ಯೌಃ। ವಿದ್ಯುತ್।' ಇತಿ।
'ಯ ಏಷ ವಿದ್ಯುತಿ ಪುರುಷೋ ದೃಶ್ಯತೇ ಸೋऽಹಮಸ್ಮಿ ಸ ಏವಾಹಮಸ್ಮಿ' ಇತಿ।
ಸ ಯ ಏತಮೇವಂ ವಿದ್ವಾನ್ ಉಪಾಸ್ತೇ ಅಪಹತೇ ಪಾಪಕೃತ್ಯಾಂ। ಲೋಕೀ ಭವತಿ।
ಸರ್ವಮಾಯುರೇತಿ। ಜ್ಯೋಕ್ ಜೀವತಿ। ನ ಅಸ್ಯ ಅಪರಪುರುಷಾಃ ಕ್ಷೀಯಂತೇ। 'ಉಪ ವಯಂ
ತಂ ಭುಂಜಾಮಃ ಅಸ್ಮಿಂಶ್ಚ ಲೋಕೇ ಅಮುಷ್ಮಿಂಶ್ಚ ಯ ಏತಮೇವಂ ವಿದ್ವಾನುಪಾಸ್ತೇ।'

ಅನಂತರ ಆಹವನೀಯ ಎಂಬ ಅಗ್ನಿಯು ಉಪಕೋಸಲನಿಗೆ ಉಪದೇಶಿಸಿದನು. 'ವಿಷ್ಣುವು ಬಲರೂಪನಾದ್ದರಿಂದ ಪ್ರಾಣನಾಮಕನಾಗಿ ಪ್ರಾಣನಲ್ಲಿ, ಅವಕಾಶಪ್ರದನಾದ್ದರಿಂದ ಆಕಾಶನಾಮಕನಾಗಿ

ಆಕಾಶದಲ್ಲಿ, ಪ್ರಕಾಶಸ್ವರೂಪನಾದ್ದರಿಂದ ದ್ಯುನಾಮಕನಾಗಿ ದ್ಯುಲೋಕದಲ್ಲಿ, ಎಲ್ಲವನ್ನೂ ತಿಳಿದಿರುವುದರಿಂದ ವಿದ್ಯುತ್‌ನಾಮಕನಾಗಿ ವಿದ್ಯುತ್ತಿನಲ್ಲಿ ಇದ್ದಾನೆ. ಇದು ವ್ಯಾಪ್ತನಾದ ಪರಮಾತ್ಮನ ಉಪದೇಶ. ಇನ್ನು ಆಂತರ್ಯಾಮಿಯಾದ ಪರಮಾತ್ಮನ ಉಪದೇಶ - ಯಾವ ಭಗವಂತನು ವಿದ್ಯುತ್ತಿನಲ್ಲಿ ಪೂರ್ಣಷಡ್ಗುಣನಾಗಿ ದಿವ್ಯದೃಷ್ಟಿಗೆ ಗೋಚರನಾಗಿರುವನೋ ಅವನೇ ನನ್ನಲ್ಲಿ ಆಂತರ್ಯಾಮಿಯಾಗಿದ್ದಾನೆ. ಅಹೇಯನಾದ್ದರಿಂದ ಅಹಂ ಶಬ್ದವಾಚ್ಯನಾಗಿದ್ದಾನೆ. ವ್ಯಾಪ್ತರೂಪಕ್ಕಿಂತ ಯಾವ ವ್ಯತ್ಯಾಸವೂ ಇಲ್ಲದೇ ನನ್ನಲ್ಲಿ ಆಂತರ್ಯಾಮಿಯಾಗಿಯೂ ಇದ್ದಾನೆ.

ಯಾರು ಈ ವಿಷ್ಣುವನ್ನು ಹೀಗೆ ತಿಳಿದು ಉಪಾಸನೆ ಮಾಡುತ್ತಾನೋ ಅವನು ಪಾಪಗಳನ್ನು ಪರಿಹರಿಸಿಕೊಂಡು ವೈಕುಂಠಾದಿಲೋಕಗಳನ್ನು ಪಡೆದು, ಪೂರ್ಣ ಆಯುಸ್ಸನ್ನು ಹೊಂದುತ್ತಾನೆ. ತನ್ನ ಯೋಗ್ಯತೆಯಂತೆ ಸರ್ವವನ್ನೂ ತಿಳಿಯುತ್ತಾನೆ. ಇವನಿಗೆ ಭೃತ್ಯರ ಕೊರತೆ ಇರುವುದಿಲ್ಲ. 'ಇಂತಹ ವಿಷ್ಣುಭಕ್ತನನ್ನು ನಾವು ಇಹ ಪರ ಲೋಕಗಳೆರಡರಲ್ಲಿಯೂ ಬಿಡದೆ ಆಶ್ರಯಿಸುತ್ತೇವೆ. ಎಂದೇ ಭೃತ್ಯರು ಹೇಳುತ್ತಾರೆ.'' ಎಂದು ಆಹವನೀಯಾಗ್ನಿಯನ್ನು ಉಪದೇಶಿಸಿದನು.

> ತೇ ಹ ಊಚುಃ। 'ಉಪಕೋಸಲ ಏಷಾ ಸೋಮ್ಯ ತೇ ಆತ್ಮವಿದ್ಯಾ ಆತ್ಮವಿದ್ಯಾ ಚ। ಆಚಾರ್ಯಸ್ತು ತೇ ಗತಿಂ ವಕ್ತಾ' ಇತಿ। ಆಜಗಾಮ ಹ ಅಸ್ಯ ಆಚಾರ್ಯಃ। ತಮಾಚಾರ್ಯಃ ಅಭ್ಯುವಾದ 'ಉಪಕೋಸಲ' ಇತಿ। 'ಭಗವ' ಇತಿ ಹ ಪ್ರತಿಶುಶ್ರಾವ। 'ಬ್ರಹ್ಮವಿದ ಇವ ಸೋಮ್ಯ ತೇ ಮುಖಂ ಭಾತಿ। ಕೋ ನು ತ್ವಾಽನುಶಶಾಸ' ಇತಿ। 'ಕೋ ನು ಮಾ ಅನುಶಿಷ್ಯಾತ್ ಭೋ' ಇತಿ। ಇಹಾವೇ ವ ನಿಹ್ನುತಃ। ಇಮೇ ನೂನಮೀದೃಶಾ ಅನಾದೃಶಾ' ಇತಿ ಹ ಅಗ್ನೀನ್ ಅಭ್ಯೂದೇ। 'ಕಂ ನು ಸೋಮ್ಯ ಕಲ ತೇ ಆವೋಚನ್' ಇತಿ। 'ಇದಂ ಇತಿ ಹ ಪ್ರತಿಜಜ್ಞೇ।

''ಉಪಕೋಸಲ ! ಈ ವರೆಗೆ 'ಸೋಽಹಮಸ್ಮಿ' ಇತ್ಯಾದಿಯಾಗಿ ಆಂತರ್ಯಾಮಿ ವಿದ್ಯೆಯನ್ನೂ 'ಕಂ ಬ್ರಹ್ಮ' ಇತ್ಯಾದಿಯಾಗಿ ಸರ್ವಗತನಾದ ಬ್ರಹ್ಮನ ವಿದ್ಯೆಯನ್ನೂ ನಾವು ಉಪದೇಶಿಸಿದ್ದೇವೆ. ಇದನ್ನು ತಿಳಿಯಬೇಕು ಹೊರತು ಉಪಾಸನೆ ಮಾಡುವಂಥಹುದಲ್ಲ. ಉಪಾಸನೆಯ ಮಾರ್ಗವನ್ನು ನಿನಗೆ ನಿನ್ನ ಆಚಾರ್ಯರೇ ಹೇಳುವರು' ಎಂದು ತ್ರೇತಾಗ್ನಿಗಳು ಹೇಳಿದರು. ಆಗ ಉಪಕೋಸಲನ ಆಚಾರ್ಯರು ಬಂದರು. 'ಉಪಕೋಸಲ !' ಎಂದು ಕರೆದರು. 'ಪೂಜ್ಯರೇ' ಎಂದು ಉಪಕೋಸಲನು ಪ್ರತಿಯಾಗಿ ಕೇಳಿದ. 'ನಿನ್ನ ಮುಖದಲ್ಲಿ ಬ್ರಹ್ಮಜ್ಞಾನಿಯ ಕಾಂತಿ ಕಾಣುತ್ತಿದೆ. ನಿನಗಾರು ಉಪದೇಶಿಸಿದರು?' ಎಂದು ಗುರುಗಳು ಪ್ರಶ್ನಿಸಿದರು. 'ಬ್ರಹ್ಮವಿದ್ಯೆಯನ್ನು ಯಾರು ತಾನೇ ನನಗೆ ಉಪದೇಶಿಸಬಲ್ಲರು ? ಭೂಮಿಯಲ್ಲಿರುವ ಮಾನವರೂ, ಪಾತಾಲದಲ್ಲಿರುವ ಅಸುರರೂ, ಭಗವಂತನ ವಿಷಯವನ್ನು ಅಪಲಾಪ ಮಾಡುವವರು. ಉಪದೇಶಕ್ಕೆ ಅಸಮರ್ಥರು. ನನಗೆ ಉಪದೇಶಿಸಿದವರು ದೇವತೆಗಳು ಈ ಅಗ್ನಿಯಂತೆ ಇರುವವರೂ ಜ್ವಾಲೆಯ ಬಣ್ಣದವರೂ ಮತ್ತು ಹಸ್ತಪಾದಾದಿ ಅವಯವಗಳುಳ್ಳವರೂ ಆಗಿದ್ದರು. ಅವರೆ ಪ್ರತ್ಯಕ್ಷರಾಗಿ ನನಗೆ ಉಪದೇಶಿಸಿದರು' ಎಂದು ಉಪಕೋಸಲನು ತನಗೆ ಉಪದೇಶಿಸಿದವರು ಅಗ್ನಿಗಳೆಂಬ ವಿಷಯವನ್ನು ಹೇಳಿದನು. 'ಅವರು ನಿನಗೆ ಏನು ಉಪದೇಶಿಸಿದರು? ಎಂದು ಗುರುಗಳು ಕೇಳಿದರು. ಉಪಕೋಸಲನು ಅಗ್ನಿಗಳು ಇದನ್ನು ಉಪದೇಶಿಸಿದರು ಎಂದು ಅನುವಾದ ಮಾಡಿದ.

'ಲೋಕಾನ್ ವಾವ ಕಿಲ ಸೋಮ್ಯ ತೇ ಅವೋಚನ್ । ಅಹಂ ತು ತೇ ತದ್ ವಕ್ಷ್ಯಾಮಿ । ತದ್ ಯಥಾ ಪುಷ್ಕರಪಲಾಶೇ ಆಪೋ ನ ಶ್ಲಿಷ್ಯಂತೇ ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ' ಇತಿ ।
'ಬ್ರವೀತು ಮೇ ಭಗವಾನ್' ಇತಿ । ತಸ್ಮೈ ಹ ಉವಾಚ ।

'ಯ ಏಷಃ ಅಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮಾ' ಇತಿ ಹ ಉವಾಚ ।
'ಏತದಮೃತಮಭಯಮೇತದ್ ಬ್ರಹ್ಮ । ಏತಸ್ಮಿನ್ ನ ಕಿಂಚನ ಶ್ಲಿಷ್ಯತಿ ।
ತದ್ ಯದ್ಯಪ್ಯಸ್ಮಿನ್ ಸರ್ಪಿರ್ವಾ ಉದಕಂ ವಾ ಸಿಂಚತಿ ವರ್ತ್ಮನೀ ಏವ ಗಚ್ಛತಿ ।'

ಸತ್ಯಕಾಮನು ಉಪಕೋಸಲನಿಗೆ ಹೇಳಿದ - 'ಉಪಕೋಸಲ ! ಅಗ್ನಿಗಳು ನಿನಗೆ ಉಪದೇಶಿಸಿದ್ದು ಸರ್ವಲೋಕಾಧಾರವಾದ ಅಂತರ್ಯಾಮಿ ಭಗವದ್ರೂಪಗಳಲ್ಲವೇ? ಅವು ಕೇವಲ ತಿಳಿಯಲು ಮಾತ್ರ ಯೋಗ್ಯ ಹೊರತು ಉಪಾಸನೆಗೆ ಮತ್ತು ಹೊಂದಲು ಯೋಗ್ಯವಲ್ಲ. ನಾನು ಮಾತ್ರ ನಿನಗೆ, ಯಾವ ಬ್ರಹ್ಮನ ಜ್ಞಾನವನ್ನು ಪಡೆದರೆ ಆ ಜ್ಞಾನಿಗೆ ಕಮಲಪತ್ರದಲ್ಲಿ ನೀರು ಅಂಟದಿರುವಂತೆ 'ಪಾಪಕರ್ಮ ಲೇಪವಾಗಲಾರದೋ ಅಂತಹ ಬ್ರಹ್ಮನನ್ನು ಉಪದೇಶಿಸುತ್ತೇನೆ'.

ಪೂಜ್ಯರು ಉಪದೇಶಿಸಬೇಕೆಂದು ಉಪಕೋಸಲನು ಕೇಳಿಕೊಂಡನು. ಆಗ ಆಚಾರ್ಯರು ಉಪದೇಶಿಸಿದರು - 'ಜ್ಞಾನಿಗಳಿಗೆ ದಿವ್ಯದೃಷ್ಟಿಯಿಂದ ಕಣ್ಣಿನೊಳಗೆ ಯಾವ ಪುರುಷನು ಗೋಚರನಾಗುವನೋ ಅವನೇ ವಾಮನ ಎಂಬ ಹೆಸರುಳ್ಳ ಪರಮಾತ್ಮನಾಗಿದ್ದಾನೆ' ಎಂದು ಹೇಳಿದರು. 'ಅವನು ಸ್ವತಃ ನಿತ್ಯ ಮುಕ್ತನೂ ಭಯರಹಿತನೂ ಗುಣಪೂರ್ಣನೂ ಆಗಿದ್ದಾನೆ. ಅವನಿಗೆ ಯಾವುದರ ಲೇಪವೂ ಇಲ್ಲ. ಇಂತಹ ಅಸಂಗನಾದ ಪರಮಾತ್ಮನು ಕಣ್ಣಿನಲ್ಲಿರುವುದರಿಂದಲೇ ಯಾರಾದರೂ ಕಣ್ಣಿನಲ್ಲಿ ತುಪ್ಪವನ್ನೋ ನೀರನ್ನೋ ಹಾಕಿದರೆ ಅದು ಕಣ್ಣಿಗೆ ಅಂಟದಂತೆ ಬದಿಯಿಂದ ಹರಿದು ಹೋಗುತ್ತದೆ.

ಏತಂ ಸಂಯದ್ವಾಮ ಇತ್ಯಾಚಕ್ಷತೇ । ಏತಂ ಹಿ ಸರ್ವಾಣಿ ವಾಮಾನಿ ಅಭಿಸಂಯಂತಿ ।
ಸರ್ವಾಣಿ ಏನಂ ವಾಮಾನ್ಯಭಿಸಂಯಂತಿ ಯ ಏವಂ ವೇದ ।

ಏಷ ಉ ಏವ ವಾಮಾನಿಃ । ಏಷ ಹಿ ಸರ್ವಾಣಿ ವಾಮಾನಿ ನಯತಿ ।
ಸರ್ವಾಣಿ ವಾಮಾನಿ ನಯತಿ ಯ ಏವಂ ವೇದ ।

ಏಷ ಉ ಏ ವ ಭಾಮನಿಃ । ಏಷ ಹಿ ಸರ್ವೇಷು ಲೋಕೇಷು ಭಾತಿ ।
ಸರ್ವೇಷು ಲೋಕೇಷು ಭಾತಿ ಯ ಏವಂ ವೇದ ।

ಕಣ್ಣಿನಲ್ಲಿರುವ ಅಸಂಗನಾದ ಬ್ರಹ್ಮನನ್ನೇ ಜ್ಞಾನಿಗಳು ಸಂಯದ್ವಾಮ ಎನ್ನುತ್ತಾರೆ. ಏಕೆಂದರೆ 'ವಾಮನಿ' ಎಲ್ಲ ಸೌಂದರ್ಯಗಳು, 'ಏನಂ' ಬ್ರಹ್ಮನನ್ನು 'ಸಂಯತಿ' ಹೊಂದಿವೆ. ಯಾರು ಹೀಗೆ ಬ್ರಹ್ಮನನ್ನು ಸಂಯದ್ವಾಮ ಎಂದು ತಿಳಿಯುವರೋ ಅವರಿಗೂ ಸರ್ವಸೌಂದರ್ಯವು ಪ್ರಾಪ್ತವಾಗುತ್ತದೆ.

ಕಣ್ಣಿನೊಳಗಿನ ಈ ಪರಮಾತ್ಮನೇ ವಾಮನಿ ಎನಿಸಿದ್ದಾನೆ. ಏಕೆಂದರೆ, ವಾಮಾನಿ, ಎಲ್ಲ ಸುಂದರಸ್ತ್ರೀಯರ ಸೌಂದರ್ಯವನ್ನು, ನಯತಿ, ಆ ಸ್ತ್ರೀಯರಿಗೆ ಹೊಂದಿಸುತ್ತಾನೆ. ಯಾರು ಹೀಗೆ ಉಪಾಸನೆ ಮಾಡುವನೋ ಅವನು ಮುಕ್ತಿಯಲ್ಲಿ ತನಗಿಂತ ಅವರಾದ ಸ್ತ್ರೀಯರ ಸೌಂದರ್ಯವನ್ನು ನಿಯಂತ್ರಿಸುತ್ತಾನೆ.

ಕಣ್ಣಿನೊಳಗಿನ ಈ ವಾಮನಾಖ್ಯ ಬ್ರಹ್ಮನೇ ಧಾಮನಿ ಎನಿಸಿದ್ದಾನೆ. ಏಕೆಂದರೆ ಇವನು ಎಲ್ಲ ಲೋಕಗಳಲ್ಲಿ, ಭಾತಿ ಎಂದರೆ ಪ್ರಕಾಶಿಸುತ್ತಾನೆ. ಯಾರು ಹೀಗೆ ಉಪಾಸನೆ ಮಾಡುವನೋ ಅವನು ಮುಕ್ತಿಯಲ್ಲಿ ಸರ್ವಲೋಕದಲ್ಲಿಯೂ ಪ್ರಕಾಶಿಸುತ್ತಾನೆ.

ಅಥ ಯದು ಚೈವಾಸ್ಮಿನ್ ಶವ್ಯಂ ಕರ್ಮ ಕುರ್ವಂತಿ, ಯದು ಚ ನ, ಅರ್ಚಿಷಮೇವ ಅಭಿಸಂಭವಂತಿ (ವಿಶಂತಿ) । ಅರ್ಚಿಷಃ ಅಹಃ । ಅಹ ಆಪೂರ್ಯಮಾಣಪಕ್ಷಂ । ಆಪೂರ್ಯಮಾಣಪಕ್ಷಾತ್ ಯಾನ್ ಷಟ್ ಉದಙ್ ಏತಿ ಮಾಸಾನ್ ತಾನ್ । ಮಾಸೇಭ್ಯಃ ಸವಂತಸ್ಸರಂ । ಸಂವತ್ಸರಾದಾದಿತ್ಯಂ । ಆದಿತ್ಯಾತ್ ಚಂದ್ರಮಸಂ । ಚಂದ್ರಮಸೋ ವಿದ್ಯುತಂ ತತ್ಪುರುಷೋ ಮಾನವಃ । ಸ ಏನಾನ್ ಬ್ರಹ್ಮ ಗಮಯತಿ ।

ಕಣ್ಣಿನೊಳಗಿರುವ ಅಸಂಗನಾದ ಪರಮಾತ್ಮನನ್ನು ತಿಳಿದ ಜ್ಞಾನಿಗಳು ಮರಣ ಹೊಂದಿದಾಗ ಅವರಿಗೆ ದಹನಾದಿ ಉತ್ತರ ಕರ್ಮಗಳನ್ನು ಮಾಡಲಿ ಅಥವಾ ಮಾಡದಿರಲಿ, ಮೃತರಾದ ಆ ಜ್ಞಾನಿಗಳಂತೂ ಶ್ರೀಹರಿಯ ಅನುಗ್ರಹದಿಂದ ಅರ್ಚಿರ್ ಲೋಕವನ್ನು ಹೊಂದಿ - ಅಲ್ಲಿಂದ ಅಹಿವಾಹಿಕ ಎಂಬ ವಾಯುಲೋಕವನ್ನೂ, ಅನಂತರ ಹಗಲಿಗಭಿಮಾನಿಯಾದ ದೇವತೆಯ ಲೋಕವನ್ನೂ, ಅಲ್ಲಿಂದ ಶುಕ್ಲಪಕ್ಷಭಿಮಾನಿ ದೇವತೆಯ ಲೋಕವನ್ನೂ, ಅಲ್ಲಿಂದ ಸೂರ್ಯನು ಉತ್ತರದಲ್ಲಿ ಸಂಚರಿಸುವ ಕಾಲವೆನಿಸಿದ ಉತ್ತರಾಯಣದ ಆರು ತಿಂಗಳಿಗಭಿಮಾನಿಯಾದ ದೇವತೆಯ ಲೋಕವನ್ನೂ, ಅಲ್ಲಿಂದ ಸಂವತ್ಸರಾಭಿಮಾನಿ ಲೋಕವನ್ನೂ, ಅಲ್ಲಿಂದ ಆದಿತ್ಯಲೋಕವನ್ನೂ, ಆದಿತ್ಯಲೋಕದಿಂದ ಚಂದ್ರಲೋಕವನ್ನೂ, ಚಂದ್ರಲೋಕದಿಂದ ವೈಶ್ವಾನರ, ಇಂದ್ರ, ಧ್ರುವಲೋಕಗಳ ಮೂಲಕ ವಿದ್ಯುತ್ತಿಗಭಿಮಾನಿಯಾದ ಭಾರತೀದೇವಿಯನ್ನೂ ಹೊಂದುತ್ತಾರೆ. ಬಳಿಕ ಭಾರತಿಯಪತಿಯೂ, ಭಗವಂತನ ಪ್ರಿಯಭೃತ್ಯನೂ ಆದ ವಾಯುವನ್ನು ಹೊಂದುತ್ತಾರೆ.

ಆ ವಾಯುದೇವರು ದೇಹದಲ್ಲಿ ಭಗವಂತನನ್ನು ಉಪಾಸನೆ ಮಾಡುವ ಜ್ಞಾನಿಗಳನ್ನು ಕಾರ್ಯಬ್ರಹ್ಮನೆನಿಸಿದ ಚತುರ್ಮುಖಬ್ರಹ್ಮದೇವರ ಬಳಿಗೂ, ವ್ಯಾಪ್ತೋಪಾಸಕ ಜ್ಞಾನಿಗಳನ್ನು ಪರಬ್ರಹ್ಮನೆನಿಸಿದ ಪರಮಾತ್ಮನ ಬಳಿಗೂ ಕರೆದುಕೊಂಡು ಹೋಗುವರು.

ಪ್ರಕಾಶಃ – ತತ್ರತ್ಯಃ ಚಕ್ಷುರಂತಸ್ಥೋ ವಿಷಯ ಇತ್ಯರ್ಥಃ । ಅತ್ರ 'ಅಕ್ಷಿಸ್ಥಃ' ಇತಿ ವಕ್ತವ್ಯೇ 'ಚಕ್ಷುಃ' ಇತ್ಯುಕ್ತಿರಾದಿತ್ಯಾಭೇದಸ್ಫೋರಣಾಯ, ''ಆದಿತ್ಯಶ್ಚಕ್ಷುರ್ಭೂತ್ವಾ'' ಇತ್ಯಾದೇಃ । ಅತ್ರಾಕ್ಷಿಪದೋಕ್ತಂ ಚಕ್ಷುಃ ಪ್ರಾಚಾಂ ಮತರೀತ್ಯಾ ದೇವತಾರೂಪಂ, ಟೀಕಾರೀತ್ಯಾ ಜಡರೂಪಮಿತಿ ಜ್ಞೇಯಮ್ ।

ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಚಕ್ಷುರಂತಸ್ಥನಾದವನೇ ಈ ಅಧಿಕರಣದ ವಿಷಯನಾಗಿದ್ದಾನೆಂದರ್ಥ. ವಸ್ತುತಃ ಇಲ್ಲಿ 'ಅಕ್ಷಿಸ್ಥಃ' ಎಂದು ಹೇಳಬೇಕಿತ್ತು. ಆದರೆ ಚಕ್ಷುರಂತಸ್ಥನೆಂದು ಹೇಳಿದ್ದರಿಂದ ಆದಿತ್ಯನಿಗೂ ಚಕ್ಷುಸ್ಸಿಗೂ ಅಭೇದವನ್ನು ತಿಳಿಸಿದ್ದಾರೆ. ''ಆದಿತ್ಯಶ್ಚಕ್ಷುರ್ಭೂತ್ವಾ'' ಎಂಬ ಪ್ರಮಾಣವಿರುವುದರಿಂದ. ಇಲ್ಲಿಯೂ ಗಮನಿಸಬೇಕಾದ ಅಂಶವೊಂದಿದೆ. ಪ್ರಾಚೀನ ಟೀಕಾಕಾರರ ಪ್ರಕಾರ ಅಕ್ಷಿಯೆಂದರೆ ದೇವತೆಯೆಂದರ್ಥ. ಟೀಕಾರಾಯರ ಪ್ರಕಾರ ಜಡವೆಂದರ್ಥ.

प्रकाशः – मुख्यमिति चिन्तानन्तरं किं बाधकमस्त्युत नेति चिन्ता स्पष्टेति नोक्ता । अक्ष्यभिन्नेति । वक्ष्यमाणदिशेति भावः । एतच्च हेतुहेतुमद्भावघटनाय । अन्यथाऽऽदित्यस्यपुरुषे प्रयुक्ताहंशब्दस्याग्निपरत्वेऽप्यक्षिस्थस्याग्नित्वानापत्तेः ।

ಗ್ರಂಥದಲ್ಲಿ ಚಿಂತೆಯ ಆನಂತರ ಅಮೃತತ್ವಾದಿಗಳಿಗೆ ಬಾಧಕವಿದೆಯೋ ಇಲ್ಲವೋ? ಎಂಬ ಸಂಶಯವನ್ನು ವಿವಕ್ಷಿಸಬೇಕು. ಇದು ಸ್ಪಷ್ಟವಾದ್ದರಿಂದ ಗ್ರಂಥಕಾರರು ಹೇಳಿರುವುದಿಲ್ಲ. ಗ್ರಂಥದಲ್ಲಿ ಆದಿತ್ಯನನ್ನು ಅಕ್ಷಿಯಿಂದ ಅಭಿನ್ನನೆನ್ನಲಾಗಿದೆ. ಈ ವಿಚಾರವು ಮುಂದೆ ಸ್ಪಷ್ಟವಾಗುತ್ತದೆ. ಹೀಗೆ ಹೇಳಿದ್ದರಿಂದ ಹೇತುಹೇತುಮದ್ಭಾವವನ್ನು ತಿಳಿಸಿದ್ದಾರೆ. ಇಲ್ಲದಿದ್ದರೆ ಆದಿತ್ಯನಲ್ಲಿರುವ ಪುರುಷನಲ್ಲಿ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅಗ್ನಿ ಪರವಾದರೂ ಸಹ ಅಕ್ಷಿಯಲ್ಲಿರುವವನು ಅಗ್ನಿಯೆಂದು ಆಗಲಾರನು.

प्रकाशः – विद्येति । ''उपकोसलैषा सोम्यास्मद्विद्याऽऽत्मविद्या च'' इत्युक्तविद्याभेद इत्यर्थः । उपलक्षणमेतत् । सावधारणाभ्यासोऽर्थवादश्चेत्यपि बोध्यम् ।

'ವಿದ್ಯಾಭೇದಾವೆಂದರೆ' 'ಉಪಕೋಸಲ ಏಷಾ ಸೋಮ್ಯ ತೇ ಅಸ್ಮದ್ವಿದ್ಯಾ ಆತ್ಮವಿದ್ಯಾ ಚ' ಎಂದು ಹೇಳಲ್ಪಟ್ಟ ವಿದ್ಯಾಭೇದವೆಂದರ್ಥ. ಉಪಲಕ್ಷಣಯಾ ಸಾವಧಾರಣವಾದ ಅಭ್ಯಾಸ ಹಾಗೂ ಅರ್ಥವಾದವನ್ನೂ ಸಹ ವಿವಕ್ಷಿಸಬೇಕು.

प्रकाशः – यदा विद्याभेदो न युक्तः तदा ''कं ब्रह्म'' इत्याद्यात्मविद्या, ''य एषोऽन्तरादित्ये'' इति विद्या त्वस्मद्विद्येति वाच्यत्वादादित्यस्थपुरुषे प्रयुक्ताहं-शब्दस्याग्निपरत्वात् बाधकात् तदभिन्नाक्षिस्थे श्रुतामृतत्वादिकं गौणमित्यग्निश्रुत्यादि-बलादग्निरेव चक्षुरन्तस्थ इति पूर्वपक्षे फलम्,

यदा तु घटते तदाऽहंशब्दस्य शास्त्रदृष्ट्या ब्रह्मपरत्वसम्भवाद्बाधका-भावेनामृतत्वादिकं मुख्यमेवेति तद्बलाद्विष्णुरिति सिद्धान्ते फलमिति स्पष्टमिति भावः ।

ಒಂದುವೇಳೆ ವಿದ್ಯಾಭೇದವು ಅಯುಕ್ತವಾದರೆ ಆವಾಗ ''ಕಂ ಬ್ರಹ್ಮ'' ಎಂಬುದು ಅಧ್ಯಾತ್ಮವಿದ್ಯೆಯೆಂದು ''ಯ ಏಷೋಽಂತರಾದಿತ್ಯೇ'' ಎಂಬ ವಿದ್ಯೆಯು ಅಸ್ಮದ್ವಿದ್ಯೆಯೆಂದು ಹೇಳಬೇಕಾಗುತ್ತದೆ. ಆವಾಗ ಆದಿತ್ಯಸ್ಥ ಪುರುಷನಲ್ಲಿ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅಗ್ನಿ ಪರವಾಗುವುದರಿಂದ ಬಾಧಕವಶಾತ್ ಅಗ್ನಿಯಿಂದ ಅಭಿನ್ನನಾದ ಕಣ್ಣಿನಲ್ಲಿರುವವನಲ್ಲಿ ಕೇಳಿಸಲ್ಪಟ್ಟ ಅಮೃತತ್ವಾದಿಗಳನ್ನು ಗೌಣವೆನ್ನಬೇಕಾಗುತ್ತದೆ. ಹೀಗೆ ಅಗ್ನಿಶ್ರುತ್ಯಾದಿಗಳ ಬಲದಿಂದ ಅಗ್ನಿಯೇ ಚಕ್ಷುರಂತಸ್ಥನಾಗಿದ್ದಾನೆಂದು ಸಿದ್ಧವಾಗುತ್ತದೆ. ಇದು ಪೂರ್ವಪಕ್ಷದ ಫಲ.

ಒಂದು ವೇಳೆ ವಿದ್ಯಾಭೇದವು ಕೂಡುವುದಾದರೆ 'ಅಹಂ' ಶಬ್ದವು ಶಾಸ್ತ್ರದ ಪ್ರಕಾರ ಬ್ರಹ್ಮಪರವಾಗುತ್ತದೆ. ಆವಾಗ ಯಾವುದೇ ಬಾಧಕವಿಲ್ಲದ ಕಾರಣ ಅಮೃತತ್ವಾದಿಗಳು ಮುಖ್ಯವೇ ಆಗುತ್ತವೆ. ಇಂತಹ ಅಮೃತತ್ವಾದಿ ಲಿಂಗಗಳ ಬಲದಿಂದ ವಿಷ್ಣುವೇ ಶ್ರುತಿಪ್ರತಿಪಾದ್ಯನಾಗುತ್ತಾನೆಂಬುದು ಸಿದ್ಧಾಂತದ ಫಲ.

प्रकाशः – नन्वत्र वक्ष्यमाणदिशा टीकादिरीत्या चादित्यवाक्येऽग्निप्रयुक्ताहंशब्द-सावधारणाभ्यासार्थवादविद्याभेदानां भावेन तद्बलात्तस्याग्निपरत्वं निर्धार्याक्षि-वाक्यस्यापि तदनुसारेणाग्निपरत्वमुच्यते पूर्वपक्षे, न त्वक्षिवाक्यस्थप्रापकबलेन, तत्र तदभावात् । तथा चादित्यवाक्यमेवोदाहृत्यादित्यान्तरस्थः किमग्निर्विष्णुर्वेति चिन्ता, तदर्थं ''सोऽहं'' इत्यग्निप्रयुक्तोऽहंशब्दोऽग्निपरो विष्णुपरो वेति, तदर्थं तस्य विष्णुपरत्वे ''सोऽहमस्मि स एवाहमस्मि'' इत्यादिसावधारणाभ्यासार्थवाद-विद्याभेदोक्तयो न युज्यन्ते युज्यन्ते वेति चिन्तनीयम् । यदि न युज्यन्ते, तदाऽग्नेरेव आदित्यस्थत्वं, अन्यथा तु विष्णोरिति फलिष्यति । आदित्यादित्यस्थत्वेनोक्तानन्दमयाक्षेपश्च ऋजुर्भवति । आदित्यस्थस्य विष्णुत्वं चार्थादक्षिस्थोऽपि स एवेति सिध्यति । तथा च सूत्रेऽक्षिवाक्योपादानाय तत्रत्यात्मशब्दार्थोक्तिपरशब्दोऽपि व्यर्थ इति 'अन्तः' इत्येव सूत्रं स्यात्, 'अन्तरः' इत्यपि न वक्तव्यमिति लाघवम् । ''स्थानादि'' इति सूत्रं च न कर्तव्यं स्यादिति चेत्

ಮುಂದೆ ಹೇಳುವ ಟೀಕಾ ಮಾತಿನ ಪ್ರಕಾರ ಆದಿತ್ಯವಾಕ್ಯವನ್ನೇ ಉದಾಹರಿಸಬಹುದು. ಏಕೆಂದರೆ ಆದರಲ್ಲಿ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದ ಅವಧಾರಣಸಹಿತವಾದ ಅಭ್ಯಾಸ, ಅರ್ಥವಾದ ಹಾಗೂ ವಿದ್ಯಾಪ್ರಭೇದಗಳೆಲ್ಲವೂ ಸ್ಪಷ್ಟವಾಗಿ ಇರುತ್ತವೆ. ಇವುಗಳ ಬಲದಿಂದ ಅಗ್ನಿಯೇ ಶ್ರುತಿಯಿಂದ ಪ್ರತಿಪಾದ್ಯನೆಂದು ನಿರ್ಧರಿಸಬಹುದು. ಈ ಆದಿತ್ಯವಾಕ್ಯಕ್ಕೆ ಅನುಸಾರಿಯಾಗಿ ''ಯ ಏಷೋऽಂತರಕ್ಷಿಣಿ'' ಎಂಬ ಆಕ್ಷಿವಾಕ್ಯವನ್ನೂ ಸಹ ಅಗ್ನಿಪರವೆಂದು ಪೂರ್ವಪಕ್ಷದಲ್ಲಿ ಸಮರ್ಥಿಸಬಹುದು ಹೊರತು ಆಕ್ಷಿವಾಕ್ಯದಲ್ಲಿರುವ ಲಿಂಗಗಳ ಬಲದಿಂದ ಅಗ್ನಿಪರವೆಂದು ಹೇಳಬೇಕಾಗಿಲ್ಲ. ಏಕೆಂದರೆ ಆಕ್ಷಿವಾಕ್ಯದಲ್ಲಿ ಅಂತಹ ಲಿಂಗಗಳೇ ಇಲ್ಲ.

ಆದ್ದರಿಂದ ಆದಿತ್ಯವಾಕ್ಯವನ್ನೇ ಉದಾಹರಿಸಿ ಆದಿತ್ಯನಲ್ಲಿರುವ ಅಂತಸ್ಥನು ಅಗ್ನಿಯೋ? ಅಥವಾ ವಿಷ್ಣುವೋ? ಎಂದು ಸಂಶಯ. ಈ ಸಂಶಯ ಪ್ರರಿಹಾರಕ್ಕಾಗಿ 'ಸೋऽಹಂ' ಎಂಬ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅಗ್ನಿಪರವೋ? ಅಥವಾ ವಿಷ್ಣುಪರವೋ ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯ ಪರಿಹಾರವಾಗಬೇಕೆಂದರೆ ಆ ಶ್ರುತಿಯು ವಿಷ್ಣುಪರವಾದರೆ ''ಸೋऽಹಮಸ್ಮಿ ಸ ಏವಾಹಮಸ್ಮಿ'' ಇತ್ಯಾದಿಯಾದ ಸಾವಧಾರಣವಾದ ಅರ್ಥಬಾಧ ಹಾಗೂ ವಿದ್ಯಾಪ್ರಭೇದಗಳು ಅಯುಕ್ತವಾಗುತ್ತದೋ? ಅಥವಾ ಯುಕ್ತವಾಗುತ್ತದೋ? ಎಂಬ ಸಂಶಯ

ಪರಿಹಾರವಾಗಬೇಕು. ಇದರ ಪರಿಹಾರಕ್ಕಾಗಿ ವಿದ್ಯಾಪ್ರಭೇದಗಳು ಅಯುಕ್ತವಾದರೆ ಅಗ್ನಿಯೇ ಆದಿತ್ಯಾಂತರ್ಗತನಾಗುತ್ತಾನೆ. ಇಲ್ಲದ್ದಿದರೆ ವಿಷ್ಣುವೇ ಆದಿತ್ಯಾಂತರ್ಗತನಾಗುತ್ತಾನೆಂಬುದು ಪರಿಹಾರವಾಗಬೇಕು.

ಆದಿತ್ಯವಾಕ್ಯವನ್ನು ವಿಷಯವೆಂದು ಪರಿಗಣಿಸಿದಾಗ ಆದಿತ್ಯಾಂತರ್ಗತನೆಂದು ಹೇಳಲ್ಪಟ್ಟವನು ಆನಂದಮಯನೂ ಸಹ ಆಗಲಾರನೆಂಬ ಆಕ್ಷೇಪವು ಋಜುವಾಗುತ್ತದೆ. ಆದಿತ್ಯಾಂತರ್ಗತನು ವಿಷ್ಣುವಾದರೆ ಅರ್ಥಾತ್ ಆಕ್ಷಿಪ್ತನೂ ಸಹ ವಿಷ್ಣುವೇ ಆಗುತ್ತಾನೆಂದು ಸಿದ್ಧವಾಗುತ್ತದೆ. ಆದ್ದರಿಂದ ಹೀಗೆ ಆದಿತ್ಯವಾಕ್ಯವನ್ನು ವಿಷಯವೆಂದು ಹೇಳಿದಾಗ ಸೂತ್ರದಲ್ಲಿರುವ ''ರ'' ಎಂಬಕ್ಷರವೂ ಸಹ ಅಯುಕ್ತವಾಗುತ್ತದೆ. ಏಕೆಂದರೆ ಆಕ್ಷಿವಾಕ್ಯದಲ್ಲಿರುವ ಆತ್ಮಶಬ್ದಾರ್ಥವನ್ನು ನಿರೂಪಿಸುವುದಕ್ಕಾಗಿ ಸೂತ್ರದಲ್ಲಿ ''ರ'' ಎಂಬಕ್ಷರವನ್ನು ಉಲ್ಲೇಖಿಸಿದ್ದಾರೆ. ಆಕ್ಷಿವಾಕ್ಯವು ವಿಷಯವಾಗದಿದ್ದಾಗ ಕೇವಲ 'ಅಂತಃ' ಎಂದಷ್ಟೇ ನಿರ್ದೇಶಿಸಿದರೆ ಸಾಕು. 'ಅಂತರಃ' ಎಂದು ಹೇಳುವುದಕ್ಕಿಂತ 'ಅಂತಃ' ಎಂದು ಹೇಳುವುದರಲ್ಲಿ ಲಾಘವವಿದೆ. ಅಷ್ಟೇ ಅಲ್ಲದೆ ಸ್ಥಾನಾದಿ ಸೂತ್ರಗಳೂ ಸಹ ವ್ಯರ್ಥವಾಗುತ್ತವೆ. ಈ ಎಲ್ಲಾ ಕಾರಣಗಳಿಂದ ಆದಿತ್ಯವನ್ನು ವಿಷಯವಾಕ್ಯವನ್ನಾಗಿ ಪರಿಗಣಿಸಿ ಸೂತ್ರದಲ್ಲಿ 'ಅಂತಃ' ಎಂದಷ್ಟೇ ಹೇಳಿದರೆ ಸಾಕು. ಮುಂದಿನ ಸೂತ್ರಗಳೂ ಸಹ ಬೇಕಾಗಿರುವುದಿಲ್ಲ.

ಪ್ರಕಾಶಃ – ಮೈವಂ, ಬಲವದ್ವಿಷ್ಣುಶ್ರುತಿಲಿಙ್ಗಾದಿಬಲೇನಾऽऽದಿತ್ಯಸ್ಥಸ್ಯ ವಿಷ್ಣುತ್ವೇ ನಿರ್ಣೀತೇ ಸತ್ಯೇವಾಹಂಶಬ್ದಾದೇಃ ಶಾಸ್ತ್ರದೃಷ್ಟ್ಯಾದಿನಾ ವಿಷ್ಣೌ ಘಟನಾಯಾ ವರ್ಣನೀಯತ್ವಾತ್ । ವಿಷ್ಣುಶ್ರುತ್ಯಾದೇಶ್ಚಾಕ್ಷಿವಾಕ್ಯ ಏವ ಭಾವೇನಾದಿತ್ಯವಾಕ್ಯೇ ವಿಷ್ಣುಪರತ್ವಾವಧಾರಣಸ್ಯಾಕ್ಷಿಸ್ಥಸ್ಯ ವಿಷ್ಣುತ್ವನಿರ್ಣಯಾಧೀನತ್ವೇನಾಕ್ಷಿವಾಕ್ಯಸ್ಯೈವೋದಾಹರ್ತವ್ಯತ್ವಾತ್ ।

ನಚ ''ಸುಖವಿಶಿಷ್ಟ'' ಇತ್ಯುಕ್ತೇನ ''ಕಂ ಬ್ರಹ್ಮ'' ಇತಿ ಪ್ರಕರಣೇನಾದಿತ್ಯಸ್ಥಸ್ಯ ವಿಷ್ಣುತ್ವನಿರ್ಣಯೋऽಸ್ತ್ವಿತಿ ಶಙ್ಕ್ಯಂ, ತಸ್ಯಾಗ್ನಿಪ್ರಯುಕ್ತಾಹಂಶ್ರುತ್ಯಾದಿನಾ ವಿಚ್ಛೇದಸ್ಯ ಪೂರ್ವಪಕ್ಷಿಣಾ ಚೋದ್ಯಮಾನತ್ವಾತ್ ।

ಸಮಾಧಾನ - ಇದು ತಪ್ಪು. ಆಕ್ಷಿವಾಕ್ಯವನ್ನೇ ಉದಾಹರಿಸುವುದು ಯುಕ್ತವಾಗಿದೆ. ಏಕೆಂದರೆ ಬಲಿಷ್ಠವಾದ ವಿಷ್ಣುಶ್ರುತಿ ಹಾಗೂ ಲಿಂಗಗಳ ಬಲದಿಂದ ಆದಿತ್ಯನಲ್ಲಿರುವವನು ವಿಷ್ಣುವೆಂದು ನಿರ್ಣಯವಾದರೆ ಮಾತ್ರ ಶಾಸ್ತ್ರದ ಪ್ರಕಾರ 'ಅಹಂ' ಶಬ್ದಾದಿಗಳು ವಿಷ್ಣುವಿನಲ್ಲಿ ಉಪಪನ್ನವಾಗುತ್ತವೆ. ಆದ್ದರಿಂದ ಬಲಿಷ್ಠವಾದ ವಿಷ್ಣುಶ್ರುತಿ ಹಾಗೂ ಲಿಂಗಗಳೆಲ್ಲವೂ ಆಕ್ಷಿವಾಕ್ಯದಲ್ಲಿರುತ್ತದಯೇ ಹೊರತು ಆದಿತ್ಯವಾಕ್ಯದಲ್ಲಿ ಇರುವುದಿಲ್ಲ. ಆದ್ದರಿಂದ ಆಕ್ಷಿಯಲ್ಲಿರುವವನು ವಿಷ್ಣುವೆಂದು ನಿರ್ಣಯವಾದರೆ ಮಾತ್ರ ಆದಿತ್ಯವಾಕ್ಯದಿಂದ ವಿಷ್ಣುವು ಪ್ರತಿಪಾದ್ಯನಾಗಲು ಸಾಧ್ಯ. ಈ ಕಾರಣಕ್ಕೋಸ್ಕರ ಆದಿತ್ಯವಾಕ್ಯವನ್ನೇ ಉದಾಹರಿಸಬೇಕು.

'ಸುಖವಿಶಿಷ್ಟ' ಎಂಬ ಶ್ರುತಿಯಲ್ಲಿ 'ಕಂ ಬ್ರಹ್ಮ' ಎಂಬ ಬ್ರಹ್ಮಪ್ರಕರಣದಿಂದ ಆದಿತ್ಯನಲ್ಲಿರುವವನು ವಿಷ್ಣುವೆಂದು ನಿರ್ಣಯಿಸಬಹುದಲ್ಲವೇ? ಎಂದು ಆಶಂಕಿಸಬಾರದು. ಆ ಪ್ರಕರಣವೂ ಸಹ ಅಗ್ನಿ

ಪ್ರಯುಕ್ತವಾದ 'ಅಹಂ' ಶ್ರುತಿಯ ಬಲದಿಂದ ಅಗ್ನಿಪರವಾಗಬಹುದೆಂದು ಪೂರ್ವಪಕ್ಷಿಯು ಆಕ್ಷೇಪಿಸಬಹುದು. ಆದ್ದರಿಂದ ಅಕ್ಷಿಶ್ರುತಿಯನ್ನೇ ಉದಾಹರಿಸುವುದು ಸಮಂಜಸವಾಗಿದೆ.

ಪ್ರಕಾಶಃ – नच ''श्रुतोपनिषत्'' इति सूत्रोक्तोपसंहारस्यब्रह्मलिङ्गबलेन प्रकरणाविच्छेदः सुज्ञान इत्यतः ''सुखविशिष्टाभिधानादेव च'' ''श्रुतोपनिषत्कगत्यभिधानाच्च'' इत्येव पूर्यत इति वाच्यं, तावता बलवद्विष्णुश्रुतिलिङ्गानामनुपदर्शनेन प्रकरणमात्रेणाहंशब्दाभ्यासादेर्बाधायोगाद्यथान्यासमेवानवद्यम् ।

'ಶ್ರುತೋಪನಿಷತ್' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ಉಪಸಂಹಾರದಲ್ಲಿರುವ ಬ್ರಹ್ಮನ ಬಲದಿಂದಲೇ ಬ್ರಹ್ಮಪ್ರಕರಣದ ವಿಚ್ಛೇದವಾಗುವುದಿಲ್ಲವೆಂದು ತಿಳಿಯಬಹುದಾದ್ದರಿಂದ ''ಸುಖವಿಶಿಷ್ಟಾಭಿಧಾನದೇವ ಚ'' ''ಶ್ರುತೋಪನಿಷತ್ಕಗತ್ಯಭಿಧಾನಾಚ್ಚ'' ಎಂಬ ಸೂತ್ರದಿಂದಲೇ ಈ ವಿಷಯವನ್ನು ತಿಳಿಯಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಇಷ್ಟರಿಂದಲೇ ಬಲಿಷ್ಠವಾದ ವಿಷ್ಣುಶ್ರುತಿ ಹಾಗೂ ವಿಷ್ಣುಲಿಂಗಗಳು ಬಾಧಿತವಾಗುವುದಿಲ್ಲ. ಕೇವಲ ಪ್ರಕರಣದ ಬಲದಿಂದ 'ಅಹಂ' ಶಬ್ದಪ್ರಯೋಗ, ಅಭ್ಯಾಸ ಇವುಗಳಿಗೆಲ್ಲಾ ಬಾಧವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಅಕ್ಷಿವಾಕ್ಯವನ್ನೇ ಉದಾಹರಿಸಿ ವಸ್ತುಸ್ಥಿತಿಯನ್ನೇ ಕಾಪಾಡುವುದೇ ಸೂಕ್ತ.

ಪ್ರಕಾಶಃ – अत एवामृतत्वादिकं किं गौणमित्यादिचिन्तोपदर्शिता । यद्यपि अमृतत्वादेर्मुख्यत्वेऽपि न पूर्वपक्षिणः क्षतिः, तादृशस्यापि तेनाग्नौ शङ्क्यमानत्वात्। तथाऽपि वास्तवाभिप्रायेण गौणं मुख्यमिति कोटिप्रदर्शनं, मुख्यसम्भवस्याभिमानमात्रत्वात् ।

ಆದ್ದರಿಂದಲೇ ಅಮೃತತ್ವಾದಿಗಳು ಗೌಣವೋ? ಅಲ್ಲವೋ? ಎಂಬ ಸಂಶಯವನ್ನು ತೋರಿಸಲಾಗಿದೆ. ವಾಸ್ತವಿಕವಾಗಿ ಅಮೃತತ್ವಾದಿ ಲಿಂಗಗಳು ಮುಖ್ಯವೆಂದಾದರೂ ಸಹ ಪೂರ್ವಪಕ್ಷಿಗೆ ಹಾನಿಯಿಲ್ಲ. ಮುಖ್ಯವಾದ ಅಮೃತತ್ವಾದಿಗಳನ್ನೇ ಅಗ್ನಿಯಲ್ಲಿ ಶಂಕಿಸಬಹುದು. ಆದರೂ ಸಹ ವಸ್ತುಸ್ಥಿತಿಯನ್ನು ಅನುಸರಿಸಿ ಗೌಣವೋ ಮುಖ್ಯವೋ ಎಂಬ ಚಿಂತಾಕೋಟಿಯನ್ನು ಪ್ರದರ್ಶಿಸಿದ್ದಾರೆ.

ಪಾಂಡುರಂಗಿಕೇಶವಾಚಾರ್ಯವಿರಚಿತ

ಗುರುರಾಜೀಯಮ್ (ಭಾವದೀಪ)

ಗುರುರಾಜೀಯಮ್ – ।। ॐ अन्तर उपपत्तेः ॐ ।। ब्रह्मजिज्ञासा कर्तव्येत्युक्तमित्यानन्दमयाधिकरणभाष्यवदादित्ये विष्णुरित्येतदधिकरणीयभाष्यमपि विचारसाफल्यमात्रपरं नतु सङ्गतिपरमित्यभिप्रेत्य स्वयमवान्तरसङ्गतिमाह – अत्रेति ।।

ಸಾರ

ಅಂತರಾಧಿಕರಣವು ಪ್ರಾರಂಭವಾಗುತ್ತಿದೆ. ಛಾಂದೋಗ್ಯದ ನಾಲ್ಕನೆಯ ಅಧ್ಯಾಯದಲ್ಲಿ ಉಪಕೋಸಲ ವಿದ್ಯೆಯು ಪ್ರಸಕ್ತವಾಗಿದೆ. ಆ ಸಂದರ್ಭದಲ್ಲಿ "ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚ ಏತದಮೃತಮಭಯಮೇತದ್ ಬ್ರಹ್ಮ" ಎಂಬ ವಾಕ್ಯವು ಕೇಳಿಸುತ್ತಿದೆ. ಮೇಲ್ನೋಟಕ್ಕೆ ಅಗ್ನಿಯನ್ನು ಇದು ಪ್ರತಿಪಾದಿಸುವಂತೆ ಕಾಣಿಸುತ್ತಿದೆ. ಆದರೆ ವಿಷ್ಣುವೇ ಪ್ರತಿಪಾದ್ಯನೆಂಬುದು ಅಂತಿಮ ನಿರ್ಣಯ.

ಆದ್ದರಿಂದ ಒಂದುವೇಳೆ ವಿದ್ಯಾಭೇದವು ಅಯುಕ್ತವಾದರೆ ಆವಾಗ "ಕಂ ಬ್ರಹ್ಮ" ಎಂಬುದು ಅಧ್ಯಾತ್ಮವಿದ್ಯೆಯೆಂದು "ಯ ಏಷೋಂತರಾದಿತ್ಯೇ" ಎಂಬುದು ಅಸದ್ವಿದ್ಯೆಯೆಂದು ಹೇಳಬೇಕಾಗುತ್ತದೆ. ಆವಾಗ ಆದಿತ್ಯಸ್ಥ ಪುರುಷನಲ್ಲಿ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅಗ್ನಿಪರವಾಗುವುದರಿಂದ ಬಾಧಕವಶಾತ್ ಅಗ್ನಿಯಿಂದ ಅಭಿನ್ನನಾದ ಕಣ್ಣಿನಲ್ಲಿರುವವನಲ್ಲಿ ಕೇಳಿಸಲ್ಪಟ್ಟ ಅಮೃತತ್ವಾದಿಗಳನ್ನು ಗೌಣವನ್ನಬೇಕಾಗುತ್ತದೆ. ಹೀಗೆ ಅಗ್ನಿಶ್ರುತ್ಯಾದಿಗಳ ಬಲದಿಂದ ಅಗ್ನಿಯೇ ಚಕ್ಷುರಂತಸ್ಥನಾಗಿದ್ದಾನೆಂದು ಸಿದ್ಧವಾಗುತ್ತದೆ. ಇದು ಪೂರ್ವಪಕ್ಷದ ಫಲ.

ಒಂದು ವೇಳೆ ವಿದ್ಯಾಭೇದವು ಕೂಡುವುದಾದರೆ 'ಅಹಂ' ಶಬ್ದವು ಶಾಸ್ತ್ರದ ಪ್ರಕಾರ ಬ್ರಹ್ಮಪರವಾಗುತ್ತದೆ. ಆವಾಗ ಯಾವುದೇ ಬಾಧಕವಿಲ್ಲದ ಕಾರಣ ಅಮೃತತ್ವಾದಿಗಳು ಮುಖ್ಯವೇ ಆಗುತ್ತವೆ. ಇಂತಹ ಅಮೃತತ್ವಾದಿ ಲಿಂಗಗಳ ಬಲದಿಂದ ವಿಷ್ಣುವೇ ಶ್ರುತಿಪ್ರತಿಪಾದ್ಯನಾಗುತ್ತಾನೆಂಬುದು ಸಿದ್ಧಾಂತದ ಫಲ.

• • • • •

ಅಕ್ಷಿ ಶಬ್ದವು ಅಭಿಮಾನಿಪರವೆಂದು ಪೂರ್ವಪಕ್ಷ

तात्पर्यचन्द्रिका

पूर्वपक्षस्तु – चक्षुरन्तस्स्थोऽग्निरेव, "य एष आदित्ये पुरुषो दृश्यते सोऽहमस्मि" इत्यग्निनाऽऽदित्यस्थस्य स्वात्मतयोपदिष्टत्वात्, चक्षुरादित्यदेवतयोश्च "आदित्यश्चक्षुर्भूत्वाऽक्षिणी प्राविशत्" इत्यादिश्रुत्या ऐक्यात् ।

यद्यपि "अक्षिणी प्राविशत्" इत्यत्र बाधकवशादक्षिशब्दो नादित्यदेवतापरः, किन्तु जडपरः । तथाऽपि "अन्तरक्षिणि" इत्यत्र चक्षुःपर्यायः स देवतापर एव, अभिमान्यधिकरणन्यायेन तस्याक्ष्यभिमानिदेवतायामेव मुख्यत्वात् ।

''यश्चक्षुषि तिष्ठन् यश्चक्षुषोऽन्तरः'' इति श्रुत्यन्तरेऽन्तरपुरुषाधिकरणत्वे-नोक्तस्य चक्षुषः इह ''अन्तरक्षिणि'' इति प्रत्यभिज्ञानाच्च तत्रोक्तस्य चक्षुषः ''यं चक्षुर्न वेद'' इति वाक्यशेषेण चेतनत्वात् । स्थानादिसूत्रादौ जडस्य स्थानत्वोक्तिस्तु परम्परया स्थानत्वात् ।

अत एव भाष्ये सन्न्यायरत्नावल्यां च ''अक्ष्यादित्ययोरैक्यात्'' इत्येवोक्तम् ।

तत्त्वप्रदीपे च ''अक्षीन्द्रियप्रेरकादित्ययोरैक्यात्'' इत्येवोक्तम् । ''अक्ष्यादित्ययोरेकविधत्वात्'' इति टीकाऽपि भाष्यानुसारेण प्रकारभेदनिषेधमुखेन प्रकार्यैक्यपरा नेया ।

ಅನುವಾದ - ಪೂರ್ವಪಕ್ಷ - ಚಕ್ಷುರಂತಸ್ಥನಾದವನು ಅಗ್ನಿಯೇ ಆಗಿದ್ದಾನೆ. 'ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋऽಹಮಸ್ಮಿ'' ಎಂಬುದಾಗಿ ಅಗ್ನಿಯೇ ತನ್ನನ್ನು ಆದಿತ್ಯನಿಷ್ಠನೆಂದು ಹೇಳಿದ್ದಾನೆ ಚಕ್ಷುರಭಿಮಾನಿದೇವತೆಯು ಹಾಗೂ ಆದಿತ್ಯಾಭಿಮಾನಿದೇವತೆಯು ಒಬ್ಬನೇ ಆಗಿದ್ದಾನೆಂದು 'ಆದಿತ್ಯಶ್ಚಕ್ಷುರ್ಭೂತ್ವಾऽಕ್ಷಿಣಿ ಪ್ರಾವಿಶತ್'' ಎಂಬ ಶ್ರುತಿಯಿಂದ ತಿಳಿಯುತ್ತದೆ.

ವಸ್ತುತಃ 'ಅಕ್ಷಿಣಿ ಪ್ರಾವಿಶತ್' ಎಂಬಲ್ಲಿ 'ಅಕ್ಷಿ' ಶಬ್ದವು ಆದಿತ್ಯದೇವತಾಪರವೆನ್ನಲು ಬಾಧಕವಿದೆ. ಆದ್ದರಿಂದ ಜಡಪರವೇ ಆಗಿರುತ್ತದೆ. ಆದರೆ 'ಅಂತರಕ್ಷಿಣಿ ಪುರುಷಃ ಎಂಬಲ್ಲಿರುವ 'ಅಕ್ಷಿ' ಶಬ್ದವು ದೇವತಾಪರವೇ ಆಗುತ್ತದೆ. ಏಕೆಂದರೆ ಈ 'ಅಕ್ಷಿ' ಶಬ್ದವು 'ಚಕ್ಷುಸ್' ಶಬ್ದದ ಪರ್ಯಾಯಪದವಾಗಿದೆ. ಅಭಿಮಾನ್ಯಧಿಕರಣದ ನ್ಯಾಯದಿಂದ 'ಅಕ್ಷಿ' ಶಬ್ದವು ಅಭಿಮಾನಿ ದೇವತೆಯನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆ.

''ಯಶ್ಚಕ್ಷುಷಿ ತಿಷ್ಠನ್ ಯಶ್ಚಕ್ಷುಷೋऽಂತರಃ'' ಎಂಬ ಮತ್ತೊಂದು ಶ್ರುತಿಯಲ್ಲಿ ಅಂತರ್ಯಾಮಿಯಾದ ಪುರುಷನಿಗೆ ಚಕ್ಷುಸ್ಸನ್ನು ಅಧಿಷ್ಠಾನವೆಂದು ಹೇಳಲಾಗಿದೆ. ಇದೇ ಚಕ್ಷುಸ್ಸಿನ ಪ್ರತ್ಯಭಿಜ್ಞಾನವು 'ಅಂತರಕ್ಷಿಣಿ' ಎಂಬ ಶ್ರುತಿಯಿಂದ ಬರುತ್ತದೆ. ಆದ್ದರಿಂದ 'ಯಶ್ಚಕ್ಷುಷಿ' ಎಂಬ ವಾಕ್ಯದಲ್ಲಿ ಅಂತರ್ಯಾಮಿಪುರುಷನಿಗೆ ಅಧಿಷ್ಠಾನ ಭೂತವಾದ ಚಕ್ಷುಸ್ಸೆಂದರೆ ''ಯಂ ಚಕ್ಷುರ್ನ ವೇದ'' ಎಂಬ ವಾಕ್ಯಶೇಷದಿಂದ ಚೇತನವೆಂದು ದೃಢವಾಗುತ್ತದೆ. ಆದ್ದರಿಂದ 'ಚಕ್ಷುಸ್'' ಶಬ್ದದ ಪರ್ಯಾಯ ಪದವೆನಿಸಿದ 'ಅಕ್ಷಿ' ಶಬ್ದವೂ ಸಹ ಚೇತನಪರವೇ ಆಗುತ್ತದೆ. 'ಯ ಏಷೋऽಂತರಕ್ಷಿಣಿ' ಎಂಬ ಶ್ರುತಿಯು 'ಅಕ್ಷಿಣೀ ಪ್ರಾವಿಶತ್' ಎಂಬ ಶ್ರುತಿಯಂತೆ ಜಡಪ್ರತಿಪಾದಕವಾಗುವುದಿಲ್ಲವೆಂದು ನಿರ್ಣಯವಾಗುತ್ತದೆ.

'ಸ್ಥಾನಾದಿವ್ಯಪದೇಶಾಚ್ಚ' ಎಂಬ ಸೂತ್ರದಲ್ಲಿ ತುಪ್ಪ ಮೊದಲಾದ ಪದಾರ್ಥಗಳ ಸಂಪರ್ಕವು ಜಡಭೂತವಾದ ಚಕ್ಷುರಿಂದ್ರಿಯಕ್ಕೆ ಇಲ್ಲವೆಂದು ಹೇಳಿದ್ದಾರೆ. ಲೇಪವಿಲ್ಲದಿರುವಿಕೆಯೆಂಬ ಶಕ್ತಿಯು ಜಡದಲ್ಲಿ ಹೇಳಿರುವಾಗ 'ಅಕ್ಷಿ' ಶಬ್ದದಿಂದ ಚೇತನನ್ನು ಹೇಗೆ ವಿವಕ್ಷಿಸುತ್ತೀರಿ? ಎಂದು ಪ್ರಶ್ನಿಸಬಾರದು. ಲೇಪವಿಲ್ಲದಿರುವಿಕೆಯಂಬ ಗುಣಕ್ಕೆ ಮುಖ್ಯವಾಗಿ ಆಶ್ರಯನಾದವನು ವಿಷ್ಣುವೇ ಆಗಿದ್ದಾನೆ. ಅಂತಹ ವಿಷ್ಣುವಿಗೆ ಜಡಭೂತವಾದ ಅಕ್ಷಿಯು ಅಧಿಷ್ಠಾನವಾಗಿರುವುದರಿಂದ ಲೇಪವಿಲ್ಲದಿರುವಿಕೆಯೆಂಬ ಗುಣಕ್ಕೆ ಜಡವು ಸ್ಥಾನವಾಗಿದೆ ಎಂದು ಸೂತ್ರವು ಸಮರ್ಥಿಸುತ್ತಿದೆ. ಹಾಗಾದರೆ ಸ್ಥಾನಾದಿಸೂತ್ರದಲ್ಲಿ ಜಡವೇ ಅಂತರ್ಯಾಮಿಪುರುಷನಿಗೆ ಅಧಿಷ್ಠಾನವೆಂದು ಹೇಳಿದೆಯಲ್ಲವೇ? ಎಂದರೆ ಅಂತರ್ಯಾಮಿಪುರುಷನಿಗೆ ಜಡಭೂತವಾದ ಚಕ್ಷುರಿಂದ್ರಿಯವು ಅಭಿಮಾನಿದೇವತೆಯ ಮೂಲಕ ಅಧಿಷ್ಠಾನವಾಗಿದೆ ಹೊರತು ನೇರವಾಗಿ ಆಧಾರವಾಗಿಲ್ಲ. ಆದ್ದರಿಂದಲೇ ಭಾಷ್ಯದಲ್ಲಿ ಮತ್ತು ಸನ್ಯಾಯರತ್ನಾವಳಿಯಲ್ಲಿ "ಅಕ್ಷ್ಣಾದಿತ್ಯಯೋರೈಕ್ಯಾತ್" ಎಂದು ಅಕ್ಷಿಗೂ ಆದಿತ್ಯನಿಗೂ ಐಕ್ಯವನ್ನು ಹೇಳಿದ್ದಾರೆ. 'ಅಕ್ಷ್ಣಾದಿತ್ಯಯೋಃ' ಎಂಬ ಟೀಕೆಯನ್ನೂ ಸಹ ಭಾಷ್ಯಕ್ಕೆ ಅನುಸಾರಿಯಾಗಿ ಭೇದವನ್ನು ನಿಷೇಧ ಮಾಡುವ ಮೂಲಕ ಅಂದರೆ ಒಂದೇ ಪ್ರಕಾರವನ್ನು ಹೇಳುತ್ತಿದೆಯೆಂದೇ ಅರ್ಥೈಸಬೇಕು.

ಪ್ರಕಾಶಃ –

'ಉಪಪತ್ತೇಃ' ಇತ್ಯಾದಿಸಿದ್ಧಾನ್ತಹೇತುವ್ಯಾವರ್ತ್ಯೈರಗ್ನಿಪ್ರಾಪಕಶ್ರುತ್ಯರ್ಥವಾದಾಮ್ಯಾಸೈಃ ಪೂರ್ವಪಕ್ಷಯನ್, ''ಯ ಏಷೋऽನ್ತರಕ್ಷಿಣಿ'' ಇತಿ ವಾಕ್ಯೇ ''ಅಗ್ನಿರೇವೇತ್ಯಾದಿಬಹ್ವಗ್ನಿಶ್ರುತಿ-ಸದ್ಭಾವಾಚ್ಚ'' ಇತ್ಯನ್ತಟೀಕಾಂ ತಾವದ್ವ್ಯನಕ್ತಿ – ಪೂರ್ವಪಕ್ಷಸ್ತ್ವಿತ್ಯಾದಿನಾऽಗ್ನಿಪರತೇತ್ಯನ್ತೇನ ।

ವಿವರಣೆ - ಪೂರ್ವಪಕ್ಷ ಹೀಗಿದೆ - ಅಂತರಧಿಕರಣದ ಸೂತ್ರದಲ್ಲಿ 'ಉಪಪತ್ತೇಃ' ಎಂಬ ಪದವು ಸಿದ್ಧಾಂತ ಹೇತುವನ್ನು ಸಮರ್ಥಿಸುತ್ತಿದೆ. ಇದರಿಂದ ಅಗ್ನಿಪ್ರಾಪಕವಾದ ಶ್ರುತಿ ಅರ್ಥವಾದ 'ಅಭ್ಯಾಸಾತ್' ಮೊದಲಾದ ಪೂರ್ವಪಕ್ಷ ಯುಕ್ತಿಯೆಲ್ಲವೂ ನಿರಾಸವಾಗುತ್ತದೆ. ಹೀಗೆ ನಿರಾಸವಾಗುವಂತಹ ಪೂರ್ವಪಕ್ಷ ಯುಕ್ತಿಗಳನ್ನು ಪ್ರತಿಪಾದಿಸುವ '"ಯ ಏಷೋऽನ್ತರಕ್ಷಿಣಿ' ಇತಿ ವಾಕ್ಯೇ ಅಗ್ನಿರೇವ'' 'ಯ ಏಷೋऽನ್ತರಕ್ಷಿಣಿ' ಎಂಬ ವಾಕ್ಯದಲ್ಲಿ ಅಗ್ನಿಯೇ ಪ್ರತಿಪಾದ್ಯನೆಂದು ಪ್ರಾರಂಭವಾಗಿ ''ಬಹ್ವಗ್ನಿಶ್ರುತಿಸದ್ಭಾವಾಚ್ಚ'' 'ಅನೇಕ ಅಗ್ನಿಶ್ರುತಿಗಳಿರುವುದರಿಂದ' ಎಂಬಲ್ಲಿಯ ತನಕದ ಟೀಕೆಯನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಪೂರ್ವಪಕ್ಷಸ್ತು' ಎಂಬಲ್ಲಿಂದ ಪ್ರಾರಂಭಿಸಿ 'ಅಗ್ನಿಪರತಾ' ಎಂಬಲ್ಲಿಯ ತನಕ.

ಪ್ರಕಾಶಃ – ನನ್ವಗ್ನಿನಾ ಆದಿತ್ಯಸ್ಯಸ್ಯ ಸ್ವಾತ್ಮತಯೋಪದೇಶेऽಪಿ ಅಕ್ಷಿಸ್ಥಸ್ಯಾಗ್ನಿತ್ವಂ ಕುತ ? ಇತ್ಯತಃ, ಚಕ್ಷುರಾದಿತ್ಯಶಬ್ದಯೋರ್ಭಾಷ್ಯತತ್ತ್ವಪ್ರದೀಪಾದ್ಯನುರೋಧೇನ ದೇವತಾಪರತ್ವಮುಪೇತ್ಯ ತತ್ರೋಪಪತ್ತಿಂ ವದಂಸ್ತಾವತ್ಪರಿಹಾರಮಾಹ – ಚಕ್ಷುರಿತಿ ।

ಅಗ್ನಿಯು ತನ್ನನ್ನು ಆದಿತ್ಯನಲ್ಲಿರುವವನೆಂದು ವೇಳಿಕೊಂಡ ಮಾತ್ರದಿಂದ ಅಕ್ಷಿಯಲ್ಲಿರುವವನು ಅಗ್ನಿಯೇ ಏಕಾಗಬೇಕು ? ಎಂಬ ಪ್ರಶ್ನೆಗೆ 'ಚಕ್ಷು' ಶಬ್ದ ಹಾಗೂ 'ಆದಿತ್ಯ' ಶಬ್ದಗಳು ದೇವತಾಪರವಾಗಿವೆಯೆಂದು ಭಾಷ್ಯ ಹಾಗೂ ತತ್ವಪ್ರದೀಪಗಳಲ್ಲಿ ಸಮರ್ಥಿಸಿದ್ದಾರೆ. ಅದರ ಪ್ರಕಾರ ಈ ವಿಷಯದಲ್ಲಿ ಕಾರಣವನ್ನು ನಿರೂಪಿಸುತ್ತಾ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ 'ಚಕ್ಷುಃ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – 'ಅದಿತ್ಯಃ' ಮಂಡಲದೇವತಾ ಚೇತನಶ್ಚಕ್ಷುರಭಿಮಾನೀ ಭೂತ್ವಾऽಕ್ಷಿಗೋಲಕೇ ಪ್ರಾವಿಶದಿತ್ಯರ್ಥಃ ।

ನನು ''ಅಕ್ಷಿಣೀ'' ಇತ್ಯತ್ರಾಕ್ಷಿಶಬ್ದಸ್ಯ ಗೋಲಕಪರತ್ವಾದತ್ರಾಪ್ಯಕ್ಷಿಶಬ್ದಸ್ಯ ನ ದೇವತಾಪರತ್ವಮಿತ್ಯಾಶಙ್ಕ್ಯ ಸಾಧಯತಿ – ಯದ್ಯಪೀತಿ ।

ಆದಿತ್ಯ ಮಂಡಲಕ್ಕೆ ದೇವತೆಯಾಗಿರುವ ಚೇತನನೇ ಚಕ್ಷುರಿಂದ್ರಿಯಕ್ಕೆ ಅಭಿಮಾನಿಯಾಗಿ ಅಕ್ಷಿಯೆಂಬ ಗೋಲಕದಲ್ಲಿ ಪ್ರವೇಶಿಸಿದನೆಂದು 'ಆದಿತ್ಯಶ್ಚಕ್ಷುರ್ಭೂತ್ವಾऽಕ್ಷಿಣೀ ಪ್ರಾವಿಶತ್' ಎಂಬ ಶ್ರುತಿಗೆ ಅರ್ಥ.

'ಅಕ್ಷಿಣೀ' ಎಂಬಲ್ಲಿ 'ಅಕ್ಷಿ' ಶಬ್ದವು ಗೋಲಕಪರವಾದ್ದರಿಂದ ಇಲ್ಲಿರುವ 'ಅಕ್ಷಿ' ಶಬ್ದವೂ ಸಹ ಗೋಲಕಪರವೇ ಆಗಬೇಕು. ದೇವತಾಪರವೆಂದು ಹೇಗೆ ಹೇಳುತ್ತೀರಿ? ಎಂದು ಆಶಂಕಿಸಿ ಉತ್ತರಿಸುತ್ತಿದ್ದಾರೆ. 'ಯದ್ಯಪಿ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – ಬಾಧಕೇತಿ । ಆದಿತ್ಯದೇವತಾಯಾಃ ಚಕ್ಷುರ್ದೇವತಾಯಾಂ ಪ್ರವೇಶಾಯೋಗರೂಪಾದಿತ್ಯರ್ಥಃ। 'ಚಕ್ಷುಃಪರ್ಯಾಯಃ' ಚಕ್ಷುರಿನ್ದ್ರಿಯಪರ್ಯಾಯಃ, ನ ತದಧಿಷ್ಠಾನಗೋಲಕಪರ್ಯಾಯ ಇತ್ಯರ್ಥಃ । 'ಸಃ' ಅಕ್ಷಿಶಬ್ದಃ ।

'ಬಾಧಕವಶಾತ್' ಎಂದರೆ ಆದಿತ್ಯ ದೇವತೆಯು 'ಚಕ್ಷುಸ್' ಎಂಬ ದೇವತೆಯಲ್ಲಿ ಪ್ರವೇಶ ಮಾಡಲು ಸಾಧ್ಯವಿಲ್ಲವೆಂಬ ಬಾಧಕದಿಂದ ಎಂದರ್ಥ. 'ಚಕ್ಷುಃಪರ್ಯಾಯಃ' ಎಂಬ ಪದಕ್ಕೆ ಚಕ್ಷುರಿಂದ್ರಿಯಕ್ಕೆ ಪರ್ಯಾಯಪದವೆನಿಸಿದ 'ಅಕ್ಷಿ' ಎಂಬ ಶಬ್ದವು ಎಂದರ್ಥ. ಈ 'ಅಕ್ಷಿ' ಶಬ್ದವು ಚಕ್ಷುರಿಂದ್ರಿಯಕ್ಕೆ ಅಧಿಷ್ಠಾನವಾದ ಗೋಲಕಕ್ಕೆ ಪರ್ಯಾಯವಾಗಿಲ್ಲ ಎಂದರ್ಥ. 'ಸಃ' ಎಂದರೆ 'ಅಕ್ಷಿ' ಶಬ್ದವೆಂದರ್ಥ.

ಪ್ರಕಾಶಃ – ಅಭಿಮಾನೀತಿ । ದ್ವಿತೀಯಸ್ಯಾಧ್ಯಪಾದೇ ''ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್'' ಇತಿ ತೃತೀಯेऽಧಿಕರಣೇ ''ಮೃದಬ್ರವೀತ್'' ಇತ್ಯಾದಿವಾಕ್ಯಂ ಪ್ರಮಾಣಂ ನ ವೇತಿ ಸಂಶಯೇ, ಮೃತ್ತ್ವಾದಿಹೇತುನಾ ಮೃದಾದೇರ್ಜಡತ್ವಾನುಮಾನಾತ್, ಅಭಿಮಾನಿಚೇತನಸ್ಯಾನುಪಲಮ್ಭಾದಿ-ಬಾಧಿತ್ವಾತ್, ಜಡಸ್ಯ ಚ ವಕ್ತೃತ್ವಾದ್ಯಯೋಗಾದಪ್ರಮಾಣಮಿತಿ ಪ್ರಾಪ್ತೇ, ನಿರವಕಾಶಜಡತ್ವಯುಕ್ತಿನಿದರ್ಶಿತವೇದವಾಕ್ಯಪ್ರಾಮಾಣ್ಯೋಭಯಾನ್ಯಥಾನುಪಪತ್ತ್ಯಾ ।

पृथिव्याद्यभिमानिन्यो देवताः प्रथितौजसः ।

ಇತ್ಯಾದಿವಚನೇನ ಚ ದೇವತಾತದ್ವಿಗ್ರಹತದನ್ತರ್ಧಾನಶಕ್ತ್ಯಾದಿಸಿದ್ಧೇ, ಅಭಿಮನ್ಯಮಾನ-ಗತಮೃತ್ವಾದಿಮೃಚ್ಛಬ್ದಪ್ರವೃತ್ತಿನಿಮಿತ್ತಸ್ಯऽಭಿಮಾನ್ಯಧೀನತ್ವಸ್ಯಾಕಾಶನಯೇ,

यतोऽत्यन्तपराधीनं चेतनादप्यचेतनम् ।

ಇತ್ಯುಕ್ತದಿಶಾ ಸಿದ್ಧತ್ವಾತ್, ''तदधीनत्वात् ಇತ್ಯತ್ರೋಕ್ತನ್ಯಾಯೇನ ಸ್ವಾತನ್ತ್ರ್ಯಸ್ಯ ಶಬ್ದವೃತ್ತೌ ಮುಖ್ಯನಿಮಿತ್ತತ್ವೇನ ಮೃದಾದಿಶಬ್ದಾನಾಂ ಅಭಿಮಾನಿಷು ಮೃದಾದಿಜಡೇಭ್ಯೋ ಮುಖ್ಯತ್ವಾತ್ ಮೃದಾದಿಶಬ್ದೈರ್ದೇವತಾಯಾ ಏವಾಭಿಧಾನಮಿತಿ ವಕ್ತೃತ್ವಾದ್ಯುಪಪತ್ತೇಃ ಪ್ರಮಾಣಮೇವೇತ್ಯುಕ್ತಮ್ । ತೇನ ನ್ಯಾಯೇನ ಮುಖ್ಯತ್ವಾದಿತ್ಯರ್ಥಃ । ತಥಾ ಚ ''मुख्यामुख्ययोर्मुख्ये कार्यसम्प्रत्ययः'' ಇತಿ ನ್ಯಾಯೇನ ಮುಖ್ಯದೇವತಾಯಾ ಏವ ಗ್ರಹಣಂ, ನ ತ್ವಮುಖ್ಯಜಡಸ್ಯೇತಿ ಭಾವಃ ।

ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್ (೨-೧-೩)

ಈ ಅಧಿಕರಣದಲ್ಲಿ 'ಮೃದಬ್ರವೀತ್' ವಾಕ್ಯವನ್ನು ವಿಚಾರ ಮಾಡಲಾಗಿದೆ. ಇದು ಪ್ರಮಾಣವೋ? ಅಪ್ರಮಾಣವೋ? ಎಂದು ಸಂಶಯ.

ಪೂರ್ವಪಕ್ಷ - ಮೃತ್ವವೆಂಬ ಹೇತುವಿನಿಂದ ''ಮೃದಾದಿಗಳನ್ನು'' ಜಡವೆಂದು ಸಾಧಿಸಬಹುದು. ಆದ್ದರಿಂದ ಮೃದಭಿಮಾನಿ ದೇವತೆಯು ಕಣ್ಣಿಗೆ ಗೋಚರಿಸುತ್ತಿಲ್ಲ. ಜಡವಾದ ಮಣ್ಣಿಗೆ ಮಾತನಾಡುವ ಸಾಮರ್ಥ್ಯವಿಲ್ಲ. ಆದ್ದರಿಂದ ''ಮೃದಬ್ರವೀತ್'' ಎಂಬ ವಾಕ್ಯವನ್ನು ಅಪ್ರಮಾಣವೆನ್ನಬೇಕು.

ಸಿದ್ಧಾಂತ - ಜಡತ್ವಯುಕ್ತಿಯು ನಿರವಕಾಶವಾಗಿದೆ. ವಕ್ತೃತ್ವವನ್ನು ಹೇಳುವ ವೇದವಾಕ್ಯವು ನಿರ್ದೋಷವಾಗಿದೆ. ಆದ್ದರಿಂದ ಎರಡನ್ನೂ ಸಹ ಪ್ರಮಾಣವೆಂದೇ ಹೇಳಬೇಕು. ಮೃದಭಿಮಾನಿ ದೇವತೆಗೆ ವಕ್ತೃತ್ವವನ್ನು ಹೇಳದೆ ಈ ಎರಡನ್ನೂ ಪ್ರಮಾಣವೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಉಭಯಾನ್ಯಥಾನುಪಪತ್ತಿಯಿಂದ 'ಮೃತ್' ಶಬ್ದಕ್ಕೆ ಮೃದಭಿಮಾನಿದೇವತೆಯೆಂದು ವ್ಯಾಖ್ಯಾನಿಸಬೇಕು. 'पृथिव्याद्यभिमानिन्यो देवताः प्रथितौजसः' ಎಂಬ ಸ್ಮೃತಿವಾಕ್ಯವೂ ಸಹ ಈ ವಿಷಯದಲ್ಲಿ ಆಧಾರವಾಗಿದೆ. ಮತ್ತು ಅಭಿಮಾನಿದೇವತೆಗಳಿಗೆ ಅಂತರ್ಧಾನಶಕ್ತಿಯೂ ಸಹ ಇದರಿಂದ ಸಿದ್ಧವಾಗುತ್ತದೆ. 'ಮೃತ್' ಶಬ್ದದ ಪ್ರವೃತ್ತಿನಿಮಿತ್ತವಾದ ಮೃತ್ವವು ಮೃದಭಿಮಾನಿ ದೇವತೆಗಳ ಅಧೀನವಾಗಿದೆ. ಈ ವಿಚಾರವು ಆಕಾಶಾಧಿಕರಣದಲ್ಲಿ 'यतोऽत्यन्तपराधीनं चेतनादप्यचेतनम्' ಚೇತನರಿಗಿಂತ ಅಚೇತನವು ಮತ್ತಷ್ಟು ಅಸ್ವತಂತ್ರವಾಗಿದೆ ಎಂಬ ಮಾತಿನಿಂದ ಸಿದ್ಧವಾಗಿದೆ.

''तदधीनत्वात्'' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಶಬ್ದಗಳ ಪ್ರವೃತ್ತಿಗೆ ಸ್ವಾತಂತ್ರ್ಯವೇ ಮುಖ್ಯವಾದ ಕಾರಣವೆಂದು ನಿರ್ಣಯವಾಗಿದೆ. ಆದ್ದರಿಂದ ಮೃದಾದಿ ಶಬ್ದಗಳು ಮೃದಾದಿ

ಜಡಪದಾರ್ಥಗಳನ್ನು ಹೇಗೆ ಪ್ರತಿಪಾದಿಸುತ್ತವೋ ಆದಕ್ಕಿಂತ ಮುಖ್ಯವಾಗಿ ತದಭಿಮಾನಿ ದೇವತೆಗಳನ್ನೇ ಪ್ರತಿಪಾದಿಸುತ್ತವೆ. ಆದ್ದರಿಂದ 'ಮೃದಬ್ರವೀತ್' ಎಂಬ ವಾಕ್ಯ ಪ್ರತಿಪಾದಿಸುವ ವಕ್ತೃತ್ವವು ಅಭಿಮಾನಿದೇವತೆಗಳಲ್ಲಿ ಉಪಪನ್ನವಾಗುವುದರಿಂದ ಪ್ರಮಾಣವೇ ಆಗಿದೆಯೆಂದು ಅಭಿಮಾನ್ಯಧಿಕರಣದಲ್ಲಿ ಸಿದ್ಧಾಂತ ಮಾಡಿದ್ದಾರೆ.

ಈ ನ್ಯಾಯದಂತೆ ಪ್ರಕೃತದಲ್ಲಿ 'ಅಕ್ಷಿ' ಶಬ್ದವು ಅಭಿಮಾನಿದೇವತಾಪರವಾಗಿದೆಯೆಂದು ತಿಳಿಯಬೇಕು. ಆದ್ದರಿಂದ ''ಮುಖ್ಯಾಮುಖ್ಯಯೋರ್ಮುಖ್ಯೇ ಕಾರ್ಯಸಂಪ್ರತ್ಯಯಃ'' ಮುಖ್ಯಾಮುಖ್ಯಗಳಲ್ಲಿ ಮುಖ್ಯವನ್ನೇ ಸ್ವೀಕರಿಸಬೇಕೆಂಬ ನ್ಯಾಯದಂತೆ ಮುಖ್ಯಾರ್ಥವಾದ ಗೋಲಕವನ್ನು ಬಿಟ್ಟು ಚಕ್ಷುರಭಿಮಾನಿದೇವತೆಯನ್ನೇ ಸ್ವೀಕರಿಸಬೇಕೆಂದು ತಿಳಿಯಬೇಕು.

ಪ್ರಕಾಶಃ – ಯುಕ್ತ್ಯನ್ತರं चाह – य इति । चक्षुश्शब्दस्य देवतापरत्वं कुत इत्यत आह – तत्रेति । श्रुत्यन्तरं इत्यर्थः । जडस्य वेदनप्रसक्तेरभावेन ''न वेद'' इति निषेधायोगात्तदन्यथानुपपत्त्या चेतनत्वसिद्धिरिति भावः । व्यक्तमेतदुत्तरतये ।

ಅಭಿಮಾನಿಯಾದ ದೇವತೆಯನ್ನೇ ಸ್ವೀಕರಿಸಬೇಕೆನ್ನಲು ಮತ್ತೊಂದು ಯುಕ್ತಿಯಿಂದ 'ಚಕ್ಷುಸ್' ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. 'ಚಕ್ಷುಸ್' ಶಬ್ದವು ದೇವತಾಪರವೆಂದೇಕೆ ಒಪ್ಪಬೇಕು? ಎಂಬ ಪ್ರಶ್ನೆಗೆ 'ತತ್ರೋಕ್ತಸ್ಯ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಮತ್ತೊಂದು ಶ್ರುತಿಯಲ್ಲಿ ಹೇಳಲ್ಪಟ್ಟ ಎಂದರ್ಥ. ಜಡವಾದ ಪದಾರ್ಥಕ್ಕೆ ತಿಳುವಳಿಕೆಯು ಸಾಧ್ಯವಿಲ್ಲದ ಕಾರಣ 'ನ ವೇದ' ಎಂದು ತಿಳುವಳಿಕೆಯನ್ನು ನಿಷೇಧಿಸಲಾಗದು. ಇದರ ಅನ್ಯಥಾನುಪಪತ್ತಿಯಿಂದ 'ಚಕ್ಷುಸ್' ಶಬ್ದವು ಚೇತನಪರವಾಗಿದೆಯೆಂದು ಸಿದ್ಧವಾಗುತ್ತದೆ. ಈ ವಿಷಯವು ಮುಂದಿನ ಅಧಿಕರಣದಲ್ಲಿ ಮತ್ತಷ್ಟು ಸ್ಪಷ್ಟವಾಗುತ್ತದೆ.

ಪ್ರಕಾಶಃ – ननु 'स्थानादिव्यपदेशाच्च' इति सूत्रे ''तद्यदस्मिन् सर्पिर्वोदकं वा सिञ्चति वर्त्मनी एव गच्छति'' इति श्रुतौ जडस्यैवाक्ष्णोऽरसङ्गत्वाख्य-शक्तिव्यपदेशादक्षिशब्देन चेतनग्रहणे सर्पिराद्यलेपरूपस्थानशक्तिव्यपदेशो न युक्त इत्यत आह – स्थानेति ।

'ಸ್ಥಾನಾದಿವ್ಯಪದೇಶಾಚ್ಚ' ಎಂಬ ಸೂತ್ರದಲ್ಲಿ ''ತದ್ಯದಸ್ಮಿನ್ ಸರ್ಪಿರ್ವೋದಕಂ ವಾ ಸಿಂಚತಿ ವರ್ತ್ಮನಿ ಏವ ಗಚ್ಛತಿ'' ಎಂಬುದಾಗಿ ಕಣ್ಣಿಗೆ ಯಾವುದೇ ಜಡ ಪದಾರ್ಥದ ಲೇಪವಿಲ್ಲವೆಂದು ಅತ್ಯಂತ ನಿಖರವಾಗಿ ಹೇಳಿದೆ. ಆದರೆ ನೀವು 'ಅಕ್ಷಿ' ಶಬ್ದದಿಂದ ಚೇತನನ್ನು ವಿವಕ್ಷಿಸಿದರೆ 'ಸರ್ಪಿ' ಮೊದಲಾದ ಪದಾರ್ಥಗಳ ಲೇಪವಿಲ್ಲವೆಂಬ ಶಕ್ತಿಯನ್ನು ಚೇತನರಲ್ಲಿ ಹೇಗೆ ಕೂಡಿಸುತ್ತೀರಿ? ಈ ಪ್ರಶ್ನೆಗೆ 'ಸ್ಥಾನಾದಿಸೂತ್ರಾದೌ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ಅಸಙ್ಗವಿಷ್ಣ್ವಾಧಾರದೇವತಾಧಾರತ್ವಾಭಿಪ್ರಾಯೇಣ ಸಿದ್ಧಾನ್ತೇ ತದುಕ್ತಿರಿತ್ಯರ್ಥಃ । ಅಕ್ಷ್ಣೋರ್ಜಡತ್ವೋಪಗಮಪರತಯಾ ಪ್ರತೀಯಮಾನಾऽಪಿ ಟೀಕಾ ಚೇತನಪರತ್ವೇನ ನೇಯೇತ್ಯಾಹ – ಅಕ್ಷೀತಿ।

ಅಕ್ಷಿಯಲ್ಲಿರುವ ವಿಷ್ಣುವಿನಲ್ಲಿ ಮಾತ್ರ ಅಸಂಗ ಶಕ್ತಿಯು ಇರುತ್ತದೆ. ಇಂತಹ ವಿಷ್ಣುವಿನ ಸನ್ನಿಧಾನದಿಂದಷ್ಟೇ ಜಡಭೂತವಾದ ಅಕ್ಷಿಯಲ್ಲಿ ಅಸಂಗಶಕ್ತಿಯು ವಿರುದ್ಧವಾಗಿದೆಯೆಂದು ಸಿದ್ಧಾಂತದಲ್ಲಿ ಹೇಳುತ್ತಾರೆ.

ವಸ್ತುತಃ ಟೀಕೆಯಲ್ಲಿರುವ 'ಅಕ್ಷಿ' ಶಬ್ದವು ಜಡಪರವೆಂದು ಭಾಸವಾಗುತ್ತದೆ. ಆದರೂ ಸಹ ಚೇತನಪರವಾಗಿ ವ್ಯಾಖ್ಯಾನಿಸಬೇಕೆಂದು 'ಅಕ್ಷಿ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – ವಿಧಾಶಬ್ದಸ್ಯ ಪ್ರಕಾರಾರ್ಥತ್ವಾತ್, 'ಏಕವಿಧತ್ವಾತ್' ಇತ್ಯನೇನಕ್ಷ್ಣೋರ್ಯದೇವತಾಧಿಷ್ಠಾನತ್ವಂ ತದೇವತಾಧಿಷ್ಠಾನತ್ವಮಾದಿತ್ಯಮಣ್ಡಲಸ್ಯಾಪಿ, ನತು ದೇವತಾನ್ತರಾಧಿಷ್ಠಾನತ್ವಮಿತಿ ಪ್ರಕಾರಭೇದನಿಷೇಧಪ್ರತೀತಾವಪ್ಯುಭಯಾಧಾರತ್ವರೂಪೈಕಪ್ರಕಾರವಾನ್ ಪ್ರಕಾರೀ ಚೇತನ ಏಕ ಏವೇತಿ ನೇಯೇತ್ಯರ್ಥಃ ।

ಟೀಕೆಯಲ್ಲಿ 'ಏಕವಿಧತ್ವಾತ್' ಎಂದಿದೆ. ಇಲ್ಲಿ 'ವಿಧ' ಎಂಬ ಶಬ್ದಕ್ಕೆ ಪ್ರಕಾರ ಎಂದರ್ಥ. ಆದ್ದರಿಂದ ಜಡಭೂತವಾದ ಅಕ್ಷಿಯೆಂಬ ಗೋಲಕವು ಯಾವ ದೇವತೆಗೆ ಅಧಿಷ್ಠಾನವಾಗಿದೆಯೋ? ಅಂತಹ ದೇವತೆಗಷ್ಟೇ ಆದಿತ್ಯಮಂಡಲವೂ ಸಹ ಅಧಿಷ್ಠಾನವಾಗಿದೆ ಹೊರತು ಮತ್ತೊಬ್ಬ ದೇವತೆಗೆ ಅಧಿಷ್ಠಾನವಾಗಿಲ್ಲ. ಹೀಗೆ ಪ್ರಕಾರ ಭೇದವನ್ನು ನಿಷೇಧ ಮಾಡುವ ಮೂಲಕ ಉಭಯ ಆಧಾರತ್ವವೆಂಬ ಏಕಪ್ರಕಾರವುಳ್ಳ ಪ್ರಕಾರಿಯಾದ ಚೇತನನಿಗೆ ಐಕ್ಯವನ್ನು ಒಪ್ಪಿ 'ಏಕವಿಧತ್ವಾತ್' ಎಂಬ ಟೀಕೆಯನ್ನು ವ್ಯಾಖ್ಯಾನಿಸಬೇಕು. ಅಂದರೆ ಅಕ್ಷಿಗೋಲಕ ಹಾಗೂ ಆದಿತ್ಯ ಮಂಡಲದಲ್ಲಿ ಒಬ್ಬನೇ ಚೇತನನಿದ್ದಾನೆಂದು ಅಭಿಪ್ರಾಯ.

ಗುರುರಾಜೀಯಮ್ – ಅಕ್ಷ್ಯಾದಿತ್ಯಯೌರಕ್ಯಾದಿತ್ಯಯುಕ್ತಮ್ । ಆದಿತ್ಯಶಬ್ದಸ್ಯ ಮಣ್ಡಲಪರತ್ವೇ ಮಣ್ಡಲಸ್ಯಾಕ್ಷಿಷು ಪ್ರವೇಶಾಸಮ್ಭವೇನ ತದ್ಗತಚೇತನಪರತ್ವಾತ್ । ಯ ಏಷೋऽನ್ತರಕ್ಷಿಣೀತ್ಯತ್ರಾಕ್ಷಿಶಬ್ದಸ್ಯ ಮಣ್ಡಲಪರತ್ವಾತ್ । ನ ಚಾತ್ರಾಪ್ಯಕ್ಷಿಶಬ್ದಸ್ಯ ಚೇತನಪರತ್ವೇನಾಕ್ಷ್ಯಾದಿತ್ಯಯೌರಕ್ಯಂ ಯುಕ್ತಮಿತಿ ವಾಚ್ಯಮ್ । ಆದಿತ್ಯಶ್ಚಕ್ಷುರ್ಭೂತ್ವಾऽಕ್ಷಿಣೀ ಪ್ರಾವಿಶದಿತ್ಯತ್ರಾಕ್ಷಿಶಬ್ದಸ್ಯ ಚೇತನಪರತ್ವೇ ತತ್ರಾದಿತ್ಯಮಣ್ಡಲಸ್ಯಚೇತನಸ್ಯ ತತ್ರ ಪ್ರವೇಶಾಸಮ್ಭವೇನಾಕ್ಷಿಶಬ್ದಸ್ಯ ಚೇತನಪರತ್ವಾಸಮ್ಭವೇನ ಗೋಲಕಪರತ್ವಸ್ಯೈವ ವಕ್ತವ್ಯತ್ವಾತ್ । ತದುಸಾರೇಣಾನ್ತರಕ್ಷಿಣೀತ್ಯತ್ರಾಪಿ ಗೋಲಕಪರತ್ವಸ್ಯೈವ ವಿದ್ಯಮಾನತ್ವೇನ ಜಡಸ್ಯಾಕ್ಷ್ಣಶ್ಚೇತನೇನಾದಿತ್ಯೈಕ್ಯಾಸಮ್ಭವಾದಿತ್ಯತ ಆಹ – ಯದ್ಯಪೀತಿ ।।

ಬಾಧಕವಶಾದಿತಿ ।। ಅಕ್ಷಿಶಬ್ದಸ್ಯ ಚೇತನಪರತ್ವೇ ತತ್ರ ಚೇತನಪ್ರವೇಶಾನುಪಪತ್ತಿರೂಪ-ಬಾಧಕವಶಾದಿತ್ಯರ್ಥಃ । ಚಕ್ಷುಶ್ಶಬ್ದಸ್ಯ ದೇವತಾಪರತ್ವೇನ ತತ್ಪರ್ಯಾಯಾಕ್ಷಿಶಬ್ದಸ್ಯಾಪಿ ದೇವತಾಪರತ್ವಮೇವೇತ್ಯಾಹ – **ಚಕ್ಷುಃಪರ್ಯಾಯ ಇತಿ ।।**

ಅಭಿಮಾನ್ಯಧಿಕರಣನ್ಯಾಯೇನೇತಿ ।। ಅಭಿಮನ್ಯಮಾನವಾಚಕಾನಾಂ ಶಬ್ದಾನಾಮಭಿಮಾನಿನಿ ಮುಖ್ಯತ್ವಾದಿತಿ ನ್ಯಾಯೇನೇತ್ಯರ್ಥಃ ।

ಯಶ್ಚಕ್ಷುಷಿ ತಿಷ್ಠನ್ನಿತಿ ಶ್ರುತ್ಯನ್ತರೇತರಪುರುಷಾಧಿಕರಣತ್ವೇನೋಕ್ತಸ್ಯ ಚಕ್ಷುಷೋऽನ್ತರಕ್ಷಿಣೀತ್ಯತ್ರ ಪ್ರತ್ಯಭಿಜ್ಞಾನೇऽಪ್ಯನ್ತರಕ್ಷಿಣೀತ್ಯತ್ರೋಕ್ತಸ್ಯಾಕ್ಷ್ಣಶ್ಚೇತನತ್ವಂ ಕುತಃ । ಯಶ್ಚಕ್ಷುಷಿ ತಿಷ್ಠನ್ನಿತಿ ವಾಕ್ಯೋಕ್ತಸ್ಯ ಚಕ್ಷುಷೋऽಪ್ಯಚೇತನತ್ವಾದಿತ್ಯತ ಆಹ – ತನ್ತ್ರೋಕ್ತಸ್ಯೇತಿ।।

ಜ್ಞಾನಪ್ರಸಕ್ತೌ ಸತ್ಯಾಂ ತದಭಾವಶ್ಚೇತನತ್ವಾಭಾವೇನ ಸಮ್ಭವತಿ । ಅಚೇತನೇ ಜ್ಞಾನಪ್ರಸಕ್ತೇರೇವಾಭಾವಾತ್ । ತಥಾ ಚ ತದನ್ಯಥಾನುಪಪತ್ತ್ಯಾ ಚಕ್ಷುಷಶ್ಚೇತನತ್ವಸಿದ್ಧಿರಿತ್ಯರ್ಥಃ ।

ಸಾರ

'ಯ ಏಷಃ ಅಂತರಕ್ಷಿಣಿ' ಎಂಬ ಶ್ರುತಿಯಲ್ಲಿ ಚಕ್ಷುರಂತರ್ಗತನಾದವನು ಅಗ್ನಿದೇವತೆಯೆಂದು ಪೂರ್ವಪಕ್ಷ. ಏಕೆಂದರೆ ಅಗ್ನಿಯೇ ಸ್ವತಃ ತನ್ನನ್ನು ಆದಿತ್ಯದೇವತೆಯೆಂದು ಹೇಳಿಕೊಂಡಿದ್ದಾನೆ. ಚಕ್ಷುರಭಿಮಾನಿದೇವತೆ ಹಾಗೂ ಆದಿತ್ಯ ದೇವತೆ ಒಬ್ಬನೇ ಎಂದು 'ಆದಿತ್ಯಶ್ಚಕ್ಷುರ್ಭೂತ್ವಾऽಕ್ಷಿಣಿ ಪ್ರಾವಿಶತ್' ಎಂಬ ಶ್ರುತಿಯಿಂದ ತಿಳಿಯುತ್ತದೆ.

'ಅಕ್ಷಿ' ಶಬ್ದವು ಮುಖ್ಯವಾಗಿ ಕಣ್ಣಿಗೆ ಅಭಿಮಾನಿಯಾದ ದೇವತೆಯನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತಿದೆ ಎಂದು ಅಭಿಮಾನ್ಯಧಿಕರಣದಿಂದ ನಿರ್ಣಯವಾಗಿದೆ. ಮತ್ತು 'ಯಶ್ಚಕ್ಷುಷಿ ತಿಷ್ಠನ್' ಎಂಬ ಮತ್ತೊಂದು ಶ್ರುತಿಯಲ್ಲಿ ಪ್ರತಿಪಾದ್ಯವಾದ ಚಕ್ಷುಸ್ಥೇ 'ಅಂತರಕ್ಷಿಣಿ ಪುರುಷಃ' ಎಂಬಲ್ಲಿರುವ ಅಕ್ಷಿಶಬ್ದದಿಂದ ವಿವಕ್ಷಿತವಾಗಿದೆ. ಆ ಶ್ರುತಿಯಲ್ಲಿ ಹೇಳಲ್ಪಟ್ಟ 'ಚಕ್ಷುಷಃ ಯಂ ಚಕ್ಷುರ್ನವೇದ' ಎಂಬ ವಾಕ್ಯಶೇಷದಿಂದ ಚೇತನಪರವೆಂದು ಸಿದ್ಧವಾದ ಮೇಲೆ ಅಂತರಕ್ಷಿಣಿ ಎಂಬಲ್ಲಿರುವ ಅಕ್ಷಿಯೂ ಸಹ ಚೇತನಪರವೇ ಆಗಬೇಕು. ಈ ವಿಷಯದಲ್ಲಿ ಭಾಷ್ಯ ಹಾಗೂ ಸನ್ಯಾಯರತ್ನಾವಳಿಗಳ ಸಮ್ಮತಿಯೂ ಇದೆ.

• • • • •

ಅಕ್ಷಿಶಬ್ದವು ಜಡಪರವೂ ಆಗಬಹುದು

ತಾತ್ಪರ್ಯಚನ್ದ್ರಿಕಾ

ಯದ್ವಾ – ''ಅಕ್ಷಿಣಿ ಪ್ರಾವಿಶತ್'' ಇತ್ಯತ್ರೈವ ''ಅನ್ತರಕ್ಷಿಣಿ'' ಇತ್ಯತ್ರಾಪ್ಯಕ್ಷಿಶಬ್ದೋ ಜಡಪರಃ । ಏವಞ್ಚ ಸ್ಥಾನಾದಿಸೂತ್ರಾದಿಸ್ವಾರಸ್ಯಂ, ''ಯ ಏಷ ಆದಿತ್ಯೇ ಪುರುಷೋ ದೃಶ್ಯತೇ'' ''ಯ ಏಷोऽನ್ತರಕ್ಷಿಣಿ ಪುರುಷೋ ದೃಶ್ಯತೇ'' ಇತಿ ವಾಕ್ಯದ್ವಯವೈಯರ್ಥ್ಯಂ ಚ ।

ನ ಚೈವಂ ಅಕ್ಷ್ಯಾದಿತ್ಯಯೋರ್ಭಿನ್ನತ್ವಾದಾದಿತ್ಯಸ್ಯತ್ವೇऽಪ್ಯಕ್ಷಿಸ್ಥತ್ವಾಸಿದ್ಧಿರಿತಿ ವಾಚ್ಯಮ್, ''ಆದಿತ್ಯಶ್ಚಕ್ಷುಃ'' ಇತಿ ಶ್ರುತಾವಾದಿತ್ಯಮಂಡಲಸ್ಥಚೇತನಸ್ಯ ಜಡಾಕ್ಷಿಪ್ರವೇಶೋಕ್ತ್ಯಾ ಜಡಾಕ್ಷ್ಯಾದಿತ್ಯಮಂಡಲಯೋರೇಕಚೇತನಸ್ಯಾನತ್ವೇನೈಕವಿಧತ್ವಾತ್ । ''ಯ ಏಷ ಆದಿತ್ಯೇ ಪುರುಷೋ ದೃಶ್ಯತೇ'' ಇತ್ಯತ್ರಾಪ್ಯಾದಿತ್ಯಪದೇನ ಮಂಡಲಮೇವೋಚ್ಯತೇ ।

''ಐಕ್ಯಾತ್'' ಇತಿ ಭಾಷ್ಯೇऽಪಿ ಜಡಾಕ್ಷ್ಯಾದಿತ್ಯಯೋರೈಕ್ಯಾಯೋಗಾತ್ ಏಕವಿಧತ್ವಮೇವಾಭಿಪ್ರೇತಮಿತಿ ಟೀಕಾರ್ಥಃ ।

ಯದ್ಯಪ್ಯಂಶಾಧಿಕರಣೇ ''ಅಸಾವಾದಿತ್ಯಸ್ತ್ರಿವೃತ್ತ್ರಿವೃದಿವ ವೈ ಚಕ್ಷುಃ ಶುಕ್ಲಂ ಕೃಷ್ಣಾಂ ಕನೀನಿಕಾ'' ಇತಿ ಶ್ರುತ್ಯಾ ತ್ರಿವೃತ್ತ್ವೇನ ಅಕ್ಷ್ಯಾದಿತ್ಯಯೋಸ್ಸಾಮ್ಯಂ ವಕ್ಷ್ಯತೇ । ತಥಾऽಪಿ ನ ತದಿಹ ವಿವಕ್ಷ್ಯತೇ, ತೇನಾದಿತ್ಯಸ್ಯಾಕ್ಷಿಸ್ಥತ್ವಾಸಿದ್ಧೇಃ ।

ಅನುವಾದ - ಅಥವಾ 'ಅಕ್ಷ್ಣಿ ಪ್ರಾವಿಶತ್' ಎಂಬಲ್ಲಿ ಯಾವರೀತಿಯಾಗಿ 'ಅಕ್ಷಿ' ಶಬ್ದವು ಜಡಪರವಾಗಿದೆಯೋ ಅದರಂತೆ 'ಅಂತರಕ್ಷಿಣಿ ಪುರುಷಃ' ಎಂಬಲ್ಲಿರುವ 'ಅಕ್ಷಿ' ಶಬ್ದವೂ ಜಡಪರ ಆಗಿದೆಯಂದೇ ಹೇಳೋಣ. ಇದರಿಂದ ಸ್ಥಾನಾದಿ ಸೂತ್ರಗಳೆಲ್ಲವೂ ಸ್ವರಸವಾಗುತ್ತವೆ. ಮತ್ತು ''ಯ ಏಷ ಆದಿತ್ಯೇ ಪುರುಷೋ ದೃಶ್ಯತೇ'' ''ಯ ಏಷೋऽಂತರಕ್ಷಿಣಿ ಪುರುಷೋ ದೃಶ್ಯತೇ'' ಎಂಬೆರಡು ವಾಕ್ಯಗಳನ್ನು ಉಲ್ಲೇಖಿಸುವ ಆವಶ್ಯಕತೆಯೂ ಇರುವುದಿಲ್ಲ.

ಜಡಭೂತವಾದ ಆಕ್ಷಿ ಹಾಗೂ ಆದಿತ್ಯಗಳು ಭಿನ್ನವಾದ್ದರಿಂದ ಆದಿತ್ಯನಲ್ಲಿ ಇದ್ದಾನೆಂದ ಮಾತ್ರಕ್ಕೆ ಆಕ್ಷಿಯಲ್ಲಿದ್ದಾನೆಂದೇನು ಸಿದ್ಧವಾಗುವುದಿಲ್ಲವಲ್ಲ? ಎಂದು ಪ್ರಶ್ನಿಸಬಾರದು. ''ಆದಿತ್ಯಶ್ಚಕ್ಷುಃ'' ಎಂಬ ಶ್ರುತಿಯಲ್ಲಿ ಆದಿತ್ಯಮಂಡಲದಲ್ಲಿರುವ ಚೇತನನೇ ಜಡಭೂತವಾದ ಆಕ್ಷಿಯೆಂಬ ಗೋಲಕದಲ್ಲಿ ಪ್ರವೇಶಿಸಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಜಡಭೂತವಾದ 'ಆಕ್ಷಿಗೋಲಕ' ಹಾಗೂ ಆದಿತ್ಯಮಂಡಲಗಳು ಒಬ್ಬನೆ ಚೇತನನಿಗೆ ಅಧಿಷ್ಠಾನವಾಗಿವೆಯೆಂದು ಏಕವಿಧತ್ವವನ್ನು ತಿಳಿಯಬೇಕು.

'ಯ ಏಷಃ ಆದಿತ್ಯೇ ಪುರುಷಃ ದೃಶ್ಯತೇ' ಎಂಬಲ್ಲಿಯೂ ಸಹ ಆದಿತ್ಯಪದದಿಂದ ಆದಿತ್ಯಮಂಡಲವೇ ಪ್ರತಿಪಾದ್ಯವಾಗಿವೆ. 'ಐಕ್ಯಾತ್' ಎಂಬ ಭಾಷ್ಯದಲ್ಲಿಯೂ ಜಡವಾದ ಆಕ್ಷಿಗೋಲಕ ಹಾಗೂ ಆದಿತ್ಯಮಂಡಲಗಳಿಗೆ ಐಕ್ಯವನ್ನು ವಿವಕ್ಷಿಸಲಾಗದ ಕಾರಣ ಏಕವಿಧತ್ವವನ್ನೇ ವಿವಕ್ಷಿಸಬೇಕು. ಅಂದರೆ ಎರಡೂ ಅಧಿಷ್ಠಾನಗಳಲ್ಲಿರುವ ಚೇತನನು ಒಬ್ಬನೇ ಆಗಿದ್ದಾನೆಂದು ಟೀಕೆಯ ಅಭಿಪ್ರಾಯ.

ವಸ್ತುತಃ ಅಂಶಾಧಿಕರಣನ್ಯಾಯವನ್ನು ವಿವಕ್ಷಿಸಿದಾಗ ''ಅಸಾವಾದಿತ್ಯಸ್ತ್ರಿವೃತ್ತ್ರಿವೃದಿವ ವೈ ಚಕ್ಷುಃ. ಶುಕ್ಲಂ ಕೃಷ್ಣಾಂ ಕನಿನೀಕಾ'' ಎಂಬ ಶ್ರುತಿಯಲ್ಲಿ ಆಕ್ಷಿಗೋಲಕ ಹಾಗೂ ಸೂರ್ಯಮಂಡಲಗಳು ಬಿಳಿ, ಕಪ್ಪು, ಕೆಂಪು ಬಣ್ಣಗಳಿಂದ ಕೂಡಿರುವುದರಿಂದ ಪೃಥಿವೀ, ಜಲ ಹಾಗೂ ತೇಜಸ್ಸಿನ ವಿಕಾರಭೂತ-

ವಾಗಿವೆಯೆಂದು ತ್ರಿವೃತ್ತ್ವವನ್ನು ಹೇಳಿದ್ದಾರೆ. ತ್ರಿವೃತ್ತ್ವವೆಂಬ ಧರ್ಮದಿಂದ ಆದಿತ್ಯಮಂಡಲ ಹಾಗೂ ಅಕ್ಷಿಗೋಲಕಗಳಿಗೆ ಸಾಮ್ಯವನ್ನು ಅಲ್ಲಿ ಹೇಳಿದ್ದಾರೆ. ಆದರೆ ಅಂತಹ ಸಾಮ್ಯವನ್ನು ಇಲ್ಲಿ ವಿವಕ್ಷಿಸಲಾಗದು. ಅದರಿಂದ ಆದಿತ್ಯಮಂಡಲದಲ್ಲಿರುವವನೇ ಅಕ್ಷಿಗೋಲಕದಲ್ಲಿದ್ದಾನೆಂದು ಸಿದ್ಧವಾಗುವುದಿಲ್ಲ.

ಪ್ರಕಾಶಃ –

ಇದಾನೀಮನೇಕಸ್ವಾರಸ್ಯಾನುರೋಧೇನ ಟೀಕಾರೀತ್ಯಾऽಕ್ಷ್ಣೋರ್ಜಡತ್ವಮುಪೇತ್ಯಾಕ್ಷ್ಯಾದಿತ್ಯಯೌರೈಕ್ಯ-ಪ್ರಕಾರಮಾಹ – ಯದ್ವೇತಿ । ಆದಿಪದೇನ ''ಸರ್ಪಿರ್ವಾ'' ಇತಿ ಶ್ರುತಿರ್ಗೃಹ್ಯತೇ । ವಾಕ್ಯದ್ವಯೇತಿ । ಚೇತನಪಕ್ಷೇ ದ್ವಯೋರೇಕದೇವತಾಕತ್ವಾದನ್ಯತರವೈಯರ್ಥ್ಯಮಿತಿ ಭಾವಃ ।

ವಿವರಣೆ - ಇಲ್ಲಿಯ ತನಕ ಅಕ್ಷಿಶಬ್ದವು ದೇವತಾಪರವೆಂದು ಪೂರ್ವಪಕ್ಷ ಮಾಡಿದರು. ಈಗ ಜಡಪರವೆಂದು ಒಪ್ಪಿ ಪೂರ್ವಪಕ್ಷ ಮಾಡುತ್ತಿದ್ದಾರೆ. ಹೀಗೆ ಜಡಪರವೆಂದು ಹೇಳಿದಾಗ ಅನೇಕ ವಾಕ್ಯಗಳನ್ನು ಸ್ವಾರಸ್ಯವಾಗಿ ವ್ಯಾಖ್ಯಾನಿಸಿದಂತಾಗುತ್ತದೆ. ಮತ್ತು ಟೀಕೆಯೂ ಸಹ ಸಮಂಜಸವಾಗುತ್ತದೆ. ಆದ್ದರಿಂದ ಅಕ್ಷಿಯೆಂಬ ಗೋಲಕಕ್ಕೂ, ಆದಿತ್ಯಮಂಡಲಕ್ಕೂ ಹೇಳಲ್ಪಟ್ಟ ಐಕ್ಯಪ್ರಕಾರವನ್ನು 'ಯದ್ವಾ' ಇತ್ಯಾದಿ ವಾಕ್ಯದಿಂದ ಉಪಪಾದಿಸುತ್ತಿದ್ದಾರೆ. ಸೂತ್ರಾದಿ ಎಂಬಲ್ಲಿರುವ ಆದಿಪದದಿಂದ 'ಸರ್ಪಿರ್ವಾ' ಎಂಬ ಶ್ರುತಿಯನ್ನು ವಿವಕ್ಷಿಸಬೇಕು. ವಾಕ್ಯದ್ವಯವು ಏಕೆ ವ್ಯರ್ಥವೆಂದರೆ ಚೇತನರನ್ನು ವಿವಕ್ಷಿಸಿದರೆ ಅಕ್ಷಿಗೆ ಹಾಗೂ ಸೂರ್ಯಮಂಡಲಕ್ಕೆ ಒಬ್ಬನೇ ದೇವತೆಯಾದ್ದರಿಂದ ಒಂದು ವಾಕ್ಯವು ವ್ಯರ್ಥವಾಗುತ್ತದೆಂದು ತಿಳಿಯಬೇಕು.

ಪ್ರಕಾಶಃ – ''ಏಕವಿಧತ್ವಾತ್'' ಇತಿ ಟೀಕಾವಾಕ್ಯಂ ಟೀಕೋಕ್ತವ್ಯಾವರ್ತ್ಯಶಙ್ಕಾವ್ಯಕ್ತಿಪೂರ್ವಕಂ ವ್ಯನಕ್ತಿ – ನಚೇತಿ । 'ಏವಂ' ಜಡತ್ವೇ ।

''ಏಕವಿಧತ್ವಾತ್'' ಎಂಬ ಟೀಕಾ ಮಾತನ್ನು ಟೀಕೆಯಲ್ಲಿ ಹೇಳಲ್ಪಟ್ಟ ವ್ಯಾವರ್ತ್ಯಶಂಕೆಯನ್ನು ತೋರಿಸುವ ಮೂಲಕ ವ್ಯಾಖ್ಯಾನಿಸುತ್ತಿದ್ದರೆ ''ನ ಚೈವಂ'' ಎಂಬ ವಾಕ್ಯದಿಂದ. 'ಏವಂ' ಎಂಬ ಪದಕ್ಕೆ ಜಡಪರವಾದರೆ ಎಂದರ್ಥ.

ಪ್ರಕಾಶಃ – ನನು ''ಯ ಏಷ ಆದಿತ್ಯೇ'' ಇತ್ಯತ್ರ ''ಆದಿತ್ಯಶ್ಚಕ್ಷುರ್ಭೂತ್ವಾ'' ಇತ್ಯಾದಾವಿವ'' ಆದಿತ್ಯಶಬ್ದಸ್ಯ ಚೇತನಪರತ್ವೇ ಮಣ್ಡಲಾಭಿಮಾನಿಚೇತನಸ್ಯಸ್ಯೈವ ಸ್ವಾತ್ಮತಯೋಪದೇಶಾತ್ । ಅಕ್ಷ್ಣಾಶ್ಚೈಕಚೇತನಸ್ಥಾನತ್ವೇನೈಕವಿಧತ್ವಾದಕ್ಷಿಚೇತನಸ್ಯ ಏವಾಗ್ನಿರಿತಿ ವಾಚ್ಯಮಿತ್ಯತ ಆಹ – ಯ ಏಷ ಇತಿ ।

''ಯ ಏಷ ಆದಿತ್ಯೇ'' ಎಂಬ ವಾಕ್ಯವು 'ಆದಿತ್ಯಶ್ಚಕ್ಷುರ್ಭೂತ್ವಾ' ಎಂಬ ಶ್ರುತಿಯಂತೆ ಆದಿತ್ಯ ಶಬ್ದವು ಚೇತನಪರವೆಂದು ಹೇಳಿದರೆ ಆದಿತ್ಯಮಂಡಲಕ್ಕೆ ಅಭಿಮಾನಿಯಾದ ಯಾವ ಚೇತನನಿದ್ದಾನೋ ಅವನ

ಅಂತರ್ಯಾಮಿಯಾಗಿ ತನ್ನನ್ನು ಉಪದೇಶಿಸಿದನು ಎಂದರ್ಥವಾಗುತ್ತದೆ. ಆಗ ಅಕ್ಷಿಯೆಂಬ ಗೋಲಕಕ್ಕೆ ಅಭಿಮಾನಿಯಾದ ಅಕ್ಷಿದೇವತೆಯಲ್ಲಿ ಅಂತರ್ಯಾಮಿಯಾಗಿ ಅಗ್ನಿಯು ತನ್ನನ್ನು ಉಪದೇಶಿಸಿದ್ದಾನೆಂಬ ಅರ್ಥ ತಿಳಿಯುತ್ತದಲ್ಲವೇ? ಎಂಬ ಪ್ರಶ್ನೆಗೆ 'ಯ ಏಷಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಏವಞ್ಚ ಪ್ರಾಚೀನರೀತ್ಯಾ ಅಕ್ಷ್ಯಾದಿತ್ಯದೇವತಯೋರೈಕ್ಯಾದಾದಿತ್ಯದೇವತಾನ್ತಸ್ಥಸ್ಯ ಸ್ವಾತ್ಮತಯೋಪದೇಶೇऽಕ್ಷಿದೇವತಾನ್ತಸ್ಥೋऽಪಿ ಸ ಏವ । ಉಭಯದೇವತಾಯಾ ಏಕತ್ವಾದಿತ್ಯರ್ಥಃ । ಟೀಕಾಕೃನ್ಮತೇऽಕ್ಷ್ಯಾದಿತ್ಯಯೋರ್ಜಡತ್ವೇऽಪ್ಯೇಕದೇವತಾಧಿಷ್ಠಾನತ್ವಾದಕ್ಷಿಸ್ಥಸ್ಯಾಗ್ನಿತ್ವೇ ಆದಿತ್ಯಸ್ಥಸ್ಯ ಸ್ವಾತ್ಮತಯೋಪದೇಶಾದಿತಿ ಹೇತುರ್ನ ವ್ಯಧಿಕರಣ ಇತಿ ಸಿದ್ಧಮ್ ।

ಏಕೆಂದರೆ ಸನ್ನಿಯತ್ಯಾವಳಿಯ ಅಭಿಪ್ರಾಯದಂತೆ ಅಕ್ಷಿದೇವತೆಯು ಹಾಗೂ ಆದಿತ್ಯದೇವತೆಯು ಒಬ್ಬನೇ ಅಗಿರುವುದರಿಂದ ಆದಿತ್ಯದೇವತೆಯಲ್ಲಿರುವವನನ್ನೇ ಅಗ್ನಿಯು ತಾನೆಂದು ಹೇಳಿಕೊಂತಿದ್ದರಿಂದ ಅಕ್ಷಿದೇವತೆಯೊಳಗಿರುವ ದೇವತೆಯೂ ಸಹ ಅಗ್ನಿಯೇ ಆಗುತ್ತಾನೆಂದು ಅಭಿಪ್ರಾಯ. ಏಕೆಂದರೆ ಆದಿತ್ಯದೇವತೆ ಹಾಗೂ ಅಕ್ಷಿದೇವತೆ ಒಬ್ಬನೇ ಅಗಿದ್ದಾನೆ.

ಟೀಕಾರಾಯರ ಪ್ರಕಾರ 'ಅಕ್ಷಿ' ಹಾಗೂ 'ಆದಿತ್ಯ' ಶಬ್ದಗಳು ಜಡಪ್ರತಿಪಾದಕವಾದರೂ ಸಹ ಒಬ್ಬನೇ ದೇವತೆಗೆ ಅಧಿಷ್ಠಾನವಾದ್ದರಿಂದ ಆದಿತ್ಯಮಂಡಲದಲ್ಲಿರುವ ದೇವತೆಯು ಅಗ್ನಿಯೇ ಅಗಿದ್ದಾನೆಂಬುದನ್ನು ಆದಿತ್ಯನಲ್ಲಿ ತಾನಿರುವವನೆಂದು ಅಗ್ನಿಯ ಸ್ವಾತ್ಮೋಪದೇಶವೆಂಬ ಹೇತುವಿನಿಂದ ತಿಳಿಯಬೇಕು. ಈ ಹೇತುವು ವ್ಯಧಿಕರಣವಲ್ಲವೆಂದು ಸಿದ್ಧವಾಯಿತು.

ಗುರುರಾಜೀಯಮ್ – ನನ್ವಕ್ಷಿಶಬ್ದಸ್ಯ ಚೇತನಪರತ್ವೇ ತದ್ಯದಸ್ಮಿನ್ಸರ್ಪಿರ್ವೋದಕಂ ವಾ ಸಿಞ್ಚತೀತ್ಯಾದಿವಾಕ್ಯೋಕ್ತಾ ಸಙ್ಗತ್ವರೂಪಸ್ಥಾನಶಕ್ತೇರಸಮ್ಭವೇನ ಜಡಸ್ಯೈವ ಸಮ್ಭವೇನಾಕ್ಷಿಶಬ್ದೇನ ಜಡಪರತ್ವಮೇವಾಸ್ಯೇಯಮಿತ್ಯತ ಆಹ – ಸ್ಥಾನಾದೀತಿ ।। ಪರಮ್ಪರಯೇತಿ ।। ಮಞ್ಚಾಸ್ಥೋऽಪಿ ಹಿ ಮಣಿರ್ಗೇಹಸ್ಯ ಇತಿ ಗೀಯತ ಇತಿ ನ್ಯಾಯೇನಾನ್ತರಪುರುಷಾಧಿಕರಣಚೇತನಾಧಿಷ್ಠಾನತ್ವೇನ ಪರಮ್ಪರಯಾ ಸ್ಥಾನತ್ವಾದಿತ್ಯರ್ಥಃ। ।। ಅತ ಏವೇತಿ ।। ಉಕ್ತರೀತ್ಯಾऽऽದಿತ್ಯಶಬ್ದವಚ್ಚಕ್ಷುಶ್ಶಬ್ದಸ್ಯಾಪಿ ದೇವತಾಪರತ್ವೇನಾಕ್ಷ್ಯಾದಿತ್ಯಯೋರೈಕ್ಯಸ್ಯಾಭಿಪ್ರೇತತ್ವಾದೇವೇತ್ಯರ್ಥಃ ।

ನನ್ವೇವಮಕ್ಷ್ಯಾದಿತ್ಯಯೋರೈಕ್ಯಂ ಚೇತ್ತರ್ಹಿ ಟೀಕಾಯಾಮಕ್ಷ್ಯಾದಿತ್ಯಯೋರೇಕವಿಧತ್ವಾದಿತ್ಯೇಕ-ವಿಧತ್ವೋಕ್ತಿರ್ಯುಕ್ತೇತ್ಯತ ಆಹ – ಅಕ್ಷ್ಯಾದಿತ್ಯಯೋರಿತಿ ।। ಪ್ರಕಾರಭೇದನಿಷೇಧಮುಖೇನೇತಿ ।। ಸ್ಥಾನಭೇದಾತ್ತಾಪಕತ್ವತದಭಾವಾದಿನಾ ತದಭೇದಾನುಪಪತ್ತಿರಿತ್ಯಾಶಙ್ಕ್ಯ

ಅಂಶಿನೋ ಯತ್ತು ಸಾಮರ್ಥ್ಯಂ ಯತ್ಸ್ವರೂಪಂ ಯಥಾಸ್ಥಿತಿಃ ।
ತದೇವ ನಾಣುಮಾತ್ರೋऽಪಿ ಭೇದಸ್ತ್ವಾಂಶಾಂಶಿನೋಃ ಕ್ವಚಿತ್ ।।

ಇತಿ ನ್ಯಾಯೇನ ಪ್ರಕಾರಭೇದನಿಷೇಧನೇತ್ಯರ್ಥಃ ।

नन्वेवमक्ष्यादित्ययोरेकविधत्वादिति टीकाया भाष्याद्यनुसारेण प्रकारभेदनिषेधमुखेन प्रकार्यैक्यपरत्वेन व्याख्याने गौणत्वापत्तिः । किञ्च परम्परया स्थानत्वेन स्थानादिसूत्रादौ जडस्य स्थानत्वोक्तौ स्थानादिसूत्रस्याप्यस्वारस्यम् । 'य एष आदित्ये पुरुषो दृश्यते य एषोऽन्तरक्षिणि पुरुषो दृश्यत' इत्यत्र वाक्यद्वयवैयर्थ्यं च स्यादित्यस्वरसाट्टीकानुसारेण पक्षान्तरमाह – यद्वेति ।।

नन्वेवमादित्यश्चक्षुरित्यत्रादित्यशब्दस्यादित्यमण्डलपरत्वेजडयोरक्ष्यादित्य-मण्डलयोरैक्याभावेनाक्ष्यादित्ययोरिति भाष्यविरोध इत्यत आह – ऐक्येति ।। एकविधत्वमिति ।। एकचेतनाधिष्ठितत्वरूपमेकविधत्वमित्यर्थः ।

ननु चाक्ष्यादित्ययोरेकचेतनाधिष्ठितत्वेनैकविधत्वं कुत उच्यते । त्रिवृत्त्वादिनाप्येकविधत्वसम्भवादित्यत आह – यद्यपीति ।।

ಸಾರ

. ಅಥವಾ 'ಅಂತರಕ್ಷಿಣಿ ಪುರುಷಃ' ಎಂಬಲ್ಲಿರುವ ಅಕ್ಷಿ ಶಬ್ದವು ಜಡಪರವೆಂದು ಹೇಳಲು ಯಾವುದೇ ಶ್ರುತಿಯಿಲ್ಲ. ಪ್ರತ್ಯುತ ಸ್ಥಾನಾದಿಸೂತ್ರಗಳೆಲ್ಲವು ಸ್ವರಸವೇ ಆಗುತ್ತವೆ. 'ಯ ಏಷಃ ಆದಿತ್ಯೇ' ಎಂಬ ಮತ್ತೊಂದು ವಾಕ್ಯದ ಉಲ್ಲೇಖವು ಅನಾವಶ್ಯಕವಾಗುತ್ತದೆ.

ಆದಿತ್ಯಮಂಡಲ ಹಾಗೂ ಅಕ್ಷಿಗೋಲಕದಲ್ಲಿ ಒಬ್ಬನೇ ಚೇತನನಿರುವುದರಿಂದ 'ಏಕವಿಧತ್ವಾತ್' ಎಂಬ ಟೀಕೆಯು ಸ್ವಾರಸ್ಯವಾಗುತ್ತದೆ. ಆದ್ದರಿಂದ ಜಡಭೂತವಾದ ಅಧಿಷ್ಠಾನಗಳು ಭಿನ್ನವಾದ್ದರಿಂದ ಚೇತನರೂ ಸಹ ಭಿನ್ನರೇ ಆಗಬೇಕೆಂದು ಹೇಳಲಾಗದು.

• • • • •

'ಸೋऽಹಮಸ್ಮಿ' ಎಂಬುದು ಅಗ್ನಿಯದ್ದೇ ಉಪದೇಶ

तात्पर्यचन्द्रिका

नच वाच्यं अक्ष्यादित्यस्ययोरेकत्वेऽपि ''सोऽहमस्मि'' इत्यत्रोपदेष्टा नाग्निः किन्तु विष्णुरिति, ''अग्नीन् परिचचार अथ हाग्नयः समूदिरे'' इत्यादिना बहुकृत्वोऽग्निश्रुतेः । बहुवचनान्ताग्निश्रुतेश्च । ''अथ हैनं गार्हपत्योऽनुशशास'' ''अथ हैनमन्वाहार्यपचनोऽनुशशास'' ''अथ हैनमाहवनीयोऽनुशशास'' इति

अग्निविशेषत्वेन प्रसिद्धत्रेताग्निरूपवह्नीनां श्रुतेश्च । स्वीकृता च सिद्धान्तिनाऽपि तत्राग्निगार्हपत्यादिशब्दानामग्निपरता ।

नच वाच्यमग्नीनामेवोपदेष्टृत्वेऽपि "शास्त्रदृष्ट्या" इति न्यायेन "अहं" इत्यस्यान्तर्यामिपरतेति ब्रह्मैवाक्षिस्थत्वेनोपास्यमिति "उपवयन्तं भुञ्जामः" इत्यग्नीनामुपासकपालकत्वादिना स्तुतिरूपार्थवादस्य तेषामुपास्यत्वं विनाऽयोगेन तेषामेवाहंशब्दार्थत्वात् । न ह्यन्य उपासकपालकः अन्यश्चोपास्य इति युक्तम् ।

ಅನುವಾದ - ಪ್ರಶ್ನೆ - ಅಕ್ಷಿಗೋಲಕ ಹಾಗೂ ಆದಿತ್ಯ ಮಂಡಲಗಳಲ್ಲಿ ಇರುವ ಚೇತನನು ಒಬ್ಬನೇ ಆಗಿದ್ದಾನೆಂದು ಒಪ್ಪೋಣ. ಆದರೆ 'ಸೋऽಹಮಸ್ಮಿ' ಎಂದು ಉಪದೇಶಿಸಿದವನು ವಿಷ್ಣುವೇ ಆಗಿದ್ದಾನೆ ಹೊರತು ಅಗ್ನಿಯಲ್ಲವೆಂದು ಹೇಳಬಾರದಲ್ಲವೆ?

ಉತ್ತರ - "ಅಗ್ನೀನ್ ಪರಿಚಚಾರ ಅಥ ಹಾಗ್ನಯಃ ಸಮೂದಿರೇ" ಇತ್ಯಾದಿಯಾಗಿ ಅನೇಕಬಾರಿ ಅಗ್ನಿ ಶಬ್ದವು ಕೇಳಿಸುತ್ತಿದೆ. ಮತ್ತು 'ಅಗ್ನಯಃ' ಎಂಬುದಾಗಿ ಬಹುವಚನಾಂತವಾದ ಅಗ್ನಿಶಬ್ದವಿದೆ. ಅಷ್ಟೇ ಅಲ್ಲದೇ "ಅಥ ಹೈನಂ ಗಾರ್ಹಪತ್ಯೋऽನುಶಶಾಸ" "ಅಥ ಹೈನಮನ್ವಾಹಾರ್ಯಪಚನೋऽ-ನುಶಶಾಸ" "ಅಥ ಹೈನಮಾಹವನೀಯೋऽನುಶಶಾಸ" ಇತ್ಯಾದಿ ಶ್ರುತಿಯಲ್ಲಿ ಅಗ್ನಿಯ ವಿಶೇಷ ರೂಪಗಳೆಂದು ಲೋಕಪ್ರಸಿದ್ಧವಾದ 'ಗಾರ್ಹಪತ್ಯ, ಅನ್ವಾಹಾರ್ಯಪಚನ, ಆಹವನೀಯ' ಎಂಬ ಅನೇಕ ಅಗ್ನಿಗಳು ಶ್ರುತವಾಗಿವೆ. ಸಿದ್ಧಾಂತಿಗಳೂ ಸಹ ಈ ಶ್ರುತಿಯಲ್ಲಿರುವ 'ಗಾರ್ಹಪತ್ಯಾದಿ' ಶಬ್ದಗಳಿಂದ ಅಗ್ನಿಪರತ್ವವನ್ನು ಅಂಗೀಕರಿಸಿದ್ದಾರೆ.

ಪ್ರಶ್ನೆ - 'ಸೋऽಹಮಸ್ಮಿ' ಎಂಬ ಮಾತು ಅಗ್ನಿಯ ಉಪದೇಶವೆಂದು ಒಪ್ಪೋಣ? ಆದರೆ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ 'ಅಹಂ' ಶಬ್ದವು ಅಂತರ್ಯಾಮಿಯಾದ ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಆದ್ದರಿಂದ ಬ್ರಹ್ಮನೇ ಅಕ್ಷಿಯಲ್ಲಿದ್ದಾನೆಂದು ಉಪಾಸನೆ ಮಾಡಬೇಕೆಂದು ಸಿದ್ಧವಾಗುತ್ತದಲ್ಲವೇ?

ಉತ್ತರ - ಹೀಗೆ ಪ್ರಶ್ನಿಸಬಾರದು. "ಉಪವಯಂತಂ ಭುಂಜಾಮಃ" ಎಂಬುದಾಗಿ ಉಪಾಸಕನನ್ನು ಪಾಲನೆ ಮಾಡುತ್ತೇನೆಂದು ಅಗ್ನಿಯು ಹೇಳಿಕೊಂಡಿದ್ದಾನೆ. ಸ್ತುತಿರೂಪವಾದ ಈ ಅರ್ಥವಾದವು ಅಗ್ನಿಯು ಉಪಾಸ್ಯನಾಗದಿದ್ದರೆ ಕೂಡುವುದಿಲ್ಲ. ಆದ್ದರಿಂದ ಅಗ್ನಿದೇವತೆಯೇ 'ಅಹಂ' ಶಬ್ದ ಪ್ರತಿಪಾದ್ಯನಾಗಿದ್ದಾನೆ. ಉಪಾಸಕರನ್ನು ಪಾಲಿಸುವವನೇ ಬೇರೆ ಉಪಾಸ್ಯನೇ ಬೇರೆ ಎಂಬುದು ಯುಕ್ತವಲ್ಲ.

ಪ್ರಕಾಶಃ –

ಅಥಾಪ್ಯಸಿದ್ಧೋ ಹೇತುಃ, ''ಸೋऽಹಮಸ್ಮಿ'' ಇತಿ ಶ್ರುತಾವಹಂಶಬ್ದಸ್ಯಾಗ್ನಿಪರತ್ವೇ ಮಾನಾಭಾವೇನಾದಿತ್ಯಸ್ಯಸ್ಯ ಸ್ವಾತ್ಮತಯೋಪದೇಶಾಭಾವಾದಿತಿ ಭಾವೇನ ''ನ ಚಾತ್ರೋಪದೇಷ್ಟಾ ನಾಗ್ನಿರಿತಿ ಯುಕ್ತಮ್'' ಇತಿ ನ್ಯಾಯವಿವರಣಟೀಕೋಕ್ತನ್ಯಾವರ್ತ್ಯಶಙ್ಕಾಪೂರ್ವಂ ''ಏತಸ್ಮಿನ್ಪ್ರಕರಣೇ ಅಥ ಹಾಗ್ನಯಃ'' ಇತ್ಯಾದಿಟೀಕಾಂ ವ್ಯನಕ್ತಿ – ನಚ ವಾಚ್ಯಮಿತ್ಯಾದಿನಾ ।

ವಿವರಣೆ - ಆದರೂ ಸಹ ಹೇತುವು ಅಸಿದ್ಧವೇ ಆಗಿದೆ. 'ಸೋऽಹಮಸ್ಮಿ' ಎಂಬ ಶ್ರುತಿಯಲ್ಲಿ 'ಅಹಂ' ಶಬ್ದವು ಅಗ್ನಿಪರವೆನ್ನಲು ಯಾವುದೇ ಪ್ರಮಾಣವಿಲ್ಲ. ಆದ್ದರಿಂದ ಆದಿತ್ಯನಲ್ಲಿರುವನನ್ನೇ ತಾನಾಗಿದ್ದಾನೆಂದು ಅಗ್ನಿಯು ಉಪದೇಶಿಸಿದ್ದಾನೆಂದು ನಿರ್ಣಯವಾಗುವುದಿಲ್ಲ. ಈ ಅಭಿಪ್ರಾಯದಿಂದ 'ನ ಚಾತ್ರೋಪದೇಷ್ಟಾ ನಾಗ್ನಿರಿತಿ ಯುಕ್ತಮ್' ಎಂಬ ನ್ಯಾಯವಿವರಣ ಟೀಕೆಯಿಂದ ಪರಿಹಾರವಾಗುವ ಶಂಕೆಯನ್ನು ವಿವರಿಸುತ್ತಾ 'ಏತಸ್ಮಿನ್ ಪ್ರಕರಣೇ ಅಥ ಹಾಗ್ನಯಃ' ಎಂಬ ಟೀಕೆಯನ್ನು 'ನಚ ವಾಚ್ಯಮ್' ಎಂಬುದರಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಪ್ರಕಾಶಃ – ವಿಷ್ಣುರಿತಿ । ''ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ'' ಇತ್ಯಾದಾವಿವ ವಿಷ್ಣುಪ್ರಯುಕ್ತ ಏವಾಯಮಹಂಶಬ್ದ ಇತಿ ಸ ಏವಾರ್ಥ ಇತ್ಯರ್ಥಃ । ಉಪದೇಷ್ಟುರಗ್ನಿತ್ವೇ ತ್ರಿವಿಧಾಗ್ನಿ-ಶ್ರುತೀರ್ಮಾನೀಕರೋತಿ – ಅಗ್ನೀನಿತಿ ।

ಗ್ರಂಥದಲ್ಲಿ 'ವಿಷ್ಣು' ಎಂದಿದೆ. ಅಂದರೆ 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವಚ' ಎಂಬಲ್ಲಿರುವ 'ಅಹಂ' ಶಬ್ದವು ವಿಷ್ಣುವಿನಿಂದಲೇ ಹೇಗೆ ಪ್ರಯೋಗಿಸಲ್ಪಟ್ಟಿದೆಯೆಂಬ ಕಾರಣದಿಂದ ವಿಷ್ಣುಪರವೇ ಆಗಿದೆಯೋ ಅದರಂತೆ 'ಸೋऽಹಮಸ್ಮಿ' ಎಂಬಲ್ಲಿರುವ 'ಅಹಂ' ಶಬ್ದವೂ ಸಹ ವಿಷ್ಣುವನ್ನೇ ಪ್ರತಿಪಾದಿಸುತ್ತದೆಂದು ಅಭಿಪ್ರಾಯ.

ಉಪದೇಶಿಸುವವನು ಅಗ್ನಿಯಾಗಿದ್ದಾನೆಂಬ ವಿಷಯದಲ್ಲಿ ಮೂರುವಿಧ ಅಗ್ನಿಯನ್ನು ಪ್ರತಿಪಾದಿಸುವ ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳುತ್ತಿದ್ದಾರೆ 'ಅಗ್ನಿನ್' ಇತ್ಯಾದಿಯಾಗಿ.

ಪ್ರಕಾಶಃ – ''ಯೋऽಸಾವಾದಿತ್ಯೇ ಪುರುಷಸ್ಸೋऽಹಮಸ್ಮಿ'' ಇತ್ಯತಃ ಪೂರ್ವಂ ''ತಸ್ಯ ಹ ದ್ವಾದಶವರ್ಷಮಗ್ನೀನ್ಪರಿಚಾರ ತಪ್ತೋ ಬ್ರಹ್ಮಚಾರಿ ಕುಶಲಮಗ್ನೀನ್ ಪರಿಚಚಾರೀತ್'' ''ಅಥ ಹಾಗ್ನಯಸ್ಮಮೂದಿರೇ'' ''ತೇ ಹೋಚು'' ಇತಿ ಬಹುಕೃತ್ವಃ ಶ್ರೂಯತೇ ಬಹುವಚನಾನ್ತತಯಾ ಚ । ಬಹುವಚನಾನ್ತಸ್ಯ ಪ್ರಸಿದ್ಧಾಗ್ನಿಪರತ್ವೇನ ಮುಖ್ಯಬಹುತ್ವಾರ್ಥತಯೋಪಪತ್ತೌ ನ ವಿಷ್ಣುಪರತ್ವಂ ಕ್ಲೇಶೇನ ಕಲ್ಪ್ಯಮಿತಿ ಭಾವಃ ।

''ಯೋऽಸಾವಾದಿತ್ಯೇ ಪುರುಷಸ್ಸೋऽಹಮಸ್ಮಿ'' ಎಂಬ ವಾಕ್ಯದಿಂದ ಮೊದಲು ''ತಸ್ಯ ಹ ದ್ವಾದಶ ವರ್ಷಮಗ್ನೀನ್ಪರಿಚಚಾರ ತಪ್ತೋ ಬ್ರಹ್ಮಚಾರೀ ಕುಶಲಮಗ್ನೀನ್ ಪರಿಚಚಾರೀತ್'' ''ಅಥ

ಹಾಗ್ನಯಸ್ಸಮೂದಿರೇ'' ''ತೇ ಹೋಚುಃ'' ಎಂಬುದಾಗಿ ಅನೇಕ ಬಾರಿ ಅಗ್ನಿಯು ಕೇಳಿಸುತ್ತಿದೆ. ಮತ್ತು 'ಅಗ್ನಯಃ' ಎಂಬುದಾಗಿ ಬಹುವಚನಾಂತವಾದ ಅಗ್ನಿ ಶಬ್ದವು ಕೇಳಿಸುತ್ತಿದೆ. ಬಹುವಚನಾಂತವಾದ ಈ ಅಗ್ನಿಶಬ್ದಗಳು ಪ್ರಸಿದ್ಧವಾದ ಅಗ್ನಿದೇವತೆಯನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆ. ಆದ್ದರಿಂದ ಕಷ್ಟದಿಂದ ಅಗ್ನಿಶಬ್ದಕ್ಕೆ ವಿಷ್ಣುಪರತ್ವವನ್ನು ಕಲ್ಪಿಸಬಾರದೆಂದು ಅಭಿಪ್ರಾಯ.

ಪ್ರಕಾಶಃ – ಅತ್ರಾಗ್ನಿಶಬ್ದಸ್ಯಾನ್ತರಧಿಕರಣನ್ಯಾಯೇನ ವಿಷ್ಣುಪರತಾ ಕಿಂ ನ ಸ್ಯಾದಿತ್ಯತಃ, ತತ್ರೇವಾತ್ರ ನಿರವಕಾಶವಿಷ್ಣುಲಿಙ್ಗಾಭಾವೇನಾಗ್ರ್ಯತೈವೇತಿ ಭಾವೇನಾಹ – ಸ್ವೀಕೃತಾ ಚೇತಿ ।

ಅಂತರಧಿಕರಣದ ನ್ಯಾಯದಿಂದ ದೇವತಾವಾಚಕಪದಗಳೆಲ್ಲವೂ ವಿಷ್ಣುಪರವೆಂದು ನಿರ್ಣಯವಾಗಿವೆ. ಆದ್ದರಿಂದ ಅಗ್ನಿಶಬ್ದವೂ ಸಹ ವಿಷ್ಣುಪರವೇ ಆಗಬಹುದಲ್ಲವೇ? ಎಂಬ ಪ್ರಶ್ನೆಗೆ ಅಲ್ಲಿ ಸಮನ್ವಯಗೊಳಿಸಿದ ದೇವತಾವಾಚಕ ಪದಗಳಿಗೆ ನಿರವಕಾಶವಾದ ವಿಷ್ಣುಲಿಂಗಗಳು ಆಧಾರವಾಗಿವೆ. ಆದರೆ ಇಲ್ಲಿರುವ 'ಅಗ್ನಿ' ಶಬ್ದಕ್ಕೆ ನಿರವಕಾಶವಾದ ವಿಷ್ಣುಲಿಂಗವಿಲ್ಲದ ಕಾರಣ ಅಗ್ನಿದೇವತಾಪರವೆಂದೇ ಹೇಳಬೇಕು. ಈ ಅಭಿಪ್ರಾಯದಿಂದ 'ಸ್ವೀಕೃತಾ ಚ' ಎಂಬ ವಾಕ್ಯವು ಹೊರಟಿದೆ.

ಪ್ರಕಾಶಃ – ಏತೇನ ''ಬಹ್ವಶ್ರುತಿಭ್ಯಃ'' ಇತಿ ನ್ಯಾಯವಿವರಣಪರಾ ''ಏತಸ್ಮಿನ್ ಪ್ರಕರಣೇ'' ''ಅಥ ಹಾಗ್ನಯಸ್ಸಮೂದಿರೇ ಗಾರ್ಹಪತ್ಯೋऽನುಶಶಾಸ'' ಇತ್ಯಾದಿಬಹ್ವಗ್ನಿಶ್ರುತಿಸದ್ಭಾವಾಚ್ಚ'' ಇತಿ ಟೀಕಾ ಬಹುಕೃತ್ವೋऽಗ್ನಿಶ್ರುತೀನಾಂ ಸದ್ಭಾವಾತ್, ಬಹುವಚನಾನ್ತಾಗ್ನಿಶ್ರುತೀನಾಂ ಸದ್ಭಾವಾತ್, ಗಾರ್ಹಪತ್ಯಾನ್ವಾಹಾರ್ಯ ಪಚನಾದಿರೂಪಾಣಾಂ ಬಹೂನಾಮಗ್ನೀನಾಂ ಶ್ರುತಿಸದ್ಭಾವಾಚ್ಚೇತಿ ತ್ರೇಧಾ ವ್ಯಾಖ್ಯಾತಾ । ತೇನ ಬಹ್ವಶ್ರುತಿಭ್ಯಃ'' ಇತ್ಯೇತದಪಿ ತ್ರೇಧಾ ವ್ಯಾಖ್ಯಾತಂ ಧ್ಯೇಯಮ್ ।

ಗ್ರಂಥಕಾರರ ಈ ಬಗೆಯ ಮಾತುಗಳಿಂದ ಮೂರುಬಗೆಯಲ್ಲಿ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು. ಅಂದರೆ 'ಬಹುಶ್ರುತಿಭ್ಯಃ' ಎಂಬ ನ್ಯಾಯವಿವರಣೆಯನ್ನು ವಿವರಿಸುವುದಕ್ಕಾಗಿ ''ಏತಸ್ಮಿನ್ ಪ್ರಕರಣೇ'' 'ಅಥ ಹಾಗ್ನಯಸ್ಸಮೂದಿರೇ ಗಾರ್ಹಪತ್ಯೋऽನುಶಶಾಸ' ಇತ್ಯಾದಿಬಹ್ವಗ್ನಿಶ್ರುತಿಸದ್ಭಾವಾಚ್ಚ'' ಎಂಬ ಟೀಕೆಯು ಹೊರಟಿದೆ. ಈ ಟೀಕೆಗೆ ಅನೇಕ ಬಾರಿ ಅಗ್ನಿಶ್ರುತಿಗಳು ಕೇಳಿಸುತ್ತಿರುವುದರಿಂದ ಮತ್ತು ಬಹುವಚನಾಂತವಾದ ಅಗ್ನಿಶ್ರುತಿಗಳಿರುವುದರಿಂದ ಮತ್ತು ಗಾರ್ಹಪತ್ಯ, ಅನ್ವಾಹಾರ್ಯಪಚನ, ಆಹವನೀಯವೆಂಬ ಅಗ್ನಿಯ ಮೂರು ರೂಪಗಳನ್ನು ಪ್ರತಿಪಾದಿಸುವ ಶ್ರುತಿ ಇರುವುದರಿಂದಲೂ ಅಗ್ನಿಯೇ ಪ್ರತಿಪಾದ್ಯನಾಗಿದ್ದಾನೆ. ಹೀಗೆ ಮೂರು ಕಾರಣಗಳಿಂದ ಟೀಕಾ ಮಾತನ್ನು ವ್ಯಾಖ್ಯಾನಿಸಿದಂತಾಯಿತು. ಇದರಿಂದ ''ಬಹುಶ್ರುತಿಭ್ಯಃ'' ಎಂಬ ನ್ಯಾಯವಿವರಣೆಯನ್ನೂ ಸಹ ಮೂರು ಬಗೆಯಲ್ಲಿ ವ್ಯಾಖ್ಯಾನಿಸಿದಂತಾಯಿತು.

ಪ್ರಕಾಶಃ – ಏವಂ ''ಅಭ್ಯಾಸಾರ್ಥವಾದಸಹಿತಬಹ್ವಶ್ರುತಿಭ್ಯಃ'' ಇತಿ ನ್ಯಾಯವಿವರಣೇ 'ಬಹ್ವಶ್ರುತಿಭ್ಯಃ' ಇತ್ಯಂಶಂ ವ್ಯಾಖ್ಯಾಯ, 'ಅಭ್ಯಾಸಾರ್ಥವಾದಸಹಿತ' ಇತ್ಯಂಶಂ ಟೀಕೋಕ್ತಾದಪಿ ಪ್ರಕಾರಾತ್ ಪ್ರಕಾರಾನ್ತರೇಣ ವ್ಯಾವರ್ತ್ಯಾಶಙ್ಕಾಪೂರ್ವಂ ವ್ಯಾಚಷ್ಟೇ – ನಚ ವಾಚ್ಯಮಿತಿ ।

ಇಲ್ಲಿಯ ತನಕ ''ಅಭ್ಯಾಸಾರ್ಥವಾದಸಹಿತ ಬಹುಶ್ರುತಿಭ್ಯಃ'' ಎಂಬ ನ್ಯಾಯವಿವರಣದಲ್ಲಿರುವ 'ಬಹುಶ್ರುತಿಭ್ಯಃ' ಎಂಬ ಅಂಶವನ್ನು ವ್ಯಾಖ್ಯಾನಿಸಿದಂತಾಯಿತು. ಪ್ರಕೃತ 'ಅರ್ಥವಾದ ಸಹಿತಃ' ಎಂಬಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ. ಈ ವ್ಯಾಖ್ಯಾನವು ಟೀಕೆಯ ವ್ಯಾಖ್ಯಾನಕ್ಕಿಂತ ವಿಭಿನ್ನವಾದ ಪ್ರಕಾರದಿಂದ ಕೂಡಿದೆ. ಇದರಿಂದ ಪರಿಹಾರವಾಗುವ ಶಂಕೆಯನ್ನು ಪರಿಹರಿಸುವ ಮೂಲಕ ವ್ಯಾಖ್ಯಾನಿಸುತ್ತಿದ್ದರೆ 'ನಚ ವಾಚ್ಯಮ್' ಇತ್ಯಾದಿಯಾಗಿ.

ಪ್ರಕಾಶಃ -- ಉಪಾಸಕಪಾಲಕತ್ವಾದಿನೇತಿ । ''ಉಪವಯನ್ತಂ ಭುಞ್ಜಾಮೋऽಸ್ಮಿಂಶ್ಚ ಲೋಕೇऽಮುಷ್ಮಿಂಶ್ಚ ಯ ಏವಂ ವಿದ್ವಾನುಪಾಸ್ತೇ'' ಇತ್ಯತ್ರ ಭುಞ್ಜಾಮಃ' ಪಾಲಯಾಮ ಇತ್ಯಗ್ನೀನಾಂ ವಚನಮ್ । ''ಭುಜೋऽನವನೇ'' ಇತಿ ಸೂತ್ರೇಣಾನವನವ್ಯತಿರಿಕ್ತೇऽಭ್ಯವಹಾರ ಏವಾತ್ಮನೇಪದವಿಧಾನಾತ್, ಪರಸ್ಮೈಪದಪ್ರಯೋಗಾತ್ ಪಾಲಕತ್ವಂ ಜ್ಞಾಯತ ಇತಿ ಭಾವಃ ।

ಗ್ರಂಥದಲ್ಲಿ 'ಉಪಾಸಕಪಾಲಕತ್ವಾದಿನಾ' ಎಂದಿದೆ. ''ಉಪವಯಂತಂ ಭುಂಜಾಮೋऽಸ್ಮಿಂಶ್ಚ ಲೋಕೇऽಮುಷ್ಮಿಂಶ್ಚ ಯ ಏವಂ ವಿದ್ವಾನುಪಾಸ್ತೇ' ಎಂಬ ಶ್ರುತಿಯಲ್ಲಿ 'ಭುಂಜಾಮಃ' ಎಂಬ ಪದದಿಂದ ರಕ್ಷಣೆ ಮಾಡುತ್ತೇವೆ ಎಂಬ ಅಗ್ನಿದೇವತೆಗಳ ಮಾತು ಕೇಳಿಸುತ್ತಿದೆ.

ವಸ್ತುತಃ 'ಭುಂಜಾಮಃ' ಎಂಬ ಧಾತುವಿಗೆ ಪಾಲನೆ ಮಾಡುತ್ತೇವೆ ಎಂದರ್ಥ. ಏಕೆಂದರೆ 'ಭುಜೋऽನವನೇ' ಎಂಬ ಸೂತ್ರವು ರಕ್ಷಣೆಯೆಂಬ ಅರ್ಥವನ್ನು ಬಿಟ್ಟು ಅಭ್ಯವಹಾರ ಮೊದಲಾದ ಅರ್ಥಗಳಲ್ಲಿ ಆತ್ಮನೇಪದವನ್ನು ಪ್ರಯೋಗಿಸಿದೆ. ಆದರೆ ಶ್ರುತಿಯು 'ಭುಂಜಾಮಃ' ಎಂದು 'ಪರಸ್ಮೈ' ಪದವನ್ನು ಪ್ರಯೋಗಿಸುತ್ತಿರುವುದರಿಂದ 'ಪಾಲಕತ್ವ' ಎಂಬರ್ಥವು ಸ್ಪಷ್ಟವಾಗಿ ತಿಳಿಯುತ್ತದೆ.

ಗುರುರಾಜೀಯಮ್ – ಏತತ್ಪ್ರಕರಣೇ ಅಥ ಹಾಗ್ನಯಸ್ಸಮೂದಿರೇ ಇತ್ಯಾದಿಟೀಕಾऽಸಙ್ಗತೇತ್ಯತಸ್ತನ್ನಿವರ್ತ್ಯಾಶಙ್ಕಮುತ್ಥಾಪಯತಿ – ನಚ ವಾಚ್ಯಮಿತಿ ।। ಬಹುಶ್ರುತಿಭ್ಯ ಇತಿ ನ್ಯಾಯವಿವರಣಾನುಸಾರೇಣ ಪ್ರವೃತ್ತಾಂ ಅಥ ಹಾಗ್ನಯಸ್ಸಮೂದಿರೇ ಗಾರ್ಹಪತ್ಯोऽನುಶಾಸೇತ್ಯಾದಿಬಹ್ವಗ್ನಿಶ್ರುತಿರಿತಿ ಟೀಕಾಂ ಬಹುಕೃತ್ವोऽಗ್ನಿಶ್ರುತೇರ್ಬಹ್ವಗ್ನೀನಾಂ ಶ್ರುತೇಶ್ಚೇತಿ ತ್ರೇಧಾ ವ್ಯಾಚಷ್ಟೇ – ಅಗ್ನೀನ್ಪರಿಚಚಾರೇತಿ ।।

ನನು ಚಾಗ್ನೀನ್ಪರಿಚಚಾರೇತ್ಯಾದ್ಯಭ್ಯಸ್ಯಮಾನಗಾರ್ಹಪತ್ಯಾದಿಶಬ್ದಾನಾಮಪಿ ಬ್ರಹ್ಮಪರತ್ವಾತ್ ಕಥಮಯಮಭ್ಯಾಸೋ ಬ್ರಹ್ಮಪರತ್ವೇ ಬಾಧಕ ಇತ್ಯತ ಆಹ – ಸ್ವೀಕೃತಾ ಚೇತಿ ।।

ಟೀಕೋಕ್ತಾ ಸोऽಹಮಸ್ಮಿ ಸ ಏವಾಹಮಸ್ಮೀತ್ಯಭ್ಯಾಸಾದಿತಿ ಯುಕ್ತಿರುಪಲಕ್ಷಣಮನ್ಯಾಪಿ ಜ್ಞಾತವ್ಯೇತ್ಯಭಿಪ್ರೇತ್ಯ ತಾಂ ಯುಕ್ತಿಮಾಹ – ಉಪವಯಂ ತಮಿತಿ ।।

ಯದ್ವಾ ಶಾಸ್ತ್ರದೃಷ್ಟ್ಯೇತಿ ನ್ಯಾಯೇನಾಹಂಶಬ್ದಸ್ಯಾನ್ತರ್ಯಾಮಿಪರತ್ವेऽಪಿ ಪ್ರಕೃತೇऽಹಂಶಬ್ದಸ್ಯ ಗಾರ್ಹಪತ್ಯಾದಿಪರತ್ವे ಬಾಧಕಾಭಾವಾದ್ಯಾನ್ತರ್ಯಾಮಿಪರತ್ವಮ್ । ನ ಕೇವಲಮಹಂಶಬ್ದಸ್ಯಾಗ್ನಿಪರತ್ವे

बाधकाभावमात्रं किन्तु साधकमिति तिष्ठतीत्याह – उपवयन्तमिति ।। टीकोक्ता सोऽहमस्मि स एवाहमस्मीत्यभ्यासादिति युक्तिमाह – सोऽहमिति ।। नच टीकोक्तोऽभ्यासोऽपि ब्रह्मपर एवेति कथमहंशब्दस्यान्तर्यामिपरत्वाभावे तस्य हेतुत्वमित्यत आह – अभ्यासे हीति ।।

ननु चास्तु शब्दस्वरसप्रतिपन्नेऽर्थेऽभ्यासस्य तात्पर्यनिश्चायकत्वम् । अग्निप्रयुक्ताहंशब्देनापि स्वरसप्रतिपन्नं ब्रह्मैवेति तत्रैव तात्पर्य-निश्चायकत्वमभ्यासस्येत्यत आह – अग्निरेवेति ।।

ಸಾರ

ವಸ್ತುತಃ 'ಸೋऽಹಮಸ್ಮಿ' ಎಂಬ ಉಪದೇಶವು ವಿಷ್ಣುವಿನದ್ದೆಂದು ಪ್ರಶ್ನಿಸಬಹುದು. ಆದರೆ ಹಿಂದಿನ ಮುಂದಿನ ಪ್ರಕರಣವನ್ನು ನೋಡಿದಾಗ ಅಗ್ನಿಯ ಉಪದೇಶವೆಂದೇ ಸ್ಪಷ್ಟವಾಗುತ್ತದೆ. ಏಕೆಂದರೆ 'ಅಗ್ನಿಂ ಪರಿಚಚಾರ' ಇತ್ಯಾದಿಯಾಗಿ ಆನೇಕ ಬಾರಿ ಅಗ್ನಿ ಶಬ್ದವು ಕೇಳಿಸುತ್ತಿದೆ. ಮತ್ತು ಬಹುವಚನಾಂತವಾಗಿ ನಿರ್ದಿಷ್ಟವಾಗಿವೆ. ಮತ್ತು 'ಗಾರ್ಹಪತ್ಯ' ಮೊದಲಾದ ಅಗ್ನಿಯ ವಿಶೇಷ ರೂಪಗಳನ್ನು ಉಲ್ಲೇಖಿಸಿದೆ. ಈ ಮೂರು ಕಾರಣಗಳಿಂದ ಅಗ್ನಿಯೇ ಪ್ರತಿಪಾದ್ಯನೆನ್ನಬೇಕು.

ಅಂತಿಮಪ್ರಾಣಾಧಿಕರಣದ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿರುವ ನ್ಯಾಯದಂತೆ 'ಅಹಂ' ಶಬ್ದವು ಅಂತರ್ಯಾಮಿಯಾದ ವಿಷ್ಣುವನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೂ ಅವಕಾಶವಿಲ್ಲ. ಸ್ವತಃ ಅಗ್ನಿಯು ತನ್ನನ್ನು ಉಪಾಸನೆ ಮಾಡುವವರನ್ನು ರಕ್ಷಿಸುತ್ತೇನೆಂದು ಹೇಳಿಕೊಂಡಿದ್ದಾನೆ. ಬ್ರಹ್ಮನನ್ನು ಉಪಾಸನೆ ಮಾಡಿದರೆ ಅಗ್ನಿಯನ್ನು ರಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ತನ್ನ ಉಪಾಸನೆಯನ್ನೇ ಅಗ್ನಿಯು ಹೇಳಿಕೊಂಡಿದ್ದಾನೆಂದು ಹೇಳಬೇಕು.

• • • • •

ಅಗ್ನಿಯೇ ಪ್ರತಿಪಾದ್ಯನೆನ್ನಲು ಅಭ್ಯಾಸ ಅರ್ಥವಾದ ಬಹುಶ್ರುತಿಪ್ರಮಾಣಗಳ ಆಧಾರ

तात्पर्यचन्द्रिका

''सोऽहमस्मि स एवाहमस्मि'' इति सावधारणमभ्यासाच्च । अभ्यासो हि अभ्यस्यमानशब्दस्वरसप्रतिपऽन्नेर्थे तात्पर्यार्थः । अग्निरेव चाग्निप्रयुक्ताहंशब्देन स्वरसप्रतिपन्नः ।

किञ्च – ''कुशलं नः पर्यचारीद्धान्तास्मै प्रब्रवाम उपवयन्तं भुञ्जामः'' इत्यादौ सिद्धान्तेऽपि बहुकृत्वोऽस्मच्छब्देनाग्नीनामेव निर्देशात् तेषामेवेहाप्यहंशब्दार्थत्वम् ।

ಕಿಞ್ಚ – ''अस्मद्विद्या आत्मविद्या च'' इति विद्याशब्दोऽभ्यस्यत इति विद्याभेदार्थं ''कं ब्रह्म'' इत्यादिका आत्मविद्या, आदित्यस्यादिविद्या त्वग्निविद्येति स्वीकार्यम् । आदित्यस्य एव चाक्षिस्थ इति पूर्वमेवोक्तमित्यक्षिस्थोऽग्निरेव ।

तदेतदभिप्रेत्योक्तं न्यायविवरणे ''सोऽहमस्मि स एवाहमस्मीत्याद्यभ्यासार्थ-वादसहितबहुश्रुतिभ्यः'' इति । अत्र चोक्तरीत्या त्रिविधा बहुश्रुतिरग्नीनामुपदर्शित्वे हेतुः । अर्थवादाभ्यासौ तु उपदेष्टृणामग्नीनामेव ''सोऽहमस्मि'' इत्यत्रास्मच्छब्दार्थत्वे हेत्। आदिशब्देन च ''कुशलं नः पर्यचारीत्'' इत्याद्यभ्यासावभिप्रेतौ ।

यद्वा – टीकोक्तरीत्या न्यायविवरणस्योऽभ्यासः ''यश्चासावादित्ये'' इत्यादिसमाख्याबाधे हेतुः । ''अपहते पापकृत्याम्'' इत्यर्थवादस्तु ब्रह्मपक्षेऽपूर्वतेति शङ्कानिरासे हेतुः ।

अत्र च टीकायां न्यायविवरणस्याद्या योजना स्फुटेति तामुपेक्ष्य, न्याय-विवरणोक्तसाहित्यस्वारस्यार्थं 'समाख्यातोऽभ्यासः प्रबलः, अपूर्वत्वादप्यर्थवादः' इति न्यायव्युत्पादनार्थं च द्वितीययोजनैवोक्ता ।

ಅನುವಾದ - 'ಅಂತರಕ್ಷಿಣಿ' ಎಂಬ ಶ್ರುತಿಯಿಂದ ಅಗ್ನಿಯು ಪ್ರತಿಪಾದ್ಯನೆನ್ನಲು ಅಗ್ನಿಶ್ರುತಿಯಷ್ಟೇ ಪ್ರಮಾಣವಲ್ಲ. ಅವಧಾರಣ ಸಹಿತವಾದ ಅಭ್ಯಾಸವೂ ಸಹ ಪ್ರಮಾಣವಾಗಿದೆ. 'ಸೋऽಹಮಸ್ಮಿ ಸ ಏವಾಹಮಸ್ಮಿ' ಎಂಬಲ್ಲಿ ಅವಧಾರಣದಿಂದ ಕೂಡಿರುವ 'ಅಹಂ' ಎಂಬ ಶಬ್ದದ ಅಭ್ಯಾಸವಿದೆ. ಅಭ್ಯಸ್ಯಮಾನವಾದ ಶಬ್ದವು ಸ್ವರಸಪ್ರತಿಪನ್ನವಾದ ಅರ್ಥದಲ್ಲೇ ತಾತ್ಪರ್ಯ ಹೊಂದಿದೆಯೆಂದು ಅಧ್ಯಾಸ ಪ್ರಮಾಣದಿಂದ ತಿಳಿಯುತ್ತದೆ. ಪ್ರಕೃತ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದದಿಂದ ಅಗ್ನಿಯೇ ಸ್ವರಸಪ್ರತಿಪನ್ನನಾಗಿದ್ದಾನೆ.

ಮತ್ತು ''ಕುಶಲಂ ನಃ ಪರ್ಯಚಾರೀತ್'' ''ಇತ್ಯಾದ್ಯಭ್ಯಾಸಾವಭಿಪ್ರೇತೌ'' ಇತ್ಯಾದಿ ಸ್ಥಳಗಳಲ್ಲಿ ಅನೇಕ ಬಾರಿ ಕೇಳಿಸುತ್ತಿರುವ 'ಅಸ್ಮತ್' ಶಬ್ದದಿಂದ ಅಗ್ನಿಯನ್ನೇ ನಿರ್ದೇಶಿಸಲಾಗಿದೆಯೆಂದು ಸಿದ್ಧಾಂತದಲ್ಲೂ ಒಪ್ಪಲಾಗಿದೆ. ಅಂತಹ ಅಗ್ನಿಯೇ ಇಲ್ಲಿರುವ 'ಅಹಂ' ಶಬ್ದದಿಂದಲೂ ಪ್ರತಿಪಾದ್ಯನಾಗಿದ್ದಾನೆ.

ಮತ್ತು 'ಅಸ್ಮದ್‌ವಿದ್ಯಾ ಆತ್ಮವಿದ್ಯಾ' ಎಂಬುದಾಗಿ ವಿದ್ಯಾಶಬ್ದವು ಎರಡು ಬಾರಿ ಕೇಳಿಸುತ್ತಿರುವುದರಿಂದ ಅಸ್ಮತ್‌ವಿದ್ಯೆಯೇ ಬೇರೆ ಆತ್ಮವಿದ್ಯೆಯೇ ಬೇರೆ ಎನ್ನಬೇಕು. 'ಕಂ ಬ್ರಹ್ಮ' ಎಂಬುದು 'ಆತ್ಮವಿದ್ಯೆ' ಎನಿಸಿದರೆ ಆದಿತ್ಯನಲ್ಲಿರುವವನೆಂಬ ವಿದ್ಯೆಯು ಅಗ್ನಿವಿದ್ಯೆಯಾಗಿದೆಯೆಂದು ಒಪ್ಪಬೇಕು. ಆದಿತ್ಯನಲ್ಲಿರುವವನೇ ಅಕ್ಷಿಯಲ್ಲಿಯೂ ಇದ್ದಾನೆಂದು ಹಿಂದೆ ಹೇಳಿದ್ದರಿಂದ ಅಕ್ಷಿಯಲ್ಲಿರುವವನು ಅಗ್ನಿಯೆಂದೇ ನಿರ್ಣಯಿಸಬೇಕು. ಈ ಅಭಿಪ್ರಾಯದಿಂದಲೇ ನ್ಯಾಯವಿವರಣದಲ್ಲಿ 'ಸೋऽಹಮಸ್ಮಿ ಸ ಏವಾಹಮಸ್ಮೀತ್ಯಾದ್ಯಭ್ಯಾಸಾರ್ಥವಾದಸಹಿತಬಹುಶ್ರುತಿಭ್ಯಃ'' ಎಂದು ಹೇಳಿದ್ದಾರೆ.

ಈ ಪಕ್ಷದಲ್ಲಿ ಹಿಂದೆ ಹೇಳಿದ ಪ್ರಕಾರ ಮೂರು ಬಗೆಯ ಬಹುಶ್ರುತಿಯು ಅಗ್ನಿಯು ಉಪದೇಶಕನೆನ್ನಲು ಹೇತುವಾಗಿದೆ. ಅರ್ಥವಾದ ಮತ್ತು ಅಭ್ಯಾಸಗಳು ಉಪದೇಶಕನು ಅಗ್ನಿಯೇ ಆಗಿದ್ದಾನೆನ್ನಲು 'ಸೋऽಹಮಸ್ಮಿ' ಎಂಬಲ್ಲಿರುವ 'ಅಸ್ಮತ್' ಶಬ್ದಾರ್ಥದಲ್ಲಿ ಹೇತುಗಳಾಗಿವೆ. ನ್ಯಾಯವಿವರಣದಲ್ಲಿರುವ ಆದಿಪದದಿಂದ 'ಕುಶಲಂ ನಃ ಪರ್ಯಚಾರೀತ್' ಇತ್ಯಾದಿಯಾದ ಅಭ್ಯಾಸಗಳನ್ನು ವಿವಕ್ಷಿಸಬೇಕು.

ಅಥವಾ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನಿಸಬಹುದು. ಟೀಕೆಯಲ್ಲಿ ಹೇಳಿದ ಪ್ರಕಾರ ನ್ಯಾಯವಿವರಣದಲ್ಲಿರುವ ಅಭ್ಯಾಸವು ''ಯಶ್ಚಾಸಾವಾದಿತ್ಯೇ'' ಎಂಬಲ್ಲಿ ಆನಂದಮಯನೆನಿಸಿದ ವಿಷ್ಣುವೇ ಆದಿತ್ಯನಾಗಿದ್ದಾನೆನ್ನಲು ಸಮಾಖ್ಯಾ ಪ್ರಮಾಣವನ್ನು ಹೇಳಲಾಗಿದೆ. ಅದನ್ನು ಬಾಧಿಸುವುದಕ್ಕಾಗಿ ನ್ಯಾಯವಿವರಣದಲ್ಲಿ ಅಭ್ಯಾಸವನ್ನು ಹೇತುವನ್ನಾಗಿ ಹೇಳಿದ್ದಾರೆ.

''ಅಪಹತೇ ಪಾಪಕೃತ್ಯಾಮ್'' ಎಂಬ ಅರ್ಥವಾದವನ್ನಾದರೂ ಬ್ರಹ್ಮಪಕ್ಷದಲ್ಲಿ ಅಪೂರ್ವವು ಪ್ರಮಾಣವಾಗಿದೆ ಎಂಬ ಶಂಕೆಯನ್ನು ನಿರಾಸ ಮಾಡುವುದಕ್ಕಾಗಿ ಹೇತುವನ್ನಾಗಿ ಹೇಳಿದ್ದಾರೆ.

ನ್ಯಾಯವಿವರಣಕ್ಕೆ ಗ್ರಂಥಕಾರರು ಮಾಡಿದ ಮೊದಲನೆಯ ವ್ಯಾಖ್ಯಾನವು ಅತ್ಯಂತ ಸ್ಪಷ್ಟವೆಂದು ಟೀಕೆಯಲ್ಲಿ ಉಲ್ಲೇಖಿಸಿಲ್ಲ. ಆದರೆ ಎರಡನೆಯ ವ್ಯಾಖ್ಯಾನವನ್ನು ಉಲ್ಲೇಖಿಸಲು ಕಾರಣವಿದೆ - ನ್ಯಾಯವಿವರಣದಲ್ಲಿ ಅವಧಾರಣ ಸಹಿತವಾದ ಅಭ್ಯಾಸದ ಸ್ವಾರಸ್ಯವನ್ನು ತಿಳಿಸಬೇಕಾಗಿದೆ. ಮತ್ತು ಸಮಾಖ್ಯಾ ಪ್ರಮಾಣಕ್ಕಿಂತ ವಿಭಿನ್ನವಿಭಾಗದಲ್ಲಿ ಸೇರಿದ ಅಭ್ಯಾಸಕ್ಕೆ ಪ್ರಾಬಲ್ಯವನ್ನು ತೋರಿಸಬೇಕಾಗಿದೆ. ಅಷ್ಟೇ ಅಲ್ಲದೆ ಅಪೂರ್ವಕ್ಕಿಂತಲೂ ಅರ್ಥವಾದವು ಪ್ರಬಲವಾಗಿದೆಯೆಂಬ ನ್ಯಾಯವನ್ನು ವ್ಯುತ್ಪಾದನೆ ಮಾಡಬೇಕಾಗಿದೆ. ಈ ಎಲ್ಲಾ ಉದ್ದೇಶಗಳಿಂದ ಎರಡನೆಯ ವ್ಯಾಖ್ಯಾನವನ್ನು ಟೀಕಾರಾಯರು ಮಾಡಿದ್ದಾರೆ.

ಪ್ರಕಾಶಃ –

ಅರ್ಥವಾದಸ್ಯ ಚಾತುರ್ವಿಧ್ಯಾದುಕ್ತಂ – ಸ್ತುತೀತಿ । ಅಭ್ಯಾಸೋऽಪಿ ''ಸೋऽಹಮಸ್ಮಿ'' ಇತ್ಯಾದಿರೂಪ ಏಕಃ, ಅಗ್ನಿಪ್ರಯುಕ್ತಾಸ್ಮಚ್ಛಬ್ದಾಭ್ಯಾಸರೂಪोऽನ್ಯಃ, ವಿದ್ಯಾಶಬ್ದಾಭ್ಯಾಸಶ್ಚೇತಿ ತ್ರಿವಿಧोऽಭಿಮತ ಇತ್ಯಾಹ – ಸोऽಹಮಿತಿ ।

ವಿವರಣೆ - ಅರ್ಥವಾದವು ಶ್ರುತಿ, ನಿಂದೆ, ಪರಕೃತಿ, ಪುರಾಕಲ್ಪ ಎಂಬ ನಾಲ್ಕು ಬಗೆಯಲ್ಲಿರುವುದರಿಂದ ಗ್ರಂಥದಲ್ಲಿ 'ಸ್ತುತಿರೂಪಾದಸ್ಯ' ಎಂದು ಹೇಳಿದ್ದಾರೆ. ಅಭ್ಯಾಸವು ಮೂರು ಬಗೆಯಲ್ಲಿದೆ -

೧. 'ಸೋऽಹಮಸ್ಮಿ' ಎಂಬಲ್ಲಿ 'ಅಹಂ' ಶಬ್ದದ ಅಭ್ಯಾಸ.

೨. 'ಅಸ್ಮತ್' ಶಬ್ದದ ಅಭ್ಯಾಸ.

೩. 'ವಿದ್ಯಾ' ಶಬ್ದದ ಅಭ್ಯಾಸ.

ಈ ಮೂರು ಬಗೆಯ ಅಭ್ಯಾಸಗಳನ್ನು 'ಸೋऽಹಂ' ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ಯದ್ಯಪಿ 'ಪ್ರಬ್ರವಾಮ' ಇತ್ಯತ್ರ ನಾಸ್ಮಚ್ಛಬ್ದನಿರ್ದೇಶोऽಸ್ತಿ, ತಥಾऽಪ್ಯುತ್ತಮಪುರುಷ-ಪ್ರಯೋಗಾದ್ವಯಮಿತಿ ಲಭ್ಯತೆ, ''ಅಸ್ಮದ್ಯುತ್ತಮಃ'' ಇತಿ ವಿಧಾನಾದಿತಿ ಭಾವಃ ।

ವಸ್ತುತಃ 'ಪ್ರಬ್ರವಾಮ' ಎಂಬಲ್ಲಿ ಅಸತ್‌ಶಬ್ದದ ನಿರ್ದೇಶವಿರುವುದಿಲ್ಲ. ಆದರೂ ಸಹ ಉತ್ತಮ ಪುರುಷ ಪ್ರಯೋಗದ ಬಲದಿಂದ 'ದ್ವಯಂ' ಎಂಬುದನ್ನು ವಿವಕ್ಷಿಸಬೇಕು. 'ಅಸ್ಮದ್ಯುತ್ತಮಃ' ಎಂಬ ಸೂತ್ರವೇ ಈ ವಿಷಯದಲ್ಲಿ ಆಧಾರವಾಗಿದೆ.

ಪ್ರಕಾಶಃ – ಅಸ್ತ್ವಾದಿತ್ಯಸ್ಥವಿದ್ಯಾऽಗ್ನಿವಿದೇತಿ, ಅಕ್ಷಿಸ್ಥोऽಗ್ನಿರಿತ್ಯತ್ರ ಕಿಮಾಯಾತಮಿತ್ಯತ ಆಹ – ಆದಿತ್ಯಸ್ಥ ಏವೇತಿ । ಉಕ್ತಮರ್ಥಂ ನ್ಯಾಯವಿವರಣಾರೂಢತಯಾ ದರ್ಶಯತಿ – ಅತ್ರಚೇತಿ ।

ಆದಿತ್ಯನಲ್ಲಿರುವವನು ಅಗ್ನಿಯೇ ಆಗಿದ್ದಾನೆಂಬ ತಿಳುವಳಿಕೆಯು ಅಗ್ನಿವಿದ್ಯೆ ಆಗಲಿ ಇದರಿಂದ ಅಕ್ಷಿಯಲ್ಲಿರುವವನು ಅಗ್ನಿಯೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ 'ಆದಿತ್ಯಸ್ಥ ಏವ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಹಿಂದೆ ಹೇಳಿದ ವಿಷಯಕ್ಕೆ ನ್ಯಾಯವಿವರಣವೇ ವ್ಯಾಖ್ಯೇಯವಾಗಿದೆಯೆಂದು 'ಅತ್ರಚ' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ.

ಪ್ರಕಾಶಃ – ಸ್ವಯಮೇಕಂ ಪಕ್ಷಮುತ್ಪ್ರೇಕ್ಷ್ಯ ಟೀಕोಕ್ತಪಕ್ಷಮನುಪಪತ್ತಿನಿರಾಸಪೂರ್ವಂ ಸಾಧಯಿತುಮಾಹ – ಯದ್ವೇತಿ । ಪ್ರಾಕ್ಪಕ್ಷೇ ಸಾಹಿತ್ಯಪದಾಸ್ವಾರಸ್ಯಮಿತಿ ಹೃದಯಮ್ ।

ಎರಡು ಪಕ್ಷಗಳಲ್ಲಿ ಮೊದಲನೇ ಪಕ್ಷವನ್ನು ಗ್ರಂಥಕಾರರೇ ಸ್ವತಃ ಉತ್ಪ್ರೇಕ್ಷಿಸಿದ್ದಾರೆ. ಎರಡನೇ ಪಕ್ಷವು ಟೀಕೆಯಲ್ಲಿ ಹೇಳಿದ್ದಾರೆಂದು ಅನುಪಪತ್ತಿ ನಿರಾಸಪೂರ್ವಕವಾಗಿ 'ಯದ್ವಾ' ಇತ್ಯಾದಿ ವಾಕ್ಯದಿಂದ ಸಾಧಿಸುತ್ತಿದ್ದಾರೆ. ಮೊದಲನೆಯ ಪಕ್ಷದಲ್ಲಿ ನ್ಯಾಯವಿವರಣದಲ್ಲಿರುವ ಸಾಹಿತ್ಯ ಪದವು ಅಸ್ವರಸವಾಗಿದೆಯೆಂದು ಅಭಿಪ್ರಾಯ.

ಪ್ರಕಾಶಃ – तेन श्रुतेरेव प्राधान्यं तद्बाधनिरासेन तदुपोद्बलकत्वस्यैव प्रतीतेरिति । **व्यत्पादनार्थमिति** । प्रदर्शनार्थमित्यर्थः, ''समन्वयात्'' इत्यत्रैव व्युत्पादितत्वात् ।

'ಸಹಿತ' ಎಂಬ ಪದವನ್ನು ಪ್ರಯೋಗಿಸಿದ್ದರಿಂದ ಶ್ರುತಿಯೇ ಪ್ರಧಾನವಾಗಿದೆಯೆಂದು ತಿಳಿಯುತ್ತದೆ. ಆದ್ದರಿಂದ ಶ್ರುತಿಗೆ ಬರುವಂತಹ ಬಾಧಕಗಳನ್ನು ನಿರಾಸ ಮಾಡುವ ಮೂಲಕ ಅಭ್ಯಾಸ ಹಾಗೂ ಅರ್ಥವಾದಗಳು ಉಪೋದ್ಬಲಕವಾಗಿವೆಯೆಂದು ತಿಳಿಯಬೇಕು.

'ವ್ಯುತ್ಪಾದನಾರ್ಥಂ' ಎಂಬ ಪದಕ್ಕೆ ಪ್ರದರ್ಶನಕ್ಕೋಸ್ಕರ ಎಂದರ್ಥ. ಏಕೆಂದರೆ 'ಸತ್ತು ಸಮನ್ವಯಾತ್' ಎಂಬ ಸೂತ್ರದಿಂದಲೇ ಅಪೂರ್ವಕೃಂತಲೂ ಅರ್ಥವಾದವು ಬಲಿಷ್ಠವೆಂದು ಸಾಧಿಸಿದ್ದಾಗಿದೆ. ಅಲ್ಲಿ ಸಾಧಿಸಿದ್ದನ್ನು ಇಲ್ಲಿ ಕೇವಲ ಪ್ರದರ್ಶನ ಮಾಡುತ್ತಿದ್ದಾರೆ.

ಗುರುರಾಜೀಯಮ್ – सोऽहमस्मि स एवाहमस्मीति न्यायविवरणे कण्ठोक्ता-भ्यासमुपपाद्य इत्याद्यभ्यासार्थवादेति न्यायविवरणे आदिशब्दोक्तमभ्यासमर्थवादं चाग्न्यादिशब्दानामन्तर्यामिपरत्वाभावे हेतुतया योजयति – **किञ्चेति** ।।

उक्तरीत्येति । अग्नीन्परिचचार अग्नयस्समूदिर इत्यादिना बहुकृत्वोऽग्निश्रुते-र्बहुवचनान्ताग्निश्रुतेश्च अथ हैनं गार्हपत्योऽनुशशास अथ हैनमन्वाहार्यपचनोऽनु-शशास अथ हैनमाहवनीयोऽनुशशासेत्यग्निविशेषत्वेन प्रसिद्धत्रेताग्निरूपबह्वग्नीनां श्रुतेश्चेत्युक्तरीत्येत्यर्थः ।

अर्थवादाभ्यासाविति ।। उपवयं तं भुञ्जान इत्यर्थवादः । सोऽहमस्मीत्यभ्यासश्चेत्यर्थः । बहुश्रुतीनामग्नीनामेवोपदेशत्वे हेतुत्वात् । अर्थवादा-भ्यासयोश्चाग्नीनामेवास्मच्छब्दार्थत्वे हेतुत्वात् । उभयोरप्येककार्यकारित्वे हि साहित्यमुपपद्यते । नहि दण्डादिना घटस्तन्त्वादिना च पट उत्पद्यत इत्येतावतैव दण्डतन्त्वोस्साहित्यं सम्भवतीत्यस्वरसादाह – **यद्वेति** ।।

ननु बहुश्रुतिरग्नीनामुपदेशत्वे हेतुः । अर्थवादाभ्यासौ तूपदेशेनामग्नीनामेव सोऽहमस्मीत्यत्रास्मच्छब्दार्थत्वे हेतुरिति न्यायविवरणस्याद्या योजना टीकायां कुतो नोक्तेत्यतस्तदनुक्तौ हेतुं वदन्नेव द्वितीययोजनोक्तौ हेतुं चाह – **अत्रचेति** ।।

ಸಾರ

ಆಕ್ಷ ಶ್ರುತಿಯಿಂದ ಅಗ್ನಿಯೇ ಪ್ರತಿಪಾದ್ಯನೆನ್ನಲು ಅನೇಕ ಬಾರಿ ಕೇಳಿಸುವ ಅಗ್ನಿ ಶಬ್ದವೇ ಪ್ರಮಾಣವೆಂದು ಸಾಧಿಸಿದರೂ ಆಷ್ಟೇ ಅಲ್ಲ 'ಸೋऽಹಮಸ್ಮಿ ಸ ಏವಾऽಹಮಸ್ಮಿ' ಎಂಬಲ್ಲಿ ಅವಧಾರಣಸಹಿತವಾದ ಅಭ್ಯಾಸವೂ ಸಹ ಪ್ರಮಾಣವಾಗಿದೆ. ಸ್ವರಸಪ್ರತಿಪನ್ನವಾದ ಅರ್ಥವನ್ನಷ್ಟೇ ಅಭ್ಯಾಸವು ಸ್ಪಷ್ಟಪಡಿಸುತ್ತದೆ.

ಉದಾ :- 'ಗಂಗಾಯಾಂ ಮೀನಃ' ಎಂದು ಹೇಳಿದಾಗ ಗಂಗಾ ಶಬ್ದಕ್ಕೆ ತೀರವೆಂಬರ್ಥವನ್ನು ಭ್ರಾಂತಿಯಿಂದ ಒಬ್ಬನು ತಿಳಿಯುತ್ತಾನೆ. ಆ ಭ್ರಾಂತಿಯನ್ನು ನಿರಾಸ ಮಾಡುವುದಕ್ಕಾಗಿ ಆಪ್ತನಾದವನು 'ಗಂಗಾಯಾಂ ಮೀನಃ' ಎಂಬ ಪದವನ್ನು ಅನೇಕ ಬಾರಿ ಪ್ರಯೋಗಿಸುತ್ತಾನೆ. ಅಂದರೆ ತೀರದಲ್ಲಿ ಮೀನು ಇರುವುದಿಲ್ಲ. ಗಂಗಾಪ್ರವಾಹದಲ್ಲೇ ಮೀನು ಇರುತ್ತದೆಂದು ಗಂಗಾಶಬ್ದದ ಅಭ್ಯಾಸದಿಂದ ಸ್ಪಷ್ಟಪಡಿಸುತ್ತಾನೆ. ಇದರಿಂದ ಮೊದಲು ಪ್ರಯೋಗಿಸಲ್ಪಟ್ಟ ಗಂಗಾಶಬ್ದವು ಸ್ವರಸವಾದ ಪ್ರವಾಹ ಎಂಬರ್ಥವನ್ನೇ ಹೇಳುತ್ತದೆಂದು ತಿಳಿಯಬೇಕು. ಅದರಂತೆ ಪ್ರಕೃತ ಅಗ್ನಿಯೂ ನಾನೇ ಆಗಿದ್ದೇನೆ ಎಂಬ ಮಾತನ್ನು ಅನೇಕ ಬಾರಿ ಪ್ರಯೋಗಿಸುತ್ತಿದ್ದಾನೆ. ಇದರಿಂದ ಉಪದೇಶಕನು ಹೊರತು ವಿಷ್ಣುವಲ್ಲವೆಂದು ನಿರ್ಣಯವಾಗುತ್ತದೆ.

ಮತ್ತು ಉಪನಿಷತ್ತಿನಲ್ಲಿ 'ಅಸ್ಮದ್‌ವಿದ್ಯಾ ಆತ್ಮವಿದ್ಯಾ' ಎಂಬುದಾಗಿ 'ಕಂ ಬ್ರಹ್ಮ' ಎಂಬ ಬ್ರಹ್ಮವಿದ್ಯೆಯೇ ಬೇರೆ ಆದಿತ್ಯನ ಅಂತರ್ಗತನಾದವನ ವಿದ್ಯೆಯೇ ಬೇರೆಯೆಂದು ಹೇಳಲಾಗಿದೆ. ಇದರಿಂದಲೂ ಸಹ ಅಗ್ನಿವಿದ್ಯೆಯನ್ನು ಬ್ರಹ್ಮವಿದ್ಯೆಯೆನ್ನಬಾರದೆಂದು ತಿಳಿಯುತ್ತದೆ.

• • • • •

ಪೂರ್ವಪಕ್ಷ ಟೀಕೆಯಲ್ಲಿರುವ ಗೊಂದಲಗಳ ಪರಿಹಾರ

तात्पर्यचन्द्रिका

तत्र चात्रत्यादित्यस्थस्यग्नित्वे सिद्धे, तद्बलेन समाख्याश्रुत्युक्तादित्यस्थस्य पूर्वपक्षिणा विष्णुत्वाक्षेपेऽपि ततः प्राग्विष्णौ समाख्याशङ्का युक्ता, तथा ''शास्त्रदृष्ट्या'' इत्यत्रोक्तस्य ब्रह्मण्यहंशब्दो मुख्य इत्यस्याच्छादनादग्नेरादित्यस्थ-स्यौपचारिकत्वोक्तिर्युक्ता ।

अत्र हि मञ्चानां क्रोशनं औपचारिकं इत्यत्र क्रोशनवत्सु पुरुषेषु मञ्चशब्द इव आदित्यस्थत्ववति विष्णावग्निप्रयुक्तोऽहंशब्दः उपचरित इति प्रतीयते, अन्यथा समाख्योक्त्ययोगात् । तथा अत्यलौकिकब्रह्मग्रहणेऽग्निग्रहणादप्यपूर्वताऽतिशयाद्वा,

ದಿವಾऽन्नेः ಪ್ರಭಾಯಾ ಅದರ್ಶನೇನಾದಿತ್ಯಪ್ರವೇಶಸ್ಯಾನುಮಾನಸಿದ್ಧತ್ವಾದ್ವಾ, ವಿಷ್ಣುಗ್ರಹಣೇऽಪೂರ್ವತಾಶಙ್ಕಾ ಚ ಯುಕ್ತೇತಿ ದ್ರಷ್ಟವ್ಯಮ್ । ಯದ್ಯಪಿ ''ಅಪಹತೇ ಪಾಪಕೃತ್ಯಾಂ'' ಇತ್ಯಾದಿಫಲಂ, ತಥಾಪಿ ಸ್ತುತಿ-ರೂಪಾರ್ಥವಾದತಾऽಪ್ಯಸ್ತೀತಿ ವಾ, ವಸ್ತುತಃ ಫಲವತ್ತ್ವಂ ಫಲಂ ಫಲೋಕ್ತಿಸ್ತ್ವರ್ಥವಾದ ಇತಿ ವಾ, ''ಅಪಹತೇ ಪಾಪಕೃತ್ಯಾಂ ಲೋಕೀ ಭವತಿ'' ಇತ್ಯಾದೇಃ ಪ್ರತ್ಯೇಕಂ ಫಲೋಕ್ತಿತ್ವೇऽಪಿ ಸಮುದಾಯಸ್ಯಾನೇಕಫಲತ್ವೇನೋಪಾಸನಾಸ್ತುತಿರೂಪಾರ್ಥವಾದತ್ವಮಿತಿ ವಾऽಭಿಪ್ರಾಯಃ ।

ನಚ ''ಸರ್ವಮಾಯುರೇತಿ ಜ್ಯೋಕ್ ಜೀವತಿ'' ಇತ್ಯಲ್ಪಫಲೇನ ಸ್ತುತಿರ್ಬ್ರಹ್ಮಪಕ್ಷೇ ಯುಕ್ತಾ । ತಸ್ಮಾದಕ್ಷಿಸ್ಥೋऽಗ್ನಿರೇವ, ಅಮೃತತ್ವಾಭಯತ್ವಾದಿಕಂ ತು ಸ್ವಕಾರ್ಯೇ ಐಶ್ವರ್ಯಮಾತ್ರೇಣಾಗ್ನೇರಿನ್ದ್ರತ್ವವತ್, ಸ್ವಾಧಮದೇವತಾದಿಭ್ಯೋ ಮೃತಿಭಯಾದಿರಾಹಿತ್ಯೇನ ವಾ, ಉಕ್ತಾರ್ಥವಾದಸಹಿತಬಹ್ವೃಶ್ರುತಿಬಲಾದಾ-ತ್ಯನ್ತಿಕಾಮೃತತ್ವಾದಿಯೋಗೇನ ವಾऽಗ್ನೇರೇವೇತಿ ।।

ಅನುವಾದ - ಛಾಂದೋಗ್ಯದಲ್ಲಿ ಆದಿತ್ಯಾಂತರ್ಗತನೆಂದು ಹೇಳಲ್ಪಟ್ಟವನು ಅಗ್ನಿಯೇ ಆಗಿದ್ದಾನೆಂದು ನಿರ್ಣಯವಾದರೆ ಮಾತ್ರ ಆದರ ಬಲದಿಂದ ಸಮಾಖ್ಯಾ ಶ್ರುತಿಯಲ್ಲಿ ಪ್ರತಿಪಾದ್ಯನಾದ ಆದಿತ್ಯನು ವಿಷ್ಣು ಹೇಗಾಗುತ್ತಾನೆಂದು ಪೂರ್ವಪಕ್ಷಿಯು ಆಕ್ಷೇಪಿಸಬಹುದು. ಆದರೆ ಈ ನಿರ್ಣಯಕ್ಕಿಂತ ಮೊದಲು ತೈತ್ತಿರೀಯದಲ್ಲಿರುವ ಸಮಾಖ್ಯಾಶ್ರುತಿಯಿಂದ ವಿಷ್ಣುವು ಪ್ರತಿಪಾದ್ಯನಾಗಲಾರನೆಂದು ಶಂಕಿಸಲು ಪೂರ್ವಪಕ್ಷಿಗೆ ಸಾಧ್ಯವಿಲ್ಲ. ಆದ್ದರಿಂದ ಟೀಕೆಯಲ್ಲಿ ಸಮಾಖ್ಯಾಶ್ರುತಿಯ ವಿರೋಧವನ್ನು ಆಶಂಕಿಸಿದ್ದು ತಪ್ಪಲ್ಲ.

ಇದರಂತೆ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ಬ್ರಹ್ಮನಲ್ಲಿ 'ಅಹಂ' ಶಬ್ದವು ಮುಖ್ಯವಾಗಿದೆಯೆಂಬುದನ್ನು ಆಚ್ಛಾದನೆ ಮಾಡಿ ಆದಿತ್ಯನಲ್ಲಿರುವ ವಿಷ್ಣುವಿನಲ್ಲಿ ಔಪಚಾರಿಕವಾಗಿ ಪ್ರಯೋಗಿಸಲಾಗಿದೆ ಎಂಬ ಮಾತು ಯುಕ್ತವಾಗಿದೆ. ಏಕೆಂದರೆ ಪ್ರಕೃತ ''ಮಂಚಾನಾಂ ಕ್ರೋಶನಂ ಔಪಚಾರಿಕಂ'' ಎಂಬಲ್ಲಿ ''ಮಂಚಗಳ ಅಳುವಿಕೆಯು ಔಪಚಾರಿಕವಾಗಿದೆ'' ಎಂಬಲ್ಲಿ ಅಳುತ್ತಿರುವ ಪುರುಷರಲ್ಲಿ ಮಂಚ ಶಬ್ದವನ್ನು ಔಪಚಾರಿಕವಾಗಿ ಹೇಗೆ ಪ್ರಯೋಗಿಸುತ್ತೇವೋ ಆದರಂತೆ ಆದಿತ್ಯನಲ್ಲಿರುವ ವಿಷ್ಣುವಿನ ವಿಷಯದಲ್ಲಿ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಔಪಚಾರಿಕವೆಂದು ತಿಳಿಯಬೇಕು. ಇಲ್ಲದಿದ್ದರೆ ಸಮಾಖ್ಯಾಪ್ರಮಾಣವನ್ನು ಹೇಳಿದ್ದು ಅಯುಕ್ತವಾಗುತ್ತದೆ.

ಮತ್ತು ಬ್ರಹ್ಮನೆಂಬರ್ಥವನ್ನು ಸ್ವೀಕರಿಸಿದರೆ ಅಪೂರ್ವತ್ವವನ್ನು ಹೇಳಿದಂತಾಗುತ್ತದೆ. ಇಂತಹ ಅಪೂರ್ವತ್ವವು ಅಗ್ನಿಶಬ್ದದ ಅಭ್ಯಾಸದಿಂದ ಬಾಧಿತವಾಗುತ್ತದೆಂದು ಟೀಕೆಯಲ್ಲಿ ಹೇಳಿದ್ದಾರೆ. ಆದರೆ ವಿಷ್ಣುವಿನಲ್ಲಿ ಅಪೂರ್ವತ್ವ ಇರುವಂತೆ ಅಗ್ನಿಯಲ್ಲಿಯೂ ಸಹ ಇರಬಹುದಲ್ಲವೇ? ಎಂದರೆ ವಿಷ್ಣುವಿನಲ್ಲಿ ಇರುವ ಅಪೂರ್ವತ್ವವು ಅತ್ಯಂತ ಅಲೌಕಿಕವಾಗಿದೆ. ಆದರೆ ಅಗ್ನಿಯಲ್ಲಿರುವ

ಅಪೂರ್ವತ್ವವು ಕೇವಲ ಅಲೌಕಿಕವಾಗಿದೆ. (ಅಂದರೆ ವಿಷ್ಣುವನ್ನು ಸರ್ವೋತ್ತಮನೆಂದು ಒಪ್ಪದವರು ಅಗ್ನಿದೇವತೆಯಲ್ಲಿ ಶ್ರುತಿಯಲ್ಲಿ ಹೇಳಲ್ಪಟ್ಟ ಗುಣಗಳೆಲ್ಲವನ್ನು ಒಪ್ಪುತ್ತಾರೆ) ಈ ಅಭಿಪ್ರಾಯದಿಂದ ಟೀಕೆಯಲ್ಲಿ ಬ್ರಹ್ಮನನ್ನು ಸ್ವೀಕರಿಸಿದರೆ ಅಪೂರ್ವತ್ವವಿದೆ ಎಂದಿದ್ದಾರೆ.

ಅಥವಾ ಹಗಲಿನ ಹೊತ್ತು ಅಗ್ನಿಯ ಪ್ರಭೆಯು ಸೂರ್ಯನ ಪ್ರಭೆಯಿಂದ ಮುಚ್ಚಹೋಗಿರುತ್ತದೆ. ಆದ್ದರಿಂದ ಅಗ್ನಿಯು ಸೂರ್ಯನಲ್ಲಿ ಪ್ರವೇಶಿಸುತ್ತಾನೆಂದು ಅನುಮಾನದಿಂದಲೂ ಊಹಿಸಬಹುದು. ಹೀಗೆ ಅನುಮಾನದಿಂದ ಸಿದ್ಧವಾಗುವ ಪ್ರಯುಕ್ತ ಅಗ್ನಿಯೆಂಬರ್ಥವನ್ನು ಸ್ವೀಕರಿಸಿದರೆ ಅಪೂರ್ವತ್ವವನ್ನು ಹೇಳಲಾಗದು. ಆದ್ದರಿಂದ ವಿಷ್ಣುವೆಂಬರ್ಥವನ್ನು ಸ್ವೀಕರಿಸಿದಾಗ ಅಪೂರ್ವತ್ವವನ್ನು ಟೀಕೆಯಲ್ಲಿ ಹೇಳಿದ್ದು ಯುಕ್ತವೇ ಆಗಿದೆ.

ಮತ್ತು ಟೀಕೆಯಲ್ಲಿ 'ಅಪಹತೇ ಪಾಪಕೃತ್ಯಾಂ' ಇತ್ಯಾದಿ ವಾಕ್ಯವನ್ನು ಅರ್ಥವಾದ ವಾಕ್ಯವೆಂದು ಪರಿಗಣಿಸಿದ್ದಾರೆ. ವಸ್ತುತಃ ಈ ವಾಕ್ಯದಲ್ಲಿ ಪಾಪಗಳೆಲ್ಲವೂ ಪರಿಹಾರವಾಗುತ್ತದೆಂದು ಹೇಳಿರುವುದರಿಂದ ಫಲವನ್ನು ಹೇಳಲಾಗಿದೆ. ಆದ್ದರಿಂದ ಫಲವಾಕ್ಯವೇ ಆಗುತ್ತದೆ ಹೊರತು ಅರ್ಥವಾದ ವಾಕ್ಯ ಎನಿಸುವುದಿಲ್ಲ. ಆದರೆ ಫಲವನ್ನು ಹೇಳಿದಂತೆ ಸ್ತುತಿರೂಪವಾದ ಅರ್ಥವಾದತ್ವವು ಇಲ್ಲಿ ಹೇಳಲ್ಪಟ್ಟಿದೆ. ಹೀಗೆ ಎರಡೂ ತಾತ್ಪರ್ಯ ಲಿಂಗಗಳು ಇಲ್ಲಿರುವುದರಿಂದ ಟೀಕೆಯಲ್ಲಿ ಅರ್ಥವಾದ ವಾಕ್ಯವೆಂದು ಹೇಳಿದ್ದು ತಪ್ಪಲ್ಲ.

ಅಥವಾ 'ಫಲವತ್ವಂ ಫಲಂ' ಎಂಬುದು ಫಲದ ಲಕ್ಷಣ. 'ಫಲೋಕ್ತಿಃ' ಎಂಬುದು ಅರ್ಥವಾದದ ಲಕ್ಷಣ. ಅಂದರೆ ಯಾವ ವಾಕ್ಯದಲ್ಲಿ ಫಲವನ್ನು ಹೇಳಿರುತ್ತಾರೋ ಆ ವಾಕ್ಯದಲ್ಲಿ ಫಲವೂ ಸಹ ಇದ್ದೇ ಇರುತ್ತದೆ. ಯಾವ ವಾಕ್ಯದಲ್ಲಿ ಫಲವನ್ನು ಹೇಳದೆ ಫಲವು ಇರುತ್ತದೋ ಆ ವಾಕ್ಯವು ಕೇವಲ ಫಲವಾಕ್ಯವೆನಿಸುತ್ತದೆ. 'ಅಪಹತೇ ಪಾಪಕೃತ್ಯಾಂ' ಎಂಬ ವಾಕ್ಯದಲ್ಲಿ ಕೇವಲ ಫಲವನ್ನು ಹೇಳಿರುವುದರಿಂದ ಇದು ಅರ್ಥವಾದವೂ ಆಗುತ್ತದೆ. ಫಲವೂ ಆಗುತ್ತದೆಂದು ಭಾವಿಸಬೇಕು.

''ಅಪಹತೇ ಪಾಪಕೃತ್ಯಾಂ ಲೋಕೇ ಭವತಿ'' ಇತ್ಯಾದಿಯಾಗಿ ಒಂದು ಫಲವನ್ನು ಹೇಳಿದ್ದರೂ ಅನೇಕ ಸಮುದಾಯಕ್ಕೆ ಅನೇಕ ಫಲಗಳನ್ನು ಉಪಾಸನಾಯೆಂಬ ಸ್ತುತಿರೂಪವಾದ ಅರ್ಥವಾದಗಳನ್ನು ಹೇಳಿದ್ದರಿಂದ ಇದನ್ನು ಅರ್ಥವಾದವೆಂದಿದ್ದಾರೆ.

ಅರ್ಥವಾದ ಪ್ರಮಾಣದಿಂದ ಬ್ರಹ್ಮಪಕ್ಷವು ಹೇಗೆ ನಿರಾಸವಾಗುತ್ತದೆಂದರೆ 'ಸರ್ವಮಾಯುರೇತಿ ಜ್ಯೋಕ್ ಜೀವತಿ'' ಇತ್ಯಾದಿ ವಾಕ್ಯಗಳಲ್ಲಿ ಆಯುಷ್ಯದ ಅಭಿವೃದ್ಧಿಯನ್ನು ಹೊಂದುತ್ತಾನೆ. ಪ್ರಕಾಶಕನಾಗಿ ಜೀವಿಸುತ್ತಾನೆ. ಇತ್ಯಾದಿಯಾಗಿ ಅತ್ಯಲ್ಪ ಫಲಗಳು ಹೇಳಲ್ಪಟ್ಟವೆ. ಇಂತಹ ಸ್ತುತಿಯು ಬ್ರಹ್ಮಪಕ್ಷದಲ್ಲಿ ಯುಕ್ತವಾಗುವುದಿಲ್ಲ. ಆದ್ದರಿಂದ ಅಕ್ಷಿಯಲ್ಲಿರುವವನು ಅಗ್ನಿಯೇ ಆಗಿದ್ದಾನೆ.

ಆದೇ ಪ್ರಕರಣದಲ್ಲಿ ಕೇಳಿಸುತ್ತಿರುವ ಅಮೃತತ್ವ ಅಭಯತ್ವಗಳನ್ನು ಅಗ್ನಿಯಲ್ಲಿ ಹೇಳಲು ಹೇಗೆ ಸಾಧ್ಯ ? ಎಂದರೆ ತನ್ನ ಕಾರ್ಯಗಳಲ್ಲಿ ಅಗ್ನಿಗೂ ಸಹ ಐಶ್ವರ್ಯ ಮೊದಲಾದವು ಇರುವುದರಿಂದ ಅಗ್ನಿಯನ್ನು ಇಂದ್ರನೆಂದು ಹೇಳುವುದು ಪೂರ್ವಮೀಮಾಂಸೆಯಲ್ಲಿ ಕಂಡಿದೆ. ಆದ್ದರಿಂದಲೇ 'ಐದ್ರ್ಯಾ ಗಾರ್ಹಪತ್ಯಂ ಉಪತಿಷ್ಠತೇ' ಎಂಬುದು ಅಗ್ನಿದೇವತಾಕವಾದ ಯಾಗ ಪರವಾಗುತ್ತದೆ. ಅದರಂತೆ ತನ್ನ ಅಧಮ ದೇವತೆಗಳಿಗಿಂತ ಅಗ್ನಿಯಲ್ಲಿ ಅಮೃತತ್ವ ಹಾಗೂ ಅಭಯತ್ವಗಳು ಹೆಚ್ಚು ಇರುವುದರಿಂದ ಅಗ್ನಿಯನ್ನು ಅಮೃತ ಅಭಯಸ್ವರೂಪನೆನ್ನಬಹುದು.

ಅಥವಾ ಹಿಂದೆ ಹೇಳಿದ ಅರ್ಥವಾದ ಸಹಿತವಾದ ಬಹುಶ್ರುತಿಗಳ ಬಲದಿಂದ ಅಸಂಕುಚಿತವಾದ ಅಮೃತತ್ವವನ್ನೇ ಮುಖ್ಯವಾಗಿ ಹೇಳಬಹುದು.

प्रकाशः –

ननु टीकायां न समाख्याविरोधाशङ्का युक्ता, पूर्वपक्षे ''यश्चासावादित्ये'' इत्यस्याग्निपरत्वेन विष्णुपरत्वाक्षेपादित्यतः तत्समाधत्ते – तत्र चेति ।

ವಿವರಣೆ - ಟೀಕೆಯ ಪೂರ್ವಪಕ್ಷದಲ್ಲಿ ಕೆಲವು ಗೊಂದಲಗಳಿವೆ - ಆದಿತ್ಯನಲ್ಲಿರುವವನು ಅಗ್ನಿಯೇ ಆಗಿದ್ದಾನೆಂದು ಪೂರ್ವಪಕ್ಷಕಾರರು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟ ತೈತ್ತಿರೀಯ ಉಪನಿಷತ್ತಿನಲ್ಲಿ ವಿಷ್ಣುವನ್ನು ಆದಿತ್ಯನೆನ್ನಲಾಗಿದೆ. ಆದ್ದರಿಂದ ಆದಿತ್ಯಶ್ರುತಿಯೆಂಬ ಸಮಾಖ್ಯಾಪ್ರಮಾಣದಿಂದ ವಿರೋಧ ಬರುತ್ತದಲ್ಲವೇ? ಎಂದು ಟೀಕೆಯಲ್ಲಿ ಪ್ರಶ್ನಿಸಲಾಗಿದೆ. ಇದು ಹೇಗೆ ಸರಿ? ಏಕೆಂದರೆ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಆದಿತ್ಯಾಂತರ್ಗತನು ಅಗ್ನಿಯೆಂದು ಯಾವ ಪೂರ್ವಪಕ್ಷಿಯು ಆಕ್ಷೇಪಿಸುತ್ತಿದ್ದಾನೋ? ಆ ಪೂರ್ವಪಕ್ಷಿಯು ತೈತ್ತಿರೀಯದಲ್ಲಿರುವ ಆದಿತ್ಯಾಂತರ್ಗತನನ್ನೂ ಸಹ ಅಗ್ನಿಯೆಂದೇ ಆಕ್ಷೇಪಿಸುತ್ತಾನೆ. ಹೀಗಿರುವಾಗ ತೈತ್ತಿರೀಯದ ಸಮಾಖ್ಯಾಶ್ರುತಿಯು ವಿಷ್ಣುಪರವಾಗಿದೆಯೆಂದು ಸಮರ್ಥಿಸಲು ಹೇಗೆ ಸಾಧ್ಯ ? ಈ ಆಕ್ಷೇಪಕ್ಕೆ 'ತತ್ರ ಚ' ಎಂಬ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಇದರ ಅಭಿಪ್ರಾಯ ಹೀಗಿದೆ - ಛಾಂದೋಗ್ಯದಲ್ಲಿರುವ ಆದಿತ್ಯಾಂತರ್ಗತನು ಅಗ್ನಿಯೆಂದು ನಿರ್ಣಯವಾಗಿದ್ದಲ್ಲಿ ಸಮಾಖ್ಯಾ ಶ್ರುತಿಯನ್ನು ಆಕ್ಷೇಪಿಸಬಹುದಿತ್ತು. ಆದರೆ ಪೂರ್ವಪಕ್ಷಿಯ ಪ್ರಮೇಯವು ಎಲ್ಲಿಯತನಕ ಸಿದ್ಧವಾಗುವುದಿಲ್ಲವೋ ಅಲ್ಲಿಯ ತನಕ ತೈತ್ತಿರೀಯದಲ್ಲಿರುವ ಸಮಾಖ್ಯಾಶ್ರುತಿಯು ವಿಷ್ಣುಪರವೇ ಆಗಿರುತ್ತದೆ. ಈ ದೃಷ್ಟಿಯಿಂದ ಟೀಕಾರಾಯರು ಸಮಾಖ್ಯಾ ಶ್ರುತಿಯನ್ನು ವಿಷ್ಣುಪರವೆಂದು ವಿವಕ್ಷಿಸಿ ಪ್ರಶ್ನಿಸಿದ್ದಾರೆ.

प्रकाशः – नन्वथाप्यौपचारिकत्वशङ्का न युक्ता, ''शास्त्रदृष्ट्या तूपदेशः'' इत्यत्राहंशब्दस्य विष्णौ मुख्यताया उक्तत्वादित्यत आह – तयेति ।

ಟೀಕೆಯಲ್ಲಿ ಮತ್ತೊಂದೆಡೆ 'ಅಹಂ' ಶಬ್ದವು ವಿಷ್ಣುವಿನಲ್ಲಿ ಔಪಚಾರಿಕವಾಗಿದೆ. ಅಗ್ನಿ ದೇವತೆಯಲ್ಲಿ ಮುಖ್ಯವಾಗಿದೆಯೆಂದು ಹೇಳಿರುತ್ತಾರೆ. ಇದು ಹೇಗೆ ಸರಿ ? ಏಕೆಂದರೆ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ 'ಅಹಂ' ಶಬ್ದವನ್ನು ವಿಷ್ಣುವಿನಲ್ಲಿ ಮುಖ್ಯವಾಗಿ ಸಮರ್ಥಿಸಿದ್ದಾಗಿದೆಯಲ್ಲವೇ?

ಈ ಪ್ರಶ್ನೆಗೆ 'ತಥಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

प्रकाशः – अत एव न्यायविवरणटीकायां ''नच ''प्राणो वा अहमस्मि'' इतिवत् अन्तर्याम्यपेक्षयेति वाच्यम्, ''सोऽहमस्मि'' इत्युक्त्वा पुनः ''स एवाहमस्मि'' इति सावधारणमुक्तत्वादवधारणेन च प्रकारान्तराणां सर्वेषां व्यावर्तितत्वात्'' इति ग्रन्थेनोपचारचोद्यादपीदं पृथगाशङ्क्य निरस्तमिति भावः ।

ಇದರ ಅಭಿಪ್ರಾಯ ಹೀಗಿದೆ - ಟೀಕಾ ಮಾತಿಗೆ ವಿಷ್ಣುವಿನಲ್ಲಿ 'ಅಹಂ' ಶಬ್ದವು ಅಮುಖ್ಯವಾಗಿದೆ ಎಂದು ಅಭಿಪ್ರಾಯವಲ್ಲ. ಹೊರತಾಗಿ ಆದಿತ್ಯಾಂತರ್ಗತನಾದ ವಿಷ್ಣುವಿನಲ್ಲಿ ಅಗ್ನಿಯಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಔಪಚಾರಿಕವಾಗಿದೆಯೆಂದರ್ಥ. ವಸ್ತುತಃ 'ಅಹಂ' ಶಬ್ದವನ್ನು ವಿಷ್ಣುವಿನಲ್ಲಿ ಮುಖ್ಯವಾಗಿದೆಯೆಂದು 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ ಹೇಳಿರಬಹುದು. ಆದರೆ ಅದನ್ನು ಆಚ್ಛಾದನೆ ಮಾಡಿ ಇಲ್ಲಿ ಆಶಂಕಿಸಲಾಗಿದೆ. ಆದ್ದರಿಂದ ನ್ಯಾಯವಿವರಣ ಟೀಕೆಯಲ್ಲಿ 'ನಚ ''ಪ್ರಾಣೋ ವಾ ಅಹಮಸ್ಮಿ'' ಇತಿ ವದ್ ಅಂತರ್ಯಾಮ್ಯಪೇಕ್ಷಯೇತಿ ವಾಚ್ಯಮ್, ''ಸೋಽಹಮಸ್ಮಿ'' ಇತ್ಯುಕ್ತ್ವಾ ಪುನಃ ''ಸ ಏವಾಹಮಸ್ಮಿ'' ಇತಿ ಸಾವಧಾರಣಮುಕ್ತತ್ವಾದವಧಾರಣೇನ ಚ ಪ್ರಕಾರಾಂತರಾಣಾಂ ಸರ್ವೇಷಾಂ ವ್ಯಾವರ್ತಿತತ್ವಾತ್'' ಎಂಬಂತೆ ಇಲ್ಲಿ ಅಂತರ್ಯಾಮಿಯ ಏವಕ್ಷೆಯಿಂದ 'ಅಹಂ' ಶಬ್ದವನ್ನು ಪ್ರಯೋಗಿಸಿರುವುದಿಲ್ಲ. ಏಕೆಂದರೆ 'ಸೋಽಹಮಸ್ಮಿ' ಎಂದು ಅಗ್ನಿಯು ಉಪದೇಶಿಸಿ ಪುನಃ 'ಸ ಏವಾಹಮಸ್ಮಿ' ಎಂದು ಅವಧಾರಣ ಪುರಸ್ಸರವಾಗಿ 'ಅಹಂ' ಶಬ್ದವನ್ನು ಪ್ರಯೋಗಿಸಿದ್ದಾನೆ. ಈ ಅವಧಾರಣದಿಂದ ಬೇರೆ ಪ್ರಕಾರಗಳನ್ನೆಲ್ಲಾ ವ್ಯಾವೃತ್ತಿ ಮಾಡಲಾಗಿದೆ. ಈ ಗ್ರಂಥದಿಂದ ಔಪಚಾರಿಕ ಶಂಕೆಗಿಂತ ಇದನ್ನು ಪ್ರತ್ಯೇಕವಾಗಿ ಆಶಂಕಿಸಿ ನಿರಾಕರಿಸಿದ್ದಾರೆಂದು ತಿಳಿಯಬೇಕು.

प्रकाशः – ननु व्यधिकरणमेतत्, टीकायां अग्नेरादित्यस्थत्वमौपचारिकमिति शङ्कितं, न त्वहं शब्द औपचारिक इति, तत्राहंशब्दस्य विष्णौ मुख्यत्वोक्तेः का सङ्गतिरित्यतस्तस्यैवमेवार्थ इत्याह – अत्र हीति ।

ಇದು ವ್ಯಧಿಕರಣವಲ್ಲವೇ? ಏಕೆಂದರೆ ಟೀಕೆಯಲ್ಲಿ ಅಗ್ನಿಯು ಆದಿತ್ಯಾಂತರ್ಗತನೆಂಬುದು ಔಪಚಾರಿಕವೆಂದು ಶಂಕಿಸಲಾಗಿದೆ ಹೊರತು 'ಅಹಂ' ಶಬ್ದವು ಔಪಚಾರಿಕವಾಗಿದೆಯೆಂದು ಆಶಂಕಿಸಿಲ್ಲ. ಹೀಗಿರುವಾಗ ವಿಷ್ಣುವಿನಲ್ಲಿ 'ಅಹಂ' ಶಬ್ದಕ್ಕೆ ಮುಖ್ಯತ್ವವನ್ನು ಹೇಳಿದ್ದಕ್ಕೆ ಏನು ಸಂಗತಿ? ಎಂಬ ಪ್ರಶ್ನೆಗೆ 'ಅತ್ರಹಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಅತ ಏವ ನ್ಯಾಯವಿವರಣಟೀಕಾಯಾಂ ''ಆತ್ಮಾ ಮೇ ಭದ್ರಸೇನಃ'' ಇತಿವತ್ ''ಸೋऽಹಮಸ್ಮಿ'' ಇತ್ಯುಪಚಾರಃ ಕಿಂ ನ ಸ್ಯಾದಿತ್ಯೇವೋಕ್ತಮ್ । ಅನ್ಯಥೇತಿ । ಅಗ್ನೇರಾದಿತ್ಯಸ್ಯತ್ವಸ್ಯೌಪಚಾರಿಕತ್ವ ಇತ್ಯರ್ಥಃ ।

ಆದ್ದರಿಂದಲೇ ನ್ಯಾಯವಿವರಣೆಯ ಟೀಕೆಯಲ್ಲಿ ''ಆತ್ಮಾ ಮೇ ಭದ್ರಸೇನಃ'' 'ಭದ್ರಸೇನನು ನನ್ನ ಆತ್ಮನಾಗಿದ್ದಾನೆ' ಎಂಬಲ್ಲಿ ಯಾವರೀತಿಯಾಗಿ ಆತ್ಮಶಬ್ದವು ಔಪಚಾರಿಕವಾಗಿ ಪ್ರಯೋಗಿಸಲಾಗುತ್ತದೋ ಆದರಂತೆ 'ಸೋऽಹಮಸ್ಮಿ' ಎಂಬ 'ಅಹಂ' ಶಬ್ದವೂ ಸಹ ಔಪಚಾರಿಕವೆಂದು ಏಕೆ ಹೇಳಬಾರದು ? ಈ ಪ್ರಶ್ನೆಗೆ 'ಅನ್ಯಥಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಅನ್ಯಥಾ' ಎಂಬ ಪದಕ್ಕೆ ಅಗ್ನಿಯು ಆದಿತ್ಯನಲ್ಲಿದ್ದಾನೆಂಬುದು ಔಪಚಾರಿಕವಾದರೆ ಎಂದರ್ಥ.

ಪ್ರಕಾಶಃ – ನನು ಯದಪಿ ವಿಷ್ಣುಗ್ರಹಣೇऽಪೂರ್ವತ್ವಂ ಶಙ್ಕಿತಂ, ತನ್ನ, ಅಗ್ನಿಗ್ರಹಣೇऽಪ್ಯಪೂರ್ವತಾ-ಲಾಭಾತ್ । ನ ಹ್ಯಗ್ನೇರಕ್ಷಿಸ್ಥತ್ವಮಕ್ಷಾದಿಸಿದ್ಧಮಿತ್ಯತ ಆಹ – ತಥೇತಿ । ಟೀಕೋಕ್ತಸ್ಯಾರ್ಥವಾದತ್ವಮಾಕ್ಷಿಪ್ಯಾಹ – ಯದ್ಯಪೀತಿ ।

ಇನ್ನು ಟೀಕೆಯಲ್ಲಿ ಅಕ್ಷಿಶಬ್ದದಿಂದ ವಿಷ್ಣು ಪ್ರತಿಪಾದ್ಯನಾದರೆ ಅಪೂರ್ವತ್ವ ಬರಬಹುದು. ಆದರೆ ಅಗ್ನಿಯೆಂಬರ್ಥವನ್ನು ಸ್ವೀಕರಿಸಿದಾಗ ಅಪೂರ್ವತ್ವವು ಬರುವುದಿಲ್ಲವೆಂದು ಹೇಳಿದ್ದಾರೆ. ಇದು ತಪ್ಪು? ಅಗ್ನಿಯೆಂಬರ್ಥವನ್ನು ಸ್ವೀಕರಿಸಿದಾಗಲೂ ಅಪೂರ್ವತ್ವವು ಬಂದೇ ಬರುತ್ತದೆ. ಏಕೆಂದರೆ ಅಗ್ನಿಯು ಕಣ್ಣನಲ್ಲಿದ್ದಾನೆಂಬುದು ಪ್ರತ್ಯಕ್ಷಾದಿಗಳಿಂದ ಸಿದ್ಧವಾಗಿರುವುದಿಲ್ಲವೆಂಬ ಪ್ರಶ್ನೆಗೆ 'ತಥಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಟೀಕೆಯಲ್ಲಿ ಹೇಳಲ್ಪಟ್ಟ ಅರ್ಥವಾದತ್ವವು ಹೇಗೆ ಸಮಂಜಸವಾಗುತ್ತದೆಂದು ಆಕ್ಷೇಪಿಸಿ ಸಮಾಧಾನವನ್ನು ಹೇಳುತ್ತಿದ್ದಾರೆ 'ಯದ್ಯಪಿ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – 'ಅಪಹತೇ' ಅಪಹನ್ತಿ । ಅರ್ಥವಾದೇನ ಕಥಂ ಬ್ರಹ್ಮಪಕ್ಷನಿರಾಸ ಇತ್ಯತ ಆಹ – ನ ಚೇತಿ । ಸ್ವಕಾರ್ಯ ಇತಿ । ''ಐನ್ದ್ರ್ಯಾ ಗಾರ್ಹಪತ್ಯಮುಪತಿಷ್ಠತೇ'' ಇತಿ ವಿನಿಯೋಗವಶಾದಿನ್ದ್ರ-ಪ್ರಕಾಶಕೇನ ''ಕದಾಚನ ಸ್ತರೀರಸಿನೇನ್ದ್ರ'' ಇತಿ ಮನ್ತ್ರೇಣ ಗಾರ್ಹಪತ್ಯಾಗ್ನೇಃ ಹವಿಃಶ್ರವಣಾದಿಸ್ವಕಾರ್ಯೇ ಐಶ್ವರ್ಯಮಾತ್ರೇಣೇನ್ದ್ರಪದಪ್ರತಿಪಾದ್ಯತ್ವಂ, ತದ್ವದಿತ್ಯರ್ಥಃ ।

'ಅಪಹತೇ' ಎಂಬ ಪದವು ವೈದಿಕ ಪ್ರಯೋಗವಾದ್ದರಿಂದ 'ಅಪಹಂತಿ' ಎಂಬರ್ಥದಲ್ಲಿದೆ. ಅರ್ಥವಾದದಿಂದ ಬ್ರಹ್ಮಪಕ್ಷವನ್ನು ಹೇಗೆ ನಿರಾಸ ಮಾಡುತ್ತೀರಿ? ಎಂಬ ಪ್ರಶ್ನೆಗೆ 'ನಚ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಸ್ವಕಾರ್ಯ' ಎಂಬ ಪದಕ್ಕೆ ಹೀಗರ್ಥ. 'ಐನ್ದ್ರ್ಯಾ ಗಾರ್ಹಪತ್ಯಮುಪತಿಷ್ಠತೇ' ಎಂಬ ವಾಕ್ಯವು ಅಗ್ನಿಪರವೇ ಆಗಿದೆ. ಹಾಗಾದರೆ 'ಐನ್ದ್ರ್ಯಾ' ಎಂಬ ಪದವನ್ನು ಹೇಗೆ ಕೂಡಿಸುವುದು? ಎಂಬ ಪ್ರಶ್ನೆಗೆ ವಿನಿಯೋಗವಶದಿಂದ ಇಂದ್ರಪ್ರಕಾಶಕವಾದ 'ಕದಾಚನ ಸ್ತರೀರಸಿ ನೇಂದ್ರ' ಎಂಬ ಮಂತ್ರದಿಂದ ಗಾರ್ಹಪತ್ಯಾಗ್ನಿಗೆ ಹವಿಷ್ ಶ್ರವಣವೇ ಮೊದಲಾದ ತನ್ನ ಕಾರ್ಯಗಳ ವಿಷಯದಲ್ಲಿ ಐಶ್ವರ್ಯವಿದೆ. ಅಂದರೆ ಅನೇಕ ಹವಿಷ್ ಪದಾರ್ಥಗಳ ಸಾಮೀಪ್ಯವನ್ನು ಅಗ್ನಿಯು ಹೊಂದಿರುವ ಕಾರಣ

ವಶ್ವರ್ಯವುಳ್ಳವನಾಗಿದ್ದಾನೆಂದು 'ಇಂದ್ರ' ಪದವನ್ನು ಅಗ್ನಿಯಲ್ಲಿ ಪ್ರಯೋಗಿಸಿದ್ದು ಕಾಣಿಸುತ್ತದೆ. ಆದರಂತೆ ಇಲ್ಲಿಯೂ ತಿಳಿಯಬೇಕು.

प्रकाशः – उक्तञ्च वार्तिके –

स्यादग्नेर्गौणमिन्द्रत्वं यज्ञसम्बन्धकारितम् ।
इन्द्रत्यर्थानुसाराद्वा स्वकार्ये सोऽपि हीश्वरः ।।

इति ।

ಈ ವಿಷಯವು ವಾರ್ತಿಕ ಗ್ರಂಥದಲ್ಲಿಯೂ ಸಹ ಸಂಗ್ರಹಿಸಲ್ಪಟ್ಟಿದೆ.

ಯಜ್ಞ ಸಂಬಂಧವನ್ನು ಹೊಂದಿರುವ ಕಾರಣ ಗೌಣವಾದ ಇಂದ್ರತ್ವವನ್ನು ಅಗ್ನಿಯಲ್ಲೂ ಹೇಳಬಹುದು. ಅಥವಾ ತನ್ನ ಕಾರ್ಯಗಳಲ್ಲಿ ಅಗ್ನಿಯೂ ಸಹ ಸ್ವಾಮಿಯಾಗಿರುವುದರಿಂದ ಅವನನ್ನು ಇಂದ್ರನೆನ್ನಬಹುದು. ಇದರಂತೆ ಪ್ರಕೃತದಲ್ಲಿಯೂ ಅಮೃತತ್ವ ಅಭಯತ್ವಾದಿಗಳನ್ನು ಗೌಣವಾಗಿ ಅಗ್ನಿಯಲ್ಲಿ ವ್ಯಾಖ್ಯಾನಿಸುವುದು ತಪ್ಪಲ್ಲ.

प्रकाशः – ''अग्निज्ञानात्सर्वपापाश्लेषान्मोक्षोपपत्तिः'' इति भाष्यसूचितं पक्षमाह – उक्तार्थवादेति । प्राचीनपक्षस्तु ''आत्मादिशब्दोऽप्यमुख्यार्थोऽङ्गीकार्यः'' इति न्यायविवरणटीकोक्तः ।।

ಭಾಷ್ಯದಲ್ಲಿ ''ಅಗ್ನಿಜ್ಞಾನಾತ್ಸರ್ವಪಾಪಾಶ್ಲೇಷಾನ್ಮೋಕ್ಷೋಪಪತ್ತಿಃ'' ಎಂಬ ಮಾತಿನಿಂದ ಸೂಚಿಸಲ್ಪಟ್ಟ ಪಕ್ಷವನ್ನು 'ಉಕ್ತಾರ್ಥವಾದ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಹಿಂದಿನ ಪಕ್ಷವು ''ಆತ್ಮಾದಿಶಬ್ದೋಽಪ್ಯಮುಖ್ಯಾರ್ಥೋಽಂಗೀಕಾರ್ಯಃ'' ಎಂಬ ನ್ಯಾಯವಿವರಣೆ ಟೀಕೆಯಲ್ಲಿ ಹೇಳಲ್ಪಟ್ಟಿದೆ.

गुरुराजीयम् – ननु च विष्णुपक्षे ''यश्चासावादित्ये'' इति समाख्या कथं स्यात् । निर्णीतस्थले समानोक्तिर्हि समाख्येत्युच्यते । नच प्रकृते साऽस्ति । 'य एष आदित्ये पुरुषो दृश्यते' इत्यत्रादित्यस्यस्याग्नित्वे सिद्धे ''यश्चासावादित्ये'' इति वाक्योक्तादित्यस्थस्य पूर्वपक्षिणाऽनभ्युपगतत्वात् । तथा च कथं समाख्योक्तिरित्यत आह – तत्र चेति ।।

ततः प्राक् ''य एष आदित्ये पुरुषो दृश्यते'' इत्यत्रादित्यस्यस्याग्नित्वे सिद्धे 'यश्चासावादित्ये' इति वाक्योक्तादित्यस्थस्याग्नित्वसिद्धेः प्रागित्यर्थः ।

ननु च नच वक्तव्यमग्नेरादित्यस्यत्वमौपचारिकं किं न स्यादिति टीकायामहंशब्दस्य ब्रह्मण्युपचरितत्वमाशङ्क्तिम् । तदनुपपन्नम् । शास्त्रदृष्ट्या

प्रकाशः – अत एव न्यायविवरणटीकायां ''आत्मा मे भद्रसेनः'' इतिवत् ''सोऽहमस्मि'' इत्युपचारः किं न स्यादित्येवोक्तम् । अन्यथेति । अग्नेरादित्यस्यत्वस्यौपचारिकत्व इत्यर्थः ।

ಆದ್ದರಿಂದಲೇ ನ್ಯಾಯವಿವರಣೆಯ ಟೀಕೆಯಲ್ಲಿ ''ಆತ್ಮಾ ಮೇ ಭದ್ರಸೇನಃ'' 'ಭದ್ರಸೇನನು ನನ್ನ ಆತ್ಮನಾಗಿದ್ದಾನೆ' ಎಂಬಲ್ಲಿ ಯಾವರೀತಿಯಾಗಿ ಆತ್ಮಶಬ್ದವು ಔಪಚಾರಿಕವಾಗಿ ಪ್ರಯೋಗಿಸಲಾಗುತ್ತದೋ ಆದರಂತೆ 'ಸೋಽಹಮಸ್ಮಿ' ಎಂಬ 'ಅಹಂ' ಶಬ್ದವೂ ಸಹ ಔಪಚಾರಿಕವೆಂದು ಏಕೆ ಹೇಳಬಾರದು ? ಈ ಪ್ರಶ್ನೆಗೆ 'ಅನ್ಯಥಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಅನ್ಯಥಾ' ಎಂಬ ಪದಕ್ಕೆ ಅಗ್ನಿಯು ಆದಿತ್ಯನಲ್ಲಿದ್ದಾನೆಂಬುದು ಔಪಚಾರಿಕವಾದರೆ ಎಂದರ್ಥ.

प्रकाशः – ननु यदपि विष्णुग्रहणेऽपूर्वत्वं शङ्कितं, तन्न, अग्निग्रहणेऽप्यपूर्वतालाभात् । न ह्यग्नेरक्षिस्थत्वमक्षादिसिद्धमित्यत आह – तथेति । टीकोक्तस्यार्थवादत्वमाक्षिप्याह – यद्यपीति ।

ಇನ್ನು ಟೀಕೆಯಲ್ಲಿ ಅಕ್ಷಿಶಬ್ದದಿಂದ ವಿಷ್ಣು ಪ್ರತಿಪಾದ್ಯನಾದರೆ ಅಪೂರ್ವತ್ವ ಬರಬಹುದು. ಆದರೆ ಅಗ್ನಿಯೆಂಬರ್ಥವನ್ನು ಸ್ವೀಕರಿಸಿದಾಗ ಅಪೂರ್ವತ್ವವು ಬರುವುದಿಲ್ಲವೆಂದು ಹೇಳಿದ್ದಾರೆ. ಇದು ತಪ್ಪು? ಅಗ್ನಿಯೆಂಬರ್ಥವನ್ನು ಸ್ವೀಕರಿಸಿದಾಗಲೂ ಅಪೂರ್ವತ್ವವು ಬಂದೇ ಬರುತ್ತದೆ. ಏಕೆಂದರೆ ಅಗ್ನಿಯು ಕಣ್ಣಿನಲ್ಲಿದ್ದಾನೆಂಬುದು ಪ್ರತ್ಯಕ್ಷಾದಿಗಳಿಂದ ಸಿದ್ಧವಾಗಿರುವುದಿಲ್ಲವೆಂಬ ಪ್ರಶ್ನೆಗೆ 'ತಥಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಟೀಕೆಯಲ್ಲಿ ಹೇಳಲ್ಪಟ್ಟ ಅರ್ಥವಾದತ್ವವು ಹೇಗೆ ಸಮಂಜಸವಾಗುತ್ತದೆಂದು ಆಕ್ಷೇಪಿಸಿ ಸಮಾಧಾನವನ್ನು ಹೇಳುತ್ತಿದ್ದಾರೆ 'ಯದ್ಯಪಿ' ಇತ್ಯಾದಿ ವಾಕ್ಯದಿಂದ.

प्रकाशः – 'अपहते' अपहन्ति । अर्थवादेन कथं ब्रह्मपक्षनिरास इत्यत आह – न चेति । स्वकार्य इति । ''ऐन्द्र्या गार्हपत्यमुपतिष्ठते'' इति विनियोगवशादिन्द्रप्रकाशकेन ''कदाचन स्तरीरसिनेन्द्र'' इति मन्त्रेण गार्हपत्याग्नेः हविःश्रवणादिस्वकार्ये ऐश्वर्यमात्रेणेन्द्रपदप्रतिपाद्यत्वं, तद्वदित्यर्थः ।

'अपहते' ಎಂಬ ಪದವು ವೈದಿಕ ಪ್ರಯೋಗವಾದ್ದರಿಂದ 'अपहन्ति' ಎಂಬರ್ಥದಲ್ಲಿದೆ. ಅರ್ಥವಾದದಿಂದ ಬ್ರಹ್ಮಪಕ್ಷವನ್ನು ಹೇಗೆ ನಿರಾಸ ಮಾಡುತ್ತೀರಿ? ಎಂಬ ಪ್ರಶ್ನೆಗೆ 'नच' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'स्वकार्य' ಎಂಬ ಪದಕ್ಕೆ ಹೀಗರ್ಥ. 'ऐन्द्र्या गार्हपत्यमुपतिष्ठते' ಎಂಬ ವಾಕ್ಯವು ಅಗ್ನಿಪರವೇ ಆಗಿದೆ. ಹಾಗಾದರೆ 'ऐन्द्र्या' ಎಂಬ ಪದವನ್ನು ಹೇಗೆ ಕೂಡಿಸುವುದು? ಎಂಬ ಪ್ರಶ್ನೆಗೆ ವಿನಿಯೋಗವಶದಿಂದ ಇಂದ್ರಪ್ರಕಾಶಕವಾದ 'कदाचन स्तरीरसि नेन्द्र' ಎಂಬ ಮಂತ್ರದಿಂದ ಗಾರ್ಹಪತ್ಯಾಗ್ನಿಗೆ ಹವಿಷ್ ಶ್ರವಣವೇ ಮೊದಲಾದ ತನ್ನ ಕಾರ್ಯಗಳ ವಿಷಯದಲ್ಲಿ ಐಶ್ವರ್ಯವಿದೆ. ಅಂದರೆ ಅನೇಕ ಹವಿಷ್ ಪದಾರ್ಥಗಳ ಸಾಮೀಪ್ಯವನ್ನು ಅಗ್ನಿಯು ಹೊಂದಿರುವ ಕಾರಣ

ಐಶ್ವರ್ಯವುಳ್ಳವನಾಗಿದ್ದಾನೆಂದು 'ಇಂದ್ರ' ಪದವನ್ನು ಅಗ್ನಿಯಲ್ಲಿ ಪ್ರಯೋಗಿಸಿದ್ದು ಕಾಣಿಸುತ್ತದೆ. ಆದರಂತೆ ಇಲ್ಲಿಯೂ ತಿಳಿಯಬೇಕು.

ಪ್ರಕಾಶಃ – ಉಕ್ತಞ್ಚ ವಾರ್ತಿಕೇ –

ಸ್ಯಾದಗ್ನೇರ್ಗೌಣಮಿನ್ದ್ರತ್ವಂ ಯಜ್ಞಸಮ್ಬನ್ಧಕಾರಿತಮ್ ।
ಇನ್ದ್ರತ್ಯರ್ಥಾನುಸಾರಾದ್ವಾ ಸ್ವಕಾರ್ಯೇ ಸೋऽಪಿ ಹೀಶ್ವರಃ ।।

ಇತಿ ।

ಈ ವಿಷಯವು ವಾರ್ತಿಕ ಗ್ರಂಥದಲ್ಲಿಯೂ ಸಹ ಸಂಗ್ರಹಿಸಲ್ಪಟ್ಟಿದೆ.

ಯಜ್ಞ ಸಂಬಂಧವನ್ನು ಹೊಂದಿರುವ ಕಾರಣ ಗೌಣವಾದ ಇಂದ್ರತ್ವವನ್ನು ಅಗ್ನಿಯಲ್ಲೂ ಹೇಳಬಹುದು. ಅಥವಾ ತನ್ನ ಕಾರ್ಯಗಳಲ್ಲಿ ಅಗ್ನಿಯೂ ಸಹ ಸ್ವಾಮಿಯಾಗಿರುವುದರಿಂದ ಅವನನ್ನು ಇಂದ್ರನೆನ್ನಬಹುದು. ಇದರಂತೆ ಪ್ರಕೃತದಲ್ಲಿಯೂ ಅಮೃತತ್ವ ಅಭಯತ್ವಾದಿಗಳನ್ನು ಗೌಣವಾಗಿ ಅಗ್ನಿಯಲ್ಲಿ ವ್ಯಾಖ್ಯಾನಿಸುವುದು ತಪ್ಪಲ್ಲ.

ಪ್ರಕಾಶಃ – ''ಅಗ್ನಿಜ್ಞಾನಾತ್ಸರ್ವಪಾಪಾಶ್ಲೇಷಾನ್ಮೋಕ್ಷೋಪಪತ್ತಿಃ'' ಇತಿ ಭಾಷ್ಯಸೂಚಿತಂ ಪಕ್ಷಮಾಹ – ಉಕ್ತಾರ್ಥವಾದೇತಿ । ಪ್ರಾಚೀನಪಕ್ಷಸ್ತು ''ಆತ್ಮಾದಿಶಬ್ದೋऽप್ಯಮುಖ್ಯಾರ್ಥೋऽಙ್ಗೀಕಾರ್ಯಃ'' ಇತಿ ನ್ಯಾಯವಿವರಣಟೀಕೋಕ್ತಃ ।।

ಭಾಷ್ಯದಲ್ಲಿ ''ಅಗ್ನಿಜ್ಞಾನಾತ್ಸರ್ವಪಾಪಾಶ್ಲೇಷಾನ್ಮೋಕ್ಷೋಪಪತ್ತಿಃ'' ಎಂಬ ಮಾತಿನಿಂದ ಸೂಚಿಸಲ್ಪಟ್ಟ ಪಕ್ಷವನ್ನು 'ಉಕ್ತಾರ್ಥವಾದ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಹಿಂದಿನ ಪಕ್ಷವು ''ಆತ್ಮಾದಿಶಬ್ದೋऽಪ್ಯಮುಖ್ಯಾರ್ಥೋऽಙ್ಗೀಕಾರ್ಯಃ'' ಎಂಬ ನ್ಯಾಯವಿವರಣೆ ಟೀಕೆಯಲ್ಲಿ ಹೇಳಲ್ಪಟ್ಟಿದೆ.

ಗುರುರಾಜೀಯಮ್ – ನನು ಚ ವಿಷ್ಣುಪಕ್ಷೇ ''ಯಶ್ಚಾಸಾವಾದಿತ್ಯೇ'' ಇತಿ ಸಮಾಖ್ಯಾ ಕಥಂ ಸ್ಯಾತ್ । ನಿರ್ಗೀತಸ್ಥಲೇ ಸಮಾನೋಕ್ತಿರ್ಹಿ ಸಮಾಖ್ಯೇತ್ಯುಚ್ಯತೇ । ನಚ ಪ್ರಕೃತೇ ಸाऽಸ್ತಿ । 'ಯ ಏಷ ಆದಿತ್ಯೇ ಪುರುಷೋ ದೃಶ್ಯತೇ' ಇತ್ಯತ್ರಾದಿತ್ಯಸ್ಯಸ್ಯಾಗ್ನಿತ್ವೇ ಸಿದ್ಧೇ ''ಯಶ್ಚಾಸಾವಾದಿತ್ಯೇ'' ಇತಿ ವಾಕ್ಯೋಕ್ತಾದಿತ್ಯಸ್ಯ ಪೂರ್ವಪಕ್ಷಿಣಾऽನಭ್ಯುಪಗತತ್ವಾತ್ । ತಥಾ ಚ ಕಥಂ ಸಮಾಖ್ಯೋಕ್ತಿರಿತ್ಯತ ಆಹ – ತತ್ರ ಚೇತಿ ।।

ತತಃ ಪ್ರಾಕ್ ''ಯ ಏಷ ಆದಿತ್ಯೇ ಪುರುಷೋ ದೃಶ್ಯತೇ'' ಇತ್ಯತ್ರಾದಿತ್ಯಸ್ಯಸ್ಯಾಗ್ನಿತ್ವೇ ಸಿದ್ಧೇ 'ಯಶ್ಚಾಸಾವಾದಿತ್ಯೇ' ಇತಿ ವಾಕ್ಯೋಕ್ತಾದಿತ್ಯಸ್ಯಸ್ಯಾಗ್ನಿತ್ವಸಿದ್ಧೇಃ ಪ್ರಾಗಿತ್ಯರ್ಥಃ ।

ನನು ಚ ನಚ ವಕ್ತವ್ಯಮತ್ರೇರಾದಿತ್ಯಸ್ಯತ್ವಮೌಪಚಾರಿಕಂ ಕಿಂ ನ ಸ್ಯಾದಿತಿ ಟೀಕಾಯಾಮಹಂಶಬ್ದಸ್ಯ ಬ್ರಹ್ಮಣ್ಯುಪಚರಿತತ್ವಮಾಶಙ್ಕಿತಮ್ । ತದನುಪಪನ್ನಮ್ । ಶಾಸ್ತ್ರದೃಷ್ಟ್ಯಾ

तूपदेशो वामदेववदित्यत्राहंशब्दस्य ब्रह्मण्येव मुख्यत्वस्य प्रतिपादितत्वादित्यत आह – तथेति ।।

नन्वत्र शास्त्रदृष्टेति न्यायाच्छादनं किमर्थम् । न चान्यथा तन्न्यायेनाहंशब्दस्यात्मनि मुख्यत्वादौपचारिकत्वशङ्कानुपपत्त्या तन्न्यायाच्छादनमिति वाच्यम् । तत्राहंशब्दस्याग्नौ मुख्यत्वाङ्गीकारेणादित्यस्थत्वस्यैवौपचारिकत्वशङ्कनादित्यत आह – अत्र हीति ।।

अथ ततः प्रतीत एवार्थोऽस्तु बाधकाभावादित्यत आह – अन्यथेति ।। नच वक्तव्यमग्नेरादित्यस्थत्ववति विष्णावग्निप्रयुक्तोऽहंशब्द उपचरितः किं न स्यादित्यर्थम नङ्गीकृत्याहंशब्दस्याग्नौ मुख्यत्वमेवाङ्गीकृत्यादित्यस्थत्वकथनस्यौपचारिकत्वमिति शङ्कग्रन्थाभिप्रायकल्पने इत्यर्थः । आदित्यस्थत्ववति विष्णावग्निप्रयुक्तोऽहंशब्द उपचरित इति पक्षे विष्णोरादित्यस्थत्वप्रतिपादक 'यश्चासावादित्ये' इति युज्यते अन्यथा तु नेति तदन्यथानुपपत्त्योक्ताभिप्राये कल्पनीये शास्त्रदृष्टेति न्यायाच्छादनमावश्यकमेवेत्यर्थः ।

ननु टीकायां नच विष्णुग्रहणेऽपूर्वतयाऽभ्यासस्य बाध इति शङ्कितम् । तदयुक्तम् । विष्णुपक्ष इवाग्निपक्षेऽप्यपूर्वतायास्सत्त्वेन तस्या विष्णोरेवादित्यस्थत्वसाधकत्वादित्यतस्तदुपपादयति – दिवेति ।। तथा च स्वबोधनीयपुरुषगताज्ञानविरोधिना स्वानुपजीविना मानान्तरेणाग्राह्यार्थत्वमपूर्वत्वम् । प्रकृते तु य एष आदित्ये पुरुषो दृश्यते इत्येतद्वाक्यबोधनीयस्मदाद्यज्ञानविरोधिना एष आदित्य इत्येतद्वाक्यानुपजीविना दिवा प्रभाया अदर्शनरूपमानान्तरेण ग्राह्यो योऽग्नेरादित्यस्थत्वलक्षणार्थस्तदर्थत्वस्यैवापत्त्याऽग्निपक्षेनापूर्वतेति भावः ।

ननु स य एतदेवं विद्वानुपास्तेऽपहते पापकृत्यां लोकीभवति सर्वमायुरेतीत्यर्थवादादित्युक्तं टीकायाम् ।

तदनुपपन्नम् । अपहते पापकृत्यामित्यादेः फलत्वेनार्थत्वादत्वाभावादित्यतष्टीकोक्तमर्थवादत्वमुपपादयितुं शङ्कते – यद्यपीति ।।

नन्वेवं फलार्थवादयोरभेद इत्यत आह – वस्तुत इति ।।

नन्वत्राप्यर्थात्मकत्वेन भेदे फल एव पर्यवसानं स्यादित्यतः पक्षान्तरमाह – अपहत इति ।। न चापूर्वतया य एष इति वाक्यस्य विष्णुपरत्वे शङ्कते अपहते

पापकृत्यामित्याद्यर्थवादस्याग्निपरत्व इव विष्णुपक्षेऽपि सम्भवेन विष्णोरादित्यस्थत्वा-बाधकत्वादित्यतोऽर्थवादस्य विष्णुपक्षेऽनुपपत्तिं दर्शयति – नच सर्वमायुरेतीति ।। सर्वमेवायुर्यन्तीत्यादिवदस्यापि मोक्षपरत्वे मोक्षप्रदत्वस्याप्यग्नेरेवोक्तत्वात्तदाक्षेप इति द्रष्टव्यम् । नन्वग्नेरेवादित्यस्थत्वेऽमृतत्वाभय- त्वादेरनुपपत्तिरित्यतस्सिद्धान्तीय-लिङ्गानि सावकाशयति – अमृतत्वेति ।।

ಸಾರ

ಟೀಕೆಯ ಪೂರ್ವಪಕ್ಷದಲ್ಲಿ ಅಗ್ನಿಯನ್ನು ಅಕ್ಷಿಸ್ಥನೆಂದು ಹೇಳಿದರೆ 'ಸಮಾಖ್ಯಾಶ್ರುತಿ' ವಿರೋಧ ಬರುತ್ತದೆಂದು ಹೇಳಿದ್ದಾರೆ, ಇದೇನೂ ತಪ್ಪಲ್ಲ. ಪೂರ್ವಪಕ್ಷಿಯು ಆದಿತ್ಯನಲ್ಲಿರುವವನು ಅಗ್ನಿಯೇ ಆಗಿದ್ದಾನೆಂದು ಎಲ್ಲಿಯ ತನಕ ನಿರ್ಣಯಿಸುವುದಿಲ್ಲವೋ ಅಲ್ಲಿಯ ತನಕ 'ಸಮಾಖ್ಯಾಶ್ರುತಿಯು' ವಿಷ್ಣುಪರವೇ ಆಗಿರುತ್ತದೆ.

ಇದರಂತೆ 'ಅಹಂ' ಶಬ್ದದ ಪ್ರಯೋಗವನ್ನು ವಿಷ್ಣುವಿನಲ್ಲಿ ಔಪಚಾರಿಕವೆನ್ನಲಾಗಿದೆ. ಇದರ ಅಭಿಪ್ರಾಯವೇನೆಂದರೆ ಆದಿತ್ಯನಲ್ಲಿ ಅಂತರ್ಗತನಾದ ವಿಷ್ಣುವಿನ ವಿಷಯದಲ್ಲಿ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಔಪಚಾರಿಕವಾಗಿದೆಯೆಂದು ಅಭಿಪ್ರಾಯ.

ಮತ್ತು ಅಕ್ಷಿಸ್ಥನಾದವನು ವಿಷ್ಣುವೆಂದು ಹೇಳಿದರೆ ಅಪೂರ್ವತ್ವವು ಬರುತ್ತದೆಂದು ಹೇಳಿದ್ದಾರೆ. ಇದೂ ಸಹ ತಪ್ಪಲ್ಲ. ಅಗ್ನಿಯಲ್ಲಿ ಕಣ್ಣಿಗೆ ಕಾಣಿಸದ ಪ್ರಯುಕ್ತ ಅಪೂರ್ವತ್ವವನ್ನು ಹೇಳಬಹುದು. ಆದರೆ ವಿಷ್ಣು ಅತ್ಯಂತ ಅಲೌಕಿಕನಾದ್ದರಿಂದ ಅಗ್ನಿಗಿಂತ ಅತಿಶಯವಾದ ಅಪೂರ್ವತ್ವವು ವಿಷ್ಣುವಿನಲ್ಲೇ ಇರುತ್ತದೆ. ಅಥವಾ ಹಗಲಿನ ಹೊತ್ತು ಅಗ್ನಿಯ ಪ್ರಭೆಯು ಕಾಣಿಸದ ಕಾರಣ ಆದಿತ್ಯನಲ್ಲಿ ಪ್ರವೇಶವಾಗಿರುತ್ತದೆಂದು ಅನುಮಾನದಿಂದ ಸಾಧಿಸಬಹುದು. ಈ ಕಾರಣದಿಂದಲೂ ಅಗ್ನಿಯಲ್ಲಿ ಅಪೂರ್ವತ್ವವನ್ನು ಹೇಳಲಾಗದು.

'ಅಪಹತೇ ಪಾಪಕೃತ್ಯಾಂ' ಎಂಬುದನ್ನು ಟೀಕೆಯಲ್ಲಿ ಅರ್ಥವಾದ ವಾಕ್ಯವೆಂದಿದ್ದಾರೆ. ಆದರೆ ಇದು ಫಲವಾಕ್ಯವೂ ಆಗಿದೆ. ಅರ್ಥವಾದತ್ವ ಫಲತ್ವ ಎರಡೂ ಇರುವುದರಿಂದ ಟೀಕೆಯಲ್ಲಿ ಅರ್ಥವಾದ ವಾಕ್ಯವೆಂದು ಪರಿಗಣಿಸಿದ್ದು ತಪ್ಪಲ್ಲ? ಅಥವಾ ಫಲವನ್ನು ಹೇಳುವ ವಾಕ್ಯದಲ್ಲಿ ಫಲತ್ವ ಹಾಗೂ ಅರ್ಥವಾದತ್ವಗಳೆರಡೂ ಇದ್ದೇ ಇರುತ್ತದೆಂದು ತಿಳಿಯಬಹುದು.

ಮತ್ತು ಅಮೃತತ್ವ ಅಭಯತ್ವಗಳನ್ನು ಅಗ್ನಿಯಲ್ಲಿ ಉಪಪಾದಿಸಿದ್ದೂ ಸಹ ತಪ್ಪಲ್ಲ. ತನಗಿಂತ ಅಧಮ ದೇವತೆಗಿಂತ ಹೆಚ್ಚು ಅಮೃತತ್ವ ಅಭಯತ್ವಗಳು ಅಗ್ನಿಯಲ್ಲಿ ಇರುತ್ತದೆ. ಅಥವಾ ಈ ಹಿಂದೆ ಉಪಪಾದಿಸಿದ ಅರ್ಥವಾದ ಸಹಿತವಾದ ಬಹುಶ್ರುತಿಗಳ ಬಲದಿಂದ ಮುಖ್ಯವಾದ ಅಮೃತತ್ವವನ್ನೇ ಅಗ್ನಿಯಲ್ಲಿ ಹೇಳಬಹುದು.

तात्पर्यचन्द्रिका

सिद्धान्तस्तु –

अग्नेः ''तमेताः पञ्चदेवताः परिक्षेनं म्रियन्ते विद्युद्वृष्टिश्चन्द्रमा आदित्योऽग्निः'' ''भीषास्मादग्निश्च'' इत्यादिश्रुतिर्भिमृतिभयादिमत्त्वेन मुख्यामृतत्वादेर्निरवकाशत्वात्, अमुख्यस्य च मुख्यसम्भवे अयोगात्,

भाष्ये च ब्रह्मात्मशब्दयोर्निरवकाशतायाः प्रागेवोक्तत्वात् स्थानादिव्यपदेशसुखविशिष्टाभिधानादीनां निरवकाशतायास्त्वत्रैवोक्तत्वात्,

जीवपक्षे अनवस्थादेश्च बाधकत्वात् विष्णुरेव अक्षिस्थः । तदेतदभिप्रेत्योक्तं न्यायविवरणे – ''निरवकाशोपपत्तेरेव प्राबल्यम्'' इति ।

नच बह्वग्निश्रुत्यादिबाधः, अग्नीनामेवोपदेष्टृत्वात् । ''कुशलं नः'' इत्यादावस्मच्छब्दोऽग्निपरोऽपि ''सोऽहं'' इत्यत्र बाधकादन्तर्यामिपरः ।

अभ्यासोऽपि पूर्वापराविरुद्धेऽर्थे तात्पर्यस्य लिङ्गम् । अग्नेरादित्यस्थत्वं च ''अमृतं'' इत्याद्युत्तरवाक्यैः ''कं ब्रह्म'' इत्यादिपूर्ववाक्यैश्च विरुद्धम् ।

धर्म्यैक्येऽपि भवत्येव विद्याभेदः प्रकारयोः ।
भदेमात्रेणापि यथा दहरप्राणविद्ययोः ।।

अस्मद्विद्याऽत्मविद्ययोश्च ब्रह्मविद्यात्वेऽपि आद्यया अग्न्यन्तर्यामित्वप्रकारकत्वात्, द्वितीयायाश्च सर्वगतत्वप्रकारकत्वात्, ब्रह्मविषयकदहरप्राणवैश्वानरादिविद्यानामिव प्रकारभेदात् पृथगुक्तिरिति ।।

ಅನುವಾದ - ಅಕ್ಷಿಸ್ಥನಾದವನು ವಿಷ್ಣುವೇ ಹೊರತು ಅಗ್ನಿಯಲ್ಲವೆಂದು ಸಿದ್ಧಾಂತ. ಏಕೆಂದರೆ ''ತಮೇತಾಃ ಪಂಚದೇವತಾಃ ಪರಿಹ್ಯೇನಂ ಮ್ರಿಯಂತೇ ವಿದ್ಯುದ್ವೃಷ್ಟಿಶ್ಚಂದ್ರಮಾ ಆದಿತ್ಯೋಽಗ್ನಿಃ'' ಇತ್ಯಾದಿ ಶ್ರುತಿಗಳಂತೆ ಅಗ್ನಿಗೆ ಮರಣ ಭಯ ಮೊದಲಾದವುಗಳು ಇರುತ್ತವೆಂದು ನಿರ್ಣಯವಾಗಿವೆ.

ಆದ್ದರಿಂದ ಮುಖ್ಯವಾದ ಅಮೃತತ್ವಾದಿಗಳೇ ನಿರವಕಾಶಗಳಾಗುತ್ತವೆ. ಮುಖ್ಯವಾದ ಅಮೃತತ್ವಗಳನ್ನು ವಿವಕ್ಷಿಸಿ ವಿಷ್ಣುವನ್ನೇ ಆಕ್ಷಿಪ್ತನೆಂದು ಸಮರ್ಥಿಸಲು ಬರುವಾಗ ಅಮುಖ್ಯವಾದ ಅಮೃತತ್ವಾದಿಗಳನ್ನು ವಿವಕ್ಷಿಸಿ ಅಗ್ನಿಯನ್ನು ಅಮೃತನೆಂದು ಹೇಳಬಾರದು.

ಭಾಷ್ಯದಲ್ಲಿಯೂ ಬ್ರಹ್ಮಶಬ್ದ ಹಾಗೂ ಆತ್ಮಶಬ್ದಗಳು ವಿಷ್ಣುವಿನ ನಿರವಕಾಶಲಿಂಗಗಳಾಗಿವೆಯೆಂದು ಹಿಂದಿನ ಅಧಿಕರಣಗಳಲ್ಲಿಯೇ ಹೇಳಿದ್ದಾಗಿದೆ. 'ಸ್ಥಾನಾದಿವ್ಯಪದೇಶ' ಮತ್ತು 'ಸುಖವಿಶಿಷ್ಟಾಭಿಧಾನ' ಮೊದಲಾದ ಲಿಂಗಗಳೂ ಸಹ ನಿರವಕಾಶಗಳಾಗಿವೆಯೆಂದು ಅಲ್ಲಿಯೇ ಸಮರ್ಥಿಸಿದ್ದಾರೆ.

ಜೀವಸ್ವರೂಪನಾದ ಅಗ್ನಿಯನ್ನು ಆಕ್ಷಿಪ್ತನೆಂದು ಹೇಳಿದರೆ ಅವನಿಗೂ ಮತ್ತೊಬ್ಬ ಪ್ರೇರಕನ ಅನಿವಾರ್ಯತೆ ಇರುವುದರಿಂದ ಅನವಸ್ಥಾದೋಷವು ಬರುತ್ತದೆ. ಆದ್ದರಿಂದ ವಿಷ್ಣುವೇ ಆಕ್ಷಿಪ್ತನೆನ್ನಬೇಕು. ಈ ಅಭಿಪ್ರಾಯದಲ್ಲಿ ನ್ಯಾಯವಿವರಣದಲ್ಲಿ ''ನಿರವಕಾಶೋಪಪತ್ತೇರೇವ ಪ್ರಾಬಲ್ಯಮ್'' ನಿರವಕಾಶವಾದ ಯುಕ್ತಿಯೇ ಪ್ರಬಲವಾಗುತ್ತದೆಂದು ಹೇಳಿರುತ್ತಾರೆ.

ಅಗ್ನಿಗಳೇ ಉಪದೇಶಕರಾದ್ದರಿಂದ ಅನೇಕ ಅಗ್ನಿಶ್ರುತಿ ಮೊದಲಾದವುಗಳಿಂದ ಈ ವಿಷ್ಣುಲಿಂಗಗಳೆಲ್ಲವೂ ಬಾಧಿತವಾಗುತ್ತವಲ್ಲವೇ? ಎಂದು ಶಂಕಿಸಬಾರದು. 'ಕುಶಲಂ ನಃ' ಇತ್ಯಾದಿ ವಾಕ್ಯದಲ್ಲಿ 'ಅಸ್ಮತ್' ಶಬ್ದವು ಇರುವುದರಿಂದ ಅಗ್ನಿಪರವಾಗಬಹುದು. ಆದರೆ 'ಸೋಽಹಂ' ಎಂಬ ವಾಕ್ಯವು ಅಗ್ನಿಪರವನೆನ್ನಲು ಬಾಧಕವಿರುವುದರಿಂದ ಅಂತರ್ಯಾಮಿಪರವೇ ಆಗುತ್ತದೆ.

ಇದರಂತೆ ಅಭ್ಯಾಸವೂ ಸಹ ಅಗ್ನಿಸಾಧಕವಲ್ಲ. ಏಕೆಂದರೆ ಹಿಂದಿನ ಮುಂದಿನ ವಾಕ್ಯಗಳಿಂದ ವಿರೋಧವು ಬಾರದಿದ್ದಾಗ ಮಾತ್ರ ಸ್ವಾರ್ಥದಲ್ಲಿ ಈ ಅಭ್ಯಾಸವು ತಾತ್ಪರ್ಯಲಿಂಗವಾಗುತ್ತದೆ. ಆದರೆ ಅಗ್ನಿಯು ಆದಿತ್ಯನಲ್ಲಿದ್ದಾನೆಂದು ಹೇಳಿದಾಗ 'ಅಮೃತಂ' ಇತ್ಯಾದಿಯಾಗಿ ಮುಂದಿನ ವಾಕ್ಯದಿಂದ ''ಕಂ ಬ್ರಹ್ಮ'' ಇತ್ಯಾದಿಯಾಗಿ ಹಿಂದಿನ ವಾಕ್ಯದಿಂದ ವಿರೋಧವು ಬರುತ್ತಿದೆ.

ಆದ್ದರಿಂದ

ಧರ್ಮ್ಯೈಕ್ಯೇಽಪಿ ಭವತ್ಯೇವ ವಿದ್ಯಾಭೇದಃ ಪ್ರಕಾರಯೋಃ ।
ಭೇದಮಾತ್ರೇಣಾಪಿ ಯಥಾ ದಹರಪ್ರಾಣವಿದ್ಯಯೋಃ ॥

ಧರ್ಮಿಯಲ್ಲಿ ಐಕ್ಯವಿದ್ದರೂ ಉಪಾಸನೆ ಮಾಡುವ ಪ್ರಕಾರದಲ್ಲಿ ಭೇದವಿರುವ ಪ್ರಯುಕ್ತ ವಿದ್ಯೆಯಲ್ಲಿ ಭೇದವನ್ನು ಉಪನಿಷತ್ತು ಅಲ್ಲಲ್ಲಿ ಹೇಳುತ್ತದೆ. ಉದಾಹರಣೆ - ಒಬ್ಬನೇ ಬ್ರಹ್ಮನನ್ನು ವಿಷಯೀಕರಿಸುವ ದಹರವಿದ್ಯೆ, ಪ್ರಾಣವಿದ್ಯೆ ಹಾಗೂ ವೈಶ್ವಾನರವಿದ್ಯೆಯೆಂದು ಹೇಳಿದ್ದು ಕಾಣಿಸುತ್ತದೆ.

'ಆಸ್ಪದ್ವಿದ್ಯೆ' ಹಾಗೂ 'ಆತ್ಮವಿದ್ಯೆ'ಗಳು ಬ್ರಹ್ಮವಿದ್ಯೆಯೇ ಆಗಿವೆ. ಆದರೆ ಮೊದಲನೆಯದ್ದು 'ಅಗ್ನ್ಯಂತರ್ಯಾಮಿತ್ವ' ಎಂಬ ಪ್ರಕಾರವುಳ್ಳದ್ದು ಎರಡನೆಯದ್ದು 'ಸರ್ವಗತತ್ವ' ಪ್ರಕಾರವುಳ್ಳದ್ದು.

ಬ್ರಹ್ಮವಿಷಯಕವಾದ 'ದಹರವಿದ್ಯೆ' 'ಪ್ರಾಣವಿದ್ಯೆ' 'ವೈಶ್ವಾನರವಿದ್ಯೆ'ಗಳಂತೆ ಪ್ರಕಾರ ಭೇದದಿಂದ ಪ್ರತ್ಯೇಕವಾಗಿ ಉಪನಿಷತ್ತು ಹೇಳಿದ.

ಪ್ರಕಾಶಃ –

ಅಮೃತತ್ವ, ಅಭಯತ್ವ, ಬ್ರಹ್ಮಾತ್ಮಶಬ್ದ, ಸ್ವಸಮ್ಬನ್ಧನಿಮಿತ್ತಕಚಕ್ಷುರಸಙ್ಗತ್ವಾಪಾದಕತ್ವ, ಪೂರ್ಣಸುಖತ್ವಾದಿಶ್ರುತಿ, ಲಿಙ್ಗ, ಪ್ರಕರಣರೂಪವಿಷ್ಣುಪ್ರಾಪಕಾಣಾಂ ''ಉಪಪತ್ತೇಃ'' ಇತ್ಯಾದಿ ಸೂತ್ರೋಕ್ತಾನಾಂ ನಿರವಕಾಶತ್ವಾತ್ಪರಹೇತೂನಾಂ ಸಾವಕಾಶತ್ವಾತ್ಪರಪಕ್ಷೇ ಬಾಧಕಸತ್ತ್ವಾಚ್ಚ ವಿಷ್ಣುರೇವಾಕ್ಷಿಸ್ಥ ಇತಿ ಭಾವೇನ ''ವಿಷ್ಣುರೇವ ಚಕ್ಷುರನ್ತಸ್ಥಃ'' ಇತ್ಯಾದಿಟೀಕೋಕ್ತಪ್ರಮೇಯಂ ನಿಷ್ಕೃಷ್ಯ ದರ್ಶಯತಿ – ಸಿದ್ಧಾನ್ತಸ್ತ್ವಿತ್ಯಾದಿನಾ ।

ವಿವರಣೆ - ವಿಷ್ಣುವೇ ಕಣ್ಣಿನಲ್ಲಿದ್ದಾನೆಂದು ಸಿದ್ಧಾಂತ. ಏಕೆಂದರೆ ಅಮೃತತ್ವ, ಅಭಯತ್ವ, ಬ್ರಹ್ಮಶಬ್ದ, ಆತ್ಮಶಬ್ದ ತನ್ನ ಸಬಂಧನಿಮಿತ್ತದಿಂದ ಚಕ್ಷುಸ್‌ನಲ್ಲಿ ಅಸಂಗತತ್ವವನ್ನು ಉಂಟುಮಾಡುವ ಧರ್ಮ ಮತ್ತು ಪೂರ್ಣಸುಖತ್ವ, ಮೊದಲಾದ ಧರ್ಮಗಳು ಅಷ್ಟೇ ಅಲ್ಲದೆ, ಶ್ರುತಿ, ಲಿಂಗ, ಪ್ರಕರಣ ಇವುಗಳೆಲ್ಲವೂ ಸಹ ನಿರವಕಾಶಗಳಾಗಿ ವಿಷ್ಣುಪ್ರಾಪಕಗಳಾಗಿವೆಯಂದು 'ಉಪಪತ್ತೇಃ' ಎಂಬುದಾಗಿ ಸೂತ್ರದಲ್ಲಿ ಸಮರ್ಥಿಸಿದ್ದಾರೆ. ಆದ್ದರಿಂದ ಪೂರ್ವಪಕ್ಷಕಾರರ ಹೇತುಗಳೆಲ್ಲವೂ ಸಾವಕಾಶಗಳಾಗಿವೆ. ಮತ್ತು ಪೂರ್ವಪಕ್ಷದಲ್ಲಿ ಅನೇಕ ಬಾಧಕಗಳಿರುವುದರಿಂದಲೂ ವಿಷ್ಣುವೇ ಕಣ್ಣಿನಲ್ಲಿದ್ದಾನೆಂದು ನಿರ್ಣಯವಾಗುತ್ತದೆ. ಈ ಅಭಿಪ್ರಾಯದಿಂದ 'ವಿಷ್ಣುರೇವ ಚಕ್ಷುರಂತಸ್ಸ್ಥಃ' ಇತ್ಯಾದಿ ಟೀಕೆಯಲ್ಲಿ ಹೇಳಲ್ಪಟ್ಟ ಪ್ರಮೇಯವನ್ನು ಸಂಗ್ರಹಿಸಿ 'ಸಿದ್ಧಾಂತಸ್ತು' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – 'ಅಗ್ನೇರ್ಮೃತಿಭಯಾದಿಮತ್ತ್ವೇನ' ಇತ್ಯನ್ವಯಃ । ''ಮ್ರಿಯನ್ತೇ ಪಞ್ಚದೇವತಾಃ'' ಇತಿ ಋಗ್ಭಾಷ್ಯೋಕ್ತಮಾಹ – ತಮಿತಿ । 'ತಂ' ವಾಯುಗಂ ವಿಷ್ಣುಂ 'ಪರಿ' ಇತ್ಯೈತರೇಯಬ್ರಾಹ್ಮಣೇ, 'ಅಸ್ಮಾತ್' ಅಸ್ಯ ಭಯೇನೇತಿ ತೈತ್ತಿರೀಯೇ, ''ಭಯಾದಸ್ಯಾಗ್ನಿಸ್ತಪತಿ'' ಇತಿ ಕಠಶ್ರುತ್ಯಾದಿರಾದಿಪದಾರ್ಥಃ ।

'ಅಗ್ನೇಃ' ಎಂಬ ಪದಕ್ಕೆ 'ಮೃತಿಭಯಾದಿಮತ್ತ್ವೇನ' ಎಂಬಲ್ಲಿ ಅನ್ವಯ. 'ಮ್ರಿಯಂತೇ ಪಂಚದೇವತಾಃ' ಎಂದು ಋಗ್ಭಾಷ್ಯದಲ್ಲಿ ಹೇಳಿದ್ದನ್ನೇ 'ತಂ' ಎಂದು ಹೇಳಿದ್ದಾರೆ. 'ತಂ' ವಾಯುವಿನಲ್ಲಿರುವ ವಿಷ್ಣುವನ್ನು 'ಪರಿ' ಅನುಸರಿಸಿ 'ಮ್ರಿಯಂತೇ' 'ಸಾಯುತ್ತಾರೆ' ಎಂಬ ಶ್ರುತಿಯು ಐತರೇಯ ಬ್ರಾಹ್ಮಣದಲ್ಲಿದೆ. 'ಭೀಷಾಸ್ಮಾತ್' ಎಂಬಲ್ಲಿರುವ 'ಅಸ್ಮಾತ್' ಎಂಬ ಪದಕ್ಕೆ ವಿಷ್ಣುವಿನ 'ಭೀಷಾ' ಭಯದಿಂದ ಎಂದರ್ಥ. ಈ ಶ್ರುತಿಯು ತೈತ್ತಿರೀಯದಲ್ಲಿದೆ. ಆದಿಪದದಿಂದ ''ಭಯಾದಸ್ಯಾಗ್ನಿಸ್ತಪತಿ'' ಎಂಬ ಕಾಠಕಶ್ರುತಿಯನ್ನು ವಿವಕ್ಷಿಸಬೇಕು.

ಪ್ರಕಾಶಃ – ಅತ್ರಾಭಯತ್ವಾದೇಶ್ಚನ್ದ್ರಿಕಾಯಾಂ ಪೂರ್ವಪಕ್ಷಿಣಾऽऽಕ್ಷೇಪೇ ಕೃತೇऽಪಿ ಪರಹೇತೂನಾಂ ಸಾವಕಾಶತ್ವಸ್ಯಾಗ್ರೇ ಸ್ಪಷ್ಟತ್ವಾತ್ ''ಕಮ್ಪನಾತ್'' ಇತ್ಯತ್ರ ಟೀಕೋಕ್ತದಿಶಾऽಮೃತತ್ವಾದೇ-ರ್ಹೇತ್ವಕರಣಮವಿರುದ್ಧಮಿತಿ ಜ್ಞೇಯಮ್ । **ಪ್ರಾಗೇವೇತಿ** । 'ಅಭ್ಯಾಸಾತ್' 'ಪ್ರಸಿದ್ಧೋಪದೇಶಾತ್' ಇತ್ಯಾದೌ ।

ಅಭಯತ್ವಾದಿಗಳನ್ನು ಸಿದ್ಧಾಂತ ಲಿಂಗಗಳೆಂದು ಇಲ್ಲಿ ಹೇಳಲಾಗಿದೆ. ಆದರೆ ಚಂದ್ರಿಕೆಯಲ್ಲಿ ಹಿಂದಿನ ಗುಹಾಧಿಕರಣದಲ್ಲಿ ಸಿದ್ಧಾಂತ ಲಿಂಗವೆಂದು ಸಾಧಿಸಲ್ಪಟ್ಟ ಅಭಯತ್ವವನ್ನೂ ಸಹ ಆಕ್ಷೇಪಿಸಲಾಗಿದೆ. ಹೀಗಿರುವಾಗ ವಿಪ್ರತಿಪನ್ನವಾದ ಅಭಯತ್ವವನ್ನು ಸಿದ್ಧಾಂತಲಿಂಗವೆಂದು ಹೇಗೆ ವಿವಕ್ಷಿಸುತ್ತೀರಿ? ಎಂದು ಪ್ರಶ್ನಿಸಬಾರದು. ಪೂರ್ವಪಕ್ಷದಲ್ಲಿ ಯಾವ ಹೇತುಗಳಿಂದ ಅಭಯತ್ವವನ್ನು ಅಗ್ನಿಯಲ್ಲಿ ಆಕ್ಷೇಪಿಸುತ್ತಿದ್ದಾರೋ? ಅಂತಹ ಹೇತುಗಳನ್ನೇ ಸಾವಕಾಶಗಳೆಂದು ಮುಂದೆ ಸಮರ್ಥಿಸುತ್ತೇವೆ. ಆದ್ದರಿಂದ ಅಭಯತ್ವ ಪೂರ್ವಪಕ್ಷ ಪ್ರಾಪಕಲಿಂಗವಾಗುವುದಿಲ್ಲ. ಇದಕ್ಕೆ ಉದಾಹರಣೆಯೂ ಕಂಡಿದೆ. 'ಕಂಪನಾತ್' ಎಂಬ ಸೂತ್ರದಲ್ಲಿ ಜಗಚ್ಚೇಷ್ಟಕತ್ವವೆಂಬ ಲಿಂಗವನ್ನೇ ಪೂರ್ವಪಕ್ಷಿಯು ಆಕ್ಷೇಪಿಸುತ್ತಾನೆ. ಆದರೆ ಜಗಚ್ಚೇಷ್ಟಕತ್ವವನ್ನು ಯಾವ ಹೇತುಗಳಿಂದ ಆಕ್ಷೇಪಿಸುತ್ತಾನೋ ಅಂತಹ ಹೇತುಗಳನ್ನು ಸಾವಕಾಶ ಮಾಡಿ ಸಿದ್ಧಾಂತದಲ್ಲಿ ಜಗಚ್ಚೇಷ್ಟಕತ್ವವನ್ನು ಸಿದ್ಧಾಂತಲಿಂಗವೆಂದು ಪರಿಗಣಿಸಿದ್ದಾರೆ. ಆದ್ದರಿಂದ ಪ್ರಕೃತ 'ಅಭಯತ್ವ, ಅಮೃತತ್ವ' ಮೊದಲಾದವುಗಳನ್ನು ಹೇತುವನ್ನಾಗಿ ಮಾಡಿದ್ದು ತಪ್ಪಲ್ಲ. 'ಪ್ರಾಗೇವ' ಎಂದರೆ 'ಆನಂದಮಯೋऽಭ್ಯಾಸಾತ್' ಮತ್ತು 'ಸರ್ವತ್ರಪ್ರಸಿದ್ಧೋಪದೇಶಾತ್' ಎಂಬ ಸೂತ್ರಗಳಲ್ಲಿ ಎಂದರ್ಥ.

ಪ್ರಕಾಶಃ – **ಸ್ಥಾನಾದೀತಿ** । ''ಸ್ಥಾನಾದಿವ್ಯಪದೇಶಾಚ್ಚ'' ಇತ್ಯತ್ರ ''ತದ್ಯದಸ್ಮಿನ್ ಸರ್ಪಿರ್ವೋದಕಂ ವಾ ಸಿಞ್ಚತಿ'' ಇತ್ಯಕ್ಷಿಸ್ಥಪುರುಷಸಮ್ಬನ್ಧಾದಕ್ಷ್ಣೋಃ ಅಸಙ್ಗಾಖ್ಯಶಕ್ತಿ-ರ್ವ್ಯಪದಿಶ್ಯತೇ ।

'ಸ್ಥಾನಾದಿ' ಎಂದರೆ 'ಸ್ಥಾನಾದಿ ವ್ಯಪದೇಶಾಚ್ಚ' ಎಂಬ ಸೂತ್ರದಲ್ಲಿ ''ತದ್ಯದಸ್ಮಿನ್ ಸರ್ಪಿರ್ವೋದಕಂ ವಾ ಸಿಂಚತಿ'' ಎಂಬ ಶ್ರುತಿಯಿಂದ ಅಕ್ಷಿಯಲ್ಲಿರುವ ಭಗವಂತನ ಸಂಬಂಧದಿಂದ ಅಕ್ಷಿಗೂ ಸಹ ಅಸಂಗವೆಂಬ ಶಕ್ತಿಯೂ ಬಂದಿದೆಯೆಂದು ಸಮರ್ಥಿಸಿದ್ದಾರೆ.

ಪ್ರಕಾಶಃ – ತಥಾ ''ಏತಂ ಸಂಯದ್ವಾಮ ಇತ್ಯಾವಕ್ಷತೇ ಏತಂ ಹಿ ಸರ್ವಾಣಿ ವಾಮಾನಿ ಸಂಯನ್ತಿ ಏಷ ಉ ಏವ ವಾಮನಿಃ'' ಇತ್ಯಾದಿನಾ ಸಂಯದ್ವಾಮತ್ವಾದಿಸ್ವರೂಪಶಕ್ತಿಶ್ಚೋಚ್ಯತೇ । ಏತದುಭಯಂ ಚ ''ಸ ಈಶಸ್ಸೋऽಸಪತ್ನಃ ಸ ಹರಿಃ ಪರಃ ಪರೋವರೀಯಾನ್ ಯದಿದಂ ಚಕ್ಷುಷಿ ಸರ್ಪಿರ್ವೋದಕಂ ವಾ ಸಿಞ್ಚತಿ ವರ್ತ್ಮನೀ ಏವ ಗಚ್ಛತಿ ಸ ವಾಮನಸ್ಸ ಭಾಮನಃ'' ಇತ್ಯಾದಿಶ್ರುತ್ಯಾ,

यत्स्थानत्वादिदं चक्षुरसङ्गं सर्ववस्तुभिः ।
स वामनः परोऽस्माकं ..... ।

ಇತ್ಯಾದಿಸ್ಮೃತ್ಯಾ ಚ ವಿಷ್ಣ್ವೇಕನಿಷ್ಠಮ್ ।

ಆದರಂತೆ ''ಏತಂ ಸಂಯದ್ವಾಮ ಇತ್ಯಾಕ್ತತೇ ಏತಂ ಹಿ ಸರ್ವಾಣಿ ವಾಮಾನಿ ಸಂಯಂತಿ ಏಷ ಉ ಏವ ವಾಮನಿಃ'' ಇತ್ಯಾದಿಯಾಗಿ ಸಂಯದ್ವಾಮತ್ವವೆಂಬ ಸ್ವರೂಪ ಶಕ್ತಿಯು ಹೇಳಲ್ಪಟ್ಟಿದೆ. ಇಲ್ಲಿ ಅಧಿಷ್ಠಾನ ಶಕ್ತಿ ಹಾಗೂ ಸ್ವರೂಪಶಕ್ತಿಗಳೆರಡೂ ಕೇವಲ ವಿಷ್ಣುವಿನಲ್ಲೇ ಇವೆಯೆಂದು ಶ್ರುತಿ ಸ್ಮೃತಿಗಳಿಂದ ಸಿದ್ಧವಾಗಿದೆ - ''ಸ ಈಶಸ್ಸೋऽಸಪತ್ನಃ ಸ ಹರಿಃ ಪರಃ ಪರೋವರೀಯಾನ್ ಯದಿದಂ ಚಕ್ಷುಷಿ ಸರ್ಪರ್ಮೋದಕಂ ವಾ ಸಿಂಚತಿ ವರ್ತ್ಮನೀ ಏವ ಗಚ್ಛತಿ ಸ ವಾಮನಸ್ಸ ಭಾಮನಃ'' ಎಂಬ ಶ್ರುತಿಯಿಂದ ''ಯತ್‌ಸ್ಥಾನತ್ವಾದಿದಂ ಚಕ್ಷುರಸಂಗಂ ಸರ್ವವಸ್ತುಭಃ । ಸ ವಾಮನಃ ಪರೋऽಸ್ಮಾಕಂ..... ॥'' ವಿಷ್ಣುವಿನ ಸನ್ನಿಧಾನದಿಂದಲೇ ಚಕ್ಷುರಿಂದ್ರಿಯವು ಸಕಲವಸ್ತುಗಳಿಂದ ಅಸಂಗವಾಗಿದೆಯೆಂದು ತಿಳಿಯುತ್ತದೆ ಎಂಬ ಶ್ರುತಿಯಿಂದಲೂ ಕೇವಲ ವಿಷ್ಣುವಿನ ಧರ್ಮವೆಂದು ನಿಶ್ಚಯವಾಗುತ್ತದೆ.

ಪ್ರಕಾಶಃ – ''ಸುಖವಿಶಿಷ್ಟಾಭಿಧಾನಾದೇವ ಚ'' ಇತ್ಯತ್ರ ''ಕಂ ಬ್ರಹ್ಮ ಖಂ ಬ್ರಹ್ಮ'' ಇತ್ಯುಪಕ್ರಮೇ ಶ್ರುತಂ ವಿಶಿಷ್ಟಸುಖತ್ವಂ ಪೂರ್ಣಸುಖತ್ವಮುಚ್ಯತೇ । ತಚ್ಚ ''ಆನಂದಂ ಬ್ರಹ್ಮಣಃ'' ''ಆನಂದೋ ಬ್ರಹ್ಮ'' ಇತ್ಯಾದಿನಾ ನಿರವಕಾಶಮ್ ।

''ಸುಖವಿಶಿಷ್ಟಾಭಿಧಾನಾದೇವ ಚ'' ಎಂಬ ಸೂತ್ರದಲ್ಲಿ ''ಕಂ ಬ್ರಹ್ಮ ಖಂ ಬ್ರಹ್ಮ'' ಎಂದು ಪ್ರಾರಂಭದಲ್ಲಿ ವಿಶಿಷ್ಟಸುಖವು ಅಂದರೆ ಪೂರ್ಣಸುಖವು ಕೇಳಿಸುತ್ತಿದೆ. ಇಂತಹ ಪೂರ್ಣಸುಖವು 'ಆನಂದಂ ಬ್ರಹ್ಮಣಃ'' ''ಆನಂದೋ ಬ್ರಹ್ಮ'' ಇತ್ಯಾದಿಯಾಗಿ ಬ್ರಹ್ಮನಲ್ಲಿ ನಿರವಕಾಶವಾಗಿದೆ.

ಪ್ರಕಾಶಃ – ''ಶ್ರುತೋಪನಿಷತ್ಕಗತ್ಯಭಿಧಾನಾತ್'' ಇತ್ಯತ್ರ ಶ್ರುತೈತದ್ವಿಧಾನಾಂ ''ಸ ಏನಾನ್ ಬ್ರಹ್ಮ ಗಮಯತಿ'' ಇತಿ ಬ್ರಹ್ಮಗತ್ಯಭಿಧಾನಾತ್ತಸ್ಯ ಚಾಕ್ಷಿಸ್ಥಸ್ಯ ವಿಷ್ಣುತ್ವಂ ವಿನಾ ಅಯೋಗಾತ್, ಅನ್ಯವಿದ್ಯಯಾ ಅನ್ಯಗತೇರಪ್ಯುಕ್ತತ್ವಾತ್ ಇತಿ ಭಾಷ್ಯಾದಾವೇವೋಕ್ತತ್ವಾದಿತ್ಯರ್ಥಃ ।

''ಶ್ರುತೋಪನಿಷತ್ಕಗತ್ಯಭಿಧಾನಾತ್'' ಎಂಬ ಸೂತ್ರದಲ್ಲಿ ಕೇಳಿಸುತ್ತಿರುವ ಏತದ್‌ವಿದ್ಯೆಗಳಿಗೆ ''ಸ ಏನಾನ್ ಬ್ರಹ್ಮಗಮಯತಿ'' ಎಂಬುದಾಗಿ ಬ್ರಹ್ಮನೇ ಗತಿಯೆಂದು ಹೇಳಲಾಗಿದೆ. ಬ್ರಹ್ಮನೇ ಗತಿಯಾಗಬೇಕಾದರೆ ಅಕ್ಷಿಯಲ್ಲಿರುವವನು ವಿಷ್ಣುವೇ ಆಗಬೇಕು. ಇಲ್ಲದಿದ್ದರೆ ಬೇರೊಬ್ಬನ ವಿದ್ಯೆಯಿಂದ ಮತ್ತೊಬ್ಬನು ದೊರೆಯುತ್ತಾನೆಂದು ಹೇಳಿದಂತಾಗುತ್ತದೆ. ಈ ವಿಷಯವು ಭಾಷ್ಯಾದಿಗಳಲ್ಲೇ ಹೇಳಲ್ಪಟ್ಟಿದೆ.

ಪ್ರಕಾಶಃ – ''ಅನವಸ್ಥಿತೇರಸಮ್ಭವಾಚ್ಚ ನೇತರಃ'' ಇತ್ಯತ್ರ ವಾಮನಿಭಾಮನ್ಯಾದಿ-ಶಬ್ದಬಲೇನಾಗ್ನೇರ್ಜೀವಪ್ರೇರಕತಯಾ ಚಕ್ಷುಸ್ಥತ್ವೇऽಭಿಮತೇ ಸತಿ, ತಸ್ಯ ಜೀವತ್ವಾತ್

प्रेरकान्तरापेक्षायां तत्रापि तथेत्यनवस्थानात्, अग्नेरपि प्रेर्यजीवत्वसाम्येन प्रेरणस्यासम्भवाच्च नाग्निरक्षिस्थ इत्युच्यमानत्वादित्यर्थः ।

''अनवस्थितेरसंभवाच्च नेतरः'' ಎಂಬ ಸೂತ್ರದಲ್ಲಿ 'ವಾಮನಿ' ಶಬ್ದವು ಸಕಲ ಸ್ತ್ರೀಯರನ್ನು ಪ್ರೇರಣ ಮಾಡುವ ಭಗವಂತನ ರೂಪವನ್ನು ಹೇಳುತ್ತಿದೆ. 'ಭಾಮಿನಿ' ಶಬ್ದವು ಸಕಲ ಪುರುಷರನ್ನು ಪ್ರೇರಣೆ ಮಾಡುವ ಭಗವಂತನ ರೂಪವನ್ನು ಹೇಳುತ್ತಿದೆ. ಈ ಎರಡು ಭಗವದ್ರೂಪಗಳು ಪ್ರತಿಯೊಬ್ಬರ ಎಡಗಣ್ಣು ಹಾಗೂ ಬಲಗಣ್ಣುಗಳಲ್ಲಿ ಇರುತ್ತವೆ. ಹೀಗೆ ಹೇಳಿದಾಗ ಅಗ್ನಿಯನ್ನು ಚಕ್ಷುರಂತಸ್ಥನೆಂದು ಹೇಳಲು ಸಾಧ್ಯವಿಲ್ಲ. ಹಾಗೇನಾದರೂ ವಿವಕ್ಷಿಸಿದರೆ ಅಗ್ನಿಯೂ ಸಹ ಒಬ್ಬ ಜೀವನಾಗಿರುವುದರಿಂದ ಅವನನ್ನು ಪ್ರೇರಣೆ ಮಾಡುವುದಕ್ಕಾಗಿ ಮತ್ತೊಬ್ಬ ಪ್ರೇರಕನು ಬೇಕಾಗುತ್ತದೆ. ಆ ಪ್ರೇರಕನೂ ಸಹ ವಿಷ್ಣುವಲ್ಲದ ಕಾರಣ ಮತ್ತೊಬ್ಬ ಪ್ರೇರಕನು ಬೇಕಾಗುತ್ತದೆ. ಹೀಗೆ ಅನವಸ್ಥಾದೋಷವನ್ನು ತಿಳಿಯಬೇಕು. ಆದ್ದರಿಂದ ಅಗ್ನಿಯು ಪ್ರೇರ್ಯನಾದ ಜೀವನಿಗೆ ಸಮಾನನಾಗಿರುವುದರಿಂದ ಪ್ರೇರಣೆ ಮಾಡಲು ಸಮರ್ಥನಾಗುವುದಿಲ್ಲ. ಹಾಗಾಗಿ ಅಕ್ಷಿಸ್ಥನಾದವನು ಅಗ್ನಿಯೆಂದು ಹೇಳಬಾರದು.

प्रकाशः – टीकाया मूलमाह – तदेतदिति । उपपत्तेरेव प्राबल्यं, किमुतात्मशब्दसहिताया इत्येवकारार्थः । उपपत्तेर्निरवकाशत्वोक्तिसूचितं परहेतूनां सावकाशत्वं भाष्याद्युक्तं व्यक्तमाह – नचेत्यादिना ।

ಹೀಗೆ ಮೇಲಿನ ಅಭಿಪ್ರಾಯವನ್ನು ಸ್ಪಷ್ಟಪಡಿಸುವ ಟೀಕೆಗೆ ನ್ಯಾಯವಿವರಣವೇ ವ್ಯಾಖ್ಯೇಯವಾಗಿದೆಯೆಂದು 'ತದೇತತ್' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. 'ಉಪಪತ್ತೇರೇವ' ಎಂಬಲ್ಲಿರುವ ಏವಕಾರವು ಕೇವಲ ಯುಕ್ತಿಗೆ ಪ್ರಾಬಲ್ಯವಿರಬೇಕಾದರೆ ಆತ್ಮಶಬ್ದ ಸಹಿತವಾದ ಯುಕ್ತಿಗೆ ಪ್ರಾಬಲ್ಯವಿದೆಯೆಂದು ಪ್ರತ್ಯೇಕವಾಗಿ ಹೇಳಬೇಕೇನು? ಎಂಬುದಾಗಿ ಕೈಮುತ್ಯವನ್ನು ತೋರಿಸುತ್ತಿದೆ.

ವಿಷ್ಣುವಿನ ಲಿಂಗಗಳಿಗೆ ನಿರವಕಾಶತ್ವವನ್ನು ಹೇಳಿದ್ದರಿಂದ ಅಗ್ನಿಯ ಲಿಂಗಗಳಿಗೆ ಸಾವಕಾಶತ್ವವನ್ನು ಸೂಚಿಸಿದಂತಾಯಿತು. ಇದನ್ನು ಭಾಷ್ಯಾದಿಗಳಲ್ಲಿ ಹೇಳಿದ್ದಾರೆ. ಆದನ್ನೇ ಪ್ರಕೃತ ಗ್ರಂಥಕಾರರು 'ನಚ' ಎಂಬ ವಾಕ್ಯದಿಂದ ವಿವರಿಸುತ್ತಿದ್ದಾರೆ.

प्रकाशः – अग्निपरोऽपीति । यथोक्तं न्यायविवरणटीकायां – ''अग्निः प्रसिद्ध एवास्तु, ''सोऽहमस्मि'' इत्यादि तु अन्तर्याम्यपेक्षया सावकाशम्'' इति । बाधकादिति । अमृतत्वादिबाधकादित्यर्थः ।

ಗ್ರಂಥದಲ್ಲಿ 'ಅಗ್ನಿಪರೋಽಪಿ' ಎಂಬುದಾಗಿ ಹೇಳಿದ್ದಾರೆ. ಇದನ್ನೇ ನ್ಯಾಯವಿವರಣೆಯ ಟೀಕೆಯಲ್ಲಿ ''ಅಗ್ನಿಃ ಪ್ರಸಿದ್ಧ ಏವಾಸ್ತು, ''ಸೋಽಹಮಸ್ಮಿ'' ಇತ್ಯಾದಿ ''ತು ಅಂತರ್ಯಾಮ್ಯಪೇಕ್ಷಯಾ ಸಾವಕಾಶಮ್'' ಎಂದು ಹೇಳಿದ್ದಾರೆ. 'ಬಾಧಕಾತ್' ಎಂಬ ಪದಕ್ಕೆ ಅಮೃತತ್ವಾದಿ ಬಾಧಕಗಳಿರುವುದರಿಂದ ಎಂದರ್ಥ.

यत्स्थानत्वादिदं चक्षुरसङ्गं सर्ववस्तुभिः ।
स वामनः परोऽस्माकं ..... ।

इत्यादिस्मृत्या च विष्ण्वेकनिष्ठम् ।

ಅದರಂತೆ "ಏತಂ ಸಂಯದ್ವಾಮ ಇತ್ಯಾಕ್ಷತೇ ಏತಂ ಹಿ ಸರ್ವಾಣಿ ವಾಮಾನಿ ಸಂಯಂತಿ ಏಷ ಉ ಏವ ವಾಮನಿಃ" ಇತ್ಯಾದಿಯಾಗಿ ಸಂಯದ್ವಾಮತ್ವವೆಂಬ ಸ್ವರೂಪ ಶಕ್ತಿಯು ಹೇಳಲ್ಪಟ್ಟಿದೆ. ಇಲ್ಲಿ ಅಧಿಷ್ಠಾನ ಶಕ್ತಿ ಹಾಗೂ ಸ್ವರೂಪಶಕ್ತಿಗಳಿರಡೂ ಕೇವಲ ವಿಷ್ಣುವಿನಲ್ಲೇ ಇವೆಯೆಂದು ಶ್ರುತಿ ಸ್ಮೃತಿಗಳಿಂದ ಸಿದ್ಧವಾಗಿದೆ - "ಸ ಈಶಸ್ಸೋऽಸಪತ್ನಃ ಸ ಹರಿಃ ಪರಃ ಪರೋವರೀಯಾನ್ ಯದಿದಂ ಚಕ್ಷುಷಿ ಸರ್ಪಿರ್ವೋದಕಂ ವಾ ಸಿಂಚತಿ ವರ್ತ್ಮನೀ ಏವ ಗಚ್ಛತಿ ಸ ವಾಮನಸ್ಸ ಭಾಮನಃ" ಎಂಬ ಶ್ರುತಿಯಿಂದ "ಯತ್‌ಸ್ಥಾನತ್ವಾದಿದಂ ಚಕ್ಷುರಸಂಗಂ ಸರ್ವವಸ್ತುಭಿಃ । ಸ ವಾಮನಃ ಪರೋऽಸ್ಮಾಕಂ..... ॥" ವಿಷ್ಣುವಿನ ಸನ್ನಿಧಾನದಿಂದಲೇ ಚಕ್ಷುರಿಂದ್ರಿಯವು ಸಕಲವಸ್ತುಗಳಿಂದ ಅಸಂಗವಾಗಿದೆಯೆಂದು ತಿಳಿಯುತ್ತದೆ ಎಂಬ ಶ್ರುತಿಯಿಂದಲೂ ಕೇವಲ ವಿಷ್ಣುವಿನ ಧರ್ಮವೆಂದು ನಿಶ್ಚಯವಾಗುತ್ತದೆ.

प्रकाशः – ''सुखविशिष्टाभिधानादेव च'' इत्यत्र ''कं ब्रह्म खं ब्रह्म'' इत्युपक्रमे श्रुतं विशिष्टसुखत्वं पूर्णसुखत्वमुच्यते । तच्च ''आनन्दं ब्रह्मणः'' ''आनन्दो ब्रह्म'' इत्यादिना निरवकाशम् ।

"ಸುಖವಿಶಿಷ್ಟಾಭಿಧಾನಾದೇವ ಚ" ಎಂಬ ಸೂತ್ರದಲ್ಲಿ "ಕಂ ಬ್ರಹ್ಮ ಖಂ ಬ್ರಹ್ಮ" ಎಂದು ಪ್ರಾರಂಭದಲ್ಲಿ ವಿಶಿಷ್ಟಸುಖವು ಅಂದರೆ ಪೂರ್ಣಸುಖವು ಕೇಳಿಸುತ್ತಿದೆ. ಇಂತಹ ಪೂರ್ಣಸುಖವು 'ಆನಂದಂ ಬ್ರಹ್ಮಣಃ" "ಆನಂದೋ ಬ್ರಹ್ಮ" ಇತ್ಯಾದಿಯಾಗಿ ಬ್ರಹ್ಮನಲ್ಲಿ ನಿರವಕಾಶವಾಗಿದೆ.

प्रकाशः – ''श्रुतोपनिषत्कगत्यभिधानात्'' इत्यत्र श्रुतैतद्विद्यानां ''स एनान् ब्रह्म गमयति'' इति ब्रह्मगत्यभिधानात्तस्य चाक्षिस्थस्य विष्णुत्वं विना अयोगात्, अन्यविद्यया अन्यगतेरयुक्तत्वात् इति भाष्यादावेवोक्तत्वादित्यर्थः ।

"ಶ್ರುತೋಪನಿಷತ್ಕಗತ್ಯಭಿಧಾನಾತ್" ಎಂಬ ಸೂತ್ರದಲ್ಲಿ ಕೇಳಿಸುತ್ತಿರುವ ಏತದ್‌ವಿದ್ಯೆಗಳಿಗೆ "ಸ ಏನಾನ್ ಬ್ರಹ್ಮಗಮಯತಿ" ಎಂಬುದಾಗಿ ಬ್ರಹ್ಮನೇ ಗತಿಯೆಂದು ಹೇಳಲಾಗಿದೆ. ಬ್ರಹ್ಮನೇ ಗತಿಯಾಗಬೇಕಾದರೆ ಅಕ್ಷಿಯಲ್ಲಿರುವವನು ವಿಷ್ಣುವೇ ಆಗಬೇಕು. ಇಲ್ಲದಿದ್ದರೆ ಬೇರೊಬ್ಬನ ವಿದ್ಯೆಯಿಂದ ಮತ್ತೊಬ್ಬನು ದೊರೆಯುತ್ತಾನೆಂದು ಹೇಳಿದಂತಾಗುತ್ತದೆ. ಈ ವಿಷಯವು ಭಾಷ್ಯಾದಿಗಳಲ್ಲೇ ಹೇಳಲ್ಪಟ್ಟಿದೆ.

प्रकाशः – ''अनवस्थितेरसम्भवाच्च नेतरः'' इत्यत्र वामनिभामन्यादि-शब्दबलेनाग्नेर्जीवप्रेरकतया चक्षुस्स्थत्वेऽभिमते सति, तस्य जीवत्वात्

प्रेरकान्तरापेक्षायां तत्रापि तथेत्यनवस्थानात्, अग्नेरपि प्रेर्यजीवत्वसाम्येन प्रेरणस्यासम्भवाच्च नाग्निरक्षिस्थ इत्युच्यमानत्वादित्यर्थः ।

''अनवस्थेरसंभवाच्च नेतरः'' ಎಂಬ ಸೂತ್ರದಲ್ಲಿ 'वामनि' ಶಬ್ದವು ಸಕಲ ಸ್ತ್ರೀಯರನ್ನು ಪ್ರೇರಣ ಮಾಡುವ ಭಗವಂತನ ರೂಪವನ್ನು ಹೇಳುತ್ತಿದೆ. 'भामिनि' ಶಬ್ದವು ಸಕಲ ಪುರುಷರನ್ನು ಪ್ರೇರಣೆ ಮಾಡುವ ಭಗವಂತನ ರೂಪವನ್ನು ಹೇಳುತ್ತಿದೆ. ಈ ಎರಡು ಭಗವದ್ರೂಪಗಳು ಪ್ರತಿಯೊಬ್ಬರ ಎಡಗಣ್ಣು ಹಾಗೂ ಬಲಗಣ್ಣುಗಳಲ್ಲಿ ಇರುತ್ತವೆ. ಹೀಗೆ ಹೇಳಿದಾಗ ಅಗ್ನಿಯನ್ನು ಚಕ್ಷುರಂತಸ್ಥನೆಂದು ಹೇಳಲು ಸಾಧ್ಯವಿಲ್ಲ. ಹಾಗೇನಾದರೂ ವಿವಕ್ಷಿಸಿದರೆ ಅಗ್ನಿಯೂ ಸಹ ಒಬ್ಬ ಜೀವನಾಗಿರುವುದರಿಂದ ಅವನನ್ನು ಪ್ರೇರಣೆ ಮಾಡುವುದಕ್ಕಾಗಿ ಮತ್ತೊಬ್ಬ ಪ್ರೇರಕನು ಬೇಕಾಗುತ್ತದೆ. ಆ ಪ್ರೇರಕನೂ ಸಹ ವಿಷ್ಣುವಲ್ಲದ ಕಾರಣ ಮತ್ತೊಬ್ಬ ಪ್ರೇರಕನು ಬೇಕಾಗುತ್ತದೆ. ಹೀಗೆ ಅನವಸ್ಥಾದೋಷವನ್ನು ತಿಳಿಯಬೇಕು. ಆದ್ದರಿಂದ ಅಗ್ನಿಯು ಪ್ರೇರ್ಯನಾದ ಜೀವನಿಗೆ ಸಮಾನನಾಗಿರುವುದರಿಂದ ಪ್ರೇರಣೆ ಮಾಡಲು ಸಮರ್ಥನಾಗುವುದಿಲ್ಲ. ಹಾಗಾಗಿ ಅಕ್ಷಿಸ್ಥನಾದವನು ಅಗ್ನಿಯೆಂದು ಹೇಳಬಾರದು.

प्रकाशः – टीकाया मूलमाह – तदेतदिति । उपपत्तेरेव प्राबल्यं, किमुतात्मशब्दसहिताया इत्येवकारार्थः । उपपत्तेर्निरवकाशत्वोक्तिसूचितं परहेतूनां सावकाशत्वं भाष्याद्युक्तं व्यक्तमाह – नचेत्यादिना ।

ಹೀಗೆ ಮೇಲಿನ ಅಭಿಪ್ರಾಯವನ್ನು ಸ್ಪಷ್ಟಪಡಿಸುವ ಟೀಕೆಗೆ ನ್ಯಾಯವಿವರಣವೇ ವ್ಯಾಖ್ಯೇಯವಾಗಿದೆಯೆಂದು 'तदेतत्' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. 'उपपत्तेरेव' ಎಂಬಲ್ಲಿರುವ ಏವಕಾರವು ಕೇವಲ ಯುಕ್ತಿಗೆ ಪ್ರಾಬಲ್ಯವಿರಬೇಕಾದರೆ ಆತ್ಮಶಬ್ದ ಸಹಿತವಾದ ಯುಕ್ತಿಗೆ ಪ್ರಾಬಲ್ಯವಿದೆಯೆಂದು ಪ್ರತ್ಯೇಕವಾಗಿ ಹೇಳಬೇಕೇನು? ಎಂಬುದಾಗಿ ಕೈಮುತ್ಯವನ್ನು ತೋರಿಸುತ್ತಿದೆ.

ವಿಷ್ಣುವಿನ ಲಿಂಗಗಳಿಗೆ ನಿರವಕಾಶತ್ವವನ್ನು ಹೇಳಿದ್ದರಿಂದ ಅಗ್ನಿಯ ಲಿಂಗಗಳಿಗೆ ಸಾವಕಾಶತ್ವವನ್ನು ಸೂಚಿಸಿದಂತಾಯಿತು. ಇದನ್ನು ಭಾಷ್ಯಾದಿಗಳಲ್ಲಿ ಹೇಳಿದ್ದಾರೆ. ಆದನ್ನೇ ಪ್ರಕೃತ ಗ್ರಂಥಕಾರರು 'नच' ಎಂಬ ವಾಕ್ಯದಿಂದ ವಿವರಿಸುತ್ತಿದ್ದಾರೆ.

प्रकाशः – अग्निपरोऽपीति । यथोक्तं न्यायविवरणटीकायां – ''अग्निः प्रसिद्ध एवास्तु, ''सोऽहमस्मि'' इत्यादि तु अन्तर्याम्यपेक्षया सावकाशम्'' इति । बाधकादिति । अमृतत्वादिबाधकादित्यर्थः ।

ಗ್ರಂಥದಲ್ಲಿ 'अग्निपरोऽपि' ಎಂಬುದಾಗಿ ಹೇಳಿದ್ದಾರೆ. ಇದನ್ನೇ ನ್ಯಾಯವಿವರಣೆಯ ಟೀಕೆಯಲ್ಲಿ ''अग्निः प्रसिद्ध एवास्तु, ''सोऽहमस्मि'' ಇತ್ಯಾದಿ ''तु अन्तर्याम्यपेक्षया सावकाशम्'' ಎಂದು ಹೇಳಿದ್ದಾರೆ. 'बाधकात्' ಎಂಬ ಪದಕ್ಕೆ ಅಮೃತತ್ವಾದಿ ಬಾಧಕಗಳಿರುವುದರಿಂದ ಎಂದರ್ಥ.

ಪ್ರಕಾಶಃ – ಶ್ರುತಿಗತಿಮುಕ್ತ್ವಾऽभ्यासगतिमाह – अभ्यासोऽपीति । ''अवधारणं चान्तर्यामिणो विशेषाभावमात्रप्रतिपादनार्थम्' इति अन्यत्र टीकायामुक्तरीत्याऽव-धारणगतिरपि ध्येया । उक्तं च तत्त्वप्रदीपे – ''अत्र चोक्तं छन्दोगोपनिषद्भाष्ये भगवतैव ''स एवाहमस्मि'' इत्यन्तर्यामिणोस्सर्वविशेषाभावाज्ञापनार्थम्'' इत्यादि ।

ಪೂರ್ವಪಕ್ಷಕ್ಕೆ ಆಧಾರವನ್ನಾಗಿ ಹೇಳಲ್ಪಟ್ಟ ಅಗ್ನಿಶ್ರುತಿಗೆ ಗತಿಯನ್ನು ಹೇಳಿ ಅಭ್ಯಾಸ ಪ್ರಮಾಣಕ್ಕೂ ಸಹ ಗತಿಯನ್ನು 'ಅಭ್ಯಾಸೋऽಪಿ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ''ಅವಧಾರಣಂ ಚಾಂತರ್ಯಾಮಿಣೋ ವಿಶೇಷಾಭಾವಮಾತ್ರಪ್ರತಿಪಾದನಾರ್ಥಮ್'' ಎಂಬುದಾಗಿ ಬೇರೆ ಟೀಕೆಯಲ್ಲಿ ಹೇಳಿದಂತೆ ಅವಧಾರಣಗತಿಯನ್ನೂ ಸಹ ತಿಳಿದುಕೊಳ್ಳಬೇಕು. ತತ್ತ್ವಪ್ರದೀಪದಲ್ಲಿಯೂ ಇದನ್ನೇ ಹೇಳಿದ್ದಾರೆ ''ಅತ್ರ ಚೋಕ್ತಂ'' ''ಸೋऽಹಮಸ್ಮಿ'' ಎಂಬ ಶ್ರುತಿಯನ್ನು ವ್ಯಾಖ್ಯಾನಿಸುವಾಗ ಛಾಂದ್ಯೋಗೋಪನಿಷತ್ತಿನ ಭಾಷ್ಯದಲ್ಲಿ 'ಸ ಏವಾಹಮಸ್ಮಿ' ಎಂಬುದಾಗಿ ಅಂತರ್ಯಾಮಿಗೆ ಸಕಲ ವಿಶೇಷಗಳ ಅಭಾವವನ್ನು ತಿಳಿಸುವುದಕ್ಕಾಗಿ ಎಂದು ಹೇಳಿದ್ದಾರೆ.

ಪ್ರಕಾಶಃ – ನನು ವಿದ್ಯಾಶಬ್ದಾಭ್ಯಾಸಸ್ಯ का गतिरित्यतः ''न चास्मद्विद्येत्युक्तिविरोधः'' इत्यादिटीकोक्तं प्रमेयं सङ्गृह्य विवृणोति – धर्म्यैक्येऽपीति । ''यदिदमस्मिन् ब्रह्मपुरे दहरं पुण्डरीकं वेश्म'' इति छान्दोग्यस्थदहरविद्या ब्रह्मपरेति दहरनये साधयिष्यते ।

ವಿದ್ಯಾ ಶಬ್ದದ ಅಭ್ಯಾಸಕ್ಕೆ ಏನು ಗತಿ? ಎಂಬ ಪ್ರಶ್ನೆಗೆ 'ನಚ ಅಸ್ಮದ್ವಿದ್ಯೇತ್ಯುಕ್ತಿವಿರೋಧಃ'' ''ಅಸ್ಮದ್ ವಿದ್ಯಾ'' ಎಂಬ ವಾಕ್ಯದಲ್ಲಿ ವಿರೋಧ ಬರುವುದಿಲ್ಲವೆಂಬ ಟೀಕೆಯಲ್ಲಿ ಹೇಳಿದ ಪ್ರಮೇಯವನ್ನು ಸಂಗ್ರಹಿಸಿ ವಿವರಿಸುತ್ತಿದ್ದಾರೆ ''ಧರ್ಮೈಕ್ಯೇಪಿ'' ಇತ್ಯಾದಿವಾಕ್ಯದಿಂದ. ''ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ'' ಎಂದು ಛಾಂದ್ಯೋಗ್ಯದಲ್ಲಿರುವ ದಹರವಿದ್ಯೆಯನ್ನು ಬ್ರಹ್ಮಪರವಾಗಿ ದಹರಾಧಿಕರಣದಲ್ಲಿ ಸಾಧಿಸುತ್ತಾರೆ.

ಪ್ರಕಾಶಃ – ''प्राणो वा आशाया भूयान्'' इति तत्रैव सप्तमगता प्राणविद्या भूमाधिकरणे ब्रह्मपरेति वक्ष्यते । ''अभिविमानमात्मानं वैश्वानरमुपास्ते'' इति तत्रैव पञ्चमस्था वैश्वानरविद्या वैश्वानरनये निर्णेष्यत इति ताः ब्रह्मपरा इति भावः । प्रकारेति । दहरं हृत्पद्मस्थत्वप्राणस्थत्वविश्वनरान्तरत्वादिप्रकारभेदादित्यर्थः ।

ಆದೇ ಛಾಂದೋಗ್ಯದ ಏಳನೇ ಅಧ್ಯಾಯದಲ್ಲಿ ''ಪ್ರಾಣೋ ವಾ ಆಶಾಯಾ ಭೂಯಾನ್'' ಎಂಬುದಾಗಿ ಪ್ರಾಣವಿದ್ಯೆಯನ್ನು ಬ್ರಹ್ಮಪರವೆಂದು ಭೂಮಾಧಿಕರಣದಲ್ಲಿ ಸಮರ್ಥಿಸುತ್ತಾರೆ. ''ಅಭಿವಿಮಾನಮಾತ್ಮಾನಂ

ವೈಶ್ವಾನರಮುಪಾಸ್ತೇ'' ಎಂಬುದಾಗಿ ಅದೇ ಛಾಂದೋಗ್ಯದ ಐದನೇ ಅಧ್ಯಾಯದಲ್ಲಿ ಬ್ರಹ್ಮಪರವೆಂದು ವೈಶ್ವಾನರಾಧಿಕರಣದಲ್ಲಿ ನಿರ್ಣಯಿಸುತ್ತಾರೆಂದು ತಿಳಿಯಬೇಕು. ಹೀಗೆ ಒಂದೇ ಬ್ರಹ್ಮವಿದ್ಯೆಯು ಪ್ರಕಾರ ಭೇದದಿಂದ ಬೇರೆ ಬೇರೆ ಹೆಸರನ್ನು ಹೊಂದಿದೆ. ಪ್ರಕಾರ ಭೇದವೆಂದರೆ ದಹರವೆನಿಸಿದ ಹೃತ್ಪದ್ಮಸ್ಥತ್ವ, ಪ್ರಾಣಸ್ತ್ವ, ಸಕಲ ಮನುಷ್ಯಾಂತರ್ಗತತ್ವ ಇತ್ಯಾದಿಯಾದ ಭೇದದಿಂದ ಎಂದರ್ಥ.

गुरुराजीयम् – मुख्यामुख्ययोर्मुख्ये सम्प्रत्यय इति न्यायेनाग्नेरमृतत्वादे-र्मुख्यत्वाभावेन विष्णोरेव तद्भावेन मुख्यस्यैव ग्रहणं युक्तं न त्वग्नेरित्यरुच्या पक्षान्तरमाह – उक्तार्थवादेति ।।

पूर्वपक्षीयाणि बाधकानि परिहर्तुमाह – न चेत्यादिना ।। नन्वभ्यासस्य पूर्वापराविरुद्धे स्वरसप्रतिपन्नेऽर्थे तात्पर्यार्थत्वेऽप्यग्नेरादित्यस्यत्वस्यापि पूर्वोत्तराविरुद्धत्वात्स्वरसप्रतिपन्नत्वाच्च न तात्पर्यार्थत्वमभ्यासस्यादेवेत्यत आह – अग्नेरिति ।।

नन्वस्मद्विद्याऽऽत्मविद्या चेति विद्याशब्दोऽभ्यस्यत इति विद्याभेदार्थं कं ब्रह्मेत्यादिकाऽऽत्मविद्या आदित्यस्यादिविद्या त्वग्निविद्येति स्वीकार्यतया चाग्नेरवादित्यस्थत्वेऽक्षिस्थत्वमपि तस्यैवेत्यत आह – धर्म्यैक्येऽपीति ।।

ಸಾರ

ಕಣ್ಣಿನಲ್ಲಿರುವವನು ಭಗವಂತನೇ ಹೊರತು ಅಗ್ನಿಯಲ್ಲ. ಪ್ರತಿಯೊಬ್ಬ ಪುರುಷರ ಎಡಗಣ್ಣಿನಲ್ಲಿ ಸ್ತ್ರೀಪ್ರೇರಕವಾದ ಭಗವಂತನ 'ವಾಮನಿ' ಎಂಬ ರೂಪವಿದೆ. ಬಲಗಣ್ಣಿನಲ್ಲಿ ಪುರುಷ ಪ್ರೇರಕವಾದ 'ಭಾಮನಿ' ಎಂಬ ರೂಪವಿದೆ. ಈ ರೂಪಗಳನ್ನು ಅಗ್ನಿ ಸ್ವರೂಪವೆಂದು ಹೇಳಲು ಸಾಧ್ಯವೇ ಇಲ್ಲ. ಹಾಗೇನಾದರೂ ಹೇಳಿದರೆ ಕಣ್ಣಿನ ಒಳಗಡೆ ಕುಳಿತಿರುವ ಅಗ್ನಿಯನ್ನು ಪ್ರೇರಣೆ ಮಾಡಲು ಅನೇಕ ಜೀವಿಗಳ ಪ್ರವಾಹವೇ ಹರಿಯಬೇಕಾಗುತ್ತದೆ.

ಅಗ್ನಿದೇವತೆಯು 'ಪರಿಹ್ಯೇನಂ ಮ್ರಿಯಂತೇ' ಎಂಬ ಶ್ರುತಿ ಹೇಳುವಂತೆ ಮರಣಶೀಲನಾಗಿದ್ದಾನೆ. 'ಭೀಷಾಸ್ಮಾತ್' ಎಂಬ ಶ್ರುತಿ ಹೇಳುವಂತೆ ಭಗವಂತನಿಗೆ ಹೆದರಿ ಪಲಾಯನ ಮಾಡುತ್ತಾನೆ. ಆದ್ದರಿಂದ ಅಮೃತತ್ವ ಉಭಯತ್ವಗಳೆಲ್ಲವೂ ಸಹ ವಿಷ್ಣುವಿನ ನಿರವಕಾಶಲಿಂಗಗಳೆಂದು ಸಾಬೀತಾಗುತ್ತದೆ.

'ಸೋऽಹಮಸ್ಮಿ' ಎಂದು ಉಪದೇಶಿಸಿದವನು ಅಂತರ್ಯಾಮಿಯೇ ಹೊರತು ಅಗ್ನಿಯಲ್ಲ. ಅಗ್ನಿ ಶಬ್ದದ ಅಭ್ಯಾಸವೂ ಸಹ ಅಗ್ನಿಗೆ ಪ್ರಚೋದಕವಲ್ಲ. ಹಿಂದಿನ ಮುಂದಿನ ವಾಕ್ಯಗಳೆಲ್ಲವೂ ವಿಷ್ಣುವನ್ನು ಬೆಂಬಲಿಸುತ್ತಿರುವಾಗ ಮಧ್ಯದಲ್ಲಿರುವ ಅಭ್ಯಾಸದ ಶಕ್ತಿ ಹೀನವಾಗುತ್ತದೆ.

'ಅಸದ್ವಿದ್ಯೆ' 'ಆತ್ಮವಿದ್ಯೆ' ಎಂಬ ವಿದ್ಯಾಭೇದದಿಂದ ಅಗ್ನಿಯು ಶ್ರುತಿಪ್ರತಿಪಾದ್ಯನೆಂಬ ಪೂರ್ವಪಕ್ಷದಲ್ಲಿ ಹುರುಳಿಲ್ಲ. ಏಕೆಂದರೆ ಒಬ್ಬನೇ ಬ್ರಹ್ಮನನ್ನು ವಿಷಯೀಕರಿಸುವ ವಿದ್ಯೆಗಳು ಪ್ರಕಾರಭೇದದಿಂದ ಅನೇಕ ಹೆಸರನ್ನು ಪಡೆಯಬಹುದು. ಬ್ರಹ್ಮವಿಷಯಕವಾದ ದಹರವಿದ್ಯೆ, ಪ್ರಾಣವಿದ್ಯೆ, ವೈಶ್ವಾನರವಿದ್ಯೆಗಳೇ ಇದಕ್ಕೆ ಉದಾಹರಣೆ.

• • • • •

ಪ್ರಥಮಸೂತ್ರದ ವಿನ್ಯಾಸದಲ್ಲಿ ಸ್ವಾರಸ್ಯ

ತಾತ್ಪರ್ಯಚನ್ದ್ರಿಕಾ

ಸೂತ್ರಕ್ರಮಸ್ತು – ಆಥೇ ಸೂತ್ರೇ ವಿಷಯವಾಕ್ಯಸ್ಯಶ್ರುತಿಲಿಙ್ಗೋಕ್ತಿಃ ।

ಅತ್ರ ಚಾನ್ತರುಪಪದಾದ್ರಮತೇಃ ''ಅಮನ್ತಾತ್ ಡಃ'' ಇತಿ ಡಪ್ರತ್ಯಯಾನ್ತೇನಾನ್ತರಶಬ್ದೇನಾನ್ತಸ್ಥಿತ್ವಾ ರಮಣಮುಚ್ಯತೇ, ನ ತ್ವನ್ತಃಸ್ಥಿತಿಮಾತ್ರಂ, ತಥಾತ್ವೇ ಹಿ ಲಾಘವಾಯ ಶ್ರುತ್ಯನುಗಮಾಯ ಚ ''ಅನ್ತಸ್ತದ್ಧರ್ಮ'' ಇತಿವತ್ 'ಅನ್ತಃ' ಇತ್ಯೇವಾವಕ್ಷ್ಯತ್, ನನ್ವನ್ತರ ಇತಿ । ಶ್ರುತೌ ಚಾತ್ಮಶಬ್ದೇನಾದೇಯಂ ಮಾತೀತಿ ವ್ಯುತ್ಪತ್ತ್ಯಾ ರಮಣಮುಚ್ಯತೇ । ತದುಕ್ತಮನುವ್ಯಾಖ್ಯಾನೇ –

ಅನ್ತಸ್ಥಿತ್ವಾ ರಮಣಕೃದನ್ತರಸ್ಸಮುದಾಹೃತಃ ।
ರಮಣಂ ಚಾತ್ಮಶಬ್ದೇನಾऽದೇಯಂ ಮಾತೀತಿ ಚೋಚ್ಯತೇ ।

ಇತಿ ।

ಅನುವಾದ - ಸೂತ್ರಗಳ ವಿನ್ಯಾಸಕ್ರಮವು ಹೀಗಿದೆ - ಪ್ರಥಮ ಸೂತ್ರದಲ್ಲಿ ವಿಷಯವಾಕ್ಯದಲ್ಲೇ ಇರುವ ಶ್ರುತಿಲಿಂಗಗಳನ್ನು ಪ್ರಮಾಣವನ್ನಾಗಿ ಹೇಳಿದ್ದಾರೆ. ಆದ್ದರಿಂದ ಮೊದಲು ಉಲ್ಲೇಖಿಸಿದ್ದು ಸಾರ್ಥಕವಾಗಿದೆ.

'ಅಂತರ ಉಪಪತ್ತೇಃ' ಎಂಬ ಸೂತ್ರದಲ್ಲಿ ವ್ಯಾಕರಣ ವಿಚಾರ ಹೀಗಿದೆ - 'ಅಂತಃ' ಎಂಬ ಉಪಪದದ ಮೇಲೆ 'ರಮು' ಧಾತುವಿಗೆ 'ಇಮಂತಾತ್ ಡಃ' ಎಂಬ ಸೂತ್ರದಿಂದ 'ಡ' ಪ್ರತ್ಯಯವು ಬಂದಿದೆ. 'ಡ' ಪ್ರತ್ಯಯದಲ್ಲಿ ಅಕಾರ ಮಾತ್ರ ಉಳಿದಾಗ 'ಅಂತರ' ಎಂಬ ರೂಪವು ನಿಷ್ಪನ್ನವಾಗುತ್ತದೆ. ಇದರಿಂದ ಅಂತರ್ಯಾಮಿಯಾಗಿದ್ದು 'ರಮಣ' ಮಾಡುತ್ತಾನೆಂಬ ಅರ್ಥವು ತಿಳಿಯುತ್ತದೆ. ಹೊರತು ಕೇವಲ ಒಳಗಡೆ ಇದ್ದಾನೆಂದು ತಿಳಿಯುವುದಿಲ್ಲ. ಒಳಗಡೆ ಇದ್ದಾನೆಂಬರ್ಥವನ್ನಷ್ಟೇ ವಿವಕ್ಷಿಸುವುದಾದರೆ ಲಾಘವಕ್ಕಾಗಿ ಮತ್ತು ಶ್ರುತ್ಯನುಗಮಕ್ಕಾಗಿ 'ಅಂತಃ' ಎಂದಷ್ಟೇ ಸೂತ್ರಕಾರರು ಹೇಳುತ್ತಿದ್ದರು. 'ಅಂತಸ್ತದ್ಧರ್ಮೋಪದೇಶಾತ್' ಎಂಬ ಸೂತ್ರದಲ್ಲಿ 'ಅಂತರ್ಯಾಮಿ' ಎಂಬರ್ಥದಲ್ಲಿ ಕೇವಲ

'ಅಂತಃ' ಎಂದು ಹೇಳಿದಂತೆ ಇಲ್ಲಿಯೂ ಹೇಳಬೇಕಿತ್ತು. ಹೊರತು 'ಅಂತರಃ' ಎಂದು ಹೇಳಬೇಕಾಗಿರಲಿಲ್ಲ.

ಶ್ರುತಿಯಲ್ಲಿರುವ 'ಆತ್ಮ' ಶಬ್ದಕ್ಕೆ 'ಆದೇಯಂ ಮಾತಿ' (ಶುಭವಾದ್ದನ್ನು ಅನುಭವಿಸುತ್ತಾನೆ.) ಎಂಬ ವ್ಯುತ್ಪತ್ತಿಯನ್ನು ವಿವಕ್ಷಿಸಿದಾಗ 'ರಮಣ' ಎಂಬರ್ಥವು ಆತ್ಮಶಬ್ದದಿಂದಲೇ ತಿಳಿಯುತ್ತದೆ. ಇದನ್ನೇ ಅನುವ್ಯಾಖ್ಯಾನದಲ್ಲಿ

''ಅಂತಸ್ಸ್ಥಾತ್ವಾರಮಣಕೃದಂತರಸ್ಸಮುದಾಹೃತಃ।
ರಮಣಂ ಚಾತ್ಮಶಬ್ದೇನಾದೇಯಂ ಮಾತೀತಿ ಚೋಚ್ಯತೇ।''

ಅಂತರ್ಯಾಮಿಯಾಗಿದ್ದು ರಮಿಸುವ ಕಾರಣ 'ಅಂತರ' ಎಂದು ಹೇಳಿದ್ದಾರೆ. 'ಆದೇಯಂ ಮಾತಿ' ಎಂಬ ವ್ಯುತ್ಪತ್ತಿಯಿಂದ ಶ್ರುತಿಯಲ್ಲಿರುವ 'ಆತ್ಮ' ಶಬ್ದವು 'ರಮಣ' ಎಂಬರ್ಥವನ್ನು ಹೇಳುತ್ತಿದೆ ಎಂದು.

ಪ್ರಕಾಶಃ –

ಶ್ರುತೀತಿ । ''ಆತ್ಮೇತಿ ಹೋವಾಚ'' ಇತ್ಯಾತ್ಮಶ್ರುತಿಃ । ''ಏತದ್ಬ್ರಹ್ಮ'' ಇತಿ ಬ್ರಹ್ಮಶ್ರುತಿಃ । ಅಮೃತತ್ವಾಭಯತ್ವರೂಪೇ ಲಿಙ್ಗೇ ।

ವಿವರಣೆ - ಪೂರ್ವಪಕ್ಷ ಹಾಗೂ ಸಿದ್ಧಾಂತಗಳನ್ನು ಜೋಡಿಸಿದ್ದಾಯಿತು. ಪ್ರಕೃತ ಸೂತ್ರದಲ್ಲಿರುವ ಸ್ವಾರಸ್ಯವನ್ನು ತೋರಿಸುತ್ತಿದ್ದಾರೆ.

ಶ್ರುತಿಲಿಂಗೋಕ್ತಿ ಎಂಬಲ್ಲಿರುವ ಶ್ರುತಿಶಬ್ದದಿಂದ ''ಆತ್ಮೇತಿ ಹೋವಾಚ'' ಎಂಬ ಆತ್ಮಶ್ರುತಿಯನ್ನು ''ಏತದ್ಬ್ರಹ್ಮ'' ಎಂಬಲ್ಲಿರುವ ಬ್ರಹ್ಮಶ್ರುತಿಯನ್ನು ವಿವಕ್ಷಿಸಬೇಕು. ಲಿಂಗ ಶಬ್ದದಿಂದ ಅಮೃತತ್ವ ಅಭಯತ್ವರೂಪವಾದ ಎರಡು ಲಿಂಗಗಳನ್ನು ವಿವಕ್ಷಿಸಬೇಕು.

ಪ್ರಕಾಶಃ – ನನ್ವತ್ರ ''ಅನ್ತಸ್ತದ್ಧರ್ಮೋಪದೇಶಾತ್'' ಇತಿವತ್ ''ಅನ್ತರುಪಪತ್ತೇಃ'' ಇತ್ಯೇವ ವಾಚ್ಯಂ, ನ ತ್ವ 'ಅನ್ತರಃ' ಇತ್ಯತ ಆಹ – ಅತ್ರ ಚೇತಿ ।

'ನನ್ವತ್ರ' ಎಂಬಲ್ಲಿ 'ಅಂತಸ್ತದ್ಧರ್ಮೋಪದೇಶಾತ್' ಎಂಬ ಸೂತ್ರದಂತೆ 'ಅಂತರುಪಪತ್ತೇಃ' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು. 'ಅಂತರ್ಯಾಮಿ' ಎಂಬರ್ಥದಲ್ಲಿ 'ಅಂತರಃ' ಎಂಬ ಪದವನ್ನು ಹೇಳಿದ್ದು ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ 'ಅತ್ರಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಯದ್ಯಪಿತ್ರ ಕ್ರಿಯಾಭಾವಲಿಙ್ಗಮುಚ್ಯತ ಇತ್ಯುಕ್ತಮಪ್ಯಯುಕ್ತಂ, ಸೂತ್ರೇ ಭಾವಸ್ಯೈವ ಪ್ರತೀತ್ಯಾ ಕ್ರಿಯಾಯಾ ಅಪ್ರತೀತೇರಿತ್ಯತ ಆಹ – ಅತ್ರ ಚೇತಿ ।

ಅಥವಾ ಭಾಷ್ಯಕಾರರು ವಿಷಯಮಾಲೆಯಲ್ಲಿ ಹೇಳಿದ ಪ್ರಕಾರ ಈ ಅಧಿಕರಣವು ಕ್ರಿಯಾರೂಪವಾದ ಹಾಗೂ ಭಾವರೂಪವಾದ ಲಿಂಗವನ್ನು ಸಮನ್ವಯ ಮಾಡುತ್ತಿದೆ. ಆದರೆ ಸೂತ್ರವನ್ನು ನೋಡಿದಾಗ ಅಂತರ್ಯಾಮಿತ್ವವೆಂಬ ಭಾವರೂಪವಾದ ಲಿಂಗದ ಸಮನ್ವಯವೇ ಕಾಣಿಸುತ್ತಿದೆ ಹೊರತು ಕ್ರಿಯಾರೂಪವಾದ ಲಿಂಗದ ಸಮನ್ವಯವು ಕಾಣಿಸುತ್ತಿಲ್ಲ. ಆದ್ದರಿಂದ ಕ್ರಿಯಾರೂಪವಾದ ಮತ್ತು ಭಾವರೂಪವಾದ ಲಿಂಗವನ್ನು ಸಮನ್ವಯ ಮಾಡುತ್ತಿದ್ದಾರೆಂಬ ಭಾಷ್ಯಕಾರರ ಮಾತು ತಪ್ಪಾಯಿತಲ್ಲವೇ? ಎಂಬ ಪ್ರಶ್ನೆಗೆ 'ಅತ್ರಚ' ಎಂಬ ಮಾತಿನಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ''ರಮ್ಲೀಡಾಯಾಂ'' ಇತ್ಯಸ್ಮಾನ್ನಶಬ್ದ ಉಪಪದೇ ಸತಿ ಞಮನ್ತತ್ವಾತ್ ಞಮನ್ತಾಡ್ಡಃ'' ಇತಿ ಉಣಾದಿಸೂತ್ರೇಣ ಡಪ್ರತ್ಯಯೇ ಕೃತೇ ಡಿತ್ತ್ವಾದಭಸ್ಯಾಪಿ ಟೇರ್ಲೋಪಿ ''ಉಣಾದಯೋ ಬಹುಲಮ್'' ಇತ್ಯುಪಪದಾನ್ತ್ಯಲೋಪೇ ದೀರ್ಘಾಭಾವೇ ಚ 'ಅನ್ತರಃ' ಇತಿ ಭವತಿ । 'ಞಮ್' ಇತಿ ಪ್ರತ್ಯಾಹಾರಃ ।

ನನು ''ಞಮನ್ತಾಡ್ಡಃ'' ಇತ್ಯತ್ರ ವೃತ್ತೌ ''ಡಕಾರ 'ಇತ್' ಸಂಜ್ಞಾ ಪ್ರಾಪ್ತಾ ಬಹುಲವಚನಾನ್ನ ಭವತಿ, ರಮ್ಯತೇ ರಮಯತೇ ವಾ ರಣ್ಡಾ ಪುನರ್ಮೂಃ'' ಇತ್ಯುಕ್ತಮ್ । ತಥಾऽಪ್ಯುಣಾದೇರ್ಯಥಾಪ್ರಯೋಗಂ ವರ್ಣನೀಯತ್ವೇನ ದಣ್ಡಮಣ್ಡರಣ್ಡಾದಿಪ್ರಯೋಗನಿರ್ವಾಹಾಯೇತ್ಸಂಜ್ಞಾ ನೇತ್ಯುಕ್ತಾವಪಿ 'ಅನ್ತರಃ' ಇತ್ಯಾದಿನಿರ್ವಾಹಾಯೇತ್ಸಂಜ್ಞಾ ಉತ್ಸರ್ಗಪ್ರಾಪ್ತಾ ಭವತ್ಯೇವೇತಿ ಭಾವಃ ।

'ಅಂತರಃ' ಎಂಬ ಪದವು ಹೇಗೆ ನಿಷ್ಪನ್ನವಾಯಿತೆಂಬುದನ್ನು ಸ್ಪಷ್ಟವಾಗಿ ಹೀಗೆ ತಿಳಿಯಬೇಕು - 'ರಮು ಕ್ರೀಡಾಯಾಂ' ಎಂಬ ಧಾತುವಿಗೆ 'ಅಂತರ್' ಎಂಬ ಉಪಪದವು ಸೇರಿದಾಗ 'ಞಮಂತಾಡ್ಡಃ'' ಎಂಬ 'ಉಣಾದಿ' ಸೂತ್ರದಿಂದ 'ಡ' ಪ್ರತ್ಯಯ ಬರುತ್ತದೆ. ಅನಂತರ ''ಚುಟೂ'' ಎಂಬ ಸೂತ್ರದಿಂದ 'ಡ' ಕಾರಕ್ಕೆ 'ಇತ್' ಸಂಜ್ಞೆ ಬಂದರೆ 'ಅ' ಕಾರವಷ್ಟೇ ಉಳಿಯುತ್ತದೆ. ಹೀಗಿರುವಾಗ 'ಡಿತ್ವಸಾಮರ್ಥ್ಯಾದಭಸ್ಯಾಪಿ ಟೇರ್ಲೋಪಃ' ಎಂಬಂತೆ 'ಟ' ಸಂಜ್ಞೆಯನ್ನು ಹೊಂದಿರುವ 'ಅಮ್' ಎಂಬುದಕ್ಕೆ ಲೋಪವು ಪ್ರಾಪ್ತವಾಗುತ್ತದೆ. ಆವಾಗ 'ರಮ್' ಧಾತುವಿನಲ್ಲಿ ಕೇವಲ 'ರ್' ಎಂದಷ್ಟೇ ಉಳಿಯುತ್ತದೆ. ಮುಂದಿರುವ 'ಡ' ಪ್ರತ್ಯಯದಲ್ಲಿ ಅಕಾರ ಮಾತ್ರ ಉಳಿದಿರುತ್ತದೆ. ಎರಡನ್ನು ಉಪಸರ್ಗದ ಜೊತೆ ಸೇರಿಸಿದಾಗ 'ಅಂತರ' ಎಂಬ ರೂಪವು ನಿಷ್ಪನ್ನವಾಗುತ್ತದೆ. 'ಞಮಂತಾಡ್ಡಃ' ಎಂಬ ಸೂತ್ರದಲ್ಲಿರುವ 'ಞಮ್' ಎಂಬುದು 'ಞಮಜಣನಮ್' ಎಂಬುದರ ಪ್ರತ್ಯಾಹಾರ ರೂಪವಾಗಿದೆ.

ಪ್ರಶ್ನೆ - 'ಅಂತರ್' ಎಂಬ ಉಪಪದಕ್ಕೆ 'ರ' ಎಂಬ 'ಡ' ಪ್ರತ್ಯಯಾಂತವಾದ ಧಾತು ಸೇರಿದಾಗ ದೀರ್ಘ ರೇಫ ಬರಬೇಕು. ಏಕೆಂದರೆ 'ರೋರಿ' ಎಂಬ ಸೂತ್ರ ಮುಂದಿರುವಾಗ ಹಿಂದಿನ ರೇಫಕ್ಕೆ ಲೋಪ ಬರುತ್ತದೆಂದು ಹೇಳಿದೆ. ಅನಂತರ 'ಢ್ರಲೋಪೇ ಪೂರ್ವಸ್ಯ ದೀರ್ಘೋऽಣಃ' ಎಂಬ ಸೂತ್ರದಿಂದ ರೇಫಲೋಪ ನಿಮಿತ್ತಕವಾಗಿ ಹಿಂದಿರುವ ಅಣಕ್ಷರಕ್ಕೆ ದೀರ್ಘವು ಬರುತ್ತದೆ. ಆವಾಗ 'ತ' ಕಾರಕ್ಕೆ ದೀರ್ಘ ಬಂದರೆ ''ಅಂತಾರ'' ಎಂದಾಗುತ್ತದೆ. ಹೀಗಿರುವಾಗ 'ಅಂತರ' ಎಂಬ ಪ್ರಯೋಗವು ತಪ್ಪಾಗುತ್ತದಲ್ಲವೇ?

ಉತ್ತರ – 'ರೋರಿ' ಎಂಬ ಸೂತ್ರದಿಂದ ಇಲ್ಲ 'ರೇಫ' ಲೋಪವಾಗುತ್ತಿಲ್ಲ ಹೊರತಾಗಿ 'ಉಣಾದಯೋ ಬಹುಲಮ್' ಎಂಬ ಸೂತ್ರದಿಂದ ಲೋಪ ಬರುತ್ತದೆ. ಒಂದು ವೇಳೆ ರೇಫನಿಮಿತ್ತಕವಾದ ರೇಫಕ್ಕೆ ಲೋಪವು ಬಂದಿದ್ದರೆ ಮಾತ್ರ ದೀರ್ಘವು ಪ್ರಾಪ್ತವಾಗುತ್ತಿತ್ತು. ಆದರೆ ಬಹುಲಗ್ರಹಣನಿಮಿತ್ತಕವಾಗಿ ಲೋಪಪ್ರಾಪ್ತವಾಗಿವುದರಿಂದ ದೀರ್ಘವು ಬರುವುದಿಲ್ಲವೆಂದು ತಿಳಿಯಬೇಕು.

ಪ್ರಶ್ನೆ – 'ರಮ್' ಎಂಬ ಧಾತುವಿಗೆ 'ಇಮಂತಾಡ್ಡಃ' ಎಂಬ ಸೂತ್ರದಿಂದ 'ಡ' ಪ್ರತ್ಯಯವು ಬರುತ್ತದೆ. ಆವಾಗ 'ಚುಟೂ' ಎಂಬ ಸೂತ್ರದಿಂದ ಡಕಾರಕ್ಕೆ 'ಇತ್' ಸಂಜ್ಞೆ ಬಂದರೆ ಮಾತ್ರ ಹಿಂದಿನ 'ಟ' ಸಂಜ್ಞೆಗೆ ಲೋಪ ಬರಲು ಸಾಧ್ಯ. ಆದರೆ 'ಚುಟೂ' ಎಂಬ ಸೂತ್ರದಿಂದ ಇಲ್ಲಿ 'ಡ'ಕಾರಕ್ಕೆ 'ಇತ್' ಸಂಜ್ಞೆ ಬರುವುದಿಲ್ಲ. ಆದ್ದರಿಂದಲೇ ಸೂತ್ರದಲ್ಲಿ 'ಬಹುಲಮ್' ಎಂಬ ಪದವನ್ನು ಪ್ರಯೋಗಿಸದ್ದಾರೆ. 'ಚುಟೂ' ಎಂಬ ಸೂತ್ರದ ನ್ಯಾಯವು ಔತ್ಸರ್ಗಿಕವಾದ್ದರಿಂದ ಎಲ್ಲೆಡೆ ಪ್ರಾಪ್ತವಾದರೂ ಪ್ರಕೃತದಲ್ಲಿ ಬಹುಲ ಶಬ್ದದ ಪ್ರಯೋಗವೆಂಬ ಬಾಧಕವಿರುವುದರಿಂದ ಪ್ರಾಪ್ತವಾಗುವುದಿಲ್ಲ. ಉದಾಹರಣೆ - 'ರಂಡಾ' ಎಂಬಲ್ಲಿ 'ರಮು' ಧಾತುವಿಗೆ 'ಡ' ಪ್ರತ್ಯಯವು ಬಂದಿದೆ. (ವಿಧವೆಯಾಗಿದ್ದರೂ ಮತ್ತೊಬ್ಬ ಪುರುಷನಿಂದ ಸುಖಪಡುತ್ತಾಳೆ ಮತ್ತು ಸುಖಪಡಿಸುತ್ತಾಳಾದ್ದರಿಂದ 'ರಂಡಾ' ಎನಿಸಿದ್ದಾಳೆ.) ವಸ್ತುತಃ ಇಲ್ಲಿಯೂ ಸಹ 'ರಮು' ಧಾತುವಿಗೆ 'ಇಮಂತಾಡ್ಡಃ' ಎಂಬ ಸೂತ್ರದಿಂದಲೇ 'ಡ' ಪ್ರತ್ಯಯವು ಪ್ರಾಪ್ತವಾಗಿದ್ದರೂ ವೃತ್ತಿಕಾರನೇ ಸ್ವತಃ ''ಡಕಾರಸ್ಯೇತ್ಸಂಜ್ಞಾ ಪ್ರಾಪ್ತಾ ಬಹುಲವಚನಾನ್ನ ಭವತಿ, ರಮ್ಯತೇ ರಮಯತೇ ವಾ ರಂಡಾ ಪುರ್ನಭೂಃ'' ಎಂದು ಹೇಳಿದ್ದಾರೆ. ಆದರಂತೆ ಪ್ರಕೃತದಲ್ಲಿಯೂ 'ಡ' ಪ್ರತ್ಯಯಕ್ಕೆ ಲೋಪವನ್ನು ಹೇಳಲು ಸಾಧ್ಯವಿರುವುದಿಲ್ಲವಲ್ಲವೇ?

ಉತ್ತರ – 'ಉಣಾದಿ' ಪ್ರತ್ಯಯಗಳನ್ನು ಪ್ರಯೋಗಕ್ಕೆ ಅನುಸಾರಿಯಾಗಿ ನಿರ್ವಹಿಸಬೇಕು. 'ದಂಡ', 'ಮಂಡ' 'ರಂಡ' ಮೊದಲಾದ ಪ್ರಯೋಗಗಳನ್ನು ನಿರ್ವಹಿಸುವುದಕ್ಕಾಗಿ 'ಡ' ಪ್ರತ್ಯಯಕ್ಕೆ ಅಲ್ಲಿ 'ಇತ್' ಸಂಜ್ಞೆಯನ್ನು ಹೇಳಿಲ್ಲ. ಆದರೆ ಪ್ರಕೃತ 'ಅಂತರ' ಎಂಬ ಪ್ರಯೋಗವನ್ನು ನಿರ್ವಹಿಸುವುದಕ್ಕಾಗಿ ನಾವು 'ಡ' ಪ್ರತ್ಯಯಕ್ಕೆ ಲೋಪವನ್ನು ಹೇಳುತ್ತೇವೆ. ಹೀಗೆ ಹೇಳುವುದು ತಪ್ಪಲ್ಲ.

ಪ್ರಕಾಶಃ – ಯದ್ವಾ – ಆಖ್ಯಸ್ಯ ತೃತೀಯೆ 'ವಿಖ್ಯಾಚುಞ್ಚುಃ' ಇತ್ಯಾದಿಸಿದ್ಧಯೇ ''ಷಃಪ್ರತ್ಯಯಸ್ಯ'' ''ಚುಟೂ'' ಇತಿ ಯೋಗವಿಭಾಗಕರಣಂ ''ಚುಟೂ'' ಇತ್ಯಸ್ಯಾನಿತ್ಯತ್ವಜ್ಞಾಪನಾರ್ಥಮಿತಿ ವೃತ್ತ್ಯಾದಾವುಕ್ತತ್ವೇನ 'ರಂಡಾ' 'ದಂಡಃ' ಇತ್ಯಾದೌ ಅಭಾವೇऽಪಿ ಕ್ವಚಿದಿತ್ಸಂಜ್ಞಾ ಭವತ್ಯೇವ ।

ಅಥವಾ ಮತ್ತೊಂದು ಬಗೆಯಲ್ಲಿ 'ಅಂತರಃ' ಎಂಬ ಪ್ರಯೋಗವನ್ನೂ ಉಪಪಾದಿಸಬಹುದು - ಮೊದಲನೇ ಅಧ್ಯಾಯದ ಮೂರನೇ ಪಾದದಲ್ಲಿ 'ವಿದ್ಯಾಚುಂಚುಃ' ಎಂಬ ಪ್ರಯೋಗವನ್ನು ಹೀಗೆ ನಿಷ್ಪನ್ನ ಮಾಡಿದ್ದಾರೆ - 'ಷಃ ಪ್ರತ್ಯಯಸ್ಯ' ಎಂಬ ಸೂತ್ರದಲ್ಲಿ ಯಾವುದೇ ಪ್ರತ್ಯಯದಲ್ಲಿರುವ 'ಷ' ಕಾರಕ್ಕೆ 'ಇತ್ ಸಂಜ್ಞೆ' ಹೇಳಿದ್ದಾರೆ. ಅನಂತರ 'ಚುಟೂ' ಎಂಬ ಸೂತ್ರದಲ್ಲಿ ಯಾವುದೇ ಪ್ರತ್ಯಯದ ಆದಿಯಲ್ಲಿರುವ 'ಚ ವರ್ಗಕ್ಕೂ 'ಟ' ವರ್ಗಕ್ಕೂ 'ಇತ್' ಸಂಜ್ಞೆ ಬರುತ್ತದೆಂದು ಹೇಳಿದ್ದಾರೆ.

ವಸ್ತುತಃ 'ಷಃ ಪ್ರತ್ಯಯಸ್ಯ' ಮತ್ತು 'ಚುಟೂ' ಎಂಬೆರಡು ಸೂತ್ರಗಳನ್ನು ಒಂದೇ ಸೂತ್ರವನ್ನಾಗಿ ಮಾಡಬಹುದಿತ್ತು. ಆದರೂ ಸಹ 'ಚುಟೂ' ಎಂಬ ಸೂತ್ರವನ್ನು ಯೋಗ ವಿಭಾಗ ಮಾಡಿದ್ದರಿಂದ ಒಂದು ಪ್ರಯೋಜನವನ್ನು ತಿಳಿಸಿದ್ದಾನೆ. ಏನೆಂದರೆ 'ಚುಟೂ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ 'ಇತ್' ಸಂಜ್ಞೆಯು ಅನಿತ್ಯವಾಗಿದೆಯೆಂದು.

ಹೀಗೆ ಅನಿತ್ಯತ್ವವನ್ನು ತಿಳಿಸಿದ್ದರಿಂದ 'ವಿದ್ಯಾಚುಂಚುಃ' ಎಂಬ ಪ್ರಯೋಗವು ಸಿದ್ಧವಾಗುತ್ತದೆ. (ಪ್ರಸಿದ್ಧಾರ್ಥದಲ್ಲಿ 'ಚುಂಚು' ಪ್ರತ್ಯಯ ಬರುವುದರಿಂದ 'ವಿದ್ಯಾಚುಂಚುಃ' ಎಂಬ ಪದಕ್ಕೆ ವಿದ್ಯೆಯಿಂದ ಪ್ರಸಿದ್ಧನಾದವನೆಂದರ್ಥ.) 'ವಿದ್ಯಾ' ಶಬ್ದದ ಮೇಲೆ 'ಚುಂಚು' ಪ್ರತ್ಯಯ ಬರುತ್ತದೆ. ಈ ಪ್ರತ್ಯಯದ ಆದಿಯಲ್ಲಿ 'ಚ'ಕಾರವಿರುವುದರಿಂದ 'ಚುಟೂ' ಎಂಬ ಸೂತ್ರದಿಂದ 'ಚ'ಕಾರವು ಲೋಪವಾಗಬೇಕಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಈಗಾಗಲೇ ಹೇಳಿದಂತೆ 'ಚುಟೂ' ಎಂಬ ಸೂತ್ರ ಅನಿತ್ಯವಾದ್ದರಿಂದ 'ಚುಂಚು' ಎಂಬಲ್ಲಿರುವ 'ಚ'ಕಾರಕ್ಕೆ ಲೋಪ ಬರುವುದಿಲ್ಲ.

ಆದ್ದರಿಂದ 'ರಂಡಾ', 'ದಂಡಃ' ಇತ್ಯಾದಿಗಳಲ್ಲಿ 'ಇತ್' ಸಂಜ್ಞೆ ಬಾರದಿದ್ದರೂ ಕೆಲವೆಡೆ ಬರುತ್ತದೆಂದು ತಿಳಿಯಬೇಕು. ಪ್ರಕೃತ 'ಡ' ಪ್ರತ್ಯಯದಲ್ಲಿರುವ 'ಡ' ಕಾರಕ್ಕೆ ಲೋಪ ಬರುವುದರಿಂದ 'ಅಂತರಃ' ಎಂಬ ರೂಪವು ನಿಷ್ಪನ್ನವಾಗುತ್ತದೆ.

प्रकाशः – ननु श्रुत्यनुक्तं कथं सूत्र्यत इत्यत आह – श्रुतौ चेति । आङ्पूर्वाद्दातेर्मन्यतेश्च किपि सति आदेयमुपादेयं सुखं सुखसाधनं वा माति अनुभवति इति सुधोक्तनिर्वचनेनेत्यर्थः । इति चेति । न केवलं सूत्रे, श्रुतौ चेत्यर्थः ।

ಶ್ರುತಿಯಲ್ಲಿ ಹೇಳದ ರಮಣವನ್ನು ಸೂತ್ರದಲ್ಲಿ ಹೇಗೆ ಹೇಳಿದ್ದಾರೆ? ಎಂಬ ಪ್ರಶ್ನೆಗೆ 'ಶ್ರುತೌಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

'ಆಪ್' ಎಂಬ ಉಪಸರ್ಗದ ಮುಂದೆ 'ದಾ' ಧಾತು ಹಾಗೂ 'ಮಾ' ಧಾತುಗಳಿದ್ದಾಗ 'ಕೃತ್' ಪ್ರತ್ಯಯ ಬರುತ್ತದೆ. 'ಕೃತ್' ಪ್ರತ್ಯಯವು ಮುಂದಿದ್ದಾಗ ಹಿಂದಿರುವ ಆಕಾರಕ್ಕೆ ಲೋಪ ಬಂದು 'ಆದ್ಮನ್' ಎಂದಾಗುತ್ತದೆ. ನಿರ್ವಚನ ಪ್ರಯುಕ್ತವಾಗಿ 'ದ' ಕಾರಕ್ಕೆ ತಕಾರ ಬಂದಾಗ 'ಆತ್ಮನ್' ಎಂದಾಗಿದೆ. ಆದ್ದರಿಂದ ''ಆದೇಯಮುಪಾದೇಯಂ ಸುಖಂ ಸುಖಸಾಧನಂ ವಾ ಮಾತಿ ಅನುಭವತಿ'' ಶುಭವಾಗಿರುವ ಸುಖಸಾಧನವನ್ನು ಅನುಭವಿಸುತ್ತಾನೆಂಬ ನಿರ್ವಚನದಂತೆ ಆತ್ಮಶಬ್ದದಿಂದ ''ರಮಣ'' ಎಂಬ ಗುಣವನ್ನು ಹೇಳಿದಂತಾಗುತ್ತದೆ. ಆತ್ಮಶಬ್ದದ ಈ ನಿರ್ವಚನವು ಸುಧೆಯಲ್ಲಿ ಹೇಳಲ್ಪಟ್ಟಿದೆ.

ಶ್ಲೋಕದಲ್ಲಿರುವ 'ಇತಿಚ' ಎಂಬ ಪದಕ್ಕೆ ಕೇವಲ ಸೂತ್ರದಲ್ಲಷ್ಟೇ ಅಲ್ಲ ಶ್ರುತಿಯಲ್ಲೂ ಸಹ ರಮಣವನ್ನು ಹೇಳಿದ್ದಾರೆಂದರ್ಥ.

ಪ್ರಕಾಶಃ – ನನ್ವೇವಂ ಸೂತ್ರೇ 'ಅನ್ತರಃ' ಇತ್ಯಸ್ಯ ಚಕ್ಷುರನ್ತಸ್ಥ್ಯ ಆತ್ಮೇತ್ಯರ್ಥತಯಾ ಆತ್ಮಶಬ್ದಸ್ಯ ಪ್ರತಿಜ್ಞಾಭಾಗಪ್ರವಿಷ್ಟತ್ವಾತ್ ಕಥಮಾತ್ಮಶ್ರುತಿತ್ವೇನ ಹೇತ್ವಕರಣಂ, ಮೈವಂ, ಅನ್ತಸ್ಥತ್ವಮಾತ್ರಸ್ಯೈವ ಸಾಧ್ಯತಾವಿವಕ್ಷಾಯಾಂ ಆತ್ಮಶ್ರುತೇರ್ಹೇತುತ್ವಸ್ಯಾಭಿಮತತ್ವಾತ್ ।

ಪ್ರಶ್ನೆ - ಸೂತ್ರದಲ್ಲಿರುವ 'ಆಂತರ' ಎಂಬ ಪದಕ್ಕೆ ಚಕ್ಷುರಂತರ್ಗತನಾದ ಆತ್ಮನೆಂಬರ್ಥವನ್ನು ಹೇಳಿದಿರಿ. ಆದ್ದರಿಂದ 'ಆತ್ಮ' ಎಂಬ ಶಬ್ದವು ಪ್ರತಿಜ್ಞೆಯಲ್ಲಿ ಸೇರಿದಂತಾಯಿತು. ಪುನಃ ಆತ್ಮ ಶ್ರುತಿಯನ್ನು ಹೇತುವೆಂದು ಹೇಗೆ ಹೇಳುತ್ತೀರಿ?

ಉತ್ತರ - ಪ್ರತಿಜ್ಞಾ ಭಾಗದಲ್ಲಿ ಆತ್ಮಶಬ್ದವನ್ನು ಸೇರಿಸಿಲ್ಲ. ಕೇವಲ ಅಂತಸ್ಥತ್ವವನ್ನಷ್ಟೇ ವಿವಕ್ಷಿಸಲಾಗಿದೆ. ಆದ್ದರಿಂದ ಆತ್ಮಶ್ರುತಿಯನ್ನು ಹೇತುವನ್ನಾಗಿ ವಿವಕ್ಷಿಸಬಹುದು.

ಪ್ರಕಾಶಃ – ಅತ ಏವ ಭಾಷ್ಯೇ ''ಚಕ್ಷುರನ್ತಸ್ಥೋ ವಿಷ್ಣುರೇವ'' ಇತ್ಯೇವೋಕ್ತ್ವಾ ''ಬ್ರಹ್ಮಶಬ್ದಾದ್ಯುಪಪತ್ತೇಶ್ಚ'' ಇತ್ಯುಕ್ತಮ್, ನ್ಯಾಯವಿವರಣಟೀಕಾಯಾಂ ಚ ''ಚಕ್ಷುರನ್ತಸ್ಥೋ ಹರಿರೇವ ಅಮೃತತ್ವಾಭಯತ್ವೋಪಪತ್ತೇರಾತ್ಮಾದಿಶಬ್ದಾತ್'' ಇತ್ಯುಕ್ತಮ್, ಸೂತ್ರೇ ಚಾಮೃತತ್ವಾಭಯತ್ವರೂಪ-ನಿರವಕಾಶೋಪಪತ್ತೇರೇವೋಕ್ತಿಃ, ಅತ್ರ ಟೀಕಾಯಾಂ ''ಚಕ್ಷುರನ್ತರಃ'' ಇತಿ ಸಾಮಾನ್ಯೋಕ್ತಿಃ ।

ಆದ್ದರಿಂದಲೇ ಭಾಷ್ಯದಲ್ಲಿ 'ಚಕ್ಷುರಂತಸ್ಥಃ ವಿಷ್ಣುಃ' ಚಕ್ಷುರಂತಸ್ಥನಾದವನು ವಿಷ್ಣುವೆಂದಷ್ಟೇ ಹೇಳಿದ್ದಾರೆ. ಮತ್ತು 'ಬ್ರಹ್ಮಶಬ್ದಾದ್ಯುಪಪತ್ತೇಶ್ಚ' ಬ್ರಹ್ಮಶಬ್ದ ಆತ್ಮಶಬ್ದಗಳನ್ನು ಲಿಂಗಗಳೆಂದು ಹೇಳಿದ್ದಾರೆ. ನ್ಯಾಯವಿವರಣದ ಟೀಕೆಯಲ್ಲಿಯೂ ''ಚಕ್ಷುರಂತಸ್ಥೋ ಹರಿರೇವ ಅಮೃತತ್ವಾಭಯತ್ವೋಪಪತ್ತೇರಾತ್ಮಾದಿಶಬ್ದಾತ್' 'ಚಕ್ಷುರಂತರ್ಗತನಾದವನು ಹರಿಯೇ ಆಗಿದ್ದಾನೆ. ಅಮೃತತ್ವ ಅಭಯತ್ವಗಳೆಂಬ ಲಿಂಗಗಳಿರುವುದರಿಂದ ಮತ್ತು ಆತ್ಮಶಬ್ದ ಬ್ರಹ್ಮಶಬ್ದಗಳಿರುವುದರಿಂದ' ಎಂದು ಹೇಳುತ್ತಾರೆ. ಸೂತ್ರದಲ್ಲೂ ಸಹ ಅಮೃತತ್ವ ಅಭಯತ್ವವೆಂಬ ನಿರವಕಾಶಲಿಂಗಗಳನ್ನೇ ಹೇಳಿದ್ದಾರೆ. ಇದನ್ನು ವ್ಯಾಖ್ಯಾನಿಸುವ ಟೀಕೆಯಲ್ಲಿ 'ಚಕ್ಷುರಂತರಃ' ಎಂಬುದಾಗಿ ಆತ್ಮಶಬ್ದವನ್ನು ವಿವಕ್ಷಿಸದೇ ಸಾಮಾನ್ಯವಾಗಿ ಚಕ್ಷುರಂತರ್ಗತನೆಂದು ಹೇಳಿದ್ದಾರೆ. ಆದ್ದರಿಂದ ಚಕ್ಷುರಂತರ್ಗತನೆಂಬುದಷ್ಟೇ ಪ್ರತಿಜ್ಞಾ ಭಾಗವಾಗಿದೆ. ರಮಣಾರ್ಥವನ್ನು ಹೇಳುವ ಆತ್ಮಶಬ್ದವು ಹೇತುಭಾಗವಾಗಿದೆಯೆಂಬ ಸೂಕ್ಷ್ಮವನ್ನು ಗಮನಿಸಬೇಕು.

ಸಾರ

ಈ ಅಧಿಕರಣದಲ್ಲಿ ಒಟ್ಟು ಐದು ಸೂತ್ರಗಳಿವೆ. ಐದು ಸೂತ್ರಗಳ ಜೋಡಣೆಯು ಅತ್ಯಂತ ಸ್ವಾರಸ್ಯಮಯವಾಗಿದೆ. ಅದು ಹೀಗೆ - ಪ್ರಥಮ ಸೂತ್ರವು ವಿಷಯವಾಕ್ಯದಲ್ಲೇ ಇರುವ ಶ್ರುತಿಲಿಂಗಾದಿಗಳನ್ನು ಹೇಳುತ್ತಿರುವ ಕಾರಣ ಮೊದಲೇ ಉಲ್ಲೇಖಿಸಲು ಅರ್ಹವಾಗಿದೆ.

ಸೂತ್ರದಲ್ಲಿರುವ ಅಂತರ ಎಂಬ ಪದಕ್ಕೆ ಕೇವಲ ಅಂತರ್ಯಾಮಿ ಎಂದರ್ಥವಲ್ಲ. ಕಣ್ಣಿನ ಒಳಗಡೆ ಅಂತರ್ಯಾಮಿಯಾಗಿದ್ದು ರಮಿಸುತ್ತಾನೆಂದರ್ಥ. 'ಅಂತರ' ಎಂಬರಲ್ಲಿರುವ 'ಅಂತ' ಎಂಬ ಉಪಪದವು ಅಂತರ್ಯಾಮಿಯೆಂಬರ್ಥವನ್ನು ಹೇಳಿದರೆ 'ರ' ಎಂಬ ಧಾತು 'ರಮಣ' ಎಂಬರ್ಥವನ್ನು ಹೇಳುತ್ತಿದೆ. ಕೇವಲ ಅಂತರ್ಯಾಮಿಯೆಂಬರ್ಥವು ವಿವಕ್ಷಿತವಾಗಿದ್ದಲ್ಲಿ 'ಅಂತ' ಎಂಬ ಶಬ್ದವು ಸಾಕಾಗಿತ್ತು. ಈ ರಮಣ ಎಂಬರ್ಥವನ್ನು ಶ್ರುತಿಯಲ್ಲಿರುವ ಆತ್ಮಶಬ್ದವು 'ಆದೇಯಂ ಮಾತಿ' ಎಂಬ ವ್ಯುತ್ಪತ್ತಿಯಿಂದ ಸ್ಪಷ್ಟಪಡಿಸುತ್ತಿದೆ. ಆದ್ದರಿಂದ ಪ್ರಥಮಸೂತ್ರಕ್ಕೆ ಹೀಗರ್ಥ. ಕಣ್ಣಿನ ಒಳಗಡೆ ಅಂತರ್ಯಾಮಿಯಾಗಿ ರಮಿಸುವವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಅಮೃತತ್ವ, ಅಭಯತ್ವ ಮತ್ತು ಬ್ರಹ್ಮಶಬ್ದ ಆತ್ಮಶಬ್ದಗಳೆಂಬ ಲಿಂಗಗಳೆಂದು ಎಂದು.

• • • • •

ಉಳಿದ ಸೂತ್ರಗಳ ಜೋಡಣೆಯೂ ಅತ್ಯಂತ ಸ್ವಾರಸ್ಯಮಯ

तात्पर्यचन्द्रिका

द्वितीये तदुत्तरवाक्यस्थलिङ्गोक्तिः ।

तृतीये प्रकरणोक्तिः । तत्र च ''कं ब्रह्म'' इति ब्रह्मशब्दोक्त पूर्णत्वरूपं श्रैष्ठ्यं विशिष्टत्वम् । विग्रहस्तु – सुखेन विशिष्टं इति वा, विशिष्टं च तत् सुखं चेति वा, सुखेषु विशिष्टमिति वा ?

तत्राऽऽद्ये सुखेन श्रैष्ठ्यं सुखस्य श्रैष्ठ्यं विना नेति सुखस्यापि तत्सिद्धिः । द्वितीये ''कडाराः कर्मधारये'' इति विशिष्टशब्दस्य परनिपातः ।

तृतीये ''सप्तमी'' इति योगविभागात् समासः । एवकारस्तु, तिष्ठतु तावत् ''खं ब्रह्म'' इति पूर्णज्ञानभिधानं, तन्निरपेक्षपूर्णसुखाभिधानादेवेति सूचनायेति टीकायामेवोक्तम् ।

चतुर्थसूत्रे प्रकरणविच्छेदाशङ्कयामुपसंहारस्थलिङ्गेनोद्धारः ।

पञ्चमे परपक्षे बाधकोक्तिरिति ।।

ಅನುವಾದ - 'ಸ್ಥಾನಾದಿವ್ಯಪದೇಶಾಚ್ಚ' ಎಂಬುದು ಎರಡನೆಯ ಸೂತ್ರ. ಇದರಲ್ಲಿ ಮುಂದಿನ ವಾಕ್ಯದಲ್ಲಿರುವ ಕಣ್ಣಿನಲ್ಲಿ ಅಸಂಗವೆಂಬ ವಿಲಕ್ಷಣ ಸಾಮರ್ಥ್ಯವು ವಿಷ್ಣುವಿನ ಸನ್ನಿಧಾನದಿಂದ ಹೊಂದಿರುತ್ತದೆಂಬ ಲಿಂಗವನ್ನು ಹೇಳಿದ ಕಾರಣ ಪ್ರಥಮಸೂತ್ರದ ಆನಂತರ್ಯವು ಇದಕ್ಕೆ ಯುಕ್ತವಾಗುತ್ತದೆ.

'ಸುಖವಿಶಿಷ್ಟಾಭಿಧಾನಾದೇವ ಚ' ಎಂಬುದು ಮೂರನೆಯ ಸೂತ್ರ. ಈ ಸೂತ್ರದಲ್ಲಿ ಪ್ರಕರಣವನ್ನು ಪ್ರಮಾಣವನ್ನಾಗಿ ಹೇಳಲಾಗಿದೆ. ಪ್ರಕರಣದ ಆದಿಯಲ್ಲಿ ''ಕಂ ಬ್ರಹ್ಮ'' ಎಂಬುದಾಗಿ ಬ್ರಹ್ಮಶಬ್ದದಿಂದ ಪೂರ್ಣತ್ವರೂಪವಾದ ವಿಶೇಷವುಳ್ಳ ಸುಖವನ್ನು ಹೇಳಲಾಗಿದೆ. ಇದರಿಂದ ಬ್ರಹ್ಮನ ಸುಖವು ಶ್ರೇಷ್ಠವೆಂದು ತಿಳಿಯುತ್ತದೆ. 'ಸುಖವಿಶಿಷ್ಟ' ಎಂಬ ಪದಕ್ಕೆ ಮೂರುಬಗೆಯಲ್ಲಿ ವಿಗ್ರಹ -

೧. ಸುಖೇನ ವಿಶಿಷ್ಟಂ ಸುಖವಿಶಿಷ್ಟಂ ೨. ವಿಶಿಷ್ಟಂ ಚ ತತ್ ಸುಖಂ ಚ, ಸುಖವಿಶಿಷ್ಟಂ, ೩. ಸುಖೇಷು ವಿಶಿಷ್ಟಂ ಸುಖವಿಶಿಷ್ಟಂ.

ಇವುಗಳಲ್ಲಿ ಮೊದಲನೆಯ ವಿಗ್ರಹವನ್ನು ವಿವಕ್ಷಿಸಿದಾಗ ಸುಖದಿಂದ ಬ್ರಹ್ಮನು ಶ್ರೇಷ್ಠನಾಗಿದ್ದಾನೆಂದರೆ ಸುಖವೂ ಎಂದೂ ಸಹ ಶ್ರೇಷ್ಠವಾಗಿದೆಯೆಂದು ತಿಳಿಯುತ್ತದೆ. ಆದ್ದರಿಂದ ಬ್ರಹ್ಮನು ಹೇಗೆ ಪೂರ್ಣನೋ? ಆದರಂತೆ ಸುಖವೂ ಸಹ ಪೂರ್ಣವಾಗಿದೆ.

ಎರಡನೆಯ ಪಕ್ಷದಲ್ಲಿ 'ವಿಶಿಷ್ಟಂಚ ತತ್ ಸುಖಂಚ' ಎಂದು ವಿಗ್ರಹ ಮಾಡಿದಾಗ 'ವಿಶಿಷ್ಟ ಸುಖ' ಎಂದಗಾಬೇಕೇ ಹೊರತು, 'ಸುಖವಿಶಿಷ್ಟಂ' ಎಂದು ಹೇಗಾಯಿತು? ಎಂಬ ಪ್ರಶ್ನೆ ಬರುತ್ತದೆ. ಆದರೆ ''ಕಡಾರಾಃ ಕರ್ಮಧಾರಯೇ'' ಎಂಬ ಸೂತ್ರದಲ್ಲಿರುವ 'ಕಡಾರ' ಮೊದಲಾದ ಶಬ್ದಗಳು ಆಕೃತಿಗಣವಾದ್ದರಿಂದ ವಿಶಿಷ್ಟಶಬ್ದಕ್ಕೆ ಪರನಿಪಾತ ಮಾಡಬಹುದು. ಆದ್ದರಿಂದ 'ವಿಶಿಷ್ಟಸುಖಂ' ಎಂದು ಹೇಳಿದಂತೆ 'ಸುಖವಿಶಿಷ್ಟಂ' ಸಹ ಹೇಳಬಹುದು.

ಮೂರನೆಯ ವಿಗ್ರಹದಲ್ಲಿ 'ಸುಖೇಷು ವಿಶಿಷ್ಟಂ' ಎಂಬ ಸಪ್ತಮಿ ತತ್ಪುರುಷವನ್ನು ಹೇಗೆ ಮಾಡುತ್ತೀರಿ? ಏಕೆಂದರೆ 'ಸಪ್ತಮಿ ಶೌಂಡೈಃ' ಎಂಬ ಸೂತ್ರವು 'ಶೌಂಡ' ಮೊದಲಾದ ಶಬ್ದಗಳಿದ್ದಾಗ ಸಪ್ತಮಿತತ್ಪುರುಷ ಸಮಾಸವನ್ನು ವಿಧಿಸಿದೆಯಲ್ಲವೇ? ಎಂದು ಪ್ರಶ್ನಿಸಬಾರದು. 'ಸಪ್ತಮಿ' ಎಂಬುದನ್ನು ಪ್ರತ್ಯೇಕ ಸೂತ್ರವೆಂದು ಪರಿಗಣಿಸಿದಾಗ 'ಶೌಂಡಾದಿ' ಶಬ್ದಗಳಿದ್ದರೂ ಸಪ್ತಮಿ ತತ್ಪುರುಷವನ್ನು ಮಾಡಬಹುದೆಂದು ತಿಳಿಯುತ್ತದೆ.

ಸೂತ್ರದಲ್ಲಿರುವ ಏವಕಾರವು '''ಕಂ ಬ್ರಹ್ಮ' ಎಂಬ ಶ್ರುತಿಯಂತೆ ಪೂರ್ಣಸುಖವುಳ್ಳವನೆಂಬ ವಚನದಿಂದಲೇ ಇದು ಬ್ರಹ್ಮಪ್ರಕರಣವೆಂದು ತಿಳಿಯುತ್ತಿರುವಾಗ ಪೂರ್ಣಜ್ಞಾನವನ್ನು ಹೇಳಿರುವುದರಿಂದಲೂ ಬ್ರಹ್ಮಪ್ರಕರಣವೆಂದು ಹೇಳಬೇಕೇನು?'' ಎಂಬ ಕೈಮುತ್ಯವನ್ನು ಹೇಳುತ್ತಿದೆ.

''ಶ್ರುತೋಪನಿಷತ್‌ಕಗತ್ಯಭಿಧಾನಾಚ್ಚ'' ಎಂಬುದು ನಾಲ್ಕನೇ ಸೂತ್ರ - ಈ ಸೂತ್ರವು ಪ್ರಾರಂಭದಲ್ಲಿ ಬ್ರಹ್ಮನು ಪ್ರಸಕ್ತನಾಗಿದ್ದರೂ ಮುಂದೆ ಅಗ್ನಿಯ ಬಗ್ಗೆ ಪ್ರಸಕ್ತಿ ಇರುವುದರಿಂದ ಬ್ರಹ್ಮಪ್ರಕರಣಕ್ಕೆ ವಿಚ್ಛೇದ ಬರುತ್ತದೆಂಬ ಆಶಂಕೆಗೆ ಉತ್ತರಿಸುತ್ತಿದೆ. ಉಪಸಂಹಾರದಲ್ಲಿರುವ ಲಿಂಗದಿಂದಲೂ ಸಂಪೂರ್ಣ ಇದು ಬ್ರಹ್ಮನನ್ನೇ ಹೇಳುತ್ತದೆಂದು ಸಾಧಿಸುತ್ತದೆ.

''ಅನವಸ್ಥಿತೇಃ ಅಸಂಭವಾಚ್ಚ ನೇತರಃ'' ಎಂಬುದು ಐದನೆಯ ಸೂತ್ರ - ಈ ಸೂತ್ರದಲ್ಲಿ ಅನವಸ್ಥಾ ಮೊದಲಾದ ಬಾಧಕಗಳನ್ನು ಪರಪಕ್ಷದಲ್ಲಿ ಹೇಳಲಾಗಿದೆ. ಸ್ವಪಕ್ಷಸಾಧಕಗಳನ್ನು ಹೇಳಿದ

ನಂತರ ಪರಪಕ್ಷದಲ್ಲಿ ಬಾಧಕಗಳನ್ನು ಹೇಳಬೇಕಾದ ಕಾರಣ ಈ ಸೂತ್ರವು ಕೊನೆಯಲ್ಲೇ ಪ್ರಸಕ್ತವಾಗುತ್ತದೆ.

ಪ್ರಕಾಶಃ –

ದ್ವಿತೀಯ ಇತಿ । ಸ್ಥಾನಾದಿಸೂತ್ರೇ । ತತ್ರ 'ಸ್ಥಾನಾದಿ' ಇತ್ಯಸ್ಯ ಸ್ಥಾನಶಕ್ತಿರಾತ್ಮ-ಶಕ್ತಿರಿತ್ಯರ್ಥಃ । ಲಿಙ್ಗೇತಿ । ಪುರುಷಸಮ್ಬನ್ಧನಿಮಿತ್ತಸರ್ಪಿರಾದ್ಯಸಙ್ಗತ್ವಾದಿಲಿಙ್ಗೇತ್ಯರ್ಥಃ ।

ವಿವರಣೆ - ಪ್ರಥಮಸೂತ್ರವು ವಿಷಯವಾಕ್ಯದಲ್ಲೇ ಇರುವ ಶ್ರುತಿಲಿಂಗಗಳನ್ನು ವಿಷ್ಣು ಸಾಧಕವಾಗಿ ಹೇಳುತ್ತಿರುವ ಕಾರಣ ಮೊದಲು ಪ್ರಸಕ್ತವಾಗುತ್ತದೆ. ಅನಂತರ ಮುಂದಿನ ವಿಷಯವಾಕ್ಯದಲ್ಲಿರುವ ಸ್ಥಾನಾದಿವ್ಯಪದೇಶವೆಂಬ ಲಿಂಗವನ್ನು ಎರಡನೆಯ ಸೂತ್ರವು ಹೇಳುತ್ತಿರುವ ಕಾರಣ ಪ್ರಥಮಸೂತ್ರದ ಅನಂತರ ಪ್ರಸಕ್ತವಾಗುತ್ತದೆಂಬುದನ್ನು 'ದ್ವಿತೀಯೇ' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ. ದ್ವಿತೀಯಸೂತ್ರವೆಂದರೆ ಸ್ಥಾನಾದಿವ್ಯಪದೇಶಾಚ್ಚ ಎಂಬ ಸೂತ್ರ. 'ಸ್ಥಾನಾದಿ' ಎಂಬಲ್ಲಿರುವ ಆದಿಪದದಿಂದ ಸ್ಥಾನಶಕ್ತಿಯ ಜೊತೆಗೆ ಸ್ವರೂಪಶಕ್ತಿಯನ್ನೂ ಸಹ ವಿವಕ್ಷಿಸಬೇಕು. ಲಿಂಗ ಎಂದರೆ ಪುರುಷ ಸಂಬಂಧನಿಮಿತ್ತವಾದ ತುಪ್ಪ ಮೊದಲಾದವುಗಳ ಸಂಪರ್ಕ ಇಲ್ಲದಿರುವಿಕೆ ಎಂದರ್ಥ. ಅಂದರೆ ಪುರುಷನಾಮಕನಾದ ಪರಮಾತ್ಮನು ಚಕ್ಷುರಿಂದ್ರಿಯದಲ್ಲಿ ಅಂತರ್ಯಾಮಿಯಾಗಿದ್ದಾನೆ. ಇವನಲ್ಲಿ ಅಸಂಗಶಕ್ತಿಯಿದೆ. ಇವನ ಸನ್ನಿಧಾನದಿಂದ ಚಕ್ಷುರಿಂದ್ರಿಯಕ್ಕೂ ಸಹ ಅಸಂಗಶಕ್ತಿ ಬಂದಿರುತ್ತದೆ.

ಪ್ರಕಾಶಃ – ಯದತ್ರೋಕ್ತಂ ಶ್ರುತಪ್ರಕಾಶೇ – ಅಕ್ಷ್ಣೋರ್ನಿರ್ಲೇಪತ್ವಂ ನ ಅಕ್ಷಿಸ್ಥಸ್ಯ ವಿಷ್ಣುತ್ವೇ ಹೇತುಃ, ತತ್ಸಮ್ಬನ್ಧೇನ ಕಾಚಾದಿಲೇಪಸ್ಯಾಪ್ಯಭಾವಪ್ರಸಙ್ಗಾದಿತಿ, ತನ್ನ, ''ಸ ಈಶಃ ಸೋऽಸಪನ್ನಃ''

ಯತ್ಸ್ಥಾನತ್ವಾದಿದಂ ಚಕ್ಷುರಸಙ್ಗಂ ಸರ್ವವಸ್ತುಭಿಃ ।
ಇತ್ಯಾದಿಪ್ರಾಗುಕ್ತಶ್ರುತಿವಿರೋಧಾತ್ ।

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಇತ್ಯುಕ್ತ್ವಾ ಸ್ಮೃತಿವಶೇನ ಶ್ರುತ್ಯರ್ಥಸ್ಯ ಚ ವಾಚ್ಯತ್ವಾತ್ ।

ಕಾಚಿತ್ಕಕಾಚಾದಿದೋಷಸ್ಯ ತದೀಯದುರದೃಷ್ಟಸಹಾಯೇನೇಶ್ವರೇಣೈತ ಕಾರಿತತ್ವಾದಿತಿ ।

ಆಕ್ಷೇಪ - ''ಅಕ್ಷ್ಣೋರ್ನಿರ್ಲೇಪತ್ವಂ ನ ಅಕ್ಷಿಸ್ಥಸ್ಯ ವಿಷ್ಣುತ್ವೇ ಹೇತುಃ, ತತ್ಸಂಬಂಧೇನ ಕಾಚಾದಿಲೇಪಸ್ಯಾಪ್ಯಭಾವಪ್ರಸಂಗಾತ್'' ''ಚಕ್ಷುರಿಂದ್ರಿಯವು ನಿರ್ಲೇಪವೆನಿಸಲು ಅಂತರ್ಯಾಮಿಯಾದ ಅಸಂಗನಾದ ವಿಷ್ಣುವಿನ ಸನ್ನಿಧಾನವೇ ಕಾರಣವೆಂದು ಹೇಳಿದಿರಿ. ಇದು ತಪ್ಪು. ಹಾಗಾದರೆ ವಿಷ್ಣುವಿನಿಲ್ಲಿ ಕಾಚ (ಪೊರೆ), ಕಾಮಾಲೆ ಮೊದಲಾದ ದೋಷಗಳು ಇಲ್ಲದ ಕಾರಣ. ಅವನ ಸಂಪರ್ಕವಿರುವ ಕಣ್ಣಿಗೂ ಸಹ 'ಕಾಚ, ಕಾಮಾಲೆ' ಮೊದಲಾದ ದೋಷಗಳು ಬಾರದಿರಬೇಕಾದೀತು. ಆದ್ದರಿಂದ ವಿಷ್ಣು ನಿರ್ಲೇಪವಾದ ಮಾತ್ರಕ್ಕೆ ಚಕ್ಷುರಿಂದ್ರಿಯವು ನಿರ್ಲೇಪವಾಗಬೇಕಾಗಿಲ್ಲ'' ಎಂದು ಶ್ರುತಪ್ರಕಾಶದಲ್ಲಿ ಆಕ್ಷೇಪಿಸಲಾಗಿದೆ.

ಸಮಾಧಾನ - ಶ್ರುತಪ್ರಕಾಶದ ಈ ವಾದವಲ್ಲಿ ಹುರುಳಿಲ್ಲ. ಏಕೆಂದರೆ ಭಗವಂತನ ಯಾವುದೇ ಮಹಿಮೆಯು ತರ್ಕಕ್ಕೆ ನಿಲುಕುವಂತದ್ದಲ್ಲ. ಹೊರತಾಗಿ ಶ್ರುತಿಗಳು ಹೇಳುವಂತೆ ಯಥಾಸ್ಥಿತವಾದ್ದನ್ನು ತಿಳಿಯುವುದಷ್ಟೇ ನಮ್ಮ ಧರ್ಮ. ಶ್ರುತಿಗಳಾದರೂ "ಸ ಈಶಃ ಸೋऽಸಪತ್ನಃ" "ಯತ್‌ಸ್ಥಾನತ್ವಾದಿದಂ ಚಕ್ಷುರಸಂಗಂ ಸರ್ವವಸ್ತುಭಃ" ಎಂಬುದಾಗಿ ಭಗವಂತನು ಅಸಂಗನಾದ್ದರಿಂದ ಅಧಿಷ್ಠಾನಭೂತವಾದ ಚಕ್ಷುರಿಂದ್ರಿಯವೂ ಅಸಂಗವಾಗಿದೆಯೆಂದು ಹೇಳಿದೆ. "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್" ಎಂಬ ಮಾತಿನಂತೆ ಶ್ರುತ್ಯರ್ಥವನ್ನು ಸ್ಮೃತಿಗ ಅನುಸಾರಿಯಾಗಿ ವ್ಯಾಖ್ಯಾನಿಸಬೇಕು. ಕೆಲವೊಬ್ಬರಿಗೆ ಕಾಚಕಾಮಾಲಾದಿ ದೋಷಗಳು ಬರಬಹುದು. ಆದರೆ ಅವರ ದುರದೃಷ್ಟದಿಂದ ಭಗವಂತನೇ ಅಂತಹ ರೋಗಕ್ಕೆ ಕಾರಣನಾಗಿರುತ್ತಾನೆ. ಆದ್ದರಿಂದ ಅಸಂಗನಾದ ಭಗವಂತನು ತನ್ನಲ್ಲಿರುವ ಅಸಂಗಶಕ್ತಿಯನ್ನು ಮಾತ್ರ ಕಣ್ಣಿಗೆ ನೀಡಿ ತುಪ್ಪ ನೀರು ಮೊದಲಾದವುಗಳ ಸಂಪರ್ಕ ಕಣ್ಣಿಗೆ ಬಾರದಂತೆ ಮಾಡಿದ್ದಾನೆ ಹೊರತು ತನ್ನಲ್ಲಿರುವ ಎಲ್ಲ ಗುಣಗಳನ್ನು ಕಣ್ಣಿಗೆ ನೀಡಿರುವುದಿಲ್ಲ.

ಪ್ರಕಾಶಃ – तृतीय इति । "सुखविशिष्ट" इत्यत्र उपक्रमे "कं ब्रह्म खं ब्रह्म" इति पूर्णसुखत्वरूपब्रह्मलक्षणाभिधानात्प्रकरणस्य वैष्णवत्वावगमादिति तत्रोच्यत इत्यर्थः ।

ननु श्रुतौ "कं ब्रह्म" इति सुखस्यैवोक्त्या तत्सम्बन्धाभिधानाभावात् विशिष्टपदमयुक्तमित्यतो न सम्बन्धवाचकं तदित्याह – तत्र चेति ।

ಮೂರನೆಯ ಸೂತ್ರದಲ್ಲಿ "ಕಂ ಬ್ರಹ್ಮ ಖಂ ಬ್ರಹ್ಮ" ಎಂಬುದಾಗಿ ಉಪಕ್ರಮದಲ್ಲಿ ಪೂರ್ಣಸುಖತ್ವವೆಂಬ ಬ್ರಹ್ಮನ ಲಕ್ಷಣವನ್ನು ಹೇಳಲಾಗಿದೆ. ಆದ್ದರಿಂದ ಸಂಪೂರ್ಣ ಪ್ರಕರಣವು ವಿಷ್ಣುಪರವೆಂದು ನಿರ್ಣಯವಾಗುತ್ತದೆ.

ಪ್ರಶ್ನೆ - "ಕಂ ಬ್ರಹ್ಮ" ಎಂಬುದಾಗಿ ಶ್ರುತಿಯಲ್ಲಿ ಸುಖವನ್ನಷ್ಟೇ ಹೇಳಲಾಗಿದೆ ಹೊರತು ಸುಖದ ಸಂಬಂಧವನ್ನು ಹೇಳಿದ್ದು ಕಾಣಿಸುವುದಿಲ್ಲ. ಹೀಗಿರುವಾಗ ಸೂತ್ರದಲ್ಲಿ ವಿಶಿಷ್ಟಪದವನ್ನು ಹೇಳಿದ್ದು ತಪ್ಪಲ್ಲವೇ?

ಉತ್ತರ - ಸೂತ್ರದಲ್ಲಿರುವ ವಿಶಿಷ್ಟ ಪದಕ್ಕೆ ಸಂಬಂಧವೆಂದರ್ಥವಲ್ಲ ಎಂಬುದಾಗಿ 'ತತ್ರಚ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – तत्र ब्रह्मपदेन न विष्णुरित्यभिमतं, किन्तु कं सुखं पूर्णमित्येव तस्यार्थ इति भावः । तर्हि "विशिष्टसुखाभिधानात्" इति विशिष्टपदस्य पूर्वनिपातः स्यात्, "उपसर्जनं पूर्वम्" इति पाणिनिस्मरणात्, अस्य च विशेषणत्वेनोपसर्जनत्वादित्यत आह – विग्रहस्त्विति ।

''कं ब्रह्म'' ಎಂಬಲ್ಲಿರುವ ಬ್ರಹ್ಮ ಪದಕ್ಕೆ ವಿಷ್ಣುವೆಂದರ್ಥವಲ್ಲ. ಹೊರತಾಗಿ कं = ಸುಖವು, ಬ್ರಹ್ಮ = ಪೂರ್ಣವಾಗಿದೆ ಎಂದರ್ಥ.

ಪ್ರಶ್ನೆ - ಹೀಗೆ ಬ್ರಹ್ಮಪದಕ್ಕೆ ಪೂರ್ಣವೆಂಬರ್ಥವನ್ನು ಹೇಳುವುದಾದರೆ ವಿಶಿಷ್ಟ ಪದವು ವಿಶೇಷವಾಚಕವಾಗುತ್ತದೆ. ಆವಾಗ ''ವಿಶಿಷ್ಟಸುಖಾಭಿಧಾನಾತ್'' ಎಂಬುದಾಗಿ ವಿಶಿಷ್ಟಪದವು ಪೂರ್ವನಿಪಾತವಾಗುತ್ತದೆ. ''ಉಪಸರ್ಜನಂ ಪೂರ್ವಮ್'' ಎಂಬ ಪಾಣಿನಿಸೂತ್ರವು ವಿಶೇಷಣ ವಾಚಕ-ಪದಕ್ಕೆ ಪೂರ್ವನಿಪಾತವನ್ನು ಹೇಳಿದೆ. 'ವಿಶಿಷ್ಟ' ಪದವು ವಿಶೇಷಣವಾಗಿರುವುದರಿಂದ ಉಜಸರ್ಜನವಾಯಿತು. ಆದ್ದರಿಂದ 'ವಿಶಿಷ್ಟಸುಖಾಭಿಧಾನಾತ್' ಎಂದೇ ಸಮಾಸವಾಗಬೇಕು ಹೊರತು 'ಸುಖವಿಶಿಷ್ಟಾಭಿಧಾನಾತ್' ಎಂದಾಗುವುದಿಲ್ಲ. ಆದ್ದರಿಂದ ಸೂತ್ರದಲ್ಲಿ 'ಸುಖವಿಶಿಷ್ಟಾಭಿಧಾನಾತ್' ಎಂದು ಹೇಳಿದ್ದು ತಪ್ಪಲ್ಲವೇ?

ಉತ್ತರ - ಈ ಪ್ರಶ್ನೆಗೆ 'ವಿಗ್ರಹಸ್ತು' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಂದರೆ 'ಕಡರಾಃ ಕರ್ಮಧಾರಯೇ' ಎಂಬಲ್ಲಿರುವ 'ಕಡಾರ' ಪದವು ಆಕೃತಿ ಗಣವಾದ್ದರಿಂದ ವಿಶಿಷ್ಟಪದಕ್ಕೂ ಸಹ ಪರನಿಪಾತವನ್ನು ಹೇಳಬಹುದು. ಆದ್ದರಿಂದ ಸೂತ್ರದಲ್ಲಿರುವ 'ಸುಖವಿಶಿಷ್ಟಾಭಿಧಾನಾತ್' ಎಂಬ ಪ್ರಯೋಗವು ತಪ್ಪಲ್ಲ.

प्रकाशः – सप्तमीति । ''सप्तमी शौण्डैः'' इति सूत्रेण शौण्डादिभिरेव सप्तमीतत्पुरुषविधानात् तत्र च विशिष्टपदस्यापाठाद्योगविभागेन सप्तम्यन्तमिष्टविषये समस्यत इत्यभियुक्तोक्तेः समास इत्यर्थः । विष्णोस्सुखरूपत्वात्सुखेष्विति विग्रहप्रदर्शनम् ।

यतस्तत्र 'यदेव कं तदेव खम्' इति सुखविशिष्टस्याकाशस्याभिधानम् । अत एव खशब्दाभिधेयस्सः आकाशः परं ब्रह्म । एतदुक्तं भवति; अग्निभिः 'प्राणो ब्रह्म कं ब्रह्म खं ब्रह्म' इत्युक्ते उपकोसल उवाच 'विजानाम्यहं यत्प्राणो ब्रह्म कं च तु खं च न विजानामि' इति । अस्यायमभिप्रायः । न तावत् प्राणादिप्रतीकोपासनमग्निभिरभिहितम्, जन्मजरामरणादिभवभयभीतस्य मुमुक्षोर्ब्रह्मोपदेशाय प्रवृत्तत्वात्, अतो ब्रह्मैवोपास्यमुपदिष्टम् । तत्र प्रसिद्धैः प्राणादिभिस्समानाधिकरणं ब्रह्म निर्दिष्टम्, तेषु च प्राणविशिष्टत्वं जगद् विधरणयोगेन वा प्राणशरीरतया प्राणस्य नियन्तृत्वेन वा ब्रह्मण उपपद्यत इति 'विजानाम्यहं यत्प्राणो ब्रह्म' इत्युक्तवान् । तथा सुखावकाशयोरपि ब्रह्मणः शरीरतया तन्नियाम्यत्वेन विशेषणत्वम्; उतान्योन्यव्यवच्छेदकतया निरतिशयानन्दरूप-ब्रह्मस्वरूपसमर्पणपरत्वेन वा? तत्र पृथग्भूतयोः शरीरतया विशेषणत्वे वैषयिकसुखभूताकाशयोर्नियामकत्वं ब्रह्मणः स्यादिति स्वरूपावगतिर्न स्यात् । अन्योन्यव्यवच्छेदकत्वे अपरिच्छिन्नानन्दैकस्वरूपत्वं ब्रह्मणः स्यादित्यन्यतरप्रकारनिर्दिधारयिषया 'कं च तु खं च न विजानामि' इत्युक्तवान् ।

उपकोसलस्येममाशयं जानन्तोऽग्नयः 'यद्वा व कं तदेव खं यदेव खं तदेव कं' इत्यूचिरे । ब्रह्मणस्सुखरूपत्वमेवापरिच्छिन्नमित्यर्थः । अतः प्राणशरीरतया प्राणविशिष्टं यद् ब्रह्म तदेवापरिच्छिन्नसुखरूपं चेति निगमितम् । 'प्राणश्च हास्मै तदाकाशं चोचुः' इति । अतः 'कं ब्रह्म खं ब्रह्म' इत्यत्रापरिच्छिन्नसुखं ब्रह्म प्रतिपादितमिति परं ब्रह्मैव तत्र प्रकृतम्, तदेव चात्राक्ष्याधारतयाऽभिधीयत इत्यक्ष्याधारः परमात्मा ॥ १६ ॥

श्रुतोपनिषत्कगत्यभिधानाच्च ॥ १७ ॥

श्रुतोपनिषत्कस्य अधिगतपरमपुरुषयाथात्म्यस्यानुसन्धेयतया श्रुत्यन्तरप्रतिपाद्यमाना अर्चिरादिका गतिर्या तामपुनरावृत्तिलक्षणपरमपुरुषप्राप्तिकरीमुपकोसलायाक्षिपुरुषं श्रुतवते 'तेऽर्चिषमेवाभिसम्भवन्त्यर्चिषोऽहरह्न आपूर्यमाणपक्षम्' इत्यारभ्य 'चन्द्रमसो विद्युतं तत्पुरुषोऽमानवस्स एनान् ब्रह्म गमयत्येष देवपथो ब्रह्मपथ एतेन प्रतिपद्यमाना इमं मानवमावर्तं नावर्तन्ते' इत्यन्तेनोपदिशति; अतोऽप्ययमक्षिपुरुषः परमात्मा ॥ १७ ॥

अनवस्थितेरसम्भवाच्च नेतरः ॥ १८ ॥

प्रतिबिम्बादीनामक्षिणि नियमेनानवस्थानादमृतत्वादीनां च निरुपाधिकानां तेष्वसम्भवान्न

ಅತ್ರ ಕೇಷಾಞ್ಚಿನ್ಮತಂ ಪರಮತಾನ್ನ ವಿಶಿಷ್ಟಮಿತಿ ತದ್ಖಣೆನೈವ ದೂಷಿತಮ್ । ಕೈಶ್ಚಿದತ್ರ "ಅತ ಏವ ಚ ಸ ಬ್ರಹ್ಮ" ಇತಿ ಸೂತ್ರಂ ಈಕ್ಷತ್ಯಧಿಕರಣೇ "ಪ್ರತಿಜ್ಞಾವಿರೋಧಾತ್" ಇತಿ ಸೂತ್ರವತ್ ಪ್ರಕ್ಷಿಪ್ತಮಿತಿ ತದುಪೇಕ್ಷ್ಯಮ್ ।

ಅತ್ರಾಪಿ "ಅನವಸ್ಥಿತೇರಸಮ್ಭವಾಚ್ಚ ನೇತರಃ" ಇತಿ ಜೀವನಿಷೇಧಾತ್ ಭೇದಧೀಃ ।।

ಅನುವಾದ - ಅದ್ವೈತಿಗಳ ಸಿದ್ಧಾಂತವು ಅಯುಕ್ತವಾಗಿದೆ.

ಕಾರ್ಯಬ್ರಹ್ಮಪರತ್ವಂ ಚೇದಮೃತತ್ವಾದ್ಯಸಂಭವಃ ।
ಅಕಾರ್ಯಪರತಾ ಚೇತ್ಸ್ಯಾದರ್ಚಿರಾದೇರಸಂಭವಃ ।।

ಕಾರ್ಯಬ್ರಹ್ಮಪರವಾದರೆ ಅಮೃತತ್ವಾದಿಗಳು ಅಸಂಭಾವಿತವಾಗುತ್ತವೆ. ಅಕಾರ್ಯಬ್ರಹ್ಮಪರವಾದರೆ ಅರ್ಚಿರಾದಿ ಮಾರ್ಗದ ದಮನವು ಅಸಂಭಾವಿತವಾಗುತ್ತವೆ.

ಕಾರ್ಯಬ್ರಹ್ಮನಾದ ಚತುರ್ಮುಖ ಬ್ರಹ್ಮನಲ್ಲಿ ಅಮೃತತ್ವ, ಅಭಯತ್ವ, ಅಪರಿಚ್ಛಿನ್ನತ್ವ, ಸುಖತ್ವ ಮೊದಲಾದ ಹೇತುಗಳು ಅಯುಕ್ತವಾಗುತ್ತವೆ. ಇವುಗಳು ಅಯುಕ್ತವಾದ್ದರಿಂದಲೇ ಇವುಗಳಿಂದ ಸಾಧ್ಯವಾದ ಚಕ್ಷುರಂತಸ್ಥತ್ವವು ಅಯುಕ್ತವಾಗುತ್ತದೆ. ಏಕೆಂದರೆ ಚಕ್ಷುರಂತಸ್ಥತ್ವವು "ಯಶ್ಚಕ್ಷುಷಿ ತಿಷ್ಠನ್" ಇತ್ಯಾದಿ ಮಾತುಗಳಿಂದ ಅಕಾರ್ಯಬ್ರಹ್ಮನಾದ ಅಂತರ್ಯಾಮಿಯ ಧರ್ಮವಾಗಿದೆ. ಅಕಾರ್ಯಬ್ರಹ್ಮಪರವಾದರೆ ಶ್ರುತಿಯಲ್ಲಿ "ತೇऽರ್ಚಿಷಮಭಿಸಂಭವಂತಿ" ಎಂಬುದಾಗಿ ಮತ್ತು ಸೂತ್ರದಲ್ಲಿ "ಶ್ರುತೋಪನಿಷತ್ಕ" ಎಂಬುದಾಗಿ ಅರ್ಚಿರಾದಿಮಾರ್ಗಗಮನವನ್ನು ಹೇಳಿದ್ದು ಅಯುಕ್ತವಾಗುತ್ತದೆ. ಏಕೆಂದರೆ ನಿಮ್ಮ ಮತದಲ್ಲಿ ಅರ್ಚಿರಾದಿಮಾರ್ಗಗಮನವು ಕಾರ್ಯಬ್ರಹ್ಮನ ಮಾರ್ಗವಾಗಿರುತ್ತದೆ.

ಇನ್ನು 'ಸ್ಥಾನಾದಿವ್ಯಪದೇಶಾತ್' ಎಂಬ ಎರಡನೆಯ ಸೂತ್ರವ್ಯಾಖ್ಯಾನವೂ ಸಹ ಸಮಂಜಸವಲ್ಲ. ಪರಮಮಹತ್ತರಿಮಾಣವುಳ್ಳ ಬ್ರಹ್ಮನು ಅತ್ಯಂತ ಅಲ್ಪವಾದ ಚಕ್ಷುರಾದ್ಯಧಿಷ್ಠಾನಗಳಲ್ಲಿ ನೆಲೆಸಲು

ಪರಮಾತ್ಮನ ಇತರಃ, ಛಾಯಾದಿರಕ್ಷಿಪುರುಷೋ ಭವಿತುಮರ್ಹತಿ । ಪ್ರತಿಬಿಮ್ಬಸ್ಯ ತಾವತ್ ಪುರುಷಾನ್ತರ-ಸನ್ನಿಧಾನಾಯತ್ತತ್ವಾನ್ನ ನಿಯಮೇನಾವಸ್ಥಾನಸಮ್ಭವಃ । ಜೀವಸ್ಯಾಪಿ ಸರ್ವೇನ್ದ್ರಿಯವ್ಯಾಪಾರಾನುಗುಣತ್ವಾಯ ಸರ್ವೇನ್ದ್ರಿಯಕನ್ದಭೂತೇ ಸ್ಥಾನವಿಶೇಷೇ ವೃತ್ತಿರಿತಿ ಚಕ್ಷುಷಿ ನಾವಸ್ಥಾನಮ್ । ದೇವತಾಯಾಶ್ಚ 'ರಶ್ಮಿಭಿರೇಷೋऽಸ್ಮಿನ್ ಪ್ರತಿಷ್ಠಿತಃ' ಇತಿ ರಶ್ಮಿದ್ವಾರೇಣಾವಸ್ಥಾನವಚನಾದೈಶಾನ್ತರಾವಸ್ಥಿತಸ್ಯಾಪಿ ಇನ್ದ್ರಿಯಾಧಿಷ್ಠಾನೋಪಪತ್ತೇರ್ನ ಚಕ್ಷುಷ್ಯವಸ್ಥಾನಮ್ । ಸರ್ವೇಷಾಮೇವೈಷಾಂ ನಿರುಪಾಧಿಕಾಮೃತತ್ವಾದಯೋ ನ ಸಮ್ಭವನ್ತ್ಯೇವ; ತಸ್ಮಾದಕ್ಷಿಪುರುಷಃ ಪರಮಾತ್ಮಾ ।। ೧೯ ।।

ಇತಿ ಅನ್ತರಾಧಿಕರಣಮ್

ಪರಿಪೂರ್ಣಚಂದ್ರಿಕಾ

ಸಾಧ್ಯವಿಲ್ಲ. ಈ ಆಶಂಕೆಯನ್ನು ನಿರಾಸ ಮಾಡುವುದಕ್ಕಾಗಿ 'ಸ್ಥಾನಾದಿ' ಸೂತ್ರವು ಹೊರಟಿದೆಯೆಂದು ವ್ಯಾಖ್ಯಾನಿಸುತ್ತಾರೆ. ಇದು ತಪ್ಪು. ಈ ಶಂಕೆಯ ನಿವಾರಣೆಯನ್ನು ಸರ್ವಗತತ್ವಾಧಿಕರಣದಲ್ಲಿರುವ 'ಅರ್ಭಕೌಕಸ್ತ್ವಾತ್' ಎಂಬ ಸೂತ್ರದಿಂದಲೇ ಪರಿಹರಿಸಿದ್ದಾಗಿದೆ.

'ಸುಖವಿಶಿಷ್ಟಾಭಿಧಾನಾತ್' ಎಂಬ ಮೂರನೇ ಸೂತ್ರದಲ್ಲಿರುವ ಸುಖವಿಶಿಷ್ಟಪದಕ್ಕೆ ಸುಖದ ಸಂಬಂಧವನ್ನು ಹೊಂದಿರುತ್ತಾನೆ. ಆದ್ದರಿಂದ ''ಕಂ ಬ್ರಹ್ಮ'' ಎಂಬುದಾಗಿ ಸುಖವಿಶಿಷ್ಟನಾದ ಬ್ರಹ್ಮನು ಪ್ರಾರಂಭದಲ್ಲಿ ಉಕ್ತನಾದ್ದರಿಂದ ಆಕ್ಷಿವಾಕ್ಯದಲ್ಲೂ ಸಹ ಅಂತಹ ಬ್ರಹ್ಮನೇ ಪ್ರತಿಪಾದ್ಯನಾಗುತ್ತಾನೆಂದು ವ್ಯಾಖ್ಯಾನಿಸುತ್ತಾರೆ.

ಇದೂ ಸಹ ತಪ್ಪು. ಸುಖದ ಸಂಬಂಧವು ಜೀವನಲ್ಲೂ ಇರುವುದರಿಂದ ಸುಖವಿಶಿಷ್ಟಪದಕ್ಕೆ ಕೇವಲ ಸುಖಸಂಬಂಧ ಎಂಬರ್ಥವನ್ನು ಹೇಳಲಾಗದು ಹೊರತಾಗಿ ವಾಕ್ಯಶೇಷದಲ್ಲಿ ಹೇಳಲ್ಪಟ್ಟ ಸುಖದಲ್ಲಿರುವ ಅಪರಿಚ್ಛಿನ್ನತ್ವವೆಂಬ ಶ್ರೇಷ್ಠತ್ವವನ್ನೇ ಸೂತ್ರದಲ್ಲಿರುವ ವಿಶಿಷ್ಟಶಬ್ದದ ಅರ್ಥವನ್ನಾಗಿ ಹೇಳಬೇಕು. ನಿಮ್ಮ ಮತದಲ್ಲಿ ಬ್ರಹ್ಮನು ಕೇವಲ ಸುಖಸ್ವರೂಪನಾದ್ದರಿಂದ ಸುಖದ ಸಂಬಂಧವನ್ನೇ ಹೇಳಲಾಗದೆಂಬುದು ಮತ್ತೊಂದು ದೋಷ. ಇನ್ನು ವಿಶಿಷ್ಟಬ್ರಹ್ಮನಿಗೆ ಸುಖದ ಸಂಬಂಧವನ್ನು ಹೇಳಬಹುದು. ಆದರೆ ವಾಕ್ಯಶೇಷದಲ್ಲಿ ಹೇಳಲ್ಪಟ್ಟ ಅಪರಿಚ್ಛಿನ್ನವಾದ ಸುಖದ ಸಂಬಂಧವನ್ನು ವಿಶಿಷ್ಟಬ್ರಹ್ಮನಲ್ಲಿ ಹೇಳಲು ಸಾಧ್ಯವೇ ಇಲ್ಲ.

ಇದರಂತೆ ನಾಲ್ಕನೆಯ ಸೂತ್ರದಲ್ಲಿರುವ 'ಶ್ರುತೋಪನಿಷತ್ಕ' ಎಂಬ ಪದಕ್ಕೆ ಶ್ರುತವಾದ ರಹಸ್ಯವಿದ್ಯೆಯನ್ನು ಅರಿತ ಬ್ರಹ್ಮಜ್ಞಾನಿಗೆ ಎಂದು ವ್ಯಾಖ್ಯಾನಿಸುತ್ತಾರೆ. ಇಂತಹ ಬ್ರಹ್ಮಜ್ಞಾನಿಗೆ ಶ್ರುತ್ಯಂತರದಲ್ಲಿ ಪ್ರಸಿದ್ಧವಾದ ಯಾವ ಅರ್ಚಿರಾದಿಮಾರ್ಗವೆಂಬ ಗತಿಯಿದೆಯೋ ಅದನ್ನು ಇಲ್ಲಿ ಹೇಳಿರುವುದರಿಂದ ಆಕ್ಷಿಸ್ಥನಾದವನು ಬ್ರಹ್ಮನಾಗುತ್ತಾನೆಂದು ನಾಲ್ಕನೆಯ ಸೂತ್ರಕ್ಕೆ ವ್ಯಾಖ್ಯಾನಿಸುತ್ತಾರೆ.

ಇದೂ ಕೂಡ ಸರಿಯಿಲ್ಲ. ನಿಮ್ಮ ಮತದಲ್ಲಿ ಅರ್ಚಿರಾದಿಮಾರ್ಗವು ಉಪಾಸಕನಿಗಷ್ಟೇ ದೊರೆಯುತ್ತದೆ ಹೊರತು ಬ್ರಹ್ಮಜ್ಞಾನಿಗೆ ದೊರೆಯುವುದಿಲ್ಲ. ಅಷ್ಟೇ ಅಲ್ಲದೆ ಸೂತ್ರದಲ್ಲಿ 'ಕಗತ್ಯಭಿಧಾನಾತ್' ಎಂದು ಅನ್ವಯ ಮಾಡುವುದೇ ಸೂಕ್ತ ಹೊರತು 'ಶ್ರುತೋಪನಿಷತ್ಕ' ಎನ್ನುವುದು ಸೂಕ್ತವಲ್ಲ. 'ಕಗತ್ಯಭಿಧಾನಾತ್' ಎಂದು ಹೇಳಿದಾಗ 'ಸ ಏನಾನ್ ಬ್ರಹ್ಮ ಗಮಯತಿ'' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಬ್ರಹ್ಮಗತಿಗೆ 'ಕಂ ಬ್ರಹ್ಮ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ 'ಕ' ಶಬ್ದ ನಿರ್ದಿಷ್ಟವಾದ ಬ್ರಹ್ಮವಿಷಯತ್ವವನ್ನು ಹೇಳಿದಾಗ ಶ್ರುತಿಯನ್ನು ಅನುಸರಿಸಿದಂತಾಗುತ್ತದೆ. ಬ್ರಹ್ಮಪ್ರಾಪ್ತಿ ಸಾಧನವಾದ ವಿದ್ಯೆಗೆ ಸಾಕ್ಷಾತ್ ಬ್ರಹ್ಮವಿಷಯತ್ವವನ್ನು ಹೇಳಿದಂತಾಗುತ್ತದೆ. ವಿದ್ಯೆಗೂ ತತ್ಸಾಧ್ಯವಾದ ಪ್ರಾಪ್ತಿಗೂ ಏಕವಿಷಯತ್ವವೆಂಬ ನಿಯಮವಿರುವುದರಿಂದ ನಮ್ಮ ವ್ಯಾಖ್ಯಾನವೇ ಸಾಧುವಾಗಿದೆ. ಹೊರತು ಮಾರ್ಗಕ್ಕೆ ಅರ್ಚಿರಾದಿತ್ವವನ್ನು ಹೇಳಿದ ಮಾತ್ರದಿಂದ ಈ ಪ್ರಯೋಜನವು ದೊರೆಯುವುದಿಲ್ಲ.

ಮತ್ತು ''ಶೇಷಾದ್ವಿಭಾಷಾ'' ಎಂಬ ಸೂತ್ರದಲ್ಲಿ 'ಕ' ಪ್ರತ್ಯಯವನ್ನು ವಿಕಲ್ಪವಾಗಿ ಹೇಳಿರುವುದರಿಂದ ಬಹುವ್ರೀಹಿಸಮಾಸ ಮಾಡಿದರೂ ಸಹ 'ಕ' ಪ್ರತ್ಯಯವು ವ್ಯರ್ಥವಾಗುತ್ತದೆ. ಮತ್ತು ನಿಮ್ಮ ವ್ಯಾಖ್ಯಾನದಲ್ಲಿ ಸೂತ್ರದಲ್ಲಿರುವ 'ಗತಿ' ಶಬ್ದಕ್ಕೆ ಮಾರ್ಗವೆಂಬರ್ಥವು ಅಸ್ವರಸವಾಗುತ್ತದೆ.

'ಅನವಸ್ಥಿತೇSರಸಂಭವಾಚ್ಚ' ಎಂಬ ಕೊನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನ ಮಾಡಲಾಗಿದೆ. ಛಾಯೆಯು ನಿರಂತರವಾಗಿ ಚಕ್ಷುರಿಂದ್ರಿಯದಲ್ಲಿ ಇರುವುದಿಲ್ಲ. ಜೀವನಾದರೂ ಸಹ ಸಕಲ ಶರೀರೇಂದ್ರಿಯಗಳ ಸಂಬಂಧವನ್ನು ಹೊಂದಿರುವ ಕಾರಣ ಕೇವಲ ಚಕ್ಷುರಿಂದ್ರಿಯದಲ್ಲಿ ಇರಲಾರನು. ಮತ್ತು ಅಮೃತತ್ವಾದಿಗಳು ಛಾಯಾಪುರುಷನಲ್ಲಾಗಲೀ, ಜೀವನಲ್ಲಾಗಲೀ ಅಸಂಭಾವಿತವಾದ್ದರಿಂದ 'ನೇತರಃ' = ಇತರ ಪದಾರ್ಥಗಳು ಚಕ್ಷುರಿಂದ್ರಿಯದಲ್ಲಿ ಇರಲು ಸಾಧ್ಯವಿಲ್ಲ ಎಂದು.

ಇದೂ ಸಹ ತಪ್ಪು. 'ಅನವಸ್ಥಿತಿ' ಶಬ್ದಕ್ಕೆ ಅಪ್ರಮಾಣಕವಾದ ಅನಂತ ವ್ಯಕ್ತಿಗಳನ್ನು ಕಲ್ಪಿಸುವಿಕೆ ಎಂಬರ್ಥವೇ ಲೋಕದಲ್ಲಿ ಪ್ರಸಿದ್ಧವಾಗಿದೆ ಹೊರತು ''ಇರುವುದಿಲ್ಲ'' ಎಂಬರ್ಥವು ಪ್ರಸಿದ್ಧವಾಗಿಲ್ಲ. ಮತ್ತು 'ಸದಾ' ಶಬ್ದ 'ಚಕ್ಷುಷ್ಯೇವ' ಎಂಬ ಶಬ್ದ ಇವುಗಳನ್ನೆಲ್ಲಾ ಅಧ್ಯಾಹಾರ ಮಾಡಬೇಕಾಗುತ್ತದೆ. ಮತ್ತು ''ಉಪಪತ್ತೇಃ'' ಎಂಬುದರಿಂದಲೇ ಬ್ರಹ್ಮನನ್ನು ಬಿಟ್ಟು ಬೇರೆ ಕಡೆ ಅಮೃತತ್ವ ಮೊದಲಾದವುಗಳು ಅಸಂಭಾವಿತವೆಂಬರ್ಥ ತಿಳಿಯುವುದರಿಂದ ಪುನಃ 'ಅಸಂಭವಾತ್' ಎಂಬ ಪದವು ವ್ಯರ್ಥವಾಗುತ್ತದೆ. ಇದೇ ರೀತಿಯಾಗಿ ಬೇರೆ ಅಧಿಕರಣದಲ್ಲಿರುವ ಸೂತ್ರಗಳಲ್ಲಿಯೂ ಅನುಪಪತ್ತಿಯನ್ನು ತಿಳಿಯಬೇಕು. ಅಥವಾ ಪ್ರಥಮ ಸೂತ್ರದಲ್ಲಿ ಅನುಪಪತ್ತಿಯನ್ನು ತಿಳಿಯಬೇಕು.

ರಾಮಾನುಜರ ಮತವು ಅದ್ವೈತಮತಕ್ಕಿಂತ ಏನೂ ವೈತ್ಯಾಸವಿಲ್ಲದ ಕಾರಣ ಅದ್ವೈತಮತದ ನಿರಾಕರಣೆಯಿಂದಲೇ ಇವರ ಮತವನ್ನೂ ಸಹ ನಿರಾಕರಿಸಿದಂತಾಯಿತು.

ಇನ್ನು ಕೆಲವರು 'ಅತ ಏವ ಚ ಸ ಬ್ರಹ್ಮ' ಎಂಬ ಸೂತ್ರವನ್ನು ಈ ಅಧಿಕರಣದಲ್ಲಿ ಸೇರಿಸುತ್ತಾರೆ. ಆದರೆ ಈಕ್ಷತ್ಯಧಿಕರಣದಲ್ಲಿ 'ಪ್ರತಿಜ್ಞಾವಿರೋಧಾತ್' ಎಂಬ ಸೂತ್ರವನ್ನು ಸೇರಿಸಿದ್ದು ಹೇಗೆ ಪ್ರಕ್ಷಿಪ್ತವಾಗಿದೆಯೋ ಅದರಂತೆ ಇದೂ ಸಹ ಪ್ರಕ್ಷಿಪ್ತವಾಗಿದೆಯೆಂದು ಉಪೇಕ್ಷಿಸಬೇಕು.

ಉಳಿದ ಅಧಿಕರಣಗಳಂತೆ ಈ ಅಧಿಕರಣದಲ್ಲೂ ಸಹ 'ಅನವಸ್ಥಿತೇರಸಂಭವಾತ್' 'ನೇತರಃ' ಎಂಬುದಾಗಿ ಜೀವನನ್ನು ನಿಷೇಧ ಮಾಡಿ ಬ್ರಹ್ಮನನ್ನು ಅಕ್ಷಿಸ್ಥನೆಂದು ಹೇಳಿದ್ದರಿಂದ ಜೀವಬ್ರಹ್ಮರಿಗೆ ಭೇದವನ್ನೇ ಅದ್ವೈತಿಗಳು ಸಾಧಿಸಿದಂತಾಗುತ್ತದೆ.

ಪ್ರಕಾಶಃ —

परसिद्धान्तोऽपीति । स प्राङ्न्या विवृतः । 'यतः' इत्यस्य श्लोकेन अन्वयः । किमत्र कार्यं ब्रह्मोच्यतेऽथाकार्यं ब्रह्मेति सिद्धान्त्यत इति विकल्पौ हृदि कृत्वा

ಕ್ರಮೇಣ ನಿರಾಹ – **कार्येति ।**

पूर्वार्धं व्यनक्ति – न हीति । तस्य संसारित्वेन मृतिभयादेरवर्जनीयत्वादिति भावः । न वेत्येतदुपपादयति – तस्येति ।

उत्तरार्धं व्यनक्ति – अकार्येति । तदीयार्थानुरोधेन कप्रत्यययान्ततया सूत्रप्रतीकग्रहणम् । सूत्रार्थस्त्वग्रे व्यक्तः ।

ವಿವರಣೆ - ಅದ್ವೈತಿಗಳ ಸಿದ್ಧಾಂತವೂ ಸಹ ಸರಿಯಿಲ್ಲ. ಅದ್ವೈತಿಗಳ ಸಿದ್ಧಾಂತವನ್ನು ಈ ಹಿಂದೆ ವಿವರಿಸಿದ್ದಾಗಿದೆ. 'ಯತಃ' ಎಂಬ ಪದಕ್ಕೆ ಶ್ಲೋಕದ ಜೊತೆಗೆ ಅನ್ವಯ.

ಬ್ರಹ್ಮನನ್ನು ಕಾರ್ಯಸ್ವರೂಪನೆನ್ನುತ್ತಿರೋ? ಅಥವಾ ಅಕಾರ್ಯಸ್ವರೂಪನೆಂದು ಸಿದ್ಧಾಂತ ಮಾಡುತ್ತೀರೋ? ಎಂಬ ವಿಕಲ್ಪಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕ್ರಮವಾಗಿ ನಿರಾಕರಿಸುತ್ತಿದ್ದಾರೆ 'ಕಾರ್ಯಬ್ರಹ್ಮ' ಇತ್ಯಾದಿ ಶ್ಲೋಕದಿಂದ.

ಶ್ಲೋಕದ ಪೂರ್ವಾರ್ಧವನ್ನು 'ನಹಿ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಕಾರ್ಯಬ್ರಹ್ಮನು ಸಂಸಾರಿಯಾಗಿರುವುದರಿಂದ ಮರಣ ಭಯ ಮೊದಲಾದವುಗಳನ್ನು ಅವನು ಬಿಟ್ಟಿರುವುದಿಲ್ಲ. 'ನ ವಾ' ಎಂಬುದನ್ನು 'ತಸ್ಯ' ಎಂಬ ವಾಕ್ಯದಿಂದ ಉಪಪಾದಿಸುತ್ತಿದ್ದಾರೆ.

ಶ್ಲೋಕದ ಉತ್ತಾರಾರ್ಧವನ್ನು 'ಅಕಾರ್ಯಬ್ರಹ್ಮ' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ವಸ್ತುತಃ 'ಶ್ರುತೋಪನಿಷನಿತ್' ಎಂದು ಪ್ರತೀಕ ಗ್ರಹಣ ಮಾಡಬೇಕಿತ್ತು. ಏಕೆಂದರೆ 'ಕ' ಶಬ್ದಕ್ಕೆ ಗತಿಯೆನ್ನುವಲ್ಲಿ ಅನ್ವಯ. ಆದರೆ ಅದ್ವೈತಿಗಳ ಪ್ರಕಾರ 'ಕ' ಶಬ್ದಕ್ಕೆ 'ಶ್ರುತೋಪನಿಷತ್' ಪದದ ಜೊತೆಗೆ ಅನ್ವಯವಿರುವುದರಿಂದ 'ಶ್ರುತೋಪನಿಷತ್ಕ' ಎಂದು ಪ್ರತೀಕವನ್ನು ಗ್ರಹಣ ಮಾಡಿದ್ದಾರೆ. ಅದ್ವೈತಿಗಳ ಸೂತ್ರಾರ್ಥವು ಮುಂದೆ ಸ್ಪಷ್ಟವಾಗುತ್ತದೆ.

प्रकाशः – एवमधिकरणशरीरं निरस्य सूत्रार्थान् निराचिकीर्षुराद्ये मन्मत इव क्रियालिङ्गपरत्वाभावेन ''अन्तस्तद्धर्म'' इतिवत् ''अन्तरुपपत्तेः'' इत्येव निर्देशः स्यादिति प्रतिज्ञादूषणं ''सूत्रक्रमस्तु'' इत्यत्रोक्तदिशा व्यक्तं, ''कार्यब्रह्म'' इत्यादिना ''उपपत्तेः'' इति हेत्वंशो दूषित इति मत्वा वा, अग्रे तत्र दोषोत्प्रेक्षामतिदिदिक्षुर्वा, द्वितीयसूत्रार्थमन्द्य निराह – यच्चेति ।

ಇಲ್ಲಿಯ ತನಕ ಅದ್ವೈತಿಗಳ ಅಧಿಕರಣಶರೀರವನ್ನು ನಿರಾಕರಿಸಿದ್ದಾಯಿತು. ಪ್ರಕೃತ ಅವರ ಸೂತ್ರಾರ್ಥವನ್ನು ನಿರಾಕರಿಸುತ್ತಿದ್ದಾರೆ. ಮೊದಲನೆಯ ಸೂತ್ರವನ್ನು ನಮ್ಮ ಮತದ ಪ್ರಕಾರ ಕ್ರಿಯಾಲಿಂಗಸಮನ್ವಯರೂಪವೆಂದು ಹೇಳುವುದಿಲ್ಲ ಹೊರತಾಗಿ ಒಳಗಿರುವಿಕೆ ಎಂಬ ಧರ್ಮವನ್ನಷ್ಟೇ

ಹೇಳುತ್ತಾರೆ. ಈ ಅರ್ಥವನ್ನು ವಿವಕ್ಷಿಸಿದಾಗ ''ಅಂತರುಪಪತ್ತೇಃ'' ಎಂದು ನಿರ್ದೇಶಿಸಿದರೆ ಸಾಕು. 'ಅಂತರ ಉಪಪತ್ತೇಃ' ಎಂಬ 'ರ' ಶಬ್ದದ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಸೂತ್ರದ ಪ್ರತಿಜ್ಞೆಯೇ ಆದ್ವೈತಿಗಳ ಪ್ರಕಾರ ತಪ್ಪಾಗುತ್ತದೆಂದು 'ಸೂತ್ರಕ್ರಮಸ್ತು' ಇತ್ಯಾದಿ ಹಿಂದಿನ ಗ್ರಂಥದಿಂದಲೇ ತಿಳಿಸಿದಂತಾಯಿತು. ಇನ್ನು 'ಉಪಪತ್ತೇಃ' ಎಂಬ ಹೇತ್ವಂಶವು 'ಕಾರ್ಯಬ್ರಹ್ಮ' ಇತ್ಯಾದಿ ಗ್ರಂಥದಿಂದ ದೂಷಿಸಿದಂತಾಯಿತು ಎಂಬ ಅಭಿಪ್ರಾಯದಿಂದ ಪ್ರತ್ಯೇಕವಾಗಿ ಇಲ್ಲಿ ಗ್ರಂಥಕಾರರು ಪ್ರಥಮ ಸೂತ್ರವನ್ನು ದೂಷಣೆ ಮಾಡಿಲ್ಲ. ಮುಂದಿನ 'ಸ್ಥಾನಾದಿವ್ಯಪದೇಶಾಚ್ಚ' ಇತ್ಯಾದಿ ಸೂತ್ರಗಳನ್ನು ದೂಷಿಸಲು ಹೊರಟಿದ್ದಾರೆ. ಮೊದಲು ಎರಡನೆಯ ಸೂತ್ರಾರ್ಥವನ್ನು ಅನುವಾದ ಮಾಡಿ 'ಯಚ್ಚ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

प्रकाशः – शङ्कानिरासायेदं सूत्रं, न त्वस्माकमिवाक्षिस्थस्य ब्रह्मत्वे हेत्वन्तरपरं, ''यः पृथिव्यां तिष्ठन्'' इति प्रक्रम्य ''यश्चक्षुषि तिष्ठन्'' इति यदन्तर्यामिस्थानं निदिष्टं तस्यैवोपासनार्थं ''य एषोऽन्तरक्षिणि'' इति व्यपदेशात् ।

ಪ್ರಥಮಸೂತ್ರದ ಮೇಲೆ ಬರುವ ಅನುಪಪತ್ತಿಯ ಪರಿಹಾರಕ್ಕಾಗಿ ಎರಡನೆಯ ಸೂತ್ರವು ಹೊರಟಿದೆಯೆಂದು ಆದ್ವೈತಿಗಳು ಹೇಳುತ್ತಾರೆ. ಹೊರತು ನಾವು ಹೇಳುವಂತೆ ಅಕ್ಷಿಸ್ಥನಾದವನು ಬ್ರಹ್ಮನೆಂಬ ವಿಷಯದಲ್ಲಿ ಈ ಸೂತ್ರವು ಮತ್ತೊಂದು ಹೇತುವನ್ನು ಹೇಳುತ್ತಿದೆಯೆಂದು ವ್ಯಾಖ್ಯಾನಿಸುವುದಿಲ್ಲ.

ಎಲ್ಲೆಡೆ ಇರುವ ಬ್ರಹ್ಮನು ಅತ್ಯಲ್ಪಸ್ಥಾನವಾದ ಚಕ್ಷುರಿಂದ್ರಿಯದಲ್ಲಿ ಇರದಿದ್ದರೂ ಕೇವಲ ಉಪಾಸನೆಗೋಸ್ಕರ ಅಕ್ಷಿಸ್ಥನೆಂದು ಶ್ರುತಿಯು ಹೇಳುತ್ತಿದೆಯೆಂಬುದಾಗಿ ಎರಡನೆಯ ಸೂತ್ರದಲ್ಲಿ ವ್ಯಾಖ್ಯಾನಿಸುತ್ತಾರೆ. ಆಂದರೆ 'ಯಃ ಪೃಥಿವ್ಯಾಂ ತಿಷ್ಠನ್' ಎಂದು ಉಪಕ್ರಮವಾದ ಪ್ರಕರಣದಲ್ಲಿ 'ಯಶ್ಚಕ್ಷುಷಿ ತಿಷ್ಠನ್' ಎಂಬುದಾಗಿ ಚಕ್ಷುಸ್ಸಿನ ಅಂತರ್ಯಾಮಿಯಾಗಿರುವನೆಂಬ ಸ್ಥಾನವನ್ನು ನಿರ್ದೇಶಿಸಿದ್ದು ಕೇವಲ ಉಪಾಸನೆಗೋಸ್ಕರ ''ಯ ಏಷೋಽಂತರಕ್ಷಿಣಿ'' ಎಂದು ಹೇಳಿರುವುದರಿಂದ.

प्रकाशः – आदिपदेन ''तस्योदिति नाम'' ''हिरण्यश्मश्रुः'' इत्याद्युक्तनाम-रूपादेरपि उपासनार्थं व्यपदेशादिति गृह्यते । 'अस्याः' अल्पस्थानत्वशङ्कायाः ।

उपलक्षणमेतत्, नामरूपादेर्जीवेऽपि सम्भवेन ब्रह्मत्वे तस्य हेतूकरणायोगाच्च-शब्दायोगाच्चेत्यपि ध्येयम् ।

ಗ್ರಂಥದಲ್ಲಿ 'ಸ್ಥಾನಾದಿಸೂತ್ರಂ' ಎಂಬಲ್ಲಿರುವ ಆದಿಪದದಿಂದ ''ತಸ್ಯೋದಿತಿ ನಾಮ'' ''ಹಿರಣ್ಯಶ್ಮಶ್ರುಃ'' ಎಂಬಲ್ಲಿ ಹೇಳಲ್ಪಟ್ಟ ''ಉತ್'' ಎಂಬ ನಾಮೋಪಾಸನೆಯನ್ನು ''ಹಿರಣ್ಯಶ್ಮಶ್ರುಃ'' ಎಂಬ ರೂಪದ ಉಪಾಸನೆಯನ್ನು ವಿವಕ್ಷಿಸಬೇಕು. 'ಅಸ್ಯಾಃ' ಎಂಬ ಪದಕ್ಕೆ ಅಲ್ಪಸ್ಥಾನತ್ವವೆಂಬ ಶಂಕೆಯೆಂದರ್ಥ.

ಕೇವಲ ಉಪಾಸನೆಗೋಸ್ಕರ ಚಕ್ಷುರಂತಸ್ಥತ್ವವನ್ನು ಹೇಳುವ ಅವಶ್ಯಕತೆಯಿಲ್ಲ. ಅರ್ಥಕೌಕಸ್ತ್ವದ ಸೂತ್ರದಿಂದಲೇ ಇದು ಸಿದ್ಧವಾಗುತ್ತದೆಂಬ ದೋಷವನ್ನು ಗ್ರಂಥದಲ್ಲಿ ಹೇಳಲಾಗಿದೆ. ಇದು ಕೇವಲ ಉಪಲಕ್ಷಣವಾಗಿದೆ. 'ನಾಮೋಪಾಸನೆ' ಹಾಗೂ 'ರೂಪೋಪಾಸನೆ'ಗಳನ್ನು ಜೀವನಲ್ಲಿಯೂ ಹೇಳಬಹುದಾದ್ದರಿಂದ ಬ್ರಹ್ಮನೆನಿಸಲು ಈ ಉಪಾಸನೆಗಳು ಕಾರಣವಾಗುವುದಿಲ್ಲ. ಆದ್ದರಿಂದಲೇ ''ಸ್ಥಾನಾದಿವ್ಯಪದೇಶಾಚ್ಚ'' ಎಂಬ ಸೂತ್ರದಲ್ಲಿ ಮತ್ತೊಂದು ಹೇತುವೆಂದು ತಿಳಿಸುವ 'ಚ' ಶಬ್ದವು ಅಯುಕ್ತವಾಗುತ್ತದೆಂದು ತಿಳಿಯಬೇಕು.

ಪ್ರಕಾಶಃ – ವಾಕ್ಯಶೇಷೋಕ್ತಮಿತಿ । ತನ್ಮತೆ ''ಯಚ್ಚಾವ ಕಂ ತದೇವ ಖಂ ಯದೇವ ಖಂ ತದೇವ ಕಂ'' ಇತಿ ವಾಕ್ಯಶೇಷೆ ''ಕಂ ಬ್ರಹ್ಮ'' ಇತ್ಯುಕ್ತಶಬ್ದಸ್ಯ ಲೌಕಿಕಸುಖಪರತ್ವನಿರಾಸಾಯಾ-ಪರಿಚ್ಛಿನ್ನವಾಚಿನಾ ಖಶಬ್ದೇನ ವಿಶೇಷಣಾತ್ಸುಖಸ್ಯಾಪರಿಚ್ಛಿನ್ನತ್ವಂ ಲಭ್ಯತ ಇತ್ಯಙ್ಗೀಕಾರಾದೇವ-ಮುಕ್ತಮ್ ।

ನನು ಶುದ್ಧಸ್ಯ ತದಭಾವೇऽಪಿ ವಿಶಿಷ್ಟಸ್ಯ ಬ್ರಹ್ಮಣಃ ಸುಖಸಮ್ಬನ್ಧೋ ನಾಯುಕ್ತ ಇತ್ಯತ ಆಹ – ವಿಶಿಷ್ಟಸ್ಯೇತಿ ।

ಆದ್ವೈತಿಗಳು 'ಸುಖವಿಶಿಷ್ಟಾಭಿಧಾನಾದೇವಚ' ಎಂಬ ಮೂರನೇ ಸೂತ್ರವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ. - ಪ್ರಕರಣದ ಆರಂಭದಲ್ಲಿ ''ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮ'' ಎಂದು ಸುಖವಿಶಿಷ್ಟನಾದ ಬ್ರಹ್ಮನನ್ನು ಹೇಳಿರುವುದರಿಂದಲೂ ಪ್ರಕೃತ ಶ್ರುತಿಯಲ್ಲಿ ಹೇಳಲ್ಪಟ್ಟ ಅಕ್ಷಿಸ್ಥನು ಪರಬ್ರಹ್ಮನೇ ಆಗುತ್ತಾನೆ. ಆದ್ದರಿಂದಲೇ ಅಗ್ನಿದೇವತೆಯು ತನ್ನ ಮಹತ್ವವನ್ನು ಹೇಳಿ ಮೊದಲು ಪ್ರಸ್ತುತನಾದ ಬ್ರಹ್ಮನ ಬಗ್ಗೆಯೂ ಹೇಳಿ 'ಅಸ್ಮದ್ವಿದ್ಯಾ ಆತ್ಮವಿದ್ಯಾ' ಎಂದು ಉಪದೇಶಿಸಲಾಗಿದೆ. ಕೊನೆಯಲ್ಲಿ ವಿದ್ಯೆ ಫಲಿಸಬೇಕಾದ್ದರಿಂದ ನಿನ್ನ ಗುರುಗಳು ವಿದ್ಯೆಯಿಂದುಂಟಾಗುವ ಫಲವನ್ನು ಉಪದೇಶಿಸಲಾಗಿದೆ. ಮುಂದೆ ಗುರುಗಳು ಪದ್ಮಪತ್ರದಂತೆ ಅಕ್ಷಿಸ್ಥನಲ್ಲಿರುವ ಜ್ಞಾನದಿಂದ ಪಾಪದ ಅಲೇಪ ಹಾಗೂ ಬ್ರಹ್ಮನ ಪ್ರಾಪ್ತಿಯು ಉಂಟಾಗುತ್ತದೆಂದು ಉಪದೇಶಿಸುತ್ತಾರೆ.

ಹೀಗೆ ವ್ಯಾಖ್ಯಾನಿಸುವಾಗ ''ಯದ್ವಾವ ಕಂ ತದೇವ ಖಂ ಯದೇವ ಖಂ ತದೇವ ಕಂ'' ಎಂಬ ವಾಕ್ಯಶೇಷದಲ್ಲಿ ''ಕಂ ಬ್ರಹ್ಮ'' ಎಂಬಲ್ಲಿರುವ 'ಕ' ಶಬ್ದವು ಲೌಕಿಕಸುಖವನ್ನು ಹೇಳುತ್ತದೆಂಬ ಭ್ರಾಂತಿ ಬರುತ್ತದೆ. ಅದನ್ನು ನಿರಾಸ ಮಾಡುವುದಕ್ಕಾಗಿ ಅಪರಿಚ್ಛಿನ್ನತ್ವವನ್ನು ಸುಖದಲ್ಲಿ ವಿಶೇಷಣವನ್ನಾಗಿ ಹೇಳುವ 'ಖ' ಶಬ್ದವನ್ನು ಶ್ರುತಿಯು ಹೇಳಿದೆ. ಇದರಿಂದ ಸುಖವು ಅಪರಿಚ್ಛಿನ್ನವಾಗಿದೆಯೆಂಬರ್ಥವು ತಿಳಿಯುತ್ತದೆಂದು ಹೇಳಬೇಕು. ಇಲ್ಲದಿದ್ದರೆ ಕೇವಲ ಸುಖಸಂಬಂಧವನ್ನು ಹೇಳಿದಂತಾಗಿ ಜೀವನೂ ಸಹ ಅಕ್ಷಿಸ್ಥನಾಗಬೇಕಾಗುತ್ತದೆ.

ಶುದ್ಧಬ್ರಹ್ಮನಿಗೆ ಸುಖದ ಸಂಬಂಧವು ಬಾರದಿದ್ದರೂ ವಿಶಿಷ್ಟಬ್ರಹ್ಮನಿಗೆ ಸುಖದ ಸಂಬಂಧವನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ 'ವಿಶಿಷ್ಟಸ್ಯಾಪಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಶ್ರುತ್ಯನ್ತರ ಇತಿ । ''ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾऽऽತ್ಮಾನಮನ್ವಿಷ್ಯಾऽऽದಿತ್ಯಮಭಿಜಯನ್ತೇ ಏತದ್ವೈ ಪ್ರಾಣಾನಾಮಾಯತನಂ ಏತದಮೃತಮಭಯಮೇತತ್ ಪರಾಯಣಮೇತಸ್ಮಾನ್ನ ಪುನರಾವರ್ತನ್ತೇ'' ಇತಿ ವಾಜಸನೇಯಪ್ರಸಿದ್ಧೇತ್ಯರ್ಥಃ । ಇಹೇತಿ । ''ಯದು ಚೈವಾಸ್ಮಿನ್ ಶವ್ಯಂ ಕರ್ಮ ಕುರ್ವನ್ತಿ ಯದು ಚ ನಾರ್ಚಿಷಮೇವಾಭಿಸಮ್ಭವನ್ತಿ'' ಇತ್ಯಾದಿನೇತ್ಯರ್ಥಃ ।

'ಶ್ರುತೋಪನಿಷತ್ಕಗತ್ಯಭಿಧಾನಾಚ್ಚ' ಎಂಬ ಸೂತ್ರಕ್ಕೆ ಆದ್ಯೈತಿಗಳ ವ್ಯಾಖ್ಯಾನ ಹೀಗಿದೆ - ಶ್ರುತೋಪನಿಷತ್ಕಸ್ಯ = ರಹಸ್ಯವಿದ್ಯೆಯನ್ನು ತಿಳಿದ ಬ್ರಹ್ಮಜ್ಞಾನಿಯು ಶ್ರುತ್ಯಂತರದಲ್ಲಿ ಪ್ರಸಿದ್ಧವಾದ ಅರ್ಚಿರಾದ - ಮಾರ್ಗವೆಂಬ ಗತಿಯನ್ನು ಹೊಂದುತ್ತಾನೆಂದು ಶ್ರುತ್ಯಂತರದಲ್ಲಿ ಹೇಳಲಾಗಿದೆ. ಆದ್ದರಿಂದ ಪ್ರಕೃತ ಶ್ರುತಿಯಲ್ಲಿ ಅಕ್ಷಿಸ್ಥನಾದವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಯಾರು ಬ್ರಹ್ಮಜ್ಞಾನಿಯಲ್ಲವೋ ಅವನಿಗೆ ಅರ್ಚಿರಾದಿ ಮಾರ್ಗದಲ್ಲಿ ಪ್ರವೇಶವಿರುವುದಿಲ್ಲವೆಂದು.

ಶ್ರುತ್ಯಂತರವೆಂದರೆ ''ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾऽऽತ್ಮಾನ-ಮನ್ವಿಷ್ಯಾऽऽದಿತ್ಯಮಭಿಜಯಂತೇ ಏತದ್ವೈ ಪ್ರಾಣಾನಾಮಾಯತನಂ ಏತದಮೃತಮಭಯಮೇತತ್ ಪರಾಯಣಮೇತಸ್ಮಾನ್ನ ಪುನರಾವರ್ತಂತೇ'' ಎಂಬ ವಾಜಸನೇಯ ಶ್ರುತಿಯಲ್ಲಿ ಪ್ರಸಿದ್ಧವಾದ ಮಾರ್ಗೋಪದೇಶವೆಂದರ್ಥ. 'ಇಹ' ಎಂದರೆ ''ಯದು ಚೈವಾಸ್ಮಿನ್ ಶವ್ಯಂ ಕರ್ಮ ಕುರ್ವಂತಿ ಯದು ಚ ನಾರ್ಚಿಷಮೇವಾಭಿಸಂಭವಂತಿ'' ಎಂಬ ಶ್ರುತಿಯಲ್ಲಿ ಎಂದರ್ಥ.

ಪ್ರಕಾಶಃ – ಪ್ರಮೇಯಾನುಪಪತ್ತಿಮುಕ್ತ್ವಾ ಸೂತ್ರಾಸ್ವಾರಸ್ಯಮಾಹ – ಕಿಞ್ಚೇತಿ । ಇತಿ ಸೂತ್ರ ಇತಿ । ಸೂತ್ರವ್ಯಕ್ತೀಕರಣ ಇತ್ಯರ್ಥಃ । ಕಥಂ ಸಾಕ್ಷಾದ್ಬ್ರಹ್ಮವಿಷಯತ್ವಮಿತ್ಯತ ಆಹ – ವಿದ್ಯೇತಿ । ನ ಹ್ಯನ್ಯವಿದ್ಯಯಾऽನ್ಯಪ್ರಾಪ್ತಿರ್ಯುಕ್ತೇತಿ ಭಾವಃ । ನ ತ್ವಿತಿ । ತತ್ಸಿದ್ಧಿರಿತಿ ಸಮ್ಬನ್ಧಃ । ವಕ್ತವ್ಯಂ ಚೈವಮೇವ, ಅನ್ಯಥಾ 'ಶ್ರುತೋಪನಿಷತ್ಕತ್ಯಭಿಧಾನಾತ್, ಇತ್ಯೇತಾವತಾ ಪೂರ್ಣತ್ವೇನ ಕಶಬ್ದವೈಯರ್ಥ್ಯಾತ್, ನಚ ಬಹುವ್ರೀಹಿಸಮಾಸಾನ್ತಾನುಪಾದಾನೇ ಅಪಶಬ್ದತಾ ಸ್ಯಾದಿತಿ ವಾಚ್ಯಂ, ತಸ್ಯ ವಿಕಲ್ಪಿತತ್ವೇನ ಕಪ್ರತ್ಯಯಂ ವಿನಾऽಪಿ ವಕ್ತುಂ ಶಕ್ಯತ್ವಾದಿತ್ಯಾಹ – ವ್ಯರ್ಥಶ್ಚೇತಿ ।। ನ ಸ್ವರಸ ಇತಿ । ತಸ್ಯ ಭಾವಾರ್ಥಕಕ್ತಿನನ್ತಸ್ಯ ಪ್ರಾಸ್ತ್ಯರ್ಥತ್ವೇನ ಮಾರ್ಗೇ ತಚ್ಛೇತುತ್ವಾದಿನಾ ಕಥಞ್ಚಿದ್ವಕ್ತವ್ಯತ್ವಾದಿತಿ ಭಾವಃ ।

ಪ್ರಮೇಯದಲ್ಲಿ ಅನುಪಪತ್ತಿಯನ್ನು ಹೇಳಿ ಸೂತ್ರದ ಆಸ್ವಾರಸ್ಯವನ್ನು 'ಕಿಂಚ' ಎಂಬ ಗ್ರಂಥದಿಂದ ತೋರಿಸುತ್ತಿದ್ದಾರೆ. 'ಇತಿ ಸೂತ್ರೇ' ಅಂದರೆ 'ಶ್ರುತೋಪನಿಷತ್ಕಗತ್ಯಭಿಧಾನಾತ್' ಎಂದು ವಿಭಾಗ ಮಾಡಿದರೆ ಎಂದರ್ಥ. ಇದರಿಂದ ಸಾಕ್ಷಾತ್ ಬ್ರಹ್ಮವಿಷಯತ್ವವು ಹೇಗೆ ತಿಳಿಯುತ್ತದೆ ? ಎಂದು ಪ್ರಶ್ನಿಸಿದರೆ 'ವಿದ್ಯಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಮತ್ತೊಬ್ಬನ ವಿದ್ಯೆಯಿಂದ ಇನ್ನೊಬ್ಬನನ್ನು ಹೊಂದಲು ಸಾಧ್ಯವಿಲ್ಲವೆಂದು ಅಭಿಪ್ರಾಯ. 'ನತು'' ಎಂಬ ಪದಕ್ಕೆ 'ತತ್ಸಿದ್ಧಿಃ' ಎಂಬಲ್ಲಿ ಅನ್ವಯ. ಹೀಗೆ ನಮ್ಮ ಪ್ರಕಾರವೇ

ಸೂತ್ರದ ಅನ್ವಯವನ್ನು ವಿವಕ್ಷಿಸಬೇಕು. ಇಲ್ಲದಿದ್ದರೆ ''ಶ್ರುತೋಪನಿಷತ್ಕಗತ್ಯಭಿಧಾನಾತ್'' ಎಂಬುದರಿಂದಲೇ ನಿಮ್ಮ ಉದ್ದೇಶವು ಈಡೇರುವಾಗ 'ಕ' ಶಬ್ದವು ವ್ಯರ್ಥವಾಗುತ್ತದೆ.

ಬಹುವ್ರೀಹಿ ಸಮಾಸವನ್ನು ತಿಳಿಸುವುದಕ್ಕಾಗಿ 'ಕ' ಶಬ್ದವು ಸಾರ್ಥಕವಲ್ಲವೇ? ಎಂದು ಪ್ರಶ್ನಿಸಬಾರದು. ಬಹುವ್ರೀಹಿ ಸಮಾಸವನ್ನು ವಿಧಿಸುವ ಸೂತ್ರದಲ್ಲಿ 'ಕ' ಶಬ್ದವನ್ನು ವಿಕಲ್ಪವಾಗಿ ವಿಧಿಸಿದ್ದರಿಂದ 'ಕ' ಶಬ್ದವನ್ನು ಹೇಳಲೇಬೇಕೆಂಬ ನಿಯಮವಿಲ್ಲ. ಈ ಅಭಿಪ್ರಾಯದಿಂದ 'ವ್ಯರ್ಥಶ್ಚ' ಇತ್ಯಾದಿ ವಾಕ್ಯವು ಹೊರಟಿದೆ.

'ನ ಸ್ವರಸಃ' ಎಂದರೆ 'ಗತಿ' ಶಬ್ದವು ಭಾವಾರ್ಥದಲ್ಲಿರುವ 'ಕ್ತಿನ್' ಪ್ರತ್ಯಯಾಂತವಾಗಿದೆ. ಆದ್ದರಿಂದ 'ಗತಿ' ಶಬ್ದಕ್ಕೆ 'ಪ್ರಾಪ್ತಿ' ಎಂಬ ಅರ್ಥವಿರುವುದರಿಂದ ಅರ್ಚಿರಾದಿ ಮಾರ್ಗದಲ್ಲಿ ಹೇತುವೆಂದು ಕಥಂಚಿತ್ ಹೇಳಬೇಕು. ಇದು ಸ್ವರಸವಲ್ಲ.

ಪ್ರಕಾಶಃ – ಪ್ರಸಿದ್ಧಾರ್ಥೇತಿ । ಅಪರ್ಯವಸಿತಾನೇಕವ್ಯಕ್ತಿಕಲ್ಪನಾರೂಪಾನವಸ್ಥಾನೇ ಪ್ರಸಿದ್ಧತ್ವಾದಿತ್ಯರ್ಥಃ । ಸದೇತಿ । ಸದಾಶಬ್ದಸ್ಯ ''ಚಕ್ಷುಷ್ಯೇವ'' ಇತ್ಯಸ್ಯ 'ಅಮೃತತ್ವಾದೀನಾಂ' ಇತ್ಯಸ್ಯ ಚಾಧ್ಯಾಹಾರಾದಿತ್ಯರ್ಥಃ । ಆದ್ಯಸೂತ್ರಸ್ಯೋಪಪತ್ತೇರಿತ್ಯಂಶೇನ ''ಅಸಂಭವಾತ್'' ಇತ್ಯಂಶಸ್ಯ ಪೌನರುಕ್ತ್ಯಮಾಹ – ಉಪಪತ್ತೇರಿತಿ ।

'ಅನವಸ್ಥಾ' ಶಬ್ದಕ್ಕೆ ಅಪರ್ಯವಸಿತವಾದ ಎಂಬ ಅನೇಕ ವ್ಯಕ್ತಿ ಕಲ್ಪನೆಯೆಂಬ ಅರ್ಥವು ಪ್ರಸಿದ್ಧವಾಗಿದೆ. ಇದನ್ನು ಬಿಟ್ಟು ಚಕ್ಷುರಿಂದ್ರಿಯದಲ್ಲಿ ಅವಸ್ಥಿತನಾಗುವುದಿಲ್ಲ ಎಂಬರ್ಥವನ್ನು ಹೇಳುವುದು ಸರಿಯಲ್ಲವೆಂದು ತಿಳಿಯಬೇಕು. 'ಸದಾ' ಎಂದರೆ ಸೂತ್ರದಲ್ಲಿ 'ಸದಾ' ಎಂಬ ಶಬ್ದವನ್ನು 'ಚಕ್ಷುಷ್ಯೇವ' ಎಂಬ ಶಬ್ದವನ್ನು 'ಅಮೃತತ್ವಾದೀನಾಂ' ಎಂಬ ಪದವನ್ನೂ ಸಹ ಅಧ್ಯಾಹಾರ ಮಾಡಿಕೊಳ್ಳಬೇಕಾದ ಪ್ರಸಂಗ ಬರುತ್ತದೆಂದರ್ಥ.

ಮೊದಲನೆಯ ಸೂತ್ರದಲ್ಲಿರುವ 'ಉಪಪತ್ತೇಃ' ಎಂಬ ಅಂಶದಿಂದ 'ಅಸಂಭವಾತ್' ಎಂಬ ಅಂಶವು ಪುನರುಕ್ತವಾಗಿದೆಯೆಂದು 'ಉಪಪತ್ತೇಃ' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – ಏವಮುಕ್ತಮಾರ್ಥಿಕಪೌನರುಕ್ತ್ಯಮಧಿಕರಣಾನ್ತರಸ್ಥಸೂತ್ರೇಷ್ವಪ್ಯನುಸನ್ಧೇಯಮಿತ್ಯಾಹ – ಏವಮಿತಿ । ''ಅತದ್ಧರ್ಮಾಭಿಲಾಪಾತ್'' ''ಅತಚ್ಛಬ್ದಾತ್'' ಇತ್ಯಾದೌ ಸೂತ್ರಾನ್ತರ ಇತಿ ಭಾವಃ ।

ಯದ್ವಾ – ಸ್ಥಾನಾದಿಸೂತ್ರಚತುಷ್ಟಯೇऽನುಪಪತ್ತಿಮುಕ್ತ್ವಾ ಆದ್ಯಸೂತ್ರೇऽಪ್ಯನುಪಪತ್ತಿರೂಹ್ಯೇತ್ಯಾಹ – ಏವಮಿತಿ । ಸಾ ಚ ವಿವೃತಾ ಪ್ರಾಗಸ್ಮಾಭಿಃ ।। ತದ್ದೂಷಣೇನೈವೇತಿ ।

ಈ ರೀತಿಯಾಗಿ ಆರ್ಥಿಕ ಪುನರುಕ್ತಿಯನ್ನು ಬೇರೆ ಅಧಿಕರಣಗಳಲ್ಲಿರುವ ಸೂತ್ರಗಳಲ್ಲಿಯೂ ತಿಳಿಯಬೇಕೆಂಬುದಾಗಿ 'ಏವಂ' ಎಂಬ ಗ್ರಂಥದಿಂದ ಹೇಳಿದ್ದಾರೆ. ಬೇರೆ ಅಧಿಕರಣಗಳಲ್ಲಿರುವ ಸೂತ್ರಗಳೆಂದರೆ 'ಅತದ್ಧರ್ಮಾಭಿಲಾಪಾತ್', 'ಅತಚ್ಛಬ್ದಾತ್' ಇತ್ಯಾದಿ ಸೂತ್ರಗಳು.

ಅಥವಾ ಇದೇ ಅಧಿಕರಣದಲ್ಲಿರುವ ಸ್ಥಾನಾದಿ ನಾಲ್ಕು ಸೂತ್ರಗಳಲ್ಲಿ ಅನುಪಪತ್ತಿಯನ್ನು ಹೇಳಿ ಮೊದಲನೆಯ ಸೂತ್ರದಲ್ಲಿಯೂ ಸಹ ಈ ಅನುಪಪತ್ತಿಯನ್ನು ಊಹಿಸಿಕೊಳ್ಳಬೇಕೆಂದು 'ಏವಂ' ಇತ್ಯಾದಿ ಗ್ರಂಥ ಹೇಳುತ್ತಿದೆ. ಈಗಾಗಲೇ ಅನುಪಪತ್ತಿಯನ್ನು ನಾವು ವಿವರಿಸಿದ್ದಾಗಿದೆ. ಇವರ ಮತವನ್ನು ನಿರಾಕರಿಸಿದ್ದರಿಂದಲೇ ರಾಮಾನುಜರ ಸೂತ್ರಾರ್ಥಗಳನ್ನೂ ಸಹ ನಿರಾಕರಿಸಿದಂತಾಯಿತು.

ಪ್ರಕಾಶಃ – ಏತೇನ ಸುಧಾದೌ ಪೃಥಗ್ರಾಮನುಜಮತಾದೂಷಣೇ ಬೀಜಂ ಸೂಚಿತಮ್ । ತಥಾಹಿ – ಪೌನರುಕ್ತ್ಯಂ ತನ್ಮತೇऽप್ಯುಪಪಾದಿತಮೇವ । ಪೂರ್ವಪಕ್ಷಾನುದಯಶ್ಚ ಪೂರ್ವಸ್ಮಾದ್ವಿಶೇಷಹೇತ್ವಭಾವೇನ ಸ್ಪಷ್ಟಃ । ಆದ್ಯಸೂತ್ರೇ 'ಅನ್ತಃ' ಇತ್ಯೇವ ನಿರ್ದೇಶಪ್ರಸಙ್ಗಾದನ್ತರಶಬ್ದಾಸ್ವಾರಸ್ಯಮ್ ।

ಹೀಗೆ ಹೇಳಿದ್ದರಿಂದ ನ್ಯಾಯಸುಧೆಯಲ್ಲಿ ಪ್ರತ್ಯೇಕವಾಗಿ ರಾಮಾನುಜಮತವನ್ನು ದೂಷಿಸಬೇಕಾಗಿಲ್ಲವೆಂದು ಸೂಚಿಸಿದ್ದಾರೆ. ಅಂದರೆ ಅದ್ವೈತಮತವನ್ನು ನಿರಾಕರಿಸಿದ್ದರಿಂದಲೇ ರಾಮಾನುಜಮತವನ್ನೂ ಸಹ ನಿರಾಕರಿಸಿದಂತಾಯಿತು. ಅದು ಹೀಗೆ - ಅಂತಸ್ತದ್ಧ್ಯಾಧಿಕರಣದಿಂದ ಪುನರುಕ್ತಿ ದೋಷವು ಅದ್ವೈತಿಗಳಿಗೆ ಹೇಗೆ ಇದೆಯೋ? ಅದರಂತೆ ರಾಮಾನುಜರಿಗೂ ಸಹ ಇದೆಯೆಂದು ಈ ಹಿಂದೆಯೇ ಉಪಪಾದಿಸಿದ್ದಾಗಿದೆ. ಮತ್ತು ಅಂತಸ್ತದ್ಧ್ಯಾಧಿಕರಣದ ಪೂರ್ವಪಕ್ಷಕ್ಕಿಂತ ವಿಭಿನ್ನವಾದ ಪೂರ್ವಪಕ್ಷವನ್ನು ಈ ಅಧಿಕರಣದಲ್ಲಿ ಹೇಳದ ಕಾರಣ ಎರಡೂ ಅಧಿಕರಣಗಳಿಗೆ ಭೇದಕವಾದ ಧರ್ಮಗಳಿಲ್ಲವೆಂಬುದು ಸ್ಪಷ್ಟವಾಗಿದೆ.

ಮತ್ತು ಪ್ರಥಮಸೂತ್ರದಲ್ಲಿ ಅಂತರ್ಗತನೆಂಬರ್ಥವನ್ನಷ್ಟೇ ಇವರೂ ಸಹ ಹೇಳುವುದರಿಂದ 'ಅಂತಃ' ಎಂದಷ್ಟೇ ಸೂತ್ರದಲ್ಲಿ ನಿರ್ದೇಶಿಸಿದರೆ ಸಾಕು. 'ರ' ಶಬ್ದಕ್ಕೆ ಸಾರ್ಥಕ್ಯವಿರುವುದಿಲ್ಲ. 'ಅಂತರಃ' ಎಂಬ ಶಬ್ದವು ಅಸ್ವರಸವಾಗುತ್ತದೆ.

ಪ್ರಕಾಶಃ – ಯಚ್ಚೋಕ್ತಂ ''ಸ್ಥಾನಾದಿವ್ಯಪದೇಶಾಚ್ಚ'' ಇತ್ಯಸ್ಯ 'ಸ್ಥಾನಂ' ಸ್ಥಿತಿಃ, ಆದಿಪದೇನ ನಿಯಮನಾದಿಕಮುಚ್ಯತೇ, ಚಕ್ಷುಷಿ ಸ್ಥಿತಿನಿಯಮನಾದೀನಾಂ ಪರಮಾತ್ಮನ ಏವ ''ಯಶ್ಚಕ್ಷುಷಿ ತಿಷ್ಠನ್'' ಇತ್ಯಾದೌ ವ್ಯಪದೇಶಾಚ್ಚೇತ್ಯರ್ಥ ಇತಿ,

ಇನ್ನು ಎರಡನೆಯ ''ಸ್ಥಾನಾದಿವ್ಯಪದೇಶಾಚ್ಚ'' ಎಂಬ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ. 'ಸ್ಥಾನ' ಶಬ್ದಕ್ಕೆ ಸ್ಥಿತಿಯೆಂದರ್ಥ. ಆದಿಪದದಿಂದ ನಿಯಮನಾದಿಗಳನ್ನು ವಿವಕ್ಷಿಸಬೇಕು. ಆದ್ದರಿಂದ ಚಕ್ಷುರಿಂದ್ರಿಯದಲ್ಲಿ ಸ್ಥಿತಿ, ನಿಯಮನ ಮೊದಲಾದವನ್ನು ನಡೆಸುವವನು ಪರಮಾತ್ಮನೇ ಆಗಿದ್ದಾನೆಂದು ''ಯಶ್ಚಕ್ಷುಷಿ ತಿಷ್ಠನ್'' ಎಂಬ ಶ್ರುತಿಯು ಹೇಳುತ್ತಿದೆಯೆಂದು ಅರ್ಥ.

ಪ್ರಕಾಶಃ – ತತ್ರ, ಅಸ್ಮದ್ಗೀತ್ಯಾ ಸ್ವವಾಕ್ಯಗತಹೇತೂಕ್ತಿತ್ಪರತ್ವಸಮ್ಭವೇ ಶ್ರುತ್ಯನ್ತರಪ್ರದರ್ಶನ-ಪರತ್ವಾಯೋಗಾತ್ । ಸ್ಥಾನಶಬ್ದಸ್ಯಾಧಿಷ್ಠಾನಪರತ್ವಪ್ರಸಿದ್ಧ್ಯಾ ಪ್ರಸಿದ್ಧಾರ್ಥತ್ಯಾಗಾऽऽಪಾತಾಚ್ಚ । ಪ್ರತಿಪತ್ತ್ಯೇಕಮಾತ್ರಯೋರ್ಲಾಘವೇನ 'ಸ್ಥಿತ್ಯಾದಿ' ಇತಿ ನಿರ್ದೇಶಾಪಾತಾಚ್ಚ ।

ಇದು ತಪ್ಪು. ನಮ್ಮ ಮತದ ಪ್ರಕಾರ ವಿಷಯವಾಕ್ಯದಲ್ಲೇ ಇರುವ ಹೇತುವನ್ನು ಸೂತ್ರವು ಸಮರ್ಥಿಸುತ್ತಿದೆ ಎಂದು ಹೇಳಲು ಬರುವಾಗ ಬೇರೆ ಶ್ರುತಿಯನ್ನು ವಿವಕ್ಷಿಸುವುದು ತಪ್ಪಾಗುತ್ತದೆ. ಮತ್ತು 'ಸ್ಥಾನ' ಶಬ್ದಕ್ಕೆ 'ಅಧಿಷ್ಠಾನ' ಎಂಬರ್ಥವು ಪ್ರಸಿದ್ಧವಾಗಿರುವಾಗ ಅಪ್ರಸಿದ್ಧಾರ್ಥವನ್ನು ಸ್ವೀಕರಿಸುವುದು ಸರಿಯಲ್ಲ.

ಮತ್ತು ನಿಮ್ಮ ಪ್ರಕಾರ ವ್ಯಾಖ್ಯಾನಿಸುವುದಾದರೆ 'ಸ್ಥಾನಾದಿ' ಎಂದು ಹೇಳುವುದಕ್ಕಿಂತ 'ಸ್ಥಿತ್ಯಾದಿ' ಎಂದೇ ಸೂತ್ರದಲ್ಲಿ ಹೇಳಬೇಕು. ಹೀಗೆ ಹೇಳಿದಾಗ ಸ್ಥಿತಿ, ನಿಯಮನಗಳು ಬುದ್ಧಿಯಲ್ಲಿ ಕೂಡಲೇ ಉಪಸ್ಥಿತವಾಗುತ್ತವೆ. ಮತ್ತು 'ಸ್ಥಾನಾದಿ' ಎಂಬ ಪದಕ್ಕಿಂತ 'ಸ್ಥಿತ್ಯಾದಿ' ಎಂಬ ಪದದಲ್ಲಿ ಏಕಮಾತ್ರಾಕಾಲದಿಂದ ಲಾಘವವೂ ಇದೆ. ಹೀಗೆ ಅಲ್ಪಾಕ್ಷರತ್ವದ ಲಾಭಕ್ಕೋಸ್ಕರವೂ ಸಹ 'ಸ್ಥಿತ್ಯಾದಿ' ಎಂದು ನಿರ್ದೇಶಿಸುವುದೇ ಸೂಕ್ತ.

प्रकाशः – यदपि ''कं ब्रह्म'' इति प्रकृतस्य सुखत्वविशिष्टस्य सुखविशिष्टस्य वा ब्रह्मणो ''य एषोऽन्तरक्षिणि'' इत्यादिनोपासनास्थानविधानार्थं संयद्वामत्वादि-गुणविधानार्थं चाभिधानाच्चेति तृतीयार्थ इति,

ಮೂರನೆಯ ಸೂತ್ರಕ್ಕೆ ರಾಮಾನುಜರು ಹೀಗೆ ವ್ಯಾಖ್ಯಾನಿಸುತ್ತಾರೆ - ''ಕಂ ಬ್ರಹ್ಮ'' ಎಂಬುದಾಗಿ ಸುಖತ್ವವಿಶಿಷ್ಟನಾದ ಅಥವಾ ಸುಖವಿಶಿಷ್ಟನಾದ ಬ್ರಹ್ಮನು ಪ್ರಕೃತನಾಗಿದ್ದಾನೆ. ಇಂತಹ ಬ್ರಹ್ಮನಿಗೆ ''ಯ ಏಷೋऽಂತರಕ್ಷಿಣಿ'' ಇತ್ಯಾದಿ ವಾಕ್ಯದಲ್ಲಿ ಉಪಾಸನಾಸ್ಥಾನವನ್ನು ವಿಧಾನ ಮಾಡುವುದಕ್ಕೋಸ್ಕರ ಸಂಯದ್ವಾಮತ್ವಾದಿಗುಣಗಳನ್ನು ವಿಧಾನ ಮಾಡುತ್ತಿದ್ದಾರೆ. ಇದರಿಂದ ಅಕ್ಷಿಸ್ಥನಾದವನು ಬ್ರಹ್ಮನೆಂದು ತಿಳಿಯುತ್ತದೆ.

प्रकाशः – तन्न, भावप्रधानताकल्पनापातात् । ''कं ब्रह्म'' इति सुखमात्राभिधानेन सुखसम्बन्धाभिधानाभावेन विशिष्टपदायोगाच्च । सुखसम्बन्ध-मात्रस्य व्यभिचारित्वेन त्वद्रीत्या ''यदेव कं तदेव खं'' इति वाक्यशेषोक्ता-परिच्छिन्नत्वरूपश्रैष्ठ्यस्यैव विशिष्टशब्दार्थन्त्वेन वक्तव्यत्वाच्च ।

ಇದು ತಪ್ಪು. ಸುಖತ್ವವಿಶಿಷ್ಟನಾದ ಬ್ರಹ್ಮನನ್ನು ಹೇಳಿದರೆ ಭಾವಪ್ರಧಾನವನ್ನು ಕಲ್ಪಿಸಬೇಕೆಂಬ ಅಸ್ವಾರಸ್ಯವಿದೆ. ಸುಖವಿಶಿಷ್ಟನೆಂಬ ಬ್ರಹ್ಮನನ್ನು ಹೇಳಿದರೆ ಸುಖಸಂಬಂಧವನ್ನು ಹೇಳಿದಂತಾಗುತ್ತದೆ. ಆವಾಗ ಅದ್ವೈತಮತದಂತೆ ವಿಶಿಷ್ಟಪದವು ವ್ಯರ್ಥವಾಗುತ್ತದೆ.

ಮತ್ತು ಸುಖಸಂಬಂಧವನ್ನು ಹೇತುವನ್ನಾಗಿ ಮಾಡಿದರೆ ವ್ಯಭಿಚಾರದೋಷವೂ ಬರುತ್ತದೆ. ಅದನ್ನು ಪರಿಹರಿಸುವುದಕ್ಕಾಗಿ 'ಯದೇವ ಕಂ ತದೇವ ಖಂ' ಎಂಬ ವಾಕ್ಯಶೇಷದಲ್ಲಿ ಹೇಳಲ್ಪಟ್ಟ ಅಪರಿಚ್ಛಿನ್ನತ್ವವೆಂಬ ಶ್ರೇಷ್ಠತ್ವವನ್ನು ಸುಖದಲ್ಲಿ ವಿಶೇಷಣವನ್ನಾಗಿ ಹೇಳಬೇಕು. ಹೀಗೆ ಹೇಳಿದಾಗ ನಮ್ಮ ಪ್ರಕಾರವೇ ವಿಶಿಷ್ಟಶಬ್ದದ ಅರ್ಥವನ್ನು ವ್ಯಾಖ್ಯಾನಿಸಿದಂತಾಗುತ್ತದೆ.

प्रकाशः – ''कं ब्रह्म खं ब्रह्म'' इत्युक्तयोः कखयोर्भेदशङ्क्या ''कं च खं च तु न विजानामि'' इति प्रश्ने कखशब्दोक्तयोः आनन्दज्ञानयोर्न भेद इति भावेन ''यदेव कं तदेव खं'' इति वाक्यशेषस्य प्रवृत्तत्वेन तेनापरिच्छिन्नत्वालाभाद्ब्रह्मशब्देनैव सुखेऽपरिच्छिन्नत्वरूपवैशिष्ट्यस्यैवोक्तित्याच्च ।

ಅಷ್ಟೇ ಅಲ್ಲದೆ ಉಪನಿಷತ್ತಿಗೆ ಹೇಳಿದ ಅರ್ಥವೂ ಸಹ ತಪ್ಪಾಗುತ್ತದೆ. 'ಯದ್ವಾವ ಕಂ ತದೇವ ಖಂ' ಎಂಬಲ್ಲಿರುವ 'ಖ' ಪದಕ್ಕೆ ಅಪರಿಚ್ಛಿನ್ನತ್ವವೆಂಬ ಅರ್ಥವನ್ನು ನೀವು ಹೇಳುತ್ತಿದ್ದೀರಿ. ಇದು ಸರಿಯಲ್ಲ. ಏಕೆಂದರೆ ''ಕಂ ಬ್ರಹ್ಮ ಖಂ ಬ್ರಹ್ಮ'' ಎಂದು ಹೇಳಿದಾಗ 'ಕ' ಕಾರಕ್ಕೂ 'ಖ' ಕಾರಕ್ಕೂ ಭೇದವಿದೆಯೆಂಬ ಸಂಶಯದಿಂದ ''ಕಂ ಚ ಖಂ ಚ ತು ನ ವಿಜಾನಾಮಿ'' ಎಂಬುದಾಗಿ 'ಕ' ಕಾರದ ಮತ್ತು 'ಖ'ಕಾರದ ಅರ್ಥವನ್ನು ತಿಳಿದಿಲ್ಲವೆಂದು ಉಪಕೋಸಲನು ಪ್ರಶ್ನಿಸುತ್ತಾನೆ. ಆ ಸಂದರ್ಭದಲ್ಲಿ 'ಕ' ಕಾರಕ್ಕೆ ಆನಂದವೆಂದರ್ಥ. 'ಖ' ಕಾರಕ್ಕೆ ಜ್ಞಾನವೆಂದರ್ಥ ತಿಳಿಯುತ್ತದೆ. ಆದ್ದರಿಂದ ಎರಡಕ್ಕೂ ಭೇದವಿಲ್ಲವೆಂಬ ಅಭಿಪ್ರಾಯದಿಂದ ''ಯದೇವ ಕಂ ತದೇವ ಖಂ'' ಎಂಬ ವಾಕ್ಯಶೇಷವು ಪ್ರವೃತ್ತವಾಗಿವೆ. ಆದ್ದರಿಂದ ಅಪರಿಚ್ಛಿನ್ನತ್ವ ಎಂಬ ಅರ್ಥವು ದೊರೆಯುವುದಿಲ್ಲ. ಮತ್ತು ಬ್ರಹ್ಮಶಬ್ದದಿಂದಲೇ ಸುಖದಲ್ಲಿ ಅಪರಿಚ್ಛಿನ್ನತ್ವವೆಂಬ ವೈಶಿಷ್ಟ್ಯವು ತಿಳಿಯುತ್ತದೆಂದು ಹೇಳುವುದೇ ಉಚಿತವಾಗಿದೆ.

प्रकाशः – यदपि, श्रुतोपनिषत्कस्याधिगतपरमपुरुषयाथात्म्यस्यानुसन्धेयतया या प्रातिपाद्यमाना अर्चिरादिका गतिः, तामपुनरावृत्तिलक्षणपरमपुरुषप्राप्तिकरीमुपकोसलायाक्षिपुरुषं श्रुतवते ''तेऽर्चिषमभिसम्भवन्ति'' इत्यारभ्य ''इमं मानवमावर्तं नावर्तन्ते'' इत्यभिधानाच्चेति चतुर्थार्थ इति,

ರಾಮಾನುಜರ ಮೂರನೇ ಸೂತ್ರಾರ್ಥ ಹೀಗಿದೆ - ಯಾವ ವ್ಯಕ್ತಿಯು 'ಶ್ರುತೋಪನಿಷತ್ಕ' ಆಗಿದ್ದಾನೋ? ಅಂದರೆ ಪರಮಪುರುಷನಾದ ಭಗವಂತನನ್ನು ಯಥಾರ್ಥವಾಗಿ ತಿಳಿದಿದ್ದಾನೋ? ಅಂತಹವನು ಅರ್ಚಿರಾದಿಮಾರ್ಗವನ್ನು ಸ್ಮರಣೆ ಮಾಡಿಕೊಳ್ಳಬೇಕು. ಹೀಗೆ ಬ್ರಹ್ಮಜ್ಞಾನಿಗಳಿಗೆ ಅನುಸಂಧೇಯವಾದ ಯಾವ ಅರ್ಚಿರಾದಿ ಮಾರ್ಗಗಳನ್ನು ಹೇಳಿದ್ದಾರೋ ಅಂತಹ ಪುನರಾವರ್ತಿಯಿಲ್ಲದ ಅರ್ಚಿರಾದಿ ಮಾರ್ಗಗಳ ಪ್ರಾಪ್ತಿಯನ್ನು ಉಪಕೋಸಲನಿಗೆ ಉಪದೇಶಿಸಲಾಗಿದೆ. ಈಗಾಗಲೇ ಆಕ್ಷಿಸ್ಥಪುರುಷನ ಬಗ್ಗೆ ತಿಳಿದಿರುವ ಉಪಕೋಸಲನಿಗೆ ''ತೇऽರ್ಚಿಷಮಭಿಸಂಭವಂತಿ'' ''ಇಮಂ ಮಾನವಮಾವರ್ತಂ ನಾವರ್ತಂತೇ'' ಎಂಬಲ್ಲಿಯ ತನಕ ಅರ್ಚಿರಾದಿಮಾರ್ಗಗಳನ್ನು ಉಪದೇಶಿಸಿದರೆ ಆಕ್ಷಿಸ್ಥನಾದವನು ಬ್ರಹ್ಮನೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

प्रकाशः – तन्न, श्रुत्यननुगमात्, कशब्दवैयर्थ्यात्, गतिशब्दास्वारस्याच्च ।

ಇದು ತಪ್ಪು. ಹೀಗೆ ಹೇಳಿದರೆ ಸೂತ್ರಕ್ಕೆ ಶ್ರುತಿಯಿಂದ ಆನುಗುಣ್ಯ ಬರುವುದಿಲ್ಲ. ಮತ್ತು ಸೂತ್ರದಲ್ಲಿರುವ 'ಕ' ಶಬ್ದಕ್ಕೆ ಅರ್ಥವೇ ಇಲ್ಲ. 'ಗತಿ' ಶಬ್ದಕ್ಕೆ ಮಾರ್ಗವೆಂಬರ್ಥವನ್ನು ಮಾಡುವುದೂ ಸಹ ಅಸ್ವರಸವಾಗಿದೆ. ಆದ್ದರಿಂದ ಸೂತ್ರದ ವ್ಯಾಖ್ಯಾನವೂ ಸಹ ಅಸಮಂಜಸವಾಗಿದೆ.

प्रकाशः – यच्च प्रतिबिम्बादीनां नियमेन चक्षुष्यनवस्थितेरमृतत्वादीनां निरुपाधिकानां तेष्वसम्भवान्न च्छायादिरितरोऽक्षिस्थ इति आद्यद्वितीयसूत्रोक्त-हेत्वोरितरत्र व्यतिरेक कथनार्थमन्तिममिति,

ಬಿಂಬ ಮೊದಲಾದವು ನಿಯಮೇನ ಚಕ್ಷುರಿಂದ್ರಿಯದಲ್ಲಿ ನಿಂತಿರುವುದಿಲ್ಲ. ಮತ್ತು ಅಮೃತತ್ವಾದಿಗಳು ಈ ಪ್ರತಿಬಿಂಬಾದಿಗಳಲ್ಲಿ ಅಸಂಭಾವಿತವಾಗಿವೆ. ಆದ್ದರಿಂದ ಬ್ರಹ್ಮನಿಗಿಂತ ಭಿನ್ನವಾದ ಛಾಯಾದಿಗಳು ಅಕ್ಷಿಸ್ಥವಾಗುವುದಿಲ್ಲ. ಆದ್ದರಿಂದ ಮೊದಲೆರಡು ಸೂತ್ರಗಳಲ್ಲಿ ಹೇಳಲ್ಪಟ್ಟ ಹೇತುಗಳು ಅಮೃತತ್ವ ನಿಯಾಮಕತ್ವ ಮೊದಲಾದ ಹೇತುಗಳು ಛಾಯಾದಿಗಳಲ್ಲಿ ಬರುವುದಿಲ್ಲವೆಂದು ತಿಳಿಸುವುದಕ್ಕಾಗಿ ಈ ಕೊನೆಯ ಸೂತ್ರವು ಹೊರಟಿದೆಯೆಂದು ವ್ಯಾಖ್ಯಾನಿಸುತ್ತಾರೆ.

प्रकाशः – तन्न, प्रत्यधिकरणं सिद्धान्तहेतूनां पूर्वपक्षाभिमतेऽर्थे व्यतिरेककथनाय सूत्रान्तरस्यावश्यकतापत्तेः । अर्थाद्व्यतिरेकसिद्धाविहापि परमात्मन्युपपत्तिस्थिति-कथनाभ्यां अन्यत्रासम्भवानवस्थित्योर्लाभेनाद्यद्वितीयाभ्यां पौनरुक्त्याच्च ।

ಇದೂ ಸಹ ತಪ್ಪು. ಸಿದ್ಧಾಂತ ಹೇತುಗಳೆಲ್ಲವೂ ಪೂರ್ವಪಕ್ಷಿಗೆ ಅಭಿಮತವಾದಲ್ಲಿ ಬರುವುದಿಲ್ಲವೆಂದು ಸೂಚಿಸುವುದಕ್ಕಾಗಿ ಮತ್ತೊಂದು ಸೂತ್ರವು ಹೊರಡಬೇಕೆಂದು ಹೇಳಿದರೆ ಪ್ರತಿಯೊಂದು ಅಧಿಕರಣದಲ್ಲಿಯೂ ಹೀಗೆಯೇ ಮಾಡಬೇಕಾದೀತು.

ಉಳಿದ ಅಧಿಕರಣಗಳಲ್ಲಿ ಸಿದ್ಧಾಂತ ಹೇತುಗಳು ಪೂರ್ವಪಕ್ಷಿಗೆ ಅಭಿಮತವಾದ ಅರ್ಥದಲ್ಲಿ ಬರುವುದಿಲ್ಲವೆಂದು ತಿಳಿಯುತ್ತಿರುವುದು ಹೇಳುವುದಾದರೆ ಈ ಅಧಿಕರಣದಲ್ಲಿಯೂ ಸಹ ಹಾಗೆಯೇ ಹೇಳಬಹುದು. ಪರಮಾತ್ಮನಲ್ಲಿ ಸ್ಥಿತಿ ಮೊದಲಾದವುಗಳು ಇರುತ್ತವೆಂದು ಹೇಳಿದ್ದರಿಂದಲೇ ಛಾಯಾದಿಗಳಲ್ಲಿರುವುದಿಲ್ಲವೆಂದು ತಿಳಿಯುವಾಗ ಪುನಃ ಅದೇ ವಿಚಾರವನ್ನು ಐದನೆಯ ಸೂತ್ರ ಹೇಳಿದರೆ ಪುನರುಕ್ತಿದೋಷ ಬರುತ್ತದೆ.

प्रकाशः – आद्यद्वितीयसूत्रोक्तव्यतिरेकोक्तिपरत्वे 'असम्भवादनवस्थितेश्च' इति । विन्यासापत्तेश्च । अनवस्थितिशब्दस्य प्रसिद्धार्थत्यागाच्च । सदाशब्दादेरध्याहार्यत्वाच्चेति दूषितमित्यर्थः ।

ಮತ್ತು ಮೊದಲೆರಡು ಸೂತ್ರಗಳಲ್ಲಿರುವ ಉಪಪತ್ತಿಯನ್ನು ಈ ಸೂತ್ರವು ಪೂರ್ವಪಕ್ಷಿಗೆ ಅಭಿಮತವಾದ ಅರ್ಥದಲ್ಲಿಲ್ಲವೆಂದು ಹೇಳುತ್ತಿದೆಯೆಂದಾದರೆ ಅದಕ್ಕನುಗುಣವಾಗಿ 'ಅಸಂಭವಾದನವಸ್ಥಿತೇಶ್ಚ' ಎಂದೇ ಸೂತ್ರದ ವಿನ್ಯಾಸ ಇರಬೇಕಿತ್ತು.

ಅದ್ವೈತಿಗಳಂತೆ ಇವರೂ ಸಹ 'ಅನವಸ್ಥಿತಿ' ಶಬ್ದಕ್ಕೆ ಅಪ್ರಮಾಣಿಕವಾದ ಅನಂತವ್ಯಕ್ತಿಕಲ್ಪನೆಯೆಂಬ ಪ್ರಸಿದ್ಧಾರ್ಥವನ್ನು ಬಿಟ್ಟು ಅಪ್ರಸಿದ್ಧಾರ್ಥವನ್ನು ಹೇಳಿದಂತಾಗುತ್ತದೆ. ಮತ್ತು ಸದಾಶಬ್ದಾದಿಗಳನ್ನು ಅಧ್ಯಾಹಾರಮಾಡಿಕೊಳ್ಳಬೇಕಾದೀತೆಂಬ ದೋಷವು ತಪ್ಪಿದ್ದಲ್ಲ.

प्रकाशः – ननु ''कं ब्रह्म खं ब्रह्म'' इति निरतिशयानन्दं ब्रह्मेत्यभिहितमिति कथं ज्ञायते, यतो ''नाम ब्रह्म'' इत्यादाविव ''कं ब्रह्म खं ब्रह्म'' इति प्रसिद्धसुखाकाशयोरेव ब्रह्मदृष्टिर्विधीयते इत्याशङ्क्यां, पूर्ववाक्यस्य ब्रह्मपरत्वोपपादकं ''अत एव च स ब्रह्म'' इति चतुर्थसूत्रमित्युक्तं रामानुजभाष्ये । तत्कुतो न व्याक्रियते नापि दूष्यत इत्यत आह – कैश्चिदिति ।

''कं ब्रह्म खं ब्रह्म'' ಎಂಬ ಶ್ರುತಿಯಿಂದ ಬ್ರಹ್ಮನು ನಿರತಿಶಯಾನಾಂದನಾಗಿದ್ದಾನೆಂದು ಹೇಗೆ ತಿಳಿಯುತ್ತದೆ. ಏಕೆಂದರೆ 'ನಾಮ ಬ್ರಹ್ಮ' ಇತ್ಯಾದಿ ಸ್ಥಳದಲ್ಲಿ ನಾಮದಲ್ಲಿ ಬ್ರಹ್ಮನನ್ನು ಉಪಾಸನೆ ಮಾಡಬೇಕೆಂದು ಹೇಗೆ ಹೇಳಲಾಗುತ್ತದೋ ಅದರಂತೆ ''ಕಂ ಬ್ರಹ್ಮ'' ಎಂಬುದರಿಂದ ಪ್ರಸಿದ್ಧವಾದ ಸುಖದಲ್ಲಿ ಬ್ರಹ್ಮನನ್ನು ಉಪಾಸಿಸಬೇಕೆಂದು. ''ಖಂ ಬ್ರಹ್ಮ'' ಎಂಬುದರಿಂದ ಪ್ರಸಿದ್ಧವಾದ ಆಕಾಶದಲ್ಲಿ ಬ್ರಹ್ಮನನ್ನು ಉಪಾಸಿಸಬೇಕೆಂದು ಶ್ರುತಿಯು ವಿಧಿಸುತ್ತಿದೆಯಲ್ಲವೇ? ಎಂದು ಆಶಂಕಿಸಿ ನಾಲ್ಕನೆಯ ಸೂತ್ರವು ಉತ್ತರಿಸುತ್ತಿದೆ. ''ಕಂ ಬ್ರಹ್ಮ'' ಎಂಬ ಹಿಂದಿನ ವಾಕ್ಯವು ಬ್ರಹ್ಮಪರವಾಗಿರುವುದರಿಂದ ಈ ವಾಕ್ಯವೂ ಸಹ ಬ್ರಹ್ಮಪರವಾಗುತ್ತದೆಂದು ಈ ಸೂತ್ರವು ಸಾಧಿಸುತ್ತದೆ. ನಾಲ್ಕನೆಯ ಸೂತ್ರವೆಂದರೆ 'ಶ್ರುತೋಪನಿಷತ್' ಎಂಬ ಸೂತ್ರವಲ್ಲ ಹೊರತು ''ಅತ ಏವ ಚ ಸ ಬ್ರಹ್ಮ'' ಎಂಬುದೆಂದು ತಿಳಿಯಬೇಕು. ರಾಮಾನುಜರ ಈ ಸೂತ್ರದ ವ್ಯಾಖ್ಯಾನವನ್ನಾಗಲೀ ದೂಷಣವನ್ನಾಗಲೀ ಏಕೆ ಮಾಡಲಿಲ್ಲ ? ಎಂಬ ಪ್ರಶ್ನೆಗೆ ಗ್ರಂಥಕಾರರು 'ಕೈಶ್ಚಿತ್' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಂದರೆ ಈ ಸೂತ್ರವು ಪ್ರಕ್ಷಿಪ್ತವಾದ್ದರಿಂದ ಪರಿಗಣಿಸಬೇಕಾಗಿಲ್ಲ.

प्रकाशः – ईक्षतीति । एतेन तत्रापि ''प्रतिज्ञाविरोधात्'' इति पञ्चमसूत्रं प्रक्षिप्तमेवेत्युक्तं भवति । पूर्ववाक्यस्य ब्रह्मपरत्वोपपादनं च भाष्यावुक्तदिशा बोध्यमिति भावः । अद्वैतमते प्रतिकूलमिदमित्याह – अत्रापीति । मिथ्याभेदपरत्वं च निरसिष्यत इति भावः ।।

ಗ್ರಂಥದಲ್ಲಿ 'ಈಕ್ಷತಿ' ಎಂದಿದೆ. ಅಂದರೆ ಈಕ್ಷತ್ಯಧಿಕರಣದಲ್ಲೂ ಸಹ 'ಪ್ರತಿಜ್ಞಾವಿರೋಧಾತ್' ಎಂಬ ಸೂತ್ರವು ಪ್ರಕ್ಷಿಪ್ತವೆಂದು ತಿಳಿಯಬೇಕು.

ಪೂರ್ವವಾಕ್ಯವು ಹೇಗೆ ಬ್ರಹ್ಮಪರವಾಗಿದೆಯೆಂಬುದನ್ನು ತಿಳಿಸಲು ಪ್ರಕ್ಷಿಪ್ತಸೂತ್ರದ ಅವಶ್ಯಕತೆ ಇಲ್ಲ. ಭಾಷ್ಯ ಟೀಕೆಗಳಲ್ಲಿ ಹೇಳಿದಂತೆ ಈ ಸೂತ್ರವಿಲ್ಲದಿದ್ದರೂ ಸುಲಭವಾಗಿ ತಿಳಿಯಬಹುದು.

ಈ ಅಧಿಕರಣವು ಅದ್ವೈತಿಗಳಿಗೆ ಅನುಕೂಲವಾಗಿಲ್ಲವೆಂದಷ್ಟೇ ಅಲ್ಲ. ಪ್ರತಿಕೂಲವೇ ಆಗಿದೆಯೆಂದು 'ಅತ್ರಾಪಿ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ವ್ಯಾವಹಾರಿಕಭೇದವನ್ನು ಮುಂದೆ ನಿರಾಕರಿಸುತ್ತೇವೆಂದು ತಿಳಿಯಬೇಕು.

ಪ್ರಕಾಶಃ – ಯತ್ಕಶ್ಚಿದಾಹ – ''ಅನವಸ್ಥಿತೇಃ'' ಇತ್ಯತಃ ಪ್ರಾಕ್ತನಮೇಕಮಧಿಕರಣಮ್ । ''ಅನವಸ್ಥಿತೇಃ'' ಇತಿ ತ್ವಧಿಕರಣಾನ್ತರಮ್ । ಆದ್ಯಸ್ಯಾಕ್ಷಿವಾಕ್ಯಂ ವಿಷಯಃ । ಅನ್ತ್ಯಸ್ಯ ತು –

ಅಙ್ಗುಷ್ಠಮಾತ್ರಃ ಪುರುಷೋऽಙ್ಗುಷ್ಠಂ ಚ ಸಮಾಶ್ರಿತಃ ।
ಈಶಃ ಸರ್ವಸ್ಯ ಜಗತಃ ..... ।।

ಇತ್ಯಾದೀತಿ । ತತ್ರಾದ್ಯೇ ಅಕ್ಷಿಸ್ಥಃ ಛಾಯಾಪುರುಷಜೀವಾನ್ಯತರोऽಥ ಶಿವ ಇತಿ ಸಂಶಯೇ ಜೀವಾದಿರಿತಿ ಪ್ರಾಪ್ತೇ, ಶಿವ ಇತಿ ಸಿದ್ಧಾನ್ತ ಇತಿ,

ಶೈವರ ಅಧಿಕರಣಶರೀರ ಹೀಗಿದೆ - 'ಅನವಸ್ಥಿತೇಃ' ಎಂಬ ಮೊದಲಿನ ಸೂತ್ರವು ಒಂದು ಅಧಿಕರಣವಾಗಿದೆ. 'ಅನವಸ್ಥಿತೇಃ' ಎಂಬುದೇ ಬೇರೆ ಅಧಿಕರಣವಾಗಿದೆ. ಮೊದಲನೆಯ ಅಧಿಕರಣಕ್ಕೆ 'ಅಕ್ಷಿ' ವಾಕ್ಯವು ವಿಷಯ. ಎರಡನೇ ಅಧಿಕರಣಕ್ಕೆ ''ಅಂಗುಷ್ಠಮಾತ್ರಃ ಪುರುಷೋ೨ಂಗುಷ್ಠಂ ಚ ಸಮಾಶ್ರಿತಃ । ಈಶಃ ಸರ್ವಸ್ಯ ಜಗತಃ'' ಎಂಬುದು ವಿಷಯವಾಕ್ಯ. ಮೊದಲನೆಯ ಅಧಿಕರಣದಲ್ಲಿ ಅಕ್ಷಿಯಲ್ಲಿರುವವನು ಛಾಯಾಪುರುಷನೋ? ಜೀವನೋ? ಅಥವಾ ಶಿವನೋ? ಎಂದು ಸಂಶಯ. ಜೀವ ಅಥವಾ ಛಾಯಾಪುರುಷರೇ ಅಕ್ಷಿಸ್ಥರೆಂದು ಪೂರ್ವಪಕ್ಷ. ಶಿವನು ಅಕ್ಷಿಸ್ಥನೆಂದು ಸಿದ್ಧಾಂತ.

ಪ್ರಕಾಶಃ – ತತ್ರ, ಅನ್ತರ್ನಯೇನ ಪೌನರುಕ್ತ್ಯಾತ್, ತತ್ರಾಕ್ಷಿಸ್ಥತ್ವಸ್ಯಾಪ್ಯುಕ್ತೇಃ । ವಾಕ್ಯಭೇದ-ಮಾತ್ರೇಣಾಧಿಕರಣಭೇದಾಯೋಗಾತ್ । ಅಮೃತತ್ವ, ಅಭಯತ್ವ, ಸಂಯದ್ವಾಮತ್ವ, ವಾಮನಿತ್ವ, ಭಾಮನಿತ್ವಾದೀನಾಂ ಲಿಙ್ಗಾನಾಂ, ಪುಷ್ಕರಪಲಾಶವಾಕ್ಯೋಕ್ತಪಾಪಾಶ್ಲೇಷರೂಪಸ್ಯ, ಅರ್ಚಿರಾದಿವಾಕ್ಯೋಕ್ತ ಬ್ರಹ್ಮಪ್ರಾಪ್ತಿರೂಪಫಲಸ್ಯ, ''ಕಂ ಬ್ರಹ್ಮ'' ಇತಿ ಪ್ರಕರಣಸ್ಯ ಚ ಬ್ರಹ್ಮತ್ವಸಾಧಕಸ್ಯ, ಚ ಸತ್ತ್ವೇನ ತತोऽप್ಯಾಧಿಕ್ಯೇನ ಸಂಶಯಸ್ಯೈವಾನುದಯಾತ್ ।

ಇದು ತಪ್ಪು. ಅಂತಸ್ಥತ್ವಾಧಿಕರಣದಿಂದ ಪುನರುಕ್ತಿ ದೋಷವು ಇವರಿಗೂ ಸಹ ತಪ್ಪಿದ್ದಲ್ಲ. ಏಕೆಂದರೆ ಶಿವನು ಅಕ್ಷಿಯಲ್ಲಿದ್ದಾನೆಂದು ಅಲ್ಲಿಯೇ ಹೇಳಿದ್ದಾಗಿದೆ. ಅಷ್ಟೇ ಅಲ್ಲದೆ ಕೇವಲ ವಾಕ್ಯಭೇದ ಮಾತ್ರದಿಂದ ಅಧಿಕರಣಗಳಿಗೆ ಭೇದವನ್ನು ಒಪ್ಪುವುದಾದರೆ ಶಾಸ್ತ್ರಕ್ಕೆ ಅಪರ್ಯವಸಾನ ದೋಷವು ಬರುತ್ತದೆ. ಮತ್ತು ''ಅಮೃತತ್ವ, ಅಭಯತ್ವ, ಸಂಯದ್ವಾಮತ್ವ, ವಾಮನಿತ್ವ, ಭಾಮನಿತ್ವ'' ಮೊದಲಾದ ಲಿಂಗಗಳು ಪುಷ್ಕರಪಲಾಶ ವಾಕ್ಯದಲ್ಲಿ ಹೇಳಲ್ಪಟ್ಟ ಪಾಪಾಶ್ಲೇಷವೆಂಬ ಅರ್ಚಿರಾದಿವಾಕ್ಯದಲ್ಲಿ ಹೇಳಲ್ಪಟ್ಟ ''ಬ್ರಹ್ಮಪ್ರಾಪ್ತಿ'' ಎಂಬ ಫಲ ''ಕಂ ಬ್ರಹ್ಮ'' ಎಂಬ ಪ್ರಕರಣ ಇವುಗಳೆಲ್ಲವೂ ಬ್ರಹ್ಮತ್ವಸಾಧಕವಾಗಿರುವಾಗ ಇದಕ್ಕಿಂತ ಹೆಚ್ಚಿನ ಪ್ರಮಾಣಗಳನ್ನು ಶಿವಪರವಾಗಿ ನಿಮಗೆ ತೋರಿಸಲಾಗದು. ಆದ್ದರಿಂದ ಸಂಶಯ ಹುಟ್ಟಲು ಸಾಧ್ಯವೇ ಇಲ್ಲ.

प्रकाशः – यदत्रोक्तं शिवार्कमणिदीपिकायां – अक्ष्याधारत्वस्य स्वमहिमप्रतिष्ठे शिवे मुख्यत्वायोगात्, रूपविशेषावच्छेदेनौपचारिकत्वकल्पने बाधाकाभावात्, आत्मब्रह्मश्रुत्योः संयद्वामत्वादिगुणश्रवणस्य च इतिशब्दशिरस्कत्वेन ''मनो ब्रह्मेति'' इत्यादिवदतस्मिंस्तद्रूपप्रत्ययपरत्वावगमात्, तत्सहचारेणामृतत्वादिश्रवणस्यापि तन्मात्रपरत्वावगमात्, अमृतत्वादेर्मुक्तौ सत्त्वेन भाविभावाभिप्रायेणोपपत्तेश्चेत्यादि-प्रकारेण ब्रह्मप्रापकाणां अन्यथासिद्धेः, जीवे चाक्षिस्थत्वस्य मुख्यस्य सम्भवात् जीव एवाक्षिस्य इति विशेषशङ्केति,

ಶಿವಾರ್ಕಮಣಿದೀಪಿಕೆಯಲ್ಲಿ ಹೀಗೆ ಸಮರ್ಥಿಸಿದ್ದಾರೆ - ಅಭ್ಯಧಿಕಾಶಂಕೆ ಇರುವುದರಿಂದ ಪೂರ್ವಪಕ್ಷವು ಉದಯವಾಗುತ್ತದೆ. ಶಿವನು ತನ್ನ ಮಹಿಮೆಯಿಂದ ತನ್ನಲ್ಲೇ ಇರುವುದರಿಂದ ಅಕ್ಷಿಯು ಶಿವನಿಗೆ ಆಧಾರವಾಗಿಲ್ಲ. ಆದ್ದರಿಂದ ಅಕ್ಷಿಸ್ಥತ್ವವನ್ನು ಜೀವನಲ್ಲಿ ಹೇಳಬಹುದೇ ಹೊರತು ಶಿವನಿಗೆ ಮುಖ್ಯವಾಗಿ ಹೇಳಲಾಗದು. ಈ ಒಂದು ಶಿವನಲಿಂಗದಿಂದ ಉಳಿದೆಲ್ಲಾ ಬ್ರಹ್ಮನ ಲಿಂಗವನ್ನು ಅನ್ಯಥಾಸಿದ್ಧವೆಂದು ಹೇಳಬಹುದು. ವಾಮನಿ ಭಾಮನಿ ಎಂಬಲ್ಲಿ 'ಇತಿ' ಶಬ್ದವು ಇರುವುದರಿಂದ ಕೇವಲ ಉಪಾಸನೆಗೋಸ್ಕರವೆಂದು ತಿಳಿಯುತ್ತದೆ. ಯಾರು ಹಾಗಿಲ್ಲವೋ ಅವರನ್ನು ಹಾಗೆ ತಿಳಿಯುವುದೇ ಉಪಾಸನೆ ಎನಿಸುತ್ತದೆ. ಹೀಗೆ ಉಪಾಸನೆಗೋಸ್ಕರ ಸಂಯದ್ವಾಮತ್ವ, ವಾಮನತ್ವ ಮೊದಲಾದವುಗಳನ್ನು ಮಿಥ್ಯಾಭೂತವೆಂದು ಹೇಳಬಹುದು. ಇದರ ಸಹಚರ್ಯದಿಂದ ಅಮೃತತ್ವ, ಅಭಯತ್ವಗಳನ್ನು ಹೇಳುವಾಕ್ಯದಲ್ಲಿ 'ಇತಿ' ಶಬ್ದವಿಲ್ಲದಿದ್ದರೂ ಉಪಾಸನಾಪರವಾಗಿ ವ್ಯಾಖ್ಯಾನಿಸಬಹುದು. ಅಥವಾ ಜೀವನಿಗೆ ಈಗ ಅಮೃತತ್ವಾದಿಗಳಿಲ್ಲದಿದ್ದರೂ ಮುಂದೆ ಮೋಕ್ಷದಲ್ಲಿ ಅಮೃತತ್ವಾದಿಗಳು ಬರುವುದರಿಂದಲೂ ಕೂಡಿಸಬಹುದು. ಆದ್ದರಿಂದ ಬ್ರಹ್ಮಪ್ರಾಪಕವಾದ ಧರ್ಮಗಳೆಲ್ಲವೂ ಜೀವನಲ್ಲಿ ಅನ್ಯಥಾಸಿದ್ಧವಾಗಿವೆ. ಹೀಗೆ ಅಕ್ಷಿಸ್ಥನಾದವನು ಜೀವನೇ ಆಗಿದ್ದಾನೆಂದು ಮುಖ್ಯಾರ್ಥವನ್ನು ಸ್ವೀಕರಿಸಲು ಬರುವಾಗ ಶಿವನು ಅಕ್ಷಿಸ್ಥನೆಂದು ಹೇಳಬಾರದು. ಹೀಗೆ ಅಧಿಕಾಶಂಕೆಯು ಬರುವುದರಿಂದ ಈ ಅಧಿಕರಣ ಹೊರಟದ್ದು ಸಾರ್ಥಕವಾಗಿದೆ.

प्रकाशः – तत्तुच्छं, एकेन लिङ्गेन श्रुतिलिङ्गादीनां बहूनामन्यथानयनायोगात् । स्वमहिमप्रतिष्ठस्याप्यादित्यादिवदन्तस्थत्वस्यार्भकौकस्त्वस्य च प्रागेवोक्तत्वात् । ''हृदि ह्येष आत्मा'' इत्यादिना जीवस्य सदा हृदिस्थत्वाद्रूपादिग्रहणकाले चक्षुस्संयोगाङ्गीकारेऽपि नित्यं तत्रावस्थानाभावेन ''य एषोऽन्तरक्षिणि'' इति नित्यवच्छ्रवणविरोधात् । एककालावच्छेदेनौपचारिकत्वावश्यम्भावाच्च ।

ಇದು ಸರಿಯಲ್ಲ. ಸ್ವಮಹಿಮಪ್ರತಿಷ್ಠಾನವೆಂಬ ಒಂದೇ ಲಿಂಗದಿಂದ ಅನೇಕ ಶ್ರುತಿಲಿಂಗಾದಿಗಳಿಗೆ ಅನ್ಯಥಾಸಿದ್ಧಿಯನ್ನು ಕಲ್ಪಿಸುವುದು ಅಸಾಧುವಾಗಿದೆ. ಮತ್ತು ಸ್ವಮಹಿಮೆಯಲ್ಲಿ ಪ್ರತಿಷ್ಠಿತನಾಗಿದ್ದರೂ ಉಳಿದ ಅಧಿಷ್ಠಾನದಲ್ಲಿದ್ದಾನೆಂದು ನೀವೇ ಒಪ್ಪಿದ್ದೀರಿ. ಅಂತಸ್ಥತ್ವಾಧಿಕರಣದಲ್ಲಿ ಆದಿತ್ಯನಲ್ಲಿದ್ದಾನೆಂದು ಹೇಳಿದ್ದೀರಿ. 'ಅರ್ಭಕೌಕಸ್ತ್ವಾತ್' ಎಂಬ ಸೂತ್ರದಲ್ಲಿ ಅಲ್ಪಸ್ಥಾನದಲ್ಲಿದ್ದಾನೆಂದು ಹೇಳಿದ್ದೀರಿ. ಮತ್ತು 'ಹೃದಿ ಹ್ಯೇಷ ಆತ್ಮಾ,'

ಇತ್ಯಾದಿಯಾಗಿ ಜೀವನು ನಿರಂತರವಾಗಿ ಹೃದಯದಲ್ಲಿರುತ್ತಾನೆಂದು ಪ್ರಮಾಣವಿರುವುದರಿಂದ ಕಣ್ಣಿನಲ್ಲಿದ್ದಾನೆಂದು ಹೇಳುವುದು ತಪ್ಪಾಗುತ್ತದೆ.

ಹಾಗಾದರೆ ನಿಮ್ಮ ಸಿದ್ಧಾಂತದಲ್ಲಿ ಜಾಗ್ರದವಸ್ಥಾಕಾಲದಲ್ಲಿ ಕಣ್ಣಿನಲ್ಲಿರುತ್ತಾನೆಂದು ಹೇಗೆ ಒಪ್ಪಿದ್ದೀರಿ? ಮತ್ತು ರೂಪಾದಿ ವಿಷಯಗಳನ್ನು ಗ್ರಹಿಸುವಾಗ ಚಕ್ಷುಸ್ಸಂಯೋಗಾದಿಗಳನ್ನು ಜೀವನಿಗೆ ಒಪ್ಪಲೇಬೇಕಲ್ಲವೇ? ಎಂದು ಪ್ರಶ್ನಿಸಬಾರದು.

ಜೀವನಿಗೆ ಜಾಗ್ರದವಸ್ಥಾಕಾಲದಲ್ಲಿ ಮತ್ತು ರೂಪಾದಿವಿಷಯಗಳನ್ನು ಗ್ರಹಿಸುವ ಕಾಲದಲ್ಲಿ ಚಕ್ಷುಸ್ಸಂಯೋಗವನ್ನು ನಾವು ಒಪ್ಪುತ್ತೇವೆ. ಆದರೆ ನಿರಂತರವಾಗಿ ಚಕ್ಷುರಿಂದ್ರಿಯದಲ್ಲೇ ಇರುತ್ತಾನೆಂದು ಹೇಳುವುದಿಲ್ಲ. ''ಯ ಏಷೋಂಽತರಕ್ಷಿಣಿ ಪುರುಷೋ ದೃಶ್ಯತೇ'' ಎಂಬ ವಾಕ್ಯದಿಂದ ನಿರಂತರವಾಗಿ ಚಕ್ಷುರಿಂದ್ರಿಯದಲ್ಲೇ ಇರುತ್ತಾನೆಂದು ಶ್ರುತಿಯಿಂದ ತಿಳಿಯುತ್ತಿದೆ. ಆದ್ದರಿಂದ ಈ ಶ್ರುತಿಯ ವಿರೋಧವನ್ನು ಪರಿಹರಿಸಬೇಕೆಂದರೆ ''ಹೃದಿ ಹ್ಯೇಷ ಆತ್ಮಾ'' ಎಂಬ ಶ್ರುತಿಯು ಕೇವಲ ಒಂದು ಕಾಲದಲ್ಲಿ ಮಾತ್ರ ಜೀವನು ಹೃದಯದಲ್ಲಿದ್ದಾನೆಂದು ಹೇಳುತ್ತಿದೆಯೆನ್ನಬೇಕು. ಆದರಂತೆ ಚಕ್ಷುರಿಂದ್ರಿಯದಲ್ಲೂ ಸಹ ಯಾವುದಾದರೊಂದು ಕಾಲದಲ್ಲಿರುತ್ತಾನೆಂದೇ ಹೇಳಬೇಕು. ಈ ಸಮಾಧಾನವನ್ನು ಶಿವನ ಪಕ್ಷದಲ್ಲೂ ಹೇಳಬಹುದಾದ್ದರಿಂದ ಅಧಿಕಾಶಂಕೆಗೆ ಅವಕಾಶವಿಲ್ಲ.

ಪ್ರಕಾಶಃ – यदपि ''य एषः'' इति प्रसिद्धत्वेन निर्देशादक्षिस्थत्वस्य शिवे प्रसिद्ध्यभावात् जीवादिरिति तदपि न, जीवेऽप्यप्रसिद्धेः । अन्तरधिकरणविषयवाक्य एवाक्षिस्थत्वस्य प्रसिद्धेश्च ।

यत्तु सर्वपापोद्गतत्वेन आदित्यान्तर्वर्त्येव ब्रह्म नाक्ष्यन्तर्वर्तीत्यधिकाशङ्केति, तदसारं, ''यन्नाम तन्नाम'' इत्यादिनाऽऽदित्याक्ष्यन्तस्स्थयोरेकधर्मकत्वस्य तत्र श्रुतावेवोक्तेः, सर्वपापोद्गतत्वस्याक्षिस्थेऽपि सिद्धेरिति दिक् ।।

''ಯ ಏಷಃ'' ಎಂಬ ಶ್ರುತಿಯಿಂದ ಪ್ರಸಿದ್ಧನಾದವನನ್ನು ನಿರ್ದೇಶ ಮಾಡಿದ್ದರಿಂದ ಅಕ್ಷಿಸ್ಥನಾದವನು ಜೀವನಾಗುತ್ತಾನೆ ಹೊರತು ಶಿವನಾಗುವುದಿಲ್ಲವೆಂಬ ಹೇಳಿಕೆಯೂ ತಪ್ಪು. ಏಕೆಂದರೆ ಶಿವನು ಹೇಗೆ ಅಪ್ರಸಿದ್ಧನೋ? ಅದರಂತೆ ಜೀವನೂ ಸಹ ಅಪ್ರಸಿದ್ಧನೇ ಆಗಿದ್ದಾನೆ. ಮತ್ತು ಅಂತರಧಿಕರಣದ ವಿಷಯವಾಕ್ಯದಲ್ಲೇ ಶಿವನು ಅಕ್ಷಿಸ್ಥನೆಂದು ಪ್ರಸಿದ್ಧನಾಗಿದ್ದಾನೆ.

ಇನ್ನು ಸರ್ವಪಾಪರಹಿತನಾದ್ದರಿಂದ ಆದಿತ್ಯನಲ್ಲಿರುವ ಬ್ರಹ್ಮನೇ ಅಕ್ಷಿಯಲ್ಲಿರಲು ಸಾಧ್ಯವಿಲ್ಲವೆಂಬ ಅಧಿಕಾಶಂಕೆಗೂ ಅವಕಾಶವಿಲ್ಲ. ಏಕೆಂದರೆ 'ಯನ್ನಾಮ ತನ್ನಾಮ' ಇತ್ಯಾದಿಯಾಗಿ ಆದಿತ್ಯನಲ್ಲಿರುವವನಿಗೂ ಅಕ್ಷಿಯಲ್ಲಿರುವವನಿಗೂ ಒಂದೇ ಧರ್ಮಗಳನ್ನು ಅದೇ ಶ್ರುತಿಯಲ್ಲಿ ಹೇಳಲಾಗಿದೆ. ಸರ್ವಪಾಪರಾಹಿತ್ಯವೆಂಬ ಧರ್ಮವು ಆದಿತ್ಯಸ್ಥನಲ್ಲಿ ಹೇಳಿದಂತೆ ಅಕ್ಷಿಸ್ಥನಲ್ಲಿಯೂ ಸಿದ್ಧವಾಗಿದೆ. ಹೀಗೆ ಶೈವಮತದ ನಿರಾಕರಣೆಯನ್ನು ತಿಳಿಯಬೇಕು. ಇದು ಕೇವಲ ದಿಕ್‌ಪ್ರದರ್ಶನ.

ಪ್ರಕಾಶಃ – ಕಿಞ್ಚ ''स हरिः स परः परोवरीयान् यदिदं चक्षुषि सर्पिर्वा उदकं वा सिञ्चति वर्त्मनी एव गच्छति स वामनः स भामनः'' ಇತ್ಯಾದಿಸಮಾಖ್ಯಾಶ್ರುತ್ಯಾ,

यत्स्थानत्वादिदं चक्षुरसङ्गं सर्ववस्तुभिः ।
स वामनः ..... ॥

ಇತ್ಯಾದಿಸ್ಮೃತ್ಯಾ ಶಿವಪರತ್ವಸಿದ್ಧಾನ್ತಸ್ಯ ವಿರೋಧಶ್ಚ ।

ज्ञानानन्दात्मकं पूर्णं परं ब्रह्म स्वयं हरिः ।
नैजानन्दबलोद्रेकः कमित्युक्तो मनीषिभिः ।

ಇತ್ಯಾದಿಸ್ಮೃತ್ಯಾऽस्य ಪ್ರಕರಣಸ್ಯಾಪಿ ವೈಷ್ಣವತ್ವಬೋಧಿನ್ಯಾ ವಿರೋಧಶ್ಚ ಇತಿ ।

''स हरिः स परः परोवरीयान् यदिदं चक्षुषि सर्पिर्वा उदकं वा सिंचति वर्त्मनि एव गच्छति स वामनः स भामनः'' ''ಪರೋವರೀಯನಾದ, ಶ್ರೇಷ್ಠನಾದ ಶ್ರೀಹರಿಯೇ ಚಕ್ಷುರಿಂದ್ರಿಯದಲ್ಲಿದ್ದಾನೆ. ಅವನ ಸನ್ನಿಧಾನದ ಬಲದಿಂದ ತುಪ್ಪ, ನೀರು ಮೊದಲಾದ ಯಾವುದೇ ಪದಾರ್ಥಗಳ ಸಂಪರ್ಕ ಚಕ್ಷುರಿಂದ್ರಿಯಕ್ಕೆ ಉಂಟಾಗುವುದಿಲ್ಲ''. ಇತ್ಯಾದಿಯಾಗಿ ಸಮಾಖ್ಯಾಶ್ರುತಿಯಲ್ಲಿ ಮತ್ತು ಏನೇ ಪದಾರ್ಥ ಕಣ್ಣಿಗೆ ಬಿದ್ದರೂ ಕಣ್ಣಿನಿಂದ ಮೂಲಕ ಹೊರಗೆ ಹೋಗುತ್ತದೆ. ಶ್ರೀಹರಿಯು ಎಡಗಣ್ಣಿನಲ್ಲಿ 'ವಾಮನ' ಎಂಬ ರೂಪದಿಂದ ಬಲಗಣ್ಣಿನಲ್ಲಿ 'ಭಾಮನ' ಎಂಬ ರೂಪದಿಂದ ನೆಲೆಸಿದ್ದಾನೆ. ಇತ್ಯಾದಿ ಎಂಬ ಶ್ರುತಿಯಲ್ಲಿ ಶ್ರೀಹರಿಯೇ ಚಕ್ಷುರಂತಸ್ಥನೆಂದು ನಿರ್ಣಯವಾಗಿದೆ. ಇದರಿಂದ ಶಿವಪರತ್ವಸಿದ್ಧಾಂತಕ್ಕೆ ವಿರೋಧ ಬರುತ್ತದೆ.

यत्स्थानत्वादिदं चक्षुरसंगं सर्ववस्तुभिः।
स वामनः ..... ॥

ಶ್ರೀಹರಿಯ ಸನ್ನಿಧಾನದಿಂದ ಚಕ್ಷುರಿಂದ್ರಿಯವು ಸಕಲ ವಸ್ತುಗಳಿಂದ ಅಸಂಗವಾಗಿದೆ. ಅಂತಹ 'ಶ್ರೀಹರಿಯೇ' 'ವಾಮನ' ಎನಿಸಿದ್ದಾನೆ.

ज्ञानानंदात्मकं पूर्णं परं ब्रह्म स्वयं हरिः।
नैजानंदबलोद्रेकः कमित्युक्तो मनीषिभिः।

ಜ್ಞಾನಾನಂದಾತ್ಮಕನು ಪರಿಪೂರ್ಣನೂ ಶ್ರೇಷ್ಠನೂ ಆಗಿರುವ ಶ್ರೀಹರಿಯು ಸ್ವಾಭಾವಿಕವಾದ ಆನಂದ ಹಾಗೂ ಬಲಗಳ ಉದ್ರೇಕದಿಂದ 'ಕಂ' ಎಂಬ ಪದದಿಂದ ಪ್ರತಿಪಾದ್ಯನಾಗಿದ್ದಾನೆಂದು ಜ್ಞಾನಿಗಳು ಹೇಳುತ್ತಾರೆ. ಇತ್ಯಾದಿ ಸ್ಮೃತಿಯಿಂದ ಚಕ್ಷುಸ್ಥತ್ವವನ್ನು ಪ್ರತಿಪಾದಿಸುವ ಪ್ರಕರಣವು ವಿಷ್ಣುಪರವೆಂದು ತಿಳಿಯುತ್ತದೆ. ಇಂತಹ ವೈಷ್ಣವ ಪ್ರಕರಣದಿಂದ ರುದ್ರನು ಚಕ್ಷುರಂತರ್ಗತನಾಗಿದ್ದಾನೆಂಬ ನಿಮ್ಮ ಸಿದ್ಧಾಂತಕ್ಕೆ ವಿರೋಧ ಬರುತ್ತದೆ.

ಪ್ರಕಾಶಃ – ಸೂತ್ರೇ 'ಅನ್ತರಃ' ಇತಿ ನಿರ್ದೇಶಾಯೋಗಃ । 'ಉಪಪತ್ತೇಃ' ಇತಿ ಹೇತುರಪ್ಯಯುಕ್ತಃ, ''ರುದ್ರಸ್ಯ ಶಿರ ಉತ್ಪಿಪೇಷ'' ''ಸ್ತುಹಿ ಶ್ರುತಂ ಗರ್ತಸದಂ ಯುವಾನಂ'' ಇತ್ಯಾದಿನಾ ಮೃತಿಪಾರತನ್ತ್ರ್ಯಾದೇರಪ್ಯುಕ್ತತ್ವೇನಾಮೃತತ್ವಾದೇಃ ರುದ್ರೇऽನುಪಪತ್ತೇಃ । ''ತಮೇತಾಸ್ಸಪ್ತಾಕ್ಷಿತಯ ಉಪತಿಷ್ಠನ್ತೇ ಯಾ ಅಕ್ಷನ್ಲೋಹಿನ್ಯೋ ರಾಜಯಸ್ತಾಭಿರೇನಂ ರುದ್ರೋऽನ್ವಾಯತ್ತಃ'' ಇತ್ಯಾದೌ ರುದ್ರಸ್ಯಾಕ್ಷಿಸ್ಥೋಪಾಸಕತ್ವೋಕ್ತೇಶ್ಚೇತಿ । ಏವಂ ಸೂತ್ರಾನ್ತರೇऽಪ್ಯನುಪಪತ್ತೇರೂಹಃ ಕಾರ್ಯಃ ।

ಮತ್ತು ಶೈವರ ಸೂತ್ರವ್ಯಾಖ್ಯಾನವೂ ಅಸಾಧುವಾಗಿದೆ. ಇವರಿಗೂ ಸಹ ಸೂತ್ರದಲ್ಲಿರುವ 'ಅಂತರ' ಎಂಬ ಪದಕ್ಕೆ ಸಾರ್ಥಕ್ಯವನ್ನು ನಿರೂಪಿಸಲಾಗದು. 'ಉಪಪತ್ತೇಃ' ಎಂಬ ಹೇತುವೇ ಅನುಪಪನ್ನವಾಗುತ್ತದೆ. ಏಕೆಂದರೆ ಈ ಹೇತುವು 'ಅಮೃತತ್ವ', 'ಅಭಯತ್ವ' ಮೊದಲಾದವುಗಳನ್ನು ಚಕ್ಷುರಂತಸ್ಥನಿಗೆ ಹೇಳುತ್ತಿದೆ. ಆದರೆ ''ರುದ್ರಸ್ಯ ಶಿರ ಉತ್ಪಿಪೇಷ'' ಇತ್ಯಾದಿ ಶ್ರುತಿಗಳಲ್ಲಿ 'ರುದ್ರನ ತಲೆ ತುಂಡಾಯಿತು' 'ಭಯಪಟ್ಟನು' ಮತ್ತು ಪರತಂತ್ರನಾಗಿದ್ದಾನೆಂದು ಹೇಳಲ್ಪಟ್ಟಿದೆ. ಆದ್ದರಿಂದ ''ಸ್ತುಹಿ ಶ್ರುತಂ ಗರ್ತಸದಂ ಯುವಾನಂ'' ಅಮೃತತ್ವಾದಿಗಳು ರುದ್ರನಲ್ಲಿ ಕೂಡುವುದಿಲ್ಲ.

ಅಷ್ಟೇ ಅಲ್ಲದೆ ''ತಮೇತಾಸ್ಸಪ್ತಾಕ್ಷಿತಯ ಉಪತಿಷ್ಠಂತೇ ಯಾ ಅಕ್ಷನ್ಲೋಹಿನ್ಯೋ ರಾಜಯಸ್ತಾಭಿರೇನಂ ರುದ್ರೋऽನ್ವಾಯತ್ತಃ'' ಎಂಬ ಶ್ರುತಿಯಲ್ಲಿ ಕಣ್ಣಿನಲ್ಲಿರುವ ಕೆಂಪು ಗೆರೆಗಳಲ್ಲಿ ರುದ್ರನು ನೆಲಸಿ ಚಕ್ಷುರಿಂದ್ರಿಯದಲ್ಲಿರುವ 'ವಿಶ್ವ' ಎಂಬ ಭಗವಂತನ ರೂಪವನ್ನು ಉಪಾಸನೆ ಮಾಡುತ್ತಾನೆಂದು ಶ್ರುತಿ ಹೇಳುತ್ತಿವೆ. ಹೀಗೆ ಚಕ್ಷುರಂತರ್ಗತನಾದ ಭಗವಂತನನ್ನು ಉಪಾಸನೆ ಮಾಡುವ ರುದ್ರನು ತಾನೇ ಚಕ್ಷುರಂತರ್ಗತನಾಗಲು ಸಾಧ್ಯವಿಲ್ಲ. ಇದೇರೀತಿಯಾಗಿ ಉಳಿದ ಸೂತ್ರಗಳಲ್ಲೂ ಸಹ ಅನುಪಪತ್ತಿಗಳನ್ನು ತಿಳಿದುಕೊಳ್ಳಬೇಕು.

ಪ್ರಕಾಶಃ – ಯದಪಿ ''ಅನವಸ್ಥಿತೇಃ'' ಇತ್ಯಧಿಕರಣಾನ್ತರಮಿತಿ, ತನ್ನ, ಬಾಧಕೋಕ್ತ್ಯಾऽಪೇಕ್ಷಿತಪರಪಕ್ಷನಿರಾಸಪರತ್ವೇನ ಪೂರ್ವಶೇಷತ್ವಸಮ್ಭವೇऽನ್ಯಥಾತ್ವಾಯೋಗಾತ್ । ''ಈಶಸ್ಸರ್ವಸ್ಯ ಜಗತಃ'' ಇತಿ ಬ್ರಹ್ಮಲಿಙ್ಗಸತ್ತ್ವೇನ ತೇನ ಪ್ರಾಣಾಗ್ನಿಹೋತ್ರಪ್ರಕರಣಬಾಧಸಮ್ಭವೇನ ಅಙ್ಗುಷ್ಠಮಾತ್ರತ್ವಸ್ಯ ಚ ''ಹೃದ್ಯಪೇಕ್ಷಯಾ'' ಇತ್ಯತ್ರ ವಕ್ಷ್ಯಮಾಣತ್ವೇನ ಸಂಶಯಾಯೋಗಾತ್ । ''ವಿದೇಹಿ ರುದ್ರೋ ರುದ್ರಿಯಂ ಮಹಿತ್ವಂ'' ಇತಿ ಪರಾಧೀನಪದಪ್ರಾಪ್ತ್ಯುಕ್ತ್ಯಾ ಸರ್ವಜಗದೀಶತ್ವಾಯೋಗಾಚ್ಚ । 'ಅಙ್ಗುಷ್ಠಮಾತ್ರಸ್ತಲ್ಲಿಙ್ಗಾತ್' ಇತಿ ನಿರ್ದೇಶ್ಯೇ ಪರಮತಪ್ರತಿಕ್ಷೇಪರೂಪತಯಾ ಪ್ರಧಾನಸೂತ್ರನಿರ್ದೇಶಾಯೋಗಾಚ್ಚೇತ್ಯಾದಿ ಧ್ಯೇಯಮ್ ।।

ಇನ್ನು ಶೈವರು ''ಅನವಸ್ಥಿತೇಃ ಅಸಂಭವಾಚ್ಚ'' ಎಂಬ ಕೊನೆಯ ಸೂತ್ರವನ್ನು ಮತ್ತೊಂದು ಅಧಿಕರಣವನ್ನಾಗಿ ಪರಿಗಣಿಸುತ್ತಾರೆ. ಆದರೆ ಪರಪಕ್ಷದಲ್ಲಿ ಬಾಧಕವನ್ನು ಹೇಳುವುದಕ್ಕೋಸ್ಕರ ಈ ಸೂತ್ರವು ಹೊರಟಿದೆಯೆಂದೇ ವ್ಯಾಖ್ಯಾನಿಸಲು ಬರುವಾಗ, ಮತ್ತೊಂದು ಅಧಿಕರಣವನ್ನಾಗಿ ವಿಂಗಡಿಸುವುದರಲ್ಲಿ ಅರ್ಥವಿಲ್ಲ. ಮತ್ತು ಸೂತ್ರಕ್ಕೆ ಯಾವವಾಕ್ಯವನ್ನು ವಿಷಯವನ್ನಾಗಿ ಹೇಳುತ್ತಾರೋ. ಆ ವಾಕ್ಯದಲ್ಲಿ

'ಈಶಸ್ಸರ್ವಸ್ಯ ಜಗತಃ'' ಎಂಬ ಬ್ರಹ್ಮನ ಲಿಂಗವೇ ಕೇಳಿಸುತ್ತಿದೆ. ಇದರಿಂದ 'ಪ್ರಾಣಾಗ್ನಿಹೋತ್ರ' ಪ್ರಕರಣಕ್ಕೆ ಬಾಧ ಬರುತ್ತದೆ. 'ಅಂಗುಷ್ಠಮಾತ್ರತ್ವಸ್ಯ' ಎಂಬ ಒಂದೇ ಲಿಂಗವು ಸಂಶಯಕ್ಕೆ ಕಾರಣವಾಗುವುದಿಲ್ಲ. ''ಹೃದ್ಯಪೇಕ್ಷಯಾತ್'' ಎಂಬ ಮುಂದೆ ಹೇಳುವ ಸೂತ್ರದಂತೆ ಪರಮಾತ್ಮನಲ್ಲೇ ಅಂಗುಷ್ಠಪರಿಮಾಣವು ಉಪಪನ್ನವಾಗುತ್ತದೆ.

''ವಿದೇಽಹಿ ರುದ್ರೋ ರುದ್ರಿಯಂ ಮಹಿತ್ವಂ'' ಎಂಬಲ್ಲಿ ರುದ್ರನಿಗೆ ಪರಾಧೀನವಾದ ಪದವು ಪ್ರಾಪ್ತವಾಗುತ್ತದೆಂದು ಹೇಳಿರುವುದರಿಂದ ಸಕಲ ಜಗತ್ತಿಗೆ ಈಶ್ವರನಾಗಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ ಮೊದಲು ಸ್ವಪಕ್ಷಸಾಧಕ ಪ್ರಮಾಣವನ್ನು ಹೇಳಬೇಕಾದ್ದರಿಂದ 'ಅಂಗುಷ್ಠಮಾತ್ರಸ್ತಲ್ಲಿಂಗಾತ್'' ಎಂದೇ ಸೂತ್ರವಿರಬೇಕು. ಹೊರತು ಪ್ರಥಮಪ್ರಾಪ್ತವಾದ ಪ್ರಧಾನಸೂತ್ರದಲ್ಲೇ ಪರಮತಪ್ರತಿಕ್ಷೇಪವನ್ನು ಮಾಡುವುದು ಸರಿಯಲ್ಲವೆಂದು ತಿಳಿಯಬೇಕು.

ಗುರುರಾಜೀಯಮ್ – ಯಥಾऽನ್ತರ ಉಪಪತ್ತೇರಿತ್ಯತ್ರೋಪಪತ್ತೇರಿತ್ಯನೇನೈವಾನ್ಯತ್ರಾನುಪಪತ್ತೇರುಕ್ತ-ತ್ವಾದऽನ್ಯತ್ರಾನುಪಪತ್ತೇಃ ಪರಸ್ಯಾನವಸ್ಥಿತೇರಿತಿ ಪಞ್ಚಮಸೂತ್ರವೈಯರ್ಥ್ಯಂ ಏವಮೇತಜ್ಜಾತೀಯಕೇ ದ್ರಷ್ಟವ್ಯ ಇತ್ಯರ್ಥಃ ।

ಸಾರ

ಅದ್ವೈತಿಗಳ ಸಿದ್ಧಾಂತರಚನೆಯೂ ಸರಿಯಿಲ್ಲ. ಅಕ್ಷಸ್ಥನಾದವನು ಕಾರ್ಯಬ್ರಹ್ಮನಾದ ಚತುರ್ಮುಖನೆಂದು ಹೇಳಿದರೆ ಅವನಲ್ಲಿ 'ಅಮೃತತ್ವ', 'ಅಭಯತ್ವ' ಮೊದಲಾದ ಧರ್ಮಗಳು ಬರುವುದಿಲ್ಲ. ಅಕಾರ್ಯಬ್ರಹ್ಮನಾದರೆ ಅವನ ಉಪಾಸನೆಯಿಂದ ಅರ್ಚಿರಾದಿಮಾರ್ಗಗಮನವನ್ನು ಹೇಳಿದ್ದು ಅಯುಕ್ತವಾಗುತ್ತದೆ. ಏಕೆಂದರೆ ಕಾರ್ಯಬ್ರಹ್ಮನನ್ನು ಉಪಾಸನೆ ಮಾಡುವವರು ಮಾತ್ರ ಅರ್ಚಿರಾದಿಮಾರ್ಗದಲ್ಲಿ ಹೋಗುತ್ತಾರೆ. ಇದರಂತೆ ಅದ್ವೈತಿಗಳ ಸೂತ್ರ ವ್ಯಾಖ್ಯಾನವೂ ಸಮಂಜಸವಲ್ಲ.

೧. ''ಆಂತರ ಉಪಪತ್ತೇಃ'' ಎಂಬಲ್ಲಿ 'ರ' ಶಬ್ದವು ವ್ಯರ್ಥವಾಗುತ್ತದೆ. 'ಅಮೃತತ್ವಾದಿ' ಉಪಪತ್ತಿಗಳು ಕಾರ್ಯಬ್ರಹ್ಮನಲ್ಲಾಗಲೀ ಅಕಾರ್ಯಬ್ರಹ್ಮನಲ್ಲಾಗಲೀ ಕೂಡುವುದಿಲ್ಲ.

೨. ''ಸ್ಥಾನಾದಿವ್ಯಪದೇಶಾಚ್ಚ'' ಎಲ್ಲೆಡೆ ವ್ಯಾಪ್ತನಾದ ಪರಬ್ರಹ್ಮನು ಅಲ್ಪಸ್ಥಾನದಲ್ಲಿದ್ದಾನೆಂದು ''ಅರ್ಭಕೌಕಸ್ತ್ವಾತ್'' ಎಂಬ ಸೂತ್ರದಿಂದಲೇ ಸಮರ್ಥಿಸಿದ್ದಾಗಿದೆ. ಅದೇ ವಿಷಯವನ್ನು ಪ್ರತಿಪಾದಿಸುವ ಈ ಸೂತ್ರಕ್ಕೆ ಸಾರ್ಥಕ್ಯವಿಲ್ಲ.

೩. ''ಸುಖವಿಶಿಷ್ಟಾಭಿಧಾನಾದೇವಚ'' ಸುಖವಿಶಿಷ್ಟ ಶಬ್ದಕ್ಕೆ ಸುಖ ಸಂಬಂಧವೆಂಬರ್ಥವನ್ನು ಹೇಳಿದರೆ ಜೀವನಲ್ಲಿ ಹೇತು ವ್ಯಭಿಚರಿತವಾಗುತ್ತದೆ. ಅಪರಿಚ್ಛಿನ್ನತ್ವವೆಂಬ ಶ್ರೇಷ್ಠಸುಖದ ಸಂಬಂಧವನ್ನು ವಿವಕ್ಷಿಸಿದರೆ ಸುಖಿಸ್ವರೂಪನಾದ ನಿಮ್ಮ ಬ್ರಹ್ಮನಲ್ಲಿ ಸುಖಸಂಬಂಧ ಬರುವುದಿಲ್ಲ. ವಿಶಿಷ್ಟಬ್ರಹ್ಮನಲ್ಲಿ ಸುಖಸಂಬಂಧವಿದ್ದರೂ ಸುಖವು ಅಪರಿಚ್ಛಿನ್ನವಾಗಿಲ್ಲ.

೪. ''ಶ್ರುತೋಪನಿಷತ್ಕಭಿಧಾನಾತ್''ಅರ್ಚಿರಾದಿ ಮಾರ್ಗವು ಬ್ರಹ್ಮನನ್ನು ಮಿಥ್ಯಾಭೂತವಾಗಿ ಯಾರು ಉಪಾಸನೆ ಮಾಡುತ್ತಾನೋ ಅಂತಹವನಿಗೆ ಮಾತ್ರ ದೊರಯುತ್ತದೆಂಬುದು ನಿಮ್ಮಸಿದ್ಧಾಂತ. ನಿಜವಾದ ಬ್ರಹ್ಮಜ್ಞಾನಿಗೆ ಈ ಯಾವ ಮಾರ್ಗಗಳೂ ಸಹ ದೊರೆಯುವುದಿಲ್ಲ. ಆದ್ದರಿಂದ ಅರ್ಚಿರಾದಿಮಾರ್ಗ ಗಮನಕ್ಕೆ ಪರಬ್ರಹ್ಮನು ವಿಷಯನಾಗಲು ಸಾಧ್ಯವಿಲ್ಲದ ಕಾರಣ ಅಕ್ಷಿಸ್ಥನು ಬ್ರಹ್ಮನಾಗುವುದಿಲ್ಲ. ಮತ್ತು 'ಶ್ರುತೋಪನಿಷತ್ಕಸ್ಯ' ಎಂದು ಪದವಿಭಾಗ ಮಾಡುವುದಾದರೆ ಸೂತ್ರದಲ್ಲಿರುವ 'ಕ' ಶಬ್ದವು ವ್ಯರ್ಥವಾಗುತ್ತದೆ. ಸೂತ್ರದಲ್ಲಿರುವ 'ಗತಿ' ಶಬ್ದಕ್ಕೆ 'ಮಾರ್ಗ' ಎಂಬರ್ಥವೂ ಅಸ್ವರಸವಾಗಿದೆ.

೫. ''ಅನವಸ್ಥಿತೇರಸಂಭವಾಚ್ಚ ನೇತರಃ'' ಅನವಸ್ಥಾಶಬ್ದಕ್ಕೆ ಅಪ್ರಮಾಣಕವಾದ ಅನಂತ ವ್ಯಕ್ತಿ ಕಲ್ಪನೆಯೆಂಬ ದೋಷವು ಅರ್ಥವೆಂದು ಎಲ್ಲರೂ ಒಪ್ಪಿದ್ದಾರೆ. ಇದನ್ನು ಬಿಟ್ಟು ಚಕ್ಷುರಿಂದ್ರಿಯದಲ್ಲಿ ಛಾಯಾಪುರುಷನು ಅವಸ್ಥಿತನಾಗಿಲ್ಲ ಎಂಬರ್ಥವನ್ನು ಹೇಳುವುದು ತಪ್ಪಾಗುತ್ತದೆ. ಮತ್ತು ಸದಾಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳುವುದು ತಪ್ಪು. ಅಷ್ಟೇ ಅಲ್ಲದೆ 'ಉಪಪತ್ತೇಃ' ಎಂಬ ಮೊದಲನೇ ಸೂತ್ರದಿಂದಲೇ ಛಾಯಾಪುರುಷಾದಿಗಳಲ್ಲಿ ಅಮೃತತ್ವಾದಿಗಳು ಇರುವುದಿಲ್ಲವೆಂದು ತಿಳಿಯಲು ಬರುವಾಗ ಪುನಃ ಅದೇ ವಿಚಾರಕ್ಕಾಗಿ ಕೊನೆಯ ಸೂತ್ರ ಹೊರಡುವುದು ವ್ಯರ್ಥ. ಈ ಎಲ್ಲಾ ಕಾರಣಗಳಿಂದ ಅದ್ವೈತಿಗಳ ಸೂತ್ರವ್ಯಾಖ್ಯಾನವು ಅಸಾಧುವಾಗಿದೆ.

ರಾಮಾನುಜರೂ ಸಹ ಅದ್ವೈತಮತದ ಸಿದ್ಧಾಂತಕ್ಕೆ ಜೋತುಬಿದ್ದಿದ್ದಾರೆ. ಅವರನ್ನು ಪ್ರತ್ಯೇಕವಾಗಿ ನಿರಾಕರಿಸಬೇಕಿಲ್ಲ. ಇನ್ನು ರಾಮಾನುಜರ ಮತದಲ್ಲಿ ಹೊಸವಿಚಾರವೆಂದರೆ 'ಅತ ಏವ ಚ ಸ ಬ್ರಹ್ಮ' ಎಂಬ ಪ್ರಕ್ಷಿಪ್ತವಾದ ಸೂತ್ರವನ್ನು ನಾಲ್ಕನೆಯ ಸೂತ್ರವೆಂದು ಪರಿಗಣಿಸುತ್ತಾರೆ. ಆದರೆ ಯಾವರೀತಿಯಾಗಿ ಈಕತ್ಕಧಿಕರಣದಲ್ಲಿ 'ಪ್ರತಿಜ್ಞಾವಿರೋಧಾತ್' ಎಂಬ ಸೂತ್ರವನ್ನು ಪ್ರಕ್ಷಿಪ್ತವಾದ್ದರಿಂದ ಉಪೇಕ್ಷಿಸಲಾಗಿತ್ತೋ ಆದರಂತೆ ಇದನ್ನೂ ಸಹ ಉಪೇಕ್ಷಿಸಬೇಕು.

ಅದ್ವೈತಿಗಳು ಏನೇ ವ್ಯಾಖ್ಯಾನಿಸಿದರೂ ಎಲ್ಲಾ ಅಧಿಕರಣಗಳಂತೆ ಇಲ್ಲಿಯೂ ಸಹ ಜೀವಬ್ರಹ್ಮಭೇದವನ್ನೇ ಒಪ್ಪಿಕೊಂಡಂತಾಯಿತು. ಚಕ್ಷುರಿಂದ್ರಿಯದಲ್ಲಿ ಜೀವನು ನೆಲೆಸಿಲ್ಲ ಬ್ರಹ್ಮನು ನೆಲೆಸಿದ್ದಾನೆಂದು ಅವರು ಸಾಧಿಸಿದ ಮೇಲೆ ಪುನಃ ಜೀವಬ್ರಹ್ಮಭೇದವನ್ನು ಬಾಯಿಬಿಟ್ಟು ಹೇಳಬೇಕಾಗಿಲ್ಲ.

तात्पर्यचन्द्रिका

टीकाक्षरार्थस्तु – अग्नेरेवादित्यस्थत्वमुच्यतेऽत एवेति । अग्नेरादित्यस्थत्वस्योच्यमानत्वादेवेत्यर्थः । अनेन, ''अतोऽक्ष्यादित्ययोरैक्यात्'' इति भाष्यस्थोऽतश्शब्दः सन्निहितेन 'ऐक्यात्' इत्यनेन नान्वेति, प्रकृतस्य, 'अतः' इत्यनेन परामृष्टस्यादित्यस्थत्वस्यैक्ये हेतुत्वायोगात्, किन्तु व्यवहितेन ''अत्राप्यग्निरेवोच्यते'' इत्यनेन अन्वेतीत्युक्तं भवति ।

वक्रसङ्गत्याऽधिकरणारम्भ इति । यद्यपि विष्णुज्ञानान्मोक्ष इत्युक्तं, तदयुक्तं, ''तद्यथा'' इत्यत्र अक्षिस्थस्याग्नेर्ज्ञानान्मोक्षश्रवणादिति ऋजुसङ्गत्यैवाधिकरणमारभ्य अग्नेरेवाक्षिस्थत्वमिति पूर्वपक्षे आदित्यस्थत्वं हेतूकर्तुं शक्यम् । पूर्वपक्षे तस्य हेतूकरणं वक्रसङ्गत्याऽधिकरणारम्भेऽपि समम् ।

तथाऽपि यथा सिद्धान्ते आदित्यदेवताया आदित्यमण्डलस्थत्वेऽपि अमृत्वादि-हेतुभिरिदमक्षिस्थत्वं ब्रह्मण एव, तथा पूर्वपक्षोऽग्नेरादित्यमण्डलस्थत्वेऽप्यक्षिस्थत्वं ब्रह्मण एवेत्यादित्यस्थत्वस्य विष्णौ समन्वयो न सिध्येत् ।

आदित्यस्थो विष्णुः, ततश्चार्यादक्षिस्थोऽपि स एवेत्यानन्दमयाधिकरणोक्त-मादित्यदेवतास्थत्वादिकमयुक्तं,

अग्नेरेवाक्ष्यादित्यदेवतास्थत्वादिति वक्रसङ्गत्याऽधिकरणारम्भे तु, पूर्वोक्तस्य विष्णावादित्यदेवतास्थत्वस्येह पूर्वपक्षे आक्षेपात्तन्निरासस्य च विष्णावेवाऽऽदित्यस्थ-त्वमिति सिद्धान्ताभिप्रायं विना असिद्धेः तत्समन्वयः सिध्यतीति भावः ।

यद्वा – आदित्यस्थत्वस्य पूर्वपक्षे हेतुमात्रत्वेनोक्तौ पूर्वपक्षहेतुरपि सिद्धान्तिना समन्वेतव्य इति नियमाभावान्न तत्समन्वयसिद्धिः । उक्तादित्यस्थत्वाक्षेपमुखेन तु

ಪೂರ್ವಪಕ್ಷೇ, ಸಿದ್ಧಾನ್ತೇ ತತ್ಸಮನ್ವಯೋऽಪಿ ಕರ್ತವ್ಯ ಇತಿ ''ಯ ಏಷ ಆದಿತ್ಯೇ ಪುರುಷೋ ದೃಶ್ಯತೇ'' ಇತಿ ವಾಕ್ಯಮಪಿ ಬ್ರಹ್ಮಣಿ ಸಮನ್ವಿತಂ ಭವತೀತಿ ಭಾವಃ ।

ಅಗ್ನೀನಾಮಿತಿ ಬಹುವಚನಮಿತಿ । ಭಾಷ್ಯೇ ಬಹುವಚನಾದಿಕಮ್, ''ಅಥ ಹೈನಂ ಗಾರ್ಹಪತ್ಯೋऽನುಶಶಾಸ ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋऽಹಮಸ್ಮಿ'' ''ಅಥ ಹೈನಮನ್ವಾಹಾರ್ಯಪಚನೋऽನುಶಶಾಸಾಯ ಏವ ಚನ್ದ್ರಮಸಿ ಪುರುಷೋ ದೃಶ್ಯತೇ ಸೋऽಹಮಸ್ಮಿ'' ''ಅಥ ಹೈನಮಾಹವನೀಯೋऽನುಶಶಾಸ ಯ ಏಷ ವಿದ್ಯುತಿ ಪುರುಷೋ ದೃಶ್ಯತೇ ಸೋऽಹಮಸ್ಮಿ'' ಇತಿ ಶ್ರವಣಾತ್, ಗಾರ್ಹಪತ್ಯಾದೀನಾಂ ತ್ರಯಾಣಾಂ ಕ್ರಮೇಣಾದಿತ್ಯಾದಿತ್ರಿತಯಸ್ಯತ್ವಮ್, ತಥಾ ಚ ಪ್ರಸಿದ್ಧಗಾರ್ಹಪತ್ಯಸ್ಯೈವಾಕ್ಷಿಸ್ಥತ್ವಮಿತಿ ಪ್ರದರ್ಶನಾರ್ಥಂ,

ನನು ತ್ರಯಾಣಾಮಕ್ಷಿಸ್ಥತ್ವಪ್ರದರ್ಶನಾರ್ಥಮಿತ್ಯರ್ಥಃ । ಹ್ಯಾಮ್ಯಗ್ನಿಮಿತ್ಯಾದಾವಿವೇತಿ । ಯಥಾ ''ಹ್ಯಾಮ್ಯಗ್ನಿಂ ಪ್ರಥಮಂ ಸ್ವಸ್ತಯೇ'' ಇತ್ಯತ್ರಾಗ್ನೇರುಪಕ್ರಮೇऽಪಿ ''ಸವಿತಾರಮೂತಯೇ'' ''ಹಿರಣ್ಯಯೇನ ಸವಿತಾ ರಥೇನ'' ಇತ್ಯಾದಿಸವಿತೃಶ್ರುತಿಲಿಙ್ಗಾದಿನಾ ತತ್ಪ್ರಕರಣಂ ಸಾವಿತ್ರಮ್, ಅತ ಏವೋಕ್ತಮನುಕ್ರಮಣಿಕಾಯಾಂ – ''ಹ್ಯಾಮ್ಯೇಕಾದಶ ಸಾವಿತ್ರಮ್'' ಇತಿ, ತಥाऽತ್ರಾಪಿ ಬ್ರಹ್ಮಣ ಉಪಕ್ರಮೇऽಪಿ ''ಅಸ್ಮದ್ಧಿಯಾ'' ಇತ್ಯಗ್ನೇರುಕ್ತತ್ವಾತ್ ಅಗ್ನೀನಾಮೇವೇದಂ ಪ್ರಕರಣಮಿತ್ಯರ್ಥಃ । ತತ್ತತ್ಪ್ರೇರಕತ್ವೇನೇತಿ । ಶ್ರುತೌ ವಾಮನಿಭಾಮನಿಶಬ್ದಾಭ್ಯಾಂ ಸ್ತ್ರೀಪುರುಷರೂಪಸರ್ವಪ್ರೇರಕತಾಯಾ ಉಕ್ತತ್ವಾದಿತಿ ಭಾವಃ ।

ಉಕ್ತಂ ಹಿ ತತ್ತ್ವಪ್ರದೀಪೇ - ''ವಾಮಂ ಸೌನ್ದರ್ಯಂ ಭಾಮಂ ತೇಜಃ ತತ್ಪ್ರಧಾನತ್ವಾತ್ ಸ್ತ್ರೀಪುರುಷಾ ವಾಮಭಾಮಶಬ್ದಶಬ್ದಿತಾಃ, ತನ್ನೇತಾ ವಾಮನಿರ್ಭಾಮನಿಃ'' ಇತಿ । ದಿವ್ಯದೃಷ್ಟಿಗೋಚರ ಇತಿ । ತತಶ್ಚ ಶ್ರುತೌ ''ಯ ಏಷोऽನ್ತರಕ್ಷಿಣಿ'' ''ಪುರುಷೋ ದೃಶ್ಯತೇ'' ಇತಿ ದೃಶ್ಯತ್ವಾಯುಕ್ತಿರ್ಯುಕ್ತೇತಿ ಭಾವಃ ।।

।। ಇತಿ ಶ್ರೀಬ್ರಹ್ಮಣ್ಯತೀರ್ಥಪೂಜ್ಯಶ್ರೀಪಾದಶಿಷ್ಯವ್ಯಾಸತೀರ್ಥವಿರಚಿತಾ
ತಾತ್ಪರ್ಯಚನ್ದ್ರಿಕಾಯಾಂ ಅನ್ತರಾಧಿಕರಣಂ ಸಮ್ಪೂರ್ಣಮ್ ।।

ಅನುವಾದ - ಟೀಕೆಯ ಕಠಿಣಪದಾರ್ಥ ಹೀಗಿದೆ - ಟೀಕೆಯಲ್ಲಿ ''ಅಗ್ನೇರೇವಾದಿತ್ಯಸ್ಥತ್ವ-ಮುಚ್ಯತೇऽತ ಏವ'' ಎಂದು ಹೇಳಿದ್ದಾರೆ. ಇಲ್ಲಿರುವ 'ಅತ ಏವ' ಎಂಬ ಪದಕ್ಕೆ 'ಅಗ್ನಿಗೆ ಆದಿತ್ಯಸ್ಥತ್ವವನ್ನು ಹೇಳಿದ್ದರಿಂದಲೇ' ಎಂದರ್ಥ. ಹೀಗೆ ಹೇಳಿದ್ದರಿಂದ ''ಅತಃ ಏಕ್ಯಾದಿತ್ಯಯೋರೈಕ್ಯಾತ್'' ಎಂದು ಭಾಷ್ಯದಲ್ಲಿರುವ 'ಅತಃ' ಶಬ್ದಕ್ಕೆ ಸನ್ನಿಹಿತವಾದ 'ಏಕ್ಯಾತ್'' ಎಂಬಲ್ಲಿ ಅನ್ವಯ ಮಾಡಬಾರದು. ಏಕೆಂದರೆ ಪ್ರಕೃತವಾದ 'ಅತಃ' ಎಂಬುದರಿಂದ ಪರಾಮರ್ಶಿಸಲ್ಪಟ್ಟ ಆದಿತ್ಯಸ್ಥತ್ವವು ಏಕ್ಯವಿಷಯದಲ್ಲಿ ಹೇತುವಾಗುವುದಿಲ್ಲ. ಹೊರತಾಗಿ ವ್ಯವಹಿತವಾದ 'ಅತ್ರಾಪ್ಯಗ್ನಿರೇವೋಚ್ಯತೇ' ಎಂಬುದಾಗಿ ಅನ್ವಯ ಮಾಡಬೇಕು. ಆದ್ದರಿಂದ ಯಾವ ಕಾರಣದಿಂದ ಅಗ್ನಿ ಮೊದಲಾದವರಿಗೆ ಆದಿತ್ಯಸ್ಥತ್ವವು ಹೇಳಲ್ಪಟ್ಟದೆಯೋ? ಆ ಕಾರಣದಿಂದ 'ಯ ಏಷಃ' ಎಂಬ ವಾಕ್ಯದಲ್ಲೂ ಸಹ ಅಗ್ನಿಯೇ ಪ್ರತಿಪಾದ್ಯನಾಗುತ್ತಾನೆಂದು ಹೇಳಿದಂತಾಗುತ್ತದೆ. ಅಗ್ನಿಯು ಆದಿತ್ಯಸ್ಥನಾದ ಮಾತ್ರದಿಂದ ಈ ಶ್ರುತಿಯಲ್ಲಿ ಅಗ್ನಿಯೇ ಏಕೆ ಪ್ರತಿಪಾದ್ಯನಾಗುತ್ತಾನೆ ? ಎಂಬ ಪ್ರಶ್ನೆಗೆ ''ಏಕ್ಯಾದಿತ್ಯಯೋರೈಕ್ಯಾತ್'' ಏಕ್ಷಿ ಹಾಗೂ ಆದಿತ್ಯರಿಗೆ ಏಕ್ಯವಿರುವುದರಿಂದ ಎಂದು ಉತ್ತರಿಸಿದ್ದಾರೆಂದು ತಿಳಿಯಬೇಕು.

ವಸ್ತುತಃ ವಿಷ್ಣುಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳಿದ್ದಾರೆ. ಇದು ತಪ್ಪು. ಏಕೆಂದರೆ ''ತದ್ಯಥಾ'' ಎಂಬ ಶ್ರುತಿಯಲ್ಲಿ ಚಕ್ಷುರಿಂದ್ರಿಯದಲ್ಲಿರುವ ಅಗ್ನಿಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳಿದ್ದಾರೆ. ಇದರಿಂದ ಋಜುಸಂಗತಿಯನ್ನು ಹೇಳಿದಂತಾಗುತ್ತದೆ. ಹೀಗೆ ಋಜುಸಂಗತಿಯ ಮುಖಾಂತರವೇ ಅಧಿಕರಣವನ್ನು ಪ್ರಾರಂಭಿಸಿ ಅಕ್ಷಿಸ್ಥನಾದವನು ಅಗ್ನಿಯೇ ಆಗಿದ್ದಾನೆಂದು ಪೂರ್ವಪಕ್ಷವು ಮಾಡಬಹುದು. ಈ ಪೂರ್ವಪಕ್ಷಕ್ಕೆ ಆದಿತ್ಯಸ್ಥತ್ವವನ್ನು ಹೇತುವನ್ನಾಗಿ ಮಾಡಬಹುದು. ಇದನ್ನು ಬಿಟ್ಟು ವಕ್ರಸಂಗತಿಯನ್ನು ಆಶ್ರಯಿಸಿ ಅಧಿಕರಣವನ್ನು ಆರಂಭಿಸಿದರೂ ಸಹ ಆದಿತ್ಯಸ್ಥತ್ವವನ್ನು ಹೇತುವನ್ನಾಗಿ ಮಾಡಲೇಬೇಕೆಂಬುದು ಸಮಾನ.

ನಮ್ಮ ಸಿದ್ಧಾಂತದಲ್ಲಿ ಆದಿತ್ಯಮಂಡಲಸ್ಥತ್ವವು ಸೂರ್ಯದೇವತೆಗೆ ಇದೆಯೆಂದು ಒಪ್ಪಿದ್ದೇವೆ. ಆದರೂ ಸಹ ಅಮೃತತ್ವಾದಿ ಹೇತುಗಳಿಂದ ಅಕ್ಷಿಸ್ಥನಾದವನು ಬ್ರಹ್ಮನೇ ಆಗಿದ್ದಾನೆಂದು ಹೇಳುತ್ತೇವೆ. ಆದ್ದರಿಂದ ಬ್ರಹ್ಮನಿಗೆ ಅಕ್ಷಿಸ್ಥತ್ವವು ಸಿದ್ಧವಾಗುತ್ತದೆ ಹೊರತು ಆದಿತ್ಯಸ್ಥಿತತ್ವವು ಸಿದ್ಧವಾಗುವುದಿಲ್ಲ. ಅದರಂತೆ ಪೂರ್ವಪಕ್ಷಿಯ ಪ್ರಕಾರ ಅಗ್ನಿಯು ಆದಿತ್ಯಮಂಡಲಸ್ಥಿತನಾಗಲಿ; ಆದರೆ ಅಕ್ಷಿಸ್ಥನಾದವನು ಬ್ರಹ್ಮನೇ ಆಗುತ್ತಾನೆ. ಆದ್ದರಿಂದ ಆದಿತ್ಯಸ್ಥತ್ವವೆಂಬ ಲಿಂಗವು ವಿಷ್ಣುವಿನಲ್ಲಿ ಸಮನ್ವಯವೇ ಆಗುವುದಿಲ್ಲ. ಆದ್ದರಿಂದ ನೇರವಾದ ಸಂಗತಿಯನ್ನು ಹೇಳಬಾರದು. ಹೊರತು ವಕ್ರವಾದ ಸಂಗತಿಯನ್ನೇ ಹೇಳಬೇಕು.

ಆದಿತ್ಯಸ್ಥನಾದವನು ವಿಷ್ಣುವಾದರೆ ಅರ್ಥಾತ್ ಅಕ್ಷಿಸ್ಥನಾದವನೂ ಸಹ ವಿಷ್ಣುವೇ ಆಗುತ್ತಾನೆಂದು ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟಿದೆ. ಅಲ್ಲಿ ಹೇಳುತ್ತಿರುವ ಆದಿತ್ಯದೇವತಾಸ್ಥತ್ವಾದಿಗಳು ಅಯುಕ್ತವಾಗಿವೆಯೆಂದು ಇಲ್ಲಿ ಪೂರ್ವಪಕ್ಷಿಯು ಆಕ್ಷೇಪಿಸುತ್ತಿದ್ದಾನೆ. ಏಕೆಂದರೆ ಅಕ್ಷಿದೇವತಾಸ್ಥನು ಆದಿತ್ಯದೇವತಾಸ್ಥನು ಅಗ್ನಿಯೇ ಆಗಿದ್ದಾನೆಂಬ ವಕ್ರಸಂಗತಿಯನ್ನು ಹೇಳುತ್ತಿದ್ದಾನೆ. ಹೀಗೆ ಅಗ್ನಿಗೆ ಎರಡೂ ಧರ್ಮಗಳನ್ನು ಹೇಳುವುದೇ ವಕ್ರಸಂಗತಿಯೆನಿಸುತ್ತದೆ. ಹೀಗೆ ಅಧಿಕರಣವನ್ನು ಪ್ರಾರಂಭಿಸಿದಾಗ ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟ ವಿಷ್ಣುವಿಗೆ ಆದಿತ್ಯದೇವತಾಸ್ಥತ್ವವು ಈ ಅಧಿಕರಣದ ಪೂರ್ವಪಕ್ಷದಲ್ಲಿ ಆಕ್ಷೇಪಿಸಿದಂತಾಗುತ್ತದೆ. ಅದನ್ನು ನಿರಾಸಮಾಡುವುದಕ್ಕಾಗಿ ವಿಷ್ಣುವೇ ಆದಿತ್ಯಸ್ಥನಾಗಿದ್ದಾನೆಂದು ಸಿದ್ಧಾಂತದ ಅಭಿಪ್ರಾಯವಿಲ್ಲದೆ ಸಿದ್ಧವಾಗುವುದಿಲ್ಲ. ಆದ್ದರಿಂದ ವಿಷ್ಣುವಿಗೆ ಕೇವಲ ಅಕ್ಷಿಸ್ಥನೆಂಬ ಧರ್ಮವನ್ನೇ ಸಮನ್ವಯ ಮಾಡದೆ ಆದಿತ್ಯಸ್ಥತ್ವದ ಧರ್ಮವನ್ನು ಸಮನ್ವಯ ಮಾಡಲು ಬರುವುದಿಲ್ಲ.

ಅಥವಾ ಪೂರ್ವಪಕ್ಷದಲ್ಲಿ ಆದಿತ್ಯಸ್ಥತ್ವವನ್ನು ಕೇವಲ ಹೇತುವನ್ನಾಗಿ ಹೇಳಲಾಗಿದೆ. ಪೂರ್ವಪಕ್ಷಿಯು ಯಾವುದನ್ನೆಲ್ಲಾ ಹೇತುವನ್ನಾಗಿ ಮಾಡುತ್ತಾನೋ ಅದನ್ನೆಲ್ಲಾ ಸಿದ್ಧಾಂತದಲ್ಲಿ ಸಮನ್ವಯ ಮಾಡಬೇಕೆಂಬ ನಿಯಮವಿಲ್ಲ. ಆದ್ದರಿಂದ ಆದಿತ್ಯಸ್ಥತ್ವದ ಸಮನ್ವಯವು ಸಿದ್ಧವಾಗುವುದಿಲ್ಲ. ಆದರೆ ಪೂರ್ವಪಕ್ಷಿಯು ಯಾವುದನ್ನು ಆಕ್ಷೇಪಿಸುತ್ತಾನೋ? ಅದನ್ನು ಸಮನ್ವಯ ಮಾಡಲೇಬೇಕು. ಅಕ್ಷಿಸ್ಥತ್ವವು ವಿಷ್ಣುವಿನಲ್ಲಿ ಕೂಡದ ಕಾರಣ ಆದಿತ್ಯಸ್ಥತ್ವವೂ ಸಹ ವಿಷ್ಣುವಿನಲ್ಲಿ ಬರುವುದಿಲ್ಲವೆಂದು ಪೂರ್ವಪಕ್ಷಿಯು ಆಕ್ಷೇಪ ಮಾಡಿದರೆ ಆವಾಗ ಸಿದ್ಧಾಂತದಲ್ಲಿ ಆದಿತ್ಯಸ್ಥತ್ವದ ಸಮನ್ವಯವನ್ನು ಮಾಡಲೇಬೇಕು. ಆದ್ದರಿಂದ 'ಯ ಏಷ ಆದಿತ್ಯೇ ಪುರುಷಃ ದೃಶ್ಯತೇ'' ಎಂಬ ವಾಕ್ಯವೂ ಸಹ ಬ್ರಹ್ಮನಲ್ಲಿ ಸಮನ್ವಯವಾಗುತ್ತದೆಂದು ತಿಳಿಯಬೇಕು.

ಟೀಕೆಯಲ್ಲಿ 'ಅಗ್ನೀನಾಮಿತಿ ಬಹುವಚನಮಿತಿ' ಎಂಬ ಮಾತಿದೆ. ಇದಕ್ಕೆ ಹೀಗರ್ಥ - ಭಾಷ್ಯದಲ್ಲಿ ಬಹುವಚನ ಮತ್ತು ಆದಿಪದದಿಂದ ''ಅಥ ಹೈನಂ ಗಾರ್ಹಪತ್ಯೋಽನುಶಾಸಾ ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋಽಹಮಸ್ಮಿ'' ''ಅಥ ಹೈನಮನ್ವಾಹಾರ್ಯಪಚನೋಽನುಶಾಸ ಯ ಏಷ ಚಂದ್ರಮಸಿ ಪುರುಷೋ ದೃಶ್ಯತೇ ಸೋಽಹಮಸ್ಮಿ'' ''ಅಥ ಹೈನಮಾಹವನೀಯೋಽನುಶಾಸ ಯ ಏಷ ವಿದ್ಯುತೋ ಪುರುಷೋ ದೃಶ್ಯತೇ ಸೋಹಮಸ್ಮಿ'' ಎಂಬ ಶ್ರುತಿಯಲ್ಲಿ ಅನೇಕ ಬಾರಿ ಅಗ್ನಿಶಬ್ದಗಳು ಕೇಳಿಸುತ್ತಿವೆ. ಈ ಶ್ರುತಿಯಿಂದ ಗಾರ್ಹಪತ್ಯಾಗ್ನಿಯು ಆದಿತ್ಯನಲ್ಲಿದ್ದಾನೆಂದು 'ಅನ್ವಹಾರ್ಯಪಚನ' ಎಂಬ ಅಗ್ನಿಯು ಚಂದ್ರನಲ್ಲಿದ್ದಾನೆಂದು 'ಆಹವನೀಯ' ಎಂಬ ಅಗ್ನಿಯು 'ವಿದ್ಯುತ್'ನಲ್ಲಿದ್ದಾನೆಂದು ತಿಳಿಯುತ್ತದೆ. ಇಲ್ಲಿ ಮೂರು ಅಗ್ನಿಗಳಿಗೂ ಚಕ್ಷುರಿಂದ್ರಿಯಸ್ಥತ್ವವು ತಿಳಿಯುವುದಿಲ್ಲ. ಹೊರತಾಗಿ ಯಾವ ಗಾರ್ಹಪತ್ಯಾಗ್ನಿಯು ಆದಿತ್ಯನಲ್ಲಿದ್ದಾನೋ ಅವನೇ ಚಕ್ಷುರಿಂದ್ರಿಯಲ್ಲಿದ್ದಾನೆಂದು ತಿಳಿಯುತ್ತದೆ. ಈ ಶ್ರುತಿಯಲ್ಲಿ ಅನೇಕ ಬಾರಿ ಅಗ್ನಿಶಬ್ದವು ಕೇಳಿಸುತ್ತಿದೆಯೆಂಬ ಅಭಿಪ್ರಾಯದಿಂದ ಬಹುವಚನವನ್ನು

ಪ್ರಯೋಗಿಸಿದ್ದಾರೆ ಹೊರತು ಮೂರೂ ಅಗ್ನಿಗಳು ಅಕ್ಷಿಸ್ಥರಾಗಿದ್ದಾರೆಂದು ತೋರಿಸುವುದಕ್ಕಾಗಿ ಬಹುವಚನವನ್ನು ಪ್ರಯೋಗಿಸಿಲ್ಲ.

ಟೀಕೆಯಲ್ಲಿ ''ಹ್ವಯಾಮ್ಯಗ್ನಿಮಿತ್ಯಾದಾವಿವ'' ಯಾವರೀತಿಯಾಗಿ ''ಹ್ವಯಾಮ್ಯಗ್ನಿಂ ಪ್ರಥಮಂ ಸ್ವಸ್ತಯೇ'' ಎಂಬಲ್ಲಿ ಅಗ್ನಿಯು ಉಪಕ್ರಮದಲ್ಲಿ ಶ್ರುತನಾಗಿದ್ದರೂ ಮುಂದೆ ''ಸವಿತಾರಮೂತಯೇ'' ''ಹಿರಣ್ಯಯೇನ ಸವಿತಾ ರಥೇನ'' ಎಂದು ಸವಿತೃಶ್ರುತಿ ಹಾಗೂ ಸವಿತೃಲಿಂಗಗಳು ಇರುವುದರಿಂದ ಸವಿತೃಪರವೆಂದು ಹೇಗೆ ನಿರ್ಣಯವಾಗಿದೆಯೋ? ಆದ್ದರಿಂದಲೇ ಅನುಕ್ರಮಣಿಕಾದಲ್ಲಿ ''ಹ್ವಯಾಮ್ಯೇಕಾದಶ ಸಾವಿತ್ರಮ್'' ಎಂದು ಹೇಳಲಾಗಿದೆ. ಪ್ರಕೃತದಲ್ಲಿಯೂ ಸಹ 'ಕಂ ಬ್ರಹ್ಮ' 'ಖಂ ಬ್ರಹ್ಮ' ಎಂಬುದಾಗಿ ಉಪಕ್ರಮದಲ್ಲಿ ಬ್ರಹ್ಮನು ಪ್ರಸಕ್ತನಾಗಿದ್ದರೂ ಮುಂದೆ 'ಅಸ್ಮದ್ವಿದ್ಯಾ' ಇತ್ಯಾದಿಯಾಗಿ ಅಗ್ನಿಯು ಪ್ರತಿಪಾದ್ಯನಾದ್ದರಿಂದ ಅಗ್ನಿಯೇ ಈ ಪ್ರಕರಣದಲ್ಲಿ ಹೇಳಲ್ಪಟ್ಟಿದ್ದಾನೆಂದು ತಿಳಿಯಬೇಕು.

ಟೀಕೆಯಲ್ಲಿ 'ತತ್ತತ್ಪ್ರೇರಕತ್ವೇನ' ಎಂದಿದೆ. ಆದರೆ ಶ್ರುತಿಯಲ್ಲಿರುವ 'ವಾಮ' ಹಾಗೂ 'ಭಾಮ' ಶಬ್ದಗಳಿಂದ ಸ್ತ್ರೀಪುರುಷರೆಂಬ ಸಕಲ ಚೇತನರಿಗೆ ಪ್ರೇರಕನಾಗಿದ್ದಾನೆಂದು ಹೇಳಲಾಗಿದೆ. ಇದನ್ನೇ ತತ್ತ್ವಪ್ರದೀಪದಲ್ಲಿ - ''ವಾಮಂ ಸೌಂದರ್ಯಂ ಭಾಮಂ ತೇಜಃ ತತ್ಪ್ರಧಾನತ್ವಾತ್ ಸ್ತ್ರೀಪುರುಷಾ ವಾಮಭಾಮಶಬ್ದಶಬ್ದಿತಾಃ, ತನ್ನೇತಾ ವಾಮನಿರ್ಭಾಮನಿಃ'' 'ವಾಮ' ಶಬ್ದಕ್ಕೆ 'ಸೌಂದರ್ಯ' ಎಂದರ್ಥ. 'ಭಾಮ' ಶಬ್ದಕ್ಕೆ 'ತೇಜಸ್ಸು' ಎಂದರ್ಥ. ಇವುಗಳನ್ನೇ ಪ್ರಧಾನವನ್ನಾಗಿ ಹೊಂದಲ್ಪಟ್ಟ ಸ್ತ್ರೀಪುರುಷರು 'ವಾಮ ಭಾಮ' ಶಬ್ದಗಳಿಂದ ಲಕ್ಷಣಯಾ ಪ್ರತಿಪಾದ್ಯರಾಗುತ್ತಾರೆ. ಅವರನ್ನು ನಿಯಮನ ಮಾಡುವವನೇ ವಾಮನೀ ಭಾಮನಿಯೆನಿಸುತ್ತಾನೆಂದು ಹೇಳಿದ್ದಾರೆ.

ಟೀಕೆಯಲ್ಲಿ 'ದೃವದೃಷ್ಟಿಗೋಚರಃ' ಎಂದಿದೆ. ಅಂದರೆ ಶ್ರುತಿಯಲ್ಲಿ 'ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ'' ಎಂಬುದಾಗಿ ದೃಶ್ಯತ್ವವನ್ನು ಭಗವಂತನಿಗೆ ಹೇಳಲಾಗಿದೆ. ಅಂದರೆ ಅಪರೋಕ್ಷ ಜ್ಞಾನಕ್ಕೆ ವಿಷಯನಾಗುತ್ತಾನೆಂದರ್ಥ. ಆದ್ದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ ದೃಶ್ಯತ್ವವು ಯುಕ್ತವಾಗಿದೆಯೆಂದು ತಿಳಿಯಬೇಕು.

